ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ

ಶ್ರೀಮದ್ವಾಲ್ಮೀಕಿರಾಮಾಯಣ

ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ

ಭಾರತ ದರ್ಶನ ಪ್ರಕಾಶನ

ಶ್ರೀ ರಾ ಮಃ ಶ ರ ಣಂ ಮ ಮ



ಶ್ರೀ ರಾ ಮಃ ಶ ರ ಣಂ ಮ ಮ

ಅಯೋಧ್ಯಾ ಕಾಂಡ

ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್॥

ಸಂಪುಟ ೩

ಭಾರತ ದರ್ಶನ ಪ್ರಕಾಶನ

ಶ್ರೀಮದ್ವಾಲ್ಮೀಕಿರಾಮಾಯಣ

ವಾಲ್ಮೀಕಿಗಿರಿಸಂಭೂತಾ
ರಾಮಸಾಗರಗಾಮಿನೀ ।
ಪುನಾತು ಭುವನಂ ಪುಣ್ಯಾ
ರಾಮಾಯಣಮಹಾನದೀ ॥

ಸಂಪುಟ 3

ಮುದ್ರಕರು:

ಭಾರತ ದರ್ಶನ ಮುದ್ರಣಾಲಯ

163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು - 560 028

ದೂರವಾಣಿ: 080-26765381

ಪ್ರಥಮ ಇ-ಮುದ್ರಣ ಜನವರಿ ೨೦೧೪

ಆದಿ ಅಧ್ಯಕ್ಷರು:

ಪರಮಪೂಜ್ಯ ಶ್ರೀ ಶ್ರೀ ರಂಗಪ್ರಿಯಮಹಾದೇಶಿಕಸ್ವಾಮಿಗಳವರು

ಆದಿ ವ್ಯವಸ್ಥಾಪಕ ಸಂಪಾದಕರು:

ದಿ|| ಕೆ.ಎಸ್. ಕೌಶಿಕ್ ('ವಿಶ್ವಾಮಿತ್ರ')

ಆದಿ ಸಂಪಾದಕರು:

ದಿ|| ವಿದ್ವಾನ್ ಹೆಚ್.ಎನ್. ರಂಗಸ್ವಾಮೀ

ಆದಿ ಸಂಪಾದಕರು:

ದಿ|| ವಿದ್ವಾನ್ ರಾಮೇಶ್ವರಾವಧಾನೀ

ಸಂಪಾದಕ ಮಂಡಲಿ:

ಶ್ರೀ ಶ್ರೀಹರಿ

ಶ್ರೀ ನೆ.ವೆಂ. ಶ್ರೀನಿವಾಸರಾಯ

ಶ್ರೀ ಎ. ಸೂರ್ಯನಾರಾಯಣ್, M.A. B.Com., B.L.,

ಕೋಶಾಧ್ಯಕ್ಷರು

ವಿನಮ್ರವಚನಗಳು

ಪರಮಾತ್ಮನ ದಯೆಯಿಂದಲೂ, ಗುರುಭಗವಂತನ ದಿವ್ಯಾನುಗ್ರಹ ದಿಂದಲೂ, ಸತ್ಪುರುಷರ ಸಹಕಾರ-ಸದಾಶಯಗಳಿಂದಲೂ ಶ್ರೀಮದ್ವಾಲ್ಮೀಕಿ ರಾಮಾಯಣದ ಮೂರನೆಯ ಸಂಪುಟವನ್ನು ಮುಗಿಸಿ ದಿವ್ಯಪುಷ್ಪರೂಪವಾದ ಇದನ್ನೇ ಭಗವಂತನ ದಿವ್ಯಚರಣಾರವಿಂದಗಳಲ್ಲಿ ಸಮರ್ಪಿಸಿ ಪ್ರಸಾದರೂಪ ವಾದ ಈ ಪುಷ್ಪವನ್ನು ನಮ್ಮ ಪ್ರಿಯವಾಚಕರ ಅಂಜಲಿಪುಟಗಳಲ್ಲಿಡುತ್ತಿದ್ದೇವೆ.

ಈ ಸಂಪುಟವನ್ನು ಹೊರತರಲು ಸ್ವಲ್ಪ ಸಾವಕಾಶವಾದುದಕ್ಕಾಗಿ ವಾಚಕರ ಕ್ಷಮೆಬೇಡುತ್ತೇವೆ. ಸಾವಕಾಶಕ್ಕೆ ಕಾರಣವಿಲ್ಲದೇ ಇಲ್ಲ. ಈ ಮಧ್ಯದಲ್ಲಿ ಮಹಾಭಾರತದ ನಾಲ್ಕು ಮತ್ತು ಇಪ್ಪತ್ತೊಂದನೆಯ ಸಂಪುಟಗಳ ಪುನರ್ಮುದ್ರಣವನ್ನೂ ಮಾಡಲಾಯಿತು. ಅಲ್ಲದೇ ವಿದ್ಯುಚ್ಛಕ್ತಿಯ ತೊಂದರೆಯಂತೂ ದೈನಂದಿಕವಾಗಿ ಬಿಟ್ಟಿದೆ. ಬೆಳಿಗ್ಗೆ ಹೋದುದು ಸಾಯಂ ಕಾಲದವರೆಗೂ ಬಾರದಿದ್ದ ದಿವಸಗಳೂ ಉಂಟು. ಹಿಂದಿನ ವರ್ಷಗಳಲ್ಲಿ ಒಂದು ದಿನ ವಿದ್ಯುಚ್ಛಕ್ತಿ ಇರದಿದ್ದರೂ ಇಲಾಖೆಯವರು ಪೂರ್ವಭಾವಿಯಾಗಿ ತಿಳಿಸುವ ಸಂಪ್ರದಾಯವಿತ್ತು. ದಿನವೂ ಹೋಗುತ್ತಿರುವುದರಿಂದ ತಿಳಿಸುವ ಅಗತ್ಯವಿಲ್ಲವೆಂದೇ ಇಲಾಖೆಯವರು ಭಾವಿಸಿರಬಹುದು. ಈ ವಿಧವಾದ ತೊಂದರೆಯಿಂದ ನಮ್ಮಂತಹ ಸಣ್ಣ ಉದ್ಯಮಿಗಳಿಗೆ ಆಗುವ ನಷ್ಟವು ಅಪಾರ. ಆದರೆ ಕೇಳುವವರಾರು?

ಈ ಸಂಪುಟದಲ್ಲಿ ಅಯೋಧ್ಯಾಕಾಂಡವನ್ನು ಪೂರ್ತಿಮಾಡಲು ಸಾಧ್ಯ ವಾಗಲಿಲ್ಲ. ಅಲ್ಲಲ್ಲಿ ವಿಶೇಷವಿಷಯಗಳನ್ನು ಟಿಪ್ಪಣಿಗಳಲ್ಲಿ ಕೊಡುತ್ತಿರು ವುದೂ ಒಂದು ಕಾರಣ. ಪಾರಾಯಣಕ್ಕೆ ಅನುಕೂಲವಾಗಲೆಂದು ಶ್ಲೋಕ ಗಳನ್ನು ವಿವರವಾಗಿ ಕೊಡುತ್ತಿರುವುದೂ ಮತ್ತೊಂದು ಕಾರಣ. ಅಯೋಧ್ಯಾ ಕಾಂಡವು ಮುಗಿಯದಿದ್ದರೂ ಹಿಂದಿನ ಎರಡು ಸಂಪುಟಗಳಂತೆಯೇ ಈ ಸಂಪುಟವೂ ೬೮೮ ಪುಟಗಳನ್ನೊಳಗೊಂಡಿದೆ.

ರಾಮಾಯಣವೂ ಮಹಾಭಾರತದಂತೆಯೇ ಜನಪ್ರಿಯವಾಗುತ್ತಿರು ವುದು ಸಂತಸದ ಸಂಗತಿ. ಮೊದಲನೆಯ ಸಂಪುಟದ ಮೊದಲನೆಯ ಮುದ್ರಣದ ಐದು ಸಾವಿರ ಪ್ರತಿಗಳು ಮುಗಿದುಹೋಗಿವೆ. ಎರಡನೆಯ ಸಂಪುಟದ ಮೂರು ನೂರು ಪ್ರತಿಗಳು ಮಾತ್ರವೇ ಉಳಿದಿವೆ. ಗ್ರಾಹಕರ ಬೇಡಿಕೆ

ಯನ್ನು ಪೂರೈಸಲು ಈ ಸಂಪುಟದಿಂದ ಪ್ರತಿಗಳ ಸಂಖ್ಯೆಯನ್ನು ಎಂಟು ಸಾವಿರಕ್ಕೆ ಹೆಚ್ಚಿಸಲಾಗಿದೆ. ಮೊದಲಸಂಪುಟದ ಎರಡನೆಯ ಮುದ್ರಣ ವನ್ನು ಸ್ವಲ್ಪದಿವಸಗಳಲ್ಲಿಯೇ ಪ್ರಾರಂಭಿಸಲಾಗುವುದು. ಮಹಾಭಾರತದಲ್ಲಿ ಪ್ರಸಕ್ತ ೧೮ ಸಂಪುಟಗಳನ್ನು ಪುನರ್ಮುದ್ರಣಮಾಡಬೇಕಾಗಿದೆ. ಇದು ಹೀಗೆಯೇ ಬೆಳೆಯುತ್ತಾ ಹೋಗುತ್ತದೆ. ಸಂಪುಟಗಳು ಮುಗಿಯುವಷ್ಟು ಬೇಗ ಪುನರ್ಮುದ್ರಣಮಾಡಲು ಸಾಧ್ಯವಾಗುತ್ತಿಲ್ಲ. ಬೇರೆಯ ಕಡೆ ಮುದ್ರಣ ಮಾಡಿಸುವುದೆಂಬುದು ನಮಗೆ ಸಿಂಹಸ್ವಪ್ನವಾಗಿದೆ. ಅಂತಹ ಕೆಟ್ಟ ಅನುಭವವು ನಮಗಾಯಿತು. ಅದರಿಂದಾದ ಕಷ್ಟ-ನಷ್ಟಗಳಿಂದ ಚೇತ ರಿಸಿಕೊಳ್ಳಲು ಇನ್ನೂ ನಮಗೆ ಸಾಧ್ಯವಾಗಿಲ್ಲ. ಎಲ್ಲರೂ ಹಾಗೆಯೇ ಎಂದು ನಿರ್ಧರಿಸಲು ಸಾಧ್ಯವಾಗುವುದಿಲ್ಲ. ಸತ್ಯಸಂಧರಾದ ಹಲವರು ಮುದ್ರಕರೂ ಇರಬಹುದು. ಆದರೆ ಅವರು ಕೇಳುವ ಮಜೂರಿಯನ್ನು ಕೊಟ್ಟು ನಾವು ಮುದ್ರಣಮಾಡಿಸಿದರೆ ಸಂಪುಟ ಒಂದಕ್ಕೆ 15/- ರೂ.ಗಳು ಮೂಲಬೆಲೆಯೇ ಆಗುತ್ತದೆ. ಆದುದರಿಂದ ನಮ್ಮಲ್ಲಿಯೇ ಉತ್ಪಾದನಾಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ಮಾರ್ಗವನ್ನು ತೋರಿಸುವಂತೆ ಪರ ಮಾತ್ಮನಲ್ಲಿ ಮೊರೆಯಿಡುತ್ತಿದ್ದೇವೆ. ಅವನದೇ ಆದ ಈ ಮಹಾಕಾರ್ಯಕ್ಕೆ ಅವನೇ ಮಾರ್ಗದರ್ಶಕನೂ ಆಗಬೇಕಾಗಿದೆ. ದಯಾಮಯನಾದ ಅವನು ನಮ್ಮ ಸತ್ಸಂಕಲ್ಪವನ್ನು ನೆರವೇರಿಸಿಕೊಡುವನೆಂಬ ಭರವಸೆಯೂ ಇದೆ. ಪ್ರಾರ್ಥನೆಮಾಡುತ್ತಾ ಕಾಲವನ್ನು ನಿರೀಕ್ಷಿಸಬೇಕು. ಅದುವರೆಗೂ ನಮ್ಮ ಗ್ರಾಹಕರು ತಾಳ್ಮೆಯಿಂದ ನಮ್ಮೊಡನೆ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

ಕರ್ನಾಟಕದಲ್ಲಿ ಮೂರು ಸಾವಿರ ಪ್ರೌಢಶಾಲೆಗಳಿವೆಯೆಂದೂ, ಅದರಲ್ಲಿ ಒಂದು ಸಾವಿರ ಶಾಲೆಗಳಿಗೆ ಮಾತ್ರವೇ ಮಹಾಭಾರತವು ತಲುಪಿರುವುದೆಂದೂ, ಉಳಿದ ಎರಡು ಸಾವಿರ ಶಾಲೆಗಳಿಗೂ ಪ್ರತಿ ಸಂಪುಟದ ಎರಡು ಸಾವಿರ ಪ್ರತಿ ಗಳನ್ನು ತೆಗೆದುಕೊಳ್ಳುವಂತೆ ಸರ್ಕಾರವು ಆಜ್ಞೆಯನ್ನು ಹೊರಡಿಸ ಬೇಕೆಂತಲೂ ಸುಮಾರು ಆರೆಂಟು ವರ್ಷಗಳಿಂದಲೂ ಸರ್ಕಾರಕ್ಕೆ ಮನವಿ ಯನ್ನು ಸಲ್ಲಿಸುತ್ತಾ ಬಂದೆವು. ಶ್ರೀ ದೇವರಾಜ ಅರಸರು, ಶ್ರೀ ಗುಂಡೂ ರಾಯರು, ಶ್ರೀ ರಾಮಕೃಷ್ಣ ಹೆಗಡೆಯವರು, ಶ್ರೀ ಜೀವರಾಜ ಆಳ್ವ – ಇವರು ಸಂಪುಟಗಳ ಬಿಡುಗಡೆಗೆ ಬಂದಾಗಲೆಲ್ಲಾ ಈ ಬಗ್ಗೆ ಆಶ್ವಾಸನೆಯನ್ನೂ ಇತ್ತಿ

ದ್ದರು. ಆದರೆ ಯಾವುದೂ ಕಾರ್ಯಗತವಾಗಿರಲಿಲ್ಲ. ಪರಮಾತ್ಮನ ಪ್ರೇರಣೆಯಿಂದ ಇತ್ತೀಚೆಗೆ ಸರ್ಕಾರದವರು ಮಹಾಭಾರತದ ಮೊದಲ ಮೂರು ಸಂಪುಟಗಳ ಒಂದೊಂದು ಸಾವಿರ ಪ್ರತಿಗಳನ್ನು ತೆಗೆದುಕೊಳ್ಳಲು ಒಪ್ಪಿ ನಿರೂಪವನ್ನು ಹೊರಡಿಸಿರುತ್ತಾರೆ. ಇದು ನಿಶ್ಚಯವಾಗಿಯೂ ನಮ್ಮೆಲ್ಲರಿಗೂ ಸಂತಸದ ಸಂಗತಿ. ಒಂದು ಪ್ರೌಢಶಾಲೆಯಲ್ಲಿ ಒಬ್ಬರು ಅಧ್ಯಾಪಕರಾಗಲೀ, ಒಬ್ಬ ವಿದ್ಯಾರ್ಥಿಯಾಗಲೀ - ಮಹಾಭಾರತವನ್ನು ಓದಿದರೆ ನಾವು ಪಟ್ಟ ಶ್ರಮವು ಸಾರ್ಥಕವಾದಂತಾಗುತ್ತದೆ. ಓದಿದವರು ಸತ್ಪ್ರಜೆಗಳೂ ಆಗುತ್ತಾರೆ. ಇದರಲ್ಲಿ ಸಂಶಯಲೇಶವೂ ಇರುವುದಿಲ್ಲ. ಈ ಆಜ್ಞೆಯು ಹೊರಬರಲು ಕಾರಣರಾದ ಎಲ್ಲ ಅಧಿಕಾರಿಗಳಿಗೂ ಪರಮಾತ್ಮನು ಆಯುರಾರೋಗ್ಯ-ಐಶ್ವರ್ಯಾದಿಗಳನ್ನಿತ್ತು ಕಾಪಾಡಲೆಂದು ನಾವೆಲ್ಲರೂ ಪ್ರಾರ್ಥಿಸೋಣ. ಇದು ಮೂರು ಸಂಪುಟಗಳಿಗೆ ಸಂಬಂಧಿಸಿದ ಆಜ್ಞೆಯಾಗಿರುತ್ತದೆ. 32 ಸಂಪುಟಗಳಿಗೂ ಸಂಬಂಧಿಸಿದಂತೆ ಆಜ್ಞೆಯಾಗಬೇಕು. ಮಹಾಭಾರತದಂತೆಯೇ ರಾಮಾಯಣದ ಪ್ರತಿಗಳನ್ನೂ ಸರ್ಕಾರದವರು ತೆಗೆದುಕೊಂಡು ಮೂರು ಸಾವಿರ ಪ್ರೌಢಶಾಲೆಗಳಿಗೂ ಹಂಚಬೇಕು. ಪರಮಾತ್ಮನ ದಯೆಯಿಂದ ಅಂತಹ ಕಾಲವು ಸನ್ನಿಹಿತವಾಗಲಿ.

ಶ್ರೀಮದ್ವಾಲ್ಮೀಕಿರಾಮಾಯಣದ ೨ನೆಯ ಸಂಪುಟದ ಪ್ರಕಾಶನ ಸಮಾರಂಭವು ಬಸವನಗುಡಿ ಆಂಜನೇಯದೇವಸ್ಥಾನದ ಉತ್ತರದ ಬೀದಿಯಲ್ಲಿರುವ ಭವಾನೀಕಲ್ಯಾಣಮಂಟಪದಲ್ಲಿ ತಾ॥ 15-11-86ರಂದು ಸಂಜೆ 6-00 ಘಂಟೆಗೆ ನಡೆಯಿತು. ಮೈಸೂರು ಬ್ರಹ್ಮತಂತ್ರ ಪರಕಾಲ ಮಠಾಧೀಶ ರಾದ ಪರಮಪೂಜ್ಯರಾದ ಶ್ರೀ ಶ್ರೀಮದಭಿನವರಾಮಾನುಜಬ್ರಹ್ಮತಂತ್ರ ಪರಕಾಲಶ್ರೀಚರಣಂಗಳವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. 'ವಿಕ್ರಮ' ಪತ್ರಿಕೆಯ ಸಂಪಾದಕರಾದ ಸನ್ಮಾನ್ಯ ಶ್ರೀ ಬಿ.ಎಸ್.ಎನ್. ಮಲ್ಯರವರು ಮುಖ್ಯ ಅತಿಥಿಗಳಾಗಿದ್ದರು. ವಿದ್ವಾನ್ ಹೆಚ್.ವಿ. ನಾರಾಯಣಶಾಸ್ತ್ರಿಗಳು ರಚಿಸಿದ್ದ ಸ್ವಾಗತಪದ್ಯಮಾಲಿಕೆಯನ್ನು ಶ್ರೀಮತೀ ವಸಂತ-ಸುಬ್ರಮಣ್ಯಂರವರು ಸುಶ್ರಾವ್ಯವಾಗಿ ಹಾಡಿದರು. ವಿದ್ವಾನ್ ಹೆಚ್.ಎನ್. ರಂಗಸ್ವಾಮಿಗಳು ಸ್ವಾಗತಭಾಷಣವನ್ನು ಮಾಡಿದರು. ಮಂಗಳವಾದ್ಯ ಮತ್ತು ವೇದಘೋಷಗಳೊಡನೆ ಶ್ರೀ ಮಲ್ಯರವರು ಸಂಪುಟ

ವನ್ನು ಪ್ರಕಾಶನಗೊಳಿಸಿದನಂತರ ಸಂಪುಟದಿಂದ ಆಯ್ದ ಕೆಲವು ಶ್ಲೋಕ ಗಳನ್ನು ಶ್ರೀಮತೀ ವಸಂತ-ಸುಬ್ರಮಣ್ಯಂರವರು ಸುಶ್ರಾವ್ಯವಾಗಿ ಪಠಿಸಿದರು.

ನಂತರ ಭಾರತ ದರ್ಶನ ಪ್ರಕಾಶನದ ಅಧ್ಯಕ್ಷರಾದ ವಿದ್ವಾನ್ ಹೆಚ್. ಎಸ್. ವರದದೇಶಿಕಾಚಾರ್ಯರಂಗಪ್ರಿಯರು ಸಂಪುಟವನ್ನು ಪರಿಚಯ ಮಾಡಿಕೊಡುತ್ತಾ "ಶ್ರೀಮದ್ರಾಮಾಯಣವು ಅಮರಕಾವ್ಯ, ಆದಿಕಾವ್ಯ, ಅನೇಕಕಾವ್ಯಗಳಿಗೆ ಉಗಮವಾಗಿರುವ ಶ್ರೇಷ್ಠಗ್ರಂಥ. ನಮ್ಮ ದೇಶದಲ್ಲಿ ಆದರ್ಶರಾಜ್ಯವನ್ನು ರಾಮರಾಜ್ಯವೆಂದು ಕರೆಯುತ್ತಾರೆ. ಮಾನವಶ್ರೇಷ್ಠ ನಾದ ಪುರುಷೋತ್ತಮನಾದ ಶ್ರೀರಾಮಚಂದ್ರನೇ ಕಾವ್ಯದ ನಾಯಕ. ಈ ಕಾವ್ಯದ ನಾಯಕ ಸ್ಥೂಲದೃಷ್ಟಿಗೆ ಮಾನವ. ಸೂಕ್ಷ್ಮದೃಷ್ಟಿಗೆ ಪರಮಾತ್ಮ. ಈ ಸಂಪುಟದಲ್ಲಿ ಅಯೋಧ್ಯಾಕಾಂಡದ 51 ಸರ್ಗಗಳಿವೆ. ಶ್ರೀರಾಮಪಟ್ಟಾಭಿ ಷೇಕದ ಸಿದ್ಧತೆಯಲ್ಲಿ ಕಾಣಬರುವ ಅಪಾರಸಂತೋಷ, ಅದು ತಪ್ಪಿಹೋಗಿ ರಾಮನ ವನವಾಸಗಮನ, (ನಾರುಮಡಿಯುಟ್ಟು) ಸೀತೆ ಹಾಗೂ ಲಕ್ಷ್ಮಣರೂ ಕಾಡಿಗೆ ಹೋದುದು–ಇವುಗಳ ಕರುಣಾಪೂರಿತ ಹಾಗೂ ಹೃದಯಂಗಮ ದೃಶ್ಯಗಳು ಓದುಗರ ಮನಸ್ಸನ್ನು ಆಕರ್ಷಿಸುತ್ತವೆ. ಶ್ರೀರಾಮನ ಪಿತೃ ನಿಷ್ಠೆ, ಲಕ್ಷ್ಮಣನ ಭ್ರಾತೃನಿಷ್ಠೆ, ಸೀತಾದೇವಿಯ ಪತಿನಿಷ್ಠೆ–ಮುಂತಾದ ಮಾನವನ ಆದರ್ಶಗಳನ್ನು ಇಲ್ಲಿ ಕಾಣುತ್ತೇವೆ. ಯೌವರಾಜ್ಯಪಟ್ಟಾಭಿಷೇಕದ ವಾರ್ತೆಯಿಂದ ಸಂತೋಷಪಡದ ಹಾಗೂ ವನವಾಸದ ವಾರ್ತೆಯಿಂದ ದುಃಖ ಪಡದ ಶ್ರೀರಾಮನ ಸ್ಥಿತಪ್ರಜ್ಞೆಯ ಗುಣವಂತೂ ವರ್ಣಿಸಲಸದಳವಾದದ್ದು. ಕಾಮ-ಕ್ರೋಧಾದಿ ಅರಿಷಡ್ವರ್ಗಗಳನ್ನು ಜಯಿಸಿರುವ ರಾಜನೇ ಧಾರ್ಮಿಕ ರಾಜನೆನಿಸಿಕೊಳ್ಳಬಲ್ಲ. ಅಂತಹ ರಾಜರಿಂದಲೇ ರಾಮರಾಜ್ಯದ ಸ್ಥಾಪನೆ ಸಾಧ್ಯ. ಈ ದಿಸೆಯಲ್ಲಿ ರಾಮನ ಜೀವನವು ಅನುಕರಣೀಯವಾದುದು. ಗ್ರಂಥವನ್ನು ನೀವು ಚೆನ್ನಾಗಿ ಓದಬೇಕು– ಮನನಮಾಡಬೇಕು. ಇತರರಿಗೂ ಓದಲು ಪ್ರೇರಣೆಯನ್ನು ಉಂಟುಮಾಡಬೇಕು"– ಎಂದು ತಿಳಿಸಿದರು.

ಅನಂತರ ಸಂಪುಟವನ್ನು ಪ್ರಕಾಶನಗೊಳಿಸಿದ ಶ್ರೀ ಮಲ್ಯರು ಮಾತ ನಾಡುತ್ತಾ– " ಭಾರತ ದರ್ಶನ ಪ್ರಕಾಶನಸಂಸ್ಥೆಯವರು ಬಹಳ ಸರಳವಾಗಿ ಸುಂದರವಾಗಿ ಶ್ರೀಮದ್ವಾಲ್ಮೀಕಿರಾಮಾಯಣ ಹಾಗೂ ಮಹಾಭಾರತಗ್ರಂಥ ಗಳನ್ನು ಹೊರತಂದಿರುವುದು ನಿಜಕ್ಕೂ ಶ್ಲಾಘನೀಯ. ಸಂಪಾದಕಮಂಡಲಿ

ಯವರ ಶ್ರಮ ಸ್ತುತ್ಯರ್ಹ. ಸಾವಿರಾರು ಜನ ಈ ಗ್ರಂಥಗಳನ್ನು ಓದುತ್ತಿದ್ದಾರೆ. ಇದು ನಿಜಕ್ಕೂ ಸಂತಸದ ಸಂಗತಿ. ಮಾನವನ ಸಮಸ್ತಗುಣಗಳೂ ರಾಮನಲ್ಲಿ ಅಡಗಿವೆ–ಎಂದು ನಾರದರು ವಾಲ್ಮೀಕಿಗಳಿಗೆ ಹೇಳಿರುವುದು ನಿಜಕ್ಕೂ ತಿಳಿಯಬೇಕಾದ ವಿಚಾರ. ರಾಮನ ಸತ್ಯಪ್ರಿಯತೆಯಂತೂ ಸಮಸ್ತರಿಗೂ ಅನುಕರಣೀಯ. ಪ್ರಜಾಪ್ರಭುತ್ವದ ನೈಜಸಿದ್ಧಾಂತಗಳು ರಾಮಾಯಣದಲ್ಲಿ ಹೃದಯಂಗಮವಾಗಿ ಚರ್ಚಿಸಲ್ಪಟ್ಟಿವೆ. ಜೀವನದಲ್ಲಿ ಅತ್ಯಂತಕಷ್ಟಗಳನ್ನು ಸಹಿಸಿಕೊಂಡೂ ರಾಮನು ತನ್ನ ಆದರ್ಶಗಳನ್ನು ಎತ್ತಿ ತೋರಿಸಿದ ಪುರುಷೋತ್ತಮ. ಶ್ರೀರಾಮನ ಜೀವನ ನಮಗೆಲ್ಲರಿಗೂ ಉದಾ ಹರಣೆಯಾಗಬೇಕು. ಆಗಲೇ ನಾವು ರಾಮರಾಜ್ಯಸ್ಥಾಪನೆಯನ್ನು ಮಾಡ ಬಲ್ಲೆವು. ರಾಮಾಯಣದಲ್ಲಿ ಈ ಗುಣಗಳು ಅಡಗಿವೆ. ಪುಸ್ತಕದ ಬೆಲೆಯೂ ಸಹ ಬಹಳ ಕಡಿಮೆಯಾಗಿರುವುದರಿಂದ ಎಲ್ಲರೂ ಕೊಳ್ಳಬಹುದು" –ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಶ್ರೀ ಪರಕಾಲಮಠಾಧೀಶರು ತಮ್ಮ ಅನುಗ್ರಹ ಭಾಷಣದಲ್ಲಿ– "ರಾಮಾಯಣಪಠಣವು ಪವಿತ್ರವಾದ ಕಾರ್ಯ. ಇದು ಸರಳ ವಾದ ಕನ್ನಡಭಾಷೆಯಲ್ಲಿ ದೊರೆಯುತ್ತಿರುವುದು ಒಂದು ಸುಯೋಗವೇ ಸರಿ. ಒಮ್ಮೆಯಾದರೂ ಇದನ್ನು ಪ್ರತಿಯೊಬ್ಬರೂ ಪಠಿಸಬೇಕು. ರಾಮನ ಆದರ್ಶ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು" –ಎಂದು ತಿಳಿಸಿ ದರು. ಬಳಿಕ ಶ್ರೀರಾಮಚಂದ್ರಾಪುರಮಠದ ಶ್ರೀ ಶ್ರೀ ರಾಘವೇಂದ್ರಭಾರತೀ ಸ್ವಾಮಿಗಳವರು ಕಳುಹಿಸಿದ್ದ ಸುವರ್ಣಮಂತ್ರಾಕ್ಷತೆ ಯನ್ನು ಸಂಪಾದಕ ಮಂಡಲಿಯ ವಿದ್ವಾಂಸರುಗಳಿಗೆ ಅನುಗ್ರಹಿಸಿಕೊಟ್ಟರು. ಶ್ರೀ ಕೆ.ವಿ. ಶ್ರೀನಿವಾಸಮೂರ್ತಿಯವರ ವಂದನಾರ್ಪಣೆಯ ನಂತರ ಶಾಂತಿಪಾಠದೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಈ ಸಂಪುಟಕ್ಕೆ ಅಧ್ಯಾತ್ಮವಿದ್ಯಾಪ್ರವೀಣ ವಿದ್ವಾನ್ ಶ್ರೀ ಕೆ. ಜಿ. ಸುಬ್ಬರಾಯಶರ್ಮರು ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿರು ತ್ತಾರೆ. ಇವರಿಗೆ ನಮ್ಮ ಹೃತ್ಪೂರ್ವಕವಾದ ವಂದನೆಗಳು.

ವೇ|| ಬ್ರ|| ಶ್ರೀ ಗಣಪತಿ ಕುಪ್ಪಯ್ಯ ಹೆಗಡೆ, ಶ್ರೀಕೃಷ್ಣ ಮುದ್ರ ಣಾಲಯ, ಹೆಗಡೆ, ಇವರು ಶ್ರೀರಾಮನ ಜಾತಕದ ವಿಷಯವಾಗಿ ವಿದ್ವ

ತ್ಪೂರ್ಣವಾದ ಲೇಖನವನ್ನು ಕಳುಹಿಸಿರುತ್ತಾರೆ. ಪರಿಶಿಷ್ಟದಲ್ಲಿ ಇದನ್ನು ಪ್ರಕಟಿಸಲಾಗಿದೆ. ಇವರಿಗೆ ನಮ್ಮ ಹೃತ್ಪೂರ್ವಕವಾದ ವಂದನೆಗಳು.

ಪ್ರಕಾಶನಸಮಿತಿಯ ಅಧ್ಯಕ್ಷರಾದ ವಿದ್ವಾನ್ ಹೆಚ್. ಎಸ್. ವರದ ದೇಶಿಕಾಚಾರ್ಯರಂಗಪ್ರಿಯರ ನೇತೃತ್ವದಲ್ಲಿ ಸಂಪಾದಕಮಂಡಲಿಯ ವಿದ್ವಾಂಸರು ಶ್ರಮವಹಿಸಿ ಸಂಪುಟವನ್ನು ಸಂಪಾದಿಸಿಕೊಟ್ಟಿರುತ್ತಾರೆ. ಇವರ ತಾಳ್ಮೆ-ಶ್ರದ್ಧೆಗಳು ಅಸಾಧೃಶವಾದುವುಗಳು. ಪ್ರತಿಫಲವನ್ನು ಅಪೇಕ್ಷಿಸಿ ಕಾರ್ಯಮಾಡುವವರಿಗೆ ಇಂತಹ ತಾಳ್ಮೆಯಾಗಲೀ ಶ್ರದ್ಧೆಯಾಗಲೀ ಇರಲಾರ ದೆನ್ನಿಸುತ್ತದೆ. ನಮ್ಮೆಲ್ಲರ ಸುಕೃತವೋ ಎಂಬಂತೆ ಈ ವಿದ್ವಾಂಸರು ನಿಸ್ಪೃಹತೆಯಿಂದ ಇಂತಹ ಶ್ರಮಸಾಧ್ಯವಾದ ಕಾರ್ಯವನ್ನು ಅನವರತವಾಗಿ ಮಾಡುತ್ತಾ ಸಹಕರಿಸುತ್ತಿದ್ದಾರೆ. ಇವರೆಲ್ಲರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳು.

ರಾಮಾಯಣ-ಮಹಾಭಾರತಗಳಿಗೆ ಪ್ರಚಾರಕರು ಇನ್ನೂ ಬೇಕು. ಇಬ್ಬರನ್ನಾದರೂ ಗ್ರಾಹಕರನ್ನಾಗಿ ಮಾಡಿಕೊಡುವುದು ಕರ್ತವ್ಯವೆಂದು ಭಾವಿಸಬೇಕು. ಇದೂ ಒಂದು ಋಷಿಋಣ. ಒಬ್ಬಿಬ್ಬರನ್ನು ಗ್ರಾಹಕರನ್ನಾಗಿ ಮಾಡಿಕೊಟ್ಟರೂ ಋಷಿಋಣವು ಪರಿಹಾರವಾಗುತ್ತದೆ. ನಮ್ಮ ಸುಹೃದರಲ್ಲಿ ಕೆಲವರು ನೂರೆಂಟು ಮಂದಿಯನ್ನು ಗ್ರಾಹಕರನ್ನಾಗಿ ಮಾಡಿಕೊಡಲು ಶ್ರಮಿಸುತ್ತಿದ್ದಾರೆ. ಇಂಥ ಸುಹೃದರ ಸಂಖ್ಯೆ ಬೆಳೆಯಬೇಕು. ಮನೆ-ಮನೆ ಗಳಲ್ಲಿಯೂ ರಾಮಾಯಣ-ಮಹಾಭಾರತಗಳ ದಿವ್ಯಜ್ಯೋತಿಯನ್ನು ಬೆಳಗಿಸಬೇಕು.

ಮಾನ್ಯ ಶ್ರೀ ಹುಂಗಿ ಪಿ. ಈಶ್ವರ್ ಎಂಬ ನಮ್ಮ ಗುರುಬಂಧುಗಳು ಅಮೆರಿಕೆಯಲ್ಲಿಯೂ ಮಹಾಭಾರತ-ರಾಮಾಯಣಗಳ ಪ್ರಚಾರಮಾಡುತ್ತಿರು ವುದು ಸಂತಸದ ಸಂಗತಿ. ಪ್ರಚಾರಕಾರ್ಯದಲ್ಲಿ ಅವರು ವಹಿಸಿರುವ ಶ್ರದ್ಧೆ ಆಸಕ್ತಿಗಳು ಶ್ಲಾಘನೀಯವಾದುವು. ಅಂತಹ ಪ್ರಚಾರಕಾರ್ಯವನ್ನು ಇಲ್ಲಿ ನಾವೇ ಮಾಡುತ್ತಿಲ್ಲ–ಎಂದು ನಮಗೆ ಭಾಸವಾಗುತ್ತಿದೆ. ಅವರ ಸತತ ಪ್ರಯತ್ನದಿಂದಾಗಿ ಹಲವಾರು ಮಂದಿ ಗ್ರಾಹಕರೂ ಲಭಿಸಿದ್ದಾರೆ. ಅವರು ಹೀಗೆಯೇ ನಮ್ಮೆಲ್ಲ ಕಾರ್ಯಗಳಲ್ಲಿಯೂ ಸಹಕರಿಸಿ ಒತ್ತಾಸೆಯನ್ನು ನೀಡುವ ರೆಂಬ ಭರವಸೆಯಿದೆ.

ಯಾವ ಕಾಲಕ್ಕೆ ಯಾರಿಂದ ಯಾವ ಸಹಾಯವನ್ನು ಪರಮಾತ್ಮನು ಮಾಡಿಸಿಕೊಡುವನೆಂಬುದು ಅವನಿಗೆ ಮಾತ್ರವೇ ತಿಳಿದ ರಹಸ್ಯವಾಗಿದೆ. ನಮಗಂತೂ ಇದೊಂದು ಅದ್ಭುತವಾಗಿ ಕಾಣುತ್ತಿದೆ. ಅವನೊಬ್ಬ ಅಪಾರ ಮಹಿಮನು. ಅಂತಹವನ ಮಹಿಮೆಯ ಲೇಶಮಾತ್ರವನ್ನೂ ನಾವು ಅರಿಯೆವು. ಅಂತಹ ದಯಾಮಯನಾದ, ಕರುಣಾಪೂರ್ಣನಾದ, ಸಚ್ಚಿದಾನಂದಸ್ವರೂಪನಾದ, ಜ್ಞಾನಮೂರ್ತಿಯಾದ, ಹೃದಯಾಬ್ಜದಲ್ಲಿ ಸುಖಾಸನದಲ್ಲಿ ಕುಳಿತಿರುವ ಚಿನ್ಮಯಮೂರ್ತಿಗೆ ನಮಿಸಿ ವಿರಮಿಸುವೆವು.

—ಪ್ರಕಾಶಕರು

ದ್ವಿತೀಯ ಮುದ್ರಣದ ಪ್ರಸ್ತಾವನೆ

ಪರಮಾತ್ಮನ ದಯೆಯಿಂದಲೂ ಸದ್ಗುರುವಿನ ಕೃಪಾಶೀರ್ವಾದಗಳಿಂದಲೂ ಸತ್ಪುರುಷರ ಸಹಕಾರ-ಸದಾಶಯಗಳಿಂದಲೂ ಶ್ರೀಮದ್ವಾಲ್ಮೀಕಿ ರಾಮಾಯಣದ ಮೂರನೆಯ ಸಂಪುಟದ ಪುನರ್ಮುದ್ರಣ ಕಾರ್ಯವನ್ನು ಮುಗಿಸುತ್ತಿದ್ದೇವೆ. ೪-೫-೬ ಈ ಮೂರು ಸಂಪುಟಗಳ ಪುನರ್ಮುದ್ರಣವಾಗಬೇಕಾಗಿದೆ. ಮೊದಲ ಸಂಪುಟದ ಪ್ರತಿಗಳೂ ಮುಗಿಯುವುದರಲ್ಲಿವೆ. ಕಡೆಯದಾದ ಹನ್ನೊಂದನೆಯ ಸಂಪುಟವನ್ನು ಹೊರತರಬೇಕಾಗಿದೆ. ಮಹಾಭಾರತದ ವಿಭಾಗದಲ್ಲಿ ೧೨ ಸಂಪುಟಗಳ ಪುನರ್ಮುದ್ರಣವಾಗಬೇಕಾಗಿದೆ. ದಿವಸ-ದಿವಸಕ್ಕೂ ಬೆಲೆಗಳು ಅಧಿಕಗೊಳ್ಳುತ್ತಿವೆ. ಕೆಲಸವು ಅಗಾಧ. ಯೋಚಿಸಿಕೊಂಡರೆ ಭಯವಾಗುತ್ತದೆ. ಯೋಚಿಸಹೋಗದೆ ಪರಮಾತ್ಮನನ್ನು ಪ್ರಾರ್ಥಿಸುತ್ತಿದ್ದರೆ ಯಾವುದಾದರೂ ಹಾದಿಯನ್ನು ತೋರಿಸುತ್ತಾನೆ. ಇದು ನಮ್ಮ ಅನುಭವ. ಅವನದೇ ಸಂಸ್ಥೆ ; ಅವನದೇ ಕಾರ್ಯ. ಅವನೇ ಎಲ್ಲವನ್ನೂ ಆಗುಮಾಡಿಸಿಕೊಳ್ಳಬೇಕು. ಮಾನವ ಯೋಜನೆಗಳೊಂದೂ ಕೆಲಸಕ್ಕೆ ಬರುವುದಿಲ್ಲ. ನಮ್ಮ ಗ್ರಾಹಕರೂ ನಮಗಾಗಿ ಪರಮಾತ್ಮನನ್ನು ಪ್ರಾರ್ಥಿಸಿಕೊಳ್ಳಬೇಕು. ಆಗಲೇ ಇಂತಹ ಪವಿತ್ರಕಾರ್ಯಗಳು ಸುಗಮವಾಗಿ ನಡೆಯುವುವು.

ಯಥಾಪೂರ್ವ ಸಂಪಾದಕಮಂಡಲಿಯ ವಿದ್ವಾಂಸರು ಈ ಸಂಪುಟದ

ತಪ್ಪು-ಒಪ್ಪುಗಳನ್ನು ತಾಳೆನೋಡಿಕೊಟ್ಟು ಸಹಕರಿಸಿರುತ್ತಾರೆ. ಅವರಿಗೆ ನಮ್ಮ ಹೃತ್ಪೂರ್ವಕವಂದನೆಗಳು.

ಪರಮಪವಿತ್ರವಾದ ಈ ಗ್ರಂಥಗಳ ಪಠನದಿಂದ ಸಮಸ್ತರೂ ಪುನೀತರಾಗಲಿ. ಧಾರ್ಮಿಕರಾಗಲಿ. ಸುಖ-ಸಂತೋಷಗಳನ್ನು ಪಡೆಯಲಿ– ಎಂದು ಸಚ್ಚಿದಾನಂದಸ್ವರೂಪನಾದ ಭಗವಂತನನ್ನು ಪ್ರಾರ್ಥಿಸಿ ವಿರಮಿಸುವೆವು.

–ಪ್ರಕಾಶಕರು.

ಚತುರ್ಥ ಮುದ್ರಣದ ಪ್ರಸ್ತಾವನೆ

ಪರಮಾತ್ಮನ ದಯೆಯಿಂದಲೂ ಗುರುಭಗವಂತನ ದಿವ್ಯಾಶೀರ್ವಾದದಿಂದಲೂ, ಸತ್ಪುರುಷರ ಸಹಕಾರ ಸದಾಶಯಗಳಿಂದಲೂ ಶ್ರೀಮದ್ವಾಲ್ಮೀಕಿ ರಾಮಾಯಣದ ಮೂರನೆಯ ಸಂಪುಟದ ನಾಲ್ಕನೆಯ ಪುನರ್ಮುದ್ರಣವನ್ನು ಮುಗಿಸುತ್ತಿದ್ದೇವೆ. ರಾಮಾಯಣ ವಿಭಾಗದಲ್ಲಿ ಈಗ ೧-೪-ನೇ ಸಂಪುಟಗಳ ಪುನರ್ಮುದ್ರಣವನ್ನು ಮಾಡಬೇಕಾಗಿದೆ. ಗ್ರಾಹಕರು ಸಹಕರಿಸುವರೆಂಬ ಭರವಸೆಯಿದೆ. ದಾನಿಗಳೂ ಮುಂದೆ ಬಂದು ಸಹಕರಿಸಬೇಕು. ಇಂತಹ ಪವಿತ್ರಗ್ರಂಥಗಳ ಪ್ರಚಾರಕ್ಕೆ ಮಾಡುವ ಸಹಾಯ ಅತ್ಯಂತ ಪುಣ್ಯಪ್ರದವಾದುದು. ಪರಮಾತ್ಮನು ಎಲ್ಲರಿಗೂ ಸದ್ಬುದ್ಧಿಯನ್ನಿತ್ತು ಕಾಪಾಡಲಿ.

–ಪ್ರಕಾಶಕರು.

॥ ಶ್ರೀ ರಾಮಾಯ ನಮೋ ನಮಃ ॥

ಮುನ್ನುಡಿ

ನಮಸ್ತೇ ರಾಮಚಂದ್ರಾಯ ಭರತಾಯ ಮಹಾತ್ಮನೇ ।
ತ್ಯಕ್ತದೇಹಾದಿಸೌಖ್ಯಾಯ ಲಕ್ಷ್ಮಣಾಯ ತಪಸ್ವಿನೇ ॥

ನಮ್ಮೀ ಪವಿತ್ರಭಾರತಭೂಮಿಯಲ್ಲಿ ಮಾನವರಾಗಿ ಅವತರಿಸಿರುವ ಭಾರತೀಯರಾದ ನಮ್ಮೆಲ್ಲರಿಗೂ ವೇದಗಳೇ ಅಕ್ಷಯವಾದ, ಭವ್ಯವಾದ, ದಿವ್ಯವಾದ, ಶಾಶ್ವತವಾದ ಸಂಪತ್ತು. ವೇದಗಳೆಂದರೆ ಜ್ಞಾನಭಂಡಾರ, ಜ್ಞಾನನಿಧಿ, ಜ್ಞಾನಮಹಾಸಾಗರ. ಸಕಲಮಾನವರ ಸರ್ವತೋಮುಖವಾದ ಕಲ್ಯಾಣಕ್ಕೆ ಮಾರ್ಗದರ್ಶಕವಾಗಿವೆ ವೇದಗಳು. ಈ ಲೋಕದ ಮತ್ತು ಪರಲೋಕದ ಇಷ್ಟಪ್ರಾಪ್ತಿಗೂ–ಅನಿಷ್ಟಪರಿಹಾರಕ್ಕೂ ಸರಿಯಾದ ಸಾಧನಗಳನ್ನು ವೇದಗಳು ತಿಳಿಸುತ್ತಿವೆ. ಈ ಸುಖಗಳನ್ನು ಅನುಭವಿಸಿ, ಪರೀಕ್ಷಿಸಿ, ಇವುಗಳ ಅನಿತ್ಯತ್ವವನ್ನು ಅನುಸಂಧಾನಮಾಡಿ, ಅಸಾರತೆಯನ್ನು ಮನಗಂಡು–ಈ ಅಭ್ಯುದಯಮಾರ್ಗದಿಂದ ನಿರ್ವಿಣ್ಣರಾದ ತತ್ತ್ವಜಿಜ್ಞಾಸುಗಳೂ ಮುಮುಕ್ಷುಗಳೂ ಆದ ಉತ್ತಮಸಾಧಕರಿಗಾಗಿ ಈ ವೇದಗಳೇ ಅಮೃತತ್ವಕ್ಕೆ (ಮೋಕ್ಷಪ್ರಾಪ್ತಿಗೆ) ಸಾಧನವಾಗಿರುವ ಬ್ರಹ್ಮವಿದ್ಯೆಯನ್ನೂ ಉಪದೇಶಿಸುತ್ತಿವೆ. ಈ ಭಾಗಕ್ಕೆ ವೇದಾಂತಗಳೆಂದು ಹೆಸರು.

ಉತ್ತರಮೀಮಾಂಸಾದರ್ಶನಕ್ಕೆ ಭಾಷ್ಯಕಾರರಾದ ಶ್ರೀಮಚ್ಛಂಕರ ಭಗವತ್ಪೂಜ್ಯಪಾದಾಚಾರ್ಯರವರು ತಮ್ಮ ಬ್ರಹ್ಮಸೂತ್ರಭಾಷ್ಯದಲ್ಲಿ

“ಮಹತಃ ಋಗ್ವೇದಾದೇಃ ಶಾಸ್ತ್ರಸ್ಯ ಅನೇಕವಿದ್ಯಾ–ಸ್ಥಾನೋಪಬೃಂಹಿತಸ್ಯ ಪ್ರದೀಪವತ್ ಸರ್ವಾರ್ಥಾವದ್ಯೋತಿನಃ ಸರ್ವಜ್ಞಕಲ್ಪಸ್ಯ ಯೋನಿಃ ಕಾರಣಂ” ಬ್ರಹ್ಮ 1–1–3

“ಅನೇಕ ವಿದ್ಯಾಸ್ಥಾನಗಳಿಂದ ವಿಸ್ತರಿಸಲ್ಪಟ್ಟಿರುವ, ಪ್ರದೀಪದಂತೆ ಎಲ್ಲ ವಿಷಯಗಳನ್ನೂ ತಿಳಿಸುತ್ತಿರುವ, ಸರ್ವಜ್ಞನಾದ ಪರಮಾತ್ಮನ ರೂಪವೇ ಆಗಿರುವ ಋಗ್ವೇದ ಮುಂತಾದ ಮಹಾಶಾಸ್ತ್ರಕ್ಕೆ ಪರಬ್ರಹ್ಮವೇ ಯೋನಿಯು ಎಂದರೆ ಕಾರಣವು” ಎಂದು ಬರೆದಿರುತ್ತಾರೆ.

ಇಂಥ ವೇದಗಳ ತಾತ್ಪರ್ಯವನ್ನು ತಿಳಿಸುವುದಕ್ಕಾಗಿಯೇ ಶಿಕ್ಷಾದಿ ಷಡಂಗಗಳು, ಪೂರ್ವೋತ್ತರಮೀಮಾಂಸಾದರ್ಶನದ್ವಯಗಳು, ಮತ್ಸ್ಯಾದಿ ಅಷ್ಟಾದಶ ಮಹಾಪುರಾಣಗಳು, ಉಪಪುರಾಣಗಳು, ಮನ್ವಾದಿಸ್ಮೃತಿಗಳು, ಧರ್ಮಶಾಸ್ತ್ರಗಳು, ರಾಮಾಯಣ-ಮಹಾಭಾರತಾದಿ ಇತಿಹಾಸಗಳು, ರಘುವಂಶಾದಿ ಮಹಾಕಾವ್ಯಗಳು–ಹೊರಟಿರುತ್ತವೆ. ಸಕಲಶಾಸ್ತ್ರಗಳೂ ಮಾನವರಿಗೆ ಸುಖಸಾಧನಗಳನ್ನು ಉಪದೇಶಿಸುತ್ತಿವೆ.

ಶಮಾರ್ಥಂ ಸರ್ವಶಾಸ್ತ್ರಾಣಿ ವಿಹಿತಾನಿ ಮನೀಷಿಭಿಃ ।
ಸ ಏವ ಸರ್ವಶಾಸ್ತ್ರಜ್ಞಃ ಯಸ್ಯ ಶಾಂತಂ ಮನಃ ಸದಾ ॥

"ಮಹರ್ಷಿಗಳು ಎಲ್ಲ ಶಾಸ್ತ್ರಗಳನ್ನೂ ಶಾಂತಿಪ್ರಾಪ್ತಿಗಾಗಿಯೇ ರಚಿಸಿರುತ್ತಾರೆ. ಆದ್ದರಿಂದ (ಈ ಶಾಸ್ತ್ರಾಧ್ಯಯನದಿಂದ) ಯಾವಾತನ ಮನಸ್ಸು ಶಾಂತವಾಗಿದೆಯೋ–ಆತನೇ ಎಲ್ಲ ಶಾಸ್ತ್ರಗಳನ್ನೂ ಪೂರ್ಣವಾಗಿಬಲ್ಲವನು."

ಶ್ರೀಮದ್ವಾಲ್ಮೀಕಿರಾಮಾಯಣ-ಮಹಾಭಾರತಗ್ರಂಥಗಳ ವಿಷಯದಲ್ಲಿ ಭಾರತೀಯರಾದ ನಮಗೆ ಹೆಚ್ಚಿನ ಶ್ರದ್ಧಾ-ಭಕ್ತಿ-ಗೌರವಗಳು ಇರುತ್ತವೆ.

ದಾತಾ ಪಂಚದಶಂ ರತ್ನಂ ಸುಪುತ್ರಃ ಸಪ್ತಮೋ ರಸಃ ।
ಭಾರತಂ ಪಂಚಮೋ ವೇದಃ ಜಾಮಾತಾ ದಶಮೋ ಗ್ರಹಃ ॥

ಎಂದು ನಮ್ಮ ಪ್ರಾಚೀನರು ಶ್ರೀಮನ್ಮಹಾಭಾರತವನ್ನು ಐದನೆಯ ವೇದ ಎಂದು ಭಾವಿಸಿ,

ವೇದವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ ।
ವೇದಃ ಪ್ರಾಚೇತಸಾದಾಸೀತ್ ಸಾಕ್ಷಾತ್ ರಾಮಾಯಣಾತ್ಮನಾ ॥

ಎಂದು ರಾಮಾಯಣವನ್ನು ವೇದವೆಂದೇ ಗೌರವಿಸಿರುತ್ತಾರೆ.

ಕಾಳಿದಾಸ, ಭಾಸ, ಭವಭೂತಿ–ಮುಂತಾದ ಅನೇಕ ಮಹಾಕವಿಗಳಿಗೆ ಆದಿಕವಿ ವಾಲ್ಮೀಕಿಯ ರಾಮಾಯಣವು ಉಪಜೀವ್ಯವಾದ ಮೂಲವಸ್ತುವಾಗಿದೆ. ತುಳಸೀರಾಮಾಯಣ, ಆನಂದರಾಮಾಯಣ, ಅಧ್ಯಾತ್ಮರಾಮಾಯಣ, ತೊರವೆರಾಮಾಯಣ, ಕಂದರಾಮಾಯಣ–ಇತ್ಯಾದಿ ಎಲ್ಲ ರಾಮಾಯಣಗಳೂ ಶ್ರೀಮದ್ವಾಲ್ಮೀಕಿರಾಮಾಯಣದ ವ್ಯಾಖ್ಯಾನಗಳೋ

ಅನ್ನುವಂತಿವೆ. ಅಂತೂ ಒಟ್ಟಿನಲ್ಲಿ ಶ್ರೀರಾಮನ ಚರಿತ್ರೆಯ ವಿಷಯದಲ್ಲಿ ಈಗ ಭೂಮಂಡಲದಲ್ಲಿ ಎಷ್ಟೆಷ್ಟು ಭಾಷೆಗಳಲ್ಲಿ ಅನೇಕ ವರ್ಣನೆಗಳನ್ನುಳ್ಳ ಎಷ್ಟೊಂದು ಕಾವ್ಯ, ಚಂಪೂ, ನಾಟಕ, ಕಥೆ, ಕಾದಂಬರಿ, ಇತಿಹಾಸ, ಪುರಾಣ, ಸುಭಾಷಿತ, ಗಾನ, ಭಜನೆ, ಮಂತ್ರಗಳು ದೊರಕುತ್ತಿವೆಯೋ ಅವೆಲ್ಲವೂ ವಾಲ್ಮೀಕಿರಾಮಾಯಣಕ್ಕೇ ಸಂಪೂರ್ಣವಾಗಿ ಋಣಿಯಾಗಿರ ಬೇಕು. ವಾಲ್ಮೀಕಿಯನ್ನು ಸ್ಮರಿಸದೇ ಇವರಾರೂ ಬದುಕಿರಲಾರರು.

ಮಹಾಮೇಧಾವಿಗಳು, ಶಾಸ್ತ್ರಕುಶಲರಾದ ವಿದ್ವಾಂಸರು, ಭಕ್ತಾಗ್ರಣಿ ಗಳು, ಸಂನ್ಯಾಸಿಗಳು, ಪಾಶ್ಚಾತ್ಯವಿದ್ವಾಂಸರು, ತತ್ತ್ವವಿಮರ್ಶಕರು, ಕುತೂಹಲಿಗಳು, ತತ್ತ್ವಜಿಜ್ಞಾಸುಗಳು ಮತ್ತು ವಿದ್ಯಾರ್ಥಿಗಳು–ತಮ್ಮ ಬುದ್ಧಿಚಾತುರ್ಯಕ್ಕನುಸಾರವಾಗಿ, ತಮ್ಮ ತಮ್ಮ ಸಾಂಪ್ರದಾಯಿಕ ಚೌಕಟ್ಟಿನ ವಿಚಾರಕ್ರಮಕ್ಕನುಸಾರವಾಗಿ, ಅವರವರ ಮತಕ್ಕನುಸಾರವಾಗಿ ಈ ರಾಮಾಯಣಗ್ರಂಥಕ್ಕೆ ಅರ್ಥವನ್ನು ಮಾಡಿರುತ್ತಾರೆ. ಇದರ ಮೇಲೆ ವಿಮರ್ಶಾತ್ಮಕವಾದ ಪ್ರಬಂಧಗಳನ್ನು ಬರೆದು Ph.D ಗಳನ್ನು ಪಡೆದವರು ಅನೇಕರು ; ಗೌರವ ಡಾಕ್ಟರೇಟ್‌ಗಳನ್ನು ಹೊಂದಿದವರು ಕೆಲವರು ; ರಸ, ಅಲಂಕಾರ, ಛಂದಸ್ಸುಗಳಿಂದ ಮಹಾಕಾವ್ಯಗಳನ್ನು ರಚಿಸಿ ಮಹಾಕವಿ ಗಳೆಂದು ಪ್ರಸಿದ್ಧರಾದವರು ಕೆಲವರು ; ತಮ್ಮ ಗಮಕಕಲೆಗಳಿಂದೊಡಗೂಡಿದ ಮಧುರಧೀರಶಾರೀರದಿಂದ ವಾಚನಮಾಡಿ ರಸವತ್ತಾದ ದೃಷ್ಟಾಂತ-ಉಪ ಕಥೆಗಳಿಂದ ವ್ಯಾಖ್ಯಾನಚಾತುರ್ಯದಿಂದ ಶ್ರೋತೃಗಳನ್ನು ಮುಗ್ಧರನ್ನಾಗಿ ಮಾಡುವವರು ಹಲವರು ; ರಾಮಾಯಣದ ಪ್ರವಚನಕಾರರೆಂದೇ ಪ್ರಸಿದ್ಧ ರಾಗಿ ಎಲ್ಲ ಶ್ಲೋಕಗಳನ್ನೂ–ವೇದಮಂತ್ರಗಳಂತೆ–ಗಟ್ಟುಮಾಡಿ ತಿಂಗಳು ಗಟ್ಟಲೆ ಪ್ರವಚನಮಾಡುವವರು ಬೇರೆ ; ಧನ, ಕೀರ್ತಿ, ಪೂಜಾ, ಗೌರವಾದಿ ಗಳಿಗಾಗಿಯೇ ಇದನ್ನು ಉಪಯೋಗಿಸುತ್ತಿರುವವರೂ ಹಲವರು ಇದ್ದಾರೆ. ನಿಜವನ್ನು ಹೇಳಬೇಕೆಂದರೆ–ಇಂಥ ಅಲ್ಪಪ್ರಯೋಜನಕ್ಕಾಗಿ ಈ ರಾಮಾಯಣ ಗ್ರಂಥವು ರಚಿತವಾಗಿಲ್ಲ. ಈ ಮೇಲಿನ ಫಲಗಳೆಲ್ಲವೂ ಗೌಣಫಲಗಳು ಮಾತ್ರ. ಮನುಷ್ಯಜನ್ಮಸಾರ್ಥಕ್ಯರೂಪವಾದ ಮೋಕ್ಷಪ್ರಾಪ್ತಿಯೇ ಇದರ ಮುಖ್ಯವಾದ ಪರಮಪ್ರಯೋಜನವು.

ಶ್ರೀಮದ್ವಾಲ್ಮೀಕಿರಾಮಾಯಣದ ಭಾಷಾಸೌಂದರ್ಯವು ಕಾವ್ಯಮಯ

ವಾಗಿ ಸಾಮಾನ್ಯರ ಮನಸ್ಸನ್ನೂ ಸೂರೆಗೊಳ್ಳುವಂತಿದೆ. ನಾಲ್ಕು ಸಲ ರಾಮಾಯಣದ ಕಥೆಯನ್ನು ಕೇಳುವುದರಿಂದ ನಮಗೆ ಬೇಜಾರು ಉಂಟಾಗ ಬಹುದು. ಆದರೆ ಈ ರಾಮಾಯಣಗ್ರಂಥವನ್ನೇ ನೇರವಾಗಿ ಎಷ್ಟು ಸಲ ಓದಿದರೂ ಸ್ವಲ್ಪವೂ ಮನಸ್ಸಿನಲ್ಲಿ ಬೇಜಾರಾಗದೇ ಹರ್ಷವು ಉಕ್ಕುತ್ತಾ ಹೋಗುತ್ತದೆ. ಒಬ್ಬ ವ್ಯಕ್ತಿಯು ಇದನ್ನು ಒಂದು ನೂರಾವರ್ತಿ ಪೂರಾ ಓದಿದ ಮೇಲೆ ಪುನಃ ನೂರ ಒಂದನೆಯ ಬಾರಿಗೆ ಓದುವಾಗಲೂ ಪ್ರಥಮ ಬಾರಿ ಓದುವಾಗ ಉಂಟಾಗಿದ್ದ ಆನಂದವೇ ಉತ್ಸಾಹವೇ ಇರುತ್ತದೆ. ಇಂತಹ ಸತ್ತ್ವಯುಕ್ತವಾದ, ಪ್ರತಿ ಶ್ಲೋಕದಲ್ಲೂ ರಸೋತ್ಪಾದಕವಾದ ಜೀವಂತ ಕಾವ್ಯವು ಬೇರೊಂದಿಲ್ಲ–ಎಂದು ಹೇಳಿದರೆ ತಪ್ಪಾಗದು. ಇದು ಕೇವಲ ಮಾನವಬುದ್ಧಿಶಕ್ತಿಯಿಂದ ಶುಷ್ಕಶಾಸ್ತ್ರಪಾಂಡಿತ್ಯದ ಬಲದಿಂದ ಬರೆದ ಕೃತಕ ಕಾವ್ಯವಲ್ಲ. ಸರಸ್ವತೀವಲ್ಲಭನಾದ ಬ್ರಹ್ಮದೇವನ ಅನುಗ್ರಹದಿಂದ ಮಹಾ ತಪೋಮೂರ್ತಿಯಾದ ವಾಲ್ಮೀಕಿಮಹರ್ಷಿಯ ಶುದ್ಧಹೃದಯದಲ್ಲಿ ತಪಸ್ಯಾ ಭೂಮಿಕೆಯಲ್ಲಿ ತಾನೇ ತಾನಾಗಿ ಪ್ರಸ್ಫುರಿಸಿದ ಆರ್ಷವಾಕ್ಯಗಳು ; ದೈವೀ ವಾಣಿ ; ಅಮೃತವಾಣಿ.

ಭಗವಂತನ ಮಹಿಮೆಯನ್ನು ಜ್ಞಾನ, ಐಶ್ವರ್ಯ, ಶಕ್ತಿ, ಬಲ, ವೀರ್ಯ ಮತ್ತು ತೇಜಸ್ಸುಗಳೆಂಬ ಆರು ಗುಣಗಳಿಂದ ಸಕಲಪುರಾಣಗ್ರಂಥ ಗಳೂ ತಿಳಿಸುವಂತೆಯೇ ಈ ರಾಮಾಯಣವೂ ಬಾಲಾದಿ ಷಟ್ಕಾಂಡಗಳಿಂದ ಶ್ರೀರಾಮಚಂದ್ರನ ಸಂಪೂರ್ಣಸ್ವರೂಪವನ್ನು ಹೃದಯಂಗಮವಾಗಿ ತಿಳಿ ಸಿರುತ್ತದೆ. ಕಲ್ಲುಸಕ್ಕರೆಯಲ್ಲಿ ಎಲ್ಲ ಕಡೆಗಳಲ್ಲೂ ಸಿಹಿಯೇ ತುಂಬಿರುವಂತೆ ಆರೂ ಕಾಂಡಗಳು ಚೇತೋಹಾರಿಗಳಾಗಿ ರಮ್ಯವಾಗಿರುತ್ತವೆ.

ಇನ್ನು ಈ ಗ್ರಂಥದಲ್ಲಿ ಭಗವಂತನಾದ ಶ್ರೀರಾಮನ ಸ್ವರೂಪವರ್ಣ ನೆಯ ವಿಚಾರ :

ಉಪನಿಷತ್ತುಗಳಲ್ಲಿ ಪರಮಾತ್ಮನನ್ನು ಜನ್ಮಾದಿಷಡ್ಭಾವವಿಕ್ರಿಯಾರಹಿತ ನೆಂದೂ, ದೇಶ-ಕಾಲ-ವಸ್ತುಗಳಿಂದ ಪರಿಚ್ಛಿನ್ನನಲ್ಲದವನೆಂದೂ, ವ್ಯಾಕೃತಾ ವ್ಯಾಕೃತಪ್ರಪಂಚಕ್ಕೆ ಅಭಿನ್ನನಿಮಿತ್ತೋಪಾದಾನಕಾರಣನೆಂದೂ, ನಾಮ ರೂಪರಹಿತನೆಂದೂ, ಎಲ್ಲ ಪ್ರಾಣಿಗಳಿಗೂ ಪ್ರತ್ಯಗಾತ್ಮನೆಂದೂ ತಿಳಿಸಿರುತ್ತದೆ. ಇವನಿಗೇ ಬ್ರಹ್ಮ, ಪರಮಾರ್ಥತತ್ತ್ವ, ದೇವ, ಸತ್ಯ, ಪುರುಷ, ಅಕ್ಷರ, ಸಾಕ್ಷಿ–

ಮುಂತಾದ ಹೆಸರುಗಳು. ಈ ತತ್ತ್ವವನ್ನೇ ಪುರಾಣಗಳಲ್ಲಿ–ಮಂದ ಮಧ್ಯಮಾಧಿಕಾರಿಗಳಿಗೋಸ್ಕರ, ಸೋಪಾಧಿಕಸ್ವರೂಪದಿಂದ ಬ್ರಹ್ಮಾ, ವಿಷ್ಣು, ಮಹೇಶ್ವರಾದಿ ನಾಮರೂಪಗಳಿಂದ ತಿಳಿಸಿರುತ್ತಾರೆ. ಈ ರೂಪ ಗಳೆಲ್ಲವೂ ಮಾಯಿಕವಾದುವುಗಳು, ಪರಮಾರ್ಥವಲ್ಲ.

"ಸ್ಯಾತ್ ಪರಮೇಶ್ವರಸ್ಯಾಪಿ ಇಚ್ಛಾವಶಾತ್ ಮಾಯಾ ಮಯಂ ರೂಪಂ ಸಾಧಕಾನುಗ್ರಹಾರ್ಥಮ್'' ಬ್ರ.ಸೂ. 1-1-20

"ಜನ್ಮಾದಿರಹಿತನಾಗಿದ್ದರೂ ಪರಮೇಶ್ವರನಿಗೆ–ಸಾಧಕರಿಗೆ ಅನು ಗ್ರಹಮಾಡುವುದಕ್ಕಾಗಿ–ತನ್ನ ಸಂಕಲ್ಪಮಾತ್ರದಿಂದ ಮಾಯಾಮಯವಾದ ಅವತಾರಗಳು–ಉಂಟಾಗಬಹುದು" - ಎಂದು ಭಗವಾನ್ ಶ್ರೀ ಶಂಕರರು ತಿಳಿಸಿರುತ್ತಾರೆ.

ಪರಮಾತ್ಮನೇ ಲೋಕಕಲ್ಯಾಣಕ್ಕೋಸ್ಕರ ದಶರಥನಿಗೆ–ಮಗನಾಗಿ ಮಾನವನಾಗಿ ಹುಟ್ಟಿದವನಂತೆ ತೋರಿಕೊಂಡಿದ್ದಾನೆ. ಇಡೀ ರಾಮಾಯಣ ದಲ್ಲಿ ಶ್ರೀರಾಮಚಂದ್ರನನ್ನು ಮೊದಲಿನಿಂದ ಕೊನೆಯವರೆಗೂ ಒಬ್ಬ ಆದರ್ಶ ಪುತ್ರನನ್ನಾಗಿ, ಆದರ್ಶಭ್ರಾತೃವನ್ನಾಗಿ, ಆದರ್ಶರಾಜನನ್ನಾಗಿಯೇ ವರ್ಣಿ ಸಿರುತ್ತದೆ. ಮರ್ಯಾದಾಪುರುಷೋತ್ತಮನಾದ ಶ್ರೀರಾಮನನ್ನು ನಾವು ಮಾನವನಂತೆ ನೋಡಿದಾಗಲೇ ಅವನ ಘನತೆ, ಮಹತ್ತ್ವ ಅರ್ಥವಾಗುತ್ತದೆ. ರಾಮನನ್ನು ಆದರ್ಶಮಾನವನನ್ನಾಗಿ ಕಾಣದೇ ಭಗವಂತನೆಂಬ ದೃಷ್ಟಿ ಯಿಂದ ನೋಡಿದಾಗ ರಸಾಭಾಸವಾಗುತ್ತದೆ. ರಾಮನೂ ನಮ್ಮಂತೆಯೇ ಮನುಷ್ಯನು. ಆದ್ದರಿಂದಲೇ ಅವನೂ ತನ್ನ ಜೀವನದ ಉದ್ದಕ್ಕೂ ಎಡರು-ತೊಡರುಗಳಿಗೆ ತುತ್ತಾಗಿ ನಮ್ಮಂತೆಯೇ ಸುಖ-ದುಃಖಗಳನ್ನೂ ಅನುಭವಿಸುತ್ತಾನೆ.

ಅಯೋಧ್ಯಾಕಾಂಡವು ಶ್ರೀರಾಮನ ಸತ್ವಪರೀಕ್ಷೆಗೆ ಅಳತೆಗೋಲಾ ಗಿರುತ್ತದೆ. ಈ ಕಾಂಡವನ್ನು ರಾಮಾಯಣದ ಹೃದಯವೆನ್ನಬೇಕು. ಪ್ರಾರಬ್ಧದ ಪ್ರಾಬಲ್ಯವನ್ನೂ–ಮಾನವನ ಅಸ್ವಾತಂತ್ರ್ಯವನ್ನೂ ಇಲ್ಲಿ ರಮ ಣೀಯವಾಗಿ ವರ್ಣಿಸಲಾಗಿದೆ. ಈ ಕಾಂಡವನ್ನು ಓದುವ ಎಂತಹ ಸಹೃದಯ ನಿಗೂ ದುಃಖದ ಕಣ್ಣೀರು ಬರದಿರದು ; ಹೃದಯವು ಕಂಪಿಸದಿರದು. ಮಾನವನಿಗೆ ಸ್ವಾಭಾವಿಕವಾಗಿ ಬಂದೊದಗುವ ಅನಿಷ್ಟಪ್ರಾರಬ್ಧಗಳನ್ನು

ಧೈರ್ಯದಿಂದ ಎದುರಿಸುವ ಮತ್ತು ಸಂತೋಷವಾಗಿ ಅನುಭವಿಸುವ ಧೀರ ತನದ ಕಲೆಯನ್ನು ಶ್ರೀರಾಮನ ನಡವಳಿಕೆಯ ವರ್ಣನೆಯಿಂದ ಈ ಕಾಂಡವು ನಮಗೆ ಕಲಿಸುತ್ತದೆ.

ಅದೃಷ್ಟಫಲವೆಂದರೂ–ಪ್ರಾರಬ್ಧಫಲವೆಂದರೂ ಒಂದೇ ಅರ್ಥ. ಸುಖ ಪ್ರದವಾದ ಆಯುರಾರೋಗ್ಯೈಶ್ವರ್ಯ-ಸತ್ಸಂತಾನ-ಸತ್ಕೀರ್ತಿ–ಇತ್ಯಾದಿ ಇಷ್ಟಫಲಗಳನ್ನು ಅದೃಷ್ಟವೆಂದೂ–ಅಪಮೃತ್ಯು, ರೋಗಗಳು, ದಾರಿದ್ರ್ಯ, ಸಂತಾನಾಭಾವ, ಲೋಕಾಪವಾದಗಳೇ ಮುಂತಾದ ಅನಿಷ್ಟಫಲಗಳನ್ನು ಪ್ರಾರಬ್ಧವೆಂದೂ ಅನೇಕರು ತಿಳಿದಿರುತ್ತಾರೆ. ಆದರೆ ಇದು ಸರಿಯಲ್ಲ. "ಅದೃಷ್ಟ" ಎನ್ನುವ ಶಬ್ದಕ್ಕೆ "ಈ ಇಂದ್ರಿಯಗಳಿಗೆ ಗೋಚರವಲ್ಲದ" "ಕಾರಣವನ್ನು ತಿಳಿಯಲಾಗದ" –ಎಂದು ಅರ್ಥವಾಗುತ್ತದೆ. "ಪ್ರಾರಬ್ಧ" ಶಬ್ದಕ್ಕೆ "ತನ್ನ ಗೊತ್ತಾದ ಫಲವನ್ನು ಕೊಡುವುದಕ್ಕೆ ಆರಂಭವಾಗಿರುವ" - ಎಂದರ್ಥವಾಗುತ್ತದೆ. ಯಾವ ಹಿಂದಿನ ಕರ್ಮಗಳು (ಶುಭಾಶುಭ ; ಪುಣ್ಯಾಪುಣ್ಯ ; ಧರ್ಮಾಧರ್ಮ ; ವಿಹಿತ-ನಿಷಿದ್ಧ) ಈಗ ಫಲಗಳನ್ನು (ಇಷ್ಟಾನಿಷ್ಟ.; ಸುಖ-ದುಃಖ) ಕೊಡುತ್ತಿವೆಯೋ–ಅವು ಯಾವುವೆಂದು ಅಥವಾ ಹೇಗಿವೆಯೆಂದು ಈಗ ಫಲಾನುಭವಕಾಲದಲ್ಲಿ ಊಹಿಸಲೂ ಸಾಧ್ಯ ವಿಲ್ಲದ್ದರಿಂದ ಈ ಪ್ರಾರಬ್ಧಫಲವೇ (ಪ್ರಾರಬ್ಧದ ಫಲವೇ) ಅದೃಷ್ಟಫಲವು (ಅದೃಷ್ಟದ ಫಲವು.) ಆದ್ದರಿಂದ ಪ್ರಾರಬ್ಧವೆಂದರೂ ಅದೃಷ್ಟವೆಂದರೂ ಒಂದೇ ಅಭಿಪ್ರಾಯವು. ಪ್ರಾರಬ್ಧವೆಲ್ಲವೂ ಅದೃಷ್ಟವೇ.

ಈ ಜನ್ಮದಲ್ಲಿ ಈಗ ಮಾಡಿರುವ ಮತ್ತು ಮಾಡುತ್ತಿರುವ ಮತ್ತು ಮಾಡಬಹುದಾದ ಧರ್ಮರೂಪವಾದ ಪುಣ್ಯಕರ್ಮಗಳಿಗೂ–ಈಗ ಪ್ರಾರಬ್ಧದ ಫಲವಾಗಿ ಅನುಭವಿಸುತ್ತಿರುವ ರೋಗ-ದಾರಿದ್ರ್ಯಾದಿ ಅನಿಷ್ಟವಾದ ದುಃಖ ಗಳಿಗೂ ಯಾವ ಸಂಬಂಧವೂ ಇರುವುದಿಲ್ಲ. ಹೀಗೆಯೇ ಇಂದಿನ ಸುಖಾನು ಭವಕ್ಕೂ ಇಂದಿನ ಪಾಪಕರ್ಮಗಳಿಗೂ ಯಾವ ಸಂಬಂಧವೂ ಇಲ್ಲ. ಅವನವನ ಪ್ರಾರಬ್ಧಫಲಗಳನ್ನು ಅವನವನೇ ಅವಶ್ಯವಾಗಿ ಅನುಭವಿಸಲೇಬೇಕು. ಇದನ್ನು ಬದಲಾವಣೆ ಮಾಡಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ.

ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಮ್ ।
ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ ॥

"ತಾನು ಹಿಂದಿನ ಜನ್ಮಗಳಲ್ಲಿ ಮಾಡಿರುವ ಶುಭಾಶುಭಕರ್ಮಗಳ ಫಲಗಳನ್ನು ಖಂಡಿತವಾಗಿಯೂ ತಾನು ಅನುಭವಿಸಲೇಬೇಕು. ಕರ್ಮದ ಫಲವನ್ನು ಈಗ ಇಲ್ಲಿ ಅನುಭವಿಸದೇ ಹೋದರೆ ಮುಂದಿನ ಅನೇಕಜನ್ಮಗಳಲ್ಲಾದರೂ ಅನುಭವಿಸಲೇಬೇಕು. ಅನುಭವಿಸದೇ ಹೋದರೆ ಈ ಪ್ರಾರಬ್ಧಕರ್ಮಕ್ಕೆ ನಾಶವೇ ಇಲ್ಲ."

ಹರಿಣಾಪಿ ಹರೇಣಾಪಿ ಬ್ರಹ್ಮಣಾಪಿ ಸುರೈರಪಿ ।
ಲಲಾಟಲಿಖಿತಾ ಲೇಖಾ ಪರಿಮಾರ್ಷ್ಟುಂ ನ ಶಕ್ಯತೇ ॥

"ಹರಿ-ಹರ-ಬ್ರಹ್ಮರಿಂದಲೂ ಪ್ರಾರಬ್ಧವನ್ನು (ಹಣೇಬರಹವನ್ನು) ಬೇರೆ ರೀತಿಯಾಗಿ ಪರಿವರ್ತಿಸಿಕೊಳ್ಳಲು ಸಾಧ್ಯವೇ ಇಲ್ಲ."

ಈ ಮಾತುಗಳು ಸಾರ್ವತ್ರಿಕವಾಗಿ ಅನ್ವಯವಾಗತಕ್ಕವಾಗಿರುತ್ತವೆ.

ದಶರಥನ ಮಂತ್ರಿಯಾದ ಸುಮಂತ್ರನು (ಚೆನ್ನಾಗಿ ಆಳವಾಗಿ ವಿಚಾರ ಮಾಡುವ ಸಾಮರ್ಥ್ಯವುಳ್ಳವನು) ಶ್ರೀರಾಮನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಅರಣ್ಯಮಾರ್ಗದಲ್ಲಿ ಬಿಡುತ್ತಾ ಬಹುದುಃಖದಿಂದ ಶ್ರೀರಾಮನಿಗೆ ಹೀಗೆ ಹೇಳಿರುವುದನ್ನು ಇಲ್ಲಿ ಗಮನಿಸಬೇಕು :

ನಾತಿಕ್ರಾನ್ತಮಿದಂ ಲೋಕೇ ಪುರುಷೇಣೇಹ ಕೇನಚಿತ್ ।
ತವ ಸಭ್ರಾತೃಭಾರ್ಯಸ್ಯ ವಾಸಃ ಪ್ರಾಕೃತವದ್ವನೇ ॥
ನ ಮನ್ಯೇ ಬ್ರಹ್ಮಚರ್ಯೇಽಸ್ತಿ ಸ್ವಧೀತೇ ವಾ ಫಲೋದಯಃ ।
ಮಾರ್ದವಾರ್ಜವಯೋರ್ವಾಪಿ ತ್ವಾಂ ಚೇದ್ವ್ಯಸನಮಾಗತಮ್ ॥

ಅಯೋಧ್ಯಾ ೫೨-೧೬, ೧೭ ಪುಟ 790

"ಶ್ರೀರಾಮನೇ! ಧರ್ಮಾತ್ಮನೂ, ಸತ್ಯಸಂಧನೂ ಆಗಿರುವ ನಿನ್ನಂತಹ ಮಹಾತ್ಮನಿಗೂ ಪತ್ನೀ ಮತ್ತು ಸಹೋದರಸಮೇತನಾಗಿ ವನವಾಸವು ಬಂದೊದಗಿರುವುದನ್ನು ನೋಡಿದರೆ ನನಗೆ ಅತ್ಯಾಶ್ಚರ್ಯವಾಗುತ್ತಿದೆ! ಯಾವನಿಂದಲೂ ಅವನವನ ಪ್ರಾರಬ್ಧವನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗಲಾರದೆಂಬುದಕ್ಕೆ ನೀನೇ ನನಗೆ ಪ್ರತ್ಯಕ್ಷ ಉದಾಹರಣೆಯಾಗಿದ್ದೀಯೆ, ಈ ಜನ್ಮದಲ್ಲಿ ಆಚರಿಸಿದ ಬ್ರಹ್ಮಚರ್ಯಾನುಷ್ಠಾನ, ವೇದಾಧ್ಯಯನ, ಮಾರ್ದವ (ದಯಾಲುತ್ವ), ಆರ್ಜವ–ಮುಂತಾದ ಯಾವ ಸದ್ಗುಣಗಳೂ–ಮಾನವನಿಗೆ ಒದಗಬಹುದಾದ ಅನಿಷ್ಟರೂಪವಾದ ದುಃಖಗಳನ್ನು–ಪರಿಹರಿಸಿಕೊಳ್ಳಲು ಸಾಧನವಾಗಲಾರವು."

ವಿವೇಕಿಯಾದ ಸುಮಂತ್ರನ ಈ ಮಾತು ರಾಮನನ್ನು ಕುರಿತು ಹೇಳಿದ್ದಾದರೂ–ಧೀರನಾದ ದಶರಥ, ಮಹಾಪತಿವ್ರತಾಶಿರೋಮಣಿಯರಾದ ದಶರಥನ ಪತ್ನಿಯರು, ತಪಸ್ವಿಯಾದ ಲಕ್ಷ್ಮಣ, ತ್ಯಾಗಮೂರ್ತಿಯೂ ಭ್ರಾತೃಭಕ್ತನೂ ಆದ ಭರತ–ಮುಂತಾದವರೆಲ್ಲರಿಗೂ ಅನ್ವಯವಾಗುತ್ತದೆ.

ಆದಿಕವಿ ವಾಲ್ಮೀಕಿಯು–ಪ್ರಾರಬ್ಧದ ಪ್ರಭುತ್ವವನ್ನು ತೋರಿಸಿಕೊಟ್ಟು ಅಂತಹ ದುಃಖಸಮಯದಲ್ಲೂ ವಿವೇಕಿಯಾದ ಮನುಷ್ಯನು ತನ್ನ ವಿವೇಕ ಪ್ರಜ್ಞೆಯನ್ನು ಕಳೆದುಕೊಳ್ಳದೇ ಆ ದುಃಖವನ್ನು ಹೇಗೆ ಧೀರನಾಗಿ ಎದುರಿಸಬೇಕೆಂಬುದನ್ನು ಈ ಅಯೋಧ್ಯಾಕಾಂಡದಲ್ಲಿ ತೋರಿಸಿರುತ್ತಾನೆ. ಇಂತಹ ಕೆಲವು ಸಂದರ್ಭಗಳನ್ನು ನೋಡೋಣ.

ದಶರಥನು ಅನುಭವಿಸಿದ ದುಃಖಪರಂಪರೆ

ಇಕ್ಷ್ವಾಕುವಂಶಕ್ಕೆ ಕಲಶಪ್ರಾಯನಾದ ಧೀರೋದಾತ್ತಚಕ್ರವರ್ತಿ ದಶರಥ. ಅನೇಕವರ್ಷಗಳ ಕಾಲ ಮಕ್ಕಳಿಲ್ಲದೇ ದುಃಖಿತನಾಗಿ ಸತ್‌ಸಂತಾನ ಪ್ರಾಪ್ತಿಗಾಗಿ ವ್ರತೋಪವಾಸಾದಿ ಸಕಲತಪಸ್ಸುಗಳನ್ನಾಚರಿಸಿ ವಸಿಷ್ಠರಂಥ ಶ್ರೋತ್ರಿಯರಾದ ಆಚಾರ್ಯರ ಪ್ರಧಾನಾಚಾರ್ಯತ್ವದಲ್ಲಿ ಪುತ್ರಕಾಮೇಷ್ಟಿ ಯಾಗವನ್ನು ಮಾಡಿ, ಋಷ್ಯಶೃಂಗರಂತಹ ಜ್ಞಾನಚಕ್ರವರ್ತಿಗಳಾದ ಮಹಾ ತಪಸ್ವಿಗಳ ಅನುಗ್ರಹವನ್ನು ಹೊಂದಿ–ಸುಪ್ರೀತನಾದ ಯಜ್ಞೇಶ್ವರನ ಸಾಕ್ಷಾತ್ ಅಮೃತಹಸ್ತದಿಂದ ಪ್ರಸಾದರೂಪವಾಗಿ ತಾನೇ ಸ್ವೀಕರಿಸಿದ ಪಾಯಸದ ಪ್ರಭಾವದಿಂದ ತನ್ನ ಅನುರೂಪರಾದ ಪತಿವ್ರತೆಯರಾದ ಮೂವರು ಪತ್ನಿಯರಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥ ಚತುಷ್ಟಯವೇ ಅವತರಿಸಿವೆಯೋ ಎಂಬಂತೆ ನಾಲ್ಕು ಸತ್ಪುತ್ರರನ್ನು ಪಡೆದು ದಶರಥನು ಪರಮಾನಂದತುಂದಿಲನಾದನು. ಇದನ್ನು ಕಂಡು ಯಾರಿಗೆ ತಾನೇ ಸಂತೋಷವಾಗದು! ಆಹಾ! ಪುಣ್ಯಾತ್ಮನಾದ ದಶರಥನು ಎಂತಹ ಅದೃಷ್ಟಶಾಲಿ! ಸಾಕ್ಷಾತ್ ಪರಮಾತ್ಮನನ್ನೇ ಈತನು ಸತ್‌ಪುತ್ರರನ್ನಾಗಿ ಪಡೆದನಲ್ಲ! ಎಂದು ಯಾರಿಗಾದರೂ ಅಚ್ಚರಿಯಾಗುತ್ತದೆ. ಆದರೆ ಅವನಿಗೇ ತಿಳಿಯದಂತೆ ಯಾರ ಊಹೆಗೂ ನಿಲುಕದಂತೆ ಅವನಿಗಾಗಿ ಕಾದಿದ್ದ ಅನಿಷ್ಟ ಪ್ರಾರಬ್ಧವೇ ವಿಚಿತ್ರವಾಗಿತ್ತಲ್ಲವೇ! ಶ್ರೀರಾಮನ ಅವತಾರದ ಉದ್ದೇಶವೇ ಲೋಕಕಲ್ಯಾಣ. ಆದುದರಿಂದ ಶ್ರೀರಾಮ-ಲಕ್ಷ್ಮಣರ ವಿರಹದುಃಖವು

ಮಾತ್ರ ತಂದೆಗೆ ಅಪರಿಹಾರ್ಯವಾಗಿತ್ತು. ಮಕ್ಕಳಿಂದ ಅನುಭವಿಸ ಬೇಕಾದ ಸಕಲಸುಖಗಳಿಂದಲೂ ದಶರಥನು ವಂಚಿತನಾದನು. ಆಗಲಿ, ಕೊನೆಯ ಕಾಲದಲ್ಲಾದರೂ (ಮರಣಸಮಯದಲ್ಲೂ) ಒಬ್ಬ ಮಗನೂ ಅವನ ಸಮೀಪದಲ್ಲಿ ಇರಲಿಲ್ಲವಲ್ಲ! ಅಯ್ಯೋ! ಕಠೋರವಾದ ಪ್ರಬಲವಾದ ವಿಧಿಯೇ! ನಿನ್ನ ಸ್ವಾತಂತ್ರ್ಯವೇ ಮೇಲುಗೈಯಾಗಿದೆ.

ಇನ್ನು ದಶರಥನ ಮೂವರು ಪತ್ನಿಯರ ಗೋಳಾಟ. ಪ್ರಪಂಚದಲ್ಲಿರುವ ಸಕಲಸ್ತ್ರೀಯರೂ ಪರಮಾತ್ಮನನ್ನು ಆರಾಧನೆ ಮಾಡುವುದು ಮಾಂಗಲ್ಯ ಭಾಗ್ಯಕ್ಕಾಗಿಯಲ್ಲವೇ? ಸಕಲಸಂಪತ್ತುಗಳೂ ಸಮೃದ್ಧಿಯಾಗಿದ್ದು ಸ್ತ್ರೀಯಾದವಳಿಗೆ ಮಾಂಗಲ್ಯಭಾಗ್ಯವೇ ಇಲ್ಲವಾದರೆ ಎಲ್ಲವೂ ವ್ಯರ್ಥವಾ ದಂತೆ. ದಶರಥನಂತಹ ಮಹಾತ್ಮನ ಧರ್ಮಪತ್ನಿಯರಾಗಿ ಪತಿವ್ರತಾಶಿರೋ ರತ್ನವಾಗಿ ಮೆರೆದು, ಶ್ರೀರಾಮಾದಿಗಳಂತಹ ಸತ್‌ಪುತ್ರರನ್ನು ಪಡೆದ ಕೌಸಲ್ಯಾ-ಕೈಕೇಯೀ-ಸುಮಿತ್ರಾದೇವಿಯರಿಗೆ ವೈಧವ್ಯಪ್ರಾಪ್ತಿಯಾಯಿತೆಂದರೆ ಎಂತಹ ಆಶ್ಚರ್ಯ! ಅವರ ಪ್ರಾರಬ್ಧದ ಮುಂದೆ ಅವರ ಪತಿಸೇವಾದಿ ಗಳಾವುವೂ ಸಾರ್ಥಕವಾಗಲಿಲ್ಲವಲ್ಲ! ಪ್ರಾರಬ್ಧದ ಪ್ರಭುತ್ವ ಹೇಗಿದೆ!

ಅನಂತರ ಶ್ರೀರಾಮಚಂದ್ರಾದಿಗಳ ಪ್ರಾರಬ್ಧದ ವಿಷಯದಲ್ಲಿ– ದಶರಥಮಹಾರಾಜನಿಗೆ ಅನೇಕವರ್ಷಗಳ ಅನಂತರ ಜ್ಯೇಷ್ಠ-ಶ್ರೇಷ್ಠ ಸತ್ಪುತ್ರನಾಗಿ ಅವತರಿಸಿದರೂ ತಂದೆ-ತಾಯಿಗಳ ವಾರ್ಧಕ್ಯದಲ್ಲಿ ಸಮೀಪ ವರ್ತಿಯಾಗಿದ್ದುಕೊಂಡು ಅವರ ಸೇವೆಯಲ್ಲಿ ನಿರತನಾಗಿ ಅವರಿಗೆ ಸಂತೋಷವನ್ನುಂಟುಮಾಡುತ್ತಾ ತಾಯಂದಿರ ಸೌಮಂಗಲ್ಯಭಾಗ್ಯವನ್ನು ಅಭಿವೃದ್ಧಿಗೊಳಿಸುವಂತಹ ಅದೃಷ್ಟವು ಶ್ರೀರಾಮನಿಗೆ ಲಭಿಸಲಿಲ್ಲವಲ್ಲವೇ! ಲಕ್ಷ್ಮಣನಾದರೂ ಅಯೋಧ್ಯಾಪುರದಲ್ಲಿ ಇದ್ದಿದ್ದರೆ–ಮುಂದಾಗುವ ಅನರ್ಥ ವನ್ನು ತಪ್ಪಿಸಬಹುದಾಗಿತ್ತು. ಆದರೆ ಮುಂದೆ ಅವನಿಂದಲೇ ಇಂದ್ರಜಿತ್ತಿನ ಮರಣವು ಆಗಬೇಕಾಗಿದೆ! ಲಕ್ಷ್ಮಣನ ಬಾಣದಿಂದಲೇ ಇಂದ್ರಜಿತ್ತನ್ನು ಸಂಹಾರಮಾಡಿಸಬೇಕೆಂದಿರುವ ಪ್ರಾರಬ್ಧವು ಲಕ್ಷ್ಮಣನ ವಿರಹದುಃಖದಿಂದ ಈಗಲೇ ದಶರಥಮಹಾರಾಜನನ್ನು ಸಂಹಾರಮಾಡಿಸಿಬಿಟ್ಟಿತು.

ಶ್ರೀರಾಮ-ಲಕ್ಷ್ಮಣ-ಸೀತೆಯರನ್ನು ವನವಾಸಕ್ಕೆ ಕಳಿಸಿದ ಪ್ರಾರಬ್ಧವೇ ಭರತ-ಶತ್ರುಘ್ನರೀರ್ವರನ್ನೂ ಇದೇ ಸಮಯದಲ್ಲಿ ಸೋದರಮಾವ

ಯುಧಾಜಿತ್ತಿನ ಮನೆಗೆ ಕಳಿಸಿದೆ. ತಂದೆಯು ಸಾಯುವಾಗ ಯಾವ ಮಗನೂ ಸಮೀಪದಲ್ಲಿರಲಿಲ್ಲ. ಇವೆಲ್ಲವನ್ನೂ ಸ್ವಲ್ಪ ಆಳವಾಗಿ ನೋಡಿದರೆ ಪ್ರಾರಬ್ಧವು ತನ್ನ ಆಟವನ್ನು ಆಡಲು ಎಂತಹ ಉಪಾಯವನ್ನು ಮಾಡುತ್ತದೆ–ಎಂದು ತಿಳಿಯುತ್ತದೆ.

ಇನ್ನು ಅತ್ಯಂತನಿರಪರಾಧಿನಿಯೂ, ಪರಮಸಾತ್ತ್ವಿಕಮೂರ್ತಿಯೂ, ಪತಿವ್ರತಾರತ್ನವೂ, ರಾಜಕುಮಾರಿಯೂ ಆದ ಸೀತಾದೇವಿಗೆ ವಿವಾಹವಾದ ಕೂಡಲೇ ವನವಾಸಕ್ಕೆ ಪ್ರಯಾಣವೇ? ಅರಮನೆಯಲ್ಲಿದ್ದು ವೃದ್ಧರಾಗಿದ್ದ ಅತ್ತೆ-ಮಾವಂದಿರ ಸೇವೆಯನ್ನು ಮಾಡಿಕೊಂಡಿರುವುದಕ್ಕೆ ಅವಕಾಶವನ್ನು ಮಾಡಿಕೊಡದೇ ಅವಳ ಪ್ರಾರಬ್ಧವು ಅವಳನ್ನೂ ಅರಣ್ಯವಾಸಿನಿಯನ್ನಾಗಿ ಮಾಡಿ ಅಷ್ಟರಿಂದಲೂ ತುಷ್ಟವಾಗದ ಈ ಹತಪ್ರಾರಬ್ಧವು ಅವಳನ್ನು ರಾವಣನ ಕೈಯ್ಯಲ್ಲಿ ಸಿಕ್ಕಿಸಿ ಅಲ್ಲಿ ಅವಳನ್ನು ಪೀಡಿಸಿ ಭಯಂಕರವಾದ ದುಃಖಸಮುದ್ರದಲ್ಲೇ ಮುಳುಗಿಸಿತಲ್ಲ! ಅಬ್ಬಬ್ಬಾ! ಎಂಥ ಸಹೃದಯರಿಗೂ ಈ ದೃಶ್ಯವು ಹೃದಯವಿದ್ರಾವಕವಾದದ್ದಲ್ಲವೇ! ಇಂತಹ ಅಭೂತಪೂರ್ವ ದುಃಖಕ್ಕೆ ಆ ಮಹಾತಾಯಿ ಸೀತೆಯ ಅಪರಾಧವೇನು ಇದ್ದೀತು? ಈಗ ಇಲ್ಲಿ ನಮಗೆ ಈ ದುಃಖಕ್ಕೆ ಪ್ರತ್ಯಕ್ಷವಾಗಿ ಕಾರಣವು ಕಾಣಿಸದಿದ್ದರೂ ಅದೃಷ್ಟ ವಾಗಿ ಏನೋ ಕಾರಣವು ಇರಲೇಬೇಕಲ್ಲವೇ? ಅದೇ ಪ್ರಾರಬ್ಧವು!

ಕರ್ಮಸಿದ್ಧಾಂತದ ಪ್ರಕಾರ ಕಾರಣವಿಲ್ಲದೇ ಕಾರ್ಯವಿಲ್ಲ. ಬೀಜ ವಿಲ್ಲದೇ ವೃಕ್ಷವಿಲ್ಲ. ಅಂತೂ ಈಗಿನ ಸುಖ-ದುಃಖಗಳಿಗೆ ಹಿಂದಿನ ಏನೋ ಕಾರಣಗಳಿರಲೇಬೇಕು. ಇದನ್ನೇ ಮಹಾಕವಿ ಕಾಳಿದಾಸನು ರಘುವಂಶದಲ್ಲಿ "**ಫಲಾನುಮೇಯಾಃ ಪ್ರಾರಂಭಾಃ ಸಂಸ್ಕಾರಾಃ ಪ್ರಾಕ್ತನಾ ಇವ** ಈಗಿನ ಫಲಗಳಿಂದ ಹಿಂದಿನ ಪ್ರಾರಬ್ಧ (ಸಂಸ್ಕಾರ) ಗಳನ್ನು ಅನುಮಾನಿಸು ವಂತೆ...." ಎಂದು ಹೇಳಿರುತ್ತಾನೆ.

ಇಂತಹ ದುಃಖರೂಪವಾದ ಅನಿಷ್ಟಫಲಗಳು ಎಲ್ಲರ ಜೀವನದಲ್ಲೂ ಸ್ವಾಭಾವಿಕವಾಗಿ ಬಂದೇ ಬರುತ್ತವೆ. ಇದಕ್ಕೆ ಕಾರಣ ಅದೃಷ್ಟ ಅಥವಾ ಪ್ರಾರಬ್ಧ. ಇದು ಮಾನವನ ಸತ್ತ್ವಪರೀಕ್ಷೆ. ಅಗ್ನಿಪರೀಕ್ಷೆ. ಶ್ರೀರಾಮ ಚಂದ್ರನಿಗೆ ಇಂತಹ ಸಂದರ್ಭವು ಒದಗಿದಾಗಲೂ ಅವನು ಸ್ಥಿತಪ್ರಜ್ಞನಾಗಿದ್ದು ಹೇಗೆ ಆನಂದವಾಗಿದ್ದನು ಎಂಬ ಆದರ್ಶವನ್ನು ನಮ್ಮ ಕಣ್ಣುಮುಂದೆ ಈ ಅಯೋಧ್ಯಾಕಾಂಡವು ಇಡುತ್ತಿದೆ. ಶ್ರೀರಾಮನ ಅಭಿಪ್ರಾಯದಂತೆ ನಮಗೆ

ಬಂದೊದಗುವ ಸುಖ-ದುಃಖಗಳು ಮುಖ್ಯವೇ ಅಲ್ಲ. ಕರ್ತವ್ಯಾಕರ್ತವ್ಯ ಪ್ರಜ್ಞೆ ಮುಖ್ಯವಾದುದು. ಕರ್ತವ್ಯನಿಷ್ಠೆ-ಸತ್ಯನಿಷ್ಠೆ ಮುಖ್ಯವಾದದ್ದು.

ನಾವು ಬೇಕೆಂದು ಎಷ್ಟೇ ಬಯಸಿದರೂ ಸುಖವು ದೊರಕದೇ ಇರಬಹುದು ; ಬೇಡವೆಂದು ದುಃಖವನ್ನು ಪರಿಹರಿಸಿಕೊಳ್ಳಲು ಎಷ್ಟೇ ಯತ್ನಿಸಿದರೂ ದುಃಖವು ಬರದೇ ಇರದು. ಇದನ್ನೇ ಶ್ರೀಮದ್ಭಾಗವತದಲ್ಲಿ–

ಅಪ್ರಾರ್ಥಿತಾನಿ ದುಃಖಾನಿ ಯಥೈವಾಯಾಂತಿ ದೇಹಿನಾಮ್ ।
ಸುಖಾನ್ಯಪಿ ತಥಾ ಮನ್ಯೇ ದೈನ್ಯಮತ್ರಾತಿರಿಚ್ಯತೇ ॥

ಎಂದು ಪ್ರಹ್ಲಾದನು ಅಸುರಬಾಲಕರಿಗೆ ಉಪದೇಶಿಸಿರುತ್ತಾನೆ.

ಸಾಮಾನ್ಯರ ದೃಷ್ಟಿಯಿಂದ ಮಹಾತ್ಮರಿಗೆ ಬರುವ ದುಃಖವೂ (ಅನಿಷ್ಟರೂಪವಾದ ಪ್ರಾರಬ್ಧವೂ) ಲೋಕಕಲ್ಯಾಣದೃಷ್ಟಿಯಿಂದ ಇಷ್ಟವಾದದ್ದೇ. ಶ್ರೀರಾಮಚಂದ್ರನು ಸೀತಾ-ಲಕ್ಷ್ಮಣಸಮೇತನಾಗಿ ಕಾಡಿಗೆ ಹೋದನಲ್ಲ! ಅಯ್ಯೋ ಪ್ರಾರಬ್ಧವೇ! ಎಂದು ನಮಗೆ ಅನಿಸಿದರೂ–ಅದರಿಂದ ತಪಸ್ವಿಗಳಿಗೆ, ಋಷಿಗಳಿಗೆ ಆನಂದವಾಗಲಿಲ್ಲವೇ? ರಾವಣ-ಕುಂಭಕರ್ಣಾದಿ ದುಷ್ಟರಾಕ್ಷಸರ ವಧೆಯಾಗಲಿಲ್ಲವೇ? ಧರ್ಮರಕ್ಷಣೆ–ಅಧರ್ಮನಾಶ ಆಗಲಿಲ್ಲವೇ?

ತಂದೆಯಾದ ವಾಜಶ್ರವಸ್ಸು ಕೋಪದಿಂದ–"ನಿನ್ನನ್ನು ಮೃತ್ಯುವಿಗೆ ಕೊಟ್ಟಿದ್ದೇನೆ" –ಎಂದು ಹೇಳಿದರೂ ಸತ್ಪುತ್ರನಾದ ನಚಿಕೇತನು ಮೃತ್ಯುಲೋಕಗಮನರೂಪವಾದ ತನ್ನ ಪ್ರಾರಬ್ಧವನ್ನು ಆತ್ಮೋದ್ಧಾರಕ್ಕಾಗಿಯೇ ವಿನಿಯೋಗಿಸಿಕೊಳ್ಳಲಿಲ್ಲವೇ?

ಹೀಗೆ ಧೀರರಾದ ಪುರುಷರು "**ನ್ಯಾಯ್ಯಾತ್ ಪಥಃ ಪ್ರವಿಚಲಂತಿ ಪದಂ ನ ಧೀರಾಃ**" "ಎಂತಹ ಕಷ್ಟಸಂದರ್ಭವು ಬಂದೊದಗಿದರೂ ಧೀರರುನ್ಯಾಯವಾದ ಮಾರ್ಗವನ್ನು ಬಿಡುವುದಿಲ್ಲ." ಶ್ರೀರಾಮನ ಆದರ್ಶವು ನಮ ಗೆಲ್ಲರಿಗೂ ಮಾರ್ಗದರ್ಶಕವಾಗಿದೆ.

ಭರತನ ಪಾತ್ರ

ತಾನೇ ತಾನಾಗಿ ಬಂದಿದ್ದ ರಾಜ್ಯಲಕ್ಷ್ಮಿಯನ್ನು ತಿರಸ್ಕರಿಸಿ ತ್ಯಾಗಮೂರ್ತಿಯಾಗಿದ್ದ ಭರತನ ನಡತೆಯು "**ನ ಕರ್ಮಣಾ ನ ಪ್ರಜಯಾ ಧನೇನ, ತ್ಯಾಗೇನೈಕೇ ಅಮೃತತ್ವಮಾನಶುಃ**" ಎಂಬ ಉಪದೇಶಕ್ಕೆ ಜೀವಂತ ಉದಾಹರಣೆಯಾಗಿದೆ. ಇದು ಭಾರತೀಯಸಂಸ್ಕೃತಿ.

ಈ ಅಯೋಧ್ಯಾಕಾಂಡವು ರಾಮಾಯಣದಲ್ಲಿ ಪ್ರಧಾನವಾದ ಮತ್ತು ದೀರ್ಘವಾದ ಕಾಂಡವಾಗಿದೆ. ಇದರಲ್ಲಿ ಪಿತಾ-ಪುತ್ರರ, ಸೋದರರ, ಪತಿ-ಪತ್ನಿಯರ, ಗುರು-ಶಿಷ್ಯರ, ಪ್ರಜಾ-ಪ್ರಭುಗಳ, ರಾಜ-ಮಂತ್ರಿಗಳ– ಆದರ್ಶವು ಅನುಕರಣೀಯವಾಗಿದೆ. ಈ ಕಾಂಡವನ್ನು ಅರ್ಥಾನುಸಂಧಾನ ಪೂರ್ವಕವಾಗಿ ಹತ್ತಾರು ಸಲ ಪಾರಾಯಣಮಾಡುತ್ತಿದ್ದರೆ ನಮ್ಮ ಜೀವನದ ಮೇಲೆ ಈ ಆದರ್ಶಗಳ ಪರಿಣಾಮವು ಬೀರದಿರದು!

"ಭಾರತ ದರ್ಶನ ಪ್ರಕಾಶನ" ಸಮಿತಿಯವರು ಭಗವಾನ್ ವೇದ ವ್ಯಾಸರ ದಿವ್ಯಸಂದೇಶರೂಪವಾದ "ಶ್ರೀಮನ್ಮಹಾಭಾರತ" ಗ್ರಂಥವನ್ನು ಸಂಪೂರ್ಣವಾಗಿ, ಸರ್ವಾಂಗಸುಂದರವಾಗಿ, ನಿರ್ವಿಘ್ನವಾಗಿ ಪ್ರಕಾಶಿಸಿ, ಈಗ ಆದಿಕವಿ ವಾಲ್ಮೀಕಿಯ ಪ್ರಸಾದರೂಪವಾಗಿರುವ "ಶ್ರೀಮದ್ವಾಲ್ಮೀಕಿರಾಮಾ ಯಣ" ಗ್ರಂಥವನ್ನೂ ಕನ್ನಡದಲ್ಲಿ ಅನುವಾದಿಸಿ ಸಂಪೂರ್ಣವಾಗಿ ಪ್ರಕಾಶಿಸು ತ್ತಿರುವುದು ತುಂಬಾ ಸಂತೋಷದ ಸುದ್ದಿ. ನವನಾಗರಿಕತೆಯ ಹೆಸರಿನಲ್ಲಿ ವಿಜ್ಞಾನದ ಕುಂಟುನೆಪದಿಂದ ಭಾರತೀಯಸಂಸ್ಕೃತಿಯೇ ಕಣ್ಮರೆಯಾಗುತ್ತಿರುವ ಇಂತಹ ಸಮಯದಲ್ಲಿ ಇಂತಹ ಗ್ರಂಥಗಳನ್ನು ತಿಳಿಯಾದ ಕನ್ನಡಭಾಷೆಯಲ್ಲಿ ಪ್ರಕಾಶಿಸುತ್ತಿರುವುದನ್ನು ಕನ್ನಡಿಗರೆಲ್ಲರೂ ಮೆಚ್ಚಬೇಕು. ಇಡೀ ಕನ್ನಡ ನಾಡೇ ಇವರಿಗೆ ಕೃತಜ್ಞವಾಗಿರಬೇಕು. ಈ ಮಹಾಭಾರತ-ರಾಮಾಯಣ-ಭಾಗವತಗ್ರಂಥಗಳು ಪ್ರತಿಯೊಬ್ಬ ಕನ್ನಡಿಗನ ಮನೆಯಲ್ಲೂ ಅವಶ್ಯವಾಗಿ ಇರಬೇಕು.

ಶ್ರೀರಾಮಚಂದ್ರನ ಕೃಪಾಶೀರ್ವಾದದಿಂದ ಈ ರಾಮಾಯಣಪ್ರಕಾಶನ ಕಾರ್ಯವು ನಿರ್ವಿಘ್ನವಾಗಿ ಪೂರೈಸುವಂತಾಗಲಿ. ಅನಂತರ ಶ್ರೀಕೃಷ್ಣ ಪರಮಾತ್ಮನ ಅನುಗ್ರಹದಿಂದ ಶ್ರೀಮದ್ಭಾಗವತಾದಿ ಗ್ರಂಥಗಳೂ ಈ ಸಮಿತಿ ಯಿಂದ ಪ್ರಕಟಗೊಳ್ಳಲಿ.

ಈ ಪ್ರಕಾಶಕರಿಗೆ ಪರಮಾತ್ಮನು ಸರ್ವತೋಮುಖವಾದ ಸನ್ಮಂಗಳ ಗಳನ್ನೂ ಅನುಗ್ರಹಿಸಲಿ.

ಮಂಗಳಂ ರಾಮಚಂದ್ರಾಯ ಬೋಧರೂಪಾಯ ಮಂಗಳಮ್ ।
ಸರ್ವಮಂಗಳರೂಪಾಯ ಪುಣ್ಯಶ್ಲೋಕಾಯ ಮಂಗಳಮ್ ॥

ಪ್ರಭವ ಸಂವತ್ಸರವ ಚೈತ್ರ ಶುದ್ಧ
ದಶಮೀ ತಾ॥ 8-4-87ನೇ ಬುಧವಾರ

ಕೆ.ಜಿ. ಸುಬ್ರಾಯಶರ್ಮಾ,
ಅಧ್ಯಾತ್ಮಪ್ರಕಾಶ ಕಾರ್ಯಾಲಯ,
ಬೆಂಗಳೂರು-28

ಶ್ರೀಮದ್ವಾಲ್ಮೀಕಿರಾಮಾಯಣ - ಮೂರನೆಯ ಸಂಪುಟ
ಅಯೋಧ್ಯಾಕಾಂಡದಮೂಲಶ್ಲೋಕಗಳಸರ್ಗಾನುಕ್ರಮಣಿಕೆ ಮತ್ತುವಿಷಯಾನುಕ್ರಮಣಿಕೆ

(ವಿ.ಸೂ. ಮೊದಲನೆಯದು.: ಮೂಲಶ್ಲೋಕಗಳ ಸರ್ಗಗಳ ಪುಟಸಂಖ್ಯೆ-
ಎರಡನೆಯದು.: ವಿಷಯಗಳ ಪುಟಸಂಖ್ಯೆ)

ಪ್ರಕ್ಷಿಪ್ತಸರ್ಗ

-ಪ್ರಕಾಶಕರು.

ಶ್ರೀಮಹಾಗಣಪತಯೇ ನಮಃ ಶ್ರೀಮಹಾಸರಸ್ವತ್ಯೈ ನಮಃ ಶ್ರೀಸದ್ಗುರುವೇ ನಮಃ

ಓಂ

ತೃತೀಯಃ ಸಂಪುಟಃ

ಶ್ರೀಮದ್ವಾಲ್ಮೀಕಿರಾಮಾಯಣೇ-ಅಯೋಧ್ಯಾಕಾಣ್ಡೇ

ದ್ವಿಪಞ್ಚಾಶಃ ಸರ್ಗಃ

ಪ್ರಭಾತಾಯಾಂ ತು ಶರ್ವರ್ಯಾಂ ಪೃಥುವಕ್ಷಾ ಮಹಾಯಶಾಃ ।
ಉವಾಚ ರಾಮಃ ಸೌಮಿತ್ರಿಂ ಲಕ್ಷ್ಮಣಂ ಶುಭಲಕ್ಷಣಮ್ ॥೧॥

ಭಾಸ್ಕರೋದಯಕಾಲೋಽಯಂ ಗತಾ ಭಗವತೀ ನಿಶಾ ।
ಅಸೌ ಸುಕೃಷ್ಣೋ ವಿಹಗಃ ಕೋಕಿಲಸ್ತಾತ ಕೂಜತಿ ॥೨॥

ಬರ್ಹಿಣಾನಾಂ ಚ ನಿರ್ಘೋಷಃ ಶ್ರೂಯತೇ ನದತಾಂ ವನೇ ।
ತರಾಮ ಜಾಹ್ನವೀಂ ಸೌಮ್ಯ ಶೀಘ್ರಗಾಂ ಸಾಗರಂಗಮಾಮ್ ॥೩॥

ವಿಜ್ಞಾಯ ರಾಮಸ್ಯ ವಚಃ ಸೌಮಿತ್ರಿರ್ಮಿತ್ರನನ್ದನಃ ।
ಗುಹಮಾಮನ್ತ್ರ್ಯ ಸೂತಂ ಚ ಸೋಽತಿಷ್ಠದ್ಭ್ರಾತುರಗ್ರತಃ ॥೪॥

ಸ ತು ರಾಮಸ್ಯ ವಚನಂ ನಿಶಮ್ಯ ಪ್ರತಿಗೃಹ್ಯ ಚ ।
ಸ್ಥಪತಿಸ್ತೂರ್ಣಮಾಹೂಯ ಸಚಿವಾನಿದಮಬ್ರವೀತ್ ॥೫॥

ಅಸ್ಯ ವಾಹನಸಂಯುಕ್ತಾಂ ಕರ್ಣಗ್ರಾಹವತೀಂ ಶುಭಾಮ್ ।
ಸುಪ್ರತಾರಾಂ ದೃಢಾಂ ತೀರ್ಥೇ ಶೀಘ್ರಂ ನಾವಮುಪಾಹರ ॥೬॥

ತಂ ನಿಶಮ್ಯ ಸಮಾದೇಶಂ ಗುಹಾಮಾತ್ಯಗಣೋ ಮಹಾನ್ ।
ಉಪೋಹ್ಯ ರುಚಿರಾಂ ನಾವಂ ಗುಹಾಯ ಪ್ರತ್ಯವೇದಯತ್ ॥೭॥

ತತಃ ಸ ಪ್ರಾಞ್ಜಲಿರ್ಭೂತ್ವಾ ಗುಹೋ ರಾಘವಮಬ್ರವೀತ್ ।
ಉಪಸ್ಥಿತೇಯಂ ನೌರ್ದೇವ ಭೂಯಃ ಕಿಂ ಕರವಾಣಿ ತೇ ॥೮॥

ತವಾಮರಸುತಪ್ರಖ್ಯ ತರ್ತುಂ ಸಾಗರಗಾಂ ನದೀಮ್ ।
ನೌರಿಯಂ ಪುರುಷವ್ಯಾಘ್ರ ತಾಂ ತ್ವಮಾರೋಹ ಸುವ್ರತ ॥೯॥

ಅಥೋವಾಚ ಮಹಾತೇಜಾ ರಾಮೋ ಗುಹಮಿದಂ ವಚಃ ।
ಕೃತಕಾಮೋಽಸ್ಮಿ ಭವತಾ ಶೀಘ್ರಮಾರೋಪ್ಯತಾಮಿತಿ ॥೧೦॥

ತತಃ ಕಲಾಪಾನ್ಸಂನಹ್ಯ ಖಡ್ಗೌ ಬದ್ಧ್ವಾ ಚ ಧನ್ವಿನೌ ।
ಜಗ್ಮತುರ್ಯೇನ ತೌ ಗಙ್ಗಾಂ ಸೀತಯಾ ಸಹ ರಾಘವೌ ॥೧೧॥

ರಾಮಮೇವಂ ತು ಧರ್ಮಜ್ಞಮುಪಗಮ್ಯ ವಿನೀತವತ್ ।
ಕಿಮಹಂ ಕರವಾಣೀತಿ ಸೂತಃ ಪ್ರಾಞ್ಜಲಿರಬ್ರವೀತ್ ॥೧೨॥

ತತೋಽಬ್ರವೀದ್ದಾಶರಥಿಃ ಸುಮನ್ತ್ರಂ
ಸ್ಪೃಶನ್ಕರೇಣೋತ್ತಮದಕ್ಷಿಣೇನ ।
ಸುಮನ್ತ್ರ ಶೀಘ್ರಂ ಪುನರೇವ ಯಾಹಿ
ರಾಜ್ಞಃ ಸಕಾಶೇ ಭವ ಚಾಪ್ರಮತ್ತಃ ॥೧೩॥

ನಿವರ್ತಸ್ವೇತ್ಯುವಾಚೈನಮೇತಾವದ್ಧಿ ಕೃತಂ ಮಮ ।
ರಥಂ ವಿಹಾಯ ಪದ್ಭ್ಯಾಂ ತು ಗಮಿಷ್ಯಾಮೋ ಮಹಾವನಮ್ ॥

ಆತ್ಮಾನಂ ತ್ವಭ್ಯನುಜ್ಞಾತಮವೇಕ್ಷ್ಯಾರ್ತಃ ಸ ಸಾರಥಿಃ ।
ಸುಮನ್ತ್ರಃ ಪುರುಷವ್ಯಾಘ್ರಮೈಕ್ಷ್ವಾಕಮಿದಮಬ್ರವೀತ್ ॥೧೪॥

ನಾತಿಕ್ರಾನ್ತಮಿದಂ ಲೋಕೇ ಪುರುಷೇಣೇಹ ಕೇನಚಿತ್ ।
ತವ ಸಭ್ರಾತೃಭಾರ್ಯಸ್ಯ ವಾಸಃ ಪ್ರಾಕೃತವದ್ವನೇ ॥೧೫॥

ನ ಮನ್ಯೇ ಬ್ರಹ್ಮಚರ್ಯೇಽಸ್ತಿ ಸ್ವಧೀತೇ ವಾ ಫಲೋದಯಃ ।
ಮಾರ್ದವಾರ್ಜವಯೋರ್ವಾಪಿ ತ್ವಾಂ ಚೇದ್ವ್ಯಸನ ಮಾಗತಮ್ ॥

ಸಹ ರಾಘವ ವೈದೇಹ್ಯಾ ಭ್ರಾತ್ರಾ ಚೈವ ವನೇ ವಸನ್ ।
ತ್ವಂ ಗತಿಂ ಪ್ರಾಪ್ಸ್ಯಸೇ ವೀರ ತ್ರಿಲೋಕಾಂಸ್ತು ಜಯನ್ನಿವ ॥೧೬॥

ವಯಂ ಖಲು ಹತಾ ರಾಮ ಯೇ ತ್ವಯಾಪ್ಯುಪವಞ್ಚಿತಾಃ ।
ಕೈಕೇಯ್ಯಾ ವಶಮೇಷ್ಯಾಮಃ ಪಾಪಾಯಾ ದುಃಖಭಾಗಿನಃ ॥೧೯॥

ಇತಿ ಬ್ರುವನ್ನಾತ್ಮಸಮಂ ಸುಮನ್ತ್ರಃ ಸಾರಥಿಸ್ತದಾ ।
ದೃಷ್ಟ್ವಾ ದೂರಗತಂ ರಾಮಂ ದುಃಖಾರ್ತೋ ರುರುದೇ ಚಿರಮ್॥

ತತಸ್ತು ವಿಗತೇ ಬಾಷ್ಪೇ ಸೂತಂ ಸ್ಪೃಷ್ಟೋದಕಂ ಶುಚಿಮ್ ।
ರಾಮಸ್ತು ಮಧುರಂ ವಾಕ್ಯಂ ಪುನಃ ಪುನರುವಾಚ ತಮ್ ॥೨೧॥

ಇಕ್ಷ್ವಾಕೂಣಾಂ ತ್ವಯಾ ತುಲ್ಯಂ ಸುಹೃದಂ ನೋಪಲಕ್ಷಯೇ ।
ಯಥಾ ದಶರಥೋ ರಾಜಾ ಮಾಂ ನ ಶೋಚೇತ್ತಥಾ ಕುರು ॥೨೨॥

ಶೋಕೋಪಹತಚೇತಾಶ್ಚ ವೃದ್ಧಶ್ಚ ಜಗತೀಪತಿಃ ।
ಕಾಮಭಾರಾವಸನ್ನಶ್ಚ ತಸ್ಮಾದೇತದ್ಬ್ರವೀಮಿ ತೇ ॥೨೩॥

ಯದ್ಯದಾಜ್ಞಾಪಯೇತ್ಕಿಂಚಿತ್ಸ ಮಹಾತ್ಮಾ ಮಹೀಪತಿಃ ।
ಕೈಕೇಯ್ಯಾಃ ಪ್ರಿಯಕಾಮಾರ್ಥಂ ಕಾರ್ಯಂ ತದವಿಕಾಂಕ್ಷಯಾ ॥೨೪॥

ಏತದರ್ಥಂ ಹಿ ರಾಜ್ಯಾನಿ ಪ್ರಶಾಸತಿ ನರೇಶ್ವರಾಃ ।
ಯದೇಷಾಂ ಸರ್ವಕೃತ್ಯೇಷು ಮನೋ ನ ಪ್ರತಿಹನ್ಯತೇ ॥೨೫॥

ಯದ್ಯಥಾ ಸ ಮಹಾರಾಜೋ ನಾಲೀಕಮಧಿಗಚ್ಛತಿ ।
ನ ಚ ತಾಮ್ಯತಿ ದುಃಖೇನ ಸುಮನ್ತ್ರ ಕುರು ತತ್ತಥಾ ॥೨೬॥

ಅದೃಷ್ಟದುಃಖಂ ರಾಜಾನಂ ವೃದ್ಧಮಾರ್ಯಂ ಜಿತೇನ್ದ್ರಿಯಮ್ ।
ಬ್ರೂಯಾಸ್ತ್ವಮಭಿವಾದ್ಯೈವ ಮಮ ಹೇತೋರಿದಂ ವಚಃ ॥೨೭॥

ನೈವಾಹಮನುಶೋಚಾಮಿ ಲಕ್ಷ್ಮಣೋ ನ ಚ ಮೈಥಿಲೀ ।
ಅಯೋಧ್ಯಾಯಾಶ್ಚ್ಯುತಾಶ್ಚೇತಿ ವನೇ ವತ್ಸ್ಯಾಮಹೇತಿ ಚ ॥೨೮॥

ಚತುರ್ದಶಸು ವರ್ಷೇಸು ನಿವೃತ್ತೇಷು ಪುನಃ ಪುನಃ ।
ಲಕ್ಷ್ಮಣಂ ಮಾಂ ಚ ಸೀತಾಂ ಚ ದ್ರಕ್ಷ್ಯಸಿ ಕ್ಷಿಪ್ರಮಾಗತಾನ್ ॥೨೯॥

ಏವಮುಕ್ತ್ವಾ ತು ರಾಜಾನಂ ಮಾತರಂ ಚ ಸುಮನ್ತ್ರ ಮೇ ।
ಅನ್ಯಾಶ್ಚ ದೇವೀಃ ಸಹಿತಾಃ ಕೈಕೇಯೀಂ ಚ ಪುನಃ ಪುನಃ ॥೩೦॥

ಆರೋಗ್ಯಂ ಬ್ರೂಹಿ ಕೌಸಲ್ಯಾಮಥ ಪಾದಾಭಿವನ್ದನಮ್ ।
ಸೀತಾಯಾ ಮಮ ಚಾರ್ಯಸ್ಯ ವಚನಾಲ್ಲಕ್ಷ್ಮಣಸ್ಯ ಚ ॥೩೧॥

ಬ್ರೂಯಾಶ್ಚ ಹಿ ಮಹಾರಾಜಂ ಭರತಂ ಕ್ಷಿಪ್ರಮಾನಯ ।
ಆಗತಶ್ಚಾಪಿ ಭರತಃ ಸ್ಥಾಪ್ಯೋ ನೃಪಮತೇ ಪದೇ ॥೩೨॥

ಭರತಂ ಚ ಪರಿಷ್ವಜ್ಯ ಯೌವರಾಜ್ಯೇಽಭಿಷಿಚ್ಯ ಚ ।
ಅಸ್ಮತ್ಸಂತಾಪಜಂ ದುಃಖಂ ನ ತ್ವಾಮಭಿಭವಿಷ್ಯತಿ ॥೩೩॥

ಭರತಶ್ಚಾಪಿ ವಕ್ತವ್ಯೋ ಯಥಾ ರಾಜನಿ ವರ್ತಸೇ ।
ತಥಾ ಮಾತೃಷು ವರ್ತೇಥಾಃ ಸರ್ವಾಸ್ವೇವಾವಿಶೇಷತಃ ॥೩೪॥

ಯಥಾ ಚ ತವ ಕೈಕೇಯೀ ಸುಮಿತ್ರಾ ಚ ವಿಶೇಷತಃ ।
ತಥೈವ ದೇವೀ ಕೌಸಲ್ಯಾ ಮಮ ಮಾತಾ ವಿಶೇಷತಃ ॥೩೫॥

ತಾತಸ್ಯ ಪ್ರಿಯಕಾಮೇನ ಯೌವರಾಜ್ಯಮವೇಕ್ಷತಾ ।
ಲೋಕಯೋರುಭಯೋಃ ಶಕ್ಯಂ ನಿತ್ಯದಾ ಸುಖಮೇಧಿತುಮ್ ॥೩೬॥

ನಿವರ್ತ್ಯಮಾನೋ ರಾಮೇಣ ಸುಮನ್ತ್ರಃ ಶೋಕಕರ್ಶಿತಃ ।
ತತ್ಸರ್ವಂ ವಚನಂ ಶ್ರುತ್ವಾ ಸ್ನೇಹಾತ್ಕಾಕುತ್ಸ್ಥಮಬ್ರವೀತ್ ॥೩೭॥

ಯದಹಂ ನೋಪಚಾರೇಣ ಬ್ರೂಯಾಂ ಸ್ನೇಹಾದವಿಕ್ಲವಃ ।
ಭಕ್ತಿಮಾನಿತಿ ತತ್ತಾವದ್ವಾಕ್ಯಂ ತ್ವಂ ಕ್ಷನ್ತುಮರ್ಹಸಿ ॥೩೮।

ಕಥಂ ಹಿ ತ್ವದ್ವಿಹೀನೋಽಹಂ ಪ್ರತಿಯಾಸ್ಯಾಮಿ ತಾಂ ಪುರೀಮ್ ।
ತವ ತಾವದ್ವಿಯೋಗೇನ ಪುತ್ರಶೋಕಾಕುಲಾಮಿವ ॥೩೯॥

ಸ ರಾಮಮಪಿ ತಾವನ್ಮೇ ರಥಂ ದೃಷ್ಟ್ವಾ ತದಾ ಜನಃ ।
ವಿನಾ ರಾಮಂ ರಥಂ ದೃಷ್ಟ್ವಾ ವಿದೀರ್ಯೇತಾಪಿ ಸಾ ಪುರೀ ॥೪೦॥

ದೈನ್ಯಂ ಹಿ ನಗರೀ ಗಚ್ಛೇದ್ದೃಷ್ಟ್ವಾ ಶೂನ್ಯಮಿಮಂ ರಥಮ್ ।
ಸೂತಾವಶೇಷಂ ಸ್ವಂ ಸೈನ್ಯಂ ಹತವೀರಮಿವಾಹವೇ ॥೪೧॥

ದೂರೇಽಪಿ ನಿವಸನ್ತಂ ತ್ವಾಂ ಮಾನಸೇನಾಗ್ರತಃ ಸ್ಥಿತಮ್ ।
ಚಿನ್ತಯನ್ತ್ಯೋಽದ್ಯ ನೂನಂ ತ್ವಾಂ ನಿರಾಹಾರಾಃ ಕೃತಾಃ ಪ್ರಜಾಃ ॥೪೨॥

ದೃಷ್ಟಂ ತದ್ಧಿ ತ್ವಯಾ ರಾಮ ಯಾದೃಶಂ ತ್ವತ್ಪ್ರವಾಸನೇ ।
ಪ್ರಜಾನಾಂ ಸಂಕುಲಂ ವೃತ್ತಂ ತ್ವಚ್ಛೋಕಕ್ಲಾನ್ತ ಚೇತಸಾಮ್ ॥೪೩॥

ಆರ್ತನಾದೋ ಹಿ ಯಃ ಪೌರೈರ್ಮುಕ್ತಸ್ತ್ವದ್ವಿಪ್ರವಾಸನೇ ।
ಸರಥಂ ಮಾಂ ನಿಶಾಮ್ಯೈವ ಕುರ್ಯುಃ ಶತಗುಣಂ ತತಃ ॥೪೪॥

ಅಹಂ ಕಿಂ ಚಾಪಿ ವಕ್ಷ್ಯಾಮಿ ದೇವೀಂ ತವ ಸುತೋ ಮಯಾ ।
ನೀತೋಽಸೌ ಮಾತುಲಕುಲಂ ಸಂತಾಪಂ ಮಾ ಕೃಥಾ ಇತಿ ॥೪೫॥

ಅಸತ್ಯಮಪಿ ನೈವಾಹಂ ಬ್ರೂಯಾಂ ವಚನಮೀದೃಶಮ್ ।
ಕಥಮಪ್ರಿಯಮೇವಾಹಂ ಬ್ರೂಯಾಂ ಸತ್ಯಮಿದಂ ವಚಃ ॥೪೬॥

ಮಮ ತಾವನ್ನಿಯೋಗಸ್ಥಾಸ್ತ್ವದ್ಬನ್ಧುಜನವಾಹಿನಃ ।
ಕಥಂ ರಥಂ ತ್ವಯಾ ಹೀನಂ ಪ್ರವಕ್ಷ್ಯನ್ತಿ ಹಯೋತ್ತಮಾಃ ॥೪೭॥

ತನ್ನ ಶಕ್ಷ್ಯಾಮ್ಯಹಂ ಗನ್ತುಮಯೋಧ್ಯಾಂ ತ್ವದೃತೇಽನಘ ।
ವನವಾಸಾನುಯಾನಾಯ ಮಾಮನುಜ್ಞಾತುಮರ್ಹಸಿ ॥೪೮॥

ಯದಿ ಮೇ ಯಾಚಮಾನಸ್ಯ ತ್ಯಾಗಮೇವ ಕರಿಷ್ಯಸಿ ।
ಸರಥೋಽಗ್ನಿಂ ಪ್ರವೇಕ್ಷ್ಯಾಮಿ ತ್ಯಕ್ತಮಾತ್ರ ಇಹ ತ್ವಯಾ ॥೪೯॥

ಭವಿಷ್ಯನ್ತಿ ವನೇ ಯಾನಿ ತಪೋವಿಘ್ನಕರಾಣಿ ತೇ ।
ರಥೇನ ಪ್ರತಿಬಾಧಿಷ್ಯೇ ತಾನಿ ಸತ್ತ್ವಾನಿ ರಾಘವ ॥೫೦॥

ತ್ವತ್ಕೃತೇ ನ ಮಯಾವಾಪ್ತಂ ರಥಚರ್ಯಾಕೃತಂ ಸುಖಮ್ ।
ಆಶಂಸೇ ತ್ವತ್ಕೃತೇನಾಹಂ ವನವಾಸಕೃತಂ ಸುಖಮ್ ॥೫೧॥

ಪ್ರಸೀದೇಚ್ಛಾಮಿ ತೇಽರಣ್ಯೇ ಭವಿತುಂ ಪ್ರತ್ಯನನ್ತರಃ ।
ಪ್ರೀತ್ಯಾಭಿಹಿತಮಿಚ್ಛಾಮಿ ಭವ ಮೇ ಪ್ರತ್ಯನನ್ತರಃ ॥೫೨॥

ಇಮೇ ಚಾಪಿ ಹಯಾ ವೀರ ಯದಿ ತೇ ವನವಾಸಿನಃ ।
ಪರಿಚರ್ಯಾಂ ಕರಿಷ್ಯನ್ತಿ ಪ್ರಾಪ್ಸ್ಯನ್ತಿ ಪರಮಾಂ ಗತಿಮ್ ॥೫೩॥

ತವ ಶುಶ್ರೂಷಣಂ ಮೂರ್ಧ್ನಾ ಕರಿಷ್ಯಾಮಿ ವನೇ ವಸನ್ ।
ಅಯೋಧ್ಯಾಂ ದೇವಲೋಕಂ ವಾ ಸರ್ವಥಾ ಪ್ರಜಹಾಮ್ಯಹಮ್ ॥

ನ ಹಿ ಶಕ್ಯಾ ಪ್ರವೇಷ್ಟುಂ ಸಾ ಮಯಾಯೋಧ್ಯಾ ತ್ವಯಾ ವಿನಾ ।
ರಾಜಧಾನೀ ಮಹೇನ್ದ್ರಸ್ಯ ಯಥಾ ದುಷ್ಕೃತಕರ್ಮಣಾ ॥೫೫॥

ವನವಾಸೇ ಕ್ಷಯಂ ಪ್ರಾಪ್ತೇ ಮಮೈಷ ಹಿ ಮನೋರಥಃ ।
ಯದನೇನ ರಥೇನೈವ ತ್ವಾಂ ವಹೇಯಂ ಪುರೀಂ ಪುನಃ ॥೫೬॥

ಚತುರ್ದಶ ಹಿ ವರ್ಷಾಣಿ ಸಹಿತಸ್ಯ ತ್ವಯಾ ವನೇ ।
ಕ್ಷಣಭೂತಾನಿ ಯಾಸ್ಯನ್ತಿ ಶತಸಂಖ್ಯಾನ್ಯತೋಽನ್ಯಥಾ ॥೫೭॥

ಭೃತ್ಯವತ್ಸಲ ತಿಷ್ಠನ್ತಂ ಭರ್ತೃಪುತ್ರಗತೇ ಪಥಿ ।
ಭಕ್ತಂ ಭೃತ್ಯಂ ಸ್ಥಿತಂ ಸ್ಥಿತ್ಯಾಂ ತ್ವಂ ನಮಾಂ ಹಾತು ಮರ್ಹಸಿ ॥೫೮॥

ಏವಂ ಬಹುವಿಧಂ ದೀನಂ ಯಾಚಮಾನಂ ಪುನಃ ಪುನಃ ।
ರಾಮೋ ಭೃತ್ಯಾನುಕಮ್ಪೀ ತು ಸುಮನ್ತ್ರಮಿದಮಬ್ರವೀತ್ ॥೫೯॥

ಜಾನಾಮಿ ಪರಮಾಂ ಭಕ್ತಿಂ ಮಯಿ ತೇ ಭರ್ತೃವತ್ಸಲ ।
ಶೃಣು ಚಾಪಿ ಯದರ್ಥಂ ತ್ವಾಂ ಪ್ರೇಷಯಾಮಿ ಪುರೀಮಿತಃ ॥೬೦॥

ನಗರೀಂ ತ್ವಾಂ ಗತಂ ದೃಷ್ಟ್ವಾ ಜನನೀ ಮೇ ಯವೀಯಸೀ ।
ಕೈಕೇಯೀ ಪ್ರತ್ಯಯಂ ಗಚ್ಛೇದಿತಿ ರಾಮೋ ವನಂ ಗತಃ ॥೬೧॥

ಪರಿತುಷ್ಟಾ ಹಿ ಸಾ ದೇವೀ ವನವಾಸಂ ಗತೇ ಮಯಿ ।
ರಾಜಾನಂ ನಾತಿಶಙ್ಕೇತ ಮಿಥ್ಯಾವಾದೀತಿ ಧಾರ್ಮಿಕಮ್ ॥೬೨॥

ಏಷ ಮೇ ಪ್ರಥಮಃ ಕಲ್ಪೋ ಯದಮ್ಬಾ ಮೇ ಯವೀಯಸೀ ।
ಭರತಾರಕ್ಷಿತಂ ಸ್ಫೀತಂ ಪುತ್ರರಾಜ್ಯಮವಾಪ್ನುಯಾತ್ ॥೬೩॥

ಮಮ ಪ್ರಿಯಾರ್ಥಂ ರಾಜ್ಞಶ್ಚ ಸುಮನ್ತ್ರ ತ್ವಂ ಪುರೀಂ ವ್ರಜ ।
ಸಂದಿಷ್ಟಶ್ಚಾಸಿ ಯಾನರ್ಥಾಂಸ್ತಾಂಸ್ತಾನ್ಬ್ರೂಯಾಸ್ತಥಾ ತಥಾ ॥೬೪॥

ಇತ್ಯುಕ್ತ್ವಾ ವಚನಂ ಸೂತಂ ಸಾನ್ತ್ವಯಿತ್ವಾ ಪುನಃ ಪುನಃ ।
ಗುಹಂ ವಚನಮಕ್ಲೀಬೋ ರಾಮೋ ಹೇತುಮದಬ್ರವೀತ್ ॥೬೫॥

ನೇದಾನೀಂ ಗುಹ ಯೋಗ್ಯೋಽಯಂ ವಾಸೋ ಮೇ ಸಜನೇ ವನೇ ।
ಅವಶ್ಯಮಾಶ್ರಮೇ ವಾಸಃ ಕರ್ತವ್ಯಸ್ತದ್ಗತೋ ವಿಧಿಃ ॥೬೬॥

ಸೋಽಹಂ ಗೃಹೀತ್ವಾ ನಿಯಮಂ ತಪಸ್ವಿಜನಭೂಷಣಮ್ ।
ಹಿತಕಾಮಃ ಪಿತುರ್ಭೂಯಃ ಸೀತಾಯಾ ಲಕ್ಷ್ಮಣಸ್ಯ ಚ ।
ಜಟಾಃ ಕೃತ್ವಾ ಗಮಿಷ್ಯಾಮಿ ನ್ಯಗ್ರೋಧಕ್ಷೀರಮಾನಯ ॥೬೭॥

ತತ್ಕ್ಷೀರಂ ರಾಜಪುತ್ರಾಯ ಗುಹಃ ಕ್ಷಿಪ್ರಮುಪಾಹರತ್ ॥೬೮॥

ಲಕ್ಷ್ಮಣಸ್ಯಾತ್ಮನಶ್ಚೈವ ರಾಮಸ್ತೇನಾಕರೋಜ್ಜಟಾಃ ।
ದೀರ್ಘಬಾಹುರ್ನರವ್ಯಾಘ್ರೋ ಜಟಿಲತ್ವಮಧಾರಯತ್ ॥೬೯॥

ತೌ ತದಾ ಚೀರವಸನೌ ಜಟಾಮಣ್ಡಲಧಾರಿಣೌ ।
ಅಶೋಭೇತಾಮೃಷಿಸಮೌ ಭ್ರಾತರೌ ರಾಮಲಕ್ಷಣೌ ॥೭೦॥

ತತೋ ವೈಖಾನಸಂ ಮಾರ್ಗಮಾಸ್ಥಿತಃ ಸಹಲಕ್ಷ್ಮಣಃ ।
ವ್ರತಮಾದಿಷ್ಟವಾನ್ರಾಮಃ ಸಹಾಯಂ ಗುಹಮಬ್ರವೀತ್ ॥೭೧॥

ಅಪ್ರಮತ್ತೋ ಬಲೇ ಕೋಶೇ ದುರ್ಗೇ ಜನಪದೇ ತಥಾ ।
ಭವೇಥಾ ಗುಹ ರಾಜ್ಯಂ ಹಿ ದುರಾರಕ್ಷತಮಂ ಮತಮ್ ॥೭೨॥

ತತಸ್ತಂ ಸಮನುಜ್ಞಾಯ ಗುಹಮಿಕ್ಷ್ವಾಕುನನ್ದನಃ ।
ಜಗಾಮ ತೂರ್ಣಮವ್ಯಗ್ರಃ ಸಭಾರ್ಯಃ ಸಹಲಕ್ಷ್ಮಣಃ ॥೭೩॥

ಸ ತು ದೃಷ್ಟ್ವಾ ನದೀತೀರೇ ನಾವಮಿಕ್ಷ್ವಾಕುನನ್ದನಃ ।
ತಿತೀರ್ಷುಃ ಶೀಘ್ರಗಾಂ ಗಙ್ಗಾಮಿದಂ ವಚನಮಬ್ರವೀತ್ ॥೭೪॥

ಆರೋಹ ತ್ವಂ ನರವ್ಯಾಘ್ರ ಸ್ಥಿತಾಂ ನಾವಮಿಮಾಂ ಶನೈಃ ।
ಸೀತಾಂ ಚಾರೋಪಯಾನ್ವಕ್ಷಂ ಪರಿಗೃಹ್ಯ ಮನಸ್ವಿನೀಮ್ ॥೭೫॥

ಸ ಭ್ರಾತುಃ ಶಾಸನಂ ಶ್ರುತ್ವಾ ಸರ್ವಮಪ್ರತಿಕೂಲಯನ್ ।
ಆರೋಪ್ಯ ಮೈಥಿಲೀಂ ಪೂರ್ವಮಾರುರೋಹಾತ್ಮವಾಂಸ್ತತಃ ॥೭೬॥

ಅಥಾರುರೋಹ ತೇಜಸ್ವೀ ಸ್ವಯಂ ಲಕ್ಷ್ಮಣಪೂರ್ವಜಃ ।
ತತೋ ನಿಷಾದಾಧಿಪತಿರ್ಗುಹೋ ಜ್ಞಾತೀನಚೋದಯತ್ ॥೭೭॥

ರಾಘವೋಽಪಿ ಮಹಾತೇಜಾ ನಾವಮಾರುಹ್ಯ ತಾಂ ತತಃ ।
ಬ್ರಹ್ಮವತ್ಕ್ಷತ್ರವಚ್ಚೈವ ಜಜಾಪ ಹಿತಮಾತ್ಮನಃ ॥೭೮॥

ಆಚಮ್ಯ ಚ ಯಥಾಶಾಸ್ತ್ರಂ ನದೀಂ ತಾಂ ಸಹ ಸೀತಯಾ ।
ಪ್ರಣಮತ್ಪ್ರೀತಿಸಂತುಷ್ಟೋ ಲಕ್ಷ್ಮಣಶ್ಚಾಮಿತಪ್ರಭಃ ॥೭೯॥

ಅನುಜ್ಞಾಯ ಸುಮನ್ತ್ರಂ ಚ ಸಬಲಂ ಚೈವ ತಂ ಗುಹಮ್ ।
ಆಸ್ಥಾಯ ನಾವಂ ರಾಮಸ್ತು ಚೋದಯಾಮಾಸ ನಾವಿಕಾನ್ ॥೮೦॥

ತತಸ್ತೈಶ್ಚಾಲಿತಾ ನೌಕಾ ಕರ್ಣಧಾರಸಮಾಹಿತಾ ।
ಶುಭಸ್ಫ್ಯವೇಗಾಭಿಹತಾ ಶೀಘ್ರಂ ಸಲಿಲಮತ್ಯಗಾತ್ ॥೮೧॥

ಮಧ್ಯಂ ತು ಸಮನುಪ್ರಾಪ್ಯ ಭಾಗೀರಥ್ಯಾಸ್ತ್ವನಿನ್ದಿತಾ ।
ವೈದೇಹೀ ಪ್ರಾಞ್ಜಲೀರ್ಭೂತ್ವಾ ತಾಂ ನದೀಮಿದಮಬ್ರವೀತ್ ॥೮೨॥

ಪುತ್ರೋ ದಶರಥಸ್ಯಾಯಂ ಮಹಾರಾಜಸ್ಯ ಧೀಮತಃ ।
ನಿದೇಶಂ ಪಾಲಯತ್ವೇನಂ ಗಙ್ಗೇ ತ್ವದಭಿರಕ್ಷಿತಃ ॥೮೩॥

ಚತುರ್ದಶ ಹಿ ವರ್ಷಾಣಿ ಸಮಗ್ರಾಣ್ಯುಷ್ಯ ಕಾನನೇ ।
ಭ್ರಾತ್ರಾ ಸಹ ಮಯಾ ಚೈವ ಪುನಃ ಪ್ರತ್ಯಾಗಮಿಷ್ಯತಿ ॥೮೪॥

ತತಸ್ತ್ವಾಂ ದೇವಿ ಸುಭಗೇ ಕ್ಷೇಮೇಣ ಪುನರಾಗತಾ ।
ಯಕ್ಷ್ಯೇ ಪ್ರಮುದಿತಾ ಗಙ್ಗೇ ಸರ್ವಕಾಮಸಮೃದ್ಧಿನೀ ॥೮೫॥

ತ್ವಂ ಹಿ ತ್ರಿಪಥಗೇ ದೇವಿ ಬ್ರಹ್ಮಲೋಕಂ ಸಮೀಕ್ಷಸೇ ।
ಭಾರ್ಯಾ ಚೋದಧಿರಾಜಸ್ಯ ಲೋಕೇಽಸ್ಮಿನ್ಸಂಪ್ರದೃಶ್ಯಸೇ ॥೮೬॥

ಸಾ ತ್ವಾಂ ದೇವಿ ನಮಸ್ಯಾಮಿ ಪ್ರಶಂಸಾಮಿ ಚ ಶೋಭನೇ ।
ಪ್ರಾಪ್ತರಾಜ್ಯೇ ನರವ್ಯಾಘ್ರೇ ಶಿವೇನ ಪುನರಾಗತೇ ॥೮೭॥

ಗವಾಂ ಶತಸಹಸ್ರಂ ಚ ವಸ್ತ್ರಾಣ್ಯನ್ನಂ ಚ ಪೇಶಲಮ್ ।
ಬ್ರಾಹ್ಮಣೇಭ್ಯಃ ಪ್ರದಾಸ್ಯಾಮಿ ತವ ಪ್ರಿಯಚಿಕೀರ್ಷಯಾ ॥೮೮॥

ಸುರಾಘಟಸಹಸ್ರೇಣ ಮಾಂಸಭೂತೌದನೇನ ಚ ।
ಯಕ್ಷ್ಯೇ ತ್ವಾಂ ಪ್ರಯತಾ ದೇವಿ ಪುರೀಂ ಪುನರುಪಾಗತಾ ॥೮೯॥

ಯಾನಿ ತ್ವತ್ತೀರವಾಸೀನಿ ದೈವತಾನಿ ವಸನ್ತಿ ಚ ।
ತಾನಿ ಸರ್ವಾಣಿ ಯಕ್ಷ್ಯಾಮಿ ತೀರ್ಥಾನ್ಯಾಯತನಾನಿ ಚ ॥೯೦॥

ಪುನರೇವ ಮಹಾಬಾಹುರ್ಮಯಾ ಭ್ರಾತ್ರಾ ಚ ಸಂಗತಃ ।
ಅಯೋಧ್ಯಾಂ ವನವಾಸಾತ್ತು ಪ್ರವಿಶತ್ವನಘೋಽನಘೇ ॥೯೧॥

ತಥಾ ಸಂಭಾಷಮಾಣಾ ಸಾ ಸೀತಾ ಗಙ್ಗಾಮನಿನ್ದಿತಾ ।
ದಕ್ಷಿಣಾ ದಕ್ಷಿಣಂ ತೀರಂ ಕ್ಷಿಪ್ರಮೇವಾಭ್ಯುಪಾಗಮತ್ ॥೯೨॥

ತೀರಂ ತು ಸಮನುಪ್ರಾಪ್ಯ ನಾವಂ ಹಿತ್ವಾ ನರರ್ಷಭಃ ।
ಪ್ರಾತಿಷ್ಠತ ಸಹ ಭ್ರಾತ್ರಾ ವೈದೇಹ್ಯಾ ಚ ಪರಂತಪಃ ॥೯೩॥

ಅಥಾಬ್ರವೀನ್ಮಹಾಬಾಹುಃ ಸುಮಿತ್ರಾನನ್ದವರ್ಧನಮ್ ।
ಭವ ಸಂರಕ್ಷಣಾರ್ಥಾಯ ಸಜನೇ ವಿಜನೇಽಪಿ ವಾ ॥೯೪॥

ಅವಶ್ಯಂ ರಕ್ಷಣಂ ಕಾರ್ಯಮದೃಷ್ಟೇ ವಿಜನೇ ವನೇ ।
ಅಗ್ರತೋ ಗಚ್ಛ ಸೌಮಿತ್ರೇ ಸೀತಾ ತ್ವಾಮನುಗಚ್ಛತು ॥೯೫॥

ಪೃಷ್ಠತೋಽನುಗಮಿಷ್ಯಾಮಿ ಸೀತಾಂ ತ್ವಾಂ ಚಾನುಪಾಲಯನ್ ।
ಅನ್ಯೋನ್ಯಸ್ಯ ಹಿ ನೋ ರಕ್ಷಾ ಕರ್ತವ್ಯಾ ಪುರುಷರ್ಷಭ ॥೯೬॥

ನ ಹಿ ತಾವದತಿಕ್ರಾನ್ತಾಸುಕರಾ ಕಾಚನ ಕ್ರಿಯಾ ।
ಅದ್ಯ ದುಃಖಂ ತು ವೈದೇಹೀ ವನವಾಸಸ್ಯ ವೇತ್ಸ್ಯತಿ ॥೯೭॥

ಪ್ರಣಷ್ಟಜನಸಂಬಾಧಂ ಕ್ಷೇತ್ರಾರಾಮವಿವರ್ಜಿತಮ್ ।
ವಿಷಮಂ ಚ ಪ್ರಪಾತಂ ಚ ವನಮದ್ಯ ಪ್ರವೇಕ್ಷ್ಯತಿ ॥೯೮॥

ಶ್ರುತ್ವಾ ರಾಮಸ್ಯ ವಚನಂ ಪ್ರತಸ್ಥೇ ಲಕ್ಷ್ಮಣೋಽಗ್ರತಃ ।
ಅನನ್ತರಂ ಚ ಸೀತಾಯಾ ರಾಘವೋ ರಘುನನ್ದನಃ ॥೯೯॥

ಗತಂ ತು ಗಙ್ಗಾಪರಪಾರಮಾಶು
ರಾಮಂ ಸುಮನ್ತ್ರಃ ಪ್ರತತಂ ನಿರೀಕ್ಷ್ಯ ।
ಅಧ್ವಪ್ರಕರ್ಷಾದ್ವಿನಿವೃತ್ತದೃಷ್ಟಿ-
ರ್ಮುಮೋಚ ಬಾಷ್ಪಂ ವ್ಯಥಿತಸ್ತಪಸ್ವೀ ॥೧೦೦॥

ಸ ಲೋಕಪಾಲಪ್ರತಿಮಪ್ರಭಾವವಾಂ-
ಸ್ತೀರ್ತ್ವಾ ಮಹಾತ್ಮಾ ವರದೋ ಮಹಾನದೀಮ್ ।
ತತಃ ಸಮೃದ್ಧಾನ್ ಶುಭಸಸ್ಯಮಾಲಿನಃ
ಕ್ರಮೇಣ ವತ್ಸಾನ್ಮುದಿತಾನುಪಾಗಮತ್ ॥೧೦೧॥

ತೌ ತತ್ರ ಹತ್ವಾ ಚತುರೋ ಮಹಾಮೃಗಾ-
ನ್ವರಾಹಮೃಶ್ಯಂ ಪೃಷತಂ ಮಹಾರುರುಮ್ ।
ಆದಾಯ ಮೇಧ್ಯಂ ತ್ವರಿತಂ ಬುಭುಕ್ಷಿತೌ
ವಾಸಾಯ ಕಾಲೇ ಯಯತುರ್ವನಸ್ಪತಿಮ್ ॥೧೦೨॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಅಯೋಧ್ಯಾಕಾಣ್ಡೇ ದ್ವಿಪಞ್ಚಾಶಃ ಸರ್ಗಃ

—೦—

ತ್ರಿಪಞ್ಚಾಶಃ ಸರ್ಗಃ

ಸ ತಂ ವೃಕ್ಷಂ ಸಮಾಸಾದ್ಯ ಸಂಧ್ಯಾಮನ್ವಾಸ್ಯ ಪಶ್ಚಿಮಾಮ್ ।
ರಾಮೋ ರಮಯತಾಂ ಶ್ರೇಷ್ಠ ಇತಿ ಹೋವಾಚ ಲಕ್ಷ್ಮಣಮ್ ॥೧॥

ಅದ್ಯೇಯಂ ಪ್ರಥಮಾ ರಾತ್ರಿರ್ಯಾತಾ ಜನಪದಾದ್ಬಹಿಃ ।
ಯಾ ಸುಮನ್ತ್ರೇಣ ರಹಿತಾ ತಾಂ ನೋತ್ಕಣ್ಠಿತುಮರ್ಹಸಿ ॥೨॥

ಜಾಗರ್ತವ್ಯಮತನ್ದ್ರಿಭ್ಯಾಮದ್ಯಪ್ರಭೃತಿ ರಾತ್ರಿಷು ।
ಯೋಗಕ್ಷೇಮಂ ಹಿ ಸೀತಾಯಾ ವರ್ತತೇ ಲಕ್ಷ್ಮಣಾವಯೋಃ ॥೩॥

ರಾತ್ರಿಂ ಕಥಂಚಿದೇವೇಮಾಂ ಸೌಮಿತ್ರೇ ವರ್ತಯಾಮಹೇ ।
ಉಪಾವರ್ತಾಮಹೇ ಭೂಮಾವಾಸ್ತೀರ್ಯ ಸ್ವಯಮಾರ್ಜಿತೈಃ ॥೪॥

ಸ ತು ಸಂವಿಶ್ಯ ಮೇದಿನ್ಯಾಂ ಮಹಾರ್ಹಶಯನೋಚಿತಃ ।
ಇಮಾಃ ಸೌಮಿತ್ರಯೇ ರಾಮೋ ವ್ಯಾಜಹಾರ ಕಥಾಃ ಶುಭಾಃ ॥೫॥

ಧ್ರುವಮದ್ಯ ಮಹಾರಾಜೋ ದುಃಖಂ ಸ್ವಪಿತಿ ಲಕ್ಷ್ಮಣ ।
ಕೃತಕಾಮಾ ತು ಕೈಕೇಯೀ ತುಷ್ಟಾ ಭವಿತುಮರ್ಹತಿ ॥೬॥

ಸಾ ಹಿ ದೇವೀ ಮಹಾರಾಜಂ ಕೈಕೇಯೀ ರಾಜ್ಯಕಾರಣಾತ್ ।
ಅಪಿ ನ ಚ್ಯಾವಯೇತ್ಪ್ರಾಣಾನ್ದೃಷ್ಟ್ವಾ ಭರತಮಾಗತಮ್ ॥೭॥

ಅನಾಥಶ್ಚ ಹಿ ವೃದ್ಧಶ್ಚ ಮಯಾ ಚೈವ ವಿನಾಕೃತಃ ।
ಕಿಂ ಕರಿಷ್ಯತಿ ಕಾಮಾತ್ಮಾ ಕೈಕೇಯೀವಶಮಾಗತಃ ॥೮॥

ಇದಂ ವ್ಯಸನಮಾಲೋಕ್ಯ ರಾಜ್ಞಶ್ಚ ಮತಿವಿಭ್ರಮಮ್ ।
ಕಾಮ ಏವಾರ್ಥಧರ್ಮಾಭ್ಯಾಂ ಗರೀಯಾನಿತಿ ಮೇ ಮತಿಃ ॥೯॥

ಕೋ ಹ್ಯವಿದ್ವಾನಪಿ ಪುಮಾನ್ಪ್ರಮದಾಯಾಃ ಕೃತೇ ತ್ಯಜೇತ್ ।
ಛಂದಾನುವರ್ತಿನಂ ಪುತ್ರಂ ತಾತೋ ಮಾಮಿವ ಲಕ್ಷ್ಮಣ ॥೧೦॥

ಸುಖೀ ಬತ ಸಭಾರ್ಯಶ್ಚ ಭರತಃ ಕೇಕಯೀಸುತಃ ।
ಮುದಿತಾನ್ಕೋಸಲಾನೇಕೋ ಯೋ ಭೋಕ್ಷ್ಯತ್ಯಧಿರಾಜವತ್ ॥೧೧॥

ಸ ಹಿ ರಾಜ್ಯಸ್ಯ ಸರ್ವಸ್ಯ ಸುಖಮೇಕಂ ಭವಿಷ್ಯತಿ ।
ತಾತೇ ತು ವಯಸಾತೀತೇ ಮಯಿ ಚಾರಣ್ಯಮಾಸ್ಥಿತೇ ॥೧೨॥

ಅರ್ಥಧರ್ಮೌ ಪರಿತ್ಯಜ್ಯ ಯಃ ಕಾಮಮನುವರ್ತತೇ ।
ಏವಮಾಪದ್ಯತೇ ಕ್ಷಿಪ್ರಂ ರಾಜಾ ದಶರಥೋ ಯಥಾ ॥೧೩॥

ಮನ್ಯೇ ದಶರಥಾನ್ತಾಯ ಮಮ ಪ್ರವ್ರಾಜನಾಯ ಚ ।
ಕೈಕೇಯೀ ಸೌಮ್ಯ ಸಂಪ್ರಾಪ್ತಾ ರಾಜ್ಯಾಯ ಭರತಸ್ಯ ಚ ॥೧೪॥

ಅಪೀದಾನೀಂ ನ ಕೈಕೇಯೀ ಸೌಭಾಗ್ಯಮದಮೋಹಿತಾ ।
ಕೌಸಲ್ಯಾಂ ಚ ಸುಮಿತ್ರಾಂ ಚ ಸಂಪ್ರಬಾಧೇತ ಮತ್ಕೃತೇ ॥೧೫॥

ಮಾ ಸ್ಮ ಮತ್ಕಾರಣಾದ್ದೇವೀ ಸುಮಿತ್ರಾ ದುಃಖಮಾವಸೇತ್ ।
ಅಯೋಧ್ಯಾಮಿತ ಏವ ತ್ವಂ ಕಾಲ್ಯೇ ಪ್ರವಿಶ ಲಕ್ಷ್ಮಣ ॥೧೬॥

ಅಹಮೇಕೋ ಗಮಿಷ್ಯಾಮಿ ಸೀತಯಾ ಸಹ ದಣ್ಡಕಾನ್ ।
ಅನಾಥಾಯಾ ಹಿ ನಾಥಸ್ತ್ವಂ ಕೌಸಲ್ಯಾಯಾ ಭವಿಷ್ಯಸಿ ॥೧೭॥

ಕ್ಷುದ್ರಕರ್ಮಾ ಹಿ ಕೈಕೇಯೀ ದ್ವೇಷಾದನ್ಯಾಯಮಾಚರೇತ್ ।
ಪರಿದದ್ಯಾದ್ಧಿ ಧರ್ಮಜ್ಞ ಗರಂ ತೇ ಮಮ ಮಾತರಮ್ ॥೧೮॥

ನೂನಂ ಜಾತ್ಯನ್ತರೇ ಕಸ್ಮಿನ್ ಸ್ತ್ರಿಯಃ ಪುತ್ರೈರ್ವಿಯೋಜಿತಾಃ ।
ಜನನ್ಯಾ ಮಮ ಸೌಮಿತ್ರೇ ತಸ್ಮಾದೇತದುಪಸ್ಥಿತಮ್ ॥೧೯॥

ಮಯಾ ಹಿ ಚಿರಪುಷ್ಟೇನ ದುಃಖಸಂವರ್ಧಿತೇನ ಚ ।
ವಿಪ್ರಯುಜ್ಯೇತ ಕೌಸಲ್ಯಾ ಫಲಕಾಲೇ ಧಿಗಸ್ತು ಮಾಮ್ ॥೨೦॥

ಮಾ ಸ್ಮ ಸೀಮನ್ತಿನೀ ಕಾಚಿಜ್ಜನಯೇತ್ಪುತ್ರಮೀದೃಶಮ್ ।
ಸೌಮಿತ್ರೇ ಯೋಽಹಮಮ್ಬಾಯಾ ದದ್ಮಿ ಶೋಕಮನನ್ತಕಮ್ ॥

ಮನ್ಯೇ ಪ್ರೀತಿವಿಶಿಷ್ಟಾ ಸಾ ಮತ್ತೋ ಲಕ್ಷ್ಮಣ ಸಾರಿಕಾ ।
ಯತ್ತಸ್ಯಾಃ ಶ್ರೂಯತೇ ವಾಕ್ಯಂ ಶುಕ ಪಾದಮರೇರ್ದಶ ॥೨೧॥

ಶೋಚನ್ತ್ಯಾ ಶ್ಚಾಲ್ಪಭಾಗ್ಯಾಯಾ ನ ಕಿಂಚಿದುಪಕುರ್ವತಾ ।
ಪುತ್ರೇಣ ಕಿಮಪುತ್ರಾಯಾ ಮಯಾ ಕಾರ್ಯಮರಿಂದಮ ॥೨೩॥

ಅಲ್ಪಭಾಗ್ಯಾ ಹಿ ಮೇ ಮಾತಾ ಕೌಸಲ್ಯಾ ರಹಿತಾ ಮಯಾ ।
ಶೇತೇ ಪರಮದುಃಖಾರ್ತಾ ಪತಿತಾ ಶೋಕಸಾಗರೇ ॥೨೪॥

ಏಕೋ ಹ್ಯಹಮಯೋಧ್ಯಾಂ ಚ ಪೃಥಿವೀಂ ಚಾಪಿ ಲಕ್ಷ್ಮಣ ।
ತರೇಯಮಿಷುಭಿಃ ಕ್ರುದ್ಧೋ ನನು ವೀರ್ಯಮಕಾರಣಮ್ ॥೨೫॥

ಅಧರ್ಮಭಯಭೀತಶ್ಚ ಪರಲೋಕಸ್ಯ ಚಾನಘ ।
ತೇನ ಲಕ್ಷ್ಮಣ ನಾದ್ಯಾಹಮಾತ್ಮಾನಮಭಿಷೇಚಯೇ ॥೨೬॥

ಏತದನ್ಯಚ್ಚ ಕರುಣಂ ವಿಲಪ್ಯ ವಿಜನೇ ಬಹು ।
ಅಶ್ರುಪೂರ್ಣಮುಖೋ ರಾಮೋ ನಿಶಿ ತೂಷ್ಣೀಮುಪಾವಿಶತ್ ॥೨೭॥

ವಿಲಪ್ಯೋಪರತಂ ರಾಮಂ ಗತಾರ್ಚಿಷಮಿವಾನಲಮ್ ।
ಸಮುದ್ರಮಿವ ನಿರ್ವೇಗಮಾಶ್ವಾಸಯತ ಲಕ್ಷ್ಮಣಃ ॥೨೮॥

ಧ್ರುವಮದ್ಯ ಪುರೀ ರಾಮ ಅಯೋಧ್ಯಾ ಯುಧಿನಾಂ ವರ ।
ನಿಷ್ಪ್ರಭಾ ತ್ವಯಿ ನಿಷ್ಕ್ರಾನ್ತೇ ಗತಚನ್ದ್ರೇವ ಶರ್ವರೀ ॥೨೯॥

ನೈತದೌಪಯಿಕಂ ರಾಮ ಯದಿದಂ ಪರಿತಪ್ಯಸೇ ।
ವಿಷಾದಯಸಿ ಸೀತಾಂ ಚ ಮಾಂ ಚೈವ ಪುರುಷರ್ಷಭ ॥೩೦॥

ನ ಚ ಸೀತಾ ತ್ವಯಾ ಹೀನಾ ನ ಚಾಹಮಪಿ ರಾಘವ ।
ಮುಹೂರ್ತಮಪಿ ಜೀವಾವೋ ಜಲಾನ್ಮತ್ಸ್ಯಾವಿವೋದ್ಧೃತೌ ॥೩೧॥

ನ ಹಿ ತಾತಂ ನ ಶತ್ರುಘ್ನಂ ನ ಸುಮಿತ್ರಾಂ ಪರಂತಪ ।
ದ್ರಷ್ಟುಮಿಚ್ಛೇಯಮದ್ಯಾಹಂ ಸ್ವರ್ಗಂ ವಾಪಿ ತ್ವಯಾ ವಿನಾ ॥೩೨॥

ತತಸ್ತತ್ರ ಸಮಾಸೀನೌ ನಾತಿದೂರೇ ನಿರೀಕ್ಷ್ಯ ತಾಮ್ ।
ನ್ಯಗ್ರೋಧೇ ಸುಕೃತಾಂ ಶಯ್ಯಾಂ ಭೇಜಾತೇ ಧರ್ಮವತ್ಸಲೌ ॥೩೩॥

ಸ ಲಕ್ಷ್ಮಣಸ್ಯೋತ್ತಮಪುಷ್ಕಲಂ ವಚೋ
ನಿಶಮ್ಯ ಚೈವಂ ವನವಾಸಮಾದರಾತ್ ।
ಸಮಾಃ ಸಮಸ್ತಾ ವಿದಧೇ ಪರಂತಪಃ
ಪ್ರಪದ್ಯ ಧರ್ಮಂ ಸುಚಿರಾಯ ರಾಘವಃ ॥೩೪॥

ತತಸ್ತು ತಸ್ಮಿನ್ವಿಜನೇ ಮಹಾಬಲೌ
ಮಹಾವನೇ ರಾಘವವಂಶವರ್ಧನೌ ।
ನ ತೌ ಭಯಂ ಸಂಭ್ರಮಮಭ್ಯುಪೇಯತು-
ರ್ಯಥೈವ ಸಿಂಹೌ ಗಿರಿಸಾನುಗೋಚರೌ ॥೩೫॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಅಯೋಧ್ಯಾಕಾಣ್ಡೇ ತ್ರಿಪಞ್ಚಾಶಃ ಸರ್ಗಃ

—೦—

ಚತುಃಪಞ್ಚಾಶಃ ಸರ್ಗಃ

ತೇ ತು ತಸ್ಮಿನ್ಮಹಾವೃಕ್ಷ ಉಷಿತ್ವಾ ರಜನೀಂ ಶುಭಾಮ್ ।
ವಿಮಲೇಽಭ್ಯುದಿತೇ ಸೂರ್ಯೇ ತಸ್ಮಾದ್ದೇಶಾತ್ಪ್ರತಸ್ಥಿರೇ ॥೧॥

ಯತ್ರ ಭಾಗೀರಥೀಂ ಗಙ್ಗಾಂ ಯಮುನಾಭಿಪ್ರವರ್ತತೇ ।
ಜಗ್ಮುಸ್ತಂ ದೇಶಮುದ್ದಿಶ್ಯ ವಿಗಾಹ್ಯ ಸುಮಹದ್ವನಮ್ ॥೨॥

ತೇ ಭೂಮಿಭಾಗಾನ್ವಿವಿಧಾನ್ದೇಶಾಂಶ್ಚಾಪಿ ಮನೋಹರಾನ್ ।
ಅದೃಷ್ಟಪೂರ್ವಾನ್ಪಶ್ಯನ್ತಸ್ತತ್ರ ತತ್ರ ಯಶಸ್ವಿನಃ ॥೩॥

ಯಥಾ ಕ್ಷೇಮೇಣ ಸಮ್ಪಶ್ಯನ್ಪುಷ್ಪಿತಾನ್ವಿವಿಧಾನ್ದ್ರುಮಾನ್ ।
ನಿವೃತ್ತಮಾತ್ರೇ ದಿವಸೇ ರಾಮಃ ಸೌಮಿತ್ರಿಮಬ್ರವೀತ್ ॥೪॥

ಪ್ರಯಾಗಮಭಿತಃ ಪಶ್ಯ ಸೌಮಿತ್ರೇ ಧೂಮಮುದ್ಗತಮ್ ।
ಅಗ್ನೇರ್ಭಗವತಃ ಕೇತುಂ ಮನ್ಯೇ ಸನ್ನಿಹಿತೋ ಮುನಿಃ ॥೫॥

ನೂನಂ ಪ್ರಾಪ್ತಾಃ ಸ್ಮ ಸಂಭೇದಂ ಗಙ್ಗಾಯಮುನಯೋರ್ವಯಮ್ ।
ತಥಾ ಹಿ ಶ್ರೂಯತೇ ಶಬ್ದೋ ವಾರಿಣೋರ್ವಾರಿಘರ್ಷಜಃ ॥೬॥

ದಾರೂಣಿ ಪರಿಭಿನ್ನಾನಿ ವನಜೈರುಪಜೀವಿಭಿಃ ।
ಭರದ್ವಾಜಾಶ್ರಮೇ ಚೈತೇ ದೃಶ್ಯನ್ತೇ ವಿವಿಧಾ ದ್ರುಮಾಃ ॥೭॥

ಧನ್ವಿನೌ ತೌ ಸುಖಂ ಗತ್ವಾ ಲಮ್ಬಮಾನೇ ದಿವಾಕರೇ ।
ಗಙ್ಗಾಯಮುನಯೋಃ ಸಂಧೌ ಪ್ರಾಪತುರ್ನಿಲಯಂ ಮುನೇಃ ॥೮॥

ರಾಮಸ್ತ್ವಾಶ್ರಮಮಾಸಾದ್ಯ ತ್ರಾಸಯನ್ಮೃಗಪಕ್ಷಿಣಃ ।
ಗತ್ವಾ ಮುಹೂರ್ತಮಧ್ವಾನಂ ಭರದ್ವಾಜಮುಪಾಗಮತ್ ॥೯॥

ತತಸ್ತ್ವಾಶ್ರಮಮಾಸಾದ್ಯ ಮುನೇರ್ದರ್ಶನಕಾಂಕ್ಷಿಣೌ ।
ಸೀತಯಾನುಗತೌ ವೀರೌ ದೂರಾದೇವಾವತಸ್ಥತುಃ ॥೧೦॥

ಸ ಪ್ರವಿಶ್ಯ ಮಹಾತ್ಮನಮೃಷಿಂ ಶಿಷ್ಯಗಣೈರ್ವೃತಮ್ ।
ಸಂಶಿತವ್ರತಮೇಕಾಗ್ರಂ ತಪಸಾ ಲಬ್ಧಚಕ್ಷುಷಮ್ ॥೧೧॥

ಹುತಾಗ್ನಿಹೋತ್ರಂ ದೃಷ್ಟ್ವೈವ ಮಹಾಭಾಗಃ ಕೃತಾಞ್ಜಲಿಃ ।
ರಾಮಃ ಸೌಮಿತ್ರಿಣಾ ಸಾರ್ಧಂ ಸೀತಯಾ ಚಾಭ್ಯವಾದಯತ್ ॥೧೨॥

ನ್ಯವೇದಯತ ಚಾತ್ಮಾನಂ ತಸ್ಮೈ ಲಕ್ಷ್ಮಣಪೂರ್ವಜಃ ।
ಪುತ್ರೌ ದಶರಥಸ್ಯಾವಾಂ ಭಗವನ್ರಾಮಲಕ್ಷ್ಮಣೌ ॥೧೩॥

ಭಾರ್ಯಾ ಮಮೇಯಂ ವೈದೇಹೀ ಕಲ್ಯಾಣೀ ಜನಕಾತ್ಮಜಾ ।
ಮಾಂ ಚಾನುಯಾತಾ ವಿಜನಂ ತಪೋವನಮನಿನ್ದಿತಾ ॥೧೪॥

ಪಿತ್ರಾ ಪ್ರವ್ರಾಜ್ಯಮಾನಂ ಮಾಂ ಸೌಮಿತ್ರಿರನುಜಃ ಪ್ರಿಯಃ ।
ಅಯಮನ್ವಗಮದ್ಭ್ರಾತಾ ವನಮೇವ ದೃಢವ್ರತಃ ॥೧೫॥

ಪಿತ್ರಾ ನಿಯುಕ್ತಾ ಭಗವನ್ಪ್ರವೇಕ್ಷ್ಯಾಮಸ್ತಪೋವನಮ್ ।
ಧರ್ಮಮೇವ ಚರಿಷ್ಯಾಮಸ್ತತ್ರ ಮೂಲಫಲಾಶನಾಃ ॥೧೬॥

ತಸ್ಯ ತದ್ವಚನಂ ಶ್ರುತ್ವಾ ರಾಜಪುತ್ರಸ್ಯ ಧೀಮತಃ ।
ಉಪಾನಯತ ಧರ್ಮಾತ್ಮಾ ಗಾಮರ್ಘ್ಯಮುದಕಂ ತತಃ ॥೧೭॥

ನಾನಾವಿಧಾನನ್ನರಸಾನ್ವನ್ಯಮೂಲಫಲಾಶ್ರಯಾನ್ ।
ತೇಭ್ಯೋ ದದೌ ತಪ್ತತಪಾ ವಾಸಂ ಚೈವಾಭ್ಯಕಲ್ಪಯತ್ ॥೧೮॥

ಮೃಗಪಕ್ಷಿಭಿರಾಸೀನೋ ಮುನಿಭಿಶ್ಚ ಸಮನ್ತತಃ ।
ರಾಮಮಾಗತಮಭ್ಯರ್ಚ್ಯ ಸ್ವಾಗತೇನಾಹ ತಂ ಮುನಿಃ ॥೧೯॥

ಪ್ರತಿಗೃಹ್ಯ ತು ತಾಮರ್ಚಾಮುಪವಿಷ್ಟಂ ಸ ರಾಘವಮ್ ।
ಭರದ್ವಾಜೋಽಬ್ರವೀದ್ವಾಕ್ಯಂ ಧರ್ಮಯುಕ್ತಮಿದಂ ತದಾ ॥೨೦॥

ಚಿರಸ್ಯ ಖಲು ಕಾಕುತ್ಸ್ಥ ಪಶ್ಯಾಮಿ ತ್ವಾಮಿಹಾಗತಮ್ ।
ಶ್ರುತಂ ತವ ಮಯಾ ಚೇದಂ ವಿವಾಸನಮಕಾರಣಮ್ ॥೨೧॥

ಅವಕಾಶೋ ವಿವಿಕ್ತೋಽಯಂ ಮಹಾನದ್ಯೋಃ ಸಮಾಗಮೇ ।
ಪುಣ್ಯಶ್ಚ ರಮಣೀಯಶ್ಚ ವಸತ್ವಿಹ ಭವಾನ್ಸುಖಮ್ ॥೨೨॥

ಏವಮುಕ್ತಸ್ತು ವಚನಂ ಭರದ್ವಾಜೇನ ರಾಘವಃ ।
ಪ್ರತ್ಯುವಾಚ ಶುಭಂ ವಾಕ್ಯಂ ರಾಮಃ ಸರ್ವಹಿತೇ ರತಃ ॥೨೩॥

ಭಗವನ್ನಿತ ಆಸನ್ನಃ ಪೌರಜಾನಪದೋ ಜನಃ ।
ಸುದರ್ಶಮಿಹ ಮಾಂ ಪ್ರೇಕ್ಷ್ಯ ಮನ್ಯೇಽಹಮಿಮಮಾಶ್ರಮಮ್ ॥

ಆಗಮಿಷ್ಯತಿ ವೈದೇಹೀಂ ಮಾಂ ಚಾಪಿ ಪ್ರೇಕ್ಷಕೋ ಜನಃ ।
ಅನೇನ ಕಾರಣೇನಾಹಮಿಹ ವಾಸಂ ನ ರೋಚಯೇ ॥೨೪॥

ಏಕಾನ್ತೇ ಪಶ್ಯ ಭಗವನ್ನಾಶ್ರಮಸ್ಥಾನಮುತ್ತಮಮ್ ।
ರಮೇತ ಯತ್ರ ವೈದೇಹೀ ಸುಖಾರ್ಹಾ ಜನಕಾತ್ಮಜಾ ॥೨೬॥

ಏತಚ್ಛ್ರುತ್ವಾ ಶುಭಂ ವಾಕ್ಯಂ ಭರದ್ವಾಜೋ ಮಹಾಮುನಿಃ ।
ರಾಘವಸ್ಯ ತತೋ ವಾಕ್ಯಮರ್ಥಗ್ರಾಹಕಮಬ್ರವೀತ್ ॥೨೭॥

ದಶಕ್ರೋಶ ಇತಸ್ತಾತ ಗಿರಿರ್ಯಸ್ಮಿನ್ನಿವತ್ಸ್ಯಸಿ ।
ಮಹರ್ಷಿಸೇವಿತಃ ಪುಣ್ಯಃ ಪರ್ವತಃ ಶುಭದರ್ಶನಃ ॥೨೮॥

ಗೋಲಾಙ್ಗೂಲಾನುಚರಿತೋ ವಾನರರ್ಕ್ಷನಿಷೇವಿತಃ ।
ಚಿತ್ರಕೂಟ ಇತಿ ಖ್ಯಾತೋ ಗಂಧಮಾದನಸಂನಿಭಃ ॥೨೯॥

ಯಾವತಾ ಚಿತ್ರಕೂಟಸ್ಯ ನರಃ ಶೃಙ್ಗಾಣ್ಯವೇಕ್ಷತೇ ।
ಕಲ್ಯಾಣಾನಿ ಸಮಾಧತ್ತೇ ನ ಪಾಪೇ ಕುರುತೇ ಮನಃ ॥೩೦॥

ಋಷಯಸ್ತತ್ರ ಬಹವೋ ವಿಹೃತ್ಯ ಶರದಾಂ ಶತಮ್ ।
ತಪಸಾ ದಿವಮಾರೂಢಾಃ ಕಪಾಲಶಿರಸಾ ಸಹ ॥೩೧॥

ಪ್ರವಿವಿಕ್ತಮಹಂ ಮನ್ಯೇ ತಂ ವಾಸಂ ಭವತಃ ಸುಖಮ್ ।
ಇಹ ವಾ ವನವಾಸಾಯ ವಸ ರಾಮ ಮಯಾ ಸಹ ॥೩೨॥

ಸ ರಾಮಂ ಸರ್ವಕಾಮೈಸ್ತಂ ಭರದ್ವಾಜಃ ಪ್ರಿಯಾತಿಥಿಮ್ ।
ಸಭಾರ್ಯಂ ಸಹ ಚ ಭ್ರಾತ್ರಾ ಪ್ರತಿಜಗ್ರಾಹ ಧರ್ಮವಿತ್ ॥೩೩॥

ತಸ್ಯ ಪ್ರಯಾಗೇ ರಾಮಸ್ಯ ತಂ ಮಹರ್ಷಿಮುಪೇಯುಷಃ ।
ಪ್ರಸನ್ನಾ ರಜನೀ ಪುಣ್ಯಾ ಚಿತ್ರಾಃ ಕಥಯತಃ ಕಥಾಃ ॥೩೪॥

ಸೀತಾತೃತೀಯಃ ಕಾಕುತ್ಸ್ಥಃ ಪರಿಶ್ರಾನ್ತಃ ಸುಖೋಚಿತಃ ।
ಭರದ್ವಾಜಾಶ್ರಮೇ ರಮ್ಯೇ ತಾಂ ರಾತ್ರಿಮವಸತ್ಸುಖಮ್ ॥೩೫॥

ಪ್ರಭಾತಾಯಾಂ ತು ಶರ್ವರ್ಯಾಂ ಭರದ್ವಾಜಮುಪಾಗಮತ್ ।
ಉವಾಚ ನರಶಾರ್ದೂಲೋ ಮುನಿಂ ಜ್ವಲಿತತೇಜಸಮ್ ॥೩೬॥

ಶರ್ವರೀಂ ಭಗವನ್ನದ್ಯ ಸತ್ಯಶೀಲ ತವಾಶ್ರಮೇ ।
ಉಷಿತಾಃ ಸ್ಮೇಹ ವಸತಿಮನುಜಾನಾತು ನೋ ಭವಾನ್ ॥೩೭॥

ರಾತ್ರ್ಯಾಂ ತು ತಸ್ಯಾ ವ್ಯುಷ್ಟಾಯಾಂಭರದ್ವಾಜೋಽಬ್ರವೀದಿದಮ್ ।
ಮಧುಮೂಲಫಲೋಪೇತಂ ಚಿತ್ರಕೂಟಂ ವ್ರಜೇತಿ ಹ ॥೩೮॥

ವಾಸಮೌಪಯಿಕಂ ಮನ್ಯೇ ತವ ರಾಮ ಮಹಾಬಲ ।
ನಾನಾನಗಗಣೋಪೇತಃ ಕಿನ್ನರೋರಗಸೇವಿತಃ ॥೩೯॥

ಮಯೂರನಾದಾಭಿರುತೋ ಗಜರಾಜನಿಷೇವಿತಃ ।
ಗಮ್ಯತಾಂ ಭವತಾ ಶೈಲಶ್ಚಿತ್ರಕೂಟಃ ಸ ವಿಶ್ರುತಃ ॥೪೦॥

ಪುಣ್ಯಶ್ಚ ರಮಣೀಯಶ್ಚ ಬಹುಮೂಲಫಲಾಯುತಃ ।
ತತ್ರ ಕುಞ್ಜರಯೂಥಾನಿ ಮೃಗಯೂಥಾನಿ ಚಾಭಿತಃ ।
ವಿಚರನ್ತಿ ವನಾನ್ತೇಷು ತಾನಿ ದ್ರಕ್ಷ್ಯಸಿ ರಾಘವ ॥೪೧॥

ಸರಿತ್ಪ್ರಸ್ರವಣಪ್ರಸ್ಥಾನ್ದರೀಕಂದರನಿರ್ಝರಾನ್ ।
ಚರತಃ ಸೀತಯಾ ಸಾರ್ಧಂ ನನ್ದಿಷ್ಯತಿ ಮನಸ್ತವ ॥೪೨॥

ಪ್ರಹೃಷ್ಟಕೋಯಷ್ಟಿಕಕೋಕಿಲಸ್ವನೈ-
ರ್ವಿನಾದಿತಂ ತಂ ವಸುಧಾಧರಂ ಶಿವಮ್ ।
ಮೃಗೈಶ್ಚ ಮತ್ತೈರ್ಬಹುಭಿಶ್ಚ ಕುಞ್ಜರೈಃ
ಸುರಮ್ಯಮಾಸಾದ್ಯ ಸಮಾವಸಾಶ್ರಮಮ್ ॥೪೩॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಅಯೋಧ್ಯಾಕಾಣ್ಡೇ ಚತುಃಪಞ್ಚಾಶಃ ಸರ್ಗಃ

—೦—

ಪಞ್ಚಪಞ್ಚಾಶಃ ಸರ್ಗಃ

ಉಷಿತ್ವಾ ರಜನೀಂ ತತ್ರ ರಾಜಪುತ್ರಾವರಿಂದಮೌ ।
ಮಹರ್ಷಿಮಭಿವಾದ್ಯಾಥ ಜಗ್ಮತುಸ್ತಂ ಗಿರಿಂ ಪ್ರತಿ ॥೧॥

ತೇಷಾಂ ಸ್ವಸ್ತ್ಯಯನಂ ಚೈವ ಮಹರ್ಷಿಃ ಸ ಚಕಾರ ಹ ।
ಪ್ರಸ್ಥಿತಾನ್ಪ್ರೇಕ್ಷ್ಯ ತಾಂಶ್ಚೈವ ಪಿತಾ ಪುತ್ರಾನಿವಾನ್ವಗಾತ್ ॥೨॥

ತತಃ ಪ್ರಚಕ್ರಮೇ ವಕ್ತುಂ ವಚನಂ ಸ ಮಹಾಮುನಿಃ ।
ಭರದ್ವಾಜೋ ಮಹಾತೇಜಾ ರಾಮಂ ಸತ್ಯಪರಾಕ್ರಮಮ್ ॥೩॥

ಗಙ್ಗಾಯಮುನಯೋಃ ಸಂಧಿಮಾಸಾದ್ಯ ಮನುಜರ್ಷಭೌ ।
ಕಾಲಿನ್ದೀಮನುಗಚ್ಛೇತಾಂ ನದೀಂ ಪಶ್ಚಾನ್ಮುಖಾಶ್ರಿತಾಮ್ ॥೪॥

ಅಥಾಸಾದ್ಯ ತು ಕಾಲಿನ್ದೀಂ ಶೀಘ್ರಸ್ರೋತಸಮಾಪಗಾಮ್ ।
ತಸ್ಯಾಸ್ತೀರ್ಥಂ ಪ್ರಚರಿತಂ ಪ್ರಕಾಮಂ ಪ್ರೇಕ್ಷ್ಯ ರಾಘವೌ ।
ತತ್ರ ಯೂಯಂ ಪ್ಲವಂ ಕೃತ್ವಾ ತರತಾಂಶುಮತೀಂ ನದೀಮ್ ॥೫॥

ತತೋ ನ್ಯಗ್ರೋಧಮಾಸಾದ್ಯ ಮಹಾನ್ತಂ ಹರಿತಚ್ಛದಮ್ ।
ವಿವೃದ್ಧಂ ಬಹುಭಿರ್ವೃಕ್ಷೈಃ ಶ್ಯಾಮಂ ಸಿದ್ಧೋಪಸೇವಿತಮ್ ।
ತಸ್ಮೈ ಸೀತಾಞ್ಜಲಿಂ ಕೃತ್ವಾ ಪ್ರಯುಞ್ಜೀತಾಶಿಷಃ ಶಿವಾಃ ॥೬॥

ಸಮಾಸಾದ್ಯ ಚ ತಂ ವೃಕ್ಷಂ ವಸೇದ್ವಾತಿಕ್ರಮೇತ ವಾ ॥೭॥

ಕ್ರೋಶಮಾತ್ರಂ ತತೋ ಗತ್ವಾ ನೀಲಂ ದ್ರಕ್ಷ್ಯಥ ಕಾನನಮ್ ।
ಪಲಾಶಬದರೀಮಿಶ್ರಂ ರಮ್ಯಂ ವಂಶೈಶ್ಚ ಯಾಮುನೈಃ ॥೮॥

ಸ ಪನ್ಥಾಶ್ಚಿತ್ರಕೂಟಸ್ಯ ಗತಃ ಸುಬಹುಶೋ ಮಯಾ ।
ರಮ್ಯೋ ಮಾರ್ದವಯುಕ್ತಶ್ಚ ವನದಾವೈರ್ವಿವರ್ಜಿತಃ ॥೯॥

ಇತಿ ಪನ್ಥಾನಮಾದಿಶ್ಯ ಮಹರ್ಷಿಃ ಸಂನ್ಯವರ್ತತ ।
ಅಭಿವಾದ್ಯ ತಥೇತ್ಯುಕ್ತ್ವಾ ರಾಮೇಣ ವಿನಿವರ್ತಿತಃ ॥೧೦॥

ಉಪಾವೃತ್ತೇ ಮುನೌ ತಸ್ಮಿನ್ರಾಮೋ ಲಕ್ಷ್ಮಣಮಬ್ರವೀತ್ ।
ಕೃತಪುಣ್ಯಾಃ ಸ್ಮ ಸೌಮಿತ್ರೇ ಮುನಿರ್ಯನ್ನೋಽನುಕಮ್ಪತೇ ॥೧೧॥

ಇತಿ ತೌ ಪುರುಷವ್ಯಾಘ್ರೌ ಮನ್ತ್ರಯಿತ್ವಾ ಮನಸ್ವಿನೌ ।
ಸೀತಾಮೇವಾಗ್ರತಃ ಕೃತ್ವಾ ಕಾಲಿನ್ದೀಂ ಜಗ್ಮತುರ್ನದೀಮ್ ॥೧೨॥

ಅಥಾಸಾದ್ಯ ತು ಕಾಲಿನ್ದೀಂ ಶೀಘ್ರಸ್ರೋತಸ್ವಿನೀಂ ನದೀಮ್ ।
ಚಿಂತಾಮಾಪೇದಿರೇ ಸರ್ವೇ ನದೀಜಲತಿತೀರ್ಷವಃ ॥೧೩॥

ತೌ ಕಾಷ್ಠಸಂಘಾಟಮಥೋ ಚಕ್ರತುಃ ಸುಮಹಾಪ್ಲವಮ್ ।
ಶುಷ್ಕೈರ್ವಂಶೈಃ ಸಮಾಸ್ತೀರ್ಣಮುಶೀರೈಶ್ಚ ಸಮಾವೃತಮ್ ॥೧೪॥

ತತೋ ವೇತಸಶಾಖಾಶ್ಚ ಜಮ್ಬೂಶಾಖಾಶ್ಚ ವೀರ್ಯವಾನ್ ।
ಚಕಾರ ಲಕ್ಷ್ಮಣಶ್ಛಿತ್ವಾ ಸೀತಾಯಾಃ ಸುಖಮಾಸನಮ್ ॥೧೫॥

ತತ್ರ ಶ್ರಿಯಮಿವಾಚಿನ್ತ್ಯಾಂ ರಾಮೋ ದಾಶರಥಿಃ ಪ್ರಿಯಾಮ್ ।
ಈಷತ್ಸಂಲಜ್ಜಮಾನಾಂ ತಾಮಧ್ಯಾರೋಪಯತ ಪ್ಲವಮ್ ॥೧೬॥

ಪಾರ್ಶ್ವೇ ಚ ತತ್ರ ವೈದೇಹ್ಯಾ ವಸನೇ ಭೂಷಣಾನಿ ಚ ।
ಪ್ಲವೇ ಕಠಿಣಕಾಜಂ ಚ ರಾಮಶ್ಚಕ್ರೇ ಸಹಾಯುಧೈಃ ॥೧೭॥

ಆರೋಪ್ಯ ಸೀತಾಂ ಪ್ರಥಮಂ ಸಂಘಾಟಂ ಪರಿಗೃಹ್ಯ ಚ ।
ತತಃ ಪ್ರತೇರತುರ್ಯತ್ತೌ ಪ್ರೀತೌ ದಶರಥಾತ್ಮಜೌ ॥೧೮॥

ಕಾಲಿನ್ದೀಮಧ್ಯಮಾಯಾತಾ ಸೀತಾ ತ್ವೇನಾಮವನ್ದತ ।
ಸ್ವಸ್ತಿ ದೇವಿ ತರಾಮಿ ತ್ವಾಂ ಪಾರಯೇನ್ಮೇ ಪತಿರ್ವ್ರತಮ್ ॥೧೯॥

ಯಕ್ಷ್ಯೇ ತ್ವಾಂ ಗೋಸಹಸ್ರೇಣ ಸುರಾಘಟಶತೇನ ಚ ।
ಸ್ವಸ್ತಿ ಪ್ರತ್ಯಾಗತೇ ರಾಮೇ ಪುರೀಮಿಕ್ಷ್ವಾಕುಪಾಲಿತಾಮ್ ॥೨೦॥

ಕಾಲಿನ್ದೀಮಥ ಸೀತಾ ತು ಯಾಚಮಾನಾ ಕೃತಾಞ್ಜಲಿಃ ।
ತೀರಮೇವಾಭಿಸಂಪ್ರಾಪ್ತಾ ದಕ್ಷಿಣಂ ವರವರ್ಣಿನೀ ॥೨೧॥

ತತಃ ಪ್ಲವೇನಾಂಶುಮತೀಂ ಶೀಘ್ರಗಾಮೂರ್ಮಿಮಾಲಿನೀಮ್ ।
ತೀರಜೈರ್ಬಹುಭಿರ್ವೃಕ್ಷೈಃ ಸಂತೇರುರ್ಯಮುನಾಂ ನದೀಮ್ ॥೨೨॥

ತೇ ತೀರ್ಣಾಃ ಪ್ಲವಮುತ್ಸೃಜ್ಯ ಪ್ರಸ್ಥಾಯ ಯಮುನಾವನಾತ್ ।
ಶ್ಯಾಮಂ ನ್ಯಗ್ರೋಧಮಾಸೇದುಃ ಶೀತಲಂ ಹರಿತಚ್ಛದಮ್ ॥೨೩॥

ನ್ಯಗ್ರೋಧಂ ಸಮುಪಾಗಮ್ಯ ವೈದೇಹೀ ವಾಕ್ಯಮಬ್ರವೀತ್ ।
ನಮಸ್ತೇಽಸ್ತು ಮಹಾವೃಕ್ಷ ಪಾರಯೇನ್ಮೇ ಪತಿರ್ವ್ರತಮ್ ॥೨೪॥

ಕೌಸಲ್ಯಾಂ ಚೈವ ಪಶ್ಯೇಮ ಸುಮಿತ್ರಾಂ ಚ ಯಶಸ್ವಿನೀಮ್ ।
ಇತಿ ಸೀತಾಞ್ಜಲಿಂ ಕೃತ್ವಾ ಪರ್ಯಗಚ್ಛದ್ವನಸ್ಪತಿಮ್ ॥೨೫॥

ಅವಲೋಕ್ಯ ತತಃ ಸೀತಾಮಾಯಾಚನ್ತೀಮನಿನ್ದಿತಾಮ್ ।
ದಯಿತಾಂ ಚ ವಿಧೇಯಾಂ ಚ ರಾಮೋ ಲಕ್ಷ್ಮಣಮಬ್ರವೀತ್ ॥೨೬॥

ಸೀತಾಮಾದಾಯ ಗಚ್ಛ ತ್ವಮಗ್ರತೋ ಭರತಾನುಜ ।
ಪೃಷ್ಠತೋಽನುಗಮಿಷ್ಯಾಮಿ ಸಾಯುಧೋ ದ್ವಿಪದಾಂ ವರ ॥೨೭॥

ಯದ್ಯತ್ಫಲಂ ಪ್ರಾರ್ಥಯತೇ ಪುಷ್ಪಂ ವಾ ಜನಕಾತ್ಮಜಾ ।
ತತ್ತತ್ಪ್ರಯಚ್ಛ ವೈದೇಹ್ಯಾ ಯತ್ರಾಸ್ಯಾ ರಮತೇ ಮನಃ ॥೨೮॥

ಗಚ್ಛತೋಸ್ತು ತಯೋರ್ಮಧ್ಯೇ ಬಭೌ ಚ ಜನಕಾತ್ಮಜಾ ।
ಮಾತಙ್ಗಯೋರ್ಮಧ್ಯಗತಾ ಶುಭಾ ನಾಗವಧೂರಿವ ॥೨೯॥

ಏಕೈಕಂ ಪಾದಪಂ ಗುಲ್ಮಂ ಲತಾಂ ವಾ ಪುಷ್ಪಶಾಲಿನೀಮ್ ।
ಅದೃಷ್ಟಪೂರ್ವಾಂ ಪಶ್ಯನ್ತೀ ರಾಮಂ ಪಪ್ರಚ್ಛ ಸಾಬಲಾ ॥೩೦॥

ರಮಣೀಯಾನ್ಬಹುವಿಧಾನ್ಪಾದಪಾನ್ಕುಸುಮೋತ್ಕಟಾನ್ ।
ಸೀತಾವಚನಸಂರಬ್ಧ ಆನಯಾಮಾಸ ಲಕ್ಷ್ಮಣಃ ॥೩೧॥

ವಿಚಿತ್ರವಾಲುಕಜಲಾಂ ಹಂಸಸಾರಸನಾದಿತಾಮ್ ।
ರೇಮೇ ಜನಕರಾಜಸ್ಯ ಸುತಾ ಪ್ರೇಕ್ಷ್ಯ ತದಾ ನದೀಮ್ ॥೩೨॥

ಕ್ರೋಶಮಾತ್ರಂ ತತೋ ಗತ್ವಾ ಭ್ರಾತರೌ ರಾಮಲಕ್ಷ್ಮಣೌ ।
ಬಹೂನ್ಮೇಧ್ಯಾನ್ಮೃಗಾನ್ಹತ್ವಾ ಚೇರತುರ್ಯಮುನಾವನೇ ॥೩೩॥

ವಿಹೃತ್ಯ ತೇ ಬರ್ಹಿಣಪೂಗನಾದಿತೇ
ಶುಭೇ ವನೇ ವಾರಣವಾನರಾಯುತೇ ।
ಸಮಂ ನದೀವಪ್ರಮುಪೇತ್ಯ ಸತ್ವರಂ
ನಿವಾಸಮಾಜಗ್ಮುರದೀನದರ್ಶನಾಃ ॥೩೪॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಅಯೋಧ್ಯಾಕಾಣ್ಡೇ ಪಞ್ಚಪಞ್ಚಾಶಃ ಸರ್ಗಃ

—೦—

ಷಟ್ಪಞ್ಚಾಶಃ ಸರ್ಗಃ

ಅಥ ರಾತ್ರ್ಯಾಂ ವ್ಯತೀತಾಯಾಮವಸುಪ್ತಮನನ್ತರಮ್ ।
ಪ್ರಬೋಧಯಾಮಾಸ ಶನೈರ್ಲಕ್ಷ್ಮಣಂ ರಘುಪುಂಗವಃ ॥೧॥

ಸೌಮಿತ್ರೇ ಶೃಣು ವನ್ಯಾನಾಂ ವಲ್ಗು ವ್ಯಾಹರತಾಂ ಸ್ವನಮ್ ।
ಸಂಪ್ರತಿಷ್ಠಾಮಹೇ ಕಾಲಃ ಪ್ರಸ್ಥಾನಸ್ಯ ಪರಂತಪ ॥೨॥

ಪ್ರಸುಪ್ತಸ್ತು ತತೋ ಭ್ರಾತ್ರಾ ಸಮಯೇ ಪ್ರತಿಬೋಧಿತಃ ।
ಜಹೌ ನಿದ್ರಾಂ ಚ ತನ್ದ್ರೀಂ ಚ ಪ್ರಸಕ್ತಂ ಚ ಪಥಿ ಶ್ರಮಮ್ ॥೩॥

ತತ ಉತ್ಥಾಯ ತೇ ಸರ್ವೇ ಸ್ಪೃಷ್ಟ್ವಾ ನದ್ಯಾಃ ಶಿವಂ ಜಲಮ್ ।
ಪನ್ಥಾನಮೃಷಿಣಾದಿಷ್ಟಂ ಚಿತ್ರಕೂಟಸ್ಯ ತಂ ಯಯುಃ ॥೪॥

ತತಃ ಸಂಪ್ರಸ್ಥಿತಃ ಕಾಲೇ ರಾಮಃ ಸೌಮಿತ್ರಿಣಾ ಸಹ ।
ಸೀತಾಂ ಕಮಲಪತ್ರಾಕ್ಷೀಮಿದಂ ವಚನಮಬ್ರವೀತ್ ॥೫॥

ಆದೀಪ್ತಾನಿವ ವೈದೇಹಿ ಸರ್ವತಃ ಪುಷ್ಪಿತಾನ್ನಗಾನ್ ।
ಸ್ವೈಃ ಪುಷ್ಪೈಃ ಕಿಂಶುಕಾನ್ಪಶ್ಯ ಮಾಲಿನಃ ಶಿಶಿರಾತ್ಯಯೇ ॥೬॥

ಪಶ್ಯ ಭಲ್ಲಾತಕಾನ್ಬಿಲ್ವಾನ್ನರೈರನುಪಸೇವಿತಾನ್ ।
ಫಲಪುಷ್ಪೈರವನತಾನ್ನೂನಂ ಶಕ್ಷ್ಯಾಮಿ ಜೀವಿತುಮ್ ॥೭॥

ಪಶ್ಯ ದ್ರೋಣಪ್ರಮಾಣಾನಿ ಲಮ್ಬಮಾನಾನಿ ಲಕ್ಷ್ಮಣ ।
ಮಧೂನಿ ಮಧುಕಾರೀಭಿಃ ಸಂಭೃತಾನಿ ನಗೇ ನಗೇ ॥೮॥

ಏಷ ಕ್ರೋಶತಿ ದಾತ್ಯೂಹಸ್ತಂ ಶಿಖೀ ಪ್ರತಿಕೂಜತಿ ।
ರಮಣೀಯೇ ವನೋದ್ದೇಶೇ ಪುಷ್ಪಸಂಸ್ತರಸಂಕಟೇ ॥೯॥

ಮಾತಙ್ಗಯೂಥಾನುಸೃತಂ ಪಕ್ಷಿಸಂಘಾನುನಾದಿತಮ್ ।
ಚಿತ್ರಕೂಟಮಿಮಂ ಪಶ್ಯ ಪ್ರವೃದ್ಧಶಿಖರಂ ಗಿರಿಮ್ ॥೧೦॥

ಸಮಭೂಮಿತಲೇ ರಮ್ಯೇ ದ್ರುಮೈರ್ಬಹುಭಿರಾವೃತೇ ।
ಪುಣ್ಯೇ ರಂಸ್ಯಾಮಹೇ ತಾತ ಚಿತ್ರಕೂಟಸ್ಯ ಕಾನನೇ ॥೧೧॥

ತತಸ್ತೌ ಪಾದಚಾರೇಣ ಗಚ್ಛನ್ತೌ ಸಹ ಸೀತಯಾ ।
ರಮ್ಯಮಾಸೇದತುಃ ಶೈಲಂ ಚಿತ್ರಕೂಟಂ ಮನೋರಮಮ್ ॥೧೨॥

ತಂ ತು ಪರ್ವತಮಾಸಾದ್ಯ ನಾನಾಪಕ್ಷಿಗಣಾಯುತಮ್ ।
ಬಹುಮೂಲಫಲಂ ರಮ್ಯಂ ಸಂಪನ್ನಂ ಸರಸೋದಕಮ್ ॥೧೩॥

ಚಿತ್ರಕೂಟಂ ಹಿ ಸಂಪಶ್ಯನ್ರಾಮೋ ಲಕ್ಷ್ಮಣಮಬ್ರವೀತ್ ।
ಮನೋಜ್ಞೋಽಯಂ ಗಿರಿಃ ಸೌಮ್ಯ ನಾನಾದ್ರುಮಲತಾಯುತಃ ।
ಬಹುಮೂಲಫಲೋ ರಮ್ಯಃ ಸ್ವಾಜೀವಃ ಪ್ರತಿಭಾತಿ ಮೇ ॥೧೪॥

ಮುನಯಶ್ಚ ಮಹಾತ್ಮಾನೋ ವಸನ್ತ್ಯಸ್ಮಿನ್ ಶಿಲೋಚ್ಚಯೇ ।
ಅಯಂ ವಾಸೋ ಭವೇತ್ತಾವದತ್ರ ಸೌಮ್ಯ ರಮೇಮಹಿ ॥೧೫॥

ಇತಿ ಸೀತಾ ಚ ರಾಮಶ್ಚ ಲಕ್ಷ್ಮಣಶ್ಚ ಕೃತಾಞ್ಜಲಿಃ ।
ಅಭಿಗಮ್ಯಾಶ್ರಮಂ ಸರ್ವೇ ವಾಲ್ಮೀಕಿಮಭಿವಾದಯನ್ ॥೧೬॥

ತಾನ್ಮಹರ್ಷಿಃ ಪ್ರಮುದಿತಃ ಪೂಜಯಾಮಾಸ ಧರ್ಮವಿತ್ ।
ಆಸ್ಯತಾಮಿತಿ ಚೋವಾಚ ಸ್ವಾಗತಂ ತು ನಿವೇದ್ಯ ಚ ॥೧೭॥

ತತೋಽಬ್ರವೀನ್ಮಹಾಬಾಹುರ್ಲಕ್ಷ್ಮಣಂ ಲಕ್ಷ್ಮಣಾಗ್ರಜಃ ।
ಸಂನಿವೇದ್ಯ ಯಥಾನ್ಯಾಯಮಾತ್ಮಾನಮೃಷಯೇ ಪ್ರಭುಃ ॥೧೮॥

ಲಕ್ಷ್ಮಣಾನಯ ದಾರೂಣಿ ದೃಢಾನಿ ಚ ವರಾಣಿ ಚ ।
ಕುರುಷ್ವಾವಸಥಂ ಸೌಮ್ಯ ವಾಸೇ ಮೇಽಭಿರತಂ ಮನಃ ॥೧೯॥

ತಸ್ಯ ತದ್ವಚನಂ ಶ್ರುತ್ವಾ ಸೌಮಿತ್ರಿರ್ವಿವಿಧಾನ್ ದ್ರುಮಾನ್ ।
ಆಜಹಾರ ತತಶ್ಚಕ್ರೇ ಪರ್ಣಶಾಲಾಮರಿಂದಮಃ ॥೨೦॥

ತಾಂ ನಿಷ್ಠಿತಾಂ ಬದ್ಧಕಟಾಂ ದೃಷ್ಟ್ವಾ ರಾಮಃ ಸುದರ್ಶನಾಮ್ ।
ಶುಶ್ರೂಷಮಾಣಮೇಕಾಗ್ರಮಿದಂ ವಚನಮಬ್ರವೀತ್ ॥೨೧॥

ಐಣೇಯಂ ಮಾಂಸಮಾಹೃತ್ಯ ಶಾಲಾಂ ಯಕ್ಷ್ಯಾಮಹೇ ವಯಮ್ ।
ಕರ್ತವ್ಯಂ ವಾಸ್ತುಶಮನಂ ಸೌಮಿತ್ರೇ ಚಿರವಾಸಿಭಿಃ ॥೨೨॥

ಮೃಗಂ ಹತ್ವಾನಯ ಕ್ಷಿಪ್ರಂ ಲಕ್ಷ್ಮಣೇಹ ಶುಭೇಕ್ಷಣ ।
ಕರ್ತವ್ಯಃ ಶಾಸ್ತ್ರದೃಷ್ಟೋ ಹಿ ವಿಧಿರ್ಧರ್ಮಮನುಸ್ಮರ ॥೨೩॥

ಭ್ರಾತುರ್ವಚನಮಾಜ್ಞಾಯ ಲಕ್ಷ್ಮಣಃ ಪರವೀರಹಾ ।
ಚಕಾರ ಸ ಯಥೋಕ್ತಂ ಚ ತಂ ರಾಮಃ ಪುನರಬ್ರವೀತ್ ॥೨೪॥

ಐಣೇಯಂ ಶ್ರಪಯಸ್ವೈತಚ್ಛಾಲಾಂ ಯಕ್ಷ್ಯಾಮಹೇ ವಯಮ್ ।
ತ್ವರ ಸೌಮ್ಯ ಮುಹೂರ್ತೋಽಯಂ ಧ್ರುವಶ್ಚ
ದಿವಸೋಽಪ್ಯಯಮ್ ॥

ಸ ಲಕ್ಷ್ಮಣಃ ಕೃಷ್ಣಮೃಗಂ ಹತ್ವಾ ಮೇಧ್ಯಂ ಪ್ರತಾಪವಾನ್ ।
ಅಥ ಚಿಕ್ಷೇಪ ಸೌಮಿತ್ರಿಃ ಸಮಿದ್ಧೇ ಜಾತವೇದಸಿ ॥೨೬॥

ತಂ ತು ಪಕ್ವಂ ಸಮಾಜ್ಞಾಯ ನಿಷ್ಟಪ್ತಂ ಛಿನ್ನಶೋಣಿತಮ್ ।
ಲಕ್ಷ್ಮಣಃ ಪುರುಷವ್ಯಾಘ್ರಮಥ ರಾಘವಮಬ್ರವೀತ್ ॥೨೭॥

ಅಯಂ ಕೃಷ್ಣಃ ಸಮಸ್ತಾಙ್ಗಃ ಶೃತಃ ಕೃಷ್ಣಮೃಗೋ ಮಯಾ ।
ದೇವತಾ ದೇವಸಂಕಾಶ ಯಜಸ್ವ ಕುಶಲೋ ಹ್ಯಸಿ ॥೨೮॥

ರಾಮಃ ಸ್ನಾತ್ವಾ ತು ನಿಯತೋ ಗುಣವಾನ್ ಜಪ್ಯಕೋವಿದಃ ।
ಸಂಗ್ರಹೇಣಾಕರೋತ್ಸರ್ವಾನ್ಮನ್ತ್ರಾನ್ಸತ್ರಾವಸಾನಿಕಾನ್ ॥೨೯॥

ಇಷ್ಟ್ವಾ ದೇವಗಣಾನ್ಸರ್ವಾನ್ವಿವೇಶಾವಸಥಂ ಶುಚಿ ।
ಬಭೂವ ಚ ಮನೋಹ್ಲಾದೋ ರಾಮಸ್ಯಾಮಿತತೇಜಸಃ ॥೩೦॥

ವೈಶ್ವದೇವಬಲಿಂ ಕೃತ್ವಾ ರೌದ್ರಂ ವೈಷ್ಣವಮೇವ ಚ ।
ವಾಸ್ತುಸಂಶಮನೀಯಾನಿ ಮಙ್ಗಲಾನಿ ಪ್ರವರ್ತಯನ್ ॥೩೧॥

ಜಪಂ ಚ ನ್ಯಾಯತಃ ಕೃತ್ವಾ ಸ್ನಾತ್ವಾ ನದ್ಯಾಂ ಯಥಾವಿಧಿ ।
ಪಾಪಸಂಶಮನಂ ರಾಮಶ್ಚಕಾರ ಬಲಿಮುತ್ತಮಮ್ ॥೩೨॥

ವೇದಿಸ್ಥಲವಿಧಾನಾನಿ ಚೈತ್ಯಾನ್ಯಾಯತನಾನಿ ಚ ।
ಆಶ್ರಮಸ್ಯಾನುರೂಪಾಣಿ ಸ್ಥಾಪಯಾಮಾಸ ರಾಘವಃ ॥೩೩॥

ವನ್ಯೈರ್ಮಾಲ್ಯೈಃ ಫಲೈರ್ಮೂಲೈಃ ಪಕ್ವೈರ್ಮಾಂಸೈರ್ಯಥಾವಿಧಿ ।
ಅದ್ಭಿರ್ಜಪ್ಯೈಶ್ಚ ವೇದೋಕ್ತೈರ್ದರ್ಭೈಶ್ಚ ಸಸಮಿತ್ಕುಶೈಃ ॥೩೪॥

ತೌ ತರ್ಪಯಿತ್ವಾ ಭೂತಾನಿ ರಾಘವೌ ಸಹ ಸೀತಯಾ ।
ತದಾ ವಿವಿಶತುಃ ಶಾಲಾಂ ಸುಶುಭಾಂ ಶುಭಲಕ್ಷಣೌ ॥೩೫॥

ತಾಂ ವೃಕ್ಷಪರ್ಣಚ್ಛದನಾಂ ಮನೋಜ್ಞಾಂ
ಯಥಾಪ್ರದೇಶಂ ಸುಕೃತಾಂ ನಿವಾತಾಮ್ ।
ವಾಸಾಯ ಸರ್ವೇ ವಿವಿಶುಃ ಸಮೇತಾಃ
ಸಭಾಂ ಯಥಾ ದೇವಗಣಾಃ ಸುಧರ್ಮಾಮ್ ॥೩೬॥

ಅನೇಕನಾನಾಮೃಗಪಕ್ಷಿಸಂಕುಲೇ
ವಿಚಿತ್ರಪುಷ್ಪಸ್ತಬಕೈರ್ದ್ರುಮೈರ್ಯುತೇ ।
ವನೋತ್ತಮೇ ವ್ಯಾಲಮೃಗಾನುನಾದಿತೇ
ತದಾ ವಿಜಹ್ರುಃ ಸುಸುಖಂ ಜಿತೇನ್ದ್ರಿಯಾಃ ॥೩೭॥

ಸುರಮ್ಯಮಾಸಾದ್ಯ ತು ಚಿತ್ರಕೂಟಂ
ನದೀಂ ಚ ತಾಂ ಮಾಲ್ಯವತೀಂ ಸುತೀರ್ಥಾಮ್ ।
ನನನ್ದ ರಾಮೋ ಮೃಗಪಕ್ಷಿಜುಷ್ಟಾಂ
ಜಹೌ ಚ ದುಃಖಂ ಪುರವಿಪ್ರವಾಸಾತ್ ॥೩೮॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಅಯೋಧ್ಯಾಕಾಣ್ಡೇ ಷಟ್ಪಞ್ಚಾಶಃ ಸರ್ಗಃ

—o—

ಸಪ್ತಪಞ್ಚಾಶಃ ಸರ್ಗಃ

ಕಥಯಿತ್ವಾ ಸುದುಃಖಾರ್ತಃ ಸುಮನ್ತ್ರೇಣ ಚಿರಂ ಸಹ ।
ರಾಮೇ ದಕ್ಷಿಣಕೂಲಸ್ಥೇ ಜಗಾಮ ಸ್ವಗೃಹಂ ಗುಹಃ ॥೧॥

ಭರದ್ವಾಜಾಭಿಗಮನಂ ಪ್ರಯಾಗೇ ಚ ಸಹಾಸನಮ್ ।
ಆ ಗಿರೇರ್ಗಮನಂ ತೇಷಾಂ ತತ್ರಸ್ಥೈರಭಿಲಕ್ಷಿತಮ್ ॥೨॥

ಅನುಜ್ಞಾತಃ ಸುಮನ್ತ್ರೋಽಥ ಯೋಜಯಿತ್ವಾ ಹಯೋತ್ತಮಾನ್ ।
ಅಯೋಧ್ಯಾಮೇವ ನಗರೀಂ ಪ್ರಯಯೌ ಗಾಢದುರ್ಮನಾಃ ॥೩॥

ಸ ವನಾನಿ ಸುಗನ್ಧೀನಿ ಸರಿತಶ್ಚ ಸರಾಂಸಿ ಚ ।
ಪಶ್ಯನ್ನತಿಯಯೌ ಶೀಘ್ರಂ ಗ್ರಾಮಾಣಿ ನಗರಾಣಿ ಚ ॥೪॥

ತತಃ ಸಾಯಾಹ್ನಸಮಯೇ ತೃತೀಯೇಽಹನಿ ಸಾರಥಿಃ ।
ಅಯೋಧ್ಯಾಂ ಸಮನುಪ್ರಾಪ್ಯ ನಿರಾನನ್ದಾಂ ದದರ್ಶ ಹ ॥೫॥

ಸ ಶೂನ್ಯಾಮಿವ ನಿಃಶಬ್ದಾಂ ದೃಷ್ಟ್ವಾ ಪರಮದುರ್ಮನಾಃ ।
ಸುಮನ್ತ್ರಶ್ಚಿನ್ತಯಾಮಾಸ ಶೋಕವೇಗಸಮಾಹತಃ ॥೬॥

ಅನುಗನ್ತುಂ ನ ಶಕ್ತಿರ್ಮೇ ಗತಿಂ ತವ ಮಹೀಪತೇ ॥೬॥

ಸುಜೀವಂ ನಿತ್ಯಶಸ್ತಸ್ಯ ಯಃ ಪರೈರುಪಜೀವ್ಯತೇ ।
ರಾಮ ತೇನ ತು ದುರ್ಜೀವಂ ಯಃ ಪರಾನುಪಜೀವತಿ ॥೭॥

ಯಥಾ ತು ರೋಪಿತೋ ವೃಕ್ಷಃ ಪುರುಷೇಣ ವಿವರ್ಧಿತಃ ।
ಹ್ರಸ್ವಕೇನ ದುರಾರೋಹೋ ರೂಢಸ್ಕನ್ಧೋ ಮಹಾದ್ರುಮಃ ॥೮॥

ಸ ಯದಾ ಪುಷ್ಪಿತೋ ಭೂತ್ವಾ ಫಲಾನಿ ನ ನಿದರ್ಶಯೇತ್ ।
ಸ ತಾಂ ನಾನುಭವೇತ್ಪ್ರೀತಿಂ ಯಸ್ಯ ಹೇತೋಃ ಪ್ರರೋಹಿತಃ ॥೯॥

ಏಷೋಪಮಾ ಮಹಾಬಾಹೋ ತಮರ್ಥಂ ವೇತ್ತುಮರ್ಹಸಿ ।
ಯದಿ ತ್ವಮಸ್ಮಾನ್ವೃಷಭೋ ಭರ್ತಾ ಭೃತ್ಯಾನ್ನ ಶಾಧಿ ಹಿ ॥೧೦॥

ಶ್ರೇಣಯಸ್ತ್ವಾಂ ಮಹಾರಾಜ ಪಶ್ಯನ್ತ್ವಗ್ರ್ಯಾಶ್ಚ ಸರ್ವಶಃ ।
ಪ್ರತಪನ್ತಮಿವಾದಿತ್ಯಂ ರಾಜ್ಯೇ ಸ್ಥಿತಮರಿಂದಮಮ್ ॥೧೧॥

ತವಾನುಯಾನೇ ಕಾಕುತ್ಸ್ಥ ಮತ್ತಾ ನರ್ದನ್ತು ಕುಞ್ಜರಾಃ ।
ಅನ್ತಃಪುರಗತಾ ನಾರ್ಯೋ ನನ್ದನ್ತು ಸುಸಮಾಹಿತಾಃ ॥೧೨॥

ತಸ್ಯ ಸಾಧ್ವಿತ್ಯಮನ್ಯನ್ತ ನಾಗರಾ ವಿವಿಧಾ ಜನಾಃ ।
ಭರತಸ್ಯ ವಚಃ ಶ್ರುತ್ವಾ ರಾಮಂ ಪ್ರತ್ಯನುಯಾಚತಃ ॥೧೩॥

ತಮೇವಂ ದುಃಖಿತಂ ಪ್ರೇಕ್ಷ್ಯ ವಿಲಪನ್ತಂ ಯಶಸ್ವಿನಮ್ ।
ರಾಮಃ ಕೃತಾತ್ಮಾ ಭರತಂ ಸಮಾಶ್ವಾಸಯದಾತ್ಮವಾನ್ ॥೧೪॥

ನಾತ್ಮನಃ ಕಾಮಕಾರೋಽಸ್ತಿ ಪುರುಷೋಽಯಮನೀಶ್ವರಃ ।
ಇತಶ್ಚೇತರತಶ್ಚೈನಂ ಕೃತಾನ್ತಃ ಪರಿಕರ್ಷತಿ ॥೧೫॥

ಸರ್ವೇ ಕ್ಷಯಾನ್ತಾ ನಿಚಯಾಃ ಪತನಾನ್ತಾಃ ಸಮುಚ್ಛ್ರಯಾಃ ।
ಸಂಯೋಗಾ ವಿಪ್ರಯೋಗಾನ್ತಾ ಮರಣಾನ್ತಂ ಚ ಜೀವಿತಮ್ ॥೧೬॥

ಯಥಾ ಫಲಾನಾಂ ಪಕ್ವಾನಾಂ ನಾನ್ಯತ್ರ ಪತನಾದ್ಭಯಮ್ ।
ಏವಂ ನರಸ್ಯ ಜಾತಸ್ಯ ನಾನ್ಯತ್ರ ಮರಣಾದ್ಭಯಮ್ ॥೧೭॥

ಯಥಾಗಾರಂ ದೃಢಸ್ಥೂಣಂ ಜೀರ್ಣಂ ಭೂತ್ವಾವಸೀದತಿ ।
ತಥೈವ ಸೀದನ್ತಿ ನರಾ ಜರಾಮೃತ್ಯುವಶಂ ಗತಾಃ ॥೧೮॥

ಅತ್ಯೇತಿ ರಜನೀ ಯಾ ತು ಸಾ ನ ಪ್ರತಿನಿವರ್ತತೇ ।
ಯಾತ್ಯೇವ ಯಮುನಾ ಪೂರ್ಣಾ ಸಮುದ್ರಮುದಕಾರ್ಣವಮ್ ॥

ಅಹೋರಾತ್ರಾಣಿ ಗಚ್ಛನ್ತಿ ಸರ್ವೇಷಾಂ ಪ್ರಾಣಿನಾಮಿಹ ।
ಆಯೂಂಷಿ ಕ್ಷಪಯನ್ತ್ಯಾಶು ಗ್ರೀಷ್ಮೇ ಜಲಮಿವಾಂಶವಃ ॥೨೦॥

ಆತ್ಮಾನಮನುಶೋಚ ತ್ವಂ ಕಿಮನ್ಯಮನುಶೋಚಸಿ ।
ಆಯುಸ್ತೇ ಹೀಯತೇ ಯಸ್ಯ ಸ್ಥಿತಸ್ಯ ಚ ಗತಸ್ಯ ಚ ॥೨೧॥

ಸಹೈವ ಮೃತ್ಯುರ್ವ್ರಜತಿ ಸಹ ಮೃತ್ಯುರ್ನಿಷೀದತಿ ।
ಗತ್ವಾ ಸುದೀರ್ಘಮಧ್ವಾನಂ ಸಹ ಮೃತ್ಯುರ್ನಿವರ್ತತೇ ॥೨೨॥

ಗಾತ್ರೇಷು ವಲಯಃ ಪ್ರಾಪ್ತಾಃ ಶ್ವೇತಾಶ್ಚೈವ ಶಿರೋರುಹಾಃ ।
ಜರಯಾ ಪುರುಷೋ ಜೀರ್ಣಃ ಕಿಂ ಹಿ ಕೃತ್ವಾ ಪ್ರಭಾವಯೇತ್ ॥

ನನ್ದನ್ತ್ಯುದಿತ ಆದಿತ್ಯೇ ನನ್ದನ್ತ್ಯಸ್ತಮಿತೇ ರವೌ ।
ಆತ್ಮನೋ ನಾವಬುಧ್ಯನ್ತೇ ಮನುಷ್ಯಾ ಜೀವಿತಕ್ಷಯಮ್ ॥೨೪॥

ಹೃಷ್ಯನ್ತ್ಯೃತುಮುಖಂ ದೃಷ್ಟ್ವಾ ನವಂ ನವಮಿಹಾಗತಮ್ ।
ಋತೂನಾಂ ಪರಿವರ್ತೇನ ಪ್ರಾಣಿನಾಂ ಪ್ರಾಣಸಂಕ್ಷಯಃ ॥೨೫॥

ಯಥಾ ಕಾಷ್ಠಂ ಚ ಕಾಷ್ಠಂ ಚ ಸಮೇಯಾತಾಂ ಮಹಾರ್ಣವೇ ।
ಸಮೇತ್ಯ ಚ ವ್ಯಪೇಯಾತಾಂ ಕಾಲಮಾಸಾದ್ಯ ಕಂಚನ ॥೨೬॥

ಏವಂ ಭಾರ್ಯಾಶ್ಚ ಪುತ್ರಾಶ್ಚ ಜ್ಞಾತಯಶ್ಚ ಧನಾನಿ ಚ ।
ಸಮೇತ್ಯ ವ್ಯವಧಾವನ್ತಿ ಧ್ರುವೋ ಹ್ಯೇಷಾಂ ವಿನಾಭವಃ ॥೨೭॥

ನಾತ್ರ ಕಶ್ಚಿದ್ಯಥಾಭಾವಂ ಪ್ರಾಣೀ ಸಮಭಿವರ್ತತೇ ।
ತೇನ ತಸ್ಮಿನ್ನ ಸಾಮರ್ಥ್ಯಂ ಪ್ರೇತಸ್ಯಾಸ್ತ್ಯನುಶೋಚತಃ ॥೨೮॥

ಯಥಾ ಹಿ ಸಾರ್ಥಂ ಗಚ್ಛನ್ತಂ ಬ್ರೂಯಾತ್ಕಶ್ಚಿತ್ಪಥಿ ಸ್ಥಿತಃ ।
ಅಹಮಪ್ಯಾಗಮಿಷ್ಯಾಮಿ ಪೃಷ್ಠತೋ ಭವತಾಮಿತಿ ॥೨೯॥

ಏವಂ ಪೂರ್ವೈರ್ಗತೋ ಮಾರ್ಗಃ ಪಿತೃಪೈತಾಮಹೋ ಧ್ರುವಃ ।
ತಮಾಪನ್ನಃ ಕಥಂ ಶೋಚೇದ್ಯಸ್ಯ ನಾಸ್ತಿ ವ್ಯತಿಕ್ರಮಃ ॥೩೦॥

ವಯಸಃ ಪತಮಾನಸ್ಯ ಸ್ರೋತಸೋ ವಾನಿವರ್ತಿನಃ ।
ಆತ್ಮಾ ಸುಖೇ ನಿಯೋಕ್ತವ್ಯಃ ಸುಖಭಾಜಃ ಪ್ರಜಾಃ ಸ್ಮೃತಾಃ ॥೩೧॥

ಧರ್ಮಾತ್ಮಾ ಸಶುಭೈಃ ಕೃತ್ಸ್ನೈಃ ಕ್ರತುಭಿಶ್ಚಾಪ್ತದಕ್ಷಿಣೈಃ ।
ಧೂತಪಾಪೋ ಗತಃ ಸ್ವರ್ಗಂ ಪಿತಾ ನಃ ಪೃಥಿವೀಪತಿಃ ॥೩೨॥

ಭೃತ್ಯಾನಾಂ ಭರಣಾತ್ಸಮ್ಯಕ್ಪ್ರಜಾನಾಂ ಪರಿಪಾಲನಾತ್ ।
ಅರ್ಥಾದಾನಾಚ್ಚ ಧರ್ಮೇಣ ಪಿತಾ ನಸ್ತ್ರಿದಿವಂ ಗತಃ ॥೩೩॥

ಕರ್ಮಭಿಸ್ತು ಶುಭೈರಿಷ್ಟೈಃ ಕ್ರತುಭಿಶ್ಚಾಪ್ತದಕ್ಷಿಣೈಃ ।
ಸ್ವರ್ಗಂ ದಶರಥಃ ಪ್ರಾಪ್ತಃ ಪಿತಾ ನಃ ಪೃಥಿವೀಪತಿಃ ॥೩೪॥

ಇಷ್ಟ್ವಾ ಬಹುವಿಧೈರ್ಯಜ್ಞೈರ್ಭೋಗಾಂಶ್ಚಾವಾಪ್ಯ ಪುಷ್ಕಲಾನ್ ।
ಉತ್ತಮಂ ಚಾಯುರಾಸಾದ್ಯ ಸ್ವರ್ಗತಃ ಪೃಥಿವೀಪತಿಃ ॥೩೫॥

ಆಯುರುತ್ತಮಮಾಸಾದ್ಯ ಭೋಗಾನಪಿ ಚ ರಾಘವಃ ।
ನ ಸ ಶೋಚ್ಯಃ ಪಿತಾ ತಾತ ಸ್ವರ್ಗತಃ ಸತ್ಕೃತಃ ಸತಾಮ್ ॥೩೬॥

ಸ ಜೀರ್ಣಂ ಮಾನುಷಂ ದೇಹಂ ಪರಿತ್ಯಜ್ಯ ಪಿತಾ ಹಿ ನಃ ।
ದೈವೀಮೃದ್ಧಿಮನುಪ್ರಾಪ್ತೋ ಬ್ರಹ್ಮಲೋಕವಿಹಾರಿಣೀಮ್ ॥೩೭॥

ತಂ ತು ನೈವಂವಿಧಃ ಕಶ್ಚಿತ್ಪ್ರಾಜ್ಞಃ ಶೋಚಿತುಮರ್ಹತಿ ।
ತ್ವದ್ವಿಧೋ ಮದ್ವಿಧಶ್ಚಾಪಿ ಶ್ರುತವಾನ್ಬುದ್ಧಿಮತ್ತರಃ ॥೩೮॥

ಏತೇ ಬಹುವಿಧಾಃ ಶೋಕಾ ವಿಲಾಪರುದಿತೇ ತಥಾ ।
ವರ್ಜನೀಯಾ ಹಿ ಧೀರೇಣ ಸರ್ವಾವಸ್ಥಾಸು ಧೀಮತಾ ॥೩೯॥

ಸ ಸ್ವಸ್ಥೋ ಭವ ಮಾ ಶೋಚೀರ್ಯಾತ್ವಾ ಚಾವಸ ತಾಂ ಪುರೀಮ್ ।
ತಥಾ ಪಿತ್ರಾ ನಿಯುಕ್ತೋಽಸಿ ವಶಿನಾ ವದತಾಂ ವರ ॥೪೦॥

ಯತ್ರಾಹಮಪಿ ತೇನೈವ ನಿಯುಕ್ತಃ ಪುಣ್ಯಕರ್ಮಣಾ ।
ತತ್ರೈವಾಹಂ ಕರಿಷ್ಯಾಮಿ ಪಿತುರಾರ್ಯಸ್ಯ ಶಾಸನಮ್ ॥೪೧॥

ನ ಮಯಾ ಶಾಸನಂ ತಸ್ಯ ತ್ಯಕ್ತುಂ ನ್ಯಾಯ್ಯಮರಿಂದಮ ।
ತತ್ತ್ವಯಾಪಿ ಸದಾ ಮಾನ್ಯಂ ಸ ವೈ ಬನ್ಧುಃ ಸ ನಃ ಪಿತಾ ॥೪೨॥

ತದ್ವಚಃ ಪಿತುರೇವಾಹಂ ಸಂಮತಂ ಧರ್ಮಚಾರಿಣಃ ।
ಕರ್ಮಣಾ ಪಾಲಯಿಷ್ಯಾಮಿ ವನವಾಸೇನ ರಾಘವ ॥೪೩॥

ಧಾರ್ಮಿಕೇಣಾನೃಶಂಸೇನ ನರೇಣ ಗುರುವರ್ತಿನಾ ।
ಭವಿತವ್ಯಂ ನರವ್ಯಾಘ್ರ ಪರಲೋಕಂ ಜಿಗೀಷತಾ ॥೪೪॥

ಆತ್ಮಾನಮನುತಿಷ್ಠ ತ್ವಂ ಸ್ವಭಾವೇನ ನರರ್ಷಭ ।
ನಿಶಾಮ್ಯ ತು ಶುಭಂ ವೃತ್ತಂ ಪಿತುರ್ದಶರಥಸ್ಯ ನಃ ॥೪೫॥

ಇತ್ಯೇವಮುಕ್ತ್ವಾ ವಚನಂ ಮಹಾತ್ಮಾ
ಪಿತುರ್ನಿದೇಶಪ್ರತಿಪಾಲನಾರ್ಥಮ್ ।
ಯವೀಯಸಂ ಭ್ರಾತರಮರ್ಥವಚ್ಚ
ಪ್ರಭುರ್ಮುಹೂರ್ತಾದ್ವಿರರಾಮ ರಾಮಃ ॥೪೬॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಅಯೋಧ್ಯಾಕಾಣ್ಡೇ ಪಞ್ಚೋತ್ತರಶತತಮಃ ಸರ್ಗಃ

—೦—

ಷಡುತ್ತರಶತತಮಃ ಸರ್ಗಃ

ಏವಮುಕ್ತ್ವಾ ತು ವಿರತೇ ರಾಮೇ ವಚನಮರ್ಥವತ್ ।
ತತೋ ಮನ್ದಾಕಿನೀತೀರೇ ರಾಮಂ ಪ್ರಕೃತಿವತ್ಸಲಮ್ ॥೧॥

ಉವಾಚ ಭರತಶ್ಚಿತ್ರಂ ಧಾರ್ಮಿಕೋ ಧಾರ್ಮಿಕಂ ವಚಃ ।
ಕೋ ಹಿ ಸ್ಯಾದೀದೃಶೋ ಲೋಕೇ ಯಾದೃಶಸ್ತ್ವಮರಿಂದಮ ॥೨॥

ನ ತ್ವಾಂ ಪ್ರವ್ಯಥಯೇದ್ದುಃಖಂ ಪ್ರೀತಿರ್ವಾ ನ ಪ್ರಹರ್ಷಯೇತ್ ।
ಸಂಮತಶ್ಚಾಸಿ ವೃದ್ಧಾನಾಂ ತಾಂಶ್ಚ ಪೃಚ್ಛಸಿ ಸಂಶಯಾನ್ ॥೩॥

ಯಥಾ ಮೃತಸ್ತಥಾ ಜೀವನ್ಯಥಾಸತಿ ತಥಾ ಸತಿ ।
ಯಸ್ಯೈಷ ಬುದ್ಧಿಲಾಭಃ ಸ್ಯಾತ್ಪರಿತಪ್ಯೇತ ಕೇನ ಸಃ ॥೪॥

ಪರಾವರಜ್ಞೋ ಯಶ್ಚ ಸ್ಯಾತ್ತಥಾ ತ್ವಂ ಮನುಜಾಧಿಪ ।
ಸ ಏವಂ ವ್ಯಸನಂ ಪ್ರಾಪ್ಯ ನ ವಿಷೀದಿತುಮರ್ಹತಿ ॥೫॥

ಅಮರೋಪಮಸತ್ತ್ವಸ್ತ್ವಂ ಮಹಾತ್ಮಾ ಸತ್ಯಸಂಗರಃ ।
ಸರ್ವಜ್ಞಃ ಸರ್ವದರ್ಶೀ ಚ ಬುದ್ಧಿಮಾಂಶ್ಚಾಸಿ ರಾಘವ ॥೬॥

ನ ತ್ವಾಮೇವಂಗುಣೈರ್ಯುಕ್ತಂ ಪ್ರಭವಾಭವಕೋವಿದಮ್ ।
ಅವಿಷಹ್ಯತಮಂ ದುಃಖಮಾಸಾದಯಿತುಮರ್ಹತಿ ॥೭॥

ಪ್ರೋಷಿತೇ ಮಯಿ ಯತ್ಪಾಪಂ ಮಾತ್ರಾ ಮತ್ಕಾರಣಾತ್ಕೃತಮ್ ।
ಕ್ಷುದ್ರಯಾ ತದನಿಷ್ಟಂ ಮೇ ಪ್ರಸೀದತು ಭವಾನ್ಮಮ ॥೮॥

ಧರ್ಮಬನ್ಧೇನ ಬದ್ಧೋಽಸ್ಮಿ ತೇನೇಮಾಂ ನೇಹ ಮಾತರಮ್ ।
ಹನ್ಮಿ ತೀವ್ರೇಣ ದಣ್ಡೇನ ದಣ್ಡಾರ್ಹಾಂ ಪಾಪಕಾರಿಣೀಮ್ ॥೯॥

ಕಥಂ ದಶರಥಾಜ್ಜಾತಃ ಶುದ್ಧಾಭಿಜನಕರ್ಮಣಃ ।
ಜಾನನ್ಧರ್ಮಮಧರ್ಮಿಷ್ಠಂ ಕುರ್ಯಾಂ ಕರ್ಮ ಜುಗುಪ್ಸಿತಮ್ ॥

ಗುರುಃ ಕ್ರಿಯಾವಾನ್ವೃದ್ಧಶ್ಚ ರಾಜಾ ಪ್ರೇತಃ ಪಿತೇತಿ ಚ ।
ತಾತಂ ನ ಪರಿಗರ್ಹೇಯಂ ದೈವತಂ ಚೇತಿ ಸಂಸದಿ ॥೧೧॥

ಕೋ ಹಿ ಧರ್ಮಾರ್ಥಯೋರ್ಹೀನಮೀದೃಶಂ ಕರ್ಮ ಕಿಲ್ಬಿಷಮ್ ।
ಸ್ತ್ರಿಯಾಃ ಪ್ರಿಯಂ ಚಿಕೀರ್ಷುಃ ಸನ್ಕುರ್ಯಾದ್ಧರ್ಮಜ್ಞ ಧರ್ಮವಿತ್॥೧೨॥

ಅನ್ತಕಾಲೇ ಹಿ ಭೂತಾನಿ ಮುಹ್ಯನ್ತೀತಿ ಪುರಾಶ್ರುತಿಃ ।
ರಾಜ್ಞೈವಂ ಕುರ್ವತಾ ಲೋಕೇ ಪ್ರತ್ಯಕ್ಷಾ ಸಾ ಶ್ರುತಿಃ ಕೃತಾ ॥೧೩॥

ಸಾಧ್ವರ್ಥಮಭಿಸಂಧಾಯ ಕ್ರೋಧಾನ್ಮೋಹಾಚ್ಚ ಸಾಹಸಾತ್ ।
ತಾತಸ್ಯ ಯದತಿಕ್ರಾನ್ತಂ ಪ್ರತ್ಯಾಹರತು ತದ್ಭವಾನ್ ॥೧೪॥

ಪಿತುರ್ಹಿ ಸಮತಿಕ್ರಾನ್ತಂ ಪುತ್ರೋ ಯಃ ಸಾಧು ಮನ್ಯತೇ ।
ತದಪತ್ಯಂ ಮತಂ ಲೋಕೇ ವಿಪರೀತಮತೋಽನ್ಯಥಾ ॥೧೫॥

ತದಪತ್ಯಂ ಭವಾನಸ್ತು ಮಾ ಭವಾನ್ದುಷ್ಕೃತಂ ಪಿತುಃ ।
ಅಭಿಪತ್ತಾ ಕೃತಂ ಕರ್ಮ ಲೋಕೇ ಧೀರವಿಗರ್ಹಿತಮ್ ॥೧೬॥

ಕೈಕೇಯೀಂ ಮಾಂ ಚ ತಾತಂ ಚ ಸುಹೃದೋ ಬಾನ್ಧವಾಂಶ್ಚ ನಃ ।
ಪೌರಜಾನಪದಾನ್ಸರ್ವಾಂಸ್ತ್ರಾತು ಸರ್ವಮಿದಂ ಭವಾನ್ ॥೧೭॥

ಕ್ವ ಚಾರಣ್ಯಂ ಕ್ವ ಚ ಕ್ಷಾತ್ರಂ ಕ್ವ ಜಟಾಃ ಕ್ವ ಚ ಪಾಲನಮ್ ।
ಈದೃಶಂ ವ್ಯಾಹತಂ ಕರ್ಮ ನ ಭವಾನ್ಕರ್ತುಮರ್ಹತಿ ॥೧೮॥

ಏಷ ಹಿ ಪ್ರಥಮೋ ಧರ್ಮಃ ಕ್ಷತ್ರಿಯಸ್ಯಾಭಿಷೇಚನಮ್ ।
ಯೇನ ಶಕ್ಯಂ ಮಹಾಪ್ರಾಜ್ಞ ಪ್ರಜಾನಾಂ ಪರಿಪಾಲನಮ್ ॥೧೯॥

ಕಶ್ಚ ಪ್ರತ್ಯಕ್ಷಮುತ್ಸೃಜ್ಯ ಸಂಶಯಸ್ಥಮಲಕ್ಷಣಮ್ ।
ಆಯತಿಸ್ಥಂ ಚರೇದ್ಧರ್ಮಂ ಕ್ಷತ್ರಬನ್ಧುರನಿಶ್ಚಿತಮ್ ॥೨೦॥

ಅಥ ಕ್ಲೇಶಜಮೇವ ತ್ವಂ ಧರ್ಮಂ ಚರಿತುಮಿಚ್ಛಸಿ ।
ಧರ್ಮೇಣ ಚತುರೋ ವರ್ಣಾನ್ಪಾಲಯನ್ ಕ್ಲೇಶಮಾಪ್ನುಹಿ ॥೨೧॥

ಚತುರ್ಣಾಮಾಶ್ರಮಾಣಾಂ ಹಿ ಗಾರ್ಹಸ್ಥ್ಯಂ ಶ್ರೇಷ್ಠಮಾಶ್ರಮಮ್ ।
ಪ್ರಾಹುರ್ಧರ್ಮಜ್ಞ ಧರ್ಮಜ್ಞಾಸ್ತಂ ಕಥಂ ತ್ಯಕ್ತುಮಿಚ್ಛಸಿ ॥೨೨॥

ಶ್ರುತೇನ ಬಾಲಃ ಸ್ಥಾನೇನ ಜನ್ಮನಾ ಭವತೋ ಹ್ಯಹಮ್ ।
ಸ ಕಥಂ ಪಾಲಯಿಷ್ಯಾಮಿ ಭೂಮಿಂ ಭವತಿ ತಿಷ್ಠತಿ ॥೨೩॥

ಹೀನಬುದ್ಧಿಗುಣೋ ಬಾಲೋ ಹೀನಃ ಸ್ಥಾನೇನ ಚಾಪ್ಯಹಮ್ ।
ಭವತಾ ಚ ವಿನಾಭೂತೋ ನ ವರ್ತಯಿತುಮುತ್ಸಹೇ ॥೨೪॥

ಇದಂ ನಿಖಿಲಮವ್ಯಗ್ರಂ ರಾಜ್ಯಂ ಪಿತ್ರ್ಯಮಕಣ್ಟಕಮ್ ।
ಅನುಶಾಧಿ ಸ್ವಧರ್ಮೇಣ ಧರ್ಮಜ್ಞ ಸಹ ಬಾನ್ಧವೈಃ ॥೨೫॥

ಇಹೈವ ತ್ವಾಭಿಷಿಞ್ಚನ್ತು ಸರ್ವಾಃ ಪ್ರಕೃತಯಃ ಸಹ ।
ಋತ್ವಿಜಃ ಸವಸಿಷ್ಠಾಶ್ಚ ಮನ್ತ್ರವನ್ಮನ್ತ್ರಕೋವಿದಾಃ ॥೨೬॥

ಅಭಿಷಿಕ್ತಸ್ತ್ವಮಸ್ಮಾಭಿರಯೋಧ್ಯಾಂ ಪಾಲನೇ ವ್ರಜ ।
ವಿಜಿತ್ಯ ತರಸಾ ಲೋಕಾನ್ಮರುದ್ಭಿರಿವ ವಾಸವಃ ॥೨೭॥

ಋಣಾನಿ ತ್ರೀಣ್ಯಪಾಕುರ್ವನ್ದುರ್ಹೃದಃ ಸಾಧು ನಿರ್ದಹನ್ ।
ಸುಹೃದಸ್ತರ್ಪಯನ್ಕಾಮೈಸ್ತ್ವಮೇವಾತ್ರಾನುಶಾಧಿ ಮಾಮ್ ॥೨೮॥

ಅದ್ಯಾರ್ಯ ಮುದಿತಾಃ ಸನ್ತು ಸುಹೃದಸ್ತೇಽಭಿಷೇಚನೇ ।
ಅದ್ಯ ಭೀತಾಃ ಪಲಾಯನ್ತಾಂ ದುರ್ಹೃದಸ್ತೇ ದಿಶೋ ದಶ ॥೨೯॥

ಆಕ್ರೋಶಂ ಮಮ ಮಾತುಶ್ಚ ಪ್ರಮೃಜ್ಯ ಪುರುಷರ್ಷಭ ।
ಅದ್ಯ ತತ್ರಭವನ್ತಂ ಚ ಪಿತರಂ ರಕ್ಷ ಕಿಲ್ಬಿಷಾತ್ ॥೩೦॥

ಶಿರಸಾ ತ್ವಾಭಿಯಾಚೇಽಹಂ ಕುರುಷ್ವ ಕರುಣಾಂ ಮಯಿ ।
ಬಾನ್ಧವೇಷು ಚ ಸರ್ವೇಷು ಭೂತೇಷ್ವಿವ ಮಹೇಶ್ವರಃ ॥೩೧॥

ಅಥೈತತ್ಪೃಷ್ಠತಃ ಕೃತ್ವಾ ವನಮೇವ ಭವಾನಿತಃ ।
ಗಮಿಷ್ಯತಿ ಗಮಿಷ್ಯಾಮಿ ಭವತಾ ಸಾರ್ಧಮಪ್ಯಹಮ್ ॥೩೨॥

ತಥಾ ಹಿ ರಾಮೋ ಭರತೇನ ತಾಮ್ಯತಾ
ಪ್ರಸಾದ್ಯಮಾನಃ ಶಿರಸಾ ಮಹೀಪತಿಃ ।
ನ ಚೈವ ಚಕ್ರೇ ಗಮನಾಯ ಸತ್ತ್ವವಾ-
ನ್ಮತಿಂ ಪಿತುಸ್ತದ್ವಚನೇ ವ್ಯವಸ್ಥಿತಃ ॥೩೩॥
ತದದ್ಭುತಂ ಸ್ಥೈರ್ಯಮವೇಕ್ಷ್ಯ ರಾಘವೇ
ಸಮಂ ಜನೋ ಹರ್ಷಮವಾಪ ದುಃಖಿತಃ ।
ನ ಯಾತ್ಯಯೋಧ್ಯಾಮಿತಿ ದುಃಖಿತೋಽಭವ-
ತ್ಸ್ಥಿರಪ್ರತಿಜ್ಞತ್ವಮವೇಕ್ಷ್ಯ ಹರ್ಷಿತಃ ॥೩೪॥
ತಮೃತ್ವಿಜೋ ನೈಗಮಯೂಥವಲ್ಲಭಾ-
ಸ್ತಥಾ ವಿಸಂಜ್ಞಾಶ್ರುಕಲಾಶ್ಚ ಮಾತರಃ ।
ತಥಾ ಬ್ರುವಾಣಂ ಭರತಂ ಪ್ರತುಷ್ಟುವುಃ
ಪ್ರಣಮ್ಯ ರಾಮಂ ಚ ಯಯಾಚಿರೇ ಸಹ ॥೩೫॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಅಯೋಧ್ಯಾಕಾಣ್ಡೇ ಷಡುತ್ತರಶತತಮಃ ಸರ್ಗಃ

—೦—

ಸಪ್ತೋತ್ತರಶತತಮಃ ಸರ್ಗಃ

ಪುನರೇವಂ ಬ್ರುವಾಣಂ ತಂ ಭರತಂ ಲಕ್ಷ್ಮಣಾಗ್ರಜಃ ।
ಪ್ರತ್ಯುವಾಚ ತತಃ ಶ್ರೀಮಾನ್ ಜ್ಞಾತಿಮಧ್ಯೇ ಸುಸತ್ಕೃತಃ ॥೧॥

ಉಪಪನ್ನಮಿದಂ ವಾಕ್ಯಂ ಯಸ್ತ್ವಮೇವಮಭಾಷಥಾಃ ।
ಜಾತಃ ಪುತ್ರೋ ದಶರಥಾತ್ಕೈಕೇಯ್ಯಾಂ ರಾಜಸತ್ತಮಾತ್ ॥೨॥

ಪುರಾ ಭ್ರಾತಃ ಪಿತಾ ನಃ ಸ ಮಾತರಂ ತೇ ಸಮುದ್ವಹನ್ ।
ಮಾತಾಮಹೇ ಸಮಾಶ್ರೌಷೀದ್ರಾಜ್ಯಶುಲ್ಕಮನುತ್ತಮಮ್ ॥೩॥

ದೈವಾಸುರೇ ಚ ಸಂಗ್ರಾಮೇ ಜನನ್ಯೈ ತವ ಪಾರ್ಥಿವಃ ।
ಸಂಪ್ರಹೃಷ್ಟೋ ದದೌ ರಾಜಾ ವರಮಾರಾಧಿತಃ ಪ್ರಭುಃ ॥೪॥

ತತಃ ಸಾ ಸಂಪ್ರತಿಶ್ರಾವ್ಯ ತವ ಮಾತಾ ಯಶಸ್ವಿನೀ ।
ಅಯಾಚತ ನರಶ್ರೇಷ್ಠಂ ದ್ವೌ ವರೌ ವರವರ್ಣಿನೀ ॥೫॥

ತವ ರಾಜ್ಯಂ ನರವ್ಯಾಘ್ರ ಮಮ ಪ್ರವ್ರಾಜನಂ ತಥಾ ।
ತೌ ಚ ರಾಜಾ ತದಾ ತಸ್ಯೈ ನಿಯುಕ್ತಃ ಪ್ರದದೌ ವರೌ ॥೬॥

ತೇನ ಪಿತ್ರಾಹಮಪ್ಯತ್ರ ನಿಯುಕ್ತಃ ಪುರುಷರ್ಷಭ ।
ಚತುರ್ದಶ ವನೇ ವಾಸಂ ವರ್ಷಾಣಿ ವರದಾನಿಕಮ್ ॥೭॥

ಸೋಽಹಂ ವನಮಿದಂ ಪ್ರಾಪ್ತೋ ನಿರ್ಜನಂ ಲಕ್ಷ್ಮಣಾನ್ವಿತಃ ।
ಸೀತಯಾ ಚಾಪ್ರತಿದ್ವನ್ದ್ವಃ ಸತ್ಯವಾದೇ ಸ್ಥಿತಃ ಪಿತುಃ ॥೮॥

ಭವಾನಪಿ ತಥೇತ್ಯೇವ ಪಿತರಂ ಸತ್ಯವಾದಿನಮ್ ।
ಕರ್ತುಮರ್ಹತಿ ರಾಜೇನ್ದ್ರ ಕ್ಷಿಪ್ರಮೇವಾಭಿಷೇಚನಾತ್ ॥೯॥

ಋಣಾನ್ಮೋಚಯ ರಾಜಾನಂ ಮತ್ಕೃತೇ ಭರತ ಪ್ರಭುಮ್ ।
ಪಿತರಂ ಚಾಪಿ ಧರ್ಮಜ್ಞಂ ಮಾತರಂ ಚಾಭಿನನ್ದಯ ॥೧೦॥

ಶ್ರೂಯತೇ ಹಿ ಪುರಾ ತಾತ ಶ್ರುತಿರ್ಗೀತಾ ಯಶಸ್ವಿನಾ ।
ಗಯೇನ ಯಜಮಾನೇನ ಗಯೇಷ್ವೇವ ಪಿತೄನ್ಪ್ರತಿ ॥೧೧॥

ಪುನ್ನಾಮ್ನೋ ನರಕಾದ್ಯಸ್ಮಾತ್ಪಿತರಂ ತ್ರಾಯತೇ ಸುತಃ ।
ತಸ್ಮಾತ್ಪುತ್ರ ಇತಿ ಪ್ರೋಕ್ತಃ ಪಿತೄನ್ಯತ್ಪಾತಿ ವಾ ಸುತಃ ॥೧೨॥

ಏಷ್ಟವ್ಯಾ ಬಹವಃ ಪುತ್ರಾ ಗುಣವನ್ತೋ ಬಹುಶ್ರುತಾಃ ।
ತೇಷಾಂ ವೈ ಸಮವೇತಾನಾಮಪಿ ಕಶ್ಚಿದ್ಗಯಾಂ ವ್ರಜೇತ್ ॥೧೩॥

ಏವಂ ರಾಜರ್ಷಯಃ ಸರ್ವೇ ಪ್ರತೀತಾ ರಾಜನನ್ದನ ।
ತಸ್ಮಾತ್ತ್ರಾಹಿ ನರಶ್ರೇಷ್ಠ ಪಿತರಂ ನರಕಾತ್ಪ್ರಭೋ ॥೧೪॥

ಅಯೋಧ್ಯಾಂ ಗಚ್ಛ ಭರತ ಪ್ರಕೃತೀರನುರಞ್ಜಯ ।
ಶತ್ರುಘ್ನಸಹಿತೋ ವೀರ ಸಹ ಸರ್ವೈರ್ದ್ವಿಜಾತಿಭಿಃ ॥೧೫॥

ಪ್ರವೇಕ್ಷ್ಯೇ ದಣ್ಡಕಾರಣ್ಯಮಹಮಪ್ಯವಿಲಮ್ಬಯನ್ ।
ಆಭ್ಯಾಂ ತು ಸಹಿತೋ ರಾಜನ್ವೈದೇಹ್ಯಾ ಲಕ್ಷ್ಮಣೇನ ಚ ॥೧೬॥

ತ್ವಂ ರಾಜಾ ಭರತ ಭವ ಸ್ವಯಂ ನರಾಣಾಂ
ವನ್ಯಾನಾಮಹಮಪಿ ರಾಜರಾಣ್ಮೃಗಾಣಾಮ್ ।
ಗಚ್ಛ ತ್ವಂ ಪುರವರಮದ್ಯ ಸಂಪ್ರಹೃಷ್ಟಃ
ಸಂಹೃಷ್ಟಸ್ತ್ವಹಮಪಿ ದಣ್ಡಕಾನ್ಪ್ರವೇಕ್ಷ್ಯೇ ॥೧೭॥

ಛಾಯಾಂ ತೇ ದಿನಕರಭಾಃ ಪ್ರಬಾಧಮಾನಂ
ವರ್ಷತ್ರಂ ಭರತ ಕರೋತು ಮೂರ್ಧ್ನಿ ಶೀತಮ್ ।
ಏತೇಷಾಮಹಮಪಿ ಕಾನನದ್ರುಮಾಣಾಂ
ಛಾಯಾಂ ತಾಮತಿಶಯಿನೀಂ ಸುಖೀ ಶ್ರಯಿಷ್ಯೇ ॥೧೮॥

ಶತ್ರುಘ್ನಃ ಕುಶಲಮತಿಸ್ತು ತೇ ಸಹಾಯಃ
ಸೌಮಿತ್ರಿರ್ಮಮ ವಿದಿತಃ ಪ್ರಧಾನಮಿತ್ರಮ್ ।
ಚತ್ವಾರಸ್ತನಯವರಾ ವಯಂ ನರೇನ್ದ್ರಂ
ಸತ್ಯಸ್ಥಂ ಭರತ ಚರಾಮ ಮಾ ವಿಷಾದಮ್ ॥೧೯॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಅಯೋಧ್ಯಾಕಾಣ್ಡೇ ಸಪ್ತೋತ್ತರಶತತಮಃ ಸರ್ಗಃ

—೦—

ಅಷ್ಟೋತ್ತರಶತತಮಃ ಸರ್ಗಃ

ಆಶ್ವಾಸಯನ್ತಂ ಭರತಂ ಜಾಬಾಲಿರ್ಬ್ರಾಹ್ಮಣೋತ್ತಮಃ ।
ಉವಾಚ ರಾಮಂ ಧರ್ಮಜ್ಞಂ ಧರ್ಮಾಪೇತಮಿದಂ ವಚಃ ॥೧॥

ಸಾಧು ರಾಘವ ಮಾ ಭೂತ್ತೇ ಬುದ್ಧಿರೇವಂ ನಿರರ್ಥಿಕಾ ।
ಪ್ರಾಕೃತಸ್ಯ ನರಸ್ಯೇವ ಹ್ಯಾರ್ಯಬುದ್ಧೇರ್ಮನಸ್ವಿನಃ ॥೨॥

ಕಃ ಕಸ್ಯ ಪುರುಷೋ ಬನ್ಧುಃ ಕಿಮಾಪ್ಯಂ ಕಸ್ಯ ಕೇನಚಿತ್ ।
ಯದೇಕೋ ಜಾಯತೇ ಜನ್ತುರೇಕ ಏವ ವಿನಶ್ಯತಿ ॥೩॥

ತಸ್ಮಾನ್ಮಾತಾ ಪಿತಾ ಚೇತಿ ರಾಮ ಸಜ್ಜೇತ ಯೋ ನರಃ ।
ಉನ್ಮತ್ತ ಇವ ಸ ಜ್ಞೇಯೋ ನಾಸ್ತಿ ಕಶ್ಚಿದ್ಧಿ ಕಸ್ಯಚಿತ್ ॥೪॥

ಯಥಾ ಗ್ರಾಮಾನ್ತರಂ ಗಚ್ಛನ್ನರಃ ಕಶ್ಚಿತ್ಕ್ವಚಿದ್ವಸೇತ್ ।
ಉತ್ಸೃಜ್ಯ ಚ ತಮಾವಾಸಂ ಪ್ರತಿಷ್ಠೇತಾಪರೇಽಹನಿ ॥೫॥

ಏವಮೇವ ಮನುಷ್ಯಾಣಾಂ ಪಿತಾ ಮಾತಾ ಗೃಹಂ ವಸು ।
ಆವಾಸಮಾತ್ರಂ ಕಾಕುತ್ಸ್ಥ ಸಜ್ಜನ್ತೇ ನಾತ್ರ ಸಜ್ಜನಾಃ ॥೬॥

ಪಿತ್ರ್ಯಂ ರಾಜ್ಯಂ ಸಮುತ್ಸೃಜ್ಯ ಸ ನಾರ್ಹಸಿ ನರೋತ್ತಮ ।
ಆಸ್ಥಾತುಂ ಕಾಪಥಂ ದುಃಖಂ ವಿಷಮಂ ಬಹುಕಣ್ಟಕಮ್ ॥೭॥

ಸಮೃದ್ಧಾಯಾಮಯೋಧ್ಯಾಯಾಮಾತ್ಮಾನಮಭಿಷೇಚಯ ।
ಏಕವೇಣೀಧರಾ ಹಿ ತ್ವಾಂ ನಗರೀ ಸಂಪ್ರತೀಕ್ಷತೇ ॥೮॥

ರಾಜಭೋಗಾನನುಭವನ್ಮಹಾರ್ಹಾನ್ಪಾರ್ಥಿವಾತ್ಮಜ ।
ವಿಹರ ತ್ವಮಯೋಧ್ಯಾಯಾಂ ಯಥಾ ಶಕ್ರಸ್ತ್ರಿವಿಷ್ಟಪೇ ॥೯॥

ನ ತೇ ಕಚ್ಚಿದ್ದಶರಥಸ್ತ್ವಂ ಚ ತಸ್ಯ ನ ಕಶ್ಚನ ।
ಅನ್ಯೋ ರಾಜಾ ತ್ವಮಪ್ಯನ್ಯಸ್ತಸ್ಮಾತ್ಕುರು ಯದುಚ್ಯತೇ ॥೧೦॥

ಬೀಜಮಾತ್ರಂ ಪಿತಾ ಜನ್ತೋಃ ಶುಕ್ಲಂ ಶೋಣಿತಮೇವ ಚ ।
ಸಂಯುಕ್ತಮೃತುಮನ್ಮಾತ್ರಾ ಪುರುಷಸ್ಯೇಹ ಜನ್ಮ ತತ್ ॥೧೧॥
ಗತಃ ಸ ನೃಪತಿಸ್ತತ್ರ ಗನ್ತವ್ಯಂ ಯತ್ರ ತೇನ ವೈ ।
ಪ್ರವೃತ್ತಿರೇಷಾ ಮರ್ತ್ಯಾನಾಂ ತ್ವಂ ತು ಮಿಥ್ಯಾ ವಿಹನ್ಯಸೇ ॥೧೨॥

ಅರ್ಥಧರ್ಮಪರಾ ಯೇ ಯೇ ತಾಂಸ್ತಾನ್ ಶೋಚಾಮಿ ನೇತರಾನ್ ।
ತೇ ಹಿ ದುಃಖಮಿಹ ಪ್ರಾಪ್ಯ ವಿನಾಶಂ ಪ್ರೇತ್ಯ ಭೇಜಿರೇ ॥೧೩॥

ಅಷ್ಟಕಾ ಪಿತೃದೈವತ್ಯಮಿತ್ಯಯಂ ಪ್ರಸೃತೋ ಜನಃ ।
ಅನ್ನಸ್ಯೋಪದ್ರವಂ ಪಶ್ಯ ಮೃತೋ ಹಿ ಕಿಮಶಿಷ್ಯತಿ ॥೧೪॥

ಯದಿ ಭುಕ್ತಮಿಹಾನ್ಯೇನ ದೇಹಮನ್ಯಸ್ಯ ಗಚ್ಛತಿ ।
ದದ್ಯಾತ್ಪ್ರವಸತಃ ಶ್ರಾದ್ಧಂ ನ ತತ್ಪಥ್ಯಶನಂ ಭವೇತ್ ॥೧೫॥

ದಾನಸಂವನನಾ ಹ್ಯೇತೇ ಗ್ರನ್ಥಾ ಮೇಧಾವಿಭಿಃ ಕೃತಾಃ ।
ಯಜಸ್ವ ದೇಹಿ ದೀಕ್ಷಸ್ವ ತಪಸ್ತಪ್ಯಸ್ವ ಸಂತ್ಯಜ ॥೧೬॥

ಸ ನಾಸ್ತಿ ಪರಮಿತ್ಯೇವ ಕುರು ಬುದ್ಧಿಂ ಮಹಾಮತೇ ।
ಪ್ರತ್ಯಕ್ಷಂ ಯತ್ತದಾತಿಷ್ಠ ಪರೋಕ್ಷಂ ಪೃಷ್ಠತಃ ಕುರು ॥೧೭॥

ಸತಾಂ ಬುದ್ಧಿಂ ಪುರಸ್ಕೃತ್ಯ ಸರ್ವಲೋಕನಿದರ್ಶಿನೀಮ್ ।
ರಾಜ್ಯಂ ತ್ವಂ ಪ್ರತಿಗೃಹ್ಣೀಷ್ವ ಭರತೇನ ಪ್ರಸಾದಿತಃ ॥೧೮॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಅಯೋಧ್ಯಾಕಾಣ್ಡೇ ಅಷ್ಟೋತ್ತರಶತತಮಃ ಸರ್ಗಃ

—೦—

ನವೋತ್ತರಶತತಮಃ ಸರ್ಗಃ

ಜಾಬಾಲೇಸ್ತು ವಚಃ ಶ್ರುತ್ವಾ ರಾಮಃ ಸತ್ಯಾತ್ಮನಾಂ ವರಃ ।
ಉವಾಚ ಪರಯಾ ಭಕ್ತ್ಯಾ ಬುದ್ಧ್ಯಾ ವಿಪ್ರತಿಪನ್ನಯಾ ॥೧॥

ಭವಾನ್ಮೇ ಪ್ರಿಯಕಾಮಾರ್ಥಂ ವಚನಂ ಯದಿಹೋಕ್ತವಾನ್ ।
ಅಕಾರ್ಯಂ ಕಾರ್ಯಸಂಕಾಶಮಪಥ್ಯಂ ಪಥ್ಯಸಂಮಿತಮ್ ॥೨॥

ನಿರ್ಮರ್ಯಾದಸ್ತು ಪುರುಷಃ ಪಾಪಾಚಾರಸಮನ್ವಿತಃ ।
ಮಾನಂ ನ ಲಭತೇ ಸತ್ಸು ಭಿನ್ನಚಾರಿತ್ರದರ್ಶನಃ ॥೩॥

ಕುಲೀನಮಕುಲೀನಂ ವಾ ವೀರಂ ಪುರುಷಮಾನಿನಮ್ ।
ಚಾರಿತ್ರಮೇವ ವ್ಯಾಖ್ಯಾತಿ ಶುಚಿಂ ವಾ ಯದಿ ವಾಶುಚಿಮ್ ॥೪॥
ಅನಾರ್ಯಸ್ತ್ವಾರ್ಯಸಂಕಾಶಃ ಶೌಚಾದ್ಧೀನಸ್ತಥಾ ಶುಚಿಃ ।
ಲಕ್ಷಣ್ಯವದಲಕ್ಷಣ್ಯೋ ದುಃಶೀಲಃ ಶೀಲವಾನಿವ ॥೫॥

ಅಧರ್ಮಂ ಧರ್ಮವೇಷೇಣ ಯದೀಮಂ ಲೋಕಸಂಕರಮ್ ।
ಅಭಿಪತ್ಸ್ಯೇ ಶುಭಂ ಹಿತ್ವಾ ಕ್ರಿಯಾವಿಧಿವಿವರ್ಜಿತಮ್ ॥೬॥

ಕಶ್ಚೇತಯಾನಃ ಪುರುಷಃ ಕಾರ್ಯಾಕಾರ್ಯವಿಚಕ್ಷಣಃ ।
ಬಹುಮಂಸ್ಯತಿ ಮಾಂ ಲೋಕೇ ದುರ್ವೃತ್ತಂ ಲೋಕದೂಷಣಮ್॥

ಕಸ್ಯ ಧಾಸ್ಯಾಮ್ಯಹಂ ವೃತ್ತಂ ಕೇನ ವಾ ಸ್ವರ್ಗಮಾಪ್ನುಯಾಮ್ ।
ಅನಯಾ ವರ್ತಮಾನೋಽಹಂ ವೃತ್ತ್ಯಾ ಹೀನಪ್ರತಿಜ್ಞಯಾ ॥೮॥

ಕಾಮವೃತ್ತಸ್ತ್ವಯಂ ಲೋಕಃ ಕೃತ್ಸ್ನಃ ಸಮುಪವರ್ತತೇ ।
ಯದ್ವೃತ್ತಾಃ ಸನ್ತಿ ರಾಜಾನಸ್ತದ್ವೃತ್ತಾಃ ಸನ್ತಿ ಹಿ ಪ್ರಜಾಃ ॥೯॥

ಸತ್ಯಮೇವಾನೃಶಂಸಂ ಚ ರಾಜವೃತ್ತಂ ಸನಾತನಮ್ ।
ತಸ್ಮಾತ್ಸತ್ಯಾತ್ಮಕಂ ರಾಜ್ಯಂ ಸತ್ಯೇ ಲೋಕಃ ಪ್ರತಿಷ್ಠಿತಃ ॥೧೦॥

ಋಷಯಶ್ಚೈವ ದೇವಾಶ್ಚ ಸತ್ಯಮೇವ ಹಿ ಮೇನಿರೇ ।
ಸತ್ಯವಾದೀ ಹಿ ಲೋಕೇಽಸ್ಮಿನ್ಪರಮಂ ಗಚ್ಛತಿ ಕ್ಷಯಮ್ ॥೧೧॥

ಉದ್ವಿಜನ್ತೇ ಯಥಾ ಸರ್ಪಾನ್ನರಾದನೃತವಾದಿನಃ ।
ಧರ್ಮಃ ಸತ್ಯಂ ಪರೋ ಲೋಕೇ ಮೂಲಂ ಸ್ವರ್ಗಸ್ಯ ಚೋಚ್ಯತೇ ॥

ಸತ್ಯಮೇವೇಶ್ವರೋ ಲೋಕೇ ಸತ್ಯೇ ಧರ್ಮಃ ಸದಾಶ್ರಿತಃ ।
ಸತ್ಯಮೂಲಾನಿ ಸರ್ವಾಣಿ ಸತ್ಯಾನ್ನಾಸ್ತಿ ಪರಂ ಪದಮ್ ॥೧೩॥

ದತ್ತಮಿಷ್ಟಂ ಹುತಂ ಚೈವ ತಪ್ತಾನಿ ಚ ತಪಾಂಸಿ ಚ ।
ವೇದಾಃ ಸತ್ಯಪ್ರತಿಷ್ಠಾನಾಸ್ತಸ್ಮಾತ್ಸತ್ಯಪರೋ ಭವೇತ್ ॥೧೪॥

ಏಕಃ ಪಾಲಯತೇ ಲೋಕಮೇಕಃ ಪಾಲಯತೇ ಕುಲಮ್ ।
ಮಜ್ಜತ್ಯೇಕೋ ಹಿ ನಿರಯ ಏಕಃ ಸ್ವರ್ಗೇ ಮಹೀಯತೇ ॥೧೫॥

ಸೋಽಹಂ ಪಿತುರ್ನಿಯೋಗಂ ತು ಕಿಮರ್ಥಂ ನಾನುಪಾಲಯೇ ।
ಸತ್ಯಪ್ರತಿಶ್ರವಃ ಸತ್ಯಂ ಸತ್ಯೇನ ಸಮಯೀಕೃತಃ ॥೧೬॥

ನೈವ ಲೋಭಾನ್ನ ಮೋಹಾದ್ವಾ ನ ಚಾಜ್ಞಾನಾತ್ತಮೋನ್ವಿತಃ ।
ಸೇತುಂ ಸತ್ಯಸ್ಯ ಭೇತ್ಸ್ಯಾಮಿ ಗುರೋಃ ಸತ್ಯಪ್ರತಿಶ್ರವಃ ॥೧೭॥

ಅಸತ್ಯಸಂಧಸ್ಯ ಸತಶ್ಚಲಸ್ಯಾಸ್ಥಿರಚೇತಸಃ ।
ನೈವ ದೇವಾ ನ ಪಿತರಃ ಪ್ರತೀಚ್ಛನ್ತೀತಿ ನಃ ಶ್ರುತಮ್ ॥೧೮॥

ಪ್ರತ್ಯಗಾತ್ಮಮಿಮಂ ಧರ್ಮಂ ಸತ್ಯಂ ಪಶ್ಯಾಮ್ಯಹಂ ಸ್ವಯಮ್ ।
ಭಾರಃ ಸತ್ಪುರುಷಾಚೀರ್ಣಸ್ತದರ್ಥಮಭಿಮನ್ಯತೇ ॥೧೯॥

ಕ್ಷಾತ್ರಂ ಧರ್ಮಮಹಂ ತ್ಯಕ್ಷ್ಯೇ ಹ್ಯಧರ್ಮಂ ಧರ್ಮಸಂಹಿತಮ್ ।
ಕ್ಷುದ್ರೈರ್ನೃಶಂಸೈರ್ಲುಬ್ಧೈಶ್ಚ ಸೇವಿತಂ ಪಾಪಕರ್ಮಭಿಃ ॥೨೦॥

ಕಾಯೇನ ಕುರುತೇ ಪಾಪಂ ಮನಸಾ ಸಂಪ್ರಧಾರ್ಯ ಚ ।
ಅನೃತಂ ಜಿಹ್ವಯಾ ಚಾಹ ತ್ರಿವಿಧಂ ಕರ್ಮ ಪಾತಕಮ್ ॥೨೧॥

ಭೂಮಿಃ ಕೀರ್ತಿರ್ಯಶೋ ಲಕ್ಷ್ಮೀಃ ಪುರುಷಂ ಪ್ರಾರ್ಥಯನ್ತಿ ಹಿ ।
ಸ್ವರ್ಗಸ್ಥಂ ಚಾನುಪಶ್ಯನ್ತಿ ಸತ್ಯಮೇವ ಭಜೇತ ತತ್ ॥೨೨॥

ಶ್ರೇಷ್ಠಂ ಹ್ಯನಾರ್ಯಮೇವ ಸ್ಯಾದ್ಯದ್ಭವಾನವಧಾರ್ಯ ಮಾಮ್ ।
ಆಹ ಯುಕ್ತಿಕರೈರ್ವಾಕ್ಯೈರಿದಂ ಭದ್ರಂ ಕುರುಷ್ವ ಹ ॥೨೩॥

ಕಥಂ ಹ್ಯಹಂ ಪ್ರತಿಜ್ಞಾಯ ವನವಾಸಮಿಮಂ ಗುರೌ
ಭರತಸ್ಯ ಕರಿಷ್ಯಾಮಿ ವಚೋ ಹಿತ್ವಾ ಗುರೋರ್ವಚಃ ॥೨೪॥

ಸ್ಥಿರಾ ಮಯಾ ಪ್ರತಿಜ್ಞಾತಾ ಪ್ರತಿಜ್ಞಾ ಗುರುಸಂನಿಧೌ ।
ಪ್ರಹೃಷ್ಯಮಾಣಾ ಸಾ ದೇವೀ ಕೈಕೇಯೀ ಚಾಭವತ್ತದಾ ॥೨೫॥

ವನವಾಸಂ ವಸನ್ನೇವಂ ಶುಚಿರ್ನಿಯತಭೋಜನಃ ।
ಮೂಲೈಃ ಪುಷ್ಪೈಃ ಫಲೈಃ ಪುಣ್ಯೈಃ ಪಿತೄನ್ದೇವಾಂಶ್ಚ ತರ್ಪಯನ್ ॥

ಸಂತುಷ್ಟಪಞ್ಚವರ್ಗೋಽಹಂ ಲೋಕಯಾತ್ರಾಂ ಪ್ರವರ್ತಯೇ ।
ಅಕುಹಃ ಶ್ರದ್ದಧಾನಃ ಸನ್ಕಾರ್ಯಾಕಾರ್ಯವಿಚಕ್ಷಣಃ ॥೨೭॥

ಕರ್ಮಭೂಮಿಮಿಮಾಂ ಪ್ರಾಪ್ಯ ಕರ್ತವ್ಯಂ ಕರ್ಮ ಯಚ್ಛುಭಮ್ ।
ಅಗ್ನಿರ್ವಾಯುಶ್ಚ ಸೋಮಶ್ಚ ಕರ್ಮಣಾಂ ಫಲಭಾಗಿನಃ ॥೨೮॥
ಶತಂ ಕ್ರತೂನಾಮಾಹೃತ್ಯ ದೇವರಾಟ್ ತ್ರಿದಿವಂ ಗತಃ ।
ತಪಾಂಸ್ಯುಗ್ರಾಣಿ ಚಾಸ್ಥಾಯ ದಿವಂ ಯಾತಾ ಮಹರ್ಷಯಃ ॥೨೯॥

ಅಮೃಷ್ಯಮಾಣಃ ಪುನರುಗ್ರತೇಜಾ
    ನಿಶಮ್ಯ ತನ್ನಾಸ್ತಿಕಹೇತುವಾಕ್ಯಮ್ ।
ಅಥಾಬ್ರವೀತ್ತಂ ನೃಪತೇಸ್ತನೂಜೋ
    ವಿಗರ್ಹಮಾಣೋ ವಚನಾನಿ ತಸ್ಯ ॥೩೦॥

ಸತ್ಯಂ ಚ ಧರ್ಮಂ ಚ ಪರಾಕ್ರಮಂ ಚ
    ಭೂತಾನುಕಮ್ಪಾಂ ಪ್ರಿಯವಾದಿತಾಂ ಚ ।
ದ್ವಿಜಾತಿದೇವಾತಿಥಿಪೂಜನಂ ಚ
    ಪನ್ಥಾನಮಾಹುಸ್ತ್ರಿದಿವಸ್ಯ ಸನ್ತಃ ॥೩೧॥

ತೇನೈವಮಾಜ್ಞಾಯ ಯಥಾವದರ್ಥ-
    ಮೇಕೋದಯಂ ಸಂಪ್ರತಿಪದ್ಯ ವಿಪ್ರಾಃ ।
ಧರ್ಮಂ ಚರನ್ತಃ ಸಕಲಂ ಯಥಾವ-
    ತ್ಕಾಂಕ್ಷನ್ತಿ ಲೋಕಾಗಮಮಪ್ರಮತ್ತಾಃ ॥೩೨॥

ನಿನ್ದಾಮ್ಯಹಂ ಕರ್ಮ ಪಿತುಃ ಕೃತಂ ತ-
    ದ್ಯಸ್ತ್ವಾಮಗೃಹ್ಣಾದ್ವಿಷಮಸ್ಥಬುದ್ಧಿಮ್ ।
ಬುದ್ಧ್ಯಾನಯೈವಂವಿಧಯಾ ಚರನ್ತಂ
    ಸುನಾಸ್ತಿಕಂ ಧರ್ಮಪಥಾದಪೇತಮ್ ॥೩೩॥

ಯಥಾ ಹಿ ಚೋರಃ ಸ ತಥಾ ಹಿ ಬುದ್ಧ-
    ಸ್ತಥಾಗತಂ ನಾಸ್ತಿಕಮತ್ರ ವಿದ್ಧಿ ।
ತಸ್ಮಾದ್ಧಿ ಯಃ ಶಕ್ಯತಮಃ ಪ್ರಜಾನಾಂ
    ನ ನಾಸ್ತಿಕೇನಾಭಿಮುಖೋ ಬುಧಃ ಸ್ಯಾತ್ ॥೩೪॥

ತ್ವತ್ತೋ ಜನಾಃ ಪೂರ್ವತರೇ ವರಾಶ್ಚ
    ಶುಭಾನಿ ಕರ್ಮಾಣಿ ಬಹೂನಿ ಚಕ್ರುಃ ।
ಜಿತ್ವಾ ಸದೇಮಂ ಚ ಪರಂ ಚ ಲೋಕಂ
    ತಸ್ಮಾದ್ದ್ವಿಜಾಃ ಸ್ವಸ್ತಿ ಕೃತಂ ಹುತಂ ಚ ॥೩೫॥

ಧರ್ಮೇ ರತಾಃ ಸತ್ಪುರುಷೈಃ ಸಮೇತಾ-
    ಸ್ತೇಜಸ್ವಿನೋ ದಾನಗುಣಪ್ರಧಾನಾಃ ।

ಅಹಿಂಸಕಾ ವೀತಮಲಾಶ್ಚ ಲೋಕೇ
ಭವನ್ತಿ ಪೂಜ್ಯಾ ಮುನಯಃ ಪ್ರಧಾನಾಃ ॥೩೬॥
ಇತಿ ಬ್ರುವನ್ತಂ ವಚನಂ ಸರೋಷಂ
ರಾಮಂ ಮಹಾತ್ಮಾನಮದೀನಸತ್ತ್ವಮ್ ।
ಉವಾಚ ತಥ್ಯಂ ಪುನರಾಸ್ತಿಕಂ ಚ
ಸತ್ಯಂ ವಚಃ ಸಾನುನಯಂ ಚ ವಿಪ್ರಃ ॥೩೭॥
ನ ನಾಸ್ತಿಕಾನಾಂ ವಚನಂ ಬ್ರವೀಮ್ಯಹಂ
ನ ನಾಸ್ತಿಕೋಽಹಂ ನ ಚ ನಾಸ್ತಿ ಕಿಂಚನ ।
ಸಮೀಕ್ಷ್ಯ ಕಾಲಂ ಪುನರಾಸ್ತಿಕೋಽಭವಂ
ಭವೇಯ ಕಾಲೇ ಪುನರೇವ ನಾಸ್ತಿಕಃ ॥೩೮॥
ಸ ಚಾಪಿ ಕಾಲೋಽಯಮುಪಾಗತಃ ಶನೈ-
ರ್ಯಥಾ ಮಯಾ ನಾಸ್ತಿಕವಾಗುದೀರಿತಾ ।
ನಿವರ್ತನಾರ್ಥಂ ತವ ರಾಮ ಕಾರಣಾ-
ತ್ಪ್ರಸಾದನಾರ್ಥಂ ಚ ಮಯೈತದೀರಿತಮ್ ॥೩೯॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಅಯೋಧ್ಯಾಕಾಣ್ಡೇ ನವೋತ್ತರಶತತಮಃ ಸರ್ಗಃ

—೦—

ದಶೋತ್ತರಶತತಮಃ ಸರ್ಗಃ

ಕ್ರುದ್ಧಮಾಜ್ಞಾಯ ರಾಮಂ ತು ವಸಿಷ್ಠಃ ಪ್ರತ್ಯುವಾಚ ಹ ।
ಜಾಬಾಲಿರಪಿ ಜಾನೀತೇ ಲೋಕಸ್ಯಾಸ್ಯ ಗತಾಗತಿಮ್ ॥೧॥

ನಿವರ್ತಯಿತುಕಾಮಸ್ತು ತ್ವಾಮೇತದ್ವಾಕ್ಯಮಬ್ರವೀತ್ ।
ಇಮಾಂ ಲೋಕಸಮುತ್ಪತ್ತಿಂ ಲೋಕನಾಥ ನಿಬೋಧ ಮೇ ॥೨॥

ಸರ್ವಂ ಸಲಿಲಮೇವಾಸೀತ್ಪೃಥಿವೀ ಯತ್ರ ನಿರ್ಮಿತಾ ।
ತತಃ ಸಮಭವದ್ಬ್ರಹ್ಮಾ ಸ್ವಯಂಭೂರ್ದೈವತೈಃ ಸಹ ॥೩॥

ಸ ವರಾಹಸ್ತತೋ ಭೂತ್ವಾ ಪ್ರೋಜ್ಜಹಾರ ವಸುಂಧರಾಮ್ ।
ಅಸೃಜಚ್ಚ ಜಗತ್ಸರ್ವಂ ಸಹ ಪುತ್ರೈಃ ಕೃತಾತ್ಮಭಿಃ ॥೪॥

ಆಕಾಶಪ್ರಭವೋ ಬ್ರಹ್ಮಾ ಶಾಶ್ವತೋ ನಿತ್ಯ ಅವ್ಯಯಃ ।
ತಸ್ಮಾನ್ಮರೀಚಿಃ ಸಂಜಜ್ಞೇ ಮರೀಚೇಃ ಕಾಶ್ಯಪಃ ಸುತಃ ॥೫॥

ವಿವಸ್ವಾನ್ಕಾಶ್ಯಪಾಜ್ಜಜ್ಞೇ ಮನುರ್ವೈವಸ್ವತಃ ಸುತಃ ।
ಸ ತು ಪ್ರಜಾಪತಿಃ ಪೂರ್ವಮಿಕ್ಷ್ವಾಕುಸ್ತು ಮನೋಃ ಸುತಃ ॥೬॥

ಯಸ್ಯೇಯಂ ಪ್ರಥಮಂ ದತ್ತಾ ಸಮೃದ್ಧಾ ಮನುನಾ ಮಹೀ ।
ತಮಿಕ್ಷ್ವಾಕುಮಯೋಧ್ಯಾಯಾಂ ರಾಜಾನಂ ವಿದ್ಧಿ ಪೂರ್ವಕಮ್ ॥

ಇಕ್ಷ್ವಾಕೋಸ್ತು ಸುತಃ ಶ್ರೀಮಾನ್ಕುಕ್ಷಿರಿತ್ಯೇವ ವಿಶ್ರುತಃ ।
ಕುಕ್ಷೇರಥಾತ್ಮಜೋ ವೀರೋ ವಿಕುಕ್ಷಿರುದಪದ್ಯತ ॥೮॥

ವಿಕುಕ್ಷೇಸ್ತು ಮಹಾತೇಜಾ ಬಾಣಃ ಪುತ್ರಃ ಪ್ರತಾಪವಾನ್ ।
ಬಾಣಸ್ಯ ತು ಮಹಾಬಾಹುರನರಣ್ಯೋ ಮಹಾಯಶಾಃ ॥೯॥

ನಾನಾವೃಷ್ಟಿರ್ಬಭೂವಾಸ್ಮಿನ್ನ ದುರ್ಭಿಕ್ಷಂ ಸತಾಂ ವರೇ ।
ಅನರಣ್ಯೇ ಮಹಾರಾಜೇ ತಸ್ಕರೋ ನಾಪಿ ಕಶ್ಚನ ॥೧೦॥

ಅನರಣ್ಯಾನ್ಮಹಾಬಾಹುಃ ಪೃಥೂ ರಾಜಾ ಬಭೂವ ಹ ।
ತಸ್ಮಾತ್ಪೃಥೋರ್ಮಹಾತೇಜಾಸ್ತ್ರಿಶಙ್ಕುರುದಪದ್ಯತ ॥೧೧॥

ಸ ಸತ್ಯವಚನಾದ್ವೀರಃ ಸಶರೀರೋ ದಿವಂ ಗತಃ ।
ತ್ರಿಶಙ್ಕೋರಭವತ್ಸೂನುರ್ಧುನ್ಧುಮಾರೋ ಮಹಾಯಶಾಃ ॥೧೨॥

ಧುನ್ಧುಮಾರಾನ್ಮಹಾತೇಜಾ ಯುವನಾಶ್ವೋ ವ್ಯಜಾಯತ ।
ಯುವನಾಶ್ವಸುತಃ ಶ್ರೀಮಾನ್ಮಾಂಧಾತಾ ಸಮಪದ್ಯತ ॥೧೩॥

ಮಾಂಧಾತುಸ್ತು ಮಹಾತೇಜಾಃ ಸುಸಂಧಿರುದಪದ್ಯತ ।
ಸುಸಂಧೇರಪಿ ಪುತ್ರೌ ದ್ವೌ ಧ್ರುವಸಂಧಿಃ ಪ್ರಸೇನಜಿತ್ ॥೧೪॥

ಯಶಸ್ವೀ ಧ್ರುವಸಂಧೇಸ್ತು ಭರತೋ ರಿಪುಸೂದನಃ ।
ಭರತಾತ್ತು ಮಹಾಬಾಹೋರಸಿತೋ ನಾಮತೋಽಭವತ್ ॥೧೫॥
ಯಸ್ಯೈತೇ ಪ್ರತಿರಾಜಾನ ಉದಪದ್ಯನ್ತ ಶತ್ರವಃ ।
ಹೈಹಯಾಸ್ತಾಲಜಙ್ಘಾಶ್ಚ ಶೂರಾಶ್ಚ ಶಶಿಬಿಂದವಃ ॥೧೬॥

ತಾಂಸ್ತು ಸರ್ವಾನ್ಪ್ರತಿವ್ಯೂಹ್ಯ ಯುದ್ಧೇ ರಾಜಾ ಪ್ರವಾಸಿತಃ ।
ಸ ಚ ಶೈಲವರೇ ರಮ್ಯೇ ಬಭೂವಾಭಿರತೋ ಮುನಿಃ ॥೧೭॥

ದ್ವೇ ಚಾಸ್ಯ ಭಾರ್ಯೇ ಗರ್ಭಿಣ್ಯೌ ಬಭೂವತುರಿತಿ ಶ್ರುತಿಃ ।
ತತ್ರ ಚೈಕಾ ಮಹಾಭಾಗಾ ಭಾರ್ಗವಂ ದೇವವರ್ಚಸಮ್ ॥೧೮॥

ವವನ್ದೇ ಪದ್ಮಪತ್ರಾಕ್ಷೀ ಕಾಂಕ್ಷಿಣೀ ಪುತ್ರಮುತ್ತಮಮ್ ।
ಏಕಾ ಗರ್ಭವಿನಾಶಾಯ ಸಪತ್ನ್ಯೈ ಗರಲಂ ದದೌ ॥೧೯॥

ಭಾರ್ಗವಶ್ಚ್ಯವನೋ ನಾಮ ಹಿಮವನ್ತಮುಪಾಶ್ರಿತಃ ।
ತಮೃಷಿಂ ಸಾಭ್ಯುಪಾಗಮ್ಯ ಕಾಲಿನ್ದೀ ತ್ವಭ್ಯವಾದಯತ್ ॥೨೦॥

ಸ ತಾಮಭ್ಯವದತ್ಪ್ರೀತೋ ವರೇಪ್ಸು ಪುತ್ರಜನ್ಮನಿ ।
ಪುತ್ರಸ್ತೇ ಭವಿತಾ ದೇವಿ ಮಹಾತ್ಮಾ ಲೋಕವಿಶ್ರುತಃ ॥೨೧॥

ಧಾರ್ಮಿಕಶ್ಚ ಸುಶೀಲಶ್ಚ ವಂಶಕರ್ತಾರಿಸೂದನಃ ।
ಕೃತ್ವಾ ಪ್ರದಕ್ಷಿಣಂ ಹೃಷ್ಟಾ ಮುನಿಂ ತಮನುಮಾನ್ಯ ಚ ॥೨೨॥

ಪದ್ಮಪತ್ರಸಮಾನಾಕ್ಷಂ ಪದ್ಮಗರ್ಭಸಮಪ್ರಭಮ್ ।
ತತಃ ಸಾ ಗೃಹಮಾಗಮ್ಯ ದೇವೀ ಪುತ್ರಂ ವ್ಯಜಾಯತ ॥೨೩॥

ಸಪತ್ನ್ಯಾ ತು ಗರಸ್ತಸ್ಯೈ ದತ್ತೋ ಗರ್ಭಜಿಘಾಂಸಯಾ ।
ಗರೇಣ ಸಹ ತೇನೈವ ಜಾತಃ ಸ ಸಗರೋಽಭವತ್ ॥೨೪॥

ಸ ರಾಜಾ ಸಗರೋ ನಾಮ ಯಃ ಸಮುದ್ರಮಖಾನಯತ್ ।
ಇಷ್ಟ್ವಾ ಪರ್ವಣಿ ವೇಗೇನ ತ್ರಾಸಯಾನ ಇಮಾಃ ಪ್ರಜಾಃ ॥೨೫॥

ಅಸಮಞ್ಜಸ್ತು ಪುತ್ರೋಽಭೂತ್ಸಗರಸ್ಯೇತಿ ನಃ ಶ್ರುತಮ್ ।
ಜೀವನ್ನೇವ ಸ ಪಿತ್ರಾ ತು ನಿರಸ್ತಃ ಪಾಪಕರ್ಮಕೃತ್ ॥೨೬॥

ಅಂಶುಮಾನಿತಿ ಪುತ್ರೋಽಭೂದಸಮಞ್ಜಸ್ಯ ವೀರ್ಯವಾನ್ ।
ದಿಲೀಪೋಽಂಶುಮತಃ ಪುತ್ರೋ ದಿಲೀಪಸ್ಯ ಭಗೀರಥಃ ॥೨೭॥

ಭಗೀರಥಾತ್ಕಕುತ್ಸ್ಥಶ್ಚ ಕಾಕುತ್ಸ್ಥಾ ಯೇನ ವಿಶ್ರುತಾಃ ।
ಕಕುತ್ಸ್ಥಸ್ಯ ತು ಪುತ್ರೋಽಭೂದ್ರಘುರ್ಯೇನ ತು ರಾಘವಾಃ ॥೨೮॥

ರಘೋಸ್ತು ಪುತ್ರಸ್ತೇಜಸ್ವೀ ಪ್ರವೃದ್ಧಃ ಪುರುಷಾದಕಃ ।
ಕಲ್ಮಾಷಪಾದಃ ಸೌದಾಸ ಇತ್ಯೇವಂ ಪ್ರಥಿತೋ ಭುವಿ ॥೨೯॥

ಕಲ್ಮಾಷಪಾದಪುತ್ರೋಽಭೂಚ್ಛಙ್ಖಣಸ್ತ್ವಿತಿ ವಿಶ್ರುತಃ ।
ಯಸ್ತು ತದ್ವೀರ್ಯಮಾಸಾದ್ಯ ಸಹಸೇನೋ ವ್ಯನೀನಶತ್ ॥೩೦॥

ಶಙ್ಖಣಸ್ಯ ತು ಪುತ್ರೋಽಭೂಚ್ಛೂರಃ ಶ್ರೀಮಾನ್ಸುದರ್ಶನಃ ।
ಸುದರ್ಶನಸ್ಯಾಗ್ನಿವರ್ಣ ಅಗ್ನಿವರ್ಣಸ್ಯ ಶೀಘ್ರಗಃ ॥೩೧॥

ಶೀಘ್ರಗಸ್ಯ ಮರುಃ ಪುತ್ರೋ ಮರೋಃ ಪುತ್ರಃ ಪ್ರಶುಶ್ರುಕಃ ।
ಪ್ರಶುಶ್ರುಕಸ್ಯ ಪುತ್ರೋಽಭೂದಮ್ಬರೀಷೋ ಮಹಾದ್ಯುತಿಃ ॥೩೨॥

ಅಮ್ಬರೀಷಸ್ಯ ಪುತ್ರೋಽಭೂನ್ನಹುಷಃ ಸತ್ಯವಿಕ್ರಮಃ ।
ನಹುಷಸ್ಯ ಚ ನಾಭಾಗಃ ಪುತ್ರಃ ಪರಮಧಾರ್ಮಿಕಃ ॥೩೩॥

ಅಜಶ್ಚ ಸುವ್ರತಶ್ಚೈವ ನಾಭಾಗಸ್ಯ ಸುತಾವುಭೌ ।
ಅಜಸ್ಯ ಚೈವ ಧರ್ಮಾತ್ಮಾ ರಾಜಾ ದಶರಥಃ ಸುತಃ ।
ಯೋ ಜಿತ್ವಾ ವಸುಧಾಂ ಕೃತ್ಸ್ನಾಂ ದಿವಂ ಶಾಸತಿ ಸ ಪ್ರಭುಃ ॥೩೪॥

ತಸ್ಯ ಜ್ಯೇಷ್ಠೋಽಸಿ ದಾಯಾದೋ ರಾಮ ಇತ್ಯಭಿವಿಶ್ರುತಃ ।
ತದ್ಗೃಹಾಣ ಸ್ವಕಂ ರಾಜ್ಯಮವೇಕ್ಷಸ್ವ ಜನಂ ನೃಪ ॥೩೫॥

ಇಕ್ಷ್ವಾಕೂಣಾಂ ಹಿ ಸರ್ವೇಷಾಂ ರಾಜಾ ಭವತಿ ಪೂರ್ವಜಃ ।
ಪೂರ್ವಜೇ ನಾವರಃ ಪುತ್ರೋ ಜ್ಯೇಷ್ಠೋ ರಾಜ್ಯೇಽಭಿಷಿಚ್ಯತೇ ॥೩೬॥

ಸ ರಾಘವಾಣಾಂ ಕುಲಧರ್ಮಮಾತ್ಮನಃ
ಸನಾತನಂ ನಾದ್ಯ ವಿಹನ್ತುಮರ್ಹಸಿ ।
ಪ್ರಭೂತರತ್ನಾಮನುಶಾಧಿ ಮೇದಿನೀಂ
ಪ್ರಭೂತರಾಷ್ಟ್ರಾಂ ಪಿತೃವನ್ಮಹಾಯಶಃ ॥೩೭॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಅಯೋಧ್ಯಾಕಾಣ್ಡೇ ದಶೋತ್ತರಶತತಮಃ ಸರ್ಗಃ

—೦—

ಏಕಾದಶೋತ್ತರಶತತಮಃ ಸರ್ಗಃ

ವಸಿಷ್ಠಸ್ತು ತದಾ ರಾಮಮುಕ್ತ್ವಾ ರಾಜಪುರೋಹಿತಃ ।
ಅಬ್ರವೀದ್ಧರ್ಮಸಂಯುಕ್ತಂ ಪುನರೇವಾಪರಂ ವಚಃ ॥೧॥

ಪುರುಷಸ್ಯೇಹ ಜಾತಸ್ಯ ಭವನ್ತಿ ಗುರವಸ್ತ್ರಯಃ ।
ಆಚಾರ್ಯಶ್ಚೈವ ಕಾಕುತ್ಸ್ಥ ಪಿತಾ ಮಾತಾ ಚ ರಾಘವ ॥೨॥

ಪಿತಾ ಹ್ಯೇನಂ ಜನಯತಿ ಪುರುಷಂ ಪುರುಷರ್ಷಭ ।
ಪ್ರಜ್ಞಾಂ ದದಾತಿ ಚಾಚಾರ್ಯಸ್ತಸ್ಮಾತ್ಸ ಗುರುರುಚ್ಯತೇ ॥೩॥

ಸೋಽಹಂ ತೇ ಪಿತುರಾಚಾರ್ಯಸ್ತವ ಚೈವ ಪರಂತಪ ।
ಮಮ ತ್ವಂ ವಚನಂ ಕುರ್ವನ್ನಾತಿವರ್ತೇಃ ಸತಾಂ ಗತಿಮ್ ॥೪॥

ಇಮಾ ಹಿ ತೇ ಪರಿಷದಃ ಶ್ರೇಣಯಶ್ಚ ದ್ವಿಜಾಸ್ತಥಾ ।
ಏಷು ತಾತ ಚರನ್ಧರ್ಮಂ ನಾತಿವರ್ತೇಃ ಸತಾಂ ಗತಿಮ್ ॥೫॥

ವೃದ್ಧಾಯಾ ಧರ್ಮಶೀಲಾಯಾ ಮಾತುರ್ನಾರ್ಹಸ್ಯವರ್ತಿತುಮ್ ।
ಅಸ್ಯಾಸ್ತು ವಚನಂ ಕುರ್ವನ್ನಾತಿವರ್ತೇಃ ಸತಾಂ ಗತಿಮ್ ॥೬॥

ಭರತಸ್ಯ ವಚಃ ಕುರ್ವನ್ಯಾಚಮಾನಸ್ಯ ರಾಘವ ।
ಆತ್ಮಾನಂ ನಾತಿವರ್ತೇಸ್ತ್ವಂ ಸತ್ಯಧರ್ಮಪರಾಕ್ರಮ ॥೭॥

ಏವಂ ಮಧುರಮುಕ್ತಸ್ತು ಗುರುಣಾ ರಾಘವಃ ಸ್ವಯಮ್ ।
ಪ್ರತ್ಯುವಾಚ ಸಮಾಸೀನಂ ವಸಿಷ್ಠಂ ಪುರುಷರ್ಷಭಃ ॥೮॥

ಯನ್ಮಾತಾಪಿತರೌ ವೃತ್ತಂ ತನಯೇ ಕುರುತಃ ಸದಾ ।
ನ ಸುಪ್ರತಿಕರಂ ತತ್ತು ಮಾತ್ರಾ ಪಿತ್ರಾ ಚ ಯತ್ಕೃತಮ್ ॥೯॥

ಯಥಾಶಕ್ತಿ ಪ್ರದಾನೇನ ಸ್ನಾಪನೋಚ್ಛಾದನೇನ ಚ ।
ನಿತ್ಯಂ ಚ ಪ್ರಿಯವಾದೇನ ತಥಾ ಸಂವರ್ಧನೇನ ಚ ॥೧೦॥

ಸ ಹಿ ರಾಜಾ ದಶರಥಃ ಪಿತಾ ಜನಯಿತಾ ಮಮ ।
ಆಜ್ಞಾತಂ ಯನ್ಮಯಾ ತಸ್ಯ ನ ತನ್ಮಿಥ್ಯಾ ಭವಿಷ್ಯತಿ ॥೧೧॥

ಏವಮುಕ್ತಸ್ತು ರಾಮೇಣ ಭರತಃ ಪ್ರತ್ಯನನ್ತರಮ್ ।
ಉವಾಚ ವಿಪುಲೋರಸ್ಕಃ ಸೂತಂ ಪರಮದುರ್ಮನಾಃ ॥೧೨॥

ಇಹ ಮೇ ಸ್ಥಣ್ಡಿಲೇ ಶೀಘ್ರಂ ಕುಶಾನಾಸ್ತರ ಸಾರಥೇ ।
ಆರ್ಯಂ ಪ್ರತ್ಯುಪವೇಕ್ಷ್ಯಾಮಿ ಯಾವನ್ಮೇ ನ ಪ್ರಸೀದತಿ ॥೧೩॥

ನಿರಾಹಾರೋ ನಿರಾಲೋಕೋ ಧನಹೀನೋ ಯಥಾ ದ್ವಿಜಃ ।
ಶೇಷ್ಯೇ ಪುರಸ್ತಾಚ್ಛಾಲಾಯಾ ಯಾವನ್ನ ಪ್ರತಿಯಾಸ್ಯತಿ ॥೧೪॥

ಸ ತು ರಾಮಮವೇಕ್ಷನ್ತಂ ಸುಮನ್ತ್ರಂ ಪ್ರೇಕ್ಷ್ಯ ದುರ್ಮನಾಃ ।
ಕುಶೋತ್ತರಮುಪಸ್ಥಾಪ್ಯ ಭೂಮಾವೇವಾಸ್ತರತ್ಸ್ವಯಮ್ ॥೧೫॥

ತಮುವಾಚ ಮಹಾತೇಜಾ ರಾಮೋ ರಾಜರ್ಷಿಸತ್ತಮಃ ।
ಕಿಂ ಮಾಂ ಭರತ ಕುರ್ವಾಣಂ ತಾತ ಪ್ರತ್ಯುಪವೇಕ್ಷ್ಯಸಿ ॥೧೬॥

ಬ್ರಾಹ್ಮಣೋ ಹ್ಯೇಕಪಾರ್ಶ್ವೇನ ನರಾನ್ರೋದ್ಧುಮಿಹಾರ್ಹತಿ ।
ನ ತು ಮೂರ್ಧಾಭಿಷಿಕ್ತಾನಾಂ ವಿಧಿಃ ಪ್ರತ್ಯುಪವೇಶನೇ ॥೧೭॥

ಉತ್ತಿಷ್ಠ ನರಶಾರ್ದೂಲ ಹಿತ್ವೈತದ್ದಾರುಣಂ ವ್ರತಮ್ ।
ಪುರವರ್ಯಾಮಿತಃ ಕ್ಷಿಪ್ರಮಯೋಧ್ಯಾಂ ಯಾಹಿ ರಾಘವ ॥೧೮॥

ಆಸೀನಸ್ತ್ವೇವ ಭರತಃ ಪೌರಜಾನಪದಂ ಜನಮ್ ।
ಉವಾಚ ಸರ್ವತಃ ಪ್ರೇಕ್ಷ್ಯ ಕಿಮಾರ್ಯಂ ನಾನುಶಾಸಥ ॥೧೯॥

ತೇ ತಮೂಚುರ್ಮಹಾತ್ಮಾನಂ ಪೌರಜಾನಪದಾ ಜನಾಃ ।
ಕಾಕುತ್ಸ್ಥಮಭಿಜಾನೀಮಃ ಸಮ್ಯಗ್ವದತಿ ರಾಘವಃ ॥೨೦॥

ಏಷೋಽಪಿ ಹಿ ಮಹಾಭಾಗಃ ಪಿತುರ್ವಚಸಿ ತಿಷ್ಠತಿ ।
ಅತ ಏವ ನ ಶಕ್ತಾಃ ಸ್ಮೋ ವ್ಯಾವರ್ತಯಿತುಮಞ್ಜಸಾ ॥೨೧॥

ತೇಷಾಮಾಜ್ಞಾಯ ವಚನಂ ರಾಮೋ ವಚನಮಬ್ರವೀತ್ ।
ಏವಂ ನಿಬೋಧ ವಚನಂ ಸುಹೃದಾಂ ಧರ್ಮಚಕ್ಷುಷಾಮ್ ॥೨೨॥

ಏತಚ್ಚೈವೋಭಯಂ ಶ್ರುತ್ವಾ ಸಮ್ಯಕ್ಸಂಪಶ್ಯ ರಾಘವ ।
ಉತ್ತಿಷ್ಠ ತ್ವಂ ಮಹಾಬಾಹೋ ಮಾಂ ಚ ಸ್ಪೃಶ ತಥೋದಕಮ್ ॥

ಅಥೋತ್ಥಾಯ ಜಲಂ ಸ್ಪೃಷ್ಟ್ವಾ ಭರತೋ ವಾಕ್ಯಮಬ್ರವೀತ್ ।
ಶೃಣ್ವನ್ತು ಮೇ ಪರಿಷದೋ ಮನ್ತ್ರಿಣಃ ಶ್ರೇಣಯಸ್ತಥಾ ॥೨೪॥

ನ ಯಾಚೇ ಪಿತರಂ ರಾಜ್ಯಂ ನಾನುಶಾಸಾಮಿ ಮಾತರಮ್ ।
ಆರ್ಯಂ ಪರಮಧರ್ಮಜ್ಞಂ ನಾನುಜಾನಾಮಿ ರಾಘವಮ್ ॥೨೫॥

ಯದಿ ತ್ವವಶ್ಯಂ ವಸ್ತವ್ಯಂ ಕರ್ತವ್ಯಂ ಚ ಪಿತುರ್ವಚಃ ।
ಅಹಮೇವ ನಿವತ್ಸ್ಯಾಮಿ ಚತುರ್ದಶ ಸಮಾ ವನೇ ॥೨೬॥

ಧರ್ಮಾತ್ಮಾ ತಸ್ಯ ತಥ್ಯೇನ ಭ್ರಾತುರ್ವಾಕ್ಯೇನ ವಿಸ್ಮಿತಃ ।
ಉವಾಚ ರಾಮಃ ಸಂಪ್ರೇಕ್ಷ್ಯ ಪೌರಜಾನಪದಂ ಜನಮ್ ॥೨೭॥

ವಿಕ್ರೀತಮಾಹಿತಂ ಕ್ರೀತಂ ಯತ್ಪಿತ್ರಾ ಜೀವತಾ ಮಮ ।
ನ ತಲ್ಲೋಪಯಿತುಂ ಶಕ್ಯಂ ಮಯಾ ವಾ ಭರತೇನ ವಾ ॥೨೮॥

ಉಪಾಧಿರ್ನ ಮಯಾ ಕಾರ್ಯೋ ವನವಾಸೇ ಜುಗುಪ್ಸಿತಃ ।
ಯುಕ್ತಮುಕ್ತಂ ಚ ಕೈಕೇಯ್ಯಾ ಪಿತ್ರಾ ಮೇ ಸುಕೃತಂ ಕೃತಮ್ ॥

ಜಾನಾಮಿ ಭರತಂ ಕ್ಷಾನ್ತಂ ಗುರುಸತ್ಕಾರಕಾರಿಣಮ್ ।
ಸರ್ವಮೇವಾತ್ರ ಕಲ್ಯಾಣಂ ಸತ್ಯಸಂಧೇ ಮಹಾತ್ಮನಿ ॥೩೦॥

ಅನೇನ ಧರ್ಮಶೀಲೇನ ವನಾತ್ಪ್ರತ್ಯಾಗತಃ ಪುನಃ ।
ಭ್ರಾತ್ರಾ ಸಹ ಭವಿಷ್ಯಾಮಿ ಪೃಥಿವ್ಯಾಃ ಪತಿರುತ್ತಮಃ ॥೩೧॥

ವೃತೋ ರಾಜಾ ಹಿ ಕೈಕೇಯ್ಯಾ ಮಯಾ ತದ್ವಚನಂ ಕೃತಮ್ ।
ಅನೃತಾನ್ಮೋಚಯಾನೇನ ಪಿತರಂ ತಂ ಮಹೀಪತಿಮ್ ॥೩೨॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಅಯೋಧ್ಯಾಕಾಣ್ಡೇ ಏಕಾದಶೋತ್ತರಶತತಮಃ ಸರ್ಗಃ

—o—

ದ್ವಾದಶೋತ್ತರಶತತಮಃ ಸರ್ಗಃ

ತಮಪ್ರತಿಮತೇಜೋಭ್ಯಾಂ ಭ್ರಾತೃಭ್ಯಾಂ ರೋಮಹರ್ಷಣಮ್ ।
ವಿಸ್ಮಿತಾಃ ಸಂಗಮಂ ಪ್ರೇಕ್ಷ್ಯ ಸಮವೇತಾ ಮಹರ್ಷಯಃ ॥೧॥

ಅನ್ತರ್ಹಿತಾಸ್ತ್ವೃಷಿಗಣಾಃ ಸಿದ್ಧಾಶ್ಚ ಪರಮರ್ಷಯಃ ।
ತೌ ಭ್ರಾತರೌ ಮಹಾತ್ಮಾನೌ ಕಾಕುತ್ಸ್ಥೌ ಪ್ರಶಶಂಸಿರೇ ॥೨॥

ಸದಾರ್ಯೌ ರಾಜಪುತ್ರೌ ದ್ವೌ ಧರ್ಮಜ್ಞೌ ಧರ್ಮವಿಕ್ರಮೌ ।
ಶ್ರುತ್ವಾ ವಯಂ ಹಿ ಸಂಭಾಷಾಮುಭಯೋಃ ಸ್ಪೃಹಯಾಮಹೇ ॥

ತತಸ್ತ್ವೃಷಿಗಣಾಃ ಕ್ಷಿಪ್ರಂ ದಶಗ್ರೀವವಧೈಷಿಣಃ ।
ಭರತಂ ರಾಜಶಾರ್ದೂಲಮಿತ್ಯೂಚುಃ ಸಂಗತಾ ವಚಃ ॥೪॥

ಕುಲೇ ಜಾತ ಮಹಾಪ್ರಾಜ್ಞ ಮಹಾವೃತ್ತ ಮಹಾಯಶಃ ।
ಗ್ರಾಹ್ಯಂ ರಾಮಸ್ಯ ವಾಕ್ಯಂ ತೇ ಪಿತರಂ ಯದ್ಯವೇಕ್ಷಸೇ ॥೫॥

ಸದಾನೃಣಮಿಮಂ ರಾಮಂ ವಯಮಿಚ್ಛಾಮಹೇ ಪಿತುಃ ।
ಅನೃಣತ್ವಾಚ್ಚ ಕೈಕೇಯ್ಯಾಃ ಸ್ವರ್ಗಂ ದಶರಥೋ ಗತಃ ॥೬॥

ಏತಾವದುಕ್ತ್ವಾ ವಚನಂ ಗನ್ಧರ್ವಾಃ ಸಮಹರ್ಷಯಃ ।
ರಾಜರ್ಷಯಶ್ಚೈವ ತದಾ ಸರ್ವೇ ಸ್ವಾಂ ಸ್ವಾಂ ಗತಿಂ ಗತಾಃ ॥೭॥

ಹ್ಲಾದಿತಸ್ತೇನ ವಾಕ್ಯೇನ ಶುಭೇನ ಶುಭದರ್ಶನಃ ।
ರಾಮಃ ಸಂಹೃಷ್ಟವದನಸ್ತಾನೃಷೀನಭ್ಯಪೂಜಯತ್ ॥೮॥

ತ್ರಸ್ತಗಾತ್ರಸ್ತು ಭರತಃ ಸ ವಾಚಾ ಸಜ್ಜಮಾನಯಾ ।
ಕೃತಾಞ್ಜಲಿರಿದಂ ವಾಕ್ಯಂ ರಾಘವಂ ಪುನರಬ್ರವೀತ್ ॥೯॥

ರಾಜಧರ್ಮಮನುಪ್ರೇಕ್ಷ್ಯ ಕುಲಧರ್ಮಾನುಸಂತತಿಮ್ ।
ಕರ್ತುಮರ್ಹಸಿ ಕಾಕುತ್ಸ್ಥ ಮಮ ಮಾತುಶ್ಚ ಯಾಚನಾಮ್ ॥೧೦॥

ರಕ್ಷಿತುಂ ಸುಮಹದ್ರಾಜ್ಯಮಹಮೇಕಸ್ತು ನೋತ್ಸಹೇ ।
ಪೌರಜಾನಪದಾಂಶ್ಚಾಪಿ ರಕ್ತಾನ್ರಞ್ಜಯಿತುಂ ತಥಾ ॥೧೧॥

ಜ್ಞಾತಯಶ್ಚಾಪಿ ಯೋಧಾಶ್ಚ ಮಿತ್ರಾಣಿ ಸುಹೃದಶ್ಚ ನಃ ।
ತ್ವಾಮೇವ ಪ್ರತಿಕಾಂಕ್ಷನ್ತೇ ಪರ್ಜನ್ಯಮಿವ ಕರ್ಷಕಾಃ ॥೧೨॥

ಇದಂ ರಾಜ್ಯಂ ಮಹಾಪ್ರಾಜ್ಞ ಸ್ಥಾಪಯ ಪ್ರತಿಪದ್ಯ ಹಿ ।
ಶಕ್ತಿಮಾನಸಿ ಕಾಕುತ್ಸ್ಥ ಲೋಕಸ್ಯ ಪರಿಪಾಲನೇ ॥೧೩॥

ಇತ್ಯುಕ್ತ್ವಾ ನ್ಯಪತದ್ಭ್ರಾತುಃ ಪಾದಯೋರ್ಭರತಸ್ತದಾ ।
ಭೃಶಂ ಸಂಪ್ರಾರ್ಥಯಾಮಾಸ ರಾಮಮೇವ ಪ್ರಿಯಂವದಃ ॥೧೪॥

ತಮಙ್ಕೇ ಭ್ರಾತರಂ ಕೃತ್ವಾ ರಾಮೋ ವಚನಮಬ್ರವೀತ್ ।
ಶ್ಯಾಮಂ ನಳಿನಪತ್ರಾಕ್ಷಂ ಮತ್ತಹಂಸಸ್ವರಂ ಸ್ವಯಮ್ ॥೧೫॥

ಆಗತಾ ತ್ವಾಮಿಯಂ ಬುದ್ಧಿಃ ಸ್ವಜಾ ವೈನಯಿಕೀ ಚ ಯಾ ।
ಭೃಶಮುತ್ಸಹಸೇ ತಾತ ರಕ್ಷಿತುಂ ಪೃಥಿವೀಮಪಿ ॥೧೬॥

ಅಮಾತ್ಯೈಶ್ಚ ಸುಹೃದ್ಭಿಶ್ಚ ಬುದ್ಧಿಮದ್ಭಿಶ್ಚ ಮನ್ತ್ರಿಭಿಃ ।
ಸರ್ವಕಾರ್ಯಾಣಿ ಸಂಮನ್ತ್ರ್ಯ ಸುಮಹಾನ್ತ್ಯಪಿ ಕಾರಯ ॥೧೭॥

ಲಕ್ಷ್ಮೀಶ್ಚನ್ದ್ರಾದಪೇಯಾದ್ವಾ ಹಿಮವಾನ್ವಾ ಹಿಮಂ ತ್ಯಜೇತ್ ।
ಅತೀಯಾತ್ಸಾಗರೋ ವೇಲಾಂ ನ ಪ್ರತಿಜ್ಞಾಮಹಂ ಪಿತುಃ ॥೧೮॥

ಕಾಮಾದ್ವಾ ತಾತ ಲೋಭಾದ್ವಾ ಮಾತ್ರಾ ತುಭ್ಯಮಿದಂ ಕೃತಮ್ ।
ನ ತನ್ಮನಸಿ ಕರ್ತವ್ಯಂ ವರ್ತಿತವ್ಯಂ ಚ ಮಾತೃವತ್ ॥೧೯॥

ಏವಂ ಬ್ರುವಾಣಂ ಭರತಃ ಕೌಸಲ್ಯಾಸುತಮಬ್ರವೀತ್ ।
ತೇಜಸಾದಿತ್ಯಸಂಕಾಶಂ ಪ್ರತಿಪಚ್ಚನ್ದ್ರದರ್ಶನಮ್ ॥೨೦॥

ಅಧಿರೋಹಾರ್ಯ ಪಾದಾಭ್ಯಾಂ ಪಾದುಕೇ ಹೇಮಭೂಷಿತೇ ।
ಏತೇ ಹಿ ಸರ್ವಲೋಕಸ್ಯ ಯೋಗಕ್ಷೇಮಂ ವಿಧಾಸ್ಯತಃ ॥೨೧॥

ಸೋಽಧಿರುಹ್ಯ ನರವ್ಯಾಘ್ರಃ ಪಾದುಕೇ ಹ್ಯವರುಹ್ಯ ಚ ।
ಪ್ರಾಯಚ್ಛತ್ಸುಮಹಾತೇಜಾ ಭರತಾಯ ಮಹಾತ್ಮನೇ ॥೨೨॥

ಸ ಪಾದುಕೇ ಸಂಪ್ರಣಮ್ಯ ರಾಮಂ ವಚನಮಬ್ರವೀತ್ ।
ಚತುರ್ದಶ ಹಿ ವರ್ಷಾಣಿ ಜಟಾಚೀರಧರೋ ಹ್ಯಹಮ್ ॥೨೩॥

ಫಲಮೂಲಾಶನೋ ವೀರ ಭವೇಯಂ ರಘುನನ್ದನ ॥೨೪॥

ತವಾಗಮನಮಾಕಾಂಕ್ಷನ್ವಸನ್ವೈ ನಗರಾದ್ಬಹಿಃ ।
ತವ ಪಾದುಕಯೋರ್ನ್ಯಸ್ತರಾಜ್ಯತನ್ತ್ರಃ ಪರಂತಪ ॥೨೫॥

ಚತುರ್ದಶೇ ಹಿ ಸಂಪೂರ್ಣೇ ವರ್ಷೇಽಹನಿ ರಘೂತ್ತಮ ।
ನ ದ್ರಕ್ಷ್ಯಾಮಿ ಯದಿ ತ್ವಾಂ ತು ಪ್ರವೇಕ್ಷ್ಯಾಮಿ ಹುತಾಶನಮ್ ॥

ತಥೇತಿ ಚ ಪ್ರತಿಜ್ಞಾಯ ತಂ ಪರಿಷ್ವಜ್ಯ ಸಾದರಮ್ ।
ಶತ್ರುಘ್ನಂ ಚ ಪರಿಷ್ವಜ್ಯ ಭರತಂ ಚೇದಮಬ್ರವೀತ್ ॥೨೭॥

ಮಾತರಂ ರಕ್ಷ ಕೈಕೇಯೀಂ ಮಾ ರೋಷಂ ಕುರು ತಾಂ ಪ್ರತಿ ।
ಮಯಾ ಚ ಸೀತಯಾ ಚೈವ ಶಪ್ತೋಽಸಿ ರಘುಸತ್ತಮ ।
ಇತ್ಯುಕ್ತ್ವಾಶ್ರುಪರೀತಾಕ್ಷೋ ಭ್ರಾತರಂ ವಿಸಸರ್ಜ ಹ ॥೨೮॥

ಸ ಪಾದುಕೇ ತೇ ಭರತಃ ಪ್ರತಾಪವಾನ್
ಸ್ವಲಂಕೃತೇ ಸಂಪರಿಪೂಜ್ಯ ಧರ್ಮವಿತ್ ।
ಪ್ರದಕ್ಷಿಣಂ ಚೈವ ಚಕಾರ ರಾಘವಂ
ಚಕಾರ ಚೈವೋತ್ತಮನಾಗಮೂರ್ಧನಿ ॥೨೯॥

ಅಥಾನುಪೂರ್ವ್ಯಾತ್ಪ್ರತಿನನ್ದ್ಯ ತಂ ಜನಂ
ಗುರೂಂಶ್ಚ ಮನ್ತ್ರಿಪ್ರಕೃತೀಸ್ತಥಾನುಜೌ ।
ವ್ಯಸರ್ಜಯದ್ರಾಘವವಂಶವರ್ಧನಃ
ಸ್ಥಿರಃ ಸ್ವಧರ್ಮೇ ಹಿಮವಾನಿವಾಚಲಃ ॥೩೦॥

ತಂ ಮಾತರೋ ಬಾಷ್ಪಗೃಹೀತಕಣ್ಠ್ಯೋ
ದುಃಖೇನ ನಾಮನ್ತ್ರಯಿತುಂ ಹಿ ಶೇಕುಃ ।
ಸ ತ್ವೇವ ಮಾತೄರಭಿವಾದ್ಯ ಸರ್ವಾ
ರುದನ್ಕುಟೀಂ ಸ್ವಾಂ ಪ್ರವಿವೇಶ ರಾಮಃ ॥೩೧॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಅಯೋಧ್ಯಾಕಾಣ್ಡೇ ದ್ವಾದಶೋತ್ತರಶತತಮಃ ಸರ್ಗಃ

—೦—

ತ್ರಯೋದಶೋತ್ತರಶತತಮಃ ಸರ್ಗಃ

ತತಃ ಶಿರಸಿ ಕೃತ್ವಾ ತು ಪಾದುಕೇ ಭರತಸ್ತದಾ ।
ಆರುರೋಹ ರಥಂ ಹೃಷ್ಟಃ ಶತ್ರುಘ್ನೇನ ಸಮನ್ವಿತಃ ॥೧॥

ಶ್ರೀಮದ್ವಾಲ್ಮೀಕಿರಾಮಾಯಣ-ಮೂರನೆಯ ಸಂಪುಟ
(ಅಯೋಧ್ಯಾಕಾಂಡ ೨ನೆಯ ಭಾಗ)

ತಪಸ್ಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್॥

ಶ್ರೀರಾಮನ ಆಜ್ಞೆಯಂತೆ ಗುಹನು ನಾವೆಯನ್ನು ಸಿದ್ಧಗೊಳಿಸಿದುದು: ಶ್ರೀರಾಮನು ಸುಮಂತ್ರನನ್ನು ಸಮಾಧಾನಗೊಳಿಸಿ ಅಯೋಧ್ಯೆಗೆ ಹಿಂದಿರುಗಲು ಆಜ್ಞಾಪಿಸಿದುದು: ಸುಮಂತ್ರನೊಡನೆ ತಂದೆ-ತಾಯಿಗಳಿಗೆ ಶ್ರೀರಾಮನು ಸಂದೇಶವನ್ನು ಕಳುಹಿಸಿಕೊಟ್ಟುದು: ಅರಣ್ಯಕ್ಕೆ ಬರುವೆನೆಂದು ಹಠಹಿಡಿದ ಸುಮಂತ್ರನಿಗೆ ಯುಕ್ತಿಪೂರ್ವಕವಾಗಿ ಸಮಾಧಾನಹೇಳಿ ಅಯೋಧ್ಯೆಗೆ ಹಿಂದಿರುಗುವಂತೆ ಹೇಳಿದುದು: ಸೀತಾ-ರಾಮ-ಲಕ್ಷ್ಮಣರು ನಾವೆಯನ್ನೇರಿದುದು: ಸೀತಾದೇವಿಯಿಂದ ಗಂಗೆಯ ಪ್ರಾರ್ಥನೆ: ನಾವೆಯಿಂದಿಳಿದು ಶ್ರೀರಾಮಾದಿಗಳು ವತ್ಸದೇಶಕ್ಕೆ ಪ್ರಯಾಣಮಾಡಿ ಸಾಯಂಕಾಲವಾಗುತ್ತಲೇ ವೃಕ್ಷವೊಂದರ ಕೆಳಗೆ ಬಿಡಾರಮಾಡಿದುದು

ಪ್ರಭಾತಾಯಾಂ ತು ಶರ್ವರ್ಯಾಂ ಪೃಥುವಕ್ಷಾ ಮಹಾಯಶಾಃ।
ಉವಾಚ ರಾಮಃ ಸೌಮಿತ್ರಿಂ ಲಕ್ಷ್ಮಣಂ ಶುಭಲಕ್ಷಣಮ್ ॥೧॥

ರಾತ್ರಿಯು ಕಳೆದು ಬೆಳಗಾಗುತ್ತಲೇ ವಿಶಾಲಹೃದಯನೂ, ಮಹಾಯಶೋವಂತನೂ ಆದ ಶ್ರೀರಾಮನು ಶುಭಲಕ್ಷಣಗಳಿಂದ ಕೂಡಿದವನೂ, ಸುಮಿತ್ರೆಯ ಪುತ್ರನೂ ಆದ ಲಕ್ಷ್ಮಣನಿಗೆ ಹೇಳಿದನು:

"ಲಕ್ಷ್ಮಣ! ರಾತ್ರಿಯು ಕಳೆದುಹೋಯಿತು. ಈಗ ಸೂರ್ಯೋದಯ ಕಾಲವಾಗಿದೆ. ಹೆಚ್ಚು ಕಪ್ಪಾಗಿರುವ ಈ ಕೋಗಿಲೆಯೂ ಸುಮಧುರವಾಗಿ ನಿನಾದಮಾಡುತ್ತಿದೆ. ನವಿಲುಗಳ ಆನಂದೋತ್ಸಾಹಪೂರ್ಣವಾದ ಸುಮಧುರ ಧ್ವನಿಯೂ ಅರಣ್ಯದ ಕಡೆಯಿಂದ ಕೇಳಿಬರುತ್ತಿದೆ. ನಾವಿನ್ನು ಸಮುದ್ರದ ಕಡೆಗೆ ರಭಸದಿಂದ ಹರಿದುಹೋಗುತ್ತಿರುವ ಗಂಗಾನದಿಯನ್ನು ದಾಟೋಣ."

ಮಿತ್ರರಿಗೆ ಆನಂದವನ್ನುಂಟುಮಾಡುವ ಸ್ವಭಾವವುಳ್ಳ ಲಕ್ಷ್ಮಣನು ಶ್ರೀರಾಮನು ಹೇಳಿದ ಮಾತಿನ ಇಂಗಿತಾರ್ಥವನ್ನು ತಿಳಿದು ಸುಮಂತ್ರನನ್ನೂ ಗುಹನನ್ನೂ ಶ್ರೀರಾಮನ ಬಳಿಗೆ ಕರೆತಂದನು. ಶ್ರೀರಾಮನು ಗುಹನಿಗೆ ಗಂಗಾನದಿಯನ್ನು ದಾಟಲು ನಾವೆಯನ್ನು ಸಿದ್ಧಗೊಳಿಸುವಂತೆ ಹೇಳಿದನು. ಶ್ರೀರಾಮನ ಮಾತನ್ನು ಕೇಳಿ ಗುಹನು ಅವನ ಆಜ್ಞೆಯನ್ನು ಶಿರಸಾವಹಿಸಿ ಮಂತ್ರಿಗಳನ್ನು ಕರೆದು ಹೇಳಿದನು:

"ಸಚಿವೋತ್ತಮರೇ! ಶ್ರೀರಾಮನ ಸಲುವಾಗಿ ಹುಟ್ಟಿನಿಂದಲೂ (ನಾವೆಯನ್ನು ನಡೆಸುವ ಜಲ್ಲೆಯಿಂದಲೂ), ಚತುರನಾದ ನಾವಿಕನಿಂದಲೂ ಕೂಡಿರುವ, ಶುಭಕರವಾದ, ಸುಖವಾಗಿ ನದಿಯನ್ನು ದಾಟಿಸಬಲ್ಲ, ಸುದೃಢವಾದ ನಾವೆಯನ್ನು ಶೀಘ್ರವಾಗಿ ಸಿದ್ಧಗೊಳಿಸಿರಿ."

ಗುಹನ ಆ ಆಜ್ಞೆಯನ್ನು ಕೇಳಿದ ಮಹಾಮಾತ್ಯರು ಸುಂದರವಾದ ನಾವೆಯೊಂದನ್ನು ಶ್ರೀರಾಮನ ಸಲುವಾಗಿ ಸಿದ್ಧಗೊಳಿಸಿ ನಾವೆಯು ಸಿದ್ಧವಾಗಿರುವುದೆಂದು ಗುಹನಿಗೆ ಹೇಳಿದರು. ಬಳಿಕ ಗುಹನು ಕೈಮುಗಿದುಕೊಂಡು ಶ್ರೀರಾಮನಿಗೆ ಹೇಳಿದನು:

ಉಪಸ್ಥಿತೇಽಯಂ ನೌರ್ದೇವ ಭೂಯಃ ಕಿಂ ಕರವಾಣಿ ತೇ ॥೮॥

ತವಾಮರಸುತಪ್ರಖ್ಯ ತರ್ತುಂ ಸಾಗರಗಾಂ ನದೀಮ್।
ನೌರಿಯಂ ಪುರುಷವ್ಯಾಘ್ರ ತಾಂ ತ್ವಮಾರೋಹ ಸುವ್ರತ ॥೯॥

"ದೇವಕುಮಾರನಂತೆ ಮಹಾತೇಜಸ್ಸಿನಿಂದ ಕಂಗೊಳಿಸುತ್ತಿರುವವನೇ! ಸುವ್ರತನೇ! ನಿನ್ನ ಅಪೇಕ್ಷೆಯಂತೆ ಸಾಗರಗಾಮಿನಿಯಾದ ಈ ಗಂಗಾನದಿಯನ್ನು ದಾಟಲು ನಾವೆಯು ಸಿದ್ಧವಾಗಿದೆ. ದೇವನೇ! ಈ

ನಾವೆಯಲ್ಲಿ ಕುಳಿತುಕೊ. ಬೇರೆ ಯಾವ ಕಾರ್ಯವನ್ನು ಮಾಡಿಕೊಡಬೇಕೆಂಬುದನ್ನು ಆಜ್ಞಾಪಿಸು."

ಮಹಾತೇಜಸ್ವಿಯಾದ ಶ್ರೀರಾಮನು ಗುಹನಿಗೆ ಹೇಳಿದನು:

"ಗುಹ! ನೀನು ನನ್ನ ಮನಸ್ಸಿನ ಆಶಯವನ್ನು ಈಡೇರಿಸಿರುವೆ. ನಾವು ಒಯ್ಯಬೇಕಾಗಿರುವ ವಸ್ತುಗಳನ್ನು ನಾವೆಯಲ್ಲಿಡಿಸು."

ಗುಹನಿಗೆ ಹೀಗೆ ಹೇಳಿದನಂತರ ರಾಮ-ಲಕ್ಷ್ಮಣರು ಕವಚಗಳನ್ನು ಧರಿಸಿದರು. ಖಡ್ಗ-ತೂಣೀರಗಳನ್ನು ಬಿಗಿದುಕೊಂಡರು. ಧನುಷ್ಪಾಣಿಗಳಾಗಿ ಜನರು ಹೋಗುತ್ತಿದ್ದ ಕಾಲುಹಾದಿಯನ್ನೇ ಅನುಸರಿಸಿ ಸೀತಾದೇವಿಯೊಡನೆ ಗಂಗಾನದಿಯ ತೀರವನ್ನು ಸೇರಿದರು. ಹೀಗೆ ಸೀತಾ-ಲಕ್ಷ್ಮಣರೊಡನೆ ಗಂಗಾತೀರಕ್ಕೆ ಹೋದ ಧರ್ಮಜ್ಞನಾದ ಶ್ರೀರಾಮನನ್ನು ಸುಮಂತ್ರನು ಸಂಧಿಸಿ ವಿನೀತನಾಗಿ ಕೈಮುಗಿದು ನಿಂತು 'ಕಿಮಹಂ ಕರವಾಣಿ ಮುಂದೆ ನಾನೇನು ಮಾಡಲಿ?–' ಎಂದು ಪ್ರಶ್ನಿಸಿದನು.

ಶ್ರೀರಾಮನು ತನ್ನ ಶ್ರೇಷ್ಠವಾದ ಬಲಗೈಯಿಂದ ಸುಮಂತ್ರನನ್ನು ಪ್ರೀತಿಪೂರ್ವಕವಾಗಿ ನೇವರಿಸುತ್ತಾ ಹೇಳಿದನು:

ಸುಮನ್ತ್ರ ಶೀಘ್ರಂ ಪುನರೇವ ಯಾಹಿ
ರಾಜ್ಞಃ ಸಕಾಶೇ ಭವ ಚಾಪ್ರಮತ್ತಃ ||೧೩||

"ಸುಮಂತ್ರ! ಹಿಂದಿರುಗಿ ಅಯೋಧ್ಯೆಗೆ ಹೋಗು. ಜಾಗರೂಕತೆಯಿಂದ ರಾಜನ ಬಳಿಯಲ್ಲಿರು. ಅವನ ಯೋಗಕ್ಷೇಮವನ್ನು ಜಾಗರೂಕನಾಗಿ ನೋಡಿಕೊ. ತಂದೆಯ ಆಶಯದಂತೆ ಇದುವರೆಗೂ ನಾವು ರಥದಲ್ಲಿ ಕುಳಿತು ಬಂದೆವು. ನಾವಿನ್ನು ಅರಣ್ಯದೊಳಗೆ ಪ್ರವೇಶಿಸಬೇಕಾಗಿದೆ. ಆದುದರಿಂದ ರಥವನ್ನು ಬಿಟ್ಟು ಕಾಲ್ನಡಿಗೆಯಲ್ಲಿಯೇ ನಾವು ಹೋಗುವೆವು. ಆದುದರಿಂದ ನೀನು ರಥದಲ್ಲಿ ಕುಳಿತು ಅಯೋಧ್ಯೆಗೆ ಹಿಂದಿರುಗುವುದು ಉಚಿತವಾಗಿದೆ."

ತನ್ನನ್ನು ಅಯೋಧ್ಯೆಗೆ ಹಿಂದಿರುಗುವಂತೆ ಶ್ರೀರಾಮನು ಆಜ್ಞಾಪಿಸಿದುದಕ್ಕಾಗಿ ಸುಮಂತ್ರನಿಗೆ ಬಹಳ ವ್ಯಥೆಯಾಯಿತು. ಪುರುಷವ್ಯಾಘ್ರನಾದ ಶ್ರೀರಾಮನಿಗೆ ಹೇಳಿದನು:

ನಾತಿಕ್ರಾನ್ತಮಿದಂ ಲೋಕೇ ಪುರುಷೇಣೇಹ ಕೇನಚಿತ್।
ತವ ಸಭ್ರಾತೃಭಾರ್ಯಸ್ಯ ವಾಸಃ ಪ್ರಾಕೃತವದ್ವನೇ ॥೧೬॥

"ರಾಮ! ಸಾಮಾನ್ಯಮನುಷ್ಯನಂತೆ ನೀನು ಹೆಂಡತಿ ಮತ್ತು ಸಹೋದರರೊಡನೆ ಅರಣ್ಯದಲ್ಲಿ ವಾಸಮಾಡಬೇಕಾಗಿ ಬಂದ ಪರಿಸ್ಥಿತಿಯನ್ನು



ಪರಿಶೀಲಿಸಿದರೆ ಯಾವ ಮನುಷ್ಯನೇ ಆಗಲಿ ದೈವಸಂಕಲ್ಪವನ್ನು ಮೀರಿ ನಡೆಯಲಾರನೆಂಬುದು ಸಿದ್ಧವಾಗುತ್ತದೆ.*

ನ ಮನ್ಯೇ ಬ್ರಹ್ಮಚರ್ಯೇಽಸ್ತಿ ಸ್ವಧೀತೇ ವಾ ಫಲೋದಯಃ।
ಮಾರ್ದವಾರ್ಜವಯೋರ್ವಾಪಿ ತ್ವಾಂ ಚೇದ್ವ್ಯಸನಮಾಗತಮ್॥

ನಿನ್ನಂತಹ ಸಕಲಸದ್ಗುಣಸಂಪನ್ನನಿಗೇ ಇಂತಹ ವ್ಯಸನವು ಪ್ರಾಪ್ತ ವಾಯಿತೆಂದಮೇಲೆ–ಬ್ರಹ್ಮಚರ್ಯೆಯಲ್ಲಾಗಲೀ, ವೇದಾಧ್ಯಯನದಲ್ಲಾ ಗಲೀ, ದಯಾಲುತ್ವದಲ್ಲಾಗಲೀ, ನಿಷ್ಕಾಪಟ್ಯದಲ್ಲಾಗಲೀ–ಫಲವುಂಟೆಂದು

---

*ನಾತಿಕ್ರಾಂತಮಿದಂ ಲೋಕೇ–ಎಂಬುದಕ್ಕೆ ಬದಲಾಗಿ ಅತರ್ಕಿತೋಽಯಂ ಲೋಕೇಷು–ಎಂಬ ಪಾಠಾಂತರದ ಪ್ರಕಾರ ಮೂಜಗದಲ್ಲಿರುವ ಯಾವ ಮನುಷ್ಯನೂ ಭಾರ್ಯಾ-ಭ್ರಾತೃಗಳೊಡನೆ ನಿನಗೆ ಅರಣ್ಯವಾಸವು ಪ್ರಾಪ್ತವಾಗುವುದೆಂದು ಊಹಿಸಿರ ಲಿಲ್ಲ–ಎಂದು ಅರ್ಥವಾಗುತ್ತದೆ.

ನಾನು ಭಾವಿಸುವುದಿಲ್ಲ. (ಒಳ್ಳೆಯ ಕಾರ್ಯಗಳಿಗೆ ಒಳ್ಳೆಯ ಗುಣಗಳಿಗೆ ಫಲವೇ ಇಲ್ಲವೆಂದು ತೋರುತ್ತದೆ.)

ಆದರೆ ನೀನು ಈ ಕರ್ತವ್ಯಪಾಲನೆಯಿಂದ ಕೀರ್ತಿಮಂತನಾಗುವೆ. ತಂದೆಯ ಮಾತನ್ನು ನಡೆಸಿಕೊಡಲು ತಮ್ಮನಾದ ಲಕ್ಷ್ಮಣನೊಡನೆಯೂ, ಪತ್ನಿಯಾದ ಸೀತೆಯೊಡನೆಯೂ ಅರಣ್ಯವಾಸಮಾಡುವ ನೀನು ಮೂರು ಲೋಕಗಳನ್ನೂ ಜಯಿಸುವುದರಿಂದ ಪ್ರಾಪ್ತವಾಗುವ ಯಶಸ್ಸನ್ನೇ ಪಡೆಯುವೆ.

ನಾವು ಮಾತ್ರ ಸಂಪೂರ್ಣವಾಗಿ ಹಾಳಾದೆವು. ಹೇಗೆಂದರೆ ನೀನು ನಮ್ಮನ್ನು ಅರಣ್ಯಕ್ಕೆ ಕರೆದೊಯ್ಯಲಿಲ್ಲ. ವಂಚಿಸಿದೆ.* ನಿನ್ನನ್ನಗಲಿರುವ ದುಃಖಕ್ಕೆ ಭಾಗಿಗಳಾದ ನಾವು ಪಾಪಿಷ್ಠಳಾದ ಕೈಕೇಯಿಯ ಅಡಿಯಾಳುಗಳಾಗುವೆವು. ಇದಕ್ಕಿಂತಲೂ ಹೆಚ್ಚಿನ ದುಃಖವು ನಮಗೆ ಬೇರೆ ಯಾವುದಿದೆ?"

ಸಾರಥಿಯಾದ ಸುಮಂತ್ರನು ತನ್ನ ಪ್ರಾಣಕ್ಕೆ ಸಮನಾದ ಶ್ರೀರಾಮನೊಡನೆ ಹೀಗೆ ಹಲುಬಿಕೊಂಡರೂ ಶ್ರೀರಾಮನು ದೂರ-ದೂರಕ್ಕೆ ಹೋಗುತ್ತಿರುವುದನ್ನು ಕಂಡು ದುಃಖಪೀಡಿತನಾಗಿ ಗಟ್ಟಿಯಾಗಿ ಅಳತೊಡಗಿದನು. ಆದರೆ ಸುಮಂತ್ರನು ಎಷ್ಟೊಂದು ಅತ್ತಾನು! ಶ್ರೀರಾಮನು ಹೊರಟು ನಿಂತಿರುವಾಗ ಅಳುತ್ತಲೇ ನಿಂತಿರಲು ಸಾಧ್ಯವೇ? ಅಳುವನ್ನು ಬಹಳ ಕಷ್ಟದಿಂದ ತಡೆದುಕೊಂಡು ಶುದ್ಧಾ ಚಮನಮಾಡಿ ಕುಂದಿದ ಮುಖಭಾವದಿಂದ ನಿಂತಿದ್ದ ಸುಮಂತ್ರನಿಗೆ ಶ್ರೀರಾಮನು ಸುಮಧುರವಾದ ಈ ಮಾತನ್ನು ಪುನಃ ಪುನಃ ಹೇಳಿದನು:

"ಸುಮಂತ್ರ! ಇಕ್ಷ್ವಾಕುಕುಲದರಸರಿಗೆ ನಿನಗೆ ಸಮಾನನಾದ ಬೇರೊಬ್ಬ ಸುಹೃದನಿರುವುದನ್ನು ನಾನು ಇದುವರೆಗೂ ಕಂಡೂ ಇಲ್ಲ; ಕೇಳಿಯೂ ಇಲ್ಲ. ಆದುದರಿಂದ ಈ ಸಮಯದಲ್ಲಿ ನೀನು ಅಯೋಧ್ಯೆಗೆ

---

*ಶ್ರೀರಾಮನು ಮಾಡಿದ ವಂಚನೆಯೆಂದರೆ ಕಾಡಿಗೆ ಜೊತೆಯಲ್ಲಿ ಬರಲು ಹೊರಟಿದ್ದ ಪೌರರನ್ನು ಬಿಟ್ಟು ಅವರು ನಿದ್ದೆಮಾಡುತ್ತಿದ್ದಾಗ ಹೊರಟುಬಂದುದು. ತನ್ನನ್ನೂ (ಸುಮಂತ್ರನನ್ನೂ) ಈಗ ನಗರಿಗೆ ಹಿಂದಿರುಗುವಂತೆ ಬಲಾತ್ಕರಿಸುತ್ತಿರುವುದು. ಇದು ಸುಮಂತ್ರನ ದೃಷ್ಟಿಯಿಂದ ಶ್ರೀರಾಮನು ಮಾಡಿದ ವಂಚನೆ.

ಹಿಂದಿರುಗಿಹೋಗಿ ನನ್ನ ಸಲುವಾಗಿ ದಶರಥನು ಶೋಕಪಡದಂತೆ ನೋಡಿಕೊ. ಅವನಿಗೆ ಯುಕ್ತಿಯುಕ್ತವಾದ ಮಾತುಗಳ ಮೂಲಕ ಸಮಾಧಾನವನ್ನು ಹೇಳು. ಈಗ ನನ್ನ ತಂದೆಯು ದುಃಖದಿಂದ ಪೀಡಿತವಾದ ಮನಸ್ಸುಳ್ಳವನಾಗಿದ್ದಾನೆ. ವೃದ್ಧನಾಗಿದ್ದಾನೆ. ಕಾಮದ ಆಧಿಕ್ಯದಿಂದಾಗಿ ಕರ್ತವ್ಯನಿರ್ವಹಣೆಯಲ್ಲಿ ಅಸಮರ್ಥನಾಗಿದ್ದಾನೆ. ಈ ಕಾರಣಗಳಿಂದ ನಾನು ನಿನ್ನನ್ನು ಅಯೋಧ್ಯೆಗೆ ಹಿಂದಿರುಗುವಂತೆ ಹೇಳುತ್ತಿದ್ದೇನೆ. ಮಹಾತ್ಮನಾದ ನಮ್ಮ ಮಹಾರಾಜನು ಕೈಕೇಯಿಗೆ ಪ್ರಿಯವನ್ನುಂಟುಮಾಡುವ ಸಲುವಾಗಿ ಯಾವುದನ್ನು ಮಾಡ ಹೇಳುವನೋ–ಆ ಕಾರ್ಯವನ್ನು ನೀನು ಸ್ವಲ್ಪವಾದರೂ ಶಂಕಿಸದೇ ಮಾಡಿ ಮುಗಿಸಬೇಕು. ಯಾವುದೇ ಕಾರ್ಯಗಳಲ್ಲಿಯೂ ರಾಜನ ಮನಸ್ಸಿಗೆ ವಿರೋಧವಾಗುವಂತಹುದು ಯಾವುದೂ ನಡೆಯುವುದಿಲ್ಲ. ಈ ಕಾರಣ ದಿಂದಲೇ ರಾಜರಿಗೆ ರಾಜ್ಯಗಳನ್ನು ಶಾಸನಮಾಡಲು ಸಾಧ್ಯವಾಗುತ್ತದೆ. ಆದುದರಿಂದ ರಾಜನ ಮನಸ್ಸಿಗೆ ಅನುಸಾರವಾಗಿ ನಡೆದುಕೊಳ್ಳುವುದು ನಮ್ಮ ಕರ್ತವ್ಯವೂ ಆಗಿರುತ್ತದೆ. ಈ ಸಮಯದಲ್ಲಿ ರಾಜನಿಗೆ ಯಾವ ಕಾರಣ ದಿಂದಲೂ ಅಪ್ರಿಯವಾಗಬಾರದು. ಅವನು ದುಃಖದಿಂದ ಪರಿತಾಪಪಡ ಬಾರದು. ಹಾಗೆ ನೀನು ಅವನ ವಿಷಯದಲ್ಲಿ ನಡೆದುಕೊಳ್ಳಬೇಕು. ನಮ್ಮ ತಂದೆಯಾದ ದಶರಥರಾಜನು ದುಃಖವೆಂಬುದನ್ನೇ ಕಂಡವನಲ್ಲ. ವೃದ್ಧ ನಾದ, ಜಿತೇಂದ್ರಿಯನಾದ, ಪೂಜ್ಯನಾದ ತಂದೆಗೆ ನೀನು ಅಭಿವಾದನ ಪೂರ್ವಕವಾಗಿ ನಮಸ್ಕರಿಸಿ ನನ್ನ ಪರವಾಗಿ ಈ ಮಾತನ್ನು ಹೇಳಬೇಕು.

ನೈವಾಹಮನುಶೋಚಾಮಿ ಲಕ್ಷ್ಮಣೋ ನ ಚ ಮೈಥಿಲೀ ।
ಅಯೋಧ್ಯಾಯಾಶ್ಚ್ಯುತಾಶ್ಚೇತಿ ವನೇ ವತ್ಸ್ಯಾಮಹೇತಿ ಚ ॥೨೮॥

ಚತುರ್ದಶಸು ವರ್ಷೇಷು ನಿವೃತ್ತೇಷು ಪುನಃ ಪುನಃ।
ಲಕ್ಷ್ಮಣಂ ಮಾಂ ಚ ಸೀತಾಂ ಚ ದ್ರಕ್ಷ್ಯಸಿ ಕ್ಷಿಪ್ರಮಾಗತಾನ್ ॥೨೯॥

"ತಂದೆಯೇ! ನಾನಾಗಲೀ, ಲಕ್ಷ್ಮಣನಾಗಲೀ, ಸೀತೆಯಾಗಲೀ ಅಯೋಧ್ಯೆಯಿಂದ ಬಂದುಬಿಟ್ಟೆವೆಂದಾಗಲೀ, ಅರಣ್ಯದಲ್ಲಿ ವಾಸಮಾಡುತ್ತಿರು ವೆವೆಂದಾಗಲೀ ಖಂಡಿತವಾಗಿಯೂ ದುಃಖಪಡುತ್ತಿಲ್ಲ. ಹದಿನಾಲ್ಕು ವರ್ಷಗಳು ಕಳೆದೊಡನೆಯೇ ಬಹಳ ಬೇಗ ಅಯೋಧ್ಯೆಗೆ ಬರಲಿರುವ ನನ್ನನ್ನೂ, ಸೀತಾ-ಲಕ್ಷ್ಮಣರನ್ನೂ ನೀನು ಪುನಃ ಪುನಃ ನೋಡುವೆ."

ಸುಮಂತ್ರ! ರಾಜನಿಗೆ ಹೀಗೆ ಹೇಳಿ ಅವನನ್ನು ಸಮಾಧಾನಗೊಳಿಸಿದ ಬಳಿಕ ನಮ್ಮ ತಾಯಿಯನ್ನೂ ಕೈಕೇಯಿಯನ್ನೂ ಮತ್ತು ಇತರ ನನ್ನ ಚಿಕ್ಕತಾಯಂದಿರನ್ನೂ–ಈ ಮಾತನ್ನೇ ಪುನಃ ಪುನಃ ಅವರೊಡನೆ ಹೇಳುತ್ತಾ–ಸಮಾಧಾನಗೊಳಿಸಬೇಕು. ಸೀತೆಯ, ನನ್ನ ಮತ್ತು ಆರ್ಯನಾದ ಲಕ್ಷ್ಮಣನ* ಪ್ರಾರ್ಥನೆಗೆ ಅನುಸಾರವಾಗಿ ನಮ್ಮ ತಾಯಿಗೆ ನಮ್ಮೆಲ್ಲರ ವಂದನೆಗಳನ್ನು ಸಲ್ಲಿಸಿ ನಮ್ಮ ಆರೋಗ್ಯವನ್ನೂ ತಿಳಿಸು. ಭರತನನ್ನು ಶೀಘ್ರವಾಗಿ ಕರೆತರಿಸುವಂತೆ ರಾಜನಿಗೆ ಹೇಳಬೇಕು. ಅಯೋಧ್ಯೆಗೆ ಆಗಮಿಸುವ ಭರತನಿಗೆ ಮಹಾರಾಜನ ಅಭಿಪ್ರಾಯದಂತೆ ಪಟ್ಟಗಟ್ಟಬೇಕು.

'ಅಯೋಧ್ಯೆಗೆ ಆಗಮಿಸಿದ ಭರತನನ್ನು ಆಲಿಂಗನಮಾಡಿಕೊಂಡು ಅವನನ್ನು ಯುವರಾಜಪದವಿಯಲ್ಲಿ ಪಟ್ಟಾಭಿಷಿಕ್ತನನ್ನಾಗಿ ಮಾಡಿದನಂತರ ಸೀತಾ-ರಾಮ-ಲಕ್ಷ್ಮಣರ ವಿಯೋಗದಿಂದ ಪ್ರಾಪ್ತವಾಗಿರುವ ದುಃಖವನ್ನು ನೀನು ಮರೆಯುವೆ'–ಎಂಬುದಾಗಿಯೂ ನೀನು ರಾಜನಿಗೆ ಸಮಾಧಾನ ಹೇಳಬೇಕು.

ಭರತನು ರಾಜಧಾನಿಗೆ ಆಗಮಿಸಿ ಪಟ್ಟಾಭಿಷಿಕ್ತನಾದನಂತರ ನನ್ನ ಪರವಾಗಿ ಅವನಿಗೆ ನೀನು ಈ ಮಾತುಗಳನ್ನು ಹೇಳಬೇಕು:

ಯಥಾ ರಾಜನಿ ವರ್ತಸೇ ತಥಾ ಮಾತೃಷು ವರ್ತೇಥಾಃ ॥೩೪॥

---

*ಆರ್ಯಸ್ಯ ಮಮ, ಆರ್ಯಸ್ಯ ಲಕ್ಷ್ಮಣಸ್ಯ–ಎಂದು ಎರಡು ವಿಧವಾಗಿ ವ್ಯಾಖ್ಯಾನಕಾರರು ಆರ್ಯಸ್ಯ ಎಂಬ ಪದವನ್ನು ರಾಮನಿಗೂ ಮತ್ತು ಲಕ್ಷ್ಮಣನಿಗೂ ವಿಶೇಷಣಮಾಡಿರುತ್ತಾರೆ. ಆರ್ಯಸ್ಯ ಮಮ ಎಂದು ರಾಮನು ಹೇಳಿಕೊಳ್ಳುವಾಗ ಜ್ಯೇಷ್ಠನಾದ ನನ್ನ ಎಂದು ಅರ್ಥಮಾಡಬಹುದಾದರೂ ಆರ್ಯಶಬ್ದವನ್ನು ರಾಮನು ತನಗೆ ತಾನೇ ಬಳಸುವನೇ? ಎಂಬುದನ್ನು ಯೋಚಿಸಬೇಕಾಗಿದೆ. ಆರ್ಯಶಬ್ದವು ಗೌರವಸೂಚಕವಾದ ಪದವಾಗಿದೆ. ಕಿರಿಯರು ಹಿರಿಯರನ್ನು ಸಂಬೋಧಿಸುವಾಗ ಆರ್ಯಶಬ್ದವನ್ನು ಬಳಸುತ್ತಾರೆ. ಆದುದರಿಂದ ಆರ್ಯಸ್ಯ ಎಂಬುದಕ್ಕೆ ಜ್ಯೇಷ್ಠನಾದ ನನ್ನ ಎಂದು ಅರ್ಥ ಹೇಳಬಹುದಾದರೂ ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಲಕ್ಷ್ಮಣನು ಚಿಕ್ಕವನಾದರೂ ಆರ್ಯನಾದ ಲಕ್ಷ್ಮಣನೆಂದು ರಾಮನು ಹೇಳುವುದು ಅಸಮಂಜಸವೆನಿಸುವುದಿಲ್ಲ. ಆರ್ಯಶಬ್ದಕ್ಕೆ ಸ್ನೇಹಿತ, ಮಿತ್ರನೆಂಬ ಅರ್ಥಗಳೂ ಇವೆ. ಕರ್ತವ್ಯಮಾಚರನ್ಕಾರ್ಯಮಕರ್ತಃವ್ಯಮನಾಚರನ್ । ತಿಷ್ಠತಿ ಪ್ರಕೃತಾಚಾರೇ ಸ ವಾ

"ರಾಜನನ್ನು ಎಷ್ಟು ವಿಶ್ವಾಸದಿಂದ ಮತ್ತು ಮರ್ಯಾದೆಯಿಂದ ಕಾಣುವೆಯೋ ಅದೇ ರೀತಿಯಲ್ಲಿ ಎಲ್ಲ ತಾಯಂದಿರನ್ನೂ ಕಾಣಬೇಕು. ಯಾರೊಬ್ಬರನ್ನೂ ಬಿಡದೇ ಎಲ್ಲರನ್ನೂ ಪ್ರೀತ್ಯಾದರಗಳಿಂದ ಕಾಣಬೇಕು.

ನಿನಗೆ ಕೈಕೇಯಿಯು ಯಾವ ರೀತಿಯಲ್ಲಿ ಸಮಾದರಣೀಯಳಾದ ತಾಯಿಯಾಗಿರುವಳೋ–ಹಾಗೆಯೇ ಲಕ್ಷ್ಮಣನಿಗೆ ಸುಮಿತ್ರಾದೇವಿಯೂ, ನನಗೆ ಕೌಸಲ್ಯಾದೇವಿಯೂ ಸಮಾದರಣೀಯರಾದ ತಾಯಂದಿರಾಗಿದ್ದಾರೆ. ನೀನು ನಿನ್ನ ತಾಯಿಯ ಶುಶ್ರೂಷೆಮಾಡುವಂತೆ ಸುಮಿತ್ರಾದೇವಿ ಶುಶ್ರೂಷೆಯನ್ನು ಮಾಡಬೇಕು. ನಿನ್ನ ತಾಯಿಯ ಶುಶ್ರೂಷೆಮಾಡುವುದಕ್ಕಿಂತಲೂ ವಿಶೇಷವಾದ ರೀತಿಯಲ್ಲಿ ಸುಮಿತ್ರಾದೇವಿಯ ಶುಶ್ರೂಷೆಯನ್ನು ಮಾಡಬೇಕು. ಏಕೆಂದರೆ: ಒಬ್ಬ ಮಗನನ್ನು ಕಾಡಿಗೆ ಕಳುಹಿಸಿರುವುದರಿಂದ ಅವಳಿಗೆ ಪುತ್ರವಿರಹಶೋಕವಿದ್ದೇ ಇರುತ್ತದೆ. ನನ್ನ ತಾಯಿಯನ್ನಂತೂ ವಿಶಿಷ್ಟವಾದ ರೀತಿಯಲ್ಲಿಯೇ ನೋಡಿಕೊಳ್ಳಬೇಕು. (ಏಕೆಂದರೆ ಅವಳಿಗೆ ನಾನೊಬ್ಬನೇ ಮಗನು. ಅವಳ ಪುತ್ರವಿರಹಶೋಕವು ಸುಮಿತ್ರಾದೇವಿಯ ಶೋಕಕ್ಕಿಂತಲೂ ಮಿಗಿಲಾದುದು.) ಆದುದರಿಂದ ಅವಳನ್ನು ಎಲ್ಲರಿಗಿಂತಲೂ ವಿಶೇಷವಾದ ರೀತಿಯಲ್ಲಿ ಸಮಾದರಿಸಬೇಕು. ತಂದೆಗೆ ಪ್ರಿಯವನ್ನುಂಟು ಮಾಡುವ ಕಾರಣದಿಂದ ರಾಜ್ಯಪದವಿಯನ್ನು ವಹಿಸಿಕೊಳ್ಳಲಿರುವ ನೀನು ಹೀಗೆ ನಡೆದುಕೊಂಡರೆ ಇಹ-ಪರಗಳೆರಡರಲ್ಲಿಯೂ ಶಾಶ್ವತವಾದ ಸುಖವನ್ನು ಪಡೆಯಲು ಶಕ್ಯವಾಗುತ್ತದೆ." ಹೀಗೆ ಭರತನಿಗೆ ಹೇಳುವಂತೆ ಶ್ರೀರಾಮನು ಸುಮಂತ್ರನಿಗೆ ಸಂದೇಶವನ್ನಿತ್ತು ಅಯೋಧ್ಯೆಗೆ ಹಿಂದಿರುಗುವಂತೆ ಹೇಳಿದನು.

ಆರ್ಯ ಇತಿ ಸ್ಮೃತಃ । ಮಾಡಬೇಕಾದ ಕರ್ತವ್ಯಗಳನ್ನು ಮಾಡುತ್ತಾ, ಮಾಡಬಾರದ ಕೆಲಸಗಳನ್ನು ಬಿಡುತ್ತಾ, ಕಾಲಕ್ಕೆ ತಕ್ಕ ಸದಾಚಾರದಲ್ಲಿ ಸ್ಥಿರವಾಗಿರುವವನು ಆರ್ಯನೆನಿಸಿಕೊಳ್ಳುತ್ತಾನೆ–ಎಂಬುದಾಗಿ ಆರ್ಯಶಬ್ದಕ್ಕೆ ಲಕ್ಷಣವು ಉಕ್ತವಾಗಿರುವುದರಿಂದಲೂ ಒಬ್ಬ ವ್ಯಾಖ್ಯಾನಕಾರರು ಹೇಳಿರುವಂತೆ ಶಾಸ್ತ್ರೋದಿತ ಜ್ಯೇಷ್ಠಾನುವರ್ತನರೂಪ ಪರಮಧರ್ಮವೇದಿತ್ವಾತ್= ಶಾಸ್ತ್ರೋದಿತವಾದ ಜ್ಯೇಷ್ಠಾನು ವರ್ತನವೆಂಬ ಉತ್ಕೃಷ್ಟವಾದ ಧರ್ಮವನ್ನು ತಿಳಿದಿರುವುದರಿಂದ ಲಕ್ಷ್ಮಣನಿಗೆ ರಾಮನು ಆರ್ಯ ಶಬ್ದವನ್ನು ಪ್ರಯೋಗಮಾಡಿದ್ದಾನೆಂದು ಹೇಳುವುದು ಸೂಕ್ತವಾಗಿದೆ. ಆರ್ಯಃ ಸಾಧೌ ಸೌವಿದಲ್ಲೇಽಪಿ (ವಿಶ್ವಃ)

ಸುಮಂತ್ರನು ಶ್ರೀರಾಮನ ಎಲ್ಲ ಮಾತುಗಳನ್ನೂ ಕೇಳಿದನು. ಬಾರಿ-ಬಾರಿಗೂ ಹಿಂದಿರುಗುವಂತೆ ಶ್ರೀರಾಮನು ಒತ್ತಾಯಪಡಿಸುತ್ತಿದ್ದುದರಿಂದ ಅತ್ಯಂತದುಃಖಿತನಾಗಿ, ಸ್ನೇಹಭಾವದಿಂದ ಕೂಡಿದವನಾಗಿ ಪುನಃ ಶ್ರೀರಾಮನಿಗೆ ಹೇಳಿದನು:

"ರಾಘವ! ಸ್ವಾಮಿಯೊಡನೆ ಸೇವಕನಾದವನು ಉಪಚಾರಯುಕ್ತವಾದ ಮಾತುಗಳನ್ನು ಆಡಬೇಕು. ನಾನೇನಾದರೂ ಸ್ನೇಹದ ಸಲಿಗೆಯಿಂದ ಯಾವುದಾದರೂ ಅನೌಪಚಾರಿಕವಾದ ಮಾತನ್ನಾಡಿದರೆ ಅಂತಹ ಮಾತನ್ನು ನಿನ್ನೊಬ್ಬ ಭಕ್ತನು ಆಡಿದ ಮಾತುಗಳೆಂದು ಭಾವಿಸಿ ಕ್ಷಮಿಸಿಬಿಡು.* ಪುತ್ರನನ್ನು ಕಳೆದುಕೊಂಡು ತಾಯಿಯೊಬ್ಬಳು ಶೋಕಿಸುವಂತೆ–ನಿನ್ನ ವಿಯೋಗದಿಂದ ಶೋಕಪಡುತ್ತಿರುವ ಅಯೋಧ್ಯಾಪಟ್ಟಣಕ್ಕೆ ನಿನ್ನಿಂದ ವಿಹೀನನಾದ ನಾನು ಹೇಗೆ ತಾನೇ ಹೋಗಲಿ? ನನ್ನ ರಥವನ್ನು ನೋಡಿದೊಡನೆಯೇ ಜನರು ರಾಮನು ರಥದಲ್ಲಿ ಬರುತ್ತಿರುವನೆಂದೇ ಭಾವಿಸುವರು. ಈಗ ನೀನಿಲ್ಲದೇ ಈ ರಥವು ಅಯೋಧ್ಯೆಗೆ ಹಿಂದಿರುಗಿದರೆ ಅಯೋಧ್ಯೆಯೇ ಸೀಳಿಹೋಗುವುದು; ಜನರ ಹೃದಯಗಳೂ ಒಡೆದುಹೋಗುವುವು.

ದೈನ್ಯಂ ಹಿ ನಗರೀ ಗಚ್ಛೇದ್ದೃಷ್ಟ್ವಾ ಶೂನ್ಯಮಿಮಂ ರಥಮ್।
ಸೂತಾವಶೇಷಂ ಸ್ವಂ ಸೈನ್ಯಂ ಹತವೀರಮಿವಾಹವೇ ॥೪೧॥

ಶೂರನಾದ ನಾಯಕನು ಯುದ್ಧದಲ್ಲಿ ಮರಣಹೊಂದಲಾಗಿ ಕೇವಲ ಸೂತನಿಂದ ಕೂಡಿದ ರಥವನ್ನು ಕಂಡು ಅವನ ಸೈನಿಕರು ಹೇಗೆ ದುಃಖಿಸುವರೋ–ಹಾಗೆಯೇ ನಿನ್ನಿಂದ ವಿಹೀನವಾದ ಈ ರಥವನ್ನು ಕಂಡು ಅಯೋಧ್ಯಾನಗರಿಯೇ ತೇಜೋವಿಹೀನವಾಗುವುದು. ಜನರೆಲ್ಲರೂ ಪೆಚ್ಚು ಮೋರೆಯವರಾಗುವರು.

ನೀನು ಅವರಿಂದ ಬಹಳ ದೂರದಲ್ಲಿ ವಾಸಮಾಡುತ್ತಿದ್ದರೂ ಮನಸ್ಸಿನಲ್ಲಿ

---

*ಭಕ್ತನಾದರೆ ನೀನ್ಯಾಕೋ ನಿನ್ನ ಹಂಗ್ಯಾಕೋ–ಎಂದು ಹೇಳಲು ಸಾಧ್ಯ. ಸೂತನಾಗಲೀ ಮಂತ್ರಿಯಾಗಲೀ ರಾಜನೊಡನೆ ಇಂತಹ ಮಾತನ್ನು ಹೇಳಲು ಶಕ್ಯವಿಲ್ಲ. ಆದುದರಿಂದ ಇಲ್ಲಿ ಸುಮಂತ್ರನು ಭಕ್ತನಂತೆ ನನ್ನನ್ನು ಕಾಣು–ಎಂದು ಶ್ರೀರಾಮನಿಗೆ ಹೇಳುತ್ತಾನೆ.

ಅವರ ಮುಂದೆ ಸುಸ್ಥಿರನಾಗಿ ನಿಂತಿರುವೆ. ಸದಾ ಅವರು ನಿನ್ನನ್ನೇ ಧ್ಯಾನಿಸುತ್ತಿರುತ್ತಾರೆ. ಹೀಗವರು ಯಾವಾಗಲೂ ನಿನ್ನನ್ನೇ ಚಿಂತಿಸುತ್ತಾ ಆಹಾರ-ವಿಹಾರಾದಿಗಳನ್ನೂ ಸಂಪೂರ್ಣವಾಗಿ ತ್ಯಜಿಸಿಬಿಟ್ಟಿದ್ದಾರೆ. ನಿನ್ನ ವಿಯೋಗಶೋಕದಿಂದ ದುಃಖಗೊಂಡ ಪ್ರಜೆಗಳು ನೀನು ನಗರದಿಂದ ಹೊರಟ ಸಮಯದಲ್ಲಿ ಹೇಗೆ ಗೋಳಾಡಿದರೆಂಬುದನ್ನು ನೀನೇ ಪ್ರತ್ಯಕ್ಷವಾಗಿ ನೋಡಿರುವೆ. ನೀನು ಹೊರಟಾಗ ಪ್ರಜೆಗಳ ಹಾಹಾಕಾರವು ಗಗನವನ್ನೇ ಭೇದಿಸಿಬಿಟ್ಟಿತು. ರಾಮನ ರಥದಲ್ಲಿ ಸುಮಂತ್ರನೊಬ್ಬನೇ ಹಿಂದಿರುಗಿದನೆಂಬ ವಾರ್ತೆಯನ್ನು ಕೇಳಿದೊಡನೆಯೇ ಅಯೋಧ್ಯಾಪುರವಾಸಿಗಳು ನೀನು ಹೊರಟಾಗ ಮಾಡಿದ ಆರ್ತನಾದಕ್ಕಿಂತಲೂ ನೂರ್ಮಡಿಯಷ್ಟು ಗಟ್ಟಿಯಾಗಿ ಗೋಳಾಡುವರು. ಪ್ರಜೆಗಳ ವಿಷಯವು ಹಾಗಿರಲಿ; ಅಯೋಧ್ಯೆಗೆ ಹೋದ ನಂತರ ನಿನ್ನ ತಾಯಿಯಾದ ಕೌಸಲ್ಯಾದೇವಿಯು ನನ್ನ ಕಂದನನ್ನು ಎಲ್ಲಿ ಬಿಟ್ಟುಬಂದೆಯೆಂದು ಕೇಳಿದರೆ ಏನೆಂದು ಉತ್ತರಿಸಲಿ? ಅವಳಿಗೆ ಅಪ್ರಿಯವಾಗುವುದನ್ನು ಹೇಳಬಾರದೆಂದು–ಶ್ರೀರಾಮನನ್ನು ಸೋದರಮಾವನ ಮನೆಗೆ ಬಿಟ್ಟುಬಂದೆನೆಂದು ಹೇಳಲೇ? ಸೋದರಮಾವನ ಮನೆಗೆ ಬಿಟ್ಟುಬಂದುದರಿಂದ ದುಃಖಿಸುವ ಕಾರಣವಿಲ್ಲವೆಂದು ಅವಳಿಗೆ ಸಮಾಧಾನ ಹೇಳಲೇ? ಇಂತಹ ಸುಳ್ಳನ್ನು ಹೇಳಲು ನನ್ನಿಂದ ಸಾಧ್ಯವಾಗಲಾರದು. 'ಘೋರಾರಣ್ಯದ ಮಧ್ಯದಲ್ಲಿ ನಿರ್ದಯನಾಗಿ ನಿನ್ನ ಕಂದನನ್ನು ಬಿಟ್ಟುಬಂದೆ ದೇವಿ!'–ಎಂದು ಸತ್ಯವನ್ನೇ ಹೇಳುವೆನೆಂದರೆ ಅಪ್ರಿಯವಾದ ಈ ಮಾತನ್ನು ಅವಳೊಡನೆ ಹೇಗೆ ಹೇಳಲಿ? ಕಠೋರವಾದ ಈ ಸತ್ಯವಚನವನ್ನು ಕೇಳಿದ ಅವಳ ಸ್ಥಿತಿಯು ಏನಾಗಬಹುದು?* ನಿನ್ನನ್ನೂ ಮತ್ತು ನಿನ್ನ ಬಂಧುಜನ

---

*ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ನ ಬ್ರೂಯಾತ್ಸತ್ಯಮಪ್ರಿಯಮ್ ॥ ಸತ್ಯವನ್ನೂ ಹೇಳಬೇಕು; ಪ್ರಿಯವಾಕ್ಯವನ್ನೂ ಹೇಳಬೇಕು; ಅಪ್ರಿಯವಾದ ಸತ್ಯವನ್ನು ಹೇಳಬಾರದು. ಆದರೆ ಸತ್ಯ ಮತ್ತು ಪ್ರಿಯವಾಕ್ಯಗಳು ಯಾವಾಗಲೂ ಏಕರೂಪವಾಗಿರುವುದಿಲ್ಲ. ಸತ್ಯವಾದ ವಿಷಯವು ಒಬ್ಬನಿಗೆ ಅಪ್ರಿಯವಾಗಬಹುದು. ಆ ಸಂದರ್ಭದಲ್ಲಿ ಸತ್ಯವನ್ನು ಹೇಳಿ ಅವನಿಗೆ ಅಸಮಾಧಾನವನ್ನುಂಟುಮಾಡುವುದಕ್ಕಿಂತಲೂ ಆ ವಿಷಯವನ್ನೇ ಹೇಳದಿರುವುದೇ ವಿಹಿತವಾದುದು. ಎಂದರೆ ಪ್ರಿಯ ವಾಕ್ಯವನ್ನು ಹೇಳುವ ಸಲುವಾಗಿ ಅಸತ್ಯವನ್ನು ಹೇಳಬಹುದೆನ್ನುವ ಅಭಿಪ್ರಾಯವಲ್ಲ. (ಮನುಸ್ಮೃತಿ.)

ರನ್ನೂ ಯಾವಾಗಲೂ ಒಯ್ಯುವ ಈ ಕುದುರೆಗಳು ನಿನ್ನ ನಿದೇಶಾನುಸಾರವಾಗಿ ನಡೆಯುತ್ತವೆ. ಆದರೆ ನೀನಿಲ್ಲದ ಈ ರಥವನ್ನು ಇವು ಹೇಗೆ ತಾನೇ ಒಯ್ಯುವುವು? ನನ್ನ ನಿದೇಶವನ್ನು ನಿರ್ಲಕ್ಷಿಸಿಬಿಡುವುವೆಂದು ನನಗೆ ಭಾಸವಾಗುತ್ತದೆ. ನೀನು ರಥಕ್ಕೆ ಹತ್ತದಿದ್ದರೆ ಒಂದು ಹೆಜ್ಜೆಯನ್ನೂ ಕೂಡ ಈ ನನ್ನ ಕುದುರೆಗಳು ಮುಂದಿಡುವುದಿಲ್ಲ.

ರಾಘವ! ಈ ಎಲ್ಲ ಕಾರಣಗಳಿಂದಲೂ ನಿನ್ನನ್ನು ಬಿಟ್ಟು ನಾನು ಅಯೋಧ್ಯೆಗೆ ಹೋಗಲಾರೆನು. ಖಂಡಿತವಾಗಿಯೂ ಹೋಗುವುದಿಲ್ಲ. ವನವಾಸದ ಸಮಯದಲ್ಲಿ ನಿನ್ನೊಡನೆಯೇ ಇರಲು ಅನುಮತಿಸುವುದು ನಿನಗೆ ಯುಕ್ತವಾಗಿದೆ.

ಯದಿ ಮೇ ಯಾಚಮಾನಸ್ಯ ತ್ಯಾಗಮೇವ ಕರಿಷ್ಯಸಿ।
ಸರಥೋಽಗ್ನಿಂ ಪ್ರವೇಕ್ಷ್ಯಾಮಿ ತ್ಯಕ್ತಮಾತ್ರ ಇಹ ತ್ವಯಾ ॥೪೯॥

ಒಂದು ವೇಳೆ ನೀನೇನಾದರೂ ಪರಿಪರಿಯಾಗಿ ಯಾಚಿಸುತ್ತಿರುವ ನನ್ನನ್ನು ಪರಿತ್ಯಾಗವನ್ನೇ ಮಾಡಿದರೆ ಒಡನೆಯೇ ನಾನು ಕುದುರೆ ಮತ್ತು ರಥಗಳೊಡನೆ ಬೆಂಕಿಗೆ ಬಿದ್ದು ಸತ್ತುಹೋಗುತ್ತೇನೆ.

ಅಷ್ಟಕ್ಕೆ ಅವಕಾಶವಾಗದಂತೆ ನಿನ್ನೊಡನೆ ಬರಲು ಅನುಮತಿಯನ್ನು ದಯಪಾಲಿಸು. ಅರಣ್ಯದಲ್ಲಿ ನಿನ್ನ ತಪಸ್ಸಿಗೆ ವಿಘ್ನವನ್ನುಂಟುಮಾಡುವ ಪ್ರಾಣಿಗಳನ್ನು ರಥದಲ್ಲಿ ಕುಳಿತು ನಿವಾರಿಸುತ್ತೇನೆ. ನಿನ್ನ ತಪಸ್ಸು ನಿರ್ವಿಘ್ನವಾಗಿ ನೆರವೇರುವಂತೆ ಮಾಡುತ್ತೇನೆ.

ರಾಘವ! ನೀನು ರಾಜ್ಯಾಭಿಷಿಕ್ತನಾಗಿ ನಿನ್ನ ರಥದ ಸಾರಥ್ಯದ ಸುಖವಂತೂ ನನಗೆ ಲಭಿಸಲಿಲ್ಲ. ಈಗಲಾದರೂ ನಾನು ಕಾಡಿನಲ್ಲಿ ನಿನ್ನೊಡನಿದ್ದು ವನವಾಸದ ಸುಖವನ್ನಾದರೂ ಅನುಭವಿಸಬೇಕೆಂಬ ಆಶಯವುಳ್ಳವನಾಗಿರುವೆನು. ನನ್ನ ವಿಷಯದಲ್ಲಿ ಪ್ರಸನ್ನನಾಗು, ರಾಮಭದ್ರ! ಅರಣ್ಯದಲ್ಲಿ ನಿನ್ನ ಹತ್ತಿರವೇ ಇರಲು ನಾನು ಬಯಸಿದ್ದೇನೆ. **'ಸುಮನ್ತ್ರ! ಭವ ಮೇ ಪ್ರತ್ಯನನ್ತರಃ'** 'ಸುಮಂತ್ರ! ನೀನು ನನ್ನ ಸಮೀಪದಲ್ಲಿಯೇ

ಇರು'–ಎಂಬ ಪ್ರೀತಿಯುಕ್ತವಾದ, ನನ್ನ ಕಿವಿಗಳಿಗೆ ಅತ್ಯಾನಂದವನ್ನುಂಟು ಮಾಡುವ ಮಾತನ್ನು ನಿನ್ನಿಂದ ಕೇಳಬಯಸಿದ್ದೇನೆ.

ವೀರನೇ! ಅರಣ್ಯದಲ್ಲಿ ವಾಸಮಾಡುವ ನಿನ್ನ ಸೇವೆಯನ್ನು ಈ ಕುದುರೆಗಳೂ ಮಾಡುವುದರಿಂದ ಇವುಗಳೂ ಕೂಡ ಉತ್ತಮೋತ್ತಮವಾದ ಸದ್ಗತಿಯನ್ನು ಪಡೆಯುತ್ತವೆ. ಆದುದರಿಂದ ಇವುಗಳೂ ನನ್ನ ಜೊತೆಯಲ್ಲಿಯೇ ಇದ್ದು ನಿನ್ನ ಸೇವೆಯಲ್ಲಿ ನಿರತವಾಗಿರಲಿ.

ರಾಘವ! ಅರಣ್ಯದಲ್ಲಿಯೇ ವಾಸಮಾಡುತ್ತಿದ್ದು ನಿನ್ನ ಸೇವೆಯನ್ನು ತಲೆಬಾಗಿ (ದೀನನಾಗಿ) ದಾಸಭಾವದಿಂದ ಮಾಡುತ್ತಲಿರುವೆನು. ಇದೇ ನನಗೆ ಪರಮಸುಖ. ಅಯೋಧ್ಯೆಯನ್ನಾಗಲೀ, ದೇವಲೋಕವನ್ನಾಗಲೀ ನಾನು ಸರ್ವಥಾ ತ್ಯಜಿಸುತ್ತೇನೆ. ನನಗೆ ಅಯೋಧ್ಯೆಯೂ ಬೇಕಾಗಿಲ್ಲ; ದೇವಲೋಕವೂ ಬೇಕಾಗಿಲ್ಲ. ಕೆಟ್ಟ ಕೆಲಸವನ್ನು ಮಾಡಿದವನು ಮಹೇಂದ್ರನ ರಾಜಧಾನಿಯಾದ ಅಮರಾವತಿಯನ್ನು ಪ್ರವೇಶಿಸಲು ಸಾಧ್ಯವಾಗಲಾರದಂತೆ ನಿನ್ನನ್ನು ಕಾಡಿನಲ್ಲಿ ಬಿಟ್ಟು ದುಷ್ಕರ್ಮವನ್ನು ಮಾಡಿದೆನೆಂದು ಭಾವಿಸು ತ್ತಿರುವ ನನಗೆ ಅಯೋಧ್ಯೆಯನ್ನು ಪ್ರವೇಶಿಸಲೂ ಸಾಧ್ಯವಾಗುವುದಿಲ್ಲ. ವನ ವಾಸವು ಮುಗಿದೊಡನೆಯೇ ಈ ರಥದಲ್ಲಿಯೇ ನಿನ್ನನ್ನು ಕುಳ್ಳಿರಿಸಿಕೊಂಡು ಅಯೋಧ್ಯೆಗೆ ಹೋಗಬೇಕೆನ್ನುವ ಅಪೇಕ್ಷೆಯು ನನಗಿದೆ. ಈ ನನ್ನ ಮನೋರಥವು ಪೂರೈಸುವಂತೆ ಮಾಡು. ನಿನ್ನೊಡನಿದ್ದು ನಿನ್ನ ಶುಶ್ರೂಷೆ ಮಾಡುತ್ತಾ ಕಾಲಕಳೆಯುವ ನನಗೆ ಹದಿನಾಲ್ಕು ವರ್ಷಗಳು ಹದಿನಾಲ್ಕು ಕ್ಷಣದಂತೆ ಕಳೆದುಹೋಗುವುವು. ಆದರೆ ನಿನ್ನನ್ನಗಲಿದ ನನಗೆ ಅದೇ ಹದಿನಾಲ್ಕು ವರ್ಷಗಳು ನೂರಾರು ವರ್ಷಗಳಾಗಿ ಪರಿಣಮಿಸುವುವು.

ಭೃತ್ಯವತ್ಸಲ ತಿಷ್ಠನ್ತಂ ಭರ್ತೃಪುತ್ರಗತೇ ಪಥಿ ।
ಭಕ್ತಂ ಭೃತ್ಯಂ ಸ್ಥಿತಂ ಸ್ಥಿತ್ಯಾಂ ನ ಮಾಂ ತ್ವಂ ಹಾತುಮರ್ಹಸಿ॥

ಭತ್ಯವತ್ಸಲನೇ! ನನ್ನ ಸ್ವಾಮಿಯಾದ ದಶರಥನ ಮಗನು ಹೊರ ಟಿರುವ ಮಾರ್ಗದಲ್ಲಿ ನಿಂತಿರುವ (ರಾಮನನ್ನನುಸರಿಸಿ ಹೋಗುವ ಸಲುವಾಗಿ ಅರಣ್ಯಮಾರ್ಗದಲ್ಲಿ ರಾಮನೊಡನೆ ಉಪಸ್ಥಿತನಾಗಿರುವ), ಭೃತ್ಯನೂ ಭಕ್ತನೂ ಆಗಿರುವ, ಸೇವಕನ ರೀತಿಯಲ್ಲಿ ಅಂಗಲಾಚಿ ಬೇಡುತ್ತಿರುವ

ನನ್ನನ್ನು ಬಿಟ್ಟುಹೋಗುವುದು ಅಥವಾ ನನ್ನ ಪ್ರಾರ್ಥನೆಯನ್ನು ಅಂಗೀಕರಿಸದಿರುವುದು ನಿನಗೆ ಸರ್ವಥಾ ಯೋಗ್ಯವಲ್ಲ."*

ಹೀಗೆ ಬಹುಪ್ರಕಾರವಾಗಿ ಪುನಃ ಪುನಃ ದೈನ್ಯಭಾವದಿಂದ ಅಂಗಲಾಚಿ ಬೇಡಿಕೊಳ್ಳುತ್ತಿದ್ದ ಸುಮಂತ್ರನಿಗೆ ಸೇವಕರ ಮೇಲೆ ವಿಶೇಷವಾದ ಅನುಕಂಪವಿರುವ ಶ್ರೀರಾಮನು ಹೇಳಿದನು:

"ಸ್ವಾಮಿಯ ವಿಷಯದಲ್ಲಿ ಅಮಿತವಾದ ಪ್ರೀತಿಯುಳ್ಳವನೇ! ಸುಮಂತ್ರ! ನಿನಗೆ ನನ್ನ ಮೇಲಿರುವ ಅಪಾರವಾದ ಭಕ್ತಿಯನ್ನೂ ನಾನು ತಿಳಿದಿರುತ್ತೇನೆ. ನಾನು ನಿನ್ನನ್ನು ಹಿಂದಕ್ಕೆ ಕಳುಹಿಸುತ್ತಿರುವ ಕಾರಣವನ್ನಾದರೂ ಕೇಳು: ಮೊದಲನೆಯದಾಗಿ ನೀನೊಬ್ಬನೇ ಅಯೋಧ್ಯೆಗೆ ಹಿಂದಿರುಗಿದುದನ್ನು ನನ್ನ ಚಿಕ್ಕತಾಯಿಯಾದ ಕೈಕೇಯಿಯು ನೋಡಿದರೆ ರಾಮನು ನಿಶ್ಚಯವಾಗಿಯೂ ಅರಣ್ಯಕ್ಕೆ ಹೊರಟುಹೋದನೆಂಬ ನಂಬಿಕೆಯು ಅವಳಿಗುಂಟಾಗುತ್ತದೆ. ನಾನು ಅರಣ್ಯಕ್ಕೆ ಹೊರಟುಹೋದನೆಂದು ದೃಢವಾದ ನಂತರ ಧಾರ್ಮಿಕನಾದ ನಮ್ಮ ತಂದೆಯ ವಿಷಯದಲ್ಲಿ ಅವಳಿಗೆ ಮಿಥ್ಯಾವಾದಿಯೆಂಬ ಶಂಕೆಯಿರುವುದಿಲ್ಲ. ಮುಂದೆ ಭರತನನ್ನು ಕರೆಯಿಸಿ ಭರತನಿಂದ ರಕ್ಷಿಸಲ್ಪಡುವ ಆ ಸಮುದ್ರಾಂತವಾದ ಪುತ್ರಸಾಮ್ರಾಜ್ಯವನ್ನು (ಸಾಮ್ರಾಜ್ಯಸುಖವನ್ನು) ನನ್ನ ಚಿಕ್ಕತಾಯಿಯು ಪಡೆಯಲೆಂಬುದೇ ನಿನ್ನನ್ನು ಅಯೋಧ್ಯೆಗೆ ಕಳುಹಿಸಿಕೊಡುವ ನನ್ನ ಅತಿಮುಖ್ಯವಾದ ಆಶಯವಾಗಿದೆ.

ನನಗೆ ಮತ್ತು ದಶರಥರಾಜನಿಗೆ ಪ್ರಿಯವನ್ನುಂಟುಮಾಡುವ ಸಲುವಾಗಿ

---

*ರಾಮನಿಗೆ ಭಕ್ತವತ್ಸಲನೆಂಬ ಬಿರುದಿರುವುದನ್ನು ನಾವು ಕೇಳಿದ್ದೇವೆ. ಆದರೆ ಇಲ್ಲಿ ಸುಮಂತ್ರನು ರಾಮನನ್ನು ಭೃತ್ಯವತ್ಸಲನೆಂದು ಸಂಬೋಧನೆ ಮಾಡಿರುತ್ತಾನೆ. ಒಂದು ರೀತಿಯಲ್ಲಿ, ಭಕ್ತನಲ್ಲಿ ಸಾಮಾನ್ಯವಾಗಿ ಭೃತ್ಯಭಾವವಿದ್ದೇ ಇರುತ್ತದೆ. ಆದರೆ ಭೃತ್ಯನಲ್ಲಿ ಭಕ್ತಿಭಾವವಿರಬೇಕೆಂಬ ನಿಯಮವಿಲ್ಲ. ಭೃತ್ಯನು ತನ್ನ ಜೀವಿಕೆಗಾಗಿ ಸ್ವಾಮಿಯು ಹೇಳಿದ ಕಾರ್ಯವನ್ನು ಮಾಡುತ್ತಿರುತ್ತಾನೆ. ಆದರೆ ಭಕ್ತನು ತನ್ನನ್ನೇ ಸ್ವಾಮಿಗೆ ಅರ್ಪಿಸಿಕೊಂಡಿರುತ್ತಾನೆ. ಈ ಕಾರಣದಿಂದಲೇ ಸುಮಂತ್ರನು ಮೊದಲು ಭೃತ್ಯವತ್ಸಲನೆಂದು ರಾಮನನ್ನು ಸಂಬೋಧನೆ ಮಾಡಿದರೂ ಉತ್ತರಾರ್ಧದಲ್ಲಿ ತನ್ನನ್ನು ಭಕ್ತನೆಂದೂ, ಭೃತ್ಯನೆಂದೂ ಮತ್ತು ಭಕ್ತನೂ, ಭೃತ್ಯನೂ ಆಗಿ ಸರ್ವದಾ ಸೇವಾವೃತ್ತಿಯಲ್ಲಿಯೇ ನಿಯತನಾಗಿರುವವನೆಂದೂ ಹೇಳಿಕೊಂಡಿದ್ದಾನೆ.

ನೀನು ಅಯೋಧ್ಯೆಗೆ ಹೋಗಲೇಬೇಕು. ನಾನು ಯಾರು-ಯಾರಿಗೆ ಯಾವ-ಯಾವ ಮಾತುಗಳನ್ನು ಹೇಳಬೇಕೆಂದು ನಿರ್ದೇಶಿಸಿರುವೆನೋ ಅದರಂತೆಯೇ ಅವರವರಿಗೆ ಆಯಾ ಮಾತುಗಳನ್ನು ಹೇಳು."

ಶ್ರೀರಾಮನು ಹೀಗೆ ಸುಮಂತ್ರನಿಗೆ ಹೇಳಿ ಅವನನ್ನು ಬಾರಿ-ಬಾರಿಗೂ ಸಂತೈಸುತ್ತಾ ಸಮಾಧಾನಗೊಳಿಸಿದನು. ಬಳಿಕ ಸುಮಂತ್ರನ ಪಕ್ಕದಲ್ಲಿಯೇ ವಿನೀತನಾಗಿ ನಿಂತಿದ್ದ ಗುಹನಿಗೆ ಪುರುಷಶ್ರೇಷ್ಠನಾದ ಶ್ರೀರಾಮನು ಯುಕ್ತಿಗಳಿಂದ ಕೂಡಿರುವ ಈ ಮಾತುಗಳನ್ನು ಹೇಳಿದನು:

"ಗುಹನೇ! ಜನನಿಬಿಡವಾಗಿರುವ ಈ ಅರಣ್ಯದಲ್ಲಿ ವಾಸ ಮಾಡುವುದು ನನಗೆ ಯೋಗ್ಯವಲ್ಲ. ನಿರ್ಜನವಾದ ಅರಣ್ಯದಲ್ಲಿರುವ ಆಶ್ರಮದಲ್ಲಿಯೇ ವಾಸಮಾಡಬೇಕು. ಆಶ್ರಮವಾಸಿಗಳಿಗೆ ಉಚಿತವಾಗಿರುವ ವಿಧಿ-ವಿಧಾನ ಗಳನ್ನೇ ಅನುಸರಿಸುವುದು ನನ್ನ ಕರ್ತವ್ಯವಾಗಿದೆ. ತಪಸ್ವಿಜನರಿಗೆ ಭೂಷಣಪ್ರಾಯವಾದ ನಿಯಮಗಳನ್ನು ಕೈಗೊಂಡು ನನ್ನ ತಂದೆಯಾದ ದಶರಥನಿಗೂ ಸೀತಾ-ಲಕ್ಷ್ಮಣರಿಗೂ ಇನ್ನೂ ಹೆಚ್ಚಿನ ಹಿತವನ್ನು ಬಯಸುತ್ತೇನೆ. (ನಾನು ಋಷಿಗಳಂತೆ ಅನುಷ್ಠಾನಪರನಾಗಿದ್ದರೆ ನಾನು ಬಯಸಿದಂತೆ ಎಲ್ಲರಿಗೂ ಹಿತವುಂಟಾಗುತ್ತದೆ.) ಋಷಿಸದೃಶನಾಗಿರಲು ನಾನು ಮೊದಲು ತಲೆಗೂದಲನ್ನು ಜಟೆಗಳನ್ನಾಗಿ ಪರಿವರ್ತಿಸಿಕೊಂಡು ಇಲ್ಲಿಂದ ಪ್ರಯಾಣಮಾಡುತ್ತೇನೆ. ಅದಕ್ಕಾಗಿ ಆಲದ ಮರದ ಹಾಲನ್ನು ಈಗಲೇ ತೆಗೆದುಕೊಂಡುಬಾ."

ಶ್ರೀರಾಮನು ಹೀಗೆ ಹೇಳಿದೊಡನೆಯೇ ಗುಹನು ಶ್ರೀರಾಮನಿಗೆ ಆಲದ ಮರದ ಹಾಲನ್ನು ತಂದುಕೊಟ್ಟನು. ಗುಹನು ತಂದುಕೊಟ್ಟ ಆ ಹಾಲಿನಿಂದ ಶ್ರೀರಾಮನು ತನ್ನ ಕೇಶರಾಶಿಯನ್ನೂ ಲಕ್ಷ್ಮಣನ ಕೇಶರಾಶಿಯನ್ನೂ ಜಟೆಗಳನ್ನಾಗಿ ಪರಿವರ್ತಿಸಿದನು. ಅದರಿಂದಾಗಿ ದೀರ್ಘಬಾಹುವೂ ಮತ್ತು ನರಶ್ರೇಷ್ಠನೂ ಆದ ಶ್ರೀರಾಮನು ಜಟಿಲತ್ವವನ್ನು ಧಾರಣೆಮಾಡಿದನು. (ತಪಸ್ವಿಯಾದನು)*

---

*ಜಟಿಲ ಎಂದರೆ ತಪಸ್ವಿ. ಜಟಿಲತ್ವ ಎಂದರೆ ತಪಸ್ವಿತ್ವ. 'ಸಮಸ್ಯೆಯು ಬಹಳ ಜಟಿಲವಾಗಿದೆ'–ಎಂದು ಹೇಳುವ ವಾಡಿಕೆಯಿದೆ. ಜಟಿಲವಾಗಿದೆಯೆಂದರೆ–'ಬಿಡಿಸ

ನಾರುಮಡಿಯನ್ನುಟ್ಟು ಜಟಾಮಂಡಲವನ್ನು ಧರಿಸಿದ್ದ ರಾಮ-ಲಕ್ಷ್ಮಣ ಸಹೋದರರು ಸಾಕ್ಷಾತ್ ಋಷಿಯುಗ್ಮದಂತೆಯೇ ಪ್ರಕಾಶಿಸಿದರು.

ಬಳಿಕ ಶ್ರೀರಾಮನು ಲಕ್ಷ್ಮಣನೊಡನೆ ವೈಖಾನಸಮಹರ್ಷಿಗಳಿಂದ ಅನುಸರಿಸಲ್ಪಟ್ಟ ಮಾರ್ಗವನ್ನು ತನ್ನ ವನವಾಸಕಾಲದಲ್ಲಿ ಅನುಸರಿಸಲು ಸಂಕಲ್ಪಮಾಡಿ ಗಂಗಾತರಣಕ್ಕಾಗಿ ಸಹಾಯಕನಾದ ಗುಹನಿಗೆ ಹೇಳಿದನು:*

ಅಪ್ರಮತ್ತೋ ಬಲೇ ಕೋಶೇ ದುರ್ಗೇ ಜನಪದೇ ತಥಾ।
ಭವೇಥಾ ಗುಹ ರಾಜ್ಯಂ ಹಿ ದುರಾರಕ್ಷತಮಂ ಮತಮ್ ॥೭೨॥

"ಗುಹ! ಚತುರಂಗಬಲವನ್ನು ಕಟ್ಟುವುದರಲ್ಲಿಯೂ, ಕೋಶ ಸಂಗ್ರಹದಲ್ಲಿಯೂ, ದುರ್ಗಾದಿಗಳನ್ನು ನಿರ್ಮಾಣಮಾಡುವುದರಲ್ಲಿಯೂ ಬಹಳ ಜಾಗರೂಕತೆಯಿಂದಿರು. ರಾಜ್ಯವು ಅತ್ಯಂತಕಷ್ಟದಿಂದ ರಕ್ಷಿಸಲ್ಪಡತಕ್ಕುದೆಂಬುದು ನನ್ನ ಅಭಿಪ್ರಾಯವಾಗಿದೆ."

ಹೀಗೆ ಗುಹನಿಗೆ ಹಿತೋಪದೇಶಮಾಡಿ, ತಾತ್ಕಾಲಿಕವಾಗಿ ಮಾಡ ಬೇಕಾದ ಕಾರ್ಯಕ್ಕೆ ನಿರ್ದೇಶನಮಾಡಿ ಇಕ್ಷ್ವಾಕುನಂದನನಾದ ಆಕುಲ ರಹಿತನಾದ ಶ್ರೀರಾಮನು ಸೀತಾ-ಲಕ್ಷ್ಮಣರೊಡನೆ ಅಲ್ಲಿಂದ ಹೊರಟನು. ಶ್ರೀರಾಮನ ನಿರ್ದೇಶದಂತೆ ಆ ವೇಳೆಗಾಗಲೇ ಗುಹನು ಗಂಗಾನದಿಯ ತೀರ

ಲಾಗದಷ್ಟು ಕಗ್ಗಂಟಾಗಿದೆ'–ಎಂದರ್ಥ. ಆಲದ ಮರದ ಹಾಲನ್ನು ಕೇಶರಾಶಿಗೆ ಹಾಕಿಕೊಂಡು ಅದನ್ನು ಜಡೆಗಟ್ಟುವಂತೆ ಮಾಡಿದಲ್ಲಿ ಪುನಃ ಅದನ್ನು ಬಾಚಣಿಗೆಯಿಂದಾಗಲೀ ಮತ್ತಾವ ಸಾಧನದಿಂದಾಗಲೀ ಬಿಡಿಸುವ ಸಾಧ್ಯತೆಯೇ ಇಲ್ಲ. ಈ ಕಾರಣದಿಂದಲೇ ಬಿಡಿಸಲಾಗದ ಸಮಸ್ಯೆಗೆ ಜಟಿಲವಾಗಿದೆಯೆಂಬ ಪದಪ್ರಯೋಗ ಮಾಡುತ್ತಾರೆ.

*ಬ್ರಹ್ಮನ ಕಾಲುಗುರುಗಳಿಂದ ಹುಟ್ಟಿದವರಿಗೆ ವೈಖಾನಸರೆಂದೂ, ಬಾಲದಿಂದ ಹುಟ್ಟಿ ದವರಿಗೆ ವಾಲಖಿಲ್ಯರೆಂದೂ ಹೆಸರು. ಯೇ ನಖಾಃ। ತೇ ವೈಖಾನಸಾಃ । ಯೇ ವಾಲಾಃ । ತೇ ವಾಲಖಿಲ್ಯಾಃ । (ಯಜುರಾರಣ್ಯಕ) ವೈಖಾನಸಮಾರ್ಗವೆಂದರೆ ವಾನಪ್ರಸ್ಥಾಶ್ರಮ ವೆಂದು ನೇರವಾದ ಅರ್ಥವಿದೆ. ಆದರೆ ರಾಮನಿನ್ನೂ ಗೃಹಸ್ಥ. ತಾತ್ಕಾಲಿಕವಾಗಿ ವಾನ ಪ್ರಸ್ಥಾಶ್ರಮವನ್ನು ಸ್ವೀಕರಿಸಿ, ಅನಂತರದಲ್ಲಿ ಪುನಃ ಗೃಹಸ್ಥಾಶ್ರಮವನ್ನು ಪ್ರವೇಶಿ ಸುವ ಸಾಧ್ಯತೆಯಿಲ್ಲ. ಹೀಗೆಯೇ ವ್ಯಾಖ್ಯಾನಕಾರರು ಅರ್ಥಮಾಡಿರುತ್ತಾರೆ. ಉತ್ತರಾಶ್ರಮಕ್ಕೆ ಪ್ರವೇಶಿಸಿ ಪುನಃ ಪೂರ್ವಾಶ್ರಮಕ್ಕೆ ಬರುವುದು ನಿಂದ್ಯವಾದುದು.

ದಲ್ಲಿ ಗಂಗೆಯನ್ನು ದಾಟುವ ಸಲುವಾಗಿ ನಾವೆಯನ್ನು ಸಿದ್ಧಗೊಳಿಸಿದ್ದನು. ಶ್ರೀರಾಮನು ನದಿಯ ತೀರದಲ್ಲಿದ್ದ ಆ ನಾವೆಯನ್ನು ನೋಡಿ ರಭಸದಿಂದ ವೇಗವಾಗಿ ಹರಿದುಹೋಗುತ್ತಿದ್ದ ಗಂಗಾನದಿಯನ್ನು ದಾಟುವ ಇಚ್ಛೆಯಿಂದ ಲಕ್ಷ್ಮಣನಿಗೆ ಹೇಳಿದನು:

"ಲಕ್ಷ್ಮಣ! ಈ ದೋಣಿಯನ್ನು ಜಾಗರೂಕತೆಯಿಂದ ಹಿಡಿದುಕೊಂಡು ಮನಸ್ವಿನಿಯಾದ ಸೀತಾದೇವಿಯನ್ನು ಮೆಲ್ಲನೆ ನಾವೆಗೆ ಹತ್ತಿಸು. ಬಳಿಕ ನೀನೂ ಹತ್ತಿಕೊ."

ಅಣ್ಣನ ಆಜ್ಞೆಯನ್ನು ಕೇಳಿದ ಲಕ್ಷ್ಮಣನು ದೋಣಿಯನ್ನು ಹತ್ತಲು ಪ್ರತಿಬಂಧಕರೂಪವಾಗಿದ್ದ ಸರ್ವಸ್ವವನ್ನೂ (ಮುಳ್ಳುಗಿಡ ಗಳೇ ಮುಂತಾದುವನ್ನು) ತೆಗೆದುಹಾಕಿ ದೋಣಿಯನ್ನು ಸುಲಭವಾಗಿ ಹತ್ತಲು ಸಾಧ್ಯವಾಗುವಂತೆ ಮಾಡಿ ಮೊದಲು ಮೈಥಿಲಿಯನ್ನು ಹತ್ತಿಸಿ, ಅನಂತರ ತಾನೂ ಹತ್ತಿದನು. ಬಳಿಕ ತೇಜಸ್ವಿಯಾದ ಶ್ರೀರಾಮನು ತಾನಾಗಿಯೇ ದೋಣಿಯನ್ನೇರಿದನು. ಮೂವರೂ ದೋಣಿಯನ್ನು ಹತ್ತಿದನಂತರ ನಿಷಾದರ ಅಧಿಪತಿಯಾದ ಗುಹನು ತನ್ನ ಜ್ಞಾತಿ-ಬಾಂಧವರಿಗೆ ದೋಣಿಯನ್ನು ನಡೆಸಿಕೊಂಡು ಹೋಗುವಂತೆ ಪ್ರೇರೇಪಿ ಸಿದನು. ಮಹಾತೇಜಸ್ವಿಯಾದ ಶ್ರೀರಾಮನಾದರೋ ದೋಣಿಯನ್ನು ಹತ್ತಿದನಂತರ ತನ್ನ ಮತ್ತು ತನ್ನವರ ಹಿತಕ್ಕಾಗಿ ಬ್ರಾಹ್ಮಣರಿಗೂ ಮತ್ತು

ಆದುದರಿಂದ 'ವೈಖಾನಸಮಾರ್ಗಂ ಆಸ್ಥಿತಃ' ಎಂದರೆ–ವಾನಪ್ರಸ್ಥಾಶ್ರಮದ ರೀತಿಯ ಮಾರ್ಗದಲ್ಲಿ ನಿಂತು, ತತ್ಸಂಬಂಧ ವ್ರತಕ್ಕೆ ಸಂಕಲ್ಪಮಾಡಿದನು–ಎಂಬುದಾಗಿ ಅರ್ಥಮಾಡಬೇಕೇ ಹೊರತು ಸಂಪೂರ್ಣವಾಗಿ ವಾನಪ್ರಸ್ಥಾಶ್ರಮವನ್ನೇ ಕೈಗೊಂಡನೆಂದು ಅರ್ಥಮಾಡುವುದು ಸರಿಯಲ್ಲ. ಮೇಲಾಗಿ ವಾನಪ್ರಸ್ಥಾಶ್ರಮದ ಸಕಲಕರ್ಮಗಳನ್ನೂ ಇವನು ಮಾಡಲು ಸಂಕಲ್ಪಮಾಡಿಲ್ಲ. 'ಬ್ರಹ್ಮಚರ್ಯಾದಿ ಕೆಲವು ವ್ರತನಿಯಮಗಳನ್ನು ಪಾಲಿಸಲು ಸಂಕಲ್ಪಮಾಡಿರುವನು.' ಎಂದು ವಿವರಣೆ ಕೊಡಬಹುದಾಗಿದೆ. "ಸಮ್ಯಕ್ಸಂಕಲ್ಪಜಃ ಕಾಮೋ ಧರ್ಮಮೂಲಮಿದಂ ಸ್ಮೃತಮ್" [ಮನುಸ್ಮೃತಿಃ] (ಒಳ್ಳೆಯ ಸಂಕಲ್ಪದಿಂದ ಕೈಗೊಂಡ ಕಾರ್ಯವು ಧರ್ಮಮೂಲವೇ ಆಗಿರುತ್ತದೆ) ಈ ಸ್ಮೃತಿಗೆ ಅನುಸಾರವಾಗಿ ತಂದೆಯ ಮಾತಿನಂತೆ ಕೆಲವು ಕಾಲ ವೈಖಾನಸಧರ್ಮವನ್ನು ಅವಲಂಬಿಸಿ ನಡೆಯುವುದು ಧರ್ಮವಿರುದ್ಧವಲ್ಲ.

ಕ್ಷತ್ರಿಯರಿಗೂ ಹೇಳಲು ವಿಹಿತವಾದ ಮಂತ್ರವನ್ನು ಜಪಿಸಿದನು.* ಶ್ರೀರಾಮನು ಮಂತ್ರವನ್ನು ಪುನಶ್ಚರಣೆಮಾಡಿದನಂತರ ಯಥಾಶಾಸ್ತ್ರವಾಗಿ



* ಒಬ್ಬ ವ್ಯಾಖ್ಯಾನಕಾರರು ಬ್ರಹ್ಮವತ್=ವೇದಮೂರ್ತಿಯಾದ ಬ್ರಹ್ಮೋಪಾದಿಯಲ್ಲಿ ಮಹಾತೇಜಸ್ವಿಯಾದ ಶ್ರೀರಾಮನು. ಕ್ಷತ್ರವತ್= ಕ್ಷತ್ರಿಯಕುಲಕ್ಕೆ ವಿಹಿತವಾಗುವಂತೆ ಮಂತ್ರವನ್ನು ಜಪಿಸಿದನು. "ಸುತ್ರಾಮಾಣಮೃಚಾ ನಾವಮಾರೋಹೇತ್" ಎಂಬ ಸ್ಮೃತ್ಯುಕ್ತಿಗೆ ಅನುಸಾರವಾಗಿ "ಸುತ್ರಾಮಾಣಂ ಪೃಥವೀಂ" ಎಂಬ ಋಕ್ಕನ್ನು ಹೇಳಿ ನಾವೆಯನ್ನು ಹತ್ತಬೇಕು. "ದೈವೀಂ ನಾವಂ" ಎಂಬ ಮಂತ್ರವು ಬ್ರಾಹ್ಮಣ–ಕ್ಷತ್ರಿಯರಿಬ್ಬರಿಗೂ ಸಮಾನವೆಂದೂ ಎರಡು ವರ್ಣದವರೂ ನಾವೆಯನ್ನು ಹತ್ತುವ ಕಾಲದಲ್ಲಿ ಈ ಮಂತ್ರವನ್ನು ಜಪಿಸಬೇಕೆಂದೂ ಒಬ್ಬ ವ್ಯಾಖ್ಯಾನಕಾರರು ಹೇಳಿದ್ದಾರೆ.

ಶುದ್ಧಾಚಮನಮಾಡಿ ಸಂತುಷ್ಟನಾಗಿ ಸೀತಾದೇವಿಯೊಡನೆ ಗಂಗಾದೇವಿಗೆ ನಮಸ್ಕಾರಮಾಡಿದನು. ಮಹಾರಥನಾದ ಲಕ್ಷ್ಮಣನು ಕೂಡ ರಾಮನಂತೆಯೇ ಗಂಗೆಗೆ ನಮಸ್ಕರಿಸಿದನು. ಸುಮಂತ್ರನಿಗೆ ಅಯೋಧ್ಯೆಗೆ ಹಿಂದಿರುಗಲು ಅನುಮತಿಯನ್ನಿತ್ತು ಅಂತೆಯೇ ಚತುರಂಗಬಲ ಸಮೇತನಾಗಿ ಬಂದಿದ್ದ ಗುಹನಿಗೂ ಪಟ್ಟಣಕ್ಕೆ ತೆರಳಲು ಹೇಳಿ ನಾವೆಯಲ್ಲಿ ಕುಳಿತು ನಾವಿಕರಿಗೆ ದೋಣಿಯನ್ನು ಮುಂದೆ ಬಿಡುವಂತೆ ಅವಸರಿಸಿದನು.*

ಗುಹನಿಂದ ನೇಮಿಸಲ್ಪಟ್ಟ ನಾವಿಕರಿಂದ ನಡೆಸಲ್ಪಡುತ್ತಿದ್ದ ಆ ದೋಣಿಯು ಶೋಭಾಯಮಾನವಾದ ಹುಟ್ಟುಗಳಿಂದ ದೂಡಲ್ಪಟ್ಟು ಗಂಗಾನದಿಯ ನೀರಿನಲ್ಲಿ ಧಾವಿಸಿತು. ಕಳಂಕರಹಿತಳಾದ ಸೀತಾದೇವಿಯು ರಾಮ-ಲಕ್ಷ್ಮಣರೊಡನೆ ಗಂಗಾನದಿಯ ಮಧ್ಯಭಾಗವನ್ನು ಸೇರಿದನಂತರ ಕೈಜೋಡಿಸಿಕೊಂಡು ಗಂಗೆಯನ್ನು ಪ್ರಾರ್ಥಿಸಿದಳು:

ಪುತ್ರೋ ದಶರಥಸ್ಯಾಯಂ ಮಹಾರಾಜಸ್ಯ ಧೀಮತಃ।
ನಿದೇಶಂ ಪಾಲಯತ್ವೇನಂ ಗಙ್ಗೇ ತ್ವದಭಿರಕ್ಷಿತಃ ॥೮೩॥

ಚತುರ್ದಶ ಹಿ ವರ್ಷಾಣಿ ಸಮಗ್ರಾಣ್ಯುಷ್ಯ ಕಾನನೇ।
ಭ್ರಾತ್ರಾ ಸಹ ಮಯಾ ಚೈವ ಪುನಃ ಪ್ರತ್ಯಾಗಮಿಷ್ಯತಿ ॥೮೪॥

“ಪರಮಪವಿತ್ರಳಾದ ಗಂಗಾಮಾತೆಯೇ! ನನ್ನ ಪತಿಯಾದ, ಧೀಮಂತನಾದ ದಶರಥರಾಜನ ಮಗನಾದ ಶ್ರೀರಾಮನು, ತಂದೆಯ ಆದೇಶ

ವಾಲ್ಮೀಕಿರಾಮಾಯಣದಲ್ಲಿ ಗುಹನ ಜ್ಞಾತಿ-ಬಾಂಧವರು ದೋಣಿಯನ್ನು ನಡೆಸಿದರೆಂದು ಸ್ಪಷ್ಟವಾಗಿದೆ. ಆದರೆ ಆಧ್ಯಾತ್ಮರಾಮಾಯಣದಲ್ಲಿ ಗುಹನೇ ದೋಣಿಯನ್ನು ನಡೆಸಿದನೆಂದಿದೆ: ಸ್ವಯಮೇವ ದೃಢಾಂ ನಾವಮಾನಿಯಾಯ ಸುಲಕ್ಷಣಾಮ್ । ಸ್ವಾಮಿನ್ನಾರುಹ್ಯತಾಂ ನೌಕಾಂ ಸೀತಯಾ ಲಕ್ಷ್ಮಣೇನ ಚ। ವಾಹಯೇ ಜ್ಞಾತಿಭಿಃ ಸಾರ್ಧಮಹಮೇವ ಸಮಾಹಿತಃ॥ ಗುಹಸ್ತಾನ್ವಾಹಯಾಮಾಸ ಜ್ಞಾತಿಭಿಃ ಸಹಿತಃ ಸ್ವಯಮ್ ॥೨೧॥ ಶ್ರೀರಾಮನ ಆಜ್ಞಾನುಸಾರವಾಗಿ ಗುಹನೇ ಸುದೃಢವಾದ ನಾವೆಯನ್ನು ತಂದು ಶ್ರೀರಾಮನಿಗೆ ಹೇಳಿದನು: ‘ಪ್ರಭುವೇ! ಸೀತಾ-ಲಕ್ಷ್ಮಣರೊಡನೆ ದೋಣಿಯಲ್ಲಿ ಕುಳಿತುಕೊ. ನನ್ನ ಜ್ಞಾತಿ-ಬಾಂಧವರೊಡಗೂಡಿ ನಾನೇ ಎಚ್ಚರಿಕೆಯಿಂದ ಈ ದೋಣಿಯನ್ನು ನಡೆಸುತ್ತೇನೆ’–ಹೀಗೆ ಹೇಳಿ ಗುಹನೇ ತನ್ನ ಜ್ಞಾತಿ-ಬಾಂಧವರೊಡನೆ ರಾಮ-ಸೀತಾ-ಲಕ್ಷ್ಮಣರನ್ನು ದೋಣಿಯ ಮೂಲಕವಾಗಿ ಒಯ್ದನು.

ವನ್ನು ಪರಿಪಾಲಿಸುತ್ತಾ ನಿನ್ನಿಂದ ರಕ್ಷಿಸಲ್ಪಟ್ಟವನಾಗಿ ಹದಿನಾಲ್ಕು ವರ್ಷಗಳನ್ನು ಸಮಗ್ರವಾಗಿ ಅರಣ್ಯದಲ್ಲಿ ಕಳೆದು ನನ್ನೊಡನೆಯೂ ಲಕ್ಷ್ಮಣನೊಡನೆಯೂ ಕೂಡಿ ಪುನಃ ಇದೇ ಮಾರ್ಗವಾಗಿ ಅಯೋಧ್ಯೆಗೆ ಹಿಂದಿರುಗುತ್ತಾನೆ.

ತತಸ್ತ್ವಾಂ ದೇವಿ ಸುಭಗೇ ಕ್ಷೇಮೇಣ ಪುನರಾಗತಾ।
ಯಕ್ಷ್ಯೇ ಪ್ರಮುದಿತಾ ಗಙ್ಗೇ ಸರ್ವಕಾಮಸಮೃದ್ಧಿನೀ ॥೮೫॥

ಎಲ್ಲ ಇಷ್ಟಾರ್ಥಗಳನ್ನೂ ದಯಪಾಲಿಸುವ ಸೌಭಾಗ್ಯವತಿಯಾದ ಗಂಗಾದೇವಿಯೇ! ಶ್ರೀರಾಮನ ಜೊತೆಯಲ್ಲಿಯೇ ಪುನಃ ಇಲ್ಲಿಗೆ ಕ್ಷೇಮದಿಂದ ಬರುವ ನಾನು ಸಂತೋಷಭರಿತಳಾಗಿ ನಿನ್ನನ್ನು ಪೂಜಿಸುತ್ತೇನೆ.

ತ್ವಂ ಹಿ ತ್ರಿಪಥಗೇ ದೇವಿ ಬ್ರಹ್ಮಲೋಕಂ ಸಮೀಕ್ಷಸೇ।
ಭಾರ್ಯಾ ಚೋದಧಿರಾಜಸ್ಯ ಲೋಕೇಽಸ್ಮಿನ್ಸಂಪ್ರದೃಶ್ಯಸೇ ॥೮೬॥

ಸಾ ತ್ವಾಂ ದೇವಿ ನಮಸ್ಯಾಮಿ ಪ್ರಶಂಸಾಮಿ ಚ ಶೋಭನೇ।
ಪ್ರಾಪ್ತರಾಜ್ಯೇ ನರವ್ಯಾಘ್ರೇ ಶಿವೇನ ಪುನರಾಗತೇ ॥೮೭॥

ಗವಾಂ ಶತಸಹಸ್ರಂ ಚ ವಸ್ತ್ರಾಣ್ಯನ್ನಂ ಚ ಪೇಶಲಮ್।
ಬ್ರಾಹ್ಮಣೇಭ್ಯಃ ಪ್ರದಾಸ್ಯಾಮಿ ತವ ಪ್ರಿಯಚಿಕೀರ್ಷಯಾ ॥೮೮॥

ಸ್ವರ್ಗ, ಮರ್ತ್ಯ, ಪಾತಾಳ–ಈ ಮೂರು ಲೋಕಗಳಲ್ಲಿಯೂ ಪ್ರವಹಿಸುವ ಗಂಗಾದೇವಿಯೇ! ನಿನ್ನ ಮಹಿಮೆಯು ಅಪಾರವಾದುದು. ನೀನು ಬ್ರಹ್ಮಲೋಕವನ್ನು ವ್ಯಾಪಿಸಿರುವೆ. ಸಮುದ್ರರಾಜನ ಪತ್ನಿಯಾಗಿ ಈ ಲೋಕದಲ್ಲೂ ಚೆನ್ನಾಗಿ ಬೆಳಗುತ್ತಿರುವೆ. ಅಂತಹ ಪರಮಪಾವನೆಯಾದ ನಿನ್ನನ್ನು ನಾನು ಸ್ತೋತ್ರಮಾಡುತ್ತೇನೆ ಮತ್ತು ಪ್ರಶಂಸೆಮಾಡುತ್ತೇನೆ. ಪರಮಶೋಭನಳೇ! ನರವ್ಯಾಘ್ರನಾದ ಶ್ರೀರಾಮನು ನಿನ್ನ ಅನುಗ್ರಹದಿಂದ ಯಾವ ವಿಧವಾದ ತೊಂದರೆಯೂ ಇಲ್ಲದೇ ವನವಾಸವನ್ನು ಶುಭಪ್ರದವಾಗಿ ಮುಗಿಸಿ ಹಿಂದಿರುಗಿ ಕೋಸಲರಾಜ್ಯವನ್ನು ಪಡೆದನಂತರ ನಾನು ನಿನ್ನ ಪ್ರೀತ್ಯರ್ಥವಾಗಿ ಒಂದು ಲಕ್ಷ್ಯ ಗೋವುಗಳನ್ನೂ, ಅನೇಕಾನೇಕ ವಸ್ತ್ರಗಳನ್ನೂ, ರುಚಿಕರವಾದ ಭಕ್ಷ್ಯ-ಭೋಜ್ಯಾದಿಗಳಿಂದ ಕೂಡಿದ ಅನ್ನವನ್ನೂ ಬ್ರಾಹ್ಮಣರಿಗೆ ದಾನಮಾಡುತ್ತೇನೆ.

ಸುರಾಘಟಸಹಸ್ರೇಣ ಮಾಂಸಭೂತೌದನೇನ ಚ।
ಯಕ್ಷ್ಯೇ ತ್ವಾಂ ಪ್ರಯತಾ ದೇವಿ ಪುರೀಂ ಪುನರುಪಾಗತಾ ॥೮೯॥

ನಾನು ಕುಶಲಿಯಾಗಿ ರಾಮ-ಲಕ್ಷ್ಮಣರೊಡನೆ ಅಯೋಧ್ಯೆಗೆ ಹಿಂದಿರುಗಿದ ಬಳಿಕ ಸಾವಿರಾರು ಘಟಗಳಲ್ಲಿ ತುಂಬಿದ ಸುರೆಯಿಂದಲೂ, ಮಾಂಸಮಿಶ್ರವಾದ ಅನ್ನದಿಂದಲೂ ನಿನ್ನನ್ನು ಆರಾಧಿಸುತ್ತೇನೆ.*

ಯಾನಿ ತ್ವತ್ತೀರವಾಸೀನಿ ದೈವತಾನಿ ವಸನ್ತಿ ಚ।
ತಾನಿ ಸರ್ವಾಣಿ ಯಕ್ಷ್ಯಾಮಿ ತೀರ್ಥಾನ್ಯಾಯತನಾನಿ ಚ ॥೯೦॥

ನಿನ್ನ ತೀರದಲ್ಲಿ ಯಾವ ಯಾವ ದೇವತೆಗಳು ಪ್ರತಿಷ್ಠಿತರಾಗಿರುವರೋ ಆ ಎಲ್ಲ ದೇವತೆಗಳನ್ನೂ ಆರಾಧಿಸುತ್ತೇನೆ. ನಿನ್ನಲ್ಲಿಯೇ ಇರುವ (ಮಣಿಕರ್ಣಿಕಾ-ಪ್ರಯಾಗಾದಿ) ತೀರ್ಥಗಳನ್ನೂ–(ಕಾಶಿಯೇ ಮುಂತಾದ) ಪುಣ್ಯಕ್ಷೇತ್ರಗಳಲ್ಲಿರುವ ದೇವಮಂದಿರಗಳನ್ನೂ ಸಂದರ್ಶಿಸುತ್ತೇನೆ.

ಪುನರೇವ ಮಹಾಬಾಹುರ್ಮಯಾ ಭ್ರಾತ್ರಾ ಚ ಸಂಗತಃ।
ಅಯೋಧ್ಯಾಂ ವನವಾಸಾತ್ತು ಪ್ರವಿಶತ್ವನಘೋಽನಘೇ ॥೯೧॥

ಪಾಪರಹಿತಳೇ! ನಿನ್ನ ಅನುಗ್ರಹದಿಂದ ಪಾಪರಹಿತನಾದ, ಮಹಾ

ಹರಕೆ ಹೊತ್ತುಕೊಳ್ಳುವುದು, ಕೆಲವು ದೇವತೆಗಳಿಗೆ ಮದ್ಯ ಮತ್ತು ಮಾಂಸಗಳಿಂದ ಬಲಿಯನ್ನರ್ಪಿಸುವುದು ಈಗಲೂ ರೂಢಿಯಲ್ಲಿದೆ. ಗಂಗಾನದಿಯ ಅಧಿದೇವತೆಗೂ ಈ ವಿಧವಾದ ಬಲಿಯನ್ನು ಹಿಂದೆ ಅರ್ಪಿಸುತ್ತಿದ್ದರೆಂಬುದನ್ನು ಸೀತಾದೇವಿಯು ಹೇಳಿರುವ ಈ ಮಾತಿನಿಂದ ನಾವು ಊಹಿಸಬಹುದಾಗಿದೆ. ಈಗಲೂ ಗಂಗಾನದಿಗೆ ಹೀಗೆ ಬಲಿಯನ್ನರ್ಪಿಸುವರೇ–ಎಂಬ ವಿಷಯವು ನಮಗೆ ತಿಳಿಯದು. ಆದರೆ ಒಬ್ಬ ವ್ಯಾಖ್ಯಾನಕಾರರಿಗೆ ಈ ವಿಧವಾದ ಬಲಿಯನ್ನು ಗಂಗಾದೇವಿಗೆ ಕೊಡುವುದು ಸಹ್ಯವಾಗಲಿಲ್ಲವೆಂದು ತೋರುತ್ತದೆ. ಆದುದರಿಂದ ಅವರು ಈ ಎರಡು ಪದಗಳಿಗೂ ಈ ರೀತಿಯಲ್ಲಿ ಅರ್ಥಮಾಡಿರುತ್ತಾರೆ: ಸುರಾಘಟಸಹಸ್ರೇಣ:–ಸುರೇಷು=ದೇವೇಷು ನ ಘಟನ್ತೇ= ನ ಸನ್ತೀತ್ಯರ್ಥಃ, ತೇಷಾಂ ಸಹಸ್ರಂ ತೇನ= ಸಹಸ್ರಸಂಖ್ಯಾಕಸುರ ದುರ್ಲಭಪದಾರ್ಥೇನೇತ್ಯರ್ಥಃ. ದೇವತೆಗಳಿಗೂ ಸುದುರ್ಲಭವಾದ ಸಾವಿರಾರು ಸಂಖ್ಯಾತವಾದ ಅತ್ಯಮೋಘವಾದ ವಸ್ತುಗಳಿಂದ ನಿನ್ನನ್ನು ಆರಾಧಿಸುತ್ತೇನೆ. ಮಾಂಸಭೂತೌದನೇನ:- ಮಾ=ನಾಸ್ತಿ, ಅಂಸಃ= ರಾಜಭಾಗಃ ಯಸ್ಯಾಂ, ಸಾ ಏವ ಭೂಃ= ಪೃಥ್ವೀ ಚ ಉತಂ=ವಸ್ತ್ರಂ ಚ ಓದನಂ ಚ ಏತೇಷಾಂ ಸಮಾಹಾರಃ, ತೇನ ಚ ತ್ವಾಂ ಯಕ್ಷ್ಯೇ ರಾಜರು ಉಪಭೋಗಿಸದಿರುವ ಪೃಥ್ವಿ, ವಸ್ತ್ರ ಮತ್ತು ಓದನಾದಿಗಳಿಂದಲೂ ನಿನ್ನನ್ನು ಆರಾಧಿಸುತ್ತೇನೆ.

ಬಾಹುವಾದ ಶ್ರೀರಾಮನು ನನ್ನಿಂದಲೂ ಅನುಜನಾದ ಲಕ್ಷ್ಮಣನಿಂದಲೂ ಕೂಡಿದವನಾಗಿ ವನವಾಸವನ್ನು ಸುಖವಾಗಿ ಮುಗಿಸಿಕೊಂಡು ಅಯೋಧ್ಯೆಗೆ ಹಿಂದಿರುಗುವಂತಾಗಲಿ."

ಹೀಗೆ ನಿಷ್ಕಳಂಕಳಾದ, ಪತಿಗೆ ಅನುಕೂಲಳಾದ ಸೀತಾದೇವಿಯು ಸ್ತೋತ್ರಮಾಡುತ್ತಿದ್ದಾಗಲೇ ರಾಮ-ಲಕ್ಷ್ಮಣರೊಡನೆ ಗಂಗಾನದಿಯ ದಕ್ಷಿಣ ತೀರವನ್ನು ಬಹುಶೀಘ್ರವಾಗಿ ತಲುಪಿದಳು.

ದೋಣಿಯು ದಕ್ಷಿಣತೀರವನ್ನು ಸೇರಿದೊಡನೆಯೇ ಶತ್ರುತಾಪಕನಾದ ಶ್ರೀರಾಮನು ಸೀತಾ-ಲಕ್ಷ್ಮಣರ ಸಮೇತನಾಗಿ ದೋಣಿಯಿಂದಿಳಿದು ಮುಂದಿನ ಪ್ರಯಾಣಕ್ಕೆ ಸನ್ನದ್ಧನಾದನು. ಬಳಿಕ ಶ್ರೀರಾಮನು ಸುಮಿತ್ರಾನಂದವರ್ಧಕ ನಾದ ಲಕ್ಷ್ಮಣನಿಗೆ ಹೇಳಿದನು:

"ಲಕ್ಷ್ಮಣ! ನಾವು ಪ್ರವೇಶಿಸಲಿರುವ ಅರಣ್ಯವು ಜನಭರಿತವಾಗಿರಲಿ; ನಿರ್ಜನವಾಗಿರಲಿ–ಸೀತೆಯ ರಕ್ಷಣೆಯಲ್ಲಿ ಸರ್ವದಾ ಜಾಗರೂಕನಾಗಿರು. ಹಿಂದೆಂದೂ ಕಾಣದ ನಿರ್ಜನವಾದ ಈ ಅರಣ್ಯದಲ್ಲಿ ನಾವು ನಮ್ಮ ರಕ್ಷಣೆಯ ವಿಷಯದಲ್ಲಿ ಜಾಗರೂಕರಾಗಿರುವುದು ಅತ್ಯವಶ್ಯಕವಾಗಿದೆ. ಈ ಕಾರಣದಿಂದ ನೀನು ಮುಂದೆ ಹೋಗು. ಸೀತೆಯು ನಿನ್ನನ್ನನುಸರಿಸಲಿ. ನಾನು, ನಿನ್ನನ್ನೂ ಮತ್ತು ಸೀತೆಯನ್ನೂ ಸಂರಕ್ಷಿಸುತ್ತಾ ಹಿಂದೆ ನಡೆದುಬರುತ್ತೇನೆ. ಈ ಭಯಂಕರವಾದ ಅರಣ್ಯದಲ್ಲಿ ಒಬ್ಬರಿಗೊಬ್ಬರು ರಕ್ಷಣೆಮಾಡಿಕೊಳ್ಳುವುದು ಮುಖ್ಯಕರ್ತವ್ಯವಾಗಿರುತ್ತದೆ. (ನಾವೇ ಅನ್ಯೋನ್ಯವಾಗಿ ನಮ್ಮ ರಕ್ಷಣೆಯನ್ನು ಮಾಡಿಕೊಳ್ಳಬೇಕಾಗಿದೆಯೇ ಹೊರತು ಈ ಅರಣ್ಯದಲ್ಲಿ ನಮ್ಮ ರಕ್ಷಣೆಗೆ ಬೇರೆಯವರು ಬರಲಾರರು.)

ನ ಹಿ ತಾವದತಿಕ್ರಾನ್ತಾ ಸುಕರಾ ಕಾಚನ ಕ್ರಿಯಾ ॥೯೭॥

ಕಾರ್ಯವು ಕೈಮೀರಿಹೋದ ಬಳಿಕ ಪುನಃ ಸಾಧಿಸುವುದು ದುಸ್ಸಾಧ್ಯವೇ ಸರಿ. ಆದುದರಿಂದ ಮುಂದೆ ನಮಗೆ ಒದಗಬಹುದಾದ ಸಮಸ್ಯೆಗಳು ನಮ್ಮ ಕೈಮೀರಿ ಹೋಗಿ ನಾವು ಅಪಾಯಕ್ಕೊಳಗಾಗದ ರೀತಿಯಲ್ಲಿ ಸಾವಧಾನತೆಯಿಂದ ಕಾರ್ಯಮಾಡಬೇಕಾಗಿದೆ.* ವನವಾಸದ ದುಃಖ

* ನ ಹಿ ತಾವದತಿಕ್ರಾನ್ತಾಽಸುಕರಾ ಕಾಚನ ಕ್ರಿಯಾ–ಎಂಬ ಶ್ಲೋಕಾರ್ಥಕ್ಕೆ

ವೇನೆಂಬುದನ್ನು ವೈದೇಹಿಯು ಇನ್ನು ಮುಂದೆ ಮನಗಾಣುತ್ತಾಳೆ. ನಿರ್ಜನವಾದ, ಯಾವ ವಿಧವಾದ ಹೊಲ-ಗದ್ದೆಗಳೂ ಇಲ್ಲದಿರುವ, ಬರೀ ಕಾಡುಮರಗಳಿಂದ ಕೂಡಿರುವ, ವಿಹರಿಸಲು ಯೋಗ್ಯವಾದ ಉದ್ಯಾನವನಗಳಿಂದ ಶೂನ್ಯವಾದ, ದಾರಿಯುದ್ದಕ್ಕೂ ಹಳ್ಳ-ತಿಟ್ಟುಗಳಿಂದಲೂ ಪ್ರಪಾತಗಳಿಂದಲೂ ಕೂಡಿರುವ ಭಯಂಕರವಾದ ಘೋರಾರಣ್ಯವನ್ನು ವೈದೇಹಿಯು ಈಗ ಪ್ರವೇಶಿಸಲಿದ್ದಾಳೆ."

ಶ್ರೀರಾಮನು ಹೇಳಿದ ಆ ಮಾತನ್ನು ಕೇಳಿ ಲಕ್ಷ್ಮಣನು ಮುಂದೆ ಹೋದನು. ಸೀತೆಯು ಅವನನ್ನನುಸರಿಸಿದಳು. ರಘುನಂದನನಾದ ಶ್ರೀರಾಮನು ಅವರಿಬ್ಬರ ಹಿಂದೆ ಹೋಗುತ್ತಿದ್ದನು.

ಗಂಗಾನದಿಯ ದಕ್ಷಿಣತೀರಕ್ಕೆ ಬಹುಶೀಘ್ರವಾಗಿ ದೋಣಿಯಲ್ಲಿ ಪ್ರಯಾಣಮಾಡಿದ ಶ್ರೀರಾಮನನ್ನು ಸುಮಂತ್ರನು ನೋಡುತ್ತಲೇ ಇದ್ದನು. ತೀರಪ್ರದೇಶದಿಂದ ಮುಂದಕ್ಕೆ ಅರಣ್ಯಾಭಿಮುಖವಾಗಿ ಪ್ರಯಾಣಮಾಡಿದ ನಂತರ ಸುಮಂತ್ರ-ಶ್ರೀರಾಮರ ಅಂತರವು ಹೆಚ್ಚಾಯಿತು. ಮುಂದೆ ಕಣ್ಣು ಹಾಯಿಸಲಾಗದೇ (ಶ್ರೀರಾಮನನ್ನು ನೋಡಲಾಗದೆ) ಸುಮಂತ್ರನು ತನ್ನ ದೃಷ್ಟಿಯನ್ನು ಹಿಂದಿರುಗಿಸುವುದು ಅನಿವಾರ್ಯವಾಯಿತು. ಸಂಕಟದಿಂದ ದೃಷ್ಟಿಯನ್ನು ಹಿಂದಿರುಗಿಸಿ ಬಹಳವಾಗಿ ಪರಿತಪಿಸಿದನು. ದುಃಖಾತಿರೇಕದಿಂದ ಗಳಗಳನೆ ಅತ್ತುಬಿಟ್ಟನು.

ಒಬ್ಬೊಬ್ಬ ವ್ಯಾಖ್ಯಾನಕಾರರು ಒಂದೊಂದು ವಿಧವಾಗಿ ಅರ್ಥಮಾಡಿರುತ್ತಾರೆ. (1) ಅತಿಕ್ರಾನ್ತಾ= ಅತಿಕ್ರಾನ್ತಕಾಲಾ ಕಾಚನ ಕ್ರಿಯಾ ನ ಸುಕರಾ ಹಿ ಪುನಃ ಸನ್ಧಾತುಂ ನ ಶಕ್ಯಾ ಹಿ, ಕೈಮೀರಿಹೋದ ಕಾರ್ಯವು ಪುನಃ ಸಾಧನೆಯಾಗುವುದು ದುಸ್ಸಾಧ್ಯವಲ್ಲವೇ? (2) ಅಸುಕರಾ ದುಷ್ಕರಾ ಕಾಚನ ಕಾಪಿ ಕ್ರಿಯಾ ಅತಿಕ್ರಾನ್ತಾ ನ, ದುಷ್ಕರವಾದ ಯಾವ ಕಾರ್ಯವೂ ಇದುವರೆಗೆ ನಮ್ಮಿಂದ ಅತಿಕ್ರಮಿಸಿ ಹೋಗಿರುವುದಿಲ್ಲ. [ಇನ್ನು ಮುಂದೆ ನಾವು ದುಷ್ಕರವಾದ ಕಾರ್ಯಗಳನ್ನು ಎದುರಿಸಬೇಕಾಗ ಬಹುದು] (3) ಯಯಾ ವೈದೇಹ್ಯಾ ಅಸುಕರಾ ಅತಿಪ್ರಯತ್ನಸಾಧ್ಯಾ ಕಾಚನ ಕ್ರಿಯಾ ನಾತಿಕ್ರಾನ್ತಾ ಸಾ ವೈದೇಹೀ ಅದ್ಯ ವನವಾಸಸ್ಯ ದುಃಖಂ ವೇತ್ಸ್ಯತಿ, ಯಾವ ವೈದೇಹಿಯಿಂದ ಇಲ್ಲಿಯವರೆಗೂ ಅತಿಪ್ರಯತ್ನಸಾಧ್ಯವಾದ ಯಾವ ಕಾರ್ಯವೂ ಎದುರಿಸಲ್ಪಡಲಿಲ್ಲವೋ–ಆ ವೈದೇಹಿಯು ಈಗ ವನವಾಸದ ದುಃಖವೇನೆಂಬುದನ್ನು ಮನಗಾಣುತ್ತಾಳೆ.

ಇತ್ತಲಾಗಿ ಲೋಕಪಾಲರಿಗೆ ಸದೃಶವಾದ ಪ್ರಭಾವವುಳ್ಳ, ಮಹಾತ್ಮನಾದ, ವರದನಾದ ಶ್ರೀರಾಮನು ಮಹಾನದಿಯಾದ ಗಂಗೆಯನ್ನು ದಾಟಿ ಸಂಪತ್ಸಮೃದ್ಧವಾಗಿದ್ದ, ಅನೇಕಸಸ್ಯಗಳಿಂದ ಸಮಲಂಕೃತವಾದ ಭೂಪ್ರದೇಶದಿಂದ ಕೂಡಿದ್ದ, ಸಂತೋಷಭರಿತರಾದ ಜನರಿಂದ ವ್ಯಾಪ್ತವಾಗಿದ್ದ ವತ್ಸದೇಶವನ್ನು ಸೇರಿದನು.* ರಾಮ-ಲಕ್ಷ್ಮಣ-ಸೀತೆಯರು ವತ್ಸದೇಶದ ಎಲ್ಲೆಯೊಳಗೆ ಬಂದರೇ ಹೊರತು ಯಾವ ಪಟ್ಟಣವನ್ನಾಗಲೀ ಗ್ರಾಮವನ್ನಾಗಲೀ ಪ್ರವೇಶಿಸಲಿಲ್ಲ. ಅವರು ನಡೆದುಬರುತ್ತಿದ್ದ ಅರಣ್ಯವು ವತ್ಸದೇಶಕ್ಕೆ ಸೇರಿದ್ದಿತು. ದಾರಿನಡೆದು ದಣಿವಾಗಿದ್ದಿತು. ಹಸಿವು-ಬಾಯಾರಿಕೆಗಳಿಂದ ಬಳಲಿಕೆಯೂ ಆಗಿದ್ದಿತು. ರಾಮ-ಲಕ್ಷ್ಮಣರು ಒಂದು ಮರದ ಬುಡದಲ್ಲಿ ಸೀತಾದೇವಿಯನ್ನು ಕುಳ್ಳಿರಿಸಿ ಆಹಾರವನ್ನು ತರಲು ಹೊರಟರು. ಕ್ಷತ್ರಿಯರ ಭೋಜನಕ್ಕೆ ಯೋಗ್ಯವಾದ ವರಾಹ, ಸಾರಂಗ, ಜಿಂಕೆ, ಮಹಾರುರು (ಜಿಂಕೆಯಲ್ಲಿಯೇ ಮತ್ತೊಂದು ಜಾತಿಯದು) ಈ ನಾಲ್ಕು ಮೃಗಗಳನ್ನು ಕೊಂದು ತೆಗೆದುಕೊಂಡು ಸಾಯಂಕಾಲಕ್ಕೆ ಮೊದಲೇ ಅವಸರವಾಗಿ ಸೀತಾದೇವಿಯು ಕುಳಿತಿದ್ದ ಮರದ ಸಮೀಪಕ್ಕೆ ಬಂದರು.[1]

ಐವತ್ತೆರಡನೆಯ ಸರ್ಗವು ಮುಗಿಯಿತು.

---

*ವತ್ಸದೇಶವಿದ್ದ ಸ್ಥಳವನ್ನು ವ್ಯಾಖ್ಯಾನಕಾರರು ಈ ರೀತಿಯಲ್ಲಿ ನಿರ್ದೇಶಿಸಿರುತ್ತಾರೆ: ಗಂಗಾ ಮತ್ತು ಯಮುನಾನದಿಗಳ ಮಧ್ಯದಲ್ಲಿ ಪ್ರಯಾಗದ ಸುತ್ತಲೂ ಇರುವ ದೇಶವೇ ವತ್ಸದೇಶ. ವತ್ಸದೇಶಕ್ಕೆ ಪಶ್ಚಿಮದಲ್ಲಿ ಪಾಂಚಾಲದೇಶ. ಯಮುನಾನದಿಯ ದಕ್ಷಿಣತೀರದಲ್ಲಿರುವ ಶೂರಸೇನದೇಶಕ್ಕೆ ಪಶ್ಚಿಮದಲ್ಲಿ ಮತ್ಸ್ಯದೇಶ.

[1]ಒಬ್ಬ ವ್ಯಾಖ್ಯಾನಕಾರರಿಗೆ ರಾಮ-ಲಕ್ಷ್ಮಣರು ಮಾಂಸಾಹಾರಿಗಳೆಂದು ಹೇಳುವ ಇಚ್ಛೆಯಿಲ್ಲ. ಆದುದರಿಂದ ಅವರು ಈ ಶ್ಲೋಕಕ್ಕೆ ಹೀಗೆ ಅರ್ಥಮಾಡಿರುತ್ತಾರೆ. ವರಾಹ, ಜಿಂಕೆ ಮಹಾರುರು ಮತ್ತು ಸಾರಂಗ ಈ ನಾಲ್ಕು ಮೃಗಗಳನ್ನೂ ರಾಮ-ಲಕ್ಷ್ಮಣರು ವಿನೋದಕ್ಕಾಗಿ ಬೇಟೆಯಾಡಿ ಕೊಂದರು. ಬಳಿಕ ಮೇಧ್ಯಂ ವ್ರತಿಭಿರ್ಭೋಕ್ತವ್ಯಂ ಫಲಾದಿಕಂ, ವ್ರತಿಗಳ ಭೋಜನಕ್ಕೆ ಯೋಗ್ಯವಾದ ಫಲಾದಿಗಳನ್ನು ತೆಗೆದುಕೊಂಡು ವೃಕ್ಷಮೂಲಕ್ಕೆ ಆಗಮಿಸಿದರು. ಮತ್ತೊಬ್ಬರು–ಕ್ಷತ್ರಿಯರಿಗೆ ಮಾಂಸಾಹಾರವು ದೋಷಯುಕ್ತವಲ್ಲವೆಂದು ಹೇಳಿ ಅದಕ್ಕೆ ಕಾರಣಗಳನ್ನೂ ನಿರೂಪಿಸಿದ್ದಾರೆ. ಮಾಂಸಸ್ಯ ಚ ವನ್ಯಾಹಾರಾಂತರ್ಗತತ್ವಾನ್ನ ದೋಷಃ–ಮಾಂಸವು ಅರಣ್ಯದ ಆಹಾರವೆಂದು ಸ್ಮೃತಿಗಳಲ್ಲಿ ಪರಿಗಣಿಸಲ್ಪಟ್ಟಿರುವುದರಿಂದ ಇಲ್ಲಿ ಮಾಂಸಾಹಾರವು ದೋಷವಲ್ಲ.

ಕೈಕೇಯಿಯಿಂದ ಕೌಸಲ್ಯೆಯೇ ಮೊದಲಾದವರಿಗೆ ತೊಂದರೆ ಯಾಗುವುದೆಂದು ಹೇಳಿ ಶ್ರೀರಾಮನು ಲಕ್ಷ್ಮಣನನ್ನು ಅಯೋಧ್ಯೆಗೆ ಕಳುಹಿಸಲು ಪುನಃ ಪ್ರಯತ್ನಿಸಿದುದು: ಶ್ರೀರಾಮನಿಲ್ಲದೇ ತನ್ನ ಜೀವವೇ ಉಳಿಯಲಾರದೆಂದು ಹೇಳಿ ಲಕ್ಷ್ಮಣನು ಅಯೋಧ್ಯೆಗೆ ಹಿಂದಿರುಗಲು ನಿರಾಕರಿಸಿದುದು: ಶ್ರೀರಾಮನು ಲಕ್ಷ್ಮಣನಿಗೆ ತನ್ನ ಜೊತೆಯಲ್ಲಿಯೇ ಇರಲು ಹೇಳಿ ಸಮಾಧಾನಗೊಳಿಸಿದುದು

ಸ ತಂ ವೃಕ್ಷಂ ಸಮಾಸಾದ್ಯ ಸಂಧ್ಯಾಮನ್ವಾಸ್ಯ ಪಶ್ಚಿಮಾಮ್।
ರಾಮೋ ರಮಯತಾಂ ಶ್ರೇಷ್ಠ ಇತಿ ಹೋವಾಚ ಲ್ಷ್ಮಣಮ್ ॥೧॥

ಸುಹೃದರ ಮನಸ್ಸನ್ನು ಉಲ್ಲಾಸಗೊಳಿಸುವುದರಲ್ಲಿ ಶ್ರೇಷ್ಠನಾದ ಶ್ರೀರಾಮನು, ಸೀತೆಯು ಕುಳಿತಿದ್ದ ವೃಕ್ಷದ ಬಳಿಗೆ ಬಂದು ಸಾಯಂ ಕಾಲದ ಸಂಧ್ಯಾವಂದನೆಯನ್ನು ಮಾಡಿ ಭೋಜನಮಾಡಿದನಂತರ ಲಕ್ಷ್ಮಣನಿಗೆ ಹೇಳಿದನು:

"ಲಕ್ಷ್ಮಣ! ನಾವು ನಮ್ಮ ದೇಶದಿಂದ ಹೊರಬಂದು ಅರಣ್ಯದಲ್ಲಿ ಕಳೆಯುತ್ತಿರುವ ಮೊದಲನೆಯ ರಾತ್ರಿಯಿದು. ಈಗ ಸುಮಂತ್ರನು ಕೂಡ ನಮ್ಮೊಡನಿಲ್ಲ. ನಮ್ಮವರಾರೂ ಹತ್ತಿರದಲ್ಲಿ ಇಲ್ಲದೇ ಇರುವುದರಿಂದ ಈ ಸಮಯದಲ್ಲಿ ಮನಸ್ಸಿಗೆ ಉದ್ವೇಗವುಂಟಾಗುವುದು ಸಹಜ. ಆದರೆ ನೀನು ಮಾತ್ರ ಕಳವಳಪಡುವ ಕಾರಣವಿಲ್ಲ. ಈ ಮೊದಲ್ಗೊಂಡು ನಾವು ರಾತ್ರಿಯ ಕಾಲದಲ್ಲಿ ಹೆಚ್ಚು ಜಾಗರೂಕರಾಗಿರಬೇಕು. ಸೀತೆಯ ಯೋಗ-ಕ್ಷೇಮಗಳನ್ನು ನೋಡಿಕೊಳ್ಳುವುದು ನಮ್ಮ ಹೊಣೆಯಾಗಿದೆ. ಈ ರಾತ್ರಿ ಹೇಗೋ ಕಳೆದುಬಿಡೋಣ. ತರಗೆಲೆಗಳನ್ನು ಆರಿಸಿಕೊಂಡು ಭೂಮಿಯ ಮೇಲೆ ಹರಡಿ ಮಲಗೋಣ."

ಮತ್ತು ಮೃಗಯಾಧರ್ಮಕತ್ವಾಚ್ಚ ನ ಮೃಗಹನನೇ ದೋಷಃ–ಬೇಟೆಯಾಡುವುದು ರಾಜಧರ್ಮವೆಂದು ಪರಿಗಣಿತವಾಗಿರುವುದರಿಂದಲೂ ಮೃಗಹನನವಾಗಲೀ, ಅದರಿಂದ ಪ್ರಾಪ್ತವಾದ ಮಾಂಸಾಹಾರಭೋಜನವಾಗಲೀ ದೋಷವಿಲ್ಲ. ಈ ಅಭಿಪ್ರಾಯವನ್ನೇ ನಾವು ತೆಗೆದುಕೊಂಡಿರುತ್ತೇವೆ.

ಹಂಸತೂಲಿಕಾತಲ್ಪದಲ್ಲಿ ಮಲಗುತ್ತಿದ್ದ ಶ್ರೀರಾಮನು ಲಕ್ಷ್ಮಣನಿಗೆ ಹೀಗೆ ಹೇಳಿ ನೆಲದ ಮೇಲೆ ಹಾಸಿದ್ದ ಪರ್ಣತಲ್ಪದಲ್ಲಿ ಪವಡಿಸಿ ಶುಭಾವಹಗಳಾದ ಈ ಮಾತುಗಳನ್ನು ಹೇಳಿದನು:

"ಲಕ್ಷ್ಮಣ! ಈ ಸಮಯದಲ್ಲಿ ನಮ್ಮ ತಂದೆಯಾದ ದಶರಥನೂ ದುಃಖಪಟ್ಟುಕೊಂಡೇ ಮಲಗಿರುತ್ತಾನೆ. ಆದರೆ ಮನಸ್ಸಿನ ಅಭಿಲಾಷೆಯನ್ನು ಪೂರೈಸಿಕೊಂಡ ಕೈಕೇಯಿಯು ಮಾತ್ರ ಸಂತಸದಿಂದಿರಬಹುದು.

ಸಾ ಹಿ ದೇವೀ ಮಹಾರಾಜಂ ಕೈಕೇಯೀ ರಾಜ್ಯಕಾರಣಾತ್।
ಅಪಿ ನ ಚ್ಯಾವಯೇತ್ಪ್ರಾಣಾನ್ದೃಷ್ಟ್ವಾ ಭರತಮಾಗತಮ್ ॥೭॥

ಸೋದರಮಾವನ ಮನೆಯಿಂದ ಬಂದ ಭರತನನ್ನು ನೋಡಿದೊಡನೆಯೇ ಕೈಕೇಯೀದೇವಿಯು ರಾಜ್ಯಕಾರಣದಿಂದ (ಭರತನಿಗೆ ಪಟ್ಟಗಟ್ಟಬೇಕೆಂಬ ಆಶಯದಿಂದ) ರಾಜನ ಪ್ರಾಣಗಳನ್ನಾದರೂ ಅಪಹರಿಸದೇ ಇರುವಳೇ?*

ನಮ್ಮ ತಂದೆಯಾದ ದಶರಥನಾದರೋ ಈಗ ಅನಾಥನು. ಅವನನ್ನೀಗ ಹೇಳಿಕೇಳುವವರೇ ಇಲ್ಲ. ಮೇಲಾಗಿ ಮುದುಕ. ಈಗ ನಾನೂ ಅವನ ಜೊತೆಯಲ್ಲಿಲ್ಲ. ಕೈಕೇಯಿಯ ಹಿಡಿತಕ್ಕೆ ಸಿಕ್ಕಿಬಿದ್ದಿರುವ ಕಾಮುಕನಾದ ಅವನು ಏನು ತಾನೇ ಮಾಡಿಯಾನು?

ಇದಂ ವ್ಯಸನಮಾಲೋಕ್ಯ ರಾಜ್ಞಶ್ಚ ಮತಿವಿಭ್ರಮಮ್।
ಕಾಮ ಏವಾರ್ಥಧರ್ಮಾಭ್ಯಾಂ ಗರೀಯಾನಿತಿ ಮೇ ಮತಿಃ ॥೯॥

---

*ರಾಮನೇನೋ ಕಾಡಿಗೆ ಬಂದದಾಯಿತು. ಭರತನು ಬಂದನಂತರ ದಶರಥನು ಅವನಿಗೆ ಪಟ್ಟಗಟ್ಟಲು ಒಪ್ಪದಿದ್ದರೆ ರಾಜನನ್ನು ಮುಗಿಸಿಬಿಡುವುದೊಂದೇ ಉಪಾಯ. ಆಗ ನಿರಾತಂಕವಾಗಿ ಭರತನು ರಾಜನಾಗಬಹುದು. ಹೀಗೆ ಮಾಡಲು ಕೂಡ ಕೈಕೇಯಿಯು ಹೇಸುವುದಿಲ್ಲ ಎಂಬುದು ಶ್ರೀರಾಮನ ಅಭಿಪ್ರಾಯವಾಗಿದೆ. ಇದಕ್ಕೆ ವ್ಯಾಖ್ಯಾನಕಾರರು ಎರಡು ಬಗೆಯಾಗಿ ಅರ್ಥಮಾಡಿರುತ್ತಾರೆ. (1) ನನ್ನ ವನವಾಸಗಮನದಿಂದ ಪರಮತುಷ್ಟಳಾದ ಕೈಕೇಯಿಯು ರಾಜ್ಯದ ಕಾರಣದಿಂದ (ರಾಜ್ಯದ ಅಧಿಕಾರವನ್ನು ಪಡೆಯುವ ಕಾರಣದಿಂದ) ಆಗಮಿಸಿದ ಭರತನನ್ನು ನೋಡಿಯಾದರೂ ಮಹಾರಾಜನನ್ನು ಪ್ರಾಣಗಳಿಂದ ವಿಮೋಚನೆ ಮಾಡದಿರಬಹುದಲ್ಲವೇ (ರಾಜನ ಪ್ರಾಣಗಳನ್ನಾದರೂ ಉಳಿಸಬಹುದಲ್ಲವೇ?) 2) ಭರತನು ಆಗಮಿಸಿದುದನ್ನು ನೋಡಿ ಮಹಾರಾಜನನ್ನೂ ಮತ್ತು ಮಹಾರಾಜನಿಗೆ ಪ್ರಾಣಪ್ರಿಯರಾದ ಇತರ ಪರಿವಾರದವರನ್ನೂ ಪರಿತ್ಯಜಿಸದೇ ಇರಬಹುದಲ್ಲವೇ?

ನಿರಪರಾಧಿಗಳಾದ ನಮಗೆ ಪ್ರಾಪ್ತವಾಗಿರುವ ಈ ವ್ಯಸನವನ್ನೂ-ಪಟ್ಟಾಭಿಷೇಕದ ವಿಷಯದಲ್ಲಿ ರಾಜನಿಗುಂಟಾದ ಬುದ್ಧಿ ಭ್ರಮಣೆಯನ್ನೂ ನೋಡಿದರೆ-ಪ್ರಪಂಚದಲ್ಲಿ ಧರ್ಮಾರ್ಥಗಳಿಗಿಂತಲೂ ಕಾಮವೇ ಪ್ರಧಾನಭೂತವಾಗಿರುವಂತೆ ನನಗೆ ತೋರುತ್ತದೆ.

ಕೋ ಹ್ಯವಿದ್ವಾನಪಿ ಪುಮಾನ್ಪ್ರಮದಾಯಾಃ ಕೃತೇ ತ್ಯಜೇತ್।
ಛಂದಾನುವರ್ತಿನಂ ಪುತ್ರಂ ತಾತೋ ಮಾಮಿವ ಲಕ್ಷ್ಮಣ ॥೧೦॥

ಒಬ್ಬ ಹೆಂಗಸಿನ ಸಲುವಾಗಿ-ತಿಳಿವಳಿಕೆಯಿಲ್ಲದವನೇ ಆದರೂ ಯಾವನು ತಾನೇ ತಾನು ಹೇಳಿದಂತೆ ಕೇಳಿಕೊಂಡಿರುವ ವಿಧೇಯನಾದ ಮಗನನ್ನು-ನಮ್ಮ ತಂದೆಯು ನನ್ನನ್ನು ಪರಿತ್ಯಜಿಸಿದಂತೆ- ಪರಿತ್ಯಜಿಸುವನು?

ಸುಖೀ ಬತ ಸಭಾರ್ಯಶ್ಚ ಭರತಃ ಕೇಕಯೀಸುತಃ।
ಮುದಿತಾನ್ಕೋಸಲಾನೇಕೋ ಯೋ ಭೋಕ್ಷ್ಯತ್ಯಧಿರಾಜವತ್ ॥೧೧॥

ಲಕ್ಷ್ಮಣ! ಈ ಸಂದರ್ಭದಲ್ಲಿ ಕೈಕೇಯಿಯ ಮಗನಾದ ಭರತನೊಬ್ಬನೇ ಸುಖಿಯು. ಸುಖ-ಸಂತೋಷಗಳಿಂದ ಕೂಡಿರುವ ನಿಷ್ಕಂಟಕವಾಗಿರುವ ಈ ಕೋಸಲದೇಶವನ್ನು ಸಾರ್ವಭೌಮನೋಪಾದಿಯಲ್ಲಿ ಪತ್ನಿಯೊಡನೆ ಸುಖವಾಗಿ ಭರತನೊಬ್ಬನೇ ಉಪಭೋಗಿಸುತ್ತಾನೆ.

ಸ ಹಿ ರಾಜ್ಯಸ್ಯ ಸರ್ವಸ್ಯ ಸುಖಮೇಕಂ ಭವಿಷ್ಯತಿ।
ತಾತೇ ತು ವಯಸಾತೀತೇ ಮಯಿ ಚಾರಣ್ಯಮಾಸ್ಥಿತೇ ॥೧೨॥

ತಂದೆಯೂ ಮುದುಕನಾಗಿರುವಾಗ ನಾನೂ ಅರಣ್ಯಕ್ಕೆ ಬಂದುಬಿಟ್ಟಿರುವಾಗ ರಾಜ್ಯದಲ್ಲಿ ಅವನೊಬ್ಬನೇ ಅಖಂಡಸುಖವನ್ನು ಅನುಭವಿಸುತ್ತಾನೆ. ಸುಖವೇ ಮೂರ್ತಿಮತ್ತಾಗಿರುವನೋ ಎಂಬಂತಹ ಸ್ಥಿತಿಗೆ ಅವನು ಪಾತ್ರನಾಗುತ್ತಾನೆ.

ಅರ್ಥಧರ್ಮೌ ಪರಿತ್ಯಜ್ಯ ಯಃ ಕಾಮಮನುವರ್ತತೇ।
ಏವಮಾಪದ್ಯತೇ ಕ್ಷಿಪ್ರಂ ರಾಜಾ ದಶರಥೋ ಯಥಾ ॥೧೩॥

ಯಾವನು ಧರ್ಮಾರ್ಥಗಳನ್ನು ಪರಿತ್ಯಜಿಸಿ ಕೇವಲ ಕಾಮಾತುರನಾಗಿ ಮಾಡಬಾರದ ಕಾರ್ಯಗಳನ್ನು ಮಾಡುವನೋ-ಅಂತಹವನು ನಮ್ಮ ತಂದೆಯಾದ ದಶರಥನಂತೆಯೇ ಬಹಳ ಬೇಗ ಆಪತ್ತಿಗೊಳಗಾಗುತ್ತಾನೆ.

ಮನ್ಯೇ ದಶರಥಾನ್ತಾಯ ಮಮ ಪ್ರವ್ರಾಜನಾಯ ಚ।
ಕೈಕೇಯೀ ಸೌಮ್ಯ ಸಂಪ್ರಾಪ್ತಾ ರಾಜ್ಯಾಯ ಭರತಸ್ಯ ಚ ॥೧೪॥

ದಶರಥನ ಸಾವಿಗಾಗಿಯೂ, ನನ್ನನ್ನು ಕಾಡಿಗಟ್ಟಲೂ ಮತ್ತು ಭರತನಿಗೆ ರಾಜ್ಯವನ್ನು ಕೊಡಿಸಲೂ ಕೈಕೇಯಿಯು ಈ ಅರಮನೆಯನ್ನು ಸೇರಿದಳೆಂದು ನಾನು ಭಾವಿಸುತ್ತೇನೆ.

ಅಪೀದಾನೀಂ ನ ಕೈಕೇಯೀ ಸೌಭಾಗ್ಯಮದಮೋಹಿತಾ।
ಕೌಸಲ್ಯಾಂ ಚ ಸುಮಿತ್ರಾಂ ಚ ಸಂಪ್ರಬಾಧೇತ ಮತ್ಕೃತೇ ॥೧೫॥

ಬಹಳ ಸುಲಭವಾಗಿ ಸಿಕ್ಕಿರುವ ಪರಮಸೌಭಾಗ್ಯವೆಂಬ ಮದದಿಂದ ವಿಮೋಹಿತಳಾದ ಕೈಕೇಯಿಯು, ನನ್ನ ಸಲುವಾಗಿ ನನ್ನ ತಾಯಿಯಾದ ಕೌಸಲ್ಯೆಯನ್ನೂ ನಿನ್ನ ತಾಯಿಯಾದ ಸುಮಿತ್ರಾದೇವಿಯನ್ನೂ ಬಹಳವಾಗಿ ಪೀಡಿಸದೇ ಇರುವಳೇ? ನನ್ನ ಮೇಲಿನ ದ್ವೇಷವನ್ನೇ ಅವರ ಮೇಲೂ ತೋರಿಸಬಹುದು.

ನನ್ನ ಕಾರಣದಿಂದ ನಿನ್ನ ತಾಯಿಯಾದ ಸುಮಿತ್ರಾದೇವಿಯು ದುಃಖಕ್ಕೀಡಾಗಬಾರದು. ಆದುದರಿಂದ ನೀನು ಬೆಳಗಾಗುತ್ತಲೇ ಅಯೋಧ್ಯೆಗೆ ಹೋಗಿಬಿಡು. ನಾನೊಬ್ಬನೇ ಸೀತೆಯೊಡನೆ ದಂಡಕಾರಣ್ಯಕ್ಕೆ ಹೋಗುತ್ತೇನೆ. ಅನಾಥೆಯಾಗಿರುವ ಕೌಸಲ್ಯಾದೇವಿಗೂ ನೀನು ರಕ್ಷಕನಾಗು.

ಕ್ಷುದ್ರಕರ್ಮಾ ಹಿ ಕೈಕೇಯೀ ದ್ವೇಷಾದನ್ಯಾಯಮಾಚರೇತ್।
ಪರಿದದ್ಯಾದ್ಧಿ ಧರ್ಮಜ್ಞಂ ಗರಂ ತೇ ಮಮ ಮಾತರಮ್ ॥೧೬॥

ಕೈಕೇಯಿಯು ಕ್ಷುದ್ರಕರ್ಮಳು. ಅತಿನೀಚವಾದ ಕಾರ್ಯವನ್ನು ಮಾಡಲೂ ಹೇಸದವಳು. ದ್ವೇಷದಿಂದಾಗಿ ನಮ್ಮ ತಾಯಂದಿರಿಗೆ ಹಲವು ಬಗೆಯಲ್ಲಿ ಅನ್ಯಾಯಮಾಡಬಹುದು. ನಿನ್ನ ತಾಯಿಗೂ ಮತ್ತು ನನ್ನ ತಾಯಿಗೂ ಆ ಧೂರ್ತೆಯು ಉಪಾಯಾಂತರದಿಂದ ವಿಷವನ್ನಾದರೂ ಕುಡಿಸಿ ಬಿಡಬಹುದು. ಆದುದರಿಂದ ನೀನು ಅಯೋಧ್ಯೆಗೆ ಹಿಂದಿರುಗುವುದು ಬಹಳ ಸೂಕ್ತವಾಗಿದೆ. ಜನ್ಮಾಂತರದಲ್ಲಿ ನಮ್ಮ ತಾಯಿಯು ಅನೇಕ ಸ್ತ್ರೀಯರನ್ನು ಅವರ ಮಕ್ಕಳಿಂದ ಬೇರ್ಪಡಿಸಿದ್ದಳೆಂದು ಕಾಣುತ್ತದೆ. ಆದುದರಿಂದಲೇ ಈ ಜನ್ಮದಲ್ಲಿ ನಮ್ಮ ತಾಯಿಗೆ ಪುತ್ರವಿಯೋಗದ ದುಃಖವು ಪ್ರಾಪ್ತವಾಗಿದೆ.

ಅವಳು ನನ್ನನ್ನು ಬಹಳ ಕಷ್ಟದಿಂದ ಲಾಲಿಸಿ ಪೋಷಿಸಿದಳು. ಪುಷ್ಟನನ್ನಾಗಿಯೂ ಮಾಡಿದಳು. ಇದಕ್ಕೆ ಪ್ರತಿಯಾಗಿ ನಾನು ಅವಳ ಈ ವೃದ್ಧಾಪ್ಯದಲ್ಲಿ ಅವಳ ಶುಶ್ರೂಷೆಯನ್ನು ಮಾಡಬೇಕಾಗಿದ್ದಿತು. ಆದರೆ ವಿಧಿವಶದಿಂದ ನಾನು ಅವಳಿಂದ ಬೇರ್ಪಡಬೇಕಾಯಿತು. ಮಾಡಿದ ಲಾಲನೆ-ಪೋಷಣೆಗಳಿಗೆ ಪ್ರತಿಯಾಗಿ ಶುಶ್ರೂಷೆಯನ್ನೂ ಮಾಡಲಾಗದ ನನಗೆ ಧಿಕ್ಕಾರವಿರಲಿ.

ಮಾ ಸ್ಮ ಸೀಮನ್ತಿನೀ ಕಾಚಿಜ್ಜನಯೇತ್ಪುತ್ರಮೀದೃಶಮ್।
ಸೌಮಿತ್ರೇ ಯೋಽಹಮಮ್ಬಾಯಾ ದದ್ಮಿ ಶೋಕಮನನ್ತಕಮ್॥

ಶುಶ್ರೂಷೆಮಾಡುವುದಕ್ಕೆ ಬದಲಾಗಿ ಕೊನೆಯೇ ಇಲ್ಲದಂತಹ ದುಃಖಕ್ಕೆ ಅವಳನ್ನು ಗುರಿಮಾಡಿದೆನು. ಆದುದರಿಂದ ಇನ್ನು ಮುಂದೆ ಯಾವ ಸ್ತ್ರೀಯೂ ನನ್ನಂತಹ ಮಗನನ್ನು ಹಡೆಯದಿರಲಿ.

ಮನ್ಯೇ ಪ್ರೀತಿವಿಶಿಷ್ಟಾ ಸಾ ಮತ್ತೋ ಲಕ್ಷ್ಮಣ ಸಾರಿಕಾ।
ಯತ್ತಸ್ಯಾಃ ಶ್ರೂಯತೇ ವಾಕ್ಯಂ ಶುಕ ಪಾದಮರೇರ್ದಶ ॥೨೨॥

ಲಕ್ಷ್ಮಣ! ನನ್ನ ತಾಯಿಯ ಬಳಿಯಲ್ಲಿರುವ ಸಾರಿಕಾಪಕ್ಷಿಯು ಅವಳ ವಿಷಯದಲ್ಲಿ ನನಗಿಂತಲೂ ವಿಶೇಷವಾದ ಪ್ರೀತಿಯುಳ್ಳದ್ದಾಗಿದೆಯೆಂದು ಭಾವಿಸುತ್ತೇನೆ. ಏಕೆಂದರೆ: ಅದು ತನ್ನೊಡನಿರುವ ಗಿಣಿಗೆ ಶತ್ರುವಿನ ಕಾಲನ್ನು ಕಚ್ಚುವಂತೆ ಪದೇ-ಪದೇ ಹೇಳುತ್ತಲೇ ಇರುತ್ತದೆ. ಈ ಮಾತಿನಿಂದ ನನ್ನ ತಾಯಿಯು ಸಮಾಧಾನಪಟ್ಟುಕೊಳ್ಳುತ್ತಾಳೆ. ನನ್ನ ಶತ್ರುವಾದ ಕೈಕೇಯಿಯ ಕಾಲನ್ನು ಕಚ್ಚುವಂತೆ ಗಿಣಿಗೆ ಪ್ರಚೋದಿಸುತ್ತಿರುವುದಲ್ಲಾ! ಎಂಬುದೇ ನನ್ನ ತಾಯಿಯ ಸಂತೋಷಕ್ಕೆ ಕಾರಣ. ಇಂತಹ ಮಾತಿನ ಶ್ರವಣದಿಂದಲೇ ನಮ್ಮ ತಾಯಿಗೆ ಸಂತೋಷರಾಗುತ್ತದೆ. ಸಾರಿಕೆಯಿಂದ ಪಡೆದ ಈ ಸಂತೋಷವನ್ನು ನನ್ನ ತಾಯಿಯು ನನ್ನಿಂದ ಪಡೆಯಲಿಲ್ಲ.*

---

* ಈ ಶ್ಲೋಕವು ಆಚಾರ್ಯಸಮಾಶ್ರಯಣಕ್ಕೆ ಸುಕರವಾದ ಉಪಾಯವನ್ನೂ ಸೂಚಿಸುವುದೆಂದು ಒಬ್ಬ ವ್ಯಾಖ್ಯಾನಕಾರರು ಅರ್ಥಮಾಡಿರುತ್ತಾರೆ. ನ ಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ । ತೇ ಪುನನ್ತ್ಯುರುಕಾಲೇನ ದರ್ಶನಾದೇವ ಸಾಧವಃ ॥ ಜಲಮಯವಾದ ಗಂಗಾದಿ ತೀರ್ಥಗಳೂ, ಮಣ್ಣು-ಕಲ್ಲುಗಳ ದೇವತಾ ವಿಗ್ರಹಗಳೂ ಪ್ರಾಣಿಗಳನ್ನು ಪವಿತ್ರಗೊಳಿಸಲು ಬಹುಕಾಲವಾಗುತ್ತದೆ. ಆದರೆ ಸಾಧು

ಅಲ್ಪಭಾಗ್ಯಳಾದ, ಸರ್ವದಾ ಶೋಕಿಸುತ್ತಿರುವ, ಮಗನಿದ್ದೂ ಅಪುತ್ರವತಿಯಾಗಿರುವ ನನ್ನ ತಾಯಿಗೆ ಸ್ವಲ್ಪವಾದರೂ ಉಪಕಾರ ಮಾಡದಿರುವ ನನ್ನಂತಹ ಮಗನಿಂದ ಯಾವ ಪ್ರಯೋಜನವಿದೆ? ಲಕ್ಷ್ಮಣ! ನನ್ನಿಂದ ರಹಿತಳಾದ ನನ್ನ ತಾಯಿಯು ನಿಶ್ಚಯವಾಗಿಯೂ ನಿರ್ಭಾಗ್ಯಳೇ ಸರಿ. ಶೋಕಸಾಗರದಲ್ಲಿ ಮುಳುಗಿರುವ ಅವಳು ಈ ಸಮಯದಲ್ಲಿ ದುಃಖಪೀಡಿತಳಾಗಿ ಅರಮನೆಯಲ್ಲಿ ಎಲ್ಲಿಯೋ ಮಲಗಿರಬಹುದು.

ಸಹೋದರ! ನಾನೇನೂ ನಿರ್ವೀರ್ಯನಲ್ಲ. ಕೋಪಗೊಂಡೆನೆಂದರೆ ತೀಕ್ಷ್ಣವಾದ ಈ ಬಾಣಗಳಿಂದ ಅಯೋಧ್ಯೆಯನ್ನೇ ಏಕಾಕಿಯಾಗಿ ಆಕ್ರಮಣ ಮಾಡಿಯೇನು. ಅಯೋಧ್ಯೆಯನ್ನೇ ಏಕೆ? ಇಡೀ ವಿಶ್ವವನ್ನೇ ಏಕಾಕಿಯಾಗಿ ಜಯಿಸುವ ಸಾಮರ್ಥ್ಯವೂ ನನ್ನಲ್ಲಿದೆ. ಆದರೆ **ನನು ವೀರ್ಯಮಕಾರಣಮ್**–ನಿಷ್ಕಾರಣವಾಗಿ ಪರಾಕ್ರಮವನ್ನು ಪ್ರದರ್ಶಿಸುವುದು ಸರಿಯಲ್ಲವಲ್ಲವೇ?

ಅಧರ್ಮಭಯಭೀತಶ್ಚ ಪರಲೋಕಸ್ಯ ಚಾನಘ।
ತೇನ ಲಕ್ಷ್ಮಣ ನಾದ್ಯಾಹಮಾತ್ಮಾನಮಭಿಷೇಚಯೇ ॥೨೬॥

ಲಕ್ಷ್ಮಣ! ಅಜೇಯನೆನಿಸಿದ ಶತ್ರುವಿನ ವಿಷಯದಲ್ಲಿಯೂ ನನಗೆ ಭಯವಿಲ್ಲ. ಆದರೆ ಅಧರ್ಮವೆನಿಸಿದ ಕಾರ್ಯವನ್ನು ಮಾಡಲು ಭಯ

ಗಳು ದರ್ಶನಮಾತ್ರದಿಂದಲೇ ಪವಿತ್ರಗೊಳಿಸಬಲ್ಲರು–ಎಂಬಂತೆ ಆಚಾರ್ಯಸಮಾಶ್ರಯಣವೆಂಬುದು ಜೀವನ್ಮುಕ್ತಿಗೆ ಪರಮಶ್ರೇಷ್ಠವಾದ ಮಾರ್ಗ. 'ಸಾರಿಕಾ' ಎಂದು ಹೇಳಿರುವುದರಿಂದ ಜ್ಞಾನ-ಕರ್ಮಗಳೆಂಬ ಎರಡು ರೆಕ್ಕೆಗಳನ್ನೊಳಗೊಂಡ ಆಚಾರ್ಯ ನೆಂದು ಹೇಳಬಹುದಾಗಿದೆ. ಸ್ತ್ರೀಲಿಂಗವಿರುವ ಕಾರಣವೇನೆಂದರೆ; ಭಗವಂತನೊಬ್ಬ ನನ್ನು ಬಿಟ್ಟು ಉಳಿದವರೆಲ್ಲರೂ ಸ್ತ್ರೀಪ್ರಾಯರು. ಅರ್ಥಾತ್ ಅವನ ಅಧೀನರು. ಆದು ದರಿಂದ ಸ್ತ್ರೀಲಿಂಗರೂಪವಾದ ಸಾರಿಕಾಶಬ್ದವು ಭಗವಂತನ ಪಾರತಂತ್ರ್ಯವನ್ನು ಸೂಚಿಸು ತ್ತದೆ. ಮೋಕ್ಷಾನಂದವನ್ನುಂಟುಮಾಡುವುದರಲ್ಲಿ ಅಥವಾ ಮೋಕ್ಷಮಾರ್ಗಪ್ರಾಪ್ತಿ ಯಲ್ಲಿ ಭಗವಂತನಿಗಿಂತಲೂ ಆಚಾರ್ಯನ ಸಮಾಶ್ರಯಣವೇ ಹೆಚ್ಚಿನ ಸುಲಭೋಪಾಯವೆಂಬುದನ್ನು ಇದು ಸೂಚಿಸುತ್ತದೆ. ಪಶುರ್ಮನುಷ್ಯಃ ಪಕ್ಷೀ ವಾ ಯೇ ಚ ವೈಷ್ಣವಸಂಶ್ರಯಾಃ । ತೇನೈವ ತೇ ಪ್ರಯಾಸ್ಯನ್ತಿ ತದ್ವಿಷ್ಣೋಃ ಪರಮಂ ಪದಮ್ ॥ "ಪ್ರಾಣಿಯಾಗಲೀ, ಮನುಷ್ಯನಾಗಲೀ, ಪಕ್ಷಿಯಾಗಲೀ–ವಿಷ್ಣುಭಕ್ತನನ್ನು ಆಶ್ರಯಿಸಿದರೆ ಅವನೊಡನೆಯೇ ಮಹಾವಿಷ್ಣುವಿನ ಸ್ಥಾನವಾದ ವೈಕುಂಠವನ್ನು ಪಡೆಯು

ಪಡುತ್ತೇನೆ. ಪರಲೋಕದ ಭಯವೂ ಇದೆ. ಧರ್ಮಕ್ಕೆ ವಿರುದ್ಧವಾದ ಕಾರ್ಯಮಾಡುವುದರಿಂದ ಉತ್ತಮಲೋಕಗಳು ಲಭಿಸಲಾರವು. ಈ ಕಾರಣ ಗಳಿಂದಾಗಿ ನಾನು ಪಿತೃವಾಕ್ಯಪರಿಪಾಲನಾಧರ್ಮಕ್ಕೆ ವಿರುದ್ಧವಾಗಿ ಅಭಿಷಿಕ್ತ ನಾಗಲಿಲ್ಲ."

ಆ ರಾತ್ರಿಯಲ್ಲಿ ಶ್ರೀರಾಮನು ಇವೇ ಮುಂತಾಗಿ ಅನೇಕವಿಧವಾಗಿ ಕರುಣಾಜನಕವಾದ ರೀತಿಯಲ್ಲಿ ಗೋಳಾಡುತ್ತಾ ನಿರ್ಜನವಾಗಿದ್ದ ಆ ವನ ಪ್ರದೇಶದಲ್ಲಿ ಕಂಬನಿದುಂಬಿದ ಮುಖವುಳ್ಳವನಾಗಿ ಸುಮ್ಮನೇ ಕುಳಿತಿದ್ದನು. ಬಹಳ ಹೊತ್ತು ವಿಲಪಿಸಿದನಂತರ ಸುಮ್ಮನೇ ಕುಳಿತಿದ್ದ, ಜ್ವಾಲೆಯಿಲ್ಲದ ಯಜ್ಞೇಶ್ವರನಂತೆಯೂ-ಅಲೆಗಳಿಲ್ಲದ ಸಮುದ್ರರಾಜನಂತೆಯೂ ಕಾಣುತ್ತಿದ್ದ ಶ್ರೀರಾಮನನ್ನು ಲಕ್ಷ್ಮಣನು ಸಮಾಧಾನಗೊಳಿಸುತ್ತಾ ಹೇಳಿದನು:

"ಆಯುಧಗಳನ್ನು ಹೊಂದಿರುವವರಲ್ಲಿ ಶ್ರೇಷ್ಠನಾದವನೇ! ನೀನು ಹೊರಟುಬರಲಾಗಿ ಅಯೋಧ್ಯಾನಗರಿಯು ಚಂದ್ರನಿಲ್ಲದ ರಾತ್ರಿಯೋಪಾದಿ ಯಲ್ಲಿ ಕಾಂತಿಹೀನವಾಗಿದೆ.

ಆದರೆ ನೀನು ಈ ರೀತಿಯಲ್ಲಿ ಪರಿತಾಪಪಡುವುದು ಖಂಡಿತವಾಗಿಯೂ ಸರಿಯಲ್ಲ. ನಿನ್ನ ಈ ವಿಧವಾದ ಮಾತುಗಳಿಂದ ನನ್ನನ್ನೂ ಮತ್ತು ಸೀತಾದೇವಿಯನ್ನೂ ಸಂಕಟಪಡಿಸುತ್ತಿರುವೆ. ನಿನ್ನನ್ನು ಬಿಟ್ಟು ನಾನಾಗಲೀ

ತ್ತಾನೆ." ಇಲ್ಲಿ ರಾಮನು ಲಕ್ಷ್ಮಣನನ್ನು ಕುರಿತು ಹೀಗೆ ಹೇಳುತ್ತಾನೆ: "ಲಕ್ಷ್ಮಣ! ಜ್ಞಾನ-ಕರ್ಮಗಳೆಂಬ ಎರಡು ಪಕ್ಷಗಳನ್ನು ಧರಿಸಿರುವ ಆಚಾರ್ಯನು ನನಗಿಂತಲೂ ಪ್ರಪಂಚದ ಜನರ ಯೋಗಕ್ಷೇಮಗಳಲ್ಲಿ ಅತ್ಯಂತ ಪ್ರೀತಿವಿಶಿಷ್ಟನಾಗಿರುವನೆಂದು ಭಾವಿಸುತ್ತೇನೆ. ಏಕೆಂದರೆ: ಆಚಾರ್ಯನು ಪ್ರಪಂಚದ ಜನರೆಲ್ಲರನ್ನೂ ಬಹುಸುಲಭ ರೀತಿಯಲ್ಲಿ ವಿಷ್ಣುವಿನ ಪರಮಪದಕ್ಕೊಯ್ಯಲು ಸತತವಾಗಿ ಪ್ರಯತ್ನಿಸುತ್ತಾನೆ. ಶ್ರೀವೈಷ್ಣವ ಸಂಪ್ರದಾಯದಲ್ಲಿ ಆಚಾರ್ಯನೇ ದೇವರು: ದೇವರೇ ಆಚಾರ್ಯ. ದೇವ ರಿಗೂ, ಆಚಾರ್ಯನಿಗೂ ವ್ಯತ್ಯಾಸವೇ ಇರುವುದಿಲ್ಲ. ಇದಕ್ಕೆ ಕಾರಣವನ್ನೂ ಶ್ರೀರಾಮನು ಶ್ಲೋಕದ ಉತ್ತರಾರ್ಧದಲ್ಲಿ ನಿರೂಪಿಸುತ್ತಾನೆ. "**ಯಸ್ಯಾ ಇತಿ ಪಞ್ಚಮೀ ಯಸ್ಮಾತ್ ತತ್ ಗುರುಪರಂಪರಯಾ ಪ್ರಾಪ್ತಂ ವಾಕ್ಯಂ ರಹಸ್ಯಮಂತ್ರರೂಪಂ ಶ್ರೂಯತೇ**'' ಗುರುಪರಂಪರಾಗತವಾದ ರಹಸ್ಯಮಂತ್ರವು ಯಾವನಿಂದ ಹೇಳಲ್ಪಡು ವುದೋ ಅಂತಹ ಆಚಾರ್ಯನು ನನಗಿಂತಲೂ ಶ್ರೇಷ್ಠನು. ಆ ರಹಸ್ಯಮಂತ್ರವು ಯಾವುದು? "ಹೇ ಶುಕ! ಶುಕಸಮಾನವರ್ಣ-ಭಗವನ್! ಪಾದಮರೇರ್ದಶ" ಗಿಣಿಗೆ

ಸೀತೆಯಾಗಲೀ ನೀರಿನಿಂದ ಹೊರತೆಗೆದ ಮೀನುಗಳಂತೆ ಒಂದು ಕ್ಷಣವಾದರೂ ಜೀವಿಸಿರುವುದಿಲ್ಲ. ತಂದೆಯಾದ ದಶರಥನನ್ನಾಗಲೀ, ತಾಯಿಯಾದ ಸುಮಿತ್ರೆಯನ್ನಾಗಲೀ, ತಮ್ಮನಾದ ಶತ್ರುಘ್ನನನ್ನಾಗಲೀ, ಈಗ ನಾನು ನೋಡಲು ಬಯಸುವುದಿಲ್ಲ. ನಿನ್ನನ್ನು ಬಿಟ್ಟು ಸ್ವರ್ಗವನ್ನೂ ನಾನು ಒಲ್ಲೆನು."

ಲಕ್ಷ್ಮಣನು ಹೀಗೆ ಹೇಳಲು ಅವನನ್ನು ಅಯೋಧ್ಯೆಗೆ ಕಳುಹಿಸುವ ಸಾಧ್ಯತೆಯಿಲ್ಲವೆಂಬುದು ಶ್ರೀರಾಮನಿಗೆ ದೃಢವಾಯಿತು. ಸೀತಾ-ರಾಮರಿಬ್ಬರೂ ಸ್ವಲ್ಪಕಾಲದವರೆಗೆ ಸುಖಾಸೀನರಾಗಿದ್ದರು. ಆಲದ ಮರದ ಬುಡದಲ್ಲಿ ಲಕ್ಷ್ಮಣನು ಸಿದ್ಧಪಡಿಸಿದ್ದ ತರಗೆಲೆಗಳ ಹಾಸಿಗೆಯನ್ನು ಕಂಡು ಧರ್ಮವತ್ಸಲರಾದ ಸೀತಾ-ರಾಮರು ಮಲಗಲು ಹೋದರು.

ವಾತ್ಸಲ್ಯಪೂರ್ಣವಾಗಿಯೂ, ಶ್ರೇಷ್ಠವಾಗಿಯೂ ಮತ್ತು ಕೌಟಿಲ್ಯದಿಂದ ರಹಿತವಾಗಿಯೂ ಇದ್ದ ಲಕ್ಷ್ಮಣನ ಮಾತುಗಳನ್ನು ಪರಂತಪನಾದ ಶ್ರೀರಾಮನು ಆದರದಿಂದ ಬಹಳ ಹೊತ್ತಿನವರೆಗೂ ಕೇಳಿ, ವಾನಪ್ರಸ್ಥಾಶ್ರಮೋಚಿತವಾದ ಧರ್ಮವನ್ನವಲಂಬಿಸಿ ಹದಿನಾಲ್ಕು ವರ್ಷಗಳೂ ಲಕ್ಷ್ಮಣನೊಡಗೂಡಿಯೇ ಇರಬೇಕೆಂದು ನಿಶ್ಚಯಿಸಿದನು. ಜನರಿಂದ ರಹಿತವಾಗಿದ್ದ ಆ ಅರಣ್ಯದಲ್ಲಿ ಮಹಾಬಲಶಾಲಿಗಳಾದ ರಘುಮಹಾರಾಜನ ವಂಶವರ್ಧಕ

ಸಮಾನವಾದ ವರ್ಣದಿಂದ ಕೂಡಿರುವ ಹೇ ಭಗವಂತ! ಅರೇಃ ವಿರೋಧಿಭೂತಸ್ಯ ಸಂಸಾರಸ್ಯ= ವಿರೋಧಿಭೂತವಾದ ಸಂಸಾರದ, ಪಾದಂ=ಸಂಸಾರಬೀಜಭೂತಾಹಂಕಾರ ಮಮಕಾರೌ, ಸಂಸಾರಕ್ಕೆ ಬೀಜಭೂತವಾದ ಅಹಂಕಾರ-ಮಮಕಾರಗಳನ್ನು, ದಶ=ನಿವಾರಣೆಮಾಡು. ಅಹಂ ಎಂಬುದೇ ಅವಿದ್ಯೆಯ ಮೂಲವೆಂದು ಹೇಳುತ್ತಾರೆ. "ಅನಾತ್ಮನ್ಯಾತ್ಮಬುದ್ಧಿರ್ಯಾ ಅಸ್ವೇ ಸ್ವಮಿತಿ ಯಾ ಮತಿಃ । ಅವಿದ್ಯಾತರುಸಂಭೂತಿ ಬೀಜಮೇತದ್ದ್ವಿಧಾ ಸ್ಥಿತಮ್" "ಆತ್ಮಭಿನ್ನವಸ್ತುವನ್ನು ಆತ್ಮವೆಂದೂ, ತನ್ನದಲ್ಲದುದನ್ನು ತನ್ನದೆಂದೂ ತಿಳಿಯುವುದೇ ಅವಿದ್ಯೆಯೆಂಬ ಮರವು ಹುಟ್ಟಲು ಕಾರಣವಾದ ಎರಡು ಬೀಜಗಳೆಂದು ತಿಳಿಯಬಹುದು." ಈ ರೀತಿಯಲ್ಲಿ 'ಪಾದಮರೇರ್ದಶ' ಎಂಬ ಮಂತ್ರದ ರಹಸ್ಯವನ್ನು ಪ್ರಜಾಕೋಟಿಗೆ ಬೋಧಿಸುತ್ತಾ ಸಕಲರ ಮೋಕ್ಷಕ್ಕೂ ಸಾಧನಭೂತನಾಗುವ ಗುರುವು ನನಗಿಂತಲೂ ಶ್ರೇಷ್ಠನು. ವ್ಯಾಖ್ಯಾನಕಾರರು ಈ ಶ್ಲೋಕವನ್ನು ತಮ್ಮ ಸಿದ್ಧಾಂತಕ್ಕೆ ಅನುಗುಣವಾಗಿ ವ್ಯಾಖ್ಯೆಮಾಡಿರುತ್ತಾರೆ. ಇವರು ಹೇಳಿದಂತೆಯೇ ವೈಷ್ಣವ ಆಚಾರ್ಯರು ಈಗಲೂ ಸಹ ಪರಂಪರಾಗತವಾದ ನಾರಾಯಣಾಷ್ಟಾಕ್ಷರೀಮಂತ್ರವನ್ನು ಪ್ರತಿಯೊಬ್ಬ ಶ್ರೀವೈಷ್ಣವನಿಗೂ ಉಪದೇಶಿಸುತ್ತಾರೆ.

ರಾದ ರಾಮ-ಲಕ್ಷ್ಮಣರು ಬೆಟ್ಟದ ತಪ್ಪಲುಗಳಲ್ಲಿ ನಿರ್ಭಯವಾಗಿ ಸಂಚರಿಸುವ ಎರಡು ಸಿಂಹಗಳೋಪಾದಿಯಲ್ಲಿದ್ದರು. ಭಯಂಕರವಾಗಿದ್ದ ಆ ಕಾಡಿನಲ್ಲಿಯೂ ಅವರಿಗೆ ಭಯವಾಗಲೀ, ಉದ್ವೇಗವಾಗಲೀ ಉಂಟಾಗಲಿಲ್ಲ.

೫೩ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೫೪ನೆಯ ಸರ್ಗ

ರಾಮ-ಲಕ್ಷ್ಮಣರು ಸೀತೆಯೊಡನೆ ಪ್ರಯಾಗದಲ್ಲಿ ಗಂಗಾ-ಯಮುನೆಯರ ಸಂಗಮದ ಸಮೀಪದಲ್ಲಿದ್ದ ಭರದ್ವಾಜಾಶ್ರಮಕ್ಕೆ ಹೋದುದು: ಭರದ್ವಾಜರಿಂದ ಸತ್ಕಾರ: ಭರದ್ವಾಜರು ಶ್ರೀರಾಮನಿಗೆ ಚಿತ್ರಕೂಟಪರ್ವತದಲ್ಲಿರುವಂತೆ ಆದೇಶವನ್ನಿತ್ತುದು: ಚಿತ್ರಕೂಟಪರ್ವತದ ಮಹಿಮೆಯ ವರ್ಣನೆ

ತೇ ತು ತಸ್ಮಿನ್ಮಹಾವೃಕ್ಷ ಉಷಿತ್ವಾ ರಜನೀಂ ಶುಭಾಮ್।
ವಿಮಲೇಽಭ್ಯುದಿತೇ ಸೂರ್ಯೇ ತಸ್ಮಾದ್ದೇಶಾತ್ಪ್ರತಸ್ಥಿರೇ ॥೧॥

ರಾಮ-ಲಕ್ಷ್ಮಣ-ಸೀತೆಯರು ಆ ಮಹಾವೃಕ್ಷದ ಕೆಳಗೆ ಆ ರಾತ್ರಿ ತಂಗಿದ್ದು ಮೋಡದಿಂದ ಅನಾವೃತನಾದ, ಪ್ರಕಾಶಮಾನನಾದ ಸೂರ್ಯನು ಉದಯಿಸಿದನಂತರ ಮುಂದೆ ಪ್ರಯಾಣಮಾಡಿದರು.

ಭಾಗೀರಥೀಗಂಗೆಯನ್ನು ಯಮುನೆಯು ಸೇರುವ ಪವಿತ್ರಸ್ಥಳಕ್ಕೆ ಹೋಗಲುದ್ದೇಶಿಸಿ ಗಾಢವಾಗಿದ್ದ ಆ ಮಹಾರಣ್ಯದ ಮಧ್ಯದಲ್ಲಿ ಸೀತಾ-ರಾಮ-ಲಕ್ಷ್ಮಣರು ಪ್ರಯಾಣಮಾಡುತ್ತಿದ್ದರು. ಯಶೋವಂತರಾಗಿದ್ದ ಅವರು ಮನೋಜ್ಞವಾಗಿದ್ದ, ಹಿಂದೆಂದೂ ಕಾಣದಿದ್ದ ಅನೇಕದೇಶಗಳನ್ನು ದಾರಿಯುದ್ದಕ್ಕೂ ಸಂದರ್ಶಿಸುತ್ತಾ ಪ್ರಯಾಗಕ್ಷೇತ್ರದ ಕಡೆಗೆ ನಡೆದುಹೋಗುತ್ತಿದ್ದರು. ಯಾವ ವಿಧವಾದ ಈತಿಬಾಧೆಗಳೂ ಇಲ್ಲದೇ ಕ್ಷೇಮದಿಂದ ಶ್ರೀರಾಮನು ಸೀತಾ-ಲಕ್ಷ್ಮಣರೊಡನೆ ಸುಪುಷ್ಪಿತವಾದ ವಿಧ-ವಿಧವಾದ

ವೃಕ್ಷಗಳ ಗುಂಪುಗಳನ್ನು ನೋಡುತ್ತಾ ಹೋಗುತ್ತಿರುವಾಗ ದಿನದ ಬಹುಭಾಗವೇ ಕಳೆದುಹೋಯಿತು. ಆಗ ಶ್ರೀರಾಮನು ಲಕ್ಷ್ಮಣನಿಗೆ ಹೇಳಿದನು:

"ಲಕ್ಷ್ಮಣ! ಈ ಪ್ರಯಾಗಕ್ಷೇತ್ರದ ಸುತ್ತಲೂ ಹೊಗೆಯಾಡುತ್ತಿರುವುದನ್ನು ನೋಡಿದರೆ ಇಲ್ಲಿ ಭಗವಂತನಾದ ಯಜ್ಞೇಶ್ವರನಿರುವನೆಂದೂ ಮತ್ತು ಈ ಹೊಗೆಯು ಅವನ ಧ್ವಜವೇ ಆಗಿರುವುದೆಂದೂ ನಾನು ಭಾವಿಸುತ್ತೇನೆ. ಮಹರ್ಷಿಗಳಾದ ಭರದ್ವಾಜರೂ ಇಲ್ಲಿಯೇ ಸಮೀಪದಲ್ಲಿರಬಹುದು. ನಾವೀಗ ನಿಶ್ಚಯವಾಗಿಯೂ ಗಂಗಾ-ಯಮುನಾನದಿಗಳ ಸಂಗಮಸ್ಥಾನವನ್ನು ತಲುಪಿದ್ದೇವೆ. ಇಲ್ಲಿ ಈ ಎರಡು ನದಿಗಳ ನೀರಿನ ಸಂಘಟ್ಟನದಿಂದ ಉಂಟಾದ ಶಬ್ದವು ಸ್ಪಷ್ಟವಾಗಿಯೇ ಕೇಳಿಬರುತ್ತಿದೆ.

ಅರಣ್ಯದಲ್ಲಿ ಹೇರಳವಾಗಿ ಸಿಗುವ ಜೇನುತುಪ್ಪ, ಸೌದೆ ಮೊದಲಾದುವುಗಳನ್ನು ಮಾರಿ ಅದರಿಂದಲೇ ಜೀವನ ನಡೆಸುವವರು ಈ ವೃಕ್ಷಗಳ ರೆಂಬೆಗಳನ್ನು ಕತ್ತರಿಸುತ್ತಾರೆ. ಭರದ್ವಾಜರ ಆಶ್ರಮದಲ್ಲಿ ಇಂತಹ ಅನೇಕವೃಕ್ಷಗಳು ಕಾಣುತ್ತಿವೆ."

ಹೀಗೆ ಪರಸ್ಪರವಾಗಿ ಮಾತನಾಡಿಕೊಳ್ಳುತ್ತಾ ವನದ ಸೊಬಗನ್ನು ನೋಡಿ ಆನಂದಿಸುತ್ತಾ ಪ್ರಯಾಣಮಾಡುತ್ತಿದ್ದ ಧನುಷ್ಪಾಣಿಗಳಾದ ರಾಮ-ಲಕ್ಷ್ಮಣರು, ಸೂರ್ಯನು ಅಸ್ತಂಗತನಾಗುತ್ತಿರುವಾಗ ಗಂಗಾ-ಯಮುನೆಯರ ಸಂಗಮಸ್ಥಾನದಲ್ಲಿದ್ದ (ಪ್ರಯಾಗಕ್ಷೇತ್ರದಲ್ಲಿದ್ದ) ಭರದ್ವಾಜಮಹರ್ಷಿಗಳ ಆಶ್ರಮಭೂಮಿಯನ್ನು ಪ್ರವೇಶಿಸಿದರು. ಮುಂದೆ ಮುಹೂರ್ತಕಾಲದವರೆಗೆ ಪ್ರಯಾಣಮಾಡಿ ಭರದ್ವಾಜರ ಆಶ್ರಮವನ್ನು ಸೇರಿದರು. ಅವರು ಧನುಷ್ಪಾಣಿಗಳಾಗಿ ಹೋಗುತ್ತಿದ್ದಾಗ ಅಲ್ಲಿದ್ದ ಮೃಗ-ಪಕ್ಷಿಗಳೆಲ್ಲವೂ ಅವರನ್ನು ಕಂಡು ಭಯಗೊಂಡು ಓಡುತ್ತಿದ್ದುವು.

ಬಳಿಕ ಭರದ್ವಾಜಮಹರ್ಷಿಗಳ ದರ್ಶನಾಕಾಂಕ್ಷಿಗಳಾಗಿದ್ದ ರಾಮ-ಲಕ್ಷ್ಮಣರು ಸೀತೆಯಿಂದ ಅನುಸೃತರಾಗಿ ಮುನಿಗಳ ಅನುಜ್ಞೆಯನ್ನು ನಿರೀಕ್ಷಿಸುತ್ತಾ ಆಶ್ರಮಕ್ಕೆ ಸ್ವಲ್ಪದೂರದಲ್ಲಿ ನಿಂತುಕೊಂಡರು. ಮಹರ್ಷಿಗಳಿಗೆ ರಾಮನು ಆಗಮಿಸಿರುವ ವಿಷಯವು ತಿಳಿಯಿತು. ಒಡನೆಯೇ ರಾಮ-


ಲಕ್ಷ್ಮಣ-ಸೀತೆಯರನ್ನು ಆದರದಿಂದ ಆಶ್ರಮದ ಒಳಕ್ಕೆ ಬರಮಾಡಿಕೊಂಡರು. ಮಹಾತ್ಮರಾದ, ಶಿಷ್ಯರಿಂದ ಸುತ್ತುವರಿಯಲ್ಪಟ್ಟಿದ್ದ, ತೀಕ್ಷ್ಣವ್ರತಾನುಷ್ಠಾನ ಪರರಾದ, ಏಕಾಗ್ರಚಿತ್ತರಾದ, ಎಷ್ಟೋಸಾವಿರ ವರ್ಷಗಳ ಘೋರತಪಸ್ಸಿನಿಂದ ದಿವ್ಯಜ್ಞಾನವನ್ನು ಪಡೆದುಕೊಂಡಿದ್ದ. ಅಗ್ನಿಹೋತ್ರವನ್ನು ಮಾಡಿ ಮುಗಿಸಿದ್ದ ಭರದ್ವಾಜಮಹರ್ಷಿಗಳನ್ನು ಕಂಡೊಡನೆಯೇ ಮಹಾಭಾಗನಾದ ಶ್ರೀರಾಮನು ಕೈಜೋಡಿಸಿಕೊಂಡು ಸೀತಾ-ಲಕ್ಷ್ಮಣರ ಸಮೇತನಾಗಿ ಅಭಿವಾದನಮಾಡಿದನು. ಬಳಿಕ ಮಹರ್ಷಿಗಳಿಗೆ ತನ್ನ ಮತ್ತು ಲಕ್ಷ್ಮಣ-ಸೀತೆಯರ ಪರಿಚಯಮಾಡಿ ಕೊಡುತ್ತಾ ಹೇಳಿದನು :

"ಪೂಜ್ಯರೇ! ನಾವಿಬ್ಬರೂ ದಶರಥರಾಜನ ಮಕ್ಕಳಾದ ರಾಮ-ಲಕ್ಷ್ಮಣರೆಂಬುವರು. ಜನಕನ ಮಗಳಾದ, ಮಂಗಳಾಂಗಿಯಾದ ಈ ವೈದೇಹಿಯು ನನ್ನ ಭಾರ್ಯೆ. ನಿಷ್ಕಳಂಕಳಾದ ಇವಳು ನಿರ್ಜನವಾದ ಈ ಅರಣ್ಯಕ್ಕೆ ನನ್ನನ್ನೇ ಅನುಸರಿಸಿ ಬಂದಿರುವಳು. ನನ್ನ ತಂದೆಯಾದ ದಶರಥ ಮಹಾರಾಜನು ಹದಿನಾಲ್ಕು ವರ್ಷಗಳ ಕಾಲ ಅರಣ್ಯವಾಸವನ್ನು ಮಾಡಿ ಬರುವಂತೆ ನನ್ನನ್ನು ಕಳುಹಿಸಿಕೊಟ್ಟಿರುವನು. ನನಗೆ ಅತ್ಯಂತಪ್ರಿಯನಾದ, ದೃಢವ್ರತನಾದ ಈ ನನ್ನ ತಮ್ಮನಾದ ಸೌಮಿತ್ರಿಯೂ ನನ್ನನ್ನೇ ಅನುಸರಿಸಿ ಕಾಡಿಗೆ ಬಂದಿರುವನು. ತಂದೆಯ ಆಜ್ಞಾಧಾರಕರಾಗಿ ನಾವಿಂದು ಈ ತಪೋವನವನ್ನು ಪ್ರವೇಶಿಸಿದ್ದೇವೆ. ಕಂದ-ಮೂಲ-ಫಲಗಳನ್ನು ತಿನ್ನುತ್ತಾ ವಾನಪ್ರಸ್ಥಾಶ್ರಮೋಕ್ತವಾದ ಧರ್ಮವನ್ನು ಅನುಸರಿಸಿಕೊಂಡಿದ್ದೇವೆ."

ಧೀಮಂತನಾದ ರಾಜಪುತ್ರನ ಆ ಮಾತನ್ನು ಕೇಳಿ ಧರ್ಮಾತ್ಮರಾದ ಭರದ್ವಾಜರು, ಮಧುಪರ್ಕಕ್ಕಾಗಿ ಗೋವನ್ನೂ,* ಅರ್ಘ್ಯಪ್ರದಾನಕ್ಕೆ ಅರ್ಹವಾದ ಉದಕವನ್ನೂ ಶಿಷ್ಯರ ಮೂಲಕವಾಗಿ ತರಿಸಿ ಅರ್ಘ್ಯ-ಪಾದ್ಯ-ಮಧುಪರ್ಕಗಳನ್ನು ಶ್ರೀರಾಮನಿಗೆ ಸಮರ್ಪಿಸಿದರು. ಬಳಿಕ ಭರದ್ವಾಜರು ಅರಣ್ಯದಲ್ಲಿ ಸಿಕ್ಕುವ ಗೆಡ್ಡೆ-ಗೆಣಸುಗಳನ್ನೂ, ಹಣ್ಣಿನ ರಸಗಳನ್ನೂ ರಾಮ-ಲಕ್ಷ್ಮಣ

*ಮಧುಪರ್ಕಕ್ಕೆ ಯಾರು ಯಾರು ಅರ್ಹರೆಂಬುದನ್ನು ಸ್ಮೃತಿಯಲ್ಲಿ ಹೀಗೆ ಹೇಳಿದೆ: ಗೋಮಧುಪರ್ಕಾರ್ಹೋ ವೇದಾಧ್ಯಾಯೀ ಆಚಾರ್ಯ ಋತ್ವಿಕ್ ಸ್ನಾತಕೋ ರಾಜಾ ವಾ ಧರ್ಮಯುಕ್ತಃ । ವೇದಾಧ್ಯಾಯೀ, ಆಚಾರ್ಯ, ಯಜ್ಞ ಋತ್ವಿಜರು, ಸ್ನಾತಕನಾದ ಮತ್ತು ಧಾರ್ಮಿಕನಾದ ರಾಜ ಇವರು ಗೋಮಧುಪರ್ಕಕ್ಕೆ ಅರ್ಹರಾದವರು.

ಸೀತೆಯರಿಗೆ ತಿನ್ನಲು ಕೊಟ್ಟರು. ಅವರು ತಂಗಲು ಯೋಗ್ಯವಾದ ಕುಟೀರವನ್ನೂ ಸಿದ್ಧಗೊಳಿಸಿಕೊಟ್ಟರು. ಭರದ್ವಾಜಮಹರ್ಷಿಗಳು ಆಗಮಿಸಿದ ಶ್ರೀರಾಮನಿಗೆ ಸ್ವಾಗತವನ್ನಿತ್ತು ಅರ್ಘ್ಯ-ಪಾದ್ಯ-ಮಧುಪರ್ಕ-ಫಲಾಹಾರ ಗಳಿಂದ ಸತ್ಕರಿಸುತ್ತಿದ್ದ ಸಮಯದಲ್ಲಿ ಅವರ ಸುತ್ತಲೂ ಮೃಗ-ಪಕ್ಷಿಗಳು ನಿಂತು ನೋಡುತ್ತಿದ್ದುವು. ಹಾಗೆಯೇ ಆಶ್ರಮದಲ್ಲಿದ್ದ ಇತರ ಮುನಿಗಳೂ ಸುತ್ತುವರಿದು ನಿಂತಿದ್ದರು.



ಭರದ್ವಾಜಮಹರ್ಷಿಗಳು ಆದರಪೂರ್ವಕವಾಗಿ ಸಲ್ಲಿಸಿದ ಆ ಪೂಜೆಯನ್ನು ಸ್ವೀಕರಿಸಿ ಆಸನದಲ್ಲಿ ಮಂದಸ್ಮಿತನಾಗಿ ಕುಳಿತಿದ್ದ ಶ್ರೀರಾಮನಿಗೆ ಮಹರ್ಷಿಗಳು ಧರ್ಮಯುಕ್ತವಾದ ಮಾತನ್ನು ಹೇಳಿದರು:

"ರಾಮಭದ್ರ! ನೀನು ಆಶ್ರಮಕ್ಕೆ ಬರುವುದನ್ನು ನಾನು ಬಹಳ ದಿವಸಗಳಿಂದ ನಿರೀಕ್ಷಿಸುತ್ತಲೇ ಇರುವೆನು. ನಿಷ್ಕಾರಣವಾಗಿ ನೀನು ಅಯೋಧ್ಯೆಯಿಂದ ಹೊರದೂಡಲ್ಪಟ್ಟೆಯೆಂಬ ವಿಷಯವೂ ನನಗೆ ತಿಳಿದಿದೆ. ಎರಡು ಮಹಾನದಿಗಳು ಸೇರುವ ಈ ಪುಣ್ಯಕ್ಷೇತ್ರವು ಸಾಕಷ್ಟು ವಿಶಾಲವಾಗಿದೆ. ಪುಣ್ಯತಮವಾಗಿಯೂ ರಮಣೀಯವಾಗಿಯೂ ಇದೆ. ಇಲ್ಲಿ ನೀನು ಸುಖವಾಗಿರಬಹುದು."

ಭರದ್ವಾಜರು ಹೀಗೆ ಹೇಳಲು, ಸರ್ವರ ಹಿತದಲ್ಲಿಯೂ ಆಸಕ್ತನಾದ ಶ್ರೀರಾಮನು ಶುಭಕರವಾದ ಈ ಮಾತನ್ನು ಹೇಳಿದನು:

"ಮಹರ್ಷಿಗಳೇ! ತಾವು ಹೇಳಿದುದೇನೋ ಉಚಿತವಾಗಿಯೇ ಇದೆ. ಆದರೆ ಈ ಆಶ್ರಮಕ್ಕೆ ಸಮೀಪದಲ್ಲಿರುವ ಪಟ್ಟಣಿಗರು ನನ್ನನ್ನಿಲ್ಲಿ ಸುಲಭವಾಗಿ ಕಾಣಬಹುದೆಂಬ ಆಶಯದಿಂದ ತಂಡ-ತಂಡವಾಗಿ ಇಲ್ಲಿಗೆ ಬರುವರೆಂದು ನಾನು ಭಾವಿಸುತ್ತೇನೆ. ವೈದೇಹಿಯನ್ನೂ ಮತ್ತು ನನ್ನನ್ನೂ ಕಾಣಲು ಉತ್ಸಾಹದಿಂದ ಜನರು ಇಲ್ಲಿಗೆ ಬಂದೇ ಬರುತ್ತಾರೆ. ಈ ಒಂದು ಕಾರಣದಿಂದ ನಾನಿಲ್ಲಿ ತಂಗಲು ಇಷ್ಟಪಡುವುದಿಲ್ಲ.

ಏಕಾನ್ತೇ ಪಶ್ಯ ಭಗವನ್ನಾಶ್ರಮಸ್ಥಾನಮುತ್ತಮಮ್।
ರಮತೇ ಯತ್ರ ವೈದೇಹೀ ಸುಖಾರ್ಹಾ ಜನಕಾತ್ಮಜಾ ॥೨೬॥

ಪೂಜ್ಯರೇ! ಏಕಾಂತದಲ್ಲಿರಲು ಸಾಧ್ಯವಾಗುವಂತೆ ಒಂದು ಶ್ರೇಷ್ಠವಾದ ಆಶ್ರಮಪ್ರದೇಶವನ್ನು ಯೋಚಿಸಿ ಹೇಳಿರಿ. ಆ ಸ್ಥಳವು ಸುಖೋಚಿತಳಾದ ಜನಕನ ಮಗಳಾದ ಸೀತಾದೇವಿಯು ನಕ್ಕು-ನಲಿಯಲು ಸಾಧ್ಯವಾಗುವಂತಿರಬೇಕು."

ಶುಭಾವಹವಾದ ಶ್ರೀರಾಮನ ಆ ಮಾತನ್ನು ಕೇಳಿ ಮಹಾಮುನಿಗಳಾದ ಭರದ್ವಾಜರು ಗ್ರಹಿಸಲು ಯೋಗ್ಯವಾದ ಈ ಮಾತನ್ನು ಹೇಳಿದರು:

"ರಾಮಭದ್ರ! ನೀನು ಯಾವ ಪರ್ವತದಲ್ಲಿ ವಾಸಮಾಡಬೇಕಾಗಿರುವುದೋ ಆ ಪರ್ವತವು ಇಲ್ಲಿಗೆ ಹತ್ತು ಕ್ರೋಶಗಳ ದೂರವಿದೆ.* ಅದು

---

*ಕ್ರೋಶಃ= ಒಂದು ಹರದಾರಿ ಅಥವಾ ಮೂರು ಮೈಲಿಗಳು. ಹತ್ತುಕ್ರೋಶಗಳೆಂದರೆ ಮೂವತ್ತು ಮೈಲಿಗಳಾಗುತ್ತವೆ. ಈಗ ಪ್ರಯಾಗದಿಂದ ಚಿತ್ರಕೂಟವು

ಮಹರ್ಷಿಗಳಿಂದ ಸೇವಿಸಲ್ಪಡುತ್ತಿದೆ. ಪುಣ್ಯಪ್ರದವಾಗಿದೆ. ನೇತ್ರಾನಂದಕರವಾಗಿದೆ. ಗೋಲಾಂಗೂಲಗಳಿಂದಲೂ (ಗೋವಿನ ಬಾಲವನ್ನು ಹೊಂದಿರುವ ಕಪಿವಿಶೇಷಗಳಿಂದಲೂ) ಕಪಿಗಳಿಂದಲೂ ಮತ್ತು ಕರಡಿಗಳಿಂದಲೂ ಅದು ತುಂಬಿದೆ. ಗಂಧಮಾದನಪರ್ವತಕ್ಕೆ ಸದೃಶವಾಗಿರುವ ಆ ಪರ್ವತಕ್ಕೆ ಚಿತ್ರಕೂಟವೆಂದು ಹೆಸರು.

ಯಾವತಾ ಚಿತ್ರಕೂಟಸ್ಯ ನರಃ ಶೃಙ್ಗಾಣ್ಯವೇಕ್ಷತೇ।
ಕಲ್ಯಾಣಾನಿ ಸಮಾಧತ್ತೇ ನ ಪಾಪೇ ಕುರುತೇ ಮನಃ ॥೩೦॥

ಎಲ್ಲಿಯವರೆಗೆ ಮಾನವನು ಆ ಚಿತ್ರಕೂಟಪರ್ವತದ ಶಿಖರವನ್ನು ಸಂದರ್ಶಿಸುತ್ತಿರುವನೋ–ಅಷ್ಟುಕಾಲದವರೆಗೂ ಅವನು ಶುಭಫಲಗಳನ್ನೇ ಪಡೆದುಕೊಂಡಿರುತ್ತಾನೆ. ಮನಸ್ಸು ಪಾಪಕರ್ಮದಲ್ಲಿ ತೊಡಗುವುದಿಲ್ಲ.

ಋಷಯಸ್ತತ್ರ ಬಹವೋ ವಿಹೃತ್ಯ ಶರದಾಂ ಶತಮ್।
ತಪಸಾ ದಿವಮಾರೂಢಾಃ ಕಪಾಲಶಿರಸಾ ಸಹ ॥೩೧॥

ರಾಘವ! ಆ ಚಿತ್ರಕೂಟಪರ್ವತದ ತಪ್ಪಲುಗಳಲ್ಲಿ ಋಷಿ-ಮಹರ್ಷಿಗಳು ನೂರಾರು ವರ್ಷಗಳ ಕಾಲ ತಪಸ್ಸನ್ನು ಮಾಡುತ್ತಾ ವಿಹರಿಸುತ್ತಿದ್ದು ತಪಃಫಲದಿಂದಾಗಿ ಸಶರೀರರಾಗಿಯೇ ಸ್ವರ್ಗಕ್ಕೆ ತೆರಳಿರುವರು.*

ಚಿತ್ರಕೂಟಪ್ರದೇಶವು ನಿರ್ಜನವಾಗಿದ್ದು ನಿನಗೆ ಅತ್ಯಂತಸುಖಕರವಾಗುವುದೆಂದು ನಾನು ಭಾವಿಸುತ್ತೇನೆ. ಹದಿನಾಲ್ಕು ವರ್ಷಗಳ ವನವಾಸ

ಎಂಭತ್ತು ಮೈಲಿಗಳ ದೂರದಲ್ಲಿದೆ. ಈ ಕಾರಣದಿಂದಲೇ ಒಬ್ಬ ವ್ಯಾಖ್ಯಾನಕಾರರು ದಶ ಚ ದಶ ಚ ದಶ ಚ= ದಶ. ಮೂವತ್ತು ಕ್ರೋಶಗಳು ಎಂದು ಅರ್ಥಮಾಡಿರುತ್ತಾರೆ. ಲಕ್ಷಾಂತರ ವರ್ಷಗಳು ಕಳೆದಿರುವುದರಿಂದ ಸಂಗಮಸ್ಥಾನವು ದೂರ ಸರಿದಿರಬಹುದು ಅಥವಾ ಕ್ರೋಶವೆಂಬುದು ಮೂರು ಮೈಲಿಗಳಿಗಿಂತಲೂ ಮಿಗಿಲಾದ ಅಳತೆಯಾಗಿರಬಹುದು.

*'ಕಪಾಲಶಿರಸಾ' ಎಂಬ ಪದಕ್ಕೆ ಒಬ್ಬೊಬ್ಬರು ಒಂದೊಂದು ವಿಧವಾಗಿ ವ್ಯಾಖ್ಯೆ ಮಾಡಿರುತ್ತಾರೆ. (1) ಬಹುದಿನಮೃತನೃಕಪಾಲವಚ್ಛುಕ್ಲಂ ಶಿರಃ ತೇನ ಸಹ= ಬಹಳ ದಿನಗಳ ಹಿಂದೆ ಸತ್ತುಹೋದ ಮನುಷ್ಯನ ತಲೆಬುರುಡೆಗೆ ಸದೃಶವಾದ ಬಿಳಿಯ ತಲೆಯಿಂದ ಕೂಡಿರುವ, ತಪಸಾ ಶರದಾಂ ಶತಂ ವಿಹೃತ್ಯ–ಮುದಿತನದಲ್ಲಿಯೂ

ವನ್ನು ನೀನು ಚಿತ್ರಕೂಟದಲ್ಲಾದರೂ ಕಳೆಯಬಹುದು; ನನ್ನೊಡನೆ ಯಾದರೂ ಇರಬಹುದು."

ಹೀಗೆ ಹೇಳಿ ಧರ್ಮವಿದರಾದ ಭರದ್ವಾಜರು ಆಕಸ್ಮಿಕವಾಗಿ ಆಗಮಿಸಿರುವ, ಬಹುಪ್ರಿಯನಾದ, ಭಾರ್ಯಾಭ್ರಾತೃಸಹಿತನಾದ ಶ್ರೀರಾಮನನ್ನು ಸಕಲವಿಧವಾದ ಕಾಮನಾವಸ್ತುಗಳಿಂದಲೂ ಸತ್ಕರಿಸಿ ಪುರಸ್ಕರಿಸಿದರು.

ಆ ಪ್ರಯಾಗಕ್ಷೇತ್ರದಲ್ಲಿ ಮಹರ್ಷಿಗಳ ಸಾನ್ನಿಧ್ಯವನ್ನು ಹೊಂದಿ ಅವರೊಡನೆ ಚಿತ್ರ-ವಿಚಿತ್ರವಾದ ಕಥೆಗಳನ್ನು ಕೇಳುತ್ತಿದ್ದ ಶ್ರೀರಾಮನಿಗೆ ಆ ರಾತ್ರಿಯು ಪುಣ್ಯತಮವಾದ ಮತ್ತು ಪ್ರಸನ್ನವಾದ ರಾತ್ರಿಯಾಗಿ ಪರಿಣಮಿಸಿತು. ಮಹರ್ಷಿಗಳೊಡನಿದ್ದ ಆ ರಾತ್ರಿಯಲ್ಲಿ ಶ್ರೀರಾಮನ ಮನಸ್ಸು ನಿರ್ಮಲವಾಗಿಯೂ ಆಹ್ಲಾದಕರವಾಗಿಯೂ ಇದ್ದಿತು. ಸುಖವನ್ನು ಉಪಭೋಗಿಸಲು ಯೋಗ್ಯನಾಗಿದ್ದರೂ ದಾರಿನಡೆದ ಶ್ರಮದಿಂದ ಬಹಳವಾಗಿ ಬಳಲಿದ್ದ ಶ್ರೀರಾಮನು, ರಮ್ಯವಾಗಿಯೂ ಪುಣ್ಯತಮವಾಗಿಯೂ ಇದ್ದ ಭರದ್ವಾಜಾಶ್ರಮದಲ್ಲಿ ಸೀತಾ-ಲಕ್ಷ್ಮಣರೊಡನೆ ಆ ರಾತ್ರಿಯನ್ನು ಸುಖವಾಗಿ ಕಳೆದನು.

ಬೆಳಗಾದೊಡನೆಯೇ ನರಶ್ರೇಷ್ಠನಾದ ಶ್ರೀರಾಮನು ಭರದ್ವಾಜರ ಬಳಿಗೆ ಹೋಗಿ ಪ್ರಜ್ವಲಿಸುತ್ತಿದ್ದ ತೇಜಸ್ಸಿನಿಂದ ಕೂಡಿದ್ದ ಮಹರ್ಷಿಗಳಿಗೆ ಹೇಳಿದನು:

"ಸತ್ಯಶೀಲರೇ! ಪೂಜ್ಯರೇ! ನಿಮ್ಮ ಆಶ್ರಮದಲ್ಲಿ ರಾತ್ರಿಯನ್ನು ಸುಖವಾಗಿ ಕಳೆದೆವು. ತಾವು ನಿರೂಪಿಸಿರುವ ಚಿತ್ರಕೂಟಪರ್ವತಕ್ಕೆ ಪ್ರಯಾಣಮಾಡಲು ಅನುಮತಿಸಿರಿ."

ತಪಶ್ಚರಣೆಯನ್ನೇ ಮಾಡುತ್ತಿದ್ದು ಮರಣಾನಂತರದಲ್ಲಿ, ದಿವಂ ಗತಾಃ–ಸ್ವರ್ಗಕ್ಕೆ ತೆರಳಿದರು. (2)'ಕಪಾಲಶಿರಸಾ' ಎಂಬುದಕ್ಕೆ ಒಬ್ಬ ವ್ಯಾಖ್ಯಾನಕಾರರು ಶಿವನೆಂದು ಅರ್ಥಮಾಡಿರುತ್ತಾರೆ. ಶಿವನೊಡನೆ ಸಂವತ್ಸರಗಳನ್ನು ಕಳೆದು ದಿವಂ=ಪ್ರಮೋದ ವಿಶೇಷಂ ಆನಂದವಿಶೇಷವನ್ನು, ಪ್ರಾಪ್ತಾಃ-ಹೊಂದಿರುವ. (3) ಕಪಾಲಶಿರಸಾ= ಕಪಾಲಾಸನೇನ ಪ್ರಕ್ಷೀಣತ್ವಕ್‌ಶಿರೋರುಹತಯಾ ಕಪಾಲಾವಶಿಷ್ಟಶಿರಸಾ ಸಹ ದಿವಮಾರೂಢಾಃ-ಕಪಾಲಾಸನದಲ್ಲಿ ಉಪಸ್ಥಿತರಾಗಿದ್ದ ಇವರು ಕಪಾಲಾವಶಿಷ್ಟವಾದ ಶಿರಸ್ಸುಳ್ಳವರಾಗಿ ಸ್ವರ್ಗವನ್ನೈದಿದರು. (4) ಕಪಾಲಶಿರಸನೆಂಬ ಋಷಿಯ ಸಮೇತರಾಗಿ ಸ್ವರ್ಗಕ್ಕೆ ಹೋದರು.

ಶ್ರೀರಾಮನ ಶುಭಸಂಪರ್ಕವಿದ್ದ ಅಂತಹ ಮಹಾರಾತ್ರಿಯು ಕಳೆದುಹೋದನಂತರ ಭರದ್ವಾಜರು ಶ್ರೀರಾಮನಿಗೆ ಹೇಳಿದರು:

ಮಧುಮೂಲಫಲೋಪೇತಂ ಚಿತ್ರಕೂಟಂ ವ್ರಜ ॥೩೮॥

"ರಾಮಭದ್ರ! ಜೇನುತುಪ್ಪದಿಂದಲೂ, ಕಂದ-ಮೂಲಗಳಿಂದಲೂ ಮತ್ತು ನಾನಾವಿಧವಾದ ಹಣ್ಣುಗಳಿಂದಲೂ ಸಮೃದ್ಧವಾಗಿರುವ ಚಿತ್ರಕೂಟಕ್ಕೆ ನೀನು ಪ್ರಯಾಣಮಾಡಬಹುದು.

ಅನೇಕವಿಧವಾದ ವೃಕ್ಷಗಳಿಂದ ವ್ಯಾಪ್ತವಾಗಿರುವ, ಕಿನ್ನರರಿಂದಲೂ-ಉರಗರಿಂದಲೂ ಸಂಸೇವ್ಯಮಾನವಾಗಿರುವ, ನವಿಲುಗಳ ನಿನಾದದಿಂದ ಪ್ರತಿಕ್ಷಣದಲ್ಲಿಯೂ ಪ್ರತಿಧ್ವನಿಸುತ್ತಿರುವ, ಮದಿಸಿದ ಆನೆಗಳಿಂದ ಆಶ್ರಯಿಸಲ್ಪಟ್ಟಿರುವ ಆ ಚಿತ್ರಕೂಟಪರ್ವತದಲ್ಲಿ ವಾಸಮಾಡುವುದು ನಿನಗೆ ಹಿತಕರವಾಗುವುದೆಂದು ನಾನು ಭಾವಿಸುತ್ತೇನೆ. ಸುವಿಖ್ಯಾತವಾದ ಚಿತ್ರಕೂಟಪರ್ವತಕ್ಕೆ ನೀನಿನ್ನು ಹೋಗಿ ಬಾ.

ರಾಜೀವಲೋಚನ! ನಾನು ಈ ಹಿಂದೆ ಹೇಳಿದಂತೆ ಚಿತ್ರಕೂಟ ಪರ್ವತವು ಪುಣ್ಯತಮವಾದುದು. ನೋಡಲು ಅತ್ಯಂತ ರಮಣೀಯ ವಾದುದು. ಕಂದ-ಮೂಲ-ಫಲಗಳೂ ಯಥೇಚ್ಛವಾಗಿ ಅಲ್ಲಿ ಸಿಕ್ಕುತ್ತವೆ. ಕಾಡಾನೆಗಳ ಹಿಂಡುಗಳೂ, ಜಿಂಕೆಯೇ ಮೊದಲಾದ ಸಾಧುಪ್ರಾಣಿಗಳ ಹಿಂಡುಗಳೂ ಆ ಪರ್ವತದಲ್ಲಿ ಯಥೇಚ್ಛವಾಗಿ ಸಂಚರಿಸುತ್ತಿರುತ್ತವೆ. ಅವೆಲ್ಲವನ್ನೂ ನೀನು ನೋಡಿ ನಲಿಯಬಹುದು. ಚಿತ್ರಕೂಟಪರ್ವತದಲ್ಲಿರುವ ನದಿಗಳ ತೀರಗಳಲ್ಲಿಯೂ, ಗುಹೆಗಳ ಸಮೀಪದಲ್ಲಿಯೂ, ಮಹಾಪ್ರವಾಹ ಗಳ ಸನಿಹದಲ್ಲಿಯೂ ಸೀತೆಯೊಡನೆ ಸಂಚರಿಸುವಾಗ ನಿನ್ನ ಮನಸ್ಸು ಆನಂದತುಂದಿಲವಾಗುವುದು.

ಪ್ರಹೃಷ್ಟವಾದ ಟಿಟ್ಟಿಭ ಪಕ್ಷಿಗಳಿಂದಲೂ–ಕೋಗಿಲೆಗಳಿಂದಲೂ ನಿನಾದಿತವಾದ, ಮೃಗಗಳಿಂದಲೂ, ಮದಿಸಿದ ಆನೆಗಳಿಂದಲೂ ಕೂಡಿ ಸುರಮ್ಯವಾಗಿ ಕಾಣುವ ಮಂಗಳಕರವಾದ ಚಿತ್ರಕೂಟಪರ್ವತಕ್ಕೆ ಹೋಗಿ ವಾಸಮಾಡಿಕೊಂಡಿರು."

ಐವತ್ತನಾಲ್ಕನೆಯ ಸರ್ಗವು ಮುಗಿಯಿತು.

ಭರದ್ವಾಜಮಹರ್ಷಿಗಳು ಸೀತಾ-ರಾಮ-ಲಕ್ಷ್ಮಣರಿಗೆ ಸ್ವಸ್ತಿವಾಚನಮಾಡಿ ಚಿತ್ರಕೂಟಪರ್ವತದ ಮಾರ್ಗವನ್ನು ತೋರಿಸಿಕೊಟ್ಟುದು: ಎಲ್ಲರ ಅನುಮತಿಯನ್ನೂ ಪಡೆದು ಶ್ರೀರಾಮನು ದೋಣಿಯ ಮೂಲಕವಾಗಿ ಯಮುನಾ ನದಿಯನ್ನು ದಾಟಿದುದು: ಸೀತೆಯು ಯಮುನಾ ನದಿಯನ್ನು ಪ್ರಾರ್ಥಿಸಿದುದು: ಮೂವರೂ ಯಮುನಾ ನದಿಯ ತೀರದ ಮಾರ್ಗವನ್ನೇ ಹಿಡಿದು ಒಂದು ಕ್ರೋಶದವರೆಗೆ ಪ್ರಯಾಣಮಾಡಿ ಯಮುನಾನದಿಯ ತೀರಪ್ರದೇಶದಲ್ಲಿ ಸಮತಲವಿದ್ದ ಸ್ಥಳದಲ್ಲಿ ರಾತ್ರಿ ತಂಗಿದುದು

ಉಷಿತ್ವಾ ರಜನೀಂ ತತ್ರ ರಾಜಪುತ್ರಾವರಿಂದಮೌ।
ಮಹರ್ಷಿಮಭಿವಾದ್ಯಾಥ ಜಗ್ಮತುಸ್ತಂ ಗಿರಿಂ ಪ್ರತಿ ॥೧॥

(ಹಿಂದಿನ ಸರ್ಗದ ಕಥೆಯನ್ನೇ ಪುನಃ ಸೂಕ್ಷ್ಮವಾಗಿ ಹೇಳಿ ಕಥೆಯನ್ನು ಮುಂದುವರಿಸಲಾಗಿದೆ.)

ಶತ್ರುದಮನರಾದ ರಾಮ-ಲಕ್ಷ್ಮಣರು ಸೀತೆಯೊಡನೆ ಭರದ್ವಾಜರ ಆಶ್ರಮದಲ್ಲಿ ಆ ರಾತ್ರಿ ತಂಗಿದ್ದು ಬೆಳಗಾಗುತ್ತಲೇ ಅವರ ಅನುಮತಿಯನ್ನು ಪಡೆದು ಮಹರ್ಷಿಗಳಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಚಿತ್ರಕೂಟ ಪರ್ವತದ ಕಡೆಗೆ ಪ್ರಯಾಣಹೊರಟರು. ಆಗ ಮೂವರಿಗೂ ಮಹರ್ಷಿ ಗಳು ಸ್ವಸ್ತಿವಾಚನಗಳನ್ನು ಮಾಡಿದರು. ಮಕ್ಕಳು ಪ್ರಯಾಣಹೊರಟಾಗ ತಂದೆಯು ಹಿಂಬಾಲಿಸಿ ಹೋಗುವಂತೆ ಪ್ರಯಾಣಹೊರಟಿದ್ದ ರಾಜಕುಮಾರ ರನ್ನು ಭರದ್ವಾಜರು ಹಿಂಬಾಲಿಸಿದರು. ಜೊತೆಯಲ್ಲಿ ಹೋಗುತ್ತಿದ್ದಾಗ ಮಹಾಮುನಿಗಳಾದ, ಮಹಾತೇಜಸ್ವಿಗಳಾದ ಭರದ್ವಾಜರು ಅವರಿಗೆ ಹೇಳಿದರು:

"ಮನುಜಶ್ರೇಷ್ಠರೇ! ಇಲ್ಲಿಂದ ಪ್ರಯಾಣಹೊರಟಿರುವ ನೀವು ಇಲ್ಲಿಗೆ ಸಮೀಪದಲ್ಲಿರುವ ಗಂಗಾ-ಯಮುನೆಯರ ಸಂಗಮಸ್ಥಾನಕ್ಕೆ ಹೋಗಿ ಅಲ್ಲಿಂದ ಮುಂದೆ ಗಂಗಾನದಿಯ ಪ್ರವಾಹದ ರಭಸದಿಂದ ಸ್ವಲ್ಪದೂರದವರೆಗೆ ಪಶ್ಚಿಮ

ವಾಹಿನಿಯಾಗಿ ಹರಿಯುವ ಕಾಲಿಂದೀನದಿಯನ್ನು ಅನುಸರಿಸಿ ಪ್ರಯಾಣ ಮಾಡಿರಿ. ಅಲ್ಲಿಂದ ಮುಂದೆ ಜನಸಂಚಾರದಿಂದ ಸವೆದಿರುವ ಮಾರ್ಗವುಳ್ಳ (ಸುಂದರವಾದ ಸೋಪಾನಗಳುಳ್ಳ) ಕಾಲಿಂದೀತೀರ್ಥವನ್ನು ಮನದಣಿಯುವ ವರೆಗೂ ನೋಡಿರಿ. ಅನಂತರ ತೆಪ್ಪವನ್ನು ಕಟ್ಟಿಕೊಂಡು ಯಮುನಾನದಿಯನ್ನು ದಾಟಿರಿ. ಅಂಶುಮತೀನದಿಯನ್ನು ದಾಟಿದನಂತರ ಆ ನದಿಯ ತೀರದಲ್ಲಿರುವ, ಹಸಿರು ಎಲೆಗಳಿರುವ ಅನೇಕವೃಕ್ಷಗಳಿಂದ ಸುತ್ತುವರಿಯಲ್ಪಟ್ಟಿರುವ, ಶ್ಯಾಮಲವರ್ಣದಿಂದ ಬೆಳಗುತ್ತಿರುವ, ಸಿದ್ಧ-ಚಾರಣರಿಂದ ಸೇವಿಸಲ್ಪಡುತ್ತಿರುವ ಆಲದ ಮರದ ಸಮೀಪಕ್ಕೆ ಹೋಗಿರಿ. ಅದರ ಬಳಿಯಲ್ಲಿ ಸೀತಾದೇವಿಯು ಕೈಜೋಡಿಸಿಕೊಂಡು ನಿಂತು ಶುಭಾಶಿಷಗಳನ್ನು ಪ್ರಾರ್ಥಿಸಲಿ. ಅನಂತರ ಆ ರಾತ್ರಿಯಲ್ಲಿ ನೀವು ಅಲ್ಲಿಯೇ ತಂಗಬಹುದು; ಮುಂದಕ್ಕೆ ಪ್ರಯಾಣವನ್ನಾದರೂ ಮಾಡಬಹುದು. ನ್ಯಗ್ರೋಧವೃಕ್ಷದಿಂದ ಮುಂದಕ್ಕೆ ಒಂದು ಹರದಾರಿ ಪ್ರಯಾಣಮಾಡಿದರೆ ಮುತ್ತುಗದ ಮರಗಳಿಂದಲೂ, ಅತ್ತಿಮರಗಳಿಂದಲೂ, ಯಮುನಾನದಿಯ ತೀರ ಪ್ರದೇಶದಲ್ಲಿ ಬೆಳೆದಿರುವ ಇತರ ವೃಕ್ಷಗಳಿಂದಲೂ ವ್ಯಾಪ್ತವಾಗಿರುವ ನೀಲವಾದ ಅರಣ್ಯವನ್ನು ಕಾಣುವಿರಿ. ನಾನು ಆ ಕಾಡಿನ ಹಾದಿಯಲ್ಲಿ ಎಷ್ಟೋ ಬಾರಿ ಪ್ರಯಾಣಮಾಡಿರುತ್ತೇನೆ. ಚಿತ್ರಕೂಟಪರ್ವತಕ್ಕೆ ಆ ನೀಲಾರಣ್ಯದ ಮೂಲಕವೇ ಹಾದಿಯಿರುತ್ತದೆ. ಚಿತ್ರಕೂಟಪರ್ವತದ ಸುತ್ತಲೂ ಇರುವ ಆ ಅರಣ್ಯವು ಬಹುರಮ್ಯವಾಗಿಯೂ, ಕೋಮಲವಾಗಿಯೂ, ಕಾಡುಗಿಚ್ಚೇ ಮುಂತಾದ ಉಪದ್ರವಗಳಿಂದ ರಹಿತವಾಗಿಯೂ ಇರುವುದು."

ಹೀಗೆ ಭರದ್ವಾಜರು ಚಿತ್ರಕೂಟಕ್ಕೆ ಹೋಗುವ ಹಾದಿಯನ್ನು ಶ್ರೀರಾಮನಿಗೆ ವಿಶದವಾಗಿ ತಿಳಿಸಿದನಂತರ ಶ್ರೀರಾಮನು "ಹಾಗೆಯೇ ಆಗಲಿ. ತಾವು ಹೇಳಿರುವ ಹಾದಿಯಲ್ಲಿಯೇ ಪ್ರಯಾಣಮಾಡುತ್ತೇವೆ" ಎಂದು ಪ್ರತ್ಯುತ್ತರವನ್ನಿತ್ತು ಅಭಿವಾದನಮಾಡಿ ಅವರನ್ನು ಹಿಂದಕ್ಕೆ ಕಳುಹಿಸಿದನು.

ಭರದ್ವಾಜರು ಆಶ್ರಮಕ್ಕೆ ಹಿಂದಿರುಗಿದನಂತರ ಶ್ರೀರಾಮನು ಲಕ್ಷ್ಮಣನಿಗೆ ಹೇಳಿದನು:

"ಲಕ್ಷ್ಮಣ! ನಿನಗೆ ಮಂಗಳವಾಗಲಿ. ನಿಶ್ಚಯವಾಗಿಯೂ ನಾವು

ಮಹಾಪುಣ್ಯಶಾಲಿಗಳು. ಮಹಾತಪಸ್ವಿಗಳಾದ ಭರದ್ವಾಜರ ಅನುಕಂಪಕ್ಕೆ ಪಾತ್ರರಾಗಿದ್ದೇವೆ. ಇವರು ನಮ್ಮ ವಿಷಯದಲ್ಲಿ ದಯಾಳುಗಳಾಗಿರುವರು. ಇದು ನಮ್ಮ ಸೌಭಾಗ್ಯವೇ ಸರಿ."

ಹೀಗೆ ಪುರುಷಶ್ರೇಷ್ಠರಾದ ರಾಮ-ಲಕ್ಷ್ಮಣರು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಾ ಸೀತೆಯನ್ನು ಮುಂದುಮಾಡಿಕೊಂಡು ಕಾಲಿಂದೀನದಿಯ ತೀರವನ್ನು ಸೇರಿದರು. ಮಹಾಪ್ರವಾಹದಿಂದ ಕೂಡಿದ್ದ ಕಾಲಿಂದೀನದಿಯನ್ನು ನೋಡಿ ನದಿಯನ್ನು ದಾಟಬೇಕಾಗಿದ್ದ ರಾಮ-ಲಕ್ಷ್ಮಣರು ಅಂತಹ ರಭಸಯುಕ್ತವಾದ ನದಿಯನ್ನು ಹೇಗೆ ದಾಟುವುದೆಂಬ ಚಿಂತೆಗೊಳಗಾದರು. ನದಿಯನ್ನು ದಾಟಲು ಸಾಧ್ಯವಾಗುವ ಒಂದು ತೆಪ್ಪವನ್ನೇ ಕಟ್ಟಲು ನಿಶ್ಚಯಿಸಿ ಕಾಡಿನಲ್ಲಿದ್ದ ಹಗುರವಾದ ಸೌದೆಯ ತುಂಡುಗಳನ್ನೂ, ಬೆಂಡುಗಳನ್ನೂ ಸಂಗ್ರಹಿಸಿದರು. ಬಿದಿರುಗಳನ್ನೂ, ಲಾಮಂಚದ ಬೇರುಗಳನ್ನೂ ತಂದು ತೆಪ್ಪವನ್ನು ಕಟ್ಟಿದರು. (ಮರದ ತುಂಡುಗಳನ್ನು ಸೇರಿಸಿ ಬಿದಿರುಗಳನ್ನು ಒತ್ತಾಗಿ ಕಟ್ಟಿ ಲಾಮಂಚದ ಬೇರುಗಳನ್ನು ಅದರ ಮೇಲೆ ಒತ್ತಾಗಿ ಹರಡಿ ತೆಪ್ಪವನ್ನು ಕಟ್ಟಿದರು.) ಬಳಿಕ ಲಕ್ಷ್ಮಣನು ಬಯಸೇ ಗಿಡದ ಮತ್ತು ನೇರಳೇಮರದ ಕೊಂಬೆಗಳನ್ನು ಕತ್ತರಿಸಿ ಅದರ ಎಲೆಗಳಿಂದ ಸೀತಾದೇವಿಯು ಸುಖವಾಗಿ ಕುಳಿತುಕೊಳ್ಳಲು ಒಂದು ಆಸನವನ್ನೂ ನಿರ್ಮಿಸಿದನು. ಸಾಕ್ಷಾತ್ ಲಕ್ಷ್ಮೀದೇವಿಯಂತೆಯೇ ಅಚಿಂತ್ಯರೂಪಳಾಗಿದ್ದ ಪ್ರಿಯಪತ್ನಿಯ ಕೈಯನ್ನು ಶ್ರೀರಾಮನು ಹಿಡಿಯಲು ಹೋದಾಗ ಅವಳು ಸ್ವಲ್ಪ ನಾಚಿದಳು. 'ನಾಚುವೆಯೇಕೆ!' ಎಂದು ಮುಗುಳ್ನಗೆಯಿಂದ ಹೇಳುತ್ತಾ ಅವಳ ಕೈಹಿಡಿದು ಮೆಲ್ಲ-ಮೆಲ್ಲನೆ ತೆಪ್ಪಕ್ಕೆ ಹತ್ತಿಸಿದನು. ಬಟ್ಟೆಗಳನ್ನೂ, ಒಡವೆಗಳನ್ನೂ, ಗುದ್ದಲಿ-ಪಿಕಾಶಿಗಳನ್ನೂ ಮತ್ತು ಆಡಿನ ಚರ್ಮದಿಂದ ಮಾಡಲ್ಪಟ್ಟಿದ್ದ ಪೆಟ್ಟಿಗೆಯನ್ನೂ ಇಡಲು ಶ್ರೀರಾಮನು ವೈದೇಹಿಯ ಪಕ್ಕದಲ್ಲಿಯೇ ಸ್ವಲ್ಪಜಾಗ ಮಾಡಿದನು. ತೆಪ್ಪವನ್ನು ಬಲವಾಗಿ ಹಿಡಿದು ಸೀತೆಯನ್ನು ಹತ್ತಿಸಿದ ನಂತರ ಪ್ರೀತಾತ್ಮರಾದ ರಾಮ-ಲಕ್ಷ್ಮಣರೂ ತೆಪ್ಪವನ್ನು ಹತ್ತಿ ನದಿಯಲ್ಲಿ ಹಾಯಿಸತೊಡಗಿದರು. ತೆಪ್ಪವು ಕಾಲಿಂದೀನದಿಯ ಮಧ್ಯಭಾಗಕ್ಕೆ ಬಂದೊಡನೆಯೇ ಸೀತಾದೇವಿಯು ನದಿಯನ್ನು ನಮಸ್ಕರಿಸಿ ಹೇಳಿದಳು:

ಸ್ವಸ್ತಿ ದೇವಿ ತರಾಮಿ ತ್ವಾಂ ಪಾರಯೇನ್ಮೇ ಪತಿರ್ವ್ರತಮ್।
ಯಕ್ಷ್ಯೇ ತ್ವಾಂ ಗೋಸಹಸ್ರೇಣ ಸುರಾಘಟಶತೇನ ಚ।
ಸ್ವಸ್ತಿ ಪ್ರತ್ಯಾಗತೇ ರಾಮೇ ಪುರೀಮಿಕ್ಷ್ವಾಕುಪಾಲಿತಾಮ್ ॥೨೦॥

"ದೇವಿ ಕಾಲಿಂದಿ! ನಿನಗೆ ಮಂಗಳವಾಗಲಿ. ನಾನು ನಿನ್ನನ್ನು ನನ್ನ ಪತಿಯೊಡನೆ ದಾಟುತ್ತಿದ್ದೇನೆ. ನನ್ನ ಪತಿಯು ಸಂಕಲ್ಪಿಸಿರುವ ಹದಿನಾಲ್ಕು ವರ್ಷಗಳ ವನವಾಸವು ಸುಖವಾಗಿ ಕಳೆಯುವಂತೆ ಅನುಗ್ರಹಿಸು. ನನ್ನ ಪತಿಯು ವನವಾಸವನ್ನು ಮುಗಿಸಿ ಇಕ್ಷ್ವಾಕುಕುಲದರಸರಿಂದ ಪರಿಪಾಲಿಸಲ್ಪಡುವ ಅಯೋಧ್ಯಾನಗರಿಗೆ ಆಗಮಿಸಿದನಂತರ ನಿನ್ನನ್ನು ಒಂದು ಸಾವಿರ ಗೋವುಗಳಿಂದಲೂ, ಒಂದು ನೂರು ಮದ್ಯದ ಘಟಗಳಿಂದಲೂ ಅರ್ಚನೆಮಾಡುವೆನು. ನನ್ನನ್ನು ಅನುಗ್ರಹಿಸು. ನಿನಗೆ ಮಂಗಳವಾಗಲಿ." ಸೀತಾದೇವಿಯು ಹೀಗೆ ಕೈಮುಗಿದುಕೊಂಡು ಕಾಲಿಂದಿಯನ್ನು ಪ್ರಾರ್ಥಿಸುತ್ತಿರುವಾಗಲೇ ತೆಪ್ಪವು ನದಿಯ ದಕ್ಷಿಣ ತೀರವನ್ನು ಸೇರಿತು. ಅನಂತರ ಅದೇ ತೆಪ್ಪದಿಂದಲೇ ರಾಮ-ಲಕ್ಷ್ಮಣ-ಸೀತೆಯರು ಸೂರ್ಯನ ಮಗಳಾದ ಬಹುವೇಗವತಿಯಾದ ಅಲೆಗಳ ಪರಂಪರೆಗಳಿಂದ ಶೋಭಾಯಮಾನವಾಗಿ ಕಾಣುತ್ತಿದ್ದ, ಎರಡು ತೀರಗಳಲ್ಲಿಯೂ ಹಲವಾರು ಬಗೆಯ ವೃಕ್ಷಗಳ ಸಾಲುಗಳಿಂದ ಸಮಾವೃತಳಾಗಿದ್ದ ಯಮುನಾನದಿಯನ್ನು ದಾಟಿದರು. ಬಳಿಕ ತೆಪ್ಪವನ್ನು ಅಲ್ಲಿಯೇ ಬಿಟ್ಟು ಯಮುನಾನದಿಯ ತೀರಪ್ರದೇಶದಲ್ಲಿದ್ದ ಅರಣ್ಯದ ಮಾರ್ಗವಾಗಿ ಶ್ಯಾಮಲವರ್ಣದಿಂದಲೂ, ಹಸಿರೆಲೆಗಳಿಂದಲೂ ಪರಿಶೋಭಿಸುತ್ತಿದ್ದ ಶೀತಲವಾದ ನೆಳಲಿನಿಂದ ಕೂಡಿದ್ದ ಸುಪ್ರಸಿದ್ಧವಾದ ನ್ಯಗ್ರೋಧವೃಕ್ಷವನ್ನು ಸೇರಿದರು. ಆಲದ ಮರದ ಬಳಿಗೆ ಬಂದೊಡನೆಯೇ ಸೀತಾದೇವಿಯು ಅದರ ಎದುರಾಗಿ ನಿಂತು ಕೈಮುಗಿದುಕೊಂಡು ಹೇಳಿದಳು:

ನಮಸ್ತೇಽಸ್ತು ಮಹಾವೃಕ್ಷ ಪಾರಯೇನ್ಮೇ ಪತಿರ್ವ್ರತಮ್।
ಕೌಸಲ್ಯಾಂ ಚೈವ ಪಶ್ಯೇಮ ಸುಮಿತ್ರಾಂ ಚ ಯಶಸ್ವಿನೀಮ್॥

"ಮಹಾವೃಕ್ಷವೇ! ನಿನಗೆ ಭಕ್ತಿಪೂರ್ವಕವಾದ ಪ್ರಣಾಮಗಳು. ನನ್ನ ಪತಿಯ ಸಂಕಲ್ಪವು ನಿರ್ವಿಘ್ನವಾಗಿ ನೆರವೇರಲಿ. ಸಂಕಲ್ಪಿಸಿರುವ ವ್ರತವು

ಪರಿಪೂರ್ಣವಾಗುವಂತೆ ಅನುಗ್ರಹಿಸು. ಕೌಸಲ್ಯಾದೇವಿಯನ್ನೂ, ಯಶಸ್ವಿನಿಯಾದ ಸುಮಿತ್ರಾದೇವಿಯನ್ನೂ ನಾವು ಪುನಃ ನೋಡುವಂತಾಗಲಿ."

ಪತಿಯ ಕಲ್ಯಾಣಕ್ಕಾಗಿ ಬಹಳ ಭಕ್ತಿಯಿಂದ ನ್ಯಗ್ರೋಧವೃಕ್ಷವನ್ನು ಪ್ರಾರ್ಥಿಸಿಕೊಳ್ಳುತ್ತಿದ್ದ, ಕಳಂಕರಹಿತಳಾದ, ಸ್ವಾನುಕೂಲಳಾದ, ಪರಮ ಪ್ರಿಯಳಾದ ಸೀತಾದೇವಿಯನ್ನು ನೋಡಿ ಶ್ರೀರಾಮನು ಲಕ್ಷ್ಮಣನಿಗೆ ಹೇಳಿದನು:

"ಭರತನ ತಮ್ಮನೇ! ಸೀತೆಯನ್ನು ಕರೆದುಕೊಂಡು ನೀನು ಮುಂದೆ ಹೋಗು. ನಾನು ಆಯುಧಪಾಣಿಯಾಗಿ ನಿಮ್ಮಿಬ್ಬರನ್ನೂ ರಕ್ಷಿಸುತ್ತಾ ಹಿಂದೆ ನಡೆದುಬರುವೆನು. ವೈದೇಹಿಯು ಮಾರ್ಗದಲ್ಲಿ ಕಾಣುವ ಯಾವ ಫಲ-ಪುಷ್ಪಗಳನ್ನು ಅಪೇಕ್ಷಿಸುವಳೋ ಮತ್ತು ಯಾವ ವಸ್ತುವನ್ನು ಪಡೆಯುವುದರಿಂದ ಅವಳ ಮನಸ್ಸು ಸಂತೋಷಗೊಳ್ಳುವುದೋ–ಅಂತಹ ಎಲ್ಲ ವಸ್ತುಗಳನ್ನೂ ಅವಳಿಗೆ ತಂದುಕೊಡು."

ಮೂವರೂ ಸಾಲಾಗಿ ಅರಣ್ಯದ ಮಧ್ಯದಲ್ಲಿ ನಡೆದುಹೋಗುತ್ತಿದ್ದರು. ರಾಮ-ಲಕ್ಷ್ಮಣರ ಮಧ್ಯದಲ್ಲಿ ನಡೆದುಹೋಗುತ್ತಿದ್ದ ಸೀತಾದೇವಿಯು ಎರಡು ಮದಗಜಗಳ ನಡುವೆ ನಡೆದುಹೋಗುತ್ತಿರುವ ಹೆಣ್ಣಾನೆಯಂತೆಯೇ ಪ್ರಕಾಶಿಸಿದಳು. ಅಬಲೆಯಾದ ಸೀತಾದೇವಿಯು ತಾನು ಹಿಂದೆಂದೂ ಕಾಣದ ಅನೇಕ ವೃಕ್ಷಗಳನ್ನೂ ಲತೆಗಳನ್ನೂ ಕಂಡು ಆಶ್ಚರ್ಯಚಕಿತಳಾಗಿ ಒಂದೊಂದು ವೃಕ್ಷವನ್ನೂ, ಒಂದೊಂದು ಲತಾಗುಲ್ಮವನ್ನೂ, ಒಂದೊಂದು ಪುಷ್ಪಭರಿತವಾದ ಲತೆಯನ್ನೂ ಬಿಡದೇ 'ಇದಾವ ಮರ? ಇದಾವ ಲತೆ?'–ಮುಂತಾಗಿ ಪತಿಯನ್ನು ಪ್ರಶ್ನಿಸುತ್ತಾ ಹೋಗುತ್ತಿದ್ದಳು. ಕೆಲವು ಸಮಯಗಳಲ್ಲಿ ಸೀತಾದೇವಿಯು ರಮಣೀಯವಾದ ಹೂವುಗಳನ್ನೂ ಫಲಗಳನ್ನೂ ಅಪೇಕ್ಷಿಸುತ್ತಿದ್ದಳು. ಸೀತೆಯ ಮಾತನ್ನು ಬಹಳ ಬೇಗ ನಡೆಸಿಕೊಡಬೇಕೆಂಬ ಆತುರವುಳ್ಳ ಲಕ್ಷ್ಮಣನು ಅತ್ಯಂತರಮಣೀಯವಾಗಿರುವ, ಹೂವಿನ ಗೊಂಚಲುಗಳಿಂದ ಕೂಡಿರುವ, ವಿಧ-ವಿಧವಾದ ವೃಕ್ಷಗಳ ರೆಂಬೆಗಳನ್ನೇ ಕತ್ತರಿಸಿ ಸೀತಾದೇವಿಗೆ ಒಪ್ಪಿಸುತ್ತಿದ್ದನು. ಚಿತ್ರ-ವಿಚಿತ್ರವಾದ ಮಳಲಿನಿಂದ ಕೂಡಿದ

ಪ್ರವಾಹವುಳ್ಳ ಹಂಸ-ಸಾರಸಪಕ್ಷಿಗಳಿಂದ ನಿನಾದಿತವಾದ ಯಮುನಾನದಿಯನ್ನು ಕಂಡು ಜನಕರಾಜನಂದಿನಿಯು ಬಹಳವಾಗಿ ಆನಂದಿಸಿದಳು.

ಯಮುನಾನದಿಯ ತೀರದ ಆ ಅರಣ್ಯಪ್ರದೇಶದಲ್ಲಿ ರಾಮ-ಲಕ್ಷ್ಮಣರು ಹರದಾರಿಯಷ್ಟು ದೂರ ಹೋಗಿ ಭೋಜನಕ್ಕೆ ಯೋಗ್ಯವಾದ ಮೃಗಗಳನ್ನು ಬೇಟೆಯಾಡುತ್ತಾ ಅರಣ್ಯದಲ್ಲಿ ಸಂಚರಿಸಿದರು.

ನವಿಲುಗಳ ಸಮೂಹಗಳಿಂದ ಧ್ವನಿತವಾದ, ಕಪಿ-ಕುಂಜರಗಳಿಂದ ವ್ಯಾಪ್ತವಾದ ಶುಭಾವಹವಾದ ಆ ಅರಣ್ಯದಲ್ಲಿ ವಿಹರಿಸುತ್ತಿದ್ದ ವನಚಾರಿಗಳಿಗೆ ಮಹಾವೀರರಂತೆ ಕಾಣುತ್ತಿದ್ದ ರಾಮ-ಲಕ್ಷ್ಮಣರು ಹಳ್ಳ-ತಿಟ್ಟುಗಳಿಲ್ಲದೆ ಸಮತಟ್ಟಾಗಿದ್ದ ನದಿಯ ತೀರಪ್ರದೇಶದಲ್ಲಿ ರಾತ್ರಿಯಲ್ಲಿ ತಂಗಲು ಸ್ಥಳವನ್ನು ಕಲ್ಪಿಸಿಕೊಂಡರು.

ಐಐನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೫೬ನೆಯ ಸರ್ಗ

ರಾಮ-ಲಕ್ಷ್ಮಣರು ಅರಣ್ಯದ ಸೊಬಗನ್ನು ನೋಡುತ್ತಾ ಸೀತೆಗೂ ತೋರಿಸುತ್ತಾ ಚಿತ್ರಕೂಟಪರ್ವತವನ್ನು ಸೇರಿದುದು: ವಾಲ್ಮೀಕಿಗಳ ಸಂದರ್ಶನ: ಲಕ್ಷ್ಮಣನು ಅಣ್ಣನ ಆಜ್ಞೆಯಂತೆ ಪರ್ಣಶಾಲೆಯನ್ನು ನಿರ್ಮಿಸಿದುದು: ವಾಸ್ತುಶಾಂತಿಯನ್ನು ಮಾಡಿದನಂತರ ಎಲ್ಲರೂ ಕುಟೀರವನ್ನು ಪ್ರವೇಶಿಸಿದುದು.

ಅಥ ರಾತ್ರ್ಯಾಂ ವ್ಯತೀತಾಯಾಮವಸುಪ್ತಮನನ್ತರಮ್।
ಪ್ರಬೋಧಯಾಮಾಸ ಶನೈರ್ಲಕ್ಷ್ಮಣಂ ರಘುಪುಙ್ಗವಃ ॥೧॥

ರಾತ್ರಿಯು ಕಳೆದುಹೋಗಲಾಗಿ ರಘುಪುಂಗವನಾದ ಶ್ರೀರಾಮನು ಇನ್ನೂ ಮಲಗಿದ್ದ ಲಕ್ಷ್ಮಣನನ್ನು ಮೆಲ್ಲನೆ ಕೂಗಿ ಎಬ್ಬಿಸುತ್ತಾ ಹೇಳಿದನು:

“ಲಕ್ಷ್ಮಣ! ಅರಣ್ಯದಲ್ಲಿರುವ ಶುಕ-ಪಿಕ-ಸಾರಿಕಾದಿ ಪಕ್ಷಿಗಳ ಸುಮಧುರವಾದ ನಿನಾದವನ್ನು ಕೇಳು. ಇದು ನಮ್ಮ ಪ್ರಯಾಣಕ್ಕೆ ಯೋಗ್ಯವಾದ ಕಾಲವಾಗಿದೆ. ನಾವಿನ್ನು ಹೊರಡೋಣ.”

ಮಲಗಿದ್ದ ಲಕ್ಷ್ಮಣನು ಸಕಾಲದಲ್ಲಿ ಅಣ್ಣನಿಂದ ಎಚ್ಚರಿಸಲ್ಪಟ್ಟವ

ನಾಗಿ ನಿದ್ರೆಯನ್ನೂ, ಆಲಸ್ಯವನ್ನೂ ತೊರೆದನು. ಸುಖನಿದ್ರೆಯಿಂದ ಹಿಂದಿನ ದಿನ ದಾರಿನಡೆದ ಆಯಾಸವೂ ಪರಿಹಾರವಾಗಿದ್ದಿತು. ಮೂವರೂ ಮೇಲೆದ್ದು ಯಮುನಾನದಿಯ ಶುಭಜಲದಲ್ಲಿ ಸ್ನಾನಮಾಡಿ ಪ್ರಾತರ್ವಿಧಿಗಳನ್ನು ಮುಗಿಸಿ ಭರದ್ವಾಜರಿಂದ ನಿರ್ದಿಷ್ಟವಾಗಿದ್ದ ಚಿತ್ರಕೂಟಪರ್ವತದ ಹಾದಿಯನ್ನು ಹಿಡಿದು ಹೊರಟರು.

ಸಂಧ್ಯಾದಿಗಳನ್ನು ಮುಗಿಸಿಕೊಂಡು ಪ್ರಾತಃಕಾಲದಲ್ಲಿ ತಮ್ಮನೊಡನೆ ಮುತ್ತುಗದ ಕಾಡಿನಲ್ಲಿ ಪ್ರಯಾಣಹೊರಟ ಶ್ರೀರಾಮನು ಕಮಲನಯನೆ ಯಾದ ಸೀತಾದೇವಿಗೆ ಹೇಳಿದನು:

"ಸುತ್ತಲೂ ಬೆಂಕಿಯು ಹೊತ್ತಿಕೊಂಡು ಉರಿಯುತ್ತಿದೆಯೋ ಎಂಬಂತೆ ಕಡುಗೆಂಪಾದ ಹೂವುಗಳಿಂದ ಆವೃತವಾಗಿರುವ ಈ ಮುತ್ತುಗದ ಮರಗಳನ್ನು ನೋಡು, ವೈದೇಹಿ! ವಸಂತಕಾಲದಲ್ಲಿ ಪುಷ್ಪಭರಿತವಾದ ಇವುಗಳು ಮಾಲೆಯನ್ನು ಧರಿಸಿರುವ ವೃಕ್ಷಗಳಂತೆ ಕಂಗೊಳಿಸುತ್ತಿವೆ. ಇಲ್ಲಿರುವ ಈ ವೀರವೃಕ್ಷಗಳೂ ಬಿಲ್ವವೃಕ್ಷಗಳೂ ಫಲಭರಿತವಾಗಿವೆ. ಹಣ್ಣುಗಳ ಭಾರದಿಂದಾಗಿ ರೆಂಬೆಗಳೆಲ್ಲವೂ ಬಾಗಿವೆ. ಈ ಸೊಬಗನ್ನಾದರೂ ನೋಡು; ಜಾನಕಿ! ಆದರೆ ಇಲ್ಲಿ ಇಂತಹ ಹಣ್ಣುಗಳನ್ನು ಆಸ್ವಾದಿಸಲು ಮನುಷ್ಯರೇ ಇಲ್ಲ. ಇದು ನಿರ್ಜನಪ್ರದೇಶವಾಗಿದೆ. ಇಲ್ಲಿ ನಾವು ಜೀವನನಿರ್ವಹಣೆ ಮಾಡಿಕೊಂಡಿರಬಹುದು.

ನಾಲ್ಕು ಕೊಳಗಗಳಷ್ಟು ಜೇನುತುಪ್ಪದಿಂದ ತುಂಬಿದ್ದು ಹೆಚ್ಚು ದಪ್ಪ ವಾಗಿ ಪ್ರತಿಯೊಂದು ವೃಕ್ಷದ ಪ್ರತಿರೆಂಬೆಗಳಲ್ಲಿಯೂ ಜೋತಾಡುತ್ತಿರುವ, ಜೇನುಹುಳುಗಳಿಂದ ನಿರ್ಮಿತವಾಗಿರುವ ಈ ಜೇನುಗೂಡುಗಳನ್ನು ನೋಡು; ಲಕ್ಷ್ಮಣ! ರಮಣೀಯವಾಗಿರುವ, ಪುಷ್ಪಗಳ ವ್ಯಾಪನೆಯಿಂದ ಅತಿ ನಿಬಿಡವಾಗಿ ಕಾಣುತ್ತಿರುವ ಈ ಅರಣ್ಯದಲ್ಲಿ ಚಾತಕಪಕ್ಷಿಗಳು ಕೂಗಿಕೊಳ್ಳು ತ್ತಿವೆ. ಇದಕ್ಕೆ ಪ್ರತಿಯಾಗಿ ನವಿಲುಗಳೂ ಕೇಕೆಹಾಕುತ್ತಿವೆ. ಪಕ್ಷಿಗಳ ಈ ನಿನಾದವು ಕರ್ಣಾನಂದಕರವಾಗಿದೆ. ಈ ಚಿತ್ರಕೂಟಪರ್ವತವು ಆನೆಗಳ ಹಿಂಡುಗಳಿಂದ ವ್ಯಾಪ್ತವಾಗಿದೆ. ಪಕ್ಷಿಗಳ ಸಮೂಹದಿಂದ ನಿನಾದಿತವಾಗಿದೆ. ಎತ್ತರವಾದ ಶಿಖರಗಳಿಂದಲೂ ಕೂಡಿ ಸುಮನೋಹರವಾಗಿ ಕಾಣುತ್ತಿದೆ. ಲಕ್ಷ್ಮಣ! ಹಳ್ಳ-ತಿಟ್ಟುಗಳಿಲ್ಲದೇ ಸಮವಾದ ಭೂಪ್ರದೇಶದಿಂದ ಕೂಡಿರುವ,

ಪುಷ್ಪಭರಿತವಾದ ವೃಕ್ಷಗಳಿಂದ ಸಮಾವೃತವಾಗಿರುವ, ಬಹುರಮ್ಯವಾಗಿರುವ, ಪುಣ್ಯತಮವಾಗಿರುವ ಚಿತ್ರಕೂಟಪರ್ವತದ ಈ ಅರಣ್ಯದಲ್ಲಿ ಆನಂದದಿಂದ ವಿಹರಿಸೋಣ."

ಹೀಗೆ ಪರಸ್ಪರವಾಗಿ ಮಾತನಾಡಿಕೊಳ್ಳುತ್ತಾ ಸೀತಾ-ರಾಮ-ಲಕ್ಷ್ಮಣರು ಕಾಲ್ನಡಿಗೆಯಲ್ಲಿಯೇ ಮನೋಹರವಾದ ಮತ್ತು ರಮ್ಯವಾದ ಚಿತ್ರಕೂಟಪರ್ವತವನ್ನು ಸೇರಿದರು.

ನಾನಾವಿಧವಾದ ಪಕ್ಷಿಗಳ ಸಮೂಹದಿಂದ ವ್ಯಾಪ್ತವಾಗಿದ್ದ, ಕಂದ-ಮೂಲಗಳಿಂದಲೂ ಹಣ್ಣು-ಹಂಪಲುಗಳಿಂದಲೂ ಸಮೃದ್ಧವಾಗಿದ್ದ, ರುಚಿಕರವಾದ ನೀರಿನಿಂದ ಕೂಡಿದ್ದ, ಬಹುರಮ್ಯವಾಗಿ ಕಾಣುತ್ತಿದ್ದ ಚಿತ್ರಕೂಟ ಪರ್ವತವನ್ನು ಸೇರಿದನಂತರ ಶ್ರೀರಾಮನು ಲಕ್ಷ್ಮಣನಿಗೆ ಪುನಃ ಹೇಳಿದನು:

"ಲಕ್ಷ್ಮಣ! ನಾನಾಜಾತಿಯ ವೃಕ್ಷಗಳಿಂದಲೂ–ಬಳ್ಳಿಗಳಿಂದಲೂ ಕೂಡಿರುವ, ಕಂದ-ಮೂಲಗಳಿಂದಲೂ ಫಲ-ಪುಷ್ಪಗಳಿಂದಲೂ ಸಮೃದ್ಧವಾಗಿರುವ, ಅತಿರಮ್ಯವಾಗಿಯೂ, ಮನೋಜ್ಞವಾಗಿಯೂ ಇರುವ ಈ ಚಿತ್ರಕೂಟಪರ್ವತವು ಸುಖಕರವಾದ ಜೀವನವನ್ನು ನಡೆಸಲು ಉತ್ತಮ ಸ್ಥಾನವಾಗಿರುವುದೆಂದು ನಾನು ಭಾವಿಸುತ್ತೇನೆ. ಮಹಾತ್ಮರಾದ ಮಹರ್ಷಿಗಳೂ ಈ ಪರ್ವತದಲ್ಲಿ ವಾಸಮಾಡುತ್ತಿರುವರು. ಆದುದರಿಂದ ಈ ಪರ್ವತವು ನಮಗೂ ವಾಸಕ್ಕೆ ಯೋಗ್ಯವಾಗಿದೆ. ನಾವು ಇಲ್ಲಿಯೇ ವಾಸಮಾಡೋಣ."

ಹೀಗೆ ಶ್ರೀರಾಮನು ತನ್ನ ನಿರ್ಧಾರವನ್ನು ಪ್ರಕಟಪಡಿಸಿದ ನಂತರ ಹತ್ತಿರದಲ್ಲಿಯೇ ಇದ್ದ ವಾಲ್ಮೀಕಿಮಹರ್ಷಿಗಳ ಆಶ್ರಮಕ್ಕೆ ಮೂವರೂ ಕೈಮುಗಿದುಕೊಂಡು ಹೋಗಿ ಸುಖಾಸನದಲ್ಲಿ ಕುಳಿತಿದ್ದ ವಾಲ್ಮೀಕಿಗಳಿಗೆ ಅಭಿವಾದನಪೂರ್ವಕವಾಗಿ ನಮಿಸಿದರು.* ಧರ್ಮಾತ್ಮರಾದ ವಾಲ್ಮೀಕಿಮಹರ್ಷಿ

*ಚಿತ್ರಕೂಟದಲ್ಲಿದ್ದ ವಾಲ್ಮೀಕಿಗಳು ಮುಂದೆ ರಾಮನು ರಾಜ್ಯವಾಳುವ ಕಾಲಕ್ಕೆ ತಮಸಾತೀರಕ್ಕೆ ಹೇಗೆ ಹೋದರು? ಏತಕ್ಕಾಗಿ ಹೋದರು? ಎಂಬ ಸಂಶಯವುಂಟಾಗುವುದು ಸಹಜವಾಗಿಯೇ ಇದೆ. "ಭರತನು ಚಿತ್ರಕೂಟಕ್ಕೆ ಬಂದು ಹೋದ ಮೇಲೆ ಅಲ್ಲಿದ್ದ ಋಷಿಗಳು ಬೇರೆ ಕಡೆಗೆ ತೆರಳಿದರು." ಎಂದು ಮುಂದೆ ಬರುವುದರಿಂದ "ವಾಲ್ಮೀಕಿಮುನಿಗಳೂ ತಮಸಾತೀರಕ್ಕೆ ಹೋಗಿರಬಹುದು. ಆದುದರಿಂದ ಬಾಲಕಾಂಡದ ಕಥೆಗೂ ಇಲ್ಲಿಯ ಕಥೆಗೂ ವಿರೋಧವಿಲ್ಲ." ಹೀಗೆ ಕೆಲವರು ಅಭಿಪ್ರಾಯ

ಗಳು ಸೀತಾ-ರಾಮ-ಲಕ್ಷ್ಮಣರು ತಮ್ಮ ಆಶ್ರಮಕ್ಕೆ ಬಂದುದನ್ನು ಕಂಡು ಪರಮಸಂತುಷ್ಟರಾಗಿ ಮೂವರನ್ನೂ ಆದರದಿಂದ ಸ್ವಾಗತಿಸಿ ಸತ್ಕರಿಸಿ ಆಸನಗಳನ್ನಿತ್ತು ಕುಳಿತುಕೊಳ್ಳಲು ಹೇಳಿದರು. ಶ್ರೀರಾಮನು ತನ್ನ ಕುಲ-



ಗೋತ್ರಗಳನ್ನೂ–ತಾವು ಚಿತ್ರಕೂಟಪರ್ವತಕ್ಕೆ ಆಗಮಿಸಿರುವ ಕಾರಣವನ್ನೂ ವಾಲ್ಮೀಕಿಗಳಿಗೆ ಯಥಾವತ್ತಾಗಿ ತಿಳಿಸಿ ಅವರ ಅನುಮತಿಯನ್ನು ಪಡೆದು ಸೀತಾ-ಲಕ್ಷ್ಮಣರೊಡನೆ ಆಶ್ರಮದಿಂದ ಹೊರಬಂದು ಕುಟೀರವನ್ನು ಕಟ್ಟಲು ಯೋಗ್ಯವಾದ ಸ್ಥಳವೊಂದನ್ನು ಹುಡುಕಿ ಲಕ್ಷ್ಮಣನಿಗೆ ಹೇಳಿದನು:

ಪಡುತ್ತಾರೆ. ಮತ್ತೆ ಕೆಲವರು; "ಚಿತ್ರಕೂಟಪರ್ವತದಲ್ಲಿದ್ದ ವಾಲ್ಮೀಕಿಗಳೇ ಬೇರೆ. ತಮಸಾತೀರದಲ್ಲಿದ್ದು ಶ್ರೀಮದ್ವಾಲ್ಮೀಕಿರಾಮಾಯಣವನ್ನು ರಚಿಸಿದ ವಾಲ್ಮೀಕಿಗಳೇ ಬೇರೆ. ಈ ವಾಲ್ಮೀಕಿಗಳಿಗೂ ಪ್ರಾಚೇತಸರಾದ ವಾಲ್ಮೀಕಿಗಳಿಗೂ ಸಂಬಂಧವಿಲ್ಲ.

"ಲಕ್ಷ್ಮಣ! ಈ ಸ್ಥಳದಲ್ಲೇ ವಾಸಮಾಡಲು ನನ್ನ ಮನವು ಬಯಸು ತ್ತಿದೆ. ನೀನೀಗಲೇ ಹೋಗಿ ಆಶ್ರಮವನ್ನು ಕಟ್ಟಲು ಯೋಗ್ಯವಾದ ಗಟ್ಟಿ-ಮುಟ್ಟಾಗಿಯೂ, ಶ್ರೇಷ್ಠವಾಗಿಯೂ ಇರುವ ಮರದ ತುಂಡುಗಳನ್ನು ಕತ್ತರಿಸಿ ತೆಗೆದುಕೊಂಡುಬಾ. ಚಾವಣಿಗೆ ಹೊದಿಸಲು ಬೇಕಾದ ಸಾಮಗ್ರಿಗಳನ್ನೂ ಸಂಗ್ರಹಿಸಿ ಪರ್ಣಶಾಲೆಯನ್ನು ಕೂಡಲೇ ನಿರ್ಮಿಸು."



ಅಣ್ಣನ ಆಜ್ಞೆಯಾಗುತ್ತಲೇ ಲಕ್ಷ್ಮಣನು ಪರ್ಣಶಾಲೆಗೆ ಬೇಕಾದ ಮರ-ಮುಟ್ಟುಗಳೆಲ್ಲವನ್ನೂ ತಂದು ಪರ್ಣಶಾಲೆಯನ್ನು ನಿರ್ಮಿಸಿದನು. ಆ ಪರ್ಣಶಾಲೆಯು ಗಾಳಿ-ಮಳೆಗಳ ರಭಸವನ್ನು ತಡೆದುಕೊಳ್ಳುವಷ್ಟು ಸುದೃಢ

ವೆನ್ನುತ್ತಾರೆ. ಓರಿಯಂಟಲ್ ಇನ್‌ಸ್ಟಿಟ್ಯೂಟ್ ಬರೋಡ ಇವರು ಪ್ರಕಟಿಸಿರುವ ಪುಸ್ತಕದಲ್ಲಿ ಇದಕ್ಕೆ ಸಂಬಂಧಿಸಿದ ಮೂರು ಶ್ಲೋಕಗಳು ಇರುವುದಿಲ್ಲ.

ವಾಗಿದ್ದಿತು. ಆಶ್ರಮದ ಸುತ್ತಲೂ ಬೇಲಿಯಿದ್ದಿತು. ನೋಡಲು ಬಹಳ ಸುಂದರವಾಗಿಯೂ ಕಾಣುತ್ತಿದ್ದಿತು. ಲಕ್ಷ್ಮಣನು ನಿರ್ಮಿಸಿದ್ದ ಅಂತಹ ಸುಂದರವಾದ ಆಶ್ರಮವನ್ನು ನೋಡಿ ಶ್ರೀರಾಮನು ಪರಮಹೃಷ್ಟನಾಗಿ ಆಜ್ಞಾಧಾರಕನಾಗಿ ನಿಂತಿದ್ದ ಲಕ್ಷ್ಮಣನಿಗೆ ಹೇಳಿದನು:

"ಲಕ್ಷ್ಮಣ! ನಾವು ಜಿಂಕೆಯ ಮಾಂಸವನ್ನು ತಂದು ವಾಸ್ತುಹೋಮವನ್ನು ಮಾಡೋಣ.

ಕರ್ತವ್ಯಂ ವಾಸ್ತುಶಮನಂ ಸೌಮಿತ್ರೇ ಚಿರವಾಸಿಭಿಃ ॥೨೨॥

ಹೆಚ್ಚುಕಾಲ ಒಂದೆಡೆ ವಾಸಮಾಡಿಕೊಂಡಿರಲು ಬಯಸುವವರು ವಾಸ್ತುಶಾಂತಿಯನ್ನು ಮಾಡಬೇಕಾದ ಕರ್ತವ್ಯವಿದೆ.* ಶುಭೇಕ್ಷಣನೇ! ಜಿಂಕೆಯನ್ನು ಕೊಂದು ವಾಸ್ತುಹೋಮಕ್ಕಾಗಿ ಮಾಂಸವನ್ನು ಈಗಲೇ ತೆಗೆದುಕೊಂಡು ಬಾ. ಶಾಸ್ತ್ರದಲ್ಲಿ ಕಂಡುಬರುವಂತೆ ನಡೆದುಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಧರ್ಮಶಾಸ್ತ್ರದಲ್ಲಿರುವ ವಾಸ್ತುಶಾಂತಿ ಪ್ರಕ್ರಿಯೆಯನ್ನು ಇಲ್ಲಿ ಸ್ಮರಿಸಬೇಕು."

ಶತ್ರುಗಳ ಸೊಕ್ಕು ಮುರಿಯುವ ಸಾಮರ್ಥ್ಯವುಳ್ಳ ಲಕ್ಷ್ಮಣನು ಅಣ್ಣನ ಮಾತನ್ನು ಕೇಳಿ ಒಡನೆಯೇ ಕಾಡಿಗೆ ಹೋಗಿ ಮೃಗವನ್ನು ಬೇಟೆಯಾಡಿ ತಂದನು. ಒಡನೆಯೇ ಶ್ರೀರಾಮನು ಲಕ್ಷ್ಮಣನಿಗೆ ಹೇಳಿದನು:

ಐಣೇಯಂ ಶ್ರಪಯಸ್ವೈತಚ್ಛಾಲಾಂ ಯಕ್ಷ್ಯಾಮಹೇ ವಯಮ್।
ತ್ವರ ಸೌಮ್ಯ ಮುಹೂರ್ತೋಽಯಂ ಧ್ರುವಶ್ಚ ದಿವಸೋಽಪ್ಯಯಮ್॥೨೫॥

"ಲಕ್ಷ್ಮಣ! ಜಿಂಕೆಯ ಮಾಂಸವನ್ನು ಶ್ರಪಯಿಸು. (ಅಗ್ನಿಯಲ್ಲಿ ಬೇಯಿಸು.) ಇದರಿಂದ ನಾವು ಈ ಆಶ್ರಮಕ್ಕೆ ವಾಸ್ತುಹೋಮವನ್ನು

---

* ಒಂದು ಆಶ್ರಮದ ವಿಷಯದಲ್ಲಿಯೇ ರಾಮನು ಈ ಮಾತುಗಳನ್ನಾಡಿರುವನು. ಹೀಗಿರುವಾಗ ದೊಡ್ಡ ದೊಡ್ಡ ಸೌಧಗಳನ್ನು ಕಟ್ಟಿಸಿದಾಗ ದುಷ್ಟಶಕ್ತಿಗಳ ನಿರಸನಾರ್ಥವಾಗಿ ವಾಸ್ತುಹೋಮ ಮತ್ತು ಶಾಂತಿಗಳನ್ನು ಮಾಡಿಸಬೇಕಾದುದು ಅತ್ಯಗತ್ಯ. ''ಕರ್ತವ್ಯಂ ಚಿರವಾಸಿಭಿಃ'' ಎಂಬ ರಾಮನ ವಾಕ್ಯದಂತೆ ಮನೆಯಲ್ಲಿ ಯಾವ ವಿಧವಾದ ಉಪದ್ರವಗಳೂ ಇಲ್ಲದೇ ಸೌಖ್ಯದಿಂದ ಬಾಳಬೇಕಾಗಿದ್ದರೆ ವಾಸ್ತುಶಾಂತಿ

ಮಾಡೋಣ. ಶೀಘ್ರವಾಗಿ ಮಾಡು. ಇದು ಶುಭಮುಹೂರ್ತವಾಗಿದೆ. ಈ ದಿವಸವು 'ಧ್ರುವ' ಎಂಬ ಶುಭಸಂಜ್ಞೆಯಿಂದ ಕೂಡಿದೆ."*

ಲಕ್ಷ್ಮಣನು ಶ್ರೀರಾಮನ ಮಾತನ್ನು ಕೇಳಿ ಹೋಮಕ್ಕೆ ಯೋಗ್ಯವಾದ ಕೃಷ್ಣಮೃಗವನ್ನು ಕೊಂದು ಅದರ ಮಾಂಸವನ್ನು ತೆಗೆದು ಚೆನ್ನಾಗಿ ಉರಿಯುತ್ತಿದ್ದ ಯಜ್ಞೇಶ್ವರನಲ್ಲಿಟ್ಟನು. ಬಹಳ ಹೊತ್ತು ಬೇಯಿಸಿದ್ದರಿಂದ ಕೆಂಪುಬಣ್ಣವನ್ನು ಕಳೆದುಕೊಂಡಿದ್ದ ಆ ಮಾಂಸವು ಪಕ್ವವಾಗಿರುವುದೆಂದು ತಿಳಿದು ಲಕ್ಷ್ಮಣನು ಶ್ರೀರಾಮನಿಗೆ ಹೇಳಿದನು:

"ಅಣ್ಣ! ಸರ್ವಕರ್ಮಗಳಿಗೂ ಅರ್ಹವಾದ, ಎಲ್ಲ ಅವಯವಗಳಿಂದಲೂ ಪರಿಪೂರ್ಣವಾಗಿರುವ ಈ ಕೃಷ್ಣಮೃಗವನ್ನು ನಾನು ಪಚನಮಾಡಿದ್ದೇನೆ. ದೇವಸದೃಶನೇ! ನೀನು ಶಾಸ್ತ್ರವಿಹಿತವಾದ ಈ ಕರ್ಮವನ್ನು ಮಾಡಲು

ಯನ್ನು ಮಾಡಿಯೇ ತೀರಬೇಕು. ಮಾಡದಿದ್ದರೆ ಹಾನಿಯುಂಟಾಗುವುದೆಂಬ ವಿಷಯವನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಶಾಂತಿಮಾಡುವುದರಿಂದ ಪ್ರಾಪ್ತವಾಗುವ ಫಲವನ್ನು ಬ್ರಹ್ಮಾಂಡಪುರಾಣದಲ್ಲಿ ಹೀಗೆ ಹೇಳಿದೆ.: "ನ ಚ ವ್ಯಾಧಿಭಯಂ ತಸ್ಯ ನ ಚ ಬನ್ಧುಜನಕ್ಷಯಃ । ಜೀವೇದ್ವರ್ಷಶತಂ ಸ್ವರ್ಗಕಲ್ಪಮೇವಂ ವಸೇನ್ನರಃ ॥" ವಾಸ್ತುಹೋಮಮಾಡಿದವನಿಗೆ ಆ ಮನೆಯಲ್ಲಿ ವಾಸಮಾಡುವುದರಿಂದ ವ್ಯಾಧಿಭಯವಿರುವುದಿಲ್ಲ. ಮನೆಯಲ್ಲಿರುವವರು ಅಕಾಲಮೃತ್ಯುವಿಗೆ ತುತ್ತಾಗುವುದಿಲ್ಲ. ಸ್ವರ್ಗದಲ್ಲಿ ವಾಸಮಾಡುವಂತೆಯೇ ಆ ಮನೆಯಲ್ಲಿಯೂ ಸ್ವರ್ಗಸುಖವನ್ನನುಭವಿಸುತ್ತಾ ನೂರು ವರ್ಷಗಳು ಬದುಕಿರುತ್ತಾನೆ.

* ಐಣೇಯಂ ಮಾಂಸಂ–ಎಂಬುದಕ್ಕೆ ಮೃಗದ ಮಾಂಸವೆಂದು ಮೊದಲು ಅರ್ಥ ಮಾಡಿ ಮೃಗದ ಮಾಂಸವೆಂದರೆ ಗಜಕಂದ ಎಂಬ ಹೆಸರಿನ ಗಡ್ಡೆಯೆಂದೂ, ಮಾಂಸ ವೆಂದರೆ ಅದರ ತಿರುಳೆಂದೂ ಒಬ್ಬ ವಿದ್ವಾಂಸರು ಅರ್ಥಮಾಡಿರುತ್ತಾರೆ. ಏಕೆಂದರೆ: ಶ್ರೀರಾಮನು ಮುನಿಗಳಂತೆ ಮಾಂಸವನ್ನು ವರ್ಜಿಸುವುದಾಗಿ ಪ್ರತಿಜ್ಞೆಮಾಡಿರುತ್ತಾನೆ. ಹಿತ್ವಾ ಮುನಿವದಾಮಿಷಮ್ (೨-೨೦-೨೯) ಫಲ-ಮೂಲಗಳನ್ನೇ ಭಕ್ಷಿಸಿಕೊಂಡಿರುವು ದಾಗಿಯೂ ಹೇಳಿದ್ದಾನೆ. ಫಲಾನಿ ಮೂಲಾನಿ ಚ ಭಕ್ಷಯನ್ವನೇ (೨-೩೪-೫೯) ಧರ್ಮ ಮೇವಾಚರಿಷ್ಯಾಮಸ್ತತ್ರ ಮೂಲಫಲಾಶನಾಃ (೨-೫೪-೧೬) ಹೀಗಿರುವಾಗ ಸತ್ಯ ಪ್ರತಿಜ್ಞನಾದ ಶ್ರೀರಾಮನು ಮಾಂಸವನ್ನು ತಿಂದನೆಂದು ಹೇಳುವುದು ಮಹಾಪಾಪವೇ ಸರಿ. ರಾಮೋ ದ್ವಿರ್ನಾಭಿಭಾಷತೇ ಶ್ರೀರಾಮನು ಎರಡು ಬಗೆಯ ಮಾತನಾಡ ತಕ್ಕವನಲ್ಲ. 'ಶ್ರೀರಾಮನು ಮಾಂಸವನ್ನು ತಿಂದನೆಂದು ಅರ್ಥಮಾಡಬಾರದು' ಎಂಬ ಸದಭಿಪ್ರಾಯದಿಂದ ಹೀಗೆ ಅರ್ಥಮಾಡಿರುವುದು ಸಾಧುವಾಗಿಯೇ ಇದೆ.

ಬಹಳ ಕುಶಲನಾಗಿರುವೆ. ಶಿಖಿ-ಪರ್ಜನ್ಯಾದಿ ನಲವತ್ತೈದು ದೇವತೆಗಳನ್ನೂ ಪರಿಪಕ್ವವಾದ ಈ ಮಾಂಸದ ಆಹುತಿಯಿಂದ ತೃಪ್ತಿಗೊಳಿಸು."

ಲಕ್ಷ್ಮಣನ ಮಾತನ್ನು ಕೇಳಿ, ಆಯಾ ಕರ್ಮಗಳಿಗೆ ಉಕ್ತವಾದ ಜಪಮಂತ್ರಗಳನ್ನು ಸಂಪೂರ್ಣವಾಗಿ ತಿಳಿದಿದ್ದ, ಗುಣವಂತನಾದ ಶ್ರೀರಾಮನು ಸ್ನಾನಮಾಡಿ ನಿಯಮಾನುಷ್ಠಾನಪರನಾಗಿ ವಾಸ್ತುಹೋಮದ ಪರಿಸಮಾಪ್ತಿಯವರೆಗೂ ಮಾಡಬೇಕಾಗಿದ್ದ ಸಕಲಮಂತ್ರಗಳ ಜಪವನ್ನೂ ಸಂಕ್ಷೇಪವಾಗಿ ಮಾಡಿಮುಗಿಸಿದನು. ವಾಸ್ತುದೇವತಾಪ್ರೀತ್ಯರ್ಥವಾಗಿ ಹವನಾದಿಗಳನ್ನೂ ಯಥಾಶಾಸ್ತ್ರವಾಗಿ ಮಾಡಿದನಂತರ ಶ್ರೀರಾಮನು ಪರಿಶುದ್ಧವಾಗಿದ್ದ ಆ ಆಶ್ರಮವನ್ನು ಸೀತಾ-ಲಕ್ಷ್ಮಣರೊಡನೆ ಪ್ರವೇಶಿಸಿದನು. ಆ ಕರ್ಮವನ್ನು ಮಾಡಿದ ಕಾರಣದಿಂದ ಮಹಾತೇಜಸ್ವಿಯಾದ ಶ್ರೀರಾಮನ ಮನಸ್ಸು ಆಹ್ಲಾದಗೊಂಡಿತು. ಪ್ರಧಾನಹೋಮವಾದನಂತರ ಶ್ರೀರಾಮನು ವೈಶ್ವದೇವಬಲಿ, ರೌದ್ರ-ವೈಷ್ಣವಬಲಿಗಳನ್ನೂ ಸಮರ್ಪಿಸಿ ಗೃಹಾರಿಷ್ಟನಿರಸನಕ್ಕಾಗಿ ಪುಣ್ಯಾಹವಾಚನವನ್ನೂ ಮಾಡಿ ಮಂತ್ರಜಪವನ್ನು ಮಾಡಿದನಂತರ ಯಥಾವಿಧಿಯಾಗಿ ನದಿಯಲ್ಲಿ ಅವಭೃಥಸ್ನಾನಮಾಡಿದನು.

ಭೂತ-ಪ್ರೇತ-ಪಿಶಾಚಾದಿಗಳ ನಿರಸನಕ್ಕೆ ಸಾಧನವಾದ (ಪಾಪಪರಿಹಾರಕವಾದ) ಮಹಾಬಲಿಪ್ರದಾನವನ್ನು ಶ್ರೀರಾಮನು ಮಾಡಿದನು. ಬಲಿ

ಆದರೆ ಪದಗಳಿಗೆ ಅರ್ಥವನ್ನು ಕಲ್ಪಿಸುವಾಗ ಅತಿದೂರದ ಅರ್ಥವನ್ನು ಹೇಳುವುದು ಸಾಧುವಾಗಿ ಕಾಣುವುದಿಲ್ಲ. ಐಣೇಯ ಎಂಬುದಕ್ಕೆ ಮೃಗಮಾಂಸವೆಂದು ಅರ್ಥಮಾಡಿ ಮೃಗ ಎಂಬುದಕ್ಕೆ ಗಜಕಂದ ಎಂದು ಅರ್ಥಮಾಡುವುದು ಬಹಳ ದೂರದ ಅರ್ಥವಾಗುತ್ತದೆ. ಮೇಲಾಗಿ ಮೃಗ ಎಂಬುದಕ್ಕೆ ಒಂದು ಜಾತಿಯ ಆನೆ–ಎಂದು ಅರ್ಥವೇ ಹೊರತು ಗಜಕಂದ ಎಂಬ ಅರ್ಥವು ನಿಘಂಟುವಿನಲ್ಲಿಲ್ಲ. ಏಣ= ಎಂದರೆ ಜಿಂಕೆ ಐಣ ಅಥವಾ ಐಣೇಯ ಎಂದರೆ ಜಿಂಕೆಗೆ ಸಂಬಂಧಿಸಿದ. ಚರ್ಮ, ಮಾಂಸ ಮುಂತಾದುವು ಇದಕ್ಕೆ ಬೇರೆಯ ಅರ್ಥವನ್ನು ಕಲ್ಪಿಸುವುದು ಕಷ್ಟ. ಮೇಲಾಗಿ ಇಲ್ಲಿ ಬಂದಿರುವುದು ವಾಸ್ತುಹೋಮದ ಪ್ರಕರಣ. ಭೋಜನಪ್ರಕರಣವಲ್ಲ. ವಾಸ್ತುಹೋಮದಲ್ಲಿ ಗಜಕಂದವನ್ನು ಹೋಮದ್ರವ್ಯವನ್ನಾಗಿ ಬಳಸುವ ಪದ್ಧತಿ ಎಲ್ಲಿಯೂ ಕಂಡುಬರುವುದಿಲ್ಲ. ಶಾಸ್ತ್ರಗಳಲ್ಲಿಯೂ ಇದರ ಬಗ್ಗೆ ಉಲ್ಲೇಖಿಸಿರುವಂತೆ ಕಾಣುವುದಿಲ್ಲ. ಗೃಹಪ್ರವೇಶ ಕಾಲದಲ್ಲಿ ಮನೆಯ ಸುತ್ತಲೂ ಬಲಿಯನ್ನಿಡುವ ಪದ್ಧತಿಯು ಈಗಲೂ ಇದೆ. ರಕ್ತವರ್ಣದ ಓಕುಳಿಯನ್ನು ಬಲಿಯ ಮೇಲೆ ಚೆಲ್ಲುತ್ತಾರೆ. ಹಿಂದೊಂದು ಕಾಲದಲ್ಲಿ ಪ್ರಾಣಿ

ಹರಣಾದಿಗಳನ್ನು ಸಮರ್ಪಿಸಲು ವೇದಿಸ್ಥಳಗಳನ್ನು ಸ್ಥಾಪಿಸುವಂತೆ ಅರಣ್ಯ ದಲ್ಲಿಯೂ ಶ್ರೀರಾಮನು ಆಶ್ರಮಕ್ಕೆ ಅನುರೂಪವಾದ ಬಲಿಸಮರ್ಪಣಸ್ಥಾನ ಗಳನ್ನು ಕಲ್ಪಿಸಿ ಗಣಪತ್ಯಾದಿದೇವತೆಗಳನ್ನೂ ಅಗ್ನಿಗೃಹವನ್ನೂ ಆಯಾ ಸ್ಥಾನಗಳಲ್ಲಿ ಪ್ರತಿಷ್ಠಾಪಿಸಿದನು. ಅರಣ್ಯದಲ್ಲಿ ಸಿಕ್ಕುವ ಪುಷ್ಪಮಾಲಿಕೆ ಗಳಿಂದಲೂ, ಫಲಗಳಿಂದಲೂ, ಕಂದ-ಮೂಲಗಳಿಂದಲೂ, ಪಕ್ವವಾದ ಮಾಂಸ ದಿಂದಲೂ, ಜಪ-ತರ್ಪಣಗಳಿಂದಲೂ, ಸಮಿತ್ತುಗಳಿಂದಲೂ, ದರ್ಭೆ ಗಳಿಂದಲೂ, ವೇದೋಕ್ತವಾದ ಹೋಮಗಳಿಂದಲೂ ಸಕಲಭೂತಗಳನ್ನೂ ತೃಪ್ತಿಗೊಳಿಸಿ, ಶುಭಲಕ್ಷಣಯುಕ್ತವಾಗಿದ್ದ ಪರ್ಣಶಾಲೆಯನ್ನು ಶುಭಲಕ್ಷಣ ಯುಕ್ತರಾಗಿದ್ದ ರಾಮ-ಲಕ್ಷ್ಮಣರು ಸೀತಾದೇವಿಯೊಡನೆ ಪ್ರವೇಶಿಸಿದರು. ಮರದ ಎಲೆಗಳಿಂದ ಹೊದಿಸಲ್ಪಟ್ಟಿದ್ದ, ಅತ್ಯಂತಮನೋಹರವಾಗಿದ್ದ, ಶಿಲ್ಪ ಶಾಸ್ತ್ರಕ್ಕೆ ಅನುಗುಣವಾದ ಆಯದಲ್ಲಿ ನಿರ್ಮಿತವಾಗಿದ್ದ, ರಭಸವಾದ ಗಾಳಿ ಯನ್ನೂ ತಡೆದುಕೊಳ್ಳುವುದರಲ್ಲಿ ಸಮರ್ಥವಾಗಿದ್ದ ಪರ್ಣಶಾಲೆಯನ್ನು–ದೇವ

ಗಳನ್ನೇ ಬಲಿಯನ್ನಾಗಿ ಕೊಡುವ ಪದ್ಧತಿಯೂ ಇದ್ದಿರಬಹುದು. ಆದುದರಿಂದ ಈಗ ನಮಗೆ ಸಹ್ಯವಾಗದುದನ್ನು ಅನ್ಯಾರ್ಥವನ್ನು ಕಲ್ಪಿಸಿ ಸಹ್ಯವಾಗುವಂತೆ ಮಾಡಿಕೊಳ್ಳುವುದು ಸರಿಯಾಗಿ ಕಾಣುವುದಿಲ್ಲ. ಮುಂದಿನ ಶ್ಲೋಕದಲ್ಲಿ ಮೃಗಂ ಎಂಬ ಪದವೇನೋ ಬಂದಿದೆ. ಆದರೆ ಮೃಗಂ ಹತ್ವಾ ಎಂಬ ಸ್ಪಷ್ಟೋಕ್ತಿಯಿಂದ ಇಲ್ಲಿಯೂ ಗಜಕಂದವೆಂಬ ಗಡ್ಡೆಯನ್ನು ಕತ್ತರಿಸಿ ಎಂದು ಅರ್ಥಮಾಡುವುದು ಅಸಹಜವಾಗಿ ಕಾಣುತ್ತದೆ. ಹಿತ್ವಾ ಮುನಿವದಾಮಿಷಮ್–ಎಂದು ಹಿಂದೆ ಹೇಳಿರುವ ಆಮಿಷಶಬ್ದಕ್ಕೆ ಮಾಂಸ ಎಂಬ ಅರ್ಥವನ್ನೇ ಕಲ್ಪಿಸಬೇಕಾಗಿಲ್ಲ. ಇದಕ್ಕೆ ನಾನಾರ್ಥಗಳಿವೆ. ಭೋಗ್ಯವಸ್ತು, ಸುಖಸಾಮಾಗ್ರಿ, ಸ್ತ್ರೀಸಂಭೋಗ, ಸುಂದರವಾದ ಆಕಾರ–ಇತ್ಯಾದಿ ಅರ್ಥಗಳೂ ಇವೆ. ಶ್ರೀರಾಮನು ಆಲದ ಮರದ ಹಾಲಿನಿಂದ ತಲೆಗೂದಲನ್ನು ಜಟೆಗಳಾಗಿ ಪರಿವರ್ತಿಸಿಕೊಂಡು ಮುನಿಯಂತಾದುದು ಈ ಹಿಂದೆಯೇ ಬಂದಿದೆ. ರುಚಿರುಚಿಯಾದ ಆಹಾರವನ್ನು ತೊರೆದು ಮುನಿಗಳಂತೆ ಇರುವೆನು–ಎಂದು ಕೂಡ ಹಿತ್ವಾ ಮುನಿವದಾಮಿಷಮ್–ಎಂಬುದಕ್ಕೆ ಅರ್ಥವಾಗುತ್ತದೆ.

ಈ ವ್ಯಾಖ್ಯಾನಕಾರರು ಭಿನ್ನಶೋಣಿತಮ್ ಎಂಬುದಕ್ಕೂ ಸಮಸ್ತಾಙ್ಗಃ ಎನ್ನುವುದಕ್ಕೂ ಗಜಕಂದದ ಪರವಾಗಿಯೇ ವ್ಯುತ್ಪತ್ತಿ ಮಾಡಿರುತ್ತಾರೆ. ಭಿನ್ನಶೋಣಿತಂ ರಕ್ತವಿಕಾರರೂಪಂ ರೋಗಜಾತಂ ಯೇನ ಸಃ-ಗಜಕಂದವು ರೋಗವಿಕಾರವನ್ನೂ ನಾಶಗೊಳಿಸುತ್ತದೆ. ಸಮ್ಯಕ್ ಭವಂತಿ ಅಸ್ತಾನಿ ಅಙ್ಗಾನಿ ಯೇನ ಸಃ-ಅಸ್ತವಾದ (ನ್ಯೂನವಾದ) ಅಂಗಗಳು ಚೆನ್ನಾಗಿ ಆಗುತ್ತವೆ.

ಗಣವು ದೇವಸಭೆಯನ್ನು ಪ್ರವೇಶಿಸುವಂತೆ–ಸೀತಾ-ರಾಮ-ಲಕ್ಷ್ಮಣರು ಒಟ್ಟಾಗಿ ಪ್ರವೇಶಿಸಿದರು. ನಾನಾವಿಧವಾದ ಪಕ್ಷಿಗಳಿಂದಲೂ ಮೃಗಗಳಿಂದಲೂ ವ್ಯಾಪ್ತವಾಗಿದ್ದ, ಚಿತ್ರ-ವಿಚಿತ್ರವಾದ ಪುಷ್ಪಗುಚ್ಛಗಳುಳ್ಳ ವೃಕ್ಷಗಳಿಂದ ಸಮಾವೃತವಾಗಿದ್ದ, ಮದಿಸಿದ ಗಜಗಳ ಘೀಂಕಾರಗಳಿಂದ ನಿನಾದಿತವಾದ, ಉತ್ತಮೋತ್ತಮವಾದ ಚಿತ್ರಕೂಟಪರ್ವತದ ಅರಣ್ಯದಲ್ಲಿ ಜಿತೇಂದ್ರಿಯರಾದ ಸೀತಾ-ರಾಮ-ಲಕ್ಷ್ಮಣರು ಸ್ವೇಚ್ಛೆಯಿಂದ ವಿಹರಿಸುತ್ತಾ ಸುಖದಿಂದ ಕಾಲಕಳೆಯುತ್ತಿದ್ದರು.

ಚಿತ್ರಕೂಟಮಹಾಪರ್ವತವು ಸುರಮ್ಯವಾಗಿದ್ದಿತು. ಅದರ ಸನಿಹದಲ್ಲಿಯೇ ಮೃಗ-ಪಕ್ಷಿಗಳಿಂದ ಸೇವಿಸಲ್ಪಡುತ್ತಿದ್ದ ಮತ್ತು ಶುದ್ಧವಾದ ತೀರ್ಥದಿಂದ ಕೂಡಿದ್ದ ಮಾಲ್ಯವತೀ (ಮಂದಾಕಿನೀ) ನದಿಯೂ ಹರಿಯುತ್ತಿದ್ದಿತು. ಪರ್ವತ ಮತ್ತು ನದಿಗಳ ಸಾನ್ನಿಧ್ಯದಿಂದಾಗಿ ಶ್ರೀರಾಮನಿಗೆ ಅಮಿತವಾದ ಆನಂದವುಂಟಾಯಿತು. ಅಯೋಧ್ಯಾಪಟ್ಟಣದ ಪರಿತ್ಯಾಗದಿಂದ ಪ್ರಾಪ್ತವಾಗಿದ್ದ ದುಃಖವನ್ನು ಶ್ರೀರಾಮನು ಸಂಪೂರ್ಣವಾಗಿ ತೊರೆದನು.

ಕಾರಿನ ೫೬ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೫೭ನೆಯ ಸರ್ಗ

ಸುಮಂತ್ರನು ಅಯೋಧ್ಯೆಗೆ ಹಿಂದಿರುಗಿದುದು: ಅವನಿಂದ ಶ್ರೀರಾಮನ ಸಂದೇಶವನ್ನು ಕೇಳಿದ ನಗರವಾಸಿಗಳ ವಿಲಾಪ: ದಶರಥ–ಕೌಸಲ್ಯೆಯರ ಮೂರ್ಛೆ: ಅಂತಃಪುರಸ್ತ್ರೀಯರ ಆರ್ತನಾದ

ಕಥಯಿತ್ವಾ ಸುದುಃಖಾರ್ತಃ ಸುಮನ್ತ್ರೇಣ ಚಿರಂ ಸಹ
ರಾಮೇ ದಕ್ಷಿಣಕೂಲಸ್ಥೇ ಜಗಾಮ ಸ್ವಗೃಹಂ ಗುಹಃ ॥೧॥

ಇತ್ತಲಾಗಿ ಗುಹನು ಶ್ರೀರಾಮನ ಅಗಲುವಿಕೆಯಿಂದ ಬಹಳ ದುಃಖಗೊಂಡನು. ಬಹಳಹೊತ್ತಿನವರೆಗೆ ಸುಮಂತ್ರನೊಡನೆ ಶ್ರೀರಾಮನ ಗುಣಗಳನ್ನು ಹೇಳುತ್ತಲೇ ಇದ್ದನು. ಸೀತಾ-ರಾಮ-ಲಕ್ಷ್ಮಣರು ಕುಳಿತಿದ್ದ ದೋಣಿಯು ದಕ್ಷಿಣತೀರವನ್ನು ಸೇರಿತು. ಮೂವರೂ ನಾವೆಯಿಂದಿಳಿದು ಮುಂದೆ ಪ್ರಯಾಣಹೊರಟರು. ಕಣ್ಣಿಗೆ ಕಾಣುವವರೆಗೂ ಗುಹನು ಆ

ಮೂವರನ್ನೂ ಎವೆಯಿಕ್ಕದೇ ನೋಡುತ್ತಲೇ ಇದ್ದನು. ಅವರು ಸಂಪೂರ್ಣವಾಗಿ ಕಾಣಿಸದಿರಲು ನಿಟ್ಟುಸಿರುಬಿಡುತ್ತಾ ಸುಮಂತ್ರನೊಡನೆ ತನ್ನ ಮನೆಯನ್ನು ಸೇರಿದನು. ಶ್ರೀರಾಮನು ಸೀತಾ-ಲಕ್ಷ್ಮಣರೊಡನೆ ಭರದ್ವಾಜರ ಆಶ್ರಮದ ಕಡೆಗೆ ಪ್ರಯಾಣಮಾಡಿದುದು; ಪ್ರಯಾಗಮಹಾಕ್ಷೇತ್ರದಲ್ಲಿ ಮಹರ್ಷಿಗಳೊಡನೆ ಶ್ರೀರಾಮನ ಸಮಾಗಮ; ಅಲ್ಲಿಂದ ಮುಂದೆ ಭರದ್ವಾಜರ ನಿದೇಶದಂತೆ ಆ ಮೂವರೂ ಚಿತ್ರಕೂಟಪರ್ವತಕ್ಕೆ ಪ್ರಯಾಣಮಾಡಿದುದು–ಈ ಎಲ್ಲ ವಿಷಯಗಳನ್ನೂ ಸುಮಂತ್ರನು ಗುಹನ ಚಾರರ ಮೂಲಕ ತಿಳಿದುಕೊಂಡನು. ಬಳಿಕ ಸುಮಂತ್ರನು ಗುಹನಿಂದ ಅನುಜ್ಞೆಯನ್ನು ಪಡೆದು ಉತ್ತಮಾಶ್ವಗಳನ್ನು ರಥಕ್ಕೆ ಹೂಡಿ ಅತ್ಯಂತಖಿನ್ನನಾಗಿ ಅಯೋಧ್ಯಾಪಟ್ಟಣದ ಕಡೆಗೆ ಹೊರಟನು. ಸುಗಂಧಮಯವಾದ ಕಾಡುಗಳನ್ನೂ, ನದಿಗಳನ್ನೂ, ಸರೋವರಗಳನ್ನೂ, ಗ್ರಾಮಗಳನ್ನೂ, ಪಟ್ಟಣಗಳನ್ನೂ ನೋಡುತ್ತಾ ಸುಮಂತ್ರನು ಬಹಳ ಶೀಘ್ರವಾಗಿ ಅಯೋಧ್ಯೆಯ ಕಡೆಗೆ ಹೋಗುತ್ತಿದ್ದನು.

ತತಃ ಸಾಯಾಹ್ನಸಮಯೇ ತೃತೀಯೇಽಹನಿ ಸಾರಥಿಃ ।
ಅಯೋಧ್ಯಾಂ ಸಮನುಪ್ರಾಪ್ಯ ನಿರಾನನ್ದಾಂ ದದರ್ಶ ಹ ॥೫॥

ಸುಮಂತ್ರನು ಶೃಂಗಬೇರಪುರದಿಂದ ಹೊರಟ ಮೂರನೆಯ ದಿವಸ (ಅಯೋಧ್ಯೆಯಿಂದ ಹೊರಟ ಆರನೆಯ ದಿವಸ) ಸಾಯಂಕಾಲದ ಸಮಯದಲ್ಲಿ ಅಯೋಧ್ಯೆಯನ್ನು ಸೇರಿ ಸಂತೋಷಶೂನ್ಯವಾಗಿದ್ದ ಅಯೋಧ್ಯಾಪಟ್ಟಣವನ್ನು ನೋಡಿದನು.*

---

*ಶ್ರೀರಾಮನ ಪ್ರಯಾಣಸಮಯವನ್ನು ಈ ಶ್ಲೋಕಗಳಿಂದ ತಿಳಿಯಬಹುದಾಗಿದೆ.

ಮೊದಲನೆಯ ರಾತ್ರಿ:- ತತಸ್ತು ತಮಸಾತೀರಂ ರಮ್ಯಮಾಶ್ರಿತ್ಯ ರಾಘವಃ । ಸೀತಾಮುದ್ವೀಕ್ಷ್ಯ ಸೌಮಿತ್ರಿಮಿದಂ ವಚನಮಬ್ರವೀತ್ ॥ ಇಯಮದ್ಯ ನಿಶಾ ಪೂರ್ವಾ ಸೌಮಿತ್ರೇ ಪ್ರಹಿತಾ ವನಮ್ । ವನವಾಸಸ್ಯ ಭದ್ರಂ ತೇ ಸ ನೋತ್ಕಣ್ಠಿತುಮರ್ಹಸಿ ॥ (ಅಯೋಧ್ಯಾ-ಸರ್ಗ-೪೬ ಶ್ಲೋಕ ೧-೨)

ಎರಡನೆಯ ರಾತ್ರಿ:- ಜಲಮೇವಾದದೇ ಭೋಜ್ಯಂ ಲಕ್ಷ್ಮಣೇನಾಹೃತಂ ಸ್ವಯಮ್ । ತಸ್ಯ ಭೂಮೌ ಶಯಾನಸ್ಯ ಪಾದೌ ಪ್ರಕ್ಷಾಲ್ಯ ಲಕ್ಷ್ಮಣಃ ॥ ಸಭಾರ್ಯಸ್ಯ ತತೋಽಭ್ಯೇತ್ಯ ತಸ್ಥೌ ವೃಕ್ಷಮುಪಾಶ್ರಿತಃ । ಗುಹೋಽಪಿ ಸಹ ಸೂತೇನ ಸೌಮಿತ್ರಿಮನುಭಾಷ

ನಿಃಶಬ್ದವಾಗಿ, ಸರ್ವತ್ರ ಶೂನ್ಯವಾಗಿರುವಂತೆ ಕಾಣುತ್ತಿದ್ದ ಆ ಪಟ್ಟಣವನ್ನು ಕಂಡು ಬಹುಭಾರವಾದ ಮನಸ್ಸಿನಿಂದ ಕೂಡಿದ್ದ ಸುಮಂತ್ರನು ಶೋಕದಿಂದಲೂ ಉದ್ವೇಗದಿಂದಲೂ ಕೂಡಿದವನಾಗಿ 'ರಾಜ-ಗಜಾಶ್ವ-ಜನಸಮೇತವಾದ ಈ ಪಟ್ಟಣವು ಶ್ರೀರಾಮನ ವಿಯೋಗದಿಂದ ಹುಟ್ಟಿದ ಶೋಕಾಗ್ನಿಯಿಂದ ಭಸ್ಮವಾಗಿಲ್ಲವಷ್ಟೇ?' ಎಂದು ಚಿಂತಿಸತೊಡಗಿದನು.

ಚಿಂತಾಕ್ರಾಂತನಾಗಿದ್ದ ಸುಮಂತ್ರನು ಹೀಗೆ ಯೋಚಿಸುತ್ತಾ ಶೀಘ್ರಗಾಮಿಗಳಾದ ಕುದುರೆಗಳ ಸಹಾಯದಿಂದ ಬಹಳ ಬೇಗ ಅಯೋಧ್ಯಾಪಟ್ಟಣದ ಮಹಾದ್ವಾರವನ್ನು ಸೇರಿ ತ್ವರೆಯಿಂದ ಪುರವನ್ನು ಪ್ರವೇಶಿಸಿದನು. ಸುಮಂತ್ರನು ಮಹಾದ್ವಾರವನ್ನು ಪ್ರವೇಶಿಸುತ್ತಿದ್ದಂತೆಯೇ ಜನಶೂನ್ಯವಾಗಿದ್ದ ರಾಜಬೀದಿಯು ತುಂಬಿಹೋಯಿತು. ಸುಮಂತ್ರನ ರಥದ ಶಬ್ದವನ್ನು ಕೇಳಿದೊಡನೆಯೇ ನೂರಾರು ಸಂಖ್ಯೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಪಟ್ಟಣಿಗರು ಹೊರಬಂದು ಸುಮಂತ್ರನ ರಥವನ್ನು ಹಿಂಬಾಲಿಸಿ 'ರಾಮನೆಲ್ಲಿ ಸುಮಂತ್ರ? ಪರಂಧಾಮನಾದ ಶ್ರೀರಾಮನೆಲ್ಲಿ?'– ಎಂದು ಕೂಗಿಕೊಂಡರು. 'ಶ್ರೀರಾಮನನ್ನು ಶೃಂಗಬೇರಪುರದ ಸಮೀಪದಲ್ಲಿರುವ ಗಂಗಾತೀರಕ್ಕೆ ಕಳುಹಿಸಿ ಬಂದೆನು. ಧಾರ್ಮಿಕನಾದ ಮತ್ತು ಮಹಾತ್ಮನಾದ ಶ್ರೀರಾಮನ ಅನುಜ್ಞೆಯನ್ನೂ ಮತ್ತು ಆಜ್ಞೆಯನ್ನೂ ಪಡೆದು ನಾನು ಅಯೋಧ್ಯೆಗೆ ಹಿಂದಿರುಗಿ ಬಂದಿದ್ದೇನೆ'–ಎಂದು ತನ್ನನ್ನು ಹಿಂಬಾಲಿಸಿ ಬರುತ್ತಿದ್ದ ಪುರಜನರಿಗೆ ಸುಮಂತ್ರನು ಉತ್ತರಿಸಿದನು.

ಯನ್ । ಅನ್ವಜಾಗ್ರತ್ತತೋ ರಾಮಮಪ್ರಮತ್ತೋ ಧನುರ್ಧರಃ ॥ ತಥಾ ಶಯಾನಸ್ಯ ತತೋऽಸ್ಯ ಧೀಮತೋ ಯಶಸ್ವಿನೋ ದಾಶರಥೇರ್ಮಹಾತ್ಮನಃ । ಅದೃಷ್ಟದುಃಖಸ್ಯ ಸುಖೋಚಿತಸ್ಯ ಸಾ ತದಾ ವ್ಯತೀಯಾಯ ಚಿರೇಣ ಶರ್ವರೀ ॥ (ಅಯೋಧ್ಯಾ-ಸರ್ಗ ೫೦-ಶ್ಲೋಕ ೪೮-೪೯-೫೦)

ಮೂರನೆಯ ರಾತ್ರಿ:- ಸ ತಂ ವೃಕ್ಷಂ ಸಮಾಸಾದ್ಯ ಸಂಧ್ಯಾಮನ್ವಾಸ್ಯ ಪಶ್ಚಿಮಾಮ್ । ರಾಮೋ ರಮಯತಾಂ ಶ್ರೇಷ್ಠ ಇತಿ ಹೋವಾಚ ಲಕ್ಷ್ಮಣಮ್ ॥ ಅದ್ಯೇಯಂ ಪ್ರಥಮಾ ರಾತ್ರಿರ್ಯಾತಾ ಜನಪದಾದ್ಬಹಿಃ । ಯಾ ಸುಮನ್ತ್ರೇಣ ರಹಿತಾ ತಾಂ ನೋತ್ಕಂಠಿತುಮರ್ಹಸಿ ॥ (ಅಯೋಧ್ಯಾ-ಸರ್ಗ ೫೩-ಶ್ಲೋಕ-೧-೨)

ನಾಲ್ಕನೆಯ ರಾತ್ರಿ:- ತಸ್ಯ ಪ್ರಯಾಗೇ ರಾಮಸ್ಯ ತಂ ಮಹರ್ಷಿಮುಪೇಯುಷಃ । ಪ್ರಸನ್ನಾ ರಜನೀ ಪುಣ್ಯಾ ಚಿತ್ರಾಃ ಕಥಯತಃ ಕಥಾಃ ॥ ಸೀತಾತೃತೀಯಃ ಕಾಕುತ್ಸ್ಥಃ

ರಾಮ-ಲಕ್ಷ್ಮಣ-ಸೀತೆಯರು ಗಂಗಾನದಿಯನ್ನು ದಾಟಿ ಮುಂದಕ್ಕೆ ಹೋದರೆಂಬ ವಾರ್ತೆಯನ್ನು ಗುಹನಿಂದ ಕೇಳಿ ಕಂಬನಿದುಂಬಿದ ಮುಖದಿಂದ ಕೂಡಿದ ಪ್ರಜೆಗಳು–'ಅಯ್ಯೋ! ಶ್ರೀರಾಮನನ್ನು ಕಳೆದುಕೊಂಡ ನಮಗೆ ಧಿಕ್ಕಾರವಿರಲಿ!'–ಎಂದು ಹೇಳುತ್ತಾ ಕ್ಷಣ-ಕ್ಷಣಕ್ಕೂ ನಿಟ್ಟುಸಿರುಬಿಡುತ್ತಾ 'ಹಾ ರಾಮ! ನಮ್ಮನ್ನು ಬಿಟ್ಟು ಹೊರಟೇ ಹೋದೆಯಾ?'–ಎಂದು ಹೇಳಿಕೊಂಡು ಗೋಳಾಡುತ್ತಿದ್ದರು. ಒಂದೆಡೆಯಲ್ಲಿ ಮಾತ್ರವಲ್ಲ; ದಾರಿಯುದ್ದಕ್ಕೂ ಪ್ರಜೆಗಳು ಗುಂಪು-ಗುಂಪಾಗಿ ನಿಂತು ಇದೇ ಮಾತನ್ನೇ ಆಡುತ್ತಿದ್ದರು. 'ಅಯ್ಯೋ! ನಾವಿನ್ನು ಹಾಳಾಗಿಹೋದಂತೆಯೇ ಸರಿ! ನಮಗಿನ್ನು ಉಳಿಗಾಲವಿಲ್ಲ; ರಘುಕುಲೋತ್ಪನ್ನನಾದ ಪರಮಧಾರ್ಮಿಕನಾದ ಶ್ರೀರಾಮನನ್ನು ಯಾವಾಗ ನಾವು ಈ ರಥದಲ್ಲಿ ಕಾಣಲಿಲ್ಲವೋ–ಆಗಲೇ ನಾವು ಹತರಾದೆವು'–ಇವೇ ಮುಂತಾಗಿ ಹೇಳಿಕೊಂಡು ಪ್ರಜೆಗಳು ಗೋಳಾಡುತ್ತಿದ್ದುದನ್ನು ಸುಮಂತ್ರನು ನೋಡಿದನು. ದುಃಖಿತರಾದ ಪ್ರಜೆಗಳ ಇನ್ನೂ ಅನೇಕ ವಿಧವಾದ ಮಾತುಗಳು ಸುತ್ತಲೂ ಕೇಳಿಬರುತ್ತಿದ್ದುವು.

"ದಾನಮಾಡುವ ಸಮಯಗಳಲ್ಲಿ ಸತ್ಪಾತ್ರರಿಗೆ ದಾನಕೊಡುವ ಸಲಹೆ ಮಾಡಲು ರಾಮನಿರುತ್ತಿದ್ದನು. ಯಜ್ಞ-ಯಾಗಾದಿಗಳು ನಡೆಯುತ್ತಿದ್ದರೆ ಅಲ್ಲಿಗೂ ಬಂದು ಕರ್ಮಲೋಪವಾಗದ ರೀತಿಯಲ್ಲಿ ಸಲಹೆ ನೀಡುತ್ತಿದ್ದನು. ವಿವಾಹಸಂದರ್ಭದಲ್ಲಿಯೂ ಆಗಮಿಸಿ ವಧುವಿನ ಮತ್ತು ವರನ ಕಡೆಯವರಿಗೆ ಯಾವ ವಿಧವಾದ ಮನಃಕ್ಲೇಶವೂ ಉಂಟಾಗದ ರೀತಿಯಲ್ಲಿ ನಿಷ್ಪಕ್ಷಪಾತ

ಪರಿಶ್ರಾನ್ತಃ ಸುಖೋಚಿತಃ । ಭರದ್ವಾಜಾಶ್ರಮೇ ರಮ್ಯೇ ತಾಂ ರಾತ್ರಿಮ-ವಸತ್ಸುಖಮ್ ॥ (ಅಯೋಧ್ಯಾ-ಸರ್ಗ ೫೪ ಶ್ಲೋಕ ೩೪-೩೫)

ಐದನೆಯ ರಾತ್ರಿ:- ಬಹೂನ್ಮೇಧ್ಯಾನ್ಮೃಗಾನ್ಹತ್ವಾ ಚೇರತುರ್ಯಮುನಾವನೇ । ವಿಹೃತ್ಯ ತೇ ಬರ್ಹಿಣಪೂಗನಾದಿತೇ ಶುಭೇ ವನೇ ವಾನರವಾರಣಾಯುತೇ । ಸಮಂ ನದೀವಪ್ರಮುಪೇತ್ಯ ಸತ್ವರಂ ನಿವಾಸಮಾಜಗ್ಮುರದೀನದರ್ಶನಾಃ ॥

ಇಲ್ಲಿ ರಾತ್ರಿಯೆಂದು ಹೇಳದಿದ್ದರೂ ಯಮುನಾನದಿ. ತೀರದಲ್ಲಿ ಐದನೆಯ ರಾತ್ರಿ ರಾಮ-ಲಕ್ಷ್ಮಣ-ಸೀತೆಯರು ತಂಗಿದ್ದರೆಂದು ಸಂದರ್ಭಾನುಸಾರ ಹೇಳಬಹುದಾಗಿದೆ. (ಅಯೋಧ್ಯಾ-ಸರ್ಗ-೫೫ ಶ್ಲೋಕ ೩೪)

ಆರನೆಯ ದಿನ:- ಭರದ್ವಾಜಾಭಿಗಮನಂ ಪ್ರಯಾಗೇ ಚ ಸಹಾಸನಮ್ । ಆ ಗಿರೇರ್ಗಮನಂ ತೇಷಾಂ ತತ್ರಸ್ಥೈರಭಿಲಕ್ಷಿತಮ್ ॥ ತತಃ ಸಾಯಾಹ್ನಸಮಯೇ

ವಾದ ಸಲಹೆಗಳನ್ನು ಎರಡು ಕಡೆಯವರಿಗೂ ಕೊಟ್ಟು ಅವರ ಆನಂದದಲ್ಲಿ ತಾನೂ ಭಾಗಿಯಾಗುತ್ತಿದ್ದನು. ಅಂತಹ ಸರ್ವಹಿತೈಷಿಯಾದ, ಸರ್ವರಿಗೂ ಸುಲಭನಾದ, ಪರಮಧಾರ್ಮಿಕನಾದ ಶ್ರೀರಾಮನನ್ನು ನಾವು ಮುಂದೆ ಯಾವಾಗ ಕಾಣುತ್ತೇವೆ?"

"ಈ ನನ್ನ ಪ್ರಜೆಗಳಿಗೆ ಯಾವುದು ಕ್ಷೇಮಕರ, ಯಾವುದು ಪ್ರಿಯ, ಯಾವುದು ಸುಖಕರ?–ಎಂಬುದನ್ನು ಪರಿಶೀಲಿಸಿ ಕಾರ್ಯಮಾಡುತ್ತಿದ್ದ ಶ್ರೀರಾಮನು ನಮ್ಮೆಲ್ಲರನ್ನೂ ತಂದೆಯು ಮಕ್ಕಳನ್ನು ಸಂರಕ್ಷಿಸು ತ್ತಿದ್ದಂತೆಯೇ ರಕ್ಷಿಸುತ್ತಿದ್ದನು. ಅಂತಹವನನ್ನು ಕಳೆದುಕೊಂಡ ನಾವು ದುರ್ಭಾಗ್ಯರೇ ಸರಿ."

ಪುರುಷರು ಬೀದಿಯಲ್ಲಿ ಗುಂಪು-ಗುಂಪಾಗಿ ನಿಂತು ಹೀಗೆ ಮಾತನಾಡಿಕೊಳ್ಳುತ್ತಿದ್ದರೆ ರಾಮವಿಯೋಗಶೋಕದಿಂದ ಸಂಕಟಪಡುತ್ತಿದ್ದ ನಾರೀಮಣಿಯರು ಅಂಗಡಿಗಳ ಮಧ್ಯಭಾಗದಲ್ಲಿರುತ್ತಿದ್ದ ಕಿಟಕಿಗಳಲ್ಲಿ ನಿಂತು ಗೋಳಾಡುತ್ತಿದ್ದುದನ್ನು ಸುಮಂತ್ರನು ಕೇಳಿಸಿಕೊಂಡನು. ರಾಜಮಾರ್ಗದ ಮಧ್ಯದಲ್ಲಿ ಹೋಗುತ್ತಿದ್ದ ಸುಮಂತ್ರನಿಗೆ ತಲೆಯೆತ್ತಿಕೊಂಡು ಹೋಗಲು ಕೂಡ ಸಾಧ್ಯವಾಗಲಿಲ್ಲ. ಮುಖವನ್ನು ಉತ್ತರೀಯದಿಂದ ಮುಚ್ಚಿಕೊಂಡು ದಶರಥನ ಅರಮನೆಗೆ ಹೊರಟುಹೋದನು. ದಶರಥನ ಅರಮನೆಯ ಹೆಬ್ಬಾಗಿಲಿನವರೆಗೆ ರಥದಲ್ಲಿ ಕುಳಿತು ಬಂದ ಸುಮಂತ್ರನು ರಥದಿಂದಿಳಿದು ಹೆಬ್ಬಾಗಿಲನ್ನು ಪ್ರವೇಶಿಸಿ, ಅಲ್ಲಿಂದ ಮುಂದೆ ಪಟ್ಟಣಿಗರಿಂದ ನಿಬಿಡವಾಗಿದ್ದ ಏಳು ತೊಟ್ಟಿಗಳನ್ನೂ ದಾಟಿ ಒಳಕ್ಕೆ ಹೋದನು.

ದಶರಥನ ಅರಮನೆಯ ಹೊರಾವರಣದಲ್ಲಿದ್ದ ಧನಿಕರ ಮನೆಗಳಲ್ಲಿಯೂ, ಏಳು ಅಂತಸ್ತುಗಳ ಮನೆಗಳಲ್ಲಿಯೂ, ರಾಜರ ಅರಮನೆಗಳಲ್ಲಿಯೂ ಇದ್ದ

ತೃತೀಯೇಽಹನಿ ಸಾರಥಿಃ । ಅಯೋಧ್ಯಾಂ ಸಮನುಪ್ರಾಪ್ಯ ನಿರಾನನ್ದಾಂ ದದರ್ಶ ಹ ॥ (ಅಯೋಧ್ಯಾ-ಸರ್ಗ ೫೭-ಶ್ಲೋಕ ೨-೫)

ಶ್ರೀರಾಮನನ್ನು ಅಗಲಿದ ನಂತರ ಮೂರನೆಯ ದಿನ ಸಾಯಂಕಾಲದಲ್ಲಿ (ಅಯೋಧ್ಯೆಯಿಂದ ಹೊರಟ ಆರನೆಯ ದಿನ) ಸುಮಂತ್ರನು ಅಯೋಧ್ಯೆಯನ್ನು ಸೇರಿದನು.

ಸ್ತ್ರೀಯರು ಸುಮಂತ್ರನೊಬ್ಬನೇ ಬಂದುದನ್ನು ನೋಡಿ ಶ್ರೀರಾಮನನ್ನು ಕಾಣದೇ ಬಹಳ ದುಃಖಿತರಾಗಿ ಹಾಹಾಕಾರಮಾಡುತ್ತಾ 'ಹಾ ರಾಮ! ಹಾ ರಾಘವ! ನಮ್ಮನ್ನಗಲಿ ಹೊರಟೇಹೋದೆಯಾ?'–ಮುಂತಾಗಿ ಹೇಳಿಕೊಂಡು ಗೋಳಾಡುತ್ತಿದ್ದರು.

ವಿಶಾಲವಾಗಿದ್ದ, ಕಾಡಿಗೆಯಿಲ್ಲದ, ಪ್ರವಾಹರೂಪದ ಕಂಬನಿಯಿಂದ ತುಂಬಿದ್ದ ಕಣ್ಣುಗಳುಳ್ಳವರಾಗಿದ್ದ ಸ್ತ್ರೀಯರು ಶ್ರೀರಾಮನ ಅಗಲುವಿಕೆಯಿಂದ ಅತ್ಯಂತ ಆರ್ತರಾಗಿ ಮುಂದೇನು ಮಾಡಬೇಕೆಂಬುದು ತಿಳಿಯದೆ ಒಬ್ಬರನ್ನೊಬ್ಬರು ಶೂನ್ಯದೃಷ್ಟಿಯಿಂದ ನೋಡುತ್ತಿದ್ದರು. ರಾಮ ನಿರ್ಗಮನಶೋಕದಿಂದ ಸಂತಪ್ತರಾಗಿದ್ದ ದಶರಥನ ಪತ್ನಿಯರು ಪ್ರಾಸಾದಗಳಲ್ಲಿ ಕುಳಿತು ಮೆಲ್ಲ-ಮೆಲ್ಲಗೆ ಹೇಳುತ್ತಿದ್ದ ಮಾತುಗಳನ್ನು ಸುಮಂತ್ರನು ಕೇಳಿಸಿಕೊಂಡನು.

"ಶ್ರೀರಾಮನ ಜೊತೆಯಲ್ಲಿ ಹೋದ ಈ ಸುಮಂತ್ರನು ರಾಮನಿಲ್ಲದೆಯೇ ನಗರಕ್ಕೆ ಆಗಮಿಸಿದ್ದಾನೆ. 'ರಾಮ! ರಾಮ!' ಎಂದು ಹಗಲು-ರಾತ್ರಿಗಳಲ್ಲಿ ಗೋಳಾಡುತ್ತಿರುವ ಕೌಸಲ್ಯಾದೇವಿಯು 'ರಾಮನೆಲ್ಲಿ ಸುಮಂತ್ರ ರಾಮನನ್ನೆಲ್ಲಿಗೆ ಕಳುಹಿಸಿ ಬಂದೆ?' ಎಂದು ಪ್ರಶ್ನಿಸಿದರೆ ಇವನು ಏನೆಂದು ಹೇಳುವನು?"

"ಪಟ್ಟಾಭಿಷೇಕವನ್ನು ತ್ಯಜಿಸಿ ಮಗನು ಕಾಡಿಗೆ ಹೋದನಂತರವೂ ಕೌಸಲ್ಯೆಯು ಜೀವಿಸಿರುವುದನ್ನು ನೋಡಿದರೆ–ಜೀವನವು ಎಷ್ಟೇ ದುರ್ಭರವಾಗಿದ್ದರೂ ಪರಿತ್ಯಾಗಮಾಡುವುದು ನಿಶ್ಚಯವಾಗಿಯೂ ಸುಲಭಸಾಧ್ಯವಲ್ಲವೆಂದು ನಾನು ಭಾವಿಸುತ್ತೇನೆ."

ರಾಜಸ್ತ್ರೀಯರಾಡುತ್ತಿದ್ದ ಯಥಾರ್ಥವಾದ ಆ ಮಾತುಗಳನ್ನು ಕೇಳುತ್ತಾ ಶೋಕಾಗ್ನಿಯಿಂದ ಉರಿದುಹೋಗುತ್ತಿರುವನೋ ಎಂಬಂತೆ ಸುಮಂತ್ರನು ದಶರಥರಾಜನ ಅಂತಃಪುರವನ್ನು ಪ್ರವೇಶಿಸಿದನು. ಅಂತಃ ಪುರದ ಎಂಟನೆಯ ಕೋಣೆಯನ್ನು ಪ್ರವೇಶಿಸುತ್ತಲೇ ಸುಮಂತ್ರನು ದೀನ ನಾಗಿಯೂ, ಆತುರನಾಗಿಯೂ, ಪುತ್ರಶೋಕದಿಂದ ಮ್ಲಾನಿಹೊಂದಿದ ಮುಖ ವುಳ್ಳವನಾಗಿಯೂ ಇದ್ದ ದಶರಥರಾಜನನ್ನು ಶ್ವೇತಭವನದಲ್ಲಿ ನೋಡಿದನು. ಆಸನದಲ್ಲಿ ಕುಳಿತಿದ್ದ ದಶರಥನನ್ನು ಸುಮಂತ್ರನು ಸಮೀಪಿಸಿ ಅವನನ್ನು

ಯಥಾಯೋಗ್ಯವಾಗಿ ಅಭಿನಂದಿಸಿ ಶ್ರೀರಾಮನ ಮಾತುಗಳನ್ನು ಯಥಾವತ್ತಾಗಿ ರಾಜನಿಗೆ ವಿಜ್ಞಾಪಿಸಿದನು.

ಮೌನಿಯಾಗಿ ಕುಳಿತು ಆ ಮಾತುಗಳನ್ನು ಕೇಳಿದ ರಾಜನು ಭ್ರಾಂತಚಿತ್ತನಾಗಿ ರಾಮವಿಯೋಗಶೋಕದಿಂದ ಪೀಡಿತನಾಗಿ ಮೂರ್ಛೆಗೊಂಡು ಕೆಳಗುರುಳಿದನು. ಒಡನೆಯೇ ಶೋಕದಿಂದ ಕಂಗಾಲಾಗಿದ್ದ ಅಂತಃಪುರದ ಜನಸಮೂಹವು ಎರಡು ಕೈಗಳನ್ನೂ ಮೇಲೆತ್ತಿಕೊಂಡು 'ಅಯ್ಯೋ! ಅಯ್ಯೋ!' ಎಂದೆನ್ನುತ್ತಾ ಕೂಗಿಕೊಂಡಿತು. ಕೌಸಲ್ಯೆಯು ಸುಮಿತ್ರೆಯೊಡನೆ ಬಂದು ಕೆಳಗೆ ಬಿದ್ದಿದ್ದ ಪತಿಯನ್ನು ಹಿಡಿದೆತ್ತಿ ಆಸನದ ಮೇಲೆ ಕುಳ್ಳಿರಿಸಿ ಹೇಳಿದಳು:

"ಮಹಾಭಾಗನೇ! ದುಷ್ಕರವೆನಿಸುವ ಕಾರ್ಯವನ್ನೂ ಮಾಡುವುದರಲ್ಲಿ ಅತಿಸಮರ್ಥನಾದ ನಮ್ಮ ರಾಮನ ದೂತನಾದ ಸುಮಂತ್ರನು ಈಗ ತಾನೇ ಅರಣ್ಯದಿಂದ ಆಗಮಿಸಿದ್ದಾನೆ. ಅವನೊಡನೆ ನೀನೇಕೆ ಯಾವ ಮಾತನ್ನೂ ಆಡುತ್ತಿಲ್ಲ?

ಅದ್ಯೇಮಮನಯಂ ಕೃತ್ವಾ ವ್ಯಪತ್ರಪಸಿ ರಾಘವ ।
ಉತ್ತಿಷ್ಠ ಸುಕೃತಂ ತೇऽಸ್ತು ಶೋಕೇ ನ ಸ್ಯಾತ್ಸಹಾಯತಾ ॥೩೦॥

ರಘುಕುಲಾವತಂಸನೇ! ನೀತಿಗೆ ವಿರುದ್ಧವಾದ ಕಾರ್ಯವನ್ನು ಮಾಡಿ (ಜ್ಯೇಷ್ಠಪುತ್ರನನ್ನು ಕಾಡಿಗಟ್ಟಿ) ಅದಕ್ಕಾಗಿ ಈಗ ನಾಚಿಕೆಪಡುತ್ತಿರುವೆ. ಎದ್ದೇಳು ಮಹಾರಾಜ! ಸತ್ಯಪರಿಪಾಲನದಿಂದ ಪ್ರಾಪ್ತವಾಗುವ ಸುಕೃತವು ನಿನಗೆ ಲಭಿಸಲಿ. ಹೀಗೆ ಸದಾ ದುಃಖಿಸುತ್ತಿದ್ದರೆ ಮಂತ್ರಿಗಳೇ ಮೊದಲಾದ ಸಹಾಯಕರೆಲ್ಲರೂ ವಿನಾಶಹೊಂದಬಹುದು.

ದೇವ ಯಸ್ಯಾ ಭಯಾದ್ರಾಮಂ ನಾನುಪೃಚ್ಛಸಿ ಸಾರಥಿಮ್ ।
ನೇಹ ತಿಷ್ಠತಿ ಕೈಕೇಯೀ ವಿಸ್ರಬ್ಧಂ ಪ್ರತಿಭಾಷ್ಯತಾಮ್ ॥೩೧॥

ನೀನೇನಾದರೂ ಕೈಕೇಯಿಯ ಭಯದಿಂದಾಗಿ ರಾಮನ ಯೋಗ-ಕ್ಷೇಮಗಳನ್ನು ಕುರಿತು ಸುಮಂತ್ರನನ್ನು ಪ್ರಶ್ನಿಸುತ್ತಿಲ್ಲವೇ? ಈಗ ಇಲ್ಲಿ ಕೈಕೇಯಿಯಿಲ್ಲ. ಆದುದರಿಂದ ನೀನು ಯಾವ ಭಯವೂ ಇಲ್ಲದೇ ರಾಮನ ವಿಷಯವಾಗಿ ಸುಮಂತ್ರನೊಡನೆ ಮಾತನಾಡಬಹುದು."

ಮಹಾರಾಜನಿಗೆ ಹೀಗೆ ಹೇಳಿದ ಕೌಸಲ್ಯೆಗೆ ದುಃಖವನ್ನು ತಡೆಯಲು ಸಾಧ್ಯವಾಗಲಿಲ್ಲ. ಗಳಗಳನೆ ಅಳತೊಡಗಿದಳು. ಕುತ್ತಿಗೆಯು ಬಿಗಿಯಿತು. ಕಂಗಾಲಾಗಿ ಕೆಳಕ್ಕೆ ಬಿದ್ದಳು. ಹೃದಯವು ಬಿರಿದುಹೋಗುವ ರೀತಿಯಲ್ಲಿ ರೋದನಮಾಡುತ್ತಾ ಕೆಳಗುರುಳಿದ ಕೌಸಲ್ಯೆಯನ್ನೂ ಪತಿಯಾದ ದಶರಥ ನನ್ನೂ ನೋಡಿ ಅವನ ಪತ್ನಿಯರೆಲ್ಲರೂ ಸುತ್ತಲೂ ನಿಂತು ಅಳತೊಡಗಿದರು.

ಅಂತಃಪುರದಲ್ಲಾಗುತ್ತಿದ್ದ ರೋದನಶಬ್ದವನ್ನು ಕೇಳಿ ಅಯೋಧ್ಯೆ ಯಲ್ಲಿದ್ದ ಸ್ತ್ರೀ-ವೃದ್ಧ-ತರುಣರೇ ಆದಿಯಾಗಿ ಸಕಲಪ್ರಜೆಗಳೂ ಅರಮನೆಯ ಸುತ್ತಲೂ ನಿಂತು ರೋದನಮಾಡತೊಡಗಿದರು. ಅದರಿಂದಾಗಿ ಶ್ರೀರಾಮನು ಅರಣ್ಯಕ್ಕೆ ಹೊರಟಿದ್ದಾಗ ವ್ಯಾಕುಲಗೊಂಡಂತೆ ಅಯೋಧ್ಯೆಯು ಪುನಃ ವ್ಯಾಕುಲಗೊಂಡಿತು.

೫೭ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೫೮ನೆಯ ಸರ್ಗ

ದಶರಥನ ಆಜ್ಞೆಯಂತೆ ಸುಮಂತ್ರನು ರಾಮ-ಲಕ್ಷ್ಮಣರ ಸಂದೇಶವನ್ನು ತಿಳಿಸಿದುದು

ಪ್ರತ್ಯಾಶ್ವಸ್ತೋ ಯದಾ ರಾಜಾ ಮೋಹಾತ್ಪ್ರತ್ಯಾಗತಸ್ಮೃತಿಃ ।
ಅಥಾಜುಹಾವ ತಂ ಸೂತಂ ರಾಮವೃತ್ತಾನ್ತಕಾರಣಾತ್ ॥೧॥

ಶೈತ್ಯೋಪಚಾರಗಳಿಂದ ಸಮಾಧಾನಗೊಳಿಸಲ್ಪಟ್ಟ ರಾಜನು ಮೂರ್ಛೆ ಯನ್ನು ತಳೆದು ಸ್ಮೃತಿಯನ್ನು ಪಡೆದವನಾಗಿ ಶ್ರೀರಾಮನ ವೃತ್ತಾಂತವನ್ನು ಕೇಳುವ ಆಶಯದಿಂದ ಸುಮಂತ್ರನನ್ನು ಬರಮಾಡಿಕೊಂಡನು.

ಶ್ರೀರಾಮನನ್ನೇ ಕುರಿತು ಸರ್ವದಾ ಶೋಕಿಸುತ್ತಿದ್ದ, ದುಃಖ-ಶೋಕಗಳಿಂದ ಜರ್ಝರಿತನಾಗಿದ್ದ, ವೃದ್ಧನಾಗಿದ್ದ, ಆಗ ತಾನೇ ಹಿಡಿದ ಆನೆಯಂತೆ ಬಹಳವಾಗಿ ಪರಿತಪಿಸುತ್ತಾ ಕ್ಷಣ-ಕ್ಷಣಕ್ಕೂ ನಿಟ್ಟುಸಿರುಬಿಡುತ್ತಿದ್ದ, ಸಲಗಗಳಿಂದ ಪ್ರತ್ಯೇಕಿಸಲ್ಪಟ್ಟು ಕಾಡಿನಿಂದ ಕರೆತಂದ ಆನೆಯು ತನ್ನ ಸಂಗಡಿಗರನ್ನೇ ಧ್ಯಾನಮಾಡುತ್ತಾ ವ್ಯಾಧಿಗ್ರಸ್ತ ವಾಗುವಂತೆ–ಯಾವಾಗಲೂ ರಾಮನನ್ನೇ ಧ್ಯಾನಮಾಡುತ್ತಾ ಅಸ್ವಸ್ಥನಾಗಿದ್ದ ದಶರಥಮಹಾರಾಜನಿಗೆ ಸೂತನು ನಮಸ್ಕರಿಸಿ ಬದ್ಧಾಂಜಲಿಯಾಗಿ ನಿಂತುಕೊಂಡನು.

ಬಹುದೂರ ಪಯಣದ ಕಾರಣದಿಂದ ಧೂಳಿನಿಂದ ಮುಚ್ಚಿಹೋದ ಶರೀರವುಳ್ಳವನಾಗಿದ್ದ, ಕಂಬನಿದುಂಬಿದ ಕಣ್ಣುಗಳಿಂದ ಕೂಡಿದ್ದ, ಆರ್ತನಾಗಿಯೂ ದೀನನಾಗಿಯೂ ಇದ್ದ ಸೂತನಿಗೆ ದಶರಥರಾಜನು ದೈನ್ಯಯುಕ್ತವಾದ ಈ ಮಾತನ್ನು ಹೇಳಿದನು:

"ಸೂತ! ಧರ್ಮಾತ್ಮನಾದ ನನ್ನ ಮಗನು ಅರಣ್ಯದಲ್ಲಿರುವ ಯಾವ ಮರದ ಬುಡದಲ್ಲಿ ವಾಸಮಾಡುತ್ತಿದ್ದಾನೆ? ಇದುವರೆವಿಗೂ ಪರಮಸುಖಿಯಾಗಿದ್ದ ನನ್ನ ರಾಮನು ಈಗ ಅರಣ್ಯದಲ್ಲಿ ಏನನ್ನು ತಿನ್ನುತ್ತಿದ್ದಾನೆ? ದುಃಖಪಡಲು ಅವನು ಖಂಡಿತವಾಗಿಯೂ ಅರ್ಹನಲ್ಲ. ಅವನಿಗೆ ಈ ವಿಧವಾದ ಅರಣ್ಯವಾಸದ ದುಃಖವು ಪ್ರಾಪ್ತವಾಗ ಬಾರದಾಗಿತ್ತು. ಆದರೆ ಅವನಿಂದು ಮಹಾದುಃಖದಲ್ಲಿ ಮುಳುಗಿ ಹೋಗಿದ್ದಾನೆ. ಹಂಸತೂಲಿಕಾತಲ್ಪದಲ್ಲಿ ಮಲಗಲು ಯೋಗ್ಯನಾದ, ಭೂಪಾಲನೊಬ್ಬನ ಮಗನಾದ ಆ ರಾಮನಿಂದು ಒಬ್ಬ ಅನಾಥನಂತೆ ಹಾಸು-ಹೊದ್ದಿಕೆಗಳೂ ಇಲ್ಲದೇ ಒರಟಾದ ನೆಲದ ಮೇಲೆ ಹೇಗೆ ಮಲಗುತ್ತಾನೆ?

ರಾಜಬೀದಿಯಲ್ಲಿ ರಥಾರೂಢನಾಗಿ ರಾಮನು ಹೊರಟನೆಂದರೆ ಅವನ ಹಿಂಬದಿಯಲ್ಲಿ ಪದಾತಿಗಳೂ, ರಥಗಳೂ, ಆನೆಗಳೂ ಸಾವಿರಾರು ಸಂಖ್ಯೆಯಲ್ಲಿ ಹೋಗುತ್ತಿದ್ದುವು. ಅಂತಹ ರಾಮನಿಂದು, ನಿರ್ಜನವಾದ ಅರಣ್ಯಕ್ಕೆ ಹೋಗಿ ಕೇವಲ ದುಷ್ಟಪ್ರಾಣಿಗಳಿಂದ ವ್ಯಾಪ್ತವಾಗಿರುವ ಆ ಮಹಾರಣ್ಯದಲ್ಲಿ ಹೇಗೆ ತಾನೇ ವಾಸಮಾಡುತ್ತಾನೆ? ಹೆಬ್ಬಾವೇ ಮೊದಲಾದ ಸರ್ಪಗಳಿಂದಲೂ ಸಿಂಹ-ವ್ಯಾಘ್ರಾದಿ ದುಷ್ಟಮೃಗಗಳಿಂದಲೂ ಸಂಸೇವ್ಯಮಾನವಾದ, ಕೃಷ್ಣಸರ್ಪಗಳಿಂದ ಸಮಾಶ್ರಿತವಾದ ಘೋರಾರಣ್ಯದಲ್ಲಿ ವೈದೇಹೀಸಹಿತರಾದ ರಾಮ-ಲಕ್ಷ್ಮಣರು ಹೇಗೆ ತಾನೇ ಜೀವಿಸಿಕೊಂಡಿದ್ದಾರೆ? ಸುಕುಮಾರಿಯಾದ, ಕೋಮಲಶರೀರಳಾದ, ಪಾತಿವ್ರತ್ಯವೆಂಬ ಸ್ತ್ರೀಯೋಗ್ಯವಾದ ತಪಸ್ಸಿನಲ್ಲಿಯೇ ಸರ್ವದಾ ನಿರತಳಾದ ಸೀತಾದೇವಿಯೊಡನೆ ರಾಮ-ಲಕ್ಷ್ಮಣರು ರಥದಿಂದಿಳಿದು ಕಾಲ್ನಡಿಗೆಯಲ್ಲಿಯೇ ಅರಣ್ಯಕ್ಕೆ ಹೇಗೆ ಹೋದರು?

ಸುಮಂತ್ರ! ನೀನೇ ಮಹಾಭಾಗ್ಯಶಾಲಿಯು. ಅಶ್ವಿನೀದೇವತೆಗಳು

ಮಂದರಪರ್ವತವನ್ನು ಹತ್ತಿಹೋಗುವಂತೆ–ಅರಣ್ಯಕ್ಕೆ ಹೋದ ಆ ನನ್ನ ಇಬ್ಬರು ಸುಂದರ ರಾಜಕುಮಾರರನ್ನೂ ನೀನು ಅರಣ್ಯಪ್ರವೇಶಕಾಲದಲ್ಲಿ ನೋಡಿದೆಯಲ್ಲವೇ? ಅವರು ಅರಣ್ಯಕ್ಕೆ ಹೋಗುವ ಪರ್ಯಂತವೂ ಅವರನ್ನು ನೋಡುವ ಭಾಗ್ಯವೂ ನಿನಗೆ ಸಿಕ್ಕಿದುದರಿಂದ ನೀನೇ ಧನ್ಯನು. ಅರಣ್ಯವನ್ನು ತಲುಪಿದನಂತರ ರಾಮನೇನೆಂದು ಹೇಳಿದನು? ಸೀತಾದೇವಿಯೂ ಲಕ್ಷ್ಮಣನೂ ಏನೆಂದು ಹೇಳಿದರು? ರಾಮನು ಯಾವ ಸ್ಥಳದಲ್ಲಿ ಕುಳಿತುಕೊಂಡನೆಂಬುದನ್ನೂ, ಯಾವ-ಯಾವ ಸ್ಥಳದಲ್ಲಿ ಮಲಗಿದ್ದನೆಂಬುದನ್ನೂ, ಅವನಾಡಿದ ಮಾತುಗಳನ್ನೂ, ಅವನು ಮಾಡಿದ ಊಟವನ್ನೂ ವಿವರಿಸಿ ಹೇಳು. ಯಯಾತಿಯು ಸಾಧುಗಳ ಮಧ್ಯದಲ್ಲಿ ಬಿದ್ದು ದುಃಖವನ್ನು ಹೋಗಲಾಡಿಸಿಕೊಂಡಂತೆ–ಶ್ರೀರಾಮನಿಗೆ ಸಂಬಂಧಿಸಿದ ವಾರ್ತೆಗಳನ್ನು ಕೇಳಿ ದುಃಖವನ್ನು ದೂರಮಾಡಿ ಇನ್ನೂ ಸ್ವಲ್ಪಕಾಲ ಜೀವಿಸಿರಲು ಪ್ರಯತ್ನಿಸುವೆನು."*

ನರೇಂದ್ರನಾದ ದಶರಥನು ಶ್ರೀರಾಮನ ಕಥೆಯನ್ನು ಕೀರ್ತನ ಮಾಡುವಂತೆ ಸುಮಂತ್ರನಿಗೆ ಹೇಳಲು ಸುಮಂತ್ರನು ಶ್ರೀರಾಮನು ಹೇಳಿದ್ದ ಸಂದೇಶವನ್ನು ದಶರಥನಿಗೆ ಹೇಳಲು ಉಪಕ್ರಮಿಸಿದನು. ಶ್ರೀರಾಮನ ಸ್ಥಿತಿಯನ್ನು ಬಾರಿ-ಬಾರಿಗೂ ನೆನೆಯುತ್ತಿದ್ದ ಸುಮಂತ್ರನಿಗೆ ದುಃಖವನ್ನು ತಡೆದುಕೊಳ್ಳಲಾಗಲಿಲ್ಲ. ಬಿಕ್ಕಿ-ಬಿಕ್ಕಿ ಅಳುತ್ತಿದ್ದನು. ಸರಿಯಾಗಿ ಮಾತೂ ಹೊರಡುತ್ತಿರಲಿಲ್ಲ. ಗದ್ಗದಧ್ವನಿಯಿಂದಲೇ ಅಸ್ಪಷ್ಟವಾಗಿ ಮಾತನಾಡುತ್ತಿದ್ದನು:

"ಮಹಾರಾಜ! ರಾಘವನು ಕೈಮುಗಿದುಕೊಂಡು ನಿನ್ನನ್ನು ಮನಸ್ಸಿ

---

*ಯಯಾತಿಯ ಪುಣ್ಯವು ಮುಗಿದ ಬಳಿಕ ಇಂದ್ರನು ಯಯಾತಿಯನ್ನು ಸ್ವರ್ಗಲೋಕದಿಂದ ಭೂಲೋಕಕ್ಕೆ ತಳ್ಳಿಬಿಟ್ಟನು. ಆ ಸಮಯದಲ್ಲಿ ಯಯಾತಿಯು ಭೂಲೋಕದಲ್ಲಿರುವ ಸಾಧುಗಳ ಮಧ್ಯದಲ್ಲಿ ತನ್ನನ್ನು ಬೀಳಿಸುವಂತೆ ಇಂದ್ರನನ್ನು ಕೇಳಿಕೊಂಡನು. ಹಾಗೆ ಬಿದ್ದ ಯಯಾತಿಯು ಸಾಧುಗಳ (ಅಷ್ಟಕಾದಿಗಳ) ಸಹವಾಸದಿಂದಾಗಿ ಪರಮಪದವನ್ನು ಪುನಃ ಸೇರಿದನು. ಸತ್ಪುರುಷರ ಸಹವಾಸವೆಂದರೆ ಅಂತಹ ಮಹತ್ತ್ವಪೂರಿತವಾದುದು. ರಾಮಚರಿತ್ರಕೀರ್ತನವೂ ಸಹ ಸಾಧುಗಳ ಸಹವಾಸದಷ್ಟೇ ಮಹತ್ತ್ವಪೂರಿತವಾದುದು. ಅಂದರೆ ಸಾಧುಗಳ ಸಹವಾಸವು ಯಯಾತಿಗೆ ಪರಮಪದವು ಸಿಕ್ಕಲು ಸಾಧನವಾದಂತೆ ಅಂತ್ಯಕಾಲದಲ್ಲಿ ರಾಮಚರಿತ್ರಶ್ರವಣವೂ ದಶರಥನಿಗೆ ಸದ್ಗತಿಪ್ರದಾಯಕವಾಗುವುದು.

ನಿಂದಲೇ ಧ್ಯಾನಿಸಿ ನಿನಗೆ ನಮಸ್ಕರಿಸಿ ಧರ್ಮವನ್ನೇ ಪ್ರಧಾನವನ್ನಾಗಿಟ್ಟು ಕೊಂಡು ಧರ್ಮಾನುಗುಣವಾದ ಈ ಮಾತುಗಳನ್ನು ಹೇಳಿದನು:

"ಸೂತ! ನನ್ನ ಮಾತಿನಂತೆ ನೀನು–ಧರ್ಮನಿಷ್ಠನೆಂದು ಪ್ರಸಿದ್ಧನಾಗಿರುವ, ತಲೆಬಾಗಿ ನಮಸ್ಕರಿಸಲು ಯೋಗ್ಯನಾದ, ಮಹಾತ್ಮನಾದ ನನ್ನ ತಂದೆಯ ಎರಡು ಕಾಲುಗಳನ್ನೂ ಮುಟ್ಟಿ ನನ್ನ ಪರವಾಗಿ ಪುನಃ ಪುನಃ ನಮಸ್ಕರಿಸು. ನನ್ನ ಮಾತಿನಂತೆ ಅಂತಃಪುರದಲ್ಲಿರುವ ಸಕಲಜನರ ಯೋಗ-ಕ್ಷೇಮಗಳನ್ನೂ ನನ್ನ ಪರವಾಗಿ ವಿಚಾರಿಸು. ನಮ್ಮ ಯೋಗ-ಕ್ಷೇಮಗಳನ್ನೂ ಅವರಿಗೆ ತಿಳಿಸು. ಯಥಾಯೋಗ್ಯವಾಗಿ ಅವರಿಗೆ ನನ್ನ ಅಭಿವಾದನಗಳನ್ನು ತಿಳಿಸು. ನನ್ನ ತಾಯಿಯನ್ನೂ ಸಮೀಪಿಸಿ ನನ್ನ ಪರವಾಗಿ ಅವಳಿಗೆ ಅಭಿವಾದನಮಾಡಿ ಅವಳ ಯೋಗ-ಕ್ಷೇಮಾದಿಗಳನ್ನು ವಿಚಾರಿಸಿ ಧರ್ಮದ ವಿಷಯದಲ್ಲಿ ಅಪ್ರಮತ್ತತೆಯಿಂದ ಇರಬೇಕೆಂಬು ದನ್ನೂ ತಿಳಿಸಿ ಈ ಮಾತನ್ನೂ ಅವಳಿಗೆ ಹೇಳು.

ಧರ್ಮನಿತ್ಯಾ ಯಥಾಕಾಲಮಗ್ನ್ಯಾಗಾರಪರಾ ಭವ ।
ದೇವಿ ದೇವಸ್ಯ ಪಾದೌ ಚ ದೇವವತ್ಪರಿಪಾಲಯ ॥೧೮॥

"ದೇವಿ! ನೀನು ನಿತ್ಯವೂ ಧರ್ಮದಲ್ಲಿಯೇ ನಿರತಳಾಗಿರುತ್ತಾ ಆಯಾ ಕಾಲದಲ್ಲಿ ಮಾಡಬೇಕಾದ ಹೋಮಾದಿಗಳನ್ನು ಯಥಾವಿಧಿಯಾಗಿ ಮಾಡು. ಹೋಮಾಗಾರದ ರಕ್ಷಕಳಾಗಿರು. ದೇವತೆಗಳನ್ನು ಸೇವಿಸುವ ರೀತಿಯಲ್ಲಿಯೇ ಪತಿದೇವನ ಪಾದಗಳನ್ನೂ ಅನವರತವೂ ಸೇವಿಸುತ್ತಿರು.

ಅಭಿಮಾನಂ ಚ ಮಾನಂ ಚ ತ್ಯಕ್ತ್ವಾ ವರ್ತಸ್ವ ಮಾತೃಷು ।
ಅನುರಾಜಾನಮಾರ್ಯಾಂ ಚ ಕೈಕೇಯೀಮಮ್ಬ ಕಾರಯ ॥೧೯॥

ಶ್ರೇಷ್ಠಕುಲಪ್ರಸೂತಳೆಂಬ ಅಹಂಕಾರವನ್ನೂ ಪಟ್ಟದರಾಣಿಯೆಂಬ ಅಭಿಮಾನವನ್ನೂ ತೊರೆದುಬಿಡು. ಇವೆರಡನ್ನೂ ತೊರೆದು ನೀನು ನಿನ್ನ ಸವತಿಯರಲ್ಲಿ ಬೆರೆಯಬೇಕು. ಅವರೊಡನೆ ಸಹಬಾಳ್ವೆಯನ್ನು ನಡೆಸಬೇಕು. ಆರ್ಯೆಯಾದ ಕೈಕೇಯಿಯನ್ನೂ ಮತ್ತು ರಾಜನನ್ನೂ ಒಂದೇ ವಿಧವಾದ

ಮರ್ಯಾದೆಯಿಂದ ಕಾಣಬೇಕು. (ಇಬ್ಬರನ್ನೂ ಯಾವ ಕಾರಣದಿಂದಲೂ ತಿರಸ್ಕಾರಭಾವದಿಂದ ಕಾಣಬಾರದು)*

ಕುಮಾರೇ ಭರತೇ ವೃತ್ತಿರ್ವರ್ತಿತವ್ಯಾ ಚ ರಾಜವತ್ ।
ಅರ್ಥಜ್ಯೇಷ್ಠಾ ಹಿ ರಾಜಾನೋ ರಾಜಧರ್ಮಮನುಸ್ಮರ ॥೨೦॥

ಪಟ್ಟಾಭಿಷಿಕ್ತನಾಗುವ ಭರತಕುಮಾರನನ್ನು ರಾಜನನ್ನು ಕಾಣುವಂತೆಯೇ ಗೌರವದಿಂದ ಕಾಣಬೇಕು. ರಾಜನ ಅನೇಕ ಮಕ್ಕಳಲ್ಲಿ ಯಾವನು ರಾಜ್ಯಸಿಂಹಾಸನದಲ್ಲಿ ಅಭಿಷಿಕ್ತನಾಗುವನೋ–ಅವನೇ ರಾಜನಾಗುತ್ತಾನೆ. ಅಭಿಷಿಕ್ತನಾಗುವವನು ಹಿರಿಯನೇ ಆಗಬೇಕೆಂಬ ನಿಯಮವೇನೂ ಇಲ್ಲ. ಕನಿಷ್ಠನು ಅಭಿಷಿಕ್ತನಾದರೂ ಅವನಿಗೆ ರಾಜನಿಗೆ ಸಲ್ಲಬೇಕಾದ ಸಕಲರಾಜಮರ್ಯಾದೆಗಳೂ ಸಲ್ಲಲೇಬೇಕು–ಎಂಬ ರಾಜಧರ್ಮವನ್ನು ಸ್ಮರಿಸಿ ಭರತನನ್ನು ರಾಜನಂತೆಯೇ ಗೌರವಿಸುವುದು ಯುಕ್ತವಾಗಿದೆ."[1]

ಮಹಾರಾಜ! ಶ್ರೀರಾಮನು ತಾಯಿಗೆ ಹೀಗೆ ಸಂದೇಶವನ್ನು ನೀಡಿದನಂತರ ಭರತನಿಗೆ ನೀಡಿರುವ ಸಂದೇಶವು ಹೀಗಿದೆ. ಸುಮಂತ್ರ! ನನ್ನ

---

*ಅಭಿಮಾನಃ = ಗರ್ವ, ಮಾನಃ=ಮಾನಸಿಕ ಔನ್ನತ್ಯ. "ಗರ್ವೋಽಭಿಮಾನೋಽಹಂಕಾರೋ ಮಾನಶ್ಚಿತ್ತಸಮುನ್ನತಿಃ" ಅಮರಃ ಇಲ್ಲಿ ರಾಮನು ಮಾನಾಭಿಮಾನಗಳೆರಡನ್ನೂ ತೊರೆಯಬೇಕೆಂದು ತಾಯಿಗೆ ಹೇಳಿಕಳುಹಿಸಿದ್ದಾನೆ. ಮಾನವನಿಗೆ ಈ ಎರಡನ್ನೂ ತೊರೆದು ಬಾಳುವುದು ಬಹಳ ಕಷ್ಟಸಾಧ್ಯವಾದುದು. ಆಳಿಗಾಗಲೀ, ಅರಸನಿಗಾಗಲೀ ಮಾನಾಭಿಮಾನಗಳೆಂಬುದು ಏಕರೂಪವಾದುದು. ಅರಸರಿಗೆ, ಶ್ರೀಮಂತರಿಗೆ ಮಾತ್ರವೇ ಮಾನಾಭಿಮಾನಗಳಿರುವುದೆಂದು ಭಾವಿಸುವುದು ತಪ್ಪಾಗುತ್ತದೆ. ಮಾನವಸಾಮಾನ್ಯರಿಗೂ ಈ ಮಾನಾಭಿಮಾನಗಳು ಇದ್ದೇ ಇರುತ್ತವೆ. ಇವೆರಡನ್ನೂ ತೊರೆಯುವವನೇ 'ಸಂಯಮೀ' ಎನಿಸಿಕೊಳ್ಳುತ್ತಾನೆ.

[1] ಅರ್ಥಜ್ಯೇಷ್ಠಾ ಹಿ ರಾಜಾನಾಃ–ರಾಜರು ಅಪಾರವಾದ ಬೊಕ್ಕಸವನ್ನು (ರಾಜ್ಯ ವೆಂಬ ಅರ್ಥವನ್ನು) ಹೊಂದಿರುವುದರಿಂದ ಜ್ಯೇಷ್ಠರು ಅಥವಾ ಹಿರಯರೆನ್ನಿಸಿಕೊಳ್ಳುತ್ತಾರೆ. ಅಂತಹವರು ವಯಸ್ಸಿನಲ್ಲಿ ಚಿಕ್ಕವರಾದರೂ ಅವರನ್ನು ಗೌರವಿಸಬೇಕಾದುದು ರಾಜಧರ್ಮ.

ಪರವಾಗಿ ನೀನು ಭರತನ ಯೋಗ-ಕ್ಷೇಮಗಳನ್ನು ವಿಚಾರಿಸು. ಅನಂತರ ನಾನು ಹೇಳುವ ಈ ಮಾತುಗಳನ್ನು ಅವನಿಗೆ ಹೇಳು:

ಸರ್ವಾಸ್ವೇವ ಯಥಾನ್ಯಾಯಂ ವೃತ್ತಿಂ ವರ್ತಸ್ವ ಮಾತೃಷು ॥೨೧॥

'ನಿನ್ನ ಎಲ್ಲ ತಾಯಂದಿರ ವಿಷಯದಲ್ಲಿಯೂ ನ್ಯಾಯೋಚಿತವಾದ ರೀತಿಯಲ್ಲಿ ವ್ಯವಹರಿಸು.

ಪಿತರಂ ಯೌವರಾಜ್ಯಸ್ಥೋ ರಾಜ್ಯಸ್ಥಮನುಪಾಲಯ ॥೨೨॥

ನೀನು ಯುವರಾಜನಾಗಿದ್ದುಕೊಂಡು ಮಹಾರಾಜನಾದ ದಶರಥರಾಜನನ್ನು ಪರಿಪಾಲಿಸು.

ಅತಿಕ್ರಾನ್ತವಯಾ ರಾಜಾ ಮಾ ಸ್ಮೈನಂ ವ್ಯವರೋರುಧಃ ।
ಕುಮಾರರಾಜ್ಯೇ ಜೀವ ತ್ವಂ ತಸ್ಯೈವಾಜ್ಞಾಪ್ರವರ್ತನಾತ್ ॥೨೩॥

ರಾಜನು ಈಗಾಗಲೇ ವೃದ್ಧನಾಗಿದ್ದಾನೆ. ಅವನ ಮಾತನ್ನು ಮೀರಿ ನಡೆಯಬೇಡ. ಅವನ ಆಜ್ಞೆಯನ್ನೇ ಪರಿಪಾಲಿಸುತ್ತಾ ಯುವರಾಜನಾಗಿ ನಡೆದುಕೊ.'

ಅಬ್ರವೀಚ್ಚಾಪಿ ಮಾಂ ಭೂಯೋ ಭೃಶಮಶ್ರೂಣಿ ವರ್ತಯನ್ ।

ಮಹಾರಾಜ! ಮುಂದಿನ ಮಾತುಗಳನ್ನು ಹೇಳುವಾಗ ರಾಮನ ಕಣ್ಣುಗಳಲ್ಲಿ ಧಾರಾಕಾರವಾಗಿ ಕಣ್ಣೀರು ಸುರಿಯುತ್ತಿದ್ದಿತು.

ಮಾತೇವ ಮಮ ಮಾತಾ ತೇ ದ್ರಷ್ಟವ್ಯಾ ಪುತ್ರಗರ್ಧಿನೀ ॥೨೪॥

'ಭರತ! ನೀನು ನಿನ್ನ ತಾಯಿಯನ್ನು ಎಷ್ಟು ಆದರ-ಗೌರವಗಳಿಂದ ಕಾಣುವೆಯೋ–ಹಾಗೆಯೇ ಪುತ್ರಪ್ರಿಯಳಾದ ನನ್ನ ತಾಯಿಯನ್ನೂ ಪ್ರೀತಿಯಿಂದ ಕಾಣು.'

ಮಹಾರಾಜ! ಹೀಗೆ ಹೇಳುತ್ತಿರುವಾಗಲೇ ಶ್ರೀರಾಮನು ಬಿಕ್ಕಿ-ಬಿಕ್ಕಿ ಅಳತೊಡಗಿದನು. ಕಣ್ಣೀರು ಧಾರಾಕಾರವಾಗಿ ಹರಿಯತೊಡಗಿತು. ಬಾಯಿಂದ ಸ್ಪಷ್ಟವಾಗಿ ಶಬ್ದಗಳೇ ಹೊರಡುತ್ತಿರಲಿಲ್ಲ. ಕಂಠವು ಗದ್ಗದಿತವಾಗಿದ್ದಿತು. ರಾಮನು ತಾಯಿಯನ್ನು ನೆನೆ-ನೆನೆದು ಕಣ್ಣೀರಿಡುತ್ತಿದ್ದುದನ್ನು ಕಂಡು ಲಕ್ಷ್ಮಣನಿಗೆ ತಡೆಯಲಾಗದಷ್ಟು ಕೋಪವು ಉಕ್ಕೇರಿ ಹೇಳಿದನು:

ಕೇನಾಯಮಪರಾಧೇನ ರಾಜಪುತ್ರೋ ವಿವಾಸಿತಃ ।
ರಾಜ್ಞಾ ತು ಖಲು ಕೈಕೇಯ್ಯಾ ಲಘು ತ್ವಾಶ್ರಿತ್ಯ ಶಾಸನಮ್ ।
ಕೃತಂ ಕಾರ್ಯಮಕಾರ್ಯಂ ವಾ ವಯಂ ಯೇನಾಭಿಪೀಡಿತಾಃ ॥೨೭॥

ಯದಿ ಪ್ರವ್ರಾಜಿತೋ ರಾಮೋ ಲೋಭಕಾರಣಕಾರಿತಮ್ ।
ವರದಾನನಿಮಿತ್ತಂ ವಾ ಸರ್ವಥಾ ದುಷ್ಕೃತಂ ಕೃತಮ್ ॥೨೮॥

"ಸುಮಂತ್ರ! ರಾಜಪುತ್ರನಾದ ಈ ರಾಮನನ್ನು ಹೊರದೂಡಿದ್ದು ಅವನು ಮಾಡಿದ ಯಾವ ಅಪರಾಧಕ್ಕಾಗಿ? ರಾಜನು ಕೈಕೇಯಿಯ ಅತಿತುಚ್ಛವಾದ ಆದೇಶವನ್ನೇ ಅವಲಂಬಿಸಿ ಮಾಡಿದ ಈ ಆಕಾರ್ಯವು ಕೆಲವರ ದೃಷ್ಟಿಯಿಂದ ಸಾಧುವಾಗಿಯೇ ಇರಬಹುದು. ಮತ್ತೆ ಕೆಲವರ ದೃಷ್ಟಿಯಿಂದ ಅಸಾಧುವಾಗಿಯೂ ಇರಬಹುದು. ಆದರೆ ಈ ಮಧ್ಯದಲ್ಲಿ ಪೀಡೆಗೆ ಗುರಿಯಾಗಿರುವವರು ನಿರಪರಾಧಿಗಳಾದ ನಾವು. ರಾಜ್ಯಲೋಭದ ಕಾರಣದಿಂದ ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿಸಿದ್ದೂ ದುಷ್ಕಾರ್ಯವೇ ಆಗಿದೆ. ವರದಾನದ ನಿಮಿತ್ತವಾಗಿ ಕಾಡಿಗೆ ಕಳುಹಿಸಿದ್ದೂ ಸರ್ವಥಾ ದುಷ್ಕಾರ್ಯವೇ ಆಗಿದೆ. (ರಾಜ್ಯದ ಲೋಭದಿಂದಲೂ ವರದಾನದ ಕಾರಣದಿಂದಲೂ ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿಸುವ ಕಾರಣವಿರಲಿಲ್ಲ. ಭರತನಿಗೆ ಪಟ್ಟಗಟ್ಟಬಹುದಾಗಿದ್ದಿತು. ಪಟ್ಟಾಭಿಷೇಕಮಾಡುವುದಕ್ಕೆ ಬದಲಾಗಿ ಕಾಡಿಗಟ್ಟಿದ್ದು ಅತ್ಯಂತ ಹೀನವಾದ ದುಷ್ಕಾರ್ಯವಾಗಿದೆ.)

ಇದಂ ತಾವದ್ಯಥಾಕಾಮಮೀಶ್ವರಸ್ಯ ಕೃತೇ ಕೃತಮ್ ।
ರಾಮಸ್ಯ ತು ಪರಿತ್ಯಾಗೇ ನ ಹೇತುಮುಪಲಕ್ಷಯೇ ॥೨೯॥

ಭರತನಿಗೆ ಪಟ್ಟಗಟ್ಟಬೇಕೆಂಬುದು ರಾಜನ ಇಚ್ಛೆಯಾಗಿರಲಿ ಅಥವಾ ದೈವದ ಪ್ರೇರಣೆಯಿಂದಲೇ ಅವನು ಹಾಗೆ ಹೇಳಿರಲಿ–ಅದು ನನಗೆ ಮುಖ್ಯವಲ್ಲ. ಭರತನಿಗೆ ಪಟ್ಟಗಟ್ಟಬೇಕೆಂಬ ಕಾರಣದಿಂದ ಶ್ರೀರಾಮನನ್ನೇಕೆ ಪರಿತ್ಯಾಗಮಾಡಬೇಕಾಗಿತ್ತೆಂಬುದು ನನಗೆ ತಿಳಿಯುತ್ತಿಲ್ಲ.

ಅಸಮೀಕ್ಷ್ಯ ಸಮಾರಬ್ಧಂ ವಿರುದ್ಧಂ ಬುದ್ಧಿಲಾಘವಾತ್ ।
ಜನಯಿಷ್ಯತಿ ಸಂಕ್ರೋಶಂ ರಾಘವಸ್ಯ ವಿವಾಸನಮ್ ॥೩೦॥

ಅಲ್ಪಬುದ್ಧಿಯ ಕಾರಣದಿಂದ ಯಾವುದನ್ನೂ ಸರಿಯಾಗಿ ವಿವೇಚಿಸದೇ ಧರ್ಮಕ್ಕೆ ವಿರುದ್ಧವಾಗಿ ಈ ಕಾರ್ಯವನ್ನು ಮಾಡಲಾಗಿದೆ. ಈ ಕಾರಣದಿಂದ ಶ್ರೀರಾಮನನ್ನು ಕಾಡಿಗಟ್ಟಿದ್ದು ಸ್ವಾಭಾವಿಕವಾಗಿಯೇ ಎಲ್ಲರ ಹೃದಯಗಳಲ್ಲಿಯೂ ದುಃಖವನ್ನು ಹುಟ್ಟಿಸುವುದಾಗಿದೆ.

ಅಹಂ ತಾವನ್ಮಹಾರಾಜೇ ಪಿತೃತ್ವಂ ನೋಪಲಕ್ಷಯೇ ।
ಭ್ರಾತಾ ಭರ್ತಾ ಚ ಬನ್ಧುಶ್ಚ ಪಿತಾ ಚ ಮಮ ರಾಘವಃ ॥೩೧॥

ಸುಮಂತ್ರ! ತಂದೆಯಲ್ಲಿರಬೇಕಾದ ಯಾವ ಗುಣಗಳನ್ನೂ ನಾನು ದಶರಥಮಹಾರಾಜನಲ್ಲಿ ಕಾಣುತ್ತಿಲ್ಲ. ನನಗಾದರೋ ಅಣ್ಣ, ಒಡೆಯ, ಬಂಧು, ತಂದೆ–ಎಲ್ಲವೂ ರಾಘವನೇ ಆಗಿದ್ದಾನೆ.

ಸರ್ವಲೋಕಪ್ರಿಯಂ ತ್ಯಕ್ತ್ವಾ ಸರ್ವಲೋಕಹಿತೇ ರತಮ್ ।
ಸರ್ವಲೋಕೋಽನುರಜ್ಯೇತ ಕಥಂ ತ್ವಾನೇನ ಕರ್ಮಣಾ ॥೩೨॥

ಸಕಲಪ್ರಜೆಗಳ ಹಿತದಲ್ಲಿಯೇ ಸರ್ವದಾ ನಿರತನಾಗಿ ಸಮಸ್ತ ಪ್ರಜೆಗಳಿಗೂ ಅತ್ಯಂತಪ್ರಿಯನಾಗಿದ್ದ ಶ್ರೀರಾಮನನ್ನು ಪರಿತ್ಯಜಿಸಿದ ಈ ಕಾರ್ಯದಿಂದ ಪ್ರಜೆಗಳು ರಾಜನ ವಿಷಯದಲ್ಲಿ ಹೇಗೆ ತಾನೇ ಅನುರಾಗದಿಂದಿರುವರು? ಸಕಲಪ್ರಜೆಗಳಿಗೂ ಹರ್ಷದಾಯಕನಾದ, ಧಾರ್ಮಿಕನಾದ ಶ್ರೀರಾಮನನ್ನು ಕಾಡಿಗೆ ಕಳುಹಿಸಿ ಸಕಲಪ್ರಜೆಗಳ ವಿರೋಧಕ್ಕೂ ಪಾತ್ರನಾಗಿರುವವನು ರಾಜನು ಹೇಗಾದಾನು?"

ಲಕ್ಷ್ಮಣನು ಹೀಗೆ ಹೇಳಿದನಂತರ ತಪಸ್ವಿನಿಯಾದ (ಪತಿವ್ರತೆ ಯಾದ) ಜಾನಕಿಯು ಬಾರಿ-ಬಾರಿಗೂ ನಿಟ್ಟುಸಿರುಬಿಡುತ್ತಾ ಭೂತದಿಂದ ಪೀಡಿತವಾದ ಮನಸ್ಸಿನಿಂದ ಕೂಡಿರುವಳೋ ಎಂಬಂತೆ ವಿಸ್ಮಯವನ್ನು ಮುಖ ದಲ್ಲಿ ಸೂಚಿಸುತ್ತಾ ಸ್ತಬ್ಧಳಾಗಿ ನಿಂತಿದ್ದಳು. ಸೀತೆಯು ವ್ಯಸನವೇನೆಂಬು ದನ್ನೇ ಇದುವರೆಗೂ ತಿಳಿದಿರಲಿಲ್ಲ. ಪತಿಗೆ ಪ್ರಾಪ್ತವಾದ ವನವಾಸ ದುಃಖದಿಂದ ಕಂಗೆಟ್ಟು ರೋದನಮಾಡುತ್ತಿದ್ದಳೇ ಹೊರತು ನನ್ನೊಡನೆ ಯಾವ ಮಾತನ್ನೂ ಅವಳು ಹೇಳಲಿಲ್ಲ. ಬಾಡಿಹೋಗಿದ್ದ ಮುಖದಿಂದ ಪತಿಯ ಮುಖಾರವಿಂದವನ್ನು ಬಾರಿ-ಬಾರಿಗೂ ನೋಡುತ್ತಿದ್ದ ಸೀತೆಯು ಅಯೋಧ್ಯೆಯ ಕಡೆಗೆ ಪ್ರಯಾಣಹೊರಟ ನನ್ನನ್ನು ನೋಡಿದೊಡನೆಯೇ

ಬಹಳವಾಗಿ ಕಣ್ಣೀರುಸುರಿಸಿದಳು. ಲಕ್ಷ್ಮಣನ ಬಾಹುಬಲದಿಂದ ಸಂರಕ್ಷಿಸಲ್ಪಡುತ್ತಿದ್ದ ಶ್ರೀರಾಮನು ಕಂಬನಿದುಂಬಿದ ಮುಖದಿಂದ ಕೂಡಿ ನಾನು ಹೊರಡುವ ವೇಳೆಯಲ್ಲಿ ಕೈಮುಗಿದುಕೊಂಡು ನಿಂತಿದ್ದನು. ತಪಸ್ವಿನಿಯಾದ ಸೀತೆಯು ಕಣ್ಣೀರುಸುರಿಸುತ್ತಾ ಒಮ್ಮೆ ನನ್ನನ್ನೂ ಮತ್ತೊಮ್ಮೆ ರಾಜರಥವನ್ನೂ ನೋಡುತ್ತಿದ್ದಳು."*

ಐವತ್ತೆಂಟನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೫೯ನೆಯ ಸರ್ಗ

ಶ್ರೀರಾಮನ ಅರಣ್ಯವಾಸದಿಂದ ಅಯೋಧ್ಯಾಪಟ್ಟಣದಲ್ಲಾಗಿರುವ ದುರವಸ್ಥೆಯನ್ನು ಸುಮಂತ್ರನು ರಾಜನಿಗೆ ವಿವರಿಸಿದುದು

ಸುಮಂತ್ರನು ಹೇಳುತ್ತಾನೆ:

ಇತಿ ಬ್ರುವನ್ತಂ ಸಂದೇಶಂ ಸುಮನ್ತ್ರಂ ಮನ್ತ್ರಿಸತ್ತಮಮ್ ।
ಬ್ರೂಹಿ ಶೇಷಂ ಪುನರಿತಿ ರಾಜಾ ವಚನಮಬ್ರವೀತ್ ॥೧॥

ಇಷ್ಟು ಹೇಳಿ ಸುಮಂತ್ರನು ವಿರಮಿಸಿದಾಗ ದಶರಥನು ಉಳಿದುದನ್ನೂ ವಿವರವಾಗಿ ತಿಳಿಸುವಂತೆ ಹೇಳಿದನು. ಬಳಿಕ ಸುಮಂತ್ರನು ಪುನಃ ಹೇಳತೊಡಗಿದನು:

"ಮಹಾರಾಜ! ನಾರುಮಡಿಗಳನ್ನುಟ್ಟಿದ್ದ ಶ್ರೀರಾಮ-ಲಕ್ಷ್ಮಣರು ಜಟೆಗಳನ್ನು ಧರಿಸಿ ಗಂಗಾನದಿಯನ್ನು ದಾಟಿ ಪ್ರಯಾಗದ ಕಡೆಗೆ ಹೊರಟರು. ಮುಂದೆ ಲಕ್ಷ್ಮಣನೂ, ಅವನ ಹಿಂದೆ ಸೀತೆಯೂ, ಅವಳ ಹಿಂದೆ ಶ್ರೀರಾಮನೂ ಹೋಗುತ್ತಿದ್ದರು. ಅವರು ಹಾಗೆ ಹೋಗುತ್ತಿರುವುದನ್ನು ನೋಡುತ್ತಾ ಮತ್ತೇನೂ ತೋಚದೇ ರಥದಲ್ಲಿ ಕುಳಿತು ಅಯೋಧ್ಯೆಯ ಕಡೆಗೆ ಹೊರಟೆನು. ಹಾಗೆ ಹೊರಟಾಗ ರಥದ ಕುದುರೆಗಳೂ ನನ್ನ ಸ್ವಾಧೀನಕ್ಕೆ ಸಿಕ್ಕದೇ ಬಿಸಿ-ಬಿಸಿಯಾದ ಕಣ್ಣೀರುಸುರಿಸುತ್ತಾ ಹಿಂದು-ಹಿಂದಕ್ಕೇ ತಿರುಗುತ್ತಿದ್ದುವು. ದಾರಿ ಹಿಡಿದುಹೋಗಲು ಅವುಗಳಿಗೆ ಮನಸ್ಸೇ ಇರಲಿಲ್ಲ. ಅದರಿಂದಾಗಿ

---

*ಸುಮಂತ್ರನು ರಥವನ್ನು ಅಯೋಧ್ಯೆಗೆ ಒಯ್ಯುವುದರಿಂದ ನನ್ನ ಪತಿಯು ಇನ್ನು ಮುಂದೆ ಈ ಘೋರಾರಣ್ಯದಲ್ಲಿ ಕೇವಲ ಪಾದಚಾರಿಯಾಗಿ ಸಂಚರಿಸಬೇಕಲ್ಲಾ! ಎಂಬುದೇ ಸೀತೆಯ ದುಃಖಕ್ಕೆ ಕಾರಣವೆಂದು ವ್ಯಾಖ್ಯಾನಕಾರರೊಬ್ಬರು ಹೇಳಿರುತ್ತಾರೆ.

ನಾನು ಒಡನೆಯೇ ಅಯೋಧ್ಯೆಗೆ ಹಿಂದಿರುಗಲಿಲ್ಲ. ಶ್ರೀರಾಮನು ಪುನಃ ನನ್ನನ್ನು ಕರೆದಾನೆಂಬ ಆಕಾಂಕ್ಷೆಯಿಂದ ಅನೇಕ (ಮೂರು) ದಿವಸಗಳನ್ನು ನಾನು ಗುಹನೊಡನೆ ಗಂಗಾತೀರದಲ್ಲಿಯೇ ಕಳೆದೆನು.* ಆದರೆ ಶ್ರೀರಾಮನು ಪುನಃ ನನ್ನನ್ನು ನೋಡಲೇ ಇಲ್ಲ. ಅವನೆಲ್ಲಿಗೆ ಹೋದನೆಂಬುದನ್ನು ಗುಹನ ಚಾರರ ಮೂಲಕವಾಗಿ ತಿಳಿದುಕೊಂಡು ನಾನು ಅಯೋಧ್ಯಾ ಪಟ್ಟಣಕ್ಕೆ ಹಿಂದಿರುಗಲೇಬೇಕಾಯಿತು.

ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿಸಿದುದರಿಂದ ನಿನ್ನ ದೇಶದಲ್ಲಿ ಉಂಟಾಗಿರುವ ಕ್ಷೋಭೆಯನ್ನು ವರ್ಣಿಸಿ ಹೇಳುವೆನು; ಕೇಳು:

ಅಪಿ ವೃಕ್ಷಾಃ ಪರಿಮ್ಲಾನಾಃ ಸಪುಷ್ಪಾಙ್ಕುರಕೋರಕಾಃ ।
ಉಪತಪ್ತೋದಕಾ ನದ್ಯಃ ಪಲ್ವಲಾನಿ ಸರಾಂಸಿ ಚ ।
ಪರಿಶುಷ್ಕಪಲಾಶಾನಿ ವನಾನ್ಯುಪವನಾನಿ ಚ ॥೫॥

ನ ಚ ಸರ್ಪನ್ತಿ ಸತ್ತ್ವಾನಿ ವ್ಯಾಲಾ ನ ಪ್ರಚರನ್ತಿ ಚ ।
ರಾಮಶೋಕಾಭಿಭೂತಂ ತನ್ನಿಷ್ಕೂಜಮಭವದ್ವನಮ್ ॥೬॥

ಮಹಾರಾಜ! ಶ್ರೀರಾಮನ ವಿಯೋಗದಿಂದ ದುಃಖವುಂಟಾಗಿರುವುದು ಮನುಷ್ಯರಿಗೆ ಮಾತ್ರವಲ್ಲ. ಸ್ಥಾವರ-ಜಂಗಮಗಳೂ ಶ್ರೀರಾಮನ ವಿಯೋಗ ದುಃಖವನ್ನು ಅನುಭವಿಸುತ್ತಿರುವುದು ಪ್ರತ್ಯಕ್ಷವಾಗಿ ಕಾಣುತ್ತಿದೆ. ನಿನ್ನ ದೇಶದಲ್ಲಿರುವ ಮರ-ಬಳ್ಳಿಗಳು ಪುಷ್ಪಗಳಿಂದಲೂ, ಚಿಗುರೆಲೆಗಳಿಂದಲೂ, ಮೊಗ್ಗುಗಳಿಂದಲೂ ಸಮಾವೃತವಾಗಿದ್ದರೂ ರಾಮವಿಯೋಗದುಃಖದಿಂದ ಬಾಡಿಹೋಗಿವೆ. ಅವುಗಳಲ್ಲೀಗ ಕಾಂತಿಯೆಂಬುದೇ ಇಲ್ಲ. ನದಿಗಳೂ, ಉಪ ನದಿಗಳೂ ಮತ್ತು ಸರೋವರಗಳೂ ಬತ್ತಿಹೋಗಿವೆ. ವನಗಳ, ಉಪವನ ಗಳ ಮರಗಳ ಎಲೆಗಳೆಲ್ಲಾ ಒಣಗಿಹೋಗಿವೆ. ಅರಣ್ಯದಲ್ಲಿರುವ ಪ್ರಾಣಿಗಳು ಆಹಾರಕ್ಕಾದರೂ ಸಂಚಾರಮಾಡುತ್ತಿಲ್ಲ. ಸರ್ವದಾ ಹರಿದುಹೋಗುವ

---

* ಇಲ್ಲಿ 'ದಿವಸಾನ್ಬಹೂನ್' ಎಂಬ ಪ್ರಯೋಗವಿದೆ. ಈ ಪದಕ್ಕೆ ಬಹುದಿನಗಳೆಂದು ಅರ್ಥಮಾಡಬಹುದಾದರೂ ಕಪಿಞ್ಜಲಾಧಿಕರಣನ್ಯಾಯದಂತೆ ಬಹುವಚನಪ್ರಯೋಗ ದಿಂದ ಮೂರು ದಿನಗಳು ಮಾತ್ರ ಇದ್ದನೆಂದು ಅರ್ಥಮಾಡಬೇಕಾಗಿದೆ–ಎಂಬುದು ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ.

ಸ್ವಭಾವವುಳ್ಳ ಸರ್ಪಗಳೂ ರಾಮವಿಯೋಗದುಃಖದಿಂದ ದೀರ್ಘವಾಗಿ ನಿಟ್ಟುಸಿರುಬಿಡುತ್ತಾ ಕುಳಿತಲ್ಲಿಯೇ ಕುಳಿತಿವೆ. ಯಾವುದೊಂದು ಪಕ್ಷಿಯೂ ಧ್ವನಿಮಾಡುತ್ತಿಲ್ಲ. ಶ್ರೀರಾಮನ ವಿಯೋಗದುಃಖದಿಂದ ವ್ಯಾಪ್ತವಾಗಿರುವ ಅರಣ್ಯವಿಂದು ನಿಶ್ಶಬ್ದವಾಗಿದೆ.

ಲೀನಪುಷ್ಕರಪತ್ರಾಶ್ಚ ನರೇನ್ದ್ರ ಕಲುಷೋದಕಾಃ ।
ಸಂತಪ್ತಪದ್ಮಾಃ ಪದ್ಮಿನ್ಯೋ ಲೀನಮೀನವಿಹಂಗಮಾಃ ॥೭॥

ಜಲಜಾನಿ ಚ ಪುಷ್ಪಾಣಿ ಮಾಲ್ಯಾನಿ ಸ್ಥಲಜಾನಿ ಚ ।
ನಾದ್ಯ ಭಾನ್ತ್ಯಲ್ಪಗನ್ಧೀನಿ ಫಲಾನಿ ಚ ಯಥಾಪುರಮ್ ॥೮॥

ಅತ್ರೋದ್ಯಾನಾನಿ ಶೂನ್ಯಾನಿ ಪ್ರಲೀನವಿಹಗಾನಿ ಚ ।
ನ ಚಾಭಿರಾಮಾನಾರಾಮಾನ್ಪಶ್ಯಾಮಿ ಮನುಜರ್ಷಭ ॥೯॥

ಮಹಾರಾಜ! ಸರೋವರಗಳಲ್ಲಿದ್ದ ಪದ್ಮಪತ್ರಗಳೂ ನೀರಿನಲ್ಲಿಯೇ ಅಡಗಿಹೋಗಿವೆ. ನೀರು ಮಲಿನವಾಗಿದೆ. ಕಮಲದ ಹೂಗಳೂ ಬಾಡಿ ಹೋಗಿವೆ. ಮೀನುಗಳೂ, ಹಂಸ-ಕಾರಂಡವಪಕ್ಷಿಗಳೂ ರಾಮವಿಯೋಗ ದುಃಖದಿಂದ ಕಂಗೆಟ್ಟು ಎಲ್ಲಿಯೋ ಅಡಗಿಕೊಂಡಿವೆ. ನೀರಿನಲ್ಲಿ ಬೆಳೆಯುವ ಕಮಲ-ಕನ್ನೈದಿಲೆಗಳೂ, ಭೂಮಿಯ ಮೇಲೆ ಬೆಳೆಯುವ ಮಾಲಾಯೋಗ್ಯ ವಾದ ಜಾಜೀ-ಚಂಪಕ-ಪುನ್ನಾಗವೇ ಮೊದಲಾದ ಹೂಗಳಲ್ಲಿ ಹಿಂದಿನ ಹಾಗೆ ಹೆಚ್ಚು ವಾಸನೆಯಿಲ್ಲ. ಫಲವೃಕ್ಷಗಳಲ್ಲಿಯೂ ಹಿಂದಿನಂತೆ ಯಥೇಚ್ಛವಾಗಿ ಫಲಗಳು ಸಿಕ್ಕುತ್ತಿಲ್ಲ. ಕ್ರೀಡಾಯೋಗ್ಯವಾದ ಉದ್ಯಾನವನಗಳೂ ಶೂನ್ಯವಾಗಿ ಕಾಣುತ್ತಿವೆ. ಅಲ್ಲಿರುವ ಶುಕ-ಪಿಕಗಳೇ ಮೊದಲಾದ ಪಕ್ಷಿಗಳೂ ರಾಮನಿರ್ಗಮನ ದುಃಖದಿಂದ ಕಂಗೆಟ್ಟು ಗೂಡುಗಳಲ್ಲಿಯೇ ಕುಳಿತಿವೆ. ಕೈದೋಟಗಳೂ ನೋಡಲು ಅಂದವಾಗಿ ಕಾಣುತ್ತಿಲ್ಲ. ಹೀಗೆ ಸ್ಥಾವರ-ಜಂಗಮಪ್ರಾಣಿಗಳೆಲ್ಲವೂ ತಮ್ಮ ದುಃಖವನ್ನು ವ್ಯಕ್ತಪಡಿಸುತ್ತಿವೆ. ಅಯೋಧ್ಯೆಯೊಳಗೆ ಪ್ರವೇಶಿಸಿದ ನನ್ನನ್ನು ಯಾವನೊಬ್ಬ ನಾಗರಿಕನೂ ಅಭಿ ನಂದಿಸಲಿಲ್ಲ. ಸಕಲಜನಪ್ರಿಯನಾದ ಶ್ರೀರಾಮನನ್ನವರು ನನ್ನ ರಥದಲ್ಲಿ ಕಾಣದಿದ್ದುದೇ ಇದಕ್ಕೆ ಕಾರಣ. ಶ್ರೀರಾಮನನ್ನು ಕಾಣುವ ಆಕಾಂಕ್ಷೆಯಿಂದ ಬಂದ ಪ್ರಜೆಗಳು ರಾಜರಥದಲ್ಲಿ ಅವನನ್ನು ಕಾಣದೇ ಹತಾಶರಾಗಿ ಬಾರಿ

ಬಾರಿಗೂ ನಿಟ್ಟುಸಿರುಬಿಡುತ್ತಿದ್ದರು. ರಾಜಮಾರ್ಗದಲ್ಲಿ ಬಂದು ಸೇರಿದ್ದ ಅಯೋಧ್ಯಾಪಟ್ಟಣದ ಜನರು ರಾಮನಿಂದ ವಿಹೀನವಾಗಿದ್ದ ರಾಜರಥವನ್ನು ಕಂಡು ಕಣ್ಣೀರಿನಿಂದ ತುಂಬಿಹೋದ ಮುಖವುಳ್ಳವರಾದರು. ಸೌಧಗಳಲ್ಲಿಯೂ, ಉಪ್ಪರಿಗೆಗಳಲ್ಲಿಯೂ, ಭವನಗಳಲ್ಲಿಯೂ ಕುಳಿತಿದ್ದ ಅಯೋಧ್ಯಾ ಪಟ್ಟಣದ ಸ್ತ್ರೀಯರು ರಾಮನಿಲ್ಲದೇ ರಾಜರಥವು ಬಂದುದನ್ನು ನೋಡಿ ರಾಮನನ್ನು ಕಾಣದ ಶೋಕದಿಂದ ಪೀಡಿತರಾಗಿ ಹಾಹಾಕಾರಗಳನ್ನು ಮಾಡು ತ್ತಿದ್ದರು. 'ಹಾ ರಾಮ! ಹಾ ಲಕ್ಷ್ಮಣ! ಹಾ ಸೀತೆ!'–ಎಂದು ಹೇಳಿಕೊಂಡು ಗೋಳಾಡುತ್ತಿದ್ದರು. ವಿಶಾಲವಾಗಿ, ಕಾಡಿಗೆಯು ಹಚ್ಚಲ್ಪಡದೆ ಕಣ್ಣೀರಿನಿಂದ ತುಂಬಿಹೋಗಿದ್ದ ಕಣ್ಣುಗಳುಳ್ಳವರಾಗಿದ್ದ, ಬಹಳವಾಗಿ ಸಂಕಟಪಡುತ್ತಿದ್ದ ಅಯೋಧ್ಯಾಪಟ್ಟಣದ ಸ್ತ್ರೀಯರು ಒಬ್ಬರು ಮತ್ತೊಬ್ಬರನ್ನು ಶೂನ್ಯವಾದ ದೃಷ್ಟಿಯಿಂದ ನೋಡುತ್ತಾ ಸ್ತಬ್ಧರಾಗಿ ಕುಳಿತಿದ್ದರು. ಕಣ್ಣಿನಲ್ಲಿ ನೀರುತುಂಬಿಕೊಂಡಿದ್ದುದರಿಂದ ಸಮೀಪದಲ್ಲಿದ್ದವರೂ ಅವರಿಗೆ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ.

ನಾಮಿತ್ರಾಣಾಂ ನ ಮಿತ್ರಾಣಾಮುದಾಸೀನಜನಸ್ಯ ಚ ।
ಅಹಮಾರ್ತತಯಾ ಕಿಂಚಿದ್ವಿಶೇಷಮುಪಲಕ್ಷಯೇ ॥೧೪॥

ನಿನ್ನ ಮಿತ್ರರಲ್ಲಿಯೇ ಆಗಲೀ; ಶತ್ರುಗಳಲ್ಲಿಯೇ ಆಗಲೀ; ನಿನ್ನ ವಿಷಯದಲ್ಲಿ ಯಾವ ವಿಧವಾದ ಶತ್ರು-ಮಿತ್ರಭಾವವೂ ಇಲ್ಲದೇ ಉದಾಸೀನತೆಯಿಂದ ಇರುವವರಲ್ಲಿಯೇ ಆಗಲೀ–ಶ್ರೀರಾಮನ ವಿಯೋಗದ ದುಃಖಾನುಭವದಲ್ಲಿ ಯಾವ ವಿಧವಾದ ತಾರತಮ್ಯವನ್ನೂ ನಾನು ಕಾಣುತ್ತಿಲ್ಲ. ನಿನ್ನ ಮಿತ್ರರೂ, ಶತ್ರುಗಳೂ, ಉದಾಸೀನರೂ ರಾಮವಿಯೋಗ ದುಃಖವನ್ನು ತಾರತಮ್ಯವಿಲ್ಲದೇ ಅನುಭವಿಸುತ್ತಿದ್ದಾರೆ. ನಿನ್ನ ಶತ್ರುಗಳು ಕೂಡ ಶ್ರೀರಾಮನು ಕಾಡಿಗೆ ಹೋದುದಕ್ಕಾಗಿ ಸಂತೋಷಪಡುತ್ತಿಲ್ಲ.

ಇಂದು ಅಯೋಧ್ಯಾಪಟ್ಟಣವು ಆನಂದದ ಸುಳಿವೂ ಇಲ್ಲದ ಜನರಿಂದ ತುಂಬಿಹೋಗಿದೆ. ಆನೆ-ಕುದುರೆಗಳು ಬಡಕಲಾಗಿವೆ. ಸತತವಾಗಿ ಕೇಳಿಬರುವ ಆರ್ತಸ್ವರಶ್ರವಣದಿಂದ ಅಯೋಧ್ಯಾಪಟ್ಟಣವೇ ಕಾಂತಿಹೀನವಾಗಿದೆ. ಎಲ್ಲ ಪ್ರಾಣಿಗಳೂ ಸುದೀರ್ಘವಾಗಿ ನಿಟ್ಟುಸಿರುಬಿಡುತ್ತಿವೆ. ಆನಂದರಹಿತವಾಗಿವೆ.

ಇಂತಹ ಸ್ಥಿತಿಯಲ್ಲಿರುವ ಅಯೋಧ್ಯಾಪಟ್ಟಣವು ಶ್ರೀರಾಮನ ಅರಣ್ಯಗಮನ ದಿಂದ ಅತ್ಯಂತ ಕಾತರಳಾಗಿ ಪುತ್ರಹೀನಳಾಗಿರುವ ಕೌಸಲ್ಯಾದೇವಿಯಂತೆಯೇ ನನಗೆ ಕಾಣುತ್ತಿದೆ.”

ಸೂತನ ಮಾತುಗಳನ್ನು ಕೇಳಿ ದೈನ್ಯದಿಂದ ಕೂಡಿದ್ದ ದಶರಥನು ಹೀಗೆಂದನು. ಅವನು ಬಿಕ್ಕಿ-ಬಿಕ್ಕಿ ಅಳುತ್ತಾ ಕಣ್ಣೀರು ಸುರಿಸುತ್ತಿದ್ದುದರಿಂದ ತಡೆದು-ತಡೆದು ಮಾತನಾಡುತ್ತಿದ್ದನು:

“ಸುಮಂತ್ರ! ಪಾಪಕುಲದಲ್ಲಿ ಹುಟ್ಟಿದ ಕೈಕೇಯಿಯು ರಾಮನನ್ನು ಅರಣ್ಯಕ್ಕೆ ಕಳುಹಿಸುವಂತೆ ನನಗೆ ನಿರ್ದೇಶಿಸಿದಳು. ಆ ಸಮಯದಲ್ಲಿ ನಾನು ಮಂತ್ರಾಲೋಚನೆಯಲ್ಲಿ ಕುಶಲರಾದವರೊಡನೆಯಾಗಲೀ, ಅನುಭವಶಾಲಿ ಗಳಾದ ವೃದ್ಧರೊಡನೆಯಾಗಲೀ–ಈ ವಿಷಯವಾಗಿ ಸಮಾಲೋಚನೆಯನ್ನು ಮಾಡಲೇ ಇಲ್ಲ. ಪರಿಸ್ಥಿತಿಯ ಯುಕ್ತಾಯುಕ್ತತೆಯನ್ನು ನನ್ನ ಸ್ನೇಹಿತ ರೊಡನೆಯಾಗಲೀ, ವೇದ-ಶಾಸ್ತ್ರಸಂಪನ್ನರಾದ ಅಮಾತ್ಯರೊಡನೆಯಾಗಲೀ ಮಂತ್ರಾಲೋಚನೆ ಮಾಡಲಿಲ್ಲ. ಸ್ತ್ರೀವ್ಯಾಮೋಹದ ಕಾರಣದಿಂದಾಗಿ ನಾನು ಈ ಅಕಾರ್ಯವನ್ನು ಒಡನೆಯೇ ಮಾಡಿಬಿಟ್ಟೆನು. ಮುಂದೆ ಆಗಬೇಕಾಗಿರುವ ಯಾವುದೋ ಒಂದು ನಿರ್ದಿಷ್ಟವಾದ ಕಾರ್ಯಕ್ಕಾಗಿ ಅಥವಾ ನಮ್ಮ ಕುಲದ ವಿನಾಶಕ್ಕಾಗಿ ದೈವೇಚ್ಛೆಯಿಂದಲೇ ನಮಗೆ ಈ ಸಮಯದಲ್ಲಿ ಈ ಪುತ್ರವಿಯೋಗವ್ಯಸನವು ಪ್ರಾಪ್ತವಾಗಿದೆ. ಸೂತ! ನಿನಗೇನಾದರೂ ಉಪಕಾರವನ್ನು ನಾನು ಈ ಜನ್ಮದಲ್ಲಿ ಮಾಡಿರುವೆನಾದರೆ ಅದಕ್ಕೆ ಪ್ರತಿಯಾಗಿ ನನ್ನನ್ನೀಗಲೇ ಶ್ರೀರಾಮನ ಬಳಿಗೆ ಕರೆದುಕೊಂಡು ಹೋಗು. ನನ್ನ ಪ್ರಾಣಗಳು ಶ್ರೀರಾಮನ ದರ್ಶನಮಾಡಲು ಅವಸರ ಗೊಳಿಸುತ್ತಿವೆ. (ನನ್ನ ಪ್ರಾಣಗಳು ನನ್ನನ್ನು ಬಿಟ್ಟುಹೋಗುವುದರಲ್ಲಿವೆ.)

ಭರತನಿನ್ನೂ ಬಂದು ರಾಜ್ಯಾಧಿಕಾರವನ್ನು ಪಡೆದಿಲ್ಲವಾದ ಕಾರಣ ಈಗಲೂ ನನ್ನ ಆಜ್ಞೆಗೆ ಮಾನ್ಯತೆಯಿರುವುದಾದರೆ–ರಾಘವನನ್ನು ಈಗಲೇ ಅಯೋಧ್ಯೆಗೆ ಕರೆದುಕೊಂಡುಬಾ. ರಾಮನಿಲ್ಲದೇ ನಾನು ಮುಹೂರ್ತ ಕಾಲವಾದರೂ ಜೀವಿಸಿರಲಾರೆನು. “ಶ್ರೀರಾಮನು ಬಹಳ ದೂರ ಹೋಗಿ ಬಿಟ್ಟಿದ್ದಾನೆ; ಅವನನ್ನು ಕರೆತರಲು ಸಾಧ್ಯವಾಗಲಾರದು. ಅಯೋಧ್ಯೆಗೆ

ಹಿಂದಿರುಗಲು ಒಪ್ಪುವನೋ ಇಲ್ಲವೋ"–ಎಂದು ನೀನು ಸಂಶಯಪಡುವುದಾದರೆ–ನನ್ನನ್ನೇ ರಥದಲ್ಲಿ ಕುಳ್ಳಿರಿಸಿಕೊಂಡು ಶೀಘ್ರವಾಗಿ ರಾಮನಿರುವಲ್ಲಿಗೆ ಪ್ರಯಾಣಮಾಡಿ ಅವನಿಗೆ ನನ್ನನ್ನು ತೋರಿಸು. ಈ ಕಾರ್ಯವನ್ನಾದರೂ ಮಾಡಬಹುದಲ್ಲವೇ? ಮಲ್ಲಿಗೆಯ ಮೊಗ್ಗಿನಂತೆ ದುಂಡಾದ ದಂತಪಂಕ್ತಿಯುಳ್ಳ, ಲಕ್ಷ್ಮಣಾಗ್ರಜನಾದ ಆ ನನ್ನ ರಾಮನೆಲ್ಲಿದ್ದಾನೆ? ಶ್ರೀರಾಮ ನಿರುವೆಡೆಗೆ ಹೋಗುವವರೆಗೂ ನಾನು ಜೀವಿಸಿದ್ದರೆ ಸೀತಾಸಮೇತನಾದ ಅವ ನನ್ನು ಚೆನ್ನಾಗಿ ನೋಡುತ್ತೇನೆ. (ಸೀತಾಸಮೇತನಾದ ಶ್ರೀರಾಮನನ್ನು ನೋಡಿದೆನಾದರೆ ನಾನಿನ್ನೂ ಬದುಕಿರಬಹುದು.) ಕೆಂಪಾದ ಕಣ್ಣುಗಳಿಂದ ಕೂಡಿರುವ, ಮಹಾಬಾಹುವಾದ, ಕರ್ಣಕುಂಡಲಗಳಿಂದ ರಹಿತನಾದ ಶ್ರೀರಾಮನನ್ನು ಕಾಣದಿದ್ದರೆ ನಾನು ಖಂಡಿತವಾಗಿಯೂ ಯಮಾಲಯಕ್ಕೆ ಹೋಗಿಬಿಡುತ್ತೇನೆ. ವೃದ್ಧಾಪ್ಯದಲ್ಲಿ ಇಂತಹ ದುರವಸ್ಥೆಯನ್ನು ಹೊಂದಿ ಇಕ್ಷ್ವಾಕುಕುಲಕ್ಕೇ ಆನಂದದಾಯಕನಾದ ಶ್ರೀರಾಮನನ್ನೇ ನಾನು ಕಾಣದವನಾಗಿದ್ದೇನೆ. ಸೂತ! ಇದಕ್ಕಿಂತಲೂ ದುಃಖಕರವಾದುದು ಮತ್ತೇನಿದೆ?"

ಹಾ ರಾಮ ರಾಮಾನುಜ ಹಾ ಹಾ ವೈದೇಹಿ ತಪಸ್ವಿನಿ ।
ನ ಮಾಂ ಜಾನೀತ ದುಃಖೇನ ಮ್ರಿಯಮಾಣಮನಾಥವತ್ ॥೨೭॥

ಹಾ ರಾಮ! ಹಾ ಲಕ್ಷ್ಮಣ! ಹಾ ಸೀತೆ! ನಿಮ್ಮ ವಿರಹದಿಂದ ಉಂಟಾಗಿರುವ ಈ ದುಃಖದಿಂದ ನಾನು ಅನಾಥನಂತೆ ಸಾಯಲಿರುವೆನೆಂಬ ವಿಷಯವು ನಿಮಗೆ ನಿಶ್ಚಯವಾಗಿಯೂ ತಿಳಿಯದು."

ರಾಜನು ಪುತ್ರವಿಯೋಗದ ದಾರುಣವಾದ ದುಃಖದಿಂದ ಬುದ್ಧಿಗೆಟ್ಟವನಾದನು. ಶೋಕಸಾಗರದಲ್ಲಿ ಮುಳುಗಿಹೋಗಿದ್ದನು. ತನ್ನ ದಾಟಲಸಾಧ್ಯವಾದ ಶೋಕಸಾಗರವನ್ನು ಕೌಸಲ್ಯೆಗೆ ಬಣ್ಣಿಸಿ ಹೇಳಿದನು:

"ಕೌಸಲ್ಯೇ! ಶ್ರೀರಾಮನಿಲ್ಲದೇ ನಾನು ಶೋಕಸಾಗರದಲ್ಲಿ ಮುಳುಗಿ ಹೋಗಿದ್ದೇನೆ. ನಾನು ಬದುಕಿರುವವರೆಗೆ ಈ ಶೋಕಸಾಗರದಿಂದ ಪಾರಾಗುವುದು ದುಸ್ಸಾಧ್ಯವೇ ಸರಿ. ಶ್ರೀರಾಮನ ಸಂಬಂಧವಾದ ಶೋಕವೇ ಪರಿಪೂರ್ಣವಾದ ಮಹಾಸಾಗರವಾಗಿದೆ. ಸೀತಾದೇವಿಯ ವಿರಹದಿಂದ ಉಂಟಾಗಿರುವ ಶೋಕವು ಶೋಕಸಾಗರದ ತೀರವಾಗಿದೆ. ಸೀತಾ-ರಾಮರ ವಿಯೋಗದಿಂದ ನಮ್ಮಲ್ಲಿ ಕ್ಷಣ-ಕ್ಷಣಕ್ಕೂ ಹುಟ್ಟುವ ನಿಟ್ಟುಸಿರುಗಳೇ ಶೋಕ

ಸಾಗರದ ಅಲೆಗಳು ಮತ್ತು ಸುಳಿಗಳಾಗಿವೆ. ವಿರಹದುಃಖದಿಂದ ಸಂತಪ್ತರಾದವರು ಸುರಿಸುವ ಕಂಬನಿಯ ಪ್ರವಾಹಗಳೇ ಶೋಕಸಾಗರಕ್ಕೆ ಸೇರುವ ನದಿಗಳಾಗಿವೆ. ದುಃಖದಿಂದ ತಲೆಯಮೇಲಿಟ್ಟುಕೊಳ್ಳುವ ಕೈಗಳೇ ಶೋಕಸಾಗರದ ಮೀನುಗಳು. ನಮ್ಮೆಲ್ಲರ ರೋದನನಿನಾದಗಳೇ ಶೋಕಮಹಾಸಾಗರದ ಮಹಾಗರ್ಜನೆಗಳು. ಅಂತಃಪುರದ ಸ್ತ್ರೀಯರ ಕೆದರಿದ ಕೇಶರಾಶಿಗಳೇ ಶೋಕಸಾಗರದ ಪಾಚಿಯ ರೂಪದಲ್ಲಿದೆ. ದುಷ್ಟೆಯಾದ ಕೈಕೇಯಿಯೇ ಶೋಕಸಾಗರದ ಮಧ್ಯದಲ್ಲಿರುವ ಬಡಬಾನಲ. ನನ್ನ ಕಂಬನಿಯಿಂದಲೇ ಆ ಶೋಕಸಾಗರವು ಹುಟ್ಟಿದೆ. ಕುಬ್ಜೆಯ ಮಾತುಗಳೇ ಆ ಶೋಕಸಾಗರದಲ್ಲಿರುವ ಮೊಸಳೆಗಳು. ನಿರ್ಘೃಣೆಯಾದ ಕೈಕೇಯಿಯು ಕೇಳಿದ ಎರಡು ವರಗಳೇ ಶೋಕಸಾಗರದ ಎಲ್ಲೆಕಟ್ಟುಗಳು. ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿಸಿದುದೇ ಆ ಶೋಕಸಾಗರದ ವಿಸ್ತಾರ. ಇಂತಹ ಮಹಾಸಾಗರದಲ್ಲಿ ನಾನು ಮುಳುಗಿಹೋಗಿದ್ದೇನೆ. ನನ್ನ ಜೀವಿತಕಾಲದಲ್ಲಿ ನಾನು ಇದನ್ನು ದಾಟಲಾರೆನು. ಶ್ರೀರಾಮನನ್ನು ನೋಡುವ ಆಕಾಂಕ್ಷೆಯಿಂದ ಕೂಡಿರುವ ನಾನು ಲಕ್ಷ್ಮಣಸಹಿತನಾದ ಅವನನ್ನು ಹೊಂದಲಾಗದೇ ಇರುವುದು ನಿಶ್ಚಯವಾಗಿಯೂ ಮಹಾಪಾಪದ ಫಲವೇ ಸರಿ."

ಹೀಗೆ ಯಶೋವಂತನಾದ ದಶರಥರಾಜನು ವಿಲಪಿಸುತ್ತಾ ಮೂರ್ಛಿತನಾಗಿ ಹಾಸಿಗೆಯ ಮೇಲೆ ದೊಪ್ಪನೆ ಬಿದ್ದನು. ಶ್ರೀರಾಮನ ವಿಯೋಗದ ಕಾರಣದಿಂದಾಗಿ ಇತರರು ವಿಲಪಿಸುವುದಕ್ಕಿಂತಲೂ ಎರಡುಪಟ್ಟಾಗಿ ಕರುಣಾಜನಕವಾದ ರೀತಿಯಲ್ಲಿ ಗೋಳಾಡುತ್ತಾ ರಾಜನು ಮೂರ್ಛೆಹೊಂದಲಾಗಿ ರಾಜನ ದೈನ್ಯವಾದ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ಕೌಸಲ್ಯೆಯು ಭಯದಿಂದ ವ್ಯಾಕುಲಗೊಂಡಳು.

೫೯ನೆಯ ಸರ್ಗವು ಮುಗಿಯಿತು.

ಕೌಸಲ್ಯೆಯ ವಿಲಾಪ: ಸುಮಂತ್ರನಿಂದ ಸಮಾಧಾನ

ತತೋ ಭೂತೋಪಸೃಷ್ಟೇವ ವೇಪಮಾನಾ ಪುನಃ ಪುನಃ ।
ಧರಣ್ಯಾಂ ಗತಸತ್ತ್ವೇವ ಕೌಸಲ್ಯಾ ಸೂತಮಬ್ರವೀತ್ ॥೧॥

ಅನಂತರ ಬಹುಭೀತಳಾದ ಕೌಸಲ್ಯಾದೇವಿಯು ದೆವ್ವಹಿಡಿದವಳಂತೆಯೂ–ಶಕ್ತಿಹೀನಳಾದವಳಂತೆಯೂ ಭೂಮಿಯ ಮೇಲೆ ಹೊರಳಾಡುತ್ತಾ ಗಡ-ಗಡನೆ ನಡುಗುತ್ತಾ ಸುಮಂತ್ರನಿಗೆ ಹೇಳಿದಳು:

"ಸುಮಂತ್ರ! ನನ್ನ ಪ್ರಿಯಪುತ್ರನಾದ ರಾಮನೆಲ್ಲಿರುವನೋ, ನನ್ನ ಪ್ರೀತಿಯಸೊಸೆಯಾದ ಸೀತೆಯೆಲ್ಲಿರುವಳೋ, ನನ್ನ ಪ್ರಿಯಕುಮಾರನಾದ ಲಕ್ಷ್ಮಣನೆಲ್ಲಿರುವನೋ–ಅಲ್ಲಿಗೆ ನನ್ನನ್ನು ಈಗಲೇ ಕರೆದುಕೊಂಡು ಹೋಗು. ಅವರನ್ನು ಬಿಟ್ಟು ನಾನಿಲ್ಲಿ ಒಂದು ಕ್ಷಣವಾದರೂ ಜೀವಿಸಿರಲು ಉತ್ಸಾಹವುಳ್ಳವಳಾಗಿಲ್ಲ. ರಥವನ್ನು ಈ ಕೂಡಲೇ ಹಿಂದಿರುಗಿಸು. ದಂಡಕಾರಣ್ಯಕ್ಕೆ ನನ್ನನ್ನು ಕರೆದುಕೊಂಡು ಹೋಗು. ನಾನೇನಾದರೂ ಅವರನ್ನು ಅನುಸರಿಸಿ ಹೋಗುವ ಸಾಧ್ಯತೆಯಿಲ್ಲದಿದ್ದರೆ (ನೀನು ಅವರಿರುವೆಡೆಗೆ ನನ್ನನ್ನು ಕರೆದುಕೊಂಡು ಹೋಗದಿದ್ದರೆ)–ಯಮನ ಮನೆಗಾದರೂ ಹೊರಟುಹೋಗುತ್ತೇನೆ. ಇದು ನಿಶ್ಚಯ."

ಸುಮಂತ್ರನಿಗೆ ಕೌಸಲ್ಯಾದೇವಿಯ ಶೋಚನೀಯವಾದ ಸ್ಥಿತಿಯನ್ನು ನೋಡಿ ದುಃಖವನ್ನು ತಡೆದುಕೊಳ್ಳಲು ಸಾಧ್ಯವಾಗಲಿಲ್ಲ. ಬಿಕ್ಕಿ-ಬಿಕ್ಕಿ ಅಳುತ್ತಿದ್ದನು. ಮಾತೂ ಸರಿಯಾಗಿ ಹೊರಬರುತ್ತಿರಲಿಲ್ಲ. ಗದ್ಗದಧ್ವನಿಯಿಂದಲೇ ಕೌಸಲ್ಯೆಯನ್ನು ಸಮಾಧಾನಗೊಳಿಸುತ್ತಾ ಹೇಳಿದನು:

ತ್ಯಜ ಶೋಕಂ ಚ ಮೋಹಂ ಚ ಸಂಭ್ರಮಂ ದುಃಖಜಂ ತಥಾ ।
ವ್ಯವಧೂಯ ಚ ಸಂತಾಪಂ ವನೇ ವತ್ಸ್ಯತಿ ರಾಘವಃ ॥೫॥

"ದೇವಿ! ದುಃಖದಿಂದ ಉಂಟಾಗಿರುವ ಶೋಕವನ್ನೂ ಮೋಹವನ್ನೂ

ಕಳವಳವನ್ನೂ ಬಿಡು. ಶ್ರೀರಾಮನು ಯಾವ ವಿಧವಾದ ತೊಂದರೆಯೂ ಇಲ್ಲದೇ ಅರಣ್ಯದಲ್ಲಿ ವಾಸಿಸುತ್ತಿದ್ದಾನೆ.

ಲಕ್ಷ್ಮಣಶ್ಚಾಪಿ ರಾಮಸ್ಯ ಪಾದೌ ಪರಿಚರನ್ವನೇ ।
ಆರಾಧಯತಿ ಧರ್ಮಜ್ಞಃ ಪರಲೋಕಂ ಜಿತೇನ್ದ್ರಿಯಃ ॥೬॥

ಲಕ್ಷ್ಮಣನ ವಿಷಯವಾಗಿಯೂ ನೀನು ಚಿಂತಿಸಬೇಕಾಗಿಲ್ಲ. ತಾಯಿ! ಮಹಾನುಭಾವನಾದ, ಧರ್ಮಜ್ಞನಾದ, ಜಿತೇಂದ್ರಿಯನಾದ ಲಕ್ಷ್ಮಣನು ಅರಣ್ಯದಲ್ಲಿ ಶ್ರೀರಾಮನ ಪಾದಸೇವೆ ಮಾಡುತ್ತಾ ಉತ್ತಮಲೋಕಪ್ರಾಪ್ತಿಗೆ ಸಾಧನೆಮಾಡುತ್ತಿದ್ದಾನೆ.*

ವಿಜನೇಽಪಿ ವನೇ ಸೀತಾ ವಾಸಂ ಪ್ರಾಪ್ಯ ಗೃಹೇಷ್ವಿವ ।
ವಿಸ್ರಮ್ಭಂ ಲಭತೇಽಭೀತಾ ರಾಮೇ ವಿನ್ಯಸ್ತಮಾನಸಾ ॥೭॥

ಜನರಹಿತವಾದ, ಅರಣ್ಯದಲ್ಲಿನ ಆಶ್ರಮದಲ್ಲಿಯೂ ಸೀತಾದೇವಿಯು ಜನನಿಬಿಡವಾದ ನಗರದಲ್ಲಿರುವ ಅರಮನೆಯಲ್ಲಿದ್ದಂತೆಯೇ ಇದ್ದಾಳೆ. ಶ್ರೀರಾಮನಲ್ಲಿಯೇ ನೆಟ್ಟ ಮನಸ್ಸುಳ್ಳ ಭಯರಹಿತಳಾದ ಆಕೆಯು ಶ್ರೀರಾಮನೊಡನೆ ಪತಿಸುಖವನ್ನು ಸ್ವೇಚ್ಛೆಯಿಂದ ಅನುಭವಿಸುತ್ತಿದ್ದಾಳೆ.

ಕೋಮಲಾಂಗಿಯಾದ ಸೀತಾದೇವಿಯು ಅರಣ್ಯದಲ್ಲಿ ಪ್ರವಾಸ ಮಾಡುವಾಗ ಸ್ವಲ್ಪವಾದರೂ ದುಃಖಗೊಂಡವಳಂತೆ ಕಾಣುತ್ತಿರಲಿಲ್ಲ.

---

*ಆರಾಧಯತಿ=ಸಾಧಯತಿ, ಸಾಧಿಸುತ್ತಾನೆ. 'ರಾಧ-ಸಾಧಸಂಸಿದ್ಧೌ' ಎಂಬ ಧಾತ್ವರ್ಥದಿಂದ ಆರಾಧಯತಿ ಎಂಬ ಧಾತುವಿಗೆ ಸಾಧಯತಿ=ಸಾಧಿಸುತ್ತಾನೆ ಎಂಬ ಅರ್ಥವೂ ಆಗುತ್ತದೆ. ಒಬ್ಬ ವ್ಯಾಖ್ಯಾನಕಾರರು 'ಪರಲೋಕಂ' ಎಂಬುದಕ್ಕೆ 'ಪರಮಪುರುಷನಾದ ಶ್ರೀರಾಮನನ್ನು' ಎಂದೇ ಅರ್ಥಮಾಡಿದ್ದಾರೆ. (1) ಪರ ಲೋಕಂ, ಪರಃ ಸರ್ವೋತ್ಕೃಷ್ಟಃ ಯಃ ಲೋಕಃ ಜನಃ ತಂ ಪರಮಪುರುಷಮಿತ್ಯರ್ಥಃ =ಸರ್ವೋತ್ಕೃಷ್ಟವಾದ ಜನ ಅರ್ಥಾತ್ ಪರಮಪುರುಷ ಶ್ರೀರಾಮ. (2) ಪರಃ ಸರ್ವೋತ್ಕೃಷ್ಟಃ ಲೋಕ್ಯತೇ ದೃಶ್ಯತೇ ಅಸೌ ಸಃ=ಸರ್ವೋತ್ಕೃಷ್ಟನಾಗಿ ಕಾಣು ತ್ತಾನೆ. ಪರಮಪುರುಷನಾಗಿ ಕಾಣುತ್ತಾನೆ. ಅವನು ಶ್ರೀರಾಮ. (3) ಪರಃ ಸರ್ವೋತ್ಕೃಷ್ಟಃ ಲೋಕಃ ಯಸ್ಯ ಸಃ=ಸರ್ವೋತ್ಕೃಷ್ಟವಾದ ಲೋಕವು ಯಾವನಿಗಿದೆಯೋ ಅವನು ಸಾಕೇತಪುರಾಧೀಶ ಶ್ರೀರಾಮ.

ಇಂತಹ ಪ್ರವಾಸಗಳಿಗೆ ಸೀತಾದೇವಿಯು ತಕ್ಕವಳಾಗಿಯೇ ಇರುವಳೆಂದು ನಾನು ಭಾವಿಸುತ್ತೇನೆ. ಸೀತೆಯು ಅಯೋಧ್ಯೆಯಲ್ಲಿದ್ದಾಗ ಯಾವ ರೀತಿಯಲ್ಲಿ ಈ ಪಟ್ಟಣದ ಸಮೀಪದಲ್ಲಿರುವ ಉದ್ಯಾನವನಕ್ಕೆ ಹೋಗಿ ವಿಹರಿಸುತ್ತಿದ್ದಳೋ–ಅದೇ ರೀತಿಯಲ್ಲಿ ಅಷ್ಟೇ ಸಂತೋಷದಿಂದ ನಿರ್ಜನವಾಗಿರುವ ಆ ಅರಣ್ಯಪ್ರದೇಶದಲ್ಲಿಯೂ ರಾಮನೊಡನೆ ವಿಹರಿಸುತ್ತಿದ್ದಾಳೆ.

ಬಾಲೇವ ರಮತೇ ಸೀತಾ ಬಾಲಚನ್ದ್ರನಿಭಾನನಾ ।
ರಾಮಾ ರಾಮೇ ಹ್ಯಧೀನಾತ್ಮಾ ವಿಜನೇऽಪಿ ವನೇ ಸತೀ ॥೧೦॥

ಪೂರ್ಣಚಂದ್ರಸದೃಶವಾದ ಮುಖವುಳ್ಳ, ಸುಂದರಿಯಾದ ಸೀತಾದೇವಿಯು ನಿರ್ಜನವಾದ ಅರಣ್ಯದಲ್ಲಿಯೂ, ಶ್ರೀರಾಮನಲ್ಲಿಯೇ ನೆಟ್ಟ ಮನಸ್ಸುಳ್ಳವಳಾಗಿ ಸುಖ-ಕಷ್ಟಗಳಾವುದನ್ನೂ ಅರಿಯದ ಬಾಲಕಿಯಂತೆಯೇ ವಿಹರಿಸುತ್ತಿದ್ದಾಳೆ.*

ತದ್ಗತಂ ಹೃದಯಂ ಹ್ಯಸ್ಯಾಸ್ತದಧೀನಂ ಚ ಜೀವಿತಮ್ ।
ಅಯೋಧ್ಯಾಪಿ ಭವೇತ್ತಸ್ಯಾ ರಾಮಹೀನಾ ತಥಾ ವನಮ್ ॥೧೧॥

---

*'ಸೀತಾಬಾಲಚನ್ದ್ರನಿಭಾನನಾ' ಎಂಬ ವಾಕ್ಯವನ್ನು ಸೀತಾ-ಅಬಾಲಚನ್ದ್ರನಿಭಾನನಾ ಎಂದು ಪದವಿಭಾಗಮಾಡಬೇಕೆಂದು ಎಲ್ಲ ವ್ಯಾಖ್ಯಾನಕಾರರೂ ವ್ಯಾಖ್ಯೆಮಾಡಿರುತ್ತಾರೆ. ಶುಕ್ಲಪ್ರಥಮಾ ಮೊದಲ್ಗೊಂಡು ಪಂಚಮಿಯವರೆಗೂ ಬಾಲಚಂದ್ರನೆಂದು ಇವರ ಕಲ್ಪನೆಯಾಗಿರಬಹುದು. ಪೂರ್ಣಿಮಾಪರ್ಯಂತವೂ ಚಂದ್ರನು ಪೂರ್ಣಚಂದ್ರನಾಗದೇ ಇರುವುದರಿಂದ ಅಬಾಲಚಂದ್ರ ಅರ್ಥಾತ್ ಪೂರ್ಣಚಂದ್ರ ಎಂದು ಇವರ ವ್ಯಾಖ್ಯೆಯಾಗಿರುತ್ತದೆ. ಚಂದ್ರನ ಸಾದೃಶ್ಯವನ್ನು ಕೊಡಬೇಕಾದರೆ ಪೂರ್ಣಚಂದ್ರನ ಸಾದೃಶ್ಯವನ್ನೇ ಹೊರತು ಅಪೂರ್ಣಚಂದ್ರನ ಸಾದೃಶ್ಯವನ್ನು ಎಲ್ಲೂ ಯಾರೂ ಕೊಡುವುದಿಲ್ಲ. ಪೂರ್ಣಚಂದ್ರನಲ್ಲಿಯೇ ಬಾಲಚಂದ್ರನ ಹೋಲಿಕೆಯನ್ನು ತೆಗೆದುಕೊಳ್ಳಬಹುದಾಗಿದೆ. ಬಾಲಸೂರ್ಯ, ಎಳೆಬಿಸಿಲು ಮುಂತಾದ ಶಬ್ದಗಳನ್ನು ನಾವು ಕೇಳಿದ್ದೇವೆ. ಅಂತೆಯೇ ಇಲ್ಲಿಯೂ ಸಹ ಬಾಲಚಂದ್ರನೆಂದರೆ ಹುಣ್ಣಿಮೆಯ ದಿನ ಆಗತಾನೇ ಹುಟ್ಟಿದ, ಕೆಂಪುಛಾಯೆಯಿಂದ ಕೂಡಿದ ಚಂದ್ರ. ಆಗತಾನೇ ಹುಟ್ಟಿದ ಚಂದ್ರನ ಮಂಡಲವು ಹೆಚ್ಚು ಅಗಲವಾಗಿ ಕಾಣುವುದು. ಅದರಂತೆಯೇ ಸೀತಾದೇವಿಯ ಮುಖವೂ ಪೂರ್ಣಿಮಾಚಂದ್ರನಂತೆ ದುಂಡಾಗಿಯೂ, ಎಣೆಗೆಂಪಾಗಿಯೂ, ಅಗಲವಾಗಿಯೂ, ಮನೋಹರವಾಗಿಯೂ ಇದ್ದಿತೆಂಬ ಉಪಮಾನವನ್ನು ಇಲ್ಲಿ ತೆಗೆದುಕೊಳ್ಳಬಹುದಾಗಿದೆ. ರಾಮಾರಾಮೇ–ಎಂದು ಸಮಸ್ತಪದಮಾಡಿ ರಾಮನೆಂಬ ಕ್ರೀಡೋದ್ಯಾನದಲ್ಲಿ ವಿಹರಿಸುತ್ತಿರುವವಳು–ಎಂದೂ ಒಬ್ಬರು ವ್ಯಾಖ್ಯೆಮಾಡಿದ್ದಾರೆ.

ಸೀತಾದೇವಿಯು ಸರ್ವದಾ ರಾಮಮೂರ್ತಿಯನ್ನು ಹೃದಯಕಮಲದಲ್ಲಿ ಆರಾಧಿಸುತ್ತಿರುತ್ತಾಳೆ. ತನ್ನ ಮನಸ್ಸನ್ನು ರಾಮನ ಪಾದಕಮಲಗಳಲ್ಲಿಯೇ ಸರ್ವದಾ ನಿಯೋಜಿಸಿರುತ್ತಾಳೆ. ಅವಳ ಮನಸ್ಸು, ಜೀವನ ಎಲ್ಲವೂ ರಾಮನ ಅಧೀನದಲ್ಲಿವೆ. ಜೀವನವನ್ನು ಶ್ರೀರಾಮನ ಸುಖಕ್ಕಾಗಿಯೇ ಮುಡಿಪಾ ಗಿಟ್ಟಿದ್ದಾಳೆ. ಆದುದರಿಂದ ಶ್ರೀರಾಮನಿರುವ ಆ ವನವು ಸೀತಾದೇವಿಗೆ ಅಯೋಧ್ಯೆಯೇ ಆಗಿದೆ. ಒಂದು ವೇಳೆ ಸೀತೆಯು ಶ್ರೀರಾಮ ನನ್ನು ಬಿಟ್ಟು ಅಯೋಧ್ಯೆಯಲ್ಲಿಯೇ ಇದ್ದುಬಿಟ್ಟಿದ್ದರೆ ಅವಳಿಗೆ ಈ ಪಟ್ಟಣವು ಅರಣ್ಯಪ್ರಾಯವೇ ಆಗುತ್ತಿದ್ದಿತು.

ಅಯೋಧ್ಯೆಗೆ ಕಾಲುಯೋಜನದಷ್ಟು ದೂರವಿರುವ ಉದ್ಯಾನವನಕ್ಕೆ ಹೋಗಿ ಅಲ್ಲಿ ಶ್ರೀರಾಮನನ್ನು ಕುರಿತು ಹಲವಾರು ಪ್ರಶ್ನೆಗಳನ್ನು ಉಲ್ಲಾಸದಿಂದ ಹಿಂದೆ ಕೇಳುತ್ತಿದ್ದಂತೆಯೇ-ಅರಣ್ಯಮಾರ್ಗದಲ್ಲಿಯೂ ಅದೇ ವಿಧವಾದ ಉಲ್ಲಾಸದಿಂದ ಹಾದಿಯಲ್ಲಿ ಸಿಕ್ಕಿದ ಊರುಗಳ ಹೆಸರುಗಳು, ಸ್ಥಳಪುರಾಣ, ಪಟ್ಟಣಗಳ ಹೆಸರುಗಳು, ಅವುಗಳ ಪೂರ್ವೇತಿಹಾಸಗಳು, ನದಿಗಳು, ಅವುಗಳು ಹರಿಯುವ ಪ್ರದೇಶಗಳು, ನಾನಾವಿಧವಾದ ವೃಕ್ಷಗಳ ಹೆಸರುಗಳು ಮತ್ತು ಅವುಗಳಲ್ಲಿ ಬಿಡುವ ಪುಷ್ಪ-ಫಲಗಳು–ಇವೆಲ್ಲವನ್ನೂ ಶ್ರೀರಾಮನನ್ನಾಗಲೀ ಲಕ್ಷ್ಮಣನನ್ನಾಗಲೀ ಕೇಳಿ ತಿಳಿದುಕೊಳ್ಳುತ್ತಾಳೆ.

ದೇವಿ! ಸೀತಾದೇವಿಯ ಇಂತಹ ಮಾತುಗಳೇ ನನ್ನ ಜ್ಞಾಪಕಕ್ಕೆ ಬರುತ್ತಿವೆ. ಕೈಕೇಯಿಯ ವಿಷಯದಲ್ಲಿ ಆಕೆಯು ಆಕಸ್ಮಿಕವಾಗಿ ಹೇಳಿರಬಹುದಾದ ಯಾವ ಮಾತೂ ನನ್ನ ಸ್ಮರಣೆಗೆ ಬರುತ್ತಿಲ್ಲ."

ಹೀಗೆ ಸುಮಂತ್ರನು, ಸಂದರ್ಭಾನುಸಾರವಾಗಿ ಸ್ಮೃತಿಪಥಕ್ಕೆ ಬಂದ, ಸೀತೆಯು ಹೇಳಿದ ಕೈಕೇಯಿಗೆ ಸಂಬಂಧಿಸಿದ ಮಾತುಗಳನ್ನು ತನ್ನ ಹೃದಯದಲ್ಲಿಯೇ ದಮನಮಾಡಿ ಆಹ್ಲಾದಕರವಾದ, ಸೀತೆಯ ಮಾತುಗಳನ್ನು ಮಾತ್ರವೇ ಕೌಸಲ್ಯಾದೇವಿಗೆ ಕಿವಿಗೆ ಇಂಪಾಗುವಂತೆ ಹೇಳುತ್ತಿದ್ದನು.*

ಮಹಾರಾಣಿ! ಚಂದ್ರನ ಕಿರಣಕ್ಕೆ ಸಮಾನವಾದ ಸೀತಾದೇವಿಯ

---

*ಸೀತಾದೇವಿಯು ಸಂತೋಷಚಿತ್ತಳಾಗಿ ಸದಾ ರಾಮನಲ್ಲಿಯೇ ನಿಯತಚಿತ್ತಳಾಗಿ ಅಯೋಧ್ಯೆಯ ಉದ್ಯಾನವನದಲ್ಲಿ ವಿಹರಿಸುವಂತೆಯೇ ವಿಹರಿಸುತ್ತಿದ್ದಳೆಂದು ಕೌಸಲ್ಯೆಯನ್ನು ಸಂತೈಸುವ ಸಲುವಾಗಿ ಸುಮಂತ್ರನು ಹೇಳಿದರೂ–ದಶರಥನೊಡನೆ

ಪ್ರಭೆಯು ಕಾಲ್ನಡಿಗೆಯಲ್ಲಿಯೇ ಪ್ರಯಾಣಮಾಡುತ್ತಿದ್ದುದರಿಂದಾಗಲೀ, ಗಾಳಿಯ ರಭಸಕ್ಕೆ ಸಿಕ್ಕಿದುದರಿಂದಾಗಲೀ, ಸೂರ್ಯನ ತಾಪಕ್ಕೆ ಗುರಿಯಾದುದರಿಂದಾಗಲೀ ಮಸುಕಾಗಲಿಲ್ಲ. ಸೀತಾದೇವಿಯ ಮುಖವು ಅರಳಿದ ಕಮಲಕ್ಕೆ ಸದೃಶವಾಗಿತ್ತು. ಪೂರ್ಣಚಂದ್ರನ ಪ್ರಭೆಯಿಂದ ಯುಕ್ತವಾಗಿತ್ತು. ಮಧುರವಾಗಿ ಮಾತನಾಡುವ ಸ್ವಭಾವವುಳ್ಳ ಸೀತಾದೇವಿಯ ಮುಖಕಮಲವು ಅತ್ಯಂತ ಕಷ್ಟಕರವಾದ ಸನ್ನಿವೇಶದಲ್ಲಿಯೂ ಬಾಡಿಹೋಗಲಿಲ್ಲ. ಪದ್ಮಕೋಶದ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿದ್ದ ಅವಳ ಕಾಲುಗಳಿಗೆ ಅರಣ್ಯದಲ್ಲಿ ಲಾಕ್ಷಾರಸವನ್ನು ಹಚ್ಚದಿದ್ದರೂ ಅದನ್ನು ಹಚ್ಚಿದೆಯೋ ಎಂಬಂತೆ ಕಾಲುಗಳು ಕೆಂಪಾಗಿಯೇ ಕಂಗೊಳಿಸುತ್ತಿದ್ದುವು.*

ಶ್ರೀರಾಮನ ಮೇಲಿನ ಅನುರಾಗದಿಂದಾಗಿ ಸೀತೆಯು ಯಾವ ಆಭರಣವನ್ನೂ ತೊಟ್ಟುಕೊಳ್ಳುತ್ತಿರಲಿಲ್ಲ. ರಾಮನಂತೆಯೇ ತಾನೂ ಇರಬೇಕೆಂಬುದು

ಮಾತನಾಡುವಾಗ ತಾನು ಹೊರಟುಬರುವಾಗ ಸೀತೆಯು ಬಹಳ ದುಃಖಿತಳಾಗಿದ್ದಳೆಂದು ಬಹುಸ್ಪಷ್ಟವಾಗಿಯೇ ಸುಮಂತ್ರನು ಹೇಳಿದ್ದಾನೆ.

ಜಾನಕೀ ತು ಮಹಾರಾಜ ನಿಃಶ್ವಸನ್ತೀ ತಪಸ್ವಿನೀ । ಭೂತೋಪಹತಚಿತ್ತೇವ ವಿಷ್ಠಿತಾ ವಿಸ್ಮಿತಾ ಸ್ಥಿತಾ ॥ ಅದೃಷ್ಟಪೂರ್ವವ್ಯಸನಾ ರಾಜಪುತ್ರೀ ಯಶಸ್ವಿನೀ । ತೇನ ದುಃಖೇನ ರುದತೀ ನೈವ ಮಾಂ ಕಿಂಚಿದಬ್ರವೀತ್ ॥ ಉದ್ವೀಕ್ಷಮಾಣಾ ಭರ್ತಾರಂ ಮುಖೇನ ಪರಿಶುಷ್ಯತಾ । ಮುಮೋಚ ಸಹಸಾ ಬಾಷ್ಪಂ ಮಾಂ ಪ್ರಯಾನ್ತಮುದೀಕ್ಷ್ಯ ಸಾ ॥ (ಸರ್ಗ ೪೮, ಶ್ಲೋಕ ೩೪-೩೫-೩೬)

ಆದರೆ ವಾಲ್ಮೀಕಿಗಳು ಧ್ವಂಸಯಿತ್ವಾ ತು ತದ್ವಾಕ್ಯಂ ಎಂಬುದಾಗಿ ಹೇಳಿದ್ದಾರೆ. ತದ್ವಾಕ್ಯಂ ಎಂದರೆ ಪೂರ್ವಶ್ಲೋಕಾನುಗುಣವಾದ ಕೈಕೇಯಿಯ ನಿಂದಾವಾಕ್ಯವೆಂದೇ

---

*ಉಗುರುಗಳೂ ಹಿಮ್ಮಡಿಗಳೂ ಕೆಂಪಾಗಿರುವುದು ಉತ್ತಮಸ್ತ್ರೀಯರ ಲಕ್ಷಣ. ಕೆಂಪಾಗಿಲ್ಲದಿದ್ದರೂ ಅಲಕ್ತವೆಂಬ ಒಂದು ಮರದ ರಸವನ್ನು ಹಚ್ಚಿ ಕೆಂಪಾಗಿ ಮಾಡಿಕೊಳ್ಳುವ ಪದ್ಧತಿ ಹಿಂದೆಯೂ ಇದ್ದಿತು. ಸೀತೆಯು ಅರಣ್ಯದಲ್ಲಿ ಪ್ರವಾಸಮಾಡುವಾಗ ಅಲಕ್ತವನ್ನು ಉಪಯೋಗಿಸದಿದ್ದರೂ ಅವಳ ಕಾಲುಗಳು ರಕ್ತದಂತೆ ಕೆಂಪಾಗಿಯೇ ಕಾಣುತ್ತಿದ್ದುವು. ಈಗಲೂ ಮಹಿಳೆಯರು ಉಗುರುಗಳನ್ನು ಕೆಂಪುಬಣ್ಣದಿಂದ ಸಿಂಗರಿಸಿಕೊಳ್ಳುತ್ತಾರೆ. ಸುಮಂಗಲೀ ಸ್ತ್ರೀಯರು ಪಾದಗಳ ಹಿಮ್ಮಡಿಗಳಿಗೇ ಕೆಂಪುಬಣ್ಣವನ್ನು ಹಚ್ಚಿಕೊಳ್ಳುವ ರೂಢಿ ಈಗಲೂ ಬಂಗಾಳ ಮತ್ತು ಉತ್ತರಪ್ರದೇಶಗಳಲ್ಲಿದೆ.

ಅವಳ ಇಂಗಿತವಾಗಿದ್ದಿತು. ಶ್ರೀರಾಮನ ಜೊತೆಯಲ್ಲಿ ಉಲ್ಲಾಸದಿಂದ ಹೋಗುತ್ತಿರುವಾಗ–ಕಾಲಂದುಗೆಗಳಿಂದ ಉಂಟಾದ ಶಬ್ದವನ್ನನುಸರಿಸಿ ವಿನೋದದಿಂದ ಹೆಜ್ಜೆಯಿಡುತ್ತಿರುವಳೋ–ಎಂಬಂತೆ ಕಾಣುತ್ತಿದ್ದಳು. ಶ್ರೀರಾಮನ ಭುಜಬಲದಿಂದಾಗಿ ರಕ್ಷಿತಳಾಗಿ ಕಾಡಿನಲ್ಲಿ ಹೋಗುತ್ತಿದ್ದ ಸೀತಾದೇವಿಯು ಆನೆ, ಹುಲಿ, ಸಿಂಹ–ಇವೇ ಮುಂತಾದ ದುಷ್ಟಪ್ರಾಣಿಗಳನ್ನು ನೋಡಿದರೂ ಭಯಪಡುತ್ತಿರಲಿಲ್ಲ. ಆದುದರಿಂದ ಸೀತಾ-ರಾಮ-ಲಕ್ಷ್ಮಣರ ಸಲುವಾಗಿ ದುಃಖಪಡಬೇಕಾದ ಕಾರಣವಿಲ್ಲ. ನಮ್ಮ ಸಲುವಾಗಿ ಮತ್ತು ರಾಜನ ಸಲುವಾಗಿ ಅವರೂ ದುಃಖಪಡುವುದಿಲ್ಲ. ಆದರೆ ಶ್ರೀರಾಮನ ಪಿತೃವಾಕ್ಯಪರಿಪಾಲನೆಯ ಚರಿತ್ರೆಯು ಲೋಕದಲ್ಲಿ ಶಾಶ್ವತವಾಗಿ ಉಳಿಯುವುದು.

ಈಗ ಶ್ರೀರಾಮಾದಿಗಳು ಮಾತಾ-ಪಿತೃಗಳ ವಿಯೋಗದುಃಖವನ್ನು ಸಂಪೂರ್ಣವಾಗಿ ಮರೆತಿದ್ದಾರೆ. ಅರಣ್ಯದ ಸೊಬಗನ್ನು ನೋಡುತ್ತಾ ಸಂತೋಷದಿಂದ ಕೂಡಿದ ಮನಸ್ಸುಳ್ಳವರಾಗಿ ಮಹರ್ಷಿಗಳಿಂದ ಅನುಸರಿಸಲ್ಪಟ್ಟ ಮಾರ್ಗದಲ್ಲಿ ತಮ್ಮ ಜೀವನವನ್ನು ಅಳವಡಿಸಿಕೊಂಡಿದ್ದಾರೆ. ಅರಣ್ಯ

ಅರ್ಥವಾಗುತ್ತದೆ. ಸುಮಂತ್ರನು ದಶರಥನೊಡನೆ ಮಾತನಾಡುವಾಗಲೂ ನೈವ ಮಾಂ ಕಿಂಚಿದಬ್ರವೀತ್ ಎಂದೂ ಹೇಳಿದ್ದಾನೆ. ಹೀಗಿರುವಾಗ ಮಾಂ ಪ್ರಯಾನ್ತಮುದೀಕ್ಷ್ಯ ಸಾ ಮುಮೋಚ ಸಹಸಾ ಬಾಷ್ಪಂ ಎಂದು ಹೇಳಿದ ಸುಮಂತ್ರನು, ಮುಂದೆ ಸೀತೆಯು ಹೇಳಿರಬಹುದಾದ ವಾಕ್ಯವನ್ನು ಉದ್ದೇಶಪೂರ್ವಕವಾಗಿಯೇ ಮರೆಮಾಚಿರಬಹುದೇ? ಕೈಕೇಯಿಯ ವಿಷಯದಲ್ಲಿ ಸೀತೆಯ ಅಭಿಪ್ರಾಯವಾದರೂ ಏನಿರಬಹುದು? ಈ ಪ್ರಶ್ನೆಗಳಿಗೆ ಒಬ್ಬ ವ್ಯಾಖ್ಯಾನಕಾರರು ಹೀಗೆ ಸಮಾಧಾನ ಹೇಳಿದ್ದಾರೆ: ಧ್ವಂಸಯಿತ್ವಾ ತು ತದ್ವಾಕ್ಯಂ ಎಂದು ವಾಲ್ಮೀಕಿಗಳೇ ಹೇಳಿರುವುದಂತೂ ನಿಶ್ಚಯ. ಮೊದಲು ಮಾತನಾಡಲು ಹಿಂಜರಿದು ಅನಂತರದಲ್ಲಿ ಪತಿಯ ಅನುಜ್ಞೆಯನ್ನು ಪಡೆದು ಸೀತೆಯೂ ಸುಮಂತ್ರನು ಅಯೋಧ್ಯೆಗೆ ಹಿಂದಿರುಗುವ ಸಮಯದಲ್ಲಿಯೇ ಕೈಕೇಯಿಯ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಿಯೇ ಇದ್ದಾಳೆ. ಇನ್ನಾವ ಸಮಯದಲ್ಲಿಯೂ ಸುಮಂತ್ರನೊಡನೆ ಸೀತೆಯು ಮಾತನಾಡಿರುವ ಸಾಧ್ಯತೆಯಿಲ್ಲ. ಸೀತೆಯು ಕೈಕೇಯಿಯ ವಿಷಯವಾಗಿ ಏನು ಹೇಳಿರಬಹುದೆಂಬುದಕ್ಕೆ ವ್ಯಾಖ್ಯಾನಕಾರರು ಸೀತೆಯು ಯುದ್ಧಕಾಂಡದಲ್ಲಿ ಹೇಳಿರುವ ಮಾತನ್ನು ಉದ್ಧರಿಸಿರುತ್ತಾರೆ. ಅಶೋಕವನದಲ್ಲಿದ್ದ

ದಲ್ಲಿ ಸಿಕ್ಕುವ ಕಂದ-ಮೂಲ-ಫಲಗಳನ್ನೇ ತಿನ್ನುತ್ತಾ ತಂದೆಯ ಶುಭದಾಯಕವಾದ ಪ್ರತಿಜ್ಞೆಯನ್ನು ಪರಿಪಾಲಿಸುತ್ತಿದ್ದಾರೆ."

ಹೀಗೆ ಸೂತನೇನೋ ಕಾಲೋಚಿತವಾದ ಮಾತುಗಳನ್ನೇ ಆಡಿದನು. ಮಗನಿಗಾಗಿ ದುಃಖಪಡಬಾರದೆಂದು ಸಮಾಧಾನವನ್ನೂ ಹೇಳಿದನು. ಆದರೆ ಪುತ್ರನ ವಿರಹಶೋಕದಿಂದ ಸಂಕಟಪಡುತ್ತಿದ್ದ ಕೌಸಲ್ಯಾದೇವಿಯು ' ಹಾ ಪ್ರಿಯ! ಹಾ ಪುತ್ರ! ಹಾ ರಾಘವ! ನಿನ್ನನ್ನು ನಾನು ಇನ್ನೆಲ್ಲಿ ಕಾಣುವೆನು?' ಎಂದು ಕೂಗಿಕೊಳ್ಳುವುದನ್ನು ನಿಲ್ಲಿಸಲೇ ಇಲ್ಲ.

೬೦ನೆಯ ಸರ್ಗವು ಮುಗಿಯಿತು.

ಸೀತಾದೇವಿಯು ಹೆಣ್ಣುಕಡಲಹದ್ದಿನಂತೆ ರೋದನಮಾಡುತ್ತಾ ಕೈಕೇಯಿಗೆ ಹೇಳುತ್ತಾಳೆ: "ಸಕಾಮಾ ಭವ ಕೈಕೇಯಿ ಹತೋಽಯಂ ಕುಲನನ್ದನಃ" "ನನ್ನನ್ನಗಲಿದ ಇಕ್ಷ್ವಾಕುಕುಲನಂದನನಾದ ರಾಮನಿನ್ನು ಹತನಾದಂತೆಯೇ ಸರಿ. ನಿನ್ನ ಕಾಮನೆಯು ಇಂದಿಗೆ ಕೈಗೂಡಿತು. ಸಫಲಮನೋರಥಳಾಗು."

ಹಾಗಾದರೆ ಕೈಕೇಯಿಯ ಸಂಪೂರ್ಣಾಪೇಕ್ಷೆಯು ಏನಿದ್ದಿರಬಹುದೆಂಬುದನ್ನು ಹೀಗೆ ಊಹಿಸಬಹುದಾಗಿದೆ. ರಾಮನು ಕಾಡಿಗೆ ಹೋಗುವುದು ಮಾತ್ರವೇ ಅವಳ ಉದ್ದೇಶವಾಗಿರಲಿಲ್ಲ. ರಾಮನ ವಿನಾಶವೂ ಅವಳ ಉದ್ದೇಶವಾಗಿದ್ದಿತು. ರಾಮನೊಬ್ಬನು ಹೊರಟರೆ ಸೀತೆಯೂ ಅವನೊಡನೆಯೇ ಹೊರಡುವಳೆಂಬುದು ಅವಳ ನಿಶ್ಚಯವಾಗಿದ್ದಿತು. ಸೀತಾ-ರಾಮರ ಪರಸ್ಪರಪ್ರೇಮವು ಅಷ್ಟೊಂದು ಗಾಢವಾಗಿದೆಯೆಂಬುದನ್ನು ಅವಳು ಚೆನ್ನಾಗಿ ತಿಳಿದಿದ್ದಳು. ಸೀತೆಯೂ ರಾಮನ ಜೊತೆಯಲ್ಲಿ ಕಾಡಿಗೆ ಹೋದರೆ ಹದಿನಾಲ್ಕು ವರ್ಷಗಳ ಅಂತರದಲ್ಲಿ ತ್ರಿಲೋಕಸುಂದರಿಯಾದ ಸೀತೆಯನ್ನು ಯಾರಾದರೂ ಅಪಹರಿಸುವರೆಂದೂ ಅವಳು ತರ್ಕಿಸಿದಳು. ಸೀತೆಯನ್ನು ಅಪಹರಿಸಿದ ನಂತರ ರಾಮನು ಉಳಿಯಲಾರನೆಂಬುದು ಅವಳ ನಿಶ್ಚಿತಾಭಿಪ್ರಾಯವಾಗಿದ್ದಿತು. ಕೈಕೇಯಿಯ ಹೃದಯವನ್ನು ಚೆನ್ನಾಗಿ ಅರಿತಿದ್ದ ಸೀತೆಯು ಅಶೋಕವನದಲ್ಲಿ "ಸಕಾಮಾ ಭವ" ಎಂಬ ವಾಕ್ಯವನ್ನು ಹೇಳಿದ್ದಾಳೆ. ಈ ಅಭಿಪ್ರಾಯವನ್ನೇ ರಾಮನೂ ಒಮ್ಮೆ ಅರಣ್ಯಕಾಂಡದಲ್ಲಿ ಹೇಳಿದ್ದಾನೆ.

ಕಚ್ಚಿತ್ಸಕಾಮಾ ಕೈಕೇಯೀ ಸುಖಿತಾ ಸಾ ಭವಿಷ್ಯತಿ ।
ಯಾ ನ ತುಷ್ಯತಿ ರಾಜ್ಯೇನ ಪುತ್ರಾರ್ಥೇ ದೀರ್ಘದರ್ಶಿನೀ ॥

"ಯಾವ ಕೈಕೇಯಿಯು ತನ್ನ ಮಗನಾದ ಭರತನಿಗೆ ಉಂಟಾಗುವ ರಾಜ್ಯಪ್ರಾಪ್ತಿ ಯಿಂದಲೇ ಸಂತುಷ್ಟಳಾಗುವುದಿಲ್ಲವೋ–ಅಂತಹ ದೂರದರ್ಶಿನಿಯಾದ ಕೈಕೇಯಿಯು

ಅಯೋಧ್ಯಾಕಾಂಡ ೬೧ನೆಯ ಸರ್ಗ

ಕೌಸಲ್ಯಾದೇವಿಯ ವಿಲಾಪ : ದಶರಥನ ನಿಂದನೆ

ವನಂ ಗತೇ ಧರ್ಮಪರೇ ರಾಮೇ ರಮಯತಾಂ ವರೇ ।
ಕೌಸಲ್ಯಾ ರುದತೀ ಸಾರ್ತಾ ಭರ್ತಾರಮಿದಮಬ್ರವೀತ್ ॥೧॥

ಧರ್ಮನಿರತನಾದ ಶ್ರೀರಾಮನು ಕಾಡಿಗೆ ಪ್ರಯಾಣಮಾಡಿದನಂತರ ಅಲ್ಲಿಂದ ಬಂದ ಸುಮಂತ್ರನು ಕೌಸಲ್ಯಾದೇವಿಗೆ ಅನೇಕಪ್ರಕಾರವಾಗಿ ಸಮಾಧಾನವನ್ನು ಹೇಳಿದರೂ ಅವಳ ದುಃಖವು ಕಡಿಮೆಯಾಗಲಿಲ್ಲ. ಬಹಳವಾಗಿ ಸಂಕಟಪಡುತ್ತಾ ಬಿಕ್ಕಿ-ಬಿಕ್ಕಿ ಅಳುತ್ತಾ ಪತಿಗೆ ಹೇಳಿದಳು :

"ಮಹಾರಾಜ! ನೀನು, ದಯಾಪರನೆಂದೂ, ಉದಾರನೆಂದೂ ಮತ್ತು ಪ್ರಿಯವಾದಿಯೆಂದೂ ಮೂಜಗದಲ್ಲಿಯೂ ಪ್ರಸಿದ್ಧನಾಗಿದ್ದರೂ ನಿಷ್ಕರುಣೆಯಿಂದ ನಿರಪರಾಧಿಗಳಾದ ಮಕ್ಕಳನ್ನು ಅರಣ್ಯಕ್ಕೆ ಕಳುಹಿಸಿದೆಯಲ್ಲಾ! ಸುಖದಲ್ಲಿ ಬೆಳೆದ ಆ ನಮ್ಮ ಮಕ್ಕಳು ಸೀತೆಯೊಡನೆ ಅರಣ್ಯದಲ್ಲಿ ಪ್ರಾಪ್ತವಾಗುವ ದುಃಖವನ್ನು ಹೇಗೆ ಸಹಿಸಿಕೊಳ್ಳುವರು?

ಸಾ ನೂನಂ ತರುಣೀ ಶ್ಯಾಮಾ ಸುಕುಮಾರೀ ಸುಖೋಚಿತಾ ।
ಕಥಮುಷ್ಣಂ ಚ ಶೀತಂ ಚ ಮೈಥಿಲೀ ಪ್ರಸಹಿಷ್ಯತೇ ॥೪॥

ಗಂಡುಮಕ್ಕಳ ವಿಷಯವಾದರೂ ಹಾಗಿರಲಿ. ಸೀತೆಯು ನಿಶ್ಚಯವಾಗಿಯೂ ತಾರುಣ್ಯದ ಹೊಸ್ತಿಲನ್ನು ಈಗ ತಾನೇ ದಾಟಿರುವವಳು. ಕೋಮಲಾಂಗಿಯು. ಕಷ್ಟವೆಂಬುದನ್ನೇ ಅರಿಯದವಳು. ರಾಜಯೋಗ್ಯವಾದ

ತನ್ನ ಇಚ್ಛೆಯನ್ನು (ರಾಮನಾಶದಿಂದ) ಪೂರ್ಣಗೊಳಿಸಿಕೊಂಡು ಸುಖಿತಳಾಗಿ ಆಗುವಳೇನು?"

ಸೀತಾ-ರಾಮರಿಬ್ಬರ ಈ ಏಕಾಭಿಪ್ರಾಯದಿಂದ ಅವರಿಬ್ಬರ ಪ್ರೇಮವು ಎಷ್ಟು ಗಾಢವಾಗಿದ್ದಿತೆಂಬುದನ್ನು ನಾವು ಊಹಿಸಬಹುದಾಗಿದೆ. ಸೀತೆಯ ಹೃದಯದಲ್ಲಿ ರಾಮನೂ–ರಾಮನ ಹೃದಯದಲ್ಲಿ ಸೀತೆಯೂ ಪ್ರತಿಷ್ಠಿತರಾಗಿದ್ದರು. ಈ ವಿಧವಾದ ಅಭಿಪ್ರಾಯವನ್ನೇ ಸೀತಾದೇವಿಯು ಸುಮಂತ್ರನೊಡನೆ ಹೇಳಿರಬಹುದೆಂದು ವಾಲ್ಮೀಕಿಗಳು "ಧ್ವಂಸಯಿತ್ವಾ ತು ತದ್ವಾಕ್ಯಂ" ಎಂಬ ಮಾತನ್ನು ಹೇಳಿರಬಹುದಾಗಿದೆ.

ಸುಖೋಪಭೋಗಗಳನ್ನು ಅನುಭವಿಸಲು ಅರ್ಹಳಾದವಳು. ಇಂತಹವಳು ಕಾಡಿನಲ್ಲಿದ್ದುಕೊಂಡು ರಾತ್ರಿಯ ವೇಳೆಯಲ್ಲಿ ಅತಿಯಾದ ಶೀತವನ್ನೂ ಹಗಲಿನಲ್ಲಿ ಬಿಸಿಲಿನ ಬೇಗೆಯನ್ನೂ ಹೇಗೆ ತಾನೇ ಸಹಿಸುವಳು?*

ಅರಮನೆಯಲ್ಲಿ ತೊವ್ವೆ, ಉಪ್ಪಿನಕಾಯಿ ಇವೇ ಮುಂತಾದ ವ್ಯಂಜನ ಸಮೇತವಾದ, ರುಚಿಕರವಾದ, ಶುಭಕರವಾದ ಆಹಾರವನ್ನು ಸೇವಿಸುತ್ತಿದ್ದ ವಿಶಾಲಾಕ್ಷಿಯಾದ ಸೀತೆಯು ಅರಣ್ಯದಲ್ಲಿ ತಾನಾಗಿ ಬೆಳೆಯುವ ಕಾಡು ಧಾನ್ಯಗಳನ್ನು ಹೇಗೆ ತಿನ್ನುತ್ತಾಳೆ? ಅರಮನೆಯಲ್ಲಿದ್ದಾಗ ಅವಳು ಎಲ್ಲ ಕಾಲಗಳಲ್ಲಿಯೂ ಸಂಗೀತದ ಮತ್ತು ಮಂಗಳವಾದ್ಯಗಳ ಸುಮಧುರನಿನಾದವನ್ನು ಕೇಳುತ್ತಾ ಆನಂದಪಡುತ್ತಿದ್ದಳು. ಅಂತಹವಳೀಗ ಅರಣ್ಯದಲ್ಲಿ ಮಾಂಸವನ್ನು ತಿನ್ನುವ ಸಿಂಹವೇ ಮೊದಲಾದ ಕ್ರೂರಪ್ರಾಣಿಗಳ ಘೋರಗರ್ಜನೆಗಳನ್ನು ಹೇಗೆತಾನೇ ಕೇಳುವಳು?

ಮಹೇಂದ್ರನ ಧ್ವಜದಂತೆ ಸಕಲರ ಅಭ್ಯುದಯಕ್ಕೂ ಕಾರಣನಾದ, ಮಹಾಭುಜನಾದ ಶ್ರೀರಾಮನು ಪರಿಘಾಯುಧಕ್ಕೆ ಸಮಾನವಾದ ತೋಳನ್ನೇ ತಲೆದಿಂಬನ್ನಾಗಿಟ್ಟುಕೊಂಡು ಎಲ್ಲಿ ಮಲಗುತ್ತಾನೆ? ಕಮಲದ ದಳದಂತೆ ಎಣೆಗೆಂಪಾಗಿರುವ, ಎರಡು ಕಡೆಗಳಲ್ಲಿಯೂ ನವಿರಾದ ಕೂದಲಿನಿಂದ

---

*'ಶ್ಯಾಮಾ' ಎಂಬ ಪದಕ್ಕೆ ನಾನಾರ್ಥಗಳಿವೆ. ಇಲ್ಲಿ 'ತರುಣೀ, ಶ್ಯಾಮಾ' ಎಂಬ ಎರಡು ವಿಶೇಷಣಗಳನ್ನೂ ಸೀತೆಗೆ ಉಪಯೋಗಿಸಿದ್ದಾರೆ. 'ತರುಣೀ' ಎಂದರೆ ಹರೆಯದವಳು ಎಂದು ಅರ್ಥವಾಗುತ್ತದೆ. 'ಶ್ಯಾಮಾ' ಎಂಬುದಕ್ಕೆ 'ಶ್ಯಾಮಾ ಯೌವನಮಧ್ಯಸ್ಥಾ' ಎಂಬ ಕೋಶದ ಪ್ರಕಾರ ಯೌವನದ ಮಧ್ಯದಲ್ಲಿರುವವಳು ಎಂದರ್ಥವಾಗುತ್ತದೆ. ತರುಣೀ-ಶ್ಯಾಮಾ ಎಂಬುದರಿಂದ 'ತಾರುಣ್ಯವನ್ನು ದಾಟಿ ಯೌವನದ ಮಧ್ಯಭಾಗಕ್ಕೆ ಪ್ರವೇಶಿಸಲಿರುವವಳು' ಎಂದು ಅರ್ಥಮಾಡಬಹುದಾಗಿದೆ. 'ಶ್ಯಾಮಾ' ಎಂಬ ಪದವನ್ನು 'ಶ್ರೇಷ್ಠಳಾದ ಸ್ತ್ರೀ' ಎಂಬ ಅರ್ಥದಲ್ಲಿಯೂ ಹೇಳಿ ದ್ದಾರೆ. ಇದರ ನಿರೂಪಣೆಯನ್ನು ಭಟ್ಟಿಕಾವ್ಯದ ವ್ಯಾಖ್ಯಾನಕಾರರು ಹೀಗೆ ಮಾಡಿ ದ್ದಾರೆ. "ಶೀತೇ ಸುಖೋಷ್ಣಸರ್ವಾಂಗೀ ಗ್ರೀಷ್ಮೇ ಯಾ ಸುಖಶೀತಲಾ । ತಪ್ತಕಾಞ್ಚನ ವರ್ಣಾಭಾ ಸಾ ಸ್ತ್ರೀ ಶ್ಯಾಮೇತಿ ಕಥ್ಯತೇ ॥" ಶೀತಕಾಲದಲ್ಲಿ ಸುಖೋಷ್ಣವಾದ ಸರ್ವಾವಯವವುಳ್ಳವಳೂ, ಗ್ರೀಷ್ಮಕಾಲದಲ್ಲಿ ಸುಖಶೈತ್ಯವುಳ್ಳ ಅಂಗವುಳ್ಳವಳೂ, ಪುಟಕ್ಕೆ ಹಾಕಿದ ಚಿನ್ನದಂತೆ ಕಾಂತಿಯುಳ್ಳವಳೂ 'ಶ್ಯಾಮಾ' ಎಂದು ಹೇಳಲ್ಪಡುತ್ತಾಳೆ.

ಕೂಡಿರುವ, ಕಮಲಪುಷ್ಪದ ಸುವಾಸನೆಯುಳ್ಳ ನಿಃಶ್ವಾಸದಿಂದ ಕೂಡಿರುವ, ಕಮಲದ ದಳಗಳಿಗೆ ಸಮಾನವಾದ ಕಣ್ಣುಗಳಿಂದ ಕೂಡಿರುವ ಶ್ರೀರಾಮನ ಮುಖವನ್ನು ನಾನೆಂದು ಕಾಣುವೆನು? ನಿಜವಾಗಿ ಹೇಳುವುದಾದರೆ ನನ್ನ ಹೃದಯವು ವಜ್ರದಷ್ಟೇ ಕಠಿಣವಾಗಿರಬೇಕು. ಇದರಲ್ಲಿ ಸಂಶಯವೇ ಇಲ್ಲ. ಏಕೆಂದರೆ : ಅಂತಹ ನಯನಾನಂದಕರನಾದ ನನ್ನ ಕಂದನನ್ನು ನೋಡದೇ ಇರುವ ನನ್ನ ಹೃದಯವು ಸಾವಿರ ಚೂರುಗಳಾಗಿ ಸೀಳಿಹೋಗಲಿಲ್ಲವಲ್ಲವೇ!

ಮಹಾರಾಜ! ನೀನು ನನ್ನ ಬಂಧುಗಳನ್ನು (ಸೀತಾ-ರಾಮ-ಲಕ್ಷ್ಮಣರನ್ನು) ಕಾಡಿಗಟ್ಟಿ ದಯಾರಹಿತವಾದ ಕಾರ್ಯವನ್ನು ಮಾಡಿ ಬಿಟ್ಟೆ. ನಿನ್ನಿಂದ ಹೊರದೂಡಲ್ಪಟ್ಟ, ಸುಖಪಡಲು ಅರ್ಹರಾದ ಅವರಿಂದು ದಯನೀಯರಾಗಿ ಅರಣ್ಯದಲ್ಲಿ ಅಲೆದಾಡುತ್ತಿದ್ದಾರೆ.

ಒಂದು ವೇಳೆ ಶ್ರೀರಾಮನು ಹದಿನಾಲ್ಕು ವರ್ಷಗಳ ವನವಾಸವನ್ನು ಮುಗಿಸಿ ಹದಿನೈದನೆಯ ವರ್ಷ ಅಯೋಧ್ಯೆಗೆ ಬಂದರೂ–ಭರತನಿಂದ ರಾಜ್ಯವು ಅನುಭವಿಸಲ್ಪಡುತ್ತಿದೆಯೆಂಬ ಕಾರಣದಿಂದ ರಾಮನು ರಾಜ್ಯ-ಕೋಶಾದಿಗಳನ್ನು ಪುನಃ ಪಡೆಯಲು ಇಚ್ಛಿಸದೇ ಪರಿತ್ಯಜಿಸಲೂಬಹುದು.

ಭೋಜಯನ್ತಿ ಕಿಲ ಶ್ರಾದ್ಧೇ ಕೇಚಿತ್ಸ್ವಾನೇವ ಬಾನ್ಧವಾನ್ ।
ತತಃ ಪಶ್ಚಾತ್ಸಮೀಕ್ಷನ್ತೇ ಕೃತಕಾರ್ಯಾ ದ್ವಿಜರ್ಷಭಾನ್ ॥೧೨॥

ತತ್ರ ಯೇ ಗುಣವನ್ತಶ್ಚ ವಿದ್ವಾಂಸಶ್ಚ ದ್ವಿಜಾತಯಃ ।
ನ ಪಶ್ಚಾತ್ತೇಽನುಮನ್ಯನ್ತೇ ಸುಧಾಮಪಿ ಸುರೋಪಮಾಃ ॥೧೩॥

ಬ್ರಾಹ್ಮಣೇಷ್ವಪಿ ತೃಪ್ತೇಷು ಪಶ್ಚಾದ್ಭೋಕ್ತುಂ ದ್ವಿಜರ್ಷಭಾಃ ।
ನಾಭ್ಯುಪೈತುಮಲಂ ಪ್ರಾಜ್ಞಾಃ ಶೃಙ್ಗಚ್ಛೇದಮಿವರ್ಷಭಾಃ ॥೧೪॥

(ಜ್ಯೇಷ್ಠಪುತ್ರನಿಗೇ ರಾಜ್ಯವು ಸಲ್ಲಬೇಕು. ಜ್ಯೇಷ್ಠಪುತ್ರನು ಸಮರ್ಥನಾಗಿದ್ದರೂ ಪಕ್ಷಪಾತದಿಂದಲೋ ಮತ್ತಾವ ಕಾರಣದಿಂದಲೋ ಕನಿಷ್ಠ ಪುತ್ರನಿಗೆ ರಾಜನಾದವನು ರಾಜ್ಯವನ್ನು ವಹಿಸಿಕೊಟ್ಟರೆ ಕಾಲಾನಂತರದಲ್ಲಿ ಕಾರಣಾಂತರದಿಂದ ಜ್ಯೇಷ್ಠಪುತ್ರನಿಗೇ ಪುನಃ ರಾಜ್ಯವನ್ನು ಕೊಡ ಹೋದರೂ ಕನಿಷ್ಠನಿಂದ ಉಪಭುಕ್ತವಾದ ರಾಜ್ಯವನ್ನು ಜ್ಯೇಷ್ಠನು ತಿರಸ್ಕರಿಸ

ಬಹುದು. ಈ ವಿಷಯದಲ್ಲಿ ಕೌಸಲ್ಯೆಯು ಲೋಕನಿದರ್ಶನವನ್ನು ಕೊಡುತ್ತಾಳೆ.)

ಶ್ರಾದ್ಧದಲ್ಲಿ ಕೆಲವರು ತಮ್ಮ ಹತ್ತಿರದ ಬಂಧುಗಳನ್ನೇ ನಿಮಂತ್ರಣಕ್ಕೆ ಆಹ್ವಾನಿಸುತ್ತಾರೆ. (ಶ್ರಾದ್ಧಭೋಜನಕ್ಕೆ ಅರ್ಹರಾಗಿರಲೀ ; ಅನರ್ಹರಾಗಿರಲೀ-ಅಳಿಯ, ಸೋದರಳಿಯ ಮೊದಲಾದವರನ್ನೇ ಕರೆಯುವ ರೂಢಿಯಿದೆ.) ಇಂತಹ ಗೃಹಸ್ಥರು ಯೋಗ್ಯಬ್ರಾಹ್ಮಣರನ್ನೂ ನಿರ್ಲಕ್ಷಿಸುವುದಿಲ್ಲ. ಶ್ರಾದ್ಧವು ಮುಗಿದನಂತರ ಇಷ್ಟಪಂಕ್ತಿಗೆ ದ್ವಿಜೋತ್ತಮರನ್ನು ಆಹ್ವಾನಿಸುತ್ತಾರೆ. ಆದರೆ ಗುಣವಿಶಿಷ್ಟರಾದ, ವಿದ್ವಾಂಸರಾದ, ದೇವಸದೃಶರಾದ, ಆಚಾರಸಂಪನ್ನರಾದ ಆ ಬ್ರಾಹ್ಮಣರು ಇಷ್ಟಪಂಕ್ತಿಯಲ್ಲಿ ಕುಳಿತು ಅನ್ನಶೇಷವೆನಿಸಿದ ಅಮೃತರೂಪವಾದ ಮೃಷ್ಟಾನ್ನವನ್ನು ಭೋಜನಮಾಡಲು ಇಚ್ಛಿಸುವುದಿಲ್ಲ. ಅನ್ನಶೇಷವು ಬ್ರಾಹ್ಮಣನ ಅನ್ನಶೇಷವೇ ಆದುದರಿಂದ ಅನ್ನದಲ್ಲಿ ದೋಷವಿಲ್ಲವೆಂಬುದೇನೋ ನಿಜ. ಆದರೆ ತಮ್ಮನ್ನು ನಿಮಂತ್ರಿಸಲು ಯೋಗ್ಯವಾದ ಸ್ಥಳಕ್ಕೆ ಅನರ್ಹರನ್ನು ಆಹ್ವಾನಿಸಿರುವುದು ಮತ್ತು ಇಷ್ಟಪಂಕ್ತಿಯಲ್ಲಿ ಊಟಮಾಡಲು ಯೋಗ್ಯರಾದವರನ್ನು ಶ್ರಾದ್ಧಕ್ಕೆ ಆಹ್ವಾನಿಸುವುದು–ಈ ಎರಡು ಕ್ರಿಯೆಗಳನ್ನೂ ಅವರು ತಮಗೆ ಮಾಡಿದ ಅಪಮಾನವೆಂದೇ ಭಾವಿಸುತ್ತಾರೆ. ಎತ್ತುಗಳಿಗೆ ಕೋಡಿನ ತುದಿಯನ್ನು ಕತ್ತರಿಸುವಂತೆ ಇದು ಅವಮಾನಕರವೆಂದು ಭಾವಿಸಿ ಇಷ್ಟಪಂಕ್ತಿಯ ಭೋಜನಕ್ಕೆ ಅವರು ಒಪ್ಪುವುದಿಲ್ಲ. ಅಥವಾ ಒಂದು ಎತ್ತು ತಿಂದುಳಿಸಿದ (ಕತ್ತರಿಸಲ್ಪಟ್ಟ ಅಗ್ರಭಾಗವುಳ್ಳ) ಗರಿಕೆಯ ಹುಲ್ಲನ್ನು ಮತ್ತೊಂದು ಎತ್ತು ತಿನ್ನದಿರುವಂತೆ–ಬ್ರಾಹ್ಮಣರು ಅನ್ನಶೇಷವೆನಿಸಿದ ಇಷ್ಟಪಂಕ್ತಿಯ ಭೋಜನಕ್ಕೆ ಒಪ್ಪುವುದಿಲ್ಲ. ಇದೇ ರೀತಿಯಲ್ಲಿ ಕನಿಷ್ಠನಿಂದ ಉಪಭುಕ್ತವಾದ ರಾಜ್ಯವನ್ನು ಜ್ಯೇಷ್ಠನಾಗಿಯೂ ಶ್ರೇಷ್ಠನಾಗಿಯೂ ಇರುವವನು ತಿರಸ್ಕರಿಸದೇ ಇರುವನೇ?

ನಾಪರೇಣಾಹೃತಂ ಭಕ್ಷ್ಯಂ ವ್ಯಾಘ್ರಃ ಖಾದಿತುಮಿಚ್ಛತಿ ।
ಏವಮೇವ ನರವ್ಯಾಘ್ರಃ ಪರಲೀಢಂ ನ ಮಂಸ್ಯತೇ ॥೧೬॥

ಅರಣ್ಯದಲ್ಲಿರುವ ಸಿಂಹವು ಇತರಪ್ರಾಣಿಗಳು ಕೊಂದುಹಾಕಿದ ಪ್ರಾಣಿಯ ಮಾಂಸವನ್ನು ತಿನ್ನಲು ಇಚ್ಛಿಸುವುದಿಲ್ಲ. ಹಾಗೆಯೇ ಪುರುಷ

ವ್ಯಾಘ್ರನಾದ ಶ್ರೀರಾಮನೂ ಇತರರಿಂದ ಅನುಭವಿಸಲ್ಪಟ್ಟ ರಾಜ್ಯೋಪ ಭೋಗಗಳನ್ನು ಪುರಸ್ಕರಿಸುವುದಿಲ್ಲ.

ಹವಿರಾಜ್ಯಂ ಪುರೋಡಾಶಾಃ ಕುಶಾ ಯೂಪಾಶ್ಚ ಖಾದಿರಾಃ ।
ನೈತಾನಿ ಯಾತಯಾಮಾನಿ ಕುರ್ವನ್ತಿ ಪುನರಧ್ವರೇ ॥೧೭॥

ಚರು, ತುಪ್ಪ, ಪಿಷ್ಟಾದಿಗಳ ವಿಕಾರವಾದ ಪುರೋಡಾಶಾದಿಗಳು, ದರ್ಭೆ, ಖಾದಿರ, ಪಲಾಶಾದಿಗಳು, ಯೂಪಸ್ತಂಭಗಳು–ಇವುಗಳನ್ನು ಯಾಗ ದಲ್ಲಿ ಒಂದು ಬಾರಿ ಉಪಯೋಗಿಸಿದನಂತರ ಮತ್ತೊಮ್ಮೆ ಮತ್ತೊಂದು ಕರ್ಮದಲ್ಲಿ ಉಪಯೋಗಿಸುವುದಿಲ್ಲ. ಉಪಯೋಗಿಸಿದನಂತರ ಈ ವಸ್ತುಗಳು ಯಾತಯಾಮಗಳಾಗುತ್ತವೆ. (ರಸಹೀನವಾಗುತ್ತವೆ.)*

ಚರು, ಆಜ್ಯ, ಪುರೋಡಾಶಗಳಂತೆಯೇ ಭರತನಿಂದ ಉಪಭುಕ್ತವಾದ ಈ ರಾಜ್ಯವೂ ತಂಗಳಂತಾಗಿ ಸಾರರಹಿತವಾದ ಸುರೆಯಂತಾಗುವುದು. ಸೋಮರಸದಿಂದ ರಹಿತವಾದ ಯಾಗದಂತಾಗುವ ಇಂತಹ ರಾಜ್ಯವನ್ನು ರಾಮನೆಂದಿಗೂ ಒಲ್ಲನು. ಬಲಿಷ್ಠವಾದ ಹುಲಿಯ ಬಾಲವನ್ನು ಹಿಡಿದೆಳೆದರೆ ಅದು ಸುಮ್ಮನಿರದಂತೆ–ಶ್ರೀರಾಮನ ವಿಷಯವಾಗಿ ನೀನು ಮಾಡಿರುವ ಅಪರಾಧವನ್ನು ಅವನೆಂದಿಗೂ ಸಹಿಸುವುದಿಲ್ಲ.

(ಹಾಗಾದರೆ ಬಲಪ್ರಯೋಗವನ್ನಾದರೂ ಮಾಡಿ ರಾಜ್ಯವನ್ನು ಪಡೆಯ ಬಹುದಾಗಿತ್ತಲ್ಲವೇ? ಎಂಬ ಸಂದೇಹಕ್ಕೆ ಕೌಸಲ್ಯೆಯೇ ಉತ್ತರಿಸುತ್ತಾಳೆ.)

---

*ಮಂತ್ರ ಕೃಷ್ಣಾಜಿನ, ದರ್ಭೆಗಳಿಗೆ ಯಾತಯಾಮತ್ವವು ಉಂಟಾಗದೆಂದು ಸ್ಮೃತಿ ವಚನವಿದೆ. ಈ ಶ್ಲೋಕದಲ್ಲಿ ಕುಶವನ್ನೂ ಯಾತಯಾಮವೆಂದು ಹೇಳಲಾಗಿದೆ. ಇದಕ್ಕೆ ಒಬ್ಬ ವ್ಯಾಖ್ಯಾನಕಾರರು ಸಮಾಧಾನ ಹೇಳುತ್ತಾ :- ಕುಶವೇ ಬೇರೆ, ದರ್ಭೆಯೇ ಬೇರೆ ಎಂದಿದ್ದಾರೆ. ಮತ್ತೊಬ್ಬರು :- ದರ್ಭೆಗೆ ಯಾತಯಾಮತ್ವವಿಲ್ಲವೆಂದರೆ ಜೀರ್ಣ ವಾಗದ ಮತ್ತು ಒಣಗಿಹೋಗದ ದರ್ಭೆಗೆ ಮಾತ್ರ ಯಾತಯಾಮತ್ವವಿಲ್ಲವೆಂದು ಹೇಳಿ ದ್ದಾರೆ. ಇನ್ನೊಬ್ಬರು.:- ದರ್ಭೆಗೆ ಯಾತಯಾಮತ್ವವಿಲ್ಲವೆಂಬುದು ಸಾಧಾರಣಧರ್ಮವಾದರೂ- "ಬ್ರಹ್ಮಯಜ್ಞೇಷು ಯೇ ದರ್ಭಾ ವಿನಿಯುಕ್ತಾ ನ ತೇಽನ್ಯತಃ" –ಬ್ರಹ್ಮಯಜ್ಞದಲ್ಲಿ ಉಪಯೋಗಿಸಿದ ದರ್ಭೆಗಳು ಬೇರೆಡೆ ಉಪಯೋಗಿಸಲ್ಪಡಕೂಡದು ಎಂಬ ವಿಶೇಷಧರ್ಮದಂತೆ ಕೆಲವು ಕರ್ಮಗಳು ಮುಗಿದನಂತರ ದರ್ಭೆಗೂ ಸಹ ಯಾತಯಾಮತ್ವವು ಉಂಟಾಗುತ್ತದೆಂದು ಹೇಳಿದ್ದಾರೆ. ಜೀರ್ಣಂ ಚ ಪರಿಭುಕ್ತಂ ಚ ಯಾತಯಾಮಮಿದಂ ದ್ವಯಮ್ (ಅಮರಃ).

ನೈರೃತಸ್ಯ ಸಹಿತಾ ಲೋಕಾ ಭಯಂ ಕುರ್ಯುರ್ಮಹಾಮೃಧೇ ।
ಅಧರ್ಮಂ ತ್ವಿಹ ಧರ್ಮಾತ್ಮಾ ಲೋಕಂ ಧರ್ಮೇಣ ಯೋಜಯೇತ್ ॥

ಮೂರು ಲೋಕಗಳಲ್ಲಿಯೂ ಇರುವ ಸುರಾಸುರ-ಮನುಷ್ಯರೆಲ್ಲರೂ ಒಟ್ಟಾಗಿ ಯುದ್ಧಕ್ಕೆ ಬಂದರೂ ರಾಮನನ್ನು ಭಯಗ್ರಸ್ತನನ್ನಾಗಿ ಮಾಡ ಲಾರರು. ಅಂತಹ ಅತುಲವಾದ ಪರಾಕ್ರಮವು ಶ್ರೀರಾಮನಲ್ಲಿದೆ. ಆದರೆ ಧರ್ಮಾತ್ಮನಾದ ಶ್ರೀರಾಮನು ಅಧರ್ಮಯುಕ್ತವಾದ ಜನತೆಯನ್ನು ಧರ್ಮ ಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡುತ್ತಾನೆ. ಇದು ಅವನ ಸ್ವಾಭಾವಿಕ ಗುಣ ವಾಗಿದೆ. ಮಹಾವೀರ್ಯನಾದ ಮಹಾಭುಜನಾದ ರಾಮನು ಕುಪಿತನಾದರೆ– ಸ್ವರ್ಣಮಯವಾದ ರೆಕ್ಕೆಗಳಿಂದ ಕೂಡಿರುವ ನಿಶಿತವಾದ ಬಾಣಗಳಿಂದ ಪ್ರಳಯಕಾಲದಲ್ಲಾಗುವಂತೆ ಸಕಲಚರಾಚರಪ್ರಾಣಿಗಳನ್ನೂ, ಪಂಚಭೂತ ಗಳನ್ನೂ, ಸಮುದ್ರಗಳನ್ನೂ ದಹಿಸಿಬಿಡಬಲ್ಲನು.

ಅಂತಹ ಸಿಂಹಬಲನಾದ, ವೃಷಭಾಕ್ಷನಾದ, ನರಶ್ರೇಷ್ಠನಾದ ಶ್ರೀರಾಮನನ್ನು – ಸಾಗರದಲ್ಲಿರುವ ದೊಡ್ಡಮೀನುಗಳು ಸಣ್ಣಮೀನುಗಳನ್ನೇ ನುಂಗಿಹಾಕುವಂತೆ–ತಂದೆಯಾದ ನೀನೇ ವಿನಾಶಗೊಳಿಸಿದೆ.

ಧರ್ಮನಿರತನಾದ ರಾಮನನ್ನು ನೀನು ಅರಣ್ಯಕ್ಕೆ ಕಳುಹಿಸಿದ ಮೇಲೆಯೂ ಶಾಸ್ತ್ರದೃಷ್ಟವಾದ, ಸನಾತನವಾದ, ಮೂರು ವರ್ಣದವ ರಿಂದಲೂ ಆಚರಿಸಲ್ಪಡುವ ಸನಾತನಧರ್ಮವು ನಿನ್ನಲ್ಲುಳಿದಿರುವುದೇ? ಧರ್ಮಾತ್ಮನಾದ ಶ್ರೀರಾಮನನ್ನು ನೀನು ಕಾಡಿಗಟ್ಟಿರುವುದರಿಂದ ನಿಶ್ಚಯವಾಗಿಯೂ ನೀನು ಧರ್ಮಹೀನನಾಗಿರುವೆ.

ಗತಿರೇಕಾ ಪತಿರ್ನಾರ್ಯಾ ದ್ವಿತೀಯಾ ಗತಿರಾತ್ಮಜಃ ।
ತೃತೀಯಾ ಜ್ಞಾತಯೋ ರಾಜಂಶ್ಚತುರ್ಥೀ ನೇಹ ವಿದ್ಯತೇ ॥೨೪॥

ಮಹಾರಾಜ! ಶಾಸ್ತ್ರಗಳು ಹೀಗೆ ಹೇಳುತ್ತವೆ : ಪತಿಯೊಬ್ಬನೇ ಹೆಂಗಸಿಗೆ ದಿಕ್ಕು. ಪತಿಯನ್ನು ಬಿಟ್ಟರೆ ಮಗನೇ ಆಶ್ರಯನು. ಮೂರನೆ ಯವರು ಜ್ಞಾತಿಗಳು. ಈ ಮೂರು ವಿಧವಾದ ಆಶ್ರಯಗಳನ್ನು ಬಿಟ್ಟರೆ ಹೆಂಗಸಿಗೆ ನಾಲ್ಕನೆಯ ಆಶ್ರಯವೆಂಬುದೇ ಇಲ್ಲ.

ತತ್ರ ತ್ವಂ ಚೈವ ಮೇ ನಾಸ್ತಿ ರಾಮಶ್ಚ ವನಮಾಶ್ರಿತಃ ।
ನ ವನಂ ಗನ್ತುಮಿಚ್ಛಾಮಿ ಸರ್ವಥಾ ನಿಹತಾ ತ್ವಯಾ ॥೨೫॥

ಕೈಕೇಯಿಯಲ್ಲಿಯೇ ವಿಮೋಹಿತನಾಗಿರುವ ನೀನು ನನ್ನ ಪಾಲಿಗೆ ಎಂದೂ ಇರಲೇ ಇಲ್ಲ. ಇದ್ದರೂ ಇಲ್ಲದಂತೆಯೇ ಆಗಿರುವೆ. ನಿನ್ನ ಆಜ್ಞೆಯಿಂದಾಗಿ ರಾಮನೂ ಅರಣ್ಯಕ್ಕೆ ಹೊರಟುಹೋದನು. ನನ್ನ ಪತಿವ್ರತಾ ಧರ್ಮವನ್ನು ಉಳಿಸಿಕೊಳ್ಳಲು ನಾನು ಮಗನ ಜೊತೆಯಲ್ಲಿ ಕಾಡಿಗೆ ಹೋಗಲು ಇಚ್ಛಿಸುವುದಿಲ್ಲ. ಹೀಗಾಗಿ ನಾನು ನಿನ್ನಿಂದಲೇ ಸಂಪೂರ್ಣವಾಗಿ ಹತಳಾದೆನು.

ಹತಂ ತ್ವಯಾ ರಾಜ್ಯಮಿದಂ ಸರಾಷ್ಟ್ರಂ
ಹತಸ್ತಥಾತ್ಮಾ ಸಹ ಮನ್ತ್ರಿಭಿಶ್ಚ ।
ಹತಾ ಸಪುತ್ರಾಸ್ಮಿ ಹತಾಶ್ಚ ಪೌರಾಃ
ಸುತಶ್ಚ ಭಾರ್ಯಾ ಚ ತವ ಪ್ರಹೃಷ್ಟೌ ॥೨೬॥

ಮಹಾರಾಜ! ನಿನ್ನ ಈ ದುಶ್ಚರ್ಯೆಯಿಂದಾಗಿ ನಾನು ಮತ್ತು ನನ್ನ ಮಗನು ಮಾತ್ರವೇ ವಿನಾಶಹೊಂದಲಿಲ್ಲ. ರಾಮನನ್ನು ಕಾಡಿಗಟ್ಟಿ ರಾಷ್ಟ್ರ ಸಹಿತವಾದ ರಾಜ್ಯವನ್ನು ಹಾಳುಮಾಡಿದೆ. ಮಂತ್ರಿಗಳೊಡನೆ ನೀನೂ ಹಾಳಾದೆ. ಪುತ್ರನೊಡನೆ ನಾನೂ ಹಾಳಾದೆ. ಪಟ್ಟಣಿಗರೂ ಹಾಳಾಗಿ ಹೋದರು. ಆದರೆ ಎಲ್ಲರೂ ಹಾಳಾದರೂ ನಿನ್ನ ಪ್ರೇಯಸಿ ಮತ್ತು ಪ್ರೇಮಪುತ್ರ ಇವರಿಬ್ಬರು ಮಾತ್ರ ಅತ್ಯಂತ ಪ್ರಹೃಷ್ಟರಾಗಿದ್ದಾರೆ."

ಇಂತಹ ಅತಿನಿಷ್ಠುರವಾದ ಕೌಸಲ್ಯಾದೇವಿಯ ಮಾತುಗಳನ್ನು ಕೇಳಿ ದಶರಥನು ಸಂಕಟಪಡುತ್ತಾ ಪುನಃ ಮೂರ್ಛಿತನಾದನು. ಶೈತ್ಯೋಪಚಾರಗಳಿಂದ ಸಂಜ್ಞೆಯನ್ನು ಪಡೆದು ತಾನು ಹಿಂದೆ ಮಾಡಿದ ದುಷ್ಕರ್ಮವನ್ನು ಸ್ಮರಿಸಿಕೊಳ್ಳುತ್ತಾ ಪುನಃ ಶೋಕದಲ್ಲಿ ಮುಳುಗಿಹೋದನು.

ಅರವತ್ತೊಂದನೆಯ ಸರ್ಗವು ಮುಗಿಯಿತು.

ದುಃಖತಪ್ತನಾದ ದಶರಥನು ಕೌಸಲ್ಯೆಯ ಕ್ಷಮೆ ಕೇಳಿದುದು : ಕೌಸಲ್ಯೆಯು ರಾಜನ ಕಾಲುಗಳಿಗೆ ಬಿದ್ದು ತಪ್ಪನ್ನು ಕ್ಷಮಿಸುವಂತೆ ಪ್ರಾರ್ಥಿಸಿದುದು

ಏವಂ ತು ಕ್ರುದ್ಧಯಾ ರಾಜಾ ರಾಮಮಾತ್ರಾ ಸಶೋಕಯಾ ।
ಶ್ರಾವಿತಃ ಪರುಷಂ ವಾಕ್ಯಂ ಚಿನ್ತಯಾಮಾಸ ದುಃಖಿತಃ ॥೧॥

ಹೀಗೆ ಪರಮಕ್ರುದ್ಧೆಯಾಗಿದ್ದ ಮತ್ತು ಅತಿದುಃಖಿತೆಯಾಗಿದ್ದ ಶ್ರೀರಾಮನ ತಾಯಿಯಾದ ಕೌಸಲ್ಯಾದೇವಿಯಿಂದ ಕರ್ಣಕಠೋರವಾದ ಮಾತುಗಳನ್ನು ಕೇಳಿದ ದಶರಥನು ಅತಿದುಃಖಿತನಾಗಿ ತನ್ನ ಇಂತಹ ದುಃಸ್ಥಿತಿಗೆ ಕಾರಣವೇನಿರಬಹುದೆಂಬುದನ್ನು ಯೋಚಿಸತೊಡಗಿದನು.

ಹೀಗೆಯೇ ಚಿಂತಿಸುತ್ತಿದ್ದ ರಾಜನು ದುಃಖಾತಿರೇಕದಿಂದ ಪುನಃ ಎಚ್ಚರತಪ್ಪಿದನು. ಬಹಳ ಹೊತ್ತಾದನಂತರ ರಾಜನಿಗೆ ಮೂರ್ಛೆಯು ತಿಳಿಯಿತು. ಎಚ್ಚರಗೊಂಡೊಡನೆಯೇ ಪುನಃ ಶೋಕವು ಅವನನ್ನು ಆವರಿಸಿತು. ಅತಿದೀರ್ಘವಾದ ಮತ್ತು ಬಿಸಿ-ಬಿಸಿಯಾದ ನಿಟ್ಟುಸಿರುಗಳನ್ನು ಬಿಡುತ್ತಿದ್ದನು. ಪಕ್ಕದಲ್ಲಿ ಕುಳಿತಿದ್ದ ಕೌಸಲ್ಯೆಯನ್ನು ನೋಡಿ ಪುನಃ ಚಿಂತಾಕ್ರಾಂತನಾದನು. ಹೀಗೆಯೇ ಚಿಂತಿಸುತ್ತಿರುವಾಗ ಶಬ್ದವೇಧಿಯಾಗಿದ್ದ* ತಾನು ಹಿಂದೆ ಮಾಡಿದ ಕೆಟ್ಟಕೆಲಸವೊಂದು ಅವನ ಸ್ಮರಣೆಗೆ ಬಂದಿತು. ದುಷ್ಕಾರ್ಯದ ಸ್ಮರಣೆಯಿಂದ ಉಂಟಾದ ಶೋಕ ಮತ್ತು ಶ್ರೀರಾಮನ ವಿಯೋಗದಿಂದ ಉಂಟಾದ ಶೋಕ–ಈ ಎರಡು ವಿಧವಾದ ಶೋಕಗಳಿಂದಲೂ ಅವನು ಬಹಳವಾಗಿ ಪರಿತಪಿಸಿದನು. ಎರಡು ವಿಧವಾದ ಶೋಕಾಗ್ನಿಗಳಿಂದ ದಹಿಸಲ್ಪಡುತ್ತಿದ್ದ ರಾಜನು ತರ-ತರನೆ ನಡುಗುತ್ತಾ ಕೈಮುಗಿದುಕೊಂಡು

---

*ಶಬ್ದವೇಧೀ= ಶಬ್ದಮೇವ ಲಕ್ಷೀಕೃತ್ಯ ವಿಧ್ಯತೀತಿ ಶಬ್ದವೇಧೀ–ಶಬ್ದವನ್ನೇ ಲಕ್ಷ್ಯವನ್ನಾಗಿಟ್ಟು ಬಾಣಪ್ರಯೋಗಮಾಡುವವನು. ಬಾಣಪ್ರಯೋಗದಲ್ಲಿ ಇದೂ ಒಂದು ನೈಪುಣ್ಯ. ಪ್ರಾಣಿಗಳು ಓಡುತ್ತಿರುವಾಗ ಹೊಡೆಯುವುದು, ಎದುರಿನಲ್ಲಿಲ್ಲ ದಿದ್ದರೂ ಶಬ್ದಮಾತ್ರದಿಂದ ಅವುಗಳಿರಬಹುದಾದ ಸ್ಥಳಕ್ಕೆ ಗುರಿಯಿಟ್ಟು ಹೊಡೆಯುವುದು–ಮುಂತಾದುವುಗಳು ಅನೇಕವರ್ಷಗಳ ಅಭ್ಯಾಸದಿಂದ ಸಾಧಿಸಲ್ಪಡುತ್ತಿದ್ದುವು.

ಮತ್ತು ತಲೆಯನ್ನು ತಗ್ಗಿಸಿಕೊಂಡು ಕೌಸಲ್ಯೆಯನ್ನು ಪ್ರಸನ್ನಗೊಳಿಸುವ ಸಲುವಾಗಿ ಹೇಳಿದನು :

ಪ್ರಸಾದಯೇ ತ್ವಾಂ ಕೌಸಲ್ಯೇ ರಚಿತೋಽಯಂ ಮಯಾಞ್ಜಲಿಃ ।
ವತ್ಸಲಾ ಚಾನೃಶಂಸಾ ಚ ತ್ವಂ ಹಿ ನಿತ್ಯಂ ಪರೇಷ್ವಪಿ ॥೭॥

"ದೇವಿ! ನಾನು ಎರಡು ಕೈಗಳನ್ನೂ ಜೋಡಿಸಿಕೊಂಡು ಪ್ರಸನ್ನಳಾಗುವಂತೆ ನಿನ್ನನ್ನು ಪ್ರಾರ್ಥಿಸುತ್ತೇನೆ. ನೀನು ಯಾವಾಗಲೂ ಇತರರ ವಿಷಯದಲ್ಲಿ ವಾತ್ಸಲ್ಯವುಳ್ಳವಳೂ ದಯಾಪರಳೂ ಆಗಿರುವೆ. ಹೀಗಿರುವಾಗ ನನ್ನ ಮೇಲೆ ಏಕಿಷ್ಟು ಕೋಪಿಸಿಕೊಳ್ಳುವೆ?

ಭರ್ತಾ ತು ಖಲು ನಾರೀಣಾಂ ಗುಣವಾನ್ನಿರ್ಗುಣೋಽಪಿ ವಾ ।
ಧರ್ಮಂ ವಿಮೃಶಮಾನಾನಾಂ ಪ್ರತ್ಯಕ್ಷಂ ದೇವಿ ದೈವತಮ್ ॥೮॥

ಧರ್ಮವನ್ನು ವಿಮರ್ಶೆಮಾಡುವ–ಧರ್ಮಮಾರ್ಗದಲ್ಲಿ ನಡೆಯಲಿಚ್ಛಿಸುವ ಸ್ತ್ರೀಯರಿಗೆ ಪತಿಯು ಗುಣವಂತನಾಗಿರಲಿ; ಗುಣರಹಿತನೇ ಆಗಿರಲಿ–ಅವನೇ ಪ್ರತ್ಯಕ್ಷದೇವತೆಯು.

ಲೋಕಮರ್ಯಾದೆಯನ್ನು ತಿಳಿದಿರುವ ಧರ್ಮಪರಳಾದ ನೀನು ಅತ್ಯಂತ ದುಃಖಿತೆಯಾಗಿದ್ದರೂ ನಿನ್ನಂತೆಯೇ ಪರಮದುಃಖಿತನಾಗಿರುವ ಪತಿಯ ವಿಷಯದಲ್ಲಿ ಈ ವಿಧವಾದ ಕಠಿಣೋಕ್ತಿಗಳನ್ನು ಹೇಳುವುದು ತರವಲ್ಲ."

ದೀನನಾದ ರಾಜನ ಕರುಣಾಜನಕವಾದ ಆ ಮಾತುಗಳನ್ನು ಕೇಳಿ ಮಳೆಯ ನೀರು ಕಾಲುವೆಯ (ಕೊಳವೆಯ) ಮೂಲಕವಾಗಿ ರಭಸದಿಂದ ಹರಿದುಹೋಗುವಂತೆ – ಕೌಸಲ್ಯೆಯ ಕಣ್ಣುಗಳಿಂದ ನೀರಿನ ಕೋಡಿಯೇ ಹರಿಯಿತು. ತನ್ನನ್ನು ಪ್ರಸನ್ನಗೊಳಿಸಲು ದಶರಥನು ಮಾಡಿದ್ದ ಅಂಜಲಿ ಸಂಪುಟವನ್ನೇ ಎರಡು ಕೈಗಳಿಂದಲೂ ಹಿಡಿದು ತಲೆಯ ಮೇಲಿಟ್ಟುಕೊಂಡು ಭೀತ-ಭೀತಳಾಗಿ ಆತುರಾತುರವಾಗಿ ಈ ಮಾತುಗಳನ್ನು ಹೇಳಿದಳು :

ಪ್ರಸೀದ ಶಿರಸಾ ಯಾಚೇ ಭೂಮೌ ನಿಪತಿತಾಸ್ಮಿ ತೇ ।
ಯಾಚಿತಾಸ್ಮಿ ಹತಾ ದೇವ ಹನ್ತವ್ಯಾಹಂ ನ ಹಿ ತ್ವಯಾ ॥೧೨॥

"ಮಹಾರಾಜ! ಭೂಮಿಯ ಮೇಲೆ ಬಿದ್ದು ತಲೆಬಾಗಿ ನಮಸ್ಕರಿಸಿ

ಬೇಡಿಕೊಳ್ಳುತ್ತೇನೆ. ಪ್ರಸನ್ನನಾಗು. ನೀನೇನಾದರೂ ನನ್ನನ್ನು ಯಾಚಿಸಿದರೆ ನಾನು ಸತ್ತಂತೆಯೇ ಸರಿ. ಈ ಪರಿಯಲ್ಲಿ ನೀನು ನನ್ನನ್ನು ಕೊಲ್ಲಬೇಡ.

ನೈಷಾ ಹಿ ಸಾ ಸ್ತ್ರೀ ಭವತಿ ಶ್ಲಾಘನೀಯೇನ ಧೀಮತಾ ।
ಉಭಯೋರ್ಲೋಕಯೋರ್ವೀರ ಪತ್ಯಾ ಯಾ ಸಂಪ್ರಸಾದ್ಯತೇ ॥೧೨॥

ಸ್ವರ್ಗಲೋಕ-ಭೂಲೋಕಗಳೆರಡರಲ್ಲಿಯೂ ಧರ್ಮಾತ್ಮನೆಂದು ಕೀರ್ತಿಯನ್ನು ಗಳಿಸಿರುವ ಧೀಮಂತನಾದ ಪತಿಯ ವಿಷಯದಲ್ಲಿ ಯಾವಳು ವಿಧೇಯ ಳಾಗಿರುವುದಿಲ್ಲವೋ, ಗಂಡನು ತನ್ನ ಅನುಗ್ರಹವನ್ನು ಬೇಡಬೇಕೆಂದು ಭಾವಿಸುವಳೋ–ಅಂತಹವಳು ನಿಶ್ಚಯವಾಗಿಯೂ ಸಾಧ್ವಿಯೇ ಅಲ್ಲ. ಹತ ಭಾಗ್ಯಳು.

ಧರ್ಮಜ್ಞನೇ! ನಾನು ಪತಿವ್ರತಾಧರ್ಮವನ್ನು ತಿಳಿದಿರುವೆನು. ನೀನು ಸತ್ಯವಾದಿಯೆಂಬುದನ್ನೂ ಬಲ್ಲೆನು. ಆದರೆ ಪುತ್ರವಿಯೋಗದುಃಖದಿಂದ ಪೀಡಿತಳಾಗಿರುವ ನಾನು ವಿವೇಕಶೂನ್ಯಳಾಗಿ ನಿನ್ನ ವಿಷಯದಲ್ಲಿ ಅನುಚಿತವಾಗಿ ಏನನ್ನೋ ಹೇಳಿಬಿಟ್ಟೆನು. ದಯಮಾಡಿ ಕ್ಷಮಿಸಿಬಿಡು.

ಶೋಕೋ ನಾಶಯತೇ ಧೈರ್ಯಂ ಶೋಕೋ ನಾಶಯತೇ ಶ್ರುತಮ್ ।
ಶೋಕೋ ನಾಶಯತೇ ಸರ್ವಂ ನಾಸ್ತಿ ಶೋಕಸಮೋ ರಿಪುಃ ॥೧೫॥

ಶೋಕವೆಂಬುದು ಮಾನವನಿಗೆ ಪರಮಶತ್ರುವು. ಶೋಕವೆಂಬ ಶತ್ರುವಿಗೆ ಸಮನಾದ ಬೇರೊಬ್ಬ ಶತ್ರುವಿರಲಾರನು. ಶೋಕವು ಧೈರ್ಯವನ್ನು ಹಾಳುಮಾಡುತ್ತದೆ. ಶ್ರುತಿ-ಶಾಸ್ತ್ರಶ್ರವಣಜನಿತವಾದ ಧರ್ಮಜ್ಞಾನವನ್ನು ವಿನಾಶಗೊಳಿಸುತ್ತದೆ. ಹೆಚ್ಚೇನು ಹೇಳಲಿ? ಶೋಕವು ಮಾನವನ ಸರ್ವಸ್ವವನ್ನೂ ಹಾಳುಮಾಡಿಬಿಡುತ್ತದೆ.

ಶಕ್ಯಮಾಪತಿತಃ ಸೋಢುಂ ಪ್ರಹಾರೋ ರಿಪುಹಸ್ತತಃ ।
ಸೋಢುಮಾಪತಿತಃ ಶೋಕಃ ಸುಸೂಕ್ಷ್ಮೋಽಪಿ ನ ಶಕ್ಯತೇ ॥೧೬॥

ಶತ್ರುವಿನ ಕೈಯಲ್ಲಿರುವ ಆಯುಧದಿಂದ ಬೀಳುವ ಪ್ರಹಾರವನ್ನಾದರೂ ಸಹಿಸಿಕೊಳ್ಳಬಹುದು. ಆದರೆ ವಿಧಿವಶದಿಂದ ಪ್ರಾಪ್ತವಾಗುವ

ಶೋಕವು ಅತ್ಯಲ್ಪವಾಗಿದ್ದರೂ ಮಾನವನಿಗೆ ಅದನ್ನು ಸಹಿಸಿಕೊಳ್ಳಲು ಶಕ್ಯವಾಗುವುದಿಲ್ಲ.

ಇಂದಿಗೆ ರಾಮನ ವನವಾಸದಲ್ಲಿ ಐದು ರಾತ್ರಿಗಳು ಕಳೆದಿವೆ. (ಇದು ಆರನೆಯ ದಿನ.) ಆದರೆ ಶೋಕವೆಂಬ ಖಡ್ಗದಿಂದ ಪ್ರಹತಳಾಗಿರುವ, ಅವನು ಹೊರಟುಹೋದನಂತರ ಹರ್ಷವೆಂಬುದನ್ನೇ ಕಾಣದಿರುವ ನನಗೆ ಈ ಐದು ರಾತ್ರಿಗಳು ಐದು ವರ್ಷಗಳಂತೆ ಕಳೆದಿವೆ. ನದಿಗಳ ಪ್ರವಾಹವೇಗದಿಂದ ಸಮುದ್ರದ ನೀರು ಉಕ್ಕೇರಿ ಬರುವಂತೆ ನನ್ನ ಏಕೈಕಪುತ್ರನಾದ ರಾಮನನ್ನೇ ಸದಾ ಸ್ಮರಿಸುತ್ತಿರುವ ನನ್ನ ಹೃದಯದಲ್ಲಿ ಪುತ್ರವಿಯೋಗಶೋಕವು ಉಕ್ಕುಕ್ಕಿ ಬರುತ್ತಿದೆ."

ಹೀಗೆ ಕೌಸಲ್ಯಾದೇವಿಯು ಪತಿಯ ಮನಸ್ಸನ್ನು ನೆಮ್ಮದಿಗೊಳಿಸುವ ಶುಭಪ್ರದವಾದ ಮಾತುಗಳನ್ನು ಹೇಳುತ್ತಿರುವಾಗ ಸೂರ್ಯನ ಕಿರಣಗಳು ಮಸುಕಾಗತೊಡಗಿದುವು. ರಾತ್ರಿದೇವಿಯು ಮೆಲ್ಲ-ಮೆಲ್ಲನೆ ಕಾಲಿಡತೊಡಗಿದಳು. ಹೃದಯಾಹ್ಲಾದಕರವಾದ ಕೌಸಲ್ಯೆಯ ಸವಿಮಾತುಗಳಿಂದ ರಾಜನ ಹೃದಯವೂ ಸ್ವಲ್ಪ ನೆಮ್ಮದಿಯನ್ನು ಕಂಡಿತು. ಪುತ್ರವಿಯೋಗಶೋಕದಿಂದ ಸಮಾಕ್ರಾಂತನಾಗಿದ್ದ ರಾಜನು ನಿದ್ರೆಗೆ ವಶನಾದನು.

೬೨ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೬೩ನೆಯ ಸರ್ಗ

ದಶರಥನ ಶೋಕ : ಋಷಿಕುಮಾರನನ್ನು ವಧಿಸಿದ ವೃತ್ತಾಂತವನ್ನು ರಾಜನು ಕೌಸಲ್ಯೆಗೆ ಹೇಳಿದುದು

ಪ್ರತಿಬುದ್ಧೋ ಮುಹೂರ್ತೇನ ಶೋಕೋಪಹತಚೇತನಃ ।
ಅಥ ರಾಜಾ ದಶರಥಶ್ಚಿನ್ತಾಮಭ್ಯವಪದ್ಯತ ॥೧॥

ಶೋಕದಿಂದ ನಾಶಗೊಳಿಸಲ್ಪಟ್ಟ ಬುದ್ಧಿಯಿಂದ ಕೂಡಿದ್ದ ದಶರಥನು ಮುಹೂರ್ತಕಾಲದ ನಂತರ ನಿದ್ರೆಯಿಂದ ಎಚ್ಚರಗೊಂಡು ಪುನಃ ಚಿಂತಾಪರನಾದನು.

ರಾಹುಸಂಬಂಧಿಯಾದ ನೆಳಲು ಸೂರ್ಯನನ್ನು ಆವರಿಸುವಂತೆ ರಾಮ-ಲಕ್ಷ್ಮಣರನ್ನು ಕಾಡಿಗೆ ಕಳುಹಿಸಿದುದರಿಂದ ಉಂಟಾದ ಶೋಕ ವೆಂಬ ಮಹೋಪದ್ರವವು ಇಂದ್ರಸದೃಶನಾದ ದಶರಥನನ್ನು ಆವರಿ ಸಿತು. ಪತ್ನಿಯೊಡನೆ ಶ್ರೀರಾಮನು ಅರಣ್ಯಕ್ಕೆ ಹೊರಟುಹೋಗಲಾಗಿ ತಾನಾಗಿಯೇ ತನ್ನ ಪ್ರಿಯಪುತ್ರನನ್ನು ಕಾಡಿಗಟ್ಟಲು ಕಾರಣವನ್ನು ಯೋಚಿ ಸುತ್ತಿದ್ದ ದಶರಥನು ತಾನು ಹಿಂದೆ ಮಾಡಿದ ದುಷ್ಕಾರ್ಯವನ್ನು ಪುನಃ ಸ್ಮರಿಸುತ್ತಾ ಆ ವಿಷಯವನ್ನೇ ಕಪ್ಪಾದ ಕಡೆಗಣ್ಣುಗಳಿಂದ ಕೂಡಿದ್ದ ಕೌಸಲ್ಯಾದೇವಿಗೂ ಹೇಳಲು ಬಯಸಿದನು. ಶ್ರೀರಾಮನು ಅರಣ್ಯಕ್ಕೆ ಹೊರಟುಹೋದ ಆರನೆಯ ದಿನದ ಅರ್ಧರಾತ್ರಿಯ ಸಮಯದಲ್ಲಿ ರಾಜನು ತನ್ನ ಹಿಂದಿನ ದುಷ್ಕಾರ್ಯವನ್ನು ಸ್ಮರಿಸಿಕೊಳ್ಳುತ್ತಿದ್ದನು. ಪುತ್ರವಿಯೋಗ ಶೋಕದಿಂದ ಆರ್ತನಾಗಿದ್ದ ಅವನು ತಾನು ಹಿಂದೆ ಮಾಡಿದ ದುಷ್ಕಾರ್ಯ ವನ್ನು ಸ್ಮರಿಸಿ ಆ ವಿಷಯವನ್ನೇ ಪುತ್ರಶೋಕದಿಂದ ಪೀಡಿತಳಾಗಿದ್ದ ಕೌಸಲ್ಯೆಗೂ ಹೇಳತೊಡಗಿದನು.

ಯದಾಚರತಿ ಕಲ್ಯಾಣಿ ಶುಭಂ ವಾ ಯದಿ ವಾಶುಭಮ್ ।
ತದೇವ ಲಭತೇ ಭದ್ರೇ ಕರ್ತಾ ಕರ್ಮಜಮಾತ್ಮನಃ ॥೬॥

"ಮಂಗಳಾಂಗಿಯೇ! ಪ್ರಪಂಚದಲ್ಲಿ ಮನುಷ್ಯನು ಶುಭವಾದ ಕಾರ್ಯ ವನ್ನೇ ಮಾಡಿರಲಿ ; ಅಶುಭವಾದ ಕಾರ್ಯವನ್ನೇ ಮಾಡಿರಲಿ–ಆಯಾ ಕಾರ್ಯಕ್ಕೆ ತಕ್ಕುದಾದ ಫಲವನ್ನೇ ಪಡೆದುಕೊಳ್ಳುತ್ತಾನೆ. ಶುಭಕಾರ್ಯ ವನ್ನು ಮಾಡಿದ್ದರೆ ಶುಭಫಲವನ್ನೇ ಪಡೆಯುತ್ತಾನೆ. ಕೆಟ್ಟದಾದ ಕಾರ್ಯವನ್ನು ಮಾಡಿದ್ದರೆ ಕೆಟ್ಟ ಫಲವನ್ನೇ ಪಡೆಯುತ್ತಾನೆ.

ಗುರುಲಾಘವಮರ್ಥಾನಾಮಾರಮ್ಭೇ ಕರ್ಮಣಾಂ ಫಲಮ್ ।
ದೋಷಂ ವಾ ಯೋ ನ ಜಾನಾತಿ ಸ ಬಾಲ ಇತಿ ಹೋಚ್ಯತೇ ॥೭॥

ಐಹಿಕಫಲಪ್ರಾಪ್ತಿಗಾಗಿ ಅಥವಾ ಪಾರಲೌಕಿಕಫಲಪ್ರಾಪ್ತಿಗಾಗಿ ಕಾರ್ಯ ಮಾಡುವಾಗ ಅದರ ತಾತ್ಕಾಲಿಕವಾದ ಫಲವೇನೆಂಬುದನ್ನು ವಿವೇಚಿಸಿ ಮಾಡಬೇಕು. ಒಂದು ಕಾರ್ಯದಿಂದ ಪ್ರಾಪ್ತವಾಗುವ ಫಲವೆಷ್ಟು? ಅಥವಾ ದೋಷವೆಷ್ಟು? ಎಂಬ ಫಲಾಫಲಗಳ ಗುರು-ಲಾಘವಗಳನ್ನು ತಿಳಿಯದೇ

ಕಾರ್ಯಮಾಡುವವನನ್ನು ವಿವೇಚನಾರಹಿತನಾದ ಬಾಲನೆಂದು (ಮೂರ್ಖನೆಂದು) ತಿಳಿದವರು ಹೇಳುತ್ತಾರೆ.

ಕಶ್ಚಿದಾಮ್ರವಣಂ ಛಿತ್ವಾ ಪಲಾಶಾಂಶ್ಚ ನಿಷಿಞ್ಚತಿ ।
ಪುಷ್ಪಂ ದೃಷ್ಟ್ವಾ ಫಲೇ ಗೃಧ್ನುಃ ಸ ಶೋಚತಿ ಫಲಾಗಮೇ ॥೮॥

ಮುಂದಿನ ಫಲವನ್ನು ಯೋಚಿಸದೇ ತಾತ್ಕಾಲಿಕವಾದ ಫಲಕ್ಕೆ ಮಾರುಹೋಗುವವನ ಭವಿಷ್ಯವು ಚಿಂತಾಜನಕವಾದುದೆಂದು ಈ ದೃಷ್ಟಾಂತದಿಂದ ನಿರೂಪಿಸಬಹುದಾಗಿದೆ : ಮುತ್ತುಗದ ಮರದ ಸ್ವರೂಪವೇನೆಂಬುದನ್ನು ತಿಳಿಯದ ಮನುಷ್ಯನೊಬ್ಬನು ಅವುಗಳ ಕೆಂಪಾದ, ನಯನಮನೋಹರವಾದ ಹೂವುಗಳನ್ನು ನೋಡಿ ಮಾರುಹೋಗಿ ತನ್ನ ತೋಟದಲ್ಲಿದ್ದ ಮಾವಿನಮರಗಳನ್ನೆಲ್ಲಾ ಕಡಿದು ಮುತ್ತುಗದ ಸಸಿಗಳನ್ನೇ ನೆಟ್ಟು ಬೆಳೆಸುತ್ತಾನೆ. ತತ್ಫಲವಾಗಿ ನಯನಮನೋಹರವಾದ ಹೂಗಳೇನೋ ಬಿಡುತ್ತವೆ. ಆದರೆ ಮಾವಿನಹಣ್ಣುಗಳಂತೆ ಸಿಹಿಯಾದ ಹಣ್ಣುಗಳು ಮುತ್ತುಗದ ಮರದಲ್ಲಿ ಬಿಡುವುದಿಲ್ಲ. ಇದರಿಂದಾಗಿ ಅವನು ಬಹಳ ಸಂಕಟಪಡುತ್ತಾನೆ. ಆದುದರಿಂದ ತಾತ್ಕಾಲಿಕವಾದ ಆನಂದಕ್ಕಾಗಿ ವಿವೇಚನಾರಹಿತವಾದ ಕಾರ್ಯವನ್ನು ಮಾಡಬಾರದು.

ಅವಿಜ್ಞಾಯ ಫಲಂ ಯೋ ಹಿ ಕರ್ಮ ತ್ವೇವಾನುಧಾವತಿ ।
ಸ ಶೋಚೇತ್ಫಲವೇಲಾಯಾಂ ಯಥಾ ಕಿಂಶುಕಸೇಚಕಃ ॥೯॥

ಯಾವುದಾದರೂ ಕಾರ್ಯದ ನಿಶ್ಚಿತವಾದ ಫಲವೇನೆಂಬುದನ್ನು ಯೋಚಿಸದೇ ಮಾಡಿಬಿಟ್ಟರಾಯಿತೆಂಬ ಧಾವಂತದಿಂದ ಕಾರ್ಯಮಾಡುವವನು–ಮುತ್ತುಗದ ಮರಕ್ಕೆ ನೀರೆರೆದು ಪೋಷಿಸಿದವನಂತೆ ಫಲಸಮಯದಲ್ಲಿ ದುಃಖಪಡಬೇಕಾಗುತ್ತದೆ. ಅವನು ಮಾಡಿದ ಕಾರ್ಯವು ವ್ಯರ್ಥವಾಗುತ್ತದೆ ಅಥವಾ ಕೆಟ್ಟ ಪರಿಣಾಮವನ್ನುಂಟುಮಾಡುತ್ತದೆ.

ಕೌಸಲ್ಯೇ! ನಾನೇ ಅಂತಹ ಮೂರ್ಖತನದ ಕಾರ್ಯವನ್ನು ಮಾಡಿದ್ದೇನೆ. ಮಾವಿನ ತೋಪನ್ನು ಕತ್ತರಿಸಿ ಮುತ್ತುಗದ ತೋಪನ್ನು ನೀರೆರೆದು ಬೆಳೆಸಿದ್ದೇನೆ. ಫಲಾಭಿಸಂಧಿಯ ಕಾಲದಲ್ಲಿ ಶ್ರೀರಾಮನನ್ನು ಕಾಡಿಗಟ್ಟಿ ಈಗ ಅದಕ್ಕಾಗಿ ದುರ್ಮತಿಯಾದ ನಾನು ದುಃಖಪಡುತ್ತಿದ್ದೇನೆ.

ದೇವಿ! ಹಿಂದಿನದೊಂದು ಪ್ರಸಂಗವನ್ನು ಹೇಳುವೆನು ; ಕೇಳು. ನಾನಿನ್ನೂ ಧನುರ್ವಿದ್ಯೆಯನ್ನು ಅಭ್ಯಸಿಸುತ್ತಿದ್ದಾಗ ಬಾಲಕನಾಗಿದ್ದಾಗಲೇ "ರಾಜಕುಮಾರನು ಶಬ್ದವೇಧಿಯ ಧನುರ್ವಿದ್ಯೆಯಲ್ಲಿ ಮಹಾಚತುರ"- ಎಂಬ ಕೀರ್ತಿಯನ್ನು ಗಳಿಸಿದ್ದೆನು. ನನ್ನ ಪಾಪಕಾರ್ಯಕ್ಕೆ ಆ ಶಬ್ದ ವೇಧಿತ್ವವೇ ಮೂಲವಾಯಿತು. ಅರಿವಿಲ್ಲದ ಹುಡುಗನಿಂದ ಕುಡಿಯಲ್ಪಟ್ಟ ವಿಷವು ಹೇಗೆ ಅವನ ಅವಸಾನಕ್ಕೇ ಕಾರಣವಾಗುವುದೋ–ಹಾಗೆಯೇ ಶಬ್ದವು ಯಾವುದೆಂಬ ಅರಿವಿಲ್ಲದೇ ಮಾಡಿದ ದುಷ್ಕೃತ್ಯವು ನನ್ನ ಈ ಮಹಾ ದುಃಖಕ್ಕೆ ಕಾರಣವಾಗಿದೆ. ನನ್ನ ಈ ದುಃಖಕ್ಕೆ ನಾನೇ ಕಾರಣನು. ಬೇರೆ ಯಾರೂ ಕಾರಣರಲ್ಲ. ಮನುಷ್ಯನೊಬ್ಬನು ಮುತ್ತುಗದ ಹೂವನ್ನು ನೋಡಿ ವಿಮೋಹಿತನಾಗಿ ಅದರಲ್ಲಿ ಲಭಿಸುವ ಫಲದ ವಿಷಯವಾಗಿ ಸ್ವಲ್ಪವೂ ಯೋಚಿಸದೇ ನೀರೆರೆದು ಪೋಷಿಸುವಂತೆ–ನಾನೂ ಶಬ್ದಲಕ್ಷ್ಯಭೇದನದ ವಿದ್ಯೆಯನ್ನು ಶ್ರದ್ಧೆಯಿಂದ ಕಲಿತೆನು. ಅದರ ಪರಿಣಾಮವೇನೆಂಬುದನ್ನು ಸ್ವಲ್ಪವಾದರೂ ಯೋಚಿಸಲೇ ಇಲ್ಲ. ಅದರಿಂದಾಗಿ ಮುತ್ತುಗದ ಮರವನ್ನು ನೀರೆರೆದು ಪೋಷಿಸಿದವನಿಗೆ ಸಿಕ್ಕುವ ಫಲವೇ ನನಗೂ ಲಭಿಸಿತು.

ದೇವಿ! ಆಗಿನ್ನೂ ನನಗೆ ಮದುವೆಯಾಗಿರಲಿಲ್ಲ. ನಿನ್ನ ಕೈಹಿಡಿದಿರ ಲಿಲ್ಲ. ಯುವರಾಜನಾಗಿದ್ದೆನು. ಸ್ವೇಚ್ಛೆಯಿಂದ ಸರ್ವತ್ರ ಸಂಚರಿಸುತ್ತಿ ದ್ದೆನು. ಮದ-ಕಾಮಗಳಿಗೆ ಉತ್ತೇಜಕವಾದ ವರ್ಷಾಕಾಲವು ಪ್ರಾಪ್ತ ವಾಯಿತು. ಸೂರ್ಯನು ಕಿರಣಗಳಿಂದ ಭೂಮಿಯಲ್ಲಿರುವ ಸಸ್ಯಗಳನ್ನು ಬಾಡಿಸುತ್ತಾ ಪ್ರಪಂಚದ ಪ್ರಾಣಿಗಳನ್ನು ಸಂತಾಪಗೊಳಿಸುತ್ತಾ ದಕ್ಷಿಣದಿಕ್ಕಿ ನೆಡೆಗೆ ವಾಲಿದನು. (ದಕ್ಷಿಣಾಯನವು ಪ್ರಾರಂಭವಾಯಿತು.) ನೀರಿನಿಂದ ಕೂಡಿದ ಮೇಘಗಳು ಆಕಾಶದಲ್ಲಿ ಕಾಣಿಸಿಕೊಂಡುವು. ಬಿಸಿಲಿನ ಬೇಗೆಯು ಕಡಿಮೆಯಾಯಿತು. ಕಪ್ಪೆಗಳೂ, ಸಾರಂಗಗಳೂ, ಚಾತಕಪಕ್ಷಿಗಳೂ, ನವಿಲು ಗಳೂ ಸಂತಸದಿಂದ ನಲಿದಾಡತೊಡಗಿದುವು. ಮಳೆಯ ದೆಸೆಯಿಂದಾಗಿ ತೋಯ್ದುಹೋಗಿದ್ದ ರೆಕ್ಕೆಗಳಿಂದ ಕೂಡಿದ್ದ ಪಕ್ಷಿಗಳು ಪ್ರಾಯಶ್ಚಿತ್ತಾರ್ಥವಾಗಿ ಸ್ನಾನಮಾಡುತ್ತಿರುವುವೋ ಎಂಬಂತೆ ಕಾಣುತ್ತಿದ್ದುವು. ತೋಯ್ದು ಹೋಗಿದ್ದ ಆ ಅವಸ್ಥೆಯಲ್ಲಿಯೇ ಪಕ್ಷಿಗಳು ಮಳೆ-ಗಾಳಿಗಳಿಂದ ರೆಂಬೆಗಳೆಲ್ಲಾ ಅಳ್ಳಾಡುತ್ತಿದ್ದ ವೃಕ್ಷಗಳಲ್ಲಿ ಸೇರಿಕೊಳ್ಳುತ್ತಿದ್ದುವು. ಬಿದ್ದಿರುವ ಮತ್ತು ಬೀಳು

ತ್ತಿರುವ ಮಳೆಯಿಂದ ತೋಯ್ದುಹೋಗಿದ್ದ ಮತ್ತು ತೋಯ್ದು ಹೋಗುತ್ತಿದ್ದ ಮದಿಸಿದ ಆನೆಯು–ಅಲೆಗಳಿಲ್ಲದ ಸಮುದ್ರದಂತೆಯೂ ನೆನೆದುಹೋದ ಪರ್ವತದಂತೆಯೂ ಕಾಣುತ್ತಿದ್ದಿತು. ಪರ್ವತದಲ್ಲಿ ಬಿಳುಪಾಗಿಯೂ ಕೆಂಪಾಗಿಯೂ ಇದ್ದ ಅನೇಕಾನೇಕ ಖನಿಜಗಳಿದ್ದುವು. ಅವುಗಳ ಮೇಲೆ ಹರಿದುಬರುತ್ತಿದ್ದ ನೀರು ಬಿಳುಪಾಗಿಯೂ ಮತ್ತು ಕೆಂಪಾಗಿಯೂ ಇರುವ ಪ್ರವಾಹದಂತೆ ಕಾಣುತ್ತಿದ್ದಿತು. ಧಾತುಗಳಿಲ್ಲದ ಕಡೆಗಳಲ್ಲಿ ಹರಿದುಬರುತ್ತಿದ್ದ ನೀರು ಸ್ವಚ್ಛವಾಗಿ ಕಾಣುತ್ತಿದ್ದಿತು. ಕೆಲವಡೆಗಳಲ್ಲಿ ಭಸ್ಮದಿಂದ ಮಿಶ್ರಿತವಾಗಿ ಹರಿದುಬರುತ್ತಿದ್ದು ಬೂದುಬಣ್ಣದ ಪ್ರವಾಹದಂತೆ ಕಾಣುತ್ತಿದ್ದಿತು. ಪರ್ವತದ ಮೇಲಿನಿಂದ ಹರಿದುಬರುತ್ತಿದ್ದ ಬಣ್ಣ-ಬಣ್ಣಗಳ ಆ ಪ್ರವಾಹಗಳನ್ನು ನೋಡಿದರೆ ಬಣ್ಣ-ಬಣ್ಣಗಳ ಹಾವುಗಳೇನಾದರೂ ಪರ್ವತದ ಮೇಲಿನಿಂದ ಹರಿದು ಬರುತ್ತಿವೆಯೋ ಎಂಬಂತೆ ಕಾಣುತ್ತಿದ್ದಿತು.

ಅಂತಹ ಅತ್ಯಂತಸುಖಕರವಾದ ವರ್ಷರ್ತುವಿನಲ್ಲಿ ನಾನು ಧನುರ್ಬಾಣಗಳನ್ನು ಹಿಡಿದು ಕವಚವನ್ನು ಧರಿಸಿ ರಥದಲ್ಲಿ ಕುಳಿತು ಬೇಟೆಯಾಡುವ ಆಶಯದಿಂದ ಸರಯೂನದಿಯ ಪಕ್ಕದಲ್ಲೇ ಹೊರಟೆನು. ಆ ಸಮಯದಲ್ಲಿ ನನ್ನ ಮನಸ್ಸು ಜಿತವಾಗಿರಲಿಲ್ಲ. ಬೇಟೆಯಲ್ಲಿಯೇ ಆಸಕ್ತವಾಗಿದ್ದಿತು. ರಾತ್ರಿಯ ವೇಳೆಯಲ್ಲಿ ನದಿಯ ತೀರಕ್ಕೆ ನೀರುಕುಡಿಯಲು ಬರುವ ಕಾಡೆಮ್ಮೆಯನ್ನಾಗಲೀ, ಆನೆಯನ್ನಾಗಲೀ, ಸಿಂಹವನ್ನಾಗಲೀ, ಬೇರೆ ಯಾವ ಪ್ರಾಣಿಯನ್ನೇ ಆಗಲೀ–ಶಬ್ದದಿಂದಲೇ ಗುರುತಿಸಿ ಬೇಟೆಯಾಡುವ ಆಶಯವು ನನಗಿದ್ದಿತು. ಪೊದೆಯೊಂದರಲ್ಲಿ ಧನುಷ್ಪಾಣಿಯಾಗಿ ಕುಳಿತಿದ್ದೆನು. ಸುತ್ತಲೂ ಕತ್ತಲೆಯು ಆವರಿಸಿದ್ದಿತು. ಸರಯೂನದಿಯ ಸೋಪಾನದಲ್ಲಿ ಬಿಂದಿಗೆಯನ್ನು ನೀರಿನಿಂದ ತುಂಬುತ್ತಿರುವಂತೆ ಶಬ್ದವು ಕೇಳಿಸಿತು. ಆದರೆ ಅದು ಕಣ್ಣಿಗೆ ಕಾಣಿಸುತ್ತಿರಲಿಲ್ಲ. ಆನೆಯು ಶಬ್ದಮಾಡುತ್ತಾ ನೀರುಕುಡಿಯುತ್ತಿರಬಹುದೆಂದು ನಾನು ಊಹಿಸಿದೆನು. ಅದನ್ನು ಬೇಟೆಯಾಡಬೇಕೆಂಬ ಮನಸ್ಸಾಯಿತು. ಒಡನೆಯೇ ಸರಯೂನದಿಯ ಸೋಪಾನದಲ್ಲಿ ಕೇಳಿಬರುತ್ತಿದ್ದ ಶಬ್ದವನ್ನೇ ಲಕ್ಷೀಕರಿಸಿ ಸರ್ಪಸದೃಶವಾಗಿದ್ದ, ನಿಶಿತವಾಗಿದ್ದ ಬಾಣವನ್ನು ಧನುಸ್ಸಿನಲ್ಲಿ ಹೂಡಿ ಹೆದೆಯನ್ನೇರಿಸಿ ಬಿಟ್ಟುಬಿಟ್ಟೆನು. ಮರು

ಕ್ಷಣದಲ್ಲಿಯೇ ವನವಾಸಿಯಾದ ಮನುಷ್ಯನೊಬ್ಬನ ಕೂಗು ಆ ರಾತ್ರಿಯಲ್ಲಿ ನನಗೆ ಬಹಳ ಸ್ಪಷ್ಟವಾಗಿ ಕೇಳಿಸಿತು. ಶಬ್ದವನ್ನು ಲಕ್ಷೀಕರಿಸಿ ನಾನು ಬಾಣವನ್ನು ಬಿಟ್ಟೊಡನೆಯೇ ಅತ್ತಕಡೆಯಿಂದ ನೀರಿನಲ್ಲಿ ಬೀಳುತ್ತಿದ್ದ ಮನುಷ್ಯನೊಬ್ಬನ ಆರ್ತಧ್ವನಿಯು ಕೇಳಿಬಂದಿತು. ಬಾಣದ ಪ್ರಹಾರ ದಿಂದಾಗಿ ಮರ್ಮಸ್ಥಳದಲ್ಲಿ ಗಾಯಗೊಂಡಿದ್ದ ಆ ಮನುಷ್ಯನು ನೀರಿನಲ್ಲಿ ಬೀಳುತ್ತಾ 'ಹಾ ಅಯ್ಯೋ' ಎಂದು ಕಿರುಚಿಕೊಂಡನು.

ಕಥಮಸ್ಮದ್ವಿಧೇ ಶಸ್ತ್ರಂ ನಿಪತೇತ್ತು ತಪಸ್ವಿನಿ ।
ಪ್ರವಿವಿಕ್ತಾಂ ನದೀಂ ರಾತ್ರಾವುದಾಹಾರೋಽಹಮಾಗತಃ ॥೨೬॥

"ನನ್ನಂತಹ ತಪಸ್ವಿಯ ಮೇಲೆ ಬಾಣಪ್ರಯೋಗವು ಹೇಗೆ ಸಂಭವಿಸಿತು? ಜನರಹಿತವಾಗಿದ್ದ ಈ ನದಿಯ ತೀರಕ್ಕೆ ರಾತ್ರಿಯಲ್ಲಿ ನೀರನ್ನು ಕೊಂಡೊಯ್ಯಲು ನಾನು ಬಂದಿದ್ದೆನು. ನನ್ನನ್ನು ಬಾಣದಿಂದ ಪ್ರಹರಿಸಿದವನಾರು? ನಾನವನಿಗೆ ಯಾವ ಅಪಕಾರವನ್ನು ಮಾಡಿದ್ದೆನು? ಪರಪೀಡನೆಯೆಂಬುದನ್ನೇ ನಾನು ಸಂಪೂರ್ಣವಾಗಿ ತ್ಯಜಿಸಿದ್ದೇನೆ. ಈ ಕಾಡಿನಲ್ಲಿ ಸಿಕ್ಕುವ ಗೆಡ್ಡೆ-ಗೆಣಸುಗಳಿಂದಲೇ ಜೀವನವನ್ನು ನಿರ್ವಹಿಸುತ್ತಿದ್ದೇನೆ. ಇಂತಹ ಅಹಿಂಸಾವ್ರತಪಾಲಕನಾದ ಋಷಿಯಾದ ನನ್ನನ್ನು ಬಾಣ ಪ್ರಯೋಗಮಾಡಿ ವಧಿಸಬೇಕಾದ ಕಾರಣವಾದರೂ ಏನಿದ್ದೀತು? ಅಥವಾ ನನ್ನನ್ನು ಕೊಂದುದರಿಂದ ಪ್ರಯೋಜನವಾದರೂ ಏನಿರುವುದು? ಭಾರ ವಾದ ಜಟೆಯೊಂದರ ಹೊರತಾಗಿ ನನ್ನಲ್ಲಿ ಬೆಲೆಬಾಳುವ ಮತ್ತಾವ ವಸ್ತು ಗಳೂ ಇಲ್ಲ. ನಾನುಡುವ ಬಟ್ಟೆಗಳೋ ನಾರುಮಡಿ ಮತ್ತು ಕೃಷ್ಣಾಜಿನಗಳು. ಇವುಗಳಿಂದ ಯಾರಿಗೂ ಯಾವ ಪ್ರಯೋಜನವೂ ಇಲ್ಲ. ಹೀಗಿರುವಾಗ ನನ್ನನ್ನು ವಧೆಮಾಡಿರುವವನ ಆಶಯವಾದರೂ ಏನಿರಬಹುದು? ಅಥವಾ ನಾನು ನನ್ನ ಜೀವಿತದಲ್ಲಿ ಯಾವಾಗಲಾದರೂ ಯಾರಿಗಾದರೂ ಯಾವುದಾದರೂ ಅಪಕಾರಮಾಡಿದ್ದೆನೇ? ನನಗಂತೂ ಮತ್ತೊಬ್ಬರಿಗೆ ಅಪಕಾರವನ್ನೆಸಗಿದ ಸ್ಮರಣೆಯೇ ಇಲ್ಲ. ನಿಷ್ಫಲವಾದ ಈ ಕಾರ್ಯವು ಅನರ್ಥಕ್ಕೆ ಕಾರಣವಾಗುವುದಲ್ಲಾ! ಅಯ್ಯೋ! ಪ್ರಪಂಚದಲ್ಲಿ ಗುರುಪತ್ನಿಯೊಡನೆ ಸಮಾಗಮಮಾಡಿದವನನ್ನು ಜನರು ಯಾವ

ರೀತಿಯಲ್ಲಿ ಗೌರವಿಸುವುದಿಲ್ಲವೋ–ಹಾಗೆಯೇ ನನ್ನನ್ನು ನಿಷ್ಕಾರಣವಾಗಿ ಕೊಂದಿರುವ ಈ ಮನುಷ್ಯನನ್ನು ಜನರು ಗೌರವಿಸುವುದಿಲ್ಲ.

ನನ್ನ ಜೀವಿತವು ಕೊನೆಗೊಂಡುದಕ್ಕಾಗಿ ನಾನು ಪರಿತಾಪಪಡುವುದಿಲ್ಲ. ನನ್ನನ್ನೇ ಆಶ್ರಯಿಸಿಕೊಂಡಿರುವ ತಂದೆ-ತಾಯಿಗಳ ವಿಷಯವಾಗಿ ದುಃಖಿಸು ತ್ತಿದ್ದೇನೆ. ಆ ವೃದ್ಧದಂಪತಿಗಳನ್ನು ನಾನು ಬಹಳ ಕಾಲದಿಂದ ಪೋಷಿಸಿ ಆದರಿಸುತ್ತಿದ್ದೆನು. ನಾನು ಸತ್ತುಹೋದನಂತರ ಅವರೇನು ಮಾಡುವರು? ಅವರೂ ನನ್ನಂತೆಯೇ ಪ್ರಾಣತ್ಯಾಗಮಾಡಬೇಕಾಗುವುದು. ಅಯ್ಯೋ! ಒಂದೇ ಬಾಣಪ್ರಹಾರದಿಂದ ನಾವು ಮೂವರೂ ಹತರಾದೆವು. ಜಿತೇಂದ್ರಿಯನಲ್ಲದ ಸ್ವೇಚ್ಛಾವೃತ್ತಿಯಿಂದಿರುವ ಯಾವ ಮೂರ್ಖನಿಂದ ನಾವೆಲ್ಲರೂ ಹತರಾಗಿ ಹೋದೆವು?"

ದೇವಿ! ಧಾರ್ಮಿಕನಾಗಿ ಬಾಳಬೇಕೆಂಬ ಆಕಾಂಕ್ಷೆಯಿದ್ದ ನಾನು ಕರುಣಾಜನಕವಾದ ಆ ಮಾತುಗಳನ್ನು ಕೇಳಿದೊಡನೆಯೇ ಅತ್ಯಂತ ವ್ಯಥಿತ ನಾದೆನು. ನನ್ನ ಕೈಯಲ್ಲಿದ್ದ ಧನುರ್ಬಾಣಗಳು ಜಾರಿ ಕೆಳಗೆ ಬಿದ್ದುವು. ಆ ಕಾಳರಾತ್ರಿಯಲ್ಲಿ ಬಹಳವಾಗಿ ವಿಲಪಿಸುತ್ತಿದ್ದ ಆ ಋಷಿಯ ದೀನವಾದ ಮಾತುಗಳನ್ನು ಕೇಳುತ್ತಿದ್ದಂತೆ ನನ್ನ ಬುದ್ಧಿಯು ಭ್ರಮಿಸಿತು. ಶೋಕದ ಆಧಿಕ್ಯದಿಂದಾಗಿ ಮೂರ್ಛಿತನೂ ಆದೆನು. ಸ್ವಲ್ಪ ಹೊತ್ತಿನಲ್ಲಿಯೇ ಚೇತರಿಸಿ ಕೊಂಡೆನು. ಆ ಸಮಯದಲ್ಲಿ ನನ್ನ ಸತ್ತ್ವವೆಲ್ಲವೂ ಉಡುಗಿಹೋಗಿದ್ದಿತು. ಮನಸ್ಸು ಕಲುಷಿತವಾಗಿದ್ದಿತು. ರೋದನವು ಕೇಳಿಬರುತ್ತಿದ್ದ ಸರಯೂ ನದಿಯ ಸಮೀಪಕ್ಕೆ ಧಾವಿಸಿದೆನು. ಅಲ್ಲಿ ನನ್ನ ಬಾಣದ ಪ್ರಹಾರದಿಂದ ಪ್ರಹೃತನಾಗಿ ಬಿದ್ದಿದ್ದ ಋಷಿಕುಮಾರನನ್ನು ನೋಡಿದೆನು. ಅವನ ಜಟೆಯು ಬಿಚ್ಚಿಹೋಗಿದ್ದಿತು. ಬಿಂದಿಗೆಯು ಕೆಳಗೆ ಬಿದ್ದು ನೀರೆಲ್ಲವೂ ಚೆಲ್ಲಿಹೋಗಿದ್ದಿತು. ಅವನ ಶರೀರವು ಧೂಳಿನಿಂದ ಮುಚ್ಚಿಹೋಗಿದ್ದಿತು. ರಕ್ತದಿಂದ ತೋಯ್ದಿದ್ದಿತು. ಬಾಣದ ಆಘಾತದಿಂದ ಪೀಡಿತನಾಗಿ ಸಂಕಟಪಡುತ್ತಿದ್ದನು. ಭಯಗೊಂಡಿದ್ದ ಮತ್ತು ಅಸ್ವಸ್ಥವಾದ ಮನಸ್ಸಿನಿಂದ ಕೂಡಿದ ನನ್ನನ್ನವನು ಎರಡು ಕಣ್ಣುಗಳಿಂದಲೂ ತೀಕ್ಷ್ಣವಾಗಿ ನೋಡಿದನು. ತನ್ನ ತೇಜಸ್ಸಿನಿಂದಲೇ ನನ್ನನ್ನು ದಹಿಸಿಬಿಡುವನೋ ಎಂಬಂತೆ ನನ್ನನ್ನು ವೀಕ್ಷಿಸುತ್ತಾ ಅತ್ಯಂತಕ್ರೂರವಾದ ಈ ಮಾತುಗಳನ್ನಾಡಿದನು :

‘‘ಮಹಾರಾಜ! ಅರಣ್ಯದಲ್ಲಿ ಗೆಡ್ಡೆ-ಗೆಣಸುಗಳನ್ನು ತಿಂದು ಜೀವಿಸುತ್ತಿರುವ ನಾನು ನಿನಗೆ ಯಾವ ಅಪರಾಧವನ್ನು ಮಾಡಿದೆನು? ಮಾತಾ-ಪಿತೃಗಳಿಗಾಗಿ ನೀರನ್ನೊಯ್ಯಲು ಸರಯೂನದಿಗೆ ಬಂದ ನಿರಪರಾಧಿಯಾದ ನನ್ನನ್ನು ಬಾಣದಿಂದ ಪ್ರಹರಿಸಿರುವೆ. ಒಂದೇ ಬಾಣದಿಂದ ಮರ್ಮಸ್ಥಳ ವನ್ನು ಭೇದಿಸಿ ನನ್ನನ್ನು ಕೊಲ್ಲಲಾಗಿ ಅಂಧರಾದ ನನ್ನ ತಂದೆ-ತಾಯಿಗಳನ್ನೂ ಕೊಂದಂತಾಗಿದೆ. ಆ ನನ್ನ ವೃದ್ಧ ತಂದೆ-ತಾಯಿಗಳು ದುರ್ಬಲರಾಗಿದ್ದಾರೆ. ಕುರುಡರಾಗಿದ್ದಾರೆ. ಬಾಯಾರಿಕೆಯಿಂದ ಬಳಲಿ ನೀರಿಗಾಗಿ ನನ್ನನ್ನೇ ಪ್ರತೀಕ್ಷಿಸುತ್ತಿದ್ದಾರೆ. ಬಹಳ ಹೊತ್ತಿನಿಂದ ನೀರಿಗಾಗಿ ಪರಿತಪಿಸುತ್ತಿರುವ ಅವರು, ತಡೆದುಕೊಳ್ಳಲು ಅತಿಕಷ್ಟವಾದ ಬಾಯಾರಿಕೆಯನ್ನು ಹೇಗೆತಾನೇ ತಡೆದು ಕೊಳ್ಳುವರು? ನಾನು ಮಾಡಿರುವ ತಪಸ್ಸಿನ ಫಲವಾಗಲೀ, ನಾನು ಕೇಳಿ ರುವ ಸತ್ಕಥಾಶ್ರವಣದ ಪುಣ್ಯವಾಗಲೀ ನನಗೆ ಇಲ್ಲವೆಂದೇ ತೋರುತ್ತದೆ. ಏಕೆಂದರೆ : ನಾನಿಲ್ಲಿ ಭೂಮಿಯ ಮೇಲೆ ಬಿದ್ದಿರುವುದನ್ನು ನನ್ನ ತಂದೆಯು ತಿಳಿಯಲಾರನು. ಒಂದು ವೇಳೆ ನಾನಿಲ್ಲಿ ಬಿದ್ದಿರುವುದನ್ನು ತಿಳಿದರೂ ಕುರುಡನಾದ, ತಿರುಗಾಡಲು ಅಶಕ್ತನಾದ ಅವನೇನು ತಾನೇ ಮಾಡುವನು? ಗಾಳಿಯ ಆಘಾತದಿಂದ ಮರವು ಕೆಳಕ್ಕೆ ಬೀಳುತ್ತಿರುವಾಗ ಪಕ್ಕದಲ್ಲಿಯೇ ಇರುವ ಮತ್ತೊಂದು ಮರವು ಅದನ್ನು ತಡೆಹಿಡಿದು ನಿಲ್ಲಿಸುವ ಸಾಧ್ಯತೆಯಿಲ್ಲ. ಆದುದರಿಂದ ನಾನಿಲ್ಲಿ ಬಿದ್ದಿರುವ ಸಂಗತಿಯು ನನ್ನ ತಂದೆಗೆ ತಿಳಿದರೂ ರೋದನಮಾಡುವುದೊಂದರ ಹೊರತಾಗಿ ಮತ್ತೇನು ಮಾಡಲೂ ಸಾಧ್ಯವಿಲ್ಲ. ಆದುದರಿಂದ, ಮಹಾರಾಜ! ನೀನೇ ನನ್ನ ತಂದೆಯ ಬಳಿಗೆ ಬೇಗಹೋಗಿ ಈ ವಿಷಯವನ್ನು ಹೇಳು. ಹಾಗೇನಾದರೂ ನೀನು ಅವರ ಬಳಿಗೆ ಹೋಗಿ ಈ ವಿಷಯವನ್ನು ಹೇಳದಿದ್ದರೆ : ಧಗ-ಧಗನೆ ಉರಿಯುತ್ತಿರುವ ಕಾಡುಗಿಚ್ಚು ಅರಣ್ಯವನ್ನೇ ಸುಟ್ಟುಬಿಡುವಂತೆ–ಕೋಪಾಗ್ನಿಯಿಂದ ನನ್ನ ತಂದೆಯು ನಿನ್ನನ್ನು ಸುಟ್ಟುಬಿಡಬಹುದು. ನನ್ನ ತಂದೆಯ ಆಶ್ರಮವು ಇದೇ ಕಾಲುದಾರಿಯಲ್ಲಿ ಹೋದರೆ ಸಿಕ್ಕುತ್ತದೆ. ಇಲ್ಲಿಗೆ ಬಹಳ ಹತ್ತಿರದಲ್ಲೇ ಇದೆ. ಅಲ್ಲಿಗೆ ನೀನು ಹೋಗಿ ಅವನು ಕುಪಿತನಾಗಿ ಶಾಪಕೊಡದ ರೀತಿಯಲ್ಲಿ ವಿನಯ-ಸಾಂತ್ವನಗಳಿಂದ ಅವನನ್ನು ಸಮಾಧಾನಗೊಳಿಸು. ನನ್ನ ಮರ್ಮಸ್ಥಳದಲ್ಲಿ ನೆಟ್ಟುಕೊಂಡಿರುವ ಈ ಬಾಣವನ್ನು ಕಿತ್ತುಬಿಡು. ಮೃದು

ವಾಗಿಯೂ ಎತ್ತರವಾಗಿಯೂ ಇರುವ ತೀರಪ್ರದೇಶವನ್ನು ವೇಗವಾದ ನದಿಯ ಪ್ರವಾಹವು ಕೊರೆದುಹಾಕುವಂತೆ–ಈ ಬಾಣವು ನನ್ನ ಮರ್ಮಸ್ಥಳ ವನ್ನು ಕೊರೆದು ಯಾತನೆಯನ್ನುಂಟುಮಾಡುತ್ತಿದೆ.''

ದೇವಿ! ಋಷಿಕುಮಾರನೇನೋ ಯಾತನೆಯನ್ನು ಸಹಿಸಲಾರದೇ ಮರ್ಮಸ್ಥಳದಲ್ಲಿ ಚುಚ್ಚಿಕೊಂಡಿದ್ದ ಬಾಣವನ್ನು ತೆಗೆಯಲು ಹೇಳಿದನು. ಆದರೆ ಬಾಣವಿರುವವರೆಗೂ ಪ್ರಾಣಗಳು ಋಷಿಕುಮಾರನಲ್ಲಿರುತ್ತವೆ. ಬಾಣವನ್ನು ಕಿತ್ತೊಡನೆಯೇ ಬಾಣದ ಜೊತೆಯಲ್ಲಿ ಅವನ ಪ್ರಾಣಗಳೂ ಹೋಗುತ್ತವೆ. ಇದರಿಂದ ಬಾಣವನ್ನು ಹೊರತೆಗೆಯುವ ವಿಷಯದಲ್ಲಿ ನನಗೆ ಚಿಂತೆಯುಂಟಾಯಿತು. ಬಹಳ ದುಃಖಿತನಾಗಿದ್ದ, ದೀನನಾಗಿದ್ದ ಮತ್ತು ಶೋಕಾತುರನಾಗಿದ್ದ ನನ್ನ ಚಿಂತೆಯೇನೆಂಬುದನ್ನು ಋಷಿಕುಮಾರನು ಗಮನಿಸಿದನು. ಆ ಸಮಯದಲ್ಲವನು ಬಾಣದ ಪೆಟ್ಟಿನಿಂದ ಬಹಳವಾಗಿ ಪರಿತಪಿಸುತ್ತಿದ್ದನು. ಅತ್ಯಂತ ಆರ್ತನಾದವನಂತೆ ಬಹಳ ಕಷ್ಟದಿಂದ ಹೇಳಿದನು :

``ಮಹಾರಾಜ! ನಾನು ಮರಣದ ಸನಿಹದಲ್ಲಿದ್ದೇನೆ. ಕಣ್ಣುಗುಡ್ಡೆಗಳು ಮೇಲಕ್ಕೆ ಸಿಕ್ಕಿಕೊಂಡಿವೆ. ನಿಶ್ಚೇಷ್ಟನಾಗಿ ಬಿದ್ದಿದ್ದೇನೆ. ಯಮನ ಅರಮನೆಗೆ ಹೋಗುವುದರಲ್ಲಿದ್ದೇನೆ. ಆದರೂ ಧೈರ್ಯದಿಂದ ನನ್ನ ಶೋಕವನ್ನು ಸಹಿಸಿಕೊಂಡು ಸ್ಥಿರಚಿತ್ತನಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಬ್ರಾಹ್ಮಣನ ಹತ್ಯೆಯನ್ನು ಮಾಡಿದ ಪಾಪವು ಸಂಭವಿಸುವುದೆಂಬ ಭಯವನ್ನು ನಿನ್ನ ಹೃದಯದಿಂದ ದೂರೀಕರಿಸು. ನಾನು ಬ್ರಾಹ್ಮಣನಲ್ಲ. ಬ್ರಹ್ಮಹತ್ಯೆ ಮಾಡಿದೆ ನೆಂಬ ಮನೋವ್ಯಥೆಯು ನಿನಗುಂಟಾಗದಿರಲಿ. ನನ್ನ ತಂದೆಯು ವೈಶ್ಯಜಾತಿಯವನು. ತಾಯಿಯು ಶೂದ್ರಜಾತಿಯವಳು. ಆ ದಂಪತಿಗಳ ಮಗನು ನಾನು. ಈಗಲಾದರೂ ನನ್ನ ಮರ್ಮಸ್ಥಳದಲ್ಲಿ ಚುಚ್ಚಿಕೊಂಡಿರುವ ಬಾಣ ವನ್ನು ಕಿತ್ತುಹಾಕು.''*

ದೇವಿ! ಆ ಋಷಿಕುಮಾರನು ಬಹಳ ಕಷ್ಟದಿಂದ ಇಷ್ಟು ಮಾತು ಗಳನ್ನು ಹೇಳಿದನು. ಮರ್ಮಸ್ಥಳಕ್ಕೆ ಬಾಣವು ನೆಟ್ಟುದರ ನೋವಿನಿಂದ

*ವೈಶ್ಯನಿಗೆ ಶೂದ್ರಸ್ತ್ರೀಯಲ್ಲಿ ಹುಟ್ಟಿದವನಿಗೆ 'ಕರಣ' ನೆಂದು ಹೆಸರು. ``ಶೂದ್ರಾವಿಶೋಸ್ತು ಕರಣಃ'' [ಅಮರಃ]

ಅವನು ಹೊರಳಾಡುತ್ತಿದ್ದನು. ಆಗಾಗ ಕೈ-ಕಾಲುಗಳನ್ನೂ ಒದರುತ್ತಿದ್ದನು. ಒಮ್ಮಿಂದೊಮ್ಮೆ ಗಡ-ಗಡನೆ ನಡುಗುತ್ತಿದ್ದನು. ಈ ಪರಿಯಲ್ಲಿ ಬಹಳವಾಗಿ ಕಷ್ಟಪಡುತ್ತಿದ್ದ ಋಷಿಕುಮಾರನ ಮರ್ಮಸ್ಥಳದಿಂದ ಬಾಣವನ್ನು ಕಿತ್ತು ಬಿಟ್ಟೆನು. ತಪೋಧನನಾದ ಋಷಿಕುಮಾರನು ನನ್ನನ್ನೊಮ್ಮೆ ದಿಟ್ಟಿಸಿ ನೋಡಿ ಅಸುನೀಗಿದನು."

ಇಷ್ಟು ಹೇಳಿ ದಶರಥನೊಮ್ಮೆ ನಿಟ್ಟುಸಿರುಬಿಟ್ಟನು. ತಾನು ಮೊದಲ ಬಾರಿಗೆ ಋಷಿಕುಮಾರನನ್ನು ನೋಡಿದ ಚಿತ್ರವನ್ನೇ ಪುನಃ ಸ್ಮರಿಸಿಕೊಂಡು ಕೌಸಲ್ಯೆಗೆ ಹೇಳಿದನು :

"ಭದ್ರೇ! ನೀರಿನಿಂದ ತೋಯ್ದುಹೋದ ಶರೀರದಿಂದ ಕೂಡಿದ್ದ, ಮರ್ಮಸ್ಥಳದಲ್ಲಿ ನೆಟ್ಟುಕೊಂಡಿದ್ದ ಬಾಣದಿಂದ ಬಹಳವಾಗಿ ಸಂಕಟಪಡುತ್ತಿದ್ದ, ಬಾರಿ-ಬಾರಿಗೂ ದೀರ್ಘವಾಗಿ ನಿಟ್ಟುಸಿರುಬಿಡುತ್ತಿದ್ದ, ಸರಯೂನದಿಯ ಸೋಪಾನದಲ್ಲಿ ಬಿದ್ದಿದ್ದ ಆ ಋಷಿಕುಮಾರನನ್ನು ಕಂಡು ನಾನು ಬಹಳ ವಿಷಣ್ಣನಾದೆನು. ಅದೇ ಇಂದಿನ ನನ್ನ ದುಃಸ್ಥಿತಿಗೆ ಮೂಲಕಾರಣವಾಗಿದೆ."

೬೩ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೬೪ನೆಯ ಸರ್ಗ

ದಶರಥನು ಕೌಸಲ್ಯೆಗೆ ಋಷಿಕುಮಾರನ ವಧೆಯಿಂದಾಗಿ ಅವನ ವೃದ್ಧರಾದ ತಂದೆ-ತಾಯಿಗಳಿಗೆ ಉಂಟಾದ ದುಃಖವನ್ನೂ ಅವರಿತ್ತ ಶಾಪವನ್ನೂ ವಿವರಿಸಿ ಹೇಳಿದುದು : ಕೌಸಲ್ಯೆಯ ಸಮೀಪದಲ್ಲಿ ವಿಲಪಿಸುತ್ತಲೇ ಇದ್ದು ಅರ್ಧರಾತ್ರಿಯ ಸಮಯದಲ್ಲಿ ಅವಸಾನ ಹೊಂದಿದುದು

ವಧಮಪ್ರತಿರೂಪಂ ತು ಮಹರ್ಷೇಸ್ತಸ್ಯ ರಾಘವಃ ।
ವಿಲಪನ್ನೇವ ಧರ್ಮಾತ್ಮಾ ಕೌಸಲ್ಯಾಂ ಪುನರಬ್ರವೀತ್ ॥೧॥

ಧರ್ಮಾತ್ಮನಾದ ದಶರಥನು ಎಂದೂ ಯಾವಾಗಲೂ ನಡೆಯದಿದ್ದ ಋಷಿಕುಮಾರನ ವಧೆಯ ಪ್ರಸ್ತಾಪದ ವಿಷಯವನ್ನೇ ಬಿಕ್ಕಿ-ಬಿಕ್ಕಿ ಅಳುತ್ತಾ ಕೌಸಲ್ಯೆಗೆ ಪುನಃ ಹೇಳತೊಡಗಿದನು :

"ಕೌಸಲ್ಯೇ! ನಾನಂದು ಅಜ್ಞಾನದ ಕಾರಣದಿಂದ ಮಹಾಪಾಪವನ್ನು

ಮಾಡಿ ವ್ಯಾಕುಲಿತವಾದ ಮನಸ್ಸುಳ್ಳವನಾಗಿದ್ದೆನು. ನಾನೊಬ್ಬನೇ ಕುಳಿತು ಆಕಸ್ಮಿಕವಾಗಿ ನಡೆದ ಆ ಘಟನೆಯನ್ನು ಪುನಃ ಪುನಃ ಚಿಂತಿಸುತ್ತಾ ನನಗೆ ಒಳ್ಳೆಯದಾಗುವ ಬಗೆಯು ಯಾವುದೆಂಬುದನ್ನು ಕುರಿತು ಬುದ್ಧಿಪೂರ್ವಕವಾಗಿ ಯೋಚಿಸಿದೆನು. ಒಂದು ನಿರ್ಧಾರಕ್ಕೆ ಬಂದವನಾಗಿ ನದಿಯ ತೀರದಲ್ಲಿ ಅಸ್ತವ್ಯಸ್ತವಾಗಿ ಬಿದ್ದಿದ್ದ ಬಿಂದಿಗೆಯನ್ನು ತೆಗೆದುಕೊಂಡು ಅದರಲ್ಲಿ ಪರಿಶುದ್ಧವಾದ ನೀರನ್ನು ತುಂಬಿಕೊಂಡು ಋಷಿಕುಮಾರನು ಹೇಳಿದ್ದ ಕಾಲುದಾರಿಯನ್ನೇ ಹಿಡಿದು ಆ ವೃದ್ಧದಂಪತಿಗಳಿದ್ದ ಆಶ್ರಮವನ್ನು ಸೇರಿದೆನು. ಅಲ್ಲಿ ನಾನು ದುರ್ಬಲರೂ, ಕುರುಡರೂ, ವೃದ್ಧರೂ, ರಕ್ಷಕರಿಲ್ಲದವರೂ ಆಗಿದ್ದ ದಂಪತಿಗಳನ್ನು ನೋಡಿದೆನು. ಅವರು ಆ ಸಮಯದಲ್ಲಿ ಕತ್ತರಿಸಲ್ಪಟ್ಟ ರೆಕ್ಕೆಗಳುಳ್ಳ ಪಕ್ಷಿಗಳಂತೆಯೇ ಆಗಿದ್ದರು. ಮಗನ ಸಂಬಂಧವಾದ ಕಥೆಗಳನ್ನೇ ಹೇಳಿಕೊಂಡು ಕುಳಿತಿದ್ದರು. ಯಾರಾದರೊಬ್ಬರ ಅವಲಂಬನೆಯಿಲ್ಲದೇ ಅವರಿಗೆ ಅತ್ತಲಿತ್ತ ತಿರುಗಾಡಲೂ ಆಗುತ್ತಿರಲಿಲ್ಲ. ನನ್ನ ದುಷ್ಕಾರ್ಯದ ಪರಿಣಾಮವಾಗಿ ಮಗನು ಬಹಳ ಹೊತ್ತಾದರೂ ಹಿಂದಿರುಗದೇ ಇದ್ದುದರಿಂದ ತಮ್ಮ ಮಗನು ಬಾಯಾರಿಕೆಯನ್ನು ನೀಗಲು ನೀರು ತರುವನೆಂಬ ಆಶೆಯನ್ನೂ ಅವರು ಬಿಟ್ಟಿದ್ದರು. ಅನಾಥರಂತೆಯೇ ಅತ್ಯಂತ ಉದಾಸೀನರಾಗಿದ್ದರು. ಋಷಿಕುಮಾರನ ಸಂಹಾರದಿಂದಾಗಿ ಶೋಕ-ಭಯಗಳಿಂದ ಪರಿತಪಿಸುತ್ತಿದ್ದ ನಾನು ಆಶ್ರಮಕ್ಕೆ ಹೋಗಿ ವೃದ್ಧದಂಪತಿಗಳನ್ನು ನೋಡಿದಾಗ ಇನ್ನೂ ಹೆಚ್ಚಿನ ಶೋಕಕ್ಕೆ ಗುರಿಯಾದೆನು.

ನನ್ನ ಕಾಲುಗಳ ಸಪ್ಪಳವನ್ನು ಕೇಳಿದೊಡನೆಯೇ ಋಷಿಯು ಹೇಳಿದನು :

ಕಿಂ ಚಿರಾಯಸಿ ಮೇ ಪುತ್ರ ಪಾನೀಯಂ ಕ್ಷಿಪ್ರಮಾನಯ ॥೭॥

“ಮಗು! ಏಕಿಷ್ಟು ತಡಮಾಡಿದೆ? ನೀರನ್ನು ಬೇಗ ತಂದುಕೊಡು.

ಕಿಂನಿಮಿತ್ತಮಿದಂ ತಾತ ಸಲಿಲೇ ಕ್ರೀಡಿತಂ ತ್ವಯಾ ।
ಉತ್ಕಣ್ಠಿತಾ ತೇ ಮಾತೇಯಂ ಪ್ರವಿಶ ಕ್ಷಿಪ್ರಮಾಶ್ರಮಮ್ ॥೮॥

ನೀರಿನಲ್ಲೇಕೆ ಇಷ್ಟು ಹೊತ್ತು ಈಜಾಡಿಕೊಂಡಿದ್ದೆ? ನೀನು ಇಷ್ಟು ಹೊತ್ತಿನವರೆಗೂ ಬಾರದಿರುವುದನ್ನು ನೋಡಿ ನಿನ್ನ ತಾಯಿಯು ಕಾತುರಳಾ

ಗಿರುವಳು. ಆಶ್ರಮದೊಳಕ್ಕೆ ಶೀಘ್ರವಾಗಿ ಬಂದು ವೃದ್ಧೆಯಾದ ನಿನ್ನ ತಾಯಿಯನ್ನು ಸಂತೈಸು.

ಯದ್ವ್ಯಲೀಕಂ ಕೃತಂ ಪುತ್ರ ಮಾತ್ರಾ ತೇ ಯದಿ ವಾ ಮಯಾ ।
ನ ತನ್ಮನಸಿ ಕರ್ತವ್ಯಂ ತ್ವಯಾ ತಾತ ತಪಸ್ವಿನಾ ॥೯॥

ನಾನಾಗಲೀ, ನಿನ್ನ ತಾಯಿಯಾಗಲೀ ನಿನಗೆ ಪ್ರಿಯವಾಗದಿರುವ ಯಾವ ಕಾರ್ಯವನ್ನು ಮಾಡಿರುವೆವು? ಒಂದು ವೇಳೆ ಹಾಗೆ ಮಾಡಿದ್ದರೂ ತಪಸ್ವಿಯಾದ ನೀನದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬಾರದು.

ಗತಿಸ್ತ್ವಮಗತೀನಾಂ ಚ ಚಕ್ಷುಸ್ತ್ವಂ ಹೀನಚಕ್ಷುಷಾಮ್ ।
ಸಮಾಸಕ್ತಾಸ್ತ್ವಯಿ ಪ್ರಾಣಾಃ ಕಿಂ ತ್ವಂ ನೋ ನಾಭಿಭಾಷಸೇ ॥೧೦॥

ಅನಾಥರಾದ ನಮಗೆ ನೀನೇ ದಿಕ್ಕು. ಕಣ್ಣಿಲ್ಲದ ಕುರುಡರಾದ ನಮಗೆ ನೀನೇ ಕಣ್ಣು. ನಮ್ಮ ಪ್ರಾಣಗಳೂ ನಿನ್ನನ್ನೇ ಅವಲಂಬಿಸಿವೆ. ಏಕಪ್ಪಾ! ಮಾತನಾಡುತ್ತಿಲ್ಲ? ಮಾತನಾಡು, ಮಗು!"

ಕೌಸಲ್ಯೇ!ಆ ಸಮಯದಲ್ಲಿ ನಾನು ಆ ವೃದ್ಧನಿಗೆ ಉತ್ತರವನ್ನು ಹೇಳಲೇಬೇಕಲ್ಲವೆ? ನಾನೆಷ್ಟೇ ಪ್ರಯತ್ನಿಸಿದರೂ ನನ್ನ ಬಾಯಿಂದ ಸ್ಪಷ್ಟ ವಾದ ಮಾತುಗಳೇ ಹೊರಡಲಿಲ್ಲ. ಮುನಿಯನ್ನೊಮ್ಮೆ ನೋಡಿ ಭೀತ-ಭೀತ ನಾಗಿಯೇ ಅಸ್ಪಷ್ಟವಾದ ಅಕ್ಷರಗಳಿಂದಲೂ, ಗದ್ಗದಧ್ವನಿಯಿಂದಲೂ ಕೂಡಿದ್ದ ವ್ಯಂಜನಾಕ್ಷರಗಳಿಂದ ರಹಿತವಾಗಿದ್ದ ಮಾತುಗಳನ್ನು ಅವನಿಗೆ ಹೇಳಿದೆನು. ಆ ಸಮಯದಲ್ಲಿ ನನ್ನ ಮನಸ್ಸಿನಲ್ಲಿ ಹುಟ್ಟುತ್ತಿದ್ದ ಊಹಾಪೋಹಾದಿ ಚೇಷ್ಟೆಗಳನ್ನೂ ವಾಗ್ಬಲವನ್ನೂ ಸ್ತಂಭನಗೊಳಿಸಿ ಪುತ್ರಮರಣಜನಿತವಾದ ಭಯವನ್ನು ಅವನಲ್ಲಿ ಉಂಟುಮಾಡಿದೆನು.

ಕ್ಷತ್ರಿಯೋಽಹಂ ದಶರಥೋ ನಾಹಂ ಪುತ್ರೋ ಮಹಾತ್ಮನಃ ।
ಸಜ್ಜನಾವಮತಂ ದುಃಖಮಿದಂ ಪ್ರಾಪ್ತಂ ಸ್ವಕರ್ಮಜಮ್ ॥೧೩॥

"ಮುನಿವರ್ಯನೇ! ನಾನು ಕ್ಷತ್ರಿಯನು. ಮಹಾತ್ಮನಾದ ನಿನ್ನ ಮಗ ನಲ್ಲ. ನನ್ನನ್ನು ದಶರಥನೆಂದು ಕರೆಯುತ್ತಾರೆ. ಸಜ್ಜನರಿಂದ ಅತಿಗರ್ಹಿತ ವಾದ ನನ್ನ ದುಷ್ಕಾರ್ಯದಿಂದಾಗಿ ಪುತ್ರವಿಯೋಗದುಃಖವು ನಿಮಗೆ ಪ್ರಾಪ್ತ

ವಾಗಿದೆ. ಸರಯೂನದಿಯ ತೀರಕ್ಕೆ ನೀರು ಕುಡಿಯಲು ಬರುವ ಹುಲಿಯನ್ನಾಗಲೀ ಆನೆಯನ್ನಾಗಲೀ ಬೇಟೆಯಾಡಬೇಕೆಂಬ ಆಸೆಯಿಂದ ನಾನು ಧನುಷ್ಪಾಣಿಯಾಗಿ ಸರಯೂನದಿಯ ಸಮೀಪಕ್ಕೆ ಹೋದೆನು. ಕತ್ತಲು ಆವರಿಸಿದ್ದರಿಂದ ಅಲ್ಲಿ ಯಾವುದೊಂದೂ ಕಾಣುತ್ತಿರಲಿಲ್ಲ. ನಿನ್ನ ಮಗನು ಕುಂಭದಲ್ಲಿ ನೀರನ್ನು ತುಂಬಿಕೊಳ್ಳುತ್ತಿದ್ದನು. ಆ ಶಬ್ದವನ್ನೇ ನಾನು ಆನೆಯು ನೀರು ಕುಡಿಯುವಾಗ ಆಗುತ್ತಿರುವ ಶಬ್ದವೆಂದು ಭ್ರಮಿಸಿದೆನು. ಶಬ್ದಕ್ಕೆ ಲಕ್ಷ್ಯವಿಟ್ಟು ಬಾಣಪ್ರಯೋಗಮಾಡಿದೆನು. ಮರುಕ್ಷಣದಲ್ಲಿಯೇ ಮನುಷ್ಯನ ಆರ್ತನಾದವು ಕೇಳಿಬಂದಿತು. ಭಯಗೊಂಡ ನಾನು ಸರಯೂನದಿಯ ತೀರಕ್ಕೆ ಧಾವಿಸಿದೆನು. ಅಲ್ಲಿ ನಾನು ಬಾಣದ ಪ್ರಹಾರದಿಂದ ಎದೆಯೊಡೆದು ಅಸುನೀಗಿ ಭೂಮಿಯ ಮೇಲೆ ಮಲಗಿದ್ದ ಋಷಿಕುಮಾರನನ್ನು ನೋಡಿದೆನು. ನಾನು ಅವನ ಬಳಿಗೆ ಹೋದಾಗ ಬಾಣಪ್ರಹಾರದಿಂದ ಕುಮಾರನು ದುಃಖಿಸುತ್ತಿದ್ದನೇ ಹೊರತು ಪ್ರಾಣಹೋಗಿರಲಿಲ್ಲ. ಯಾತನೆಯಿಂದ ಪೀಡಿತನಾಗಿದ್ದ ಅವನೇ ನನಗೆ ಬಾಣವನ್ನು ಕಿತ್ತುಬಿಡಲು ಹೇಳಿದನು. ಅವನ ಮಾತಿನಂತೆ ಅವನ ಮರ್ಮಸ್ಥಳದಲ್ಲಿ ಚುಚ್ಚಿಕೊಂಡಿದ್ದ ಬಾಣವನ್ನು ನಾನು ಕಿತ್ತೆನು. ಬಾಣವನ್ನು ಕಿತ್ತೊಡನೆಯೇ ಋಷಿಕುಮಾರನು– 'ಅಯ್ಯೋ! ಅಂಧರಾದ ಮತ್ತು ವೃದ್ಧರಾದ ತಂದೆ-ತಾಯಿಗಳನ್ನು ರಕ್ಷಿಸುವ ವರಾರು?'– ಮುಂತಾಗಿ ವಿಲಪಿಸುತ್ತಾ ಪ್ರಾಣಗಳನ್ನು ತೊರೆದು ಸ್ವರ್ಗಕ್ಕೆ ಹೋದನು. ಅಜ್ಞಾನದ ಕಾರಣದಿಂದ ನಾನು ನಿಮ್ಮ ಮಗನನ್ನು ಸಂಹರಿಸಿದೆನು. ಎಲ್ಲವೂ ಕೈಮಿಂಚಿ ನಡೆದುಹೋಯಿತು. ಈಗ ನಾನೇನು ಮಾಡಬೇಕೆಂಬುದನ್ನು ದಯಮಾಡಿ ಹೇಳು. ಪ್ರಸನ್ನನಾಗು."

ದೇವಿ! ದುಃಖದಾಯಕವಾದ ಪುತ್ರನ ಮರಣವಾರ್ತೆಯನ್ನು ನನ್ನಿಂದ ಕೇಳಿಯೂ ತೀಕ್ಷ್ಣತರವಾದ ಶಾಪಕೊಡಲು ಆ ಮಹರ್ಷಿಯು ಯತ್ನಿಸಲಿಲ್ಲ.* ಮಗನ ಮರಣವಾರ್ತೆಯನ್ನು ಕೇಳಿದೊಡನೆಯೇ ಅವನ ಮುಖವು ಕಣ್ಣೀರಿನಿಂದ ತೋಯ್ದುಹೋಯಿತು. ಕೈಮುಗಿದುಕೊಂಡು ವಿನೀತನಾಗಿ ನಿಂತಿದ್ದ ನನ್ನನ್ನು ಕುರಿತು ಹೇಳಿದನು :

*"ತೀವ್ರಮಾಯಾಸಂ ಕರ್ತುಂ ಭಗವಾನ್ನೃಷಿಃ ನಾಶಕತ್" ಎಂಬ ಅನ್ವಯದ ರೀತಿಯಲ್ಲಿ ಅರ್ಥಮಾಡಲಾಗಿದೆ. 'ತೀವ್ರಮಾಯಾಸಂ ಅಕರ್ತುಂ ನಾಶಕತ್' ಎಂಬ

ಯದ್ಯೇತದಶುಭಂ ಕರ್ಮ ನ ತ್ವಂ ಮೇ ಕಥಯೇಃ ಸ್ವಯಮ್ ।
ಫಲೇನ್ಮೂರ್ಧಾ ಸ್ಮ ತೇ ರಾಜನ್ಸದ್ಯಃ ಶತಸಹಸ್ರಧಾ ॥೨೨॥

"ಮಹಾರಾಜ! ಅಜ್ಞಾನದಿಂದ ಮಾಡಿರುವ ಈ ದುಷ್ಕಾರ್ಯವನ್ನು ನೀನಾಗಿಯೇ ಬಂದು ನನಗೆ ಹೇಳದೇ ಇದ್ದಿದ್ದರೆ–ನಿನ್ನ ತಲೆಯು ನನ್ನ ಕೋಪಾಗ್ನಿಗೆ ಲಕ್ಷ್ಯವಾಗಿ ನೂರಾರು-ಸಾವಿರಾರು ಚೂರುಗಳಾಗಿ ಒಡೆದು ಹೋಗುತ್ತಿದ್ದಿತು.

ಕ್ಷತ್ರಿಯೇಣ ವಧೋ ರಾಜನ್ವಾನಪ್ರಸ್ಥೇ ವಿಶೇಷತಃ ।
ಜ್ಞಾನಪೂರ್ವಂ ಕೃತಃ ಸ್ಥಾನಾಚ್ಯಾವಯೇದಪಿ ವಜ್ರಿಣಮ್ ॥೨೩॥

ಪ್ರಜಾಪಾಲಕನಾದ ಕ್ಷತ್ರಿಯನು ನಿರ್ದೋಷಿಗಳಾದ ಪ್ರಜೆಗಳನ್ನೆಂದಿಗೂ ಸಂಹರಿಸಬಾರದು. ಅದರಲ್ಲಿಯೂ ವಾನಪ್ರಸ್ಥಾಶ್ರಮದಲ್ಲಿರುವವರನ್ನು ವಧೆಮಾಡಲೇಬಾರದು. ವಾನಪ್ರಸ್ಥಾಶ್ರಮದಲ್ಲಿರುವವರೆಂಬುದನ್ನು ತಿಳಿದೂ ವಧೆಮಾಡಿದರೆ–ಅವನು ಇಂದ್ರನೇ ಆಗಿದ್ದರೂ ತನ್ನ ಪದವಿಯಿಂದ ಚ್ಯುತನಾಗುತ್ತಾನೆ.

ಸಪ್ತಧಾ ತು ಫಲೇನ್ಮೂರ್ಧಾ ಮುನೌ ತಪಸಿ ತಿಷ್ಠತಿ ।
ಜ್ಞಾನಾದ್ವಿಸೃಜತಃ ಶಸ್ತ್ರಂ ತಾದೃಶೇ ಬ್ರಹ್ಮವಾದಿನಿ ॥೨೪॥

ಮುನಿಯಲ್ಲಿ, ತಪಸ್ಸಿನಲ್ಲಿ ತೊಡಗಿರುವವನಲ್ಲಿ, ಬ್ರಹ್ಮವಿದರಲ್ಲಿ ತಿಳಿದೂ ತಿಳಿದೂ ಶಸ್ತ್ರಪ್ರಯೋಗಮಾಡುವವನ ತಲೆಯು ಏಳು ಚೂರುಗಳಾಗಿ ಸೀಳಿ ಹೋಗುತ್ತದೆ.

ಅಜ್ಞಾನಾದ್ಧಿ ಕೃತಂ ಯಸ್ಮಾದಿದಂ ತೇನೈವ ಜೀವಸಿ ।
ಅಪಿ ಹ್ಯದ್ಯ ಕುಲಂ ನ ಸ್ಯಾದಿಕ್ಷ್ವಾಕೂಣಾಂ ಕುತೋ ಭವಾನ್ ॥

ಈ ದುಷ್ಕಾರ್ಯವನ್ನು ನೀನು ತಿಳಿಯದೇ ಮಾಡಿರುವುದರಿಂದಲೇ

ಅನ್ವಯಾನುಸಾರವಾಗಿ-'ಯದ್ಯಪಿ ತಪಸ್ವಿಯಾಗಿದ್ದರೂ ನಾನು ಮಾಡಿದ ತಪ್ಪಿಗಾಗಿ ಘೋರಶಾಪವನ್ನು ನೀಡದಿರುವಿಕೆಯು ಅವನಿಗೆ ಸಾಧ್ಯವಾಗಲಿಲ್ಲ.' (ಶಾಪವನ್ನು ಕೊಟ್ಟೇಬಿಟ್ಟನು.) ಎಂದೂ ಅರ್ಥಮಾಡಬಹುದಾಗಿದೆ. ಆಯಾಸವೆಂದರೆ ವ್ಯಸನವೆಂದು ಅರ್ಥಮಾಡಿ–' ತಪಸ್ವಿಯಾದರೂ ಪುತ್ರಮರಣವ್ಯಸನನ್ನು ಸಹಿಸಲಾರದೇ ಹೋದನು'– ಎಂದೂ ಅರ್ಥಮಾಡಬಹುದು.

ನೀನು ಇದುವರೆಗೂ ಜೀವಿಸಿರುವೆ. ತಪಸ್ಸಿನಲ್ಲಿ ತೊಡಗಿದ್ದ ಋಷಿಕುಮಾರ ನನ್ನು ನೀನು ಸಂಹರಿಸಿಯೂ ಕೂಡ ಜೀವಸಹಿತವಾಗಿ ಇಲ್ಲಿಗೆ ಬಂದಿರುವು ದರಿಂದಲೇ ನೀನು ಅಜ್ಞಾನದಿಂದ ಈ ಕಾರ್ಯವನ್ನು ಮಾಡಿರುವೆ ಯೆಂಬುದು ಸ್ಪಷ್ಟವಾಗಿದೆ. ನೀನೇನಾದರೂ ಉದ್ದೇಶಪೂರ್ವಕವಾಗಿಯೇ ಈ ಕಾರ್ಯವನ್ನು ಮಾಡಿದ್ದರೆ ಇಕ್ಷ್ವಾಕುಕುಲವೇ ವಿನಾಶ ಹೊಂದುತ್ತಿದ್ದಿತು. ಹಾಗಿರುವಾಗ ನಿನ್ನ ಉಳಿವಿನ ಪ್ರಶ್ನೆಯೆಲ್ಲಿ?

ಮಹಾರಾಜ! ರಕ್ತಮಯವಾದ ಶರೀರದಿಂದಲೂ, ಅಸ್ತವ್ಯಸ್ತವಾದ ಕೃಷ್ಣಾಜಿನದಿಂದಲೂ ಕೂಡಿರುವ, ಚೇತನಾರಹಿತನಾಗಿ ಭೂಮಿಯಲ್ಲಿ ಬಿದ್ದಿರುವ, ಯಮಧರ್ಮನ ವಶದಲ್ಲಿರುವ, ಅಂತಿಮದರ್ಶನಕ್ಕೆ ಯೋಗ್ಯ ನಾಗಿರುವ ನಮ್ಮ ಮಗನ ಬಳಿಗೆ ನಮ್ಮನ್ನು ಕರೆದುಕೊಂಡು ಹೋಗು. ಈಗ ನಾವು ಅವನನ್ನು ನೋಡಲು ಬಯಸಿದ್ದೇವೆ."

ದೇವಿ! ಮುನಿಯ ಅಪೇಕ್ಷೆಯಂತೆ ನಾನು ಪರಮದುಃಖಿತರಾದ ಆ ವೃದ್ಧದಂಪತಿಗಳನ್ನು ಸರಯೂನದಿಯ ತೀರಕ್ಕೆ ಕರೆದುಕೊಂಡು ಹೋದೆನು. ಸತ್ತುಬಿದ್ದಿದ್ದ ಋಷಿಕುಮಾರನ ಪಕ್ಕದಲ್ಲಿ ವೃದ್ಧದಂಪತಿಗಳನ್ನು ಕುಳ್ಳಿರಿಸಿ ಮಗನನ್ನು ಸ್ಪರ್ಶಿಸಲು ಸಾಧ್ಯವಾಗುವಂತೆ ಅನುವು ಮಾಡಿಕೊಟ್ಟೆನು. ತಪಸ್ವಿಗಳಾದ ಆ ವೃದ್ಧದಂಪತಿಗಳು ತಮ್ಮ ಏಕಮಾತ್ರ ಪುತ್ರನ ಮೃತಶರೀರವನ್ನು ಸ್ಪರ್ಶಿಸಿ ದುಃಖದಿಂದ ಉದ್ವಿಗ್ನರಾಗಿ ಮಗನ ಶರೀರದ ಮೇಲೆಯೇ ಬಿದ್ದು ಹೊರಳಾಡಿದರು. ಮಹರ್ಷಿಯು ಬಿಕ್ಕಿ-ಬಿಕ್ಕಿ ಅಳುತ್ತಾ ಮಗನಿಗೆ ಹೇಳಿದನು :

ನಾಭಿವಾದಯಸೇ ಮಾದ್ಯ ನ ಚ ಮಾಮಭಿಭಾಷಸೇ ।
ಕಿಂ ನು ಶೇಷೇಽದ್ಯ ಭೂಮೌ ತ್ವಂ ವತ್ಸ ಕಿಂ ಕುಪಿತೋ ಹ್ಯಸಿ ॥೩೦॥

"ಅಯ್ಯೋ ಮಗನೇ! ನಾನು ನಿನ್ನ ಸಮೀಪಕ್ಕೆ ಬಂದಿದ್ದರೂ ನೀನೊಮ್ಮೆ ಎದ್ದು ನನ್ನನ್ನು ನಮಸ್ಕರಿಸಲಿಲ್ಲ. ನನ್ನೊಡನೆ ಒಂದು ಮಾತನ್ನೂ ಆಡುತ್ತಿಲ್ಲ. ನೆಲದ ಮೇಲೇಕೆ ಸುಮ್ಮನೆ ಮಲಗಿರುವೆ? ನಮ್ಮ ಮೇಲೇನಾದರೂ ನಿನಗೆ ಕೋಪವೇ?

ನ ತ್ವಹಂ ತೇ ಪ್ರಿಯಃ ಪುತ್ರ ಮಾತರಂ ಪಶ್ಯ ಧಾರ್ಮಿಕ ।
ಕಿಂ ನು ನಾಲಿಙ್ಗಸೇ ಪುತ್ರ ಸುಕುಮಾರ ವಚೋ ವದ ॥೩೧॥

ಧಾರ್ಮಿಕನೇ! ಒಂದುವೇಳೆ ನಾನು ನಿನಗೆ ಪ್ರಿಯನಾಗಿರದಿದ್ದರೆ ಬೇಡ. ರೋದನಮಾಡುತ್ತಿರುವ ನಿನ್ನ ತಾಯಿಯನ್ನಾದರೂ ನೋಡು. ಅವಳೊಡನೆಯಾದರೂ ಮಾತನಾಡು. ಅವಳನ್ನು ಒಮ್ಮೆಯಾದರೂ ಆಲಿಂಗಿಸಿ ಕೊಳ್ಳುವುದಿಲ್ಲವೇ? ಒಂದು ಮಾತನ್ನಾದರೂ ಆಡಿ ಅವಳನ್ನು ಸಮಾಧಾನ ಗೊಳಿಸು.

ಶಾಸ್ತ್ರಗಳ ಮತ್ತು ಪುರಾಣಗಳ ಅಧ್ಯಯನಕಾಲದಲ್ಲಿ ನಿನ್ನ ಹೃದ ಯಾಂತರಾಳದಿಂದ ಹೊರಬರುತ್ತಿದ್ದ ಹೃದಯಂಗಮವಾದ ಮತ್ತು ಕರ್ಣಾ ನಂದಕರವಾದ ವಾಣಿಯನ್ನು ನಾನು ಅನುದಿನವೂ ಮುಂಜಾನೆಯ ಸಮಯ ದಲ್ಲಿ ಕೇಳುತ್ತಿದ್ದೆನು. ಅದನ್ನೀಗ ನಾನು ಮತ್ತಾರಿಂದ ಕೇಳಲಿ? ಸ್ನಾನ-ಸಂಧ್ಯಾವಂದನೆಗಳನ್ನು ಮಾಡಿ ಹೋಮಾದಿಗಳನ್ನು ಮುಗಿಸಿ ಪುತ್ರಶೋಕ ಭಯಪೀಡಿತನಾದ ನನ್ನ ಸಮೀಪದಲ್ಲಿ ಕುಳಿತು ಸಾಂತ್ವನದ ಮಾತುಗಳಿಂದ ಇನ್ನಾರು ಉಪಚರಿಸುತ್ತಾರೆ?

ಯಾವ ಕಾರ್ಯವನ್ನೂ ಮಾಡದಿರುವ, ಯಾವ ವಸ್ತುವನ್ನೂ ಪ್ರತಿ ಗ್ರಹಿಸದ, ರಕ್ಷಕರೂ ಇಲ್ಲದಿರುವ ನನಗೆ *ಕಂದ-ಮೂಲ-ಫಲಾಹಾರಗಳನ್ನು ತಂದು ಪ್ರಿಯನಾದ ಅತಿಥಿಯನ್ನು ಸತ್ಕರಿಸಿ ಭೋಜನಮಾಡಿಸುವಂತೆ ಮುಂದೆ ಯಾರು ಭೋಜನಮಾಡಿಸುತ್ತಾರೆ? ನನಗೇ ರಕ್ಷಕರೊಬ್ಬರು ಬೇಕಾಗಿರುವಾಗ–ಕುರುಡಿಯಾದ, ವೃದ್ಧೆಯಾದ, ತಪಸ್ವಿನಿಯಾದ ಪುತ್ರ ಪ್ರಾಣಳಾದ, ಶೋಚನೀಯಳಾದ ನಿನ್ನ ತಾಯಿಯನ್ನು ನಾನು ಹೇಗೆತಾನೇ ಪೋಷಿಸಲಿ? ನಿನ್ನನ್ನು ಬಿಟ್ಟು ನಾವು ಬದುಕಿರುವ ಸಾಧ್ಯತೆಯೇ ಇಲ್ಲ. ಆದುದರಿಂದ ಯಮಾಲಯಕ್ಕೆ ಈಗಲೇ ನೀನೊಬ್ಬನೇ ಹೋಗಿಬಿಡಬೇಡ. ಸ್ವಲ್ಪ ನಿಲ್ಲು. ನನ್ನೊಡನೆ ಮತ್ತು ನಿನ್ನ ತಾಯಿಯೊಡನೆ ಯಮಾಲಯಕ್ಕೆ ನಾಳೆ ಹೋಗುವಿಯಂತೆ. ನಾವಿಬ್ಬರೂ ಶೋಕಪೀಡಿತರಾಗಿದ್ದೇವೆ. ಅನಾಥರಾಗಿ

*ಕಂದಃ=ನೀರಿನಲ್ಲಿ ಹುಟ್ಟುವ ಪದ್ಮಾದಿ ಬಳ್ಳಿಗಳ ಗೆಡ್ಡೆ ಮೂಲಂ=ಭೂಮಿಯಲ್ಲಿ ಬೆಳೆಯುವ ಗೆಣಸು ಮುಂತಾದುವುಗಳು.

ದ್ದೇವೆ. ಶೋಚನೀಯವಾದ ಸ್ಥಿತಿಯಲ್ಲಿದ್ದೇವೆ. ಆದುದರಿಂದ ಬಹುಶೀಘ್ರವಾಗಿಯೇ ನಾವೂ ನಿನ್ನೊಡನೆ ಯಮಾಲಯಕ್ಕೆ ಬಂದುಬಿಡುತ್ತೇವೆ. ಒಂದು ದಿನ ತಡವಾಗಿ ಪ್ರಯಾಣಮಾಡಿದರೆ ಯಮರಾಜನು ಕೋಪಿಸಿಕೊಂಡಾನೆಂದು ನೀನು ಭಯಪಡಬೇಡ. ಅಲ್ಲಿಗೆ ಹೋದಬಳಿಕ ಯಮಧರ್ಮನನ್ನು ನಾನೇ ಸಂದರ್ಶಿಸಿ ಈ ಮಾತನ್ನೂ ಹೇಳುತ್ತೇನೆ :

ಕ್ಷಮತಾಂ ಧರ್ಮರಾಜೋ ಮೇ ಬಿಭೃಯಾತ್ಪಿತರಾವಯಮ್ ॥

"ಧರ್ಮರಾಜನು ಕ್ಷಮಿಸೋಣವಾಗಲಿ. ನಾವಿಬ್ಬರೂ ಇವನ ತಂದೆ-ತಾಯಿಗಳು. ನಮ್ಮಿಬ್ಬರನ್ನೂ ಇವನು ಇಲ್ಲಿಗೆ ಕರೆತರಬೇಕಾಯಿತು. ಆದುದರಿಂದ ನನ್ನ ಮಗನು ಇಲ್ಲಿಗೆ ಬರಲು ಸ್ವಲ್ಪ ಸಾವಕಾಶವಾಯಿತು."

ಯಮನು ಧರ್ಮಾತ್ಮನು. ಮಹಾಯಶೋವಂತನಾದ ಲೋಕಪಾಲನು. ಅನಾಥನಾದ ನನಗೆ ಒಂದು ಶಾಶ್ವತವಾದ ಅಭಯವನ್ನು ನೀಡಿಯೇ ನೀಡುವನು.

ಅಪಾಪೋಽಸಿ ಯದಾ ಪುತ್ರ ನಿಹತಃ ಪಾಪಕರ್ಮಣಾ ।
ತೇನ ಸತ್ಯೇನ ಗಚ್ಛಾಶು ಯೇ ಲೋಕಾಃ ಶಸ್ತ್ರಯೋಧಿನಾಮ್ ॥

ಮಗು! ನೀನು ಪಾಪರಹಿತನಾಗಿರುವೆ. ಆದರೆ ಪಾಪಕರ್ಮನಾದ ಕ್ಷತ್ರಿಯನು ನಿನ್ನನ್ನು ಸಂಹರಿಸಿದ್ದಾನೆ. ನನ್ನ ಈ ಸತ್ಯವಚನದಂತೆ ಯುದ್ಧಭೂಮಿಯಲ್ಲಿ ಶಸ್ತ್ರಾಘಾತದಿಂದ ಮರಣಹೊಂದುವ ವೀರಯೋಧರು ಯಾವ ಉತ್ತಮಲೋಕಗಳನ್ನು ಸೇರುವರೋ ಅಂತಹ ಉತ್ತಮಲೋಕಗಳಿಗೆ ನೀನು ಶೀಘ್ರವಾಗಿ ಹೋಗು.* ಯುದ್ಧದಲ್ಲಿ ವಿಮುಖನಾಗದೇ

---

* 'ಪಾಪಕರ್ಮಣಾ' ಎಂಬುದಕ್ಕೆ ಒಬ್ಬೊಬ್ಬರೂ ಒಂದೊಂದು ವಿಧವಾಗಿ ಅರ್ಥಮಾಡಿರುತ್ತಾರೆ :- ೧) ಪಾಪೇನ ಕರ್ಮಣಾ ಶಸ್ತ್ರವಧರೂಪೇಣ = ಶಸ್ತ್ರವಧೆಯ ರೂಪದ ದುಷ್ಕಾರ್ಯದಿಂದ. ೨) ಪಾಪಕರ್ಮಣಾ = ದುಷ್ಕಾರ್ಯಮಾಡಿದ ಈ ಕ್ಷತ್ರಿಯನಿಂದ. ೩) ಹಿಂದೆ ಮಾಡಿದ ಪಾಪಕಾರ್ಯದ ಫಲದಿಂದ. ಮತ್ತೊಬ್ಬರು ಈ ಶ್ಲೋಕಕ್ಕೆ ಹೀಗೂ ವ್ಯಾಖ್ಯೆಮಾಡಿರುತ್ತಾರೆ :- "ದುಷ್ಕಾರ್ಯಪ್ರವರ್ತಕನಾದ ರಾಜನು ಸ್ವತಃ ನಿನ್ನನ್ನು ಕೊಂದಿದ್ದರಿಂದಲೇ ನೀನು ಪೂರ್ವಜನ್ಮದಲ್ಲಿ ಮಾಡಿದ್ದ ಪಾಪವು ನಿವೃತ್ತಿಹೊಂದಿದೆ. "ಯದಾ ಪಾಪಕರ್ಮಣಾ ನಿಹತಃ ತದಾ ತ್ವಂ ಅಪಾಪೋಽಸಿ"

ಕಡೆಯವರೆಗೂ ಹೋರಾಡಿ ಎದುರಾಳಿಗೆ ಅಭಿಮುಖನಾಗಿ ನಿಂತು ಅವನ ಶಸ್ತ್ರಘಾತದಿಂದಲೇ ಮರಣಹೊಂದುವ ವೀರಯೋಧರು ಯಾವ ಸದ್ಗತಿಯನ್ನು ಹೊಂದುವರೋ–ಅಂತಹ ಸದ್ಗತಿಯನ್ನು ನೀನೂ ಪಡೆದುಕೊ.

ಸಗರ - ಶೈಬ್ಯ - ದಿಲೀಪ - ಜನಮೇಜಯ - ನಹುಷ - ಧುಂಧುಮಾರರು ಎಂತಹ ಸದ್ಗತಿಯನ್ನು ಪಡೆದರೋ–ಅಂತಹುದೇ ಸದ್ಗತಿಯನ್ನು ನೀನೂ ಪಡೆದುಕೋ. ಸಾಧು-ಸತ್ಪುರುಷರಿಗೂ, ಅಧ್ಯಯನ-ಅಧ್ಯಾಪನಾದಿ ಷಟ್ಕರ್ಮನಿರತರಿಗೂ, ತಪಸ್ವಿಗಳಿಗೂ, ಭೂಮಿಯನ್ನು ದಾನಮಾಡಿದವರಿಗೂ, ಆಹಿತಾಗ್ನಿಯಾದವನಿಗೂ, ಏಕಪತ್ನೀವ್ರತಸ್ಥನಿಗೂ ಯಾವ ಸದ್ಗತಿಯುಂಟಾಗುವುದೋ–ಅಂತಹ ಸದ್ಗತಿಯು ನಿನಗೂ ಪ್ರಾಪ್ತವಾಗಲಿ. ಸಾವಿರಾರು ಹಸುಗಳನ್ನು ದಾನಮಾಡಿದವರಿಗೆ, ಗುರುಗಳ ಪಾದಸೇವೆಯನ್ನು ಮಾಡಿದವರಿಗೆ, ಮಹಾಪ್ರಸ್ಥಾನಮಾಡಿ ದೇಹತ್ಯಾಗವನ್ನು ಮಾಡಿದವರಿಗೆ–ಯಾವ ಉತ್ತಮಲೋಕಗಳು ಲಭಿಸುವುವೋ–ಅಂತಹ ಲೋಕಗಳಿಗೆ ನೀನೂ ಪ್ರಯಾಣಮಾಡು. ತಪೋನಿಷ್ಠರಾದ ನಮ್ಮ ವಂಶದಲ್ಲಿ ಹುಟ್ಟಿದ ಯಾರೂ ದುರ್ಗತಿಯನ್ನು ಹೊಂದುವುದಿಲ್ಲ. ಆದರೆ ಯಾವನಿಂದ ನನ್ನ ಬಾಂಧವನಾದ (ಮಗನಾದ) ನೀನು ಸಂಹೃತನಾದೆಯೋ ಅವನು ಮಾತ್ರ ದುರ್ಗತಿಯನ್ನೇ ಹೊಂದುತ್ತಾನೆ.”

ಕೌಸಲ್ಯೆ! ಹೀಗೆ ಹೇಳಿಕೊಂಡು ಆ ವೃದ್ಧನು ದೀನಭಾವದಿಂದ ಬಾರಿ-ಬಾರಿಗೂ ವಿಲಪಿಸುತ್ತಿದ್ದನು. ಬಳಿಕ ಅವನು ವೃದ್ಧೆಯಾದ ಪತ್ನಿಯೊಡನೆ ಮಗನಿಗೆ ಉದಕಕ್ರಿಯೆಗಳನ್ನು ಮಾಡಲು ತೊಡಗಿದನು.

ಅವನು ಕೊಂದಿದ್ದೇ ನಿನ್ನ ಪಾಪಕ್ಕೆ ಪ್ರಾಯಶ್ಚಿತ್ತವಾಯಿತು. ಆದುದರಿಂದ ನೀನೀಗ ಪಾಪರಹಿತನಾಗಿರುವೆ.” ತಪಸ್ವಿಗಳಿಗೆ ಮಾತ್ರವೇ ಸಿಕ್ಕುವ ಬ್ರಹ್ಮಲೋಕವು ಯೋಧರಿಗೂ ಸಿಕ್ಕುವುದೆಂಬುದಕ್ಕೆ ಶಾಸ್ತ್ರಪ್ರಮಾಣವು ಈ ರೀತಿಯಾಗಿದೆ :- ದ್ವಾವಿಮೌ ಪುರುಷೌ ಲೋಕೇ ಸೂರ್ಯಮಣ್ಡಲಭೇದಿನೌ ॥ ಪರಿವ್ರಾಡ್ಯೋಗಯುಕ್ತಶ್ಚ ರಣೇ ಚಾಭಿಮುಖೋ ಹತಃ ॥” ಈ ಇಬ್ಬರು ಪುರುಷರೂ ಸೂರ್ಯಮಂಡಲವನ್ನು ಭೇದಿಸಿಕೊಂಡು ಉತ್ತಮಲೋಕಗಳನ್ನು ಹೊಂದುವರು. ಅವರು ಯಾರೆಂದರೆ : ಯೋಗಾಭ್ಯಾಸ ಮಾಡಿ ಸಿದ್ಧಿಯನ್ನು ಪಡೆದ ಸಂನ್ಯಾಸಿಯೊಬ್ಬನು, ಯುದ್ಧದಲ್ಲಿ ಶತ್ರುಗಳನ್ನು ಎದುರಿಸಿ ಹೋರಾಡಿ ಸತ್ತವನು ಮತ್ತೊಬ್ಬನು.

ಋಷಿಪುತ್ರನಾದರೋ ತನ್ನ ತಪೋಬಲದಿಂದಲೂ ತಂದೆಯು ಮಾಡಿದ ಅನುಗ್ರಹದಿಂದಲೂ ದಿವ್ಯರೂಪವನ್ನು ಧರಿಸಿ ದೇವೇಂದ್ರನೊಡನೆ ಸ್ವರ್ಗಾರೋಹಣಮಾಡಿದನು. ದೇವೇಂದ್ರನು ತಾನೇ ಬಂದು ಋಷಿಕುಮಾರನನ್ನು ಸ್ವರ್ಗಕ್ಕೆ ಕರೆದೊಯ್ದನು. ಇಂದ್ರನ ಜೊತೆಯಲ್ಲಿ ಸ್ವರ್ಗಾ



ರೋಹಣಮಾಡಲಿದ್ದ ಋಷಿಕುಮಾರನು ವೃದ್ಧರಾದ ತಂದೆ-ತಾಯಿಗಳನ್ನು ಸ್ವಲ್ಪಹೊತ್ತು ಮಧುರವಾದ ಮಾತುಗಳಿಂದ ಸಂತೈಸುತ್ತಾ ಈ ಮಾತನ್ನು ಹೇಳಿದನು :

"ತಮ್ಮ ಪಾದಸೇವೆಯಿಂದಾಗಿ ನಾನು ಮಹತ್ತಾದ ಸ್ಥಾನವನ್ನೇ ಪಡೆದಿರುವೆನು. ನೀವೂ ಕೂಡ ನನ್ನ ಸಮೀಪಕ್ಕೆ ಶೀಘ್ರವಾಗಿಯೇ ಬರಲಿರುವಿರಿ."

ದೇವಿ! ಜಿತೇಂದ್ರಿಯನಾದ ಋಷಿಕುಮಾರನು ತಂದೆ-ತಾಯಿಗಳಿಗೆ ಹೀಗೆ ಹೇಳಿ ದಿವ್ಯವಾದ ಮತ್ತು ಸುಂದರವಾದ ವಿಮಾನದಲ್ಲಿ ಕುಳಿತು ಬಹಳ ಬೇಗ ಸ್ವರ್ಗಾರೋಹಣಮಾಡಿದನು.

ಇತ್ತಲಾಗಿ ಮಹಾತೇಜಸ್ವಿಯಾದ ವೃದ್ಧತಾಪಸನು ಪತ್ನಿಯೊಡನೆ ಮಗನ ಸಂಬಂಧವಾದ ಉದಕಕ್ರಿಯೆಗಳನ್ನು ಮುಗಿಸಿ ಕೈಮುಗಿದುಕೊಂಡು ಸಮೀಪದಲ್ಲಿಯೇ ನಿಂತಿದ್ದ ನನ್ನನ್ನು ಕುರಿತು ಹೇಳಿದನು :

ಅದ್ಯೈವ ಜಹಿ ಮಾಂ ರಾಜನ್ಮರಣೇ ನಾಸ್ತಿ ಮೇ ವ್ಯಥಾ ।
ಯಚ್ಛರೇಣೈಕಪುತ್ರಂ ಮಾಂ ತ್ವಮಕಾರ್ಷೀರಪುತ್ರಕಮ್ ॥೫೨॥

"ಮಹಾರಾಜ! ನೀನು ಯಾವ ಒಂದೇ ಬಾಣದಿಂದ ನನ್ನ ಏಕಮಾತ್ರಪುತ್ರನನ್ನು ಕೊಂದು ನನ್ನನ್ನು ಅಪುತ್ರವಂತನನ್ನಾಗಿ ಮಾಡಿದೆಯೋ– ಅದೇ ಬಾಣದಿಂದ ನನ್ನನ್ನೂ ಈಗಲೇ ಸಂಹರಿಸು. ಮರಣಹೊಂದಲು ನಾನು ಸ್ವಲ್ಪವಾದರೂ ವ್ಯಥೆಪಡುವುದಿಲ್ಲ.

ನೀನಾದರೋ ಅಜ್ಞಾನದ ಕಾರಣದಿಂದ ಪರಮಪವಿತ್ರನಾದ ನನ್ನ ಮಗನನ್ನು ಸಂಹರಿಸಿದೆ. ತಿಳಿಯದೇ ಅಕಾರ್ಯವನ್ನು ಮಾಡಿದೆಯಾದ ಕಾರಣ ನಿನ್ನನ್ನು ನಾನೀಗಲೇ ಭಸ್ಮಮಾಡಲಿಲ್ಲ. ಆದರೂ ನನ್ನ ಏಕಮಾತ್ರ ಪುತ್ರನನ್ನು ಕೊಂದುದಕ್ಕೆ ಅತ್ಯಂತ ದುಃಖಕರವಾದ ಮತ್ತು ದಾರುಣವಾದ ಶಾಪವನ್ನು ಕೊಡುತ್ತೇನೆ.

ಪುತ್ರವ್ಯಸನಜಂ ದುಃಖಂ ಯದೇತನ್ಮಮ ಸಾಂಪ್ರತಮ್ ।
ಏವಂ ತ್ವಂ ಪುತ್ರಶೋಕೇನ ರಾಜನ್ಕಾಲಂ ಗಮಿಷ್ಯಸಿ ॥೫೪॥

ಪುತ್ರನ ವಿಯೋಗದಿಂದಾಗಿ ನಾನೀಗ ಎಂತಹ ದುಃಖವನ್ನು ಅನುಭವಿಸುತ್ತಿರುವೆನೋ–ಅದೇ ರೀತಿಯಲ್ಲಿ ನೀನೂ ನಿನ್ನ ಕಡೆಗಾಲದಲ್ಲಿ ಪುತ್ರವಿಯೋಗದುಃಖವನ್ನು ಅನುಭವಿಸುವೆ ಮತ್ತು ನನ್ನಂತೆಯೇ ಪುತ್ರವಿಯೋಗದುಃಖದಿಂದಲೇ ಪ್ರಾಣಗಳನ್ನು ತೊರೆಯುವೆ.

ಕ್ಷತ್ರಿಯನಾದ ನೀನು ಅಜ್ಞಾನದಿಂದ ಋಷಿಕುಮಾರನನ್ನು ವಧಿಸಿದೆಯಾದ ಕಾರಣ ನಿನಗೆ ಬ್ರಹ್ಮಹತ್ಯಾಪಾಪವು (ಬ್ರಹ್ಮಹತ್ಯೆಗೆ ಸದೃಶವಾದ ಪಾಪವು) ಉಂಟಾಗುವುದಿಲ್ಲ. ದಕ್ಷಿಣೆಯು ಯಾವ ರೀತಿಯಲ್ಲಿ ದಾತೃವಿಗೆ ಅನುಗುಣವಾದ ಕ್ಷಿಪ್ರಫಲವನ್ನು ಕೊಡುವುದೋ–ಅದೇ ರೀತಿಯಲ್ಲಿ ನೀನು ಮಾಡಿರುವ ಅಪರಾಧಕ್ಕೆ ಇದೇ ವಿಧವಾದ, ಜೀವವನ್ನು ಕೊನೆಗೊಳಿಸುವ ಪುತ್ರವಿಯೋಗರೂಪವಾದ ಸ್ಥಿತಿಯು ಬಹಳ ಬೇಗ ಸನ್ನಿಹಿತವಾಗುತ್ತದೆ."

ಕೌಸಲ್ಯೇ! ವೃದ್ಧದಂಪತಿಗಳು ಹೀಗೆ ನನಗೆ ಶಾಪವನ್ನಿತ್ತು ಬಹಳ ಹೊತ್ತಿನವರೆಗೂ ಮಗನ ಸಲುವಾಗಿ ದುಃಖಪಡುತ್ತಲೇ ಇದ್ದರು. ಅನಂತರ ಇಬ್ಬರೂ ಧಗ-ಧಗನೆ ಉರಿಯುತ್ತಿರುವ ಚಿತೆಯನ್ನುವ ಭೌತಿಕದೇಹವನ್ನು ಪರಿತ್ಯಜಿಸಿ ದಿವ್ಯಶರೀರಗಳನ್ನು ಧರಿಸಿ ಸ್ವರ್ಗಕ್ಕೆ ಹೊರಟುಹೋದರು.

ಈ ವಿಧವಾದ ಪುತ್ರಶೋಕವುಂಟಾಗಲು ಕಾರಣವೇನೆಂಬುದನ್ನು ಚಿಂತಿಸುತ್ತಿದ್ದ ನನಗೆ, ಶಬ್ದವೇಧಿಯ ವಿದ್ಯೆಯನ್ನು ಅರಿತಿದ್ದ ನಾನು ಹಿಂದೆ ಮೂರ್ಖತನದಿಂದ ಮಾಡಿದ್ದ ಪಾಪಕಾರ್ಯವು ಜ್ಞಾಪಕಕ್ಕೆ ಬಂದಿತು.

ತಸ್ಯಾಯಂ ಕರ್ಮಣೋ ದೇವಿ ವಿಪಾಕಃ ಸಮುಪಸ್ಥಿತಃ ।
ಅಪಥ್ಯೈಃ ಸಹ ಸಂಭುಕ್ತೋ ವ್ಯಾಧಿಮನ್ನರಸೋ ಯಥಾ ॥೫೫॥

ಪಥ್ಯವಾಗದಿರುವ ಪದಾರ್ಥಗಳೊಡನೆ ತಿಂದ ಅನ್ನರಸವು ಯಾವ ರೀತಿಯಲ್ಲಿ ವ್ಯಾಧಿಯನ್ನು ಉಲ್ಬಣಗೊಳಿಸುವುದೋ–ಅದೇ ರೀತಿಯಲ್ಲಿ ನಾನು ಹಿಂದೆ ಮಾಡಿದ್ದ ದುಷ್ಕರ್ಮದ ಫಲವು ಇಂದು ಫಲಿಸುತ್ತಿದೆ.

ಈ ಕಾರಣದಿಂದಲೇ ಪ್ರಕೃತಸಂದರ್ಭದಲ್ಲಿ ಮಹಾತ್ಮರಾದ ಆ ಮುನಿಯ ಮಾತುಗಳು ನನ್ನ ಮೇಲೆ ಪರಿಣಾಮವನ್ನುಂಟುಮಾಡುತ್ತಿವೆ. ಅವನ ಶಾಪವು ಫಲಿಸುವ ಕಾಲವು ಸನ್ನಿಹಿತವಾಗಿದೆ."

ಹೀಗೆ ದಶರಥನು ಕೌಸಲ್ಯೆಗೆ ಹೇಳಿ ಬಹಳವಾಗಿ ರೋದನಮಾಡಿದನು.

ತಾನು ಹಿಂದೆ ಮಾಡಿದ ದುಷ್ಕಾರ್ಯವನ್ನು ನೆನೆ-ನೆನೆದು ಭಯಪಡುತ್ತಾ ಪುನಃ ಕೌಸಲ್ಯೆಗೆ ಹೇಳಿದನು :

“ದೇವಿ! ಪುತ್ರಶೋಕದ ಕಾರಣದಿಂದ ಈಗಲೇ ನಾನು ಜೀವಿತವನ್ನು ಪರಿತ್ಯಜಿಸುತ್ತೇನೆ. ಅದಕ್ಕೆ ಸೂಚನೆಯೋ ಎಂಬಂತೆ ನಾನೀಗ ನಿನ್ನನ್ನು ಕಾಣುತ್ತಿಲ್ಲ. ನೀನು ಮಾತ್ರ ನನ್ನನ್ನು ಭದ್ರವಾಗಿ ಹಿಡಿದುಕೊಂಡಿರು.

ಯಮಕ್ಷಯಮನುಪ್ರಾಪ್ತಾಃ ದೃಕ್ಷ್ಯನ್ತಿ ನ ಹಿ ಮಾನವಾಃ ॥೬೨॥

ಯಮಾಲಯಕ್ಕೆ ಹೊರಟಿರುವವರು (ಸಾವಿನ ಹತ್ತಿರದಲ್ಲಿರುವವರು) ತಮ್ಮ ಬಂಧು-ಮಿತ್ರರನ್ನು ನೋಡಲಾರರು.

ಯದಿ ಮಾಂ ಸಂಸ್ಪೃಶೇದ್ರಾಮಃ ಸಕೃದದ್ಯ ಲಭೇತ ವಾ ।
ಧನಂ ವಾ ಯೌವರಾಜ್ಯಂ ವಾ ಜೀವೇಯಮಿತಿ ಮೇ ಮತಿಃ ॥೬೩॥

ಶ್ರೀರಾಮನು ಬಂದು ನನ್ನನ್ನು ಒಂದು ಬಾರಿ ಸ್ಪರ್ಶಿಸಿದರೂ, ನನ್ನ ಸಂಬಂಧವಾದ ಐಶ್ವರ್ಯವನ್ನನುಭವಿಸಿದರೂ, ಯೌವರಾಜ್ಯಸಿಂಹಾಸನ ವನ್ನು ಸ್ವೀಕರಿಸಿದರೂ–ನಾನು ಜೀವಿಸಿಯೇನು. ಆದರೆ ಅವನ ಸ್ಪರ್ಶವಿಲ್ಲದೇ, ಸಂಪರ್ಕವಿಲ್ಲದೇ, ಸಂದರ್ಶನವಿಲ್ಲದೇ ನಾನು ಖಂಡಿತವಾಗಿಯೂ ಬದುಕಿರ ಲಾರೆನು.

ನ ತನ್ಮೇ ಸದೃಶಂ ದೇವಿ ಯನ್ಮಯಾ ರಾಘವೇ ಕೃತಮ್ ।
ಸದೃಶಂ ತತ್ತು ತಸ್ಯೈವ ಯದನೇನ ಕೃತಂ ಮಯಿ ॥೬೪॥

ಕೌಸಲ್ಯೇ! ರಾಘವನ ವಿಷಯದಲ್ಲಿ ನನ್ನ ಘನತೆಗೆ ತಕ್ಕಂತೆ ನಾನು ನಡೆದುಕೊಳ್ಳಲಿಲ್ಲ. ಆದರೆ ಅವನು ಮಾತ್ರ ನನ್ನ ವಿಷಯದಲ್ಲಿ ತನಗೆ ಮಾತ್ರವೇ ಯೋಗ್ಯವಾದ ರೀತಿಯಲ್ಲಿ ನಡೆದುಕೊಂಡನು.

ದುರ್ವೃತ್ತಮಪಿ ಕಃ ಪುತ್ರಂ ತ್ಯಜೇದ್ಭುವಿ ವಿಚಕ್ಷಣಃ ।
ಕಶ್ಚ ಪ್ರವ್ರಾಜ್ಯಮಾನೋ ವಾ ನಾಸೂಯೇತ್ಪಿತರಂ ಸುತಃ ॥೬೫॥

ಮಗನು ದುರಾಚಾರಿಯಾಗಿದ್ದರೂ–ವಿಚಕ್ಷಣನಾದ, ವಿವೇಕಿಯಾದ ಯಾವ ತಂದೆಯು ತಾನೇ ಅವನನ್ನು ಕಾಡಿಗಟ್ಟುವನು? ತಂದೆಯು ನಿಷ್ಕಾ ರಣವಾಗಿ ಕಾಡಿಗೆ ಕಳುಹಿಸಿದರೂ ನಿರ್ದೋಷಿಯಾದ ಯಾವ ಪುತ್ರನು ತಾನೇ

ತಂದೆಯ ವಿಷಯದಲ್ಲಿ ಅಸಮಾಧಾನಗೊಳ್ಳದೇ ಇರುವನು? (ನಾನು ಮತ್ತು ರಾಮ–ಇಬ್ಬರೂ ಲೋಕದ ನಡವಳಿಕೆಗೆ ವಿಲಕ್ಷಣವಾಗಿಯೇ ವರ್ತಿಸಿದ್ದೇವೆ.)"

ಕ್ಷಣ-ಕ್ಷಣಕ್ಕೂ ದಶರಥನ ಐಹಿಕವ್ಯಾಪಾರವು ಮುಗಿದುಹೋಗು ತ್ತಿತ್ತು. ಉದ್ವೇಗದಿಂದ ಕೌಸಲ್ಯೆಗೆ ಹೇಳಿದನು :

"ದೇವಿ! ಈಗಾಗಲೇ ನೀನು ನನಗೆ ಸಂಪೂರ್ಣವಾಗಿ ಕಾಣಿಸುತ್ತಿಲ್ಲ. ನನ್ನ ಜ್ಞಾಪಕಶಕ್ತಿಯೂ ಉಡುಗಿಹೋಗುತ್ತಿದೆ. ಇಲ್ಲೀಗ ನಾನು ಯಮ ದೂತರನ್ನು ಕಾಣುತ್ತಿದ್ದೇನೆ. ಈ ಯಮಭಟರು ನನ್ನನ್ನು ಯಮಾ ಲಯಕ್ಕೆ ಹೊರಡುವಂತೆ ಅವಸರಪಡಿಸುತ್ತಿದ್ದಾರೆ. ಇದಕ್ಕಿಂತಲೂ ದುಃಖ ಕರವಾದುದು ಬೇರೆ ಯಾವುದಿದೆ? ದೇವಿ! ಪ್ರಾಣಗಳನ್ನು ತೊರೆದನಂತರ ನಾನು ಧರ್ಮಜ್ಞನೂ ಸತ್ಯಪರಾಕ್ರಮನೂ ಆದ ಪ್ರಿಯರಾಮನನ್ನು ನೋಡ ಲಾರೆನಲ್ಲಾ! ನಯನಾನಂದಕರನಾದ, ಪ್ರತಿಕ್ರಿಯಾರಹಿತನಾದ ಶ್ರೀರಾಮ ನನ್ನು ನೋಡದಿರುವುದರಿಂದ ಉಂಟಾಗಿರುವ ದುಃಖವು–ಸ್ವಲ್ಪವೇ ನೀರಿರುವ ಕೆರೆಯನ್ನು ಸೂರ್ಯನ ಬಿಸಿಲು ಇಂಗಿಸಿಬಿಡುವಂತೆ–ನನ್ನ ಪ್ರಾಣಗಳನ್ನು ಹೀರುತ್ತಿದೆ.

ದೇವಿ! ಇಲ್ಲಿಂದ ಹದಿನೈದನೆಯ ವರ್ಷ ಸುಂದರವಾದ ಕುಂಡಲ ಗಳನ್ನು ಧರಿಸಿರುವ ಶ್ರೀರಾಮನ ಮುಖವನ್ನು ಯಾರು ಪುನಃ ನೋಡು ವರೋ–ಅವರು ಮನುಷ್ಯರೇ ಅಲ್ಲ; ದೇವತೆಗಳೇ ಸರಿ. ತಾವರೆಯ ದಳ ಗಳಂತೆ ಕಣ್ಣುಗಳುಳ್ಳ, ಸುಂದರವಾದ ಹುಬ್ಬುಗಳಿಂದ ಕೂಡಿರುವ, ಥಳ-ಥಳಿ ಸುವ ಹಲ್ಲುಗಳಿಂದ ಕೂಡಿರುವ, ಸುಂದರವಾದ ಮೂಗಿನಿಂದ ಕೂಡಿರುವ, ಪೂರ್ಣಚಂದ್ರನ ಬಿಂಬದಂತಹ ಸುಂದರವಾದ ರಾಮನ ಮುಖವನ್ನು ಯಾರು ನೋಡುವರೋ ಅವರೇ ಧನ್ಯರು. ಶರತ್ಕಾಲದ ಪೂರ್ಣಚಂದ್ರನಿಗೆ ಸದೃಶ ವಾದ, ಅರಳಿದ ಕಮಲಕ್ಕೆ ಸಮಾನವಾದ, ಸುಗಂಧಯುಕ್ತವಾದ, ಪ್ರಫುಲ್ಲ ವಾದ ರಾಮನ ಮುಖವನ್ನು ಪುಣ್ಯಾತ್ಮರು ಮಾತ್ರವೇ ನೋಡಬಲ್ಲರು. ವನವಾಸವನ್ನು ಮುಗಿಸಿ ಅಯೋಧ್ಯೆಗೆ ಹಿಂದಿರುಗಿದ ರಾಮನನ್ನು–ಉದಯಿಸಿದ ಶುಕ್ರನನ್ನು ನೋಡಿ ಜನರೆಲ್ಲರೂ ಆನಂದಿಸುವಂತೆ–ಸುಖಿಗಳಾದ ಅಯೋಧ್ಯಾ ಜನರು ನೋಡಿ ಹಿರಿಹಿಗ್ಗುವರು. ದೇವಿ! ಮನಸ್ಸಿನಲ್ಲುಂಟಾಗಿರುವ

ದುಃಖಾಧಿಕ್ಯದಿಂದ ನನ್ನ ಹೃದಯವು ಸೀಳಿಹೋಗುವಂತೆ ಭಾಸ ವಾಗುತ್ತಿದೆ. ಪಂಚೇಂದ್ರಿಯಗಳ ಶಕ್ತಿಯೂ ಲುಪ್ತವಾಗಿ ಹೋಗಿದೆ. ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳನ್ನು ತಿಳಿಯಲು ನಾನು ಅಶಕ್ತನಾಗುತ್ತಿದ್ದೇನೆ.

ಚಿತ್ತನಾಶಾದ್ವಿಪದ್ಯನ್ತೇ ಸರ್ವಾಣ್ಯೇವೇನ್ದ್ರಿಯಾಣಿ ಮೇ ।
ಕ್ಷೀಣಸ್ನೇಹಸ್ಯ ದೀಪಸ್ಯ ಸಂಸಕ್ತಾ ರಶ್ಮಯೋ ಯಥಾ ॥೭೩॥

ಎಣ್ಣೆಯು ಮುಗಿದುಹೋದನಂತರ ದೀಪದ ಕಿರಣಗಳು ಯಾವ ರೀತಿಯಲ್ಲಿ ಕ್ಷೀಣಿಸುವುವೋ–ಅದೇ ರೀತಿಯಲ್ಲಿ ಚಿತ್ತನಾಶದಿಂದ ನನ್ನ ಎಲ್ಲ ಇಂದ್ರಿಯಗಳೂ ವಿನಾಶಹೊಂದುತ್ತಿವೆ. ನದಿಯ ಪ್ರವಾಹವು ಮೃದುವಾಗಿರುವ ತೀರಪ್ರದೇಶವನ್ನು ಕೊರೆದುಕೊಂಡು ಹೋಗುವಂತೆ-ಆತ್ಮಸಂಬಂಧವಾದ ಈ ಪುತ್ರವಿಯೋಗಶೋಕವು ನನ್ನನ್ನು ಅನಾಥ ನನ್ನಾಗಿಯೂ ಚೇತನಾರಹಿತನನ್ನಾಗಿಯೂ ಮಾಡುತ್ತಿದೆ.”

ಆ ವೇಳೆಗೆ ಪ್ರಾಣೋತ್ಕ್ರಮಣಾವಸ್ಥೆಯು ದಶರಥನಿಗೆ ಪ್ರಾಪ್ತ ವಾಯಿತು. ಕಡೆಯ ಮಾತುಗಳನ್ನು ಅವನು ಕಷ್ಟದಿಂದಲೂ ದುಃಖ ದಿಂದಲೂ ಉಚ್ಚರಿಸಿದನು :

ಹಾ ರಾಘವ ಮಹಾಬಾಹೋ ಹಾ ಮಮಾಯಾಸನಾಶನ ।
ಹಾ ಪಿತೃಪ್ರಿಯ ಮೇ ನಾಥ ಹಾದ್ಯ ಕ್ವಾಸಿ ಗತಃ ಸುತ ॥೭೯॥

ಹಾ ಕೌಸಲ್ಯೇ ವಿನಶ್ಯಾಮಿ ಹಾ ಸುಮಿತ್ರೇ ತಪಸ್ವಿನಿ ।
ಹಾ ನೃಶಂಸೇ ಮಮಾಮಿತ್ರೇ ಕೈಕೇಯಿ ಕುಲಪಾಂಸನಿ ॥೮೦॥

“ಹಾ ರಾಘವ! ಮಹಾಬಾಹುವೇ! ನನ್ನ ಸಂಕಷ್ಟವನ್ನು ದೂರ ಗೊಳಿಸಿದವನೇ! ಪಿತೃಪ್ರಿಯನೇ! ನನ್ನೊಡೆಯನೇ! ಪುತ್ರಕ! ಈಗ ನೀನು ಎಲ್ಲಿಗೆ ಹೊರಟುಹೋಗಿರುವೆ? ಹಾ ಕೌಸಲ್ಯೇ! ಹಾ ಸುಮಿತ್ರೇ! ತಪಸ್ವಿನಿ! ಹಾ ಕೈಕೇಯಿ! ನೃಶಂಸಳೇ! ನನ್ನ ಶತ್ರುವೇ! ಕುಲಪಾಂಸನಿಯೇ! ನಾನಿನ್ನು ಅವಸಾನಹೊಂದುವೆನು” –ಹೀಗೆ ಹೇಳಿಕೊಂಡು ರೋದನ ಮಾಡುತ್ತಾ ಕೌಸಲ್ಯಾ-ಸುಮಿತ್ರೆಯರ ಸಮ್ಮುಖದಲ್ಲಿಯೇ ದಶರಥಮಹಾ ರಾಜನು ಅಸುನೀಗಿದನು.

ಪ್ರಿಯಪುತ್ರನಾದ ಶ್ರೀರಾಮನ ಅರಣ್ಯಗಮನದಿಂದ ಅತ್ಯಂತ

ದುಃಖಿತನಾಗಿದ್ದ, ನರಾಧಿಪನಾದ, ಉದಾರಿಯಾದ ದಶರಥನು ಬಹುದೀನನಾಗಿ- 'ಹಾ ರಾಘವ! ಹಾ ರಾಮ!' –ಎಂದು ಪುನಃ ಪುನಃ ಹೇಳುತ್ತಾ ಅರ್ಧರಾತ್ರಿಯು ಕಳೆದನಂತರ ಪ್ರಾಣಗಳನ್ನು ತೊರೆದನು.

ಅರುವತ್ತನಾಲ್ಕನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ಅರುವತ್ತೈದನೆಯ ಸರ್ಗ

ಬೆಳಗಾಗುತ್ತಲೇ ವಂದಿ-ಮಾಗಧರು ದಶರಥನನ್ನು ಸ್ತುತಿಸಿದುದು : ದಶರಥನು ಅವಸಾನಹೊಂದಿದ ವಾರ್ತೆಯನ್ನು ಕೇಳಿ ರಾಣಿಯರು ವಿಲಪಿಸಿದುದು

ಅಥ ರಾತ್ರ್ಯಾಂ ವ್ಯತೀತಾಯಾಂ ಪ್ರಾತರೇವಾಪರೇಽಹನಿ ।
ವನ್ದಿನಃ ಪರ್ಯುಪಾತಿಷ್ಠನ್ಪಾರ್ಥಿವಸ್ಯ ನಿವೇಶನಮ್ ॥೧॥

ರಾತ್ರಿಯು ಕಳೆದು ಮರುದಿನ ಮುಂಜಾನೆಯಾಗುತ್ತಲೇ ಸ್ತುತಿಪಾಠಕರು ರಾಜನಿಗೆ ಸುಪ್ರಭಾತವನ್ನು ಹೇಳಲು ಅರಮನೆಯಲ್ಲಿ ಉಪಸ್ಥಿತರಾದರು.

ರಾಜನನ್ನು ಉಚ್ಚಸ್ವರದಿಂದ ಪರಿ-ಪರಿಯಾಗಿ ಸ್ತುತಿಮಾಡುತ್ತಿದ್ದ ಸೂತ-ಮಾಗಧ-ವಂದಿಗಳ ಆ ಶಬ್ದವು ಅಲ್ಲಿದ್ದ ಪ್ರಾಸಾದಗಳಲ್ಲಿ ತುಂಬಿ ಪ್ರತಿಧ್ವನಿಸುತ್ತಿದ್ದಿತು. ಹೀಗೆ ಸೂತರು ರಾಜನ ಬಿರುದಾವಳಿಗಳನ್ನು ಹೇಳುತ್ತಿರುವಾಗ ಪಾಣಿವಾದಕರು (ತಾಳವಾದನವಿದ್ವಾಂಸರು) ಅಲ್ಲಿಗೆ ಬಂದು ರಾಜವಂಶಕ್ಕೆ ಸಂಬಂಧಿಸಿದಂತೆ ಅನೇಕಅದ್ಭುತಚರಿತ್ರೆಗಳನ್ನು ಪಾಣಿವಾದ್ಯಗಳ ಮೂಲಕವಾಗಿಯೇ ನುಡಿಸಿದರು. ಆ ನಿನಾದದಿಂದ ಉದ್ಯಾನವನದ ರೆಂಬೆಗಳಲ್ಲಿದ್ದ ಪಕ್ಷಿಗಳೂ, ರಾಜನ ಅರಮನೆಯ ಪಂಜರಗಳಲ್ಲಿದ್ದ ಗಿಣಿಗಳೂ ಎಚ್ಚರಗೊಂಡು ಕಲ-ಕಲಧ್ವನಿಮಾಡಿದುವು. ಅರಮನೆಯಲ್ಲಿ ಪುಣ್ಯಾಹವಾಚನಗಳೂ ನಡೆದುವು. ಸುಮಧುರವಾದ ವೀಣಾನಿನಾದವು ಸರ್ವತ್ರ ಮೊಳಗಿತು. ಬ್ರಾಹ್ಮಣರು ರಾಜನಿಗೆ ಬಿರುದಾವಳಿಗಳಿಂದ ಕೂಡಿದ ಆಶೀರ್ವಾದಗಳನ್ನು ಮಾಡಿದರು. ಆ ಎಲ್ಲ ಶಬ್ದಗಳಿಂದ ದಶರಥರಾಜನ ಅರಮನೆಯು ತುಂಬಿಹೋಯಿತು.

ಅನಂತರ ಶುಚೀಭೂತರಾದ, ಸದಾಚಾರಸಂಪನ್ನರಾದ, ಕಾಲೋಚಿತ

ವಾಗಿ ಮತ್ತು ಸಮಯೋಚಿತವಾಗಿ ರಾಜನ ಮತ್ತು ರಾಜಪರಿವಾರದವರ ಸೇವೆಮಾಡುವುದರಲ್ಲಿ ನಿಷ್ಣಾತರಾಗಿದ್ದ ಪರಿಚಾರಕರು–ಸ್ತ್ರೀಯರಿಂದಲೂ, ಷಂಡರಿಂದಲೂ ಕೂಡಿದವರಾಗಿ ಹಿಂದಿನಂತೆಯೇ ರಾಜಸೇವೆಗೆ ಉಪಸ್ಥಿತ ರಾದರು. ರಾಜಯೋಗ್ಯವಾದ ಸ್ನಾನವಿಧಿಯನ್ನು ತಿಳಿದಿದ್ದ ಸೇವಕರು ಚಿನ್ನದ ಬಿಂದಿಗೆಗಳಲ್ಲಿ ಹರಿಚಂದನಮಿಶ್ರವಾದ ನೀರನ್ನು ರಾಜನ ಸ್ನಾನಕ್ಕಾಗಿ ಸಕಾಲದಲ್ಲಿ ಸಿದ್ಧಗೊಳಿಸಿದರು. ರಾಜನು ಎದ್ದೊಡನೆಯೇ ಮಂಗಳಾರ್ಥವಾಗಿ ಸ್ಪರ್ಶಮಾಡಬೇಕಾದ ಹಸು, ಮಂಗಳದ್ರವ್ಯ–ಇವೇ ಮುಂತಾದುವುಗಳನ್ನೂ, ದಂತಧಾವನಾನಂತರದಲ್ಲಿ ಪ್ರಾಶನಮಾಡಬೇಕಾದ ಗಂಗೋದಕ - ನಾರಿ ಕೇಳೋದಕ - ಜೀರಿಕೋದಕಗಳನ್ನೂ ಕುಮಾರಿಯರೇ ಹೆಚ್ಚಾಗಿದ್ದ ಪುಣ್ಯವತಿಯ ರಾದ ಸ್ತ್ರೀಯರು ರಾಜನ ಸೇವೆಗಾಗಿ ತಂದರು. ಪ್ರಾತಃಕಾಲದಲ್ಲಿ ರಾಜನ ಸೇವೆಗಾಗಿ ತರಲ್ಪಟ್ಟಿದ್ದ ಸಕಲವಸ್ತುಗಳೂ ಸರ್ವಲಕ್ಷಣಯುಕ್ತವಾಗಿಯೂ, ಶಾಸ್ತ್ರವಿಧಿಯನ್ನನುಸರಿಸಿ ಸಂಸ್ಕರಿಸಿದುವುಗಳಾಗಿಯೂ, ಸುಗುಣಯುಕ್ತ ವಾಗಿಯೂ, ಕಾಂತಿಯುಕ್ತವಾಗಿಯೂ ಇದ್ದುವು. ಸೂರ್ಯೋದಯವಾಗು ವವರೆಗೂ ರಾಜಸೇವಕರೂ, ವಂದಿ-ಮಾಗಧರೂ, ಸೂತರೂ, ಮಂಗಳದ್ರವ್ಯ ಗಳನ್ನು ಹಿಡಿದಿದ್ದ ಕುಮಾರಿಯರೂ ರಾಜನು ಎದ್ದುಬರುವನೆಂಬ ಉತ್ಸುಕತೆ ಯಿಂದಲೇ ಇದ್ದರು. ಸೂರ್ಯೋದಯವಾದನಂತರವೂ ದಶರಥರಾಜನು ಅಂತಃಪುರದಿಂದ ಬಾರದಿದ್ದುದನ್ನು ಕಂಡು 'ಇದೇಕಿನ್ನೂ ರಾಜನು ಬಿಜಯ ಮಾಡಿಸಲಿಲ್ಲ? ಕಾರಣವೇನಿರಬಹುದು?' –ಎಂದೆನ್ನುತ್ತಾ ಎಲ್ಲರೂ ಸಂಶಯ ಗ್ರಸ್ತರಾದರು. ಅದನ್ನು ಕಂಡು ದಶರಥನ ಶಯನಾಗಾರದ ಸಮೀಪ ದಲ್ಲಿದ್ದ ಇತರ ಪತ್ನಿಯರು ಪತಿಯ ಹಾಸಿಗೆಯ ಬಳಿಬಂದು ರಾಜನನ್ನು ಎಚ್ಚರ ಗೊಳಿಸಲು ಪ್ರಯತ್ನಿಸಿದರು. ಉಚಿತವಾದ ನಡವಳಿಕೆಯುಳ್ಳ ಆ ರಾಜ ಮಹಿಷಿಯರು ಮೊದಲು ದೂರದಲ್ಲಿಯೇ ನಿಂತು ವಿನಯದಿಂದ– 'ಪ್ರಭೋ! ಮಹಾರಾಜ!' –ಮುಂತಾಗಿ ಮೃದುವಾದ ಧ್ವನಿಯಿಂದ ಕೂಗಿದರು. ಉತ್ತರ ಬರಲಿಲ್ಲ. ಸ್ವಲ್ಪ ಹತ್ತಿರಕ್ಕೆ ಹೋಗಿ ಕೂಗಿದರು. ಪ್ರಯೋಜನವಾಗಲಿಲ್ಲ. ಇನ್ನೂ ಹತ್ತಿರಕ್ಕೆ ಹೋಗಿ ಭೀತ-ಭೀತರಾಗಿ ಮುಖದ ಮುಸುಕನ್ನು ತೆಗೆದು ಕೂಗಿದರು. ಆಗಲೂ ರಾಜನು ಎಚ್ಚರಗೊಳ್ಳಲಿಲ್ಲ. ಅವರ ಎದೆಯು ಬಡಿದುಕೊಳ್ಳಲಾರಂಭಿಸಿತು. ಮೂಗಿನ ಬಳಿ ಕೈಯಿಟ್ಟು ನೋಡಿದರು.

ಶ್ವಾಸೋಚ್ಛ್ವಾಸಗಳು ಇರುವಂತೆ ಕಾಣಲಿಲ್ಲ. ಸ್ವಪ್ನಾವಸ್ಥೆಯ ಲಕ್ಷಣಗಳನ್ನು ತಿಳಿದವರಾಗಿದ್ದ ಆ ರಾಜಮಹಿಷಿಯರು ರಾಜನಲ್ಲಿದ್ದ ಆಗಿನ ಲಕ್ಷಣಗಳಿಂದ ಅವನು ಸ್ವಪ್ನಾವಸ್ಥೆಯಲ್ಲಿಲ್ಲವೆಂದೂ ನಿಶ್ಚಯಿಸಿದರು. ನಾಡಿಗಳನ್ನು ಹಿಡಿದು ನೋಡಿದರು. ನಾಡಿಗಳ ಮಿಡಿತವೇ ಇರುವಂತೆ ಕಾಣಲಿಲ್ಲ. ರಾಜನು ಜೀವದಿಂದುಳಿದಿಲ್ಲವೆಂದು ಸಂಶಯಿಸಿದರು. ಒಡನೆಯೇ ಅವರು ನದಿಯ ಪ್ರವಾಹಕ್ಕೆ ಸಿಕ್ಕಿದ ಹುಲ್ಲಿನ ತುದಿಗಳಂತೆ ತರ-ತರನೆ ನಡುಗಿದರು. ನಿಶ್ಚೇಷ್ಟಿತನಾಗಿದ್ದ ರಾಜನನ್ನು ನೋಡಿ ಗಡ-ಗಡನೆ ನಡುಗುತ್ತಿದ್ದ ರಾಜ ಮಹಿಷಿಯರ ಸಂದೇಹವು ಸ್ಥಿರಪಟ್ಟಿತು. ರಾಜನು ಸತ್ತುಹೋಗಿ ರುವನೆಂದು ಎಲ್ಲರೂ ನಿಶ್ಚಯಿಸಿದರು.

ಪುತ್ರಶೋಕದಿಂದ ಆಕ್ರಮಿಸಲ್ಪಟ್ಟಿದ್ದ ಕೌಸಲ್ಯಾ-ಸುಮಿತ್ರೆಯರೂ ಸತ್ತುಬಿದ್ದಿರುವರೋ ಎಂಬಂತೆಯೇ ಮಲಗಿದ್ದರು. ಬಹಳ ಹೊತ್ತಿನವರೆಗೂ ಎಚ್ಚರಗೊಳ್ಳಲೇ ಇಲ್ಲ. ಆ ಸಮಯದಲ್ಲಿ ಕೌಸಲ್ಯೆಯು ಕಾಂತಿಹೀನ ಳಾಗಿದ್ದಳು. ಕಂಗೆಟ್ಟ ಮುಖವುಳ್ಳವಳಾಗಿದ್ದಳು. ಅತಿಯಾದ ಪುತ್ರಶೋಕ ದಿಂದ ಕೃಶಳಾಗಿದ್ದಳು. ಉತ್ಪಾತಕಾಲದಲ್ಲಿ ಹುಟ್ಟಿದ ಹೊಗೆಯಿಂದ ಆವರಿಸಿದ ನಕ್ಷತ್ರದಂತೆಯೇ ಕಾಣುತ್ತಿದ್ದಳು. ಶೋಕದ ಕಂಬನಿಗಳಿಂದ ಕಲುಷಿತವಾದ ಮುಖದಿಂದ ಕೂಡಿದ್ದ ಕೌಸಲ್ಯೆಯು ಕಾಂತಿಹೀನಳಾಗಿದ್ದಳು. ಕೌಸಲ್ಯೆಯ ಪಕ್ಕದಲ್ಲಿ ರಾಜನೂ–ರಾಜನ ಪಕ್ಕದಲ್ಲಿ ಸುಮಿತ್ರೆಯೂ ಮಲಗಿದ್ದರು. ಕೌಸಲ್ಯಾ-ಸುಮಿತ್ರೆಯರು ಮಲಗಿರುವುದನ್ನೂ ಅವರಿಬ್ಬರ ಮಧ್ಯದಲ್ಲಿ ರಾಜನಿರುವುದನ್ನೂ ಕಂಡು ಅಂತಃಪುರದ ಸ್ತ್ರೀಯರು ರಾಜನಿಗೆ ಮಲಗಿದ್ದಂತೆಯೇ ಪ್ರಾಣಹೋಗಿರಬಹುದೆಂದು ಭಾವಿಸಿದರು. ಕಾಡಿನಲ್ಲಿ ಸಲಗ ನನ್ನು ಕಳೆದುಕೊಂಡ ಹೆಣ್ಣಾನೆಗಳು ಚೀರಾಡುವಂತೆ ದೀನೆಯರಾದ ಆ ಶ್ರೇಷ್ಠಸ್ತ್ರೀಯರು ಗಟ್ಟಿಯಾಗಿ ರಾಗ-ರಾಗವಾಗಿ ಅಳತೊಡಗಿದರು. ಆ ವರಾಂಗನೆಯರ ಗೋಳಾಟದ ಶಬ್ದದಿಂದ ಹೊಡೆದೆಬ್ಬಿಸಿದಂತಾಗಿ ಕೌಸಲ್ಯಾ-ಸುಮಿತ್ರೆಯರು ಸುತ್ತಲೂ ಆಗುತ್ತಿದ್ದ ಗೋಳಾಟವನ್ನು ಕೇಳುತ್ತಾ ಎಚ್ಚರಗೊಂಡರು. ರಾಜನ ಕಡೆಗೆ ನೋಡಿದರು. ಅವನನ್ನು ಮುಟ್ಟಿದರು. ರಾಜನು ಅಸುನೀಗಿರುವನೆಂದು ಅವರಿಗೂ ತಿಳಿಯಿತು. "ಹಾ ನಾಥ!" –ಎಂದು ಕಿರುಚುತ್ತಾ ನೆಲದ ಮೇಲೆ ಬಿದ್ದರು. ಪತಿವಿಯೋಗಶೋಕದಿಂದ ಅತ್ತಲಿತ್ತ

ಭೂಮಿಯಲ್ಲಿ ಹೊರಳಾಡುತ್ತಾ ಧೂಳಿನಿಂದ ಆವೃತಳಾಗಿದ್ದ ಕೋಸಲೇಂದ್ರನ ಮಗಳಾದ್ದ ಕೌಸಲ್ಯಾದೇವಿಯು ಆಕಾಶದಿಂದ ಬಿದ್ದ ತಾರೆಯಂತೆ ಕಾಂತಿ ಹೀನಳಾಗಿದ್ದಳು. ರಾಜನ ಶರೀರದ ಉಷ್ಣ-ಸ್ಪಂದನ-ಉಚ್ಛ್ವಾಸ-ನಿಃಶ್ವಾಸಾದಿ ಗುಣಗಳೆಲ್ಲವೂ ಶಾಂತವಾಗಲಾಗಿ–ಸತ್ತುಹೋದ ನಾಗಕನ್ಯೆಯೋಪಾದಿ



ಯಲ್ಲಿ ದಶರಥನ ಪಕ್ಕದಲ್ಲಿ ಬಿದ್ದಿದ್ದ ಕೌಸಲ್ಯಾದೇವಿಯನ್ನು ಅಂತಃಪುರದ ಸ್ತ್ರೀಯರು ನೋಡಿದರು. ರಾಜನು ಸತ್ತುಹೋದ ವಿಷಯವು ಕರ್ಣಾಕರ್ಣಿಕೆ ಯಾಗಿ ರಾಜನ ಪರಿವಾರದವರೆಲ್ಲರಿಗೂ ತಿಳಿಯಿತು. ಕೈಕೇಯಿಯೇ ಮೊದ

*'ಕೋಸಲೇನ್ದ್ರ ದುಹಿತಾ' ಎಂದರೆ ಇಲ್ಲಿ ಕೌಸಲ್ಯೆಯೇ ಆಗುತ್ತಾಳೆ. ದಶರಥ ನಿಗೂ ಕೋಸಲೇನ್ದ್ರನೆಂಬ ಹೆಸರಿದೆ. ಒಬ್ಬರು ವ್ಯಾಖ್ಯಾನಕಾರರು ಕೌಸಲ್ಯಾಪಿತೃದೇಶ

ಲಾದ ಸ್ತ್ರೀಯರೂ ದಶರಥನಿದ್ದ ಅಂತಃಪುರಕ್ಕೆ ಗೋಳಾಡುತ್ತಾ ಬಂದು ಗತ ಪ್ರಾಣನಾಗಿ ಮಲಗಿದ್ದ ರಾಜನನ್ನು ಕಂಡು ಶೋಕಸಂತಪ್ತರಾಗಿ ಮೂರ್ಛೆ ಹೊಂದಿ ಕೆಳಗೆ ಬಿದ್ದರು. ಕೌಸಲ್ಯೆಯೇ ಮೊದಲಾದ ಸ್ತ್ರೀಯರು ಮಾಡುತ್ತಿದ್ದ ರೋದನಕ್ಕೆ ಕೈಕೇಯೀಪ್ರಮುಖರಾದ ಸ್ತ್ರೀಯರ ಗೋಳಾಟವೂ ಸೇರಿ ಶಬ್ದವು ಇಮ್ಮಡಿಯಾಗಿ ದೊಡ್ಡದಾದ ಪ್ರತಿಧ್ವನಿಯನ್ನುಂಟುಮಾಡಿತು. ಜನರೆಲ್ಲರೂ ಭಯಗೊಂಡು ಭ್ರಾಂತರಾಗಿ ವಿಷಯವೇನೆಂಬುದನ್ನು ತಿಳಿಯುವ ಉತ್ಸುಕತೆ ಯಿಂದ ಅರಮನೆಗೆ ಧಾವಿಸಿದರು. ಎಲ್ಲೆಲ್ಲಿಯೂ ಗುಜು-ಗುಜುಶಬ್ದವೇ ಕೇಳಿಬರುತ್ತಿದ್ದಿತು. ಎಲ್ಲೆಲ್ಲಿಯೂ ದಶರಥನ ಬಂಧು-ದಾಯಾದಿಗಳು ಬಿಕ್ಕಿ-ಬಿಕ್ಕಿ ಅಳುತ್ತಿದ್ದರು. ಆನಂದವೆಂಬುದು ಉಡುಗಿಹೋಯಿತು. ಎಲ್ಲೆಲ್ಲಿಯೂ ಹಾಹಾಕಾರಶಬ್ದಗಳೇ ಕೇಳಿಬರುತ್ತಿದ್ದುವು. ನರದೇವನಾದ ದಶರಥನು ಪರಲೋಕವನ್ನೈದಲಾಗಿ ರಾಜನ ಅರಮನೆಯು ಹೀಗೆ ಮಾರ್ಪಟ್ಟಿತು. ಯಶೋವಂತನಾದ ದಶರಥನು ದಿವಂಗತನಾದನೆಂದು ನಿಶ್ಚಯಿಸಿದ ಪತ್ನಿಯರೆಲ್ಲರೂ ಅವನನ್ನು ಸುತ್ತುವರಿದು ಬಹುದುಃಖಿತರಾಗಿ ಕರುಣಾಜನಕವಾದ ರೀತಿಯಲ್ಲಿ ಆರ್ತಾಲಾಪಮಾಡುತ್ತಾ ರಾಜನ ಎರಡು ತೋಳುಗಳನ್ನೂ ಹಿಡಿದುಕೊಂಡು ಅನಾಥರೋಪಾದಿಯಲ್ಲಿ ಗೋಳಾಡಿದರು.

ಅರವತ್ತೈದನೆಯ ಸರ್ಗವು ಮುಗಿಯಿತು.

ವಾಚಕಶಬ್ದವು ದನ್ತ್ಯಮಧ್ಯಕೋ(ಸಲ)ವೆಂದೂ, ಅಯೋಧ್ಯಾಜನಪದವಾಚಕಶಬ್ದವು ತಾಲವ್ಯಮಧ್ಯ ಕೋ(ಶ)ಲವೆಂದೂ - ಹೇಳಿದ್ದಾರೆ. ಮತ್ತೊಬ್ಬ ವ್ಯಾಖ್ಯಾನಕಾರರು ಇದಕ್ಕೆ ವಿರುದ್ಧವಾದ ವ್ಯಾಖ್ಯೆಮಾಡಿ ಕೌ(ಶ)ಲ್ಯಾ ಪಿತೃದೇಶವಾಚಕಶಬ್ದವು ತಾಲವ್ಯ ಮಧ್ಯಕೋ(ಶ)ಲ ವೆಂದೂ, ಅಯೋಧ್ಯಾಜನಪದವಾಚಕಶಬ್ದವು ದನ್ತ್ಯಮಧ್ಯ ಕೋ(ಸ)ಲವೆಂದೂ ಹೇಳಿ ಕೌಸಲ್ಯಾಶಬ್ದವನ್ನು ಕೌ(ಶ)ಲ್ಯಾ ಎಂದೇ ಬರೆಯುತ್ತಾ ಹೋಗಿದ್ದಾರೆ.

ಕೌಸಲ್ಯೆಯ ವಿಲಾಪ: ಕೈಕೇಯಿಯ ನಿಂದನೆ: ಮಂತ್ರಿಗಳು ರಾಜನ ಶರೀರವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿಟ್ಟುದು: ನಾಗರಿಕರ ಶೋಕ

**ತಮಗ್ನಿಮಿವ ಸಂಶಾನ್ತಮಮ್ಬುಹೀನಮಿವಾರ್ಣವಮ್ ।
ಹತಪ್ರಭಮಿವಾದಿತ್ಯಂ ಸ್ವರ್ಗಸ್ಥಂ ಪ್ರೇಕ್ಷ್ಯ ಪಾರ್ಥಿವಮ್ ॥೧॥**

**ಕೌಸಲ್ಯಾ ಬಾಷ್ಪಪೂರ್ಣಾಕ್ಷೀ ವಿವಿಧಂ ಶೋಕಕರ್ಶಿತಾ ।
ಉಪಗೃಹ್ಯ ಶಿರೋ ರಾಜ್ಞಃ ಕೈಕೇಯೀಂ ಪ್ರತ್ಯಭಾಷತ ॥೨॥**

ನಂದಿಹೋದ ಬೆಂಕಿಯಂತೆಯೂ, ಬತ್ತಿಹೋದ ಸಮುದ್ರದಂತೆಯೂ, ಕಾಂತಿಯಿಲ್ಲದ ಸೂರ್ಯನಂತೆಯೂ ಇದ್ದ ಸ್ವರ್ಗಸ್ಥನಾದ ಪತಿಯ ಶರೀರ ವನ್ನು ನೋಡಿ ಕಂಬನಿದುಂಬಿದ ಕಣ್ಣುಗಳಿಂದ ಕೂಡಿದ್ದ, ಹಲವಾರು ಬಗೆಯ ದುಃಖಗಳಿಂದ ಪೀಡಿತಳಾಗಿದ್ದ, ಕೌಸಲ್ಯಾದೇವಿಯು ರಾಜನ ತಲೆ ಯನ್ನು ತೊಡೆಯ ಮೇಲಿಟ್ಟುಕೊಂಡು ಕೈಕೇಯಿಗೆ ಹೇಳಿದಳು :

**ಸಕಾಮಾ ಭವ ಕೈಕೇಯಿ ಭುಂಕ್ಷ್ವ ರಾಜ್ಯಮಕಣ್ಟಕಮ್ ।
ತ್ಯಕ್ತ್ವಾ ರಾಜಾನಮೇಕಾಗ್ರಾ ನೃಶಂಸೇ ದುಷ್ಟಚಾರಿಣಿ ॥೩॥**

"ಕ್ರೂರಿಯೇ! ದುರಾಚಾರಳೇ! ಭರತನಿಗೇ ಪಟ್ಟಗಟ್ಟಬೇಕೆಂಬುದ ರಲ್ಲಿಯೇ ಏಕಾಗ್ರಚಿತ್ತಳಾದ ನೀನು ಪತಿಯನ್ನೇ ಪರಿತ್ಯಜಿಸಿ ಇಷ್ಟಾರ್ಥವನ್ನು ಸಾಧಿಸಿದೆ. ಈಗ ನಿನ್ನ ಆಸೆಯನ್ನು ಪೂರೈಸಿಕೋ. ನಿಷ್ಕಂಟಕವಾದ ರಾಜ್ಯ ವನ್ನು ಉಪಭೋಗಿಸು.

**ವಿಹಾಯ ಮಾಂ ಗತೋ ರಾಮೋ ಭರ್ತಾ ಚ ಸ್ವರ್ಗತೋ ಮಮ।
ವಿಪಥೇ ಸಾರ್ಥಹೀನೇವ ನಾಹಂ ಜೀವಿತುಮುತ್ಸಹೇ ॥೪॥**

ರಾಮನೂ ನನ್ನನ್ನು ಬಿಟ್ಟು ಕಾಡಿಗೆ ಹೊರಟುಹೋದನು. ನನ್ನ ಪತಿಯೂ ದೇಹವನ್ನು ಬಿಟ್ಟು ಸ್ವರ್ಗಕ್ಕೆ ತೆರಳಿದನು. ಇದರಿಂದಾಗಿ ಅರಣ್ಯಮಾರ್ಗದಲ್ಲಿ ಸಹಾಯಕರಾದ ಜೊತೆಪಯಣಿಗರಿಂದ ತಪ್ಪಿಸಿಕೊಂಡವಳಂತಿರುವ ನಾನು ಇನ್ನು ಮುಂದೆ ಜೀವಿಸಿರಲು ಉತ್ಸುಕಳಾಗಿಲ್ಲ.

ಭರ್ತಾರಂ ತಂ ಪರಿತ್ಯಜ್ಯ ಕಾ ಸ್ತ್ರೀ ದೈವತಮಾತ್ಮನಃ ।
ಇಚ್ಛೇಜ್ಜೀವಿತುಮನ್ಯತ್ರ ಕೈಕೇಯ್ಯಾಸ್ತ್ಯಕ್ತಧರ್ಮಣಃ ॥೫॥

ಸತಿಯ ಧರ್ಮವನ್ನೇ ಸಂಪೂರ್ಣವಾಗಿ ಪರಿತ್ಯಜಿಸಿರುವ ಕೈಕೇಯಿಯೊಬ್ಬಳ ಹೊರತಾಗಿ ಬೇರಾವ ಹೆಂಗಸು ತಾನೇ ದೇವರೂಪಿಯಾದ ಗಂಡನನ್ನು ಪರಿತ್ಯಜಿಸಿ ಬೇರೆಡೆಯಲ್ಲಿ ಇರಲು ಇಚ್ಛಿಸುವಳು?

ನ ಲುಬ್ಧೋ ಬುಧ್ಯತೇ ದೋಷಾನ್ಕಿಂಪಾಕಮಿವ ಭಕ್ಷಯನ್ ।
ಕುಬ್ಜಾನಿಮಿತ್ತಂ ಕೈಕೇಯ್ಯಾ ರಾಘವಾಣಾಂ ಕುಲಂ ಹತಮ್ ॥೬॥

ಕಿಂಪಾಕಫಲವನ್ನು ತಿನ್ನುವವನು ತಾತ್ಕಾಲಿಕವಾದ ರುಚಿಗೆ ಮನಸೋತು ತಿನ್ನುವನೇ ಹೊರತು ಆ ಹಣ್ಣಿನ ಸೇವನೆಯಿಂದ ಮುಂದೆ ಆಗತಕ್ಕ ದುಷ್ಪರಿಣಾಮವನ್ನು ಮನಸ್ಸಿಗೆ ತಂದುಕೊಳ್ಳುವುದಿಲ್ಲ. ಇದೇ ರೀತಿಯಲ್ಲಿ ಲೋಭಿಯೂ ಕಾರ್ಯಾಕಾರ್ಯಗಳ ವಿವೇಚನೆಯಿಲ್ಲದೇ ಅರ್ಥಸಂಗ್ರಹ ಮಾಡುವನೇ ಹೊರತು ಅದರಿಂದ ಉಂಟಾಗುವ ದೋಷವನ್ನು ಪರಿಗಣಿಸುವುದಿಲ್ಲ. ಅಂತೆಯೇ ಕೈಕೇಯಿಯೂ ಕುಬ್ಜೆಯ ಮಾತನ್ನು ಕೇಳಿ ರಾಜ್ಯಲುಬ್ಧಳಾಗಿ ಭರತನಿಗೆ ಪಟ್ಟಗಟ್ಟಬೇಕೆಂದು ಹಟಹಿಡಿದಳು. ಇದರ ಪರಿಣಾಮವಾಗಿ ಇಂದು ರಘುವಂಶವೇ ನಾಶವಾಯಿತು.*

ಮಾಡಬಾರದ ಕಾರ್ಯವನ್ನು ಮಾಡಲು ನೀನು ರಾಜನನ್ನು ನಿಯೋಜಿಸಿದೆ. ಇದರ ಪರಿಣಾಮವಾಗಿ ಪತ್ನಿಯೊಡನೆ ರಾಮನು ಅರಣ್ಯಕ್ಕೆ ಹೋದನು. ಅಳಿಯನು ಕಾರಣವಿಲ್ಲದೇ ಮಗಳಾದ ಸೀತೆಯೊಡನೆ ಅರಣ್ಯಕ್ಕೆ

*'ಕಿಂಪಾಕ' ಎಂಬುದಕ್ಕೆ ಒಬ್ಬೊಬ್ಬರೂ ಒಂದೊಂದು ವಿಧವಾಗಿ ಅರ್ಥಮಾಡಿದ್ದಾರೆ. ೧) ಬೇವಿನಹಣ್ಣು ೨) ವಿಷಭೇದ = ಕೋಪದಿಂದ ಈ ವಿಷವನ್ನು ತಿನ್ನುವವನು ತನಗೆ ಆತ್ಮಹತ್ಯಾದೋಷವು ಪ್ರಾಪ್ತವಾಗುವುದೆಂದು ವಿವೇಚಿಸುವುದಿಲ್ಲ. ವಿಷಭೇದ ಎಂಬ ಅರ್ಥವನ್ನೇ ಇಟ್ಟುಕೊಂಡು ಹೀಗೂ ಅರ್ಥವಿವರಣೆ ಮಾಡುತ್ತಾರೆ. ವಿಷವನ್ನು ಹಾಕಿದವರಿಗೆ ಹತ್ಯಾದೋಷದ ಪರಿಗಣನೆಯಿಲ್ಲದಿರುವಂತೆ ವಿಷಬೀಜವನ್ನು ನೆಟ್ಟ ಕುಬ್ಜೆಗೆ ಕುಲಕ್ಷಯದೋಷವುಂಟಾಗುವುದೆಂಬ ವಿವೇಚನೆಯಿರಲಿಲ್ಲ. ೩) 'ಕಿಂಪಾಕಂ' ಎಂಬುದಕ್ಕೆ ಬೆಳ್ಳುಳ್ಳಿ ಮುಂತಾದುವು ಎಂದೂ ಒಬ್ಬರು ಅರ್ಥಮಾಡಿದ್ದಾರೆ. ಇವರ ಅರ್ಥವಿವರಣೆಯು ಹೀಗಿದೆ :- "ವ್ಯಾಧಿಪೀಡಿತನಾದ ಬ್ರಾಹ್ಮಣನೊಬ್ಬನು ತಾತ್ಕಾಲಿಕವಾದ ವ್ಯಾಧಿಗೆ ಅಂಜಿ ನಿಷಿದ್ಧವಾದ ಬೆಳ್ಳುಳ್ಳಿಯನ್ನು ತಿನ್ನುವಂತೆ." ೪) ಕಾಕಮರ್ದವೆಂಬ ವಿಷಫಲವಿಶೇಷ. ೫) ಕುತ್ಸಿತಪಾಕ. [ವಿಷಾನ್ನ]

ಕಳುಹಿಸಲ್ಪಟ್ಟನೆಂಬುದನ್ನು ಕೇಳಿದೊಡನೆಯೇ ಜನಕನೂ ನನ್ನಂತೆಯೇ ಪರಿತಾಪಪಡುವನು. ಜೀವಿಸಿದ್ದೂ ಕಣ್ಣಿಗೆ ಕಾಣದಂತೆ ಅಯೋಧ್ಯೆಯಿಂದ ಹೊರಟುಹೋಗಿರುವ ಧಾರ್ಮಿಕನಾದ, ಕಮಲಾಕ್ಷನಾದ ಶ್ರೀರಾಮನು, ನಾನು ಅನಾಥೆಯಾಗಿ ವಿಧವೆಯಾಗಿರುವುದನ್ನು ಇನ್ನೂ ತಿಳಿದಿಲ್ಲ. ವಿದೇಹರಾಜನ ಮಗಳಾದ, ಪಾತಿವ್ರತ್ಯವೆಂಬ ತಪಸ್ಸಿನಲ್ಲಿಯೇ ನಿರತಳಾಗಿರುವ, ದುಃಖಪಡಲು ಅನರ್ಹಳಾದ ಸೀತಾದೇವಿಯು ಅರಣ್ಯದಲ್ಲಿ ದುಃಖವನ್ನು ಅನುಭವಿಸುತ್ತಾ ಉದ್ವಿಗ್ನಳೂ ಆಗುತ್ತಾಳೆ. ರಾತ್ರಿಯ ಕಾಲದಲ್ಲಿ ಮೃಗ-ಪಕ್ಷಿಗಳ ಘೋರನಿನಾದವನ್ನು ಕೇಳಿ ಭಯಗೊಳ್ಳುವ ಸೀತೆಯು ರಾಘವನನ್ನು ಬಾಚಿ ತಬ್ಬಿಕೊಳ್ಳುತ್ತಾಳೆ. ಏಕಮಾತ್ರ ಪುತ್ರಿಯನ್ನು ಹೊಂದಿರುವ ವೃದ್ಧನಾದ ಜನಕನು ತನ್ನ ಮಗಳ ಈ ದುರವಸ್ಥೆಯನ್ನೇ ಚಿಂತಿಸುತ್ತಾ ಶೋಕಸಂತಪ್ತನಾಗಿ ಅತ್ಯಲ್ಪಕಾಲದಲ್ಲಿಯೇ ಪ್ರಾಣತ್ಯಾಗ ಮಾಡುವುದು ನಿಜ. ಪತಿವ್ರತೆಯಾಗಿರುವ ನಾನು ಕೂಡ ಈಗಿಂದೀಗಲೇ ಪರಲೋಕಕ್ಕೆ ಹೊರಟುಹೋಗುತ್ತೇನೆ. ಪತಿಯ ಈ ಶರೀರವನ್ನು ಆಲಿಂಗಿಸಿಕೊಂಡೇ ಚಿತಾಗ್ನಿಯನ್ನೂ ಪ್ರವೇಶಿಸುತ್ತೇನೆ."*

ರಾಜ್ಯವ್ಯವಹಾರಗಳಲ್ಲಿ ನಿಯುಕ್ತರಾದ ಮಂತ್ರಿಗಳು, ದಶರಥನ ಪಾರ್ಥಿವಶರೀರವನ್ನು ಆಲಿಂಗಿಸಿಕೊಂಡು ರೋದನಮಾಡುತ್ತಿದ್ದ, ಪತಿವ್ರತಾ ಶಿರೋಮಣಿಯಾದ, ದುಃಖಪೀಡಿತಳಾದ ಕೌಸಲ್ಯಾದೇವಿಯನ್ನು ಸೇವಕಿಯರ ಮೂಲಕವಾಗಿ ಬೇರ್ಪಡಿಸಿ ಬೇರೆಡೆಗೆ ಕಳುಹಿಸಿದರು. ಅನಂತರದಲ್ಲಿ ಅಮಾತ್ಯಶ್ರೇಷ್ಠರು ವಸಿಷ್ಠರ ಆದೇಶದಂತೆ ರಾಜನ ಪಾರ್ಥಿವಶರೀರವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿ ಜೋಪಾನವಾಗಿಟ್ಟು ಮುಂದಿನ ಕಾರ್ಯಗಳನ್ನು

---

*"ಪತಿವ್ರತಾಲಕ್ಷಣವನ್ನು ವಿದ್ವಾಂಸರು ಹೀಗೆ ಹೇಳುತ್ತಾರೆ :- "ಆರ್ತಾರ್ತೇ ಮುದಿತೇ ಹೃಷ್ಟಾ ಪ್ರೋಷಿತೇ ಮಲಿನಾ ಕೃಶಾ । ಮೃತೇ ಮ್ರಿಯೇತ ಯಾ ಪತ್ಯೌ ಸಾ ಸ್ತ್ರೀ ಜ್ಞೇಯಾ ಪತಿವ್ರತಾ ॥" ಪತಿಗೆ ದುಃಖವು ಸಂಭವಿಸಿದಾಗ ವ್ಯಸನಪಡತಕ್ಕವಳು ; ಪತಿಯ ಸಂತೋಷದಲ್ಲಿ ಸಂತೋಷಿಸುವವಳು ; ಪತಿಯು ಪ್ರವಾಸಕ್ಕೆ ಹೋಗಿದ್ದಾಗ ಅಲಂಕರಿಸಿಕೊಳ್ಳದೆ ಮಲಿನವಾಗಿಯೂ, ವಿಯೋಗದುಃಖದಿಂದ ಬಡವಾಗಿಯೂ ಇರುವವಳು ; ಪತಿಯು ಸತ್ತಾಗ ಸಹಗಮನವನ್ನು ಮಾಡಿ ಸಾಯುವವಳು ; ಹೀಗೆ ಯಾವಳು ನಡೆದುಕೊಳ್ಳುವಳೋ ಅವಳೇ ಪತಿವ್ರತೆಯೆಂದು ತಿಳಿಯಬೇಕು.

ನೆರವೇರಿಸಿದರು. ದಶರಥನು ಮರಣಹೊಂದಿದ ಆ ಸಮಯದಲ್ಲಿ ಅವನಿಗಿದ್ದ ನಾಲ್ವರು ಮಕ್ಕಳಲ್ಲಿ ಒಬ್ಬನಾದರೂ ತಂದೆಯ ಬಳಿಯಲ್ಲಿರಲಿಲ್ಲ. ಆದುದರಿಂದ ಮಕ್ಕಳು ಬರುವವರೆಗೂ ರಾಜನ ಶವಸಂಸ್ಕಾರವನ್ನು ಮಾಡಲು ಇಚ್ಛಿಸದ ಸರ್ವಜ್ಞರಾದ ಮಂತ್ರಿಗಳು ಮಕ್ಕಳ ಆಗಮನವನ್ನು ನಿರೀಕ್ಷಿಸಿ ರಾಜನ ಪಾರ್ಥಿವಶರೀರವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿಟ್ಟು ರಕ್ಷಿಸುತ್ತಿದ್ದರು. ಅವನ ಪಾರ್ಥಿವಶರೀರವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿ ಮಲಗಿಸಿದುದನ್ನು ನೋಡಿ ಅಂತಃಪುರದ ರಾಜಪತ್ನಿಯರು–'ಅಯ್ಯೋ! ನಮ್ಮ ಸ್ವಾಮಿಯು ಸತ್ತೇಹೋದನು'–ಎಂದೆನ್ನುತ್ತಾ ಸುತ್ತುಗಟ್ಟಿ ನಿಂತರು. ಶೋಕದಿಂದ ಪೀಡಿತರಾಗಿದ್ದ ಅವರೆಲ್ಲರೂ ತಮ್ಮೆರಡು ಕೈಗಳನ್ನೂ ಮೇಲೆತ್ತಿ ಕಣ್ಣೀರಿನಿಂದ ತೋಯ್ದ ಮುಖವುಳ್ಳವರಾಗಿ ಶೋಕಸಂತಪ್ತರಾಗಿ ಕರುಣಾಜನಕವಾದ ರೀತಿಯಲ್ಲಿ ವಿಲಪಿಸತೊಡಗಿದರು.

"ಮಹಾರಾಜ! ಈ ಮೊದಲೇ ನಾವು ಸತ್ಯಸಂಧನಾದ, ಎಲ್ಲರೊಡನೆಯೂ ಯಾವಾಗಲೂ ಪ್ರಿಯವಾದ ಮಾತುಗಳನ್ನಾಡುತ್ತಿದ್ದ ಶ್ರೀರಾಮ ನಿಂದ ವಿಹೀನರಾಗಿದ್ದೆವು. ಈಗ ನೀನೂ ನಮ್ಮನ್ನು ಬಿಟ್ಟುಹೋದೆಯೇಕೆ? ನಿನ್ನನ್ನು ಕಳೆದುಕೊಂಡು ವಿಧವೆಯರಾಗಿ ಶ್ರೀರಾಮನಿಂದಲೂ ವಿಹೀನ ರಾಗಿರುವ ನಾವು ದುಷ್ಟಸ್ವಭಾವದವಳಾದ, ಪತಿಘಾತಕಿಯಾದ ಕೈಕೇಯಿಯ ಬಳಿಯಲ್ಲಿ ಹೇಗೆತಾನೇ ಬಾಳಿಯೇವು? ಧರ್ಮಾತ್ಮನಾದ ಮಹಾನುಭಾವ ನಾದ ಆ ಶ್ರೀರಾಮನೇ ನಮಗೆ ಸರ್ವಕಾಲದಲ್ಲಿಯೂ ಒಡೆಯನು. ನಿನಗೂ ಅವನೇ ರಕ್ಷಕನಾಗಿದ್ದನು. ಸಕಲರಿಗೂ ನಾಥನಾಗಿದ್ದ ಶ್ರೀಮಂತನಾದ ಶ್ರೀರಾಮನು ರಾಜ್ಯಲಕ್ಷ್ಮಿಯನ್ನೂ ಪರಿತ್ಯಜಿಸಿ ಕಾಡಿಗೆ ಹೊರಟುಹೋದನು. ನಾವು ನಿಶ್ಚಯವಾಗಿಯೂ ನಿರ್ಭಾಗ್ಯರೇ ಸರಿ.

ಪ್ರಭುವೇ! ನಿನ್ನಿಂದಲೂ ಮತ್ತು ರಾಮನಿಂದಲೂ ವಿಹೀನರಾಗಿ ವ್ಯಸನಪೀಡಿತರಾಗಿರುವ ನಾವು ಕೈಕೇಯಿಯಿಂದಲೂ ತಿರಸ್ಕೃತರಾಗಿ ಈ ಅಯೋಧ್ಯೆಯಲ್ಲಿ ಹೇಗೆತಾನೇ ವಾಸ ಮಾಡುವೆವು? ದುಷ್ಟೆಯಾದ ಕೈಕೇಯಿಯು ಪತಿಯಾದ ದಶರಥನನ್ನೂ, ಧರ್ಮಾತ್ಮನಾದ ರಾಮನನ್ನೂ, ಮಹಾಬಲನಾದ ಲಕ್ಷ್ಮಣನನ್ನೂ, ಸಾಧ್ವಿಯಾದ ಸೀತಾದೇವಿ

ಯನ್ನೂ ರಾಜ್ಯಲೋಭದಿಂದ ಪರಿತ್ಯಜಿಸಿದಳು. ಇಂತಹವಳು ಮತ್ತಾರನ್ನು ತಾನೇ ತ್ಯಜಿಸದೇ ಇರುವಳು? ನಮ್ಮೆಲ್ಲರನ್ನೂ ಓಡಿಸಿಯೇ ಬಿಡುವಳು."

ವಿಪುಲವಾದ ಶೋಕದಿಂದ ಸಂತಪ್ತರಾಗಿದ್ದ ದಶರಥನ ಪತ್ನಿಯರು ಕಣ್ಣೀರಿನಿಂದಲೇ ತೋಯ್ದುಹೋಗಿದ್ದರು. ಅವರಿಗೆ ಸಂತೋಷವೆಂಬುದೇ ಇರಲಿಲ್ಲ. ದುಃಖದ ಆಧಿಕ್ಯದಿಂದಾಗಿ ತಲೆಯನ್ನು ಚಚ್ಚಿಕೊಳ್ಳುತ್ತಿದ್ದರು. ಎದೆಯನ್ನು ಬಡಿದುಕೊಳ್ಳುತ್ತಿದ್ದರು.

ಮಹಾತ್ಮನಾದ ದಶರಥನಿಂದ ವಿಹೀನವಾದ ಅಯೋಧ್ಯೆಯೂ ಚಂದ್ರ ನಿಲ್ಲದ ರಾತ್ರಿಯಂತೆಯೂ ಗಂಡನಿಂದ ಪರಿತ್ಯಕ್ತಳಾದ ಹೆಂಗಸಿನಂತೆಯೂ ಕಾಣುತ್ತಿದ್ದಿತು.

ಅಯೋಧ್ಯಾಪಟ್ಟಣದ ಪ್ರಜೆಗಳೆಲ್ಲರೂ ಕಣ್ಣೀರಿಡುತ್ತಾ ಸಂಕಟಪಡು ತ್ತಿದ್ದರು. ಕುಲಸ್ತ್ರೀಯರೆಲ್ಲರೂ ಹಾಹಾಕಾರಮಾಡುತ್ತಾ ಗೋಳಾಡುತ್ತಿದ್ದರು. ಚತುಷ್ಪಥಗಳು (ಚೌಕಗಳು) ಮತ್ತು ಮನೆಗಳ ಮುಂಭಾಗಗಳು ಗುಡಿಸಿ-ಸಾರಿಸಿ-ರಂಗವಲ್ಯಾದಿಗಳಿಲ್ಲದೇ, ಬಲಿಹರಣಾದಿಗಳಿಲ್ಲದೇ ಶೂನ್ಯವಾಗಿ ಕಾಣುತ್ತಿದ್ದುವು. ಹಿಂದಿನಂತೆ ಶೋಭಾಯಮಾನವಾಗಿರಲಿಲ್ಲ. ನರಾಧಿಪನು ಪುತ್ರವಿಯೋಗದುಃಖದಿಂದ ಸ್ವರ್ಗಕ್ಕೆ ಹೊರಟುಹೋದನು. ಅಂತಃಪುರದ ಸ್ತ್ರೀಯರು ನೆಲದ ಮೇಲೆ ಬಿದ್ದು ಹೊರಳಾಡುತ್ತಿದ್ದರು. ಸೂರ್ಯನು ಕಿರಣಗಳೆಲ್ಲವನ್ನೂ ಹಿಂದಕ್ಕೆ ಸೆಳೆದುಕೊಂಡು ಅಸ್ತಂಗತ ನಾದನು. ರಾತ್ರಿದೇವಿಯು ಕತ್ತಲನ್ನು ಪ್ರಸಾರಗೊಳಿಸುತ್ತಾ ಉಪಸ್ಥಿತಳಾದಳು. ನಾಲ್ವರಲ್ಲಿ ಒಬ್ಬ ಮಗನೂ ಇಲ್ಲದೇ ದಹನಸಂಸ್ಕಾರವನ್ನು ಮಾಡುವುದು ಉಚಿತವಲ್ಲವೆಂದು ಅರಮನೆಗೆ ಬಂದ ಸುಹೃದರು ಅಭಿಪ್ರಾಯಪಟ್ಟರು. ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಶಾಸ್ತ್ರವಿಧಿಗಳನ್ನು ಅವಲೋಕಿಸಿ ಅಚಿಂತ್ಯರೂಪನಾದ ದಶರಥನ ಪಾರ್ಥಿವ ಶರೀರವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿರಿಸಿದರು.

ಕುತ್ತಿಗೆಯವರೆಗೂ ಹರಿದುಬರುತ್ತಿರುವ ಕಣ್ಣೀರಿನಿಂದ ಕೂಡಿದ ಜನ ರಿಂದ ವ್ಯಾಪ್ತವಾಗಿದ್ದ ಚೌಕಗಳುಳ್ಳ, ಮಹಾತ್ಮನಾದ ದಶರಥನಿಂದ ವಿಹೀನ ವಾಗಿದ್ದ ಅಯೋಧ್ಯಾಪಟ್ಟಣವು – ಸೂರ್ಯನಿಲ್ಲದ ಕಾಂತಿಹೀನವಾಗಿರುವ

ಆಕಾಶದಂತೆಯೂ, ಮೋಡ ಕವಿದು ನಕ್ಷತ್ರಗಳು ಕಾಣಿಸದ ರಾತ್ರಿಯಂತೆಯೂ ಕಾಂತಿಹೀನವಾಗಿದ್ದಿತು. ಅಯೋಧ್ಯಾಪಟ್ಟಣದ ಪುರುಷರೂ ಮತ್ತು ಸ್ತ್ರೀಯರೂ ಗುಂಪು-ಗುಂಪಾಗಿ ರಾಜನ ಅರಮನೆಯಲ್ಲಿ ಸೇರಿ ಭರತನ ತಾಯಿಯಾದ ಕೈಕೇಯಿಯನ್ನು ನಿಂದಿಸುತ್ತಾ ಗೋಳಾಡುತ್ತಿದ್ದರು. ಯಾರೊಬ್ಬರಿಗೂ ನೆಮ್ಮದಿಯೇ ಇರಲಿಲ್ಲ.

೬೬ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೬೭ನೆಯ ಸರ್ಗ

ಮಾರ್ಕಂಡೇಯರೇ ಮೊದಲಾದ ಮಹರ್ಷಿಗಳು ರಾಜನಿಲ್ಲದ ದೇಶದ ದುಃಸ್ಥಿತಿಯನ್ನು ವರ್ಣಿಸಿದುದು : ಕೂಡಲೇ ಯಾರನ್ನಾದರೂ ರಾಜನನ್ನಾಗಿ ಮಾಡುವಂತೆ ವಸಿಷ್ಠರಿಗೆ ಆದೇಶ ನೀಡಿದುದು

ಆಕ್ರನ್ದಿತನಿರಾನನ್ದಾ ಸಾಶ್ರುಕಣ್ಠಜನಾಕುಲಾ ।
ಅಯೋಧ್ಯಾಯಾಮವತತಾ ಸಾ ವ್ಯತೀಯಾಯ ಶರ್ವರೀ ॥೧॥

ಅಂದಿನ ರಾತ್ರಿಯೆಲ್ಲವೂ ಪುರಜನರ ಮತ್ತು ರಾಜಪರಿವಾರದವರ ಗೋಳಾಟದಿಂದಲೇ ಕಳೆಯಿತು. ಆನಂದಲೇಶವೂ ಇರಲಿಲ್ಲ. ಕಣ್ಣೀರನ್ನು ಕುತ್ತಿಗೆಯವರೆಗೂ ಸುರಿಸುತ್ತಿದ್ದ ಜನರಿಂದ ಅರಮನೆಯ ಪ್ರದೇಶವು ನಿಬಿಡವಾಗಿದ್ದಿತು. ಅತಿದೀರ್ಘವಾಗಿ ಕಾಣುತ್ತಿದ್ದ ಆ ರಾತ್ರಿಯು ಕಳೆದು ಹೋಯಿತು.

ಸೂರ್ಯೋದಯವಾದ ಬಳಿಕ ರಾಜಕಾರ್ಯಪ್ರವರ್ತಕರಾದ ಬ್ರಾಹ್ಮಣರು ವಿದ್ವಾಂಸರ ಸಭೆಯೊಂದನ್ನು ಸೇರಿಸಿದರು. ರಾಜಪುರೋಹಿತರಾದ ವಸಿಷ್ಠರನ್ನು ಪುರಸ್ಕರಿಸಿ ಮಾರ್ಕಂಡೇಯ, ಮೌದ್ಗಲ್ಯ, ವಾಮದೇವ, ಕಶ್ಯಪ, ಕಾತ್ಯಾಯನ, ಗೌತಮ, ಮಹಾಯಶೋವಂತನಾದ ಜಾಬಾಲಿ–ಇವರೇ ಮುಂತಾದ ವಿದ್ವಾಂಸರು ಅಮಾತ್ಯರೊಡನೆ ಸಭೆಯಲ್ಲಿ ಉಪಸ್ಥಿತರಾಗಿದ್ದರು. ಮುಂದೆ ಮಾಡಬೇಕಾದ ಕರ್ತವ್ಯದ ವಿಷಯವಾಗಿ ಒಬ್ಬೊಬ್ಬರೂ ತಮ್ಮ-ತಮ್ಮ ಅಭಿಪ್ರಾಯಗಳನ್ನು ಸಭೆಯ ಮುಂದೆ ಮಂಡಿಸಲು ಪ್ರಾರಂಭಿಸಿದರು.

"ಪುತ್ರವಿಯೋಗದ ಶೋಕದಿಂದಲೇ ನಮ್ಮ ದಶರಥಮಹಾರಾಜನು ಅಸುನೀಗಿದನು. ರಾಜನು ಅವಸಾನಹೊಂದಿದನಂತರ ನಮಗೆ ದಿವಸವನ್ನು ಕಳೆಯುವುದೇ ಬಹು ದುಸ್ತರವಾಗಿದೆ. ನಾವು ದುಃಖದಿಂದ ಕಳೆದ ಈ ರಾತ್ರಿಯು ನೂರು ವರ್ಷಗಳನ್ನು ಕಳೆದಂತೆ ನಮ್ಮೆಲ್ಲರಿಗೂ ಭಾಸವಾಗುತ್ತಿದೆ. ಇಂದಿನ ನಮ್ಮ ರಾಜ್ಯದ ಪರಿಸ್ಥಿತಿಯು ಹೀಗಿದೆ : ರಾಜನು ಸ್ವರ್ಗಸ್ಥನಾದನು. ಇದಕ್ಕೆ ಮೊದಲೇ ಹಿರಿಯ ಮಗನಾದ ರಾಮನು ಅರಣ್ಯಕ್ಕೆ ಹೊರಟುಹೋದನು. ರಾಜನ ಮತ್ತೊಬ್ಬ ಮಗನಾದ, ತೇಜಸ್ವಿಯಾದ ಲಕ್ಷ್ಮಣನೂ ಶ್ರೀರಾಮನ ಜೊತೆಯಲ್ಲಿಯೇ ಕಾಡಿಗೆ ಹೊರಟುಹೋದನು. ಶತ್ರುವಿಧ್ವಂಸಕರಾದ ಭರತ-ಶತ್ರುಘ್ನರು ಕೇಕಯರಾಜ್ಯದ ರಾಜಧಾನಿಯಾದ ರಾಜಗೃಹದಲ್ಲಿ ಅವರ ತಾತನ ರಮ್ಯವಾದ ಅರಮನೆಯಲ್ಲಿ ವಾಸವಾಗಿದ್ದಾರೆ. ಈಗಲೇ ಈ ಕೋಸಲ ರಾಜ್ಯಕ್ಕೆ ಇಕ್ಷ್ವಾಕುವಂಶದ ರಾಜಕುಮಾರರಲ್ಲಿ ಒಬ್ಬನನ್ನು ರಾಜನನ್ನಾಗಿ ಮಾಡಬೇಕಾಗಿದೆ. ರಾಜನೇ ಇಲ್ಲದ ನಮ್ಮ ರಾಷ್ಟ್ರವು ಅರಾಜಕತೆಯಿಂದಾಗಿ ವಿನಾಶಹೊಂದಬಾರದು.

ನಾರಾಜಕೇ ಜನಪದೇ ವಿದ್ಯುನ್ಮಾಲೀ ಮಹಾಸ್ವನಃ ।
ಅಭಿವರ್ಷತಿ ಪರ್ಜನ್ಯೋ ಮಹೀಂ ದಿವ್ಯೇನ ವಾರಿಣಾ ॥೯॥

ರಾಜನಿಲ್ಲದ ದೇಶದಲ್ಲಿ ಪ್ರಕೃತಿಯು ಸುಮುಖವಾಗಿರುವುದಿಲ್ಲ. ಗುಡುಗು-ಸಿಡಿಲುಗಳ ಶಬ್ದಗಳಿಂದಲೂ, ಮಿಂಚಿನ ಸಾಲುಗಳಿಂದಲೂ ಕೂಡಿರುವ ಮೇಘವು ದಿವ್ಯಜಲವನ್ನು ರಾಜನಿಲ್ಲದ ದೇಶದಲ್ಲಿ ಸುರಿಸುವುದಿಲ್ಲ. (ರಾಜನಿಲ್ಲದ ದೇಶದಲ್ಲಿ ಯಜ್ಞ-ಯಾಗಾದಿಗಳೊಂದೂ ನಡೆಯದ ಕಾರಣ ಕಾಲ-ಕಾಲಕ್ಕೆ ಮಳೆಯಾಗುವುದಿಲ್ಲ.)

ನಾರಾಜಕೇ ಜನಪದೇ ಬೀಜಮುಷ್ಟಿಃ ಪ್ರಕೀರ್ಯತೇ ।
ನಾರಾಜಕೇ ಪಿತುಃ ಪುತ್ರೋ ಭಾರ್ಯಾ ವಾ ವರ್ತತೇ ವಶೇ ॥೧೦॥

ರಾಜನಿಲ್ಲದ ರಾಜ್ಯದಲ್ಲಿ ರೈತರು (ಸಕಾಲದಲ್ಲಿ ಮಳೆಯಾಗದ ಕಾರಣ) ಬೀಜವನ್ನೇ ಬಿತ್ತುವುದಿಲ್ಲ. (ರಾಜನಿಲ್ಲದ ರಾಜ್ಯದಲ್ಲಿ ತಾವು ಬೆಳೆದ ಬೆಳೆಯು ತಮಗೇ ಸಿಕ್ಕುವುದೆಂಬ ಭರವಸೆಯೂ ಇರುವುದಿಲ್ಲ.) ರಾಜನಿಲ್ಲದ ರಾಜ್ಯದಲ್ಲಿ ಮಗನು ತಂದೆಗೆ ವಿಧೇಯನಾಗಿರುವುದಿಲ್ಲ. ಹೆಂಡತಿಯು ಗಂಡನಿಗೆ

ವಿಧೇಯಳಾಗಿರುವುದಿಲ್ಲ. (ಎಲ್ಲರೂ ಸ್ವೇಚ್ಛಾಚಾರಿಗಳಾಗಿರುತ್ತಾರೆ. ರಾಜ ದಂಡನೆಯಿಲ್ಲದಿರುವುದೇ ಇದಕ್ಕೆ ಕಾರಣ.)

ಅರಾಜಕೇ ಧನಂ ನಾಸ್ತಿ ನಾಸ್ತಿ ಭಾರ್ಯಾಪ್ಯರಾಜಕೇ ।
ಇದಮತ್ಯಾಹಿತಂ ಚಾನ್ಯತ್ಕುತಃ ಸತ್ಯಮರಾಜಕೇ ॥೧೧॥

ರಾಜನಿಲ್ಲದ ರಾಜ್ಯದಲ್ಲಿ ಧನವಂತನಾಗಿರಲೂ ಸಾಧ್ಯವಿಲ್ಲ. ಕಳ್ಳ-ಕಾಕರು ನಿರ್ಭಯವಾಗಿ ಧನವನ್ನು ಅಪಹರಿಸಿಕೊಂಡು ಹೋಗುತ್ತಾರೆ. ಮದುವೆಮಾಡಿಕೊಳ್ಳುವಂತೆಯೂ ಇಲ್ಲ. ಭಾರ್ಯೆಯನ್ನೂ ಅಪಹರಿಸುತ್ತಾರೆ. ಇದಕ್ಕಿಂತಲೂ ಭಯಂಕರವಾದ ಪರಿಸ್ಥಿತಿಯು ಅರಾಜಕತೆಯಿರುವ ದೇಶದಲ್ಲಲ್ಲದೇ ಮತ್ತೆಲ್ಲಿರಲು ಸಾಧ್ಯ? ಈ ಅವ್ಯವಸ್ಥೆಯು ರಾಜನಿಲ್ಲದ ದೇಶದಲ್ಲಿರುವುದು ನಿಶ್ಚಿತ.

ನಾರಾಜಕೇ ಜನಪದೇ ಕಾರಯನ್ತಿ ಸಭಾಂ ನರಾಃ ।
ಉದ್ಯಾನಾನಿ ಚ ರಮ್ಯಾಣಿ ಹೃಷ್ಟಾಃ ಪುಣ್ಯಗೃಹಾಣಿ ಚ ॥೧೨॥

ರಾಜನಿಲ್ಲದ ರಾಜ್ಯದಲ್ಲಿ ಮನುಷ್ಯರು ಧರ್ಮಾಧರ್ಮಗಳ ನಿರ್ಣಯಗಳಿಗಾಗಿ ವಿದ್ವಾಂಸರ ಸಭೆಯನ್ನೂ ಸೇರಿಸುವುದಿಲ್ಲ. ಅಂತಹ ದೇಶದಲ್ಲಿ ರಮ್ಯವಾದ ಉದ್ಯಾನವನಗಳಾಗಲೀ, ಹರ್ಷೋತ್ಸಾಹಗಳಿಂದ ಕೂಡಿರುವ ದೇವಾಲಯಗಳಾಗಲೀ, ಧರ್ಮಶಾಲೆಗಳಾಗಲೀ ಇರುವುದಿಲ್ಲ.

ನಾರಾಜಕೇ ಜನಪದೇ ಯಜ್ಞಶೀಲಾ ದ್ವಿಜಾತಯಃ ।
ಸತ್ರಾಣ್ಯನ್ವಾಸತೇ ದಾನ್ತಾ ಬ್ರಾಹ್ಮಣಾಃ ಸಂಶಿತವ್ರತಾಃ ॥೧೩॥

ಅರಾಜಕತೆಯಿರುವ ರಾಜ್ಯದಲ್ಲಿ ಯಜ್ಞಶೀಲರಾದ, ಜಿತೇಂದ್ರಿಯರಾದ, ವ್ರತನಿಷ್ಠರಾದ ಬ್ರಾಹ್ಮಣರು ವಿಘ್ನಭಯದಿಂದ ಮಹಾಯಾಗಗಳನ್ನು ಮಾಡುವುದಿಲ್ಲ.

ನಾರಾಜಕೇ ಜನಪದೇ ಮಹಾಯಜ್ಞೇಷು ಯಜ್ವನಃ ।
ಬ್ರಾಹ್ಮಣಾ ವಸುಸಂಪನ್ನಾ ವಿಸೃಜನ್ತ್ಯಾಪ್ತದಕ್ಷಿಣಾಃ ॥೧೪॥

ರಾಜನಿಲ್ಲದ ರಾಜ್ಯದಲ್ಲಿ ಕೆಲವು ವೇಳೆ ಮಹಾಯಜ್ಞಗಳನ್ನು ಪ್ರಾರಂಭಿ

ಸಿದರೂ ಧನಸಂಪನ್ನರಾದ ಬ್ರಾಹ್ಮಣರು ಋತ್ವಿಜರಿಗೆ ಕೊಡಬೇಕಾದಷ್ಟು ದಕ್ಷಿಣೆಯನ್ನು ಕೊಡುವುದಿಲ್ಲ. (ತಮ್ಮಲ್ಲಿ ಧನವಿರುವುದನ್ನು ತಿಳಿದು ಕಳ್ಳ-ಕಾಕರು ಅಪಹರಿಸಿಬಿಡುವರೆಂಬುದೇ ಅವರ ಈ ವರ್ತನೆಗೆ ಕಾರಣವಾಗಿರುತ್ತದೆ.)

ನಾರಾಜಕೇ ಜನಪದೇ ಪ್ರಹೃಷ್ಟನಟನರ್ತಕಾಃ ।
ಉತ್ಸವಾಶ್ಚ ಸಮಾಜಾಶ್ಚ ವರ್ಧನ್ತೇ ರಾಷ್ಟ್ರವರ್ಧನಾಃ ॥೧೫॥

ರಾಜನಿಲ್ಲದ ರಾಜ್ಯದಲ್ಲಿ ನಟ-ನರ್ತಕರು ಸಂತುಷ್ಟರಾಗಿರುವುದಿಲ್ಲ. ರಾಷ್ಟ್ರದ ಅಭಿವೃದ್ಧಿಗೆ ಸಾಧಕಗಳಾದ ದೇವತೋತ್ಸವಗಳಾಗಲೀ, ಗಣ್ಯರಿಂದ ಕೂಡಿದ ಸಮಾಜೋತ್ಸವಗಳಾಗಲೀ ನಡೆಯುವುದಿಲ್ಲ.

ನಾರಾಜಕೇ ಜನಪದೇ ಸಿದ್ಧಾರ್ಥಾ ವ್ಯವಹಾರಿಣಃ ।
ಕಥಾಭಿರನುರಜ್ಯನ್ತೇ ಕಥಾಶೀಲಾಃ ಕಥಾಪ್ರಿಯೈಃ ॥೧೬॥

ರಾಜನಿಲ್ಲದ ರಾಜ್ಯದಲ್ಲಿ ಪ್ರಯೋಜನಾಪೇಕ್ಷೆಯಿಂದ ಕಾರ್ಯ ಮಾಡುವವರು ಯಾವ ವಿಧವಾದ ಪ್ರಯೋಜನವನ್ನೂ ಹೊಂದುವುದಿಲ್ಲ. ಇತಿಹಾಸ ಪುರಾಣಾದಿ ಕಥೆಗಳನ್ನು ಹೇಳುವವರೂ ಶ್ರೋತೃಗಳಿಗೆ ಹಿತವಾಗುವ ರೀತಿಯಲ್ಲಿ ಪ್ರವಚನಗಳನ್ನು ಮಾಡುವುದಿಲ್ಲ.

ನಾರಾಜಕೇ ಜನಪದೇ ಉದ್ಯಾನಾನಿ ಸಮಾಗತಾಃ ।
ಸಾಯಾಹ್ನೇ ಕ್ರೀಡಿತುಂ ಯಾನ್ತಿ ಕುಮಾರ್ಯೋ ಹೇಮಭೂಷಿತಾಃ ॥೧೭॥

ಅರಾಜಕತೆಯಿರುವ ರಾಜ್ಯದಲ್ಲಿ ಅನೀತಿವಂತರ ಭಯದಿಂದಾಗಿ ಸುವರ್ಣಾಭರಣಗಳನ್ನು ಧರಿಸಿದ ಕುಮಾರಿಯರು ಸಾಯಂಕಾಲದ ವೇಳೆಯಲ್ಲಿ ವಿಹರಿಸಲು ಉದ್ಯಾನವನಗಳಿಗೂ ಹೋಗುವುದಿಲ್ಲ.

ನಾರಾಜಕೇ ಜನಪದೇ ಧನವನ್ತಃ ಸುರಕ್ಷಿತಾಃ ।
ಶೇರತೇ ವಿವೃತದ್ವಾರಾಃ ಕೃಷಿಗೋರಕ್ಷಜೀವಿನಃ ॥೧೮॥

ಕೃಷಿ ಮತ್ತು ಗೋರಕ್ಷಣೆಗಳಿಂದ ಜೀವಿಸುವ ಧನವಂತರಾದ ವೈಶ್ಯರು ರಾಜನಿಲ್ಲದ ರಾಜ್ಯದಲ್ಲಿ ಸುರಕ್ಷಿತರಾಗಿರುವುದಿಲ್ಲ. ಆದುದರಿಂದಲೇ ಅವರು ಹಗಲಿನಲ್ಲಿಯೂ ಮನೆಯ ಬಾಗಿಲನ್ನು ಮುಚ್ಚಿಯೇ ಇರುತ್ತಾರೆ.

ನಾರಾಜಕೇ ಜನಪದೇ ವಾಹನೈಃ ಶೀಘ್ರಗಾಮಿಭಿಃ ।
ನರಾ ನಿರ್ಯಾನ್ತ್ಯರಣ್ಯಾನಿ ನಾರೀಭಿಃ ಸಹ ಕಾಮಿನಃ ॥೧೯॥

ರಾಜನಿಲ್ಲದ ರಾಜ್ಯವು ವಿಹಾರಯೋಗ್ಯವೂ ಆಗಿರುವುದಿಲ್ಲ. ಕಾಮಿಗಳಾದ ಮನುಷ್ಯರು ತಮ್ಮ ಪ್ರೇಯಸಿಯರೊಡನೆ ಶೀಘ್ರವಾಗಿ ಹೋಗುವ ವಾಹನಗಳಲ್ಲಿ ಕುಳಿತು ವಿಹಾರಕ್ಕಾಗಿ ಅರಣ್ಯಪ್ರದೇಶಗಳಿಗೆ ಹೋಗುವುದಿಲ್ಲ. ಭಯಪಡುತ್ತಾರೆ.

ನಾರಾಜಕೇ ಜನಪದೇ ಬದ್ಧಘಣ್ಟಾ ವಿಷಾಣಿನಃ ।
ಅಟನ್ತಿ ರಾಜಮಾರ್ಗೇಷು ಕುಞ್ಜರಾಃ ಷಷ್ಟಿಹಾಯನಾಃ ॥೨೦॥

ರಾಜನಿಲ್ಲದ ರಾಜ್ಯದಲ್ಲಿ ಪ್ರಶಸ್ತವಾದ ದಂತವುಳ್ಳ, ಗಂಟೆಗಳಿಂದ ಅಲಂಕೃತವಾದ ಅರುವತ್ತು ವರ್ಷ ವಯಸ್ಸಿನ ಆನೆಗಳೂ ರಾಜಮಾರ್ಗದಲ್ಲಿ (ದಂತಚೋರರ ಭಯದಿಂದ) ತಿರುಗಾಡುವುದಿಲ್ಲ.

ನಾರಾಜಕೇ ಜನಪದೇ ಶರಾನ್ಸಂತತಮಸ್ಯತಾಮ್ ।
ಶ್ರೂಯತೇ ತಲನಿರ್ಘೋಷ ಇಷ್ವಸ್ತ್ರಾಣಾಮುಪಾಸನೇ ॥೨೧॥

ರಾಜನಿಲ್ಲದ ರಾಜ್ಯದಲ್ಲಿ ಶಸ್ತ್ರಾಸ್ತ್ರಗಳ ಅಭ್ಯಾಸಸಮಯದಲ್ಲಿ ಲಕ್ಷ್ಯಕ್ಕೆ ಗುರಿಯಿಟ್ಟು ಬಾಣಪ್ರಯೋಗಮಾಡುವವರ ಕೈಚಳಕ, ಹೆದೆಯ ಟಂಕಾರ ಶಬ್ದ–ಇವಾವುದೂ ಕೇಳಿಬರುವುದಿಲ್ಲ. (ಸೈನ್ಯದ ಚಟುವಟಿಕೆಗಳೇ ಇಲ್ಲವಾಗುತ್ತವೆ.)

ನಾರಾಜಕೇ ಜನಪದೇ ವಣಿಜೋ ದೂರಗಾಮಿನಃ ।
ಗಚ್ಛನ್ತಿ ಕ್ಷೇಮಮಧ್ವಾನಂ ಬಹುಪಣ್ಯಸಮಾಚಿತಾಃ ॥೨೨॥

ಹೇರಳವಾದ ಸರಕುಗಳನ್ನು ತುಂಬಿಕೊಂಡು ಬಹುದೂರ ವ್ಯಾಪಾರಕ್ಕೆ ಹೋಗುವ ವರ್ತಕರು ರಾಜನಿಲ್ಲದ ದೇಶದಲ್ಲಿ ಕ್ಷೇಮದಿಂದ ಪ್ರಯಾಣಮಾಡಲಾರರು.

ನಾರಾಜಕೇ ಜನಪದೇ ಚರತ್ಯೇಕಚರೋವಶೀ ।
ಭಾವಯನ್ನಾತ್ಮನಾತ್ಮಾನಂ ಯತ್ರ ಸಾಯಂಗೃಹೋ ಮುನಿಃ ॥೨೩॥

ರಾಜನಿಲ್ಲದ ದೇಶದಲ್ಲಿ ಆತ್ಮಜ್ಞಾನಿಗೂ ಉಳಿಗಾಲವಿಲ್ಲ. ಏಕಾಕಿಯಾಗಿ

ಸಂಚರಿಸುವ, ಜಿತೇಂದ್ರಿಯನಾದ, ಅಂತಃಕರಣದಲ್ಲಿ ಯಾವಾಗಲೂ ಪರಮಾತ್ಮನನ್ನೇ ಧ್ಯಾನಿಸುವ ಮುನಿಯು ಸಾಯಂಕಾಲವಾಗುತ್ತಲೇ ಸಿಕ್ಕುವ ಮನೆಗಳಲ್ಲಿ ತಂಗಲೂ ಸಾಧ್ಯವಾಗುವುದಿಲ್ಲ.*

ನಾರಾಜಕೇ ಜನಪದೇ ಯೋಗಕ್ಷೇಮಃ ಪ್ರವರ್ತತೇ ।
ನ ಚಾಪ್ಯರಾಜಕೇ ಸೇನಾ ಶತ್ರೂನ್ವಿಷಹತೇ ಯುಧಿ ॥೨೪॥

ಅರಾಜಕತೆಯಿರುವ ರಾಜ್ಯದಲ್ಲಿ ಪ್ರಜೆಗಳಿಗೆ ಇಲ್ಲದಿರುವ ವಸ್ತುವಿನ ಪ್ರಾಪ್ತಿಯಾಗಲೀ–ಇರುವ ವಸ್ತುವಿನ ರಕ್ಷಣೆಯಾಗಲೀ ಸಾಧ್ಯವಾಗುವುದಿಲ್ಲ. ಆ ರಾಜ್ಯದ ಸೈನ್ಯವೂ ಶತ್ರುಗಳನ್ನು ಎದುರಿಸಲಾರದು.

ನಾರಾಜಕೇ ಜನಪದೇ ಹೃಷ್ಟೈಃ ಪರಮವಾಜಿಭಿಃ ।
ನರಾಃ ಸಂಯಾನ್ತಿ ಸಹಸಾ ರಥೈಶ್ಚ ಪರಿಮಣ್ಡಿತಾಃ ॥೨೫॥

ಅರಾಜಕತೆಯಿರುವ ರಾಜ್ಯದಲ್ಲಿ ವಸ್ತ್ರಾಲಂಕಾರಗಳಿಂದ ಭೂಷಿತರಾದ ಜನರು ಹೃಷ್ಟ-ಪುಷ್ಟವಾದ ಕುದುರೆಗಳಿಂದ ಯುಕ್ತವಾಗಿರುವ ರಥಗಳಲ್ಲಿ ಕುಳಿತು ಪ್ರಯಾಣಮಾಡಲೂ ಸಾಧ್ಯವಾಗುವುದಿಲ್ಲ.

ನಾರಾಜಕೇ ಜನಪದೇ ನರಾಃ ಶಾಸ್ತ್ರವಿಶಾರದಾಃ ।
ಸಂವದನ್ತೋಽವತಿಷ್ಠನ್ತೇ ವನೇಷು ನಗರೇಷು ಚ ॥೨೬॥

ರಾಜನಿಲ್ಲದ ರಾಜ್ಯದಲ್ಲಿ ಶಾಸ್ತ್ರಗಳನ್ನು ತಿಳಿದ ವಿದ್ವಾಂಸರು ವನಗಳಲ್ಲಿಯೂ (ಆಶ್ರಮಗಳಲ್ಲಿಯೂ), ಪಟ್ಟಣಗಳಲ್ಲಿಯೂ ತಮ್ಮ ಶಾಸ್ತ್ರಜ್ಞಾನವನ್ನು ಪ್ರಚಾರಗೊಳಿಸಲೂ ಆಗುವುದಿಲ್ಲ.

ನಾರಾಜಕೇ ಜನಪದೇ ಮಾಲ್ಯಮೋದಕದಕ್ಷಿಣಾಃ ।
ದೇವತಾಭ್ಯರ್ಚನಾರ್ಥಾಯ ಕಲ್ಪ್ಯನ್ತೇ ನಿಯತೈರ್ಜನೈಃ ॥೨೭॥

ರಾಜನಿಲ್ಲದ ರಾಜ್ಯದಲ್ಲಿ ದೇವತಾರ್ಚನೆಗಾಗಿ ಮಾಲೆ-ಮೋದಕ-ದಕ್ಷಿಣೆ ಇವೆ ಮುಂತಾದ ಪೂಜಾವಸ್ತುಗಳನ್ನು ವ್ರತನಿಯಮಾನುಷ್ಠಾನಪರರಾದ

*ಇಂತಹ ಮುನಿಯು ಸಾಯಂಕಾಲವಾಗುತ್ತಲೇ ಸಿಕ್ಕಿದ ಗ್ರಾಮದಲ್ಲಿ ಉಳಿದುಕೊಳ್ಳಬೇಕು. ಆ ಗ್ರಾಮದವರು ಆ ಮುನಿಯನ್ನು ಸತ್ಕರಿಸಬೇಕು. ಇದು ಧರ್ಮ. ರಾಜನಿಲ್ಲದಿದ್ದರೆ ಈ ಧರ್ಮವೂ ಲೋಪವಾಗುತ್ತದೆ. ಮುನಿಯನ್ನು ಕರೆದು ಭಿಕ್ಷೆ ಕೊಡುವವರೇ ಇರುವುದಿಲ್ಲ.

ಜನರು ಸಿದ್ಧಪಡಿಸುವುದಿಲ್ಲ. (ಅಶುಚಿಗಳು ಅಂತಹ ಕಾರ್ಯಗಳನ್ನು ಮಾಡುತ್ತಾರೆ.)

ನಾರಾಜಕೇ ಜನಪದೇ ಚನ್ದನಾಗರುರೂಷಿತಾಃ ।
ರಾಜಪುತ್ರಾ ವಿರಾಜನ್ತೇ ವಸನ್ತ ಇವ ಶಾಖಿನಃ ॥೨೮॥

ರಾಜನಿಲ್ಲದಿರುವ ರಾಜ್ಯದಲ್ಲಿ ಚಂದನಾಗರುಗಳಿಂದ ಅನುಲೇಪಿತರಾದ ರಾಜಪುತ್ರರು–ವಸಂತಕಾಲದಲ್ಲಿ ವೃಕ್ಷಗಳು ವಿರಾಜಿಸುವಂತೆ–ಶೋಭಾಯ ಮಾನರಾಗಿ ಕಾಣುವುದಿಲ್ಲ.

ಯಥಾ ಹ್ಯನುದಕಾ ನದ್ಯೋ ಯಥಾ ವಾಪ್ಯತೃಣಂ ವನಮ್ ।
ಅಗೋಪಾಲಾ ಯಥಾ ಗಾವಸ್ತಥಾ ರಾಷ್ಟ್ರಮರಾಜಕಮ್ ॥೨೯॥

ರಾಜನಿಲ್ಲದ ರಾಜ್ಯವು–ನೀರಿಲ್ಲದ ನದಿಗಳಂತೆ, ಹುಲ್ಲಿಲ್ಲದ ಹುಲ್ಲು ಗಾವಲಿನಂತೆ, ಗೋಪಾಲನಿಲ್ಲದ ಗೋಕುಲದಂತೆ- ಅಸ್ತವ್ಯಸ್ತವಾಗುತ್ತದೆ.

ಧ್ವಜೋ ರಥಸ್ಯ ಪ್ರಜ್ಞಾನಂ ಧೂಮೋ ಜ್ಞಾನಂ ವಿಭಾವಸೋಃ ।
ತೇಷಾಂ ಯೋ ನೋ ಧ್ವಜೋ ರಾಜಾ ಸ ದೇವತ್ವಮಿತೋ ಗತಃ ॥

ಧ್ವಜವು ರಥಕ್ಕೆ ಹೆಗ್ಗುರುತಾಗಿರುತ್ತದೆ. (ಧ್ವಜವನ್ನು ಕಂಡೊಡನೆಯೇ ರಥವಿರುವುದೆಂಬ ನಿಶ್ಚಯವುಂಟಾಗುತ್ತದೆ.) ಬೆಂಕಿಗೆ ಹೊಗೆಯೇ ಹೆಗ್ಗುರುತು. (ಹೊಗೆಯನ್ನು ಕಂಡೊಡನೆಯೇ ಬೆಂಕಿಯಿರುವುದೆಂಬ ನಿಶ್ಚಯವಾಗುತ್ತದೆ.) ಪ್ರಜೆಗಳಿಗೆ ಮತ್ತು ರಾಜ್ಯಕ್ಕೆ ರಾಜನೇ ಧ್ವಜಪ್ರಾಯನು. ಅಂತಹ ರಾಜನಿಂದು ನಮ್ಮನ್ನಗಲಿ ದೇವತ್ವವನ್ನು ಹೊಂದಿರುವನು. ಆದುದರಿಂದ ದೇಶಕ್ಕೆ ಧ್ವಜಪ್ರಾಯನಾಗಿರುವ ರಾಜಕುಮಾರನೊಬ್ಬನನ್ನು ರಾಜ್ಯಸಿಂಹಾಸನದಲ್ಲಿ ಕುಳ್ಳಿರಿಸುವುದು ನಮ್ಮೆಲ್ಲರ ಕರ್ತವ್ಯವೂ ಆಗಿದೆ.

ನಾರಾಜಕೇ ಜನಪದೇ ಸ್ವಕಂ ಭವತಿ ಕಸ್ಯಚಿತ್ ।
ಮತ್ಸ್ಯಾ ಇವ ನರಾ ನಿತ್ಯಂ ಭಕ್ಷಯನ್ತಿ ಪರಸ್ಪರಮ್ ॥೩೧॥

ಅರಾಜಕತೆಯು ಇರುವ ದೇಶದಲ್ಲಿ– 'ಇದು ನನ್ನದು-ಇದು ಬೇರೆಯವ ರದು' –ಎಂಬ ವಿವೇಚನೆಯೇ ಇರುವುದಿಲ್ಲ. ನೀರಿನಲ್ಲಿರುವ ದೊಡ್ಡ

ಮೀನುಗಳು ಸಣ್ಣಮೀನುಗಳನ್ನು ನುಂಗಿಹಾಕುವಂತೆ–ಆಢ್ಯರು ದುರ್ಬಲ ರನ್ನು ಯಾವ ಭಯವೂ ಇಲ್ಲದೇ ನುಂಗಿಹಾಕಿಬಿಡುತ್ತಾರೆ.

ಯೇ ಹಿ ಸಂಭಿನ್ನಮರ್ಯಾದಾ ನಾಸ್ತಿಕಾಶ್ಛಿನ್ನಸಂಶಯಾಃ ।
ತೇಽಪಿ ಭೋಗಾಯ ಕಲ್ಪನ್ತೇ ರಾಜದಣ್ಡನಿಪೀಡಿತಾಃ ॥೩೨॥

ಹಿಂದೆ ಯಾರು ಲೋಕಮರ್ಯಾದೆಯನ್ನು ಮೀರಿದ ಅಪರಾಧಕ್ಕಾಗಿ ರಾಜನಿಂದ ಶಿಕ್ಷೆಗೆ ಗುರಿಯಾಗಿದ್ದರೋ–ಅಂತಹ ನಾಸ್ತಿಕರೇ ಇಂದು ರಾಜ ದಂಡನೆಯಿಲ್ಲವೆಂದು ನಿಶ್ಚಯಿಸಿ ತಮ್ಮ ಸ್ವಾಭಾವಿಕವಾದ ದುಷ್ಟತನದ ಮೂಲಕವಾಗಿ ಇತರರ ಐಶ್ವರ್ಯವನ್ನು ಉಪಭೋಗಿಸಲು (ಪ್ರಭಾವವನ್ನು ಬೀರಲು) ಯತ್ನಿಸುತ್ತಾರೆ.

ಯಥಾ ದೃಷ್ಟಿಃ ಶರೀರಸ್ಯ ನಿತ್ಯಮೇವ ಪ್ರವರ್ತತೇ ।
ತಥಾ ನರೇನ್ದ್ರೋ ರಾಷ್ಟ್ರಸ್ಯ ಪ್ರಭವಃ ಸತ್ಯಧರ್ಮಯೋಃ ॥೩೩॥

ಯಾವ ರೀತಿಯಲ್ಲಿ ಮನುಷ್ಯನ ದೃಷ್ಟಿಯು ತನ್ನ ಹಿತಸಾಧನೆಗೂ ಅಹಿತದ ನಿವಾರಣೆಗೂ ಕಾರಣವಾಗುವುದೋ–ಅದೇ ರೀತಿಯಲ್ಲಿ ಸತ್ಯ-ಧರ್ಮಗಳ ಪ್ರವರ್ತಕನಾದ ರಾಜನೂ ರಾಷ್ಟ್ರಕ್ಕೆ ನೇತ್ರ ಪ್ರಾಯನಾಗಿರುತ್ತಾನೆ.

ರಾಜಾ ಸತ್ಯಂ ಚ ಧರ್ಮಶ್ಚ ರಾಜಾ ಕುಲವತಾಂ ಕುಲಮ್ ।
ರಾಜಾ ಮಾತಾ ಪಿತಾ ಚೈವ ರಾಜಾ ಹಿತಕರೋ ನೃಣಾಮ್ ॥೩೪॥

ರಾಜನು ಸತ್ಯ-ಧರ್ಮಪ್ರವರ್ತಕನು. ಕುಲೀನರಾದವರಿಗೆ ಆಶ್ರ ಯನು. ಪ್ರಜೆಗಳ ತಾಯಿಯೂ ಮತ್ತು ತಂದೆಯೂ ಅವನೇ. ಆದುದರಿಂದಲೇ ಅವನು ಎಲ್ಲರಿಗೂ ಹಿತಕರನಾಗುತ್ತಾನೆ.

ಯಮೋ ವೈಶ್ರವಣಃ ಶಕ್ರೋ ವರುಣಶ್ಚ ಮಹಾಬಲಃ ।
ವಿಶೇಷ್ಯನ್ತೇ ನರೇನ್ದ್ರೇಣ ವೃತ್ತೇನ ಮಹತಾ ತತಃ ॥೩೫॥

ಸದಾಚಾರಸಂಪನ್ನನಾದ, ನಿಯಮಾನುಷ್ಠಾನಪರನಾದ, ದಂಡನೀತಿ ವಿಶಾರದನಾದ ರಾಜನು ಯಮ, ಕುಬೇರ, ಇಂದ್ರ ಮತ್ತು ಮಹಾಬಲನಾದ ವರುಣ–ಈ ನಾಲ್ವರು ದಿಕ್ಪಾಲರನ್ನೂ ಮೀರಿಸುತ್ತಾನೆ.*

*ಯಮ, ಕುಬೇರ, ಇಂದ್ರ ಮತ್ತು ವರುಣರಿಗೆ ದಂಡ-ಧನ-ರಕ್ಷಣೆ ಮತ್ತು ಸದಾ

ಅಹೋ ತಮ ಇವೇದಂ ಸ್ಯಾನ್ನ ಪ್ರಜ್ಞಾಯೇತ ಕಿಂಚನ ।
ರಾಜಾ ಚೇನ್ನ ಭವೇಲ್ಲೋಕೇ ವಿಭಜನ್ಸಾಧ್ವಸಾಧುನೀ ॥೩೬॥

ಸಾಧುವಾದ ಕಾರ್ಯವು ಯಾವುದು, ಅಸಾಧುವಾದ ಕಾರ್ಯವು ಯಾವುದು ಎಂಬುದನ್ನು ವಿವೇಚಿಸಿ ಕಾರ್ಯಮಾಡುವ ರಾಜನೇ ಈ ಲೋಕದಲ್ಲಿರದಿದ್ದರೆ–ಸೂರ್ಯನಿಲ್ಲದಿದ್ದರೆ ಪ್ರಪಂಚವು ಗಾಢಾಂಧಕಾರದಲ್ಲಿ ಮುಳುಗಿಹೋಗುವಂತೆ–ರಾಜನೆಂಬ ಸೂರ್ಯನಿಲ್ಲದೇ ಅಜ್ಞಾನಾಂಧಕಾರದಲ್ಲಿ ಮುಳುಗಿ ಹೋಗುತ್ತಿದ್ದಿತು. ಯಾವುದೂ ಯಾರಿಗೂ ತಿಳಿಯುತ್ತಲೇ ಇರಲಿಲ್ಲ.

ಪೂಜ್ಯರಾದ ವಸಿಷ್ಠಮಹರ್ಷಿಗಳೇ! ನಮ್ಮ ಮಹಾರಾಜನು ಬದುಕಿದ್ದಾಗಲೂ–ಸಮುದ್ರವು ದಡವನ್ನು ಮೀರಿ ಹೋಗದಿರುವಂತೆ–ತಮ್ಮ ಆಜ್ಞೆಯನ್ನು ಯಾರೂ ಉಲ್ಲಂಘಿಸುತ್ತಿರಲಿಲ್ಲ.

ದ್ವಿಜವರ್ಯರೇ! ನಮ್ಮ ಈಗಿನ ಪರಿಸ್ಥಿತಿಯನ್ನು ಚೆನ್ನಾಗಿ ಮನದಟ್ಟುಮಾಡಿಕೊಂಡು ಇಕ್ಷ್ವಾಕುವಂಶಕ್ಕೆ ಸೇರಿದ ರಾಜಕುಮಾರರಲ್ಲಿ ಸಮರ್ಥನಾದವನೊಬ್ಬನನ್ನು ಕರೆತಂದು ನೀವೇ ಅವನಿಗೆ ಪಟ್ಟಗಟ್ಟಿರಿ. ರಾಜನಿಲ್ಲದಿದ್ದರೆ ಈ ರಾಜ್ಯವು ಗೊಂಡಾರಣ್ಯವೇ ಆಗುತ್ತದೆ."

೬೭ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೬೮ನೆಯ ಸರ್ಗ

ವಸಿಷ್ಠರ ಆದೇಶದಂತೆ ರಾಜಗೃಹಕ್ಕೆ ಐವರು ರಾಜದೂತರ ಪ್ರಯಾಣ

ತೇಷಾಂ ಹಿ ವಚನಂ ಶ್ರುತ್ವಾ ವಸಿಷ್ಠಃ ಪ್ರತ್ಯುವಾಚ ಹ ।
ಮಿತ್ರಾಮಾತ್ಯಗಣಾನ್ಸರ್ವಾನ್ಬ್ರಾಹ್ಮಣಾಂಸ್ತಾನಿದಂ ವಚಃ ॥೧॥

ಸುಮಂತ್ರನೇ ಮೊದಲಾದ ಮಂತ್ರಿಗಳ ಮತ್ತು ಮಾರ್ಕಂಡೇಯರೇ ಮೊದಲಾದ ಬ್ರಾಹ್ಮಣರ ಮಾತುಗಳನ್ನು ಕೇಳಿದನಂತರ ವಸಿಷ್ಠರು ಮಿತ್ರ

ಚಾರಸಂಪನ್ನತೆ–ಎಂಬ ನಾಲ್ಕು ಗುಣಗಳು ಅನುಕ್ರಮವಾಗಿವೆ. ಆದರೆ ರಾಜನಲ್ಲಿ ಈ ನಾಲ್ಕು ಗುಣಗಳೂ ಒಟ್ಟಾಗಿ ಸೇರಿಕೊಂಡಿವೆ. ಆದುದರಿಂದ ರಾಜನು ಈ ನಾಲ್ವರನ್ನೂ ಅತಿಶಯಿಸುತ್ತಾನೆ.

ರನ್ನೂ, ಅಮಾತ್ಯರನ್ನೂ, ಬ್ರಾಹ್ಮಣರನ್ನೂ, ಅಲ್ಲಿ ನೆರೆದಿದ್ದ ಇತರ ಎಲ್ಲ ಪ್ರಜೆಗಳನ್ನೂ ಕುರಿತು ಹೇಳಿದರು:

"ಜ್ಯೇಷ್ಠನಾದ ಶ್ರೀರಾಮನು ಕಾಡಿಗೆ ಹೊರಟುಹೋಗಿರುವುದರಿಂದ ದಶರಥನು ಕೈಕೇಯಿಗಿತ್ತಿರುವ ವರಕ್ಕೆ ಅನುಗುಣವಾಗಿ ನಾವು ಭರತನಿಗೇ ಪಟ್ಟಗಟ್ಟಬೇಕಾಗಿದೆ. ಈಗ ಭರತನು ಶತ್ರುಘ್ನನೊಡನೆ ತನ್ನ ಸೋದರ ಮಾವನ ಮನೆಯಲ್ಲಿ ಸುಖವಾಗಿದ್ದಾನೆ. ಈ ಇಬ್ಬರು ಅಣ್ಣ-ತಮ್ಮಂದಿರನ್ನು ಕರೆತರುವ ಸಲುವಾಗಿ ಶೀಘ್ರವಾಗಿ ಹೋಗಲು ಸಮರ್ಥರಾಗಿರುವ ದೂತರು ವೇಗವುಳ್ಳ ಕುದುರೆಗಳನ್ನೇರಿ ಈಗಲೇ ರಾಜಗೃಹಕ್ಕೆ ಪ್ರಯಾಣಮಾಡಲಿ. ಈ ಸಂದರ್ಭದಲ್ಲಿ ನಾವು ಬೇರೆ ಏನು ಮಾಡಲು ಸಾಧ್ಯವಿದೆ?" ವಸಿಷ್ಠರ ಆ ಮಾತನ್ನು ಕೇಳಿದೊಡನೆಯೇ- **'ಗಚ್ಛನ್ತು' 'ಗಚ್ಛನ್ತು** ಜವನಾದೂತಾಃ' **'ಶೀಘ್ರಮೇವ ಗಚ್ಛನ್ತು'** 'ಹೋಗಿಬರಲಿ' ಶೀಘ್ರಗಾಮಿಗಳಾದ ರಾಜಭಟರು ರಾಜಗೃಹಕ್ಕೆ ಒಡನೆಯೇ ಹೋಗಿಬರಲಿ' – ಎಂಬ ಸಭ್ಯರಾಡಿದ ಮಾತುಗಳು ನಾಲ್ಕು ನಿಟ್ಟಿನಿಂದಲೂ ಕೇಳಿಬಂದುವು. ಆ ಮಾತುಗಳನ್ನು ಕೇಳಿ ವಸಿಷ್ಠರು ಹೇಳಿದರು :

"ಸಿದ್ಧಾರ್ಥ, ವಿಜಯ, ಜಯಂತ, ಅಶೋಕ, ನಂದನ!–ನೀವೈವರೂ ಮುಂದೆಬನ್ನಿರಿ. ನೀವು ಈ ಸಮಯದಲ್ಲಿ ಮಾಡಬೇಕಾದ ಕರ್ತವ್ಯ ವೇನೆಂಬುದನ್ನು ಗಮನವಿಟ್ಟು ಕೇಳಿರಿ. ನೀವು ಮಾಡಬೇಕಾದ ಕರ್ತವ್ಯವನ್ನು ವಿಶದವಾಗಿ ಹೇಳುತ್ತೇನೆ.*

---

*ಸಿದ್ಧಾರ್ಥ, ವಿಜಯ, ಜಯಂತ, ಅಶೋಕ–ಇವು ದಶರಥರಾಜನ ಮಂತ್ರಿಗಳ ಹೆಸರುಗಳೂ ಆಗಿವೆ. ನಂದನ ಎಂಬುವನು ಮಂತ್ರಿಮಂಡಲದಲ್ಲಿಲ್ಲದೇ ಇರುವುದರಿಂದ ವ್ಯಾಖ್ಯಾನಕಾರರು ಸಿದ್ಧಾರ್ಥಾದಿ ನಾಮಧೇಯಗಳೂ ಮಂತ್ರಿಗಳದ್ದಲ್ಲವೆಂದೂ ಇವೇ ಹೆಸರುಗಳ ರಾಜಭಟರಿಗೆ ವಸಿಷ್ಠರು ಆಜ್ಞೆಮಾಡಿದರೆಂದೂ ವ್ಯಾಖ್ಯೆಮಾಡಿರುತ್ತಾರೆ. ಮುಂದೆ ಪುರೋಹಿತಸ್ತ್ವಾಂ ಕುಶಲಂ ಪ್ರಾಹ ಸರ್ವೇ ಚ ಮನ್ತ್ರಿಣಃ । ಎಂದಿರುವುದ ರಿಂದಲೂ, ದೂತಾಃ ಎಂದು ಪದೇ-ಪದೇ ನಿರ್ದೇಶಿಸಿರುವುದರಿಂದಲೂ ಈ ಸಿದ್ಧಾರ್ಥಾದಿ ಗಳು ಮಂತ್ರಿಗಳಲ್ಲವೆಂದು ಒಬ್ಬರು ಸಿದ್ಧಾಂತಮಾಡಿದ್ದಾರೆ. ಮತ್ತೊಬ್ಬ ವ್ಯಾಖ್ಯಾನಕಾರರು ನಂದನ ಎಂಬ ಹೆಸರೂ ಮಂತ್ರಿಯೊಬ್ಬನ ಉಪನಾಮವಿರಬಹುದೆಂದೂ ಐದು ಜನ ಮಂತ್ರಿಗಳನ್ನೇ ವಸಿಷ್ಠರು ಕಳುಹಿಸಿಕೊಟ್ಟರೆಂದೂ ಹೇಳಿದ್ದಾರೆ.

ನೀವೀಗಲೇ ಶೀಘ್ರವಾಗಿ ಹೋಗುವ ಕುದುರೆಗಳ ಮೇಲೆ ಕುಳಿತು ರಾಜಗೃಹಕ್ಕೆ ಪ್ರಯಾಣಮಾಡಿರಿ. ರಾಜನ ಮರಣದಿಂದ ಉಂಟಾಗಿರುವ ದುಃಖವನ್ನು ಪರಿತ್ಯಜಿಸಿ (ಅದನ್ನು ಬಹಿರಂಗಪಡಿಸದೆ) ನನ್ನ ಆಜ್ಞಾನುಸಾರವಾಗಿ ಭರತನಿಗೆ ನೀವು ಈ ಮಾತನ್ನು ಹೇಳಬೇಕು.

"ರಾಜಕುಮಾರ! ಪುರೋಹಿತರಾದ ವಸಿಷ್ಠರೂ ಮತ್ತು ಎಲ್ಲ ಮಂತ್ರಿಗಳೂ ನಿನ್ನ ಯೋಗ-ಕ್ಷೇಮಗಳನ್ನು ಕೇಳಿದ್ದಾರೆ. ಬಹುಕ್ಲಿಷ್ಟವಾದ, ಈಗಾಗಲೇ ಕಾಲಮೀರಿರುವ ಕಾರ್ಯವೊಂದನ್ನು ನೀನು ನಿರ್ವಹಿಸ ಬೇಕಾಗಿದೆ. ಆದುದರಿಂದ ನೀನೀಗಲೇ ಅಯೋಧ್ಯೆಗೆ ಹೊರಟು ಬಾ"– ಎಂದು ಹೇಳಬೇಕು. ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿಸಿರುವ ವಿಷಯವನ್ನಾಗಲೀ ರಾಜನು ಮೃತನಾಗಿರುವ ವಿಷಯವನ್ನಾಗಲೀ–ನೀವು ಭರತನಿಗೆ ಹೇಳಬಾರದು. ರಘುವಂಶೀಯರಿಗೆ ಆಗಿರುವ ಈ ಅಪಾರನಷ್ಟವನ್ನು ನೀವು ಅಲ್ಲಿ ಪ್ರಸ್ತಾಪಿಸಬಾರದು. ಸಂಪ್ರದಾಯಾನು ಸಾರವಾಗಿ ಕೇಕಯರಾಜನಿಗೂ ಮತ್ತು ಭರತನಿಗೂ ಬಳುವಳಿಕೊಡಲು ರೇಷ್ಮೆಯ ವಸ್ತ್ರಗಳನ್ನೂ ಮತ್ತು ರತ್ನಾಭರಣಗಳನ್ನೂ ತೆಗೆದುಕೊಂಡು ಶೀಘ್ರವಾಗಿ ಹೋಗಿರಿ."

ಹೀಗೆ ಹೇಳಿ ವಸಿಷ್ಠರು ಅವರಿಗೆ ಪ್ರಯಾಣಕಾಲದಲ್ಲಿ ಬೇಕಾಗುವ ಭತ್ಯಗಳನ್ನು ಕೊಡಿಸಿದರು. ಕೇಕಯರಾಜ್ಯಕ್ಕೆ ಪ್ರಯಾಣಹೊರಟಿದ್ದ ರಾಜದೂತರು ಉತ್ತಮಾಶ್ವಗಳನ್ನೇರಿ ಮೊದಲು ತಮ್ಮ ಮನೆಗಳಿಗೆ ಹೋದರು. ಪ್ರಯಾಣಕಾಲದಲ್ಲಿ ಬೇಕಾಗಬಹುದಾದ ವಸ್ತ್ರ-ಆಯುಧ ಗಳನ್ನೂ ಬುತ್ತಿಯನ್ನೂ ಸಿದ್ಧಪಡಿಸಿಕೊಂಡು ವಸಿಷ್ಠರ ಅನುಜ್ಞೆಯನ್ನು ಪಡೆದು ಕೇಕಯರಾಜ್ಯದ ಕಡೆಗೆ ಅವಸರದಿಂದ ಪ್ರಯಾಣಮಾಡಿದರು.

ಅಯೋಧ್ಯಾಪಟ್ಟಣದಿಂದ ಹೊರಟ ಸಿದ್ಧಾರ್ಥಾದಿಗಳು ಪಶ್ಚಿಮಾಭಿ ಮುಖವಾಗಿ ಹೊರಟು ಅಪರತಾಲಪರ್ವತ ಮತ್ತು ಪ್ರಲಂಬಪರ್ವತಗಳ ಶ್ರೇಣಿಯ ಅಂಚಿನಲ್ಲಿ ಸ್ವಲ್ಪದೂರದವರೆಗೆ ಉತ್ತರಾಭಿಮುಖವಾಗಿ ಪ್ರಯಾಣ ಮಾಡಿ, ಆ ಪರ್ವತಗಳ ಮಧ್ಯದಲ್ಲಿದ್ದ ಮಾಲಿನೀನದಿಯನ್ನು ದಾಟಿ ಪುನಃ ಪಶ್ಚಿಮಾಭಿಮುಖವಾಗಿ ಪ್ರಯಾಣಮಾಡಿದರು. ಹಸ್ತಿನಾಪುರದ ಸಮೀಪ ದಲ್ಲಿ ಗಂಗಾನದಿಯನ್ನು ದಾಟಿ ಪುನಃ ಪಶ್ಚಿಮದಿಕ್ಕಿನ ಕಡೆಗೇ ಪ್ರಯಾಣ

ಮಾಡುತ್ತಾ ಕುರುಜಾಂಗಲದೇಶದ ಮಧ್ಯದಲ್ಲಿ ಹಾದು ಪಾಂಚಾಲದೇಶದ ಮೂಲಕವಾಗಿ ಮುಂದೆ ಪ್ರಯಾಣಮಾಡಿದರು. ಹಾಗೆ ಪ್ರಯಾಣಮಾಡುತ್ತಿದ್ದಾಗ ರಾಜಭಟರು ಸುಂದರವಾದ ಕಮಲದ ಹೂಗಳಿದ್ದ ಸರೋವರಗಳನ್ನೂ, ಪರಿಶುದ್ಧವಾದ ನೀರಿನಿಂದ ಕೂಡಿದ್ದ ನದಿಗಳನ್ನೂ ನೋಡುತ್ತಾ ರಾಜಕಾರ್ಯವಿದ್ದುದರಿಂದ ಎಲ್ಲಿಯೂ ಕಾಲಯಾಪನೆ ಮಾಡದೇ ಬಹಳ ಬೇಗ ಮುನ್ನಡೆಯುತ್ತಿದ್ದರು. ಪ್ರಸನ್ನವಾದ (ಮಂದಪ್ರವಾಹವುಳ್ಳ) ನೀರಿನಿಂದ ಕೂಡಿದ್ದ, ನಾನಾವಿಧವಾದ ಪಕ್ಷಿಗಳಿಂದ ಸಂಸೇವ್ಯಮಾನವಾಗಿದ್ದ, ಜನರಿಂದಲೂ ನಿಬಿಡವಾಗಿದ್ದ ದಿವ್ಯವಾಗಿದ್ದ ಶರದಂಡಾ ಎಂಬ ನದಿಯನ್ನು ದಾಟಿ ಮುಂದೆ ಹೋದರು. ಆ ನದಿಯ ಪಶ್ಚಿಮತೀರದಲ್ಲಿದ್ದ, ಯಾಚಕರ ಇಷ್ಟಾರ್ಥಗಳನ್ನು ಈಡೇರಿಸುತ್ತಿದ್ದ ಅದರಿಂದಲೇ ಸತ್ಯೋಪಯಾಚನ–ಎಂಬ ಅನ್ವರ್ಥನಾಮವನ್ನು ಪಡೆದಿದ್ದ, ಅಭಿವಂದಿಸಲು ಯೋಗ್ಯವಾಗಿದ್ದ ದಿವ್ಯವಾದ ವೃಕ್ಷವನ್ನು ಸಮೀಪಿಸಿ ಆ ಮಹಾವೃಕ್ಷಕ್ಕೆ ಅಭಿವಂದಿಸಿ, ಅಲ್ಲಿಂದ ಮುಂದೆ ಕುಲಿಂಗಪಟ್ಟಣವನ್ನು ಸೇರಿದರು. ಆ ಪಟ್ಟಣವನ್ನೂ ದಾಟಿ ಮುಂದೆ ಪ್ರಯಾಣ ಮಾಡುತ್ತಾ ರಾಜಭಟರು ಅಭಿಕಾಲವೆಂಬ ಗ್ರಾಮವನ್ನು ಸೇರಿದರು. ಅಲ್ಲಿಂದಲೂ ಹೊರಟು ತೇಜೋಭಿಭವನವೆಂಬ ಗ್ರಾಮಕ್ಕೆ ಹೋದರು. ಅಲ್ಲಿಂದ ಮುಂದೆ ಇಕ್ಷ್ವಾಕುವಂಶದ ಪಿತೃ-ಪಿತಾಮಹರಿಂದ ಸಂಸೇವ್ಯಳಾಗಿದ್ದ, ಪುಣ್ಯ ವತಿಯಾದ ಇಕ್ಷುಮತೀನದಿಯನ್ನು ರಾಜಭಟರು ದಾಟಿದರು. ಆ ನದಿಯ ತೀರದಲ್ಲಿ ಒಂದು ಬೊಗಸೆ ನೀರಿನಿಂದಲೇ ಜೀವಧಾರಣೆ ಮಾಡಿಕೊಂಡು ತಪಸ್ಸುಮಾಡುತ್ತಿದ್ದ ವೇದ-ವೇದಾಂಗಪಾರಂಗತರಾಗಿದ್ದ ಬ್ರಾಹ್ಮಣರನ್ನು ಸಂದರ್ಶಿಸಿ ಬಾಹ್ಲೀಕ ದೇಶದ ಮಧ್ಯದಲ್ಲಿ ಪ್ರಯಾಣಮಾಡುತ್ತಾ ಸುದಾಮಾ ಎಂಬ ಪರ್ವತವನ್ನು ಸೇರಿದರು.* ಸುದಾಮಾಪರ್ವತದಲ್ಲಿದ್ದ ಮಹಾವಿಷ್ಣುವಿನ

---

*ಅಞ್ಜಲಿಪಾನಾನ್ ಎಂಬುದಕ್ಕೆ – "ನದಿಯ ನೀರನ್ನು ಬೊಗಸೆಯಲ್ಲಿಯೇ ಎಂಜಲು ಮಾಡಿಕೊಂಡು ಕುಡಿಯುತ್ತಿದ್ದ ವೇದ-ವೇದಾಂಗಪಾರಂಗತರಾದ ಬ್ರಾಹ್ಮಣರನ್ನು ನೋಡಿ" – ಎಂದು ಒಬ್ಬರು ವ್ಯಾಖ್ಯೆಮಾಡಿರುತ್ತಾರೆ. ಬೊಗಸೆಯಲ್ಲಿ ನೀರು ಕುಡಿಯುವುದು ಅನಾಚಾರವೆನಿಸುತ್ತದೆ: ಬ್ರಾಹ್ಮಣರೇ ಈ ಅನಾಚಾರವನ್ನೆಸಗುತ್ತಿದ್ದರೆಂದರೆ ಆ ದೇಶದ ಇತರ ಜನರ ಅನಾಚಾರವೆಷ್ಟೆಂಬುದನ್ನು ಹೇಳುವ ಕಾರಣವೇ ಇಲ್ಲ. ಬಾಹ್ಲೀಕ ದೇಶದ ಜನರು ಅನಾಚಾರಿಗಳು ; ಆಚಾರವಂತರಲ್ಲ. ಈ ವಿಷಯವಾಗಿ ಮಹಾ

ದಿವ್ಯಪಾದವನ್ನು ಸಂದರ್ಶಿಸಿ ಅಲ್ಲಿಂದ ಮುಂದೆ ಪ್ರಯಾಣಮಾಡಿ ವಿಪಾಶಾ ಮತ್ತು ಶಾಲ್ಮಲೀನದಿಗಳನ್ನು ದಾಟಿ ಶಾಲ್ಮಲೀವೃಕ್ಷವನ್ನು ನೋಡಿ ಮುನ್ನಡೆಯುತ್ತಾ ಹಾದಿಯಲ್ಲಿ ಸಿಕ್ಕಿದ ನಯನಮನೋಹರವಾದ ವಾಪೀ-ಕೂಪ- ತಟಾಕಗಳನ್ನೂ, ಚಿಲುಮೆಗಳನ್ನೂ, ಸರೋವರಗಳನ್ನೂ ಸಂದರ್ಶಿಸುತ್ತಾ ವಿಧ-ವಿಧವಾದ ಸಿಂಹ-ವ್ಯಾಘ್ರಾದಿ ಮೃಗಗಳನ್ನೂ, ಮದಿಸಿದ ಆನೆಗಳನ್ನೂ ವೀಕ್ಷಿಸುತ್ತಾ ಅತಿದುರ್ಗಮವಾದ ಮಾರ್ಗದಲ್ಲಿ ತಮ್ಮ ಸ್ವಾಮಿಯ ಆಜ್ಞೆಯನ್ನು ಪರಿಪಾಲಿಸಲು ಆತುರರಾಗಿದ್ದ ರಾಜಭಟರು ಹೋಗುತ್ತಿದ್ದರು. ಅವರ ಕುದುರೆಗಳೆಲ್ಲವೂ ಬಳಲಿದ್ದುವು. ಮುಂದೆ ಅವರು ಯಾವ ತೊಂದರೆಯೂ ಇಲ್ಲದ ಮಾರ್ಗದಲ್ಲಿ ಪ್ರಯಾಣಮಾಡುತ್ತಾ ಅತ್ಯಂತಶ್ರೇಷ್ಠವಾದ ಪಟ್ಟಣವೆಂದು ಪ್ರಸಿದ್ಧವಾಗಿದ್ದ ಗಿರಿವ್ರಜವನ್ನು ಬಹಳ ಬೇಗ ಸೇರಿದರು. ತಮ್ಮನ್ನು ಅಲ್ಲಿಗೆ ಕಳುಹಿಸಿಕೊಟ್ಟ, ಒಡೆಯರಾದ ವಸಿಷ್ಠರಿಗೆ ಅಥವಾ ತಮ್ಮನ್ನು ಇದುವರೆಗೂ ಪಾಲಿಸಿ-ಪೋಷಿಸಿದ ದಶರಥ ಮಹಾರಾಜನಿಗೆ ಪ್ರಿಯವನ್ನುಂಟುಮಾಡುವ ಸಲುವಾಗಿಯೂ, ಪ್ರಜೆಗಳ ರಕ್ಷಣಾರ್ಥವಾಗಿಯೂ, ಪ್ರಭುವಿನ ವಂಶೀಯನಾದ ಭರತನು ಸಿಂಹಾಸನವನ್ನು ಪರಿಗ್ರಹಿಸಬೇಕೆಂಬ ಆಶಯದಿಂದಲೂ–ರಾಜಭಟರು ಸ್ವಲ್ಪವೂ ಅನಾದರಣೆಮಾಡದೇ ಬಹಳ ಶೀಘ್ರವಾಗಿ ರಾತ್ರಿಯಲ್ಲಿಯೇ ರಾಜಗೃಹವನ್ನು ಸೇರಿದರು.

ಅರವತ್ತೆಂಟನೆಯ ಸರ್ಗವು ಮುಗಿಯಿತು.

ಭಾರತದಲ್ಲಿಯೂ ಕರ್ಣಪರ್ವದಲ್ಲಿ ಹೀಗೆ ಹೇಳಿದೆ. "ಬಾಹ್ಲೀಕಾ ನಾಮ ತೇ ದೇಶಾ ನ ತತ್ರ ದಿವಸಂ ವಸೇತ್"–- ಬಾಹ್ಲೀಕವೆಂಬ ಹೆಸರಿರುವ ದೇಶಗಳಿವೆ. ಅವುಗಳಲ್ಲಿ ಒಂದು ದಿವಸವೂ ತಂಗಬಾರದು. ಇಲ್ಲಿ 'ಅವೇಕ್ಷ್ಯಾಞ್ಜಲಿಪಾನಾನ್' ಎಂಬುದಾಗಿದೆ. ಆದುದರಿಂದ 'ಬೊಗಸೆಯಲ್ಲಿ ನೀರುಕುಡಿಯುತ್ತಿದ್ದ' ಎಂದಾದರೂ ಅರ್ಥಮಾಡಬಹುದು.

ಭರತನ ಚಿಂತೆ: ಮಿತ್ರರಿಂದ ಸಾಂತ್ವನ: ಭರತನು ಮಿತ್ರರಿಗೆ ತಾನು ಕಂಡ ಭಯಂಕರ ಸ್ವಪ್ನವನ್ನು ವಿವರಿಸಿ ಹೇಳಿದುದು

ಯಾಮೇವ ರಾತ್ರಿಂ ತೇ ದೂತಾಃ ಪ್ರವಿಶನ್ತಿ ಸ್ಮ ತಾಂ ಪುರೀಮ್ ।
ಭರತೇನಾಪಿ ತಾಂ ರಾತ್ರಿಂ ಸ್ವಪ್ನೋ ದೃಷ್ಟೋಽಯಮಪ್ರಿಯಃ ॥೧॥

ಯಾವ ರಾತ್ರಿಯಲ್ಲಿ ಅಯೋಧ್ಯಾಪಟ್ಟಣದ ರಾಜಭಟರು ರಾಜಗೃಹ ವನ್ನು ಪ್ರವೇಶಿಸಿದರೋ–ಅದೇ ರಾತ್ರಿಯಲ್ಲಿ ಸೋದರಮಾವನ ಮನೆ ಯಲ್ಲಿದ್ದ ಭರತನಿಗೂ ಕೆಟ್ಟ ಸ್ವಪ್ನವಾಯಿತು.

ಚಕ್ರವರ್ತಿಯ ಮಗನಾದ ಭರತನು ಬೆಳಗಾಗುತ್ತಿರುವ ಸಮಯ ದಲ್ಲಿಯೇ ಆ ದುಃಸ್ವಪ್ನವನ್ನು ಕಂಡನು. ಅದರಿಂದಾಗಿ ಅವನು ಮತ್ತಷ್ಟು ಕಳವಳಗೊಂಡನು. ಭರತನು ಬಹಳವಾಗಿ ಪರಿತಪಿಸುತ್ತಿರುವ ನೆಂಬುದನ್ನು ಅವನ ಮುಖಭಾವದಿಂದಲೇ ನಿಶ್ಚಯಿಸಿದ ಪ್ರಿಯವಾದಿಗಳಾದ ಸ್ನೇಹಿತರು ಅವನ ಮನಸ್ಸಿನ ಪರಿತಾಪವನ್ನು ಹೋಗಲಾಡಿಸಲು ಸಭಾಮಂಟಪದಲ್ಲಿ ಮನಸ್ಸಿಗೆ ಆಹ್ಲಾದಕರವಾದ ಕಥೆಗಳನ್ನು ಹೇಳುತ್ತಾ ವ್ಯಾಕುಲವನ್ನು ಪರಿಹರಿಸಲು ಯತ್ನಿಸುತ್ತಿದ್ದರು. ಅವನ ಪರಿತಾಪವನ್ನು ಉಪಶಮನ ಗೊಳಿಸಲೋಸುಗ ಅವನ ಗೆಳೆಯರಲ್ಲಿ ಕೆಲವರು ವೀಣೆಯೇ ಮೊದಲಾದ ವಾದ್ಯಗಳನ್ನು ನುಡಿಸುತ್ತಿದ್ದರು. ಕೆಲವರು ತಾಳ-ಲಯ ಬದ್ಧವಾಗಿ ನಾಟ್ಯ ಮಾಡುತ್ತಿದ್ದರು. ಕೆಲವರು ನಾಟಕೀಯವಾಗಿ ಅಭಿನಯಿಸುತ್ತಿದ್ದರು. ಕೆಲವರು ಹಾಸ್ಯದ ಮಾತುಗಳಿಂದ ಅವನನ್ನು ನಗಿಸಲು ಯತ್ನಿಸುತ್ತಿದ್ದರು.

ಇಷ್ಟಾದರೂ ಭರತನು ಪ್ರಿಯೋಕ್ತಿಗಳನ್ನಾಡುತ್ತಿದ್ದ, ಉತ್ತಮವಾದ ಹಾಸ್ಯದ ಮಾತುಗಳನ್ನಾಡುತ್ತಿದ್ದ ಗೆಳೆಯರೊಡನೆ ಸುಮುಖದಿಂದಿರಲಿಲ್ಲ. ಭರತನ ಸ್ವಭಾವವು ಯಾವಾಗಲೂ ಹೀಗಿರಲಿಲ್ಲ. ಅವನೇ ಯಾವಾಗಲೂ ನಗು-ನಗುತ್ತಾ ಗೆಳೆಯರೊಡನೆ ಮಾತನಾಡುತ್ತಿದ್ದನು. ಅಂದಿನ ವಿಪರ್ಯಾಸವನ್ನು ಕಂಡು ಪ್ರಿಯಮಿತ್ರನೊಬ್ಬನು ತಮ್ಮ ಮಧ್ಯದಲ್ಲಿ ಕುಳಿತಿದ್ದ ಭರತನನ್ನು ಪ್ರಶ್ನಿಸಿದನು :

ಸುಹೃದ್ಭಿಃ ಪರ್ಯುಪಾಸೀನ ಕಿಂ ಸಖೇ ನಾನುಮೋದಸೇ ॥೬॥

"ರಾಜಕುಮಾರ! ಸ್ನೇಹಿತರು ನಿನ್ನನ್ನು ಸಂತೋಷಗೊಳಿಸುವ ಸಲುವಾಗಿ ನಾನಾರೀತಿಯಲ್ಲಿ ನಿನ್ನ ಸೇವೆಮಾಡುತ್ತಿದ್ದಾರೆ. ಆದರೂ ನೀನೇಕಿಂದು ಯಾವುದನ್ನೂ ಇಷ್ಟಪಡುತ್ತಿಲ್ಲ?"

ಹೀಗೆ ಪ್ರಶ್ನಿಸಿದ ಮಿತ್ರನಿಗೆ ಭರತನು ಉತ್ತರಿಸಿದನು :

"ಪ್ರಿಯಸಖನೇ! ನನ್ನ ಮನಸ್ಸಿನಲ್ಲಿ ಈ ವಿಧವಾದ ದೀನತೆಯು ಮೂಡಿರುವುದಕ್ಕೆ ಕಾರಣವನ್ನು ಹೇಳುವೆನು ; ಕೇಳು :

ನಿನ್ನೆಯ ದಿನ ರಾತ್ರಿ ಸ್ವಪ್ನದಲ್ಲಿ ನಾನು ನನ್ನ ತಂದೆಯನ್ನು ಕಂಡೆನು. ಅವನ ಅಂಗಾಂಗಗಳೆಲ್ಲವೂ ಮಲಿನವಾಗಿದ್ದುವು. ತಲೆಗೂದಲು ಬಿಚ್ಚಿಕೊಂಡಿದ್ದಿತು. ಅವನು ಪರ್ವತದ ತುಟ್ಟತುದಿಯಿಂದ ಸಗಣಿ-ಗಂಜಲಗಳಿಂದ ತುಂಬಿರುವ ಹೊಂಡದಲ್ಲಿ ಬೀಳುತ್ತಿರುವುದನ್ನು ನಾನು ನೋಡಿದೆನು. ಆ ಹೊಂಡದಲ್ಲಿ ನಮ್ಮ ತಂದೆಯು ಬೊಗಸೆಯಲ್ಲಿ ಎಣ್ಣೆಯನ್ನಿಟ್ಟುಕೊಂಡು ಕುಡಿಯುತ್ತಾ ತೇಲುತ್ತಿರುವಂತೆಯೂ ಪ್ರತಿಕ್ಷಣದಲ್ಲಿಯೂ ಕಿಲ-ಕಿಲನೆ ನಗುತ್ತಿದ್ದಂತೆಯೂ ಕಂಡೆನು. ಅನಂತರ ಅವನು ಎಳ್ಳಿನಿಂದ ಮಿಶ್ರವಾದ ಅನ್ನವನ್ನು ತಿನ್ನುತ್ತಿದ್ದಂತೆ ಕಂಡೆನು. ಬಳಿಕ ಅವನು ತಲೆಕೆಳಗಾಗಿ ನಿಂತುಕೊಂಡನು. ಮರುಕ್ಷಣದಲ್ಲಿಯೇ ನಖ-ಶಿಖಾಂತವಾಗಿ ಎಣ್ಣೆಯನ್ನು ಬಳಿದುಕೊಂಡು ಎಣ್ಣೆಯ ಹೊಂಡದಲ್ಲಿಯೇ ಮುಳುಗಿಹೋದಂತೆಯೂ ಕಂಡೆನು. ನಿನ್ನೆಯ ಕನಸಿನಲ್ಲಿ ನಾನು ನೀರಿಲ್ಲದೇ ಬತ್ತಿಹೋಗಿದ್ದ ಸಮುದ್ರವನ್ನೂ, ಚಂದ್ರನು ತನ್ನ ಸ್ಥಾನದಿಂದ ಚ್ಯುತನಾಗಿ ಭೂಮಿಯ ಮೇಲೆ ಬಿದ್ದುದನ್ನೂ ಕಂಡೆನು. ಗಾಢಾಂಧಕಾರವು ಸುತ್ತಲೂ ಕವಿದಿದ್ದಿತು. ಅಂಧಕಾರವೇ ಜಗತ್ತನ್ನು ಆಕ್ರಮಿಸಿರುವಂತೆ ಭಾಸವಾಯಿತು. ಪಟ್ಟದಾನೆಯ ಕೊಂಬು ಚೂರು-ಚೂರಾಗಿ ಬಿದ್ದುಹೋಯಿತು. ಪ್ರಜ್ವಲಿಸುತ್ತಿದ್ದ ಯಜ್ಞೇಶ್ವರನು ಇದ್ದಕ್ಕಿದ್ದಂತೆಯೇ ಶಾಂತನಾಗಿ ಬಿಟ್ಟನು. ಭೂಮಿಯೇ ಬಿರುಕು ಬಿಟ್ಟಿತು. ಎಲ್ಲ ವೃಕ್ಷಗಳೂ ಒಣಗಿಹೋಗಿದ್ದುವು. ಅನೇಕ ಕಡೆಗಳಲ್ಲಿ ಪರ್ವತಗಳು ಕಳಗೆ ಬಿದ್ದು ಹೊಗೆಯಿಂದ ಕೂಡಿದ್ದುವು. ಇಂತಹ ಬಹುಘೋರವಾದ ಕನಸನ್ನು ನಾನು ಕಂಡೆನು."

ಕನಸನ್ನು ಜ್ಞಾಪಿಸಿಕೊಳ್ಳುತ್ತಾ ಭರತನು ಮುಂದುವರಿದು ಹೇಳಿದನು. ಅವನ ಮುಖವು ಕ್ಷಣ-ಕ್ಷಣಕ್ಕೂ ಉದ್ವಿಗ್ನವಾಗುತ್ತಿದ್ದಿತು.

"ಕಬ್ಬಿಣದ ಸಿಂಹಾಸನದಲ್ಲಿ ಕಪ್ಪುಬಟ್ಟೆಯನ್ನು ಧರಿಸಿ ಕುಳಿತಿದ್ದ ರಾಜನನ್ನು ಕಪ್ಪುಕಂದುಬಣ್ಣದ ಹೆಂಗಸರು ಪ್ರಹರಿಸುತ್ತಿದ್ದರು. ಧರ್ಮಾತ್ಮನಾದ ನಮ್ಮ ತಂದೆಯು ಕೆಂಪುಹೂಗಳ ಮಾಲೆಯನ್ನು ಧರಿಸಿ ರಕ್ತಚಂದನವನ್ನು ಬಳಿದುಕೊಂಡು ಕತ್ತೆಗಳಿಂದ ಎಳೆಯಲ್ಪಡುತ್ತಿದ್ದ ರಥದಲ್ಲಿ ಕುಳಿತು ದಕ್ಷಿಣದಿಕ್ಕಿಗೆ ತ್ವರೆಯಿಂದ ಪ್ರಯಾಣಮಾಡುತ್ತಿದ್ದನು.

ಕೆಂಪುಸೀರೆಯನ್ನುಟ್ಟಿದ್ದ, ವಿಕಾರವಾದ ಮುಖವುಳ್ಳ ರಾಕ್ಷಸಿಯೊಬ್ಬಳು ದಕ್ಷಿಣದಿಕ್ಕಿನ ಕಡೆಗೆ ಪ್ರಯಾಣಹೊರಟಿದ್ದ ನಮ್ಮ ತಂದೆಯನ್ನು ಪರಿಹಾಸ್ಯಮಾಡುತ್ತಾ ಹಿಡಿದೆಳೆದಾಡುತ್ತಿದ್ದುದನ್ನು ನಾನು ಕನಸಿನಲ್ಲಿ ಕಂಡೆನು.

ಹೀಗೆ ನಾನು ನಿನ್ನೆಯ ಭಯಂಕರವಾದ ರಾತ್ರಿಯಲ್ಲಿ, ಇಂತಹ ಅತಿ ದಾರುಣವಾದ ಕನಸನ್ನು ಕಂಡೆನು. ಈ ಕನಸು ನಮ್ಮ ಕುಟುಂಬದಲ್ಲೊಬ್ಬರ ಮರಣಸೂಚಕವಾಗಿದೆ. ನಾನಾಗಲೀ, ನಮ್ಮ ತಂದೆಯಾಗಲೀ, ನಮ್ಮಣ್ಣ ರಾಮನಾಗಲೀ, ಲಕ್ಷ್ಮಣನಾಗಲೀ–ಯಾರಾದರೊಬ್ಬರು ಸಾಯುವುದಂತೂ ನಿಶ್ಚಯ. ಸ್ವಪ್ನಶಾಸ್ತ್ರವೂ ಇದನ್ನೇ ಹೇಳುತ್ತದೆ.

ನರೋ ಯಾನೇನ ಯಃ ಸ್ವಪ್ನೇ ಖರಯುಕ್ತೇನ ಯಾತಿ ಹಿ ।
ಅಚಿರಾತ್ತಸ್ಯ ಧೂಮಾಗ್ರಂ ಚಿತಾಯಾಂ ಸಂಪ್ರದೃಶ್ಯತೇ ॥೧೮॥

ಕನಸಿನಲ್ಲಿ ಯಾವ ಮನುಷ್ಯನು ಕತ್ತೆಯಿಂದ ಎಳೆಯಲ್ಪಡುತ್ತಿರುವ ವಾಹನದಲ್ಲಿ ಕುಳಿತು ಹೋಗುತ್ತಿರುವವನನ್ನು ಕಾಣುವನೋ ಅಂತಹವನ ಸಂಬಂಧವಾದ ಧೂಮವು ಚಿತೆಯಲ್ಲಿ ಬಹಳ ಬೇಗ ಕಾಣಿಸಿಕೊಳ್ಳುತ್ತದೆ. ಅವನು ಅತ್ಯಲ್ಪಸಮಯದಲ್ಲಿಯೇ ಮರಣಹೊಂದಿ ಚಿತಾರೋಹಣ ಮಾಡುತ್ತಾನೆ.

ಅಂತಹ ಕೆಟ್ಟ ಕನಸನ್ನು ಕಂಡುದರಿಂದ ನಾನಿಂದು ಬಹಳ ಬೇಸತ್ತಿದ್ದೇನೆ. ನಿಮ್ಮ ಮಾತುಗಳೂ ನನಗೆ ಬೇಡವಾಗಿವೆ. ನೀವುಗಳಾಡುವ ಮಾತುಗಳನ್ನು ಗ್ರಹಿಸಿ ಅವನ್ನು ಪುರಸ್ಕರಿಸಲೂ ಅಸಮರ್ಥನಾಗಿದ್ದೇನೆ.

ನನ್ನ ಗಂಟಲು ಒಣಗಿಹೋಗುತ್ತಿದೆ. ಮನಸ್ಸು ಬಹಳ ಅಸ್ವಸ್ಥವಾಗಿದೆ. ಭಯದ ಕಾರಣವೇನೆಂಬುದನ್ನು ನಾನರಿಯೆನು. ಆದರೂ ಭೀತನಾಗಿದ್ದೇನೆ. ಈ ಕಾರಣದಿಂದಲೇ ನನ್ನ ಗಂಟಲು ಕಟ್ಟಿದೆ. ಧ್ವನಿಯೂ ಕುಗ್ಗಿದೆ. ಕಾಂತಿಯೂ ಮಲಿನವಾಗಿ ಹೋಗಿದೆ. ಬಾಡಿರುವ ಮುಖವನ್ನು ನೀವೇ ಕಾಣುತ್ತಿರುವಿರಿ. ಮನಸ್ಸೂ ಜುಗುಪ್ಸಿತವಾಗಿದೆ. ಬಹಳ ಬೇಸರಗೊಂಡಿ ದ್ದೇನೆ. ಆದರೆ ಇದಕ್ಕೆ ಕಾರಣವು ನನಗೆ ತಿಳಿಯದು. ಹಿಂದಿನ ದಿನ ನಾನೇನಾದರೂ ಯೋಚಿಸಿದ್ದರೆ ಆ ಯೋಚನೆಯೇ ಸ್ವಪ್ನರೂಪದಲ್ಲಿ ಕಾಣಿಸಿ ತೆನ್ನಬಹುದು. ನಾನು ಕಂಡ ಸ್ವಪ್ನವು ಹಲವು ಬಗೆಯದು. ನಾನು ರಾಜನನ್ನು ಕನಸಿನಲ್ಲಿ ಕಂಡಂತೆ ಪ್ರತ್ಯಕ್ಷವಾಗಿ ಖಂಡಿತವಾಗಿಯೂ ಕಾಣಲಾರೆನು. ಅದು ಯೋಚನೆಗೆ ನಿಲುಕದ ರೂಪವಾಗಿದ್ದಿತು. ನಮ್ಮ ತಂದೆಯು ನೋಡಲು ಬಹಳ ಭಯಂಕರನಾಗಿ ಕಾಣುತ್ತಿದ್ದನು. ಆ ಕೆಟ್ಟ ಸ್ವಪ್ನವನ್ನು ನೆನೆಸಿಕೊಂಡು ನನಗೆ ಮಹಾಭಯವುಂಟಾಗಿದೆ. ಆ ಭಯವು ನನ್ನ ಹೃದಯವನ್ನು ಬಿಟ್ಟುಹೋಗುತ್ತಿಲ್ಲ."

೬೯ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೭೦ನೆಯ ಸರ್ಗ

ಅಯೋಧ್ಯೆಯ ದೂತರು ಭರತನಿಗೂ ಭರತನ ಸೋದರಮಾವನಿಗೂ ಅನರ್ಘವಾದ ವಸ್ತುಗಳನ್ನು ಅರ್ಪಿಸಿದುದು: ವಸಿಷ್ಠರ ಸಂದೇಶವನ್ನು ತಿಳಿಯಪಡಿಸಿದುದು: ಭರತನು ತಂದೆಯೇ ಮೊದಲಾದವರ ಕುಶಲವನ್ನು ಕೇಳಿ ತಾತನ ಅನುಮತಿಯನ್ನು ಪಡೆದು ಶತ್ರುಘ್ನನೊಡನೆ ಅಯೋಧ್ಯೆಗೆ ಪ್ರಯಾಣಹೊರಟುದು

ಭರತೇ ಬ್ರುವತಿ ಸ್ವಪ್ನಂ ದೂತಾಸ್ತೇ ಕ್ಲಾನ್ತವಾಹನಾಃ ।
ಪ್ರವಿಶ್ಯಾಸಹ್ಯಪರಿಘಂ ರಮ್ಯಂ ರಾಜಗೃಹಂ ಪುರಮ್ ॥೧॥

ಸಮಾಗಮ್ಯ ತು ರಾಜ್ಞಾ ಚ ರಾಜಪುತ್ರೇಣ ಚಾರ್ಚಿತಾಃ ।
ರಾಜ್ಞಃ ಪಾದೌ ಗೃಹೀತ್ವಾ ತು ತಮೂಚುರ್ಭರತಂ ವಚಃ ॥೨॥

ಭರತನು ತನ್ನ ಗೆಳೆಯರಿಗೆ ಸ್ವಪ್ನವೃತ್ತಾಂತವನ್ನು ಹೇಳುತ್ತಿರು

ವಾಗಲೇ ಅಯೋಧ್ಯೆಯ ರಾಜಭಟರು ಬಹಳ ದೂರ ಪ್ರಯಾಣಮಾಡಿ ಬಳಲಿದ್ದ ಕುದುರೆಗಳೊಡನೆ ಶತ್ರುಗಳಿಂದ ಅಭೇದ್ಯವಾದ ಕೋಟೆಯನ್ನು ಪ್ರವೇಶಿಸಿ ರಾಜಗೃಹಕ್ಕೆ ಬಂದು ಅರಮನೆಯನ್ನು ಪ್ರವೇಶಿಸಿದರು. ಕೇಕಯ ರಾಜ್ಯದ ರಾಜಪುತ್ರನಾದ ಯುಧಾಜಿತನು ಅಯೋಧ್ಯೆಯ ರಾಜಭಟರನ್ನು ಯಥಾಯೋಗ್ಯವಾಗಿ ಸತ್ಕರಿಸಿದನು. ಬಳಿಕ ರಾಜಭಟರು ಭರತನ ಕಾಲುಗಳನ್ನು ಮುಟ್ಟಿ ನಮಸ್ಕರಿಸಿ ಹೇಳಿದರು :

"ರಾಜಕುಮಾರ! ಪುರೋಹಿತರೂ ಮತ್ತು ಮಂತ್ರಿಗಳೂ ನಿನ್ನ ಕುಶಲವನ್ನು ಕೇಳಿದ್ದಾರೆ. ಸಮಯವು ಮೀರುವುದಕ್ಕೆ ಮುನ್ನವೇ ನೀನು ಒಂದು ಕಾರ್ಯವನ್ನು ನಿರ್ವಹಿಸಬೇಕಾಗಿದೆ. ಆದುದರಿಂದ ಶೀಘ್ರವಾಗಿ ಇಲ್ಲಿಂದ ಹೊರಡು. ನಾವು ಅಯೋಧ್ಯೆಯಿಂದ ತಂದಿರುವ ಅನರ್ಘವಾದ ಈ ವಸ್ತ್ರಾಭರಣಗಳನ್ನು ಸ್ವೀಕರಿಸಿ ಇವುಗಳನ್ನು ನಿಮ್ಮ ತಾತನಿಗೂ ಮತ್ತು ಸೋದರಮಾವನಿಗೂ ಉಡುಗೊರೆಯಾಗಿ ಕೊಡು. ನಾವಿಲ್ಲಿ ಸುಮಾರು ಮೂವತ್ತು ಕೋಟಿ ವರಹಗಳ ಮೌಲ್ಯದ ವಸ್ತ್ರಾಭರಣಗಳನ್ನು ತಂದಿ ರುತ್ತೇವೆ. ಅದರಲ್ಲಿ ಇಪ್ಪತ್ತುಕೋಟಿ ವರಹಗಳ ಮೌಲ್ಯದ ವಸ್ತುಗಳನ್ನು ನಿನ್ನ ಮಾತಾಮಹನಿಗೂ, ಹತ್ತು ಕೋಟಿ ವರಹಗಳ ಮೌಲ್ಯದ ವಸ್ತುಗಳನ್ನು ಸೋದರಮಾವನಿಗೂ ಉಡುಗೊರೆಯಾಗಿ ಕೊಡು."

ರಾಜಭಟರು ಹೀಗೆ ಹೇಳಲು ಸ್ವಜನರಲ್ಲಿ ವಿಶೇಷವಾಗಿ ಪ್ರೀತಿಯ ನ್ನಿಟ್ಟಿದ್ದ ಭರತನು ಅವರು ತಂದಿದ್ದ ಉಡುಗೊರೆಗಳನ್ನು ಸ್ವೀಕರಿಸಿ ಆ ಅನರ್ಘವಾದ ವಸ್ತ್ರಾಭರಣಗಳನ್ನು ತಾತನಿಗೂ ಮತ್ತು ಸೋದರ ಮಾವನಿಗೂ ಅರ್ಪಿಸಿ ದೂತರನ್ನು ಯಥಾಯೋಗ್ಯವಾಗಿ ಸತ್ಕರಿಸಿ ಹೇಳಿದನು :

"ರಾಜಭಟರೇ! ನಮ್ಮ ತಂದೆಯಾದ ದಶರಥನು ಕುಶಲಿಯಾಗಿರು ವನೇ? ಮಹಾತ್ಮರಾದ ರಾಮ-ಲಕ್ಷ್ಮಣರು ನೀರೋಗದೃಢಕಾಯರಾಗಿರು ವರೇ? ನನ್ನ ದೊಡ್ಡಮ್ಮನಾದ, ಪೂಜ್ಯಳಾದ, ಧರ್ಮದಲ್ಲಿಯೇ ನಿರತಳಾದ, ಇತರರಲ್ಲಿ ಸದ್ಗುಣಗಳನ್ನೇ ಕಾಣುವ, ಧೀಮಂತನಾದ ನಮ್ಮಣ್ಣನ ತಾಯಿ ಯಾದ ಕೌಸಲ್ಯಾದೇವಿಯು ಆರೋಗ್ಯದಿಂದಿರುವಳೇ? ಧರ್ಮಜ್ಞಳಾದ, ಲಕ್ಷ್ಮಣ-ಶತ್ರುಘ್ನರ ತಾಯಿಯಾದ ನನ್ನ ನಡುತಾಯಿಯು ಆರೋಗ್ಯ

ದಿಂದಿರುವಳೇ? ಸ್ವಾರ್ಥಿಯಾದ, ತಾನೇ ಎಲ್ಲರಿಗಿಂತಲೂ ಪ್ರಾಜ್ಞಳೆಂದು ಭಾವಿಸಿಕೊಂಡಿರುವ, ಹಟಮಾರಿಯೂ–ಕೋಪಿಷ್ಠೆಯೂ ಆಗಿರುವ ನನ್ನ ತಾಯಿಯಾದ ಕೈಕೇಯಿಯು ಆರೋಗ್ಯವಾಗಿರುವಳೇ? ಅವಳು ನನಗೆ ಏನಾದರೂ ಹೇಳಿಕಳುಹಿಸಿರುವಳೇ?"

ಮಹಾತ್ಮನಾದ ಭರತನು ಹೀಗೆ ಪ್ರಶ್ನಿಸಲಾಗಿ ರಾಜಭಟರು ಸಂಕ್ಷೇಪವಾಗಿಯೂ, ವಿನಯಯುಕ್ತವಾಗಿಯೂ ಇದ್ದ ಈ ಮಾತನ್ನು ಹೇಳಿದರು :

"ರಾಜಕುಮಾರ! ನೀನು ಯಾರ-ಯಾರ ಕುಶಲವನ್ನು ಪ್ರಶ್ನಿಸಿದೆಯೋ–ಅವರೆಲ್ಲರೂ ಕುಶಲಿಗಳಾಗಿಯೇ ಇರುವರು. ಪದ್ಮಹಸ್ತಳಾದ ಮಹಾಲಕ್ಷ್ಮಿಯು ನಿನ್ನನ್ನು ವರಿಸಲು ಕಾದು ನಿಂತಿದ್ದಾಳೆ. ಪ್ರಯಾಣಕ್ಕೆ ನಿನ್ನ ರಥವು ಈಗಲೇ ಸಿದ್ಧವಾಗಲಿ."

"ಹಾಗೆಯೇ ಆಗಲಿ. ಅಯೋಧ್ಯೆಯಿಂದ ಬಂದಿರುವ ದೂತರು ಪ್ರಯಾಣಮಾಡಲು ಅವಸರಪಡಿಸುತ್ತಿದ್ದಾರೆಂದು ನಮ್ಮ ತಾತನಿಗೆ ಹೇಳಿ ಅವನ ಅನುಮತಿಯನ್ನು ಪಡೆದು ಹೊರಟುಬಿಡುತ್ತೇನೆ"–ಹೀಗೆ ಭರತನು ರಾಜದೂತರಿಗೆ ಹೇಳಿ ಮಾತಾಮಹನ ಬಳಿಗೆ ಹೋಗಿ ಹೇಳಿದನು :

"ತಾತ! ಅಯೋಧ್ಯಾಪಟ್ಟಣದಿಂದ ಬಂದಿರುವ ಈ ರಾಜಭಟರು ನನ್ನನ್ನು ಹೊರಡಲು ಅವಸರಪಡಿಸುತ್ತಿದ್ದಾರೆ. ಅವರ ಪ್ರೇರಣೆಯಂತೆ ನಾನೀಗ ನಮ್ಮ ತಂದೆಯ ಬಳಿಗೆ ಹೋಗಲಿದ್ದೇನೆ. ನೀನು ಯಾವಾಗ ನನ್ನನ್ನು ಸ್ಮರಿಸಿಕೊಳ್ಳುವೆಯೋ–ಆಗಲೇ ನಾನು ಪುನಃ ಇಲ್ಲಿಗೆ ಬಂದು ಬಿಡುತ್ತೇನೆ."

ಭರತನು ಹೀಗೆ ಹೇಳಲು–ಕೇಕಯರಾಜನು ಅವನನ್ನು ಬಾಚಿ ತಬ್ಬಿಕೊಂಡು ನೆತ್ತಿಯನ್ನು ಆಘ್ರಾಣಿಸಿ ಮೈದಡವುತ್ತಾ ಈ ಶುಭವಾಕ್ಯವನ್ನು ಹೇಳಿದನು :

"ಹೋಗಿ ಬಾ, ಮಗು! ಹೋಗಿಬರಲು ಅನುಮತಿಸಿದ್ದೇನೆ. ನಿನ್ನಂತಹ ಒಳ್ಳೆಯ ಮಗನನ್ನು ಪಡೆದು ಕೈಕೇಯಿಯು ಸುಪುತ್ರವತಿ

ಯಾದಳು. ನಿನ್ನ ತಂದೆ-ತಾಯಿಗಳಿಗೆ ಅವರ ಕುಶಲವನ್ನು ಕೇಳಿದೆನೆಂದು ಹೇಳು. ಪುರೋಹಿತರಾದ ವಸಿಷ್ಠರಿಗೂ ಮತ್ತು ಅಲ್ಲಿರುವ ಇತರ ಬ್ರಾಹ್ಮಣೋತ್ತಮರಿಗೂ, ಮಹಾಧನುಷ್ಮಂತರಾದ, ನಿನ್ನ ಸಹೋದರರಾದ ರಾಮ-ಲಕ್ಷ್ಮಣರಿಗೂ ನಾನು ಕುಶಲವನ್ನು ಕೇಳಿದೆನೆಂದು ಹೇಳು".

ಕೇಕಯರಾಜನು ಹೀಗೆ ಹೇಳಿ ಮೊಮ್ಮಗನಿಗೆ ಆನೆಗಳನ್ನೂ, ಉತ್ತಮವಾದ ಮತ್ತು ಚಿತ್ರ-ವಿಚಿತ್ರವಾದ ಉಣ್ಣೆಯ ಹೊದಿಕೆಗಳನ್ನೂ, ಕೃಷ್ಣಾಜಿನಗಳನ್ನೂ, ಹೇರಳವಾದ ಸಂಪತ್ತನ್ನೂ ಬಳುವಳಿಯಾಗಿ ಕೊಟ್ಟು ಸತ್ಕರಿಸಿದನು. ಅಂತಃಪುರದಲ್ಲಿ ದಷ್ಟ-ಪುಷ್ಟವಾಗಿ ಬೆಳೆದಿದ್ದ, ಹುಲಿಯ ಶಕ್ತಿಯನ್ನೂ ಬಲವನ್ನೂ ಹೊಂದಿದ್ದ, ಕೋರೆದಾಡೆಗಳಿರುವ, ಎತ್ತರವಾಗಿದ್ದ ನಾಯಿಗಳನ್ನೂ ಭರತನಿಗೆ ಕೊಟ್ಟನು. ಥಳ-ಥಳಿಸುತ್ತಿದ್ದ ಎರಡು ಸಾವಿರ ಚಿನ್ನದ ಕಂಠಾಭರಣಗಳನ್ನೂ–ಹದಿನಾರು ನೂರು ಉತ್ತಮಜಾತಿಯ ಕುದುರೆಗಳನ್ನೂ ಕೇಕಯರಾಜನು ಕೈಕೇಯೀಪುತ್ರನಿಗೆ ಕೊಟ್ಟನು.

ಸಹಾಯಭೂತರಾದ, ವಿಶ್ವಾಸಕ್ಕೆ ಯೋಗ್ಯರಾದ, ಗುಣವಂತರಾದ ಅಮಾತ್ಯರನ್ನೂ ಅಶ್ವಪತಿಯು ಭರತನೊಡನೆ ಕಳುಹಿಸಿದನು. ಇರಾವತ ಪರ್ವತದಲ್ಲಿಯೂ ಮತ್ತು ಇಂದ್ರಶಿರಪರ್ವತದಲ್ಲಿಯೂ ಹುಟ್ಟಿದ ಐರಾವತ ಮತ್ತು ಇಂದ್ರಶಿರಗಳೆಂಬ ಉತ್ತಮಜಾತಿಯ ಬಹುಸುಂದರವಾದ ಆನೆ ಗಳನ್ನೂ, ಚೆನ್ನಾಗಿ ಪಳಗಿದ ಮತ್ತು ಶೀಘ್ರವಾಗಿ ಹೋಗುವ ಕತ್ತೆಗಳನ್ನೂ, ಹೇರಳವಾದ ಧನವನ್ನೂ ಸೋದರಮಾವನು ಭರತನಿಗೆ ಬಳುವಳಿಯಾಗಿ ಕೊಟ್ಟನು. ಹೊರಡುವ ಅವಸರದಲ್ಲಿದ್ದುದರಿಂದ ಆ ಅಪಾರಧನವನ್ನು ತೆಗೆದುಕೊಂಡು ಹೋಗುವುದು ಭರತನಿಗೆ ಅಷ್ಟು ಇಷ್ಟವಾಗಲಿಲ್ಲ. ಹಿಂದಿನ ರಾತ್ರಿಯಲ್ಲಿ ಕಂಡ ಕೆಟ್ಟ ಕನಸು ಮತ್ತು ಅದರ ಹಿನ್ನೆಲೆಯಲ್ಲಿಯೇ ಅಯೋಧ್ಯೆಯಿಂದ ರಾಜಭಟರು ಬಂದು ಪ್ರಯಾಣಹೊರಡಲು ಅವಸರ ಪಡಿಸುತ್ತಿರುವುದು–ಈ ಎರಡೂ ಕಾರಣಗಳಿಂದ ಭರತನ ಮನಸ್ಸು ಚಿಂತಾಕ್ರಾಂತವಾಗಿದ್ದಿತು. ಶ್ರೀಮಂತನಾದ ಭರತನು ಒಡನೆಯೇ ತನ್ನ ಅರಮನೆಗೆ ಹೋಗಿ ಪ್ರಯಾಣದ ಸಿದ್ಧತೆಯನ್ನು ಮಾಡಿಕೊಂಡು ಬಂಧು - ಮಿತ್ರರೆಲ್ಲರಿಗೂ ಪ್ರಯಾಣದ ವಿಷಯವನ್ನು ತಿಳಿಸಿ, ಅರಮನೆಯಿಂದ ಹೊರಟು ಜನರಿಂದಲೂ, ಆನೆಗಳಿಂದಲೂ, ಕುದುರೆಗಳಿಂದಲೂ ನಿಬಿಡ

ವಾಗಿದ್ದ ಉತ್ತಮವಾದ ರಾಜಮಾರ್ಗವನ್ನು ಸೇರಿದನು. ರಾಜಬೀದಿಯನ್ನು ದಾಟಿದನಂತರ ಉದಾರಸತ್ತ್ವನಾದ ಭರತನು ಅಜ್ಜಿ ಮತ್ತು ಸೋದ ರತ್ತೆಯರು ವಾಸಮಾಡುತ್ತಿದ್ದ ಅಂತಃಪುರವನ್ನು ಪ್ರವೇಶಿಸಿದನು. ಅಜ್ಜಿಗೂ ಮತ್ತು ಸೋದರತ್ತೆಗೂ ನಮಸ್ಕರಿಸಿ ಅಂತಃಪುರದಿಂದ ಹೊರಟು ತನ್ನನ್ನು ಕಳುಹಿಸಿಕೊಡಲು ಜೊತೆಯಲ್ಲಿ ಬಂದಿದ್ದ ತಾತನಿಗೂ, ಸೋದರ ಮಾವನಾದ ಯುಧಾಜಿತನಿಗೂ ಪುನಃ ನಮಸ್ಕರಿಸಿ ಅವರಿಂದ ಅನುಮತಿಯನ್ನು ಪಡೆದು ಶತ್ರುಘ್ನನೊಡನೆ ರಥದಲ್ಲಿ ಕುಳಿತು ಹೊರಟನು. ಆ ರಥವನ್ನು ಹಿಂಬಾಲಿಸಿ ವೃತ್ತಾಕಾರದ ಚಕ್ರಗಳಿಂದ ಕೂಡಿದ್ದ, ಬಳುವಳಿಗಳನ್ನು ತುಂಬಿಕೊಂಡಿದ್ದ ನೂರಾರು ರಥಗಳು ಹೊರಟುವು. ಒಂಟೆ, ಕುದುರೆ, ಎತ್ತು ಮತ್ತು ಕತ್ತೆಗಳು ಆ ರಥಗಳನ್ನು ಎಳೆದುಕೊಂಡು ಹೋಗುತ್ತಿದ್ದುವು. ಅನಂತರ ರಾಜಭಟರೂ ಭರತನ ರಥವನ್ನು ಅನುಸರಿಸಿ ಹೊರಟರು. ಮಾತಾಮಹನು ಕಳುಹಿಸಿದ್ದ ಸೈನಿಕರಿಂದ ರಕ್ಷಿಸಲ್ಪಡುತ್ತಿದ್ದ ನಿಷ್ಕಂಟಕನಾದ ಭರತನು ತನಗೆ ಸಮಾನರಾದ ಅಮಾತ್ಯರೊಡಗೂಡಿ ಶತ್ರುಘ್ನನನ್ನೂ ಕರೆದುಕೊಂಡು–ಸಿದ್ಧಪುರುಷನು ಇಂದ್ರಲೋಕದಿಂದ ಹೊರಡುವಂತೆ–ಕೇಕಯರಾಜನ ಅರಮನೆಯಿಂದ ಹೊರಟನು.

೭೦ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೭೧ನೆಯ ಸರ್ಗ

ಸೈನ್ಯದೊಡನೆ ಭರತನ ಪ್ರಯಾಣ : ನದೀ-ನದ-ಪರ್ವತಗಳನ್ನು ದಾಟಿ ಉಜ್ಜಹಾನಾನಗರದ ಉದ್ಯಾನವನದಲ್ಲಿ ಸೈನ್ಯಕ್ಕೆ ನಿಧಾನವಾಗಿ ಬರುವಂತೆ ಆಜ್ಞೆಮಾಡಿ ತೀವ್ರಗತಿಯಿಂದ ಅಯೋಧ್ಯೆಗೆ ಹೊರಟುದು : ಸಾಲವನವನ್ನು ದಾಟಿ ಅಯೋಧ್ಯೆಯ ಸಮೀಪಕ್ಕೆ ಬಂದು ಅಲ್ಲಿಯ ದುರವಸ್ಥೆಯನ್ನು ಗಮನಿಸಿದುದು : ಸಾರಥಿಯೊಡನೆ ದುಃಖವನ್ನು ತೋಡಿಕೊಳ್ಳುತ್ತಾ ರಾಜಭವನವನ್ನು ಪ್ರವೇಶಿಸಿದುದು

ಸ ಪ್ರಾಙ್ಮುಖೋ ರಾಜಗೃಹಾದಭಿನಿರ್ಯಾಯ ರಾಘವಃ ।
ತತಃ ಸುದಾಮಾಂ ದ್ಯುತಿಮಾನ್ಸಂತೀರ್ಯಾವೇಕ್ಷ್ಯ ತಾಂ ನದೀಮ್ ॥

ಹ್ಲಾದಿನೀಂ ದೂರಪಾರಾಂ ಚ ಪ್ರತ್ಯಕ್ಸ್ರೋತಸ್ತರಙ್ಗಿಣೀಮ್ ।
ಶತದ್ರೂಮತರಚ್ಛ್ರೀಮಾನ್ನದೀಮಿಕ್ಷ್ವಾಕುನನ್ದನಃ ॥೨॥

ಇಕ್ಷ್ವಾಕುವಂಶವರ್ಧನನಾದ, ಪರಾಕ್ರಮಶಾಲಿಯಾದ ಭರತನು ಚತುರಂಗಬಲಸಮೇತನಾಗಿ ಶತ್ರುಘ್ನನೊಡನೆ ಕೇಕಯದೇಶದ ರಾಜಗೃಹದಿಂದ ಪೂರ್ವಾಭಿಮುಖವಾಗಿ ಹೊರಟು ಸ್ವಲ್ಪದೂರ ಪ್ರಯಾಣಮಾಡಿದನಂತರ ಸುದಾಮಾ ಎಂಬ ನದಿಯ ಬಳಿಗೆ ಹೋಗಿ ಆ ನದಿಯ ಸೊಬಗನ್ನು ನೋಡಿಕೊಂಡು ಅದನ್ನು ದಾಟಿ ಮುಂದೆ ಪ್ರಯಾಣಮಾಡಿ, ವಿಶಾಲವಾದ ಪಾತ್ರದಿಂದ ಕೂಡಿದ್ದ ಹ್ಲಾದಿನೀ ಎಂಬ ನದಿಯನ್ನು ದಾಟಿದನು. ಅಲ್ಲಿಂದ ಮುಂದಕ್ಕೆ ಸ್ವಲ್ಪದೂರಪ್ರಯಾಣಮಾಡಿ ಪಶ್ಚಿಮವಾಹಿನಿಯಾದ ಶತದ್ರೂ ನದಿಯನ್ನೂ ಪರಿವಾರಸಮೇತನಾಗಿ ದಾಟಿದನು.*

ಏಲಾಧಾನೇ ನದೀಂ ತೀರ್ತ್ವಾ ಪ್ರಾಪ್ಯ ಚಾಪರಪರ್ಪಟಾನ್ ।
ಶಿಲಾಮಾಕುರ್ವತೀಂ ತೀರ್ತ್ವಾ ಹ್ಯಾಗ್ನೇಯಂ ಶಲ್ಯಕರ್ತನಮ್ ॥೩॥

ಸತ್ಯಸಂಧಃ ಶುಚಿಃ ಶ್ರೀಮಾನ್ಪ್ರೇಕ್ಷಮಾಣಃ ಶಿಲಾವಹಾಮ್ ।
ಅತ್ಯಯಾತ್ಸ ಮಹಾಶೈಲಾನ್ವನಂ ಚೈತ್ರರಥಂ ಪ್ರತಿ ॥೪॥

ಶತದ್ರೂನದಿಯನ್ನು ದಾಟಿದನಂತರ ಮುಂದೆ ಭರತನು ಸ್ವಲ್ಪದೂರ ಪ್ರಯಾಣಮಾಡಿ ಏಲಾಧಾನವೆಂಬ ಗ್ರಾಮದ ಸಮೀಪದಲ್ಲಿದ್ದ ಐಲಾಧಾನೀ ಎಂಬ ನದಿಯನ್ನು ದಾಟಿ ಅಪರಪರ್ಪಟವೆಂಬ ಗ್ರಾಮವನ್ನು ಸೇರಿ ಅಲ್ಲಿ ಸ್ವಲ್ಪಕಾಲ ವಿಶ್ರಾಂತಿಯನ್ನು ಪಡೆದು, ಅನಂತರ ಶಿಲಾ ಮತ್ತು ಆಕುರ್ವತೀ ಎಂಬ ನದಿಗಳನ್ನು ದಾಟಿದನು. ಮುಂದೆ ಭರತನು ಆಗ್ನೇಯದಿಕ್ಕಿಗೆ ಪ್ರಯಾಣಮಾಡಿ ಶಲ್ಯಕರ್ತನವೆಂಬ ಓಷಧಿಲತೆಗಳಿದ್ದ ಗ್ರಾಮವನ್ನು ಸೇರಿ ಅಲ್ಲಿ ಶಿಲಾವಹಾ ಎಂಬ ನದಿಯನ್ನು ಸಂದರ್ಶಿಸಿ ಅನಂತರ ಚೈತ್ರರಥ

---

*ಅಯೋಧ್ಯೆಯಿಂದ ರಾಜಭಟರು ಬಂದ ಮಾರ್ಗದ ಪ್ರಸ್ತಾಪವನ್ನು ವಾಲ್ಮೀಕಿಗಳು ಮಾಡದೇ ಇರುವುದರಿಂದ ಅಯೋಧ್ಯೆಯ ರಾಜಭಟರು ಶೀಘ್ರವಾಗಿ ಭರತನ ಸಮೀಪಕ್ಕೆ ಹೋಗಲು ಹಳ್ಳ-ತಿಟ್ಟುಗಳಿರುವ ಹತ್ತಿರದ ದಾರಿಯಲ್ಲಿ ಹೋದರೆಂದೂ, ಚತುರಂಗಬಲಸಮೇತನಾಗಿ ಹೊರಟ ಭರತನು ದೂರವಾದರೂ ವ್ಯವಸ್ಥಿತವಾದ ಬೇರೆಯ ಮಾರ್ಗದಲ್ಲಿ ಪ್ರಯಾಣಮಾಡಿರಬಹುದೆಂದೂ ಹೇಳಬಹುದಾಗಿದೆ.

ವೆಂಬ ಅರಣ್ಯದ ಕಡೆಗೆ ಹೋಗಿ ಮಹಾಪರ್ವತಗಳ ಬಳಿಗೆ ಪ್ರಯಾಣಮಾಡಿ ದನು.*

ಮುಂದೆ ಹೊರಟ ಭರತನು ಎರಡು ಪ್ರವಾಹಗಳಾಗಿ ಅಕ್ಕ-ಪಕ್ಕಗಳಲ್ಲಿ ಹರಿಯುತ್ತಿದ್ದ ಸರಸ್ವತೀ-ಗಂಗಾನದಿಗಳನ್ನು ದಾಟಿ ವೀರಮತ್ಸ್ಯರ ಮತ್ಸ್ಯ ದೇಶಕ್ಕೆ ಹೋಗಿ ಅಲ್ಲಿಗೆ ಉತ್ತರದಿಕ್ಕಿನಲ್ಲಿದ್ದ ಭಾರುಂಡವೆಂಬ ಅರಣ್ಯವನ್ನು ಸೇರಿದನು. ಅಲ್ಲಿಂದ ಮುಂದೆ ಪ್ರಯಾಣಮಾಡಿ ವೇಗವತಿಯಾದ, ಆಹ್ಲಾದ ಜನಕಳಾದ, ಪರ್ವತಗಳಿಂದ ಸುತ್ತುವರಿಯಲ್ಪಟ್ಟಿದ್ದ ಕುಲಿಂಗಾನದಿಯನ್ನು ದಾಟಿ ಮುಂದೆ ಪ್ರಯಾಣಮಾಡಿ ಯಮುನಾನದಿಯ ತೀರವನ್ನು ಸೇರಿ ಆ ಮಹಾನದಿಯನ್ನು ದಾಟಿದನಂತರ ರಾಜಕುಮಾರನು ಬಿಸಿಲಿನಿಂದ ಬಳಲಿ ಆಯಾಸಗೊಂಡಿದ್ದ ಸೈನ್ಯವನ್ನು ಸಂತೈಸಿದನು. ಯಮುನಾನದಿಯ ತೀರದಲ್ಲಿ ಸ್ವಲ್ಪಕಾಲ ತಂಗಿದ್ದ ಭರತನ ಪರಿವಾರದವರು ರಾಜಕುಮಾರನ ಆಶಯದಂತೆ ಪ್ರಯಾಣದ ಆಯಾಸದಿಂದ ಬಳಲಿದ್ದ ಕುದುರೆಗಳ ಮೈತೊಳೆದು ನೀರುಕುಡಿಸಿ ಹುಲ್ಲುಹಾಕಿ ಮೈದಡವಿ ಸಂತೈಸಿದರು. ಅನಂತರ ತಾವೂ ಸ್ನಾನಮಾಡಿ, ನೀರುಕುಡಿದು ಯಥೋಚಿತವಾದ ಉಪಹಾರವನ್ನು ತೆಗೆದು ಕೊಂಡು ಮುಂದೆ ನೀರಿಲ್ಲದ ಪ್ರದೇಶಗಳಲ್ಲಿ ಪ್ರಯಾಣಮಾಡಬೇಕಾಗಿರುವು ದನ್ನು ಮನಗಂಡು ಕುಡಿಯಲು ಭಾಂಡಗಳಲ್ಲಿ ಯಮುನಾನದಿಯ ನೀರನ್ನು ತುಂಬಿಕೊಂಡು ಮುಂದೆ ಪ್ರಯಾಣಮಾಡಿದರು ಮಂಗಲಾಚಾರಯುಕ್ತ

---

*ಈ ಎರಡು ಶ್ಲೋಕಗಳಲ್ಲಿರುವ ಪದಗಳಿಗೆ ವ್ಯಾಖ್ಯಾನಕಾರರು ಒಬ್ಬೊಬ್ಬರೂ ಒಂದೊಂದು ರೀತಿಯಲ್ಲಿ ಅರ್ಥಮಾಡಿರುತ್ತಾರೆ.

೧) ಏಲಾಧಾನಂ, ಏಲಾನಾಂ = ಏಲಕಾನಾಂ ಆಧಾನಂ ಉತ್ಪತ್ತಿಸ್ಥಾನಂ ತದ್ವತ್ತ್ವಾ ದೇಲಾಧಾನಾಖ್ಯೇ ನಗರೇ. ಏಲಕ್ಕಿಯ ಉತ್ಪತ್ತಿಸ್ಥಾನವಾಗಿರುವುದರಿಂದ ಏಲಾಧಾನ ಎಂಬ ಹೆಸರಾಗಿರುವ ಗ್ರಾಮದ ಸಮೀಪದಲ್ಲಿ ನದೀಂ = ಪೂರ್ವೋಕ್ತಾಂ ಶತದ್ರೂಂ, ಶತದ್ರೂನದಿಯನ್ನು ದಾಟಿ ೨) ಏಲಧಾನವೆಂಬ ಊರಿನ ಸಮೀಪದಲ್ಲಿ ಐಲಧಾನೀ ನದಿಯನ್ನು ದಾಟಿ ೩) ಅಪರಪರ್ಪಟಾನ್ – ಅಪರಪರ್ವತಾನ್ ಎಂದು ಎರಡು ಪಾಠಭೇದಗಳಿವೆ. ಅಪರಪರ್ವತಾನ್ ಎಂಬುದಕ್ಕೂ ಸಹ ಗ್ರಾಮಾಂತರಗಳೆಂದು ವ್ಯಾಖ್ಯಾನಮಾಡಿರುತ್ತಾರೆ. ೪) ಶಿಲಾಮಾಕುರ್ವತೀಂ = ಶಿಲಾಂ ಅಸಮನ್ತಾತ್ ಕುರ್ವತೀಂ ಶಿಲಾಕರ್ಷಣಸ್ವಭಾವಾಂ = ತನ್ನಲ್ಲಿ ಹಾಕಿದ ಎಲ್ಲ ವಸ್ತುಗಳನ್ನೂ ಶಿಲಾರೂಪವಾಗಿ ಪರಿವರ್ತಿಸುವ ಸಾಮರ್ಥ್ಯವಿರುವ ನದಿಯನ್ನು ದಾಟಿ ೫) ಶಿಲಾಮಾಕುರ್ವತೀಂ =

ನಾದ ರಾಜಪುತ್ರನಾದ ಭರತನು ಹೆಚ್ಚು ಜನಸಂಚಾರವಿಲ್ಲದ ಮಹಾರಣ್ಯವನ್ನು ಮಂಗಳಕರವಾದ ರಥದಲ್ಲಿ ಕುಳಿತು–ಆಕಾಶದಲ್ಲಿ ಭದ್ರಜಾತಿಯ ಗಾಳಿಯು ಒಂದು ದಿಕ್ಕಿನಿಂದ ಮತ್ತೊಂದು ದಿಕ್ಕಿಗೆ ಅಪ್ರತಿಹತವಾಗಿ ಬೀಸುವಂತೆ–ಯಾವ ವಿಧವಾದ ತಡೆಯಾಗಲೀ ಅಪಾಯವಾಗಲೀ ಇಲ್ಲದೇ ದಾಟಿದನು. ಪರಿವಾರಸಮೇತನಾಗಿ ಮುಂದೆ ಪ್ರಯಾಣಮಾಡುತ್ತಾ ಅಂಶುಧಾನವೆಂಬ ಪಟ್ಟಣವನ್ನು ಸೇರಿದನು. ಆ ಪಟ್ಟಣದ ಸಮೀಪದಲ್ಲಿ ಪ್ರವಹಿಸುತ್ತಿದ್ದ ಮಹಾನದಿಯಾದ ಭಾಗೀರಥಿಯನ್ನು ದಾಟಲು ಸಾಧ್ಯವಾಗದೆಂದು ತಿಳಿದು ಭರತನ ಪರಿವಾರದವರು ಮಹಾನದಿಯ ತೀರದಲ್ಲಿಯೇ ಸ್ವಲ್ಪದೂರ ಪ್ರಯಾಣಮಾಡಿ ಸುಪ್ರಸಿದ್ಧವಾದ ಪ್ರಾಗ್ವಟವೆಂಬ ಊರಿನ ಸಮೀಪದಲ್ಲಿ ಗಂಗಾನದಿಯನ್ನು ದಾಟಿ ಮುಂದೆ ಪ್ರಯಾಣಮಾಡುತ್ತಾ ಕುಟಿಕೋಷ್ಠಿಕಾ ಎಂಬ ನದಿಯ ಸಮೀಪಕ್ಕೆ ತೆರಳಿದರು. ಆ ನದಿಯನ್ನೂ ದಾಟಿದನಂತರ ಧರ್ಮವರ್ಧನವೆಂಬ ಪಟ್ಟಣಕ್ಕೆ ಹೋದರು. ಹಾಗೆಯೇ ಮುಂದೆ ಸಾಗುತ್ತಾ ತೋರಣವೆಂಬ ಗ್ರಾಮವನ್ನು ಸೇರಿ ಆ ಗ್ರಾಮದ ದಕ್ಷಿಣಭಾಗದಲ್ಲಿ ಪ್ರಯಾಣಮಾಡುತ್ತಾ ಜಂಬೂಪ್ರಸ್ಥವೆಂಬ ಪಟ್ಟಣವನ್ನು ಸೇರಿದರು. ಸೈನ್ಯಸಮೇತನಾದ ದಾಶರಥಿಯು ಅಲ್ಲಿಂದಲೂ ಹೊರಟು

ಶಿಲಾನದಿಯನ್ನೂ, ಆಕುರ್ವತೀನದಿಯನ್ನೂ ದಾಟಿ ೬) ಆಗ್ನೇಯಂ = ಆಗ್ನೇಯದಿಕ್ಕಿನಲ್ಲಿರುವ ಶಲ್ಯಕರ್ಷಣವೆಂಬ ಓಷಧಿವಿಶೇಷಗಳಿರುವ ದೇಶವನ್ನು ಸೇರಿ ಅಲ್ಲಿದ್ದ ಕಲ್ಲುಗಳನ್ನೂ ಪ್ರವಾಹದಲ್ಲಿ ಒಯ್ಯುವ ಶಿಲಾವಹಾ ಎಂಬ ನದಿಯನ್ನು ನೋಡುತ್ತಾ ೭) ಆಗ್ನೇಯಂ = ಆಗ್ನೇಯವೆಂಬ ಗ್ರಾಮವನ್ನೂ, ಶಲ್ಯಕರ್ತನಂ = ಶಲ್ಯ ಕರ್ತನವೆಂಬ ಗ್ರಾಮವನ್ನೂ ಸೇರಿ ಎರಡು ಗ್ರಾಮಗಳ ಮಧ್ಯಭಾಗದಲ್ಲಿದ್ದ ಶಿಲಾವಹಾ ಎಂಬ ನದಿಯನ್ನು ಸಂದರ್ಶಿಸುತ್ತಾ ೮) ಶಲ್ಯಕರ್ತನಂ : ಶಲ್ಯಂ = ಹೃದಯಶಲ್ಯಂ ದುಃಖಂ, ಕರ್ತಯತಿ ಛೇದಯತೀತಿ ಶಲ್ಯಕರ್ತನಂ ನಾಮ ನಗರಂ = ಮನಸ್ಸಿನ ದುಃಖವನ್ನು ನಾಶಗೊಳಿಸುವ ಸಾಮರ್ಥ್ಯವುಳ್ಳ ಪಟ್ಟಣ. ಸತ್ಯಸನ್ಧಃ, ಶುಚಿಃ ಎಂಬ ಎರಡು ವಿಶೇಷಣಗಳನ್ನು ಕೊಟ್ಟಿರುವುದಕ್ಕೆ ಕಾರಣವನ್ನು ವಿವರಿಸುತ್ತಾ ಒಬ್ಬ ವ್ಯಾಖ್ಯಾನಕಾರರು ತತ್ರಸ್ಥಜನೇಭ್ಯಃ ಈತಿವಾರಣಂ ಪ್ರತಿಜ್ಞಾಯ ತಥೈವ ಕೃತವಾನ್ = ಅಲ್ಲಿದ್ದ ಜನರ ಭಯವನ್ನು ನಾಶಗೊಳಿಸುವುದಾಗಿ ಪ್ರತಿಜ್ಞೆಮಾಡಿ ಹಾಗೆಯೇ ಮಾಡಿದನು ಎಂದು ಹೇಳಿದ್ದಾರೆ. ೯) ಚೈತ್ರರಥವೆಂದರೆ ಕುಬೇರನ ಚೈತ್ರರಥಕ್ಕೆ ಸಮಾನವಾದ ಪುಷ್ಪೋದ್ಯಾ ನವೆಂದು ಅರ್ಥಮಾಡಿದ್ದಾರೆ.

ಬಹುರಮ್ಯವಾಗಿದ್ದ ವರೂಥವೆಂಬ ಗ್ರಾಮದ ಸಮೀಪದಲ್ಲಿದ್ದ ರಮ್ಯವಾದ ಉದ್ಯಾನವನದಲ್ಲಿ ಪರಿವಾರಸಮೇತನಾಗಿ ರಾತ್ರಿಯಲ್ಲಿ ತಂಗಿದ್ದು ಬೆಳಗಾಗುತ್ತಲೇ ಶೌಚ-ಸ್ನಾನಾದಿಗಳನ್ನು ಮುಗಿಸಿಕೊಂಡು ಪೂರ್ವಾಭಿಮುಖವಾಗಿ ಹೊರಟು ಕದಂಬವೃಕ್ಷಗಳಿಂದ ಆವೃತವಾಗಿದ್ದ ಉಜ್ಜಿಹಾನಾ ಎಂಬ ಪಟ್ಟಣದ ಉದ್ಯಾನವನವನ್ನು ಸೇರಿದನು. ಸಾಲ-ಕದಂಬವೃಕ್ಷಗಳಿಂದ ವ್ಯಾಪ್ತವಾಗಿದ್ದ ಉಜ್ಜಿಹಾನಾಪಟ್ಟಣದ ಉದ್ಯಾನವನಕ್ಕೆ ಹೋದನಂತರ ಭರತನು ತನ್ನ ರಥಕ್ಕೆ ವೇಗಶಾಲಿಗಳಾದ ಕುದುರೆಗಳನ್ನು ಹೂಡಲು ಹೇಳಿ, ತನ್ನನ್ನು ಅನುಸರಿಸಿ ಬರುತ್ತಿದ್ದ ಸೈನಿಕರಿಗೂ ಮತ್ತು ಪರಿವಾರದವರಿಗೂ ನಿಧಾನ ವಾಗಿ ಬರುವಂತೆ ಆಜ್ಞೆಮಾಡಿ, ತಾನೊಬ್ಬನೇ ಅತಿಶೀಘ್ರವಾಗಿ ಅಯೋಧ್ಯಾಪಟ್ಟಣದ ಕಡೆಗೆ ಪ್ರಯಾಣಮಾಡಿದನು. ಸರ್ವತೀರ್ಥವೆಂಬ ಗ್ರಾಮದಲ್ಲಿ ಒಂದು ರಾತ್ರಿ ತಂಗಿದ್ದು ಮರುದಿನ ಪ್ರಾತರ್ವಿಧಿಗಳನ್ನು ಮುಗಿಸಿಕೊಂಡ ಭರತನು ಪರ್ವತಪ್ರದೇಶದ ಕುದುರೆಗಳಿಂದ ಯುಕ್ತವಾಗಿದ್ದ ರಥದಲ್ಲಿ ಕುಳಿತು ಉತ್ತಾನಿಕಾ ಎಂಬ ನದಿಯನ್ನೂ, ಇತರ ಸಣ್ಣ-ಪುಟ್ಟ ನದಿಗಳನ್ನೂ ದಾಟಿ ಹಸ್ತಿಪೃಷ್ಠಕವೆಂಬ ಊರಿನ ಸಮೀಪದಲ್ಲಿದ್ದ ಕುಟಿಕಾನದಿಯನ್ನೂ ದಾಟಿದನು. ಪುರುಷವ್ಯಾಘ್ರನಾದ ಭರತನು ಅಲ್ಲಿಂದ ಮುಂದೆ ಪ್ರಯಾಣಮಾಡಿ ಅನೇಕ ಕಪಿಸಮೂಹಗಳಿಂದ ಸಮಾವೃತವಾಗಿದ್ದು ಆದುದರಿಂದಲೇ ಕಪಿವತೀ ಎಂಬ ಅನ್ವರ್ಥ ನಾಮವನ್ನು ಪಡೆದಿದ್ದ ನದಿಯನ್ನು ಲೌಹಿತ್ಯನಗರದ ಸಮೀಪದಲ್ಲಿ ದಾಟಿದನು. ಮುಂದೆ ಭರತನು ಪ್ರಯಾಣಮಾಡುತ್ತಾ ಏಕಸಾಲವೆಂಬ ಗ್ರಾಮವನ್ನು ಸೇರಿ ಆ ಗ್ರಾಮದ ಸಮೀಪದಲ್ಲಿದ್ದ ಸ್ಥಾಣುಮತೀ ಎಂಬ ನದಿಯನ್ನೂ, ಮುಂದೆ ವಿನತ ಎಂಬ ಗ್ರಾಮದ ಸಮೀಪದಲ್ಲಿದ್ದ ಗೋಮತೀನದಿಯನ್ನೂ ದಾಟಿ ಮುಂದೆ ಪ್ರಯಾಣಮಾಡುತ್ತಾ ಕಲಿಂಗ ನಗರವನ್ನು ಸೇರಿದನು. ಮಾರ್ಗಾಯಾಸದಿಂದ ಬಹಳವಾಗಿ ಬಳಲಿದ್ದ ಭರತನು ಕಲಿಂಗನಗರದ ಸಮೀಪದಲ್ಲಿದ್ದ ಸಾಲವೃಕ್ಷಗಳ ವನದಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ಮುಂದೆ ಹೊರಟನು. ಅಯೋಧ್ಯೆಯನ್ನು ಬಹಳ ಬೇಗ ತಲುಪಬೇಕೆಂಬ ಅವಸರದಿಂದ ಭರತನು ಸಾಲವನವನ್ನು ಆ ರಾತ್ರಿಯೇ ಬಿಟ್ಟು ಮುಂದೆ ಪ್ರಯಾಣಮಾಡುತ್ತಾ ಅರುಣೋದಯದ ಸಮಯದಲ್ಲಿ ಮನುಚಕ್ರವರ್ತಿಯಿಂದ ನಿರ್ಮಿಸಲ್ಪಟ್ಟಿದ್ದ ಅಯೋಧ್ಯಾನಗರಿ

ಯನ್ನು ಬಹಳ ದೂರದಿಂದಲೇ ನೋಡಿದನು. ರಾಜಗೃಹದಿಂದ ಹೊರಟ ನಂತರ ಏಳು ರಾತ್ರಿಗಳು ಪ್ರಯಾಣಮಾಡಿ ಎಂಟನೆಯ ದಿನ ಮುಂಜಾನೆ ತನ್ನೆದುರಿನಲ್ಲಿ ಕಾಣುತ್ತಿದ್ದ ಅಯೋಧ್ಯಾಪಟ್ಟಣವನ್ನು ನೋಡಿ ಸಾರಥಿಗೆ ಹೇಳಿದನು :

"ಸಾರಥಿಯೇ! ಮಂಗಳಕರವಾದ ಉದ್ಯಾನವನಗಳಿಂದ ಕೂಡಿರುವ, ಯಶಸ್ವಿನಿಯಾದ, ಬಿಳಿಯ ಬಣ್ಣದ ಭೂಮಿಯಿಂದ ಕೂಡಿರುವ ಅಯೋಧ್ಯೆಯು ದೂರದಲ್ಲಿ ಕಾಣುತ್ತಿದೆ. ಆದರೆ ಯಾಜ್ಞಿಕರಿಂದಲೂ, ಸತ್ತ್ವ ಗುಣಸಂಪನ್ನರಿಂದಲೂ, ವೇದಪಾರಂಗತರಾದ ಬ್ರಾಹ್ಮಣರಿಂದಲೂ, ಐಶ್ವರ್ಯವಂತರಿಂದಲೂ ವ್ಯಾಪ್ತವಾಗಿ, ರಾಜರ್ಷಿಯಾದ ದಶರಥನಿಂದ ಪರಿಪಾಲಿಸಲ್ಪಡುತ್ತಿರುವ ಈ ಅಯೋಧ್ಯೆಯು ಸಂತಸದಿಂದಿರುವಂತೆ ನನಗೆ ಕಾಣುತ್ತಿಲ್ಲ. ಅರುಣೋದಯದ ಸಮಯದಲ್ಲಿ ಅಯೋಧ್ಯೆಯ ಸುತ್ತಲೂ ಸ್ತ್ರೀ-ಪುರುಷರ ಕಲ-ಕಲನಿನಾದಗಳು ಕೇಳಿಬರುತ್ತಿದ್ದುವು. ಅವುಗಳನ್ನು ನಾನೀಗ ಕೇಳುತ್ತಿಲ್ಲ. ಇಲ್ಲಿ ಕಾಣುತ್ತಿರುವ ಉದ್ಯಾನವನಗಳಿಗೆ ಸಾಯಂಕಾಲದ ವೇಳೆಯಲ್ಲಿ ಸ್ತ್ರೀ-ಪುರುಷರು ಬಂದು ಕ್ರೀಡೆಯಾಡಿ ವಿಶ್ರಾಂತಿಪಡೆದು ಈ ವೇಳೆಗೆ ಸರಿಯಾಗಿ ತಮ್ಮ-ತಮ್ಮ ಮನೆಗಳಿಗೆ ಹೋಗು ತ್ತಿದ್ದರು. ಆದರೆ ಇಲ್ಲಿ ನಾನೀಗ ಅದಕ್ಕೆ ವಿಪರೀತವಾದುದನ್ನೇ ಕಾಣು ತ್ತಿದ್ದೇನೆ. ಕಾಮಿಗಳಿಂದ ಪರಿತ್ಯಕ್ತವಾಗಿರುವ ಈ ಉದ್ಯಾನವನಗಳು ನನ್ನನ್ನು ನೋಡಿ ರೋದನಮಾಡುತ್ತಿರುವಂತೆ ಕಾಣುತ್ತಿವೆ. ನಿಶ್ಚಯ ವಾಗಿಯೂ ಬಹುಶೋಭಾಯಮಾನವಾಗಿ ಕಾಣುತ್ತಿದ್ದ ಪಟ್ಟಣವು ನನ ಗಿಂದು ಭಯಂಕರವಾದ ಅರಣ್ಯದಂತೆಯೇ ಕಾಣುತ್ತಿದೆ. ಹಿಂದೆ ಈ ಹೊತ್ತಿ ನಲ್ಲಿ ಅನೇಕ ಪ್ರಯಾಣಿಕರು ಪಲ್ಲಕ್ಕಿಗಳಲ್ಲಿಯೂ, ಕುದುರೆಗಳ ಮೇಲೂ, ಆನೆಗಳ ಮೇಲೂ ಕುಳಿತು ಅಯೋಧ್ಯಾಪಟ್ಟಣದ ಒಳಕ್ಕೂ ಮತ್ತು ಅಯೋಧ್ಯಾಪಟ್ಟಣದಿಂದ ಹೊರಕ್ಕೂ ಹೋಗಿಬರುತ್ತಿದ್ದರು. ಆದರೆ ಇಂದು ನಾನು ಒಬ್ಬ ಅಶ್ವಾರೋಹಿಯನ್ನಾಗಲೀ ಗಜಾರೋಹಿಯನ್ನಾಗಲೀ ಇಲ್ಲಿ ಕಾಣುತ್ತಿಲ್ಲ. ಅಯೋಧ್ಯೆಗೆ ಹೋಗುವವರಾಗಲೀ ಅಯೋಧ್ಯೆಯಿಂದ ಬರುವವ ರಾಗಲೀ ಯಾರೂ ನನ್ನ ಕಣ್ಣಿಗೆ ಕಾಣಿಸುತ್ತಿಲ್ಲ. ಹಿಂದೆ ಇಲ್ಲಿ ಕಾಣುತ್ತಿರುವ ಉದ್ಯಾನವನಗಳು ಮದಿಸಿರುವಂತೆಯೂ, ಕಿಲ-ಕಿಲನೆ ನಗುತ್ತಿರುವಂತೆಯೂ

ಕಾಣುತ್ತಿದ್ದುವು. ಹಲವಾರು ಲತಾ-ಗುಲ್ಮಗಳಿಂದಲೂ, ಕ್ರೀಡಾಪರ್ವತಗಳಿಂದಲೂ, ಕೃತಕಸರೋವರಗಳಿಂದಲೂ ಕೂಡಿದ್ದು, ಕಾಮುಕ-ಕಾಮಿನಿಯರ ವಿಹಾರಗಳಿಗೆ ಪ್ರಶಸ್ತಗುಣಯುಕ್ತವಾದ ಸನ್ನಿವೇಶಗಳು ಈ ಉದ್ಯಾನವನಗಳಲ್ಲಿದ್ದುವು. ಆದರೆ ಇವುಗಳಲ್ಲಿಂದು ಶೋಭೆಯೇ ಇಲ್ಲವಾಗಿದೆ. ಆನಂದ ರಹಿತವಾಗಿರುವಂತೆ ಅವು ಕಾಣುತ್ತಿವೆ. ದಾರಿಯುದ್ದಕ್ಕೂ ಎಲೆಗಳು ಉದುರಿ ಹೋಗಿರುವ ಈ ವೃಕ್ಷಗಳು ರೋದನಮಾಡುತ್ತಿರುವಂತೆ ಭಾಸವಾಗುತ್ತಿದೆ. ಸೂರ್ಯೋದಯವಾಗುತ್ತಿದ್ದರೂ ಮೃಗ-ಪಕ್ಷಿಗಳ ಸುಮಧುರವಾದ ಕಲ-ಕಲ ನಿನಾದಗಳು ಕೇಳಿಬರುತ್ತಿಲ್ಲ. ಹಿಂದೆ ಇದೇ ಸ್ಥಳದಲ್ಲಿ ನಡೆದುಹೋಗು ತ್ತಿದ್ದರೆ ಘಮ-ಘಮಿಸುವ ಸುವಾಸನೆಯನ್ನು ನಾವು ಆಘ್ರಾಣಿಸುತ್ತಿದ್ದೆವು. ಚಂದನಾಗರುಮಿಶ್ರಿತವಾದ ಧೂಪಧೂಮದಿಂದ ಸುವಾಸಿತವಾಗಿ ಪರಿಶುದ್ಧವಾದ, ಸಂಪದ್ಭರಿತವಾದ ಗಾಳಿಯು ಇಲ್ಲಿ ಬೀಸುತ್ತಿದ್ದಿತು. ಈಗ ಅಂತಹ ಗಾಳಿಯೇ ಬೀಸುತ್ತಿಲ್ಲ. ತಾಡನದಂಡಗಳ ಹೊಡೆತಗಳಿಂದ ಉಂಟಾದ ಭೇರೀ-ಮೃದಂಗಾದಿಗಳ ಮತ್ತು ಬೆರಳುಗಳಿಂದ ನುಡಿಸಲ್ಪಡುವ ವೀಣಾದಿ ವಾದ್ಯಗಳ ನಿನಾದಗಳೂ ಎಡಬಿಡದೇ ಅಯೋಧ್ಯೆಯಲ್ಲಿ ಪ್ರತಿಧ್ವನಿಸುತ್ತಿದ್ದುವು. ಆದರೆ ಈಗ ಆ ಶಬ್ದಗಳೇ ಕೇಳಿಬರುತ್ತಿಲ್ಲ ಇವೆಲ್ಲಕ್ಕೂ ವಿರುದ್ಧವಾಗಿ ಅನಿಷ್ಟಸೂಚಕಗಳಾದ ಕಾಗೆ-ನರಿ ಮೊದಲಾದ ಪ್ರಾಣಿಗಳು ಕರ್ಕಶವಾಗಿ ಕೂಗುವುದನ್ನೂ – ಎಲ್ಲ ಕಡೆಗಳಲ್ಲಿಯೂ ಓಡಾಡುತ್ತಿರುವುದನ್ನೂ ಕಾಣುತ್ತಿದ್ದೇನೆ. ಮನಸ್ಸಿಗೆ ಬೇಡವಾದ ಅನಿಷ್ಟಸೂಚಕಗಳಾದ ನಿಮಿತ್ತಗಳೂ ಉಂಟಾಗುತ್ತಿವೆ. ಇದರಿಂದಾಗಿ ನನ್ನ ಮನಸ್ಸಿಗೆ ಬಹಳ ಖೇದವಾಗಿದೆ. ಮನಸ್ಸು ತಲ್ಲಣಿಸುತ್ತಿದೆ.

ಸೂತ! ಇವೆಲ್ಲವನ್ನೂ ನೋಡಿದರೆ ನನ್ನ ಬಂಧುಗಳು ಸರ್ವಥಾ ಕುಶಲರಾಗಿಲ್ಲವೆಂಬುದು ಸ್ಪಷ್ಟವಾಗಿ ಕಾಣುತ್ತಿದೆ. ಭ್ರಾಂತಿಗೊಳ್ಳುವ ಕಾರಣವೇ ಇಲ್ಲದಿದ್ದರೂ ನನ್ನ ಹೃದಯವು ಸೀಳಿಹೋಗುತ್ತಿರುವುದೋ ಎಂಬಂತೆ ಭಾಸವಾಗುತ್ತಿದೆ."

ಆ ಸಮಯದಲ್ಲಿ ಭರತನು ಬಹಳ ವಿಷಣ್ಣನಾಗಿದ್ದನು. ಆಯಾಸಗೊಂಡ ಮನಸ್ಸುಳ್ಳವನಾಗಿದ್ದನು. ಭಯಗೊಂಡಿದ್ದನು. ಅವನ ಇಂದ್ರಿಯಗಳೆಲ್ಲವೂ ಕ್ಷೋಭೆಗೊಂಡಿದ್ದುವು. ಹೀಗೆ ಭಾರವಾದ ಮನಸ್ಸಿನಿಂದ ಕೂಡಿದ್ದ

ಭರತನು ಇಕ್ಷ್ವಾಕುವಂಶದ ಅರಸರಿಂದ ಪರಿಪಾಲಿಸಲ್ಪಡುತ್ತಿದ್ದ ಅಯೋಧ್ಯೆಯನ್ನು ಅವಸರದಿಂದಲೇ ಪ್ರವೇಶಿಸಿದನು. ಕುದುರೆಗಳೂ ಬಹಳವಾಗಿ ಬಳಲಿದ್ದುವು. ಅಯೋಧ್ಯಾಪಟ್ಟಣದ ಪಶ್ಚಿಮದಿಕ್ಕಿನಲ್ಲಿದ್ದ ವೈಜಯಂತವೆಂಬ ದಿಡ್ಡೀಬಾಗಿಲಿನ ಮೂಲಕ ಭರತನು ನಗರವನ್ನು ಪ್ರವೇಶಿಸಿದನು. ರಾಜಕುಮಾರನು ಪ್ರವೇಶಿಸುತ್ತಿದ್ದಂತೆಯೇ ದ್ವಾರಪಾಲಕರು ಮೇಲೆದ್ದು ಪರಾಕು ಹೇಳಿ– 'ಸುಖಪ್ರಯಾಣವಾಯಿತೇ?' – ಎಂದು ಭರತನನ್ನು ಪ್ರಶ್ನಿಸಿದರು. ಭರತನು ಅವರ ಪ್ರಶ್ನೆಗೆ ಯಥೋಚಿತವಾಗಿ ಉತ್ತರಿಸಿ ಅವರ ಜೊತೆಯಲ್ಲಿಯೇ ಅರಮನೆಗೆ ಹೋದನು. ಆ ಸಮಯದಲ್ಲಿ ಅವನ ಮನಸ್ಸು ಹಲವಾರು ಬಗೆಯ ಯೋಚನೆಗಳಿಂದ ವ್ಯಾಕುಲವಾಗಿದ್ದಿತು. ಜೊತೆಯಲ್ಲಿ ಬರುತ್ತಿದ್ದ ದ್ವಾರಪಾಲಕರೊಡನೆ ಸವಿಮಾತುಗಳನ್ನಾಡಿ ಅವರನ್ನು ಹಿಂದಕ್ಕೆ ಕಳುಹಿಸಿ, ಬಹಳವಾಗಿ ಬಳಲಿದ್ದ ಅಶ್ವಪತಿಯು ಕಳುಹಿಸಿದ್ದ ಸೂತನಿಗೆ ಹೇಳಿದನು :

"ಸೂತ! ಕಾರಣವಿಲ್ಲದೆಯೇ ನನ್ನನ್ನು ಇಷ್ಟು ಅವಸರದಿಂದ ಇಲ್ಲಿಗೆ ಕರೆಸಿರುವರೇ? ಇಲ್ಲಿಯ ವಾತಾವರಣವನ್ನು ನೋಡಿದರೆ ನನಗಂತೂ ಹಾಗೆ ಅನಿಸುತ್ತಿಲ್ಲ. ಇಂತಹ ಸಮಯಗಳಲ್ಲಿ ಯಾವಾಗಲೂ "ಹೃದಯಂ ಅಶುಭಾಶಙ್ಕಿ" ಮನಸ್ಸು ಅಶುಭವನ್ನೇ ಶಂಕಿಸುತ್ತಿರುತ್ತದೆ. ನನ್ನ ಧೈರ್ಯೋತ್ಸಾಹಗಳೂ ಕುಗ್ಗಿಹೋಗುತ್ತಿರುವಂತೆ ತೋರುತ್ತಿದೆ. ರಾಜರಿಗೆ ವಿನಾಶವು ಸಂಭವಿಸಿದ ಕಾಲದಲ್ಲಿ ಯಾರು ಹೇಗಿರುತ್ತಾರೆ? ವಾತಾವರಣವು ಹೇಗಿರುತ್ತದೆ?– ಎಂಬುದೆಲ್ಲವನ್ನೂ ನಾನು ಹಿರಿಯರಿಂದ ಕೇಳಿ ತಿಳಿದಿದ್ದೇನೆ. ಆ ಎಲ್ಲ ಲಕ್ಷಣಗಳನ್ನೂ ನಾನಿಂದು ಈ ಅಯೋಧ್ಯಾಪಟ್ಟಣದಲ್ಲಿ ಕಾಣುತ್ತಿದ್ದೇನೆ. ಅನೇಕ ದಿವಸಗಳಿಂದ ಬೀದಿಗಳನ್ನು ಗುಡಿಸಿ ನೀರನ್ನು ಚುಮುಕಿಸಿದಂತೆಯೇ ಕಾಣುತ್ತಿಲ್ಲ. ಆದುದರಿಂದಲೇ ನೋಡಲು ಒರಟಾಗಿ ಕಾಣುತ್ತಿವೆ. ಸೌಧಗಳಲ್ಲಿರುವ ಕಿಟಕಿಗಳ ಬಾಗಿಲುಗಳನ್ನು ಅನೇಕ ದಿವಸಗಳಿಂದ ಮುಚ್ಚಿರುವಂತೆ ಕಾಣುವುದಿಲ್ಲ. ಎಲ್ಲಿ ನೋಡಿದರೂ ಕಾಂತಿಹೀನತೆಯು ಎದ್ದು ಕಾಣುತ್ತಿದೆ.

ನಾಲ್ಕು ಮಾರ್ಗಗಳು ಸೇರುವ ಚೌಕಗಳಲ್ಲಿ ಅನುದಿನವೂ ಬಲಿಕರ್ಮಗಳು ನಡೆಯುತ್ತಿದ್ದುವು. ಆದರೆ ಈಗ ಅನೇಕ ದಿವಸಗಳಿಂದ ಇಲ್ಲಿ ಬಲಿಕರ್ಮ

ಗಳೇ ನಡೆದಂತೆ ತೋರುವುದಿಲ್ಲ. ಇಲ್ಲಿರುವ ದೇವತೆಗಳಿಗೆ ಧೂಪಗಳನ್ನು ಹಚ್ಚಿ ನಿತ್ಯವೂ ಅರ್ಚನೆಮಾಡುತ್ತಿದ್ದರು. ಈಗ ಆ ಧೂಪದ ವಾಸನೆಯೇ ಇಲ್ಲ. ಮನೆಯಲ್ಲಿರುವ ಈ ಜನರನ್ನು ನೋಡಿದರೆ ಎಷ್ಟೋ ದಿವಸಗಳಿಂದ ಊಟವನ್ನೇ ಮಾಡಿಲ್ಲದಂತೆ ಕಾಣುತ್ತಿದ್ದಾರೆ. ಇವರ ಮುಖಗಳಲ್ಲಿ ಸ್ವಲ್ಪವಾದರೂ ಕಾಂತಿಯೆಂಬುದೇ ಇಲ್ಲವಾಗಿದೆ. ಕುಟುಂಬಿಗಳು ವಾಸಿಸುತ್ತಿರುವ ಸೌಧಗಳೂ ಕಾಂತಿಹೀನವಾಗಿವೆ. ದೇವಮಂದಿರಗಳೆಲ್ಲವೂ ಹಿಂದೆ ಪುಷ್ಪಮಾಲಿಕೆಗಳಿಂದ ಪರಿಶೋಭಿಸುತ್ತಿದ್ದುವು. ಈಗ ಅಲ್ಲಿ ಪುಷ್ಪಮಾಲಿಕೆಗಳೇ ಕಾಣುತ್ತಿಲ್ಲ. ಮಂದಿರಗಳ ಪ್ರಾಂಗಣಗಳೂ ಧೂಳಿನಿಂದ ಮುಚ್ಚಿಹೋಗಿವೆ. ಎಷ್ಟೋ ದಿವಸಗಳಿಂದ ಈ ಪ್ರಾಂಗಣಗಳನ್ನು ಗುಡಿಸಿ ಸಾರಿಸಿಯೇ ಇಲ್ಲವೋ ಎಂಬಂತೆ ಕಾಣುತ್ತಿದೆ. ಆದುದರಿಂದ ದೇವಾಲಯಗಳು ಕೂಡ ಹಿಂದಿನಂತೆ ಪರಿಶೋಭಿಸುತ್ತಿಲ್ಲ. ಶೂನ್ಯವಾಗಿ ಕಾಣುತ್ತಿವೆ. ದೇವಾಲಯಗಳಲ್ಲಿ ನಿತ್ಯಪೂಜೆಯೂ ನಿಂತುಹೋಗಿರುವಂತೆ ಕಾಣುತ್ತಿದೆ. ಯಜ್ಞಶಾಲೆಗಳಲ್ಲಿಯೂ ಯಾವ ವಿಧವಾದ ಯಜ್ಞಗಳೂ ನಡೆಯುತ್ತಿರುವಂತೆ ಕಾಣುತ್ತಿಲ್ಲ. ಹೂಮಾರುವ ಅಂಗಡಿಗಳು ಹಿಂದೆ ವಿಚಿತ್ರತರವಾದ ಘಮ-ಘಮಿಸುವ ನಾನಾವಿಧವಾದ ಪುಷ್ಪಗಳ ಮಾಲಿಕೆಗಳಿಂದ ರಾರಾಜಿಸುತ್ತಿದ್ದುವು. ಈ ಅಂಗಡಿಗಳಲ್ಲೀಗ ಹಿಂದಿನಂತೆ ಪುಷ್ಪಮಾಲಿಕೆಗಳೇ ಕಾಣುತ್ತಿಲ್ಲ. ವ್ಯಾಪಾರಿಗಳು ಯಾವುದೇ ಚಿಂತೆಯಲ್ಲಿ ಮಗ್ನರಾಗಿರುವಂತೆ ಕಾಣುತ್ತಿದ್ದಾರೆ. ಕ್ರಮ-ವಿಕ್ರಯಗಳಾವುವೂ ಇಲ್ಲದೇ ಇರುವುದರಿಂದ ಅವರು ಬಹಳ ದೀನರಾಗಿರುವಂತೆ ಕಾಣುತ್ತಿದ್ದಾರೆ. ಹಿಂದಿದ್ದಂತೆ ಇವರೂ ಸುಖಿಗಳಾಗಿಲ್ಲ. ದೇವಮಂದಿರಗಳ ಸಮೀಪದಲ್ಲಿಯೂ ಚೈತ್ಯಗಳ* ಬಳಿಯಲ್ಲಿಯೂ ಕಾಣುತ್ತಿರುವ ಈ ಮೃಗ-ಪಕ್ಷಿಗಳು ಕೂಡ ಬಹಳ ದುಃಖದಿಂದ ಇರುವಂತೆ ಕಾಣುತ್ತಿವೆ. ಇಲ್ಲಿ ಓಡಾಡುತ್ತಿರುವ ಸ್ತ್ರೀ-ಪುರುಷರು ಯಾವುದೋ ಕಾರಣದಿಂದ ಬಹಳವಾಗಿ ಶೋಕಪಡುತ್ತಿರುವಂತೆ ಕಾಣುತ್ತಿದ್ದಾರೆ. ಮಲಿನರಾಗಿದ್ದಾರೆ. ಎಲ್ಲರ ಕಣ್ಣುಗಳಲ್ಲೂ ನೀರು ತುಂಬಿಕೊಂಡಿದೆ. ದೀನರಾಗಿದ್ದಾರೆ. ಯಾವುದೋ ಯೋಚನೆಯಲ್ಲಿ ಮಗ್ನರಾಗಿದ್ದಾರೆ. ಅತ್ಯಂತಕೃಶರಾಗಿದ್ದಾರೆ. ಹೀಗೆ ಉದ್ವಿಗ್ನ

---

*ಚೈತ್ಯ = ಅಶ್ವತ್ಥಕಟ್ಟೆ : ಬುದ್ಧನ ಅವಶೇಷದ ಮೇಲೆ ಕಟ್ಟಿರುವ ದೇವಾಲಯ. ಪ್ರಕೃತದಲ್ಲಿ ಮೊದಲನೆಯ ಅರ್ಥವೇ ಇಲ್ಲಿಗೆ ಹೊಂದಿಕೊಳ್ಳುತ್ತದೆ.

ರಾಗಿರುವ ಅನೇಕಸ್ತ್ರೀ-ಪುರುಷರ ಸಮೂಹಗಳನ್ನೂ ನಾನಿಲ್ಲಿ ಕಾಣುತ್ತಿದ್ದೇನೆ."

ಇಂತಹ ಅನಿಷ್ಟಸೂಚಕವಾದ ಅನೇಕ ದೃಶ್ಯಗಳನ್ನು ಅಯೋಧ್ಯಾಪಟ್ಟಣದಲ್ಲಿ ಕಂಡು ಅವೆಲ್ಲವನ್ನೂ ಸಾರಥಿಗೆ ವಿವರಿಸಿ ಹೇಳುತ್ತಾ ದೀನಮನಸ್ಕನಾದ ಭರತನು ಅರಮನೆಗೆ ತೆರಳಿದನು. ಅಯೋಧ್ಯಾಪಟ್ಟಣದ ಚೌಕಗಳೂ, ಮನೆಗಳೂ, ರಾಜಬೀದಿಗಳೂ ಶೂನ್ಯವಾಗಿ ಕಾಣುತ್ತಿದ್ದುವು. ಮಹಾದ್ವಾರದ ಕವಾಟಯಂತ್ರಗಳೂ ಧೂಳಿನಿಂದ ಮುಚ್ಚಿಹೋಗಿದ್ದುವು. ಇಂದ್ರನ ಅಮರಾವತಿಯ ಶೋಭೆಗೆ ಸಮಾನವಾದ ಶೋಭೆಯಿಂದ ಕಂಗೊಳಿಸುತ್ತಿದ್ದ ಅಯೋಧ್ಯೆಯು ಅಂದು ದುಃಸ್ಥಿತಿಯಲ್ಲಿರುವುದನ್ನು ಕಂಡು ಭರತನು ದುಃಖಸಾಗರದಲ್ಲಿ ಸಂಪೂರ್ಣವಾಗಿ ಮುಳುಗಿಹೋದನು.

ಹಿಂದೆಂದೂ ಕಾಣದಿದ್ದ ಅಪ್ರಿಯವಾದ ಅನೇಕ ದೃಶ್ಯಗಳನ್ನಂದು ಭರತನು ಅಯೋಧ್ಯೆಯಲ್ಲಿ ಕಂಡನು. ತನ್ನ ಹುಟ್ಟೂರಿಗೆ ಬಂದುದಕ್ಕಾಗಿ ಮಹಾತ್ಮನಾದ ಭರತನು ಸ್ವಲ್ಪವೂ ಸಂತೋಷಿಸದೇ ತಲೆಯನ್ನು ತಗ್ಗಿಸಿಕೊಂಡು ಅತಿದೀನನಾಗಿ ತಂದೆಯ ಅರಮನೆಯನ್ನು ಪ್ರವೇಶಿಸಿದನು.

೭೧ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೭೨ನೆಯ ಸರ್ಗ

ಭರತನು ಕೈಕೇಯಿಯ ಅಂತಃಪುರದಲ್ಲಿ ದಶರಥನ ಮರಣವಾರ್ತೆಯನ್ನು ಕೇಳಿ ಬಹಳವಾಗಿ ವಿಲಪಿಸಿದುದು : ಶ್ರೀರಾಮನು ಅರಣ್ಯಕ್ಕೆ ಹೋದನೆಂಬ ವೃತ್ತಾಂತವನ್ನು ತಾಯಿಯಿಂದಲೇ ಕೇಳಿ ಭ್ರಾಂತನಾದುದು

ಅಪಶ್ಯಂಸ್ತು ತತಸ್ತತ್ರ ಪಿತರಂ ಪಿತುರಾಲಯೇ ।
ಜಗಾಮ ಭರತೋ ದ್ರಷ್ಟುಂ ಮಾತರಂ ಮಾತುರಾಲಯೇ ॥೧॥

ದಶರಥನ ಅರಮನೆಯಲ್ಲಿ ಭರತನು ತಂದೆಯನ್ನು ಕಾಣದೇ ತಾಯಿಯನ್ನು ಕಾಣುವ ಸಲುವಾಗಿ ಕೈಕೇಯಿಯ ಅಂತಃಪುರಕ್ಕೆ ಹೋದನು.

ತನ್ನ ತಂದೆಯ ಮನೆಗೆ ಹೋಗಿದ್ದ ಪ್ರಿಯಪುತ್ರನು ಹಿಂದಿರುಗಿ

ಬಂದುದನ್ನು ನೋಡಿ ಕೈಕೇಯಿಯು ಪರಮಹೃಷ್ಟಳಾಗಿ ಸುವರ್ಣಮಯ ವಾದ ಆಸನವನ್ನು ಬಿಟ್ಟು ಥಟ್ಟನೆ ಮೇಲೆದ್ದು ಬಂದಳು. ತಾನು ಪ್ರವೇಶ ಮಾಡಿದ ಆ ಅರಮನೆಯೂ ಕಾಂತಿಹೀನವಾಗಿರುವುದನ್ನು ಅವನು ಕಂಡನು. ಅಲ್ಲಿ ಭರತನು ತನ್ನ ತಾಯಿಯ ಶುಭಕರವಾದ ಎರಡು ಕಾಲುಗಳನ್ನೂ ಮುಟ್ಟಿ ನಮಸ್ಕರಿಸಿದನು. ಕೈಕೇಯಿಯು ಯಶೋವಂತನಾದ ಮಗನನ್ನು ಬಾಚಿ ತಬ್ಬಿಕೊಂಡು ನೆತ್ತಿಯನ್ನು ಆಘ್ರಾಣಿಸಿ ಅನಂತರ ತೊಡೆಯಮೇಲೆ ಕುಳ್ಳಿರಿಸಿಕೊಂಡು ಮೈದಡವುತ್ತಾ ಪ್ರಶ್ನಿಸತೊಡಗಿದಳು :



"ಮಗು! ಅಜ್ಜನ ಮನೆಯನ್ನು ಬಿಟ್ಟು ಇಲ್ಲಿಗೆ ಬರಲು ಎಷ್ಟು ದಿನ ಗಳಾದುವು? ಗುರುಜನರ ಆಜ್ಞೆಯಂತೆ ಬಹುವೇಗವಾಗಿ ರಥದಲ್ಲಿ ಆಗಮಿಸಿದ

ನಿನಗೆ ಮಾರ್ಗಾಯಾಸವಾಗಿರುವುದಲ್ಲವೇ? ನಿಮ್ಮಜ್ಜನು ಕುಶಲಿಯಾಗಿರುವನಲ್ಲವೇ? ಅಂತೆಯೇ ನಿನ್ನ ಸೋದರಮಾವನಾದ ಯುಧಾಜಿತನೂ ಆರೋಗ್ಯದಿಂದಿರುವನೆಂದು ಭಾವಿಸುತ್ತೇನೆ. ನಿನ್ನ ಈ ಪ್ರವಾಸವು ಸುಖಕರವಾಗಿತ್ತಲ್ಲವೇ? ನೀನು ಇಲ್ಲಿಂದ ಪ್ರಯಾಣಮಾಡಿದಂದಿನಿಂದ ಹಿಂದಿರುಗುವವರೆಗೂ ಅಲ್ಲಿ ಏನೇನು ನಡೆಯಿತೋ ಅವೆಲ್ಲವನ್ನೂ ನನಗೆ ತಿಳಿಸು."

ಕೈಕೇಯಿಯು ಹೀಗೆ ಪ್ರಶ್ನಿಸಲಾಗಿ, ರಾಜೀವಲೋಚನನಾದ ಭರತನು ಸೋದರಮಾವನ ಮನೆಯಲ್ಲಿ ನಡೆದ ಎಲ್ಲ ಸಂಗತಿಗಳನ್ನೂ ಕೈಕೇಯಿಗೆ ವಿವರವಾಗಿಯೇ ಹೇಳಿದನು.

"ಅಮ್ಮ! ಅಜ್ಜನ ಮನೆಯಿಂದ ಹೊರಟ ಬಳಿಕ ಏಳು ರಾತ್ರಿಗಳು ಕಳೆದು ಇದು ಎಂಟನೆಯ ದಿವಸ. ನಿನ್ನ ತಂದೆ ಮತ್ತು ಸಹೋದರರು ಕುಶಲಿಗಳಾಗಿರುವರು. ನಾನು ಅಯೋಧ್ಯೆಗೆ ಪ್ರಯಾಣಹೊರಟಾಗ ನಮ್ಮಜ್ಜನು ನನಗೆ ಹೇರಳವಾದ ರತ್ನಾಭರಣಗಳನ್ನೂ, ಧನ-ಕನಕ-ವಸ್ತು-ವಾಹನಗಳನ್ನೂ ಬಳುವಳಿಯಾಗಿ ಕೊಟ್ಟಿರುವನು. ಅವೆಲ್ಲವನ್ನೂ ಬಂಡಿಗಳಲ್ಲಿ ತರುವಾಗ ಕುದುರೆಯೇ ಮೊದಲಾದುವು ಮಾರ್ಗದಲ್ಲಿ ಬಹಳವಾಗಿ ಆಯಾಸಗೊಂಡುವು. ರಾಜದೂತರ ಮಾತಿನಂತೆ ನಾನು ಬಹಳ ಅವಸರವಾಗಿ ಇಲ್ಲಿಗೆ ಬರಬೇಕಾಗಿದ್ದುದರಿಂದ ಪರಿವಾರದವರಿಗೂ ಮತ್ತು ಸೈನಿಕರಿಗೂ ನಿಧಾನವಾಗಿ ಬರುವಂತೆ ತಿಳಿಸಿ ನಾನು ಅವಸರದಿಂದ ಬಂದುಬಿಟ್ಟೆನು. ಅದು ಸರಿ. ನಾನೀಗ ಕೆಲವು ವಿಷಯಗಳನ್ನು ಕೇಳಲು ಬಯಸಿರುವೆನು. ದಯಮಾಡಿ ಉತ್ತರಿಸು.

ಸುವರ್ಣಮಯವಾದ ನಿನ್ನ ಹಂಸತೂಲಿಕಾತಲ್ಪವು ಶೂನ್ಯವಾಗಿದೆ. ಇಕ್ಷ್ವಾಕುಕುಲದ ಜನರು ಸಂತೋಷದಿಂದಿರುವಂತೆ ಕಾಣುತ್ತಿಲ್ಲ. ರಾಜನು ಸಾಮಾನ್ಯವಾಗಿ ಯಾವಾಗಲೂ ನಿನ್ನ ಅಂತಃಪುರದಲ್ಲಿಯೇ ಇರುತ್ತಿದ್ದನು. ನಮ್ಮ ತಂದೆಯು ಇಲ್ಲಿಯೇ ಇರಬಹುದೆಂದು ಭಾವಿಸಿ ಅವನನ್ನು ನೋಡುವ ಸಲುವಾಗಿಯೇ ನಾನಿಲ್ಲಿಗೆ ಬಂದೆನು. ಆದರೆ ಇಲ್ಲಿಯೂ ಅವನನ್ನು ಕಾಣುತ್ತಿಲ್ಲ. ಮೊದಲು ನಾನು ತಂದೆಯ ಕಾಲನ್ನು ಮುಟ್ಟಿ ನಮಸ್ಕರಿಸಬೇಕೆಂದಿರುವೆನು. ಆದುದರಿಂದ ಅವನೆಲ್ಲಿರುವನೆಂಬುದನ್ನು

ಬೇಗ ಹೇಳು. ದೊಡ್ಡಮ್ಮನಾದ ಕೌಸಲ್ಯಾದೇವಿಯ ಅಂತಃಪುರದಲ್ಲೇನಾದರೂ ಇರುವನೇ?"

ರಾಜ್ಯಲೋಭದಿಂದ ವಿಮೋಹಿತಳಾಗಿದ್ದ ಕೈಕೇಯಿಯು ಏನೂ ತಿಳಿಯದಿದ್ದ ಭರತನಿಗೆ ಪ್ರಿಯವಾಗಿ ತೋರುವ ಆದರೆ ಬಹಳ ಅಪ್ರಿಯವೂ ಮತ್ತು ಘೋರವೂ ಆದ ಈ ಮಾತನ್ನು ಹೇಳಿದಳು :

ಯಾ ಗತಿಃ ಸರ್ವಭೂತಾನಾಂ ತಾಂ ಗತಿಂ ತೇ ಪಿತಾ ಗತಃ ।
ರಾಜಾ ಮಹಾತ್ಮಾ ತೇಜಸ್ವೀ ಯಾಯಜೂಕಃ ಸತಾಂ ಗತಿಃ ॥೧೫॥

"ಪ್ರಪಂಚದಲ್ಲಿ ಹುಟ್ಟುವ ಎಲ್ಲ ಪ್ರಾಣಿಗಳಿಗೂ ಕೊನೆಯಲ್ಲಿ ಯಾವ ಗತಿಯುಂಟಾಗುವುದೋ–ಅದೇ ಗತಿಯನ್ನೇ ಧರ್ಮಾತ್ಮನಾದ, ತೇಜಸ್ವಿಯಾದ, ಯಜ್ಞಶೀಲನಾದ, ಸತ್ಪುರುಷರಿಗೆ ಆಶ್ರಯನಾಗಿದ್ದ ನಿನ್ನ ತಂದೆಯೂ ಹೊಂದಿದನು."

ಧರ್ಮಶೀಲರ ವಂಶದಲ್ಲಿ ಹುಟ್ಟಿದ್ದ, ನಿರ್ಮಲಹೃದಯನಾದ ಭರತನು ತಾಯಿಯ ಆ ಮಾತನ್ನು ಕೇಳುತ್ತಲೇ ಬಲವತ್ತರವಾದ ಪಿತೃವಿಯೋಗ ಶೋಕದಿಂದ ಪೀಡಿತನಾಗಿ ಒಡನೆಯೇ ಭೂಮಿಯ ಮೇಲೆ ಬಿದ್ದುಬಿಟ್ಟನು. ಮಹಾಬಾಹುವಾದ, ವೀರ್ಯವಂತನಾದ ಭರತನು ಎರಡು ಕೈಗಳನ್ನೂ ಮುಂದಕ್ಕೆ ಚಾಚಿ– "ಅಯ್ಯೋ! ನಾನು ಹಾಳಾಗಿ ಹೋದೆನು" –ಎಂದು ಬಹಳ ಸಂಕಟದಿಂದಲೂ, ದೈನ್ಯದಿಂದಲೂ ಹೇಳಿ ಕೆಳಗೆ ಬಿದ್ದನು. ತಂದೆಯ ಮರಣದಿಂದ ಪರಮದುಃಖಿತನಾಗಿದ್ದ, ಅದರಿಂದಲೇ ಶೋಕಸಾಗರದಲ್ಲಿ ಮುಳುಗಿಹೋಗಿದ್ದ, ಭ್ರಾಂತವಾದ ಮತ್ತು ದಿಗ್ಭ್ರಮೆಗೊಂಡಿದ್ದ ಮನಸ್ಸಿನಿಂದ ಕೂಡಿದ್ದ ಮಹಾತೇಜಸ್ವಿಯಾದ ಭರತನು ಗೋಳಾಡಿದನು.

"ಅಯ್ಯೋ! ನನ್ನ ತಂದೆಯಿದ್ದ ಕಾಲದಲ್ಲಿ ಈ ಶಯನಾಗಾರವು ಶರತ್ಕಾಲದ ರಾತ್ರಿಯಲ್ಲಿ ಚಂದ್ರನಿಂದ ಶೋಭಾಯಮಾನವಾಗಿ ಕಾಣುವ ನಿರ್ಮಲವಾದ ಆಕಾಶದೋಪಾದಿಯಲ್ಲಿ ಬೆಳಗುತ್ತಿದ್ದಿತು. ಧೀಮಂತನಾದ ರಾಜನಿಂದ ವಿಹೀನವಾಗಿರುವ ಈ ಶಯನಾಗಾರವೀಗ ಚಂದ್ರನಿಲ್ಲದ ಆಕಾಶದಂತೆಯೂ–ನೀರಿಲ್ಲದ ಸಮುದ್ರದಂತೆಯೂ ಕಾಂತಿಹೀನವಾಗಿ ಬಿಟ್ಟಿದೆ."

ವಿಜಯಿಗಳಲ್ಲಿ ಶ್ರೇಷ್ಠನಾದ, ಶ್ರೀಮಂತನಾದ, ಆರ್ತನಾದ, ದುಃಖ

ಪೀಡಿತನಾದ ಭರತನು ಬಟ್ಟೆಯಿಂದ ಮುಖವನ್ನು ಮುಚ್ಚಿಕೊಂಡು ರಾಜನ ಗುಣಗಾನಗಳನ್ನು ಮಾಡುತ್ತಾ ಕಣ್ಣೀರುಸುರಿಸುತ್ತಾ ಭೂಮಿಯಲ್ಲಿ ಬಿದ್ದು ಹೊರಳಾಡುತ್ತಿದ್ದನು.

ಅರಣ್ಯದಲ್ಲಿ ಕೊಡಲಿಯಿಂದ ಕತ್ತರಿಸಲ್ಪಟ್ಟು ಕೆಳಗೆ ಬಿದ್ದಿರುವ ಸಾಲ ವೃಕ್ಷದ ಕಾಂಡದಂತೆ ಭೂಮಿಯ ಮೇಲೆ ಬಿದ್ದಿದ್ದ, ತಂದೆಯ ಮರಣವಾರ್ತೆ ಯನ್ನು ಕೇಳಿ ಬಹಳ ಖಿನ್ನನಾಗಿದ್ದ, ದೇವಸದೃಶನಾದ, ತೇಜಸ್ಸಿನಲ್ಲಿ ಸೂರ್ಯ-ಚಂದ್ರರಿಗೆ ಸದೃಶನಾಗಿದ್ದ, ಮದಿಸಿದ ಆನೆಯ ಬಲಕ್ಕೆ ಸಮಾನ ವಾದ ಬಲವನ್ನು ಹೊಂದಿದ್ದ, ಶೋಕಾರ್ತನಾಗಿದ್ದ ಮಗನನ್ನು ಕೈಕೇಯಿಯು ಮೇಲೆಬ್ಬಿಸಿ ಹೇಳಿದಳು :

ಉತ್ತಿಷ್ಠೋತ್ತಿಷ್ಠ ಕಿಂ ಶೇಷೇ ರಾಜಪುತ್ರ ಮಹಾಯಶಃ ।
ತ್ವದ್ವಿಧಾ ನ ಹಿ ಶೋಚನ್ತಿ ಸನ್ತಃ ಸದಸಿ ಸಮ್ಮತಾಃ ॥೨೪॥

"ಮಹಾಯಶೋವಂತನಾದ ರಾಜಪುತ್ರನೇ! ಏಳು! ಎದ್ದೇಳು. ನೀನು ಹೀಗೇಕೆ ನೆಲದ ಮೇಲೆ ಬಿದ್ದು ಗೋಳಾಡುತ್ತಿರುವೆ? ಸತ್ಪುರುಷರ ಸಭೆಗಳಲ್ಲಿ ಗೌರವಿಸಲು ಯೋಗ್ಯರಾದ ನಿನ್ನಂತಹವರು ಹೀಗೆ ದುಃಖಪಡ ಬಾರದು.

ದಾನಯಜ್ಞಾಧಿಕಾರಾ ಹಿ ಶೀಲಶ್ರುತಿವಚೋನುಗಾ ।
ಬುದ್ಧಿಸ್ತೇ ಬುದ್ಧಿಸಂಪನ್ನ ಪ್ರಭೇವಾರ್ಕಸ್ಯ ಮನ್ದಿರೇ ॥೨೫॥

ಬುದ್ಧಿಸಂಪನ್ನನೇ! ನಿನ್ನ ಬುದ್ಧಿಯು ದಾನ-ಯಜ್ಞಗಳನ್ನು ಮಾಡುವ ಅಧಿಕಾರವುಳ್ಳದ್ದು. ಒಳ್ಳೆಯ ಶೀಲದಿಂದ ಕೂಡಿದುದು. ವೇದವಚನಗಳನ್ನು ಅನುಸರಿಸಿರುವ ಧರ್ಮದಿಂದ ಕಂಗೊಳಿಸುತ್ತಿರುವುದು. ಈ ಮನೆಯಲ್ಲಿ ಅದು ಸೂರ್ಯನಂತೆ ಬೆಳಗುತ್ತಿದೆ. (ನೀನು ದೀನನಾಗಬೇಡ.)"

ಪರಿಶುದ್ಧವಾದ ಮನಸ್ಸಿನಿಂದ ಕೂಡಿದ್ದ ಭರತನಿಗೆ ತಾಯಿಯು ಹೇಳಿದ ಗೂಢಾರ್ಥವು ಬೇಗ ತಿಳಿಯಲಿಲ್ಲ. ತಂದೆಯ ಮರಣವಾರ್ತೆಯನ್ನು ಕೇಳಿ ಬಹಳ ಹೊತ್ತಿನವರೆಗೂ ರೋದನಮಾಡುತ್ತಾ ನೆಲದ ಮೇಲೆ ಹೊರಳಾಡುತ್ತಲೇ ಇದ್ದನು. ಅಪಾರವಾದ ದುಃಖದಿಂದ ತಲ್ಲಣಿಸುತ್ತಾ ತಾಯಿಗೆ ಹೇಳಿದನು :

“ಅಮ್ಮ! ನಮ್ಮ ಅಣ್ಣನಾದ ಶ್ರೀರಾಮನಿಗೆ ಪಟ್ಟಾಭಿಷೇಕವಾಗ ಬಹುದು ಅಥವಾ ರಾಜನು ಯಾವುದಾದರೂ ಯಜ್ಞವನ್ನು ಮಾಡಬಹುದು– ಎಂದು ಭಾವಿಸಿ ನಾನು ಬಹಳ ಸಂತೋಷದಿಂದ ಅಯೋಧ್ಯೆಗೆ ಪ್ರಯಾಣ ಮಾಡಲು ಅಜ್ಜನ ಅನುಮತಿಯನ್ನು ಕೇಳಿದೆನು. ಆದರೆ ನಾನು ಬಯಸಿದ್ದುದೇ ಒಂದು ; ಇಲ್ಲಿ ಆಗಿರುವುದೇ ಒಂದು. ಎಲ್ಲವೂ ದುರ್ವಿಧಿಯೇ ಸರಿ. ಇದರಿಂದಾಗಿ ನನ್ನ ಮನಸ್ಸೇ ಒಡೆದುಹೋಗಿದೆ. ನನಗೆ ಪ್ರಿಯವನ್ನುಂಟು ಮಾಡುವುದರಲ್ಲಿ ಮತ್ತು ಹಿತವನ್ನುಂಟುಮಾಡುವುದರಲ್ಲಿ ನಿತ್ಯವೂ ನಿರತನಾಗಿದ್ದ ತಂದೆಯನ್ನು ನಾನು ಕಾಣುತ್ತಿಲ್ಲ. ಅಪ್ಪನು ಯಾವ ರೋಗದಿಂದ ದೇಹವನ್ನು ತೊರೆದನಮ್ಮಾ? ನಾನು ಅಯೋಧ್ಯೆಗೆ ಬರುವ ಮೊದಲೇ ಅಂತ್ಯಕಾಲದಲ್ಲಿ ತಂದೆಯ ಶುಶ್ರೂಷೆಯನ್ನೂ–ಅವಸಾನಾನಂತರ ದೇಹಸಂಸ್ಕಾರವನ್ನೂ ಮಾಡಿದ ರಾಮಾದಿಗಳೇ ನಿಶ್ಚಯವಾಗಿಯೂ ಧನ್ಯರು. ನಮ್ಮ ತಂದೆಯು ಸತ್ತುಹೋಗಿದ್ದಾನೆಂದರೆ ನನಗೆ ನಂಬಿಕೆಯೇ ಉಂಟಾಗುತ್ತಿಲ್ಲ. ಅವನು ಇಲ್ಲಿ ಎಲ್ಲಿಯೋ ಇರಬಹುದು. ಕೀರ್ತಿಶಾಲಿ ಯಾದ ನನ್ನ ತಂದೆಗೆ ನಾನಿಲ್ಲಿಗೆ ಬಂದಿರುವುದು ನಿಶ್ಚಯವಾಗಿಯೂ ತಿಳಿಯದು. ತಿಳಿದಿದ್ದರೆ ಓಡುತ್ತಾ ಬಂದು ನನ್ನನ್ನು ಬಾಚಿತಬ್ಬಿಕೊಂಡು ತಲೆಬಾಗಿಸಿ ನನ್ನ ನೆತ್ತಿಯನ್ನು ಆಘ್ರಾಣಿಸುತ್ತಿದ್ದನು. ಅಯ್ಯೋ! ಸ್ಪರ್ಶಸುಖವನ್ನು ಕೊಡುತ್ತಿದ್ದ ನನ್ನ ತಂದೆಯ ಆ ದಿವ್ಯವಾದ ಕೈಗಳೆಲ್ಲಿ? ಅವನು ಮಣ್ಣಿನಲ್ಲಿ ಆಟವಾಡಿಬಂದ ನನ್ನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ತನ್ನ ಕೈಯಿಂದಲೇ ಒರೆಸುತ್ತಿದ್ದನು.

ಯೋ ಮೇ ಭ್ರಾತಾ ಪಿತಾ ಬನ್ಧುರ್ಯಸ್ಯ ದಾಸೋಽಸ್ಮಿ ಧೀಮತಃ ।
ತಸ್ಯ ಮಾಂ ಶೀಘ್ರಮಾಖ್ಯಾಹಿ ರಾಮಸ್ಯಾಕ್ಲಿಷ್ಟಕರ್ಮಣಃ ॥೩೨॥

“ಅಮ್ಮ! ಅಣ್ಣನೇ ನನಗಿಂದು ತಂದೆ-ಬಂಧು ಎಲ್ಲವೂ ಆಗಿದ್ದಾನೆ. ಧೀಮಂತನಾದ ಆ ಶ್ರೀರಾಮನಿಗೆ ನಾನು ದಾಸನಾಗಿದ್ದೇನೆ. ಯಾವುದೇ ಕಾರ್ಯವನ್ನೂ ಸುಲಭವಾಗಿ ಸಾಧಿಸುವ ಆ ಶ್ರೀರಾಮನಿಗೆ ನಾನು ಬಂದಿರುವ ವಾರ್ತೆಯನ್ನು ಶೀಘ್ರವಾಗಿ ತಿಳಿಸು.

ಪಿತಾ ಹಿ ಭವತಿ ಜ್ಯೇಷ್ಠೋ ಧರ್ಮಮಾರ್ಯಸ್ಯ ಜಾನತಃ ।
ತಸ್ಯ ಪಾದೌ ಗ್ರಹೀಷ್ಯಾಮಿ ಸ ಹೀದಾನೀಂ ಗತಿರ್ಮಮ ॥೩೩॥

ಧರ್ಮವನ್ನು ತಿಳಿದಿರುವ ವಿವೇಕಿಯಾದ ಪುರುಷನಿಗೆ ತಂದೆಯು ಕಾಲವಾದನಂತರ ಹಿರಿಯಣ್ಣನೇ ತಂದೆಯಾಗುತ್ತಾನೆ. ಈಗ ನಾನು ಅವನ ಕಾಲುಗಳನ್ನು ಹಿಡಿಯುತ್ತೇನೆ. ಈಗ ನನಗೆ ಅವನೇ ಪರಮಾಶ್ರಯನು.

ಅಮ್ಮ! ಧರ್ಮವಿದನೂ, ಧರ್ಮಶೀಲನೂ, ಸತ್ಯಸಂಧನೂ, ದೃಢ ವ್ರತನೂ, ಸತ್ಯವಿಕ್ರಮನೂ ಆಗಿದ್ದ ನನ್ನ ತಂದೆಯು ಕಡೆಗಾಲದಲ್ಲಿ ನನ್ನ ವಿಷಯವಾಗಿ ಏನು ಹೇಳಿದನು? ಅವನ ಕೊನೆಯ ಸಂದೇಶವನ್ನು ನಾನು ಕೇಳಬಯಸುತ್ತೇನೆ".

ಭರತನಿಂದ ಆ ಮಾತನ್ನು ಕೇಳಿದ ಕೈಕೇಯಿಯು ರಾಜನು ಕಡೆಯಲ್ಲಿ ವಿಲಪಿಸುತ್ತಾ ಹೇಳಿದುದನ್ನು ಹೇಳಿದಳು :

"ಬುದ್ಧಿವಂತರಲ್ಲಿ ಶ್ರೇಷ್ಠನಾದ, ಮಹಾತ್ಮನಾದ ನಿನ್ನ ತಂದೆಯು ಸಾಯುವ ಕಡೆಗಾಲದಲ್ಲಿ ಹಾ ರಾಮ! ಹಾ ಸೀತೆ! ಹಾ ಲಕ್ಷ್ಮಣ! ಎಂದು ಕೂಗಿಕೊಂಡು ರೋದನಮಾಡುತ್ತಾ ಪರಲೋಕವನ್ನೈದಿದನು.

ಸರಪಣಿಯಿಂದ ಮಹಾಗಜವು ಸೆಳೆಯಲ್ಪಡುವಂತೆ ಯಮಭಟರ ಕಾಲಪಾಶದಿಂದ ಸೆಳೆಯಲ್ಪಡುತ್ತಿದ್ದ ಮಹಾರಾಜನು ಕಡೆಗಾಲದಲ್ಲಿ ಈ ಮಾತನ್ನು ಹೇಳಿದನು :

ಸಿದ್ಧಾರ್ಥಾಸ್ತೇ ನರಾ ರಾಮಮಾಗತಂ ಸೀತಯಾ ಸಹ ।
ಲಕ್ಷ್ಮಣಂ ಚ ಮಹಾಬಾಹುಂ ದ್ರಕ್ಷ್ಯನ್ತಿ ಪುನರಾಗತಮ್ ॥೩೮॥

"ಸೀತಾಸಮೇತನಾಗಿ ಬರುವ ಶ್ರೀರಾಮನನ್ನೂ, ಮಹಾಬಾಹುವಾದ ಲಕ್ಷ್ಮಣನನ್ನೂ ಅವರು ಹಿಂದಿರುಗಿ ಬಂದನಂತರ ಯಾರು ಸಂದರ್ಶಿಸು ವರೋ ಅವರೇ ನಿಶ್ಚಯವಾಗಿಯೂ ಧನ್ಯರು."

ಈ ಮೊದಲೇ ಕೈಕೇಯಿಯು ಹೆಚ್ಚು ಅಪ್ರಿಯವಾದ ತಂದೆಯ ಮರಣ ವಾರ್ತೆಯನ್ನು ಭರತನಿಗೆ ಹೇಳಿದ್ದಳು. ಈಗ ಪುನಃ ಅವಳು ರಾಮ-ಲಕ್ಷ್ಮಣ-ಸೀತೆಯರು ಇಲ್ಲವೆಂಬುದನ್ನು ಪರ್ಯಾಯಾಂತರದಿಂದ ಹೇಳಿದಳು.

ಭರತನು ಈ ಎರಡನೆಯ ಅಪ್ರಿಯವಾದ ಮಾತನ್ನು ಕೇಳಿ ಅತ್ಯಂತಖಿನ್ನನಾಗಿ ತಾಯಿಯನ್ನು ಪ್ರಶ್ನಿಸಿದನು :

ಕ್ವ ಚೇದಾನೀಂ ಸ ಧರ್ಮಾತ್ಮಾ ಕೌಸಲ್ಯಾನನ್ದವರ್ಧನಃ ।
ಲಕ್ಷ್ಮಣೇನ ಸಹ ಭ್ರಾತ್ರಾ ಸೀತಯಾ ಚ ಸಮಂ ಗತಃ ॥೪೦॥

"ಅಮ್ಮ! ಕೌಸಲ್ಯೆಗೆ ಆನಂದವನ್ನು ಹೆಚ್ಚಿಸುವ ಧರ್ಮಾತ್ಮನಾದ ರಾಮನೆಲ್ಲಿ? ಸೀತಾ-ಲಕ್ಷ್ಮಣರೊಡನೆ ಅವನೆಲ್ಲಿಗೆ ಹೊರಟುಹೋಗಿದ್ದಾನೆ?"

ಭರತನು ಹೀಗೆ ಪ್ರಶ್ನಿಸಲು ಕೈಕೇಯಿಯು ನಡೆದುದೆಲ್ಲವನ್ನೂ ಯಥಾವತ್ತಾಗಿಯೇ ಹೇಳಲು ಉಪಕ್ರಮಿಸಿದಳು. ಭರತನಿಗೆ ಪ್ರಿಯವಾಗುವುದೆಂಬ ಭ್ರಾಂತಿಯಿಂದ ತನಗೆ ಪ್ರಿಯವೂ–ಭರತನಿಗೆ ಅಪ್ರಿಯವೂ ಆದ ಈ ಮಾತನ್ನು ಹೇಳಿದಳು :

ಸ ಹಿ ರಾಜಸುತಃ ಪುತ್ರ ಚೀರವಾಸಾ ಮಹಾವನಮ್ ।
ದಣ್ಡಕಾನ್ಸಹ ವೈದೇಹ್ಯಾ ಲಕ್ಷ್ಮಣಾನುಚರೋ ಗತಃ ॥೪೨॥

"ವತ್ಸ! ರಾಜಪುತ್ರನಾದ ಶ್ರೀರಾಮನು ನಾರುಬಟ್ಟೆಯನ್ನುಟ್ಟು ವೈದೇಹಿಯೊಡನೆ ಮಹಾರಣ್ಯವಾದ ದಂಡಕಾವನಕ್ಕೆ ಹೋದನು. ಲಕ್ಷ್ಮಣನೂ ಅವರನ್ನು ಅನುಸರಿಸಿದನು."

ತಾಯಿಯು ಹೇಳಿದ ಆ ಮಾತನ್ನು ಕೇಳಿದೊಡನೆಯೇ ತನ್ನ ವಂಶದ ಮಹಿಮೆಯಲ್ಲಿ ನಿಷ್ಠಾವಂತನಾಗಿದ್ದ ಭರತನಿಗೆ ಭಯವುಂಟಾಯಿತು. ಶ್ರೀರಾಮನ ಚಾರಿತ್ರ್ಯದಲ್ಲೇ ಸಂಶಯವುಂಟಾಗಿ ತಾಯಿಯನ್ನು ಪುನಃ ಪ್ರಶ್ನಿಸಿದನು :

ಕಚ್ಚಿನ್ನ ಬ್ರಾಹ್ಮಣಧನಂ ಹೃತಂ ರಾಮೇಣ ಕಸ್ಯಚಿತ್ ।
ಕಚ್ಚಿನ್ನಾಢ್ಯೋ ದರಿದ್ರೋ ವಾ ತೇನಾಪಾಪೋ ವಿಹಿಂಸಿತಃ ॥೪೪॥

"ರಾಮನು ಬ್ರಾಹ್ಮಣನ ಸ್ವತ್ತನ್ನು ಅಪಹರಿಸಲಿಲ್ಲ ತಾನೇ? ತಪ್ಪು ಮಾಡದ ಧನಿಕನನ್ನಾಗಲೀ ದರಿದ್ರನನ್ನಾಗಲೀ ರಾಮನು ಹಿಂಸಿಸಲಿಲ್ಲ ತಾನೇ?

ಕಚ್ಚಿನ್ನ ಪರದಾರಾನ್ವಾ ರಾಜಪುತ್ರೋಽಭಿಮನ್ಯತೇ ।
ಕಸ್ಮಾತ್ಸ ದಣ್ಡಕಾರಣ್ಯೇ ಭ್ರೂಣಹೇವ ವಿವಾಸಿತಃ ॥೪೫॥

ರಾಜಪುತ್ರನಾದ ಶ್ರೀರಾಮನು ಯಾರಾದರೂ ಪರಸ್ತ್ರೀಯರನ್ನು ಹಿಂಸೆಪಡಿಸಲಿಲ್ಲ ತಾನೇ? ಇಂತಹ ಅಪರಾಧಗಳಲ್ಲಿ ಯಾವುದಾದರೂ ಒಂದನ್ನು ಮಾಡದಿದ್ದರೆ ನಮ್ಮಣ್ಣನನ್ನು ಭ್ರೂಣಹತ್ಯೆಯನ್ನು ಮಾಡಿದವ ನಂತೆ ದಂಡಕಾರಣ್ಯಕ್ಕೆ ಏಕೆ ಕಳುಹಿಸಲಾಯಿತು?"*

ಭರತನು ಹೀಗೆ ಪ್ರಶ್ನಿಸಲು ಚಪಲಚಿತ್ತಳಾದ ಆತನ ತಾಯಿಯು ಹಿಂದಿನಿಂದಲೂ ಇದ್ದ ಸ್ತ್ರೀಸ್ವಭಾವಕ್ಕೆ (ಹಟಮಾರಿತನಕ್ಕೆ) ಅನುಸಾರ ವಾಗಿಯೇ ತಾನು ಮಾಡಿದ ಕಾರ್ಯವನ್ನು ಯಥಾವತ್ತಾಗಿಯೇ ಭರತನಿಗೆ ಹೇಳಲು ಪ್ರಾರಂಭಿಸಿದಳು. ರಾಜನೀತಿಯಲ್ಲಿ ತಾನೊಬ್ಬಳು ಮಹಾಪಂಡಿತೆ ಯೆಂದು ಭಾವಿಸಿಕೊಳ್ಳುತ್ತಾ ತನ್ನ ಕಾರ್ಯಸಾಧನೆಯ ವಿಷಯದಲ್ಲಿ ಪರಮ ಹೃಷ್ಟಳಾಗಿದ್ದ, ಮುಂದೇನಾಗುವುದೆಂಬುದನ್ನು ಅರಿಯದ, ಮೂಢೆಯಾದ ಕೈಕೇಯಿಯು ಹೇಳಿದಳು :

ನ ಬ್ರಾಹ್ಮಣಧನಂ ಕಿಂಚಿದ್ಧೃತಂ ರಾಮೇಣ ಧೀಮತಾ ।
ಕಚ್ಚಿನ್ನಾಢ್ಯೋ ದರಿದ್ರೋ ವಾ ತೇನಾಪಾಪೋ ವಿಹಿಂಸಿತಃ ।
ನ ರಾಮಃ ಪರದಾರಾಂಶ್ಚ ಚಕ್ಷುರ್ಭ್ಯಾಮಪಿ ಪಶ್ಯತಿ ॥೪೮॥

---

*ರಾಜಪುತ್ರನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಬೇಕಾದರೆ ಈ ನಾಲ್ಕರಲ್ಲಿ ಯಾವು ದಾದರೂ ಒಂದು ಅಪರಾಧವನ್ನು ಅವನು ಮಾಡಿರಲೇಬೇಕು. ಇದು ಭರತನ ಅಭಿ ಪ್ರಾಯವಾಗಿದೆ. ಅದರಲ್ಲಿ ಮೊದಲನೆಯದು ಬ್ರಾಹ್ಮಣರ ಸ್ವತ್ತನ್ನು ಅಪಹರಿಸುವುದು. ಎರಡನೆಯದು ಧನಿಕರನ್ನು ಹಣದ ವಸೂಲಿಗಾಗಿ ಹಿಂಸಿಸುವುದು. ದರಿದ್ರರನ್ನು ಬೇರೆ ಯಾವ ಕಾರಣಕ್ಕಾದರೂ ಹಿಂಸಿಸುವುದು. ಇವರ ವಂಶೀಯನೇ ಆದ ಅಸಮಂಜನು ಮಕ್ಕಳನ್ನು ನೀರಿಗೆ ಹಾಕುತ್ತಾ ಪ್ರಜೆಗಳಿಗೆ ಹಿಂಸೆಕೊಟ್ಟುದನ್ನು ಇಲ್ಲಿ ಸ್ಮರಿಸಬಹು ದಾಗಿದೆ. ಇದೇ ಭಾವನೆಯಿಂದಲೇ ಭರತನು ಆಢ್ಯೋ ದರಿದ್ರೋ ವಾ ನ ವಿಹಿಂಸಿತಃ ಎಂಬ ಮಾತನ್ನು ಹೇಳಿರಬಹುದು. ಪರಸ್ತ್ರೀಯರನ್ನು ಹಿಂಸಿಸುವುದು. ಇದು ನಾಲ್ಕ ನೆಯ ಅಪರಾಧ. ರಾಮನು ಈ ಅಪರಾಧಗಳನ್ನು ಮಾಡಲಿಲ್ಲ ತಾನೇ? ಎನ್ನುತ್ತಾನೆ. ಮಾಡಿದನೇ? – ಎಂದೂ ಅವನು ಪ್ರಶ್ನಿಸುವುದಿಲ್ಲ. ರಾಮನು ದೇಶಭ್ರಷ್ಟನಾಗುವಂತಹ ಅಪರಾಧವನ್ನು ಮಾಡಿಲ್ಲವೆಂಬುದೇ ಅವನ ದೃಢನಂಬಿಕೆ.

ಅಭಿಮನ್ಯತೇ ಎಂಬುದಕ್ಕೆ ಅಭಿಮಾನಪದದ ವಿಶೇಷಾರ್ಥವನ್ನಿಟ್ಟುಕೊಂಡು ಅರ್ಥ ಮಾಡಲಾಗಿದೆ. ಅಭಿಮಾನಸ್ತ್ವಹಂಕೃತೌ । ಹಿಂಸಾಯಾಂ ಪ್ರಣಯೇ ಜ್ಞಾನೇ

"ಭರತ! ಶ್ರೀರಾಮನು ಯಾವುದೇ ಬ್ರಾಹ್ಮಣನ ಸ್ವಲ್ಪವೇ ಐಶ್ವರ್ಯವನ್ನೂ ಅಪಹರಿಸಿರುವುದಿಲ್ಲ. ಅಪರಾಧಮಾಡದ ದರಿದ್ರನನ್ನಾಗಲೀ ಐಶ್ವರ್ಯವಂತನನ್ನಾಗಲೀ ಹಿಂಸಿಸಿರುವುದಿಲ್ಲ. ಪರಸ್ತ್ರೀಯರನ್ನಂತೂ ರಾಮನು ಕಣ್ಣೆತ್ತಿಯೂ ನೋಡತಕ್ಕವನಲ್ಲ.

ರಾಮನಿಗೆ ಪಟ್ಟಾಭಿಷೇಕವಾಗುವುದೆಂಬ ವಾರ್ತೆಯನ್ನು ಕೇಳುತ್ತಲೇ ನಾನು ನಿನಗೆ ಪಟ್ಟಾಭಿಷೇಕವಾಗಬೇಕೆಂದೂ – ರಾಮನು ಅರಣ್ಯಕ್ಕೆ ಹೋಗಬೇಕೆಂದೂ ನಿನ್ನ ತಂದೆಯನ್ನು ಪ್ರಾರ್ಥಿಸಿದೆನು. ಸತ್ಯಪ್ರತಿಜ್ಞಾಪಾಲನ ರೂಪವಾದ ತನ್ನ ಸ್ವಭಾವಕ್ಕೆ ಅನುಗುಣವಾಗಿ ನಿನ್ನ ತಂದೆಯು ನನ್ನ ಪ್ರಾರ್ಥನೆಯನ್ನು ಅಂಗೀಕರಿಸಿದನು. ಇದರ ಪರಿಣಾಮವಾಗಿ ಲಕ್ಷ್ಮಣ-ಸೀತೆಯರೊಡನೆ ರಾಮನನ್ನು ರಾಜನು ಅರಣ್ಯಕ್ಕೆ ಕಳುಹಿಸಿದನು. ಮಹಾಯಶೋವಂತನಾದ ಮಹಾರಾಜನು ತನ್ನ ಪ್ರೀತಿಯ ಮಗನನ್ನು ಕಾಣದೇ ಪುತ್ರಶೋಕದಿಂದ ಪೀಡಿತನಾಗಿ ಅಸುನೀಗಿದನು.

ಧರ್ಮಜ್ಞನೇ! ಈಗ ನೀನು ರಾಜನಾಗು. ನಿನ್ನನ್ನು ರಾಜನನ್ನಾಗಿ ಮಾಡಬೇಕೆಂದೇ ನಾನು ಎಲ್ಲ ಕಾರ್ಯಗಳನ್ನೂ ಈ ರೀತಿಯಲ್ಲಿ ಮಾಡಿದೆನು.

[ಹೇಮಾದ್ರಿಃ] ಹಿಂಸೆ, ತೊಂದರೆ, ಪೀಡೆ, ಪ್ರಣಯ, ಜ್ಞಾನ, ಅಹಂಭಾವ ಈ ಅರ್ಥ ಗಳಲ್ಲಿ ಅಭಿಮಾನಪದವು ಉಪಯೋಗಿಸಲ್ಪಡುತ್ತದೆ.

ಭ್ರೂಣಃ ಎಂದರೆ ಗರ್ಭ ; ಭ್ರೂಣಹಾ ಎಂದರೆ ಗರ್ಭವನ್ನು ನಾಶಪಡಿಸಿದವನು ಎಂಬುದು ಸಾಧಾರಣವಾದ ಅರ್ಥ. ಭ್ರೂಣಃ ಎಂಬುದಕ್ಕೆ ಸರ್ವಶಾಸ್ತ್ರಗಳನ್ನು ಅಧ್ಯಯನಮಾಡಿದವನು ಎಂಬ ಅರ್ಥದ ಸ್ಮೃತಿವಚನವೂ ಇದೆ.

ಅನೂಚಾನೋ ಗುಣೈರ್ಯುಕ್ತೋ ವ್ರತಸ್ವಾಧ್ಯಾಯವಾನ್ ಶುಚಿಃ । ಭ್ರೂಣ ಇತ್ಯುಚ್ಯತೇ ಸದ್ಭಿಸ್ತ್ವೇಷ ಯೋ ವಿಜಿತೇನ್ದ್ರಿಯಃ । ಗುಣಶಾಲಿಯೂ ವ್ರತ (ಪ್ರಾಜಾಪತ್ಯಾದಿ) ಗಳನ್ನು ಮಾಡಿದವನೂ, ವೇದಾಧ್ಯಯನಮಾಡಿದವನೂ, ಜಿತೇಂದ್ರಿಯನೂ, ಶುದ್ಧನೂ ಆಗಿರುವ ವೇದಶಾಸ್ತ್ರಪಾರಂಗತನು ಭ್ರೂಣ ಎಂದು ಕರೆಯಲ್ಪಡುತ್ತಾನೆ.

ಆದರೆ ಭ್ರೂಣಹತ್ಯೆಯೆಂದರೆ ಗರ್ಭವನ್ನು ಕೊಲೆಮಾಡಿದವನು ಎಂಬ ಅರ್ಥವೇ ಹೆಚ್ಚು ಬಳಕೆಯಲ್ಲಿರುವುದು. ಭ್ರೂಣಹತ್ಯೆಯು ಮಹಾಪಾತಕವೆಂದು ಪರಿಗಣಿಸಲ್ಪಟ್ಟಿರುವುದು.

ಮಾ ಶೋಕಂ ಮಾ ಚ ಸಂತಾಪಂ ಧೈರ್ಯಮಾಶ್ರಯ ಪುತ್ರಕ ।
ತ್ವದಧೀನಾ ಹಿ ನಗರೀ ರಾಜ್ಯಂ ಚೈತದನಾಮಯಮ್ ॥೫೩॥

ಪುತ್ರಕ! ನೀನು ಯಾವ ಕಾರಣದಿಂದಲೂ ಶೋಕಿಸಬೇಡ ; ಸಂತಾಪ ಪಡಬೇಡ. ಧೈರ್ಯವನ್ನು ಅವಲಂಬಿಸು. ಇಂದು ಈ ಅಯೋಧ್ಯಾ ಪಟ್ಟಣವು ನಿನ್ನ ಅಧೀನವಾಗಿದೆ. ಕೋಸಲರಾಜ್ಯವೂ ಈತಿಬಾಧೆಗಳಿಂದ ರಹಿತವಾಗಿದೆ.

ತತ್ಪುತ್ರ ಶೀಘ್ರಂ ವಿಧಿನಾ ವಿಧಿಜ್ಞೈ-
ರ್ವಸಿಷ್ಠಮುಖ್ಯೈಃ ಸಹಿತೋ ದ್ವಿಜೇನ್ದ್ರೈಃ ।
ಸಂಕಾಲ್ಯ ರಾಜಾನಮದೀನಸತ್ತ್ವ-
ಮಾತ್ಮಾನಮುರ್ವ್ಯಾಮಭಿಷೇಚಯಸ್ವ ॥೫೪॥

ಭರತ! ಸಂಸ್ಕಾರವಿಧಿಯನ್ನು ತಿಳಿದಿರುವ ವಸಿಷ್ಠಪ್ರಮುಖರಾದ ಬ್ರಾಹ್ಮಣರಿಂದ ಕೂಡಿದವನಾಗಿ ಮಹಾಪರಾಕ್ರಮಿಯಾದ ದಶರಥರಾಜನ ಉತ್ತರಕ್ರಿಯೆಗಳನ್ನು ಆಚರಿಸು. ಅನಂತರ ಭೂಮಂಡಲಕ್ಕೇ ಚಕ್ರಾಧಿಪತಿಯಾಗಿ ಪಟ್ಟಾಭಿಷಿಕ್ತನಾಗು."

೭೨ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೭೩ನೆಯ ಸರ್ಗ

ಭರತನಿಂದ ಕೈಕೇಯಿಯ ಧಿಕ್ಕಾರ: ಅವಳ ಮೇಲೆ ಕೋಪಗೊಂಡುದು

ಶ್ರುತ್ವಾ ತು ಪಿತರಂ ವೃತ್ತಂ ಭ್ರಾತರೌ ಚ ವಿವಾಸಿತೌ ।
ಭರತೋ ದುಃಖಸಂತಪ್ತಃ ಇದಂ ವಚನಮಬ್ರವೀತ್ ॥೧॥

ತಂದೆಯು ಮರಣಹೊಂದಿದುದನ್ನೂ, ರಾಮ-ಲಕ್ಷ್ಮಣರು ಕಾಡಿಗೆ ಹೋಗಿರುವುದನ್ನೂ ಕೇಳಿ ಪರಮದುಃಖಿತನಾದ ಭರತನು ಹೇಳಿದನು :

"ಹತಭಾಗ್ಯನಾಗಿರುವ, ತಂದೆಯಿಂದಲೂ–ತಂದೆಗೆ ಸಮಾನನಾದ ಅಣ್ಣನಿಂದಲೂ ವಿಹೀನನಾಗಿ ಶೋಕಸಾಗರದಲ್ಲಿ ಮುಳುಗಿರುವ ನನಗೆ ರಾಜ್ಯದಿಂದೇನಾಗಬೇಕಾಗಿದೆ? ತಂದೆಯನ್ನು ಕಳೆದುಕೊಂಡು ದುಃಖಪಡುತ್ತಿರುವ

ನನಗೆ, ಯಾತನೆಯಾಗುತ್ತಿರುವ ಗಾಯದ ಮೇಲೆ ಉಪ್ಪುಸುರಿದಂತೆ ನೀನು ಮತ್ತೂ ದುಃಖವನ್ನುಂಟುಮಾಡಿರುವೆ. ತಂದೆಯನ್ನು ಪ್ರೇತನನ್ನಾಗಿಯೂ ರಾಮನನ್ನು ತಾಪಸನನ್ನಾಗಿಯೂ ಮಾಡಿಬಿಟ್ಟೆ.

ಕುಲಸ್ಯ ತ್ವಮಭಾವಾಯ ಕಾಲರಾತ್ರಿರಿವಾಗತಾ ।
ಅಙ್ಗಾರಮುಪಗೂಹ್ಯ ತ್ವಾಂ ಪಿತಾ ಮೇ ನಾವಬುದ್ಧವಾನ್ ॥೪॥

ನೀನು ನಮ್ಮ ವಂಶದ ವಿನಾಶಕ್ಕಾಗಿಯೇ ಪ್ರಳಯಕಾಲದ ಕಾಳರಾತ್ರಿಯಂತೆ ನಮ್ಮ ವಂಶಕ್ಕೆ ಬಂದು ಸೇರಿಕೊಂಡೆ. ಇದನ್ನು ಅರಿಯದ ನಮ್ಮ ತಂದೆಯು ಬೂದಿಮುಚ್ಚಿದ ಕೆಂಡದಂತಿದ್ದ ನಿನ್ನನ್ನು ಪ್ರೀತಿಯಿಂದ ಆಲಿಂಗಿಸಿಕೊಳ್ಳುತ್ತಿದ್ದನು.

ಮೃತ್ಯುಮಾಪಾದಿತೋ ರಾಜಾ ತ್ವಯಾ ಮೇ ಪಾಪದರ್ಶಿನಿ ।
ಸುಖಂ ಪರಿಹೃತಂ ಮೋಹಾತ್ಕುಲೇಽಸ್ಮಿನ್ಕುಲಪಾಂಸನಿ ॥೫॥

ಯಾವಾಗಲೂ ಪಾಪಕಾರ್ಯದಲ್ಲಿಯೇ ದೃಷ್ಟಿಯುಳ್ಳವಳೇ! ಕುಲಕಳಂಕಿನಿಯೇ! ನಿನ್ನಿಂದಲೇ ನನ್ನ ತಂದೆಯು ಮೃತ್ಯುವಶನಾದನು. ಮಗನಿಗೆ ರಾಜ್ಯಕೊಡಿಸುವ ಭ್ರಾಂತಿಯಿಂದ ನಮ್ಮ ವಂಶದಲ್ಲಿ ಶಾಶ್ವತವಾಗಿ ನೆಲೆಸಿದ್ದ ಸುಖ-ಶಾಂತಿಗಳನ್ನೇ ಹಾಳುಮಾಡಿಬಿಟ್ಟೆ.

ಸತ್ಯಸಂಧನಾದ, ಮಹಾಯಶೋವಂತನಾದ, ವೃದ್ಧನಾದ ನಮ್ಮ ತಂದೆ ದಶರಥನು ನಿನ್ನ ಕೈಹಿಡಿದು ಅಂತ್ಯಕಾಲದಲ್ಲಿ ಬಹಳ ತೀವ್ರವಾದ ಪುತ್ರವಿಯೋಗದುಃಖಕ್ಕೆ ಈಡಾಗಿ ಸತ್ತೇಹೋದನು. ಧರ್ಮವತ್ಸಲನಾದ ನನ್ನ ತಂದೆಯನ್ನು ಏತಕ್ಕೆ ನೀನು ವಿನಾಶಗೊಳಿಸಿದೆ? ಯಾವ ಕಾರಣದಿಂದ ರಾಮನನ್ನು ಕಾಡಿಗಟ್ಟಿದೆ? ರಾಮನು ಅರಣ್ಯಕ್ಕಾದರೂ ಏಕೆ ಹೋದನು? ಹೇಳು ತಾಯೇ! ಪುತ್ರಶೋಕದಿಂದ ಪೀಡಿತರಾಗಿರುವ ಕೌಸಲ್ಯಾ-ಸುಮಿತ್ರೆಯರು ನನ್ನ ತಾಯಿಯಾದ ನಿನ್ನನ್ನು ಸವತಿಯನ್ನಾಗಿ ಪಡೆದು ಇನ್ನೂ ಜೀವಿಸಿರುವುದಾದರೆ – ಬಹಳ ಕಷ್ಟದಿಂದಲೇ ಅವರು ಜೀವಧಾರಣೆಮಾಡುತ್ತಿರಬಹುದು. ಗುರುಜನರಲ್ಲಿ ಹೇಗೆ ನಡೆದು ಕೊಳ್ಳಬೇಕೆಂಬುದನ್ನು ಚೆನ್ನಾಗಿ ತಿಳಿದಿರುವ ಧರ್ಮಾತ್ಮನಾದ ನಮ್ಮಣ್ಣನು ತನ್ನ ತಾಯಿಯ ವಿಷಯದಲ್ಲಿ ಹೇಗೆ ನಡೆದುಕೊಳ್ಳುತ್ತಿದ್ದನೋ

ಹಾಗೆಯೇ ನಿನ್ನ ವಿಷಯದಲ್ಲಿಯೂ ಉತ್ತಮವಾದ ರೀತಿಯಲ್ಲಿಯೇ ನಡೆದುಕೊಳ್ಳುತ್ತಿದ್ದನು. ನನ್ನ ಹಿರಿಯ ತಾಯಿಯಾದ ಕೌಸಲ್ಯಾದೇವಿಯು ಮುಂದೆ ಸಂಭವಿಸಬಹುದಾದ ಅನರ್ಥಗಳನ್ನು ಮೊದಲೇ ಯೋಚಿಸಿ ನಡೆಯ ತಕ್ಕವಳು. ಧರ್ಮವನ್ನಾಶ್ರಯಿಸಿರುವ ಅವಳು ಒಡಹುಟ್ಟಿದ ತಂಗಿಯ ವಿಷಯದಲ್ಲಿ ನಡೆದುಕೊಳ್ಳುವಂತೆ ನಿನ್ನ ವಿಷಯದಲ್ಲಿಯೂ ನಡೆದು ಕೊಳ್ಳುತ್ತಿದ್ದಳು. ಅಂತಹವಳ ಮಗನಾದ, ಮಹಾತ್ಮನಾದ ಶ್ರೀರಾಮನನ್ನು ಜಟಾವಲ್ಕಲಧರನನ್ನಾಗಿ ಮಾಡಿ ವನವಾಸಮಾಡಲು ಅರಣ್ಯಕ್ಕೆ ಕಳುಹಿಸಿ ಕೊಟ್ಟ ನಂತರವೂ ಪಾಪಿಷ್ಠೆಯಾದ ನಿನಗೆ ದುಃಖವಾಗುತ್ತಿಲ್ಲವೇ? ಪಾಪವೆಂದರೇನೆಂಬುದನ್ನೇ ಅರಿಯದ, ಮಹಾಶೂರನಾದ, ಮಹಾತ್ಮನಾದ, ಯಶೋವಂತನಾದ ಶ್ರೀರಾಮನನ್ನು ನಾರುಮಡಿಯುಡಿಸಿ ಕಾಡಿಗೆ ಕಳುಹಿಸುವ ಕಾರಣವಾದರೂ ಏನಿದ್ದಿತು? ಯಾವ ಕಾರಣದಿಂದ ನೀನವನನ್ನು ಕಳುಹಿಸಿದೆ?

ಲುಬ್ಧಯಾ ವಿದಿತೋ ಮನ್ಯೇ ನ ತೇಽಹಂ ರಾಘವಂ ಪ್ರತಿ ।
ತಥಾ ಹ್ಯನರ್ಥೋ ರಾಜ್ಯಾರ್ಥಂ ತ್ವಯಾ ನೀತೋ ಮಹಾನಯಮ್ ॥

ರಾಜ್ಯಲುಬ್ಧಳಾದ, ಐಶ್ವರ್ಯಲುಬ್ಧಳಾದ, ಅಧಿಕಾರಲುಬ್ಧಳಾದ ನಿನಗೆ ನಾನು ರಾಮನ ವಿಷಯದಲ್ಲಿ ಎಷ್ಟು ಪ್ರೀತ್ಯಾದರಗಳಿಂದಲೂ ಭಕ್ತಿಯಿಂದಲೂ ಇದ್ದೆನೆಂಬ ವಿಷಯವು ತಿಳಿದಿರಲಿಲ್ಲವೆಂದು ಭಾವಿಸುತ್ತೇನೆ. ಈ ಕಾರಣದಿಂದಲೇ ನೀನು ರಾಜ್ಯದ ಸಲುವಾಗಿ ಇಷ್ಟೊಂದು ಅನರ್ಥಗಳನ್ನು ಮಾಡಿರುವೆ.

ಪುರುಷಸಿಂಹರಾದ ರಾಮ-ಲಕ್ಷ್ಮಣರನ್ನು ನೋಡದೇ ಬೇರೆ ಯಾವ ಶಕ್ತಿಯ ಪ್ರಭಾವದಿಂದ ಈ ರಾಜ್ಯವನ್ನು ರಕ್ಷಿಸಲು ಸಮರ್ಥನಾಗುತ್ತೇನೆ? ನನ್ನ ಸಹೋದರರರೇ ನನ್ನ ಬಲವಮ್ಮ!

ತಂ ಹಿ ನಿತ್ಯಂ ಮಹಾರಾಜೋ ಬಲವನ್ತಂ ಮಹಾಬಲಃ ।
ಉಪಾಶ್ರಿತೋಽಭೂದ್ಧರ್ಮಾತ್ಮಾ ಮೇರುರ್ಮೇರುವನಂ ಯಥಾ॥

ಮೇರುಪರ್ವತವು ತನ್ನಿಂದಲೇ ವೃದ್ಧಿಹೊಂದಿದ ವನವನ್ನಾಶ್ರಯಿಸಿರು ವಂತೆ–ಮಹಾಬಲಿಷ್ಠನಾದ, ಧರ್ಮಾತ್ಮನಾದ ದಶರಥಮಹಾರಾಜನೇ

ಮಹಾಬಲಿಷ್ಠನಾದ ಶ್ರೀರಾಮನನ್ನು ಆಶ್ರಯಿಸಿ ರಾಜ್ಯವಾಳುತ್ತಿದ್ದನು. ಹೀಗಿರುವಾಗ ಆ ಮಹಾತ್ಮನಿಲ್ಲದೇ ದುರ್ಬಲನಾದ ನಾನು ಈ ರಾಜ್ಯವನ್ನಾಳಲು ಹೇಗೆ ತಾನೇ ಸಮರ್ಥನಾಗುವೆನು?*

ಮಹಾಭಾರದಿಂದ ಕೂಡಿರುವ ರಾಜ್ಯಭಾರವನ್ನು ಬಾಲಕನಾದ, ಸೋದರರಿಂದ ವಿಹೀನನಾದ ನಾನು ಹೇಗೆ ತಾನೇ ವಹಿಸಲಿ? ದೊಡ್ಡದಾದ ಎತ್ತು ಹೊರುವ ಭಾರವನ್ನು ಎಳೆಯದಾದ ಕರುವು ಹೊರಬಲ್ಲುದೇನಮ್ಮಾ? ನನ್ನಲ್ಲಿರುವ ಯಾವ ಶಕ್ತಿಯಿಂದ ಈ ರಾಜ್ಯಭಾರವನ್ನು ನಾನು ಹೊತ್ತುಕೊಳ್ಳಲಿ?

ಅಥವಾ ಮೇ ಭವೇಚ್ಛಕ್ತಿರ್ಯೋಗೈರ್ಬುದ್ಧಿಬಲೇನ ವಾ ।
ಸಕಾಮಾಂ ನ ಕರಿಷ್ಯಾಮಿ ತ್ವಾಮಹಂ ಪುತ್ರಗರ್ಧಿನೀಮ್ ॥೧೭॥

ಅಮ್ಮ! ಒಂದು ವೇಳೆ ನನಗೆ ರಾಜ್ಯವಾಳುವ ಸಾಮರ್ಥ್ಯವೂ ಇರಬಹುದು. ಉಪಾಯಗಳಿಂದಲೋ ಬುದ್ಧಿಬಲದಿಂದಲೋ ನಾನು ರಾಜ್ಯವಾಳುವ ಶಕ್ತಿಯನ್ನೂ ಹೊಂದಿರಬಹುದು. ಆದರೂ ಪುತ್ರವಾತ್ಸಲ್ಯವೊಂದನ್ನೇ ಪ್ರಧಾನವನ್ನಾಗಿಟ್ಟುಕೊಂಡು ಕಾರ್ಯಮಾಡಿರುವ ನಿನ್ನ ಮನೋಭಿಲಾಷೆಯನ್ನು ಖಂಡಿತವಾಗಿಯೂ ಪೂರ್ಣಗೊಳಿಸುವುದಿಲ್ಲ.

ನ ಮೇ ವಿಕಾಂಕ್ಷಾ ಜಾಯೇತ ತ್ಯಕ್ತುಂ ತ್ವಾಂ ಪಾಪನಿಶ್ಚಯಾಮ್ ।
ಯದಿ ರಾಮಸ್ಯ ನಾಪೇಕ್ಷಾ ತ್ವಯಿ ಸ್ಯಾನ್ಮಾತೃವತ್ಸದಾ ॥೧೮॥

ರಾಮನೇನಾದರೂ ನಿನ್ನನ್ನು ತನ್ನ ತಾಯಿಗೆ ಸಮಾನಳೆಂದು ಭಾವಿಸದೇ ಇದ್ದಿದ್ದರೆ—ಇಷ್ಟೊಂದು ಅನರ್ಥಗಳಿಗೆ ಕಾರಣಳಾದ ಪಾಪಿಷ್ಠೆಯಾದ ನಿನ್ನನ್ನು

---

*"ಮೇರುಪರ್ವತವು ಮೇರುಪರ್ವತದಲ್ಲಿರುವ ವನವನ್ನಾಶ್ರಯಿಸುವಂತೆ"—ಎಂಬ ಉಪಮಾನದ ಅಭಿಪ್ರಾಯವು ಈ ರೀತಿಯಾಗಿದೆ. ಮೇರುಪರ್ವತದಲ್ಲಿರುವ ವನವು ದುರ್ಗಮವಾದುದು. ಎಂತಹ ಮಹಾಶೂರರಿಂದಲೂ ಪ್ರವೇಶಿಸಲು ಅಸಾಧ್ಯವಾದುದು. ಇಂತಹ ದುರ್ಗಮವಾದ ವನವನ್ನು ಮೇರುಪರ್ವತವು ಹೊಂದಿರುವುದರಿಂದಲೇ ಮೇರುಪರ್ವತವನ್ನು ಆಕ್ರಮಣಮಾಡಲು ಶತ್ರುಗಳಾರೂ ಬರಲಾರರು. ಆದುದರಿಂದ ಮೇರುಪರ್ವತವು ತನ್ನಲ್ಲಿರುವ ವನದ ಆಶ್ರಯವನ್ನು ಪಡೆದು ಶತ್ರುಗಳಿಂದ ನಿರ್ಬಾಧಿತವಾಗಿರುತ್ತದೆ.

ಪರಿತ್ಯಾಗಮಾಡಿಬಿಡುತ್ತಿದ್ದೆನು. ಅದರಿಂದ ನನ್ನ ಮನಸ್ಸಿಗೆ ಯಾವ ವಿಧವಾದ ಆತಂಕವೂ ಉಂಟಾಗುತ್ತಿರಲಿಲ್ಲ. ಪಾಪಕಾರ್ಯಗಳಲ್ಲಿಯೇ ವಿಶೇಷವಾದ ದೃಷ್ಟಿಯುಳ್ಳವಳೇ! ಸತ್ಪುರುಷರ ಚಾರಿತ್ರ್ಯದಿಂದ ಭ್ರಷ್ಟಳಾದವಳೇ! ನಮ್ಮ ಪೂರ್ವಜರಿಂದ ತಿರಸ್ಕೃತವಾದ ಇಂತಹ ಬುದ್ಧಿಯು ನಿನ್ನಲ್ಲಿ ಹೇಗೆ ತಾನೇ ಹುಟ್ಟಿತು?

ಅಸ್ಮಿನ್ಕುಲೇ ಹಿ ಪೂರ್ವೇಷಾಂ ಜ್ಯೇಷ್ಠೋ ರಾಜ್ಯೇಽಭಿಷಿಚ್ಯತೇ ।
ಅಪರೇ ಭ್ರಾತರಸ್ತಸ್ಮಿನ್ ಪ್ರವರ್ತನ್ತೇ ಸಮಾಹಿತಾಃ ॥೨೦॥

ನಮ್ಮ ಕುಲದಲ್ಲಿ ಎಲ್ಲರಿಗಿಂತಲೂ ಜ್ಯೇಷ್ಠನಾದವನಿಗೇ ಪಟ್ಟಗಟ್ಟುತ್ತಾರೆ. ಉಳಿದ ಅವನ ತಮ್ಮಂದಿರು ಏಕಾಗ್ರಚಿತ್ತರಾಗಿ ಅಣ್ಣನನ್ನೇ ಅನುಸರಿಸಿಕೊಂಡಿರುತ್ತಾರಲ್ಲವೇ?*

ನಿರ್ದಯಳೇ! ರಾಜಧರ್ಮವೇನೆಂಬುದನ್ನು ನೀನು ತಿಳಿದವಳಾಗಿಲ್ಲ. ಅನಾದಿಕಾಲದಿಂದ ನಡೆದುಬಂದಿರುವ ರಾಜರ ಆಚಾರ-ವ್ಯವಹಾರಗಳೂ ನಿನಗೆ ತಿಳಿಯವು. ಸಾಮಾನ್ಯವಾಗಿ ನಮ್ಮ ಹಿಂದಿನ ಕ್ಷತ್ರಿಯರಾಜರ ಆಚಾರ-ವ್ಯವ ಹಾರಗಳನ್ನು ಪರಿಶೀಲಿಸಿದ್ದೇ ಆದರೆ–ಎಲ್ಲ ರಾಜಮನೆತನಗಳಲ್ಲಿಯೂ ಹಿರಿಯ ಮಗನಿಗೇ ರಾಜ್ಯಾಭಿಷೇಕವಾಗಿದೆ. ಇದು ಸಕಲಕ್ಷತ್ರಿಯರಿಗೂ ಸಮಾನ ಧರ್ಮ. ಈ ಧರ್ಮವು ಮುಖ್ಯವಾಗಿ ಇಕ್ಷ್ವಾಕುವಂಶದವರಲ್ಲಿ ವಿಶೇಷರೀತಿ ಯಲ್ಲಿಯೇ ನಡೆದುಕೊಂಡು ಬಂದಿದೆ. ಯಾರಿಗೆ ಧರ್ಮವೊಂದೇ ರಕ್ಷಾಕವಚ ವಾಗಿದ್ದಿತೋ ಮತ್ತು ಯಾರು ಕುಲೋಚಿತವಾದ ಸದಾಚಾರಪಾಲನೆ ಯಲ್ಲಿಯೇ ಶೋಭಿಸುತ್ತಿದ್ದರೋ–ಅಂತಹ ಇಕ್ಷ್ವಾಕುವಂಶದವರ ಚಾರಿತ್ರವಿಷ ಯಕವಾದ ಸ್ವಾಭಿಮಾನವು–ನಿನ್ನಂತಹವಳು ಆ ಮಹಾವಂಶಕ್ಕೆ ಸೇರಿದುದ

---

*ಪಿತ್ರಾರ್ಜಿತವಾದ ಆಸ್ತಿಯು ಜ್ಯೇಷ್ಠಪುತ್ರನಿಗೇ ಸಲ್ಲಬೇಕೆಂಬುದನ್ನು ಮನುಸ್ಮೃತಿ ಯಲ್ಲಿ ಬಹುಸ್ಪಷ್ಟವಾಗಿಯೇ ಹೇಳಿದ್ದಾರೆ : "ಜ್ಯೇಷ್ಠ ಏವ ತು ಗೃಹ್ಣೀಯಾತ್ ಪಿತ್ರ್ಯಂ ಧನಮಶೇಷತಃ । ಶೇಷಾಸ್ತಮನುಜೀವೇಯುರ್ಯಥೈವ ಪಿತರಂ ತಥಾ ॥" ತಂದೆಯ ಸಂಬಂಧವಾದ ಸಕಲೈಶ್ವರ್ಯಗಳನ್ನೂ ಹಿರಿಯ ಮಗನೇ ತೆಗೆದುಕೊಳ್ಳಬೇಕು. ಉಳಿದ ಮಕ್ಕಳು ತಂದೆಯನ್ನು ಅನುಸರಿಸುತ್ತಿದ್ದಂತೆ ತಮ್ಮ ಹಿರಿಯಣ್ಣನನ್ನು ಅನುಸರಿಸಬೇಕು. ಹಿರಿಯಣ್ಣನೂ ತನ್ನ ತಮ್ಮಂದಿರನ್ನು ತನ್ನ ಮಕ್ಕಳಂತೆಯೇ ನೋಡಿಕೊಳ್ಳಬೇಕು.

ರಿಂದ ನಷ್ಟವಾಗಿ ಹೋಯಿತು. ನಿನ್ನ ಪೂರ್ವಜರೂ ಮಹಾ ಭಾಗ್ಯಶಾಲಿಗಳಾದ, ಸದಾಚಾರಸಂಪನ್ನರಾದ ರಾಜರೇ ಆಗಿದ್ದರು. ಅಂತಹವರ ವಂಶದಲ್ಲಿ ಹುಟ್ಟಿರುವ ನಿನ್ನ ಬುದ್ಧಿಯು ಏಕೆ ಮೋಹ ವಶವಾಯಿತು? ನಿಂದ್ಯವಾದ ಸಂಕಲ್ಪವು ನಿನ್ನ ಬುದ್ಧಿಯಲ್ಲಿ ಹೇಗೆ ಹುಟ್ಟಿತು? ಪಾಪಸಂಕಲ್ಪಳೇ! ನಿನ್ನ ಕಾಮನೆಯನ್ನು ಮಾತ್ರ ನಾನು ಆಗಗೊಡುವುದಿಲ್ಲ. ನನ್ನ ಜೀವಿತಕ್ಕೇ ಆತಂಕಕಾರಿಯಾದ ವ್ಯಸನವೊಂದನ್ನು ನೀನು ಕಲ್ಪಿಸಿರುವೆ. ಈಗ ನಾನು ನಿನ್ನ ಇಚ್ಛೆಗೆ ವ್ಯತಿರಿಕ್ತವಾಗುವುದನ್ನೇ ಮಾಡುತ್ತೇನೆ. ನಿನಗೆ ಬೇಡವಾದುದನ್ನು ಮಾಡುವ ಸಲುವಾಗಿ ನಾನೀಗಲೇ ಕಾಡಿಗೆ ಹೋಗಿ ಪಾಪರಹಿತನಾದ ಸ್ವಜನಪ್ರಿಯನಾದ ನಮ್ಮಣ್ಣನನ್ನು ಅರಣ್ಯದಿಂದ ಕರೆತರುತ್ತೇನೆ. ಅವನನ್ನು ಅಯೋಧ್ಯೆಗೆ ಕರೆತಂದು ಸುಪ್ರತಿಷ್ಠಿತವಾದ ಅಂತಃಕರಣದಿಂದಲೇ ದೇದೀಪ್ಯಮಾನವಾದ ತೇಜಸ್ಸುಳ್ಳ ಶ್ರೀರಾಮನಿಗೆ ದಾಸನಾಗಿ ಅವನ ಸೇವೆಯನ್ನು ಮಾಡುತ್ತೇನೆ."

ಹೀಗೆ ಮಹಾತ್ಮನಾದ ಭರತನು ಹೇಳಿ, ಅಪ್ರಿಯವಾಗುವಂತಹ ಅನೇಕ ಮಾತುಗಳಿಂದ ಅವಳನ್ನು ಚುಚ್ಚುತ್ತಾ ಶೋಕದಿಂದ ಉದ್ವಿಗ್ನನಾಗಿ ಮಂದರಪರ್ವತದ ಗುಹೆಯಲ್ಲಿರುವ ಸಿಂಹವು ಗರ್ಜನೆಮಾಡುವಂತೆ– ಗರ್ಜನೆಮಾಡುತ್ತಾ ತಾಯಿಯನ್ನು ತೆಗಳುತ್ತಿದ್ದನು.

೭೩ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೭೪ನೆಯ ಸರ್ಗ

ಭರತನು ಕೈಕೇಯಿಯನ್ನು ಬಹಳವಾಗಿ ನಿಂದಿಸಿದುದು

ತಾಂ ತಥಾ ಗರ್ಹಯಿತ್ವಾ ತು ಮಾತರಂ ಭರತಸ್ತದಾ ।
ರೋಷೇಣ ಮಹತಾವಿಷ್ಟಃ ಪುನರೇವಾಬ್ರವೀದ್ವಚಃ ॥೧॥

ಹೀಗೆ ಭರತನು ತಾಯಿಯನ್ನು ಬಹುವಾಗಿ ನಿಂದಿಸಿದರೂ ಅವನ ಕೋಪವು ಕಡಿಮೆಯಾಗಲಿಲ್ಲ. ಅತ್ಯಂತಕೋಪಿಷ್ಠನಾಗಿದ್ದ ಭರತನು ಪುನಃ ತಾಯಿಯನ್ನು ನಿಂದಿಸತೊಡಗಿದನು :

ರಾಜ್ಯಾದ್ಭ್ರಂಶಸ್ವ ಕೈಕೇಯಿ ನೃಶಂಸೇ ದುಷ್ಟಚಾರಿಣಿ ।
ಪರಿತ್ಯಕ್ತಾ ಚ ಧರ್ಮೇಣ ಮಾ ಮೃತಂ ರುದತೀ ಭವ ॥೨॥

"ಪಾಪಿಷ್ಠಳೇ! ಕ್ರೂರಸ್ವಭಾವದವಳೇ! ದುಷ್ಟಚಾರಿಣಿಯೇ! ನಿನ್ನನ್ನು ಧರ್ಮವೇ ಪರಿತ್ಯಜಿಸಿದೆ. ಆದುದರಿಂದ ನೀನೀಗಲೇ ರಾಜ್ಯವನ್ನು ಬಿಟ್ಟು ಹೊರಟುಹೋಗು. ನೀನು ಈ ರಾಜ್ಯದಲ್ಲಿರಲು ಖಂಡಿತವಾಗಿಯೂ ಯೋಗ್ಯಳಲ್ಲ. ನನ್ನನ್ನು ಸತ್ತುಹೋದೆನೆಂದೇ ಭಾವಿಸಿ ಜೀವಪರ್ಯಂತವಾಗಿ ಗೋಳಾಡುತ್ತಲೇ ಇರು.*

ದುಷ್ಟಚರಿತಳೇ! ಪರಮಧಾರ್ಮಿಕನಾದ ರಾಮನಾಗಲೀ, ದಶರಥನಾಗಲೀ ನಿನ್ನ ವಿಷಯದಲ್ಲಿ ಒಂದು ಬಿರುನುಡಿಯನ್ನಾದರೂ ಆಡಿರುವರೇ? ನಿನ್ನ ಆಚರಣೆಯಿಂದಾಗಿ ಒಬ್ಬನಿಗೆ ಮೃತ್ಯುವೂ–ಮತ್ತೊಬ್ಬನಿಗೆ ವನವಾಸವೂ ಏಕಕಾಲದಲ್ಲಿ ಉಂಟಾಯಿತು.

ಭ್ರೂಣಹತ್ಯಾಮಸಿ ಪ್ರಾಪ್ತಾ ಕುಲಸ್ಯಾಸ್ಯ ವಿನಾಶನಾತ್ ।
ಕೈಕೇಯಿ ನರಕಂ ಗಚ್ಛ ಮಾ ಚ ಭರ್ತುಃ ಸಲೋಕತಾಮ್ ॥೪॥

ಪತಿಯನ್ನೂ ಕೊಂದು ರಾಮನನ್ನೂ ಕಾಡಿಗೆ ಓಡಿಸಿ ಕುಲವನ್ನೇ ವಿನಾಶಗೊಳಿಸಿರುವ ಕಾರಣ ಭ್ರೂಣಹತ್ಯಾಪಾಪಕ್ಕೆ ನೀನು ಗುರಿಯಾಗುವೆ. ಈ ಪಾಪದ ಫಲವಾಗಿ ನೀನು ನರಕಕ್ಕೆ ಹೋಗು. ನಿನ್ನ

---

*"ಮೃತಂ ಭರ್ತಾರಮುದ್ದಿಶ್ಯ – ಮರಣಹೊಂದಿರುವ ಪತಿಯನ್ನು ಕುರಿತು, ರುದತೀ ಮಾ ಭವ–ಗೋಳಿಡುತ್ತಿರಬೇಡ. ಏಕೆಂದರೆ ನಿನ್ನಲ್ಲಿ ಭಾರ್ಯೆಯ ಭಾವವೇ ನಷ್ಟವಾಗಿ ಹೋಗಿದೆ." ಹೀಗೆಂದು ಒಬ್ಬರು ವ್ಯಾಖ್ಯಾನಮಾಡಿರುತ್ತಾರೆ. ಇದು ಅಷ್ಟು ಸಮಂಜಸವಲ್ಲವೆಂದು ನಮ್ಮ ಅಭಿಪ್ರಾಯವಾಗಿದೆ. ಏಕೆಂದರೆ : ಈ ಹಿಂದೆ ಮಗನೊಡನೆ ಕೈಕೇಯಿಯು ಒಮ್ಮೆಯಾದರೂ ಪತಿಯು ಗತಿಸಿರುವುದಕ್ಕಾಗಿ ದುಃಖವನ್ನು ವ್ಯಕ್ತಪಡಿಸಿಲ್ಲ. ಆದುದರಿಂದ ಭರತನು "ಪತಿಗಾಗಿ ಅಳಬೇಡ" – ಎಂದು ಹೇಳುವ ಕಾರಣವೇ ಇಲ್ಲ. ರೋಷಾವೇಶದಲ್ಲಿ "ನನ್ನ ಪಾಲಿಗೆ ನೀನು ಸತ್ತುಹೋದಂತೆ ; ಅಥವಾ ನಿನ್ನ ಪಾಲಿಗೆ ನಾನು ಸತ್ತುಹೋದಂತೆ" – ಎಂಬ ಮಾತನ್ನು ಈಗಲೂ ನಾವು ಕೇಳುತ್ತಿರುತ್ತೇವೆ. ಆದುದರಿಂದ ಭರತನು ತನ್ನ ತಾಯಿಗೆ "ಮೃತಂ ಮಾಂ ಮತ್ವಾ ರುದತೀ ಭವ–ನಾನು ಸತ್ತುಹೋದೆನೆಂದು ಭಾವಿಸಿ ಗೋಳಿಡುತ್ತಾ ಇಲ್ಲಿಂದ ತೊಲಗು" ಎಂದು ಹೇಳುವುದೇ ಪ್ರಕೃತಸಂದರ್ಭದಲ್ಲಿ ಸಮಂಜಸವಾಗಿ ಕಾಣುತ್ತದೆ.

ಪತಿಯು ಹೋಗಿರುವ ಉತ್ತಮಲೋಕಗಳಿಗೆ ನೀನು ಹೋಗದಂತಾಗಲಿ. ಘೋರವಾದ ಎರಡು ಕ್ರೂರಕರ್ಮಗಳನ್ನೂ ಒಂದೇ ಬಾರಿಗೆ ಮಾಡಿ ನೀನು ಈ ವಿಧವಾದ ಪಾಪಕ್ಕೆ ಗುರಿಯಾಗಿರುವೆ. ಸರ್ವಲೋಕಕ್ಕೂ ಪ್ರಿಯನಾದ ರಾಮನನ್ನು ಅರಣ್ಯಕ್ಕೆ ಕಳುಹಿಸಿದುದರಿಂದ ನಾನೂ ನಿನ್ನ ಈ ಕ್ರೂರಕರ್ಮದಲ್ಲಿ ಭಾಗಿಯಾಗಿರುವೆನೆಂಬ ಆಪಾದನೆಯೂ ಬರಬಹುದೆಂಬ ಭಯವು ನನಗುಂಟಾಗಿದೆ. ನಿನ್ನ ಸಲುವಾಗಿ ನನ್ನ ತಂದೆಯು ಅಸುನೀಗಿದನು. ರಾಮನೂ ಕಾಡಿಗೆ ಹೋದನು. 'ತಾಯಿಯ ಮೂಲಕ ಏಕಕಾಲದಲ್ಲಿ ತನ್ನ ತಂದೆಯನ್ನೂ ವಿನಾಶಗೊಳಿಸಿ ಧರ್ಮಾತ್ಮನಾದ ಅಣ್ಣನನ್ನೂ ಅರಣ್ಯಕ್ಕೆ ಅಟ್ಟಿದನು' – ಎಂಬ ಅಪಯಶಸ್ಸಿಗೆ ನಾನು ಗುರಿಯಾದೆನು.

ಮಾತೃರೂಪೇ ಮಮಾಮಿತ್ರೇ ನೃಶಂಸೇ ರಾಜ್ಯಕಾಮುಕೇ ।
ನ ತೇಽಹಮಭಿಭಾಷ್ಯೋಽಸ್ಮಿ ದುರ್ವೃತ್ತೇ ಪತಿಘಾತಿನಿ ॥೭॥

ನೀನು ತಾಯಿಯ ರೂಪದಲ್ಲಿರುವೆಯೇ ಹೊರತು ನಿನ್ನಲ್ಲಿ ನಿಜವಾದ ತಾಯಿಯ ಸ್ವಭಾವವಿಲ್ಲ. ನನಗೆ ಅಪ್ರಿಯವಾದ ಕಾರ್ಯವನ್ನು ಮಾಡಿರುವುದರಿಂದ ನೀನು ನನಗೆ ಶತ್ರುವೇ ಆಗಿರುವೆ. ರಾಜ್ಯದ ಲೋಭದಿಂದಾಗಿ ನೀನು ಅತ್ಯಂತಕ್ರೂರಿಯಾಗಿರುವೆ. ದುಶ್ಚರಿತ್ರಳೇ! ಪತಿಘಾತಿನಿಯೇ! ನಿನ್ನೊಡನೆ ನಾನಿನ್ನು ಮಾತನಾಡುವುದಿಲ್ಲ.

ಕುಲದೂಷಿಣಿಯಾದ ನಿನ್ನನ್ನು ಸವತಿಯನ್ನಾಗಿ ಪಡೆದ ಕೌಸಲ್ಯಾ-ಸುಮಿತ್ರೆಯರೂ, ಇತರ ನನ್ನ ತಾಯಂದಿರೂ ನಿನ್ನ ಈ ದುಷ್ಕಾರ್ಯದಿಂದಾಗಿ ಮಹತ್ತರವಾದ ದುಃಖಕ್ಕೆ ಈಡಾಗಿದ್ದಾರೆ. ಧರ್ಮಜ್ಞನಾದ ಮತ್ತು ಧೀಮಂತನಾದ ಅಶ್ವಪತಿಗೆ ನೀನು ಮಗಳಾಗಿ ಹುಟ್ಟಲು ಖಂಡಿತವಾಗಿಯೂ ಅರ್ಹಳಲ್ಲ. ರಾಕ್ಷಸೀಬುದ್ಧಿಯಿಂದ ಕೂಡಿರುವ ನೀನು ಪವಿತ್ರವಾದ ಅಶ್ವಪತಿಯ ಕುಲದಲ್ಲಿ ಜನಿಸಿ ಆ ವಂಶಕ್ಕೂ ಕಳಂಕವನ್ನು ತಂದೆ. ನಮ್ಮ ತಂದೆಯ ಕುಲವನ್ನೂ ನಾಶಮಾಡಿದೆ.

ಅಯ್ಯೋ! ನಿನ್ನ ಕ್ರೂರಕರ್ಮವನ್ನು ಎಷ್ಟೆಂದು ಹೇಳಲಿ? ಧಾರ್ಮಿಕನಾದ ಸದಾ ಸತ್ಯಪರಾಯಣನಾದ ರಾಮನನ್ನು ಅರಣ್ಯಕ್ಕಟ್ಟಿದೆ. ಪುತ್ರವಿಯೋಗದುಃಖದಿಂದ ತಂದೆಯು ಸ್ವರ್ಗಸ್ಥನಾದನು. ಕೈಕೇಯಿ! ನೀನು

ಪಾಪಕರ್ಮವೇ ಪ್ರಧಾನವಾಗಿ ಉಳ್ಳವಳು. ನಾನು ನಿನ್ನ ಮಗನೇ ಆಗಿರುವುದರಿಂದ ನೀನು ಮಾಡಿದ ಪಾಪವು ನನಗೂ ಅಂಟಿಕೊಂಡಿತು. ತಂದೆಯನ್ನಗಲಿದೆನು. ರಾಮ-ಲಕ್ಷ್ಮಣರೂ ನನ್ನನ್ನು ಪರಿತ್ಯಜಿಸಿದರು. ಸಮಸ್ತ ಜಗತ್ತಿಗೂ ನಾನು ಅಪ್ರಿಯನೂ ಆದೆನು. ಧರ್ಮಾತ್ಮಳಾದ ಕೌಸಲ್ಯಾದೇವಿಯನ್ನೂ ಪತಿ-ಪುತ್ರರಿಂದ ವಿಹೀನಳನ್ನಾಗಿ ಮಾಡಿರುವ, ಪಾಪಬುದ್ಧಿಯಿಂದ ಕೂಡಿರುವ, ನರಕದ ಮಾರ್ಗವನ್ನನುಸರಿಸಿ ಹೊರಟಿರುವ ನೀನು ಯಾವ ಉತ್ತಮಲೋಕವನ್ನು ತಾನೇ ಪಡೆಯುವೆ? ಬಂಧುಗಳಿಗೆ ಆಶ್ರಯಭೂತನಾದ, ಕೌಸಲ್ಯೆಯ ಹೊಟ್ಟೆಯಲ್ಲಿ ಹುಟ್ಟಿರುವ, ನಮ್ಮ ತಂದೆಗೆ ಹಿರಿಯಮಗನಾದ, ನಮ್ಮೆಲ್ಲರಿಗೂ ಪಿತೃಸಮಾನನಾದ ಶ್ರೀರಾಮನನ್ನು ನೀನು ತಿಳಿಯೆಯಾ? ಅವನ ಗುಣ, ಸೌಶೀಲ್ಯ, ಸತ್ಯನಿಷ್ಠೆ, ಧರ್ಮಪರತೆ, ದಯೆ, ವಿನಯ—ಇವುಗಳೊಂದೂ ನಿನಗೆ ತಿಳಿಯದೇ ಹೋಯಿತೇ?

ಅಙ್ಗಪ್ರತ್ಯಙ್ಗಜಃ ಪುತ್ರೋ ಹೃದಯಾಚ್ಚಾಭಿಜಾಯತೇ ।
ತಸ್ಮಾತ್ಪ್ರಿಯತಮೋ ಮಾತುಃ ಪ್ರಿಯತ್ವಾನ್ನ ತು ಬಾನ್ಧವಃ ॥೧೪॥

ಮಾತಾ-ಪಿತೃಗಳ ಮುಖ, ವಕ್ಷಃಸ್ಥಳ, ಹೊಟ್ಟೆ, ಕೈ-ಕಾಲುಗಳು—ಇವೇ ಮುಂತಾದ ಅಂಗಗಳಿಂದಲೂ, ನೇತ್ರ-ನಾಸಿಕಾದಿ ಪ್ರತ್ಯಂಗಗಳಿಂದಲೂ, ಹೃದಯದಿಂದಲೂ ಮಕ್ಕಳು ಹುಟ್ಟುತ್ತಾರೆ.[1] ತಾಯಿಯ ಎಲ್ಲ ಅಂಗಗಳಿಂದ ಹೊರಬರುವ ತೇಜೋರೂಪವಾದ ಶೋಣಿತದಿಂದ[2] ಮಕ್ಕಳು ಹುಟ್ಟುತ್ತಾರೆ. ಆದುದರಿಂದಲೇ ಮಕ್ಕಳು ತಾಯಂದಿರಿಗೆ ಪ್ರಿಯ ತಮರಾಗಿರುತ್ತಾರೆ. ಬೇರೆಯ ಬಂಧುಗಳು ಅಷ್ಟು ಪ್ರಿಯರಾಗುವುದಿಲ್ಲ.

ತಾಯಿಗೆ ಮಕ್ಕಳ ಮೇಲೆ ಪುತ್ರವಾತ್ಸಲ್ಯವು ಹೇಗಿರುವುದೆಂಬುದಕ್ಕೆ ಹಿಂದೆ ನಡೆದ ಒಂದು ಇತಿಹಾಸವನ್ನು ಹೇಳುವೆನು : ಕೇಳು :

ಹಿಂದೊಂದು ಕಾಲದಲ್ಲಿ ಧರ್ಮಜ್ಞಳಾದ, ಸುರಸಮ್ಮಾನಿತಳಾದ ಕಾಮಧೇನುವು ಭೂಲೋಕದ ಕಡೆಗೆ ನೋಡಿದಾಗ ನೇಗಿಲಿಗೆ ಕಟ್ಟಲ್ಪಟ್ಟಿದ್ದ ತನ್ನ ಇಬ್ಬರು ಮಕ್ಕಳು (ಎರಡೆತ್ತುಗಳು) ನೇಗಿಲನ್ನು ಎಳೆಯಲಾರದೇ ಮೂರ್ಛಿತ

---

[1]ಅಙ್ಗಾದಙ್ಗಾತ್ಸಮ್ಭವಸಿ ಹೃದಯಾದಭಿಜಾಯಸೇ [2]ಯದೇತದ್ರೇತಸ್ತದೇತತ್ಸರ್ವೇಭ್ಯೋಽಙ್ಗೇಭ್ಯಸ್ತೇಜಃ ಸಂಭೂತಮ್ [ಶ್ರುತಿವಾಕ್ಯಗಳು]

ರಾಗಿರುವುದನ್ನು ಕಂಡಳು. ಮಧ್ಯಾಹ್ನದವರೆಗೂ ನೇಗಿಲನ್ನು ಎಳೆದ ಆಯಾಸದಿಂದ ಮೂರ್ಛೆಹೊಂದಿ ಬಿದ್ದಿದ್ದ ಎರಡು ಮಕ್ಕಳ ಮುಖವನ್ನು ನೋಡಿ ಕಾಮಧೇನುವಿಗೆ ಮಹತ್ತರವಾದ ದುಃಖವುಂಟಾಯಿತು. ಪುತ್ರ ಶೋಕದಿಂದ ಪರಿತಪಿಸುತ್ತಿದ್ದ ಕಾಮಧೇನುವು ಕಣ್ಣಿನಲ್ಲಿ ನೀರು ತುಂಬಿಕೊಂಡು ಗಳ-ಗಳನೆ ಅಳತೊಡಗಿದಳು. ಪುಣ್ಯಗಂಧಯುಕ್ತವಾಗಿದ್ದ ಕಣ್ಣೀರು ತನ್ನ ಮೇಲೆ ಬಿದ್ದುದನ್ನು ಕಂಡು ಕಣ್ಣೆತ್ತಿ ನೋಡಿದ ಇಂದ್ರನಿಗೆ ಕಂಬನಿಗರೆಯುತ್ತಿರುವವಳು ಪರಮಶ್ರೇಷ್ಠಳಾದ ಕಾಮಧೇನುವೆಂಬುದು ತಿಳಿಯಿತು. ಅವನು ಕಾಮಧೇನುವನ್ನು ದಿಟ್ಟಿಸಿ ನೋಡಿದಾಗ ಅವಳು ಬಹಳ ದುಃಖಿಸುತ್ತಿರುವುದನ್ನೂ, ಅತ್ಯಂತದೀನಳಾಗಿರುವುದನ್ನೂ, ಗಳ- ಗಳನೆ ಅಳುತ್ತಾ ಆಕಾಶದಲ್ಲಿ ನಿಂತಿರುವುದನ್ನೂ ಗಮನಿಸಿದನು. ಆ ವಿಚಿತ್ರ ದೃಶ್ಯವನ್ನು ನೋಡಿ ಇಂದ್ರನು ಉದ್ವಿಗ್ನನಾಗಿ ಶೋಕತಪ್ತಳಾಗಿದ್ದ ಕಾಮಧೇನುವಿನ ಬಳಿಗೆ ಹೋಗಿ ಕೈಮುಗಿದು ಹೇಳಿದನು :

"ಕಾಮಧೇನುವೇ! ದೇವತೆಗಳಾಗಿರುವ ನಮಗೆ ಯಾವ ಮಹಾ ಭಯವು ಸನ್ನಿಹಿತವಾಗಿದೆ? ಸರ್ವಹಿತೈಷಿಣಿಯೇ! ನಿನ್ನ ಈ ದುಃಖಕ್ಕೆ ಕಾರಣವೇನೆಂಬುದನ್ನು ಹೇಳು."

ಸುರರಾಜನು ಹೀಗೆ ಪ್ರಶ್ನಿಸಲು ಮಾತನಾಡುವುದರಲ್ಲಿ ಚತುರೆ ಯಾದ, ಧೀರೆಯಾದ ಕಾಮಧೇನುವು ಇಂದ್ರನಿಗೆ ಹೇಳಿದಳು :

ಶಾನ್ತಂ ಪಾಪಂ ನ ವಃ ಕಿಂಚಿತ್ಕುತಶ್ಚಿದಮರಾಧಿಪ ।
ಅಹಂ ತು ಮಗ್ನೌ ಶೋಚಾಮಿ ಸ್ವಪುತ್ರೌ ವಿಷಮೇ ಸ್ಥಿತೌ ॥೨೩॥

"ಅಮರಾಧಿಪನೇ! 'ಶಾಂತಂ ಪಾಪಂ ಶಾಂತಂ ಪಾಪಂ' ನೀನು ಮನಸ್ಸಿನಲ್ಲಿ ಭಾವಿಸಿದಂತೆ ದೇವತೆಗಳಿಗೆ ಅಮಂಗಳದ ಪ್ರಸಂಗವೇನೂ ಇಲ್ಲ. ನಮಗೆ ಯಾರಿಂದಲೂ ಯಾವ ವಿಧವಾದ ಭಯವೂ ಉಂಟಾಗಿಲ್ಲ. ಆದರೆ, ಅಲ್ಲಿ ನೋಡು ದೇವೇಂದ್ರ! ಆ ನನ್ನ ಎರಡು ಮಕ್ಕಳನ್ನು ನೋಡು. ಅವು ಶೋಕದಲ್ಲಿ ಮುಳುಗಿಹೋಗಿವೆ. ಬಹಳ ದಾರುಣವಾದ ಅವಸ್ಥೆಯಲ್ಲಿವೆ. ಬಹಳ ಕೃಶವಾಗಿವೆ. ದೀನವಾಗಿವೆ. ಸೂರ್ಯನ ತಾಪದಿಂದ ಬಳಲಿಹೋಗಿವೆ. ಇಂತಹ ದುಃಸ್ಥಿತಿಯಲ್ಲಿರುವ ಆ ನನ್ನ ಮಕ್ಕಳನ್ನು ಆ ರೈತನು ಕರುಣೆಯೇ

ಇಲ್ಲದೇ ಪ್ರಹರಿಸುತ್ತಿದ್ದಾನೆ. ಆ ದೃಶ್ಯವನ್ನು ನೋಡಿ ನನ್ನ ಎದೆಯೇ ಒಡೆದುಹೋಗುತ್ತಿರುವುದೋ ಎಂಬಂತೆ ಭಾಸವಾಗುತ್ತಿದೆ.

ಮಮ ಕಾಯಾತ್ಪ್ರಸೂತೌ ಹಿ ದುಃಖಿತೌ ಭಾರಪೀಡಿತೌ ।
ಯೌ ದೃಷ್ಟ್ವಾ ಪರಿತಪ್ಯೇಽಹಂ ನಾಸ್ತಿ ಪುತ್ರಸಮಃ ಪ್ರಿಯಃ ॥೨೫॥

ದೇವೇಂದ್ರ! ನನ್ನ ಶರೀರದಿಂದ ಹುಟ್ಟಿರುವ ಆ ಮಕ್ಕಳು ನೊಗದ ಭಾರದಿಂದ ಪೀಡಿತವಾಗಿವೆ. ಭಾರಪೀಡಿತವಾದ ಈ ನನ್ನ ಮಕ್ಕಳನ್ನು ನೋಡಿ ಪರಿತಪಿಸುತ್ತಿದ್ದೇನೆ. ಪುತ್ರನಿಗಿಂತಲೂ ಪ್ರಿಯನಾದವನಿಲ್ಲ.'

ಕಾಮಧೇನುವಿನ ಸಾವಿರಾರು ಮಕ್ಕಳು (ಎತ್ತುಗಳು) ಈ ವಿಶ್ವದಲ್ಲಿ ಸರ್ವತ್ರ ವ್ಯಾಪ್ತವಾಗಿವೆ. ಆದರೂ ಎರಡು ಎತ್ತುಗಳು ಕಷ್ಟಪಡು ತ್ತಿರುವುದನ್ನೂ, ಕಾಮಧೇನುವು ಅಳುತ್ತಿರುವುದನ್ನೂ ನೋಡಿ ಇಂದ್ರನು ಪುತ್ರನಿಗಿಂತಲೂ ಪರಮಪ್ರಿಯನಾದವನು ಬೇರೊಬ್ಬನಿಲ್ಲವೆಂದು ನಿರ್ಧ ರಿಸಿದನು."

ತಾಯೇ! ಅಪ್ರತಿಮವಾದ ಚಾರಿತ್ರ್ಯವುಳ್ಳ, ಕಾಂತಿಯುಕ್ತಳಾದ, ಸತ್ಯರೂಪವಾದ ಮುಖ್ಯಗುಣವನ್ನು ಹೊಂದಿರುವ ಸುರಭಿಯ ವಂಶದಲ್ಲಿ ಲೋಕಗಳನ್ನು ಉದ್ಧರಿಸುವ ಸಲುವಾಗಿ ಸ್ತ್ರೀ-ಪುರುಷರ ಸೇರುವಿಕೆಯೆಂಬ ಸರ್ವಸಾಧಾರಣವಾದ ಪ್ರವೃತ್ತಿಯಿಂದ ಸಾವಿರಾರು ಮಕ್ಕಳು ಈ ಪ್ರಪಂಚದಲ್ಲಿ ಹುಟ್ಟಿವೆ. ಹೀಗಿದ್ದರೂ ಕಾಮಧೇನುವಿಗೆ ಕಷ್ಟಪಡುತ್ತಿರುವ ತನ್ನ ಎರಡು ಮಕ್ಕಳ ವಿಷಯದಲ್ಲಿ ಅನುಕಂಪವುಂಟಾಗಿ ಗೋಳಿಟ್ಟಳು. ಹೀಗಿರುವಾಗ ಒಬ್ಬನೇ ಮಗನಾದ ರಾಮನಿಲ್ಲದಿದ್ದರೆ ಕೌಸಲ್ಯೆಯು ಹೇಗೆ ಜೀವಿಸಿರುವಳು? ಕೌಸಲ್ಯೆಯು ಏಕಮಾತ್ರಪುತ್ರಳು. ಸಾಧುಸ್ವಭಾವದವಳು. ಅಂತಹವಳನ್ನು ನೀನು ಕರುವಿನಿಂದ ದೂರೀಕರಿಸಲ್ಪಟ್ಟ ಹಸುವಿನಂತೆ ಪುತ್ರವಿಹೀನಳನ್ನಾಗಿ ಮಾಡಿಬಿಟ್ಟಿರುವೆ. ಆದುದರಿಂದ ನಿನ್ನ ಈ ದುಷ್ಕಾರ್ಯದ ಫಲವಾಗಿ ಇಹ-ಪರಗಳೆರಡರಲ್ಲಿಯೂ ಸತತವಾಗಿ ದುಃಖವನ್ನೇ ಅನುಭವಿಸುವೆ. ನಾನಾ ದರೋ ಈ ಹಿಂದೆ ಹೇಳಿದಂತೆ ನಿನ್ನ ಬಯಕೆಯನ್ನು ಖಂಡಿತವಾಗಿಯೂ ಪೂರ್ಣಗೊಳಿಸುವುದಿಲ್ಲ. ರಾಜ್ಯಪ್ರದಾನದಿಂದ ಅಣ್ಣನ ಪೂಜೆಯನ್ನೂ– ಅಂತ್ಯೇಷ್ಟಿಸಂಸ್ಕಾರಗಳ ಮೂಲಕವಾಗಿ ತಂದೆಯ ಪೂಜೆಯನ್ನೂ ಮಾಡು ವೆನು. ಹೀಗೆ ಮಾಡುವುದರಿಂದ ನನ್ನ ಯಶಸ್ಸೂ ವರ್ಧಿಸುತ್ತದೆ. ಇದರಲ್ಲಿ

ಸಂದೇಹವೇ ಇಲ್ಲ. ಕೌಸಲ್ಯೆಯ ಪ್ರಿಯಪುತ್ರನಾದ, ಮಹಾಬಾಹುವಾದ, ಮಹಾಬಲನಾದ ಶ್ರೀರಾಮನನ್ನು ಅಯೋಧ್ಯೆಗೆ ಕರೆತಂದು ಋಷಿ-ಮಹರ್ಷಿಗಳಿಂದ ಸೇವಿಸಲ್ಪಡುತ್ತಿರುವ ಅರಣ್ಯದಲ್ಲಿ ನಾನೇ ವಾಸ ಮಾಡುತ್ತೇನೆ. ಪಾಪಸಂಕಲ್ಪಳೇ! ಪರಮಪಾಪಿಷ್ಠಳೇ! ನೀನು ಮಾಡಿದ ರಾಮನಿವಾಸನರೂಪವಾದ ಪಾಪಕಾರ್ಯವನ್ನು ಸಹಿಸಲು ನನ್ನಿಂದಂತೂ ಸಾಧ್ಯವಿಲ್ಲ. ಪ್ರಜೆಗಳು ಶ್ರೀರಾಮನ ವಿಯೋಗದುಃಖದಿಂದ ಕಂಬನಿ ಗರೆಯುತ್ತಾ ಗದ್ಗದಧ್ವನಿಯಿಂದ ಮಾತನಾಡಲಾಗದೇ ನನ್ನನ್ನೇ ದಿಟ್ಟಿಸಿ ನೋಡುತ್ತಿರುವುದನ್ನು ಹೇಗೆತಾನೇ ಸಹಿಸಿಕೊಳ್ಳಲಿ?

ಇಂತಹ ಮಹಾಪಾಪಕಾರ್ಯವನ್ನು ಮಾಡಿರುವ ನಿನಗೆ ಸಾಯುವುದರ ಹೊರತಾಗಿ ಬೇರೆ ಮಾರ್ಗವೇ ಇಲ್ಲ.

ಸಾ ತ್ವಮಗ್ನಿಂ ಪ್ರವಿಶ ವಾ ಸ್ವಯಂ ವಾ ವಿಶ ದಣ್ಡಕಾನ್ ।
ರಜ್ಜುಂ ಬಧಾನ ವಾ ಕಣ್ಠೇ ನ ಹಿ ತೇಽನ್ಯತ್ಪರಾಯಣಮ್ ॥೩೩॥

ಬೆಂಕಿಯಲ್ಲಾದರೂ ಬೀಳು. ಯಾರ ಕಣ್ಣಿಗೂ ಕಾಣಿಸದಂತೆ ಕಾಡಿಗಾದರೂ ಹೊರಟುಹೋಗು. ಕುತ್ತಿಗೆಗೆ ನೇಣುಹಾಕಿಕೊಂಡಾದರೂ ಸತ್ತುಹೋಗು. ಇವುಗಳನ್ನು ಬಿಟ್ಟು ಬೇರೆ ಯಾವ ಮಾರ್ಗವೂ ನಿನಗಿಲ್ಲ.

ಸತ್ಯಪರಾಕ್ರಮನಾದ ರಾಮನು ಅಯೋಧ್ಯೆಗೆ ಬಂದುಬಿಟ್ಟರೆ ನಿನ್ನ ಹೊಟ್ಟೆಯಲ್ಲಿ ಹುಟ್ಟಿರುವುದರಿಂದ ಪ್ರಾಪ್ತವಾಗಿರುವ ಕಲ್ಮಷವನ್ನು ತೊಡೆದು ಕೊಂಡು ನಾನೂ ಕೃತಕೃತ್ಯನಾಗುತ್ತೇನೆ."

ಹೀಗೆ ತಾಯಿಯನ್ನು ನಿಂದಿಸುತ್ತಿದ್ದ ಭರತನು ಸರ್ಪವು ಬುಸುಗುಟ್ಟು ವಂತೆ ಸುದೀರ್ಘವಾಗಿ ನಿಟ್ಟುಸಿರುಬಿಡುತ್ತಾ–ಅರಣ್ಯದಲ್ಲಿರುವ ಆನೆಯು ಅಂಕುಶ-ತೋಮರಗಳಿಂದ ಪೆಟ್ಟುತಿಂದು ಕೆಳಗೆ ಬೀಳುವಂತೆ–ದುಃಖಾಧಿಕ್ಯ ದಿಂದ ಭೂಮಿಯ ಮೇಲೆ ಬಿದ್ದನು. ಆ ಸಮಯದಲ್ಲಿ ಭರತನ ಕಣ್ಣುಗಳು ಕೆಂಪಾಗಿದ್ದುವು. ಉಟ್ಟಿದ್ದ ಬಟ್ಟೆಗಳೆಲ್ಲವೂ ಮಲಿನವಾಗಿದ್ದುವು. ತೊಟ್ಟಿದ್ದ ಆಭರಣಗಳೆಲ್ಲವೂ ಕಳಚಿ ಕೆಳಗೆ ಬಿದ್ದಿದ್ದುವು. ಭೂಮಿಯ ಮೇಲೆ ಬಿದ್ದಿದ್ದ

ರಾಜಪುತ್ರನಾದ ಭರತನು ಉತ್ಸವದ ಕೊನೆಯಲ್ಲಿ ಮುದುರಿ ಬಿದ್ದಿರುವ ಇಂದ್ರನ ಧ್ವಜದಂತೆಯೇ ಕಾಣುತ್ತಿದ್ದನು.

೭೪ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೭೫ನೆಯ ಸರ್ಗ

ಕೌಸಲ್ಯೆಯ ಮುಂದೆ ಭರತನ ಶಪಥ

ದೀರ್ಘಕಾಲಾತ್ಸಮುತ್ಥಾಯ ಸಂಜ್ಞಾಂ ಲಬ್ಧ್ವಾ ಚ ವೀರ್ಯವಾನ್ ।
ನೇತ್ರಾಭ್ಯಾಮಶ್ರುಪೂರ್ಣಾಭ್ಯಾಂ ದೀನಾಮುದ್ವೀಕ್ಷ್ಯ ಮಾತರಮ್ ।
ಸೋಽಮಾತ್ಯಮಧ್ಯೇ ಭರತೋ ಜನನೀಮಭ್ಯಕುತ್ಸಯತ್ ॥೧॥

ಬಹಳ ಕಾಲಾನಂತರದಲ್ಲಿ ಮೂರ್ಛೆಯಿಂದ ಎಚ್ಚೆತ್ತ ಭರತನು, ಆಶಾಭಂಗದಿಂದ ಅತ್ಯಂತದೀನಳಾಗಿದ್ದ ತಾಯಿಯನ್ನು ಕಂಬನಿದುಂಬಿದ ಎರಡು ಕಣ್ಣುಗಳಿಂದಲೂ ನೋಡುತ್ತಾ ನೆರೆದಿದ್ದ ಅಮಾತ್ಯರ ಮಧ್ಯದಲ್ಲಿ ಪುನಃ ತಾಯಿಯನ್ನು ನಿಂದಿಸಿದನು.*

ಭರತನು ಸುತ್ತಲೂ ಇದ್ದ ಅಮಾತ್ಯರಿಗೆ ಹೇಳಿದನು :

"ನನಗೆ ರಾಜ್ಯವಾಳುವ ಇಚ್ಛೆಯಿಲ್ಲ. ಈ ವಿಷಯದಲ್ಲಿ ನಾನು ನನ್ನ ತಾಯಿಯೊಡನೆ ಸಮಾಲೋಚನೆಯನ್ನು ನಡೆಸಬೇಕಾಗಿಯೂ ಇಲ್ಲ. ರಾಜನು ಪಟ್ಟಾಭಿಷೇಕದ ವಿಷಯವಾಗಿ ಏನು ನಿರ್ಧರಿಸಿದ್ದನೆಂಬ ವಿಷಯವೂ ನನಗೆ ತಿಳಿಯದು. ಶತ್ರುಘ್ನಸಹಿತನಾಗಿ ನಾನು ಬಹಳ ದೂರವಿರುವ ದೇಶದಲ್ಲಿ ಇದ್ದುಬಿಟ್ಟೆನು. ಮಹಾತ್ಮನಾದ ರಾಮನ ವನವಾಸದ ವಿಷಯವೂ ನನಗೆ ತಿಳಿಯದು ಸೀತಾ-ಸೌಮಿತ್ರಿಯರೂ ರಾಮನ ಜೊತೆಯಲ್ಲಿ ಕಾಡಿಗೆ ಹೋಗಿರುವ ವಿಷಯವೂ ನನಗೆ ಗೊತ್ತಿಲ್ಲ."

ಹೀಗೆ ಅಮಾತ್ಯರ ಮಧ್ಯದಲ್ಲಿ ಕೂಗಾಡುತ್ತಿದ್ದ ಮಹಾತ್ಮನಾದ ಭರತನ ಧ್ವನಿಯನ್ನು ಕೇಳಿ ಕೌಸಲ್ಯೆಯು ಸುಮಿತ್ರೆಗೆ ಹೇಳಿದಳು :

---

*ಭರತನು ಬಂದಿರುವುದನ್ನು ತಿಳಿದು ಅಮಾತ್ಯರೆಲ್ಲರೂ ಕೈಕೇಯಿಯ ಅಂತಃಪುರಕ್ಕೆ ಸಮಾಲೋಚನೆಗಾಗಿ ಸೇರಿದ್ದರೆಂಬುದನ್ನು ಸಂದರ್ಭಾನುಸಾರವಾಗಿ ಊಹಿಸಬಹುದಾಗಿದೆ.

“ಸುಮಿತ್ರೇ! ಕ್ರೂರಕರ್ಮಳಾದ ಕೈಕೇಯಿಯ ಮಗನು ಬಂದಿರುವಂತೆ ಕಾಣುತ್ತದೆ. ದೀರ್ಘದರ್ಶಿಯಾದ ಅವನನ್ನು ನಾನೀಗಲೇ ಕಾಣ ಬೇಕೆಂದಿರುವೆನು.”

ಪುತ್ರಶೋಕದಿಂದ ಬಹಳ ಕೃಶಳೂ, ಕಾಂತಿಹೀನಳೂ, ಮಲಿನಳೂ ಆಗಿದ್ದ ಕೌಸಲ್ಯಾದೇವಿಯು ಸುಮಿತ್ರೆಗೆ ಹೀಗೆ ಹೇಳಿ ಥರ-ಥರನೆ ನಡುಗುತ್ತಾ ಬುದ್ಧಿಗೆಟ್ಟವಳಂತೆ ಭರತನಿರುವೆಡೆಗೆ ಹೊರಟಳು. ಇತ್ತಲಾಗಿ ಭರತನು ಕೂಡ ಸುತ್ತಲೂ ಇದ್ದ ಅಮಾತ್ಯರಿಗೆ ತನ್ನ ನಿರ್ಧಾರವನ್ನು ತಿಳಿಸಿ ಶತ್ರುಘ್ನನೊಡನೆ ಕೌಸಲ್ಯೆಯ ಅಂತಃಪುರದ ಕಡೆಗೆ ಹೊರಟನು. ಆ ವೇಳೆಗೆ ಸರಿಯಾಗಿ ಅಂತಃಪುರದಿಂದ ಹೊರಬಿದ್ದ ಭರತ-ಶತ್ರುಘ್ನರನ್ನು ಕಂಡೊಡನೆಯೇ ಮೂರ್ಛಿತಳಾಗಿ ಕೆಳಗೆ ಬಿದ್ದ ಕೌಸಲ್ಯಾದೇವಿಯನ್ನು ಕಂಡು ಇಬ್ಬರೂ ಮುಂದೆ ಧಾವಿಸಿ ಹಿಡಿದೆತ್ತಿ ದುಃಖಪೀಡಿತಳಾಗಿದ್ದ ತಾಯಿಯನ್ನು ತಬ್ಬಿಕೊಂಡರು. ಭರತ-ಶತ್ರುಘ್ನರು ಕೌಸಲ್ಯೆಯನ್ನು ನೋಡಿ ಅಳುತ್ತಿದ್ದರು. ಕೌಸಲ್ಯೆಯು ಭರತ-ಶತ್ರುಘ್ನರನ್ನು ನೋಡಿ ಬಿಕ್ಕಿ-ಬಿಕ್ಕಿ ಅಳುತ್ತಿದ್ದಳು. ಒಂದೆರಡು ಕ್ಷಣಗಳು ಹೀಗೆ ಕಳೆದನಂತರ ದುಃಖಿತಳಾಗಿದ್ದ ಕೌಸಲ್ಯೆಯು ಭರತನಿಗೆ ಹೇಳಿದಳು :

“ಭರತ! ರಾಜ್ಯಕಾಮನಾದ ನಿನಗೆ ನಿಷ್ಕಂಟಕವಾದ ಈ ರಾಜ್ಯವು ಲಭಿಸಿದೆ. ಕೈಕೇಯಿಯು ಮಾಡಿದ ಕ್ರೂರಕರ್ಮದಿಂದಾಗಿ ಬಹಳ ಶೀಘ್ರ ವಾಗಿಯೇ ಈ ರಾಜ್ಯವು ನಿನಗೆ ಸಿಕ್ಕಿದಂತಾಯಿತು. ಅದಕ್ಕಾಗಿ ನಾನು ದುಃಖ ಪಡುವುದಿಲ್ಲ. ಯಾವಾಗಲೂ ಕ್ರೂರಕರ್ಮಗಳಲ್ಲಿಯೇ ದೃಷ್ಟಿಯಿರುವ ನಿನ್ನ ತಾಯಿ ಕೈಕೇಯಿಯು ನನ್ನ ಮಗನಿಗೆ ನಾರುಮಡಿಯನ್ನುಡಿಸಿ ಕಾಡಿಗೆ ಅಟ್ಟಿ ವನವಾಸಿಯನ್ನಾಗಿ ಮಾಡಿದ್ದರಿಂದ ವಿಶೇಷವಾದ ಯಾವ ಲಾಭವನ್ನು ಪಡೆದು ಕೊಂಡಳು? ಈಗಲಾದರೂ ಕೈಕೇಯಿಯು ಸುಮಹಾಯಶೋವಂತನಾದ, ಸುವರ್ಣಮಯವಾದ ನಾಭಿಪ್ರದೇಶವನ್ನು ಹೊಂದಿರುವ ನನ್ನ ಮಗನ ಬಳಿಗೆ ನನ್ನನ್ನು ಸಾಧ್ಯವಾದಷ್ಟು ಬೇಗ ಕಳುಹಿಸುವುದು ಯೋಗ್ಯವಾಗಿದೆ ಅಥವಾ ನಾನೇ ಸ್ವತಃ ಸುಮಿತ್ರೆಯನ್ನೂ ಜೊತೆಯಲ್ಲಿ ಕರೆದುಕೊಂಡು ಅಗ್ನಿಹೋತ್ರಾಗ್ನಿಯನ್ನು ಮುಂದಿಟ್ಟುಕೊಂಡು ರಾಘವನಿರುವೆಡೆಗೆ ಹೊರಟು

ಹೋಗುವೆನು.* ಅಥವಾ ನೀನಾದರೂ ನನ್ನನ್ನು ಪುರುಷವ್ಯಾಘ್ರನಾದ, ನನ್ನ ಮಗ ಶ್ರೀರಾಮನು ತಪಸ್ಸುಮಾಡುತ್ತಿರುವ ಅರಣ್ಯಕ್ಕೆ ಕರೆದೊಯ್ಯುವುದು ಯೋಗ್ಯವಾಗಿದೆ. ವಿಸ್ತಾರವಾಗಿರುವ, ಧನ-ಧಾನ್ಯಗಳಿಂದ ಸಮೃದ್ಧವಾಗಿರುವ, ಆನೆ-ಕುದುರೆ-ರಥಗಳಿಂದ ಪರಿಪೂರ್ಣವಾಗಿರುವ ಈ ರಾಜ್ಯವನ್ನು ನಿನಗೆ ನಿನ್ನ ತಾಯಿಯು ಕೊಡಿಸಿಕೊಟ್ಟಿದ್ದಾಳೆ.”



ಇವೇ ಮುಂತಾದ ಕಠಿಣವಾದ ಅನೇಕ ಮಾತುಗಳಿಂದ ಕೌಸಲ್ಯಾದೇವಿಯು ನಿರಪರಾಧಿಯಾದ ಭರತನನ್ನು ಹೀಯಾಳಿಸಿದಳು. ಗಾಯದ

*ಇಲ್ಲಿ 'ಅಗ್ನಿಹೋತ್ರಂ ಪುರಸ್ಕೃತ್ಯ' ಎಂದಿರುವುದಕ್ಕೆ ವ್ಯಾಖ್ಯಾನಕಾರರು ವಿಸ್ತಾರವಾದ ಅರ್ಥಮಾಡಿರುತ್ತಾರೆ. ರಾಜನು ಇಟ್ಟುಕೊಂಡಿದ್ದ ಅಗ್ನಿಹೋತ್ರದ

ಮೇಲೆ ಸೂಜಿಯಿಂದ ಚುಚ್ಚಿದಂತೆ ಮೊದಲೇ ವ್ಯಥೆಗೊಂಡಿದ್ದ ಭರತನು ಕೌಸಲ್ಯೆಯ ಚುಚ್ಚುಮಾತುಗಳನ್ನು ಕೇಳಿ ಮತ್ತೂ ದುಃಖಿತನಾದನು. ಭ್ರಾಂತವಾದ ಮನಸ್ಸಿನಿಂದ ಕೂಡಿದ್ದ ಭರತನು ಕೌಸಲ್ಯಾದೇವಿಯ ಕಾಲುಗಳಿಗೆ ಬಿದ್ದನು. ಬಹಳ ಹೊತ್ತು ವಿಲಪಿಸುತ್ತಾ ಜ್ಞಾನಶೂನ್ಯನಾಗಿಯೇ ಇದ್ದು ಸ್ವಲ್ಪ ಹೊತ್ತು ಕಳೆದನಂತರ ಎಚ್ಚರಗೊಂಡನು. ಪರಿ-ಪರಿಯಾಗಿ ಹೇಳಿಕೊಂಡು ಗೋಳಾಡುತ್ತಿದ್ದ ಅನೇಕಪ್ರಕಾರವಾದ ಶೋಕಗಳಿಂದ ಸಮಾವೃತಳಾಗಿದ್ದ ಕೌಸಲ್ಯೆಗೆ ಭರತನು ಕೈಮುಗಿದು ಹೇಳಿದನು :

ಆರ್ಯೇ ಕಸ್ಮಾದಜಾನನ್ತಂ ಗರ್ಹಸೇ ಮಾಮಕಿಲ್ಬಿಷಮ್ ।
ವಿಪುಲಾಂ ಚ ಮಮ ಪ್ರೀತಿಂ ಸ್ಥಿರಾಂ ಜಾನಾಸಿ ರಾಘವೇ ॥೨೦॥

"ಪೂಜ್ಯಳೇ! ನಿಷ್ಕಳಂಕನಾದ, ಯಾವ ವಿಷಯವನ್ನೂ ಅರಿಯದ ನನ್ನನ್ನೇಕೆ ನೀನು ನಿಂದಿಸುತ್ತಿರುವೆ? ಶ್ರೀರಾಮನ ವಿಷಯದಲ್ಲಿ ನನಗೆ ವಿಪುಲವಾದ ಮತ್ತು ಸ್ಥಿರವಾದ ಪ್ರೀತಿಯಿರುವುದು ನಿನಗೂ ಗೊತ್ತಿದೆ.

(ಭರತನು ಕೌಸಲ್ಯೆಯ ಮುಂದೆ ಹಲವಾರು ವಿಧವಾದ ಶಪಥಗಳನ್ನು ಮಾಡುತ್ತಾನೆ.)*

ಅಗ್ನಿಯು ರಾಜನ ಮರಣಾನಂತರದಲ್ಲಿ ಅವನ ಹಿರಿಯ ಹೆಂಡತಿಯಾದ ಕೌಸಲ್ಯಾದೇವಿಗೆ ಸೇರುತ್ತದೆ. ಆ ಅಗ್ನಿಯನ್ನು ಕೌಸಲ್ಯಾದೇವಿಯು ಬ್ರಾಹ್ಮಣರ ಮೂಲಕ ಕಾಪಾಡುತ್ತಿರಬೇಕು. ಆ ಅಗ್ನಿಯಿಂದಲೇ ರಾಜನ ದಹನಾದಿಗಳೂ ಆಗಬೇಕು. ಅಗ್ನಿಹೋತ್ರಾಗ್ನಿಯನ್ನು ತೆಗೆಸಿಕೊಂಡು ಹೋಗುವೆನೆಂದು ಕೌಸಲ್ಯೆಯು ಹೇಳಿರುವುದರಿಂದ ಭರತನಿಗೆ ರಾಜನ ದಹನಾದಿಗಳನ್ನು ಮಾಡುವ ಅಧಿಕಾರವಿಲ್ಲವೆಂದೂ ಅಗ್ನಿಹೋತ್ರಾಗ್ನಿಯನ್ನೂ ಮತ್ತು ರಾಜನ ಶರೀರವನ್ನೂ ತನ್ನೊಡನೆ ಒಯ್ಯುವುದಾಗಿಯೂ ಕೌಸಲ್ಯೆಯು ಸೂಚಿಸಿದಳೆಂದೂ ಕೆಲವರು ವ್ಯಾಖ್ಯೆಮಾಡಿರುತ್ತಾರೆ. ಕೈಕೇಯಿಯ ಮಾರ್ಗವನ್ನೇ ಭರತನೂ ಅನುಸರಿಸುವುದಾದರೆ ಅವನಿಂದ ಪ್ರೇತಕಾರ್ಯವನ್ನು ಮಾಡಿಸಬಾರದೆಂದು ದಶರಥನು ಹೇಳಿದ್ದನ್ನೂ ಇಲ್ಲಿ ಸ್ಮರಿಸಬಹುದಾಗಿದೆ.

*ಶ್ರೀರಾಮನು ಕಾಡಿಗೆ ಹೋದ ವಿಷಯವು ತನಗೆ ತಿಳಿಯದೆಂದೂ ರಾಮನು ಕಾಡಿಗೆ ಹೋಗುವುದಕ್ಕೆ ತನ್ನ ಅನುಮೋದನೆಯು ಸರ್ವಥಾ ಇರಲಿಲ್ಲವೆಂದೂ ಸಮರ್ಥಿಸಲು ತಾಯಿಯು ಮಾಡಿದ ಕಾರ್ಯಕ್ಕೆ ಮಗನ ಅನುಮೋದನೆ ಇರಬಹುದೆಂಬ ಸಂಶಯವನ್ನು ನಿವಾರಿಸಲು– 'ಯಾವನ ಅನುಮತಿಯಂತೆ ರಾಮನು ಕಾಡಿಗೆ ಹೋದನೋ' –ಎಂಬುದನ್ನೇ ಪಲ್ಲವಿಯನ್ನಾಗಿ ಹೇಳುತ್ತಾ ಹೋಗುತ್ತಾನೆ.

ಕೃತಾ ಶಾಸ್ತ್ರಾನುಗಾ ಬುದ್ಧಿರ್ಮಾ ಭೂತ್ತಸ್ಯ ಕದಾಚನ ।
ಸತ್ಯಸಂಧಃ ಸತಾಂ ಶ್ರೇಷ್ಠೋ ಯಸ್ಯಾರ್ಯೋಽನುಮತೇ ಗತಃ ॥೨೧॥

ಸತ್ಯಸಂಧನಾದ, ಸತ್ಪುರುಷರಲ್ಲಿ ಶ್ರೇಷ್ಠನಾದ ಶ್ರೀರಾಮನು ಕಾಡಿಗೆ ಹೋಗುವುದನ್ನು ಯಾವನು ಅನುಮತಿಸಿದನೋ–ಅಂತಹವನಿಗೆ ಗುರು ಶಿಕ್ಷಿತವಾದ ಶ್ರುತಿ-ಸ್ಮೃತ್ಯನುಸಾರಿಯಾದ ಬುದ್ಧಿಯು ಯಾವಾಗಲೂ ಇರುವುದು ಬೇಡ. (ಶಾಸ್ತ್ರಾನುಸಾರವಾಗಿ ನಡೆದುಕೊಳ್ಳದ ಮನುಷ್ಯನು ಪಾಪಿಷ್ಠನಾಗುತ್ತಾನೆ. ರಾಮನ ವನವಾಸವನ್ನು ಅನುಮೋದಿಸಿದವನು ಸರ್ವದಾ ಪಾಪಿಷ್ಠನಾಗಿಯೇ ಇರಲಿ.)

ಪ್ರೇಷ್ಯಂ ಪಾಪೀಯಸಾಂ ಯಾತು ಸೂರ್ಯಂ ಚ ಪ್ರತಿ ಮೇಹತು ।
ಹನ್ತು ಪಾದೇನ ಗಾಂ ಸುಪ್ತಾಂ ಯಸ್ಯಾರ್ಯೋಽನುಮತೇ ಗತಃ ॥

ರಾಮನು ಅರಣ್ಯಕ್ಕೆ ಹೋಗಲು ಯಾವನು ಅನುಮತಿಸಿದನೋ–ಅವನು ಪಾಪಿಷ್ಠರ ಸೇವಕನಾಗಲಿ. ಸೂರ್ಯನಿಗೆ ಎದುರಾಗಿ ಕುಳಿತು ಮಲ-ಮೂತ್ರವಿಸರ್ಜನೆಯನ್ನು ಮಾಡಲಿ. ಮಲಗಿರುವ ಹಸುವನ್ನು ಒದೆಯಲಿ. (ಪಾಪಿಷ್ಠರ ಸೇವೆಯನ್ನು ಮಾಡಿದ, ಸೂರ್ಯನಿಗೆ ಎದುರಾಗಿ ಕುಳಿತು ಮಲ-ಮೂತ್ರಗಳನ್ನು ವಿಸರ್ಜಿಸಿದ ಮತ್ತು ಮಲಗಿದ ಹಸುವನ್ನು ಕಾಲಿನಿಂದ ಒದೆದ ಮಹಾಪಾಪಕ್ಕೆ ಗುರಿಯಾಗಲಿ.)

ಕಾರಯಿತ್ವಾ ಮಹತ್ಕರ್ಮ ಭರ್ತಾ ಭೃತ್ಯಮನರ್ಥಕಮ್ ।
ಅಧರ್ಮೋ ಯೋಽಸ್ಯ ಸೋಽಸ್ಯಾಸ್ತು ಯಸ್ಯಾರ್ಯೋಽನುಮತೇ ಗತಃ ॥೨೩॥

ರಾಮನು ಕಾಡಿಗೆ ಹೋಗಲು ಯಾವನು ಅನುಮತಿಸಿದನೋ–ಅಂತಹವನಿಗೆ ಸೇವಕನಿಂದ ಬೇಕಾದಷ್ಟು ಕೆಲಸವನ್ನು ಮಾಡಿಸಿಕೊಂಡು ಸ್ವಲ್ಪವಾದರೂ ಪ್ರತಿಫಲವನ್ನು ಕೊಡದಿರುವ ಯಜಮಾನನಿಗೆ ಪ್ರಾಪ್ತವಾಗುವ ಮಹಾಪಾಪವು ಪ್ರಾಪ್ತವಾಗಲಿ.*

---

*ಕೆಲಸಕ್ಕೆ ತಕ್ಕುದಾದ ಪ್ರತಿಫಲವನ್ನು ಕೊಡಬೇಕೆಂಬುದು ಇಂದಿನ ಜನತಾವಾದದಿಂದ ಬಂದುದಲ್ಲ. ಇದು ಒಂದು ಧರ್ಮವೇ ಆಗಿದ್ದಿತು. ಕೆಲಸಕ್ಕೆ ತಕ್ಕುದಾದ ಪ್ರತಿಫಲವನ್ನು ಕೊಡದಿದ್ದರೆ ಮಹಾಪಾಪವೆಂದು ತಿಳಿಯುತ್ತಿದ್ದರು. ಇದಕ್ಕೆ ಭರತನ ವಾಕ್ಯವೇ ಪ್ರಮಾಣವಾಗಿದೆ.

ಪರಿಪಾಲಯಮಾನಸ್ಯ ರಾಜ್ಞೋ ಭೂತಾನಿ ಪುತ್ರವತ್ ।
ಸತತಂ ದ್ರುಹ್ಯತಾಂ ಪಾಪಂ ಯಸ್ಯಾರ್ಯೋಽನುಮತೇ ಗತಃ ॥೨೪॥

ಪ್ರಜೆಗಳನ್ನು ಮಕ್ಕಳಂತೆ ರಕ್ಷಿಸುವ ರಾಜನಿಗೆ ಸತತವಾಗಿ ದ್ರೋಹವನ್ನೆಸಗುವವರಿಗೆ ಎಂತಹ ಮಹಾಪಾಪವು ಪ್ರಾಪ್ತವಾಗುವುದೋ–ಅಂತಹ ಪಾಪವು ರಾಮನ ವನವಾಸವನ್ನು ಅನುಮತಿಸಿದವನಿಗೂ ಪ್ರಾಪ್ತವಾಗಲಿ.

ಬಲಿಷಡ್ಭಾಗಮುದ್ಧೃತ್ಯ ನೃಪಸ್ಯಾರಕ್ಷತಃ ಪ್ರಜಾಃ ।
ಅಧರ್ಮೋ ಯಸ್ತು ಸೋಽಸ್ಯಾಸ್ತು ಯಸ್ಯಾರ್ಯೋಽನುಮತೇ ಗತಃ॥

ಪ್ರಜೆಗಳ ಆದಾಯದಲ್ಲಿ ಆರನೆಯ ಒಂದು ಭಾಗವನ್ನು ತೆರಿಗೆಯಾಗಿ ತೆಗೆದುಕೊಂಡು ಯಾವ ರಾಜನು ತನ್ನ ಪ್ರಜೆಗಳನ್ನು ರಕ್ಷಿಸುವುದಿಲ್ಲವೋ–ಅಂತಹವನಿಗೆ ಪ್ರಾಪ್ತವಾಗುವ ಮಹಾಪಾಪವು ಶ್ರೀರಾಮನ ವನವಾಸವನ್ನು ಅನುಮತಿಸಿದವನಿಗೂ ಪ್ರಾಪ್ತವಾಗಲಿ.

ಸಂಶ್ರುತ್ಯ ಚ ತಪಸ್ವಿಭ್ಯಃ ಸತ್ರೇ ವೈ ಯಜ್ಞದಕ್ಷಿಣಾಮ್ ।
ತಾಂ ವಿಪ್ರಲಪತಾಂ ಪಾಪಂ ಯಸ್ಯಾರ್ಯೋಽನುಮತೇ ಗತಃ ॥೨೬॥

ವ್ರತೋಪವಾಸಶೀಲರಾದ ಯಜ್ಞದ ಋತ್ವಿಜರಿಗೆ ಇಂತಿಷ್ಟೇ ದಕ್ಷಿಣೆಯನ್ನು ಕೊಡುವೆನೆಂದು ಪ್ರತಿಜ್ಞೆಮಾಡಿ ಯಜ್ಞವು ಮುಗಿದನಂತರ 'ನಾನಷ್ಟು ಕೊಡುವೆನೆಂದು ಹೇಳಲೇ ಇಲ್ಲ' –ಎಂದು ಹೇಳಿ ಋತ್ವಿಜರಿಗೆ ನಿರಾಶೆಯನ್ನುಂಟುಮಾಡುವ ಯಜಮಾನನಿಗೆ ಪ್ರಾಪ್ತವಾಗುವ ಮಹಾಪಾಪವು ಶ್ರೀರಾಮನ ವನವಾಸಗಮನವನ್ನು ಅನುಮತಿಸಿದವನಿಗೂ ಪ್ರಾಪ್ತವಾಗಲಿ.*

---

*ಕೆಲವು ಯಜ್ಞಗಳಲ್ಲಿ ಯಜ್ಞದಕ್ಷಿಣೆಯನ್ನು ಇಷ್ಟೇ ಕೊಡಬೇಕೆಂಬ ನಿಯಮವಿರುತ್ತದೆ ಅಥವಾ ಯಜಮಾನನು ಯಜ್ಞಕ್ಕೆ ಮೊದಲೇ ಋತ್ವಿಜರಿಗೆ ಇಷ್ಟು ದಕ್ಷಿಣೆಯನ್ನು ಕೊಡುವುದಾಗಿ ಪ್ರತಿಜ್ಞೆಮಾಡುತ್ತಾನೆ. ಯಜ್ಞವು ಮುಗಿದನಂತರದಲ್ಲಿ ಅಷ್ಟೇ ದಕ್ಷಿಣೆಯನ್ನು ಕೊಟ್ಟು ಕಳುಹಿಸಬೇಕು. ಯಜ್ಞವು ಮುಗಿದುಹೋಯಿತು ಎಂಬ ಕಾರಣದಿಂದ ತಾನು ಸಂಕಲ್ಪಿಸಿದ್ದ ದಕ್ಷಿಣೆಯನ್ನು ಋತ್ವಿಜರಿಗೆ ಕೊಡದಿದ್ದರೆ ಅಂತಹ ಯಜಮಾನನಿಗೆ ಯಜ್ಞಮಾಡಿದ ಫಲವು ಲಭಿಸದಿರುವುದು ಮಾತ್ರವಲ್ಲದೇ ಆತನು ಮಹತ್ತರವಾದ ಪಾಪಕ್ಕೂ ಗುರಿಯಾಗುತ್ತಾನೆ.

ಹಸ್ತ್ಯಶ್ವರಥಸಂಬಾಧೇ ಯುದ್ಧೇ ಶಸ್ತ್ರಸಮಾಕುಲೇ ।
ಮಾ ಸ್ಮ ಕಾರ್ಷೀತ್ಸತಾಂ ಧರ್ಮಂ ಯಸ್ಯಾರ್ಯೋಽನುಮತೇ ಗತಃ ॥

ಶ್ರೀರಾಮನ ವನವಾಸಗಮನಕ್ಕೆ ಅನುಮೋದಿಸಿದವನು–ಆನೆ, ಕುದುರೆ, ರಥ ಮತ್ತು ಕಾಲಾಳುಗಳಿಂದ ನಿಬಿಡವಾದ, ಶಸ್ತ್ರಾಸ್ತ್ರಗಳಿಂದ ಸಮಾವೃತವಾದ ಯುದ್ಧದಲ್ಲಿ ಸತ್ಪುರುಷರ ಧರ್ಮಕ್ಕೆ ಅನುಸಾರವಾಗಿ ನಡೆಯದಿರಲಿ. (ಶತ್ರುಗಳಿಗೆ ಬೆನ್ನುತೋರಿಸುತ್ತಾ ಪಲಾಯನಮಾಡುವಂತಾಗಲಿ. ಅದರಿಂದ ಅವನು ಮಹಾಪಾಪಿಷ್ಠನಾಗಲಿ.)

ಉಪದಿಷ್ಟಂ ಸುಸೂಕ್ಷ್ಮಾರ್ಥಂ ಶಾಸ್ತ್ರಂ ಯತ್ನೇನ ಧೀಮತಾ ।
ಸ ನಾಶಯೇತ್ತು ದುಷ್ಟಾತ್ಮಾ ಯಸ್ಯಾರ್ಯೋಽನುಮತೇ ಗತಃ ॥೨೮॥

ಯಾವನ ಅನುಮೋದನೆಯಿಂದ ಶ್ರೀರಾಮನು ಅರಣ್ಯಕ್ಕೆ ಹೋದನೋ ಅಂತಹ ದುಷ್ಟಾತ್ಮನು ಧೀಮಂತನಾದ ಗುರುವಿನಿಂದ ಪ್ರಯತ್ನಪೂರ್ವಕವಾಗಿ ಉಪದೇಶಪಡೆದ ಅತ್ಯಂತಸೂಕ್ಷ್ಮವಾದ ರಹಸ್ಯವಿಷಯಗಳನ್ನು ಹಾಳುಮಾಡಿಕೊಳ್ಳಲಿ. (ಮರೆತುಬಿಡಲಿ. ಸಮಯಗಳಲ್ಲಿ ಅವನಿಗೆ ಅದರ ಸ್ಮರಣೆಯಾಗದಿರಲಿ.)

ಮಾ ಚ ತಂ ವ್ಯೂಢಬಾಹ್ವಂಸಂ ಚನ್ದ್ರಾರ್ಕಸಮತೇಜಸಮ್ ।
ದ್ರಾಕ್ಷೀದ್ರಾಜ್ಯಸ್ಥಮಾಸೀನಂ ಯಸ್ಯಾರ್ಯೋಽನುಮತೇ ಗತಃ ॥೨೯॥

ರಾಮನ ಅರಣ್ಯವಾಸಕ್ಕೆ ಯಾವನು ಅನುಮೋದಿಸಿದನೋ–ಅಂತಹವನು ವಿಶಾಲಹೃದಯನಾದ, ದೀರ್ಘಬಾಹುವಾದ, ಸೂರ್ಯ-ಚಂದ್ರರಿಗೆ ಸಮಾನವಾದ ತೇಜಸ್ಸಿನಿಂದ ಬೆಳಗುತ್ತಿರುವ ಶ್ರೀರಾಮನು ಪಟ್ಟಾಭಿಷಿಕ್ತನಾಗುವುದನ್ನು ನೋಡದಂತಾಗಲಿ.*

---

*ಸಾಧು-ಸಂತರ ಸಂದರ್ಶನ, ಪುಣ್ಯಕ್ಷೇತ್ರಗಳ ಪ್ರವಾಸ–ಮುಂತಾದುವು ಪುಣ್ಯಶಾಲಿಗಳಿಗೆ ಮಾತ್ರವೇ ಲಭಿಸುವುವೆಂಬ ಪ್ರತೀತಿಯಿದೆ. ಪಾಪಿಷ್ಠರಾದವರು ಸಾಧು-ಸಂತರ ದರ್ಶನಮಾಡಲೂ ಯತ್ನಿಸುವುದಿಲ್ಲ. ಅವರು ಕೆಲವು ಸಮಯದಲ್ಲಿ ಯತ್ನಿಸಿದರೂ ಲಭ್ಯವಾಗದಿರುವುದೂ ಉಂಟು. ಇದೇ ರೀತಿಯಲ್ಲಿ ಮಂಗಳ ಮಯಮೂರ್ತಿಯಾದ ಶ್ರೀರಾಮನು ಸಿಂಹಾಸನಾರೂಢನಾಗಿ ಕುಳಿತಿರುವುದನ್ನು ಸಂದರ್ಶಿಸುವುದೇ ಮಹಾಪುಣ್ಯಫಲವೆಂದು ಭರತನು ಹೇಳುತ್ತಾನೆ. ಅಂತಹ ಸುಂದರದೃಶ್ಯವನ್ನು ಕಾಣಲಾಗದವನು ಪಾಪಿಷ್ಠನೇ ಸರಿ–ಎಂಬುದು ಭರತನ ಅಭಿಪ್ರಾಯವಾಗಿದೆ.

ಪಾಯಸಂ ಕೃಸರಂ ಛಾಗಂ ವೃಥಾ ಸೋಽಶ್ನಾತು ನಿರ್ಘೃಣಃ ।
ಗುರೂಂಶ್ಚಾಪ್ಯವಜಾನಾತು ಯಸ್ಯಾರ್ಯೋಽನುಮತೇ ಗತಃ ॥೩೦॥

ಶ್ರೀರಾಮನು ಕಾಡಿಗೆ ಹೋಗುವುದನ್ನು ಅನುಮತಿಸಿದವನು ನಿರ್ದಯನಾಗಿ ಆಡಿನ ಮಾಂಸವನ್ನೂ, ಪಾಯಸವನ್ನೂ, ಎಳ್ಳನ್ನವನ್ನೂ ಯಾವ ಕಾರಣವೂ ಇಲ್ಲದೆ ಭಕ್ಷಿಸಲಿ. (ಅದರಿಂದ ಅವನು ಪಾಪಭೂಯಿಷ್ಠನಾಗಲಿ.) ಗುರುಜನರನ್ನು ಅವಮಾನಿಸಲಿ. (ಗುರುನಿಂದೆಯ ಪಾಪಕ್ಕೂ ಗುರಿಯಾಗಲಿ.)*

ಗಾಶ್ಚ ಸ್ಪೃಶತು ಪಾದೇನ ಗುರೂನ್ಪರಿವದೇತ್ಸ್ವಯಮ್ ।
ಮಿತ್ರೇ ದ್ರುಹ್ಯೇತ ಸೋಽತ್ಯನ್ತಂ ಯಸ್ಯಾರ್ಯೋಽನುಮತೇ ಗತಃ ॥

ಶ್ರೀರಾಮನು ಅರಣ್ಯಕ್ಕೆ ಹೋಗುವುದನ್ನು ಅನುಮತಿಸಿದವನು ಗೋವುಗಳನ್ನು ಕಾಲಿನಿಂದ ಒದೆಯಲಿ. ಗುರುಜನರನ್ನು ನಿಂದಿಸಲಿ. ಮಿತ್ರನಿಗೆ ಬಹಳವಾಗಿ ದ್ರೋಹವನ್ನೆಸಗಲಿ.

ವಿಶ್ವಾಸಾತ್ಕಥಿತಂ ಕಿಂಚಿತ್ಪರಿವಾದಂ ಮಿಥಃ ಕ್ವಚಿತ್ ।
ವಿವೃಣೋತು ಸ ದುಷ್ಟಾತ್ಮಾ ಯಸ್ಯಾರ್ಯೋಽನುಮತೇ ಗತಃ ॥೩೨॥

ಶ್ರೀರಾಮನು ಅರಣ್ಯಕ್ಕೆ ಹೋಗುವುದನ್ನು ಅನುಮತಿಸಿದ ದುಷ್ಟನು ವಿಶ್ವಾಸವಿಟ್ಟು ರಹಸ್ಯದಲ್ಲಿ ಹೇಳಿದ ಒಬ್ಬರ ಮೇಲಿನ ಅಪವಾದವನ್ನು ಬಹಿರಂಗಪಡಿಸಲಿ. (ಹಾಗೆ ಮಾಡಿ ಪಾಪವನ್ನು ಕಟ್ಟಿಕೊಳ್ಳಲಿ.)

ಅಕರ್ತಾ ಹ್ಯಕೃತಜ್ಞಶ್ಚ ತ್ಯಕ್ತಶ್ಚ ನಿರಪತ್ರಪಃ ।
ಲೋಕೇ ಭವತು ವಿದ್ವೇಷ್ಯೋ ಯಸ್ಯಾರ್ಯೋಽನುಮತೇ ಗತಃ॥

ಶ್ರೀರಾಮನ ವನವಾಸಕ್ಕೆ ಅನುಮತಿಸಿದವನು ಉಪಕಾರವನ್ನು ಪಡೆದು ಪ್ರತ್ಯುಪಕಾರವನ್ನು ಮಾಡದಿರಲಿ. ಮತ್ತೊಬ್ಬರು ಮಾಡಿದ ಉಪ

*ಪಾಯಸ, ಎಳ್ಳನ್ನ ಮತ್ತು ಆಡಿನ ಮಾಂಸಗಳನ್ನು ಜಿಹ್ವಾಚಾಪಲ್ಯಕ್ಕಾಗಿ ತಿನ್ನಬಾರದು. ಶ್ರಾದ್ಧಾದಿಗಳಲ್ಲಿಯೂ ಯಜ್ಞ-ಯಾಗಾದಿಗಳಲ್ಲಿಯೂ ಇವುಗಳನ್ನು ಹವಿಸ್ಸಿಗಾಗಿ ಮಾಡಿ ಉಳಿದ ಶೇಷವನ್ನು ಪ್ರಸಾದವೆಂದು ಭಾವಿಸಿ ಭುಂಜಿಸಬೇಕು. ಅಕಾಲದಲ್ಲಿ ತಿನ್ನುವುದರಿಂದ ಪ್ರಾಣಿಹತ್ಯಾದೋಷವು ಪ್ರಾಪ್ತವಾಗುವುದಲ್ಲದೇ ಮನುಷ್ಯನು ಮಹಾಪಾಪಕ್ಕೂ ಗುರಿಯಾಗುತ್ತಾನೆ. ಗುರುಜನರೆಂದರೆ ತಂದೆ-ತಾಯಿಗಳು, ಆಚಾರ್ಯರು, ಹಿರಿಯರು. ಇವರು ಬಂದರೆ ಪ್ರತ್ಯುತ್ಥಾನಮಾಡಿ ನಮಸ್ಕರಿಸಿ ಗೌರವಿಸಬೇಕು. ಹಾಗೆ

ಕಾರವನ್ನು ಮರೆಯಲಿ. ಸಾಧು-ಸತ್ಪುರುಷರಿಂದ ಪರಿತ್ಯಕ್ತನಾಗಲಿ. ನಾಚಿಕೆ-ಹೇಸಿಗೆಗಳಿಲ್ಲದೇ ದುಷ್ಟವಾದ ಕಾರ್ಯಗಳನ್ನೇ ಮಾಡುತ್ತಿರಲಿ. ಲೋಕದಲ್ಲಿ ಎಲ್ಲ ಜನರ ದ್ವೇಷಕ್ಕೂ ಪಾತ್ರನಾಗಲಿ.

ಪುತ್ರೈರ್ದಾರೈಶ್ಚ ಭೃತ್ಯೈಶ್ಚ ಸ್ವಗೃಹೇ ಪರಿವಾರಿತಃ ।
ಸ ಏಕೋ ಮೃಷ್ಟಮಶ್ನಾತು ಯಸ್ಯಾರ್ಯೋಽನುಮತೇ ಗತಃ ॥೩೪॥

ಯಾವನ ಅನುಮತಿಯಿಂದ ಶ್ರೀರಾಮನು ಕಾಡಿಗೆ ಹೋದನೋ ಅವನು ತನ್ನ ಮನೆಯಲ್ಲಿ ಹೆಂಡತಿ-ಮಕ್ಕಳು ಮತ್ತು ಸೇವಕರಿಂದ ಪರಿವೃತ ನಾಗಿದ್ದರೂ ಒಬ್ಬನೇ ಕುಳಿತು ಮೃಷ್ಟಾನ್ನವನ್ನು ತಿಂದ ಪಾಪಕ್ಕೆ ಗುರಿ ಯಾಗಲಿ.

ಅಪ್ರಾಪ್ಯ ಸದೃಶಾನ್ದಾರಾನನಪತ್ಯಃ ಪ್ರಮೀಯತಾಮ್ ।
ಅನವಾಪ್ಯ ಕ್ರಿಯಾಂ ಧರ್ಮ್ಯಾಂ ಯಸ್ಯಾರ್ಯೋಽನುಮತೇ ಗತಃ॥

ಯಾವನ ಅನುಮತಿಯಿಂದ ಶ್ರೀರಾಮನು ಕಾಡಿಗೆ ಹೋದನೋ ಅಂತಹ ದುಷ್ಟಾತ್ಮನು ತನಗೆ ಅನುಕೂಲಳಾದ ಭಾರ್ಯೆಯನ್ನು ಪಡೆಯದೇ, ಶ್ರುತಿ-ಸ್ಮೃತಿವಿಹಿತವಾದ ಧಾರ್ಮಿಕಕರ್ಮಗಳನ್ನು ಮಾಡದೇ ಪುತ್ರರಹಿತನಾಗಿಯೇ ವಿನಾಶಹೊಂದಲಿ.

ಮಾತ್ಮನಃ ಸಂತತಿಂ ದ್ರಾಕ್ಷೀತ್ಸ್ವೇಷು ದಾರೇಷು ದುಃಖಿತಃ ।
ಆಯುಃ ಸಮಗ್ರಮಪ್ರಾಪ್ಯ ಯಸ್ಯಾರ್ಯೋಽನುಮತೇ ಗತಃ ॥೩೬॥

ಶ್ರೀರಾಮನ ಅರಣ್ಯವಾಸವನ್ನು ಅನುಮತಿಸಿದವನು ತನ್ನ ಪತ್ನಿ

ಮಾಡದಿದ್ದರೆ ಅವರನ್ನು ತಿರಸ್ಕರಿಸಿದಂತಾಗುವುದು. ಇದೂ ಮಹಾಪಾಪಹೇತುವೆಂದು ಶ್ರುತಿ-ಸ್ಮೃತಿಗಳಲ್ಲಿ ಉಕ್ತವಾಗಿದೆ.

ಒಬ್ಬ ವ್ಯಾಖ್ಯಾನಕಾರರಿಗೆ 'ಭಾಗಂ' ಎಂಬುದಕ್ಕೆ ಅರ್ಥ ಹೊಳೆದಿಲ್ಲ. ಅವರು ಭಾಗಶಬ್ದಕ್ಕೆ ಹೀಗೆ ಅರ್ಥಮಾಡಿರುತ್ತಾರೆ.: ಭಾಗಂ-ಭಂ ನಿರ್ಮಲತ್ವಂ ನ ಗಚ್ಛತಿ ಯಸ್ಯ ಸಃ ಭಾಗಃ । ತಂ ಭಾಗಂ ತಾಮ್ಬೂಲಾದಿಕಮಿತ್ಯರ್ಥಃ ॥ ನಿರ್ಮಲತ್ವ ವನ್ನು ಹೊಂದದೇ ಇರುವ ತಾಮ್ಬೂಲಾದಿಗಳು ತಾಂಬೂಲವನ್ನು ಹಾಕಿಕೊಂಡರೆ ಬಾಯಿ ಕೆಂಪಾಗುವುದಲ್ಲದೇ ತುಟಿಗಳ ಮಧ್ಯದಿಂದ ಜೊಲ್ಲು ಸುರಿದು ಮಲಿನವಾಗುವು ದೆಂಬ ತಾತ್ಪರ್ಯ. ಅಥವಾ ಭಃ ನಿರ್ಮಲ ಏವ ಅಗಃ ವೃಕ್ಷಃ ತಂ–ನಿರ್ಮಲವೇ ಆದ ಒಂದು ವೃಕ್ಷ : ತುಲಸೀ, ಕಮಲದಳ ಇತ್ಯಾದಿಗಳನ್ನು ಅಕಾರಣವಾಗಿ ಕಡಿಯುವ ಅಥವಾ ನಾಶಮಾಡುವ ಕಾರ್ಯ.

ಯಲ್ಲಿ ಸಂತತಿಯನ್ನು ಪಡೆಯದೇ ಬಹಳ ದುಃಖಿತನಾಗಿ ಅಕಾಲಮರಣವನ್ನು ಹೊಂದಲಿ.

ರಾಜಸ್ತ್ರೀಬಾಲವೃದ್ಧಾನಾಂ ವಧೇ ಯತ್ಪಾಪಮುಚ್ಯತೇ ।
ಭೃತ್ಯತ್ಯಾಗೇ ಚ ಯತ್ಪಾಪಂ ತತ್ಪಾಪಂ ಪ್ರತಿಪದ್ಯತಾಮ್ ॥೩೭॥

ರಾಜರು, ಹೆಂಗಸರು, ಬಾಲಕರು, ವೃದ್ಧರು–ಇವರನ್ನು ಕೊಲೆಮಾಡುವುದರಿಂದ ಯಾವ ಪಾಪವು ಲಭಿಸುವುದೋ, ಸ್ವಾಮಿಭಕ್ತನಾದ ಸೇವಕನನ್ನು ತ್ಯಾಗಮಾಡುವುದರಿಂದ ಯಾವ ಪಾಪವು ಸಂಭವಿಸುವುದೋ–ಅಂತಹ ಪಾಪವನ್ನು ಶ್ರೀರಾಮನ ಅರಣ್ಯವಾಸವನ್ನು ಅನುಮತಿಸಿದವನು ಪಡೆಯಲಿ.

ಲಾಕ್ಷಯಾ ಮಧುಮಾಂಸೇನ ಲೋಹೇನ ಚ ವಿಷೇಣ ಚ ।
ಸದೈವ ಬಿಭ್ರಯಾದ್ಭೃತ್ಯಾನ್ಯಸ್ಯಾರ್ಯೋಽನುಮತೇ ಗತಃ ॥೩೮॥

ಅರಗು, ಜೇನುತುಪ್ಪ, ಮಾಂಸ, ಲೋಹ ಮತ್ತು ವಿಷ–ಇವುಗಳನ್ನು ಮಾರುತ್ತಾ ಯಾವನು ತನ್ನ ಕುಟುಂಬವನ್ನೂ, ಭೃತ್ಯರನ್ನೂ ಭರಿಸಿ-ಪೋಷಿಸುವನೋ–ಅಂತಹವನಿಗೆ ಪ್ರಾಪ್ತವಾಗಬಹುದಾದ ಪಾಪವು ಶ್ರೀರಾಮನ ವನವಾಸವನ್ನು ಅನುಮತಿಸಿದವನಿಗೂ ಪ್ರಾಪ್ತವಾಗಲಿ.[1]

ಸಂಗ್ರಾಮೇ ಸಮುಪೋಢೇ ತು ಶತ್ರುಪಕ್ಷಭಯಂಕರೇ ।
ಪಲಾಯಮಾನೋ ವಧ್ಯೇತ ಯಸ್ಯಾರ್ಯೋಽನುಮತೇ ಗತಃ ॥೩೯॥

ಯುದ್ಧವು ಸನ್ನಿಹಿತವಾಗಿ ಭಯಂಕರನಾದ ಶತ್ರುವು ಎದುರಾಗಿ ನಿಂತಿರುವಾಗ ಭಯದಿಂದ ಪಲಾಯನಮಾಡುವ ಯೋಧನನ್ನು ಸಂಹರಿಸುವವನಿಗೆ ಪ್ರಾಪ್ತವಾಗುವ ಮಹಾಪಾಪವು ಶ್ರೀರಾಮನ ವನವಾಸವನ್ನು ಅನುಮತಿಸಿದವನಿಗೂ ಪ್ರಾಪ್ತವಾಗಲಿ.[2]

ಕಪಾಲಪಾಣಿಃ ಪೃಥಿವೀಮಟತಾಂ ಚೀರಸಂವೃತಃ ।
ಭಿಕ್ಷಮಾಣೋ ಯಥೋನ್ಮತ್ತೋ ಯಸ್ಯಾರ್ಯೋಽನುಮತೇ ಗತಃ ॥

---

[1]"ಲಾಕ್ಷಾಲವಣಮಾಂಸಾನಿ ವರ್ಜನೀಯಾನಿ ವಿಕ್ರಯೇ" ಅರಗು, ಉಪ್ಪು, ಮಾಂಸ–ಇವುಗಳನ್ನು ವಿಕ್ರಯಿಸಬಾರದು ಎಂಬ ಸ್ಮೃತಿವಚನವಿದೆ. ಇವುಗಳನ್ನು ವಿಕ್ರಯಿಸುವುದು ಪಾಪಹೇತುವೆಂದು ಹೇಳಲ್ಪಟ್ಟಿದೆ.

[2]ಯುದ್ಧದ ಮಧ್ಯದಲ್ಲಿ ಶತ್ರುವಿಗೆ ಬೆನ್ನು ತೋರಿಸಿಕೊಂಡು ಓಡುವುದು ಪಾಪ

ಶ್ರೀರಾಮನ ವನವಾಸವನ್ನು ಅನುಮೋದಿಸಿದವನು – ಕಪಾಲವನ್ನು ಕೈಯಲ್ಲಿ ಹಿಡಿದುಕೊಂಡು ಚಿಂದೀಬಟ್ಟೆಯನ್ನುಟ್ಟು ಭಿಕ್ಷೆಬೇಡುತ್ತಾ ತಿರುಗುವ ಹುಚ್ಚನಂತೆ–ಭೂಮಿಯಲ್ಲಿ ಅಲೆಯಲಿ.

ಮದ್ಯೇಪ್ರಸಕ್ತೋ ಭವತು ಸ್ತ್ರೀಷ್ವಕ್ಷೇಷು ಚ ನಿತ್ಯಶಃ ।
ಕಾಮಕ್ರೋಧಾಭಿಭೂತಸ್ತು ಯಸ್ಯಾರ್ಯೋಽನುಮತೇ ಗತಃ ॥೪೧॥

ಶ್ರೀರಾಮನು ಅರಣ್ಯಕ್ಕೆ ಹೋಗಲು ಅನುಮತಿಸಿದವನು–ಸರ್ವದಾ ಮದ್ಯಪಾನದಲ್ಲಿಯೇ ಆಸಕ್ತನಾಗಲಿ. ಸ್ತ್ರೀಲಂಪಟನಾಗಲಿ. ಜೂಜುಕೋರ ನಾಗಲಿ. ಕಾಮ-ಕ್ರೋಧಗಳಿಂದ ಕೂಡಿ ತಿರಸ್ಕೃನಾಗಲಿ.

ಮಾ ಸ್ಮ ಧರ್ಮೇ ಮನೋ ಭೂಯಾದಧರ್ಮಂ ಸ ನಿಷೇವತಾಮ್।
ಅಪಾತ್ರವರ್ಷೀ ಭವತು ಯಸ್ಯಾರ್ಯೋಽನುಮತೇ ಗತಃ ॥೪೨॥

ಶ್ರೀರಾಮನ ಅರಣ್ಯವಾಸವನ್ನು ಅನುಮತಿಸಿದವನಿಗೆ ಧರ್ಮಕಾರ್ಯ ಗಳನ್ನು ಮಾಡಲು ಮನಸ್ಸಾಗದಿರಲಿ. ಯಾವಾಗಲೂ ಅಧರ್ಮವಾದ ಕಾರ್ಯಗಳನ್ನೇ ಮಾಡುತ್ತಿರಲಿ. ಅಪಾತ್ರನಿಗೆ ದಾನಮಾಡಲಿ.

ಸಂಚಿತಾನ್ಯಸ್ಯ ವಿತ್ತಾನಿ ವಿವಿಧಾನಿ ಸಹಸ್ರಶಃ ।
ದಸ್ಯುಭಿರ್ವಿಪ್ರಲುಪ್ಯನ್ತಾಂ ಯಸ್ಯಾರ್ಯೋಽನುಮತೇ ಗತಃ ॥೪೩॥

ಶ್ರೀರಾಮನು ಅರಣ್ಯಕ್ಕೆ ಹೋಗುವುದನ್ನು ಅನುಮತಿಸಿದವನು ಸಂಪಾದಿಸಿದ ಸಹಸ್ರಪರಿಮಿತವಾದ ಅನೇಕಪ್ರಕಾರವಾದ ಐಶ್ವರ್ಯಗಳನ್ನು ಕಳ್ಳ-ಕಾಕರು ಅಪಹರಿಸಲಿ.

ಉಭೇ ಸಂಧ್ಯೇ ಶಯಾನಸ್ಯ ಯತ್ಪಾಪಂ ಪರಿಕಲ್ಪ್ಯತೇ ।
ತಚ್ಚ ಪಾಪಂ ಭವೇತ್ತಸ್ಯ ಯಸ್ಯಾರ್ಯೋಽನುಮತೇ ಗತಃ ॥೪೪॥

ಎರಡು ಸಂಧ್ಯಾಕಾಲಗಳಲ್ಲಿಯೂ ಮಲಗುವವನಿಗೆ ಧರ್ಮ

ಹೇತುವೆಂಬುದು ಸ್ಮೃತಿವಚನವಾದರೆ-ಹಾಗೆ ಓಡಿಹೋಗುತ್ತಿರುವವನನ್ನು ಕೊಲ್ಲು ವುದೂ ಪಾಪಹೇತುವೆಂದು ಮತ್ತೊಂದು ಸ್ಮೃತಿವಚನವಿದೆ. ಭಯದಿಂದ ಪಲಾಯನ ಮಾಡುತ್ತಿರುವವರನ್ನೂ, ಆಶ್ರಯವನ್ನು ಪಡೆದಿರುವವರನ್ನೂ ಸಂಹರಿಸಿದರೆ ಮಹಾ ಪಾಪವು ಸಂಘಟಿಸುವುದು. ಇದೇ ನಮ್ಮ ಭಾರತದ ಆರ್ಯಸಂಸ್ಕೃತಿಯ ಉದಾತ್ತನೀತಿ.

ಶಾಸ್ತ್ರಗಳಲ್ಲಿ ಯಾವ ಪಾಪವು ಹೇಳಲ್ಪಟ್ಟಿರುವುದೋ-ಅದೇ ಪಾಪವು ಶ್ರೀರಾಮನ ವನವಾಸವನ್ನು ಅನುಮೋದಿಸಿದವನಿಗೂ ಪ್ರಾಪ್ತವಾಗಲಿ.

ಯದಗ್ನಿದಾಯಕೇ ಪಾಪಂ ಯತ್ಪಾಪಂ ಗುರುತಲ್ಪಗೇ ।
ಮಿತ್ರದ್ರೋಹೇ ಚ ಯತ್ಪಾಪಂ ತತ್ಪಾಪಂ ಪ್ರತಿಪದ್ಯತಾಮ್ ॥೪೫॥

ಮನೆಗಳಿಗೆ ಬೆಂಕಿಯಿಡುವವನಿಗೆ, ಗುರುಪತ್ನಿಯೊಡನೆ ಸಮಾಗಮ ಮಾಡುವವನಿಗೆ, ಮಿತ್ರದ್ರೋಹಿಗೆ-ಯಾವ ಪಾಪವು ಸಂಘಟಿಸುವುದೋ ಅದೇ ಪಾಪವನ್ನೇ ಶ್ರೀರಾಮನ ಅರಣ್ಯವಾಸವನ್ನು ಅನುಮೋದಿಸಿದವನೂ ಪಡೆಯಲಿ.

ದೇವತಾನಾಂ ಪಿತೄಣಾಂ ಚ ಮಾತಾಪಿತ್ರೋಸ್ತಥೈವ ಚ ।
ಮಾ ಸ್ಮ ಕಾರ್ಷೀತ್ಸ ಶುಶ್ರೂಷಾಂ ಯಸ್ಯಾರ್ಯೋಽನುಮತೇ ಗತಃ ॥

ಶ್ರೀರಾಮನ ವನವಾಸವನ್ನು ಅನುಮೋದಿಸಿದವನು-ದೇವತೆಗಳನ್ನು ಪೂಜಿಸದಿರಲಿ. ಪಿತೃಗಳಿಗೆ ಶ್ರಾದ್ಧ-ತರ್ಪಣಾದಿಗಳನ್ನು ಮಾಡದಿರಲಿ. ತಂದೆ-ತಾಯಿಗಳ ಶುಶ್ರೂಷೆಯನ್ನು ಮಾಡದಿರಲಿ.

ಸತಾಂ ಲೋಕಾತ್ಸತಾಂ ಕೀರ್ತ್ಯಾತ್ಸಂಜುಷ್ಟಾತ್ಕರ್ಮಣಸ್ತಥಾ ।
ಭ್ರಶ್ಯತು ಕ್ಷಿಪ್ರಮದ್ಯೈವ ಯಸ್ಯಾರ್ಯೋಽನುಮತೇ ಗತಃ ॥೪೭॥

ಶ್ರೀರಾಮನ ಅರಣ್ಯವಾಸವನ್ನು ಅನುಮೋದಿಸಿದವನು ಸತ್ಪುರುಷರ ಸಹವಾಸವನ್ನು ಮಾಡದಿರಲಿ. ಸತ್ಪುರುಷರು ಮಾಡುವ ಶ್ಲಾಘನೆಗೆ ಪಾತ್ರನಾಗದಿರಲಿ. ಸತ್ಪುರುಷರು ಮಾಡುವ ಸತ್ಕರ್ಮಗಳನ್ನು ಮಾಡದಿರಲಿ.

ಅಪಾಸ್ಯ ಮಾತೃಶುಶ್ರೂಷಾಮನರ್ಥೇ ಸೋಽವತಿಷ್ಠತಾಮ್ ।
ದೀರ್ಘಬಾಹುರ್ಮಹಾವಕ್ಷಾ ಯಸ್ಯಾರ್ಯೋಽನುಮತೇ ಗತಃ ॥೪೮॥

ದೀರ್ಘಬಾಹುವಾದ, ವಿಶಾಲಹೃದಯನಾದ ಶ್ರೀರಾಮನು ಅರಣ್ಯಕ್ಕೆ ಹೋಗಲು ಅನುಮೋದಿಸಿದವನು-ಮಹಾಪುಣ್ಯದಾಯಕವಾದ ಮಾತೃ ಶುಶ್ರೂಷೆಯನ್ನು ತೊರೆದು ಅನರ್ಥಗಳುಂಟಾಗುವ ಕುತ್ಸಿತಕಾರ್ಯಗಳಲ್ಲಿ ತೊಡಗಲಿ.

ಬಹುಪುತ್ರೋ ದರಿದ್ರಶ್ಚ ಜ್ವರರೋಗಸಮನ್ವಿತಃ ।
ಸ ಭೂಯಾತ್ಸತತಂ ಕ್ಲೇಶೀ ಯಸ್ಯಾರ್ಯೋಽನುಮತೇ ಗತಃ ॥೪೯॥

ಶ್ರೀರಾಮನು ಕಾಡಿಗೆ ಹೋಗಲು ಅನುಮತಿಸಿದವನು–ಹೇರಳವಾದ ಸಂತಾನವನ್ನು ಪಡೆಯಲಿ. ದರಿದ್ರನಾಗಲಿ. ಸದಾ ಜ್ವರಾದಿರೋಗಗಳಿಂದ ನರಳುತ್ತಿರಲಿ. ಯಾವಾಗಲೂ ಯಾವುದಾದರೊಂದು ಕಾರಣದಿಂದ ಕ್ಲೇಶಪಡುತ್ತಿರಲಿ.

ಆಶಾಮಾಶಂಸಮಾನಾನಾಂ ದೀನಾನಾಮೂರ್ಧ್ವಚಕ್ಷುಷಾಮ್ ।
ಅರ್ಥಿನಾಂ ವಿತಥಾಂ ಕುರ್ಯಾದ್ಯಸ್ಯಾರ್ಯೋಽನುಮತೇ ಗತಃ ॥೫೦॥

ಶ್ರೀರಾಮನ ವನವಾಸವನ್ನು ಅನುಮತಿಸಿದವನು–ತನ್ನ ಆಶೆಯನ್ನು ವ್ಯಕ್ತಪಡಿಸಿ ಉನ್ನತಾಸನದಲ್ಲಿ ಕುಳಿತಿರುವ ದಾನಿಯನ್ನು, ಕಣ್ಣುಗಳನ್ನು ಮೇಲೆತ್ತಿ ದೈನ್ಯದಿಂದ ಅವನ ಮುಖವನ್ನೇ ನೋಡುತ್ತಾ ದಾನವನ್ನು ನಿರೀಕ್ಷಿಸುತ್ತಿರುವ ದೀನನ ಆಶೆಯನ್ನು ವ್ಯರ್ಥಗೊಳಿಸಲಿ.*

ಮಾಯಯಾ ರಮತಾಂ ನಿತ್ಯಂ ಪರುಷಃ ಪಿಶುನೋಽಶುಚಿಃ।
ರಾಜ್ಞೋ ಭೀತಸ್ತ್ವಧರ್ಮಾತ್ಮಾ ಯಸ್ಯಾರ್ಯೋಽನುಮತೇ ಗತಃ ॥೫೧॥

ಶ್ರೀರಾಮನು ಅರಣ್ಯಕ್ಕೆ ಹೋಗಲು ಅನುಮತಿಸಿದ ದುಷ್ಟನು ನಿತ್ಯವೂ ಕಪಟವೃತ್ತಿಯಿಂದಲೇ ಜೀವನವನ್ನು ನಡೆಸಲಿ. ಚಾಡಿಕೋರ ನಾಗಿರಲಿ. ಸದಾ ಅಶುಚಿಯಾಗಿರಲಿ. ತನ್ನ ದುಷ್ಟಕಾರ್ಯಕ್ಕಾಗಿ ರಾಜನಿಗೆ ಭಯಪಡುತ್ತಿರಲಿ. ಸರ್ವದಾ ಅಧರ್ಮದಲ್ಲಿಯೇ ಪ್ರವೃತ್ತಿಯುಳ್ಳವನಾಗಿರಲಿ.

ಋತುಸ್ನಾತಾಂ ಸತೀಂ ಭಾರ್ಯಾಮೃತುಕಾಲಾನುರೋಧಿನೀಮ್ ।
ಅತಿವರ್ತೇತ ದುಷ್ಟಾತ್ಮಾ ಯಸ್ಯಾರ್ಯೋಽನುಮತೇ ಗತಃ ॥೫೨॥

ಶ್ರೀರಾಮನು ಕಾಡಿಗೆ ಹೋಗಲು ಅನುಮತಿಸಿದ ದುಷ್ಟಾತ್ಮನು

---

*ಧನಿಕನಾದವನ ಬಳಿಗೆ ಹೋಗಿ ದರಿದ್ರರು ಧನಿಕನ ಗುಣಗಾನಮಾಡುತ್ತಾ ಬೇಡುತ್ತಾರೆ. ಆ ಸಮಯದಲ್ಲವರು ದಾನಿಯ ಮುಖವನ್ನೇ ದೈನ್ಯದಿಂದ ಎವೆಯಿಕ್ಕದೇ ನೋಡುವುದು ಸ್ವಾಭಾವಿಕವಾದುದು. ದರಿದ್ರನು ತನ್ನ ಆಶಯವೆಲ್ಲವನ್ನೂ ಹೇಳಿಕೊಂಡು ತನಗೇನಾದರೂ ಸಹಾಯ ದೊರೆಯುವುದೆಂಬ ಆಸೆಯಿಂದಿರುವಾಗ ಮತ್ತನಾದ ಧನಿಕನು– 'ಇಲ್ಲ : ಮುಂದೆ ಹೋಗು' –ಎಂದರೆ ದರಿದ್ರನ ಹೃದಯವು ಪರಿತಪಿಸುವುದು. ಅಂತೆಯೇ ಮತ್ತನಾದ ಧನಿಕನಿಗೂ ಪಾಪಸಂಘಟನೆಯಾಗುವುದು. ಆದುದರಿಂದ ಭಿಕ್ಷುಕರನ್ನು ಯಾವಾಗಲೂ ಬರಿಗೈಯಿಂದ ಕಳುಹಿಸಬಾರದೆಂಬುದೂ ಆರ್ಯರ ಸಂಪ್ರದಾಯ.

ಋತುಸ್ನಾತೆಯಾಗಿ ಋತುಕಾಲಕ್ಕೆ ಅನುಗುಣವಾಗಿ ತನ್ನ ಬಳಿಗೆ ಬರುವ ಸಾಧ್ವಿಯಾದ ಭಾರ್ಯೆಯನ್ನು ದೂರೀಕರಿಸಲಿ.[1]

ವಿಪ್ರಲುಪ್ತಪ್ರಜಾತಸ್ಯ ದುಷ್ಕೃತಂ ಬ್ರಾಹ್ಮಣಸ್ಯ ಯತ್ ।
ತದೇವ ಪ್ರತಿಪದ್ಯೇತ ಯಸ್ಯಾರ್ಯೋಽನುಮತೇ ಗತಃ ॥೫೩॥

ಹುಟ್ಟಿದ ಮಕ್ಕಳು ಸತ್ತುಹೋಗಿ ಸಂತತಿಹೀನನಾದ ಬ್ರಾಹ್ಮಣನು ವಂಶಾಭಿವೃದ್ಧಿಗೂ, ತಿಲೋದಕಕ್ರಿಯೆಗೂ ಮಾರ್ಗವಿಲ್ಲದೇ ಎಂತಹ ದುರ್ಗತಿಯನ್ನು ಹೊಂದುವನೋ–ಅದೇ ವಿಧವಾದ ದುರ್ಗತಿಯನ್ನು ಶ್ರೀರಾಮನ ವನವಾಸವನ್ನು ಅನುಮತಿಸಿದ ದುಷ್ಟನು ಪಡೆಯಲಿ.

ಬ್ರಾಹ್ಮಣಾಯೋದ್ಯತಾಂ ಪೂಜಾಂ ವಿಹನ್ತು ಕಲುಷೇನ್ದ್ರಿಯಃ ।
ಬಾಲವತ್ಸಾಂ ಚ ಗಾಂ ದೋಗ್ಧುರ್ಯಸ್ಯಾರ್ಯೋಽನುಮತೇ ಗತಃ ॥

ಶ್ರೀರಾಮನ ವನವಾಸವನ್ನು ಅನುಮತಿಸಿದ ಕಲ್ಮಷವಾದ ಮನಸ್ಸಿನಿಂದ ಕೂಡಿರುವ ದುರಾತ್ಮನು-ಬ್ರಾಹ್ಮಣನಿಗೆ ಮಾಡುವ ಸತ್ಕಾರವನ್ನು ತಡೆದು ನಿಲ್ಲಿಸಲಿ.[2] ಎಳೆಗರುವಿನ ತಾಯಹಾಲನ್ನು ಕರುವಿಗೂ ಬಿಡದೇ ಕರೆದುಕೊಳ್ಳಲಿ.

ಧರ್ಮದಾರಾನ್ಪರಿತ್ಯಜ್ಯ ಪರದಾರಾನ್ನಿಷೇವತಾಮ್ ।
ತ್ಯಕ್ತಧರ್ಮರತಿರ್ಮೂಢೋ ಯಸ್ಯಾರ್ಯೋಽನುಮತೇ ಗತಃ ॥೫೫॥

ಶ್ರೀರಾಮನ ಅರಣ್ಯವಾಸವನ್ನು ಅನುಮತಿಸಿದ ಮೂಢನು–ಧರ್ಮ

---

[1]ಪತ್ನಿಯು ಋತುಸ್ನಾನ ಮಾಡಿದ ದಿನ ಗಂಡನು ಅವಶ್ಯವಾಗಿ ಅವಳ ಸಂಗ ಮಾಡಬೇಕು. ಯಾವ ಕಾರಣದಿಂದಲಾದರೂ ಹಾಗೆ ಮಾಡದಿದ್ದಲ್ಲಿ ಪಾಪಭೂಯಿಷ್ಠನಾಗುತ್ತಾನೆ.

2 ವಿಶೇಷಸಮಯಗಳಲ್ಲಿ ಸ್ವತಃ ಬ್ರಾಹ್ಮಣಪೂಜೆಯನ್ನು ಮಾಡುವುದು ಶ್ರೇಯಸ್ಕರ. ತಾನು ಮಾಡಲಾಗದಿದ್ದರೆ ಮತ್ತೊಬ್ಬರಿಗೆ ಬ್ರಾಹ್ಮಣಪೂಜೆಯನ್ನು ಮಾಡುವಂತೆ ಹೇಳಬಹುದು. ಇದಕ್ಕೆ ಬದಲಾಗಿ ಮತ್ತೊಬ್ಬರು ಮಾಡುತ್ತಿರುವ ಬ್ರಾಹ್ಮಣಪೂಜೆಯನ್ನು ಪ್ರತಿಬಂಧಿಸಿದರೆ ಅದರಿಂದ ಮಹಾಪಾತಕವು ಪ್ರಾಪ್ತವಾಗುವುದು. ಹಸುವಿನ ಕರುವು ಎಳೆಯದಾಗಿರುವಾಗ ಹಸುವಿನ ಹಾಲನ್ನು ಕರೆಯಬಾರದು. ಇದು ಶಾಸ್ತ್ರವಿಧಿ. ಇದಕ್ಕೆ ಬದಲಾಗಿ ಹುಟ್ಟಿದ ಕರುವಿಗೇ ಬಿಡದೆ ಪ್ರಲೋಭಿಯಾಗಿ ಎಲ್ಲ ಹಾಲನ್ನೂ ಕರೆದುಕೊಳ್ಳುವವನು ಮಹಾಪಾತಕಕ್ಕೆ ಗುರಿಯಾಗುತ್ತಾನೆ.

ಪತ್ನಿಯನ್ನು ಪರಿತ್ಯಜಿಸಿ ಪರಪತ್ನಿಯರನ್ನು ಉಪಭೋಗಿಸಿದ ಪಾಪಕ್ಕೆ ಗುರಿಯಾಗಲಿ. ಧರ್ಮವನ್ನು ಪರಿತ್ಯಾಗಮಾಡುವುದರಲ್ಲಿಯೇ ಅಭಿರುಚಿಯುಳ್ಳವನಾಗಿರಲಿ.[1]

ಪಾನೀಯದೂಷಕೇ ಪಾಪಂ ತಥೈವ ವಿಷದಾಯಕೇ ।
ಯತ್ತದೇಕಃ ಸ ಲಭತಾಂ ಯಸ್ಯಾರ್ಯೋಽನುಮತೇ ಗತಃ ॥೫೬॥

ಯಾವನ ಅನುಮತಿಯಿಂದ ಶ್ರೀರಾಮನು ಕಾಡಿಗೆ ಹೋದನೋ ಅಂತಹ ದುಷ್ಟನು–ಕುಡಿಯುವ ನೀರನ್ನು ಕೆಡಿಸುವವನಿಗೆ ಮತ್ತು ವಿಷಹಾಕುವವನಿಗೆ ಪ್ರಾಪ್ತವಾಗುವ ಪಾಪವನ್ನು ಏಕಕಾಲದಲ್ಲಿ ಪಡೆಯಲಿ.

ತೃಷಾರ್ತಂ ಸತಿ ಪಾನೀಯೇ ವಿಪ್ರಲಮ್ಭೇನ ಯೋಜಯೇತ್ ।
ಯತ್ಪಾಪಂ ಲಭತೇ ತತ್ಸ್ಯಾದ್ಯಸ್ಯಾರ್ಯೋಽನುಮತೇ ಗತಃ ॥೫೭॥

ಮನೆಯಲ್ಲಿ ಕುಡಿಯುವ ನೀರಿದ್ದಾಗಲೂ ಬಾಯಾರಿಕೆಯಿಂದ ಬಳಲಿ ಬಂದವನಿಗೆ ಕುಡಿಯಲು ನೀರಿಲ್ಲವೆಂದು ಹೇಳಿಕಳುಹಿಸುವವನಿಗೆ ಪ್ರಾಪ್ತವಾಗುವ ಮಹಾಪಾಪವು ಶ್ರೀರಾಮನ ಅರಣ್ಯವಾಸವನ್ನು ಅನುಮತಿಸಿದವನಿಗೂ ಪ್ರಾಪ್ತವಾಗಲಿ.

ಭಕ್ತ್ಯಾ ವಿವದಮಾನೇಷು ಮಾರ್ಗಮಾಶ್ರಿತ್ಯ ಪಶ್ಯತಃ ।
ತಸ್ಯ ಪಾಪೇನ ಯುಜ್ಯೇತ ಯಸ್ಯಾರ್ಯೋಽನುಮತೇ ಗತಃ ॥೫೮॥

ದಾರಿ ಯಾವುದು? ಎಂಬ ಬಗೆಗೆ ಇಬ್ಬರು ಭಿನ್ನಾಭಿಪ್ರಾಯದಿಂದ ಜಗಳವಾಡುತ್ತಿರುವಾಗ–ಸರಿಯಾದ ದಾರಿಯಲ್ಲಿ ಇರುವವನೊಬ್ಬನು ಸರಿಯಾದ ದಾರಿಯನ್ನು ತೋರಿಸದೇ ಸುಮ್ಮನೆ ಆ ಕಲಹವನ್ನು ನೋಡುತ್ತಿದ್ದರೆ ಅವನಿಗೆ ಯಾವ ಪಾಪವು ಉಂಟಾಗುತ್ತದೆಯೋ–ಆ ಪಾಪವು ಪೂಜ್ಯನಾದ ನಮ್ಮ ಅಣ್ಣನ ಅರಣ್ಯಗಮನಕ್ಕೆ ಅನುಮತಿಸಿದವನಿಗೂ ಉಂಟಾಗಲಿ."[2]

---

[1]ಧರ್ಮಪತ್ನಿಯನ್ನು ಪರಿತ್ಯಾಗ ಮಾಡುವುದೇ ಪಾಪಹೇತುವಾದುದು. ಧರ್ಮಪತ್ನಿಯನ್ನೂ ತ್ಯಾಗಮಾಡಿ ಪರದಾರಾಭಿಗಮನಮಾಡುವುದಂತೂ ಮಹಾಪಾಪಕರ.

[2]ಶಿವನಲ್ಲಿ ಅಥವಾ ವಿಷ್ಣುವಿನಲ್ಲಿ ಭಕ್ತಿಯ ಕಾರಣದಿಂದ ಶಿವನೇ ಶ್ರೇಷ್ಠನು ಅಥವಾ ವಿಷ್ಣುವೇ ಶ್ರೇಷ್ಠನು–ಎಂದು ಆಯಾ ದೇವತೆಗಳ ಭಕ್ತರು ವಾದಮಾಡುತ್ತಿರುವ ಸಮಯದಲ್ಲಿ ಅವರ ಪಕ್ಕದಲ್ಲಿ ನಿಂತು ಹರಿ-ಹರರ ದೂಷಣೆಯನ್ನು ಯಾವನು ಕೇಳು

ದುಃಖಪೀಡಿತನಾಗಿದ್ದ ದಶರಥನ ಮಗ ಭರತನು ಪತಿ-ಸುತರಿಬ್ಬರಿಂದಲೂ ವಿಹೀನಳಾಗಿದ್ದ ಕೌಸಲ್ಯಾದೇವಿಯನ್ನು ಹೀಗೆ ಆಶ್ವಾಸಿಸುತ್ತಿರುವಾಗಲೇ ಮೂರ್ಛೆಹೊಂದಿ ಕೆಳಗೆ ಬಿದ್ದನು. ಒಂದೆರಡು ಕ್ಷಣಗಳು ಕಳೆದ ನಂತರ ಎಚ್ಚರಗೊಂಡ, ದುಷ್ಕರವಾದ ಶಪಥಗಳಿಂದ ಪ್ರತಿಜ್ಞೆಮಾಡಿ, ಶೋಕತಪ್ತನಾಗಿ ಬುದ್ಧಿಗೆಟ್ಟಿದ್ದ ಭರತನಿಗೆ ಕೌಸಲ್ಯೆಯು ಹೇಳಿದಳು :

"ಪುತ್ರ! ನೀನೂ ಹೀಗೆ ದುಃಖಿಸುತ್ತಿದ್ದರೆ ನನ್ನ ದುಃಖವು ಮತ್ತಷ್ಟು ಅಧಿಕವಾಗುತ್ತದೆ. ನಾನಾಪ್ರಕಾರವಾದ ಶಪಥಗಳನ್ನು ಮಾಡಿ ನನ್ನಲ್ಲಿ ವಿಶ್ವಾಸವನ್ನು ಮೂಡಿಸಿ ನನ್ನ ಪ್ರಾಣಗಳನ್ನೇ ತಡೆಹಿಡಿದಿರುವೆ. ನಿನ್ನ ಈ ಮಾತುಗಳನ್ನು ಕೇಳಿದ ಮೇಲೆ ಪ್ರಾಣಪರಿತ್ಯಾಗಮಾಡಬೇಕೆನ್ನುವ ಮನಸ್ಸು ನನಗೆ ಇಲ್ಲವಾಗಿದೆ.

ದಿಷ್ಟ್ಯಾ ನ ಚಲಿತೋ ಧರ್ಮಾದಾತ್ಮಾ ತೇ ಸಹಲಕ್ಷ್ಮಣಃ ।
ವತ್ಸ ಸತ್ಯಪ್ರತಿಜ್ಞೋ ಮೇ ಸತಾಂ ಲೋಕಾನವಾಪ್ಸ್ಯಸಿ ॥೬೨॥

ಮಗು! ನೀನು ಲಕ್ಷ್ಮಣನಂತೆಯೇ ಸತ್ಯಪ್ರತಿಜ್ಞನಾಗಿರುವೆ. ಸೌಭಾಗ್ಯದ ಕಾರಣದಿಂದ ನಿನ್ನ ಮನಸ್ಸು ಧರ್ಮದಿಂದ ವಿಚಲಿತವಾಗಿಲ್ಲ. ಆದುದರಿಂದ ನೀನು ಸತ್ಪುರುಷರ ಲೋಕಗಳನ್ನು ಪಡೆದುಕೊಳ್ಳುವೆ."

ಕೌಸಲ್ಯಾದೇವಿಯು ಹೀಗೆ ಹೇಳುತ್ತಾ ಭ್ರಾತೃವತ್ಸಲನಾದ ಭರತನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಆ ಲಿಂಗಿಸಿ ಶ್ರೀರಾಮನನ್ನು

ತ್ತಿರುವನೋ–ಅಂತಹವನಿಗೆ ಪ್ರಾಪ್ತವಾಗುವ ಮಹಾಪಾಪವು ಶ್ರೀರಾಮನ ಅರಣ್ಯವಾಸವನ್ನು ಅನುಮೋದಿಸಿದವರಿಗೂ ಪ್ರಾಪ್ತವಾಗಲಿ. ಇಲ್ಲಿ 'ಭಕ್ತ್ಯಾ' ಎಂಬ ಪದವಿರುವುದರಿಂದ ಒಬ್ಬ ವ್ಯಾಖ್ಯಾನಕಾರರು ಹೀಗೂ ವ್ಯಾಖ್ಯೆಮಾಡಿರುತ್ತಾರೆ. ಹರಿ-ಹರರಲ್ಲಿ ಭೇದವನ್ನೆಣಿಸುವುದೇ ಮಹಾಪಾಪಕರವಾದುದು. 'ಅಯಂ ಪರಸ್ತ್ವಯಂ ನೇತಿ ಸಂರಕ್ಷಾಭಿನಿವೇಶಿನಃ । ಯಾತುಧಾನಾ ಭವನ್ತ್ಯೇವ ಪಿಶಾಚಾಶ್ಚ ನ ಸಂಶಯಃ ॥ (ಶಿವಪುರಾಣ) "ಇವನೇ ಶ್ರೇಷ್ಠನು; ಇವನಲ್ಲ" ಎಂದು ತಮ್ಮ ಪಕ್ಷವನ್ನು ರಕ್ಷಿಸಿಕೊಳ್ಳುವುದರಲ್ಲಿ ಅತ್ಯಂತಾಸಕ್ತರಾದವರು ರಾಕ್ಷಸರೂ ಪಿಶಾಚರೂ ಆಗುತ್ತಾರೆ. ಇದರಲ್ಲಿ ಸಂದೇಹವಿಲ್ಲ. ಯೋ ಬ್ರಹ್ಮವಿಷ್ಣು ರುದ್ರಾಣಾಂ ಭೇದಂ ಯುಕ್ತಿನಿವೇಶತಃ। ಸಾಧಯೇದುದರವ್ಯಾಧಿಯುಕ್ತೋ ಭವತಿ ಮಾನವಃ ॥ (ಕರ್ಮವಿಪಾಕಶಾಸ್ತ್ರ)

ನೆನೆದು ದುಃಖಾಧಿಕ್ಯದಿಂದ ಬಿಕ್ಕಿ-ಬಿಕ್ಕಿ ಅಳತೊಡಗಿದಳು. ಅವಳ ಜೊತೆಗೆ ಭರತನೂ ಅಳುತ್ತಲೇ ಇದ್ದನು. ಹೀಗೆ ವಿಲಪಿಸುತ್ತಿದ್ದ, ದುಃಖಪೀಡಿತ ನಾಗಿದ್ದ ಭರತನ ಮನಸ್ಸು ಶೋಕದ ಆಧಿಕ್ಯದಿಂದಲೂ ಮತ್ತು ಮೋಹ ಪರವಶತೆಯಿಂದಲೂ ಬಹಳವಾಗಿ ಕಳವಳಗೊಂಡಿತು. ಕ್ಷಣ-ಕ್ಷಣಕ್ಕೂ ವಿಲಪಿಸುತ್ತಿದ್ದ, ಚೇತನಾರಹಿತನಾಗಿದ್ದ, ಕಾರ್ಯಾಕಾರ್ಯವಿವೇಚನೆಯಿಂದ ಶೂನ್ಯನಾಗಿದ್ದ, ಭೂಮಿಯ ಮೇಲೆ ಬಿದ್ದೆದ್ದು ಬಾರಿ-ಬಾರಿಗೂ ದೀರ್ಘವಾಗಿ ನಿಟ್ಟುಸಿರುಬಿಡುತ್ತಿದ್ದ ಭರತನಿಗೆ ಆ ರಾತ್ರಿಯು ಶೋಕಪಡುತ್ತಿದ್ದಂತೆಯೇ ಕಳೆದುಹೋಯಿತು.

೭೫ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೭೬ನೆಯ ಸರ್ಗ

ದಶರಥನ ಅಂತ್ಯೇಷ್ಟಿಸಂಸ್ಕಾರ

ತಮೇವಂ ಶೋಕಸಂತಪ್ತಂ ಭರತಂ ಕೇಕಯೀಸುತಮ್ ।
ಉವಾಚ ವದತಾಂ ಶ್ರೇಷ್ಠೋ ವಸಿಷ್ಠಃ ಶ್ರೇಷ್ಠವಾಗೃಷಿಃ ॥೧॥

ಹೀಗೆ ಅನವರತವಾಗಿ ಪಿತೃ-ಭ್ರಾತೃವಿಯೋಗದಿಂದಲೇ ಪರಿತಪಿಸುತ್ತಿದ್ದ ಭರತನಿಗೆ ವಾಗ್ಮಿಗಳಲ್ಲಿ ಶ್ರೇಷ್ಠರಾದ ವಸಿಷ್ಠರು ಕಾಲೋಚಿತವಾದ ಈ ಮಾತುಗಳನ್ನು ಹೇಳಿದರು:

“ಯಶೋವಂತನೇ! ರಾಜಪುತ್ರ! ನಿನಗೆ ಮಂಗಳವಾಗಲಿ. ದುಃಖ

ಬ್ರಹ್ಮ-ವಿಷ್ಣು-ರುದ್ರರಲ್ಲಿ ಭೇದವನ್ನು ಯುಕ್ತಿಯಿಂದ ಸಾಧಿಸುವ ಮಾನವನು ಹೊಟ್ಟೆ ನೋವನ್ನು ಅನುಭವಿಸುತ್ತಾನೆ. ಹೀಗಿರುವಾಗ ಹರಿ-ಹರರ ಅವಹೇಳನರೂಪವಾದ ಆ ವಾದವನ್ನು ಕೇಳುವುದು ಇನ್ನೂ ಹೆಚ್ಚಿನ ಪಾಪಕರವೆಂದು ಇವರ ಅಭಿಪ್ರಾಯ. ಆದರೆ ರಾಮಾಯಣದ ಕಾಲದಲ್ಲಿಯೂ ಹರಿ-ಹರರಲ್ಲಿ ಭೇದವೆಣಿಸುವವರಿದ್ದರೇ?– ಎಂಬುದನ್ನು ವಿವೇಚಿಸಬೇಕಾಗಿದೆ. 2) ಮತ್ತೊಬ್ಬರು ಹೀಗೆ ವ್ಯಾಖ್ಯೆಮಾಡಿರುತ್ತಾರೆ. ಇಬ್ಬರು ಪರಸ್ಪರವಾಗಿ ವಾದಮಾಡುತ್ತಿರುವಾಗ ಭಕ್ತ್ಯಾ=ಏಕಸ್ಮಿನ್ ಸ್ನೇಹೇನ ಒಬ್ಬನ ವಿಷಯದಲ್ಲಿ ಸ್ನೇಹವಿಟ್ಟು ಅವನು ಜಯಿಸುವ ಬಗೆಯನ್ನು ಯೋಚಿಸಿ ಸಂಜ್ಞೆಯ ಮೂಲಕ ಅಥವಾ ಯಾವುದಾದರೂ ಚಿಹ್ನೆಗಳ ಮೂಲಕ ಯಾವನು ಜಯಿಸುವ ರಹಸ್ಯವನ್ನು ಹೇಳಿಕೊಡುತ್ತಿರುವನೋ ಅವನಿಗೆ ಪ್ರಾಪ್ತವಾಗಬಹುದಾದ ಮಹಾಪಾಪವು ಪ್ರಾಪ್ತವಾಗಲಿ.

ಪಡುವುದನ್ನು ಸಾಕುಮಾಡು. ನರಪತಿಯಾದ ದಶರಥನಿಗೆ ಅಂತ್ಯಸಂಸ್ಕಾರವನ್ನು ಮಾಡಲು ಇದು ಯೋಗ್ಯವಾದ ಕಾಲವಾಗಿದೆ."

ಧರ್ಮವಿದನಾದ ಭರತನು ವಸಿಷ್ಠರ ಆ ಮಾತನ್ನು ಕೇಳಿ ಮನಸ್ಸಿಗೆ ಧೈರ್ಯವನ್ನು ತಂದುಕೊಂಡು ಪುರೋಹಿತರ ಆದೇಶದಂತೆ ತಂದೆಯ ಅಪರಕರ್ಮಗಳನ್ನು ಮಾಡಲುದ್ಯುಕ್ತನಾದನು.

ಎಣ್ಣೆಯ ಕೊಪ್ಪರಿಗೆಯಿಂದ ದಶರಥನ ಕಳೇಬರವನ್ನು ಮೇಲೆತ್ತಿ ಭೂಮಿಯ ಮೇಲಿಟ್ಟರು. ಕೊಪ್ಪರಿಗೆಯಲ್ಲಿ ಪಾರ್ಥಿವಶರೀರವು ಬಹಳ ದಿವಸಗಳಿದ್ದುದರಿಂದ ಮುಖದ ಬಣ್ಣವು ಹಳದಿಯಾಗಿದ್ದಿತು. ರಾಜನು ಸುಖವಾಗಿ ಮಲಗಿರುವನೋ ಎಂಬಂತೆಯೇ ಕಾಣುತ್ತಿದ್ದನು. ಬಳಿಕ ನಾನಾವಿಧವಾದ ರತ್ನಗಳಿಂದ ಪರಿಷ್ಕೃತವಾಗಿದ್ದ ಹಾಸಿಗೆಯಲ್ಲಿ ರಾಜನ ಪಾರ್ಥಿವಶರೀರವನ್ನು ಮಲಗಿಸಿದರು. ತಂದೆಯ ಶರೀರವನ್ನು ನೋಡಿ ಭರತನು ಬಹಳವಾಗಿ ದುಃಖಿಸಿದನು.

"ಅಪ್ಪ! ನೀನೇ ನನ್ನನ್ನು ಸೋದರಮಾವನ ಮನೆಗೆ ಕಳುಹಿಸಿಕೊಟ್ಟಿದ್ದೆ. ನಾನಿನ್ನೂ ಅಯೋಧ್ಯೆಗೆ ಬರುವ ಮೊದಲೇ ಧರ್ಮಜ್ಞನಾದ ರಾಮನನ್ನೂ ಮಹಾಬಲನಾದ ಲಕ್ಷ್ಮಣನನ್ನೂ ಕಾಡಿಗೆ ಕಳುಹಿಸಿದೆ. ನಿನ್ನ ಮಕ್ಕಳಲ್ಲಿ ಯಾರೂ ನಿನ್ನ ಸಮೀಪದಲ್ಲಿ ಇಲ್ಲದೇ ಇರುವಾಗ ಪ್ರಾಣತೊರೆ ಯಲು ಏಕೆ ನಿಶ್ಚಯಿಸಿದೆ? ಸರಳಸ್ವಭಾವದವನಾದ ಶ್ರೀರಾಮನಿಂದಲೂ ವಿಹೀನನಾಗಿರುವೆ. ಹೆಚ್ಚು ದುಃಖಪಡುತ್ತಿರುವ ಈ ಜನಸ್ತೋಮವನ್ನು ಬಿಟ್ಟು ನೀನೆಲ್ಲಿಗೆ ಹೋಗುವೆ? ರಾಮನೂ ಅರಣ್ಯಕ್ಕೆ ಹೊರಟುಹೋಗಿರುವಾಗ ನೀನೂ ಸ್ವರ್ಗಕ್ಕೆ ಹೊರಟುಹೋದರೆ–ಈ ಅಯೋಧ್ಯಾಪಟ್ಟಣದ ಜನರ ಯೋಗ-ಕ್ಷೇಮಗಳನ್ನು ನೋಡಿಕೊಳ್ಳುವವರು ತಾನೇ ಯಾರಿದ್ದಾರೆ? ಈ ನೀನಿಲ್ಲದಿರುವ ಈ ಪೃಥ್ವಿಯು ಗಂಡನಿಲ್ಲದ ವಿಧವೆಯಂತೆಯೇ ಕಾಣುತ್ತಿದೆ. ಈ ಅಯೋಧ್ಯಾಪಟ್ಟಣವಂತೂ ಚಂದ್ರನಿಲ್ಲದ ರಾತ್ರಿಯಂತೆ ನಿಸ್ತೇಜವಾಗಿದೆ."

ಹೀಗೆ ತಂದೆಯ ಪಾರ್ಥಿವಶರೀರದ ಮುಂದೆ ನಿಂತು ದೈನ್ಯದಿಂದ ಗೋಳಾಡುತ್ತಿದ್ದ ಭರತನಿಗೆ ಮಹಾಮುನಿಗಳಾದ ವಸಿಷ್ಠರು ಪುನಃ ಹೇಳಿದರು :

"ಮಹಾಬಾಹುವೇ! ಭರತ! ರಾಜನ ಪ್ರೇತಕಾರ್ಯಗಳು ಯಾವುವಿವೆಯೋ ಅವೆಲ್ಲವನ್ನೂ ಸಾಂಗವಾಗಿ ಮಾಡಬೇಕಾದುದು ಈಗಿನ ಮುಖ್ಯ ಕರ್ತವ್ಯವಾಗಿದೆ. ಪ್ರಸಕ್ತಸಂದರ್ಭದಲ್ಲಿ ಬೇರೆ ಯಾವುದನ್ನೂ ಯೋಚಿಸ ಹೋಗದೇ ಪ್ರೇತಸಂಸ್ಕಾರವನ್ನು ಏಕಾಗ್ರತೆಯಿಂದ ಮಾಡು."*

ಭರತನು ಹಾಗೆಯೇ ಆಗಲೆಂದು ಹೇಳಿ ಪೂಜ್ಯರಾದ ವಸಿಷ್ಠರನ್ನು ಯಥೋಚಿತವಾಗಿ ಸತ್ಕರಿಸಿ, ಅವರ ಸಲಹೆಯಂತೆ ಮುಂದಿನ ಕಾರ್ಯಗಳನ್ನು ಮಾಡಲು ಋತ್ವಿಜರನ್ನೂ, ಪುರೋಹಿತರನ್ನೂ, ಆಚಾರ್ಯರನ್ನೂ ಅವಸರಪಡಿಸಿದನು.

ದಶರಥರಾಜನು ಉಪಾಸನೆಮಾಡುತ್ತಿದ್ದ ಗಾರ್ಹಪತ್ಯಾದಿ ಅಗ್ನಿಗಳನ್ನು ಅಗ್ನಿಗೃಹದಿಂದ ಮೊದಲೇ ಹೊರಗೆ ತಂದಿದ್ದರು. ವಸಿಷ್ಠರಿಂದ ನಿರ್ದೇಶಿಸಲ್ಪಟ್ಟ ಋತ್ವಿಜರೂ ಮತ್ತು ಯಾಜಕರೂ ಆ ಅಗ್ನಿಗಳನ್ನು ಯಥಾವಿಧಿಯಾಗಿ ಪ್ರತಿಷ್ಠಾಪಿಸಿದರು.

ಗದ್ಗದಕಂಠಗಳಿಂದ ಕೂಡಿದ್ದ, ಕಂಬನಿದುಂಬಿದ ಕಣ್ಣುಳ್ಳವರಾಗಿದ್ದ, ಜೀವಿಸಲೇ ಮನಸ್ಸಿಲ್ಲವೋ ಎಂಬಂತೆ ನಿಸ್ತೇಜರಾಗಿದ್ದ ಪರಿಚಾರಕರು ರಾಜನ ಪಾರ್ಥಿವಶರೀರವನ್ನು ಶಿಬಿಕೆಯಲ್ಲಿಟ್ಟು[1] ಅದನ್ನು ಹೊತ್ತು ಕೊಂಡರು.

ಶಿಬಿಕೆಯ ಮುಂಭಾಗದಲ್ಲಿ ಜನರು ದಾರಿಯುದ್ದಕ್ಕೂ ಬೆಳ್ಳಿ ಮತ್ತು ಸುವರ್ಣಗಳ ನಾಣ್ಯಗಳನ್ನೆರಚುತ್ತಾ ವಿಧ-ವಿಧವಾದ ಬಟ್ಟೆಗಳನ್ನು ಹಂಚುತ್ತಾ ಹೋಗುತ್ತಿದ್ದರು. ಮತ್ತೆ ಕೆಲವರು ಚಂದನ, ಅಗರು, ಗುಗ್ಗುಲ ಪದ್ಮಕ, ಸರಲ, ದೇವದಾರು ಮುಂತಾದ ಸುಗಂಧಯುಕ್ತವಾದ ಒಣಗಿದ

---

*ರಾಜಪುರೋಹಿತ ನಮತ್ತು ಆಚಾರ್ಯನ ಲಕ್ಷಣಗಳನ್ನು ಹೀಗೆ ಹೇಳುತ್ತಾರೆ. ತ್ರಯ್ಯಾಂ ಚ ಧರ್ಮಕೃತ್ಯೇ ಚ ಶಾನ್ತಿಕರ್ಮಣಿ ಪೌಷ್ಟಿಕೇ । ಅಧ್ವರೇ ಯಶ್ಚ ಕುಶಲಃ ಸ ಸ್ಯಾದ್ರಾಜಪುರೋಹಿತಃ ॥ ಉಪನೀಯ ವದೇದ್ವೇದಮಾಚಾರ್ಯಃ ಸ ಉದಾಹೃತಃ ॥ ಮಂತ್ರಗಳಲ್ಲಿಯೂ ಧರ್ಮಕಾರ್ಯಗಳಲ್ಲಿಯೂ ಶಾನ್ತಿಕರ್ಮ-ಪೌಷ್ಟಿಕಕರ್ಮಗಳಲ್ಲಿಯೂ ಯಜ್ಞಗಳಲ್ಲಿಯೂ ಯಾವನು ನಿಪುಣನಾಗಿರುವನೋ ಆತನೇ ರಾಜಪುರೋಹಿತನಾಗಬೇಕು. ತನ್ನ ಬಳಿಗೆ ಶಿಷ್ಯರನ್ನು ಕರೆತಂದು ವೇದಾಧ್ಯಯನಮಾಡಿಸುವವನು ಆಚಾರ್ಯನೆನಿಸಿಕೊಳ್ಳುತ್ತಾನೆ.

[1] ಶಿಬಿಕಾ= ಶವವನ್ನು ಒಯ್ಯುವ ವಾಹನವಿಶೇಷ.

ಮರಗಳನ್ನು ತಂದು ರಾಶಿಹಾಕುತ್ತಿದ್ದರು. ಶ್ರೀಗಂಧವೇ ಮೊದಲಾದ ಹಲವಾರು ಸುಗಂಧದ ವೃಕ್ಷಗಳ ಒಣಗಿದ ತುಂಡುಗಳಿಂದ ಚಿತೆಯನ್ನು ಸಿದ್ಧಗೊಳಿಸಿದ ನಂತರ ಶಿಬಿಕೆಯಲ್ಲಿದ್ದ ರಾಜನ ಪಾರ್ಥಿವಶರೀರವನ್ನು ಹೊರತಂದು ಚಿತೆಯ ಮಧ್ಯದಲ್ಲಿಟ್ಟರು. ಬಳಿಕ ಋತ್ವಿಜರು ಭರತನಿಂದ ಚಿತೆಗೆ ಬೆಂಕಿಯಿಡಿಸಿ ಪೈತೃಮೇಧಿಕಮಂತ್ರಗಳನ್ನು ಜಪಿಸಿದರು. ಯಥಾಶಾಸ್ತ್ರವಾಗಿ ಸಾಮಗರು ಸಾಮಗಾನಮಾಡಿದರು.

ದಶರಥನ ಪತ್ನಿಯರು ವೃದ್ಧೆಯರಿಂದ ಪರಿವೃತರಾಗಿ ಪಲ್ಲಕ್ಕಿಗಳಲ್ಲಿಯೂ ರಥಗಳಲ್ಲಿಯೂ ಯಥಾಯೋಗ್ಯವಾಗಿ ಕುಳಿತು ಪಟ್ಟಣದಿಂದ ಹೊರಟರು. ಋತ್ವಿಜರೂ, ಭರತ-ಶತ್ರುಘ್ನರೂ ಮತ್ತು ದುಃಖತಪ್ತರಾಗಿದ್ದ ಕೌಸಲ್ಯೆಯೇ ಮೊದಲಾದ ಸ್ತ್ರೀಯರೂ ಚಿತಾರೂಢನಾಗಿದ್ದ, ಅಗ್ನಿಚಯನ ಮಾಡಿದ್ದ ನೃಪತಿಯನ್ನು ಸವ್ಯಾಪಸವ್ಯರೀತಿಯಲ್ಲಿ ಪ್ರದಕ್ಷಿಣೆಮಾಡಿದರು. (ಒಮ್ಮೆ ಎಡಕ್ಕೂ ಮತ್ತೊಮ್ಮೆ ಬಲಕ್ಕೂ ಚಿತೆಯನ್ನು ಬಿಟ್ಟುಕೊಂಡು ಸುತ್ತಿದರು.) ಆರ್ತರಾಗಿದ್ದ ಸಾವಿರಾರು ಸ್ತ್ರೀಯರು ಆ ಸಮಯದಲ್ಲಿ ಮಾಡುತ್ತಿದ್ದ ಆರ್ತಧ್ವನಿಯು ಹೆಣ್ಣು ಕ್ರೌಂಚಪಕ್ಷಿಗಳ ಕಿರಿಚಾಟದೋಪಾದಿಯಲ್ಲಿ ಸುತ್ತಲೂ ಪ್ರತಿಧ್ವನಿಸಿತು. ರಾಜನ ಗುಣಗಾನವನ್ನು ಮಾಡಿಕೊಂಡು ಪುನಃ ಪುನಃ ರೋದನಮಾಡುತ್ತಿದ್ದ ಜ್ಞಾನತಪ್ಪಿದ ಸ್ಥಿತಿಯಲ್ಲಿದ್ದ ಅಂತಃಪುರದ ಸ್ತ್ರೀಯರು (ವಸಿಷ್ಠರ ನಿರ್ದೇಶದಂತೆ) ಯಾನಗಳಲ್ಲಿ ಕುಳಿತು ಸರಯೂ ನದಿಯ ತೀರಕ್ಕೆ ಹೋದರು. ರಾಜಮಹಿಷಿಯರೂ, ಮಂತ್ರಿ-ಪುರೋಹಿತರೂ ಭರತನೊಡಗೂಡಿ ಸರಯೂನದಿಯಲ್ಲಿ ರಾಜನಿಗೆ ಉದಕಕ್ರಿಯೆಯನ್ನು ಮಾಡಿ ಕಂಬನಿದುಂಬಿದ ಕಣ್ಣುಗಳಿಂದ ಕೂಡಿದವರಾಗಿ ಅಯೋಧ್ಯಾಪಟ್ಟಣವನ್ನು ಪ್ರವೇಶಿಸಿ ಹತ್ತು ದಿವಸಗಳವರೆಗೆ ಭೂಮಿಯ ಮೇಲೆಯೇ ಮಲಗುತ್ತಿದ್ದು ಆಶೌಚವನ್ನು ಕಳೆದುಕೊಂಡರು.*

ಎ೬ನೆಯ ಸರ್ಗವು ಮುಗಿಯಿತು.

---

*ದ್ವಾದಶಾಹೇನ ಭೂಪಾಲಃ ಕ್ಷತ್ರಿಯಃ ಷೋಡಶೇಽಹನಿ । ಹನ್ನೆರಡನೇ ದಿನ ಭೂಪಾಲನೂ ಹದಿನಾರನೆಯ ದಿವಸ ಕ್ಷತ್ರಿಯನೂ ಮರಣಾಶೌಚವನ್ನು ಕಳೆದುಕೊಳ್ಳುತ್ತಾರೆಂದು ಸ್ಮೃತಿವಚನವಿದ್ದರೂ, "ಕ್ಷತ್ರಿಯಸ್ತು ದಶಾಹೇನ ಸ್ವಕರ್ಮನಿರತಃ ಶುಚಿಃ ॥ ಸ್ವಕರ್ಮನಿರತನಾದ ಕ್ಷತ್ರಿಯನು ಹತ್ತು ದಿವಸಗಳಲ್ಲಿ ಶುಚಿಯಾಗುತ್ತಾನೆ" ಎಂದು ಪರಾಶರರ ವಚನವಿರುವುದರಿಂದ ಇಲ್ಲಿ ಹೇಳಿರುವುದು ಸಮಂಜಸವಾಗಿದೆ.

ಭರತನು ತಂದೆಯ ಶ್ರಾದ್ಧಕರ್ಮದಲ್ಲಿ ಬ್ರಾಹ್ಮಣರಿಗೆ ಧನ-ಕನಕ-ವಸ್ತುಗಳನ್ನು ದಾನಕೊಟ್ಟುದು: ಹದಿಮೂರನೆಯ ದಿವಸ ಅಸ್ಥಿಸಂಚಯನದ ಕರ್ಮವನ್ನು ಮಾಡಲು ಹೋದ ಭರತ-ಶತ್ರುಘ್ನರು ಚಿತಾಭೂಮಿಯ ಮೇಲೆ ನಿಂತು ರೋದನಮಾಡಿದುದು : ವಸಿಷ್ಠರೂ ಮತ್ತು ಮಂತ್ರಿಗಳೂ ಸಮಾಧಾನಗೊಳಿಸಿದುದು

ತತೋ ದಶಾಹೇಽತಿಗತೇ ಕೃತಶೌಚೋ ನೃಪಾತ್ಮಜಃ ।
ದ್ವಾದಶೇಽಹನಿ ಸಂಪ್ರಾಪ್ತೇ ಶ್ರಾದ್ಧಕರ್ಮಾಣ್ಯಕಾರಯತ್ ॥೧॥

ಹತ್ತು ದಿವಸಗಳು ಕಳೆದ ನಂತರ ಹನ್ನೊಂದನೆಯ ದಿನ ಭರತನು ಸೂತಕವನ್ನು ಕಳೆದುಕೊಂಡು ಹನ್ನೆರಡನೆಯ ದಿವಸ ಸಪಿಂಡೀಕರಣಾಂತ ವಾದ ಶ್ರಾದ್ಧಕರ್ಮಗಳನ್ನು ಯಥಾವಿಧಿಯಾಗಿ ಮಾಡಿದನು.

ಶ್ರಾದ್ಧದ ಸಂಬಂಧವಾಗಿ ಭರತನು ಬ್ರಾಹ್ಮಣರಿಗೆ ಪುಷ್ಕಳವಾದ ಮೃಷ್ಟಾನ್ನವನ್ನು ಭೋಜನ ಮಾಡಿಸಿ ಧನ-ರತ್ನಗಳನ್ನೂ, ವಸ್ತ್ರಗಳನ್ನೂ, ಆಡುಗಳನ್ನೂ, ಹೇರಳವಾಗಿ ಬೆಳ್ಳಿಯನ್ನೂ, ಗೋವುಗಳನ್ನೂ ದಾನಮಾಡಿದನು. ರಾಜನ ಪರಲೋಕಪ್ರಾಪ್ತಿಗಾಗಿ ಭರತನು ಬ್ರಾಹ್ಮಣರಿಗೆ ಅನೇಕಾನೇಕ ದಾಸ-ದಾಸಿಯರನ್ನೂ, ರಥಗಳನ್ನೂ, ದೊಡ್ಡ ಸೌಧಗಳನ್ನೂ ದಾನವಾಗಿ ಕೊಟ್ಟನು. ಬಳಿಕ ಹದಿಮೂರನೆಯ ದಿವಸ ಬೆಳಗಾಗುತ್ತಲೇ ಮಹಾಬಾಹುವಾದ ಭರತನು ಅಸ್ಥಿಸಂಚಯನಾರ್ಥವಾಗಿ ಚಿತೆಯ ಬಳಿಗೆ ಹೋಗಿ ಶೋಕಾವಿಷ್ಟವಾಗಿ ಅಳತೊಡಗಿದನು.* ಆ ಸಮಯದಲ್ಲಿ ಭರತನಿಗೆ

---

*ಈಗಿನ ಸಂಪ್ರದಾಯದಂತೆ ಅಸ್ಥಿಸಂಚಯನವು ಸಾಮಾನ್ಯವಾಗಿ ಎರಡನೆಯ ದಿನವೇ ನಡೆದುಹೋಗುತ್ತದೆ. ಆದರೆ ಸೂತ್ರಾಂತರದಲ್ಲಿ ಒಂದು ವರ್ಷದವರೆಗೂ ಅಸ್ಥಿಸಂಚಯನಕ್ಕೆ ಅವಕಾಶವಿದೆ. "ದ್ವಿತೀಯೇಽಹ್ನಿ ಯುಗ್ಮದಿವಸೇಷ್ವರ್ಧಾನ್ಮಾಸಾನೃತೂನ್ ಸಂವತ್ಸರಂ ವಾ ಸಂಚಯನಂ ಕುರ್ಯಾತ್" (ಬೋಧಾಯನಃ) "ದಹನಾನಂತರದಲ್ಲಿ ಎರಡನೆಯದಿನ, ಸಮದಿವಸಗಳು, ಅರ್ಧಮಾಸ, ಮಾಸ, ಋತು, ಸಂವತ್ಸರ -ಈ ಕಾಲಗಳಲ್ಲಿ ಅಸ್ಥಿಸಂಚಯನ ಮಾಡಬೇಕು." ಕ್ಷತ್ರಿಯರಿಗೆ ಹದಿಮೂರನೆಯ ದಿವಸ ಅಸ್ಥಿಸಂಚಯನವನ್ನು ಮಾಡಲು ಸ್ಮೃತಿತಂತ್ರಗಳಲ್ಲಿ ಅವಕಾಶವಿರಬಹುದು.

ದುಃಖದಿಂದ ಗಂಟಲು ಕಟ್ಟಿಹೋಗಿದ್ದಿತು. ಚಿತೆಯ ಮೂಲೆಯಲ್ಲಿ ನಿಂತು ಅತ್ಯಂತದುಃಖಿತನಾಗಿ ಹೇಳಿದನು:

"ತಾತ! ಈ ಮೊದಲು ನೀನು ನನ್ನನ್ನು ಶ್ರೀರಾಮನ ವಶಕ್ಕೆ ಒಪ್ಪಿಸಿದ್ದೆ. ಈಗ ಆ ರಾಘವನನ್ನೇ ನೀನು ಅರಣ್ಯಕ್ಕೆ ಕಳುಹಿಸಿಬಿಟ್ಟಿರುವೆ. ಇದರಿಂದಾಗಿ ನಾನು ಶೂನ್ಯವಾದ, ಸ್ವಜನರಹಿತವಾದ ಸ್ಥಳದಲ್ಲಿ ಪರಿತ್ಯಕ್ತನಾಗಿರುವೆನು. ಅನಾಥೆಯಾದ ಕೌಸಲ್ಯಾದೇವಿಗೆ ಪುತ್ರನೇ ಆಶ್ರಯನಾಗಿದ್ದನು. ತಾಯಿಗೆ ಆಶ್ರಯಭೂತನಾದ ಪುತ್ರನನ್ನೇ ನೀನು ಅರಣ್ಯಕ್ಕೆ ಕಳುಹಿಸಿದೆ. ಆಶ್ರಯರಹಿತಳಾದ ಅನಾಥೆಯಾದ ಕೌಸಲ್ಯೆಯನ್ನು ತ್ಯಜಿಸಿ ನೀನೆಲ್ಲಿಗೆ ಹೊರಟುಹೋದೆ?"

ತಂದೆಯ ಚಿತೆಯಿದ್ದ ಆ ಸ್ಥಾನಮಂಡಲವು ಭಸ್ಮದಿಂದ ತುಂಬಿಹೋಗಿದ್ದಿತು. ಅಲ್ಲಲ್ಲಿ ಬೆಂಕಿಯು ಕಾಣಿಸಿಕೊಳ್ಳುತ್ತಿದ್ದು ಕೆಂಪಾಗಿಯೂ ಇದ್ದಿತು. ಸುಟ್ಟುಹೋದ ಮೂಳೆಗಳು ಸರ್ವತ್ರ ವ್ಯಾಪ್ತವಾಗಿದ್ದುವು. ರಾಜನ ಶರೀರ ವಿನಾಶಕವಾದ ಆ ಸ್ಥಳವನ್ನು ನೋಡಿ ಭರತನು ಬಹಳವಾಗಿ ದುಃಖಿಸಿದನು.

ಮೇಲೇರಿಸಲ್ಪಡುತ್ತಿದ್ದ ಇಂದ್ರಧ್ವಜವು ಕೆಳಕ್ಕೆ ಬೀಳುವಂತೆ–ಚಿತಾ ಮಂಡಲವನ್ನು ನೋಡಿ ದೀನನಾದ ಭರತನು ಅಳುತ್ತಳುತ್ತಲೇ ಕೆಳಗೆ ಬಿದ್ದನು. ಪುಣ್ಯವು ಮುಗಿದನಂತರ ಸ್ವರ್ಗದಿಂದ ಚ್ಯುತನಾದ ಯಯಾತಿಯನ್ನು ಋಷಿಗಳು ಸುತ್ತುವರಿದು ನಿಂತಂತೆ–ದುಃಖಿತನಾಗಿ ಕುಸಿದುಬಿದ್ದ ಶುಚಿವ್ರತನಾದ ಭರತನನ್ನು ಅಮಾತ್ಯರು ಸುತ್ತುವರಿದು ನಿಂತರು. ಶೋಕಪೀಡಿತನಾಗಿದ್ದ ಭರತನನ್ನು ನೋಡಿ ಶತ್ರುಘ್ನನೂ ತಂದೆಯನ್ನು ಸ್ಮರಿಸಿಕೊಳ್ಳುತ್ತಾ ಎಚ್ಚರತಪ್ಪಿ ಕೆಳಕ್ಕೆ ಬಿದ್ದನು. ವಯಸ್ಸಿಗೆ ಅನುಗುಣವಾಗಿ ತಂದೆಯು ಆಯಾ ಕಾಲಗಳಲ್ಲಿ ಹೇಳುತ್ತಿದ್ದ ಮುದ್ದಿನ ಮಾತುಗಳನ್ನೂ, ಉಪದೇಶಗಳನ್ನೂ ಸ್ಮರಿಸಿಕೊಳ್ಳುತ್ತಾ ಅತ್ಯಂತ ದುಃಖಿತನಾಗಿ ಹುಚ್ಚನಂತೆ ಅಥವಾ ಬುದ್ಧಿಯೇ ಇಲ್ಲದವನಂತೆ ಗಟ್ಟಿಯಾಗಿ ಅಳುತ್ತಿದ್ದನು.

ಮನ್ಥರಾಪ್ರಭವಸ್ತೀವ್ರಃ ಕೈಕೇಯೀಗ್ರಾಹಸಂಕುಲಃ ।
ವರದಾನಮಯೋಽಕ್ಷೋಭ್ಯೋಽಮಜ್ಜಯಚ್ಛೋಕಸಾಗರಃ ॥೧೩॥

"ಈ ಶೋಕಸಾಗರವು ಸೃಷ್ಟಿಯಾದದ್ದು ಮಂಥರೆಯಿಂದ. ಈ

ಸಮುದ್ರದಲ್ಲಿ ಕೈಕೇಯಿಯು ಮೊಸಳೆಯ ರೂಪದಲ್ಲಿದ್ದಾಳೆ. ವರದಾನವೆಂಬ ನೀರಿನಿಂದ ಈ ಸಮುದ್ರವು ತುಂಬಿಹೋಗಿದೆ. ಆದುದರಿಂದಲೇ ಇದು ತಪ್ಪಿಸಿಕೊಳ್ಳಲು ಅಸಾಧ್ಯವಾಗಿದೆ. ಇಂತಹ ಶೋಕಸಾಗರದಲ್ಲಿ ನಾವೆಲ್ಲರೂ ಮುಳುಗಿಹೋಗಿದ್ದೇವೆ."

ಚಿತಾಮಂಡಲದ ಕಡೆಗೆ ನೋಡುತ್ತಾ ಶತ್ರುಘ್ನನು ತಂದೆಯನ್ನುದ್ದೇಶಿಸಿ ಹೇಳಿದನು :

ಸುಕುಮಾರಂ ಚ ಬಾಲಂ ಚ ಸತತಂ ಲಾಲಿತಂ ತ್ವಯಾ ।
ಕ್ವ ತಾತ ಭರತಂ ಹಿತ್ವಾ ವಿಲಪನ್ತಂ ಗತೋ ಭವಾನ್ ॥೧೪॥

"ತಾತ! ಭರತನಿನ್ನೂ ಸುಕುಮಾರನು. ಬಾಲಕನು. ಇವನನ್ನು ನೀನು ಯಾವಾಗಲೂ ಲಾಲಿಸಿ ಪಾಲಿಸುತ್ತಿದ್ದೆ. ಈಗವನು ನಿನಗಾಗಿ ಅತ್ತು-ಅತ್ತು ಪರಿತಪಿಸುತ್ತಿದ್ದಾನೆ. ಅಂತಹ ನಿನ್ನ ಪ್ರಿಯಪುತ್ರನಾದ ಭರತನನ್ನು ಬಿಟ್ಟು ನೀನೆಲ್ಲಿಗೆ ಹೊರಟುಹೋದೆ?

ಭಕ್ಷ್ಯ-ಭೋಜ್ಯಗಳ ವಿಷಯದಲ್ಲಾಗಲೀ, ಪಾನೀಯಗಳ ವಿಷಯ ದಲ್ಲಾಗಲೀ, ವಸ್ತ್ರಾಭರಣಗಳ ವಿಷಯದಲ್ಲಾಗಲೀ–ನೀನು ಎಲ್ಲವನ್ನೂ ನಮ್ಮ ಮುಂದಿಟ್ಟು ನಿಮಗೆ ಬೇಕಾದ್ದನ್ನು ಆರಿಸಿಕೊಳ್ಳಿರೆಂದು ನಮಗೆ ಹೇಳುತ್ತಿದ್ದೆ. ಮುಂದೆ ಹೀಗೆ ಬೇರೆ ಯಾರು ಮಾಡುತ್ತಾರೆ? ನಮ್ಮ ವಿಷಯದಲ್ಲಿ ಇಷ್ಟು ಅಕ್ಕರೆಯನ್ನು ಯಾರು ತೋರುತ್ತಾರೆ? ಧರ್ಮಜ್ಞನಾದ, ಮಹಾತ್ಮನಾದ, ನಿನ್ನಿಂದ ವಿಹೀನಳಾಗಿರುವ ಪೃಥ್ವಿಯು ಈ ವೇಳೆಗಾಗಲೇ ಸೀಳಿಹೋಗಬೇಕಾಗಿದ್ದಿತು. ಯಾವ ಕಾರಣದಿಂದಲೋ ಏನೋ; ಸೀಳಿಹೋಗಿಲ್ಲ.

ತಂದೆಯೂ ಸ್ವರ್ಗಕ್ಕೆ ಹೋದನು. ರಾಮನೂ ಕಾಡಿಗೆ ಹೊರಟು ಹೋದನು. ಆ ಇಬ್ಬರನ್ನವಲಂಬಿಸಿಯೇ ನಾನಿದುವರೆಗೂ ಜೀವಿಸಿದ್ದೆನು. ಇಬ್ಬರೂ ಹೊರಟುಹೋದ ಮೇಲೆ ನನಗೆ ಜೀವಿಸುವ ಸಾಮರ್ಥ್ಯವಾದರೂ ಎಲ್ಲಿದೆ? ಆದುದರಿಂದ ನಾನೀಗಲೇ ಪ್ರವೇಕ್ಷ್ಯಾಮಿ ಹುತಾಶನಮ್– ಬೆಂಕಿಯಲ್ಲಿ ಬಿದ್ದುಬಿಡುತ್ತೇನೆ. ಹಾಗೆ ಅಸುನೀಗಲು ಅವಕಾಶವಾಗದಿದ್ದರೆ ನಾನಂತೂ ಅಣ್ಣನೂ–ಅಪ್ಪನೂ ಇಲ್ಲದೇ ಶೂನ್ಯವಾಗಿರುವ, ಇಕ್ವಾಕು

ವಂಶದ ಅರಸರಿಂದ ಪರಿಪಾಲಿಸಲ್ಪಡುತ್ತಿದ್ದ, ಅಯೋಧ್ಯೆಗಂತೂ ಬರುವುದಿಲ್ಲ. ಅಣ್ಣನಂತೆಯೇ ನಾನೂ ಕಾಡಿಗೆ ಹೊರಟುಹೋಗುತ್ತೇನೆ."

ಈ ಪರಿಯಾದ ಭರತ-ಶತ್ರುಘ್ನರ ಗೋಳಾಟವನ್ನು ಕೇಳುತ್ತಿದ್ದ ಭರತನ ಅನುಯಾಯಿಗಳು ಅವರ ವ್ಯಸನವನ್ನು ಮನಗಂಡು ಬಹಳವಾಗಿ ದುಃಖಗೊಂಡರು. ಬಹಳವಾಗಿ ಬಳಲಿದ್ದ, ಅತ್ಯಂತವಿಷಣ್ಣರಾಗಿದ್ದ, ಭರತ-ಶತ್ರುಘ್ನರು ಕೊಂಬು ಮುರಿದ ಹೋರಿಗಳಂತೆ ನೆಲದ ಮೇಲೆ ಬಿದ್ದು ಹೊರಳಾಡಿದರು. ಬಳಿಕ ದಶರಥನಿಗೆ ಪುರೋಹಿತರಾಗಿದ್ದ, ಸರ್ವಜ್ಞರಾದ ವಸಿಷ್ಠರು ಭರತನನ್ನು ಹಿಡಿದೆಬ್ಬಿಸಿ ಆಸನದಲ್ಲಿ ಕುಳ್ಳಿರಿಸಿ ಹೇಳಿದರು :

"ವಿಭುವೇ! ನಿನ್ನ ತಂದೆಯು ಮರಣಹೊಂದಿ ಇಂದಿಗೆ ಹದಿಮೂರು ದಿವಸಗಳಾದುವು. ಅಸ್ಥಿಸಂಚಯನಕರ್ಮವಿನ್ನೂ ಪೂರ್ಣವಾಗಿಲ್ಲ. ಇಲ್ಲಿ ಏಕಿಷ್ಟು ತಡಮಾಡುತ್ತಿರುವೆ?

ತ್ರೀಣಿ ದ್ವನ್ದ್ವಾನಿ ಭೂತೇಷು ಪ್ರವೃತ್ತಾನ್ಯವಿಶೇಷತಃ ।
ತೇಷು ಚಾಪರಿಹಾರ್ಯೇಷು ನೈವಂ ಭವಿತುಮರ್ಹಸಿ ॥೨೩॥

ಹಸಿವು-ಬಾಯಾರಿಕೆ, ಶೋಕ-ಮೋಹ ಮತ್ತು ಹುಟ್ಟು-ಸಾವು ಈ ಮೂರು ಜೋಡಿಗಳು ಎಲ್ಲ ಪ್ರಾಣಿಗಳಲ್ಲಿಯೂ ಸಮಾನರೂಪವಾಗಿವೆ. ಇವನ್ನು ಪರಿಹರಿಸಲು ಯಾರಿಂದಲೂ ಸಾಧ್ಯವಾಗುವುದಿಲ್ಲ. ಆದುದರಿಂದ ನೀನು ಈ ವಿಷಯದಲ್ಲಿ ಹೀಗೆ ವ್ಯಥೆಪಡಬಾರದು."

ತತ್ತ್ವಜ್ಞನಾದ ಸುಮಂತ್ರನೂ ಭೂಮಿಯ ಮೇಲೆ ಬಿದ್ದಿದ್ದ ಶತ್ರುಘ್ನನನ್ನು ಹಿಡಿದೆಬ್ಬಿಸಿ ಸಂತೈಸುತ್ತಾ ಜೀವಾತ್ಮನ ಉತ್ಪತ್ತಿ-ವಿನಾಶಗಳ ರಹಸ್ಯವನ್ನು ವಿಸ್ತಾರವಾಗಿ ಹೇಳಿದನು. ವಸಿಷ್ಠರ ಮತ್ತು ಸುಮಂತ್ರನ ಸಾಂತ್ವವಚನಗಳಿಂದ ಮೇಲೆದ್ದು ನಿಂತ ಯಶೋವಂತರಾದ, ನರ ಶ್ರೇಷ್ಠರಾದ ಭರತ-ಶತ್ರುಘ್ನರು ಮಳೆ-ಬಿಸಿಲುಗಳ ಹೊಡೆತಗಳಿಂದ ಜೀರ್ಣವಾಗಿ ಹೋದ ಪ್ರತ್ಯೇಕವಾದ ಎರಡು ಇಂದ್ರನ ಧ್ವಜಗಳಂತೆ ಕಾಣುತ್ತಿದ್ದರು.

ರಾಜಪುತ್ರರು ಎಡೆಬಿಡದೇ ಬರುತ್ತಿದ್ದ ಕಣ್ಣೀರನ್ನು ಒರೆಸಿಕೊಳ್ಳುತ್ತಿದ್ದರು. ಇಬ್ಬರ ಕಣ್ಣುಗಳೂ ಕೆಂಪಾಗಿದ್ದುವು. ಬಹಳ ದೈನ್ಯದಿಂದ ಮಾತ

ನಾಡುತ್ತಿದ್ದರು. ಹೀಗಿದ್ದ ರಾಜಕುಮಾರರನ್ನು ಅಮಾತ್ಯರು ಇತರ ಪೈತೃಕಕರ್ಮಗಳನ್ನು ಮಾಡಲು ಅವಸರಪಡಿಸುತ್ತಿದ್ದರು.

೭೭ನೆಯ ಸರ್ಗವು ಮುಗಿಯಿತು.

ಕ್ರುದ್ಧನಾದ ಶತ್ರುಘ್ನನಿಂದ ಮಂಥರೆಯ ಭರ್ತ್ಸನೆ: ಭರತನಿಂದ ಸಾಂತ್ವನ

ಅಥ ಯಾತ್ರಾಂ ಸಮೀಹನ್ತಂ ಶತ್ರುಘ್ನೋ ಲಕ್ಷ್ಮಣಾನುಜಃ ।
ಭರತಂ ಶೋಕಸಂತಪ್ತಮಿದಂ ವಚನಮಬ್ರವೀತ್ ॥೧॥

ಹದಿಮೂರನೆಯ ದಿವಸ ಮಾಡಬೇಕಾಗಿದ್ದ ಅಸ್ಥಿಸಂಚಯನಾದಿ ಪಿತೃಕಾರ್ಯಗಳನ್ನು ಮುಗಿಸಿಕೊಂಡು ಪರಿವಾರಸಮೇತರಾಗಿ ರಾಜಕುಮಾರರು ಅರಮನೆಗೆ ತೆರಳಿದರು. ರಾಮನ ಬಳಿಗೆ ಯಾತ್ರೆ ಹೋಗುವ ವಿಷಯವಾಗಿ ಪರ್ಯಾಲೋಚಿಸುತ್ತಿದ್ದ ಶೋಕಸಂತಪ್ತನಾಗಿದ್ದ ಭರತನಿಗೆ ಲಕ್ಷ್ಮಣಾನುಜನಾದ ಶತ್ರುಘ್ನನು ಹೇಳಿದನು :

"ಯಾವನು ಸರ್ವಪ್ರಾಣಿಗಳ ದುಃಖದಲ್ಲಿಯೂ ಶರಣ್ಯನಾಗಿದ್ದು ಸಕಲರ ಸಮಸ್ತದುಃಖಗಳನ್ನೂ ಪರಿಹರಿಸುತ್ತಿದ್ದನೋ–ಅಂತಹವನು ತನಗೇ ದುಃಖವು ಒದಗಿಬಂದಾಗ ಪರಿಹರಿಸಿಕೊಳ್ಳಲಾರದೇ ಹೋದನೇ? ಸತ್ತ್ವಸಂಪನ್ನನಾದ ಶ್ರೀರಾಮನನ್ನು ಅಬಲೆಯಾದ ಹೆಂಗಸೊಬ್ಬಳು ಕಾಡಿಗಟ್ಟಿಬಿಟ್ಟಳು. ಎಂತಹ ವಿಪರ್ಯಾಸವಿದು? ಈ ಲಕ್ಷ್ಮಣನೆಂಬುವನೊಬ್ಬ ನಿದ್ದನಲ್ಲಾ ನಮ್ಮಣ್ಣ! ಅವನಾದರೂ ಏನು ಮಾಡುತ್ತಿದ್ದ? ಅವನೂ ಬಲಶಾಲಿಯು. ವೀರ್ಯವಂತನೆಂಬ ಕೀರ್ತಿಯನ್ನೂ ಗಳಿಸಿದ್ದಾನೆ. ಅವನಾದರೂ ತಂದೆಯನ್ನು ನಿಗ್ರಹಿಸಿಯಾದರೂ ವನವಾಸದಿಂದ ರಾಮನನ್ನೇಕೆ ಮುಕ್ತನನ್ನಾಗಿ ಮಾಡಲಿಲ್ಲ? ರಾಜನು ಒಬ್ಬ ಹೆಂಗಸಿಗೆ ಅಡಿಯಾಳಾಗಿದ್ದನು. ಮೇಲಾಗಿ ತಪ್ಪುದಾರಿಯನ್ನು ಹಿಡಿದಿದ್ದನು. ಆದುದರಿಂದ ಈ ಮೊದಲೇ ನ್ಯಾಯಾನ್ಯಾಯಗಳನ್ನು ಸಂಪೂರ್ಣವಾಗಿ ವಿಮರ್ಶಿಸಿ ರಾಜನನ್ನು ನಿಗ್ರಹಿಸಬೇಕಾಗಿದ್ದಿತು.*

---

*"ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯಮಜಾನತಃ । ಉತ್ಪಥಂ ಪ್ರತಿಪನ್ನಸ್ಯ

ಹೀಗೆ ಶತ್ರುಘ್ನನು ಭರತನೊಡನೆ ಮಾತನಾಡುತ್ತಿದ್ದಾಗ ಸರ್ವಾಭರಣ ಭೂಷಿತೆಯಾದ ಮಂಥರೆಯು ಅರಮನೆಯ ಪೂರ್ವಭಾಗದ ಬಾಗಿಲಿನ ಬಳಿಗೆ ಬಂದಳು. ಅವಳು ತನ್ನ ಶರೀರವನ್ನು ಸುಗಂಧಯುಕ್ತವಾದ ಚಂದನದಿಂದ ಪೂಸಿಕೊಂಡಿದ್ದಳು. ರಾಜಯೋಗ್ಯವಾದ ವಸ್ತ್ರಗಳನ್ನೇ ಉಟ್ಟಿದ್ದಳು. ಅವಳ ಪ್ರತಿಯೊಂದು ಅಂಗದಲ್ಲಿಯೂ ಆಯಾಯಾ ಅಂಗಗಳಿಗೆ ಉಚಿತವಾದ ರತ್ನಖಚಿತವಾದ ಆಭರಣಗಳೇ ಇದ್ದುವು. ಸೊಂಟಕ್ಕೆ ಒಡ್ಯಾಣವನ್ನು ಹಾಕಿಕೊಂಡಿದ್ದಳು. ಹೀಗೆ ದಿವ್ಯಾಭರಣಗಳಿಂದ ಅಲಂಕೃತಳಾದ ಕುಬ್ಜೆಯು ಹಗ್ಗದಿಂದ ಕಟ್ಟಿ ಎಳೆದು ತರಲ್ಪಡುತ್ತಿರುವ ಹೆಣ್ಣುಕೋತಿಯಂತೆ ಕಾಣುತ್ತಿದ್ದಳು. ಅರಮನೆಯ ಬಾಗಿಲಿನಲ್ಲಿ ನಿಂತಿದ್ದ ದ್ವಾರಪಾಲಕರು ಪಾಪಕಾರ್ಯಗಳೆಲ್ಲಕ್ಕೂ ಮೂಲಕಾರಣಳಾದ, ನಿರ್ದಯಳಾದ ಮಂಥರೆಯನ್ನು ಹಿಡಿದು ಶತ್ರುಘ್ನನ ಬಳಿಗೆ ಕರೆತಂದು ಹೇಳಿದರು :

ಯಸ್ಯಾಃ ಕೃತೇ ವನೇ ರಾಮೋ ನ್ಯಸ್ತದೇಹಶ್ಚ ವಃ ಪಿತಾ ।
ಸೇಯಂ ಪಾಪಾ ನೃಶಂಸಾ ಚ ತಸ್ಯಾಃ ಕುರು ಯಥಾಮತಿ ॥೯॥


"ರಾಜಕುಮಾರ! ಯಾವಳ ದುಷ್ಟಪ್ರೇರಣೆಯಿಂದಾಗಿ ರಾಮನು ಅರಣ್ಯಕ್ಕೆ ಕಳುಹಿಸಲ್ಪಟ್ಟನೋ–ಅದರ ಪರಿಣಾಮವಾಗಿ ನಿಮ್ಮ ತಂದೆಯೂ ಅಸುನೀಗಿದನೋ–ಇವಳೇ ಪಾಪಿಷ್ಠೆಯಾದ ನಿರ್ದಯಳಾದ ಮಂಥರೆಯು. ಇವಳಿಗೆ ಏನು ಮಾಡಬೇಕೆಂದು ತೋರುವುದೋ ಹಾಗೆ ಮಾಡು."

ದೃಢವ್ರತನಾದ ಶತ್ರುಘ್ನನು–ದ್ವಾರಪಾಲಕರು ಹೇಳಿದ ಆ ಮಾತನ್ನು ಕೇಳಿ ಬಹಳ ದುಃಖಿತನಾಗಿ ಅಂತಃಪುರದಲ್ಲಿದ್ದ ಎಲ್ಲರೂ ಕೇಳುವಂತೆ ಹೇಳಿದನು :

"ಈ ಪಾಪಿಷ್ಠೆಯ ಕಾರಣದಿಂದಾಗಿ ನನ್ನ ಸಹೋದರರಿಗೂ ಮತ್ತು ತಂದೆಗೂ ತೀವ್ರವಾದ ದುಃಖವುಂಟಾಯಿತು. ಇವಳು ಮಾಡಿರುವ ಕ್ರೂರ ಕರ್ಮಕ್ಕೆ ತಕ್ಕುದಾದ ಫಲವನ್ನು ಇವಳೀಗಲೇ ಅನುಭವಿಸಲಿ."

ಕಾರ್ಯಂ ಭವತಿ ಶಾಸನಮ್ ॥ (ಮಹಾಭಾರತ) ಗುರುವಾದರೂ ಅಹಂಕಾರಿಯಾಗಿ ಕಾರ್ಯಾಕಾರ್ಯಗಳನ್ನು ವಿವೇಚಿಸದೇ ಕೆಟ್ಟದಾರಿಯನ್ನು ತುಳಿದರೆ ಅವನನ್ನು ನಿಗ್ರಹಿಸಬೇಕಾಗುತ್ತದೆ.

ಶತ್ರುಘ್ನನು ಹೀಗೆ ಹೇಳಿ ಸಖೀಜನರಿಂದ ಸುತ್ತುವರಿಯಲ್ಪಟ್ಟಿದ್ದ ಕುಬ್ಜೆಯನ್ನು ಬಲಾತ್ಕಾರದಿಂದ ಹಿಡಿದೆಳೆದನು. ಒಡನೆಯೇ ಕುಬ್ಜೆಯು ಆ ಸೌಧವೇ ಪ್ರತಿಧ್ವನಿಸುವ ರೀತಿಯಲ್ಲಿ ಗಟ್ಟಿಯಾಗಿ ಕಿರುಚಿಕೊಂಡಳು.



ಮಂಥರೆಯ ಗೆಳತಿಯರು ಭಯದಿಂದ ನಡುಗಿಹೋದರು. ಶತ್ರುಘ್ನನು ಕ್ರುದ್ಧನಾಗಿರುವನೆಂದು ತಿಳಿದು ದಿಕ್ಕಾಪಾಲಾಗಿ ಓಡಿ ಒಂದೆಡೆ ಒಟ್ಟಾಗಿ ಸೇರಿ ಸಮಾಲೋಚಿಸಿದರು.

"ಕೋಪಗೊಂಡಿರುವ ಶತ್ರುಘ್ನನು ನಮ್ಮೆಲ್ಲರನ್ನೂ ಮುಗಿಸಿಯೇ ಬಿಡುವನು. ದಯಾರ್ದ್ರಹೃದಯಳಾದ, ಮೃದುಭಾಷಿಣಿಯಾದ, ಧರ್ಮಜ್ಞ

ಳಾದ, ಯಶಸ್ವಿನಿಯಾದ ಕೌಸಲ್ಯಾದೇವಿಯನ್ನೇ ನಾವು ಈ ಸಮಯದಲ್ಲಿ ಶರಣುಹೋಗೋಣ. ಅವಳೊಬ್ಬಳೇ ಈ ಸಮಯದಲ್ಲಿ ನಮಗೆ ಶರಣ್ಯ ಳಾದಾಳು" –ಎಂದು ನಿರ್ಧರಿಸಿ ಮಂಥರೆಯ ಗೆಳತಿಯರೆಲ್ಲರೂ ಕೌಸಲ್ಯೆಯ ಆಶ್ರಯವನ್ನು ಪಡೆದರು.

ಕೋಪದಿಂದ ಕೆಂಗಣ್ಣನಾಗಿದ್ದ, ಶತ್ರುತಾಪಕನಾದ ಶತ್ರುಘ್ನನು ನೆಲದ ಮೇಲೆ ಬಿದ್ದು ಕಿರುಚಿಕೊಳ್ಳುತ್ತಿದ್ದ ಮಂಥರೆಯನ್ನು ದರ-ದರನೆ ಎಳೆದಾಡಿದನು. ಹೀಗೆ ಅಲ್ಲಿಂದಿಲ್ಲಿಗೂ ಇಲ್ಲಿಂದಲ್ಲಿಗೂ ಎಳೆದಾಡುತ್ತಿದ್ದಾಗ ಅವಳು ತೊಟ್ಟಿದ್ದ ಚಿತ್ರ-ವಿಚಿತ್ರವಾದ ಆಭರಣಗಳು ಚೆಲ್ಲಾಪಿಲ್ಲಿಯಾಗಿ ಭೂಮಿಯ ಮೇಲೆ ಬಿದ್ದುವು. ಸುತ್ತಲೂ ಹರಡಿ ಬಿದ್ದ ಆ ಒಡವೆಗಳಿಂದ ವ್ಯಾಪ್ತವಾಗಿದ್ದ, ಕಾಂತಿಯುಕ್ತವಾಗಿದ್ದ ರಾಜಭವನವು–ನಕ್ಷತ್ರಗಳಿಂದಲೂ ಚಂದ್ರನಿಂದಲೂ ಕೂಡಿದ ಶರತ್ಕಾಲದ ಆಕಾಶದಂತೆ–ಇನ್ನೂ ಹೆಚ್ಚು ಕಾಂತಿಯಿಂದ ಪ್ರಕಾಶಿಸಿತು.

ಬಲಿಷ್ಠನಾದ, ಪುರುಷಶ್ರೇಷ್ಠನಾದ ಶತ್ರುಘ್ನನು ಕ್ರುದ್ಧನಾಗಿ ಮಂಥರೆಯನ್ನು ಎಳೆದಾಡುತ್ತಿದ್ದಾಗ ಅವಳನ್ನು ಬಿಡಿಸುವ ಸಲುವಾಗಿ ಕೈಕೇಯಿಯೇ ಆಗಮಿಸಿದಳು. ಶತ್ರುಘ್ನನು ಅವಳನ್ನೂ ಹೀಯಾಳಿಸುತ್ತಾ ಅತಿಕಠೋರವಾದ ಮಾತನ್ನು ಹೇಳಿದನು. ಅತ್ಯಂತಕಠೋರವಾದ, ದುಃಖಕರವಾದ ಆ ಮಾತುಗಳನ್ನು ಕೇಳಿ ಕೈಕೇಯಿಯು ಹೆಚ್ಚು ದುಃಖಗೊಂಡು ಶತ್ರುಘ್ನನ ಭಯದಿಂದ ನಡುಗುತ್ತಾ ತಮ್ಮಿಬ್ಬರ ರಕ್ಷಣೆಗಾಗಿ ಪುತ್ರನನ್ನೇ ಶರಣುಹೊಂದಿದಳು.

ತಾಯಿಯನ್ನು ನೋಡಿ ಭರತನು ಪರಮಕ್ರುದ್ಧನಾಗಿದ್ದ ಶತ್ರುಘ್ನನಿಗೆ ಹೇಳಿದನು :

ಅವಧ್ಯಾಃ ಸರ್ವಭೂತಾನಾಂ ಪ್ರಮದಾಃ ಕ್ಷಮ್ಯತಾಮಿತಿ ॥

"ತಮ್ಮ! ಪ್ರಪಂಚದಲ್ಲಿರುವ ಎಲ್ಲ ಪ್ರಾಣಿಗಳಲ್ಲಿಯೂ ಸ್ತ್ರೀಯರು ಸರ್ವಥಾ ಕೊಲ್ಲಲ್ಪಡತಕ್ಕವರಲ್ಲ. ಆದುದರಿಂದ ಇವಳನ್ನು ಕ್ಷಮಿಸಿ ಬಿಟ್ಟು ಬಿಡು.

ಹನ್ಯಾಮಹಮಿಮಾಂ ಪಾಪಾಂ ಕೈಕೇಯೀಂ ದುಷ್ಟಚಾರಿಣೀಮ್ ।
ಯದಿ ಮಾಂ ಧಾರ್ಮಿಕೋ ರಾಮೋ ನಾಸೂಯೇನ್ಮಾತೃ
ಘಾತಕಮ್ ॥೨೨॥

ಧಾರ್ಮಿಕನಾದ ಶ್ರೀರಾಮನೇನಾದರೂ ಮಾತೃಹಂತಕನೆಂದು ನನ್ನನ್ನು ನಿಂದಿಸದಿದ್ದರೆ–ದುಷ್ಟಚಾರಿಣಿಯಾದ, ಪಾಪಿಷ್ಠೆಯಾದ ಈ ಕೈಕೇಯಿಯನ್ನು ನಾನು ಈ ವೇಳೆಗಾಗಲೇ ಕೊಂದೇಬಿಡುತ್ತಿದ್ದೆನು.

ಇಮಾಮಪಿ ಹತಾಂ ಕುಬ್ಜಾಂ ಯದಿ ಜಾನಾತಿ ರಾಘವಃ ।
ತ್ವಾಂ ಚ ಮಾಂ ಚ ಹಿ ಧರ್ಮಾತ್ಮಾ ನಾಭಿಭಾಷಿಷ್ಯತೇ ಧ್ರುವಮ್ ॥

ನಾವೀಗ ಈ ಮಂಥರೆಯನ್ನು ಕೊಂದು ಇವಳನ್ನು ನಾವು ಕೊಂದೆವೆಂಬ ವಿಷಯವೇನಾದರೂ ರಾಮನಿಗೆ ತಿಳಿದರೆ–ಧರ್ಮಾತ್ಮನಾದ ಅವನು ನಿನ್ನೊಡನೆಯಾಗಲೀ ನನ್ನೊಡನೆಯಾಗಲೀ ಖಂಡಿತವಾಗಿಯೂ ಮಾತನಾಡುವುದಿಲ್ಲ.”

ಭರತನ ಆ ಮಾತನ್ನು ಕೇಳಿ ಶತ್ರುಘ್ನನು ಸ್ತ್ರೀಹತ್ಯೆಯೆಂಬ ಪಾಪ ಕಾರ್ಯದಿಂದ ವಿಮುಖನಾಗಿ ಮಂಥರೆಯನ್ನು ಬಿಟ್ಟುಬಿಟ್ಟನು. ಶತ್ರುಘ್ನನಿಂದ ಮುಕ್ತಳಾದ ಮಂಥರೆಯು ಕೈಕೇಯಿಯ ಕಾಲುಗಳ ಮೇಲೆ ಬಿದ್ದಳು. ಅತ್ಯಂತದುಃಖಪೀಡಿತಳಾಗಿದ್ದ ಅವಳು ದೀರ್ಘವಾಗಿ ನಿಟ್ಟುಸಿರುಬಿಡುತ್ತಾ ದೈನ್ಯದಿಂದ ವಿಲಪಿಸುತ್ತಿದ್ದಳು. ಶತ್ರುಘ್ನನ ಎಳೆದಾಟಗಳ ಪರಿಣಾಮವಾಗಿ ಪದೇ-ಪದೇ ಮೂರ್ಛಿತಳಾಗುತ್ತಿದ್ದ, ದೀನೆಯಾಗಿದ್ದ, ಬಲೆಯಲ್ಲಿ ಬಿದ್ದ ಹೆಣ್ಣು ಕ್ರೌಂಚಪಕ್ಷಿಯಂತೆ ದೈನ್ಯದಿಂದ ನೋಡುತ್ತಿದ್ದ ಮಂಥರೆಯನ್ನು ಭರತನ ತಾಯಿಯಾದ ಕೈಕೇಯಿಯು ಮೆಲ್ಲ-ಮೆಲ್ಲನೆ ಸಂತೈಸಿದಳು.

ಎಂಭತ್ತನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೭೯ನೆಯ ಸರ್ಗ

ರಾಜ್ಯಭಾರವನ್ನು ವಹಿಸಿಕೊಳ್ಳುವಂತೆ ಮಂತ್ರಿಗಳಿಂದ ಭರತನಿಗೆ ಒತ್ತಾಯ : ಭರತನು ಅಭಿಷೇಕಸಾಮಗ್ರಿಗಳಿಗೆ ಪ್ರದಕ್ಷಿಣೆಮಾಡಿ ಜ್ಯೇಷ್ಠಪುತ್ರನಿಗೇ ರಾಜ್ಯಾಧಿಕಾರವಿರುವುದನ್ನು ಸ್ಪಷ್ಟಪಡಿಸಿ ಶ್ರೀರಾಮನನ್ನು ಕರೆತರಲು ತಕ್ಕ ವ್ಯವಸ್ಥೆಮಾಡುವಂತೆ ಆಜ್ಞಾಪಿಸಿದುದು

ತತಃ ಪ್ರಭಾತಸಮಯೇ ದಿವಸೇ ಚ ಚತುರ್ದಶೇ ।
ಸಮೇತ್ಯ ರಾಜಕರ್ತಾರೋ ಭರತಂ ವಾಕ್ಯಮಬ್ರುವನ್ ॥೧॥

ರಾಜನ ದಹನಸಂಸ್ಕಾರವು ಮುಗಿದು ಹದಿನಾಲ್ಕನೆಯ ದಿವಸ ಪ್ರಾತಃಕಾಲ ಮಂತ್ರಿಗಳೆಲ್ಲರೂ ಒಟ್ಟಾಗಿ ಸೇರಿ ಭರತನಿಗೆ ಹೇಳಿದರು :

"ರಾಜಪುತ್ರ! ನಮಗೆ ಪರಮಗುರುವಾಗಿದ್ದ ದಶರಥಮಹಾರಾಜನು ಜ್ಯೇಷ್ಠಪುತ್ರನಾದ ರಾಮನನ್ನೂ ಮಹಾಬಲಿಷ್ಠನಾದ ಲಕ್ಷ್ಮಣನನ್ನೂ ಅರಣ್ಯಕ್ಕೆ ಕಳುಹಿಸಿ ತಾನೂ ಸ್ವರ್ಗಕ್ಕೆ ಹೊರಟುಹೋದನು. ಯಶೋವಂತನೇ! ಈ ಕಾರಣದಿಂದ ಇಂದು ನಮ್ಮ ರಾಜ್ಯಕ್ಕೆ ನಾಯಕನೇ ಇಲ್ಲವಾಗಿದೆ. ಆದುದರಿಂದ ಈ ಸಮಯದಲ್ಲಿ ನೀನೇ ನಮಗೆ ರಾಜನಾಗುವುದು ಸೂಕ್ತವಾಗಿದೆ. ಜ್ಯೇಷ್ಠನನ್ನು ಬಿಟ್ಟು ನಾನು ಹೇಗೆ ರಾಜನಾಗಲೆಂದು ಚಿಂತಿಸುವ ಕಾರಣವಿಲ್ಲ. ರಾಮನಿಗೆ ವನವಾಸ ಮತ್ತು ಭರತನಿಗೆ ಪಟ್ಟಾಭಿಷೇಕ–ಈ ಎರಡು ವರಗಳನ್ನೂ ದಶರಥನೇ ಕೈಕೇಯಿಗೆ ಕೊಟ್ಟಿದ್ದನು. ಆದುದರಿಂದ ಇದು ರಾಜಾಜ್ಞೆಯೆಂದೇ ಭಾವಿಸಿ ನೀನು ರಾಜ್ಯಭಾರವನ್ನು ವಹಿಸಬೇಕಾಗಿದೆ. ಇದರಿಂದ ನೀನು ಧರ್ಮಕ್ಕಾಗಲೀ ಸಂಪ್ರದಾಯಕ್ಕಾಗಲೀ ವಿರುದ್ಧವಾಗಿ ನಡೆದಂತಾಗುವುದಿಲ್ಲ. ಪ್ರಜೆಗಳಿಗೆ ನಾನು ರಾಜನಾಗುವುದರಲ್ಲಿ ಸಮ್ಮತಿ ಇದೆಯೋ ಇಲ್ಲವೋ–ಎಂದೂ ನೀನು ಸಂಶಯಪಡಬೇಕಾಗಿಲ್ಲ. ಅಭಿಷೇಕಯೋಗ್ಯವಾದ ಸಂಭಾರಗಳನ್ನು ಹೊತ್ತು ನಿನ್ನ ಬಂಧುಗಳೂ, ಅಮಾತ್ಯರೂ ಮತ್ತು ಪೌರರೂ ನಿನ್ನನ್ನೇ ನಿರೀಕ್ಷಿಸುತ್ತಿದ್ದಾರೆ. ಪಿತ್ರಾರ್ಜಿತವಾದ ಮತ್ತು ಶಾಶ್ವತವಾದ ಈ ರಾಜ್ಯವನ್ನು ನೀನು ಸ್ವೀಕರಿಸು. ಪಟ್ಟಾಭಿಷಿಕ್ತನಾಗು. ನಮ್ಮೆಲ್ಲರನ್ನೂ ಪರಿಪಾಲಿಸು."

ಅಮಾತ್ಯರು ಹೀಗೆ ಶುಭಕರವಾದ ಮಾತನ್ನು ಹೇಳಲು, ಕಾಂತಿಯುಕ್ತನಾಗಿದ್ದ, ಸತ್ಯನಿಷ್ಠನಾಗಿದ್ದ, ಅಂತಃಶುದ್ಧಿ-ಬಹಿಃಶುದ್ಧಿಯುಳ್ಳವ ನಾಗಿದ್ದ, ವ್ರತನಿಷ್ಠನಾಗಿದ್ದ ಭರತನು ಅಮಾತ್ಯರ ಆ ಮಾತನ್ನು ಕೇಳಿ ಪಟ್ಟಾಭಿಷೇಕಕ್ಕಾಗಿ ಸಂಗ್ರಹಿಸಲ್ಪಟ್ಟಿದ್ದ ಸಂಭಾರಗಳನ್ನು ಪ್ರದಕ್ಷಿಣೆಮಾಡಿ ಸುತ್ತಲೂ ಇದ್ದ ಜನರಿಗೆ ಹೇಳಿದನು :

ಜ್ಯೇಷ್ಠಸ್ಯ ರಾಜತಾ ನಿತ್ಯಮುಚಿತಾ ಹಿ ಕುಲಸ್ಯ ನಃ ।
ನೈವಂ ಭವನ್ತೋ ಮಾಂ ವಕ್ತುಮರ್ಹನ್ತಿ ಕುಶಲಾ ಜನಾಃ ॥೭॥

"ನಮ್ಮ ವಂಶದಲ್ಲಿ ಬಹಳ ಹಿಂದಿನಿಂದಲೂ ನಡೆದುಕೊಂಡುಬಂದಿರುವ ಸಂಪ್ರದಾಯದಂತೆ ಜ್ಯೇಷ್ಠಪುತ್ರನಿಗೇ ರಾಜಪದವಿಯು ನಿತ್ಯವಾಗಿದೆ. ಹೀಗಿರುವಾಗ ಕುಶಲರಾದ ನೀವು ಪಟ್ಟಾಭಿಷಿಕ್ತನಾಗುವಂತೆ ನನಗೆ ಸಲಹೆ ನೀಡುವುದು ಉಚಿತವಾಗಿ ತೋರುವುದಿಲ್ಲ.

ಶ್ರೀರಾಮನು ನಮಗೆಲ್ಲರಿಗಿಂತಲೂ ಮೊದಲು ಹುಟ್ಟಿದವನು. ಅವನೇ ಹಿರಿಯಣ್ಣನು. ಆದುದರಿಂದ ಅವನೇ ರಾಜನಾಗುತ್ತಾನೆ. ಪ್ರತಿಜ್ಞಾತವಾಗಿರುವ ಹದಿನಾಲ್ಕು ವರ್ಷಗಳನ್ನು ನಮ್ಮಣ್ಣನಿಗೆ ಬದಲಾಗಿ ನಾನೇ ಕಾಡಿನಲ್ಲಿ ಕಳೆಯುತ್ತೇನೆ. ಚತುರಂಗಬಲಸಮೇತವಾದ ಮಹಾಸೈನ್ಯವನ್ನು ಈಗಲೇ ಸಿದ್ಧಪಡಿಸಿರಿ. ಹಿರಿಯಣ್ಣನಾದ ಶ್ರೀರಾಘವನನ್ನು ನಾನು ಅರಣ್ಯದಿಂದ ಕರೆತರುತ್ತೇನೆ. ನೀವು ಇಲ್ಲಿಗೆ ತಂದಿರುವ ಪಟ್ಟಾಭಿಷೇಕಕ್ಕೆ ಸಂಬಂಧಿಸಿದ ಎಲ್ಲ ಪದಾರ್ಥಗಳನ್ನೂ ರಾಮನ ಸಲುವಾಗಿ ಮುಂದಿಟ್ಟುಕೊಂಡು ಅರಣ್ಯಕ್ಕೆ ಹೋಗುತ್ತೇನೆ. ಅರಣ್ಯದಲ್ಲಿಯೇ ನಮ್ಮೆಲ್ಲರಿಗೂ ಪೂಜ್ಯನಾದ ಶ್ರೀರಾಮನಿಗೆ ಪಟ್ಟಾಭಿಷೇಕಮಾಡಿ–ಯಜ್ಞಶಾಲೆಯಿಂದ ಯಜ್ಞೇಶ್ವರನನ್ನು ತರುವಂತೆ–ಅವನನ್ನು ಅಯೋಧ್ಯೆಗೆ ಕರೆತರುತ್ತೇನೆ. ಹೆಸರಿಗೆ ಮಾತ್ರ ತಾಯಿಯಾಗಿರುವ ಈ ಕೈಕೇಯಿಯ ಮನೋರಥವನ್ನು ಖಂಡಿತವಾಗಿಯೂ ಆಗುಮಾಡಿಸುವುದಿಲ್ಲ. ನಾನೇ ದುರ್ಗಮವಾದ ಕಾಡಿನಲ್ಲಿ ವಾಸಮಾಡುತ್ತೇನೆ. ಶ್ರೀರಾಮನೇ ನಿಮ್ಮೆಲ್ಲರಿಗೂ ರಾಜನಾಗುತ್ತಾನೆ. ಮಾರ್ಗಗಳನ್ನು ನಿರ್ಮಿಸುವ ಕಾರ್ಯದಲ್ಲಿ ಕುಶಲರಾದ ಶಿಲ್ಪಿಗಳು ಮುಂದಾಗಿ ಹೋಗಿ ಹಳ್ಳ-ತಿಟ್ಟುಗಳಿರುವ ಪ್ರದೇಶಗಳನ್ನು ಸಮತಟ್ಟಾಗಿ

ಮಾಡಿ ಪ್ರಯಾಣಕ್ಕೆ ಯೋಗ್ಯವನ್ನಾಗಿ ಮಾಡಲಿ. ಕಾಡಿನಲ್ಲಿ ದುರ್ಗಮವಾದ ಹಾದಿಗಳು ಎಲ್ಲಿವೆಯೆಂಬುದನ್ನು ತಿಳಿದಿರುವ ದುರ್ಗಗಳ ವಿಚಾರಕರೂ ಮತ್ತು ಮಾರ್ಗದ ವಿಚಾರಕರೂ ಶಿಲ್ಪಿಗಳನ್ನು ಅನುಸರಿಸಿ ಹೋಗಲಿ."

ಹೀಗೆ ಶ್ರೀರಾಮನನ್ನು ಕರೆತರುವ ಸಲುವಾಗಿ ರಾಜಪುತ್ರನಾದ ಭರತನು ಹೇಳಿದುದನ್ನು ಕೇಳಿ ಪ್ರಜೆಗಳು ಶುಭಾವಹವಾದ ಮತ್ತು ಸರ್ವೋತ್ತಮವಾದ ಈ ಮಾತುಗಳನ್ನು ಹೇಳಿದರು :

ಏವಂ ತೇ ಭಾಷಮಾಣಸ್ಯ ಪದ್ಮಾ ಶ್ರೀರುಪತಿಷ್ಠತಾಮ್ ।
ಯಸ್ತ್ವಂ ಜ್ಯೇಷ್ಠೇ ನೃಪಸುತೇ ಪೃಥಿವೀಂ ದಾತುಮಿಚ್ಛಸಿ ॥೧೫॥

"ರಾಜಪುತ್ರನೇ! ದಶರಥರಾಜನ ಜ್ಯೇಷ್ಠಪುತ್ರನಾದ ಶ್ರೀರಾಮನಿಗೇ ಈ ಭೂಮಂಡಲವನ್ನು ಒಪ್ಪಿಸಲು ಬಯಸಿರುವೆಯಾದ ಕಾರಣ ಪದ್ಮಾಲಯಳಾದ ಮಹಾಲಕ್ಷ್ಮಿಯು ನಿನ್ನಲ್ಲಿ ಶಾಶ್ವತವಾಗಿ ನೆಲೆಸಲಿ."

ಭರತನ ಸುತ್ತಲೂ ನೆರೆದಿದ್ದ ಆರ್ಯಜನರಿಗೆ ಭರತನು ರಾಮನನ್ನು ಅರಣ್ಯದಿಂದ ಕರೆತರುವೆನೆಂದು ಮಾಡಿದ ಪ್ರತಿಜ್ಞೆಯನ್ನು ಕೇಳಿ ಮಹಾನಂದವಾಯಿತು. ಭರತನ ವಿಷಯದಲ್ಲಿ ಕೃತಜ್ಞತಾಸೂಚಕವಾದ ಆನಂದಬಾಷ್ಪಗಳು ಅವರ ಕಣ್ಣುಗಳಿಂದ ಪ್ರಯತ್ನವಿಲ್ಲದೆಯೇ ಕೆಳಗುರುಳಿದುವು.

ಭರತನ ಆ ಮಾತುಗಳನ್ನು ಕೇಳಿ ಪ್ರಜೆಗಳೂ, ಮಂತ್ರಿಗಳೂ, ಇತರ ರಾಜಕರ್ಮಚಾರಿಗಳೂ ಆನಂದತುಂದಿಲರಾದರು. ಎಲ್ಲರ ಶೋಕವೂ ದೂರಸರಿಯಿತು.

ಎಲ್ಲರೂ ಭರತನಿಗೆ ಹೇಳಿದರು : "ನರಶ್ರೇಷ್ಠನೇ! ನಿನ್ನ ಆಜ್ಞೆಗೆ ಅನುಸಾರವಾಗಿ ರಾಜಪರಿವಾರದವರ ವಿಷಯದಲ್ಲಿ ಭಕ್ತಿಭಾವದಿಂದ ಕೂಡಿ ರುವ ಶಿಲ್ಪಿಗಳೂ ಮಾರ್ಗರಕ್ಷಕರೂ ಮಾರ್ಗವನ್ನು ನಿರ್ಮಿಸುವ ಸಲುವಾಗಿ ಈಗಾಗಲೇ ನೇಮಕಗೊಂಡಿದ್ದಾರೆ."

೭೯ನೆಯ ಸರ್ಗವು ಮುಗಿಯಿತು.

ಶಿಲ್ಪಿಗಳಿಂದ-ಅಯೋಧ್ಯೆಯಿಂದ ಗಂಗಾನದಿಯವರೆಗೂ ಸುರಮ್ಯವಾದ ಶಿಬಿರಗಳ ಮತ್ತು ವಾಪೀಕೂಪಗಳಿಂದ ಯುಕ್ತವಾದ ಸುಖದಾಯಕಗಳಾದ ರಾಜಮಾರ್ಗಗಳ ನಿರ್ಮಾಣ

ಅಥ ಭೂಮಿಪ್ರದೇಶಜ್ಞಾಃ ಸೂತ್ರಕರ್ಮವಿಶಾರದಾಃ ।
ಸ್ವಕರ್ಮಾಭಿರತಾಃ ಶೂರಾಃ ಖನಕಾ ಯನ್ತ್ರಕಾಸ್ತಥಾ ॥೧॥

ಕರ್ಮಾನ್ತಿಕಾಃ ಸ್ಥಪತಯಃ ಪುರುಷಾ ಯನ್ತ್ರಕೋವಿದಾಃ ।
ತಥಾ ವರ್ಧಕಯಶ್ಚೈವ ಮಾರ್ಗಿಣೋ ವೃಕ್ಷತಕ್ಷಕಾಃ ॥೨॥

ಕೂಪಕಾರಾಃ ಸುಧಾಕಾರಾ ವಂಶಕರ್ಮಕೃತಸ್ತಥಾ ।
ಸಮರ್ಥಾ ಯೇ ಚ ದ್ರಷ್ಟಾರಃ ಪುರತಸ್ತೇ ಪ್ರತಸ್ಥಿರೇ ॥೩॥

ಪ್ರಜೆಗಳೆಲ್ಲರೂ ಭರತನ ಅಭಿಪ್ರಾಯವನ್ನು ಅನುಮೋದಿಸಿದ ಬಳಿಕ ಅರಣ್ಯಮಾರ್ಗದಲ್ಲಿರುವ ಹಳ್ಳ-ತಿಟ್ಟು ಪ್ರದೇಶಗಳನ್ನು ತಿಳಿದವರೂ, ನಾನಾ ದೇಶಗಳ ನಕ್ಷೆಗಳನ್ನು ತಿಳಿದವರೂ, ಹಗ್ಗಗಳನ್ನು ಹೆಣೆಯುವುದರಲ್ಲಿ ನಿಪುಣರೂ (ಹಗ್ಗದ ಮೂಲಕವಾಗಿ ಭೂಮಿಯನ್ನು ಅಳತೆಮಾಡುವುದರಲ್ಲಿ ನಿಪುಣರೂ), ಮಾರ್ಗರಕ್ಷಣೆಯೇ ಮೊದಲಾದ ತಮ್ಮ-ತಮ್ಮ ಕಾರ್ಯಗಳಲ್ಲಿ ನಿಷ್ಠಾವಂತರೂ, ಶೂರರೂ, ಭೂಮಿಯನ್ನು ಅಗೆಯುವವರೂ, ಹಳ್ಳಗಳನ್ನೂ ಪ್ರವಾಹಗಳನ್ನೂ ದಾಟಲು ಬೇಕಾಗುವ ಯಂತ್ರಸಾಮಗ್ರಿಗಳನ್ನು ಹೊಂದಿರುವವರೂ, ವೇತನದಿಂದ ಜೀವಿಸುವವರೂ, ರಥವೇ ಮೊದಲಾದ ವಾಹನಗಳನ್ನು ಮಾಡುವವರೂ, ಯಂತ್ರಚಾಲನೆಗಳಲ್ಲಿ ಕುಶಲರೂ, ಮರಗೆಲಸದವರೂ, ಅರಣ್ಯದ ಮಾರ್ಗಗಳನ್ನು ರಕ್ಷಿಸುವುದರಲ್ಲಿ ಸಮರ್ಥರಾದವರೂ, ಮರಗಳನ್ನು ಕಡಿಯುವವರೂ, ಬಾವಿಗಳನ್ನು ತೋಡುವವರೂ, ಬಣ್ಣ ಹಚ್ಚುವವರೂ, ಚಮ್ಮಾರರೂ, ಮೇದರೂ, ಹಿಂದೆ ಅರಣ್ಯಮಾರ್ಗವನ್ನು ನೋಡಿದ್ದ ಅನುಭವಿಗಳೂ ಅಯೋಧ್ಯಾಪಟ್ಟಣದಿಂದ ಮೊದಲು ಹೊರಟರು.

ಶ್ರೀರಾಮನನ್ನು ಸಂದರ್ಶಿಸುವ ಮಹಾಹರ್ಷದಿಂದ ಕೂಡಿ ಅವನಿರುವೆಡೆಗೆ ಹೊರಟಿದ್ದ ಅಪಾರವಾದ ಆ ಜನಸಮೂಹವು–ಪರ್ವಕಾಲದಲ್ಲಿ ಉಕ್ಕಿ

ಬರುವ ಸಮುದ್ರದಂತೆಯೇ ಪ್ರಕಾಶಿಸುತ್ತಿದ್ದಿತು. ರಸ್ತೆಗಳ ನಿರ್ಮಾಣದಲ್ಲಿ ಕುಶಲರಾದ ಅವರೆಲ್ಲರೂ ಒಂದೊಂದು ಕೆಲಸಕ್ಕೂ ಒಂದೊಂದು ಪ್ರತ್ಯೇಕ ವಾದ ಗುಂಪುಗಳನ್ನು ಮಾಡಿಕೊಂಡು ಆಯಾ ವಿಭಾಗಕ್ಕೆ ಬೇಕಾದ ಗುದ್ದಲಿ, ಪಿಕಾಶಿ, ಮಂಕರಿ ಮುಂತಾದ ಸಲಕರಣೆಗಳೊಂದಿಗೆ ಮುಂದೆ-ಮುಂದೆ ತೆರಳಿದರು. ದಾರಿಗೆ ಅಡ್ಡವಾಗಿದ್ದ ಕೊಂಬೆಗಳನ್ನೂ, ಬಳ್ಳಿಗಳನ್ನೂ, ಪೊದೆಗಳನ್ನೂ, ಮೋಟುಮರಗಳನ್ನೂ, ಕಲ್ಲುಬಂಡೆಗಳನ್ನೂ ತೆಗೆದು ಹಾಕುತ್ತಾ ಅನೇಕವೃಕ್ಷಗಳನ್ನು ಕಡಿದುಹಾಕುತ್ತಾ, ಹಿಂದೆ ಬರುವ ಅಪಾರ ಜನಸ್ತೋಮಕ್ಕೆ ಮಾರ್ಗವನ್ನು ಕಲ್ಪಿಸುತ್ತಾ ಮುನ್ನಡೆಯುತ್ತಿದ್ದರು. ಹಾಗೆಯೇ ಮುಂದೆ ಹೋಗುತ್ತಿದ್ದಾಗ ಕುಶಲಕರ್ಮಿಗಳು ಮರಗಳಿಲ್ಲದ ಕಡೆ ಗಳಲ್ಲಿ ಮರಗಳನ್ನು ನೆಡುತ್ತಾ ಹೋಗುತ್ತಿದ್ದರು. ದಾರಿಗೆ ಅಡ್ಡಲಾದ ಮರಗಳನ್ನು ಕೊಡಲಿಗಳಿಂದಲೂ, ಉಳಿಗಳಿಂದಲೂ, ಮಚ್ಚುಗಳಿಂದಲೂ ಕಡಿದುಹಾಕುತ್ತಿದ್ದರು. ಕೆಲವರು ಕಾಲುಗಳಿಗೆ ಸಿಕ್ಕಿಹಾಕಿಕೊಳ್ಳುತ್ತಿದ್ದ ನೊಜೇಹುಲ್ಲನ್ನು ಸುಟ್ಟುಹಾಕುತ್ತಿದ್ದರು. ದುರ್ಗಮಪ್ರದೇಶಗಳನ್ನು ಧ್ವಂಸ ಮಾಡಿ ಪ್ರಯಾಣಕ್ಕೆ ಸುಗಮವನ್ನಾಗಿ ಮಾಡುತ್ತಿದ್ದರು. ಮತ್ತೆ ಕೆಲವು ಕುಶಲಕಾರ್ಮಿಕರು ದಿಬ್ಬದ ಪ್ರದೇಶದಿಂದ ಮಣ್ಣುತಂದು ನೀರಿಲ್ಲದಿದ್ದ ಬಾವಿಗಳನ್ನೂ ವಿಸ್ತಾರವಾದ ಹಳ್ಳ-ಕೊಳ್ಳಗಳನ್ನೂ ತುಂಬಿ ಸಮತಲವನ್ನಾಗಿ ಮಾಡುತ್ತಿದ್ದರು. ನದಿಯ ಪ್ರವಾಹವು ದಾರಿಗೆ ಅಡ್ಡವಾಗಿ ಬಂದೆಡೆಗಳಲ್ಲಿ ಸೇತುವೆಗಳನ್ನು ಕಟ್ಟುತ್ತಿದ್ದರು. ಹಾದಿಯಲ್ಲಿ ಸಿಕ್ಕಿದ ಕಲ್ಲುಬಂಡೆಗಳನ್ನು ಕಲ್ಲೊಡ್ಡರು ಒಡೆದುಹಾಕುತ್ತಿದ್ದರು. ಎತ್ತರವಾದ ಗುಡ್ಡಗಳಿರುವೆಡೆಗಳಲ್ಲಿ ಸುರಂಗವನ್ನು ಕೊರೆಯುತ್ತಿದ್ದರು. ಕೆರೆ-ಕಟ್ಟೆಗಳನ್ನು ಕಟ್ಟುವುದರಲ್ಲಿ ಕುಶಲರಾದ ಕಾರ್ಮಿಕರು ಹರಿಯುತ್ತಿದ್ದ ನದಿಗಳಿಗೆ ಅಣೆಕಟ್ಟೆಯನ್ನು ಕಟ್ಟಿ ಹೆಚ್ಚು ನೀರು ನಿಲ್ಲುವಂತೆ ಮಾಡುತ್ತಿದ್ದರು. ಹಾಗೆ ತಡೆಹಾಕಿದ ಜಲಾ ಶಯಕ್ಕೆ ಸೋಪಾನಗಳನ್ನು ಕಟ್ಟುತ್ತಿದ್ದರು. ಸಾಗರೋಪಮವಾದ ಇಂತಹ ನಾನಾಪ್ರಕಾರವಾದ ಅಣೆಕಟ್ಟುಗಳನ್ನು ಹಾದಿಯುದ್ದಕ್ಕೂ ನಿರ್ಮಿಸುತ್ತಾ ಹೋದರು. ಚಿಲುಮೆಗಳಾಗಲೀ, ಸಣ್ಣನದಿಗಳಾಗಲೀ ಇಲ್ಲದ ನಿರ್ಜಲಪ್ರದೇಶ ಗಳಲ್ಲಿ ಆಳವಾದ ಬಾವಿಗಳನ್ನು ತೋಡುತ್ತಿದ್ದರು. ಸರೋವರಗಳನ್ನು ಕಲ್ಪಿಸಿ ಅವುಗಳ ಸುತ್ತಲೂ ಸುಂದರವಾದ ವೇದಿಕೆಗಳನ್ನು ಕಲ್ಪಿಸುತ್ತಿದ್ದರು.

ಆಯಾಸವಾದಾಗ ವಿಶ್ರಮಿಸಿಕೊಳ್ಳಲು ಮಾರ್ಗದ ಎರಡು ಬದಿಗಳಲ್ಲಿಯೂ ನೆಲಕ್ಕೆ ಗಚ್ಚು ಹಾಕಿ ಭದ್ರಪಡಿಸಿ ಮೇಲ್ಹಾವಣಿಯನ್ನು ಹಾಕುತ್ತಿದ್ದರು. ಹಾದಿಯುದ್ದಕ್ಕೂ ಸುಗಂಧಯುಕ್ತವಾದ ಹೂಗಳಿಂದ ಅಲಂಕೃತವಾದ ವೃಕ್ಷಗಳಿದ್ದುವು. ಅವುಗಳಲ್ಲಿ ಮದದಿಂದ ನಿನಾದಮಾಡುತ್ತಿದ್ದ ಪಕ್ಷಿಗಳ ಸಮೂಹಗಳಿದ್ದುವು. ಅಂತಹ ವೃಕ್ಷಗಳ ಮೇಲೆ ಕುಶಲಕಾರ್ಮಿಕರು ಪತಾಕೆಗಳನ್ನು ಕಟ್ಟಿ ಅಲಂಕರಿಸುತ್ತಿದ್ದರು. ಹಾದಿಯುದ್ದಕ್ಕೂ ಗಂಧದ ನೀರನ್ನು ಚುಮುಕಿಸಿ ಮಾರ್ಗವನ್ನು ಸುಗಂಧಮಯವನ್ನಾಗಿ ಮಾಡುತ್ತಿದ್ದರು. ಬಗೆ-ಬಗೆಯ ಸುವಾಸನೆಯ ಹೂಗಳನ್ನು ದಾರಿಯುದ್ದಕ್ಕೂ ಚೆಲ್ಲಿದ್ದರು. ಸೈನಿಕರು ಮತ್ತು ಪಟ್ಟಣಿಗರು ಹೋಗಲು ಕಲ್ಪಿಸಿದ್ದ, ದೇವಮಾರ್ಗದಂತೆಯೇ ಕಾಣುತ್ತಿದ್ದ ಆ ರಾಜಮಾರ್ಗವು ಬಹಳವಾಗಿ ಶೋಭಿಸುತ್ತಿದ್ದಿತು. ಹೀಗೆ ಮಾರ್ಗವು ನಿರ್ಮಾಣವಾದನಂತರ ದಾರಿಯುದ್ದಕ್ಕೂ ಅಲ್ಲಲ್ಲಿ ತಂಗಲು ಶಿಬಿರಗಳನ್ನು ನಿರ್ಮಾಣಮಾಡುವ ಕಾರ್ಯವು ಪ್ರಾರಂಭವಾಯಿತು. ಆ ಕಾರ್ಯಕ್ಕಾಗಿಯೇ ಅಧಿಕೃತವಾಗಿ ನಿಯುಕ್ತರಾದ ಕರ್ಮಚಾರಿಗಳು ರಮಣೀಯವಾದ ಪ್ರಕೃತಿಸೌಂದರ್ಯವಿರುವ ಮತ್ತು ರುಚಿಕರವಾದ ಹಣ್ಣು-ಹಂಪಲುಗಳು ಸಿಕ್ಕುವ ಪ್ರದೇಶಗಳಲ್ಲಿ ಭರತನ ಅಭಿಮತದಂತೆ ಶಿಬಿರಗಳನ್ನು ನಿರ್ಮಿಸಿದರು. ಮಾರ್ಗಕ್ಕೆ ಅಲಂಕಾರಪ್ರಾಯವಾಗಿ ಕಾಣುತ್ತಿದ್ದ ಆ ಶಿಬಿರಗಳಿಗೆ ಧ್ವಜಪತಾಕೆಗಳನ್ನು ಏರಿಸಿ ಅವುಗಳನ್ನು ಮತ್ತೂ ಶೋಭಾಯಮಾನವನ್ನಾಗಿ ಮಾಡಿದರು. ವಾಸ್ತುಕರ್ಮವನ್ನು ತಿಳಿದಿದ್ದ ವಿದ್ವಾಂಸರು ಪ್ರಶಸ್ತವಾದ ನಕ್ಷತ್ರ, ಮುಹೂರ್ತ ಮತ್ತು ದಿವಸಗಳನ್ನು ನೋಡಿ ಮಹಾತ್ಮನಾದ ಭರತನಿಗೆ ಬಿಡಾರಗಳನ್ನು ನಿರ್ಮಿಸಿದರು.

ಹಾದಿಗಳಲ್ಲಿರುವ ಧೂಳು ಶಿಬಿರದೊಳಗೆ ಬರದಿರುವಂತೆ ಶಿಬಿರಗಳ ಸುತ್ತಲೂ ಕಾಲುವೆಗಳನ್ನು ತೋಡಿದ್ದರು. ಆ ಶಿಬಿರಗಳು ಇಂದ್ರನೀಲಪ್ರತಿಮೆಗಳಂತೆ ಕಾಣುತ್ತಿದ್ದು ಸುಂದರವಾದ ರಾಜಮಾರ್ಗಗಳಿಂದಲೂ ಕೂಡಿ ಶೋಭಾಯಮಾನವಾಗಿ ಕಾಣುತ್ತಿದ್ದುವು. ಮಾರ್ಗದ ಎರಡು ಕಡೆಗಳಲ್ಲಿಯೂ ದೇವಗೃಹಗಳನ್ನೂ ರಾಜಗೃಹಗಳನ್ನೂ ನಿರ್ಮಿಸಿದ್ದರು. ಎಲ್ಲ ಸೌಧಗಳನ್ನೂ ಪ್ರಾಕಾರಗಳನ್ನೂ ತಳಿರು-ತೋರಣಗಳಿಂದಲೂ ಪತಾಕೆಗಳಿಂದಲೂ ಸಿಂಗರಿಸಿದ್ದರು. ಅವುಗಳ ಮಧ್ಯದಲ್ಲಿದ್ದ ರಾಜಬೀದಿಯು ಬಹಳ ಶೋಭಾಯಮಾನವಾಗಿ

ಕಾಣುತ್ತಿದ್ದಿತು. ಕಪೋತಪಕ್ಷಿಗಳಿಗೆ ಆಶ್ರಯಭೂತವಾದ ಗೂಡುಗಳಿಂದ ಕೂಡಿದ್ದ ಏಳುಪ್ಪರಿಗೆಗಳ ಆ ಸೌಧಗಳು ಆಕಾಶದಲ್ಲಿ ಸಂಚರಿಸುತ್ತಿವೆಯೋ ಎಂಬಂತೆ ಕಾಣುತ್ತಿದ್ದುವು. ಬಹಳ ಎತ್ತರವಾದ ಸೌಧಗಳಿಂದ ಕೂಡಿದ್ದ ಆ ಶಿಬಿರಗಳು ನಿಶ್ಚಯವಾಗಿಯೂ ಇಂದ್ರನ ಅಮರಾವತಿಯಲ್ಲಿರುವ ಅರಮನೆಗಳಂತೆಯೇ ಕಂಗೊಳಿಸುತ್ತಿದ್ದುವು.

ನಾನಾವಿಧವಾದ ವೃಕ್ಷಗಳಿಂದಲೂ, ಅರಣ್ಯಗಳಿಂದಲೂ ಸಮಾವೃತವಾಗಿದ್ದ, ಶೀತಲವಾದ ಶುದ್ಧೋದಕದಿಂದ ಕೂಡಿದ್ದ, ದೊಡ್ಡ-ದೊಡ್ಡ ಮೀನುಗಳಿಂದ ವ್ಯಾಪ್ತವಾಗಿದ್ದ ಗಂಗಾನದಿಯ ತೀರದವರೆಗೂ ಅಂತಹ ಸುಂದರವಾದ ಶಿಬಿರಗಳನ್ನು ಮಾರ್ಗದ ಎರಡು ಬದಿಗಳಲ್ಲಿಯೂ ಕರ್ಮಚಾರಿಗಳು ನಿರ್ಮಿಸಿದ್ದರು. ಚಂದ್ರ ಮತ್ತು ನಕ್ಷತ್ರಗಳಿಂದ ವ್ಯಾಪ್ತವಾದ, ನಿರ್ಮಲವಾದ ಆಕಾಶವು ರಾತ್ರಿಯ ಕಾಲದಲ್ಲಿ ಶೋಭಾಯಮಾನವಾಗಿ ಕಾಣುವಂತೆ–ಚತುರರಾದ ಶಿಲ್ಪಿಗಳಿಂದ ಯೋಗ್ಯರೀತಿಯಲ್ಲಿ ನಿರ್ಮಿತವಾಗಿದ್ದ ರಾಜಮಾರ್ಗವು ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿದ್ದಿತು.

೮೦ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೮೧ನೆಯ ಸರ್ಗ

ಪ್ರಾತಃಕಾಲದಲ್ಲಿ ವಂದಿ-ಮಾಗಧರ ಮಂಗಳಘೋಷಗಳು: ದುಃಖಗೊಂಡ ಭರತನಿಂದ ತಡೆ: ಸಭಾಭವನದಲ್ಲಿ ಎಲ್ಲರೂ ಸೇರುವಂತೆ ವಸಿಷ್ಠರ ಆದೇಶ

ತತೋ ನಾನ್ದೀಮುಖೀಂ ರಾತ್ರಿಂ ಭರತಂ ಸೂತಮಾಗಧಾಃ ।
ತುಷ್ಟುವುರ್ವಾಗ್ವಿಶೇಷಜ್ಞಾಃ ಸ್ತವೈರ್ಮಙ್ಗಲಸಂಹಿತೈಃ ॥೧॥

ಅಭ್ಯುದಯಸೂಚಕವಾದ ರಾತ್ರಿಯಲ್ಲಿ ಸ್ವಲ್ಪಭಾಗವು ಮಾತ್ರವೇ ಉಳಿದಿರಲು ಪ್ರಾಸಬದ್ಧವಾಗಿ ಹೊಸ-ಹೊಸ ಹೊಗಳಿಕೆಯ ಹಾಡುಗಳನ್ನು ಕಟ್ಟಿ ಹಾಡಲು ಸಮರ್ಥರಾದ ಸೂತ-ಮಾಗಧರು ಮಂಗಳಯುಕ್ತವಾದ ಸ್ತೋತ್ರಗಳಿಂದ ಭರತನನ್ನು ಸ್ತುತಿಸತೊಡಗಿದರು.*

*'ನಾನ್ದೀಮುಖೀಂ ರಾತ್ರಿಂ' ಎಂಬುದಕ್ಕೆ ಒಬ್ಬ ವ್ಯಾಖ್ಯಾನಕಾರರು ಭರತನ

ಸುವರ್ಣನಿರ್ಮಿತವಾದ ಕೋಲಿನಿಂದ ಪ್ರತಿಯಾಮದ ಕೊನೆಯಲ್ಲೂ ಬಾರಿಸಲ್ಪಡುವ ನಗಾರಿಯು ಗಟ್ಟಿಯಾಗಿ ಶಬ್ದಮಾಡಿತು. ಶಂಖಗಳನ್ನು ಊದಿದರು. ಮಂದ್ರ-ಮಧ್ಯಮ-ತಾರಧ್ವನಿಗಳಿಂದ ಆರೋಹಣಾವರೋಹಣ ಕ್ರಮದಲ್ಲಿ ನೂರಾರು ವಾದ್ಯಗಳನ್ನು ಬಾರಿಸಿದರು. ಆಕಾಶವನ್ನೇ ತುಂಬುತ್ತಿರುವುದೋ ಎಂಬಂತೆ ನುಡಿಸಲ್ಪಡುತ್ತಿದ್ದ ಆ ಮಂಗಳವಾದ್ಯಗಳ ಘೋಷವು ಶೋಕಸಂತಪ್ತನಾಗಿದ್ದ ಭರತನನ್ನು ಪುನಃ ಶೋಕಸಾಗರದಲ್ಲಿ ಮುಳುಗಿಸಿತು. ಕೂಡಲೇ ಭರತನು ಹಾಸಿಗೆಯಿಂದ ಮೇಲೆದ್ದು ಹೊಗಳು ಭಟರನ್ನು ಕರೆಯಿಸಿ ತಾನು ರಾಜನಲ್ಲವೆಂದೂ ರಾಜಯೋಗ್ಯವಾದ ಹೊಗಳಿಕೆಗಳಾಗಲೀ ಮಂಗಳಘೋಷಗಳಾಗಲೀ ತನಗೆ ಸಲ್ಲವೆಂದೂ ಹೇಳಿ ಕಳುಹಿಸಿಬಿಟ್ಟನು. ಅನಂತರ ತನ್ನೊಡನಿದ್ದ ಶತ್ರುಘ್ನನಿಗೆ ಹೇಳಿದನು:

ಪಶ್ಯ ಶತ್ರುಘ್ನ ಕೈಕೇಯ್ಯಾ ಲೋಕಸ್ಯಾಪಕೃತಂ ಮಹತ್ ।
ವಿಸೃಜ್ಯ ಮಯಿ ದುಃಖಾನಿ ರಾಜಾ ದಶರಥೋ ಗತಃ ॥೫॥

“ನೋಡು, ಶತ್ರುಘ್ನ! ಕೈಕೇಯಿಯು ಲೋಕಕ್ಕೆ ಬಹಳವಾಗಿ ಅಪಕಾರಮಾಡಿಬಿಟ್ಟಳು. ರಾಜನಾದರೋ ತಾನು ಅನುಭವಿಸುತ್ತಿದ್ದ ದುಃಖಗಳೆಲ್ಲವನ್ನೂ ನನ್ನ ಪಾಲಿಗೆ ಬಿಟ್ಟು ಹೊರಟುಹೋದನು.

ಮಹಾತ್ಮನಾದ ದಶರಥನ ಧರ್ಮಮೂಲವಾದ ರಾಜ್ಯಶ್ರೀಯು– ನೀರಿನಲ್ಲಿರುವ ನಾವಿಕನಿಲ್ಲದ ನಾವೆಯಂತೆ ಗೊತ್ತು- ಗುರಿಯಿಲ್ಲದೇ ಸಾಗಿ ಹೋಗುತ್ತಿದೆ.

ತಂದೆಯು ಸ್ವರ್ಗಸ್ಥನಾದ ಬಳಿಕ ಯಾರು ನಮಗೆ ನಾಥನಾಗ

ಅಭಿಷೇಕಾರ್ಥವಾಗಿ ವಸಿಷ್ಠರು ಅಭ್ಯುದಯವನ್ನು ಮಾಡಿದರೆಂದೂ, ಮತ್ತೊಬ್ಬರು ರಾಮನನ್ನು ಕರೆತರುವ ಮೊದಲು ಶುಭಪ್ರಯಾಣಕ್ಕಾಗಿ ನಾಂದಿಯನ್ನು ಮಾಡಿದರೆಂದೂ, ಇನ್ನೊಬ್ಬರು ಆಶೌಚಾನಂತರದಲ್ಲಿ ಶುಭಸೂಚಕವಾಗಿ ನಾಂದೀರೂಪವಾದ ಅಭ್ಯುದಯವನ್ನು ಮಾಡಿದರೆಂದೂ ವ್ಯಾಖ್ಯೆಮಾಡಿರುತ್ತಾರೆ. ‘ನಾನ್ದಿರಾನನ್ದನೇ ದ್ಯೂತೇ’ ಎಂಬ ವಿಶ್ವಕೋಶದ ಪ್ರಕಾರ ನಾನ್ದಿ ಎಂದರೆ “ಆನಂದ” ಎಂದೂ ಅರ್ಥವಾಗುವುದರಿಂದ “ಆನಂದಮಯವಾದ ರಾತ್ರಿಯು ಕಳೆದ ನಂತರ” ಎಂದು ಮತ್ತೊಬ್ಬರು ಅರ್ಥಮಾಡಿರುತ್ತಾರೆ.

ಬೇಕಾಗಿದ್ದಿತೋ ಅಂತಹ ಶ್ರೀರಾಘವನನ್ನೇ ನನ್ನ ತಾಯಿಯು ವಂಶದ ಧರ್ಮವನ್ನೂ ಪರಿತ್ಯಾಗಮಾಡಿ ಅರಣ್ಯಕ್ಕೆ ಕಳುಹಿಸಿಬಿಟ್ಟಳು."

ಇವೇ ಮುಂತಾಗಿ ಹೇಳಿಕೊಂಡು ರೋದನಮಾಡುತ್ತಿದ್ದ, ಪ್ರತಿಕ್ಷಣದಲ್ಲಿಯೂ ದುಃಖಾಧಿಕ್ಯದಿಂದ ಮೂರ್ಛೆಹೊಂದುತ್ತಲೂ ಇದ್ದ ಭರತನನ್ನು ನೋಡಿ ದಯನೀಯರಾದ ಅಂತಃಪುರದ ಸ್ತ್ರೀಯರು ರಾಗ-ರಾಗವಾಗಿ ಆಲಾಪಿಸಿಕೊಂಡು ಅಳತೊಡಗಿದರು. ಭರತನು ಗೋಳಿಡುತ್ತಿರುವಾಗ ರಾಜಧರ್ಮವನ್ನು ತಿಳಿದವರಾದ ಮಹಾಯಶೋವಂತರಾದ ವಸಿಷ್ಠರು ಇಕ್ಷ್ವಾಕುಕುಲನಾಥನ ಸಭಾಮಂದಿರವನ್ನು ಪ್ರವೇಶಿಸಿದರು. ಸುವರ್ಣಮಯವಾಗಿದ್ದ, ಅತ್ಯಂತ ರಮ್ಯವಾಗಿದ್ದ, ನಾನಾವಿಧವಾದ ಇಂದ್ರನೀಲಾದಿ ಮಣಿಗಳಿಂದಲೂ ವೈಡೂರ್ಯಾದಿ ರತ್ನಗಳಿಂದಲೂ ಸಮಲಂಕೃತವಾಗಿದ್ದ, 'ಸುಧರ್ಮಾ'– ಎಂಬ ದೇವಸಭೆಯಂತೆಯೇ ಕಂಗೊಳಿಸುತ್ತಿದ್ದ ಇಕ್ಷ್ವಾಕುನಾಥನ ಸಭಾಮಂಟಪಕ್ಕೆ ಧರ್ಮಾತ್ಮರಾದ ವಸಿಷ್ಠರು ಶಿಷ್ಯರೊಡನೆ ಆಗಮಿಸಿದರು. ಸಕಲವೇದಗಳನ್ನೂ ತಿಳಿದವರಾಗಿದ್ದ ವಸಿಷ್ಠರು ಸುವರ್ಣಮಯವಾದ ಮತ್ತು ಮಂಗಳಪ್ರದವಾದ ರತ್ನಗಂಬಳಿಯಿಂದ ಹೊದ್ದಿಸಲ್ಪಟ್ಟಿದ್ದ ಪೀಠದಲ್ಲಿ ಕುಳಿತು ರಾಜಭಟರಿಗೆ ಆಜ್ಞಾಪಿಸಿದರು: "ಆಜ್ಞೆಯ ಪರಿಪಾಲನೆಯಲ್ಲಿಯೇ ಏಕಾಗ್ರತೆಯುಳ್ಳ ನೀವು ಬ್ರಾಹ್ಮಣರನ್ನೂ, ಕ್ಷತ್ರಿಯರನ್ನೂ, ವೈಶ್ಯರನ್ನೂ, ಅಮಾತ್ಯರನ್ನೂ, ಸೇನಾಪ್ರಮುಖರನ್ನೂ ಈಗಲೇ ಕರೆತನ್ನಿರಿ. ವಿಳಂಬವಿಲ್ಲದೇ ಬಹುಶೀಘ್ರವಾಗಿ ಮಾಡಬೇಕಾಗಿರುವ ರಾಜಕಾರ್ಯವಿದೆ. ರಾಜಸೇವಕರೊಡನಿರುವ ಶತ್ರುಘ್ನನನ್ನೂ, ಯಶೋವಂತನಾದ ಭರತನನ್ನೂ, ಯುಧಾಜಿತನನ್ನೂ, ಸುಮಂತ್ರನನ್ನೂ ಮತ್ತು ಹಿತೈಷಿಗಳನ್ನೂ ಶೀಘ್ರವಾಗಿ ಕರೆತನ್ನಿರಿ."

ವಸಿಷ್ಠರ ಆಜ್ಞೆಯಾಗುತ್ತಲೇ ಅತಿಶಯವಾದ ಕೋಲಾಹಲದ ವಾತಾವರಣವುಂಟಾಯಿತು. ರಥಗಳಲ್ಲಿಯೂ–ಆನೆ-ಕುದುರೆಗಳೇ ಮುಂತಾದ ವಾಹನಗಳಲ್ಲಿಯೂ ಕುಳಿತು ಬ್ರಾಹ್ಮಣಪ್ರಮುಖರಾದ ಪೌರರು ತಂಡ-ತಂಡವಾಗಿ ಸಭಾಭವನಕ್ಕೆ ಆಗಮಿಸತೊಡಗಿದರು.

ಇತ್ತಲಾಗಿ ವಸಿಷ್ಠರ ಆಜ್ಞೆಯನ್ನು ಶಿರಸಾ ವಹಿಸಿ ಭರತನೂ ರಾಜ

ಭವನಕ್ಕೆ ಆಗಮಿಸಿದನು. ದೇವಸಭೆಗೆ ಇಂದ್ರನು ಪ್ರವೇಶಿಸುವ ಕಾಲದಲ್ಲಿ ದೇವತೆಗಳು ಇಂದ್ರನಿಗೆ ಗೌರವವಿತ್ತು ಅಭಿನಂದಿಸಿ ಸ್ವಾಗತಿಸುವಂತೆ–ಎಲ್ಲ ಪ್ರಜೆಗಳೂ ಹಿಂದೆ ದಶರಥನನ್ನು ಅಭಿನಂದಿಸುತ್ತಿದ್ದಂತೆಯೇ ಭರತನನ್ನೂ ಗೌರವಿಸಿ ಅಭಿನಂದಿಸಿದರು.

ತಿಮಿ-ತಿಮಿಂಗಿಲಗಳಿಂದಲೂ–ನೀರಾನೆಗಳಿಂದಲೂ ವ್ಯಾಪ್ತವಾಗಿರುವ, ಏರಿಳಿತಗಳಿಲ್ಲದೆ ಸ್ತಿಮಿತವಾಗಿರುವ ನೀರಿನಿಂದ ಕೂಡಿರುವ, ಮಣಿ-ಶಂಖ-ಮಳಲುಗಳಿಂದ ಕೂಡಿರುವ ಸಮುದ್ರದೋಪಾದಿಯಲ್ಲಿ ಆ ರಾಜಸಭೆಯು ಕಂಗೊಳಿಸುತ್ತಿದ್ದಿತು. ದಶರಥನ ಮಗನು ಉಪಸ್ಥಿತನಾಗಿದ್ದ ಆ ರಾಜ ಸಭೆಯು–ಹಿಂದೆ ದಶರಥನು ಉಪಸ್ಥಿತನಾಗಿದ್ದಾಗ ಯಾವ ವಿಧವಾದ ಕಾಂತಿಯಿಂದ ಪರಿಶೋಭಿಸುತ್ತಿದ್ದಿತೋ–ಅದೇ ವಿಧವಾದ ಕಾಂತಿಯಿಂದ ಪರಿಶೋಭಿಸುತ್ತಿದ್ದಿತು.

ಊ೧ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೮೨ನೆಯ ಸರ್ಗ

ಪಟ್ಟಾಭಿಷಿಕ್ತನಾಗುವಂತೆ ಭರತನಿಗೆ ವಸಿಷ್ಠರ ಆದೇಶ: ಭರತನ ಅಸಮ್ಮತಿ: ಶ್ರೀರಾಮನನ್ನು ಅರಣ್ಯದಿಂದ ಕರೆತರಲು ಸಿದ್ಧವಾಗುವಂತೆ ಎಲ್ಲರಿಗೂ ಆದೇಶ

ತಾಮಾರ್ಯಗಣಸಂಪೂರ್ಣಾಂ ಭರತಃ ಪ್ರಗ್ರಹಾಂ ಸಭಾಮ್ ।
ದದರ್ಶ ಬುದ್ಧಿಸಂಪನ್ನಃ ಪೂರ್ಣಚನ್ದ್ರೋ ನಿಶಾಮಿವ ॥೧॥

ಆರ್ಯಜನರಿಂದ ತುಂಬಿಹೋಗಿದ್ದ, ವಸಿಷ್ಠರೇ ಮೊದಲಾದ ಮಹರ್ಷಿಗಳಿಂದ ಅಧಿಷ್ಠಿತವಾಗಿದ್ದ ಸಭೆಯನ್ನು ಶುಕ್ರ-ಬೃಹಸ್ಪತ್ಯಾದಿಗಳಿಂದ ಕೂಡಿ ರುವ ರಾತ್ರಿಯನ್ನು ಪೂರ್ಣಚಂದ್ರನು ಬೆಳಗುವಂತೆ–ಬುದ್ಧಿಸಂಪನ್ನನಾದ ಭರತನು ವೀಕ್ಷಿಸಿದನು. ಪೂರ್ಣಚಂದ್ರನಿಂದ ಯುಕ್ತವಾದ ರಾತ್ರಿಯು ಆಹ್ಲಾದಕರವಾಗಿರುವಂತೆ ಅಂದಿನ ಸಭೆಯು ಮನಸ್ಸಿಗೆ ಆಹ್ಲಾದವನ್ನು ಉಂಟುಮಾಡುವುದಾಗಿದ್ದಿತು.* ಸಂಪ್ರದಾಯಾನುಗತವಾದ ಕ್ರಮಕ್ಕೆ

*'ಪ್ರಗ್ರಹಾ' ಎಂಬುದಕ್ಕೆ ಸ್ವಾಭಾವಿಕವಾದ ಅರ್ಥ ಹಿಡಿತ, ಗ್ರಹಣಮಾಡುವುದು ಎಂದಾಗುತ್ತದೆ. ಪ್ರಕೃತಸಂದರ್ಭದಲ್ಲಿ ಈ ಶಬ್ದಕ್ಕೆ ವ್ಯಾಖ್ಯಾನಕಾರರು ಹೀಗೆ ಅರ್ಥ

ಲೋಪವಿಲ್ಲದ ರೀತಿಯಲ್ಲಿ ಸಭೆಗೆ ಆಗಮಿಸಿದ್ದ ಆರ್ಯರಿಗೆ ಕುಳಿತುಕೊಳ್ಳಲು ಯಥಾಯೋಗ್ಯವಾದ ಆಸನಗಳನ್ನು ಸಿದ್ಧಪಡಿಸಿದ್ದರು. ಅವರೆಲ್ಲರೂ ಧರಿಸಿದ್ದ ವಸ್ತ್ರಗಳ ಮತ್ತು ಪೂಸಿಕೊಂಡಿದ್ದ ಅಂಗರಾಗಾದಿಗಳ ಪ್ರಭೆಯಿಂದ ಆ ಸಭೆಯು ಮತ್ತಷ್ಟು ಪ್ರಕಾಶಮಾನವಾಯಿತು. ವಿದ್ವಜ್ಜನರಿಂದ ತುಂಬಿ ಹೋಗಿ ಮನೋಜ್ಞವಾಗಿ ಕಾಣುತ್ತಿದ್ದ ಆ ಸಭಾಮಂದಿರವು ಶರತ್ಕಾಲದಲ್ಲಿ ಪೂರ್ಣಚಂದ್ರನಿಂದ ಕಂಗೊಳಿಸುವ ರಾತ್ರಿಯಂತೆಯೇ ಪ್ರಕಾಶಿಸುತ್ತಿದ್ದಿತು. ರಾಜನ ಪ್ರಜೆಗಳೆಲ್ಲರೂ ಸಮಗ್ರವಾಗಿ ಸಭೆಗೆ ಆಗಮಿಸಿರುವುದನ್ನು ನೋಡಿ ಧರ್ಮವಿದರಾದ ಪುರೋಹಿತರು ಭರತನಿಗೆ ಮೃದು-ಮಧುರವಾದ ಈ ಮಾತನ್ನು ಹೇಳಿದರು:

"ವತ್ಸ! ನಿನ್ನ ತಂದೆಯಾದ ದಶರಥನು ತಾನು ಜೀವಿಸಿರುವವರೆಗೂ ಧರ್ಮಮಾರ್ಗದಲ್ಲಿಯೇ ಇದ್ದು ಧರ್ಮವನ್ನು ಸಂರಕ್ಷಿಸುತ್ತಿದ್ದನು. ಕಾಲವು ಸನ್ನಿಹಿತವಾಗಲಾಗಿ ಧನ-ಧಾನ್ಯಗಳಿಂದಲೂ ಸಂಪತ್ತಿನಿಂದಲೂ ಸಮೃದ್ಧ ವಾಗಿರುವ ಈ ಪೃಥ್ವಿಯನ್ನು ನಿನಗೊಪ್ಪಿಸಿ ಸ್ವರ್ಗಕ್ಕೆ ಹೊರಟುಹೋದನು. ಸತ್ಯವ್ರತನಾದ ಶ್ರೀರಾಮನೂ ಸತ್ಪುರುಷರ ಧರ್ಮವನ್ನೇ ಸ್ಮರಿಸುತ್ತಾ ಉದಯಿಸಿದ ಚಂದ್ರನು ಬೆಳದಿಂಗಳನ್ನು ಬಿಟ್ಟಿರದಂತೆ–ತಂದೆಯ ಆದೇಶ ವನ್ನು ತ್ಯಜಿಸಲಿಲ್ಲ. ತಂದೆಯ ಆದೇಶದಂತೆ ಕಾಡಿಗೆ ಹೊರಟುಹೋದನು. ತಂದೆಯಿಂದಲೂ ಮತ್ತು ಅಣ್ಣನಿಂದಲೂ ಕೊಡಲ್ಪಟ್ಟಿರುವ ಆತಂಕರಹಿತ ವಾದ ಈ ರಾಜ್ಯವನ್ನು ನೀನು ಅನುಭವಿಸು. ಅಮಾತ್ಯರನ್ನು ಸಂತೋಷ

ಮಾಡಿದ್ದಾರೆ ೧) ಪ್ರಗ್ರಹಾ=ಪ್ರಕೃಷ್ಟೈಃ ವಸಿಷ್ಠಾದಿಭಿಃ ಗ್ರಹಃ =ಪರಿಗ್ರಹಃ, ಅಧಿ ಷ್ಠಾನಂ ಯಸ್ಯಾಂ ಸಾ ಪ್ರಗ್ರಹಾ; ಪರಮಶ್ರೇಷ್ಠರಾದ ವಸಿಷ್ಠಾದಿಗಳಿಂದ ಅಧಿಷ್ಠಿತ ವಾಗಿರುವುದು, ರಾತ್ರಿಗೆ ಅನ್ವಯಿಸಿ ಹೇಳಬೇಕಾದರೆ ಶುಕ್ರ-ಬೃಹಸ್ಪತ್ಯಾದಿ ಪ್ರಕೃಷ್ಟ ಗ್ರಹಯುಕ್ತಾಂ= ಶುಕ್ರ-ಬೃಹಸ್ಪತಿಗಳೇ ಮೊದಲಾದ ಉತ್ಕೃಷ್ಟಗ್ರಹಗಳಿಂದ ಯುಕ್ತವಾಗಿರುವ. ೨) ಪ್ರಗ್ರಹಾಂ=ನಿಯಮವತೀಂ–ಇಲ್ಲಿ ಕುಳಿತುಕೊಳ್ಳಲು ಮಾತ ನಾಡಲು ಒಂದು ನಿಯಮವುಂಟು. ಅಂತಹ ನಿಯಮಗಳಿಂದ ಕೂಡಿದ ಸಭಾಭವನ. ೩)ಪ್ರಕೃಷ್ಟಾಃ ಗ್ರಹಾಃ ಅಗ್ರಹವನ್ತೋ ವಸಿಷ್ಠಾದಯಃ ಯಸ್ಯಾಂ ತಾಂ ಸಭಾಂ । ದೃಢವ್ರತರಾದ ವಸಿಷ್ಠಾದಿಗಳು ಎಲ್ಲಿರುವರೋ ಆ ಮಹಾಸಭೆ. ಇಲ್ಲಿ 'ಗ್ರಹಾಃ' ಎಂಬುದಕ್ಕೆ ಆಗ್ರಹವನ್ತಃ=ದೃಢವ್ರತರಾದ ಎಂದು ಈ ವ್ಯಾಖ್ಯಾನಕಾರರು ಅರ್ಥಮಾಡಿರುತ್ತಾರೆ.

ಗೊಳಿಸಿ ಆದಷ್ಟು ಜಾಗ್ರತೆಯಾಗಿ ಪಟ್ಟಾಭಿಷಿಕ್ತನಾಗು. ಉತ್ತರ-ಪಶ್ಚಿಮ-ದಕ್ಷಿಣದೇಶಗಳಲ್ಲಿರುವ ಸಾಮಂತರಾಜರೂ, ರಾಜರಲ್ಲದ ಕೆಲವು ಜನನಾಯಕರೂ, ಪರದೇಶವಾಸಿಗಳಾದ ಯವನರೂ, ಸಮುದ್ರದ್ವೀಪಗಳಲ್ಲಿ ವಾಸಮಾಡುತ್ತಿರುವವರೂ ನಿನ್ನ ಪಟ್ಟಾಭಿಷೇಕದ ಸಮಯದಲ್ಲಿ ಹೇರಳವಾದ ಧನ-ಕನಕ-ವಸ್ತು-ವಾಹನಗಳನ್ನು ಕಪ್ಪವಾಗಿ ತಂದುಕೊಡಲಿ."



ವಸಿಷ್ಠರ ಆ ಮಾತನ್ನು ಕೇಳಿ ಭರತನಿಗೆ ಬಹಳ ದುಃಖವೇ ಆಯಿತು. ಕುಲಕ್ರಮಾಗತವಾದ ಸಂಪ್ರದಾಯ-ಧರ್ಮಗಳನ್ನು ತಿಳಿದಿದ್ದ ಭರತನು ಧರ್ಮಮಾರ್ಗದಲ್ಲಿಯೇ ನಡೆಯಬೇಕೆಂಬ ಆಕಾಂಕ್ಷೆಯಿಂದ ಧರ್ಮಮೂರ್ತಿ

ಯಾದ ಶ್ರೀರಾಮನನ್ನು ಮನಸ್ಸಿನಿಂದಲೇ ಸ್ಮರಿಸಿದನು. ಕಲಹಂಸದ ಸ್ವರಕ್ಕೆ ಅನುರೂಪವಾದ ಸ್ವರಮಾಧುರ್ಯದಿಂದ ಕೂಡಿದ್ದ ಯುವಕನಾದ, ಭರತನು ಅತಿಯಾಗಿ ಕಣ್ಣೀರಿಡುತ್ತಾ ಗದ್ಗದಸ್ವರದಿಂದ ಕೂಡಿದವನಾಗಿ ಸಭೆಯ ಮಧ್ಯದಲ್ಲಿ ಶೋಕಿಸಿದನು. ಪಟ್ಟಾಭಿಷೇಕವನ್ನು ಮಾಡಿಕೊಳ್ಳುವಂತೆ ನಿರ್ದೇಶಿಸಿದುದಕ್ಕಾಗಿ ಪುರೋಹಿತರನ್ನೂ ಆಕ್ಷೇಪಿಸಿದನು.

"ಗುರುಕುಲವಾಸದಲ್ಲಿದ್ದು ಬ್ರಹ್ಮಚರ್ಯವನ್ನು ನಿಷ್ಠೆಯಿಂದ ಪರಿಪಾಲಿಸಿದ, ಸಕಲವೇದ-ವೇದಾಂಗಗಳನ್ನೂ ಅಧ್ಯಯನಮಾಡಿ ಸ್ನಾನವ್ರತವನ್ನು ಪೂರೈಸಿರುವ, ಬುದ್ಧಿಸಂಪನ್ನನಾದ, ಧರ್ಮಮಾರ್ಗದಲ್ಲಿಯೇ ನಡೆಯಲು ಸತತವಾಗಿ ಪ್ರಯತ್ನಿಸುತ್ತಿರುವ ಶ್ರೀರಾಮನ ರಾಜ್ಯವನ್ನು ನನ್ನಂತಹ ಯಾವನು ತಾನೇ ಅಪಹರಿಸುತ್ತಾನೆ? ಧರ್ಮಾತ್ಮನಾದ ದಶರಥನ ಪುತ್ರನಾಗಿ ಹುಟ್ಟಿರುವ ನಾನು ರಾಜ್ಯದ ಅಪಹಾರಕನು ಹೇಗೆತಾನೇ ಆಗುವೆನು? ಈ ರಾಜ್ಯವೂ ರಾಮನದೇ ಆಗಿದೆ. ನಾನೂ ರಾಮನ ಸೇವಕನೇ ಆಗಿರುವೆನು. ಈಗಿನ ಸಂದರ್ಭದಲ್ಲಿ ಧರ್ಮವು ಯಾವುದು? ಹೇಗೆ ನಡೆದುಕೊಂಡರೆ ಧರ್ಮಮಾರ್ಗದಲ್ಲಿ ನಡೆದಂತಾಗುತ್ತದೆ?–ಎಂಬುದನ್ನು ಸಮಾಲೋಚಿಸಿ ಸಲಹೆನೀಡುವುದು ತಮಗೆ ಯೋಗ್ಯವಾಗಿದೆ. ಶ್ರೀರಾಮನು ನಮ್ಮೆಲ್ಲರಿಗಿಂತಲೂ ಜ್ಯೇಷ್ಠನೂ ಆಗಿದ್ದಾನೆ; ಶ್ರೇಷ್ಠನೂ ಆಗಿದ್ದಾನೆ. ಮಹಾತ್ಮರಾದ ದಿಲೀಪ-ನಹುಷರಂತೆಯೇ ಧರ್ಮಾತ್ಮನಾಗಿದ್ದಾನೆ. ದಶರಥನು ಯಾವ ರೀತಿಯಲ್ಲಿ ವಂಶಾನುಗತವಾದ ಈ ರಾಜ್ಯವನ್ನು ಪಡೆದನೋ ಅದೇ ರೀತಿಯಲ್ಲಿ ನಮ್ಮ ಅಣ್ಣನಾದ ಶ್ರೀರಾಮನೂ ಈ ರಾಜ್ಯವನ್ನು ಪಡೆದುಕೊಳ್ಳಲು ಯೋಗ್ಯನಾಗಿದ್ದಾನೆ. ಅಣ್ಣನಿದ್ದೂ ತಮ್ಮನು ರಾಜ್ಯಭಾರ ಮಾಡುವುದು ಆರ್ಯಸಂಪ್ರದಾಯವಲ್ಲ. ಅನಾರ್ಯರಿಂದ ಅನುಸರಿಸಲ್ಪಡುವ ಮಾರ್ಗವಾಗುವುದು. ಹಾಗೆ ಮಾಡುವುದು ನರಕಪ್ರಾಪ್ತಿಗೆ ಕಾರಣವಾಗುತ್ತದೆ. ನಾನೇನಾದರೂ ಆರ್ಯರ ಸಂಪ್ರದಾಯಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಈ ಲೋಕದಲ್ಲಿ ನಾನು ಇಕ್ಷ್ವಾಕುಕುಲಕಳಂಕನಾಗುತ್ತೇನೆ. ಈ ವಿಷಯದಲ್ಲಿ ನನ್ನ ತಾಯಿಯು ಪಾಪಕಾರ್ಯವನ್ನು ಮಾಡಿರಬಹುದು. ಅದು ನನಗೆ ಸಮ್ಮತವಾಗಿಲ್ಲ. ಅವಳು ಮಾಡಿರುವ ಪಾಪಕರ್ಮವನ್ನು ಕ್ಷಮಿಸುವಂತೆ ನಾನಿಲ್ಲಿಂದಲೇ ದುರ್ಗಮವಾದ ಅರಣ್ಯದಲ್ಲಿ ವಾಸಮಾಡುತ್ತಿರುವ ರಾಮನಿಗೆ

ಕೈಮುಗಿದು ಕ್ಷಮೆಯನ್ನು ಯಾಚಿಸುತ್ತೇನೆ. ನಾನಂತೂ ಶ್ರೀರಾಮನನ್ನೇ ಅನುಸರಿಸಿ ಹೋಗುತ್ತೇನೆ. ಪುರುಷಶ್ರೇಷ್ಠನಾದ ಅವನೇ ನಮ್ಮೆಲ್ಲರಿಗೂ ರಾಜನು. ಮೂರು ಲೋಕಗಳಿಗೂ ರಾಜನಾಗಲು ಅವನು ಸಮರ್ಥನಾಗಿರುವನು."

ಅಯೋಧ್ಯೆಯ ಪ್ರಜೆಗಳೆಲ್ಲರೂ ಸ್ವಭಾವತಃ ಶ್ರೀರಾಮನಲ್ಲಿಯೇ ನೆಟ್ಟ ಮನಸ್ಸುಳ್ಳವರಾಗಿದ್ದುದರಿಂದ. ಧರ್ಮಸಮ್ಮತವಾದ ಭರತನ ಮಾತನ್ನು ಕೇಳಿ ಅವರೆಲ್ಲರೂ ಪರಮಹರ್ಷಿತರಾಗಿ ಆನಂದಬಾಷ್ಪಗಳನ್ನು ಸುರಿಸಿದರು.

ಭರತನು ಮುಂದುವರಿದು ಹೇಳಿದನು:

"ಆರ್ಯನಾದ ಶ್ರೀರಾಮನನ್ನು ನಾನೇನಾದರೂ ಹಿಂದಿರುಗುವಂತೆ ಮಾಡಲು ಅಸಮರ್ಥನಾದರೆ–ಲಕ್ಷ್ಮಣನಂತೆಯೇ ನಾನೂ ಕೂಡ ಶ್ರೀರಾಮನ ಜೊತೆಯಲ್ಲಿಯೇ ಕಾಡಿನಲ್ಲಿ ಇದ್ದುಬಿಡುತ್ತೇನೆ. ನೀವೆಲ್ಲರೂ ನನ್ನೊಡನೆ ಅರಣ್ಯಕ್ಕೆ ಬರಬೇಕು. ಈ ಸಭೆಯ ಸದಸ್ಯರಾದ, ಸಾಧುಗಳಾದ ಮತ್ತು ಗುಣವಂತರಾದ ತಮ್ಮೆಲ್ಲರ ಎದುರಿನಲ್ಲಿಯೇ ನಾನು ಒತ್ತಾಯ ದಿಂದಲಾದರೂ ನಮ್ಮಣ್ಣನನ್ನು ಅಯೋಧ್ಯೆಗೆ ಕರೆತರಲು ನನ್ನ ಬುದ್ಧಿಗೆ ನಿಲುಕುವ ಸಕಲವಿಧವಾದ ಉಪಾಯಗಳನ್ನೂ ಮಾಡುತ್ತೇನೆ. ಈ ಸಮಯದಲ್ಲಿ ರಾಮನ ಬಳಿಗೆ ಯಾತ್ರೆಹೋಗುವುದೇ ನನಗೆ ಉಚಿತವೆನಿಸಿದೆ. ಆದುದರಿಂದ ಉಚಿತವಾಗಿ ಮತ್ತು ವೇತನಪಡೆದು ಕೆಲಸಮಾಡುವ ಕಾರ್ಮಿಕರನ್ನೂ, ದಕ್ಷರಾದ ಮಾರ್ಗಪರಿಶೋಧಕರನ್ನೂ ನಾನೀಗಾಗಲೇ ಕಳುಹಿಸಿಕೊಟ್ಟಿದ್ದೇನೆ."

ಧರ್ಮಾತ್ಮನಾದ, ಭ್ರಾತೃವತ್ಸಲನಾದ ಭರತನು ಸಭಾಸದರಿಗೆ ಹೀಗೆ ಹೇಳಿ ಸಮೀಪದಲ್ಲಿಯೇ ಕುಳಿತಿದ್ದ ಮಂತ್ರಾಲೋಚನೆಯಲ್ಲಿ ಚತುರನಾದ ಸುಮಂತ್ರನಿಗೆ ಹೇಳಿದನು:

"ಸುಮಂತ್ರ! ನನ್ನ ಆಜ್ಞಾನುಸಾರವಾಗಿ ನೀನೀಗಲೇ ಹೋಗಿ ಎಲ್ಲರನ್ನೂ ಯಾತ್ರೆಗೆ ಹೊರಡುವಂತೆ ಆಜ್ಞಾಪಿಸು. ಚತುರಂಗಸೈನ್ಯವನ್ನು ಯಾತ್ರೆಗೆ ಸಿದ್ಧಗೊಳಿಸು."

ಹೀಗೆ ಭರತನಿಂದ ಆಜ್ಞಪ್ತನಾದ ಸುಮಂತ್ರನು ಪರಮಹೃಷ್ಟನಾಗಿ

ಭರತನ ಆಜ್ಞೆಯನ್ನು ಎಲ್ಲರಿಗೂ ತಿಳಿಯಪಡಿಸಿದನು. ಶ್ರೀರಾಮನನ್ನು ಪುನಃ ಅಯೋಧ್ಯೆಗೆ ಕರೆತರುವ ಸಲುವಾಗಿ ಚತುರಂಗಬಲವನ್ನು ಸಿದ್ಧಪಡಿಸುವಂತೆ ಭರತನು ಮಾಡಿರುವ ಆಜ್ಞೆಯನ್ನು ಕೇಳಿ ಸೇನಾಪತಿಗಳೂ ಮತ್ತು ಪ್ರಜೆಗಳೂ ಆನಂದಭರಿತರಾದರು. ಶ್ರೀರಾಮ ನನ್ನು ಕರೆತರಲು ಸೈನಿಕರೂ ಸಿದ್ಧರಾಗಬೇಕೆಂಬ ರಾಜಾಜ್ಞೆಯನ್ನು ಕೇಳಿದ ಯೋಧರ ಪತ್ನಿಯರು ಪರಮಹರ್ಷಿತರಾಗಿ ಮನೆಗಳಲ್ಲಿದ್ದ ತಮ್ಮ ಗಂಡಂದಿರನ್ನು ಬೇಗ ಹೊರಡುವಂತೆ ಅವಸರಪಡಿಸುತ್ತಿದ್ದರು. ಕುದುರೆಗಳ ಮೇಲೂ, ಎತ್ತುಗಳನ್ನು ಕಟ್ಟಿದ್ದ ಗಾಡಿಗಳಲ್ಲಿಯೂ, ಅತ್ಯಂತವೇಗವಾಗಿ ಹೋಗಬಲ್ಲ ರಥಗಳಲ್ಲಿಯೂ ಕುಳಿತು ಮುಖ್ಯಯೋಧರ ಸಮೇತರಾಗಿ ಸೇನಾಪತಿಗಳು ಎಲ್ಲ ಸೈನಿಕರನ್ನೂ ಶೀಘ್ರವಾಗಿ ಹೊರಡುವಂತೆ ಪ್ರಚೋದಿಸುತ್ತಿದ್ದರು. ಚತುರಂಗಬಲವು ಯಾತ್ರೆಗೆ ಸಜ್ಜಾಗಿ ನಿಂತಿರುವುದನ್ನು ನೋಡಿ ವಸಿಷ್ಠರ ಸಮೀಪದಲ್ಲಿ ನಿಂತಿದ್ದ ಭರತನು ಪಕ್ಕದಲ್ಲಿ ನಿಂತಿದ್ದ ಸುಮಂತ್ರನಿಗೆ ತನ್ನ ರಥವನ್ನು ಶೀಘ್ರವಾಗಿ ತರುವಂತೆ ಹೇಳಿದನು. ಭರತನ ಆಜ್ಞೆಯನ್ನು ಶಿರಸಾವಹಿಸಿದ ಸುಮಂತ್ರನು ಪರಮಹೃಷ್ಟನಾಗಿ ಶ್ರೇಷ್ಠವಾದ ಕುದುರೆಗಳಿಂದ ಯುಕ್ತವಾಗಿದ್ದ ದಿವ್ಯವಾದ ರಥವನ್ನು ನಡೆಸಿಕೊಂಡು ಕ್ಷಣಮಾತ್ರದಲ್ಲಿ ಭರತನ ಬಳಿಗೆ ಬಂದನು.

ಭರತನು ಸತ್ಯನಿಷ್ಠನು. ಧೈರ್ಯಶಾಲಿಯು. ಪ್ರತಾಪವಂತನು. ದೃಢವೂ ಸತ್ಯವೂ ಆದ ಪರಾಕ್ರಮವುಳ್ಳವನು. ಯುಕ್ತಿಯುಕ್ತವಾದ ಮಾತುಗಳನ್ನು ಹೇಳಿ ಮಹಾರಣ್ಯಕ್ಕೆ ಹೋಗಿರುವ ಯಶೋವಂತನಾದ ಗುರುವಾದ ಶ್ರೀರಾಮನನ್ನು ಪ್ರಸನ್ನಗೊಳಿಸಿ ಹಿಂದಕ್ಕೆ ಕರೆತರಲು ನಿಶ್ಚಯಿಸಿದವನಾಗಿ ಸುಮಂತ್ರನಿಗೆ ಹೇಳಿದನು:

"ಸುಮಂತ್ರ! ಶೀಘ್ರವಾಗಿ ಹೊರಡು. ಸೈನ್ಯವನ್ನು ಪ್ರಯಾಣಕ್ಕೆ ಸಜ್ಜುಗೊಳಿಸಬೇಕೆಂದು ಸೇನಾಪತಿಗಳಿಗೆ ಆಜ್ಞಾಪಿಸು. ಅರಣ್ಯದಲ್ಲಿ ವಾಸಮಾಡುತ್ತಿರುವ ಶ್ರೀರಾಮನನ್ನು ಪ್ರಸನ್ನಗೊಳಿಸಿ ಜಗತ್ತಿನ ಹಿತಾರ್ಥವಾಗಿ ಅಯೋಧ್ಯೆಗೆ ಕರೆತರಲು ಆಶಿಸಿರುವೆನು."

ಹೀಗೆ ಭರತನಿಂದ ಆಜ್ಞಪ್ತನಾದ ಸುಮಂತ್ರನು ರಾಮನನ್ನು ನೋಡ ಬೇಕೆಂದಿದ್ದ ತನ್ನ ಆಶಯವೂ ಪೂರ್ಣವಾಗುವುದೆಂಬ ಮಹಾನಂದದಿಂದ

ಪ್ರಜಾನಾಯಕರಿಗೂ, ಸೇನಾಪತಿಗಳಿಗೂ, ಗೆಳೆಯರ ಬಳಗಕ್ಕೂ ಒಡನೆಯೇ ಯಾತ್ರೆ ಹೊರಡುವಂತೆ ಆಜ್ಞಾಪಿಸಿದನು.

ಸುಮಂತ್ರನ ಆಜ್ಞೆಯನ್ನು ಕೇಳಿದ ಕೂಡಲೇ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರೆಲ್ಲರೂ ತಮ್ಮ-ತಮ್ಮ ಮನೆಗಳಿಂದ ಹೊರಬಂದು ಒಂಟೆ, ರಥ, ಹೇಸರಗತ್ತೆ, ಕುದುರೆ, ಆನೆ–ಮುಂತಾದ ವಾಹನಗಳ ಮೂಲಕ ಪ್ರಯಾಣಸಿದ್ಧರಾದರು.

ಲ೨ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ಲ೩ನೆಯ ಸರ್ಗ

ಭರತನ ವನಯಾತ್ರೆ: ಶೃಂಗಬೇರಪುರದಲ್ಲಿ ಬಿಡಾರ

ತತಃ ಸಮುತ್ಥಿತಃ ಕಾಲ್ಯಮಾಸ್ಥಾಯ ಸ್ಯನ್ದನೋತ್ತಮಮ್ ।
ಪ್ರಯಯೌ ಭರತಃ ಶೀಘ್ರಂ ರಾಮದರ್ಶನಕಾಂಕ್ಷಯಾ ॥೧॥

ಅನಂತರ ಮರುದಿನ ಮುಂಜಾನೆ ಎದ್ದು ಸ್ನಾನಾದಿಗಳನ್ನು ಮುಗಿಸಿಕೊಂಡು ಶ್ರೀರಾಮನನ್ನು ಸಂದರ್ಶಿಸುವ ಆಶಯದಿಂದ ಉತ್ತಮವಾದ ರಥವನ್ನೇರಿ ಭರತನು ಪ್ರಯಾಣಹೊರಟನು.

ಅವನ ಮುಂಭಾಗದಲ್ಲಿ ಎಲ್ಲ ಮಂತ್ರಿಗಳೂ ಮತ್ತು ಪುರೋಹಿತರೂ ಒಳ್ಳೆಯ ಕುದುರೆಗಳಿಂದ ಎಳೆಯಲ್ಪಡುತ್ತಿದ್ದ, ಸೂರ್ಯನ ರಥಕ್ಕೆ ಸದೃಶವಾಗಿದ್ದ ದಿವ್ಯರಥಗಳಲ್ಲಿ ಕುಳಿತು ಹೊರಟರು. ಯಥಾವಿಧಿಯಾಗಿ ಸಮಲಂಕೃತವಾಗಿದ್ದ ಒಂಬತ್ತು ಸಾವಿರ ಆನೆಗಳು ಇಕ್ಷ್ವಾಕುಕುಲನಂದನನಾದ ಶ್ರೀರಾಮನನ್ನು ನೋಡಲು ಹೊರಟಿದ್ದ ಭರತನನ್ನು ಅನುಸರಿಸಿ ಹೊರಟುವು.

ಅರುವತ್ತು ಸಾವಿರ ರಥಗಳೂ, ಧನುಸ್ಸುಗಳನ್ನೂ ಮತ್ತು ವಿಧ-ವಿಧವಾದ ಆಯುಧಗಳನ್ನೂ ಹಿಡಿದಿದ್ದ ಸಾವಿರಾರು ಯೋಧರೂ ಯಶೋವಂತನಾದ ರಾಜಪುತ್ರನನ್ನು ನೋಡಲು ಹೊರಟಿದ್ದ ಭರತನನ್ನು ಅನುಸರಿಸಿ ಹೊರಟರು. ಅವರ ಹಿಂದೆ ಒಂದು ಲಕ್ಷ ಕುದುರೆ ಸೈನಿಕರು ಸತ್ಯಸಂಧನಾದ, ಜಿತೇಂದ್ರಿಯನಾದ ಶ್ರೀರಾಮನನ್ನು ಸಂದರ್ಶಿಸಲು ಹೊರಟಿದ್ದ ಭರತನನ್ನು ಅನುಸರಿಸಿ ಹೊರಟರು. ಭರತನು ಶ್ರೀರಾಮನನ್ನು ಪುನಃ ಅಯೋಧ್ಯೆಗೆ

ಕರೆತರುವನೆಂಬ ಅಮಿತಾನಂದದಿಂದ ಕೈಕೇಯೀ-ಸುಮಿತ್ರೆಯರೂ ಯಶಸ್ವಿನಿಯಾದ ಕೌಸಲ್ಯಾದೇವಿಯೂ ಪ್ರಕಾಶಮಾನವಾಗಿದ್ದ ರಥದಲ್ಲಿ ಕುಳಿತು ಪ್ರಯಾಣಹೊರಟರು.* ಅಯೋಧ್ಯಾಪಟ್ಟಣದ ಆರ್ಯರೂ ಲಕ್ಷ್ಮಣಸಮೇತನಾದ ಶ್ರೀರಾಮನನ್ನು ಸಂದರ್ಶಿಸಲು ಅವನದೇ ಆದ ವಿಚಿತ್ರವಾದ ಕಥೆಗಳನ್ನು ವರ್ಣಿಸುತ್ತಾ ಸಂತೋಷಭರಿತರಾಗಿ ತಂಡ-ತಂಡವಾಗಿ ಭರತನನ್ನು ಅನುಸರಿಸಿ ಅರಣ್ಯಕ್ಕೆ ಹೊರಟರು.

'ಮೇಘಶ್ಯಾಮನಾದ, ಮಹಾಬಾಹುವಾದ, ಸ್ಥಿರವಾದ ಸತ್ತ್ವದಿಂದ ಕೂಡಿರುವ, ದೃಢವ್ರತನಾದ, ಪ್ರಪಂಚದ ಶೋಕವನ್ನು ವಿನಾಶಗೊಳಿಸುವ ಶ್ರೀರಾಮನನ್ನು ನಾವು ಯಾವಾಗ ನೋಡುವೆವು?'–ಇವೇ ಮುಂತಾಗಿ ಶ್ರೀರಾಮನ ಗುಣಗಳನ್ನು ಗಾನಮಾಡುತ್ತಾ ಅವನನ್ನು ನೋಡುವುದರಲ್ಲಿ ತಮಗಿರುವ ಕಾತರವನ್ನು ಪರಸ್ಪರವಾಗಿ ವ್ಯಕ್ತಪಡಿಸುತ್ತಾ, ಸಂತೋಷಚಿತ್ತರಾಗಿ ಒಬ್ಬರು ಮತ್ತೊಬ್ಬರನ್ನು ಆಲಿಂಗನಮಾಡಿಕೊಳ್ಳುತ್ತಾ, ಅಯೋಧ್ಯಾಪಟ್ಟಣದ ನಾಗರಿಕರು ಭರತನನ್ನು ಅನುಸರಿಸಿ ಹೋಗುತ್ತಿದ್ದರು. ಸುಪ್ರಸಿದ್ಧರಾದ ಇನ್ನೂ ಅನೇಕ ಪೌರರೂ, ವ್ಯಾಪಾರಿಗಳೂ, ಪ್ರಜೆಗಳೂ ಸಂತೋಷಭರಿತರಾಗಿ ಭರತನೊಡನೆ ಹೊರಟರು. ಮಣಿಕಾರರೂ, ಕುಂಬಾರರೂ, ದಾರತೆಗೆದು ಬಟ್ಟೆಗಳನ್ನು ನೇಯುವುದರಲ್ಲಿ ವಿಶೇಷವಾದ ಪರಿಣತಿಯುಳ್ಳ ನೇಯ್ಗೆಯವರೂ, ಶಸ್ತ್ರಗಳನ್ನು ತಯಾರಿಸುವುದರಿಂದಲೇ ಜೀವನವನ್ನು ನಡೆಸುವವರೂ, ನವಿಲುಗರಿಗಳಿಂದ ಬೀಸಣಿಗೆಗಳನ್ನೂ ಚಾಮರಗಳನ್ನೂ ಮಾಡುವವರೂ, ಗರಗಸದಿಂದ ಮರವನ್ನು ಕೊಯ್ದು ಅದರಿಂದಲೇ ಜೀವಿಸುವವರೂ, ಮಣಿ-ಮುತ್ತುಗಳಿಗೆ ರಂಧ್ರಮಾಡುವವರೂ, ಮನೆಗಳನ್ನು ಅಲಂಕರಿಸುವವರೂ, ಆನೆಯ ದಂತದಲ್ಲಿ ಮನೋಹರವಾದ ಚಿತ್ರಗಳನ್ನು ಕೊರೆಯು

---

* ಕೈಕೇಯಿಯು ಎರಡನೆಯವಳಾದರೂ ಮೊದಲು ಅವಳ ಹೆಸರನ್ನು ಸೂಚಿಸಲು ಕಾರಣವೇನೆಂದರೆ:-ಕೈಕೇಯಿಯು ಆ ವೇಳೆಗೆ ತಾನು ಮಾಡಿದ ತಪ್ಪನ್ನು ಅರಿತು ಪಶ್ಚಾತ್ತಾಪ ಪಡುತ್ತಿದ್ದಳೆಂದೂ, ಆದುದರಿಂದಲೇ ಅವಳಿಗೂ ರಾಮನನ್ನು ಕರೆತರುವುದು ಸಂತಸದಾಯಕವಾಗಿತ್ತೆಂದೂ ವ್ಯಾಖ್ಯಾನಕಾರರು ಹೇಳುತ್ತಾರೆ. ಮೂವರೂ ಒಂದೇ ರಥದಲ್ಲಿ ಹೊರಟರೆಂದೂ–ಇದು ಆ ಮೂವರ ಸೌಹಾರ್ದದ್ಯೋತಕವೆಂದೂ ಮತ್ತೊಬ್ಬರು ಹೇಳಿದ್ದಾರೆ.

ವವರೂ, ಗಾರೆಕೆಲಸದವರೂ, ಸುಗಂಧದ್ರವ್ಯಗಳನ್ನು ತಯಾರಿಸಿ ವಿಕ್ರಯಿಸುವವರೂ, ಚಿನ್ನದ ಕೆಲಸಮಾಡುವ ಅಕ್ಕಸಾಲಿಗರೂ, ಅಭ್ಯಂಜನಮಾಡಿಸುವವರೂ, ಮೈಯ್ಯೊತ್ತುವವರೂ, ಕಂಬಳಿಗಳನ್ನು ನೇಯುವವರೂ, ವೈದ್ಯರೂ, ಉತ್ತಮೋತ್ತಮವಾದ ಧೂಪಗಳನ್ನು ತಯಾರಿಸುವವರೂ, ಮದ್ಯವನ್ನು ತಯಾರಿಸುವವರೂ, ಅಗಸರೂ, ದರ್ಜಿಗಳೂ, ಗೋಪಾಲಕರೂ, ಸ್ತ್ರೀಯರಿಂದ ಕೂಡಿದ ಮತ್ತು ಸ್ತ್ರೀಯರಿಂದಲೇ ಜೀವನವನ್ನು ನಡೆಸುವ ನಟರೂ, ಬೆಸ್ತರೂ, ಬೇಟೆಗಾರರೂ, ಕಮ್ಮಾರರೂ, ಬಡಗಿಗಳೂ ಶ್ರೀರಾಮನನ್ನು ಸಂದರ್ಶಿಸುವ ಆಶಯದಿಂದ ಭರತನೊಡನೆ ಯಾತ್ರೆಹೊರಟರು. ಯೋಗಿಗಳೂ, ಸದಾಚಾರಸಂಪನ್ನರಾದ ವೇದವಿದರಾದ ಬ್ರಾಹ್ಮಣರೂ, ಸಾವಿರಾರು ಸಂಖ್ಯೆಯಲ್ಲಿ ಎತ್ತಿನ ಗಾಡಿಗಳಲ್ಲಿ ಕುಳಿತು, ಶ್ರೀರಾಮನನ್ನು ಸಂದರ್ಶಿಸಲು ಭರತನನ್ನು ಅನುಸರಿಸಿ ಹೊರಟರು. ಎಲ್ಲರೂ ಚೆನ್ನಾಗಿ ಸಿಂಗರಿಸಿಕೊಂಡಿದ್ದರು. ಶುಭ್ರವಾದ ವಸ್ತ್ರಗಳನ್ನುಟ್ಟಿದ್ದರು. ರಕ್ತವರ್ಣದ ಚಂದನವನ್ನು ಪೂಸಿಕೊಂಡಿದ್ದರು. ವಿಧ-ವಿಧವಾದ ಯಾನಗಳಲ್ಲಿ ಕುಳಿತು ಮೆಲ್ಲ-ಮೆಲ್ಲನೆ ಭರತನನ್ನು ಅನುಸರಿಸಿ ಹೋಗುತ್ತಿದ್ದರು.

ಸಂತೋಷದಿಂದ ರೋಮಾಂಚಿತವಾದ ಚತುರಂಗಬಲವೂ ಅಣ್ಣನಾದ ಶ್ರೀರಾಮನನ್ನು ಕರೆತರಲು ಹೊರಟಿದ್ದ ಭ್ರಾತೃವತ್ಸಲನಾದ ಕೈಕೇಯಿಯ ಮಗನಾದ ಭರತನನ್ನನುಸರಿಸಿ ಹೊರಟಿತು.

ಭರತನೂ ಮತ್ತು ಅವನ ಪರಿವಾರದವರೂ ರಥ-ಪಲ್ಲಕ್ಕಿ-ಕುದುರೆ-ಆನೆ—ಇವೇ ಮುಂತಾದ ವಾಹನಗಳಲ್ಲಿ ಕುಳಿತು ಶೃಂಗಬೇರಪುರದ ಕಡೆಗೆ ಬಹಳ ದೂರ ಪ್ರಯಾಣಮಾಡಿದ ನಂತರ ಆ ಪಟ್ಟಣದ ಸಮೀಪದಲ್ಲಿದ್ದ ಗಂಗಾನದಿಯ ತೀರವನ್ನು ಸೇರಿದರು.

ಶ್ರೀರಾಮನ ಮಿತ್ರನಾದ ಮತ್ತು ವೀರನಾದ ಗುಹನು ತನ್ನ ಜ್ಞಾತಿ-ಬಾಂಧವರೊಡನೆ ಜಾಗರೂಕತೆಯಿಂದ ಆ ದೇಶವನ್ನು ಪರಿಪಾಲಿಸುತ್ತಿದ್ದನು.

ಭರತನನ್ನನುಸರಿಸಿ ಅಯೋಧ್ಯೆಯಿಂದ ಹೊರಟಿದ್ದ ಸೈನ್ಯವು ಚಕ್ರವಾಕಪಕ್ಷಿಗಳಿಂದ ಸಮಲಂಕೃತವಾಗಿದ್ದ ಗಂಗಾನದಿಯ ತೀರದಲ್ಲಿ ಬೀಡುಬಿಟ್ಟಿತು. ಹಿಂದೆ ಬರುತ್ತಿದ್ದ ಸೈನ್ಯವನ್ನೂ ಮತ್ತು ಶುಭಾವಹವಾದ

ನೀರಿನಿಂದ ಕೂಡಿದ್ದ ಗಂಗಾನದಿಯನ್ನೂ ನೋಡಿ ವಾಕ್ಯಕೋವಿದನಾದ ಭರತನು ಸಚಿವರಿಗೆ ಹೇಳಿದನು:

"ಸೈನಿಕರು ತಮ್ಮ-ತಮ್ಮ ಅಪೇಕ್ಷೆಯಂತೆ ನಾಲ್ಕು ದಿಕ್ಕುಗಳಲ್ಲಿಯೂ ಬೀಡುಬಿಡಲಿ. ನಾವು ಇಂದಿನ ರಾತ್ರಿ ಇಲ್ಲಿ ವಿಶ್ರಾಂತಿಯನ್ನು ಪಡೆದು ಬೆಳಗಾಗುತ್ತಲೇ ಗಂಗಾನದಿಯನ್ನು ದಾಟೋಣ. ಸ್ವರ್ಗಸ್ಥನಾಗಿರುವ ನಮ್ಮ ರಾಜನಿಗೆ ಊರ್ಧ್ವದೇಹದಲ್ಲಿ ಸುಖದ ಪ್ರಾಪ್ತಿಗಾಗಿ ಈ ಪುಣ್ಯನದಿಯಲ್ಲಿಳಿದು ತರ್ಪಣಮಾಡಲು ಬಯಸಿದ್ದೇನೆ." ಹೀಗೆ ಹೇಳಿದ ಭರತನಿಗೆ ಅಮಾತ್ಯರು ಹಾಗೆಯೇ ಆಗಲೆಂದು–ಏಕಮುಖವಾಗಿ ಉತ್ತರವನ್ನಿತ್ತರು. ಸೈನಿಕರೆಲ್ಲರಿಗೂ ಪ್ರತ್ಯೇಕ-ಪ್ರತ್ಯೇಕವಾಗಿ ಅವರು ಬಯಸಿದ ಕಡೆಗಳಲ್ಲಿ ಉಳಿದುಕೊಳ್ಳಲು ವ್ಯವಸ್ಥೆಮಾಡಲಾಯಿತು. ಧ್ವಜ-ಪತಾಕಾದಿಗಳಿಂದ ಸುಶೋಭಿತವಾಗಿ ಕಾಣುತ್ತಿದ್ದ ಚತುರಂಗ ಬಲವನ್ನು ಗಂಗಾನದಿಯ ಸಮೀಪದಲ್ಲಿ ಯಥಾವಿಧಿಯಾಗಿ ನಿಲ್ಲಿಸಿ, ಶ್ರೀರಾಮನನ್ನು ಅಯೋಧ್ಯೆಗೆ ಕರೆತರಲು ಏನು ಮಾಡಬೇಕೆಂಬುದನ್ನೇ ಚಿಂತಿಸುತ್ತಾ ಮಹಾತ್ಮನಾದ ಭರತನು ಆ ರಾತ್ರಿಯನ್ನು ಕಳೆದನು.

೮೩ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೮೪ನೆಯ ಸರ್ಗ

ನಿಷಾದರಾಜನಾದ ಗುಹನು ನದಿಯನ್ನು ರಕ್ಷಿಸುವ ನೆಪದಲ್ಲಿ ಯುದ್ಧಸನ್ನದ್ಧರಾಗಿರುವಂತೆ ತನ್ನ ಜ್ಞಾತಿಗಳಿಗೆ ಆದೇಶ ನೀಡಿ ಸತ್ಕಾರಸಾಮಗ್ರಿಗಳನ್ನು ತೆಗೆದುಕೊಂಡು ಭರತನನ್ನು ಸಂದರ್ಶಿಸಿದುದು

ತತೋ ನಿವಿಷ್ಟಾಂ ಧ್ವಜಿನೀಂ ಗಙ್ಗಾಮನ್ವಾಶ್ರಿತಾಂ ನದೀಮ್ ।
ನಿಷಾದರಾಜೋ ದೃಷ್ಟ್ವೈವ ಜ್ಞಾತೀನ್ಸಂತ್ವರಿತೋಽಬ್ರವೀತ್ ॥೧॥

ನಿಷಾದರಾಜನಾದ ಗುಹನು ಗಂಗಾನದಿಯ ತೀರದಲ್ಲಿ ಬೀಡುಬಿಟ್ಟಿದ್ದ ಅಪಾರವಾದ ಸೈನ್ಯವನ್ನು ನೋಡಿದೊಡನೆಯೇ ತನ್ನ ಜ್ಞಾತಿ-ಬಾಂಧವರಿಗೆ ಆತುರಾತುರವಾಗಿ ಹೇಳಿದನು:

"ಗಂಗಾನದಿಯ ತೀರದಲ್ಲಿ ಮಹತ್ತರವಾದ ಮತ್ತು ಸಾಗರೋಪಮವಾದ ಸೈನ್ಯವು ಕಾಣುತ್ತಿದೆ. ಎಷ್ಟು ದೂರದವರೆಗೆ ನೋಡಿದರೂ ಇದರ ಕೊನೆಯೇ ನನಗೆ ಕಾಣಿಸುತ್ತಿಲ್ಲ. ಈ ಸೈನ್ಯದ ಪರಿಮಿತಿಯು ಎಷ್ಟೆಂಬುದನ್ನು ಮನಸ್ಸಿನಿಂದ ಊಹಿಸುವುದೂ ನನಗೆ ಕಷ್ಟವಾಗಿದೆ. ಇಕ್ಷ್ವಾಕುಕುಲದ ಅರಸರ ವಿಶಾಲವಾದ ಕೋವಿದಾರಧ್ವಜವು ರಥದ ಮೇಲೆ ಕಾಣಿಸುತ್ತಿದೆ. ಆದುದರಿಂದ (ಕಾಡಿನಲ್ಲಿಯೂ ಶ್ರೀರಾಮನನ್ನು ಹಿಂಸಿಸುವ ಸಲುವಾಗಿ) ಭರತನೇ ಸ್ವತಃ ಸೇನೆಯೊಡನೆ ಆಗಮಿಸಿದ್ದಾನೆಯೇ? ಇವನೇನಾದರೂ ಶ್ರೀರಾಮನ ಮಿತ್ರರಾದ ನಮ್ಮನ್ನು ಬಂಧಿಸುವನೇ? ಅಥವಾ ಸಂಹರಿಸುವನೇ? ಸುದುರ್ಲಭವಾದ ದಶರಥರಾಜನ ಸಮಗ್ರವಾದ ರಾಜ್ಯಸಂಪತ್ತನ್ನು ಶಾಶ್ವತವಾಗಿ ಅನುಭವಿಸಬೇಕೆನ್ನುವ ದುರಾಸೆಯಿಂದ ತಂದೆಯಿಂದ ಕಾಡಿಗಟ್ಟಲ್ಪಟ್ಟ ಶ್ರೀರಾಮನನ್ನು ಕೊಲ್ಲಲೆಂದೇ ಹೊರಟಿರುವನೇ?

ದಶರಥನ ಮಗನಾದ ಶ್ರೀರಾಮನು ನನಗೆ ಪ್ರಭುವೂ ಮತ್ತು ಸ್ನೇಹಿತನೂ ಆಗಿದ್ದಾನೆ. ಅವನನ್ನು ಸಂರಕ್ಷಿಸುವುದು ನಮ್ಮ ಮುಖ್ಯಕರ್ತವ್ಯವಾಗಿದೆ. ಆದುದರಿಂದ ಶ್ರೀರಾಮನ ಯೋಗ-ಕ್ಷೇಮಗಳಲ್ಲಿ ಅಪೇಕ್ಷೆಯುಳ್ಳ ನೀವೆಲ್ಲರೂ ಗಂಗಾನದಿಯ ತೀರದಲ್ಲಿಯೇ ಸನ್ನದ್ಧರಾಗಿ ನಿಲ್ಲಿರಿ. ನಮ್ಮಲ್ಲಿರುವ ಬಲಿಷ್ಠರಾದ, ನದಿಯ ರಕ್ಷಣೆಯಲ್ಲಿ ಸಮರ್ಥರಾದ ಎಲ್ಲ ನಿಷಾದಯೋಧರೂ ಗಂಗಾನದಿಯ ತೀರದಲ್ಲಿ ಸಜ್ಜಾಗಿ ನಿಲ್ಲಲಿ. ದೋಣಿಗಳಲ್ಲಿರುವ ಮಾಂಸ-ಮೂಲ-ಫಲಗಳನ್ನೇ ತಿಂದು ಇಂದು ರಾತ್ರಿಯನ್ನು ಕಳೆಯಿರಿ. ಭರತನ ಈ ಅಪಾರಸೇನೆಗೆ ಗಂಗಾನದಿಯನ್ನು ದಾಟಲು ಅವಕಾಶವಾಗದಂತೆ ಐದು ನೂರು ನಾವೆಗಳು ಗಂಗಾತೀರದಲ್ಲಿ ಸಜ್ಜಾಗಿ ನಿಲ್ಲಲಿ. ಪ್ರತಿಯೊಂದು ದೋಣಿಯಲ್ಲಿಯೂ ನೂರು-ನೂರು ಮಂದಿ ಯುವಕರಾದ ಬೆಸ್ತರು ಆಯುಧಗಳನ್ನು ಹಿಡಿದು ಯುದ್ಧಸನ್ನದ್ಧರಾಗಿರಲಿ"—ಎಂಬುದಾಗಿ ತನ್ನ ಅನುಯಾಯಿಗಳಿಗೆ ಕರೆಕೊಟ್ಟು ಪುನಃ ಹೇಳಿದನು. "ಒಂದು ವೇಳೆ ಭರತನೇನಾದರೂ ಶ್ರೀರಾಮನ ವಿಷಯದಲ್ಲಿ ಸಂತುಷ್ಟನಾಗಿದ್ದರೆ—ಮಂಗಳಾವಹವಾದ ಭರತನ ಈ ಸೈನ್ಯವು ಗಂಗಾನದಿಯನ್ನು ನಮ್ಮ ಸಹಕಾರದಿಂದ ಸುಲಭವಾಗಿ ದಾಟುತ್ತದೆ"—ಹೀಗೆ ಗುಹನು ತನ್ನ ಅನುಯಾಯಿಗಳಿಗೆ ಸೂಚನೆಯನ್ನಿತ್ತು

ರೇಷ್ಮೆಯ ವಸ್ತ್ರಗಳನ್ನೂ, ಮತ್ಸ್ಯ-ಮಾಂಸ-ಜೇನುತುಪ್ಪಗಳನ್ನೂ ತೆಗೆಸಿಕೊಂಡು ಭರತನನ್ನು ಸಂದರ್ಶಿಸುವ ಸಲುವಾಗಿ ಹೊರಟನು.

ಸಮಯಾಸಮಯಗಳನ್ನು ತಿಳಿದಿರುವ, ವಿನಯಶಾಲಿಯಾದ, ಪ್ರತಾಪಿಯಾದ, ಸೂತಪುತ್ರನಾದ ಸುಮಂತ್ರನು ಗುಹನು ಬರುತ್ತಿರುವುದನ್ನು ಕಂಡು ಭರತನಿಗೆ ಆ ವಿಷಯವನ್ನು ತಿಳಿಸಿದನು.

ಗುಹನನ್ನು ಭರತನಿಗೆ ಪರಿಚಯಮಾಡಿಕೊಡುತ್ತಾ ಸುಮಂತ್ರನು ಹೇಳಿದನು:

"ಈ ಗುಹನು ಸಾವಿರಾರು ಮಂದಿ ಜ್ಞಾತಿ-ಬಾಂಧವರಿಂದ ಪರಿವೃತನಾಗಿ ಬರುತ್ತಿದ್ದಾನೆ. ಅವರೆಲ್ಲರಿಗೂ ಇವನೇ ರಾಜನು. ದಂಡಕಾರಣ್ಯದ ಪರಿಚಯವು ಇವನಿಗೆ ಪೂರ್ಣವಾಗಿದೆ. ವೃದ್ಧನಾಗಿರುವ ಇವನು ನಿಮ್ಮಣ್ಣನ ಪ್ರಿಯಸಖನೂ ಆಗಿದ್ದಾನೆ. ಆದುದರಿಂದ ಈ ನಿಷಾದಾಧಿಪತಿಯು ನಿನ್ನನ್ನು ಸಂದರ್ಶಿಸಲಿ. ರಾಮ-ಲಕ್ಷ್ಮಣರು ಎಲ್ಲಿರುವರೆಂಬುದನ್ನು ಇವನು ನಿಶ್ಚಯವಾಗಿ ತಿಳಿದಿರುತ್ತಾನೆ." ಸುಮಂತ್ರನ ಶುಭಕರವಾದ ಮಾತನ್ನು ಕೇಳಿ ಭರತನು–'ಗುಹನು ಶೀಘ್ರವಾಗಿ ನನ್ನನ್ನು ನೋಡಲಿ'–ಎಂದು ಸುಮಂತ್ರನಿಗೆ ಹೇಳಿದನು.

ರಾಜಕುಮಾರನನ್ನು ಸಂದರ್ಶಿಸಲು ಅನುಜ್ಞೆಯನ್ನು ಪಡೆದ ಗುಹನು ಪರಮಹೃಷ್ಟನಾಗಿ ಜ್ಞಾತಿಗಳೊಡನೆ ಭರತನ ಬಿಡಾರಕ್ಕೆ ಬಂದು ತಲೆತಗ್ಗಿಸಿ ವಿನಯಪೂರ್ವಕವಾಗಿ ಭರತನಿಗೆ ನಮಿಸಿ ಹೇಳಿದನು:

"ಮಹಾರಾಜ! ಈ ವನಪ್ರದೇಶವು ನಿನ್ನ ಅರಮನೆಯ ಸುತ್ತಲೂ ಇರುವ ಕೈದೋಟದಂತೆಯೇ ಇದೆ. ನಾವು ನಿನ್ನ ಆಗಮನದ ವೃತ್ತಾಂತವನ್ನು ತಿಳಿಯದೇ ಮೋಸಹೋದೆವು. ಮೊದಲೇ ನೀನು ಬರುವ ವಿಷಯವು ತಿಳಿದಿದ್ದರೆ ನಿನ್ನ ಮತ್ತು ನಿನ್ನ ಪರಿವಾರದವರ ಸೇವೆಗಾಗಿ ಸಿದ್ಧರಾಗಿ ಕಾದಿರುತ್ತಿದ್ದೆವು. ನಮ್ಮಲ್ಲಿರುವ ಸರ್ವಸ್ವವನ್ನೂ ನಿನಗೆ ಅರ್ಪಿಸಿದ್ದೇವೆ. ನಿನ್ನದೇ ಆದ ಈ ದಾಸನ ಮನೆಯಲ್ಲಿ ಸ್ವಲ್ಪಕಾಲ ತಂಗಿದ್ದು ವಿಶ್ರಮಿಸಿಕೊ.

ನಿಷಾದರು ತಂದಿರುವ ಕಂದ-ಮೂಲ-ಫಲಗಳೂ, ಬಗೆ-ಬಗೆಯಾದ

ದ್ರಾಕ್ಷಿ-ಉತ್ತುತ್ತಿ ಇವೇ ಮೊದಲಾದ ಒಣಗಿದ ಹಣ್ಣುಗಳೂ, ಅಂಜೂರ-ಕದಲಿ-ಮಾವು-ಇವೇ ಮೊದಲಾದ ಹಸಿ ಹಣ್ಣುಗಳೂ, ಮಾಂಸ-ಮಧುಗಳೂ ನಿನ್ನ ಉಪಾಹಾರಕ್ಕೆ ಸಿದ್ಧವಾಗಿವೆ. ದಯಮಾಡಿ ಸ್ವೀಕರಿಸು. ನಿನ್ನ ಸೈನ್ಯವೂ



ಸುಖಕರವಾದ ಉಪಾಹಾರವನ್ನು ಭುಂಜಿಸಿ ಈ ರಾತ್ರಿ ಇಲ್ಲೇ ತಂಗಿರಲೆಂದು ನಾನು ಬಯಸುತ್ತೇನೆ. ನಮಗೆ ತೃಪ್ತಿಯಾಗುವ ರೀತಿಯಲ್ಲಿ ನಾವು ಮಾಡುವ ಆತಿಥ್ಯವನ್ನು ಸ್ವೀಕರಿಸಿ ನಾಳೆಯ ದಿನ ಸೈನ್ಯಸಮೇತನಾಗಿ ಮುಂದೆ ನೀನು ಪ್ರಯಾಣಮಾಡಬಹುದಾಗಿದೆ.”

ೞಳನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೮೫ನೆಯ ಸರ್ಗ

ಗುಹ-ಭರತರ ಸಂಭಾಷಣೆ: ಭರತನ ದುಃಖ

ಏವಮುಕ್ತಸ್ತು ಭರತೋ ನಿಷಾದಾಧಿಪತಿಂ ಗುಹಮ್ ।
ಪ್ರತ್ಯುವಾಚ ಮಹಾಪ್ರಾಜ್ಞೋ ವಾಕ್ಯಂ ಹೇತ್ವರ್ಥಸಂಹಿತಮ್ ॥೧॥

ಗುಹನು ಹೀಗೆ ಪ್ರಾರ್ಥಿಸಲು ಮಹಾಪ್ರಾಜ್ಞನಾದ ಭರತನು ನಿಷಾದಾಧಿಪತಿಯಾದ ಗುಹನಿಗೆ ಕಾರಣ ಮತ್ತು ಪ್ರಯೋಜನಗಳನ್ನು ನಿರೂಪಿಸುವ ಈ ಮಾತನ್ನು ಹೇಳಿದನು:

"ನನ್ನ ಗುರುವಿನ ಸಖನೇ! ಇಂತಹ ಅಪಾರವಾದ ಸೈನ್ಯವನ್ನು ನೀನೊಬ್ಬನೇ ಸತ್ಕರಿಸಲು ಬಯಸಿರುವೆ; ನಿಶ್ಚಯವಾಗಿಯೂ ನಿನ್ನ ಕಾಮನೆಯು ಮಹತ್ತರವಾದುದೇ ಸರಿ. ನಿನ್ನ ಆದರದ ಮಾತಿನಿಂದಲೇ ನಾನು ತೃಪ್ತನಾಗಿದ್ದೇನೆ."

ಹೀಗೆ ಗುಹನಿಗೆ ಪ್ರಶಂಸಾಪೂರ್ವಕವಾದ ಮಾತನ್ನು ಹೇಳಿ ಅವನನ್ನು ಸಂತೈಸಿ ಭರತನು ಪ್ರಶ್ನಿಸಿದನು:

"ಗುಹ! ಭರದ್ವಾಜರ ಆಶ್ರಮಕ್ಕೆ ಹೋಗುವ ದಾರಿಯು ಯಾವುದು? ಯಾವ ಮಾರ್ಗವಾಗಿ ಹೋದರೆ ಬಹುಶೀಘ್ರವಾಗಿ ಹೆಚ್ಚು ಕಷ್ಟವಿಲ್ಲದೇ ಹೋಗಬಹುದು? ಗಂಗಾನದಿಯನ್ನು ಅನುಸರಿಸಿ ಹೋಗುವ ಈ ಜೌಗು ಪ್ರದೇಶವು ಬಹಳ ಗಹನವಾಗಿದೆ ಮತ್ತು ಪ್ರಯಾಣಕ್ಕೆ ದುಸ್ಸಾಧ್ಯವಾಗಿದೆ."

ಧೀಮಂತನಾದ ರಾಜಪುತ್ರನ ಆ ಮಾತನ್ನು ಕೇಳಿ ಗಹನವಾದ ಅರಣ್ಯದಲ್ಲಿಯೇ ಯಾವಾಗಲೂ ಸಂಚರಿಸುವ ಗುಹನು ಕೈಮುಗಿದು ಕೊಂಡು ಹೇಳಿದನು:

"ರಾಜಕುಮಾರ! ಈ ಪ್ರದೇಶದ ನಕ್ಷೆಯನ್ನು ಸಂಪೂರ್ಣವಾಗಿ ತಿಳಿದಿರುವ ಮತ್ತು ರಾಜನಿಷ್ಠೆಯಿಂದಿರುವ ಬೆಸ್ತರು ನಿನ್ನೊಡನೆ ಬರುತ್ತಾರೆ. ನಾನೂ ನಿನ್ನನ್ನು ಹಿಂಬಾಲಿಸಿ ಬರುತ್ತೇನೆ. ಆದುದರಿಂದ ಮಾರ್ಗದ ವಿಷಯವಾಗಿ ನೀನು ಯೋಚಿಸುವ ಕಾರಣವಿಲ್ಲ. ಆದರೆ ನನಗೊಂದು ಸಂಶಯವಿದೆ.

ಕಚ್ಚಿನ್ನ ದುಷ್ಟೋ ವ್ರಜಸಿ ರಾಮಸ್ಯಾಕ್ಲಿಷ್ಟಕರ್ಮಣಃ ।
ಇಯಂ ತೇ ಮಹತೀ ಸೇನಾ ಶಙ್ಕಾಂ ಜನಯತೀವ ಮೇ ॥೭॥

ಯಾವುದೇ ಕಾರ್ಯವನ್ನೂ ಸುಲಭವಾಗಿ ಮಾಡುವ ರಾಮನ ವಿಷಯದಲ್ಲಿ ಯಾವ ವಿಧವಾದ ದುರ್ಭಾವನೆಯೂ ಇಲ್ಲದೇ ಪ್ರಯಾಣಮಾಡುತ್ತಿರುವೆಯಲ್ಲವೇ? ಧರ್ಮಿಷ್ಠನಾದ ನಿನ್ನನ್ನು ಹೀಗೆ ಕೇಳುವ ಕಾರಣವಿಲ್ಲವಾದರೂ ಈ ನಿನ್ನ ಅಪಾರವಾದ ಸೈನ್ಯವು ನನ್ನನ್ನು ಸಂದೇಹಗೊಳ್ಳುವಂತೆ ಮಾಡಿದೆ.”

ಹೀಗೆ ಹೇಳಿದ ಗುಹನಿಗೆ ಆಕಾಶದಂತೆ ನಿರ್ಮಲಚಿತ್ತನಾದ ಭರತನು ಸುಮಧುರವಾದ ವಾಕ್ಯದಿಂದ ಕೂಡಿದ ಈ ಮಾತನ್ನು ಹೇಳಿದನು:

ಮಾ ಭೂತ್ಸ ಕಾಲೋ ಯತ್ಕಷ್ಟಂ ನ ಮಾಂ ಶಙ್ಕಿತುಮರ್ಹಸಿ ।
ರಾಘವಃ ಸ ಹಿ ಮೇ ಭ್ರಾತಾ ಜ್ಯೇಷ್ಠಃ ಪಿತೃಸಮೋ ಮತಃ ॥೯॥

“ಮಿತ್ರನೇ! ನೀನು ಊಹಿಸಿರುವಂತಹ ಕಷ್ಟಪರಿಸ್ಥಿತಿಯು ಎಂದಿಗೂ ಬರದೆಯೇ ಇರಲಿ. ನೀನು ನನ್ನನ್ನು ಶಂಕಿಸುವುದು ಯೋಗ್ಯವಲ್ಲ. ರಾಘವನು ನನ್ನ ಹಿರಿಯಣ್ಣನು. ಆದುದರಿಂದಲೇ ತಂದೆಗೆ ಸಮಾನನಾಗಿದ್ದಾನೆ.* ಅರಣ್ಯದಲ್ಲಿರುವ ಶ್ರೀರಾಮನನ್ನು ಹಿಂದಕ್ಕೆ ಕರೆತರಲು ಹೋಗುತ್ತಿದ್ದೇನೆ. ನನ್ನ ಪ್ರಯಾಣವನ್ನು ಬೇರೆಯ ರೀತಿಯಲ್ಲಿ ಯೋಚಿಸಬೇಕಾದ

---

* “ಮಾ ಭೂತ್ಸಕಾಲೋ ಯತ್ಕಷ್ಟಂ” ಎಂದು ಭರತನು ಹೇಳುತ್ತಾನೆ “ಯದ್ಯಸ್ಮಿನ್ ಕಾಲೇ ಕಷ್ಟಂ ಸ ಕಾಲೋ ಮಾ ಭೂತ್” ಇದು ಗುಹನು ಕೇಳಿದುದಕ್ಕೆ ನೇರವಾದ ಉತ್ತರವಲ್ಲ. ಪರ್ಯಾಯಾಂತರವಾದ ಉತ್ತರ. ಯಾವ ಕಾಲದಲ್ಲಿ ಕಷ್ಟವು ಸನ್ನಿಹಿತವಾಗುವುದೋ ಆ ಕಾಲವೇ ಬಾರದಿರಲಿ. ಕಷ್ಟವು ಸನ್ನಿಹಿತವಾಗಬೇಕಾದರೆ ರಾಮನಲ್ಲಿ ದ್ರೋಹವನ್ನೆಸಗುವುದೋ ಕಾರಣವಾಗುತ್ತದೆಂದು ಭರತನು ಅಭಿಪ್ರಾಯಪಡುತ್ತಾನೆ. ಯಾವ ಕಾಲದಲ್ಲಿ ಧರ್ಮಾತ್ಮನಾದ ರಾಮನು ತೆಗಳಲ್ಪಡುತ್ತಾನೆಯೋ ಅಥವಾ ನಿಂದಿಸಲ್ಪಡುತ್ತಾನೆಯೋ ಆ ಕಾಲದಲ್ಲಿ ಕಷ್ಟವು ಸನ್ನಿಹಿತವಾಗುವುದು ನಿಶ್ಚಯ. ಅಂತಹ ಕಾಲವೇ ಎಂದಿಗೂ ಬಾರದಿರಲಿ. ರಾಮನನ್ನು ದ್ವೇಷಮಾಡುವುದರಿಂದ ಒಬ್ಬನು ಕಷ್ಟಪಡುವುದು ಮಾತ್ರವಲ್ಲ. ಆ ಕಾಲದಲ್ಲಿ ಜನರೆಲ್ಲರೂ ಕಷ್ಟಪಡುತ್ತಾರೆ. ದುಃಖಭಾಗಿಗಳಾಗುತ್ತಾರೆ. ಅವನನ್ನು ದ್ವೇಷಿಸಿ ಉಳಿಯುವ ಸಾಧ್ಯತೆಯಿಲ್ಲ. ದ್ವೇಷಿಸುವ ಸಾಧ್ಯತೆಯೂ ಇಲ್ಲ. ಇಷ್ಟು ಅಂತರಾರ್ಥವನ್ನು ಭರತನ ಹೇಳಿಕೆಯಲ್ಲಿ ಕಾಣಬಹುದಾಗಿದೆ.

ಅಗತ್ಯವೇ ಇಲ್ಲ. ನಾನು ಈ ವಿಷಯವನ್ನು ನಿನ್ನೊಡನೆ ಸತ್ಯವಾಗಿ ಹೇಳುತ್ತಿದ್ದೇನೆ."

ಭರತನ ಆ ಮಾತನ್ನು ಕೇಳಿ ಗುಹನಿಗೆ ಪರಮಸಂತೋಷವಾಯಿತು. ನಗುಮುಖದಿಂದಲೇ ಭರತನಿಗೆ ಹೇಳಿದನು:

ಧನ್ಯಸ್ತ್ವಂ ನ ತ್ವಯಾ ತುಲ್ಯಂ ಪಶ್ಯಾಮಿ ಜಗತೀತಲೇ ।
ಅಯತ್ನಾದಾಗತಂ ರಾಜ್ಯಂ ಯಸ್ತ್ವಂ ತ್ಯಕ್ತುಮಿಹೇಚ್ಛಸಿ ॥೧೨॥

"ರಾಜಕುಮಾರ! ನಿಶ್ಚಯವಾಗಿಯೂ ನೀನೇ ಧನ್ಯನು. ನಿನಗೆ ಸಾಟಿಯಾದವರನ್ನು ಈ ಜಗತ್ತಿನಲ್ಲಿಯೇ ಕಾಣೆನಾಗಿದ್ದೇನೆ. ಪ್ರಯತ್ನವಿಲ್ಲದೆಯೇ ತಾನೇ ತಾನಾಗಿ ಲಭಿಸಿದ ರಾಜ್ಯವನ್ನು ನೀನು ಪರಿತ್ಯಜಿಸಲು ಬಯಸಿರುವೆಯಲ್ಲವೇ?

ಕಾಡಿನಲ್ಲಿ ಕಷ್ಟವನ್ನು ಅನುಭವಿಸುತ್ತಿರುವ ಶ್ರೀರಾಮನನ್ನು ನೀನು ಪುನಃ ಅಯೋಧ್ಯೆಗೆ ಕರೆತರಲು ಬಯಸಿರುವೆಯಲ್ಲವೇ? ನಿನ್ನ ಕೀರ್ತಿಯು ಶಾಶ್ವತವಾಗಿ ಉಳಿಯುವುದಲ್ಲದೇ ಲೋಕ-ಲೋಕಾಂತರಗಳಲ್ಲಿಯೂ ವ್ಯಾಪಿಸುವುದು."

ಹೀಗೆ ಗುಹನು ಭರತನೊಡನೆ ಸಂಭಾಷಣೆಯನ್ನು ಮಾಡುತ್ತಿದ್ದಾಗಲೇ ಸೂರ್ಯನು ಕಾಂತಿಹೀನನಾದನು. (ಸಾಯಂಕಾಲ ವಾಯಿತು). ರಾತ್ರಿದೇವಿಯು ಅಡಿಯಿಡುತ್ತಿದ್ದಳು. ಹೀಗೆ ಗುಹನಿಂದ ಪ್ರಶಂಸಿತನಾದ ಭರತನು ಸೈನಿಕರಿಗೆ ಮಲಗಲು ವ್ಯವಸ್ಥೆಮಾಡಿ ಶತ್ರುಘ್ನನೊಡನೆ ತಾನೂ ಮಲಗಿದನು. ಭರತನು ಹುಟ್ಟಿದಾಗಿನಿಂದಲೂ ಶೋಕವೆಂಬುದನ್ನೇ ಕಂಡವನಲ್ಲ. ಅಧರ್ಮವನ್ನು ನೆನೆದವನೂ ಅಲ್ಲ. ಯಾವಾಗಲೂ ಧರ್ಮದಲ್ಲಿಯೇ ದೃಷ್ಟಿಯುಳ್ಳವನಾಗಿದ್ದನು. ಅಂತಹವನಿಗೆ ಅತಿದಾರುಣವಾದ ರಾಮಚಿಂತಾರೂಪವಾದ ಶೋಕವು ಪ್ರಾಪ್ತವಾಯಿತು.

ಕಾಡುಗಿಚ್ಚಿನಿಂದ ಬೆಂದು ಬೆಂಡಾಗಿಹೋಗಿರುವ ಮರವೊಂದನ್ನು ಪೊಟರೆಯಲ್ಲಿ ಸೇರಿರುವ ಸಣ್ಣಕಿಡಿಯೊಂದು ಒಳಗಿನಿಂದಲೇ ಅನುಕ್ರಮವಾಗಿ ದಹಿಸಿಬಿಡುವಂತೆ–ಚಿಂತೆಯೆಂಬ ಅಗ್ನಿಯು ಭರತನ ಶರೀರದಲ್ಲಿ ಅಡಗಿ ಕೊಂಡಿದ್ದು ಸಮಯಗಳಲ್ಲಿ ಉಲ್ಬಣಿಸುತ್ತಾ ಅವನನ್ನು ಬಹಳವಾಗಿ ಪೀಡಿ

ಸುತ್ತಿದ್ದಿತು. ಸೂರ್ಯನ ಕಿರಣಗಳಿಂದ ಸಂತಪ್ತವಾದ ಮಂಜುಗಡ್ಡೆಯು ಕರಗಿ ಸ್ರವಿಸುವಂತೆ-ಶೋಕಾಗ್ನಿಯಿಂದ ಹುಟ್ಟಿದ ಬೆವರು ಅಂಗಾಂಗಗಳಿಂದಲೂ ಸ್ರವಿಸತೊಡಗಿತು. ನಿಶ್ಚಯವಾಗಿಯೂ ಭರತನ ದುಃಖವು ಪರ್ವತಸದೃಶವಾಗಿದ್ದಿತು. ರಾಮನ ಸಂಬಂಧವಾದ ಏಕಾಗ್ರಚಿಂತನೆಯೇ ಪರ್ವತದಲ್ಲಿರುವ ಶಿಲಾಸಮೂಹವಾಗಿದ್ದಿತು. ಭರತನ ಉಚ್ಛ್ವಾಸ ನಿಃಶ್ವಾಸಗಳೇ ಗೈರಿಕಾದಿ ಧಾತುಗಳು. ದೈನ್ಯವೇ ಪರ್ವತದಲ್ಲಿನ ವೃಕ್ಷಗಳು. ಶೋಕಜನಿತವಾದ ಆಯಾಸವೇ ಶೋಕಪರ್ವತದ ಶಿಖರ. ಶೋಕಾಧಿಕ್ಯದಿಂದ ಆಗಿಂದಾಗ್ಯೆ ಉಂಟಾಗುತ್ತಿದ್ದ ಮೂರ್ಛೆಯೇ ಶೋಕಪರ್ವತದಲ್ಲಿನ ವ್ಯಾಘ್ರ-ವರಾಹಾದಿ ಪ್ರಾಣಿಗಳು. ಅವನ ಸಂತಾಪವೇ ಓಷಧೀಲತೆಗಳು ಮತ್ತು ಬಿದಿರುಮೆಳೆಗಳು. ಇಂತಹ ದುಃಖವೆಂಬ ಪರ್ವತದಿಂದಲೇ ಕೈಕೇಯಿಯ ಮಗನಾದ ಭರತನು ಸಮಾಕ್ರಾಂತನಾಗಿದ್ದನು. ಅವನು ಬಾರಿ-ಬಾರಿಗೂ ನಿಟ್ಟುಸಿರು ಬಿಡುತ್ತಿದ್ದನು. ಅವನ ಹೃದಯವು ಕಲುಷಿತವಾಗಿದ್ದಿತು. ಪ್ರತಿಕ್ಷಣದಲ್ಲಿಯೂ ಮೂರ್ಛೆಹೋಗುತ್ತಿದ್ದನು. ಮಹತ್ತರವಾದ ಆಪತ್ತಿಗೆ ಒಳಗಾಗಿದ್ದನು. ಮಾನಸಿಕವಾದ ಜ್ವರದಿಂದ ಪೀಡಿತನಾಗಿದ್ದ ಅವನಿಗೆ ಶಾಂತಿಯೆಂಬುದೇ ಇರಲಿಲ್ಲ. ಗುಂಪಿನಿಂದ ದೂಡಲ್ಪಟ್ಟ ಗೂಳಿಯಂತೆ ಅವನ ಸ್ಥಿತಿಯಿದ್ದಿತು.

ಪರಿವಾರಸಮೇತನಾಗಿದ್ದರೂ ರಾಮನಲ್ಲಿಯೇ ನೆಟ್ಟ ಮನಸ್ಸುಳ್ಳವನಾಗಿದ್ದ, ಮಹಾನುಭಾವನಾದ ಭರತನು ಗುಹನನ್ನು ಸಂಧಿಸಿದನು. ಗುಹನೊಡನೆ ಮಾತನಾಡುತ್ತಿದ್ದರೂ ಅವನ ಮನಸ್ಸು ರಾಮನ ಚಿಂತೆಯಿಂದಾಗಿ ಬಹಳ ಸಂಕಟಪಡುತ್ತಿದ್ದಿತು. ಅಣ್ಣನಿಗಾಗಿ ಮನಸ್ಸಿನಲ್ಲಿ ಬಹಳ ಕ್ಲೇಶವನ್ನನುಭವಿಸುತ್ತಿದ್ದ ಭರತನನ್ನು ಗುಹನು ಪುನಃ ಪುನಃ ಸಂತೈಸಿದನು.

ಲ೫ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೮೭ನೆಯ ಸರ್ಗ

ಗುಹನು ಲಕ್ಷ್ಮಣನ ಸದ್ಭಾವನೆಯನ್ನೂ ಮತ್ತು ವಿಲಾಪವನ್ನೂ ಭರತನಿಗೆ ವಿವರಿಸಿ ಹೇಳಿದುದು

ಆಚಚಕ್ಷೇಽಥ ಸದ್ಭಾವಂ ಲಕ್ಷ್ಮಣಸ್ಯ ಮಹಾತ್ಮನಃ ।
ಭರತಾಯಾಪ್ರಮೇಯಾಯ ಗುಹೋ ಗಹನಗೋಚರಃ ॥೧॥

ಭರತನನ್ನು ಸಂತೈಸುವ ಸಲುವಾಗಿ ಗುಹನು ವನಚರನಾದ ಮಹಾತ್ಮನಾದ ಲಕ್ಷ್ಮಣನು ಶ್ರೀರಾಮನಲ್ಲಿಟ್ಟಿರುವ ಸದ್ಭಾವವನ್ನು ಅಪ್ರಮೇಯ ಗುಣಸಂಪನ್ನನಾದ ಭರತನಿಗೆ ಹೇಳಿದನು:

"ರಾಜಕುಮಾರ! ಲಕ್ಷ್ಮಣನು ಅಣ್ಣನ ಮತ್ತು ಅತ್ತಿಗೆಯ ರಕ್ಷಣೆಯಲ್ಲಿ ಬಹಳ ಜಾಗರೂಕನಾಗಿರುತ್ತಿದ್ದನು. ವಿನಯಾದಿ ಸದ್ಗುಣಗಳಿಂದ ಸಂಪನ್ನನಾಗಿದ್ದನು. ಅಣ್ಣನ ರಕ್ಷಣೆಗಾಗಿ ಯಾವಾಗಲೂ ಧನುಸ್ಸನ್ನು ಮತ್ತು ಕತ್ತಿಯನ್ನೂ ಹಿಡಿದಿರುತ್ತಿದ್ದ ಲಕ್ಷ್ಮಣನಿಗೆ ಅಂದು ರಾತ್ರಿ ನಾನು ಹೇಳಿದೆನು:

ಇಯಂ ತಾತ ಸುಖಾ ಶಯ್ಯಾ ತ್ವದರ್ಥಮುಪಕಲ್ಪಿತಾ ।
ಪ್ರತ್ಯಾಶ್ವಸಿಹಿ ಶೇಷ್ವಾಸ್ಯಾಂ ಸುಖಂ ರಾಘವನನ್ದನ ॥೨॥

"ಲಕ್ಷ್ಮಣ! ಸುಖಾವಹವಾದ ಈ ಹಸಿರೆಲೆಗಳ ಹಾಸಿಗೆಯು ನಿನಗಾಗಿ ಸಿದ್ಧವಾಗಿದೆ. ಇದರಲ್ಲಿ ಸುಖವಾಗಿ ಮಲಗಿ ವಿಶ್ರಮಿಸಿಕೊ. ಕ್ಲೇಶಕರವಾದ ಈ ಪಹರೆಯ ಕಾರ್ಯವನ್ನು ಮಾಡಲು ಯಾವಾಗಲೂ ಅರಣ್ಯದಲ್ಲಿಯೇ ವಾಸಿಸುತ್ತಿರುವ ಜನರು ಯೋಗ್ಯರಾಗಿದ್ದಾರೆ. ನೀನು ರಾಜಪುತ್ರ ನಾದುದರಿಂದ ಸುಖಪಡಲು ಯೋಗ್ಯನಾಗಿರುವೆ. ಶ್ರೀರಾಮನ ರಕ್ಷಣೆಯ ಸಲುವಾಗಿ ನಾವು ಈ ರಾತ್ರಿ ಜಾಗರಣೆಮಾಡುತ್ತೇವೆ.

ನ ಹಿ ರಾಮಾತ್ಪ್ರಿಯತರೋ ಮಮಾಸ್ತಿ ಭುವಿ ಕಶ್ಚನ ।
ಮೋತ್ಸುಕೋಽಭೂರ್ಬ್ರವೀಮ್ಯೇತದಪ್ಯಸತ್ಯಂ ತವಾಗ್ರತಃ ॥೩॥

ಈ ಪ್ರಪಂಚದಲ್ಲಿ ರಾಮನಿಗಿಂತಲೂ ಪ್ರಿಯರಾದವರು ನನಗೆ ಬೇರೆ ಯಾರು ಇರುವುದಿಲ್ಲ.

ಆದುದರಿಂದ ನೀನು ಶ್ರೀರಾಮನ ರಕ್ಷಣೆಯ ವಿಷಯದಲ್ಲಿ ಉತ್ಸುಕನಾಗುವ ಕಾರಣವಿಲ್ಲ. ನಾನು ಸುಳ್ಳುಮಾತನ್ನು ಹೇಳುತ್ತಿರುವೆನೆಂಬ ಶಂಕೆಯೇ? ಖಂಡಿತ ಹಾಗೆ ಭಾವಿಸಬೇಡ. ಮಹಾತ್ಮನಾದ ಶ್ರೀರಾಮನ ಪ್ರಸನ್ನತೆಯಿಂದಲೇ ನಾನು ಈ ಲೋಕದಲ್ಲಿ ಮಹತ್ತರವಾದ ಯಶಸ್ಸನ್ನು ಅಪೇಕ್ಷಿಸುತ್ತಿದ್ದೇನೆ. ಅಪಾರವಾದ ಧರ್ಮವನ್ನೂ ಇವನ ಸೇವೆಯಿಂದಲೇ ಪಡೆಯಲು ಬಯಸಿದ್ದೇನೆ. ಪುಷ್ಕಲವಾದ ಅರ್ಥ-ಕಾಮಗಳೂ ಇವನ ಅನುಗ್ರಹದಿಂದಲೇ ನನಗೆ ಲಭಿಸಬೇಕಾಗಿವೆ. ರಾಮನ ಸೇವೆಯಿಂದ ಸಕಲಪುರುಷಾರ್ಥಗಳನ್ನೂ ಪಡೆದುಕೊಳ್ಳಲು ಬಯಸಿರುವ ನಾನು–ಸೀತೆ ಯೊಡನೆ ಮಲಗಿರುವ ನನ್ನ ಪ್ರಿಯಸಖನಾದ ರಾಮನನ್ನು ಧನುಷ್ಪಾಣಿಯಾಗಿ ಜ್ಞಾತಿ-ಬಾಂಧವರೊಡನೆ ಈ ರಾತ್ರಿ ಸರ್ವಪ್ರಕಾರ ದಿಂದಲೂ ರಕ್ಷಣೆಮಾಡುತ್ತೇನೆ. ನಾನು ಈ ಅರಣ್ಯದಲ್ಲಿ ಸರ್ವದಾ ಸಂಚರಿಸುತ್ತಿರುವುದರಿಂದ ನನಗೆ ತಿಳಿಯದೇ ಇರುವ ಭಾಗವೇ ಈ ಕಾಡಿನಲ್ಲಿಲ್ಲ. ಆದುದರಿಂದ ಅತ್ಯಂತಬಲಿಷ್ಠವಾದ ಚತುರಂಗಬಲವೇ ಎದುರಾಗಿ ಬಂದರೂ ನಾವದನ್ನು ಯುದ್ಧದಲ್ಲಿ ಎದುರಿಸಬಲ್ಲೆವು."

ಹೀಗೆ ಹೇಳಿ ನಾವು ಲಕ್ಷ್ಮಣನನ್ನು ಮಲಗುವಂತೆ ಪ್ರಾರ್ಥಿಸಿದೆವು. ಆದರೆ ಧರ್ಮೈಕದೃಷ್ಟಿಯುಳ್ಳ, ಮಹಾತ್ಮನಾದ ಲಕ್ಷ್ಮಣನೇ ನಮ್ಮನ್ನು ಯುಕ್ತಿಯುಕ್ತವಾದ ಮಾತುಗಳಿಂದ ಸಮಾಧಾನಗೊಳಿಸಿದನು.

ಕಥಂ ದಾಶರಥೌ ಭೂಮೌ ಶಯಾನೇ ಸಹ ಸೀತಯಾ ।
ಶಕ್ಯಾ ನಿದ್ರಾ ಮಯಾ ಲಬ್ಧುಂ ಜೀವಿತಂ ವಾ ಸುಖಾನಿ ವಾ ॥೧೦॥

"ಗುಹ! ದಶರಥರಾಜನ ಮಗನಾದ ಶ್ರೀರಾಮನು ಸುಕುಮಾರಿಯಾದ ಸೀತೆಯೊಡನೆ ಒರಟಾದ ಈ ಭೂಮಿಯಲ್ಲಿ ಮಲಗಿರುವಾಗ ನನಗೆ ಸುಖಶಯ್ಯೆಯಲ್ಲಿ ನಿದ್ರಿಸಲಾಗಲೀ, ಜೀವಿಸಿರುವುದಕ್ಕಾಗಲೀ, ಸುಖಗಳನ್ನು ಅನುಭವಿಸುವುದಕ್ಕಾಗಲೀ–ಹೇಗೆ ತಾನೇ ಸಾಧ್ಯವಾಗುತ್ತದೆ.

ದೇವಾಸುರರೇ ಒಟ್ಟಾಗಿ ಬಂದರೂ ಯುದ್ಧದಲ್ಲಿ ಯಾವ ನಮ್ಮ ರಾಮನನ್ನು ಪರಾಜಯಗೊಳಿಸಲಾರರೋ–ಅಂತಹ ರಾಮನಿಂದು ಹುಲ್ಲಿನ ಮೇಲೆ ಸೀತೆಯೊಡನೆ ಮಲಗಿರುವುದನ್ನಾದರೂ ನೋಡು.

ಮಹಾಪರಾಕ್ರಮಿಯಾದ, ಸಕಲಗುಣಸಂಪನ್ನನಾದ ಶ್ರೀರಾಮನನ್ನು ಮಗನನ್ನಾಗಿ ಪಡೆಯಲು ದಶರಥರಾಜನು ಪಟ್ಟ ಶ್ರಮವು ಅಷ್ಟಿಷ್ಟಲ್ಲ. ಅನೇಕವರ್ಷಗಳವರೆಗೆ ಮಾಡಿದ ಮಹಾತಪಸ್ಸಿನಿಂದಲೂ, ನಾನಾವಿಧವಾದ ಯಜ್ಞಗಳನ್ನು ಮಾಡಿದ ಪರಿಶ್ರಮದಿಂದಲೂ ಹುಟ್ಟಿರುವ ಈ ಶ್ರೀರಾಮನೊಬ್ಬನೇ ದಶರಥನಿಗೆ ಸದೃಶನಾದ, ಎಲ್ಲ ರಾಜಲಕ್ಷಣಗಳನ್ನೂ ಹೊಂದಿರುವ ಏಕಮಾತ್ರಪುತ್ರನಾಗಿದ್ದಾನೆ.

ಇಂತಹ ಸುಪುತ್ರನನ್ನು ಅರಣ್ಯಕ್ಕೆ ಕಳುಹಿಸಿದನಂತರ ದಶರಥರಾಜನು ಹೆಚ್ಚುಕಾಲ ಬದುಕಿರಲಾರನು. ಇದರಿಂದಾಗಿ ಬಹಳ ಬೇಗ ಈ ಭೂದೇವಿಯು ವಿಧವೆಯಾಗುತ್ತಾಳೆ. ಇದು ನಿಶ್ಚಯ. ಶ್ರೀರಾಮನು ಕಾಡಿಗೆ ಹೊರಟ ನಂತರ ಅಂತಃಪುರದ ಸ್ತ್ರೀಯರೆಲ್ಲರೂ ಅತ್ತು-ಅತ್ತು ಸೊರಗಿ ಸೊಪ್ಪಾಗಿರುತ್ತಾರೆ. ಈ ವೇಳೆಗೆ ಅರಮನೆಯಲ್ಲಿ ಅವರ ಗೋಳಾಟದ ಮಹಾಶಬ್ದವೂ ನಿಂತಿರಬಹುದು. ಶ್ರೀರಾಮನ ವಿಯೋಗದುಃಖದಿಂದಾಗಿ, ಕೌಸಲ್ಯಾದೇವಿ, ನನ್ನ ತಾಯಿಯಾದ ಸುಮಿತ್ರಾದೇವಿ, ತಂದೆ ದಶರಥಮಹಾರಾಜ–ಈ ಮೂವರೂ ಈ ರಾತ್ರಿಯು ಮುಗಿಯುವವರೆಗೂ ಜೀವಿಸಿರುವರೋ ಅಥವಾ ಇಲ್ಲವೋ–ಎಂಬುದನ್ನು ನಾನು ಹೇಳಲಾರೆ. ಶತ್ರುಘ್ನನನ್ನಾದರೂ ನೋಡಿಕೊಂಡಿರಬಹುದೆಂಬ ಆಕಾಂಕ್ಷೆಯಿಂದ ನನ್ನ ತಾಯಿ ಸುಮಿತ್ರಾದೇವಿಯಾದರೂ ಜೀವಿಸಿದ್ದಾಳು. ಆದರೆ ಏಕಮಾತ್ರಪುತ್ರನಾದ ಶ್ರೀರಾಮನ ವಿಯೋಗದುಃಖವನ್ನು ಸಹಿಸಲಾರದೇ ವೀರಮಾತೆಯಾದ ಕೌಸಲ್ಯೆಯಂತೂ ಅಸುನೀಗುವಳು. 'ಅತಿಕ್ರಾನ್ತಮತಿಕ್ರಾನ್ತಂ' 'ಅಯ್ಯೋ! ರಾಮನಿಗೆ ಪಟ್ಟಾಭಿಷೇಕವಾಗಬೇಕಾಗಿದ್ದ ಸುದಿನವು ಕಳೆದೇಹೋಯಿತಲ್ಲಾ!' ಎಂದು ಹಲುಬುತ್ತಾ ರಾಮನಿಗೆ ಪಟ್ಟಗಟ್ಟಬೇಕೆನ್ನುವ ತನ್ನ ಮನೋರಥವನ್ನು ಪೂರ್ಣಮಾಡಿಕೊಳ್ಳಲಾಗದೇ ಕೊರಗಿ-ಕೊರಗಿ ನಮ್ಮ ತಂದೆಯು ಪ್ರಾಣಬಿಡುತ್ತಾನೆ. ನಮ್ಮ ತಂದೆಗೆ ಅಂತಹ ಮರಣಕಾಲವು ಸನ್ನಿಹಿತವಾದಾಗ ಸತ್ತುಹೋದ ನನ್ನ ತಂದೆಯನ್ನು ಸಕಲವಿಧವಾದ ಪ್ರೇತಕಾರ್ಯಗಳಿಂದ ಸಂಸ್ಕರಿಸುವವರೇ ಭಾಗ್ಯಶಾಲಿಗಳು.

ನಾಲ್ಕು ಬೀದಿಗಳು ಸೇರುವ ಸುಂದರವಾದ ಚೌಕಗಳಿಂದ ಕೂಡಿರುವ, ಚೆನ್ನಾಗಿ ವಿಭಾಗಿಸಿ ನಿರ್ಮಿಸಿರುವ ಹೆದ್ದಾರಿಗಳುಳ್ಳ, ಭವ್ಯವಾದ ಸೌಧ

ಗಳಿಂದಲೂ ಪ್ರಾಸಾದಗಳಿಂದಲೂ ಕೂಡಿ ಸುಶೋಭಿತವಾಗಿರುವ, ಆನೆ-ಕುದುರೆ ಮತ್ತು ರಥಗಳಿಂದ ಸಮಾವೃತವಾಗಿರುವ, ಮಂಗಳವಾದ್ಯಗಳಿಂದ ನಿನಾದಿತವಾದ, ಸಮಸ್ತವಾದ ಜನಕಲ್ಯಾಣಕಾರ್ಯಗಳಿಂದಲೂ ಸಂಪೂರ್ಣ ವಾಗಿರುವ ಹೃಷ್ಟರಾದ ಮತ್ತು ಪುಷ್ಟರಾದ ಪ್ರಜೆಗಳಿಂದ ಸಮಾಕುಲವಾಗಿರುವ, ಉಪವನಗಳಿಂದಲೂ–ಉದ್ಯಾನವನಗಳಿಂದಲೂ ತುಂಬಿ ಹೋಗಿರುವ, ಸಾಮಾಜಿಕವಾದ ಅನೇಕ ಉತ್ಸವಸಮಾರಂಭಗಳನ್ನು ಒಳಗೊಂಡಿರುವ, ನನ್ನ ತಂದೆಯ ರಾಜಧಾನಿಯಾದ ಅಯೋಧ್ಯೆಯಲ್ಲಿ ತಂದೆಯ ಉತ್ತರಕ್ರಿಯೆಗಳನ್ನು ಮಾಡುವ ಸಿದ್ಧಾರ್ಥರು ಸುಖವಾಗಿ ಸಂಚರಿಸುತ್ತಾರೆ.

ಸುಮಂತ್ರ! ಹದಿನಾಲ್ಕು ವರ್ಷಗಳ ವನವಾಸವನ್ನು ಮುಗಿಸಿ ಸತ್ಯಪ್ರತಿಜ್ಞನಾದ ಶ್ರೀರಾಮನೊಡನೆ ನಾವು ಕುಶಲಿಗಳಾಗಿ ಸುಖದಿಂದ ಅಯೋಧ್ಯೆಯನ್ನು ಸೇರುವೆವೇ?"

ಗುಹನು ಭರತನಿಗೆ ಹೇಳುತ್ತಾನೆ:

"ರಾಜಕುಮಾರ! ಹೀಗೆ ನಾನಾವಿಧವಾಗಿ ವಿಲಪಿಸುತ್ತಾ ನಿಂತಿದ್ದ ಮಹಾತ್ಮನಾದ ರಾಜಪುತ್ರನಿಗೆ ಆ ರಾತ್ರಿಯು ಹಾಗೆಯೇ ಕಳೆದು ಹೋಯಿತು.

ಸುಪ್ರಭಾತವಾಗಲಾಗಿ, ಮೋಡಗಳಿಲ್ಲದೇ ವಿಮಲನಾದ ಸೂರ್ಯನು ಉದಯಿಸಲಾಗಿ, ರಾಮ-ಲಕ್ಷ್ಮಣರಿಬ್ಬರನ್ನೂ (ಆಲದ ಮರದ ಹಾಲನ್ನು ತಂದುಕೊಡುವುದರ ಮೂಲಕ) ಜಟಾವಂತರನ್ನಾಗಿ ಮಾಡಿ ಇದೇ ಭಾಗೀರಥೀನದಿಯ ತೀರದಲ್ಲಿದ್ದ ದೋಣಿಯಲ್ಲಿ ಇಬ್ಬರನ್ನೂ ಸೀತೆಯೊಡನೆ ಕುಳ್ಳಿರಿಸಿ ನದಿಯನ್ನು ದಾಟಿಸಿದೆನು.

ಜಟಾಧಾರಿಗಳಾಗಿದ್ದ, ಮರದ ತೊಗಟೆ ಮತ್ತು ನಾರುಮಡಿಗಳ ನ್ನುಟ್ಟಿದ್ದ, ಮಹಾಬಲಿಷ್ಠರಾದ, ಮದಿಸಿದ ಸಲಗಗಳಿಗೆ ಅನುರೂಪರಾಗಿದ್ದ, ಶ್ರೇಷ್ಠವಾದ ಬತ್ತಳಿಕೆಯನ್ನೂ ಧನುಸ್ಸನ್ನೂ ಮತ್ತು ಕತ್ತಿಯನ್ನೂ ಹಿಡಿದಿದ್ದ, ಶತ್ರುತಾಪಕರಾದ ರಾಮ-ಲಕ್ಷ್ಮಣರು ಪ್ರಕೃತಿಯ ಸೊಬಗನ್ನು

ವೀಕ್ಷಿಸುತ್ತಾ (ನಮ್ಮನ್ನೇ ಪುನಃ ಪುನಃ ನೋಡುತ್ತಾ) ಸೀತೆಯೊಡನೆ ಹೊರಟುಹೋದರು."

೮೬ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೮೭ನೆಯ ಸರ್ಗ

ಶ್ರೀರಾಮನ ವಿಷಯವನ್ನು ಕೇಳಿ ಭರತನ ಮೂರ್ಛೆ: ಶತ್ರುಘ್ನ- ಕೌಸಲ್ಯಾ - ಕೈಕೇಯೀ - ಸುಮಿತ್ರೆಯರ ವಿಲಾಪ: ಎಚ್ಚರಗೊಂಡನಂತರ ಭರತನ ಕೇಳಿಕೆಯಂತೆ ಶ್ರೀರಾಮನ ಭೋಜನ, ಶಯ್ಯೆ ಮುಂತಾದ ವಿಷಯವಾಗಿ ಗುಹನಿಂದ ವಿವರಣೆ

ಗುಹಸ್ಯ ವಚನಂ ಶ್ರುತ್ವಾ ಭರತೋ ಭೃಶಮಪ್ರಿಯಮ್ ।
ಧ್ಯಾನಂ ಜಗಾಮ ತತ್ರೈವ ಯತ್ರ ತಚ್ಛ್ರುತಮಪ್ರಿಯಮ್ ॥೧॥

ರಾಮ-ಲಕ್ಷ್ಮಣರು ಜಟಾಧಾರಿಗಳಾಗಿ ಪ್ರಯಾಣಮಾಡಿದರೆಂಬ ಅಪ್ರಿಯವಾದ ವಾರ್ತೆಯನ್ನು ಗುಹನಿಂದ ಕೇಳಿದೊಡನೆಯೇ ಭರತನು ಚಿಂತಾಮಗ್ನನಾದನು. ಯಾವಾಗ ಭರತನು ಅಪ್ರಿಯವಾದ ವಾರ್ತೆಯನ್ನು ಕೇಳಿದನೋ ಆಗಲೇ ಅವನಿಗೆ ಯೋಚನೆಯು ಪ್ರಾರಂಭವಾಯಿತು.*

ಸುಕುಮಾರನಾದ ಮಹಾಸತ್ತ್ವನಾದ, ಸಿಂಹಸ್ಕಂಧನಾದ, ಮಹಾ ಭುಜನಾದ, ಕಮಲದಂತೆ ವಿಶಾಲವಾದ ಕಣ್ಣುಗಳುಳ್ಳ, ತರುಣನಾದ, ಪ್ರಿಯ ದರ್ಶನನಾದ ಭರತನು ಮುಹೂರ್ತಕಾಲ ಹೇಗೋ ಸಮಾಧಾನದಿಂದಿದ್ದನು. ಮರುಕ್ಷಣದಲ್ಲಿಯೇ ಬಹಳವಾದ ಮನಃಕ್ಲೇಶದಿಂದ ಪೀಡಿತನಾಗಿ–ಅಂಕುಶ ದಿಂದ ತೀಕ್ಷ್ಣವಾಗಿ ಚುಚ್ಚಲ್ಪಟ್ಟ ಆನೆಯಂತೆ–ಮೂರ್ಛೆಹೊಂದಿ ಕೆಳಗೆ ಬಿದ್ದನು. ಭೂಕಂಪವಾದ ಸಮಯದಲ್ಲಿ ಬುಡಮೇಲಾಗಿ ಬೀಳುವ ವೃಕ್ಷ

* ಇಲ್ಲಿ ಅಪ್ರಿಯವಾದುದು ಯಾವುದೆಂದು ಸೂಚಿಸದಿದ್ದರೂ ರಾಮ-ಲಕ್ಷ್ಮಣರು ಜಟೆಯನ್ನು ಧರಿಸಿ ಕಾಡಿಗೆ ಹೋದರೆಂಬ ವಾರ್ತೆಯು ಹೆಚ್ಚು ಅಪ್ರಿಯವಾದುದೆಂದು ವ್ಯಾಖ್ಯಾನಕಾರರು ವಿವರಿಸಿದ್ದಾರೆ. ಏಕೆಂದರೆ: ಜಟೆಯನ್ನು ಧರಿಸಿದನಂತರ ರಾಮನು ಅಯೋಧ್ಯೆಗೆ ಹಿಂದಿರುಗಲಾರನೆಂದೇ ಭರತನ ನಿಶ್ಚಯ. ಅಯೋಧ್ಯೆಗೆ ಕರೆತರಬೇಕೆನ್ನುವ ತನ್ನ ಮನೋರಥವು ಈಡೇರದೆಯೇ ಹೋಗಬಹುದೆಂದು ಭಾವಿಸಿ ಭರತನು ಚಿಂತಾಮಗ್ನನಾದನು.

ದಂತೆ ಮೂರ್ಛಿತನಾಗಿ ಕೆಳಗೆ ಬಿದ್ದ ಭರತನನ್ನು ನೋಡಿ ಗುಹನ ಮುಖವು ಕಪ್ಪಿಟ್ಟಿತು. ಅವನೂ ಬಹಳ ದುಃಖಿತನಾದನು. ಭರತನ ಆ ಅವಸ್ಥೆಯನ್ನು ಕಂಡು ಅವನ ಸಮೀಪದಲ್ಲಿಯೇ ನಿಂತಿದ್ದ ಶತ್ರುಘ್ನನು ಅವನನ್ನು ಬಾಚಿ ತಬ್ಬಿಕೊಂಡು ಮುಂದೇನು ಮಾಡಬೇಕೆಂಬುದನ್ನು ತಿಳಿಯದೇ ಶೋಕತಪ್ತನಾಗಿ ಅಳತೊಡಗಿದನು. ಆ ಮೊದಲೇ ಪತಿಯನ್ನಗಲಿದ ದುಃಖದಿಂದ ಸಂತಪ್ತರಾಗಿದ್ದ, ಸತತವಾದ ಚಿಂತೆಯಿಂದ ಸರಿಯಾಗಿ ನಿದ್ರಾಹಾರಗಳಿಲ್ಲದೇ ಬಹಳ ಕೃಶರಾಗಿದ್ದ ದಶರಥನ ಪತ್ನಿಯರು ಶತ್ರುಘ್ನನು ಅಳುತ್ತಿದ್ದುದನ್ನು ನೋಡಿ ಭರತನ ಬಳಿಗೆ ಬಂದರು. ಭರತನ ತಾಯಂದಿರು ಬಿಕ್ಕಿ-ಬಿಕ್ಕಿ ಅಳುತ್ತಾ ಭೂಮಿಯಲ್ಲಿ ಮೂರ್ಛಿತನಾಗಿ ಬಿದ್ದಿದ್ದ ಭರತನನ್ನು ಸುತ್ತುವರಿದು ನಿಂತರು. ದುಃಖತಪ್ತಳಾಗಿದ್ದ ಕೌಸಲ್ಯೆಯೂ ಭರತನ ಬಳಿಗೆ ಬಂದು ಅವನನ್ನು ಹಿಡಿದೆತ್ತಿ ಬಾಚಿ ತಬ್ಬಿಕೊಂಡಳು. ಹಸುವು ತನ್ನ ಕರುವನ್ನು ಕತ್ತಿನಿಂದ ತಬ್ಬಿಕೊಂಡು ಮುದ್ದಾಡುವಂತೆ–ತಪಸ್ವಿನಿಯಾದ ಕೌಸಲ್ಯೆಯು ಭರತನನ್ನು ತಬ್ಬಿಕೊಂಡು ಅಳುತ್ತಳುತ್ತಲೇ ಪ್ರಶ್ನಿಸಿದಳು:

ಪುತ್ರ ವ್ಯಾಧಿರ್ನ ತೇ ಕಚ್ಚಿಚ್ಛರೀರಂ ಪರಿಬಾಧತೇ ।
ಅಸ್ಯ ರಾಜಕುಲಸ್ಯಾದ್ಯ ತ್ವದಧೀನಂ ಹಿ ಜೀವಿತಮ್ ॥೯॥

"ಮಗು! ಯಾವುದಾದರೂ ರೋಗವು ನಿನ್ನ ಶರೀರವನ್ನೀಗ ಬಾಧಿಸುತ್ತಿಲ್ಲ ತಾನೇ? ಈ ರಾಜಕುಲದ ಜೀವಿತವೀಗ ನಿನ್ನ ಅಧೀನದಲ್ಲಿದೆ.

ಲಕ್ಷ್ಮಣನೊಡನೆ ರಾಮನು ಅರಣ್ಯಕ್ಕೆ ಹೊರಟುಹೋದನು. ದಶರಥಮಹಾರಾಜನು ಕಾಲವಾಗಿ ಹೋದನು. ನಿನ್ನನ್ನು ನೋಡಿಕೊಂಡು ನಾನಿನ್ನೂ ಜೀವಿಸಿದ್ದೇನೆ. ನಮ್ಮೆಲ್ಲರಿಗೂ ಈಗ ನೀನೊಬ್ಬನೇ ರಕ್ಷಕನು.

ವತ್ಸ! ಭರತ! ಲಕ್ಷ್ಮಣನಿಗೆ ಸಂಬಂಧಿಸಿದಂತೆ ಅಥವಾ ನನ್ನ ಏಕಮಾತ್ರಪುತ್ರನಾದ, ಸಭಾರ್ಯನಾಗಿ ಅರಣ್ಯಕ್ಕೆ ತೆರಳಿರುವ ಶ್ರೀರಾಮನಿಗೆ ಸಂಬಂಧಿಸಿದಂತೆ ಅಪ್ರಿಯವಾದ ಯಾವ ವಾರ್ತೆಯನ್ನೂ ಕೇಳಿಲ್ಲ ತಾನೇ?"

ಮಹಾಯಶೋವಂತನಾದ ಭರತನು ಸ್ವಲ್ಪಹೊತ್ತಿನಲ್ಲಿಯೇ ಎಚ್ಚರಗೊಂಡು ಅಳುತ್ತಳುತ್ತಲೇ ಕೌಸಲ್ಯೆಯನ್ನು ಸಮಾಧಾನಗೊಳಿಸಿ ಗುಹನನ್ನು ಪುನಃ ಪ್ರಶ್ನಿಸಿದನು:

"ನಿಷಾದರಾಜ! ಅಂದಿನ ರಾತ್ರಿ ನಮ್ಮಣ್ಣನೆಲ್ಲಿ ತಂಗಿದ್ದನು? ಸೀತೆಯು ಎಲ್ಲಿದ್ದಳು? ಲಕ್ಷ್ಮಣನೆಲ್ಲಿದ್ದನು? ಏನನ್ನು ತಿಂದು ಯಾವ ಹಾಸಿಗೆಯಲ್ಲವರು ಮಲಗಿದ್ದರು? ಎಲ್ಲವನ್ನೂ ವಿಶದವಾಗಿ ಹೇಳು."

ಲೋಕಾಭಿರಾಮನಾದ ಶ್ರೀರಾಮನ ವಿಷಯವನ್ನು ಹೇಳುವಂತೆ ಭರತನು ಕೇಳಿದೊಡನೆಯೇ ಗುಹನು ಪರಮಹೃಷ್ಟನಾಗಿ ಪ್ರಿಯನೂ, ಹಿತನೂ, ಅತಿಥಿಯೂ ಆದ ಶ್ರೀರಾಮನಿಗೆ ತಾನು ಮಾಡಿದ ಉಪಚಾರವನ್ನು ಭರತನಿಗೆ ವಿವರಿಸಿ ಹೇಳಿದನು:

"ರಾಜಕುಮಾರ! ನಾನು ಶ್ರೀರಾಮನ ಭೋಜನಕ್ಕಾಗಿ ಹಲವು ಬಗೆಯ ಅನ್ನಗಳನ್ನೂ, ಹಲವು ಬಗೆಯ ಭಕ್ಷ್ಯಗಳನ್ನೂ, ಫಲಗಳನ್ನೂ, ತಂದೆನು. ಆದರೆ ಅವೆಲ್ಲವನ್ನೂ ಸತ್ಯಪರಾಕ್ರಮನಾದ ಶ್ರೀರಾಮನು ನನ್ನ ಅನುಗ್ರಹಾರ್ಥವಾಗಿ ಸ್ಪರ್ಶಿಸಿದನು. ಕ್ಷತ್ರಿಯಧರ್ಮವನ್ನು ಸ್ಮರಿಸುತ್ತಾ ಯಾವ ಭೋಜನಪದಾರ್ಥವನ್ನೂ ಆಸ್ವಾದಿಸಲಿಲ್ಲ.

ನ ಹ್ಯಸ್ಮಾಭಿಃ ಪ್ರತಿಗ್ರಾಹ್ಯಂ ಸಖೇ ದೇಯಂ ತು ಸರ್ವದಾ ॥೧೭॥

ಕ್ಷತ್ರಿಯರಾದ ನಾವು ಯಾವಾಗಲೂ ಏನನ್ನೂ ಪ್ರತಿಗ್ರಹಿಸಬಾರದು. ಯಾವಾಗಲೂ ದಾನಮಾಡಬೇಕು. ಇದು ನಮ್ಮ ಧರ್ಮವಾಗಿದೆ-ಎಂದು ಹೇಳಿ ನಮ್ಮನ್ನು ಸಮಾಧಾನಗೊಳಿಸಿದನು.* ಅಂದು ರಾತ್ರಿ ಶ್ರೀರಾಮನು ಲಕ್ಷ್ಮಣನು ತಂದ ಗಂಗಾತೀರ್ಥವನ್ನು ಮಾತ್ರವೇ ಕುಡಿದನು. ಯಾವ

*ವ್ಯಾಖ್ಯಾನಕಾರರು ಇಲ್ಲಿಯೂ ಒಂದು ಜಿಜ್ಞಾಸೆ ತಂದಿರುತ್ತಾರೆ. 'ನಾಸ್ಮಾಭಿಃ ಪ್ರತಿಗ್ರಾಹ್ಯಂ' ಎಂದು ಗುಹನಿಗೆ ಉತ್ತರ ಹೇಳಿದ ರಾಮನು ಶಬರಿಯು ಕೊಟ್ಟ ಫಲ ಗಳನ್ನು ಹೇಗೆ ಉಪಭುಂಜಿಸಿದನು? ಇದಕ್ಕೆ ಎರಡು ವಿಧವಾಗಿ ಸಮಾಧಾನ ಹೇಳು ತ್ತಾರೆ. 1) ಭಕ್ತಾಗ್ರೇಸರನಾದ ಗುಹನು ಕೊಟ್ಟ ಹಣ್ಣುಗಳನ್ನು ತಿನ್ನಬಹುದಾಗಿತ್ತು. ಆದರೆ ಅಂದು ತಾನೇ ರಾಮನು ಅಯೋಧ್ಯೆಯಿಂದ ಹೊರಟುಬಂದಿದ್ದನು. ದಶರಥ-ಕೌಸಲ್ಯಾದಿ ರಾಜಮನೆತನದವರೂ ಮತ್ತು ನಾಗರಿಕರೂ ಅಪಾರವಾದ ದುಃಖದಲ್ಲಿ ಮುಳುಗಿಹೋಗಿದ್ದರು. ಅಂತೆಯೇ ರಾಮನಿಗೂ ಸಹ ಮನಸ್ಸಿಗೆ ಸಮಾ ಧಾನವಿರಲಿಲ್ಲ. 2) ಗಂಗೆಯೇ ಮೊದಲಾದ ಮಹಾನದಿಗಳ ಸಮೀಪದಲ್ಲಿ ಉಪವಾಸ ವಿರಬೇಕೆಂಬ ಸಂಪ್ರದಾಯವಿದೆ. ಈ ಎರಡು ಕಾರಣಗಳಿಂದ ಸ್ವೀಕರಿಸಲಿಲ್ಲವೆಂದು ಒಬ್ಬರು ಅಭಿಪ್ರಾಯಪಡುತ್ತಾರೆ. ಹಾಗಿದ್ದರೆ ರಾಮನು ಹಾಗೆಯೇ ಹೇಳಿಬಿಡು

ಆಹಾರವನ್ನೂ ತೆಗೆದುಕೊಳ್ಳದೇ ಸೀತೆಯೊಡನೆ ಉಪವಾಸವನ್ನೇ ಮಾಡಿದನು. ಶ್ರೀರಾಮನಿಗೆ ಕೊಟ್ಟನಂತರ ಉಳಿದ ಗಂಗಾತೀರ್ಥವನ್ನು ಲಕ್ಷ್ಮಣನು ಪಾನಮಾಡಿದನು. ಸಾಯಂಕಾಲದ ಸಮಯದಲ್ಲಿ ಈ ಮೂವರೂ ಒಂದೆಡೆಯಲ್ಲಿ ಮೌನಿಗಳಾಗಿ ಸಂಧ್ಯೋಪಾಸನೆಯನ್ನು ಮಾಡಿದರು.* ಬಳಿಕ ಲಕ್ಷ್ಮಣನು ದರ್ಭೆಯ ಹುಲ್ಲನ್ನು ತಂದು ಅದರಿಂದಲೇ ಶುಭದಾಯಕವಾದ ಹಾಸಿಗೆಯನ್ನು ರಾಮನಿಗಾಗಿ ಸಿದ್ಧಗೊಳಿಸಿದನು. ಲಕ್ಷ್ಮಣನು ಸಿದ್ಧಪಡಿಸಿದ್ದ ಹಾಸಿಗೆಯಲ್ಲಿ ಮಲಗಲು ಶ್ರೀರಾಮನು ಸೀತೆಯೊಡನೆ ತೆರಳಿದನು. ಮಲಗುವ ಮೊದಲು ಲಕ್ಷ್ಮಣನು ಸೀತಾ-ರಾಮರ ಪಾದಗಳನ್ನು ತೊಳೆದು ದೂರದಲ್ಲಿ ನಿಂತುಕೊಂಡನು.

ನೋಡು, ರಾಜಕುಮಾರ! ಇದೇ ಆ ಇಂಗಳದ ಮರ. ಇದೇ ಆ ದರ್ಭೆಯ ಹಾಸಿಗೆ. ಈ ಇಂಗಳದ ಮರದಡಿಯಲ್ಲಿ ಈ ದರ್ಭೆಯ ಹಾಸಿಗೆಯಲ್ಲಿ ಸೀತಾ-ರಾಮರಿಬ್ಬರೂ ಆ ರಾತ್ರಿಯಲ್ಲಿ ಮಲಗಿದ್ದರು.

ಬೆನ್ನಿನಲ್ಲಿ ಬಾಣಗಳಿಂದ ತುಂಬಿದ ಎರಡು ಬತ್ತಳಿಕೆಗಳನ್ನು ಬಿಗಿದು ಕೊಂಡು, ಬಿಲ್ಲಿನ ಹೆದೆಯನ್ನು ಎಳೆಯುವಾಗ ಗಾಯವಾಗದಿರಲು ಬೆರಳುಗಳಿಗೆ ಚರ್ಮದ ಮುಚ್ಚಳವನ್ನು ಧರಿಸಿ ಮಹಾಧನುಸ್ಸಿನ ಹೆದೆಯೇರಿಸಿ ಸಜ್ಜು ಗೊಳಿಸಿ ಶತ್ರುತಾಪಕನಾದ ಲಕ್ಷ್ಮಣನು ಸೀತಾ-ರಾಮರು ಮಲಗಿದ್ದ ಸ್ಥಳದ

ತ್ತಿದ್ದನು. ಯಾವುದನ್ನೂ ಮರೆಮಾಚುವ ಸ್ವಭಾವ ರಾಮನದಲ್ಲ. 'ಅಸ್ಮಾಭಿಃ ನ ಪ್ರತಿಗ್ರಾಹ್ಯಂ' ಎಂದು ಹೇಳುವ ಕಾರಣವೇ ಇರಲಿಲ್ಲ–ಎಂಬ ಆಕ್ಷೇಪಕ್ಕೆ ಋಷಿದತ್ತವಾದ ಆಹಾರವನ್ನು ಮಾತ್ರವೇ ರಾಮನು ತೆಗೆದುಕೊಳ್ಳುತ್ತಾನೆ. ಶಬರಿಯು ತಪಸ್ವಿನಿಯೂ, ಭಕ್ತೆಯೂ ಆದುದರಿಂದಲೇ ಅವಳು ಕೊಟ್ಟ ಆಹಾರವನ್ನು ಸ್ವೀಕರಿಸಿದನೆಂಬುದು ಮತ್ತೊಬ್ಬರ ಅಭಿಪ್ರಾಯವಾಗಿದೆ.

*ಹಿಂದಿನ ಪ್ರಕರಣದಲ್ಲಿ **"ತತಶ್ಚೀರೋತ್ತರಾಸಙ್ಗಃ ಸಂಧ್ಯಾಮನ್ವಾಸ್ಯ ಪಶ್ಚಿಮಾನ್ । ಜಲಮೇವಾದದೇ ಭೋಜ್ಯಂ ಲಕ್ಷ್ಮಣೇನಾಹೃತಂ ಸ್ವಯಮ್"॥** ಸಂಧ್ಯೋಪಾಸನೆ ಮಾಡಿದನಂತರ ಲಕ್ಷ್ಮಣನು ತಂದ ತೀರ್ಥವನ್ನು ಆಹಾರರೂಪವಾಗಿ ಸೇವನೆ ಮಾಡಿದರೆಂದು ಹೇಳಿದೆ. ಈಗ ನೀರು ಕುಡಿದು ಅನಂತರದಲ್ಲಿ ಸಂಧ್ಯೋಪಾಸನೆಯನ್ನು ಮೂವರೂ ಮಾಡಿದರೆಂದು ಹೇಳಿದೆ. ಸಂಧ್ಯೋಪಾಸನೆ ಮಾಡಿ ನೀರು ಕುಡಿದರೆಂಬುವುದೇ ಕ್ರಮ. ಪ್ರಕೃತಸಂದರ್ಭದಲ್ಲಿ ಗುಹನು ಭರತನಿಗೆ ಹೇಳುತ್ತಿರುವುದರಿಂದ ಕ್ರಮತಪ್ಪಿ ಹೇಳಿರಬಹುದೆಂದು ಭಾವಿಸಬಹುದು.

ಸುತ್ತಲೂ ಪಹರೆಯವನಂತೆ ಸುತ್ತಾಡುತ್ತಾ ನಿದ್ರೆಯಿಲ್ಲದೆಯೇ ಆ ರಾತ್ರಿ ಯನ್ನು ಕಳೆದನು. ಸ್ವಲ್ಪವಾದರೂ ಅಲಸಿಕೆಯಿಲ್ಲದೇ ಜಾಗರೂಕರಾಗಿದ್ದ, ಉತ್ತಮವಾದ ಧನುರ್ಬಾಣಗಳನ್ನು ಹಿಡಿದಿದ್ದ ಜ್ಞಾತಿ-ಬಾಂಧವರೊಡನೆ ನಾನೂ ಕೂಡ ಶ್ರೇಷ್ಠವಾದ ಧನುರ್ಬಾಣಗಳನ್ನು ಹಿಡಿದು ಲಕ್ಷ್ಮಣನಿದ್ದೆಡೆಯಲ್ಲಿಯೇ ನಿಂತು ಮಹೇಂದ್ರಸದೃಶನಾದ ಶ್ರೀರಾಮನನ್ನು ಆ ರಾತ್ರಿಯಲ್ಲಿ ಸಂರಕ್ಷಿಸುತ್ತಿದ್ದೆನು.”

ಳ೭ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೮೮ನೆಯ ಸರ್ಗ

ಶ್ರೀರಾಮನ ದರ್ಭೆಯ ಹಾಸಿಗೆಯನ್ನು ನೋಡಿ ಶೋಕಾವಿಷ್ಟನಾದ ಭರತನ ಉದ್ಗಾರ: ತಾನೂ ಜಟಾವಲ್ಕಲಧರನಾಗಿ ಅರಣ್ಯದಲ್ಲೇ ಇರುವ ನಿರ್ಧಾರ

ತಚ್ಛ್ರುತ್ವಾ ನಿಪುಣಂ ಸರ್ವಂ ಭರತಃ ಸಹ ಮನ್ತ್ರಿಭಿಃ ।
ಇಙ್ಗುದೀಮೂಲಮಾಗಮ್ಯ ರಾಮಶಯ್ಯಾಮವೇಕ್ಷ್ಯ ತಾಮ್ ॥೧॥

ಗುಹನು ಪ್ರತ್ಯಕ್ಷಾನುಭವದಿಂದ ಹೇಳಿದ ಎಲ್ಲ ವಿಷಯಗಳನ್ನೂ ಕೇಳಿದ ನಂತರ ಭರತನು ಮಂತ್ರಿಗಳೊಡನೆ ಇಂಗಳದ (ಹಿಪ್ಪೆಯ) ಮರದ ಬಳಿಗೆ ಹೋಗಿ ಶ್ರೀರಾಮನ ಹಾಸಿಗೆಯನ್ನು ಸಂದರ್ಶಿಸಿದನು.

ದರ್ಭೆಯ ಹಾಸಿಗೆಯನ್ನು ನೋಡುತ್ತಲೇ ಉದ್ವಿಗ್ನನಾದ ಭರತನು ತನ್ನ ತಾಯಂದಿರಿಗೆ ಹೇಳಿದನು:

“ಮಾತೆಯರೇ! ಇಲ್ಲಿ ನೋಡಿರಿ; ಆ ಮಹಾತ್ಮನು ಆ ರಾತ್ರಿಯನ್ನು ಇಲ್ಲಿಯೇ ನೆಲದ ಮೇಲೆ ಮಲಗಿ ಕಳೆದಿದ್ದಾನೆ. ಈ ದರ್ಭಶಯ್ಯೆಯು ಶ್ರೀರಾಮನಿಂದ ಒತ್ತಲ್ಪಟ್ಟು ಅಸ್ತವ್ಯಸ್ತವಾಗಿರುವುದನ್ನು ನಾವು ಕಾಣಬಹುದಾಗಿದೆ. ನಮ್ಮ ಅಣ್ಣನು ರಾಜ-ಮಹಾರಾಜರ ಕುಲದಲ್ಲಿ ಹುಟ್ಟಿದವನು. ಮಹಾಭಾಗ್ಯಶಾಲಿಯು. ಮಹಾಬುದ್ಧಿವಂತನು. ಮೇಲಾಗಿ

ದಶರಥರಾಜನ ಮಗನು. ಅಂತಹವನೆಂದಿಗೂ ಇಂತಹ ಕಠಿಣವಾದ ನೆಲದ ಮೇಲೆ ಹೀಗೆ ಮಲಗಬಾರದಾಗಿತ್ತು. ರಾಜಯೋಗ್ಯವಾದ ಕಂದಲೀ, ಚಮೂರು ಮುಂತಾದ ಪ್ರಾಣಿಗಳ ಮೃದುವಾದ ಚರ್ಮವನ್ನು ಹಾಸಿ ಅದರ ಮೇಲೆ ಅಮೂಲ್ಯವಾದ ರತ್ನಗಂಬಳಿಗಳನ್ನೂ ಹಾಸಿರುವ ರತ್ನಪರ್ಯಂಕದಲ್ಲಿ ಮಲಗುತ್ತಿದ್ದ ಪುರುಷಶ್ರೇಷ್ಠನಾದ ಶ್ರೀರಾಮನು ಈಗ ಈ ಒರಟಾದ ನೆಲದ ಮೇಲೆ ಹೇಗೆ ತಾನೇ ಮಲಗುವನು?

ವಿಮಾನಸದೃಶವಾದ ಪ್ರಾಸಾದಗಳ ಶಿಖರಗಳಲ್ಲಿ, ಉಪ್ಪರಿಗೆಗಳ ಮೇಲಿರುವ ಶೈತ್ಯಗೃಹಗಳಲ್ಲಿ, ಸುವರ್ಣಮಯವಾಗಿಯೂ ರಜತಮಯ ವಾಗಿಯೂ ಇರುವ ನೆಲವಿರುವೆಡೆಗಳಲ್ಲಿ, ಚಿತ್ರ-ವಿಚಿತ್ರವಾದ ರತ್ನಗಂಬಳಿಗಳನ್ನು ಹಾಸಿರುವೆಡೆಗಳಲ್ಲಿ, ವಿಚಿತ್ರತರವಾದ ಪುಷ್ಪಗುಚ್ಛಗಳಿ ರುವೆಡೆಗಳಲ್ಲಿ, ಚಂದನಾಗರು-ಶ್ರೀಗಂಧಗಳಿರುವ ಸ್ಥಳಗಳಲ್ಲಿ, ಬಿಳುಪಾದ ಮೋಡದಂತೆ ಸುಮನೋಹರವಾಗಿರುವ ಮತ್ತು ಶುಭ್ರವಾಗಿರುವ ಸ್ಥಳಗಳಲ್ಲಿ, ಗಿಣಿಗಳು ನಿನಾದಮಾಡುತ್ತಿರುವೆಡೆಗಳಲ್ಲಿ, ಎಲ್ಲ ಪ್ರಾಸಾದಗಳಿಗೂ ಉತ್ತಮೋತ್ತಮವಾಗಿರುವ ಪ್ರಾಸಾದದಲ್ಲಿ, ಶೀತಲ ವಾಗಿಯೂ ಸುಗಂಧಯುಕ್ತವಾಗಿಯೂ ಇರುವ ಸ್ಥಳದಲ್ಲಿ, ಮೇರುಸದೃಶ ವಾಗಿರುವ ಸುವರ್ಣಮಯವಾದ ಗೋಡೆಗಳಿಂದ ಆವೃತವಾಗಿರುವ ಸ್ಥಳದಲ್ಲಿ ಮಲಗಿ ಗೀತಾ-ವೀಣಾದಿಗಳ ಕಲರವದಿಂದಲೂ, ಪರಿಚಾರಿಕೆಯರು ಧರಿಸಿರುವ ಶ್ರೇಷ್ಠವಾದ ಆಭರಣಗಳ ಝಣ-ಝಣ ಶಬ್ದದಿಂದಲೂ, ಮೃದಂಗಗಳ ಸುಮಧುರಧ್ವನಿಯಿಂದಲೂ ಎಚ್ಚರಗೊಂಡು ವಂದಿಗಳಿಂದಲೂ ಸೂತ-ಮಾಗಧರಿಂದಲೂ ಅನುರೂಪವಾದ ಗೀತಗಳಿಂದ ಪ್ರಾತಃಕಾಲದಲ್ಲಿ ಸ್ತುತಿಸಲ್ಪಡುವ ಶ್ರೀರಾಮನು ಕಠಿಣವಾದ ಈ ನೆಲದ ಮೇಲೆ ಹೇಗೆ ತಾನೇ ಮಲಗುವನು?

ಅಶ್ರದ್ಧೇಯಮಿದಂ ಲೋಕೇ ನ ಸತ್ಯಂ ಪ್ರತಿಭಾತಿ ಮೇ ।
ಮುಹ್ಯತೇ ಖಲು ಮೇ ಭಾವಃ ಸ್ವಪ್ನೋಽಯಮಿತಿ ಮೇ ಮತಿಃ ॥

ರಾಜಕುಮಾರನಾದ ಮಹಾಮಹಿಮನಾದ ಶ್ರೀರಾಮನು ಇಂಗಳದ ಮರದಡಿಯಲ್ಲಿ ಹುಲ್ಲಿನ ಹಾಸಿಗೆಯಲ್ಲಿ ಮಲಗಿದ್ದನೆಂದರೆ—ಇದನ್ನು ಲೋಕದಲ್ಲಿ ಯಾರೂ ನಂಬಲಾರರು. ಇದು ನಿಜವೆಂದೇ ನನಗನ್ನಿಸುತ್ತಿಲ್ಲ. ಅಥವಾ ನಾನೇ ಭ್ರಾಂತನಾಗಿರಬಹುದೇ? ನನಗೆ ಮಂಕು ಕವಿದಿದೆ. ಅಥವಾ

ಈಗ ನಡೆಯುತ್ತಿರುವುದೆಲ್ಲವೂ, ನಾನು ಕೇಳುತ್ತಿರುವುದೆಲ್ಲವೂ, ನಾನು ನೋಡುತ್ತಿರುವುದೆಲ್ಲವೂ ಸ್ವಪ್ನವಿರಬಹುದೆಂದೇ ನನ್ನ ಭಾವನೆಯಾಗಿದೆ."

ನ ನೂನಂ ದೈವತಂ ಕಿಂಚಿತ್ಕಾಲೇನ ಬಲವತ್ತರಮ್ ।
ಯತ್ರ ದಾಶರಥೀ ರಾಮೋ ಭೂಮಾವೇವ ಶಯೀತ ಸಃ ॥೧೧॥

ದೈವ ಮತ್ತು ಕಾಲ–ಈ ಎರಡರಲ್ಲಿ ಕಾಲವೇ ಬಲವತ್ತರವಾದುದು. ದೈವವು ಕಾಲಕ್ಕಿಂತಲೂ ನಿಶ್ಚಯವಾಗಿಯೂ ಬಲಿಷ್ಠವಲ್ಲ. ದೇವಸದೃಶನಾದ ರಾಮನು ಕೂಡ ಕಾಲಕ್ಕೆ ಅಧೀನನಾಗಿ ನೆಲದಲ್ಲಿ ಮಲಗುವಂತಾ ಯಿತಲ್ಲವೇ? ವಿದೇಹರಾಜನ ಮಗಳಾದ, ಪ್ರಿಯದರ್ಶಿನಿಯಾದ, ಲೋಕಾಭಿ ರಾಮನಾದ ಶ್ರೀರಾಮನ ಪ್ರಿಯಸತಿಯಾದ, ದಶರಥರಾಜನ ಸೊಸೆಯಾದ ಸೀತಾದೇವಿಯೂ ನೆಲದ ಮೇಲೆ ಮಲಗಿದಳೆಂದರೆ–ಅದು ಕಾಲದ ವೈಪರೀತ್ಯವಲ್ಲದೇ ಮತ್ತೇನು? ಆದುದರಿಂದ ದೈವಕ್ಕಿಂತಲೂ ಕಾಲವೇ ಬಲವತ್ತರವಾದುದು."

ದರ್ಭಶಯ್ಯೆಯನ್ನು ತೋರಿಸುತ್ತಾ ಭರತನು ಹೇಳುತ್ತಾನೆ:

"ಇಲ್ಲಿ ನೋಡಿರಿ! ಇದೇ ನಮ್ಮಣ್ಣನ ಹಾಸಿಗೆ. ಹಾಸಿಗೆಯ ಒಂದು ಪಕ್ಕಕ್ಕೆ ನಮ್ಮಣ್ಣನು ಹೊರಳಿದ್ದಾನೆ. ಆ ಗುರುತೂ ಅಚ್ಚಳಿಯದಂತೆ ಹಾಗೆಯೇ ಇದೆ. ದರ್ಭಶಯ್ಯೆಯು ಕಠಿಣವಾದ ನೆಲದಮೇಲೆ ಹಾಸ ಲ್ಪಟ್ಟಿದ್ದು ನಮ್ಮಣ್ಣನು ಒಂದು ಪಕ್ಕದಿಂದ ಮತ್ತೊಂದು ಪಕ್ಕಕ್ಕೆ ಹೊರಳು ವಾಗ ಶರೀರದ ಹೊರಳಾಟಗಳಿಂದ ದರ್ಭೆಯ ಹುಲ್ಲು ಪುಡಿ-ಪುಡಿಯಾಗಿದೆ. ನನ್ನ ಅತ್ತಿಗೆಯಾದ ಸೀತಾದೇವಿಯು ಆಭರಣಗಳನ್ನು ತೊಟ್ಟುಕೊಂಡೇ ಮಲಗಿದ್ದಳೆಂದು ಭಾವಿಸುತ್ತೇನೆ. ಏಕೆಂದರೆ ಆಭರಣಗಳಿಂದ ಉದುರಿದ ಚಿನ್ನದ ರೇಕುಗಳು ಅಲ್ಲಲ್ಲಿ ಕಾಣುತ್ತಿವೆ. ಆ ಸಮಯದಲ್ಲಿ ಸೀತಾದೇವಿಯು ಉತ್ತರೀಯವನ್ನು ಹೊದೆದುಕೊಂಡೇ ಮಲಗಿದ್ದಂತೆ ಕಾಣುತ್ತದೆ. ಉತ್ತ ರೀಯದಲ್ಲಿದ್ದ ರೇಷ್ಮೆಯ ದಾರಗಳು ದರ್ಭೆಗಳಿಗೆ ಅಂಟಿಕೊಂಡು ಪ್ರಕಾ ಶಿಸುತ್ತಿವೆ. ಪತಿಯ ಹಾಸಿಗೆಯು ಹೇಗೇ ಇದ್ದರೂ ನಿಜಸತಿಯರಿಗೆ ಅದು ಸುಖದಾಯಕವೆಂದೇ ನಾನು ಭಾವಿಸುತ್ತೇನೆ. ಏಕೆಂದರೆ: ಬಾಲೆಯಾದ, ಪಾತಿವ್ರತ್ಯವೆಂಬ ತಪಸ್ಸಿನಲ್ಲಿಯೇ ಸದಾ ನಿಷ್ಠಳಾದ, ಸುಕುಮಾರಿಯಾದ, ಶ್ರೀರಾಮನ ನಿಜಸತಿಯಾದ ಮೈಥಿಲಿಯು ಇಂತಹ ಹುಲ್ಲಿನ ಹಾಸಿಗೆಯಲ್ಲಿ

ಮಲಗಿದರೂ ದುಃಖವೆಂದರೇನೆಂಬುದನ್ನೇ ತಿಳಿಯದವಳಾಗಿದ್ದಾಳೆ." ಭರತನಿಗೆ ದುಃಖವನ್ನು ತಡೆಯಲಾಗಲಿಲ್ಲ. ಸಂಕಟಪಡುತ್ತಾ ಹೇಳಿದನು: "ಅಯ್ಯೋ! ನಾನು ಬದುಕಿದ್ದರೂ ಸತ್ತಂತೆಯೇ ಸರಿ. ನಾನು ಬಹಳ ಕ್ರೂರಿಯು. ನನ್ನ ಸಲುವಾಗಿ ರಾಘವನು ಅನಾಥನಂತೆ ಪತ್ನಿಯೊಡನೆ ಇಂತಹ ಅತಿಕಠಿಣವಾದ ಹುಲ್ಲಿನ ಹಾಸಿಗೆಯಲ್ಲಿ ಮಲಗು ವಂತಾಯಿತಲ್ಲವೇ? ನನಗೆ ಧಿಕ್ಕಾರವಿರಲಿ. ಚಕ್ರವರ್ತಿಯ ವಂಶದಲ್ಲಿ ಹುಟ್ಟಿದವನು; ಎಲ್ಲ ಲೋಕಗಳಿಗೂ ಸುಖವನ್ನುಂಟುಮಾಡುವವನು; ಎಲ್ಲರಿಗೂ ಪ್ರಿಯನಾದವನು; ಕನ್ನೈದಿಲೆಯಂತೆ ಶರೀರಕಾಂತಿಯುಳ್ಳವನು; ರಕ್ತಾಕ್ಷನು; ಪ್ರಿಯದರ್ಶನನು; ಸುಖಪಡಲು ಯೋಗ್ಯನಾದವನು; ದುಃಖಕ್ಕೆ ಪಾತ್ರನಲ್ಲದವನು–ಇಂತಹ ಮಹಾನುಭಾವನು ರಾಜ್ಯವನ್ನೂ, ರಾಜೋಚಿತವಾದ ಸುಖೋಪಭೋಗಗಳನ್ನೂ ತ್ಯಜಿಸಿ ಹೇಗೆ ತಾನೇ ನೆಲದ ಮೇಲೆ ಮಲಗಿದನು? ಇಂತಹ ವಿಷಮಪರಿಸ್ಥಿತಿಯಲ್ಲಿ ಅಣ್ಣನಾದ ಶ್ರೀರಾಮನನ್ನು ಅನುಸರಿಸಿ ಕಾಡಿಗೆ ಹೋಗಿರುವ ಶುಭಲಕ್ಷಣಸಂಪನ್ನನಾದ, ಮಹಾಭಾಗ್ಯಶಾಲಿಯಾದ ಲಕ್ಷ್ಮಣನೇ ಧನ್ಯನಲ್ಲವೇ? ಯಾವಳು ಪತಿಯನ್ನು ನೆಳಲಿನಂತೆ ಅನುಸರಿಸಿ ಅರಣ್ಯಕ್ಕೆ ಹೋಗಿರುವಳೋ–ಆ ವೈದೇಹಿಯೂ ಕೂಡ ಕೃತಾರ್ಥಳಾದಳು. ಮಹಾತ್ಮನಾದ ಶ್ರೀರಾಮನಿಂದ ವಿಹೀನರಾಗಿರುವ ನಾವೆಲ್ಲರೂ ಸಂಶಯಕ್ಕೆ ಆಸ್ಪದರಾದೆವು. ದಶರಥನು ಸ್ವರ್ಗಕ್ಕೂ ಶ್ರೀರಾಮನು ಅರಣ್ಯಕ್ಕೂ ಹೊರಟುಹೋಗಲಾಗಿ ಈ ಪೃಥ್ವಿಯು ನಾವಿಕನಿಲ್ಲದ ಹಡಗಿನಂತೆ ನಾಥನಿಲ್ಲದೇ ಶೂನ್ಯವಾಗಿರುವಂತೆ ನನಗೆ ಭಾಸವಾಗುತ್ತಿದೆ. ಆದರೆ ಅರಣ್ಯದಲ್ಲಿ ವಾಸಮಾಡುತ್ತಿದ್ದರೂ ಶ್ರೀರಾಮನ ಬಾಹುಬಲದಿಂದ ರಕ್ಷಿತವಾಗಿರುವ ಈ ಪೃಥ್ವಿಯನ್ನು ಯಾವೊಬ್ಬ ಸಾಮಂತರಾಜನೂ ಆಕ್ರಮಿಸಲು ಇಚ್ಛಿಪಡುವುದಿಲ್ಲ. ರಕ್ಷಕರೇ ಇಲ್ಲದ ಪ್ರಾಕಾರಗಳುಳ್ಳ, ಹತೋಟಿಯಿಲ್ಲದ ಆನೆಗಳಿಂದಲೂ ಕುದುರೆಗಳಿಂದಲೂ ವ್ಯಾಪ್ತವಾಗಿರುವ, ಮುಚ್ಚದೆಯೇ ಇರುವ ಬಾಗಿಲುಗಳುಳ್ಳ, ದುರ್ದಶೆಗೆ ಒಳಗಾಗಿರುವ ಅಸಂತುಷ್ಟರಾದ ಸೈನಿಕರಿಂದ ಕೂಡಿರುವ, ರಕ್ಷಕರೇ ಇಲ್ಲದಿರುವ ಈ ನಮ್ಮ ರಾಜಧಾನಿಯನ್ನು ಶ್ರೀರಾಮನ ಭಯದಿಂದಾಗಿ ವಿಷಬೆರೆಸಿದ ಭಕ್ಷ್ಯದೋಪಾದಿಯಲ್ಲಿ ಶತ್ರುಗಳಾರೂ ಆಕ್ರಮಿಸಲು ಇಚ್ಛಿಸುವುದಿಲ್ಲ.

ಎಲ್ಲರೂ ಈ ನನ್ನ ಪ್ರತಿಜ್ಞೆಯನ್ನು ಲಾಲಿಸಿರಿ.

ಅದ್ಯಪ್ರಭೃತಿ ಭೂಮೌ ತು ಶಯಿಷ್ಯೇಽಹಂ ತೃಣೇಷು ವಾ ।
ಫಲಮೂಲಾಶನೋ ನಿತ್ಯಂ ಜಟಾಚೀರಾಣಿ ಧಾರಯನ್ ॥೨೬॥

ಈಗಿನಿಂದಲೇ ನಾನು ರಾಮನಂತೆಯೇ ಭೂಮಿಯ ಮೇಲೋ ಹುಲ್ಲಿನ ಮೇಲೋ ಮಲಗುತ್ತೇನೆ. ಜಟೆಯನ್ನು ಧರಿಸುತ್ತೇನೆ. ನಾರುಮಡಿಯನ್ನೇ ಉಡುತ್ತೇನೆ. ನಿತ್ಯವೂ ಕಂದ-ಮೂಲ-ಫಲಗಳನ್ನೇ ತಿನ್ನುತ್ತೇನೆ.

ರಾಮನು ಮಾಡಬೇಕಾಗಿರುವ ಹದಿನಾಲ್ಕು ವರ್ಷಗಳ ವನವಾಸದಲ್ಲಿ ಈಗ ಅವನು ಅರಣ್ಯದಲ್ಲಿ ಕಳೆದಿರುವ ಕಾಲವನ್ನು ಬಿಟ್ಟು ಉಳಿದಿರುವ ಕಾಲವನ್ನು ರಾಮನಿಗೆ ಬದಲಾಗಿ ನಾನು ಅರಣ್ಯದಲ್ಲಿ ಸುಖವಾಗಿ ವಾಸಮಾಡಿಕೊಂಡಿರುತ್ತೇನೆ. ಹೀಗೆ ಮಾಡುವುದರಿಂದ ಆರ್ಯನಾದ ಶ್ರೀರಾಮನು ಮಾಡಿರುವ ಪ್ರತಿಜ್ಞೆಯು ಸುಳ್ಳಾದಂತಾಗುವುದಿಲ್ಲ. ಅಣ್ಣನಿಗೆ ಬದಲಾಗಿ ಅರಣ್ಯದಲ್ಲಿ ವಾಸಮಾಡಲಿರುವ ನನ್ನನ್ನು ಅನುಸರಿಸಿ ಶತ್ರುಘ್ನನು ಕಾಡಿನಲ್ಲಿಯೇ ವಾಸಮಾಡುವನು. ಆರ್ಯನಾದ ಶ್ರೀರಾಮನು ಲಕ್ಷ್ಮಣನೊಡಗೂಡಿ ಅಯೋಧ್ಯೆಯನ್ನು ಪರಿಪಾಲಿಸುವನು. ಬ್ರಾಹ್ಮಣರು ಕಾಕುತ್ಸ್ಥನನ್ನು ಅಯೋಧ್ಯೆಯಲ್ಲಿ ರಾಜ್ಯಸಿಂಹಾಸನದಲ್ಲಿ ಕುಳ್ಳಿರಿಸಿ ಅಭಿಷೇಚಿಸುವರು. ನಿಶ್ಚಯವಾಗಿಯೂ ನನ್ನ ಈ ಮನೋರಥವನ್ನು ದೇವತೆಗಳು ಸಫಲಗೊಳಿಸುವರೇ? ನಾನೇ ಹೋಗಿ ಅಣ್ಣನ ಕಾಲುಗಳಲ್ಲಿ ಬಿದ್ದು ಅಯೋಧ್ಯೆಗೆ ಹಿಂದಿರುಗುವಂತೆ ಬಹುಪ್ರಕಾರವಾಗಿ ಅವನನ್ನು ಬೇಡಿಕೊಳ್ಳುತ್ತೇನೆ. ಒಂದು ವೇಳೆ ಅವನು ನನ್ನ ಪ್ರಾರ್ಥನೆಯನ್ನು ಅಂಗೀಕರಿಸದೆಯೇ ಹೋದರೆ–ಪ್ರತಿಜ್ಞಾತವಾಗಿರುವ ಕಾಲವು ಮುಗಿಯುವವರೆಗೂ ರಾಮನ ಶುಶ್ರೂಷೆಯನ್ನು ಮಾಡಿಕೊಂಡು ಅರಣ್ಯದಲ್ಲಿ ಇದ್ದುಬಿಡುತ್ತೇನೆ. ಇದಕ್ಕಾದರೂ ನಮ್ಮಣ್ಣನು ಸಮ್ಮತಿಸಲೇಬೇಕು. ದಾಸನಾದ ನನ್ನನ್ನು ಉಪೇಕ್ಷಿಸುವುದು ದಯಾಳುವಾದ ಶ್ರೀರಾಮನಿಗೆ ಯೋಗ್ಯವೆನಿಸುವುದಿಲ್ಲ."

ಲ೮ನೆಯ ಸರ್ಗವು ಮುಗಿಯಿತು.

ಭರತನು ಸೇನೆಯೊಡನೆ ಗಂಗಾನದಿಯನ್ನು ದಾಟಿ ಭರದ್ವಾಜರ ಆಶ್ರಮಕ್ಕೆ ತೆರಳಿದುದು

ವ್ಯುಷ್ಯ ರಾತ್ರಿಂ ತು ತತ್ರೈವ ಗಙ್ಗಾಕೂಲೇ ಸ ರಾಘವಃ ।
ಭರತಃ ಕಾಲ್ಯಮುತ್ಥಾಯ ಶತ್ರುಘ್ನಮಿದಮಬ್ರವೀತ್ ॥೧॥

ಭರತನು ಆ ರಾತ್ರಿಯನ್ನು ಗಂಗಾತೀರದಲ್ಲಿಯೇ ಕಳೆದು ಉಷಃಕಾಲದಲ್ಲೆದ್ದು ಇನ್ನೂ ಮಲಗಿದ್ದ ಶತ್ರುಘ್ನನಿಗೆ ಹೇಳಿದನು:

"ಶತ್ರುಘ್ನ! ಏಳು! ಎದ್ದೇಳು! ಇದೇನಿನ್ನೂ ಮಲಗಿಯೇ ಇರುವೆಯಲ್ಲಾ! ನಿನಗೆ ಮಂಗಳವಾಗಲಿ. ಬೇಗೆದ್ದು ಹೋಗಿ ನಿಷಾದಾಧಿಪತಿಯಾದ ಗುಹನನ್ನು ಶೀಘ್ರವಾಗಿ ಕರೆದುಕೊಂಡು ಬಾ. ಅವನು ನಮ್ಮನ್ನೂ ನಮ್ಮ ಸೈನ್ಯವನ್ನೂ ದೋಣಿಗಳಲ್ಲಿ ಕುಳ್ಳಿರಿಸಿ ಈ ಗಂಗಾನದಿಯನ್ನು ದಾಟಿಸುವನು."

"ನಾನು ಎಚ್ಚರವಾಗಿಯೇ ಇರುವೆನಣ್ಣಾ! ನಾನೇನೂ ನಿದ್ರಿಸುತ್ತಿಲ್ಲ. ನೀನು ಚಿಂತಿಸುತ್ತಿರುವಂತೆಯೇ ನಾನೂ ಶ್ರೀರಾಮನನ್ನೇ ಚಿಂತಿಸುತ್ತಾ ಮಲಗಿದ್ದೆನು"–ಹೀಗೆ ಶತ್ರುಘ್ನನು ಭರತನಿಗೆ ಉತ್ತರವಿತ್ತು ಎದ್ದು ಕುಳಿತನು. ಪುರುಷಶ್ರೇಷ್ಠರಾದ ಭರತ-ಶತ್ರುಘ್ನರಿಬ್ಬರೂ ಹೀಗೆ ಮಾತ ನಾಡುತ್ತಿರುವ ವೇಳೆಗೆ ಸರಿಯಾಗಿ ಗುಹನೇ ಬಂದು ಕೈಮುಗಿದುಕೊಂಡು ಭರತನಿಗೆ ಹೇಳಿದನು:

"ಕಾಕುತ್ಸ್ಥ! ಈ ಪರಮಪವಿತ್ರವಾದ ಗಂಗಾನದಿಯ ತೀರದಲ್ಲಿ ರಾತ್ರಿಯನ್ನು ಸುಖವಾಗಿ ಕಳೆದೆಯಾ? ನೀನೂ ನಿನ್ನ ಸೈನಿಕರೂ ಯಾವ ವಿಧವಾದ ಉಪದ್ರವಗಳೂ ಇಲ್ಲದೇ ಸುಖದಿಂದಿರುವಿರಲ್ಲವೇ?"

ಸ್ನೇಹಪೂರ್ವಕವಾಗಿ ಗುಹನು ಹೇಳಿದ ಆ ಮಾತನ್ನು ಕೇಳಿ ರಾಮನಿಗೆ ಅಧೀನನಾದ ಭರತನು ಹೇಳಿದನು:

"ಧೀಮಂತನಾದ ಗುಹನೇ! ನಾವು ರಾತ್ರಿಯನ್ನು ಸುಖವಾಗಿ ಕಳೆದೆವು. ನೀನು ನಮ್ಮನ್ನು ಬಹಳವಾಗಿ ಸತ್ಕರಿಸಿರುವೆ. ನಿನ್ನ ಜ್ಞಾತಿ-

ಬಾಂಧವರು ನೂರಾರು ನೌಕೆಗಳನ್ನು ತಂದು ನಮ್ಮ ಈ ಅಪಾರಸೈನ್ಯವನ್ನು ದಾಟಿಸಲಿ."

ಭರತನ ಆ ಆಜ್ಞೆಯನ್ನು ಕೇಳಿ ಗುಹನು ಅವಸರದಿಂದ ನಗರಿಗೆ ಹೋಗಿ ಜ್ಞಾತಿ-ಬಾಂಧವರಿಗೆ ಹೇಳಿದನು:

"ಏಳಿರಿ! ಎದ್ದೇಳಿರಿ! ಎಚ್ಚರಗೊಳ್ಳಿರಿ! ನಿದ್ದೆಯನ್ನು ಸಾಕುಮಾಡಿರಿ. ನಿಮ್ಮೆಲ್ಲರಿಗೂ ಮಂಗಳವಾಗಲಿ. ಎಲ್ಲ ನಾವೆಗಳನ್ನೂ ಎಳೆದು ತನ್ನಿರಿ. ನಾವೆಗಳ ಮೂಲಕವಾಗಿ ಭರತನ ಸೈನ್ಯವನ್ನು ದಾಟಿಸೋಣ."

ಗುಹನು ಹೀಗೆ ಹೇಳಿದೊಡನೆಯೇ ಬೆಸ್ತರು ಅವಸರದಿಂದೆದ್ದು ರಾಜಾಜ್ಞೆಗೆ ಅನುಸಾರವಾಗಿ ಐದು ನೂರು ನೌಕೆಗಳನ್ನು ಗಂಗಾನದಿಯ ತೀರದುದ್ದಕ್ಕೂ ನಿಲ್ಲಿಸಿದರು. ಆ ನೌಕೆಗಳೇ ಅಲ್ಲದೇ ರಾಜಯೋಗ್ಯವಾದ 'ಸ್ವಸ್ತಿಕ' ಎಂಬ ಹೆಸರಿನ ನೌಕೆಗಳನ್ನೂ ಗುಹನ ಭಟರು ಸಿದ್ಧಗೊಳಿಸಿದರು. ಶ್ರೇಷ್ಠವಾದ ಆ ನೌಕೆಗಳು ನಾಲ್ಕು ಪಾರ್ಶ್ವಗಳಲ್ಲಿಯೂ ದೊಡ್ಡ-ದೊಡ್ಡ ಗಂಟೆಗಳನ್ನು ಹೊಂದಿದ್ದುವು. ಪತಾಕೆಗಳಿಂದ ಕೂಡಿ ಶೋಭಾಯ ಮಾನವಾಗಿ ಕಾಣುತ್ತಿದ್ದುವು. ಗಾಳಿಯಿಂದ ಚಲಿಸುವ, ಸ್ವಸ್ತಿಕಚಿಹ್ನೆಯಿಂದ ಕೂಡಿದ್ದ ಅಂತಹ ನೌಕೆಗಳನ್ನು ಗುಹನ ಅನುಯಾಯಿಗಳು ತಂದರು.*

ಬಿಳುಪಾದ ರತ್ನಗಂಬಳಿಗಳನ್ನು ಹಾಸಿದ್ದ, ಕಿಣಿ-ಕಿಣಿ ಶಬ್ದಮಾಡುವ ಗೆಜ್ಜೆ ಮತ್ತು ಗಂಟೆಗಳ ಶಬ್ದದಿಂದ ಕೂಡಿದ್ದ, ಶುಭಪ್ರದವಾದ ಸ್ವಸ್ತಿಕವೆಂಬ ಹೆಸರಿನ ಒಂದು ನೌಕೆಯನ್ನು ಗುಹನೇ ಸ್ವತಃ ನಡೆಸಿಕೊಂಡುಬಂದನು. ಭರತ-ಶತ್ರುಘ್ನರೂ ಕೌಸಲ್ಯಾ-ಸುಮಿತ್ರೆಯರೂ ಮತ್ತು ಇತರ ರಾಜಮಹಿಷಿ ಯರೂ ಗುಹನು ತಂದ ಆ ನೌಕೆಯನ್ನು ಹತ್ತಿದರು. ಅದಕ್ಕೂ ಮೊದಲೇ

---

* "ಸ್ವಸ್ತಿಕಃ ಸರ್ವತೋ ಭದ್ರಃ" ಎಂಬ ಉಕ್ತಿಯಂತೆ ಸ್ವಸ್ತಿಕವೆಂಬುದು ನೌಕೆಯ ರಚನಾ ವಿಶೇಷವೆಂದೂ ಆದುದರಿಂದಲೇ ಅವುಗಳಿಗೆ 'ಸ್ವಸ್ತಿಕ' ಎಂಬ ಬಂದಿದೆಯೆಂದೂ ಒಬ್ಬ ವ್ಯಾಖ್ಯಾನಕಾರರು ಅಭಿಪ್ರಾಯಪಟ್ಟಿದ್ದಾರೆ. ಇಂತಹ ನೌಕೆಗಳು ನಾಲ್ಕು ದೋಣಿಗಳಿಂದ ಕೂಡಿದ್ದು ಚಿನ್ನದ ಬಣ್ಣವನ್ನು ಬಳಿದು ಅಲಂಕರಿಸುವರು. ಮರಗಳ ಗೋಡೆಯನ್ನು ಮಾಡಿ ಅವುಗಳಿಗೆ ಕಿಟಕಿಗಳನ್ನಿಟ್ಟಿರುವರು. ಇದರಿಂದ ಒಳಗೆ ಕುಳಿತುಕೊಳ್ಳುವವರಿಗೆ ಬಿರುಗಾಳಿಯ ತೊಂದರೆಯು ತಪ್ಪುತ್ತದೆ. ಹತ್ತಲು ಮೆಟ್ಟಿಲುಗಳನ್ನು ಮಾಡಿರುವರು. ರಾಜರ ಉಪಯೋಗಕ್ಕಾಗಿಯೇ ಇವು ನಿರ್ಮಿತವಾಗುವುವು.

ಪುರೋಹಿತರಾದ ವಸಿಷ್ಠರೂ, ಗುರುಜನರೂ, ಬ್ರಾಹ್ಮಣರೂ ಸ್ವಸ್ತಿಕನೌಕೆಯನ್ನು ಹತ್ತಿದರು. ಬಳಿಕ ಭರತನೇ ಮೊದಲಾದವರೂ ರಾಜಕುಲ ಸ್ತ್ರೀಯರೂ ಹತ್ತಿದರು. ಅವರೆಲ್ಲರೂ ಹತ್ತಿದನಂತರ ಅಯೋಧ್ಯೆಯಿಂದ ತರಲ್ಪಟ್ಟಿದ್ದ ಯಾನಗಳನ್ನೂ ಅಂಗಡಿಗಳ ಸರಕುಗಳನ್ನೂ ಇತರ ನೌಕೆಗಳಲ್ಲಿಟ್ಟರು. ರಾಜಾಜ್ಞೆಯಾದನಂತರ ಭರತನ ಸೈನಿಕರು ನೌಕೆಗಳನ್ನು ಹತ್ತಲು ಉಪಕ್ರಮಿಸಿದರು. ಬಿಡಾರದಿಂದ ಹೊರಟ ಆ ಸೈನಿಕರು ಸಂಪ್ರದಾಯ ದಂತೆ ತಮ್ಮ ತಾತ್ಕಾಲಿಕವಾದ ಗುಡಾರಗಳಲ್ಲಿ ದೀಪಗಳನ್ನು ಹೊತ್ತಿಸಿಟ್ಟರು. ಕೆಲವರು ಆಗ ತಾನೇ ನದಿಯಲ್ಲಿ ಸ್ನಾನಮಾಡಲು ಹೋಗುತ್ತಿದ್ದರು. ಕೆಲವರು ತಮ್ಮ ಪಾತ್ರೆ ಪದಾರ್ಥಗಳನ್ನು ಸಂಗ್ರಹಿಸುತ್ತಿದ್ದರು. ಆಗ ಅವರು ಮಾಡುತ್ತಿದ್ದ ಕಲ-ಕಲ ನಿನಾದವು ಆಕಾಶವನ್ನು ಮುಟ್ಟಿತು. ಪತಾಕೆಗಳಿಂದ ಕೂಡಿದ್ದ* ನಾವಿಕರಿಂದ ಅಧಿಷ್ಠಿತವಾಗಿದ್ದ, ಆ ನೌಕೆಗಳು ಜನಸಮೂಹವನ್ನು ಹೊತ್ತು ಬಹಳ ಶೀಘ್ರವಾಗಿ ಗಂಗಾನದಿಯಲ್ಲಿ ಮುನ್ನಡೆಯುತ್ತಿದ್ದುವು. ಹಾಗೆ ಹೊರಟ ಹಲವಾರು ನೌಕೆಗಳಲ್ಲಿ ಹೆಂಗಸರೇ ತುಂಬಿದ್ದರು. ಕೆಲವು ನೌಕೆಗಳಲ್ಲಿ ಕುದುರೆಗಳೇ ಇದ್ದುವು. ಕೆಲವು ನೌಕೆಗಳಲ್ಲಿ ರಥಗಳೂ ಗಾಡಿಗಳೂ ತುಂಬಿದ್ದುವು. ಕೆಲವು ನೌಕೆಗಳಲ್ಲಿ ಅಪಾರವಾದ ಐಶ್ವರ್ಯವೂ ತುಂಬಿದ್ದಿತು. ಆ ಎಲ್ಲ ನೌಕೆಗಳೂ ಅನುಕ್ರಮವಾಗಿ ಹೊರಟುವು. ಎಲ್ಲವೂ ಗಂಗಾನದಿಯ ಆಚೆಯ ದಡವನ್ನು ಸೇರಿ ಭರತನೇ ಮೊದಲಾದವರನ್ನೂ ಅಪಾರಸೈನ್ಯವನ್ನೂ ತೀರದಲ್ಲಿಳಿಸಿ ಹಿಂದಿರುಗುವಾಗ ಗಂಗಾನದಿಯ ನೀರಿನಲ್ಲಿ ಚಿತ್ರ-ವಿಚಿತ್ರವಾದ ನೌಕೆಯ ಸಂಚಾಲನಾಪ್ರಕಾರಗಳನ್ನು ಅತಿಥಿಗಳಿಗೆ ಬೆಸ್ತರು ಪ್ರದರ್ಶಿಸಿದರು. ಎರಡು ಕಡೆಗಳಲ್ಲಿಯೂ ಪತಾಕೆಗಳಿಂದ ಕೂಡಿ ಮಾವಟಿಗರಿಂದ ಪ್ರಚೋದಿಸಲ್ಪಟ್ಟು ಗಂಗಾ ನದಿಯನ್ನು ದಾಟುತ್ತಿರುವ ಆನೆಗಳು–ರೆಕ್ಕೆಗಳಿಂದ ಕೂಡಿದ ಪರ್ವತ ಗಳಂತೆಯೇ ಕಾಣುತ್ತಿದ್ದುವು.

ಭರತನ ಸೈನಿಕರಲ್ಲಿ ಕೆಲವರು ನೌಕೆಗಳಲ್ಲಿ ಕುಳಿತು ನದಿಯನ್ನು ದಾಟಿದರು. ಕೆಲವರು ಹುಲ್ಲು-ಬೆಂಡು ಇವುಗಳಿಂದ ಕೂಡಿದ ತೆಪ್ಪಗಳ ಮೂಲಕವಾಗಿ ನದಿಯನ್ನು ದಾಟಿದರು. ಕೆಲವರು ಮಡಕೆಗಳನ್ನು ಆಸರೆಯಾಗಿಟ್ಟು

* ಪತಾಕೆ = ಗಾಳಿಯನ್ನು ಹತೋಟಿಯಲ್ಲಿಡಲು ಗಾಳಿಬೀಸುವ ದಿಕ್ಕನ್ನನುಸರಿಸಿ ನೀಳವಾಗಿ ಕಟ್ಟುವ ಬಟ್ಟೆ.

ಕೊಂಡು ಈಜಿಕೊಂಡೇ ದಾಟಿದರು. ಈಜುವುದರಲ್ಲಿ ಪರಿಣತರಾದ ಕೆಲವರು ತೋಳುಗಳ ಸಹಾಯದಿಂದಲೇ ಗಂಗಾನದಿಯನ್ನು ದಾಟಿದರು. ಗಂಗಾಸ್ನಾನದಿಂದ ಪುನೀತವಾಗಿದ್ದ ಭರತನ ಉಳಿದ ಸೈನ್ಯವು ಬೆಸ್ತರು ನಡೆಸುತ್ತಿದ್ದ ನೌಕೆಗಳ ಮೂಲಕವಾಗಿ ಗಂಗಾನದಿಯನ್ನು ದಾಟಿತು. ಬಳಿಕ ಮೈತ್ರ ಮುಹೂರ್ತದಲ್ಲಿ ಸೈನ್ಯವು ಉತ್ತಮೋತ್ತಮವಾದ ಪ್ರಯಾಗವನಕ್ಕೆ ಪ್ರಯಾಣಮಾಡಿತು.* ಪ್ರಯಾಗವನವನ್ನು ತಲುಪಿದನಂತರ ಮಹಾತ್ಮನಾದ ಭರತನು ಸೈನಿಕರನ್ನು ಸಂತೈಸುತ್ತಾ ಅವರಿಗೆ ಸುಖಕರವೆನಿಸಿದ ಸ್ಥಳದಲ್ಲಿ ಬೀಡುಬಿಡುವಂತೆ ಹೇಳಿದನು. ಮುನಿಶ್ರೇಷ್ಠರಾದ ಭರದ್ವಾಜ ಮಹರ್ಷಿಗಳನ್ನು ಸಂದರ್ಶಿಸಲು ವಸಿಷ್ಠರೇ ಮೊದಲಾದ ಋತ್ವಿಜರನ್ನು ಮುಂದೆಮಾಡಿಕೊಂಡು ಕಾಲ್ನಡಿಗೆಯಲ್ಲಿಯೇ ಭರತನು ಅವರ ಆಶ್ರಮಕ್ಕೆ ತೆರಳಿದನು.

---

* ಈಗಿನ ಘಂಟೆಗಳನ್ನು ಹದಿನೈದು ಮುಹೂರ್ತಗಳಾಗಿ ವಿಂಗಡಿಸಿರುತ್ತಾರೆ. ಎಂದರೆ ಹಗಲು ೪೫ ನಿಮಿಷಗಳಿಗೆ ಒಂದು ಮುಹೂರ್ತವಾಗುತ್ತದೆ. ೨೪ ನಿಮಿಷಗಳಿಗೆ ೧ ಘಳಿಗೆ; ಎರಡು ಘಳಿಗೆಗಳಿಗೆ ಒಂದು ಮುಹೂರ್ತ. ದ್ವೇ ತು ನಾಡ್ಯೌ ಮುಹೂರ್ತೋಽಸ್ತ್ರೀ [ವೈಜಯನ್ತೀ] ಮುಹೂರ್ತಗಳು ಹದಿನೈದು: ರೌದ್ರಃ ಸಾರ್ಪಸ್ತಥಾ ಮೈತ್ರಃ ಪೈತ್ರೋ ವಾಸವ ಏವ ಚ । ಆಪ್ಯೋ ವೈಶ್ವಸ್ತಥಾ ಬ್ರಾಹ್ಮಪ್ರಾಜೇಶೈನ್ದ್ರಾ ಸ್ತಥೈವ ಚ ॥ ಐನ್ದ್ರಾ ಗ್ನೋ ನೈರ್ಋತ ಶ್ಚೈವ ವಾರುಣಾರ್ಯಮಣೋ ಭಗೀ । ಏತೇಽಹ್ನಿ ಕ್ರಮಶೋ ಜ್ಞೇಯಾ ಮುಹೂರ್ತಾ ದಶ ಪಞ್ಚ ಚ ॥ ರೌದ್ರ, ಸಾರ್ಪ, ಮೈತ್ರ, ಪೈತ್ರ, ವಾಸವ, ಆಪ್ಯ, ವೈಶ್ವ, ಬ್ರಾಹ್ಮ ಪ್ರಾಜೇಶ, ಐಂದ್ರ, ಐನ್ದ್ರಾಗ್ನ, ನೈರ್ಋತ, ವಾರುಣ, ಅರ್ಯಮಣ, ಭಗೀ–ಈ ಹದಿನೈದು ಅನುಕ್ರಮವಾಗಿ ಹಗಲಿನ ಮುಹೂರ್ತಗಳು. [ಬೃಹಸ್ಪತಿಸಂಹಿತೆ] ಈ ಮುಹೂರ್ತಗಳ ವಿಷಯವಾಗಿ ವಿಂಧ್ಯಮಾಧವೀಯದಲ್ಲಿ ಹೀಗೆ ಹೇಳಿದೆ: ಅರ್ದ್ರೋರಗಮಿತ್ರಮಘಾವಸುಜಲವಿಶ್ವಾಭಿಜಿದ್ವಿರಿಞ್ಚೀನ್ದ್ರಾಃ ಐನ್ದ್ರಾಗ್ನಮೂಲವರುಣಾರ್ಯಮಭಗಯುಕ್ತಾ ದಿವಾ ಮುಹೂರ್ತಾಃ ಸ್ಯುಃ । ಆರ್ದ್ರಾ, ಆಶ್ಲೇಷ, ಮೊದಲಾದ ನಕ್ಷತ್ರಗಳ ಅಧಿಪತಿಗಳಾದ ರುದ್ರ, ಸರ್ಪ ಮೊದಲಾದ ದೇವತೆಗಳ ಸಂಬಂಧದಿಂದ ರೌದ್ರ, ಸಾರ್ಪ, ಮೈತ್ರ–ಮೊದಲಾದ ಹೆಸರುಗಳು ಈ ಮುಹೂರ್ತಗಳಿಗೆ ಬಂದಿವೆ.

ಎರಡು ಪಾಠಗಳಲ್ಲಿಯೂ ಮೈತ್ರಮುಹೂರ್ತವು ಮೂರನೆಯ ಮುಹೂರ್ತ. ಈ ಮೂರನೆಯ ಮುಹೂರ್ತವಾದ ಮೈತ್ರದಲ್ಲಿ ಪ್ರಯಾಣ ಹೊರಟರೆಂದರೆ ಉದಯಾತ್ ೯೬ ನಿಮಿಷಗಳ ಮೇಲೆ ೧೪೪ ನಿಮಿಷಗಳೊಳಗಾಗಿ ಪ್ರಯಾಣ ಮಾಡಿರಬೇಕು. ಎಂದರೆ

ದೇವಪುರೋಹಿತರಾದ* ಮಹಾತ್ಮರಾದ, ವೇದ-ವೇದಾಂಗಪಾರಂಗತರಾದ ಭರದ್ವಾಜಮಹರ್ಷಿಗಳ ಆಶ್ರಮದ ಬಳಿಗೆ ಭರತನು ಋತ್ವಿಕ್ಪುರಸ್ಸರನಾಗಿ ಬಂದು ರಮ್ಯವಾದ ಪರ್ಣಶಾಲೆಯಿಂದಲೂ, ನಾನಾವಿಧವಾದ ವೃಕ್ಷಗಳಿಂದಲೂ ಕೂಡಿರುವ ಭರದ್ವಾಜರ ವಿಶಾಲವಾದ ವನಪ್ರದೇಶವನ್ನು ಸಂದರ್ಶಿಸಿದನು.

೮೯ನೆಯ ಸರ್ಗವು ಮುಗಿಯಿತು.

ಭರತ-ಭರದ್ವಾಜರ ಸಂಭಾಷಣೆ:
ಆಶ್ರಮದಲ್ಲೇ ತಂಗಲು ಭರದ್ವಾಜರಿಂದ ಭರತನಿಗೆ ಆದೇಶ

ಭರದ್ವಾಜಾಶ್ರಮಂ ಗತ್ವಾ ಕ್ರೋಶಾದೇವ ನರರ್ಷಭಃ ।
ಬಲಂ ಸರ್ವಮವಸ್ಥಾಪ್ಯ ಜಗಾಮ ಸಹ ಮನ್ತ್ರಿಭಿಃ ॥೧॥

ಪದ್ಭ್ಯಾಮೇವ ಹಿ ಧರ್ಮಜ್ಞೋ ನ್ಯಸ್ತಶಸ್ತ್ರಪರಿಚ್ಛದಃ ।
ವಸಾನೋ ವಾಸಸೀ ಕ್ಷೌಮೇ ಪುರೋಧಾಯ ಪುರೋಹಿತಮ್ ॥೨॥

ಭರತನು ಭರದ್ವಾಜರ ಆಶ್ರಮಪ್ರದೇಶವನ್ನು ಸಮೀಪಿಸಿ ಆಶ್ರಮವು ಒಂದು ಕ್ರೋಶದಷ್ಟು ದೂರವಿದ್ದಾಗಲೇ ಸೈನಿಕರನ್ನು ಅಲ್ಲಿಯೇ ನಿಲ್ಲಿಸಿದನು. ಧನುರ್ಬಾಣಗಳನ್ನೂ ಕಿರೀಟವೇ ಮೊದಲಾದ ಆಭರಣಗಳನ್ನೂ ಬಿಚ್ಚಿಟ್ಟು

ಉದಯಾತ್ ಎರಡು ಘಂಟೆಯೊಳಗಾಗಿ ಭರತನ ಒಂಬತ್ತು ಸಾವಿರ ಆನೆಯ ಬಲ, ಆರು ಸಾವಿರ ರಥಗಳು, ಒಂದು ಲಕ್ಷ ಅಶ್ವಸೈನ್ಯ, ಅಂತೆಯೇ ಲಕ್ಷೋಪಲಕ್ಷ ಕಾಲಾಳುಗಳು ಮತ್ತು ಅನೇಕಾನೇಕ ಪಟ್ಟಣಿಗರು ಇವರೆಲ್ಲರನ್ನೂ ಗುಹನು ತನ್ನ ನೌಕಾಪಡೆಯಿಂದ ದಾಟಿಸಿದನು–ಎಂದರೆ ಹಿಂದಿನ ಕಾಲದಲ್ಲಿಯೂ ಭಾರತೀಯರ ನೌಕಾಪಡೆಯ ವ್ಯವಸ್ಥೆಯು ಹೇಗಿತ್ತೆಂಬುದನ್ನು ಈ ಪ್ರಕರಣವು ಸೂಚಿಸುತ್ತದೆ. ನಮ್ಮ ಕುಶಲತೆಯೆಲ್ಲವನ್ನೂ ಹಾಳುಮಾಡಿಕೊಂಡು ಅದನ್ನು ಜೀರ್ಣೋದ್ಧಾರ ಮಾಡಲು ಸ್ವಲ್ಪವೂ ಯತ್ನಿಸದೇ ಎಲ್ಲಕ್ಕೂ ಪರದೇಶದ ಅನುಕರಣೆಯನ್ನೇ ಮಾಡುತ್ತಿರುವುದು ನಮ್ಮ ದೇಶದ ದುರ್ವಿಧಿಯಾಗಿದೆ.

*ಭರದ್ವಾಜರು ದೇವಪುರೋಹಿತರು: ಉತಥ್ಯನೆಂಬ ಮಹರ್ಷಿಯ ಪತ್ನಿಯಾದ ಮಮತಾ ಎಂಬುವಳಲ್ಲಿ ಬೃಹಸ್ಪತಿಯಿಂದ ಜನಿಸಿದವರು ಭರದ್ವಾಜರು. ಗಂಡನ ಭೀತಿಯಿಂದಾಗಿ ಮಮತೆಯು ಗರ್ಭವಿಸರ್ಜನೆಯನ್ನು ಮಾಡಲಿಚ್ಛಿಸಿದಳೆಂದೂ ಆಗ ದೇವತೆ

ನಾರುಮಡಿಯನ್ನುಟ್ಟು ಅದನ್ನೇ ಉತ್ತರೀಯವನ್ನಾಗಿ ಹೊದೆದಿದ್ದ, ಧರ್ಮಜ್ಞನಾದ ಭರತನು ಪುರೋಹಿತರಾದ ವಸಿಷ್ಠರನ್ನು ಮುಂದೆ ಮಾಡಿಕೊಂಡು ಮಂತ್ರಿಗಳೊಡನೆ ಭರದ್ವಾಜರನ್ನು ಸಂದರ್ಶಿಸಲು ಕಾಲ್ನಡಿಗೆಯಲ್ಲೇ ಹೊರಟನು.

ಆಶ್ರಮವು ಸಮೀಪಿಸಿತು. ಆಗ ಭರತನು ಪುನಃ ಸಮಾಲೋಚಿಸಿ ಮಂತ್ರಿಗಳಿಗೆ ಅಲ್ಲಿಯೇ ನಿಲ್ಲಲು ಹೇಳಿ, ಭರದ್ವಾಜರನ್ನು ಸಂದರ್ಶಿಸಲು ಪುರೋಹಿತರಾದ ವಸಿಷ್ಠರನ್ನು ಮುಂದೆಮಾಡಿಕೊಂಡು ಆಶ್ರಮವನ್ನು ಪ್ರವೇಶಿಸಿದನು.

ಮಹಾತಪಸ್ವಿಗಳಾದ ಭರದ್ವಾಜರು ವಸಿಷ್ಠರನ್ನು ನೋಡಿದೊಡನೆಯೇ ಆಸನದಿಂದ ಮೇಲೆದ್ದು ಸ್ವಾಗತಿಸುತ್ತಾ ಶಿಷ್ಯರಿಗೆ ಒಡನೆಯೇ ಅರ್ಘ್ಯ-ಪಾದ್ಯಾದಿಗಳನ್ನು ತರುವಂತೆ ಹೇಳಿದರು. ವಸಿಷ್ಠ-ಭರದ್ವಾಜರ ಸಮಾಗಮವಾಗುತ್ತಲೇ ಭರತನು ಮುಂದೆ ಬಂದು ಭರದ್ವಾಜರಿಗೆ ನಮಸ್ಕರಿಸಿದನು. ಮಹಾತೇಜಸ್ವಿಗಳಾದ ಭರದ್ವಾಜರು ನಮಸ್ಕರಿಸಿದವನು ದಶರಥನ ಮಗನೆಂದು ತಿಳಿದುಕೊಂಡರು. ಅನಂತರ ಧರ್ಮಜ್ಞರಾದ ಭರದ್ವಾಜರು ವಸಿಷ್ಠ-ಭರತರಿಬ್ಬರಿಗೂ ಯಥೋಚಿತವಾಗಿ ಅರ್ಘ್ಯ-ಪಾದ್ಯಾದಿಗಳನ್ನೂ ಕಂದ-ಮೂಲ-ಫಲಗಳನ್ನೂ ಕೊಟ್ಟು ಸತ್ಕರಿಸಿದನಂತರ ಕ್ರಮಪ್ರಕಾರವಾಗಿ ಇಕ್ಷ್ವಾಕುಕುಲದವರ ಯೋಗ-ಕ್ಷೇಮಗಳನ್ನು ವಿಚಾರಿಸಿದರು.

ಅಯೋಧ್ಯೆಯಲ್ಲಿನ ಸೈನ್ಯ-ಕೋಶ-ಮಿತ್ರರು, ಬಂಧುಗಳು, ಮಂತ್ರಿಗಳು, ಸಾಮಂತರಾಜರು, ಪ್ರಜೆಗಳು–ಈ ಎಲ್ಲರ ಕುಶಲಗಳನ್ನೂ ಭರದ್ವಾಜರು ಕೇಳಿ ತಿಳಿದುಕೊಂಡರು. ಆದರೆ ದಶರಥನು ಮೃತನಾದುದು ಭರದ್ವಾಜರಿಗೆ ತಿಳಿದಿದ್ದರಿಂದ ಅವನ ವಿಷಯವನ್ನು ಪ್ರಸ್ತಾಪಿಸಲಿಲ್ಲ.

ಗಳು "ಉತಥ್ಯಸ್ಯ ಕ್ಷೇತ್ರಜತ್ವೇನ, ಬೃಹಸ್ಪತೇರೌರಸತ್ವೇನ, ಭರದ್ವಾಜಾನಮಮುಂ ಭರ" ಎಂದು ಹೇಳಿದ್ದರಿಂದ ಅವಳು ಸಮಾಧಾನಹೊಂದಿದಳೆಂದೂ, ಹುಟ್ಟಿದ ಮಗನು ಭರದ್ವಾಜನೆಂಬ ಹೆಸರಿನಿಂದಲೇ ಪ್ರಸಿದ್ಧಿಹೊಂದಿದನೆಂದೂ–ಭಾಗವತದಲ್ಲಿ ಹೇಳಿದೆ. ದೇವಪುರೋಹಿತರಾದ ಬೃಹಸ್ಪತಿಯ ಮಗನಾದುದರಿಂದ ಭರದ್ವಾಜರಿಗೆ ದೇವಪೌರೋಹಿತ್ಯವೂ ಪ್ರಾಪ್ತವಾಯಿತು.

ವಸಿಷ್ಠ-ಭರತರೂ ಭರದ್ವಾಜರ ಕುಶಲವನ್ನು ಕೇಳಿದರು. ಶರೀರಾರೋಗ್ಯ, ಅಗ್ನಿಗಳು, ಶಿಷ್ಯರು, ಆಶ್ರಮದಲ್ಲಿನ ವೃಕ್ಷಗಳು, ಪಶು-ಪಕ್ಷಿಗಳು–ಈ ಎಲ್ಲದರ ಸಂಬಂಧವಾದ ಕುಶಲಗಳನ್ನೂ ಭರದ್ವಾಜರನ್ನು ಕೇಳಿದರು.

ಮಹಾತಪಸ್ವಿಗಳಾದ ಭರದ್ವಾಜರು 'ತಥಾ' 'ನಾವೆಲ್ಲರೂ ಕುಶಲಿಗಳಾಗಿದ್ದೇವೆ'–ಎಂದು ಪ್ರತ್ಯುತ್ತರಿಸಿ ಶ್ರೀರಾಮನ ಮೇಲೆ ತಮಗಿದ್ದ ಅಪಾರವಾದ ಪ್ರೀತಿಯಿಂದ ಭರತನನ್ನು ಪ್ರಶ್ನಿಸಿದರು:

ಕಿಮಿಹಾಗಮನೇ ಕಾರ್ಯಂ ತವ ರಾಜ್ಯಂ ಪ್ರಶಾಸತಃ ।
ಏತದಾಚಕ್ಷ್ವ ಮೇ ಸರ್ವಂ ನ ಹಿ ಮೇ ಶುಧ್ಯತೇ ಮನಃ ॥೧೦॥

"ಭರತ! ರಾಜ್ಯವಾಳಿಕೊಂಡಿದ್ದವನು ಇಲ್ಲಿಗೆ ಬಂದುದರ ಕಾರಣವಾದರೂ ಏನು? ಈ ಎಲ್ಲ ವಿಷಯಗಳನ್ನೂ ನನಗೆ ವಿವರಿಸಿ ಹೇಳು. ನೀನು ಬಂದಿರುವ ನಿಜವಾದ ಕಾರಣವನ್ನು ತಿಳಿಯದೇ ನನ್ನ ಮನಸ್ಸು ಸಮಾಧಾನಗೊಳ್ಳುವುದಿಲ್ಲ.

ಕೌಸಲ್ಯಾದೇವಿಯು ಜಗತ್ತಿಗೇ ಆನಂದವರ್ಧಕನಾದ ಮತ್ತು ಶತ್ರುವಿನಾಶಕನಾದ ಯಾವ ಶ್ರೀರಾಮನನ್ನು ಹಡೆದಳೋ ಅಂತಹ ಶ್ರೀರಾಮನನ್ನು ಲಕ್ಷ್ಮಣ-ಸೀತೆಯರೊಡನೆ ಚಿರಕಾಲ ವಾಸಮಾಡಿಕೊಂಡಿರಲು ಕಾಡಿಗೆ ಕಳುಹಿಸಿಯಾಯಿತು. ಹೆಂಗಸೊಬ್ಬಳ ನಿಮಿತ್ತದಿಂದಾಗಿ ತಂದೆಯಾದ ದಶರಥನು ಮಹಾಯಶೋವಂತನಾದ ಶ್ರೀರಾಮನನ್ನು ಹದಿನಾಲ್ಕು ವರ್ಷಗಳು ಅರಣ್ಯದಲ್ಲಿ ವಾಸಮಾಡಿಕೊಂಡಿರುವಂತೆ ಆಜ್ಞಾಪಿಸಿ ಕಾಡಿಗೆ ಕಳುಹಿಸಿದನು. ಹದಿನಾಲ್ಕು ವರ್ಷಗಳು ಕಳೆದನಂತರವೂ ಶ್ರೀರಾಮನ ರಾಜ್ಯವನ್ನು ನಿಷ್ಕಂಟಕವಾಗಿ ಉಪಭೋಗಿಸಬೇಕೆಂಬ ಆಶೆಯಿಂದ ನಿಷ್ಪಾಪನಾದ ಶ್ರೀರಾಮನಿಗೆ ಮತ್ತು ಅವನ ತಮ್ಮನಿಗೆ ಕೇಡನ್ನುಂಟುಮಾಡಲು ಇಲ್ಲಿಗೆ ಬಂದಿಲ್ಲ ತಾನೇ?"

ಭರದ್ವಾಜರು ಹೀಗೆ ಹೇಳಲು ಭರತನಿಗೆ ಬಹಳ ದುಃಖವಾಯಿತು. ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಬಾಯೊಣಗಿತು. ಕಂಠದಿಂದ ಮಾತೇ ಹೊರಡದಾಯಿತು. ಗದ್ಗದಸ್ವರದಿಂದ ಉತ್ತರಿಸಿದನು:

ಹತೋಽಸ್ಮಿ ಯದಿ ಮಾಮೇವಂ ಭಗವಾನಪಿ ಮನ್ಯತೇ ।
ಮತ್ತೋ ನ ದೋಷಮಾಶಙ್ಕೇ ನೈವಂ ಮಾಮನುಶಾಧಿ ಹಿ ॥೧೫॥

"ಮುನಿವರ್ಯರೇ! ಭೂತ-ಭವಿಷ್ಯದ್ವರ್ತಮಾನಗಳನ್ನೂ ತಿಳಿದಿರುವ ಪೂಜ್ಯರಾದ ನೀವೇ ಹೀಗೆ ಹೇಳುವುದಾದರೆ–ನಾನು ಸತ್ತಂತೆಯೇ ಸರಿ. ಶ್ರೀರಾಮನ ವನವಾಸಪ್ರಸಂಗದಲ್ಲಿ ನನ್ನದೇನೂ ಅಪರಾಧವಿಲ್ಲವೆಂಬುದರಲ್ಲಿ ನನಗೆ ಸ್ವಲ್ಪವೂ ಸಂಶಯವಿಲ್ಲ. ನಾನು ನಿರಪರಾಧಿಯು. ಆದುದರಿಂದ ತಾವು ದಯಮಾಡಿ ಹೀಗೆ ನನ್ನನ್ನು ಕಠೋರವಾದ ಮಾತುಗಳಿಂದ ಚುಚ್ಚಬಾರದು.

ನಾನು ಬಹಳ ದೂರದಲ್ಲಿದ್ದಾಗ ನಮ್ಮ ತಾಯಿಯು ಏನು ಹೇಳಿದಳೋ ಅಥವಾ ಏನು ಮಾಡಿದಳೋ–ಅವೆಲ್ಲವೂ ನನಗೆ ಸಮ್ಮತವಲ್ಲ. ಅವಳ ಈ ಕಾರ್ಯದಿಂದ ನಾನು ಸಂತುಷ್ಟನೂ ಆಗಿಲ್ಲ. ಅವಳ ಮಾತನ್ನು ನಾನು ಗಣನೆಗೇ ತೆಗೆದುಕೊಂಡಿಲ್ಲ. ನಾನಾದರೋ ನರಶ್ರೇಷ್ಠನಾದ ಶ್ರೀರಾಮನ ಬಳಿಗೆ ಅವನನ್ನು ಪ್ರಸನ್ನಗೊಳಿಸುವ ಸಲುವಾಗಿಯೇ ಹೋಗುತ್ತಿದ್ದೇನೆ. ಅವನ ಪಾದಗಳಿಗೆ ಅಭಿವಂದಿಸಲು ಹೋಗುತ್ತಿದ್ದೇನೆ. ಹೇಗಾದರೂ ಮಾಡಿ ಅವನನ್ನು ಅಯೋಧ್ಯೆಗೆ ಕರೆತರಲು ಹೋಗುತ್ತಿದ್ದೇನೆ. ಶ್ರೀರಾಮನ ಪ್ರಸನ್ನತೆಯನ್ನೇ ಆಶಿಸಿ ನಾನಲ್ಲಿಗೆ ಹೋಗುತ್ತಿರುವೆನೆಂಬುದನ್ನು ತಿಳಿದ ಮೇಲಾದರೂ ನೀವು ನನ್ನನ್ನು ದಯಮಾಡಿ ಅನುಗ್ರಹಿಸಿರಿ. ಈಗ ಮಹೀಪತಿಯಾದ ಶ್ರೀರಾಮನು ಎಲ್ಲಿರುವನೆಂಬುದನ್ನು ಹೇಳಿರಿ."

ವಸಿಷ್ಠರೇ ಮೊದಲಾದ ಋತ್ವಿಜರೂ–ಭರತನು ನಿರ್ದೋಷಿ ಯೆಂದೂ, ಶ್ರೀರಾಮನ ಮನವೊಲಿಸಿ ಅವನನ್ನು ಅಯೋಧ್ಯೆಗೆ ಕರೆದುಕೊಂಡು ಹೋಗುವ ಸಲುವಾಗಿಯೇ ಬಂದಿರುವನೆಂದೂ, ಅವನ ವಿಷಯದಲ್ಲಿ ಪ್ರಸನ್ನರಾಗಬೇಕೆಂದೂ ಪ್ರಾರ್ಥಿಸಿದನಂತರ ಭರದ್ವಾಜರು ಭರತನ ವಿಷಯದಲ್ಲಿ ಪ್ರಸನ್ನರಾಗಿ ಹೇಳಿದರು:

ತ್ವಯ್ಯೇತತ್ಪುರುಷವ್ಯಾಘ್ರ ಯುಕ್ತಂ ರಾಘವವಂಶಜೇ ।
ಗುರುವೃತ್ತಿರ್ದಮಶ್ಚೈವ ಸಾಧೂನಾಂ ಚಾನುಯಾಯಿತಾ ॥೨೦॥

"ಪುರುಷಶ್ರೇಷ್ಠನೇ! ರಘುವಂಶದಲ್ಲಿ ಹುಟ್ಟಿರುವ ನಿನ್ನಲ್ಲಿ ಅಣ್ಣನನ್ನು

ಅನುಸರಿಸುವಿಕೆ, ಇಂದ್ರಿಯನಿಗ್ರಹ, ಸಾಧು-ಸತ್ಪುರುಷರ ಮಾರ್ಗಾನುಸರಣೆ–ಈ ಮೂರು ಗುಣಗಳೂ ಅನುರೂಪವಾಗಿಯೇ ಇವೆ. ಭರತ! ನನಗೆ ನೀನು ಬಂದಿರುವ ಕಾರ್ಯದ ವಿಷಯವಾಗಲೀ–ನಿನ್ನ ಮನೋಭಿಪ್ರಾಯವಾಗಲೀ ತಿಳಿಯದೇ ಇಲ್ಲ. ಆದರೆ ನಾನು ಹಾಗೆ ಕೇಳಲು ಎರಡು ಕಾರಣಗಳಿವೆ. ಅಣ್ಣನಾದ ಶ್ರೀರಾಮನನ್ನು ಅಯೋಧ್ಯೆಗೆ ಕರೆತರಲು ನಿನ್ನ ಮನಸ್ಸನ್ನು ದೃಢೀಕರಿಸುವುದು ಮತ್ತು ನಿನ್ನ ಕೀರ್ತಿಯನ್ನು ಹೆಚ್ಚಿಸುವುದು–ಈ ಎರಡು ಕಾರಣಗಳಿಂದಾಗಿ ನಾನು ನಿನ್ನನ್ನು ಹೀಗೆ ಪ್ರಶ್ನಿಸಿದೆನು.

ಧರ್ಮಜ್ಞನಾದ, ಸೀತಾ-ಲಕ್ಷ್ಮಣಸಮೇತನಾದ ಶ್ರೀರಾಮನು ಎಲ್ಲಿರುವನೆಂಬುದು ನನಗೆ ತಿಳಿದಿದೆ. ಅವನೀಗ ಚಿತ್ರಕೂಟಮಹಾಪರ್ವತದಲ್ಲಿ ವಾಸಮಾಡುತ್ತಿರುವನು. ನಾಳೆಯೇ ನೀನು ಚಿತ್ರಕೂಟಪರ್ವತಕ್ಕೆ ಹೋಗುವಿಯಂತೆ. ಈ ಒಂದು ದಿನ ನಿನ್ನ ಮಂತ್ರಿಗಳೊಡನೆ ಇಲ್ಲಿಯೇ ವಾಸವಾಗಿರು. ಕಾಮಾರ್ಥಗಳ* ರಹಸ್ಯವನ್ನು ತಿಳಿದವನೇ! ನನ್ನ ಈ ಒಂದು ಅಪೇಕ್ಷೆಯನ್ನು ನಡೆಸಿಕೊಡು."

ಪರಮಪೂಜ್ಯರಾದ ಭರದ್ವಾಜರ ಸ್ವಭಾವ-ಗುಣಗಳನ್ನು ಪ್ರತ್ಯಕ್ಷವಾಗಿಯೇ ನೋಡಿ ತಿಳಿದುಕೊಂಡಿದ್ದ, ಪ್ರಸಿದ್ಧಯಶೋವಂತನಾದ ಭರತನು ಹಾಗೆಯೇ ಆಗಲೆಂದು ಹೇಳಿ, ಆ ರಾತ್ರಿಯಲ್ಲಿ ಭರದ್ವಾಜರ ಆಶ್ರಮದಲ್ಲಿಯೇ ಉಳಿದುಕೊಳ್ಳಲು ಮನಸ್ಸುಮಾಡಿದನು.

೯೦ನೆಯ ಸರ್ಗವು ಮುಗಿಯಿತು.

---

* ಇಲ್ಲಿ ಹೇಳಿರುವ ಕಾಮವು ಒಂದು ಶ್ರೇಷ್ಠವಾದ ಪುರುಷಾರ್ಥ. ಅರಿಷಡ್ವರ್ಗಗಳಲ್ಲಿ ಪರಿಗಣಿತವಾಗಿರುವ ದುರ್ಗುಣವಲ್ಲ–ಎಂದು ಶ್ರೀರಂಗಮಹಾಗುರುಗಳು ವಿವರಿಸುತ್ತಿದ್ದರು.

ಅಯೋಧ್ಯಾಕಾಂಡ ೯೧ನೆಯ ಸರ್ಗ

ಭರದ್ವಾಜಮುನಿಗಳಿಂದ ಭರತನಿಗೂ ಮತ್ತು ಅವನ ಅಪಾರವಾದ ಸೈನ್ಯಕ್ಕೂ ದೇವಯೋಗ್ಯವಾದ ಸತ್ಕಾರ

ಕೃತಬುದ್ಧಿಂ ನಿವಾಸಾಯ ತತ್ರೈವ ಸ ಮುನಿಸ್ತದಾ ।
ಭರತಂ ಕೇಕಯೀಪುತ್ರಮಾತಿಥ್ಯೇನ ನ್ಯಮನ್ತ್ರಯತ್ ॥೧॥

ರಾತ್ರಿಯಲ್ಲಿ ಆಶ್ರಮದಲ್ಲಿಯೇ ತಂಗಲು ನಿಶ್ಚಯಿಸಿದ ಭರತನನ್ನು ಭರದ್ವಾಜಮಹರ್ಷಿಗಳು ಆತಿಥ್ಯಕ್ಕೆ ಆಮಂತ್ರಿಸಿದರು. ಆದಕ್ಕೆ ಭರತನು "ಮಹರ್ಷಿಗಳೇ! ಅರ್ಘ್ಯ-ಪಾದ್ಯಾದಿಗಳನ್ನಿತ್ತು ಅರಣ್ಯದಲ್ಲಿ ಸಿಕ್ಕುವ ಕಂದ-ಮೂಲ-ಫಲಗಳನ್ನು ಭೋಜನಾರ್ಥವಾಗಿ ಕೊಟ್ಟುದೇ ಆತಿಥ್ಯ ವಲ್ಲವೇ? ಇದರಿಂದಲೇ ನಾನು ಸಂತುಷ್ಟನಾಗಿರುವೆನು"–ಎಂದು ಹೇಳಿದನು.

ಭರದ್ವಾಜರು ಭರತನ ಆ ಮಾತನ್ನು ಕೇಳಿ ನಸುನಗುತ್ತಾ ಹೇಳಿದರು:

"ಭರತ! ನನ್ನ ಮೇಲೆ ನಿನಗೆ ಅಪಾರವಾದ ಪ್ರೀತಿಯಿರುವುದೆಂಬು ದನ್ನು ನಾನು ತಿಳಿದಿರುವೆನು. ನಾನು ಯಾವುದನ್ನೇ ಕೊಟ್ಟರೂ ನೀನು ತುಷ್ಟನಾಗುವೆಯೆಂಬ ವಿಷಯವೂ ನನಗೆ ತಿಳಿದಿದೆ. ನಿನ್ನ ಮೇಲೆ ನನಗಿರುವ ಪ್ರೀತಿಯು ಅಪಾರವಾದುದು. ಅದಕ್ಕೆ ಅನುಗುಣವಾಗಿಯೇ ನಾನು ನಿನಗೆ ಆತಿಥ್ಯ ಮಾಡಲು ನಿಶ್ಚಯಿಸಿರುವೆನು. ನಿನಗೂ ಮತ್ತು ಈ ನಿನ್ನ ಅಪಾರವಾದ ಸೈನ್ಯಕ್ಕೂ ಭೋಜನಮಾಡಿಸಲು ಬಯಸಿದ್ದೇನೆ. ಇಂತಹ ಸತ್ಕಾರಕ್ಕೆ ನೀನು ಯೋಗ್ಯನಾಗಿರುವೆ. ಅದಿರಲಿ, ಆಶ್ರಮಕ್ಕೆ ಬಹಳ ದೂರದಲ್ಲೇಕೆ ಸೈನ್ಯವನ್ನು ಬಿಟ್ಟುಬಂದೆ? ಚತುರಂಗಬಲಸಮೇತನಾಗಿಯೇ ನೀನೇಕೆ ಆಶ್ರಮಕ್ಕೆ ಬರಲಿಲ್ಲ?"

ಭರದ್ವಾಜರ ಆ ಪ್ರಶ್ನೆಗೆ ಭರತನು ಕೈಮುಗಿದುಕೊಂಡು ಉತ್ತರಿಸಿದನು:

ಸಸೈನ್ಯೋ ನೋಪಯಾತೋಽಸ್ಮಿ ಭಗವನ್ಭಗವದ್ಭಯಾತ್ ॥೬॥

"ಪೂಜ್ಯರೇ! ಮಹಾನುಭಾವರಾದ ತಮಗೆ ತೊಂದರೆಯಾದೀತೆಂಬ ಭಯದಿಂದಾಗಿ ನಾನಿಲ್ಲಿಗೆ ಸೈನ್ಯವನ್ನು ಕರೆತರಲಿಲ್ಲ.

ತಪಸ್ವಿಗಳಿಗೆ ಸೇರಿರುವ ಪ್ರದೇಶಗಳಲ್ಲಿ ರಾಜನೇ ಆಗಲೀ ರಾಜಪುತ್ರನೇ ಆಗಲೀ-ತಪಸ್ವಿಗಳಿಂದ ಪ್ರಯತ್ನಪೂರ್ವಕವಾಗಿ ದೂರವಿರಬೇಕು.

ಅಶ್ವಸೈನ್ಯಪ್ರಮುಖರೂ, ಕಾಲಾಳುಗಳೂ, ಮದಿಸಿದ ಆನೆಗಳೂ ವಿಸ್ತಾರವಾದ ಈ ತಪೋಭೂಮಿಯನ್ನೇ ಸಂಪೂರ್ಣವಾಗಿ ತುಂಬುತ್ತಾ ನನ್ನನ್ನನುಸರಿಸಿ ಬರುತ್ತಿದ್ದಾರೆ. ಬಹುಸಂಖ್ಯಾತರಾದ ಆ ನನ್ನ ಸೈನಿಕರು ಇಲ್ಲಿಗೆ ಬಂದು ಇಲ್ಲಿರುವ ವೃಕ್ಷಗಳನ್ನು ಕಿತ್ತು, ಸರೋವರಗಳನ್ನು ಕದಡಿ ಆಶ್ರಮದಲ್ಲಿರುವ ಪರ್ಣಶಾಲೆಗಳನ್ನು ಅಪವಿತ್ರಗೊಳಿಸಬಾರದೆಂಬ ಆಶಯದಿಂದ ಅವರನ್ನು ದೂರದಲ್ಲಿ ಬಿಟ್ಟು ನಾನೊಬ್ಬನೇ ಇಲ್ಲಿಗೆ ಬಂದೆನು."

"ರಾಜಕುಮಾರ! ನಿನ್ನ ಅಭಿಪ್ರಾಯವು ಸಾಧುವಾಗಿದೆ. ಈಗ ನಾನೇ ಆಜ್ಞೆಮಾಡುತ್ತೇನೆ-ಆನೀಯತಾಮಿತಃ ಸೇನಾ-ಸೈನ್ಯವನ್ನು ಇಲ್ಲಿಗೇ ಕರೆದುಕೊಂಡುಬಾ."

ಮಹರ್ಷಿಗಳಿಂದ ಹೀಗೆ ಆಜ್ಞಪ್ತನಾದ ಭರತನು 'ಹಾಗೆಯೇ ಆಗಲಿ' ಎಂದು ಹೇಳಿ ಸೈನ್ಯವನ್ನು ಆಶ್ರಮದ ಸಮೀಪಕ್ಕೆ ಕರೆತರುವಂತೆ ಹೇಳಿ ಕಳುಹಿಸಿದನು.

ಬಳಿಕ ಭರದ್ವಾಜಮಹರ್ಷಿಗಳು ಅಗ್ನಿಶಾಲೆಯನ್ನು ಪ್ರವೇಶಿಸಿ ಶುದ್ಧಾಚಮನವನ್ನು ಮಾಡಿ ಪ್ರೋಕ್ಷಿಸಿಕೊಂಡು ಅತಿಥಿಸತ್ಕಾರವನ್ನು ಮಾಡುವ ಸಲುವಾಗಿ ವಿಶ್ವಕರ್ಮನನ್ನು ಮಂತ್ರಪೂರ್ವಕವಾಗಿ ಆಹ್ವಾನಿಸಿದರು.

ಆಹ್ವಯೇ ವಿಶ್ವಕರ್ಮಾಣಮಹಂ ತ್ವಷ್ಟಾರಮೇವ ಚ ।
ಆತಿಥ್ಯಂ ಕರ್ತುಮಿಚ್ಛಾಮಿ ತತ್ರ ಮೇ ಸಂವಿಧೀಯತಾಮ್ ॥೧೨॥

"ದೇವಶಿಲ್ಪಿಯಾದ ವಿಶ್ವಕರ್ಮನನ್ನೂ, ದೇವಗೃಹನಿರ್ಮಾಪಕನಾದ ತ್ವಷ್ಟನನ್ನೂ ಆಹ್ವಾನಿಸುತ್ತೇನೆ. ಭರತನಿಗೂ ಅವನ ಸೈನ್ಯಕ್ಕೂ ಆತಿಥ್ಯ ಮಾಡಲು ಬಯಸಿದ್ದೇನೆ. ಅದಕ್ಕಾಗಿ ನೀವೆಲ್ಲರೂ ಯಥೋಚಿತವಾದ ವ್ಯವಸ್ಥೆಗಳನ್ನು ಮಾಡಿರಿ.

ಇಂದ್ರನೊಡನೆ ಯಮ, ವರುಣ, ಕುಬೇರ—ಈ ಮೂವರು ಲೋಕಪಾಲರನ್ನೂ ದೇವತೆಗಳನ್ನೂ ಆಹ್ವಾನಿಸುತ್ತೇನೆ. ಭರತನಿಗೂ ಭರತನ ಸೈನ್ಯಕ್ಕೂ ಆತಿಥ್ಯಮಾಡಲು ಬಯಸಿದ್ದೇನೆ. ಅದಕ್ಕಾಗಿ ನೀವೆಲ್ಲರೂ ಯಥೋಚಿತವಾದ ವ್ಯವಸ್ಥೆಗಳನ್ನು ಮಾಡಿರಿ.

ಪೃಥ್ವಿಯಲ್ಲಿಯೂ ಮತ್ತು ಅಂತರಿಕ್ಷದಲ್ಲಿಯೂ ಪೂರ್ವದಿಕ್ಕಿಗೆ ಹರಿಯುವ ಎಲ್ಲ ನದಿಗಳೂ, ಪಶ್ಚಿಮದಿಕ್ಕಿಗೆ ಹರಿಯುವ ಎಲ್ಲ ನದಿಗಳೂ ನನ್ನ ಆಹ್ವಾನವನ್ನು ಅಂಗೀಕರಿಸಿ ಭರತನ ಪರಿವಾರದ ಆತಿಥ್ಯದ ಸಲುವಾಗಿ ಒಡ ನೆಯೇ ಆಗಮಿಸಲಿ. ಕೆಲವು ನದಿಗಳು ಮೈರೇಯವನ್ನೂ, ಕೆಲವು ನದಿಗಳು ಚೆನ್ನಾಗಿ ಪರಿಶೋಧಿಸಿ ಮಾಡಿದ ಸುರೆಯನ್ನೂ, ಕೆಲವು ನದಿಗಳು ಕಬ್ಬಿನ ಹಾಲಿನಂತೆ ರುಚಿಕರವಾದ ಶೀತೋದಕವನ್ನೂ ಸುರಿಸಲಿ.* ವಿಶ್ವಾವಸು- ಹಾಹಾ-ಹೂಹೂ ಇವರೇ ಮುಂತಾದ ದೇವಗಂಧರ್ವರನ್ನೂ ದೇವಗಂಧರ್ವ ಜಾತಿಯ ಅಪ್ಸರಸ್ತ್ರೀಯರನ್ನೂ ಭರತನ ಪರಿವಾರದವರ ಸತ್ಕಾರಕ್ಕಾಗಿ ಆಹ್ವಾನಿಸುತ್ತೇನೆ. ಅಪ್ಸರಸೆಯರಲ್ಲಿ ಮುಖ್ಯರಾದ ಘೃತಾಚೀ-ವಿಶ್ವಾಚೀ-ಮಿಶ್ರಕೇಶೀ-ಅಲಂಬುಸಾ-ನಾಗದಂತಾ-ಹೇಮಾ-ಸೋಮಾ ಮತ್ತು ಅದ್ರಿಕೃತ ಸ್ಥಲೀ-ಇವರನ್ನೂ ಆಹ್ವಾನಿಸುತ್ತೇನೆ. ಇಂದ್ರನನ್ನು ಉಪಚರಿಸುವ ರಂಭೆ-ಉರ್ವಶಿಯರನ್ನೂ, ಬ್ರಹ್ಮನನ್ನು ಉಪಚರಿಸುವ ಭಾಮಿನಿಯರನ್ನೂ-ದೇವ ಗಾಯನಪಟುಗಳಾದ ತುಂಬುರರೊಡನೆ ಆಹ್ವಾನಿಸುತ್ತೇನೆ. ಅವರೆಲ್ಲರೂ ಅಲಂಕೃತರಾಗಿ ನೃತ್ಯ-ಗೀತಾದಿಗಳಿಗೆ ಬೇಕಾಗುವ ಉಪಕರಣಗಳೊಡನೆ ಆಗಮಿಸಲಿ. ಉತ್ತರಕುರುಗಳ ದೇಶದಲ್ಲಿರುವ ದಿವ್ಯವಾದ ಚೈತ್ರರಥವು (ಕುಬೇರನ ಉದ್ಯಾನವನವು) ಇಲ್ಲಿಗೆ ಆಗಮಿಸಲಿ. ಆ ಉದ್ಯಾನವನದಲ್ಲಿರುವ ವೃಕ್ಷಗಳಲ್ಲಿ ಉತ್ತಮೋತ್ತಮವಾದ ವಸ್ತ್ರಗಳೂ ಮತ್ತು ಆಭರಣಗಳೂ ಎಲೆಗಳ ರೂಪದಲ್ಲಿರಲಿ. ದೇವಲೋಕದ ನಾರಿಯರೇ ಹಣ್ಣುಗಳ ರೂಪದಲ್ಲಿರಲಿ. ಕುಬೇರನಿಗೆ ಸಂಬಂಧಿಸಿದ ಆ ಚೈತ್ರರಥೋದ್ಯಾನವು ಇಲ್ಲಿಗೆ

---

* ಮೈರೇಯಂ= ಮಿರಾದೇಶಭವಂ ಮೈರೇಯಂ, ಮಿರಾ ಎಂಬ ದೇಶದಲ್ಲಿ ಸಿದ್ಧಪಡಿಸುವುದು ಮೈರೇಯ. ಖರ್ಜೂರಾದಿಗಳಿಂದ ಮಾಡಿದ ಮದ್ಯವಿಶೇಷ. ಸುರೆಯಲ್ಲಿ ಮೂರು ವಿಧಗಳಿವೆ. ಗೌಡೀ ಪೈಷ್ಟೀ ಚ ಮಾಧ್ವೀ ಚ ವಿಜ್ಞೇಯಾ ತ್ರಿವಿಧಾ ಸುರಾ|| ಗೌಡೀ, ಪೈಷ್ಟೀ ಮತ್ತು ಮಾಧ್ವೀ—ಇವು ಮೂರು ಸುರೆಯ ಪ್ರಭೇದಗಳು.

ಈಗಲೇ ಬರುವಂತಾಗಲಿ. ಓಷಧಿಗಳ ಅಧಿಪತಿಯಾದ ಚಂದ್ರನು ಇಲ್ಲಿಯೇ ಉತ್ತಮವಾದ ಅನ್ನವನ್ನೂ ನಾನಾವಿಧವಾದ ಭಕ್ಷ್ಯಗಳನ್ನೂ ಭೋಜ್ಯಗಳನ್ನೂ, ಬಗೆ-ಬಗೆಯ ಲೇಹ್ಯ-ಚೋಷ್ಯಗಳನ್ನೂ ಸಿದ್ಧಮಾಡಲಿ. ಆಗ ತಾನೇ ಬಿಡಿಸಿದ ಹೂಗಳಿಂದ ಕಟ್ಟಿದ ಮಾಲೆಗಳನ್ನೂ, ಸುರೆಗಳನ್ನೂ, ಬಗೆ-ಬಗೆಯ ರಾಜಭೋಗ್ಯವಾದ ಮಾಂಸಗಳನ್ನೂ ಸಿದ್ಧಪಡಿಸಲಿ.*

ಏವಂ ಸಮಾಧಿನಾ ಯುಕ್ತಸ್ತೇಜಸಾಪ್ರತಿಮೇನ ಚ ।
ಶಿಕ್ಷಾಸ್ವರಸಮಾಯುಕ್ತಂ ಸುವ್ರತಶ್ಚಾಬ್ರವೀನ್ಮುನಿಃ ॥೨೨॥

ಹೀಗೆ ಅಪ್ರತಿಮವಾದ ತೇಜಸ್ಸಿನಿಂದ ಕೂಡಿದ್ದ ಸುವ್ರತರಾದ ಭರದ್ವಾಜಮುನಿಗಳು ಸಮಾಧಿಸ್ಥರಾಗಿ ಶಿಕ್ಷಾ-ಸ್ವರಗಳಿಂದ ಕೂಡಿರುವ ಮಹಾಮಂತ್ರಗಳನ್ನು ಹೇಳಿ ದೇವತೆಗಳನ್ನು ಆಹ್ವಾನಿಸಿದರು.

ಏಕಾಗ್ರಚಿತ್ತದಿಂದ ಧ್ಯಾನಮಾಡುತ್ತಾ ಪೂರ್ವಾಭಿಮುಖವಾಗಿ ಕೈಮುಗಿದುಕೊಂಡು ಕುಳಿತಿದ್ದ ಭರದ್ವಾಜಮಹರ್ಷಿಗಳ ಸಮೀಪಕ್ಕೆ ಎಲ್ಲ ದೇವತೆಗಳೂ ಪ್ರತ್ಯೇಕವಾಗಿ ಆಗಮಿಸಿದರು. ಮಲಯ-ದರ್ದುರಪರ್ವತಗಳ ಮೇಲೆ ಬೀಸಿ ಅತ್ಯಂತಪ್ರಿಯನೂ ಸುಖದಾಯಕನೂ ಆಗಿರುವ, ಬೆವರನ್ನು ಹೋಗಲಾಡಿಸುವ, ಸುಖಕರನಾದ ಮತ್ತು ಮಂಗಳಕರನಾದ ವಾಯುದೇವನು ಭರದ್ವಾಜಮಹರ್ಷಿಗಳ ಆಶ್ರಮವನ್ನು ಸ್ಪರ್ಶಿಸಿ ಒಳ್ಳೆಯ ಯೋಗದಿಂದ ಕೂಡಿ ಎಲ್ಲರಿಗೂ ಆಪ್ಯಾಯಮಾನವಾಗುವ ರೀತಿಯಲ್ಲಿ ಬೀಸತೊಡಗಿದನು. ಆಶ್ರಮದ ಮೇಲೆ ನಿರಂತರವಾಗಿ ದೇವಲೋಕದಿಂದ ದಿವ್ಯಕುಸುಮಗಳ ವೃಷ್ಟಿ ಯಾಗುತ್ತಿದ್ದಿತು. ಎಲ್ಲ ದಿಕ್ಕುಗಳಲ್ಲಿಯೂ ದೇವದುಂದುಭಿಗಳ ನಿನಾದಗಳು ಕೇಳಿಬರುತ್ತಿದ್ದುವು. ಉತ್ತಮವಾದ ಸುಗಂಧಯುಕ್ತವಾದ ಗಾಳಿಯು ಬೀಸುತ್ತಿದ್ದಿತು. ಅಪ್ಸರೆಯರು ನೃತ್ಯಮಾಡುತ್ತಿದ್ದರು. ದೇವ-ಗಂಧರ್ವರು ಗಾನಮಾಡುತ್ತಿದ್ದರು. ಎಲ್ಲ ದಿಕ್ಕುಗಳಿಂದಲೂ ವೀಣೆಗಳು ಸ್ವರಗಳನ್ನು ಹೊರ ಹೊಮ್ಮಿಸುತ್ತಿದ್ದುವು. ಮಂದ್ರ-ಮಧ್ಯಮ-ತಾರಶ್ರುತಿಸಂಯುಕ್ತವಾದ, ಲಯಗುಣಾನ್ವಿತವಾದ, ಅತ್ಯಂತಮಧುರವಾದ, ಆರೋಹಣಾವರೋಹಣ ಗಳಿಂದ ಕೂಡಿರುವ ಆ ದಿವ್ಯಗಾನದ ಶಬ್ದವು ಭೂಮ್ಯಾಕಾಶಗಳನ್ನೂ,

---

* ಭಕ್ಷ್ಯಂ =ಅಪೂಪಾದಿಗಳು, ಭೋಜ್ಯಂ= ಅನ್ನ-ಓಗರಾಗಳು, ಚೋಷ್ಯಂ= ಅಗಿದು ತಿನ್ನುವ ಪದಾರ್ಥಗಳು, ಲೇಹ್ಯಂ= ರಸಾಯನಾದಿಗಳು.

ಪ್ರಾಣಿಗಳ ಕರ್ಣಪಟಲಗಳನ್ನೂ ಪ್ರವೇಶಿಸಿತು. ದೈವಿಕವಾದ, ಮನುಷ್ಯರಿಗೆ ಕರ್ಣಾನಂದಕರವಾದ ಸಂಗೀತದ ಸುಮಧುರವಾದ ಶಬ್ದವು ಹೀಗೆ ಎಲ್ಲೆಡೆ ವ್ಯಾಪಿಸುತ್ತಿರುವಾಗ ಭರತನ ಸಂಬಂಧಿಯಾದ ಚತುರಂಗಬಲವು ವಿಶ್ವಕರ್ಮನ ನಿರ್ಮಾಣದ ವಿಧಾನವನ್ನು ಅವಲೋಕಿಸಿತು. ಇಂದ್ರನೀಲ-ವೈಡೂರ್ಯಗಳ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿದ್ದ, ಗರಿಕೆಯ ಹುಲ್ಲಿನಿಂದ ವ್ಯಾಪ್ತವಾಗಿದ್ದ ಆ ಆಶ್ರಮಪ್ರದೇಶವು ಐದು ಯೋಜನಗಳ ಸುತ್ತಳತೆಯಲ್ಲಿ ಹಳ್ಳ-ತಿಟ್ಟುಗಳಿಲ್ಲದೇ ಸಮವಾಗಿ ಮಾಡಲ್ಪಟ್ಟಿತು. ಸಮತಟ್ಟಿನ ಆ ಭೂಮಿಯಲ್ಲಿ ಬೇಲ, ಹಲಸು, ಬಿಲ್ವ, ನೆಲ್ಲಿ, ಸೀಬೆ, ಮಾವು–ಇವೇ ಮುಂತಾದ ಫಲಭರಿತವಾದ ವೃಕ್ಷಗಳಿದ್ದುವು. ದೇವತೆಗಳ ಉಪಭೋಗಕ್ಕೆ ಯೋಗ್ಯವಾದ ಚೈತ್ರರಥವೆಂಬ ಉದ್ಯಾನವನವು ಉತ್ತರಕುರುಗಳ ದೇಶದಿಂದ ಭರದ್ವಾಜರ ಆಶ್ರಮಕ್ಕೆ ಆಗಮಿಸಿತು. ಅದರೊಡನೆಯೇ ತೀರದಲ್ಲಿರುವ ವೃಕ್ಷಗಳಿಂದ ಶೋಭಾಯಮಾನವಾಗಿ ಕಾಣುತ್ತಿದ್ದ–ನದಿಯೂ ಹರಿದುಬಂದಿತು.

ನಾಲ್ಕು ಮಾರ್ಗಗಳು ಕೂಡುವ ಚೌಕಗಳೂ, ಆನೆ-ಕುದುರೆಗಳ ಶುಭ್ರವಾದ ಲಾಯಗಳೂ, ಧನಿಕರ ವಾಸಕ್ಕೆ ಯೋಗ್ಯವಾದ ತೋರಣಸಹಿತವಾದ ಪ್ರಾಸಾದಗಳೂ ಉಪಸ್ಥಿತವಾದುವು. ರಾಜಪರಿವಾರದವರಿಗೆಂದೇ ಸಿದ್ಧಗೊಳಿಸಲ್ಪಟ್ಟಿದ್ದ, ಸುಂದರವಾದ ಬಾಗಿಲುಗಳನ್ನು ಹೊಂದಿದ್ದ ರಾಜಭವನವು ಬಿಳಿಯ ಮೋಡದಂತೆಯೇ ಶೋಭಾಯಮಾನವಾಗಿ ಕಾಣುತ್ತಿದ್ದಿತು. ಆ ರಾಜಭವನವನ್ನು ಬಿಳಿಯ ಹೂಗಳ ಮಾಲೆಗಳಿಂದ ಸಿಂಗರಿಸಿದ್ದರು. ಸುಗಂಧಯುಕ್ತವಾದ ನೀರನ್ನು ಅರಮನೆಯ ಎಲ್ಲ ಕಡೆಗಳಲ್ಲಿಯೂ ಚಿಮುಕಿಸಿದ್ದರು. ಆ ರಾಜಭವನವು ನಾಲ್ಕು ಮೂಲೆಗಳಿಂದ ಕೂಡಿದ್ದು ವಿಶಾಲವಾಗಿದ್ದಿತು. ಮಲಗಲು ಹಂಸತೂಲಿಕಾತಲ್ಪಗಳಿದ್ದುವು. ಕುಳಿತುಕೊಳ್ಳಲು ಸಿಂಹಾಸನಗಳಿದ್ದುವು. ಪಲ್ಲಕ್ಕಿಗಳಿದ್ದುವು. ದಿವ್ಯವಾದ ಸರ್ವರಸಯುಕ್ತವಾದ ಭೋಜನವು ಸಿದ್ಧವಾಗಿದ್ದಿತು. ದಿವ್ಯವಸ್ತ್ರಗಳಿಂದ ರಾಜಭವನವು ಸಂಪನ್ನವಾಗಿದ್ದಿತು. ಸಕಲವಿಧವಾದ ಅನ್ನಗಳಿಂದಲೂ, ಶುದ್ಧಮಾಡಲ್ಪಟ್ಟ ನಿರ್ಮಲವಾದ ತಟ್ಟೆಗಳಿಂದಲೂ ಕೂಡಿದ್ದಿತು. ರಾಜಭವನದಲ್ಲಿ ಅನೇಕಪ್ರಕಾರವಾದ ಆಸನಗಳಿದ್ದುವು. ಮಲಗಲು ಸುಂದರವಾದ ಹಾಸಿಗೆಗಳು ಹಾಸಲ್ಪಟ್ಟಿದ್ದುವು

ಮಹಾಬಾಹುವಾದ ಭರತನು ಮಹರ್ಷಿಗಳ ಅನುಮತಿಯನ್ನು ಪಡೆದು ಭವ್ಯವಾದ, ನವರತ್ನಗಳಿಂದಲೂ ತುಂಬಿಹೋಗಿದ್ದ ರಾಜಭವನವನ್ನು ಪ್ರವೇಶಿಸಿದನು. ಅವನನ್ನು ಅನುಸರಿಸಿ ಮಂತ್ರಿ-ಪುರೋಹಿತರು ಆ ದಿವ್ಯವಾದ ಅರಮನೆಯನ್ನು ಪ್ರವೇಶಿಸಿದರು. ಕ್ಷಣಮಾತ್ರದಲ್ಲಿ ನಿರ್ಮಿತ ವಾಗಿದ್ದ ಆ ರಾಜಭವನದ ಕಲಾಕೌಶಲ್ಯವನ್ನೂ, ಸೌಂದರ್ಯವನ್ನೂ ನೋಡಿ ಎಲ್ಲರೂ ಸಂತೋಷಭರಿತರಾದರು. ಆ ರಾಜಭವನದಲ್ಲಿ ಛತ್ರ-ಚಾಮರ ಗಳೂ, ದಿವ್ಯವಾದ ಸಿಂಹಾಸನವೂ ಇದ್ದಿತು. ಅಲ್ಲಿ ಶ್ರೀರಾಮನೇ ಇರುವನೆಂದು ಭಾವಿಸಿ ಭರತನು ಅಲ್ಲಿದ್ದ ರಾಜಯೋಗ್ಯವಾದ ಎಲ್ಲ ವಸ್ತುಗಳನ್ನೂ ಮಂತ್ರಿಗಳೊಡನೆ ಪ್ರದಕ್ಷಿಣೆಮಾಡಿದನು.

ಬಳಿಕ ಭರತನು ಸಿಂಹಾಸನವನ್ನು ಪೂಜಿಸಿದನು. ಶ್ರೀರಾಮನೇ ಸಿಂಹಾಸನದಲ್ಲಿ ಕುಳಿತಿರುವನೆಂದು ಭಾವಿಸಿ ನಮಸ್ಕರಿಸಿದನು. ಚಾಮರವನ್ನು ಕೈಯಲ್ಲಿ ಹಿಡಿದು ಸಿಂಹಾಸನಕ್ಕೆ ಬೀಸುತ್ತಾ ಸಿಂಹಾಸನದ ಪಕ್ಕದಲ್ಲಿದ್ದ, ಮಂತ್ರಿಗಳು ಕುಳಿತುಕೊಳ್ಳುವ ಆಸನದಲ್ಲಿ ಭರತನು ಕುಳಿತನು. ಎಲ್ಲ ಮಂತ್ರಿ-ಪುರೋಹಿತರೂ ಯಥಾನುಕ್ರಮವಾಗಿ ಭರತನನ್ನು ಅನುಸರಿಸಿ ಕುಳಿತರು. ಅನಂತರ ಸೇನಾಪತಿಯೂ, ಅವನ ಪಕ್ಕದಲ್ಲಿ ಶಿಬಿರರಕ್ಷಕನೂ ಕುಳಿತುಕೊಂಡರು. ಭರತಾದಿಗಳು ಆಸನಗಳಲ್ಲಿ ಕುಳಿತು ಮುಹೂರ್ತಕಾಲವು ಕಳೆಯುವುದರೊಳಗಾಗಿ ಪಾಯಸವೇ ಕೆಸರಾಗಿ ಉಳ್ಳ ನದಿಗಳು ಭರದ್ವಾಜರ ಆಜ್ಞಾನುಸಾರವಾಗಿ ಭರತನ ಬಳಿಯಲ್ಲಿ ಉಪಸ್ಥಿತವಾದುವು. ಆ ನದಿಗಳ ಎರಡು ತೀರಗಳಲ್ಲಿಯೂ ಬಿಳುಪಾದ ಮಣ್ಣಿನಿಂದ ಲೇಪಿತವಾಗಿದ್ದ, ಬಹು ರಮ್ಯವಾಗಿದ್ದ, ಭರದ್ವಾಜರ ಅನುಗ್ರಹದಿಂದ ನಿರ್ಮಿತವಾಗಿದ್ದ ದಿವ್ಯವಾದ ಮನೆಗಳಿದ್ದುವು. ಅದೇ ಮುಹೂರ್ತದಲ್ಲಿ ಬ್ರಹ್ಮನಿಂದ ಕಳುಹಿಸಲ್ಪಟ್ಟ ದಿವ್ಯಾಭರಣಭೂಷಿತೆಯರಾದ ಇಪ್ಪತ್ತುಸಾವಿರ ಸ್ತ್ರೀಯರು ಆಗಮಿಸಿದರು. ಬಳಿಕ ಸುವರ್ಣಾಭರಣಗಳಿಂದಲೂ ಮಣಿ ಮತ್ತು ಮುಕ್ತಾಹಾರಗಳಿಂದಲೂ ಶೋಭಾಯಮಾನವಾಗಿದ್ದ, ಕುಬೇರನಿಂದ ಕಳುಹಿಸಲ್ಪಟ್ಟ ಇಪ್ಪತ್ತುಸಾವಿರ ಸ್ತ್ರೀಯರು ಆಗಮಿಸಿದರು. ಯಾವ ಸ್ತ್ರೀಯರಿಂದ ಆಲಿಂಗಿಸಲ್ಪಟ್ಟ ಪುರುಷನು ಒಡನೆಯೇ ಉನ್ಮಾದಾವಸ್ಥೆಯನ್ನು ಹೊಂದುವನೋ–ಅಂತಹ

ಕಡುಚೆಲುವೆಯರಾದ* ಇಪ್ಪತ್ತುಸಾವಿರ ಮಂದಿ ಅಪ್ಸರೆಯರು ನಂದನವನದಿಂದ ಆಗಮಿಸಿದರು.

ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ನಾರದ, ತುಂಬುರು, ಗೋಪ–ಎಂಬ ಮೂವರು ಗಂಧರ್ವರಾಜರು ಭರತನ ಮುಂದೆ ಗೀತೆಗಳನ್ನು ಗಾಯನಮಾಡಿದರು. ಅಲಂಬುಸಾ, ಮಿಶ್ರಕೇಶೀ, ಪುಂಡರೀಕಾ, ವಾಮನಾ–ಇವರೇ ಮೊದಲಾದ ಅಪ್ಸರೆಯರು ಭರದ್ವಾಜರ ಆಜ್ಞೆಯಂತೆ ಭರತನ ಸಮೀಪದಲ್ಲಿ ನೃತ್ಯಮಾಡಿದರು. ದೇವಲೋಕದಲ್ಲಿ ಯಾವ ಪುಷ್ಪಮಾಲಿಕೆಗಳಿದ್ದುವೋ, ಚೈತ್ರರಥವನದಲ್ಲಿ ಯಾವ ಪುಷ್ಪ ಮಾಲಿಕೆಗಳಿದ್ದುವೋ ಅವೆಲ್ಲವೂ ಭರದ್ವಾಜಮಹರ್ಷಿಗಳ ತೇಜಃಪ್ರಭಾವದಿಂದ ಪ್ರಯಾಗದಲ್ಲಿ ಕಾಣಿಸಿಕೊಂಡುವು. ಹಿಂದೆಂದೂ ನಡೆಯದಿದ್ದ ಮುಂದೆಂದೂ ನಡೆಯಲು ಸಾಧ್ಯವಿಲ್ಲದ ಅತ್ಯದ್ಭುತದೃಶ್ಯಗಳನ್ನು ಭರತಾದಿಗಳು ವೀಕ್ಷಿಸಿದರು. ಬಿಲ್ವವೃಕ್ಷಗಳು ಮೃದಂಗಗಳನ್ನು ಬಾರಿಸುತ್ತಿದ್ದುವು. ವಿಭೀತಕ ವೃಕ್ಷಗಳು ತಾಳಹಾಕುತ್ತಿದ್ದುವು. ಅಶ್ವತ್ಥವೃಕ್ಷಗಳು ನರ್ತನಮಾಡುತ್ತಿದ್ದುವು. ಭರದ್ವಾಜಮಹರ್ಷಿಗಳ ತೇಜಃಪ್ರಭಾವದಿಂದ ವೃಕ್ಷಾದಿಗಳೂ ಭರತನನ್ನೂ ಅವನ ಪರಿವಾರದವರನ್ನೂ ಉಪಚರಿಸಿದುವು. ಅನಂತರ ಎತ್ತರವಾಗಿ ಬೆಳೆದಿರುವ ದೇವದಾರು-ತಾಲ-ತಿಲಕ-ತಮಾಲವೃಕ್ಷಗಳು ಸಂತೋಷಗೊಂಡು ವಕ್ರವಾದ ಕಿರುಗಿಡಗಳಂತಾಗಿ ಭರತನ ಆತಿಥ್ಯದಲ್ಲಿ ಭಾಗವಹಿಸಿದುವು. ಶಿಂಶುಪ, ಆಮಲಕ, ನೇರಳೆ–ಇವೇ ಮುಂತಾದ ವೃಕ್ಷಗಳೂ ಮಾಲತೀ, ಮಲ್ಲಿಕಾ–ಇವೇ ಮುಂತಾದ ಲತೆಗಳೂ ಪ್ರಮದೆಯರ ವೇಷಗಳನ್ನು ಧರಿಸಿ ಭರದ್ವಾಜರ ಆಶ್ರಮದಲ್ಲಿದ್ದುವು. ಹೆಣ್ಣುರೂಪಗಳನ್ನು ಧರಿಸಿದ್ದ ಆ ಲತೆಗಳು "ಸುರಾಪಾನಮಾಡುವವರೇ! ಯಥೇಚ್ಛವಾಗಿ ಸುರೆಯನ್ನು ಪಾನಮಾಡಿರಿ. ಹಸಿದಿರುವವರೇ! ಯಥೇಚ್ಛವಾಗಿ ಪಾಯಸವನ್ನು ಕುಡಿಯಿರಿ. ಚೆನ್ನಾಗಿ ಪಕ್ವವಾದ ಮತ್ತು ಪರಿಶುದ್ಧವಾದ ಮಾಂಸವನ್ನು ಭಕ್ಷಿಸಿರಿ. ನಿಮ್ಮ

---

*"ಗನ್ಧರ್ವಾಪ್ಸರಸೋ ವಾ ಏತಮುನ್ಮಾದಯನ್ತಿ" ಎಂಬ ಶ್ರುತಿವಚನದಂತೆ ಅಪ್ಸರೆಯರು ದರ್ಶನಮಾತ್ರದಿಂದಲೇ ಪುರುಷರನ್ನು ಉನ್ಮತ್ತರನ್ನಾಗಿ ಮಾಡುವಷ್ಟು ಚೆಲುವೆಯರಾಗಿರುತ್ತಾರೆ.

ಅಪೇಕ್ಷೆಯು ಪೂರೈಸುವವರೆಗೂ ಎಲ್ಲವನ್ನೂ ಯಥೇಚ್ಛವಾಗಿ ನಿಸ್ಸಂಕೋಚವಾಗಿ ತಿನ್ನಿರಿ"—ಎಂದು ಬಾರಿ-ಬಾರಿಗೂ ಹೇಳುತ್ತಿದ್ದುವು.

ನದೀತೀರದಲ್ಲಿದ್ದ ಸುಮನೋಹರವಾದ ಪ್ರದೇಶದಲ್ಲಿ ಏಳೆಂಟು ಮಂದಿ ಸ್ತ್ರೀಯರು ಭರತನ ಒಬ್ಬೊಬ್ಬ ಸೈನಿಕನನ್ನೂ ಕರೆದೊಯ್ದು ಸುಗಂಧದ ತೈಲಗಳನ್ನು ಮೈಗೆ ಪೂಸಿ ಸ್ನಾನಮಾಡಿಸುತ್ತಿದ್ದರು. ಮೈಯ್ಯನ್ನೆಲ್ಲಾ ಚೆನ್ನಾಗಿ ಉಜ್ಜುತ್ತಿದ್ದರು. ಪುನಃ ಸ್ನಾನಮಾಡಿಸಿ ಶುಭ್ರವಾದ ಮತ್ತು ಮೃದುವಾದ ವಸ್ತ್ರಗಳಿಂದ ಶರೀರವನ್ನು ಒರೆಸುತ್ತಿದ್ದರು. ಮೈಯೊತ್ತು ತ್ತಿದ್ದರು. ಅನಂತರ ಕಣ್ಣಿಗೆ ಬೇಕಾದ ವಸ್ತ್ರಾಭರಣಗಳನ್ನು ತೊಡಿಸಿ ಕುಡಿಯಲು ಪಾನೀಯಗಳನ್ನು ಕೊಡುತ್ತಿದ್ದರು. ಉಪಚಾರಗಳು ಸೈನಿಕರಿಗೆ ಮಾತ್ರವೇ ಸೀಮಿತವಾಗಿರಲಿಲ್ಲ. ವಾಹನರಕ್ಷಕರು ಕುದುರೆಗಳನ್ನೂ, ಆನೆಗಳನ್ನೂ, ಹೇಸರಗತ್ತೆಗಳನ್ನೂ, ಒಂಟೆಗಳನ್ನೂ, ಎತ್ತುಗಳನ್ನೂ ಕರೆದೊಯ್ದು ಅವುಗಳಿಗೆ ಬೇಕಾದ ಆಹಾರಗಳನ್ನು ತಿನ್ನಿಸಿ ಯಥಾ ವಿಧಿಯಾಗಿ ಉಪಚರಿಸುತ್ತಿದ್ದರು. ಮಹಾಬಲವಾದ ಪಶುಪಾಲಕರು ಶ್ರೇಷ್ಠರಾದ ಇಕ್ಷ್ವಾಕುಯೋಧರ ವಾಹನಗಳಿಗೆ (ಆನೆ-ಕುದುರೆಗಳಿಗೆ) ಕಬ್ಬು, ಮಧುಮಿಶ್ರವಾದ ಅರಳು ಮುಂತಾದುವನ್ನು ಬಲಾತ್ಕರಿಸುತ್ತಾ ತಿನ್ನಿಸುತ್ತಿದ್ದರು. ಕುದುರೆಯನ್ನು ಕಟ್ಟಿಹಾಕುವವನಿಗೆ ತಾನು ಕಟ್ಟಿಹಾಕ ಬೇಕಾದ ಕುದುರೆಯು ಯಾವುದೆಂದು ತಿಳಿಯಲಿಲ್ಲ. ಆನೆಯನ್ನು ಕಟ್ಟಿಹಾಕುವವನಿಗೆ ತಾನು ಕಟ್ಟಿಹಾಕಬೇಕಾದ ಆನೆಯು ಯಾವುದೆಂಬುದು ತಿಳಿಯಲಿಲ್ಲ. ಸೈನಿಕರೆಲ್ಲರೂ ಮತ್ತರಾಗಿಯೂ ಪ್ರಮತ್ತರಾಗಿಯೂ ಇದ್ದರು. ಮನೋವಾಂಛಿತವಾದ ಸಕಲಕಾಮನೆ ಗಳಿಂದಲೂ ಅವರು ತೃಪ್ತಿಹೊಂದಿದ್ದರು. ಎಲ್ಲರೂ ಘಮ-ಘಮಿಸುವ ರಕ್ತಚಂದನವನ್ನು ಪೂಸಿ ಕೊಂಡಿದ್ದರು. ಅಪ್ಸರೆಯರ ಜೊತೆಗೂಡಿದ್ದರು. ಇಂತಹ ಅಪೂರ್ವವಾದ ಭೋಗವನ್ನು ಅನುಭವಿಸುತ್ತಾ ಸೈನಿಕರು ಉದ್ಗರಿಸುತ್ತಿದ್ದರು.

ನೈವಾಯೋಧ್ಯಾಂ ಗಮಿಷ್ಯಾಮೋ ನ ಗಮಿಷ್ಯಾಮ ದಣ್ಡಕಾನ್ ।
ಕುಶಲಂ ಭರತಸ್ಯಾಸ್ತು ರಾಮಸ್ಯಾಸ್ತು ತಥಾ ಸುಖಮ್ ॥೫೯॥

"ನಾವಿನ್ನು ಅಯೋಧ್ಯೆಗೂ ಹೋಗುವುದಿಲ್ಲ. ಭರತನ ಜೊತೆಯಲ್ಲಿ ದಂಡಕಾರಣ್ಯಕ್ಕೂ ಹೋಗುವುದಿಲ್ಲ. ಯಾವಾತನ ಕಾರಣದಿಂದ ಈ

ಭೂಮಿಯಲ್ಲೇ ಸ್ವರ್ಗಸುಖವನ್ನು ಅನುಭವಿಸುತ್ತಿರುವೆವೋ–ಅಂತಹ ಭರತನು ಕುಶಲಿಯಾಗಿರಲಿ. ಯಾವನ ದರ್ಶನಕ್ಕಾಗಿ ಹೊರಟ ನಾವು ಇಂತಹ ದಿವ್ಯಸುಖವನ್ನು ಅನುಭವಿಸುತ್ತಿರುವೆವೋ ಅಂತಹ ರಾಮನೂ ಸುಖವಾಗಿರಲಿ.”

ಎಲ್ಲ ಪದಾತಿಗಳೂ, ಅಶ್ವಸೈನಿಕರೂ, ಗಜಸೈನಿಕರೂ, ರಥಿಕರೂ, ಪರಿಚಾರಕರೇ ಆದಿಯಾಗಿ ಸರ್ವರೂ ಇದೇ ಮಾತನ್ನೇ ಪುನರುಚ್ಚರಿಸುತ್ತಿದ್ದರು. ಬಡಪಾಯಿಗಳಾದ ಅವರು ಇಂತಹ ಅದೃಷ್ಟವನ್ನು ಶಾಶ್ವತವೆಂದೇ ಭಾವಿಸಿ ಹೀಗೆ ಉದ್ಗರಿಸುತ್ತಿದ್ದರು.

ಭರತನ ಅನುಯಾಯಿಗಳಾದ ಸಾವಿರಾರು ಜನರು ಅತಿಯಾದ ಸಂತೋಷದಿಂದ ‘ಇದೇ ಸ್ವರ್ಗ–ಇದೇ ಸ್ವರ್ಗಸುಖ’–ಎಂದು ಗಟ್ಟಿಯಾಗಿ ಕೂಗಿಕೊಳ್ಳುತ್ತಿದ್ದರು. ಸೈನಿಕರಲ್ಲಿ ಕೆಲವರು ನರ್ತನಮಾಡುತ್ತಿದ್ದರು. ಕೆಲವರು ಕೇಕೆಹಾಕಿಕೊಡು ನಗುತ್ತಿದ್ದರು. ಕೆಲವರು ಸಂಗೀತವನ್ನು ಹಾಡುತ್ತಿದ್ದರು. ಸಾವಿರಾರು ಮಂದಿ ದಿವ್ಯಮಾಲೆಗಳನ್ನು ಧರಿಸಿ ಮನಬಂದಂತೆ ಸುತ್ತಲೂ ಓಡಾಡುತ್ತಿದ್ದರು. ಅವರೆಲ್ಲರೂ ಆ ವೇಳೆಗೆ ಅಮೃತೋಪಮ ವಾದ ಅನ್ನವನ್ನೂ, ಪಾಯಸವನ್ನೂ, ನಾನಾವಿಧವಾದ ಭಕ್ಷ್ಯಗಳನ್ನೂ ತಿಂದು ತೇಗಿದ್ದರು. ಆದರೂ ಅವರ ಮುಂದೆ ಅಗಣಿತವಾದ ಭಕ್ಷ್ಯಗಳ ರಾಶಿಗಳೇ ಬಿದ್ದಿರುವುದನ್ನು ನೋಡಿ ಪುನಃ ಆ ಭಕ್ಷಗಳನ್ನು ತಿನ್ನಬೇಕೆನ್ನುವ ಚಾಪಲ್ಯವು ಅವರಿಗುಂಟಾಯಿತು. ಸೇನೆಯಲ್ಲಿದ್ದ ಪರಿಚಾರಿಕೆಯರು, ದಾಸಿಯರು, ಯೋಧಾಂಗನೆಯರು–ಇವರೆಲ್ಲರೂ ತಮಗೆ ಅಯಾಚಿತವಾಗಿ ಪ್ರಾಪ್ತವಾದ ಸುಂದರವಾದ ವಸ್ತ್ರಗಳನ್ನು ಧರಿಸಿ ಪರಮಸುಪ್ರೀತರಾದರು. ಆನೆಗಳು, ಕತ್ತೆಗಳು, ಒಂಟೆಗಳು, ಎತ್ತುಗಳು, ಕ್ರೀಡಾರ್ಥವಾಗಿ ಸೈನಿಕರು ತಂದಿದ್ದ ಮೃಗ-ಪಕ್ಷಿಗಳು ಎಲ್ಲವೂ ಭರದ್ವಾಜರ ಸತ್ಕಾರದಿಂದ ತೃಪ್ತಿಹೊಂದಿ ದುವು. ಅವುಗಳಿಗೆ ತಿನ್ನಲು ಬೇರೆ ಯಾವುದೂ ಬೇಕಾಗಲಿಲ್ಲ. ಅಲ್ಲಿ ಸೇರಿದ್ದ ಅಪಾರ ಸೈನಿಕರಲ್ಲಿ ಬಿಳಿಯ ವಸ್ತ್ರವನ್ನುಡದವನಾಗಲೀ, ಹಸಿದವನಾಗಲೀ, ಮಾಲಿನ್ಯವನ್ನು ಹೊಂದಿದ್ದವನಾಗಲೀ, ಧೂಳಿನಿಂದ ಧೂಸರಿತವಾದ ಕೂದಲಿ ನಿಂದ ಕೂಡಿದವನಾಗಲೀ ಯಾವೊಬ್ಬನೂ ಇರಲಿಲ್ಲ. ಅಲ್ಲಿ ಸಾವಿರಾರು ಲೋಹಮಯವಾದ ಪಾತ್ರೆಗಳಿದ್ದುವು. ಕೆಲವು ಪಾತ್ರೆಗಳಲ್ಲಿ ಆಡಿನ ಮಾಂಸ

ವನ್ನೂ–ಹಂದಿಯ ಮಾಂಸವನ್ನೂ ತುಂಬಿದ್ದರು. ಕೆಲವು ಪಾತ್ರೆಗಳಲ್ಲಿ ವ್ಯಂಜನಗಳಿದ್ದುವು. ಕೆಲವು ಪಾತ್ರೆಗಳಲ್ಲಿ ಹಣ್ಣುಗಳ ರಸವಿದ್ದಿತು. ಕೆಲವು ಪಾತ್ರೆಗಳು ತೊವ್ವೆಗಳಿಂದ ತುಂಬಿದ್ದುವು. ಕೆಲವು ಪಾತ್ರೆಗಳು ಬಿಳಿಯ ಅನ್ನದಿಂದ ತುಂಬಿದ್ದುವು. ಆ ಎಲ್ಲ ಪಾತ್ರೆಗಳನ್ನೂ, ಪುಷ್ಪಧ್ವಜಗಳಿಂದ ಸಿಂಗರಿಸಲಾಗಿತ್ತು. ಇಂತಹ ಅದ್ಭುತವಾದ ಅಡಿಗೆಯ ಸಿದ್ಧತೆಯನ್ನು ಕಂಡು ಜನರು ಅಚ್ಚರಿಗೊಂಡರು. ಭರದ್ವಾಜರ ಆಶ್ರಮದ ಪಕ್ಕದಲ್ಲಿದ್ದ ಬಾವಿಗಳು ಘಮ-ಘಮಿಸುವ ಪಾಯಸದಿಂದ ಪೂರ್ಣವಾಗಿದ್ದುವು. ಅಲ್ಲಿದ್ದ ಹಸುಗಳು ಭರತನ ಪರಿವಾರದವರು ಕೇಳಿದುದನ್ನು ಕೊಡುತ್ತಿದ್ದುವು. ಆಶ್ರಮದ ಸುತ್ತಲೂ ಇದ್ದ ವೃಕ್ಷಗಳು ಜೇನುತುಪ್ಪವನ್ನು ಸತತವಾಗಿ ಸುರಿಸುತ್ತಿದ್ದುವು. ಮೈರೇಯವೆಂಬ ಸುರೆಯಿಂದ ತುಂಬಿದ ಅನೇಕ ಬಾವಿಗಳೇ ಇದ್ದುವು. ಜಿಂಕೆ, ನವಿಲು, ಕೋಳಿ–ಇವೇ ಮುಂತಾದ ಪ್ರಾಣಿಗಳ ಮಾಂಸದಿಂದ ಸಿದ್ಧಪಡಿಸಿದ್ದ ವಿಧ-ವಿಧವಾದ ಭಕ್ಷ್ಯಗಳಿದ್ದುವು. ಅಗ್ನಿಕುಂಡದಲ್ಲಿ ಬೇಯಿಸಿದ ಅನೇಕವಿಧವಾದ ಭಕ್ಷ್ಯಗಳ ರಾಶಿಗಳೇ ಅಲ್ಲಿದ್ದುವು. ಭರದ್ವಾಜರ ಆ ಆಶ್ರಮಭೂಮಿಯಲ್ಲಿ ಅನ್ನವನ್ನು ತುಂಬಿದ್ದ ಪಾತ್ರೆಗಳು ಸಾವಿರ ಸಂಖ್ಯೆಯಲ್ಲಿದ್ದುವು. ಚಿನ್ನದ ಊಟದ ತಟ್ಟೆಗಳು ಹತ್ತುಕೋಟಿ ಸಂಖ್ಯೆಯಲ್ಲಿದ್ದುವು. ಸಾವಿರಾರು ಕಡಾಯಿಗಳಲ್ಲಿ ರುಚಿಗಟ್ಟಾದ ಮೊಸರನ್ನು ತುಂಬಿದ್ದರು. ಅತಿನೂತನವೂ ಅತಿಹಳೆಯದೂ ಅಲ್ಲದ ಬಿಳಿಯದಾದು ಸುಗಂಧಯುಕ್ತವಾದ ಮಜ್ಜಿಗೆಯ ಸರೋವರಗಳೇ ಇದ್ದುವು. ರಸಾಲವೆಂಬ ವಿಶೇಷರೀತಿಯ ಮಜ್ಜಿಗೆಯ ಸರಸ್ಸುಗಳೂ ಅನೇಕವಿದ್ದುವು. ಪಾಯಸದ ಅನೇಕ ಕೊಳಗಳಿದ್ದುವು. ಸಕ್ಕರೆಯ ರಾಶಿಗಳಿದ್ದುವು.

ಇತ್ತಲಾಗಿ ನದಿಯ ತೀರಗಳಲ್ಲಿ ಸ್ನಾನದ ಸಲುವಾಗಿ ನೆಲ್ಲಿಕಾಯಿಯಿಂದ ಮಾಡಿದ ಸುಗಂಧಯುಕ್ತವಾದ ಚೂರ್ಣಗಳೂ, ತೈಲಗಳೂ, ಕಷಾಯಗಳೂ, ನಾನಾವಿಧವಾದ ಸ್ನಾನದ ಪದಾರ್ಥಗಳೂ ದೊಡ್ಡ-ದೊಡ್ಡ ಪಾತ್ರೆಗಳಲ್ಲಿ ಸಿದ್ಧವಾಗಿರುವುದನ್ನು ಭರತನ ಅನುಯಾಯಿಗಳು ನೋಡಿದರು. ಹಲ್ಲುಗಳನ್ನುಜ್ಜಲು ಬಿಳುಪಾದ ಚೂರ್ಣದಿಂದ ಕೂಡಿರುವ ಬೇವಿನ ಕಡ್ಡಿಗಳ ಮತ್ತು ಉತ್ತರಣೆ ಕಡ್ಡಿಗಳ ರಾಶಿಯನ್ನೂ, ಸ್ನಾನಾನಂತರದಲ್ಲಿ ಅಲಂಕಾರಾರ್ಥ

ವಾಗಿ ಲೇಪಿಸಿಕೊಳ್ಳಲು ಸಂಪುಟಗಳಲ್ಲಿ ಸಿದ್ಧಪಡಿಸಿದ್ದ ಚಂದನದ ಪುಡಿಯನ್ನೂ ಭರತನ ಅನುಯಾಯಿಗಳು ನೋಡಿದರು. ಮುಖವನ್ನು ನೋಡಿಕೊಳ್ಳಲು ಸ್ವಚ್ಛವಾದ ಕನ್ನಡಿಗಳಿದ್ದುದನ್ನೂ, ಉಡಲು ವಸ್ತ್ರಗಳ ರಾಶಿಯೇ ಇದ್ದುದನ್ನೂ, ಪಾದರಕ್ಷೆಗಳು ಸಾವಿರಾರು ಸಂಖ್ಯೆಯಲ್ಲಿದ್ದುದನ್ನೂ ಭರತನ ಪರಿಜನರು ನೋಡಿದರು. ಕಣ್ಣಿಗೆ ಹಚ್ಚುವ ಕಾಡಿಗೆಗಳ ನೂರಾರು ಕರಂಡಗಳಿದ್ದುವು. ತಲೆಯನ್ನು ಬಾಚಿಕೊಳ್ಳಲು ಸಾವಿರಾರು ಬಾಚಣಿಗೆಗಳಿದ್ದುವು. ತಲೆಗೆ ಹಾಕಿಕೊಳ್ಳುವ ಹಲವಾರು ಬಗೆಯ ತೈಲಗಳಿದ್ದುವು. ಅನೇಕವಿಧವಾದ ಆಯುಧಗಳೂ ಧನುಸ್ಸುಗಳೂ ಇದ್ದುವು. ಮರ್ಮಸ್ಥಳಗಳನ್ನು ಅಪಾಯದಿಂದ ರಕ್ಷಿಸಲು ಸಮರ್ಥವಾದ ವಿಧ-ವಿಧವಾದ ಕವಚಗಳಿದ್ದುವು. ಚಿತ್ರಿತವಾದ ಹಾಸಿಗೆಗಳೂ, ಆಸನಗಳೂ ಸಾವಿರಾರು ಸಂಖ್ಯೆಯಲ್ಲಿದ್ದುವು. ಅವೆಲ್ಲವನ್ನೂ ಭರತನ ಅನುಯಾಯಿಗಳು ನೋಡಿದರು. ಕತ್ತೆ, ಒಂಟೆ, ಕುದುರೆ–ಇವೇ ಮೊದಲಾದ ಪ್ರಾಣಿಗಳು ನೀರು ಕುಡಿಯಲು ಅನೇಕ ಜಲರಾಶಿಗಳಿದ್ದುವು. ಜನರು ಇಳಿದು ಸ್ನಾನಮಾಡಲು ಯೋಗ್ಯವಾದ ಅನೇಕ ತೀರ್ಥಗಳಿದ್ದುವು. ಕನ್ನೈದಿಲೆಗಳಿಂದ ತುಂಬಿಹೋಗಿದ್ದ, ಆಕಾಶದ ವರ್ಣದಂತೆ ಸ್ವಚ್ಛವಾದ ನೀರಿನಿಂದ ಕೂಡಿದ್ದ, ಈಜಾಡಲು ಯೋಗ್ಯವಾಗಿದ್ದ ಅನೇಕ ಸರೋವರಗಳನ್ನು ಭರತನ ಅನುಯಾಯಿಗಳು ನೋಡಿದರು. ನೀಲವೈಡೂರ್ಯಮಣಿಗಳಂತೆ ಪ್ರಕಾಶಮಾನವಾಗಿದ್ದ, ಮೃದುವಾಗಿದ್ದ, ಪಶುಗಳ ವಿಶ್ರಾಂತಿಗೆ ಯೋಗ್ಯವಾಗಿದ್ದ ವಿಶಾಲವಾದ ಹುಲ್ಲುಗಾವಲುಗಳನ್ನು ಸೈನಿಕರು ನೋಡಿದರು. ಮಹರ್ಷಿಗಳು ಭರತನಿಗೂ ಅವನ ಪರಿವಾರದವರಿಗೂ ಮಾಡಿದ ಸ್ವಪ್ನಸದೃಶವಾದ ಮಹಾದ್ಭುತವಾದ ಅಂತಹ ಆತಿಥ್ಯವನ್ನು ನೋಡಿ ಎಲ್ಲರೂ ಬೆರಗಾದರು. ದೇವತೆಗಳು ನಂದನವನದಲ್ಲಿ ರಮಿಸುವಂತೆ–ರಮ್ಯವಾದ ಭರದ್ವಾಜರ ಆಶ್ರಮ ಪ್ರದೇಶದಲ್ಲಿ ಭರತನ ಅನುಯಾಯಿಗಳು ಕ್ರೀಡಿಸುತ್ತಿದ್ದಂತೆಯೇ ಆ ರಾತ್ರಿಯು ಕಳೆದುಹೋಯಿತು. ಬೆಳಗಾಗುತ್ತಿರುವಾಗಲೇ ಮಹರ್ಷಿಗಳಾದ ಭರದ್ವಾಜರ ಅನುಮತಿಯನ್ನು ಪಡೆದು ನದಿಗಳೂ, ಗಂಧರ್ವಾಪ್ಸರೆಯರೂ, ಸಾವಿರಾರು ವರಾಂಗನೆಯರೂ ತಮ್ಮ-ತಮ್ಮ ಸ್ಥಾನಗಳಿಗೆ ತೆರಳಿದರು. ಸುರೆ, ಮೈರೇಯ–ಇವೇ ಮೊದಲಾದ ಮಾದಕಪಾನೀಯಗಳನ್ನು ಪಾನಮಾಡಿದ್ದ

ಯೋಧರು ಇನ್ನೂ ಆ ಅಮಲಿನಲ್ಲಿಯೇ ಇದ್ದರು. ಅವರು ಪೂಸಿಕೊಂಡಿದ್ದ ಚಂದನಾಗರು-ಕಸ್ತೂರಿಗಳೇ ಮೊದಲಾದ ಸುಗಂಧ ದ್ರವ್ಯಗಳೂ ಹಾಗೆಯೇ ಇದ್ದುವು. ಅವರು ಧರಿಸಿದ್ದ ದಿವ್ಯಕುಸುಮಗಳ ಮಾಲೆಗಳೂ ಹಾಗೆಯೇ ಇದ್ದುವು. ಆದರೆ ಅವು ಯೋಧರು ಆನಂದದಿಂದ ಕುಣಿದಾಡುತ್ತಿದ್ದಾಗ ನೆಲದ ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದು ಅವರಿಂದಲೇ ತುಳಿಯಲ್ಪಡುತ್ತಿದ್ದುವು.

೯೧ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೯೨ನೆಯ ಸರ್ಗ

ಭರತನು ಶ್ರೀರಾಮನ ಬಳಿಗೆ ಹೋಗಲು ಭರದ್ವಾಜರ ಅನುಮತಿಯನ್ನು ಪಡೆದು ಮುನಿಗಳಿಗೆ ತನ್ನ ತಾಯಂದಿರ ಪರಿಚಯ ಮಾಡಿಕೊಟ್ಟುದು: ಸೈನ್ಯಸಮೇತನಾಗಿ ಚಿತ್ರಕೂಟಪರ್ವತಕ್ಕೆ ಭರತನ ಪ್ರಯಾಣ

ತತಸ್ತಾಂ ರಜನೀಂ ವ್ಯುಷ್ಯ ಭರತಃ ಸಪರಿಚ್ಛದಃ ।
ಕೃತಾತಿಥ್ಯೋ ಭರದ್ವಾಜಂ ಕಾಮಾದಭಿಜಗಾಮ ಹ ॥೧॥

ಹೀಗೆ ಭರದ್ವಾಜರಿಂದ ಸತ್ಕೃತನಾದ ಭರತನು ಪರಿವಾರಸಮೇತನಾಗಿ ಆ ರಾತ್ರಿಯನ್ನು ಕಳೆದು ಬೆಳಗಾಗುತ್ತಲೇ ಶ್ರೀರಾಮನನ್ನು ಕಾಣಬೇಕೆಂಬ ಕಾಮನೆಯಿಂದ ಭರದ್ವಾಜರ ಬಳಿಗೆ ಹೋದನು.

ಬೆಳಗಿನ ಅಗ್ನಿಹೋತ್ರವನ್ನು ಆಗ ತಾನೇ ಮುಗಿಸಿದ್ದ ಭರದ್ವಾಜ ಮುನಿಗಳು–ಕೈಜೋಡಿಸಿಕೊಂಡು ತಮ್ಮನ್ನು ಕಾಣಲು ಬಂದಿದ್ದ ಭರತನಿಗೆ ಹೇಳಿದರು:

"ಅನಘನೇ! ಈ ನಮ್ಮ ಆಶ್ರಮದಲ್ಲಿ ನಿನಗೆ ರಾತ್ರಿಯು ಸುಖವಾಗಿ ಕಳೆಯಿತೇ? ನಾವು ಮಾಡಿದ ಆತಿಥ್ಯದಿಂದ ನಿನ್ನ ಸಮಸ್ತಜನರೂ ತೃಪ್ತಿಹೊಂದಿದರೇ? ಸಂಕೋಚವಿಲ್ಲದೇ ಹೇಳು."

ಆಶ್ರಮದಿಂದ ಹೊರಗೆ ಬಂದಿದ್ದ ಪರಮಾದ್ಭುತವಾದ ತೇಜಸ್ಸಿನಿಂದ ಬೆಳಗುತ್ತಿದ್ದ ಭರದ್ವಾಜರಿಗೆ ಭರತನು ನಮಸ್ಕರಿಸಿ ಬದ್ಧಾಂಜಲಿಯಾಗಿ ಹೇಳಿದನು:

"ಪೂಜ್ಯರೇ! ಪರಿವಾರಸಮೇತನಾಗಿ ನಾನು ರಾತ್ರಿಯನ್ನು ಸುಖವಾಗಿ ಕಳೆದೆನು. ಅಮಾತ್ಯರೊಡನೆ ಮತ್ತು ಸೈನಿಕರೊಡನೆ ಸಕಲವಿಧವಾದ ಕಾಮನೆಗಳಿಂದಲೂ ತೃಪ್ತಿಗೊಳಿಸಲ್ಪಟ್ಟೆನು. ಭೃತ್ಯರೇ ಆದಿಯಾಗಿ ಸರ್ವರೂ ಅತ್ಯಂತತೃಪ್ತರಾಗಿದ್ದೇವೆ. ಒಳ್ಳೆಯ ಮೃಷ್ಟಾನ್ನವನ್ನು ಊಟಮಾಡಿದ್ದೇವೆ. ಉತ್ತಮವಾದ ಸೌಧಗಳಲ್ಲಿ ವಿಶ್ರಮಿಸಿದ್ದೇವೆ. ಇದರಿಂದಾಗಿ ನಮ್ಮ ಶರೀರಾಯಾಸವೂ ಮಾನಸಿಕಸಂತಾಪವೂ ದೂರವಾಗಿದೆ. ನಾವೆಲ್ಲರೂ ರಾತ್ರಿಯನ್ನು ಅತ್ಯಂತಸುಖದಿಂದ ಕಳೆದಿರುತ್ತೇವೆ. ಮುನಿವರ್ಯರೇ! ನಿಮ್ಮನ್ನು ಬಹುಪ್ರಕಾರವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ. ಶ್ರೀರಾಮನ ಬಳಿಗೆ ಹೊರಟಿರುವ ನನ್ನನ್ನು ನೀವು ಅನುಗ್ರಹದ ದೃಷ್ಟಿಯಿಂದ ಕಾಣಿರಿ. ಧಾರ್ಮಿಕನಾದ, ಮಹಾತ್ಮನಾದ ಆ ನಮ್ಮಣ್ಣನ ಆಶ್ರಮವು ಇಲ್ಲಿಗೆ ಎಷ್ಟು ದೂರದಲ್ಲಿದೆ? ಯಾವ ಮಾರ್ಗದಿಂದ ಅಲ್ಲಿಗೆ ಪ್ರಯಾಣಮಾಡಬೇಕು? ಈ ವಿಷಯಗಳನ್ನು ಹೇಳಿರಿ."

ಅಣ್ಣನನ್ನು ಸಂದರ್ಶಿಸಬೇಕೆಂಬ ಉತ್ಕಟಾಕಾಂಕ್ಷೆಯಿಂದಿದ್ದ ಭರತನು ಹೀಗೆ ಪ್ರಶ್ನಿಸಲು ಮಹಾತಪಸ್ವಿಗಳಾದ ಭರದ್ವಾಜರು ಹೇಳಿದರು:

"ಭರತ! ಇಲ್ಲಿಗೆ ಸುಮಾರು ಎರಡೂವರೆ ಯೋಜನಗಳ ದೂರದಲ್ಲಿ ನಿರ್ಜನವಾದ ಅರಣ್ಯದಲ್ಲಿ ರಮ್ಯವಾಗಿರುವ, ಗುಹೆಗಳಿಂದ ಕೂಡಿರುವ, ಕಾಡುಗಳಿಂದ ವ್ಯಾಪ್ತವಾಗಿರುವ ಚಿತ್ರಕೂಟಪರ್ವತವಿದೆ. ಆ ಚಿತ್ರಕೂಟ ಪರ್ವತದ ಉತ್ತರಕ್ಕೆ ಮಂದಾಕಿನೀನದಿಯಿದೆ. ಆ ನದಿಯ ಎರಡು ತೀರ ಗಳಲ್ಲಿಯೂ ಪುಷ್ಪಭರಿತವಾದ ವೃಕ್ಷಗಳಿವೆ. ರಮ್ಯವಾಗಿಯೂ, ಪುಷ್ಪಿತವಾ ಗಿಯೂ ಇರುವ ಅರಣ್ಯಪ್ರದೇಶದಲ್ಲಿ ಮಂದಾಕಿನೀನದಿಯು ಹರಿಯುತ್ತಿದೆ. ಆ ನದಿಯ ಸಮೀಪದಲ್ಲಿಯೇ ಚಿತ್ರಕೂಟಪರ್ವತವಿದೆ. ನದಿಯ ಮತ್ತು ಪರ್ವತದ ನಡುವೆ ಒಂದು ಪರ್ಣಶಾಲೆಯಿದೆ. ಅದೇ ರಾಮ-ಲಕ್ಷ್ಮಣರ ಪರ್ಣಶಾಲೆ. ಅಲ್ಲಿಯೇ ಅವರಿಬ್ಬರೂ ಸೀತೆಯೊಡನೆ ವಾಸಮಾಡುತ್ತಿದ್ದಾರೆ. ನಮ್ಮ ಆಶ್ರಮದ ಮೊದಲು ದಕ್ಷಿಣ ದಿಕ್ಕಿಗೆ ಪ್ರಯಾಣಮಾಡಬೇಕು. ಬಳಿಕ ನೈಋತ್ಯ ದಿಕ್ಕಿನ ಕಡೆಗೆ ಹೋಗಬೇಕು. ಗಜಾಶ್ವ-ರಥ-ಪದಾತಿಗಳಿಂದ ಯುಕ್ತವಾದ ನಿನ್ನ ಚತುರಂಗಸೇನೆಯನ್ನೂ ನಾನು ಹೇಳಿರುವ ಮಾರ್ಗದಲ್ಲಿ ಕರೆದುಕೊಂಡು ಹೋಗು. ಅಲ್ಲಿ ನೀನು ರಾಘವನನ್ನು ಕಾಣುವೆ."

ಪ್ರಯಾಣದ ವಿಷಯವಾಗಿ ಭರತನು ಭರದ್ವಾಜರೊಡನೆ ಮಾತನಾಡುತ್ತಿರುವುದನ್ನು ಕೇಳಿದೊಡನೆಯೇ ಪಲ್ಲಕ್ಕಿಯಲ್ಲಿಯೇ ಕುಳಿತಿರಬೇಕಾಗಿದ್ದ ದಶರಥನ ಪತ್ನಿಯರು ತಮ್ಮ-ತಮ್ಮ ಪಲ್ಲಕ್ಕಿಗಳಿಂದ ಕೆಳಗಿಳಿದು ಬ್ರಹ್ಮನಿಷ್ಠರಾದ ಭರದ್ವಾಜರನ್ನು ಪ್ರದಕ್ಷಿಣೆಮಾಡಿ ನಮಸ್ಕರಿಸಿದರು.

ಕೃಶಳಾಗಿದ್ದ, ಅತ್ಯಂತದೀನಳಾಗಿದ್ದ ಕೌಸಲ್ಯಾದೇವಿಯು ತರ-ತರನೆ ನಡುಗುತ್ತಾ ಸುಮಿತ್ರೆಯೊಡನೆ ಮಹರ್ಷಿಗಳ ಎರಡು ಕಾಲುಗಳನ್ನೂ ಹಿಡಿದುಕೊಂಡಳು. ಭರತನು ರಾಜನಾಗಬೇಕೆಂಬ ಕಾಮನೆಯನ್ನು ಪೂರ್ಣಗೊಳಿಸಿಕೊಳ್ಳಲು ಅಸಮರ್ಥಳಾಗಿದ್ದ, ಎಲ್ಲರ ನಿಂದೆಗೂ ಪಾತ್ರಳಾಗಿದ್ದ ಕೈಕೇಯಿಯು ಬಹಳ ನಾಚಿಕೆಯಿಂದಲೇ ಮಹರ್ಷಿಗಳ ಎರಡು ಕಾಲುಗಳನ್ನೂ ಮುಟ್ಟಿ ನಮಸ್ಕರಿಸಿದಳು. ಪೂಜ್ಯರಾದ, ಮಹಾಮುನಿಗಳಾದ ಭರದ್ವಾಜರನ್ನು ಪ್ರದಕ್ಷಿಣೆಮಾಡಿ ನಮಸ್ಕರಿಸಿದನಂತರ ಅವಳು ದೀನವಾದ ಮನಸ್ಸಿನಿಂದ ಕೂಡಿದವಳಾಗಿ ಭರತನ ಸಮೀಪದಲ್ಲಿಯೇ ನಿಂತುಕೊಂಡಳು. ಬಳಿಕ ದೃಢವ್ರತರಾದ ಭರದ್ವಾಜರು ಭರತನಿಗೆ ಹೇಳಿದರು:

ವಿಶೇಷಂ ಜ್ಞಾತುಮಿಚ್ಛಾಮಿ ಮಾತೄಣಾಂ ತವ ರಾಘವ ॥೧೮॥

"ಭರತ! ನಿನ್ನ ತಾಯಂದಿರ ಹೆಸರು ಮುಂತಾದ ಹೆಚ್ಚಿನ ವಿಷಯಗಳನ್ನು ತಿಳಿಯಬಯಸುತ್ತೇನೆ."

ಭರದ್ವಾಜರು ಹೀಗೆ ಪ್ರಶ್ನಿಸಲು ಧಾರ್ಮಿಕನಾದ, ವಚನಕೋವಿದನಾದ ಭರತನು ಕೈಮುಗಿದುಕೊಂಡು ಹೇಳಿದನು:

"ಪೂಜ್ಯರೇ! ಪತಿ-ಪುತ್ರರ ವಿಯೋಗಶೋಕದಿಂದಲೂ, ಉಪವಾಸದಿಂದಲೂ ಕೃಶಳಾಗಿರುವ, ನನ್ನ ತಂದೆಯ ಪಟ್ಟಮಹಿಷಿಯಾದ, ಸಾಕ್ಷಾತ್ ದೇವತೆಯಂತೆಯೇ ಕಾಣುತ್ತಿರುವ ಈ ಕೌಸಲ್ಯಾದೇವಿಯೇ ಪುರುಷಶ್ರೇಷ್ಠನಾದ, ಸಿಂಹದಂತೆ ಗಂಭೀರನಾದ ಶ್ರೀರಾಮನನು–ಅದಿತಿಯು ಇಂದ್ರನನ್ನು ಹಡೆದಂತೆ–ಹಡೆದವಳು. ಇವಳ ಎಡಭುಜಕ್ಕೆ ಅಂಟಿಕೊಂಡಿರುವಂತೆಯೇ ನಿಂತಿರುವ, ದುಃಖದಿಂದ ಕೂಡಿದ ಮನಸ್ಸುಳ್ಳವಳಾಗಿರುವ, ಅರಣ್ಯದಲ್ಲಿ ಹೂವುಗಳಿಂದ ವಿಹೀನವಾಗಿರುವ ಕರ್ಣಿಕಾರವೃಕ್ಷದ ರೆಂಬೆಯೋಪಾದಿಯಲ್ಲಿ ನಿಸ್ತೇಜಳಾಗಿರುವ, ಆರ್ತಳಾಗಿರುವ ಈ ಸುಮಿತ್ರಾದೇವಿಯು ದಶರಥರಾಜನ

ಮೂವರು ಪತ್ನಿಯರಲ್ಲಿ ಎರಡನೆಯವಳು. ಇವಳಿಗೆ ದೇವರೂಪಿಗಳಾದ, ವಿನೀತರಾದ, ಸತ್ಯಪರಾಕ್ರಮಿಗಳಾದ, ಸುಕುಮಾರರಾದ ಲಕ್ಷ್ಮಣ-ಶತ್ರುಘ್ನರೆಂಬ ಇಬ್ಬರು ಮಕ್ಕಳು.

ಯಾವಳ ಕಾರಣದಿಂದಾಗಿ ನರಶ್ರೇಷ್ಠರಾದ ರಾಮ-ಲಕ್ಷ್ಮಣರು ಜೀವ ನಾಶಕವಾದ ಘೋರಾರಣ್ಯಕ್ಕೆ ಹೋಗಬೇಕಾಯಿತೋ ಮತ್ತು ರಾಜನು ಪುತ್ರವಿಯೋಗಶೋಕದಿಂದಲೇ ಸ್ವರ್ಗಕ್ಕೆ ಹೋದನೋ–ಅವಳೇ ಈ ಕೈಕೇಯಿಯು. ಇವಳು ಮಹಾಕೋಪಿಷ್ಠಳು. ಅಶಿಕ್ಷಿತವಾದ ಬುದ್ಧಿಯುಳ್ಳವಳು. ದುರಭಿಮಾನವುಳ್ಳವಳು. ತಾನೇ ಅತ್ಯಂತಸೌಂದರ್ಯವತಿಯೆಂಬ ಅಹಂಕಾರದಿಂದಿರುವವಳು. ಸರ್ವವಿನಾಶದಿಂದಲಾದರೂ ಐಶ್ವರ್ಯವನ್ನು ಪಡೆದುಕೊಳ್ಳಬೇಕೆನ್ನುವ ಉತ್ಕಟೇಚ್ಛೆಯಿಂದಿರುವವಳು. ಆರ್ಯಸಹಜವಾದ ವೇಷ-ಭೂಷಣಗಳಿಂದ ಕೂಡಿದ್ದರೂ ಬುದ್ಧಿಯಲ್ಲಿ ಅನಾರ್ಯಳು. ದಯಾರಹಿತ ಳಾದ, ಪಾಪಬುದ್ಧಿಯಿಂದ ಕೂಡಿರುವ ಇವಳೇ ನನ್ನ ತಾಯಿಯು. ಮಹತ್ತರವಾದ ನನ್ನ ಈ ದುಃಖಕ್ಕೆ ಇವಳೇ ಮೂಲಕಾರಣಳೆಂಬುದನ್ನು ನಾನು ಚೆನ್ನಾಗಿ ತಿಳಿದಿರುತ್ತೇನೆ."

ಹೀಗೆ ಹೇಳುತ್ತಿದ್ದಾಗ ಭರತನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಧ್ವನಿಯು ಗಡುಸಾಯಿತು. ಮರುಕ್ಷಣದಲ್ಲಿಯೇ ಕೋಪವೂ ಉಕ್ಕೇರಿ ಬಂದಿತು. ಕಣ್ಣುಗಳು ಕೆಂಪಾದುವು. ಬುಸುಗುಟ್ಟುವ ನಾಗರಹಾವಿನಂತೆ ದೀರ್ಘವಾಗಿ ನಿಟ್ಟುಸಿರುಬಿಟ್ಟನು.

ತಾಯಿಯನ್ನು ಕುರಿತು ಕಾಠಿನ್ಯದ ಮಾತುಗಳನ್ನಾಡಿದ ಭರತನಿಗೆ ಮಹಾಬುದ್ಧಿಶಾಲಿಗಳಾದ ಭರದ್ವಾಜರು ಅರ್ಥವತ್ತಾದ ಈ ಮಾತುಗಳನ್ನು ಹೇಳಿದರು:

ನ ದೋಷೇಣಾವಗನ್ತವ್ಯಾ ಕೈಕೇಯೀ ಭರತ ತ್ವಯಾ ।
ರಾಮಪ್ರವ್ರಾಜನಂ ಹ್ಯೇತತ್ಸುಖೋದರ್ಕಂ ಭವಿಷ್ಯತಿ ॥೨೯॥

ದೇವಾನಾಂ ದಾನವಾನಾಂ ಚ ಋಷೀಣಾಂ ಭಾವಿತಾತ್ಮನಾಮ್ ।
ಹಿತಮೇವ ಭವಿಷ್ಯದ್ಧಿ ರಾಮಪ್ರವ್ರಾಜನಾದಿಹ ॥೩೦॥

"ಭರತ! ನೀನು ಕೈಕೇಯಿಯನ್ನು ದುಷ್ಟೆಯೆಂದು ಸರ್ವಥಾ ಭಾವಿಸ

ಬೇಡ. ಕೈಕೇಯೀನಿಮಿತ್ತವಾದ ಶ್ರೀರಾಮನ ಈ ಅರಣ್ಯವಾಸವು ಮುಂದೆ ಸುಖೋದಯಕ್ಕೆ ಕಾರಣವಾಗುತ್ತದೆ. ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿಸುವುದರಿಂದ ಮಾನವರಿಗೆ ಮಾತ್ರವಲ್ಲ; ದೇವತೆಗಳಿಗೂ, ದಾನವರಿಗೂ, ಆತ್ಮದರ್ಶಿಗಳಾದ ಮಹರ್ಷಿಗಳಿಗೂ ಹಿತವೇ ಉಂಟಾಗುತ್ತದೆ."



ಭರದ್ವಾಜರ ಆ ಮಾತನ್ನು ಕೇಳಿದನಂತರ ಅತ್ಯಂತನಿಪುಣನಾದ ಭರತನು ಭರದ್ವಾಜರಿಗೆ ಪ್ರದಕ್ಷಿಣೆಮಾಡಿ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಅವರಿಂದ ಆಶೀರ್ವಾದಗಳನ್ನು ಪಡೆದನು. ಬಳಿಕ ಸೈನಿಕರಿಗೆ ವಾಹನಗಳನ್ನು ಸಜ್ಜುಗೊಳಿಸುವಂತೆ ಆಜ್ಞಾಪಿಸಿದನು.

ದಿವ್ಯವಾದ, ಸುವರ್ಣಮಾಲೆಗಳಿಂದ ಸಮಲಂಕೃತವಾದ, ಕುದುರೆ

ಗಳಿಂದ ಎಳೆಯಲ್ಪಡುವ ಸಾವಿರಾರು ರಥಗಳನ್ನು ಭರತನ ಆಜ್ಞೆಯಂತೆ ಪ್ರಯಾಣಹೊರಟಿದ್ದ ಜನರು ಹತ್ತಿಕುಳಿತರು. ಪತಾಕೆಗಳಿಂದ ಯುಕ್ತವಾಗಿದ್ದ, ಹಗ್ಗಗಳಿಂದ ಬಿಗಿಯಲ್ಪಟ್ಟಿದ್ದ ಹೆಣ್ಣಾನೆಗಳೂ ಮತ್ತು ಗಂಡಾನೆಗಳೂ ಗ್ರೀಷ್ಮರ್ತುವು ಕಳೆದನಂತರ ಗರ್ಜನೆಮಾಡುವ ಮೇಘಗಳಂತೆ–ಘೀಳಿಡುತ್ತ ಪ್ರಯಾಣಹೊರಟವು. ಕೆಲವು ವಾಹನಗಳು ದೊಡ್ಡದಾಗಿದ್ದುವು. ಕೆಲವು ಸಣ್ಣದಾಗಿದ್ದುವು. ಬಹುಮೂಲ್ಯಗಳಾದ ಅಂತಹ ಯಾನಗಳಲ್ಲಿ ಕೆಲವರು ಪ್ರಯಾಣಹೊರಟರು. ಪದಾತಿಸೈನಿಕರು ಕಾಲ್ನಡಿಗೆಯಲ್ಲಿಯೇ ಹೊರಟರು. ಶ್ರೇಷ್ಠವಾದ ಪಲ್ಲಕ್ಕಿಗಳಲ್ಲಿ ಕುಳಿತಿದ್ದ, ಶ್ರೀರಾಮನನ್ನು ನೋಡುವ ಆಕಾಂಕ್ಷೆ ಯಿಂದಿದ್ದ ಕೌಸಲ್ಯೆಯೇ ಮೊದಲಾದ ಸ್ತ್ರೀಯರು ಸಂತೋಷಭರಿತರಾಗಿ ಪ್ರಯಾಣಮಾಡಿದರು. ಬಾಲಚಂದ್ರ ನಂತೆಯೂ ಮತ್ತು ಬಾಲಸೂರ್ಯ ನಂತೆಯೂ ಪ್ರಕಾಶಮಾನವಾಗಿದ್ದ, ರಾಜಭಟರಿಂದ ಹೊರಲ್ಪಟ್ಟಿದ್ದ ಶುಭಕರವಾದ ಮೇನೆಯಲ್ಲಿ ಕುಳಿತು ಶ್ರೀಮಂತನಾದ ಭರತನು ಪರಿವಾರ ಸಮೇತನಾಗಿ ಪ್ರಯಾಣಹೊರಟನು. ಗಜಸೈನ್ಯದಿಂದಲೂ, ಅಶ್ವಸೈನ್ಯ ದಿಂದಲೂ, ರಥಗಳಿಂದಲೂ, ಪದಾತಿ ಗಳಿಂದಲೂ ಸಮಾವೃತವಾಗಿದ್ದ, ಗಂಗಾನದಿಯ ಪಶ್ಚಿಮತೀರದಲ್ಲಿದ್ದ ಭರತನ ಆ ಮಹಾಸೈನ್ಯವು ಮುಂದೆ ಪ್ರಯಾಣಮಾಡಿ ಗಿರಿಪ್ರದೇಶ ಗಳಲ್ಲಿಯೂ ನದಿಯ ತೀರಗಳಲ್ಲಿಯೂ ವಿಶ್ರಮಿಸಿಕೊಳ್ಳುತ್ತಾ ಮೃಗ-ಪಕ್ಷಿಗಳಿಂದ ಸೇವಿಸಲ್ಪಡುತ್ತಿದ್ದ ಅನೇಕವನಗಳನ್ನು ದಾಟಿ ದಟ್ಟವಾಗಿ ಕವಿದುಕೊಂಡಿರುವ ಮಹಾಮೇಘದಂತೆ ದಕ್ಷಿಣ ದಿಕ್ಕನ್ನು ಸಂಪೂರ್ಣವಾಗಿ ಆವರಿಸಿಕೊಂಡು ಪ್ರಯಾಣಮಾಡುತ್ತಿದ್ದಿತು. ಪರಮ ಸಂತುಷ್ಟವಾಗಿದ್ದ, ಮಹಾರಣ್ಯದೊಳಗೆ ನುಗ್ಗಿಹೋಗುತ್ತಾ ಅಲ್ಲಿದ್ದ ಮೃಗ-ಪಕ್ಷಿ ಗಳನ್ನು ಭಯಪಡಿಸುತ್ತಾ ಪ್ರಯಾಣಮಾಡುತ್ತಿದ್ದ ಗಜಾಶ್ವಯೋಧರಿಂದ ಕೂಡಿದ್ದ ಭರತನ ಆ ಮಹಾಸೈನ್ಯವು ಅತ್ಯಂತಕಾಂತಿಯಿಂದ ರಾರಾಜಿಸಿತು.

೯೨ನೆಯ ಸರ್ಗವು ಮುಗಿಯಿತು.

ಭರತನ ಚಿತ್ರಕೂಟಯಾತ್ರೆ

ತಯಾ ಮಹತ್ಯಾ ಯಾಯಿನ್ಯಾ ಧ್ವಜಿನ್ಯಾ ವನವಾಸಿನಃ ।
ಅರ್ದಿತಾ ಯೂಥಪಾ ಮತ್ತಾಃ ಸಯೂಥಾಃ ಸಂಪ್ರದುದ್ರುವುಃ ॥೧॥

ಪ್ರಯಾಣಮಾಡುತ್ತಿದ್ದ ಅಪಾರವಾದ ಭರತನ ಸೈನ್ಯದಿಂದ ಕಾಡಿನಲ್ಲಿದ್ದ ಮದಿಸಿದ ಸಲಗಗಳು ಪೀಡಿಸಲ್ಪಟ್ಟು ಹಿಂಡಿನೊಡನೆ ದಿಕ್ಕಾಪಾಲಾಗಿ ಓಡಿಹೋದುವು.

ಕರಡಿಗಳೂ, [1] ಪೃಷತ ಜಾತಿಯ ಜಿಂಕೆಗಳ ಸಮೂಹಗಳೂ, [2]ರುರು ಜಾತಿಯ ಜಿಂಕೆಯ ಸಮೂಹಗಳೂ–ವನಗಳಲ್ಲಿ, ಪರ್ವತಗಳಲ್ಲಿ ಮತ್ತು ನದೀ ತೀರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದುವು. ಧರ್ಮಾತ್ಮನಾದ ಭರತನು ಜಿಂಕೆಗಳನ್ನೂ, ಸಾರಂಗಗಳನ್ನೂ, ಕರಡಿಗಳನ್ನೂ ನೋಡುತ್ತಾ ಪ್ರೀತಾತ್ಮನಾಗಿ ಬಹಳವಾಗಿ ಆರ್ಭಟಮಾಡುತ್ತಿದ್ದ ಚತುರಂಗಬಲದೊಡನೆ ಪ್ರಯಾಣಮಾಡುತ್ತಿದ್ದನು. ಸಾಗರಗಳ ಸಮೂಹಕ್ಕೆ ಸದೃಶವಾಗಿದ್ದ ಭರತನ ಮಹಾಸೈನ್ಯವು ವರ್ಷರ್ತುವಿನಲ್ಲಿ ಮೋಡಗಳು ಆಕಾಶವನ್ನು ಕವಿದುಕೊಳ್ಳುವಂತೆ–ಭೂಮಿಯೆಲ್ಲವನ್ನೂ ಆವರಿಸಿಕೊಂಡು ಪ್ರಯಾಣಮಾಡುತ್ತಿದ್ದಿತು. ಕುದುರೆಗಳ ಸಮೂಹಗಳಿಂದಲೂ, ಮಹಾಬಲಿಷ್ಠವಾದ ಆನೆಗಳ ಸಮೂಹಗಳಿಂದಲೂ ಕೂಡಿದ್ದ ಆ ಮಹಾಸೈನ್ಯವನ್ನು ಮೊದಲಿನಿಂದ ಕಡೆಯವರೆಗೂ ನೋಡಲು ಹೆಚ್ಚು ಕಾಲವೇ ಬೇಕಾಗಿದ್ದಿತು. (ಆ ಸೈನ್ಯವು ಕಣ್ಣಿಗೆ ಎಟುಕದಷ್ಟು ಸುದೀರ್ಘವಾಗಿ ಸಾಗಿಹೋಗುತ್ತಿದ್ದಿತು.) ಭರತನು ಸಸೈನ್ಯನಾಗಿ ಬಹಳ ದೂರದವರೆಗೆ ಪ್ರಯಾಣಮಾಡಿದನಂತರ ಆನೆಗಳೂ, ಕುದುರೆಗಳೂ, ಪಲ್ಲಕ್ಕಿಗಳನ್ನು ಹೊತ್ತಿದ್ದ ರಾಜಭಟರೂ ದಣಿದಿರುವುದನ್ನು ನೋಡಿ ಮಂತ್ರಿಗಳಲ್ಲಿ ಶ್ರೇಷ್ಠರಾದ ವಸಿಷ್ಠರಿಗೆ ಹೇಳಿದನು:

“ಪೂಜ್ಯರೇ! ಶ್ರೀರಾಮನಿರುವ ಪ್ರದೇಶದ ಗುರುತುಗಳನ್ನು ಭರದ್ವಾಜರಿಂದ ಕೇಳಿ ತಿಳಿದುಕೊಂಡಿದ್ದೇನೆ. ಅವರು ಹೇಳಿದ್ದ ಎಲ್ಲ ಗುರುತು

1ಪೃಷತಃ= ಶರೀರದಲ್ಲಿ ಚುಕ್ಕೆಗಳಿರುವ ಜಿಂಕೆ. 2 ರುರುಃ= ಶರೀರದಲ್ಲಿ ಚುಕ್ಕೆಗಳಿಲ್ಲದ ಜಿಂಕೆ.

ಗಳೂ ಈ ಪ್ರದೇಶದಲ್ಲಿವೆ. ಆದುದರಿಂದ ಭರದ್ವಾಜರು ಹೇಳಿದ್ದ ಸ್ಥಳಕ್ಕೇ ನಾವು ಬಂದಿರುವೆವೆಂಬುದು ಸ್ಪಷ್ಟವಾಗಿದೆ. ಭರದ್ವಾಜರು ಹೇಳಿದ್ದ ಹೆಗ್ಗುರುತಿನಂತೆ ಇಲ್ಲಿ ಕಾಣುತ್ತಿರುವುದೇ ಚಿತ್ರಕೂಟಪರ್ವತ. ನಮ್ಮ ಸಮೀಪದಲ್ಲಿ ಹರಿಯುತ್ತಿರುವುದೇ ಮಂದಾಕಿನೀನದಿ. ದೂರದಿಂದ ನೋಡಿದರೆ ಈ ವನವು ಕಪ್ಪಾದ ಮೇಘದಂತೆಯೇ ಕಾಣುತ್ತಿದೆ. ಪರ್ವತೋಪಮವಾದ ನಮ್ಮ ಆನೆಗಳು ಚಿತ್ರಕೂಟದ ರಮ್ಯವಾದ ತಪ್ಪಲುಪ್ರದೇಶಗಳನ್ನು ಧ್ವಂಸ ಮಾಡುತ್ತಿವೆ. ವರ್ಷಾಕಾಲದಲ್ಲಿ ಕಪ್ಪಾದ ಮೋಡಗಳು ಮಳೆಗರೆಯುವಂತೆ ನಮ್ಮ ಮದಿಸಿದ ಆನೆಗಳಿಂದ ಧ್ವಂಸಮಾಡಲ್ಪಡುತ್ತಿರುವ ಬಕುಲಾದಿ ವೃಕ್ಷ ಗಳು ಈ ಪರ್ವತದ ತಪ್ಪಲುಗಳಲ್ಲಿ ಹೂಗಳನ್ನು ಸುರಿಸುತ್ತಿವೆ. ಶತ್ರುಘ್ನ! ಕಿನ್ನರರಿಂದ ಸೇವಿಸಲ್ಪಡುತ್ತಿರುವ ಈ ಪರ್ವತಪ್ರದೇಶವನ್ನು ನೋಡು. ಮಹಾಸಾಗರವು ಮೊಸಳೆಗಳಿಂದ ನಿಬಿಡವಾಗಿರುವಂತೆ–ಈ ಪರ್ವತವು ಅನೇಕ ವಿಧವಾದ ಮೃಗಗಳಿಂದ ವ್ಯಾಪ್ತವಾಗಿದೆ. ಭಯದಿಂದ ಪ್ರೇರಿತವಾಗಿ ಮಿತಿ ಮೀರಿದ ವೇಗದಿಂದ ಓಡುತ್ತಿರುವ ಈ ಜಿಂಕೆಗಳ ಸಮೂಹವು ಶರತ್ಕಾಲದಲ್ಲಿ ಬಿರುಗಾಳಿಯಿಂದ ಪ್ರೇರಿತವಾಗಿ ಚೆಲ್ಲಾಪಿಲ್ಲಿಯಾಗುವ ಮೋಡಗಳಂತೆ ಕಾಣುತ್ತಿದೆ. ತಲೆಯಲ್ಲಿ ಸುವಾಸಿತವಾದ ಹೂಗಳ ಗೊಂಚಲುಗಳನ್ನು ಹೊತ್ತಿರುವ ಈ ವೃಕ್ಷಗಳು ಮೋಡಗಳಂತೆ ಹೊಳೆಯುವ, ತಲೆಗಳಲ್ಲಿ ಫಲಕಗಳಂತೆ* ಕಾಣುವ ಹೆರಳುಗಳನ್ನು ಹೂವಿನ ದಂಡೆಗಳಿಂದ ಅಲಂಕರಿಸಿಕೊಂಡಿರುವ ದಕ್ಷಿಣದೇಶದ ಹೆಂಗಸರಂತೆ ಕಾಣುತ್ತಿವೆ. ಈ ಮೊದಲು ಇಲ್ಲಿ ಯಾವ ವಿಧವಾದ ಶಬ್ದವೂ ಕೇಳಿಬರುತ್ತಿರಲಿಲ್ಲ. ನಿರ್ಜನವಾದ ಈ ಪ್ರದೇಶವು

---

*ಫಲಕ= ಎಂದರೆ ಪ್ರಸಿದ್ಧವಾದ ಅರ್ಥ–ಗುರಾಣಿ. ಗುರಾಣಿಯನ್ನು ಕೈಯಲ್ಲಿ ಹಿಡಿಯುತ್ತಾರೆ. ತಲೆಯಲ್ಲಿ ಧರಿಸುವುದಿಲ್ಲ. ಶಸ್ತ್ರಾಸ್ತ್ರಗಳ ಸಾಲನ್ನು ತಡೆಯುವ ತೊಗಲಿನ ಹಲಗೆ–ಎಂದೂ ನಿಘಂಟುಗಾರರು ವಿವರಣೆ ನೀಡಿದ್ದಾರೆ. ಅದು ಮೇಘದಂತೆ ಕಪ್ಪಾಗಿತ್ತೆಂದೂ ಅಂತಹುದನ್ನು ದಕ್ಷಿಣದೇಶದ ಸಿಪಾಯಿಗಳು ತಲೆಯಲ್ಲಿ ಧರಿಸುತ್ತಿದ್ದರೆಂದೂ ವ್ಯಾಖ್ಯಾನಕಾರರು ಅರ್ಥಮಾಡುತ್ತಾರೆ. ಇದು ಕ್ಲಿಷ್ಟವಾದ ಅರ್ಥ. ಹೂಗಳು ತುಂಬಿರುವ ವೃಕ್ಷಗಳನ್ನು ಸಿಪಾಯಿಗಳಿಗೆ ಹೋಲಿಸುವುದರಲ್ಲಿ ಯಾವ ಔಚಿತ್ಯವೂ ಇಲ್ಲ. ದಕ್ಷಿಣದೇಶದಲ್ಲಿ ಹೆಂಗಸರು ಹೆರಳುಗಳಿಗೆ ಹೂದಂಡೆಗಳನ್ನು ಮುಡಿದುಕೊಳ್ಳುತ್ತಾರೆ. ಹೆರಳು ದುಂಡಾಗಿದ್ದು ಚಿಕ್ಕ ಫಲಕ ಅಥವಾ ಗುರಾಣಿಯಂತೆಯೇ ಇರುತ್ತದೆ.

ಭಯಂಕರವಾಗಿಯೇ ಕಾಣುತ್ತಿದ್ದಿತು. ಈಗ ನಮ್ಮ ಸೈನಿಕರಿಂದಲೂ ಮತ್ತು ಪರಿವಾರದವರಿಂದಲೂ ನಿಬಿಡವಾಗಿರುವುದರಿಂದ ಈ ಪ್ರದೇಶವು ಅಯೋಧ್ಯೆಯಂತೆಯೇ ಕಾಣುತ್ತಿದೆ. ಕುದುರೆಯೇ ಮೊದಲಾದ ವಾಹನಗಳ ಕಾಲುಗಳ ಸಂಘಟ್ಟನಗಳಿಂದ ಮೇಲೆದ್ದ ಧೂಳಿಯು ಆಕಾಶದವರೆಗೂ ವ್ಯಾಪಿಸುತ್ತಿದೆ. ಆದರೆ ವಾಯುವು ಬಹುಶೀಘ್ರವಾಗಿ ನಮಗೆ ಪ್ರಿಯವನ್ನುಂಟುಮಾಡಲೋ ಎಂಬಂತೆ ಆ ಅಪಾರವಾದ ಧೂಳಿಯನ್ನೂ ಬೇರೆಡೆಗೆ ಚದುರಿಸಿಕೊಂಡು ಹೋಗುತ್ತಿದೆ. ಕುದುರೆಗಳಿಂದ ಎಳೆಯಲ್ಪಡುತ್ತಿರುವ ಮತ್ತು ಸಾರಥಿಗಳಿಂದ ಅಧಿಷ್ಠಿತವಾದ ಈ ರಥಗಳು ಶ್ರೀರಾಮನನ್ನು ನೋಡುವ ಕಾತುರದಿಂದ ನೆಗೆದು ಕೊಂಡು ವೇಗವಾಗಿ ಹೋಗುತ್ತಿರುವುದನ್ನಾದರೂ ನೋಡು, ಶತ್ರುಘ್ನ! ನಮ್ಮ ರಥಗಳ ಗಡ-ಗಡಾಶಬ್ದವನ್ನು ಕೇಳಿದೊಡನೆಯೇ ನಯನಮನೋಹರವಾಗಿರುವ ಈ ನವಿಲುಗಳು ಭಯಗೊಳ್ಳುತ್ತಿರುವುದನ್ನು ನೋಡು. ಹಾಗೆಯೇ ಪಕ್ಷಿಗಳೂ ಬೆದರಿ ಪರ್ವತದಲ್ಲಿರುವ ತಮ್ಮ ಗೂಡುಗಳಿಗೆ ಹೋಗಿ ಅಡಗಿಕೊಳ್ಳುತ್ತಿವೆ. ಈ ಪ್ರದೇಶವು ಬಹುರಮ್ಯವಾಗಿಯೂ, ಮನೋಜ್ಞವಾಗಿಯೂ ಇರುವಂತೆ ನನಗೆ ಭಾಸವಾಗುತ್ತಿದೆ. ತಪಸ್ವಿಗಳಿಗೆ ನಿವಾಸಸ್ಥಾನವಾಗಿರುವ ಈ ಪ್ರದೇಶವು ನಿಶ್ಚಯವಾಗಿಯೂ ಸ್ವರ್ಗಸದೃಶವಾಗಿದೆ. ಚುಕ್ಕಿಗಳಿರುವ ಹೆಣ್ಣುಜಿಂಕೆಗಳೊಡನೆ ಕೂಡಿರುವ ಗಂಡುಜಿಂಕೆಗಳು ಕುಸುಮಗಳಿಂದ ಚಿತ್ರಿತವಾಗಿವೆಯೋ ಎಂಬಂತೆ ಬಹಳ ಮನೋಜ್ಞವಾಗಿ ಕಾಣುತ್ತಿವೆ. ಶತ್ರುಘ್ನ! ನಮ್ಮ ಸೈನ್ಯವು ಇಲ್ಲಿಯೇ ಬಿಡಾರಮಾಡಲಿ. ಕಾಡಿನ ಎಲ್ಲೆಡೆಗಳಲ್ಲಿಯೂ ಹುಡುಕಲಿ. ಎಲ್ಲಿಯಾದರೂ ಪುರುಷಶ್ರೇಷ್ಠರಾದ ರಾಮ-ಲಕ್ಷ್ಮಣರು ಕಂಡಾರು."

ಭರತನ ಆ ಮಾತುಗಳನ್ನು ಕೇಳಿ ಶಸ್ತ್ರಪಾಣಿಗಳಾದ ಸೈನಿಕರು ಕಾಡಿನ ಎಲ್ಲ ಕಡೆಗಳಿಗೂ ಹೋಗಿ ಹುಡುಕುತ್ತಿದ್ದಾಗ ಚಿತ್ರಕೂಟದ ತಪ್ಪಲಿನಲ್ಲಿ ಹೊಗೆಯಾಡುತ್ತಿರುವುದನ್ನು ಕಂಡರು. ಒಡನೆಯೇ ಭರತನ ಬಳಿಗೆ ಬಂದು ಹೇಳಿದರು:

ನಾಮನುಷ್ಯೇ ಭವತ್ಯಗ್ನಿರ್ವ್ಯಕ್ತಮತ್ರೈವ ರಾಘವೌ ॥೨೨॥

"ಪ್ರಭುವೇ! ಮನುಷ್ಯರಿಲ್ಲದೆಡೆಯಲ್ಲಿ ಬೆಂಕಿಯಿರುವ ಸಾಧ್ಯತೆಯಿಲ್ಲ. ಇಲ್ಲಿ ಹೊಗೆಯಾಡುತ್ತಿರುವುದರಿಂದ ಅಗ್ನಿಯೂ ಇದೆ. ರಾಮ-ಲಕ್ಷ್ಮಣರೂ

ಇಲ್ಲಿಯೇ ಇದ್ದಾರೆ. ಒಂದು ವೇಳೆ ಶತ್ರುತಾಪಕರಾದ ನರಶ್ರೇಷ್ಠರಾದ ರಾಜಪುತ್ರರು–ಇಲ್ಲಿರದಿದ್ದರೆ ರಾಮಸದೃಶರಾದ ಬೇರೆ ತಪಸ್ವಿಗಳಾದರೂ ಇಲ್ಲಿ ಇರಬಹುದು. ಅವರನ್ನೇ ನಾವು ರಾಮನ ವಿಷಯವಾಗಿ ಪ್ರಶ್ನಿಸಬಹುದು."

ಸಾಧುಸಮ್ಮತವಾದ ಸೈನಿಕರ ಆ ಮಾತನ್ನು ಕೇಳಿ ಅರಿಮರ್ದನನಾದ ಭರತನು ಹೇಳಿದನು:

"ನೀವೆಲ್ಲರೂ ಸಾವಧಾನತೆಯಿಂದ ಇಲ್ಲಿಯೇ ಇರಿ. ಮುಂದಕ್ಕೆ ಬರ ಬೇಡಿರಿ. ನಾನೇ ಅಲ್ಲಿಗೆ ಹೋಗುತ್ತೇನೆ. ಸುಮಂತ್ರನೂ ಮತ್ತು ಗುರುಗಳಾದ ವಸಿಷ್ಠರೂ ನನ್ನೊಡನೆ ಬರುತ್ತಾರೆ."

ಹೀಗೆ ಭರತನು ಹೇಳಲು ಸೈನಿಕರು ಅಲ್ಲಿಯೇ ಸುತ್ತಲೂ ನಿಂತರು. ಭರತನು ಹೊಗೆಯಾಡುತ್ತಿದ್ದ ಕಡೆಗೆ ತನ್ನ ದೃಷ್ಟಿಯನ್ನು ಕೇಂದ್ರೀಕರಿಸಿದನು. ಭರತನಿಂದ ವ್ಯವಸ್ಥೆಗೊಳಿಸಲ್ಪಟ್ಟಿದ್ದ ಆ ಸೈನ್ಯವು ಮುಂಭಾಗದಲ್ಲಿ ದಟ್ಟವಾಗಿ ಹೊಗೆಯಾಡುತ್ತಿರುವುದನ್ನು ನೋಡುತ್ತಾ, ಅತ್ಯಲ್ಪಕಾಲದಲ್ಲಿಯೇ ಪ್ರಿಯನಾದ ಶ್ರೀರಾಮನ ಸಮಾಗಮವಾಗುವುದೆಂದು ತಿಳಿದು ಅತ್ಯಂತಸಂತೋಷಭರಿತವಾಗಿದ್ದಿತು.

೯೩ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೯೪ನೆಯ ಸರ್ಗ

ಶ್ರೀರಾಮನು ಸೀತಾದೇವಿಗೆ ಚಿತ್ರಕೂಟದ ಸೊಬಗನ್ನು ವರ್ಣಿಸುತ್ತಾ ತೋರಿಸಿದುದು

ದೀರ್ಘಕಾಲೋಷಿತಸ್ತಸ್ಮಿನ್ಗಿರೌ ಗಿರಿವನಪ್ರಿಯಃ ।
ವೈದೇಹ್ಯಾಃ ಪ್ರಿಯಮಾಕಾಂಕ್ಷನ್ಸ್ವಂ ಚ ಚಿತ್ತಂ ವಿಲೋಭಯನ್ ॥೧॥

ಅಥ ದಾಶರಥಿಶ್ಚಿತ್ರಂ ಚಿತ್ರಕೂಟಮದರ್ಶಯತ್ ।
ಭಾರ್ಯಾಮಮರಸಂಕಾಶಃ ಶಚೀಮಿವ ಪುರಂದರಃ ॥೨॥

ಚಿತ್ರಕೂಟಪರ್ವತದಲ್ಲಿ ಬಹಳ ದಿವಸಗಳಿಂದ ವಾಸಮಾಡುತ್ತಿದ್ದ, ಗಿರಿ ಗಳನ್ನೂ–ವನಗಳನ್ನೂ ಬಹಳವಾಗಿ ಪ್ರೀತಿಸುತ್ತಿದ್ದ, ದೇವಸದೃಶನಾದ

ದಾಶರಥಿಯು–ಭಾರ್ಯೆಯಾದ ವೈದೇಹಿಗೆ ಆಹ್ಲಾದವನ್ನುಂಟುಮಾಡ ಬೇಕೆಂಬ ಅಪೇಕ್ಷೆಯಿಂದಲೂ, ತನ್ನ ಮನಸ್ಸನ್ನು ಸಂತೋಷದ ಕಡೆಗೆ ಸೆಳೆಯುವುದಕ್ಕೂ (ವಿನೋದಕ್ಕೋಸ್ಕರವೂ) ನಾನಾವರ್ಣಗಳಿಂದ ಕೂಡಿದ್ದ ಚಿತ್ರಕೂಟಪರ್ವತದ ಸೊಬಗನ್ನು–ಇಂದ್ರನು ನಂದನವನದ ಸೊಬಗನ್ನು ಶಚೀದೇವಿಗೆ ವರ್ಣಿಸಿ ಹೇಳುವ ರೀತಿಯಲ್ಲಿ ವರ್ಣಿಸಿ ಹೇಳುತ್ತಿದ್ದನು:

"ಮಂಗಳಾಂಗಿಯೇ! ರಮಣೀಯವಾದ ಈ ಚಿತ್ರಕೂಟಪರ್ವತವನ್ನು ನೋಡಿದಮೇಲೆ ರಾಜ್ಯಭ್ರಷ್ಟನಾದೆನೆಂಬ ದುಃಖವಾಗಲೀ ಸುಹೃಜ್ಜನರನ್ನೂ, ಜ್ಞಾತಿ-ಬಾಂಧವರನ್ನೂ ಅಗಲಿದ ದುಃಖವಾಗಲೀ–ನನ್ನ ಮನಸ್ಸನ್ನು ಪೀಡಿಸುತ್ತಿಲ್ಲ, ನಾನಾವಿಧವಾದ ಪಕ್ಷಿಗಳಿಂದ ಸಮಾವೃತವಾಗಿರುವ, ಗಗನ ಚುಂಬಿಯಾದ ಶಿಖರಗಳಿಂದ ಕೂಡಿರುವ, ನಾನಾಬಗೆಯ ಗೈರಿಕಾದಿ ಧಾತು ಗಳಿಂದ ಸಮಲಂಕೃತವಾಗಿರುವ ಈ ಚಿತ್ರಕೂಟಪರ್ವತವನ್ನು ನೋಡು. ವೈದೇಹಿ! ಈ ಪರ್ವತಪ್ರದೇಶದಲ್ಲಿ ಕಾಣುತ್ತಿರುವ ಕೆಲವು ಧಾತುಗಳು ಬೆಳ್ಳಿಯಂತೆ ಕಾಣುತ್ತಿವೆ. ಕೆಲವು ರಕ್ತವರ್ಣವಾಗಿವೆ. ಕೆಲವು ಹಳದಿ ಮತ್ತು ಅಚ್ಚ ಹಳದೀ ಬಣ್ಣದಿಂದ ಕೂಡಿವೆ. ಮತ್ತೆ ಕೆಲವು ಶ್ರೇಷ್ಠವಾದ ಇಂದ್ರನೀಲಮಣಿಯಂತೆ ಶೋಭಾಯಮಾನವಾಗಿವೆ. ಇನ್ನೂ ಕೆಲವು ಪುಷ್ಯರಾಗದ ಕಾಂತಿಯಿಂದಲೂ ಸ್ಫಟಿಕದ ಕಾಂತಿಯಿಂದಲೂ ಬೆಳಗುತ್ತಿವೆ. ಕೆಲವು ಕೇದಿಗೆಯ ಹೂವಿನಂತಿದ್ದರೆ ಕೆಲವು ಎಕ್ಕದ ಹೂವಿನಂತೆ ಪ್ರಕಾಶಿಸು ತ್ತಿವೆ. ಕೆಲವು ಧಾತುಗಳು ನಕ್ಷತ್ರಗಳ ಕಾಂತಿಯಿಂದಲೂ, ಇನ್ನೂ ಕೆಲವು ಪಾದರಸದಂತೆಯೂ ಹೊಳೆಯುತ್ತಿವೆ. ನಾನಾವಿಧವಾದ ಜಿಂಕೆಗಳ ಸಮೂಹ ಗಳಿಂದಲೂ, ದುಷ್ಟಭಾವವಿಲ್ಲದ ಮಹಾವ್ಯಾಘ್ರಗಳಿಂದಲೂ, ಕ್ಷುದ್ರವ್ಯಾಘ್ರ ಗಳಿಂದಲೂ, ನಾನಾವಿಧವಾದ ಪಕ್ಷಿಗಳಿಂದಲೂ ವ್ಯಾಪ್ತವಾಗಿರುವ ಈ ಪರ್ವ ತವು ಬಹಳ ಶೋಭಾಯಮಾನವಾಗಿ ಕಾಣುತ್ತಿದೆ. ಫಲ-ಪುಷ್ಪಗಳಿಂದ ಸಮೃದ್ಧವಾಗಿರುವ ಮಾವು, ನೇರಳೆ, ಹೊನ್ನೆ, ಬಿಳಿಯ ಸಾಲ, ಲೋಧ್ರ, ಪ್ರಿಯಾಲ, ಹಲಸು, ಅಂಕೋಲ, ಭವ್ಯ, ನ್ಯಬ್ಜ, ತಿನಿಶ, ಬಿಲ್ವ, ತಿಂದುಕ, ಕಾಲಸ್ಕಂದ, ಬಿದಿರು, ಕಾಶ್ಮರೀ (ಮಧುಪರ್ಣಿಕಾ), ಅರಿಷ್ಟ, ನಿಂಬೆ, ಮದೂಕ, ವರುಣ, ತಿಕ್ತಶಾಕ, ಕುಡಪುಕ್ಷ, ತಿಲಕ, ಬದರಿ, ನೆಲ್ಲಿ, ಬೇವು, ಕದಂಬ, ಬೆತ್ತ, ಇಂದ್ರವೃಕ್ಷ, ಬೀಜಕ (ದಾಡಿಮೆ), ಸೀತಾಫಲ, ಆಲ,

ಅಂಜೂರ, ಅತ್ತಿ–ಇವೇ ಮೊದಲಾದ ವೃಕ್ಷಗಳಿಂದ ವ್ಯಾಪ್ತವಾಗಿರುವ ಈ ಅರಣ್ಯವು ತನ್ನ ಸೊಬಗನ್ನು ಹೆಚ್ಚಿಸಿಕೊಳ್ಳುತ್ತಿದೆ. ರಮ್ಯವಾದ ಈ ಮಹಾಗಿರಿಯ ತಪ್ಪಲುಪ್ರದೇಶಗಳಲ್ಲಿ ನೋಡುವವರಿಗೆ ರೋಮಾಂಚನ ವನ್ನುಂಟುಮಾಡುವ, ಸ್ವೇಚ್ಛೆಯಿಂದ ಮನಬಂದಂತೆ ವಿಹರಿಸುತ್ತಿರುವ ಕಿನ್ನರರ ಜೋಡಿಗಳನ್ನು ನೋಡು, ವೈದೇಹಿ! ವಿದ್ಯಾಧರ-ವಿದ್ಯಾಧರಿಯರು ಕ್ರೀಡೆಯಾಡುತ್ತಿರುವ ಮನೋಹರವಾದ ಈ ಪ್ರದೇಶವನ್ನು ನೋಡು. ವಿದ್ಯಾಧರರು ತಮ್ಮ ಖಡ್ಗಗಳನ್ನೂ, ವಿದ್ಯಾಧರಿಯರು ತಮ್ಮ ನವಿರಾದ ವಸ್ತ್ರಗಳನ್ನೂ ವೃಕ್ಷಗಳ ಮೇಲಿಟ್ಟು ಮನಬಂದಂತೆ ವಿಹರಿಸುತ್ತಿದ್ದಾರೆ. ಈ ಪರ್ವತದ ಕೆಲವೆಡೆಗಳಲ್ಲಿ ನೀರಿನ ಪ್ರವಾಹವು ಧುಮ್ಮಿಕ್ಕುತ್ತಿದೆ. ಕೆಲವೆಡೆಗಳಲ್ಲಿ ಸಣ್ಣ-ಸಣ್ಣ ಝರಿಗಳು ಹರಿಯುತ್ತಿವೆ. ಕೆಲವೆಡೆಗಳಲ್ಲಿ ನೀರಿನ ಬುಗ್ಗೆಗಳಿವೆ. ಇದನ್ನು ನೋಡಿದರೆ ಕುಂಭಸ್ಥಳಗಳಿಂದ ಮದೋದಕವನ್ನು ಸುರಿಸುತ್ತಿರುವ ಆನೆಯಂತೆಯೇ ಈ ಪರ್ವತವು ಕಾಣುತ್ತಿದೆ. ವಾಯುವು ನಾನಾವಿಧವಾದ ಸುಗಂಧಯುಕ್ತವಾದ ವನಸುಮಗಳ ಮೇಲೆ ಬೀಸಿ ಸುಗಂಧವನ್ನು ಹೊತ್ತು ಗುಹಾದ್ವಾರಕ್ಕೆ ತಂದು ಮೂಗಿಗೆ ಸಂತೃಪ್ತಿಯನ್ನುಂಟುಮಾಡುತ್ತಿದ್ದರೆ–ಯಾವ ಮನುಷ್ಯನಿಗೆ ತಾನೇ ಆನಂದವಾಗುವುದಿಲ್ಲ? ನಾನು ಇಂತಹ ಅನುಪಮವಾದ ಪ್ರಕೃತಿಸೌಂದರ್ಯದಿಂದ ಕೂಡಿರುವ ಪ್ರದೇಶದಲ್ಲಿ ನಿನ್ನೊಡನೆ ಮತ್ತು ಲಕ್ಷ್ಮಣನೊಡನೆ ಹಲವಾರು ಸಂವತ್ಸರಗಳನ್ನು ಆನಂದದಿಂದ ಕಳೆದು ಬಿಡುವೆನು. ಇಲ್ಲಿ ಇರುವವರೆಗೂ ಯಾವ ವಿಧವಾದ ಶೋಕವೂ ನನ್ನನ್ನು ಪೀಡಿಸುವುದಿಲ್ಲ. ಹಲವಾರು ಪುಷ್ಪಲತೆಗಳಿಂದಲೂ ಫಲವೃಕ್ಷಗಳಿಂದಲೂ ಕೂಡಿರುವ, ಬಹಳ ರಮ್ಯವಾಗಿರುವ ನಾನಾವಿಧವಾದ ಪಕ್ಷಿಸಮೂಹಗಳಿಂದ ವ್ಯಾಪ್ತವಾಗಿರುವ, ವಿಚಿತ್ರವಾಗಿರುವ ಈ ಚಿತ್ರಕೂಟಪರ್ವತದಲ್ಲಿಯೇ ನನ್ನ ಮನಸ್ಸು ಮಗ್ನವಾಗಿ ಹೋಗಿದೆ. ಜಾನಕಿ! ಈ ಅರಣ್ಯವಾಸದಿಂದ ನಾನು ಎರಡು ವಿಧವಾದ ಫಲಗಳನ್ನು ಪಡೆದುಕೊಂಡಿರುತ್ತೇನೆ. ಧರ್ಮದ ವಿಷಯದಲ್ಲಿ ತಂದೆಯನ್ನು ಋಣಮುಕ್ತನನ್ನಾಗಿ ಮಾಡಿದುದು ಮೊದಲನೆಯದು; ಭರತನಿಗೆ ಪ್ರಿಯವಾಗುವ ಕಾರ್ಯವನ್ನು ಮಾಡಿದುದು ಎರಡನೆಯದು.*

---

* ಕೈಕೇಯಿಗೆ ಕೊಟ್ಟ ವರಗಳನ್ನು ಪರಿಪಾಲಿಸುವುದೇ ದಶರಥನ ಧರ್ಮಸಂಬಂಧ

ಭಾಮಿನಿ! ಮನಸ್ಸು, ಮಾತು ಮತ್ತು ಶರೀರಗಳನ್ನು ಉಲ್ಲಾಸಗೊಳಿಸುವ ವಿಧ-ವಿಧವಾದ ಭಾವಗಳನ್ನು ನೋಡುತ್ತಾ ಈ ಚಿತ್ರಕೂಟಪರ್ವತದಲ್ಲಿ ನನ್ನೊಡನೆ ಆನಂದಿಸುವೆಯಲ್ಲವೇ?

ಇದಮೇವಾಮೃತಂ ಪ್ರಾಹೂ ರಾಜ್ಞಿ ರಾಜರ್ಷಯಃ ಪರೇ ।
ವನವಾಸಂ ಭವಾರ್ಥಾಯ ಪ್ರೇತ್ಯ ಮೇ ಪ್ರಪಿತಾಮಹಾಃ ॥೧೯॥

ಲೋಕಕಲ್ಯಾಣದಲ್ಲಿ ಪ್ರವೃತರಾಗಿದ್ದ ಶ್ರೇಷ್ಠರಾದ ರಾಜರ್ಷಿಗಳು ನಿಯಮಪೂರ್ವಕವಾಗಿ ಮಾಡುವ ಈ ವನವಾಸವನ್ನೇ ಅಮೃತವೆಂದೂ ಮರಣಾನಂತರ ಮೋಕ್ಷಸಾಧನವೆಂದೂ ಹೇಳಿರುವರು.[1]

ನೀಲಿ, ಹಳದಿ, ಕೆಂಪು, ಬಿಳುಪು–ಇವೇ ಮುಂತಾದ ಹಲವಾರು ವರ್ಣಗಳಿಂದ ಕೂಡಿರುವ, ವಿಶಾಲವಾಗಿರುವ ಮತ್ತು ಹೇರಳವಾಗಿರುವ ಬಂಡೆಗಳು ಈ ಪರ್ವತದ ಸುತ್ತಲೂ ಸಾವಿರಾರು ಸಂಖ್ಯೆಯಲ್ಲಿದ್ದು ಈ ಚಿತ್ರಕೂಟ ಪರ್ವತವನ್ನು ಅತ್ಯಂತಶೋಭಾಯಮಾನವನ್ನಾಗಿ ಮಾಡಿವೆ. ಪರ್ವತರಾಜನಲ್ಲಿರುವ ಸಾವಿರಾರು ಓಷಧೀಲತೆಗಳು ತಮ್ಮ ಕಾಂತಿಯೆಂಬ ಸಂಪತ್ತಿನಿಂದ ಯಜ್ಞೇಶ್ವರನ ಜ್ವಾಲೆಗಳೋಪಾದಿಯಲ್ಲಿ ರಾತ್ರಿಯ ಕಾಲದಲ್ಲಿ ದೇದೀಪ್ಯ

ವಾದ ಋಣ. ರಾಮನು ವನವಾಸಮಾಡದೇ ಇದ್ದಿದ್ದರೆ ದಶರಥನು ಈ ಋಣದಿಂದ ವಿಮುಕ್ತನಾಗುತ್ತಿರಲಿಲ್ಲ.

[1] 'ಭವಾರ್ಥಾಯ' ಎಂಬುದಕ್ಕೆ ಲೋಕಕಲ್ಯಾಣಾಯ= ಲೋಕಕಲ್ಯಾಣಕ್ಕೋಸ್ಕರ ಎಂಬ ಅರ್ಥವನ್ನು ತೆಗೆದುಕೊಂಡು ಹೀಗೆ ವ್ಯಾಖ್ಯೆಮಾಡಲಾಗಿದೆ. 'ಭವಾರ್ಥಾಯ' ಎಂಬುದಕ್ಕೆ ಭವಸ್ಯ= ಈಶ್ವರನ, ಅರ್ಥಾಯ= ಸಂಪ್ರಾಪ್ತಿಗಾಗಿ, ಈಶ್ವರಾರ್ಥವಾಗಿ ಎಂಬ ಒಬ್ಬ ವ್ಯಾಖ್ಯಾನಕಾರರು ವ್ಯಾಖ್ಯೆಮಾಡಿರುತ್ತಾರೆ. ಈಶ್ವರಪ್ರಾಪ್ತಿಗಾಗಿ ನಮ್ಮ ಪ್ರಪಿತಾಮಹರು ವನವಾಸವನ್ನು ಆಚರಿಸುತ್ತಿದ್ದರು. (ಈಶ್ವರಪ್ರಾಪ್ತಿಯ ಅನುಭವವನ್ನು ಪಡೆದರು) ಈ ವನವಾಸವೇ ಅಮೃತಪ್ರಾಯವಾದುದು; ಮೋಕ್ಷಸಾಧಕವಾದುದು–ಎಂದು ಹೇಳಿದರು. ಭವಾರ್ಥಾಯ= ಸಂಸಾರವಿನಾಶಾಯ. ಸಂಸಾರವಿನಾಶಕ್ಕಾಗಿ (ಭವಬಂಧನಮುಕ್ತಿಗಾಗಿ) ಶ್ರೇಷ್ಠರಾಜರ್ಷಿಗಳಾದ ನನ್ನ ಪ್ರಪಿತಾಮಹರು ವನವಾಸವನ್ನು ನಿಯಮದಿಂದ ಆಚರಿಸುತ್ತಾ ಈ ವನವಾಸವೇ "ಅಮೃತಂ"= ಅಮೃತಪ್ರಾಯವಾದುದು ಮೋಕ್ಷಕ್ಕೆ ಸಾಧನವಾದುದು ಎಂದು ಸಾರಿದರು. ಹೀಗೆ ಮತ್ತೊಬ್ಬರು ಅರ್ಥಮಾಡಿರುತ್ತಾರೆ.

ಭವಾರ್ಥಾಯ = ದೇವಾದಿದೇಹಾನ್ತರಪರಿಗ್ರಹರೂಪಪ್ರಯೋಜನಾಯ= ದೇವಾದಿ

ಮಾನವಾಗಿ ಬೆಳಗುತ್ತಿರುತ್ತವೆ. ಈ ಪರ್ವತದಲ್ಲಿರುವ ಕೆಲವು ಪ್ರದೇಶಗಳು ಮನೆಗಳಂತೆಯೇ ಕಾಣುತ್ತವೆ. ಕೆಲವು ಪ್ರದೇಶಗಳು ಉದ್ಯಾನವನಗಳಂತೆ ಕಾಣುತ್ತವೆ. ಕೆಲವು ಪ್ರದೇಶಗಳು ಒಂದೇ ಶಿಲೆಯಲ್ಲಿ ನಿರ್ಮಿತವಾಗಿರುವಂತೆ ಕಾಣುತ್ತವೆ. ಈ ಪರ್ವತವು ಭೂಮಿಯನ್ನು ಸೀಳಿಕೊಂಡು ಹೊರಗೆ ಬಂದಿರುವಂತೆಯೇ ಕಾಣುತ್ತದೆ. ಚಿತ್ರಕೂಟಪರ್ವತದ ತುಟ್ಟ ತುದಿಯು ಎಲ್ಲ ಕಡೆಗಳಲ್ಲಿಯೂ ಶೋಭಾಯಮಾನವಾಗಿ ಕಾಣುತ್ತಿದೆ. ಕನ್ನೈದಿಲೆ, ಪುನ್ನಾಗ, ಭೂರ್ಜಪತ್ರ ಇವುಗಳ ಎಲೆಗಳನ್ನು ಕೆಳಭಾಗದಲ್ಲಿಯೂ–ಕಮಲಪುಷ್ಪಗಳ ದಳಗಳನ್ನು ಮೇಲ್ಭಾಗದಲ್ಲಿಯೂ ಹಾಕಿ ಸಜ್ಜುಗೊಳಿಸಿರುವ ಕಾಮಿಗಳ ಈ ಹಾಸಿಗೆಗಳನ್ನು ನೋಡು, ವೈದೇಹಿ!

ಕಾಮಿಗಳಿಂದ ಧರಿಸಲ್ಪಟ್ಟಿದ್ದ ಕಮಲಪುಷ್ಪಗಳ ಮಾಲಿಕೆಗಳು ಆಲಿಂಗನಾದಿ ಶೃಂಗಾರಚೇಷ್ಟೆಗಳಿಂದಾಗಿ ಬಾಡಿ ಉದುರಿಹೋಗಿ ಕೆಳಗೆ ಬಿದ್ದಿವೆ. ನಾನಾವಿಧವಾದ ಹಣ್ಣುಗಳೂ ಅರ್ಧಂಬರ್ಧ ತಿನ್ನಲ್ಪಟ್ಟು ಕಮಲ ಪುಷ್ಪಗಳ ಹಾಸಿಗೆಗಳ ಪಕ್ಕದಲ್ಲಿ ಬಿದ್ದಿವೆ. ಕಂದ-ಮೂಲ-ಫಲಗಳಿಂದಲೂ, ಸ್ವಚ್ಛವಾದ ನೀರಿನಿಂದಲೂ ಸಮೃದ್ಧವಾಗಿರುವ ಈ ಚಿತ್ರಕೂಟಪರ್ವತವು ಕುಬೇರನ ಅಲಕಾಪಟ್ಟಣವನ್ನೂ, ಇಂದ್ರನ ಅಮರಾವತಿಯನ್ನೂ, ಉತ್ತರ ಕುರುಗಳ ದೇಶಗಳನ್ನೂ ತನ್ನದೇ ಆದ ಸೌಂದರ್ಯದಿಂದ ಮೀರಿಸಿದೆ. ಶ್ರೇಷ್ಠವಾದ ನಿಯಮಗಳಿಂದಿದ್ದು ಸತ್ಪುರುಷರ ಮಾರ್ಗಾನುಸರಣೆಮಾಡುತ್ತಾ ಈ ಹದಿನಾಲ್ಕು ವರ್ಷಗಳ ವನವಾಸವನ್ನು ನಿನ್ನೊಡನೆಯೂ ಮತ್ತು ಲಕ್ಷ್ಮಣ ನೊಡನೆಯೂ ಈ ಚಿತ್ರಕೂಟಪರ್ವತದಲ್ಲಿಯೇ ವಿಹರಿಸುತ್ತಾ ಕಳೆಯುತ್ತೇನೆ.

ದೇಹಾಂತರಗಳನ್ನು ಪಡೆಯುವ ಪ್ರಯೋಜನಾರ್ಥವಾಗಿ ಎಂದು ಮತ್ತೊಬ್ಬರು ವ್ಯಾಖ್ಯೆಮಾಡಿರುತ್ತಾರೆ. ಅಮೃತಂ= ಮೋಕ್ಷ, "ಅಮೃತಂ ಯಜ್ಞಶೇಷೇ ಸ್ಯಾತ್ಪೀಯೂಷೇ ಸಲಿಲೇ ಘೃತೇ । ಅಯಾಚಿತೇ ಚ ಮೋಕ್ಷೇ ಚ ಧನ್ವನ್ತರಿಸುವರ್ಣಯೋಃ" [ವೈಜಯನ್ತೀ] ನಯನಮನೋಹರವಾದ ಈ ಚಿತ್ರಕೂಟಪರ್ವತದ ಅರಣ್ಯವು ಬರೀ ಕಾಮಪ್ರಚೋದಕವಾದುದಲ್ಲ; ಮೋಕ್ಷದಾಯಕವಾದುದೂ ಆಗಿರುವುದು. ಯುವಕರಾದ ಗಂಧರ್ವಾಪ್ಸರೆಯರಿಗೆ, ಕಿನ್ನರರಿಗೆ, ವಿದ್ಯಾಧರರಿಗೆ ಇದು ರಮಿಸುವ ಸ್ಥಾನವಾಗಿದ್ದರೆ–ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ಇಲ್ಲಿಗಾಗಮಿಸುವ ರಾಜರ್ಷಿಗಳಿಗಿದು ಪರಮಪದವನ್ನು ದೊರಕಿಸಿಕೊಡುವ ಸ್ಥಾನವೆಂಬ ಅಭಿಪ್ರಾಯವನ್ನು ರಾಮನಿಲ್ಲಿ ಹೇಳಿದ್ದಾನೆ.

ಅನಂತರ ನಾನು ಕುಲಧರ್ಮದ ಗೌರವವನ್ನು ಹೆಚ್ಚಿಸುವ ಸಂತೋಷವನ್ನು ಪಡೆಯುತ್ತೇನೆ."

೯೪ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೯೫ನೆಯ ಸರ್ಗ

ಶ್ರೀರಾಮನು ಸೀತೆಗೆ ಮಂದಾಕಿನೀನದಿಯನ್ನು ವರ್ಣಿಸಿ ಹೇಳಿದುದು

ಅಥ ಶೈಲಾದ್ವಿನಿಷ್ಕ್ರಮ್ಯ ಮೈಥಿಲೀಂ ಕೋಸಲೇಶ್ವರಃ ।
ಅದರ್ಶಯಚ್ಛುಭಜಲಾಂ ರಮ್ಯಾಂ ಮನ್ದಾಕಿನೀಂ ನದೀಮ್ ॥೧॥

ಕೋಸಲೇಶ್ವರನಾದ ಶ್ರೀರಾಮನು ಚಿತ್ರಕೂಟಪರ್ವತದ ಸೊಬಗನ್ನು ಸೀತಾದೇವಿಗೆ ತೋರಿಸಿದನಂತರ ಪರ್ವತದಿಂದ ಕೆಳಗಿಳಿದು ಮಂಗಳಕರವಾದ ನೀರಿನಿಂದ ಕೂಡಿದ್ದ, ಬಹುರಮ್ಯವಾಗಿದ್ದ ಮಂದಾಕಿನೀನದಿಯನ್ನು ತೋರಿಸಿದನು.

ರಾಜೀವಲೋಚನನಾದ ಶ್ರೀರಾಮನು ಶ್ರೇಷ್ಠವಾದ ಜಘನಪ್ರದೇಶ ದಿಂದ ಕೂಡಿದ್ದ ಹುಣ್ಣಿಮೆಯ ಚಂದ್ರನಂತೆ ಮುಖವುಳ್ಳ ವಿದೇಹರಾಜನ ಮಗಳಿಗೆ ಮಂದಾಕಿನೀನದಿಯನ್ನು ವರ್ಣಿಸುತ್ತಾ ಹೇಳಿದನು:

"ವೈದೇಹಿ! ವಿಚಿತ್ರವಾದ ಮಳಲಿನಿಂದ ಕೂಡಿರುವ, ರಮ್ಯವಾಗಿರುವ, ಹಂಸ-ಸಾರಸಪಕ್ಷಿಗಳಿಂದ ಸೇವಿಸಲ್ಪಡುತ್ತಿರುವ, ಕಮಲಪುಷ್ಪಗಳಿಂದ ಸಂಪನ್ನವಾಗಿರುವ ಈ ಮಂದಾಕಿನೀನದಿಯನ್ನು ನೋಡು. ಈ ನದಿಯ ಎರಡು ದಂಡೆಗಳಲ್ಲಿಯೂ ನಾನಾವಿಧವಾದ ಫಲ-ಪುಷ್ಪಗಳಿಂದ ಕೂಡಿರುವ ವೃಕ್ಷಗಳು ಸೊಂಪಾಗಿ ಬೆಳೆದಿವೆ. ಈ ನದಿಯು ರಾಜರಾಜನಾದ ಕುಬೇರನ ಸೌಗಂಧಿಕಸರೋವರದಂತೆಯೇ ಪರಿಶೋಭಿಸುತ್ತಿದೆ. ಮೃಗಗಳ ಗುಂಪು ಈಗ ತಾನೇ ಈ ತೀರಪ್ರದೇಶದಲ್ಲಿಳಿದು ನೀರನ್ನು ಕುಡಿದು ಕದಡಿಹೋಗಿವೆ. ಆದುದರಿಂದಲೇ ಈಗ ನೀರು ಕಲುಷಿತವಾಗಿರುವಂತೆ ಕಾಣುತ್ತದೆ. ಆದರೆ ರಮಣೀಯವಾದ ಈ ನದಿಯ ಸೋಪಾನಮಾರ್ಗಗಳು ನನ್ನ ಮನಸ್ಸಿಗೆ ಆನಂದವನ್ನುಂಟುಮಾಡುತ್ತಿವೆ.

ಪ್ರೇಯಸಿಯೇ! ಜಟೆಗಳನ್ನೂ, ಕೃಷ್ಣಾಜಿನಗಳನ್ನೂ, ನಾರುಬಟ್ಟೆಯ ಉತ್ತರೀಯಗಳನ್ನೂ ಧರಿಸಿರುವ ಋಷಿಗಳು ಪವಿತ್ರವಾದ ಈ ಮಂದಾಕಿನೀನದಿಯಲ್ಲಿ ಅನುದಿನವೂ ಸ್ನಾನಮಾಡುತ್ತಾರೆ. ಬಹುತೀಕ್ಷ್ಣವಾದ ನಿಯಮಾನುಷ್ಠಾನಗಳುಳ್ಳ ಮುನಿಗಳು ಕೈಗಳನ್ನು ಮೇಲೆತ್ತಿ ಈ ನದಿಯ ತೀರದಲ್ಲಿ ಸೂರ್ಯೋಪಾಸನೆಯನ್ನು ಮಾಡುತ್ತಿರುತ್ತಾರೆ. ನದಿಯ ತೀರದಲ್ಲಿ ವೃಕ್ಷಗಳ ಪಕ್ಕದಲ್ಲಿಯೇ ಚಿತ್ರಕೂಟಪರ್ವತವೂ ಇದೆ. ಗಾಳಿಯಿಂದ ಅಳ್ಳಾಡಿಸಲ್ಪಟ್ಟ ಪುಷ್ಪವೃಕ್ಷಗಳ ರೆಂಬೆಗಳಿಂದ ಪುಷ್ಪಗಳು ನದಿಯ ಸುತ್ತಲೂ ಉದುರುತ್ತಿವೆ. ಇದನ್ನು ನೋಡಿದರೆ ಪರ್ವತರಾಜನೇನಾದರೂ ಪುಷ್ಪಾಂಜಲಿಯನ್ನು ಅರ್ಪಿಸುತ್ತಾ ನೃತ್ಯಮಾಡುತ್ತಿರುವನೋ ಎಂಬಂತೆ ಕಾಣುತ್ತಿದೆ. ಅಲ್ಲಿ ನೋಡು ವೈದೇಹೀ! ಕೆಲವೆಡೆಗಳಲ್ಲಿ ಈ ನದಿಯ ನೀರು ಮುತ್ತಿನ ಮಣಿಯಂತೆ ಸ್ವಚ್ಛವಾಗಿದೆ. ಕೆಲವೆಡೆಗಳಲ್ಲಿ ಮಳಲಿನಿಂದ ಕೂಡಿದೆ. ಕೆಲವೆಡೆಗಳಲ್ಲಿ ಸಿದ್ಧಪುರುಷರಿಂದ ವ್ಯಾಪ್ತವಾಗಿದೆ. ಮಂದಾಕಿನೀನದಿಯ ಎರಡು ತೀರಗಳಲ್ಲಿಯೂ ಇರುವ ಪುಷ್ಪಭರಿತವಾದ ಮರಗಳಿಂದ ಗಾಳಿಯಿಂದ ಉದುರಿದ ಪುಷ್ಪಗಳ ರಾಶಿಗಳು ಎಲ್ಲ ಕಡೆಗಳಲ್ಲಿಯೂ ವ್ಯಾಪಿಸಿ ನದಿಯ ಪ್ರವಾಹದಲ್ಲಿ ತೇಲಿಕೊಂಡು ಹೋಗುತ್ತಿವೆ. ಮನೋಹರವಾಗಿ ನಿನಾದಮಾಡುವ ಚಕ್ರವಾಕಪಕ್ಷಿಗಳು ಪ್ರವಾಹದಲ್ಲಿ ತೇಲಿಕೊಂಡು ಹೋಗುತ್ತಿರುವ ಪುಷ್ಪಗಳ ಗುಚ್ಛಗಳ ಮೇಲೆ ಕುಳಿತು ಮಂಗಳಕರವಾಗಿ ಶಬ್ದಮಾಡುತ್ತಿರುವುದನ್ನಾದರೂ ನೋಡು; ಸೀತೆ!

ದರ್ಶನಂ ಚಿತ್ರಕೂಟಸ್ಯ ಮನ್ದಾಕಿನ್ಯಾಶ್ಚ ಶೋಭನೇ ।
ಅಧಿಕಂ ಪುರವಾಸಾಚ್ಚ ಮನ್ಯೇ ತವ ಚ ದರ್ಶನಾತ್ ॥೧೨॥

ಶೋಭನಳೇ! ಪರ್ವತದ ಮತ್ತು ನದಿಯ ಸೊಬಗನ್ನು ನೋಡುತ್ತಿರುವ ನನಗೆ ಚಿತ್ರಕೂಟದಲ್ಲಿ ವಾಸಮಾಡುವುದು ಅಯೋಧ್ಯೆಯಲ್ಲಿ ವಾಸ ಮಾಡುವುದಕ್ಕಿಂತಲೂ ಹೆಚ್ಚು ಸುಖಾವಹವೆಂದೂ ಮಂದಾಕಿನೀನದಿಯ ದರ್ಶನವು ನಿನ್ನ ದರ್ಶನಕ್ಕಿಂತಲೂ ಕಣ್ಣು ಮತ್ತು ಮನಸ್ಸುಗಳಿಗೆ ಹೆಚ್ಚು ಉಲ್ಲಾಸದಾಯಕವೆಂದೂ ಭಾಸವಾಗುತ್ತಿದೆ.

ಪಾಪಗಳನ್ನು ಕಳೆದುಕೊಂಡಿರುವ, ಜಿತೇಂದ್ರಿಯರಾದ, ಶಾಂತವಾದ

ಸ್ವಭಾವವುಳ್ಳ ಸಿದ್ಧಪುರುಷರು ಇಲ್ಲಿ ನಿತ್ಯವೂ ಸ್ನಾನಮಾಡುವುದರಿಂದ ಅವರ ಪಾದಧೂಳಿಯಿಂದ ಪರಮಪವಿತ್ರವಾದ ನದಿಯಲ್ಲಿ ನನ್ನೊಡನೆ ನೀನೂ ಸ್ನಾನಮಾಡು. ಒಬ್ಬ ಸಖಿಯು ಮತ್ತೊಬ್ಬ ಸಖಿಯೊಡನೆ ಕ್ರೀಡಿಸುವಂತೆ ನೀನು ಈ ಮಂದಾಕಿನೀನದಿಯಲ್ಲಿರುವ ಕೆಂಪಾದ ಮತ್ತು ಬಿಳಿಯದಾದ ಕಮಲಗಳನ್ನು ನೀರಿನ ಏರಿಳಿತಗಳಿಂದ ಮುಳುಗಿಸುತ್ತಾ ಸ್ನಾನಮಾಡು.

ತ್ವಂ ಪೌರಜನವದ್ವ್ಯಾಲಾನಯೋಧ್ಯಾಮಿವ ಪರ್ವತಮ್ ।
ಮನ್ಯಸ್ವ ವನಿತೇ ನಿತ್ಯಂ ಸರಯೂವದಿಮಾಂ ನದೀಮ್ ॥೧೫॥

ವೈದೇಹಿ! ಚಿತ್ರಕೂಟಪರ್ವತವನ್ನೇ ಅಯೋಧ್ಯೆಯೆಂದು ಭಾವಿಸು. ಇಲ್ಲಿರುವ ವನಚರಪ್ರಾಣಿಗಳನ್ನೇ ಅಯೋಧ್ಯೆಯ ಪೌರರೆಂದು ಭಾವಿಸು. ಮಂದಾಕಿನೀನದಿಯನ್ನೇ ಸರಯೂನದಿಯೆಂದು ಭಾವಿಸು.

ಧರ್ಮಾತ್ಮನಾದ ಲಕ್ಷ್ಮಣನೂ ನನ್ನ ನಿರ್ದೇಶಾನುಸಾರವಾಗಿಯೇ ನಡೆದುಕೊಳ್ಳುತ್ತಿದ್ದಾನೆ. ನೀನೂ ಕೂಡ ನನ್ನ ಮನಸ್ಸಿಗೆ ಆಹ್ಲಾದ ವನ್ನುಂಟುಮಾಡುತ್ತಾ ನನಗೆ ಅನುಕೂಲಳಾಗಿರು. ನಿನ್ನೊಡನೆ ನಾನು ಅನುದಿನವೂ ಮೂರು ಹೊತ್ತು ಈ ಪುಣ್ಯನದಿಯಲ್ಲಿ ಸ್ನಾನಮಾಡುತ್ತಾ ಇಲ್ಲಿ ಸಿಕ್ಕುವ ಜೇನುತುಪ್ಪವನ್ನೂ ಕಂದ-ಮೂಲ- ಫಲಗಳನ್ನೂ ಸೇವಿಸುತ್ತಾ ಇರುತ್ತೇನೆ. ಈಗ ನಾನು ಅಯೋಧ್ಯಾ ವಾಸಕ್ಕಾಗಲೀ ರಾಜ್ಯಸಿಂಹಾಸನ ಕ್ಕಾಗಲೀ ಆಸೆಪಡುವುದಿಲ್ಲ.

ಸೀತೆ! ಈ ನದಿಯು ಅತ್ಯಂತರಮಣೀಯವಾಗಿದೆ. ಆಗಿಂದಾಗ್ಗೆ ಆನೆಗಳ ಹಿಂಡುಗಳು ಬಂದು ಈ ನದಿಯ ನೀರನ್ನು ಅಲ್ಲೋಲ-ಕಲ್ಲೋಲ ಗೊಳಿಸುತ್ತವೆ. ಆನೆ-ಸಿಂಹ-ಕಪಿ ಇವೇ ಮೊದಲಾದ ವನ್ಯಪ್ರಾಣಿಗಳು ಈ ನದಿಯ ನೀರನ್ನೇ ಕುಡಿದು ಬಾಯಾರಿಕೆಯನ್ನು ನೀಗಿಸಿಕೊಳ್ಳುತ್ತವೆ. ದಡದುದ್ದಕ್ಕೂ ಇರುವ ಪುಷ್ಪಭರಿತವಾದ ವೃಕ್ಷಗಳಿಂದ ಈ ದಿವ್ಯನದಿಯು ಸಮಲಂಕೃತವಾಗಿದೆ. ಇಂತಹ ಪವಿತ್ರವಾದ ನದಿಯಲ್ಲಿ ಸ್ನಾನಮಾಡುವ ಯಾವನೇ ಆದರೂ ಆಯಾಸವನ್ನು ಪರಿಹರಿಸಿಕೊಂಡು ಸುಖಪಡದೇ ಇರುವುದಿಲ್ಲ."

ಪ್ರಿಯೆಯಾದ ಸೀತೆಗೆ ಅನುಕೂಲನಾದ, ರಘುವಂಶವರ್ಧನನಾದ

ಶ್ರೀರಾಮನು ನದಿಗೆ ಸಂಬಂಧಿಸಿದಂತೆ ಸುಸಂಗತವಾದ ಮತ್ತು ಸಮೀಚೀನವಾದ ಮಾತುಗಳನ್ನಾಡುತ್ತಾ ಕಾಡಿಗೆಯಂತೆ ಕಪ್ಪಾದ ಪ್ರಭೆಯಿಂದ ಕೂಡಿದ್ದ ರಮ್ಯವಾದ ಚಿತ್ರಕೂಟಪರ್ವತದಲ್ಲಿ ಸೀತೆಯೊಡನೆ ಸಂಚರಿಸುತ್ತಿದ್ದನು.

೯೫ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ಪ್ರಕ್ಷಿಪ್ತಸರ್ಗ*

ಕಾಕಾಸುರನ ಕಥೆ

ರಾಮಸ್ತು ನಲಿನೀಂ ರಮ್ಯಾಂ ಚಿತ್ರಕೂಟಂ ಚ ಪರ್ವತಮ್ ।
ಉತ್ತರೇ ತು ಗಿರೇಃ ಪಾದೇ ಚಿತ್ರಕೂಟಸ್ಯ ರಾಘವಃ ॥೧॥

ದದರ್ಶ ಕನ್ದರಂ ರಮ್ಯಂ ಶಿಲಾಧಾತುಸಮನ್ವಿತಮ್ ।
ಸುಖಪ್ರಸೇಕೈಸ್ತರುಭಿಃ ಪುಷ್ಪಭಾರಾವಲಮ್ಬಿಭಿಃ ॥೨॥

ಸಂವೃತಂ ಚ ರಹಸ್ಯಂ ಚ ಮತ್ತದ್ವಿಜಗಣಾಯುತಮ್ ।
ತದ್ದೃಷ್ಟ್ವಾ ಸರ್ವಭೂತಾನಾಂ ಮನೋದೃಷ್ಟಿಹರಂ ವನಮ್ ।
ಉವಾಚ ಸೀತಾಂ ಕಾಕುತ್ಸ್ಥೋ ವನದರ್ಶನವಿಸ್ಮಿತಃ ॥೩॥

ಶ್ರೀರಾಮನು ಚಿತ್ರಕೂಟಪರ್ವತವನ್ನೂ ಮತ್ತು ಮಂದಾಕಿನೀನದಿಯನ್ನೂ ಸೀತಾದೇವಿಗೆ ತೋರಿಸಿಕೊಂಡು ಸಂಚರಿಸುತ್ತಿದ್ದಾಗ ಪರ್ವತದ ಉತ್ತರದಿಕ್ಕಿನ ಕೆಳಭಾಗದಲ್ಲಿ ರಮ್ಯವಾದ ಕಂದರಗಳಿಂದಲೂ–ಗೈರಿಕಾದಿ ಧಾತು ಗಳಿಂದಲೂ ಕೂಡಿರುವ, ಸುಖಕರವಾದ ನೆಳಲುಳ್ಳ ಪುಷ್ಪಭರಿತವಾದ ವೃಕ್ಷ ಗಳಿಂದ ಸುತ್ತುವರಿಯಲ್ಪಟ್ಟಿದ್ದ, ರಹಸ್ಯವಾಗಿದ್ದ ಗುಹೆಯನ್ನೂ–ಮದಿಸಿದ್ದ ಪಕ್ಷಿಗಳಿಂದ ಸಮಾವೃತವಾಗಿದ್ದ, ಸಕಲಪ್ರಾಣಿಗಳಿಗೂ ಆಹ್ಲಾದವನ್ನುಂಟು ಮಾಡುತ್ತಿದ್ದ ವನವನ್ನೂ ನೋಡಿ ವಿಸ್ಮಿತನಾಗಿ ಸೀತಾದೇವಿಗೆ ಹೇಳಿದನು:

---

* ಇಲ್ಲಿಂದ ಮುಂದಕ್ಕೆ ಒಂದು ಸರ್ಗವು ಶ್ರೀಮದ್ವಾಲ್ಮೀಕಿರಾಮಾಯಣದ ಪ್ರಕ್ಷಿಪ್ತ ಸರ್ಗವೆಂದೇ ಪ್ರಸಿದ್ಧವಾಗಿದೆ. ಎಂದೂ ಇದು ಮೂಲರಾಮಾಯಣದಲ್ಲಿಲ್ಲವೆಂಬ ಅಭಿಪ್ರಾಯ. ಇದೇ ಕಾರಣದಿಂದ ಈ ಸರ್ಗಕ್ಕೆ ಯಾರೊಬ್ಬರೂ ವ್ಯಾಖ್ಯಾನವನ್ನೂ ಮಾಡಿರುವುದಿಲ್ಲ. ಆದರೂ ಇದನ್ನು ಪಾರಾಯಣಮಾಡುವ ರೂಢಿಯಿದೆ. ಆದುದರಿಂದ ಇದನ್ನು ಯಥಾವತ್ತಾಗಿ ಕೊಡಲಾಗಿದೆ.

"ವೈದೇಹಿ! ಪರ್ವತದ ಈ ಗುಹೆಯ ಮೇಲೆ ನಿನ್ನ ಕಣ್ಣುಬಿದ್ದಂತಿದೆ. ಇದನ್ನು ನೋಡಿದೊಡನೆಯೇ ನಿನ್ನ ಮನಸ್ಸು ಉಲ್ಲಾಸಹೊಂದಿದೆ. ಶ್ರಮವನ್ನು ಪರಿಹಾರಮಾಡಿಕೊಳ್ಳುವ ಸಲುವಾಗಿ ಈ ಗುಹೆಯಲ್ಲಿಯೇ ನೀನು ಕುಳಿತುಕೊ. ನಿನ್ನ ಸಲುವಾಗಿಯೋ ಎಂಬಂತೆ ಇಲ್ಲಿನ ಬಂಡೆಯು ಬಹಳ ಸುಂದರವಾಗಿ ವಿನ್ಯಾಸಮಾಡಲ್ಪಟ್ಟಿದೆ. ಪಕ್ಕದಲ್ಲಿಯೇ ಇರುವ ಪುಷ್ಪಭರಿತವಾದ ವೃಕ್ಷವು ಪುಷ್ಪಗಳ ಕೇಸರಗಳಿಂದ ಶಿಲೆಯನ್ನು ಹಾದುಬಂದಿರುವಂತೆಯೇ ಕಾಣುತ್ತಿದೆ."

ಶ್ರೀರಾಮನು ಹೀಗೆ ಹೇಳಲು ದಾಕ್ಷಿಣ್ಯಪ್ರಕೃತಿಯವಳಾದ ಸೀತಾದೇವಿಯು ಪ್ರಣಯಸ್ನೇಹದಿಂದ ಕೂಡಿ ಕರ್ಣಾನಂದಕರವಾಗಿದ್ದ ಈ ಮಾತನ್ನು ಹೇಳಿದಳು:

"ನೀನೀಗ ಹೇಳಿದುದನ್ನು ನಾನು ಅವಶ್ಯವಾಗಿ ಮಾಡಲೇಬೇಕು. ಈ ನಿನ್ನ ಮನೋರಥವನ್ನು ಹಲವು ಬಾರಿ ವ್ಯಕ್ತಪಡಿಸಿರುವೆ."

ವರಾರೋಹೆಯಾದ ಸೀತಾದೇವಿಯು ಶ್ರೀರಾಮನಿಗೆ ಹೀಗೆ ಹೇಳಿ ಶ್ರೀರಾಮನೊಡನೆ ರಮಿಸುವ ಆಶಯದಿಂದ ಸುಂದರವಿನ್ಯಾಸದಿಂದ ಕೂಡಿದ್ದ ಶಿಲೆಯ ಬಳಿಗೆ ಹೋದಳು. ಸ್ನೇಹಪೂರಿತವಾದ ಮಾತುಗಳನ್ನು ಹೇಳುತ್ತಾ ಸೀತೆಗೆ ಶ್ರೀರಾಮನು ಪುನಃ ಹೇಳಿದನು:

"ಸೀತೇ! ಪ್ರಾಣಿಗಳಿಗೆ ಆನಂದವನ್ನು ಉಂಟುಮಾಡುವ ಸಲುವಾಗಿಯೇ ಸೃಷ್ಟಿಯಾಗಿರುವ, ಪುಷ್ಪಭರಿತವಾದ ಮತ್ತು ರಮ್ಯವಾದ ವೃಕ್ಷಗಳಿಂದ ತುಂಬಿರುವ ಈ ಅರಣ್ಯವನ್ನು ನೋಡು. ರಮ್ಯವಾದ ಈ ಪರ್ವತದ ಮಧ್ಯದಲ್ಲಿರುವ ಈ ವೃಕ್ಷಗಳು ಪುಷ್ಪಭರಿತವಾಗಿವೆ. ಆನೆಗಳ ಕೊಂಬುಗಳ ತಿವಿತದಿಂದ ಈ ವೃಕ್ಷಗಳ ಕಾಂಡಗಳಲ್ಲಿ ರಸವು ಸೋರುತ್ತಿದೆ. ಜೀರುಂಡೆಗಳು ದೀರ್ಘವಾಗಿ ಧ್ವನಿಮಾಡುತ್ತಾ ಅಳುತ್ತಿವೆಯೋ ಎಂಬಂತೆ ಕಾಣುತ್ತಿದೆ. 'ಮಗು! ಮಗು!'–ಎಂದು ನನ್ನನ್ನು ನನ್ನ ತಾಯಿಯು ಅಯೋಧ್ಯಾ ಪಟ್ಟಣದಲ್ಲಿ ಕೂಗುತ್ತಿದ್ದಂತೆ ಮರಿಹಕ್ಕಿಯಲ್ಲಿ ಅತ್ಯಂತವಿಶ್ವಾಸವುಳ್ಳ ಈ ಪಕ್ಷಿಯು ಕೂಡ 'ಪುತ್ರ! ಪುತ್ರ!' ಎಂದು ಮಧುರವಾದ ಮತ್ತು ದಯನೀಯವಾದ ಧ್ವನಿಯಿಂದ ಕೂಗುತ್ತಿದೆ. ಸಾಲವೃಕ್ಷದ ರೆಂಬೆಯ ಮೇಲೆ

ಕುಳಿತಿರುವ ಈ ಭೃಂಗರಾಜಪಕ್ಷಿಯು ಸಂಗೀತವನ್ನು ಹೇಳುತ್ತಿದೆಯೋ ಎಂಬಂತೆ ಕೋಗಿಲೆಯೊಡನೆ ಕೂಡಿ ಧ್ವನಿಮಾಡುತ್ತಿದೆ. ಇತ್ತ ನೋಡು, ಸೀತೆ! ಈ ರೆಂಬೆಯ ಮೇಲೆ ಕುಳಿತಿರುವುದು ಮರಿಕೋಗಿಲೆ ಯಿರಬಹುದು. ಏಕೆಂದರೆ: ಇದು ಕೂಗುತ್ತಿರುವುದು ಅಸಂಬದ್ಧವಾಗಿದ್ದರೂ ಕರ್ಣಾನಂದಕರವಾಗಿದೆ. ಪುಷ್ಪಭಾರದಿಂದ ಬಗ್ಗಿರುವ ವೃಕ್ಷವನ್ನಾಶ್ರಯಿಸಿರುವ ಈ ಬಳ್ಳಿಯು ಬಳಲಿಕೆಯಾದಾಗ ನನ್ನನ್ನು ಆಲಿಂಗಿಸುವ ನಿನ್ನ ಹಾಗೆಯೇ ಕಾಣುತ್ತಿದೆ."

ಶ್ರೀರಾಮನಿಂದ ಹೀಗೆ ಹೇಳಲ್ಪಟ್ಟ ಪ್ರಿಯಭಾಷಿಣಿಯಾದ, ಸರ್ವಾಂಗ ಸುಂದರಿಯಾದ ಸೀತಾದೇವಿಯು ಪ್ರಾಣಪ್ರಿಯನಾದ ರಾಮನ ತೊಡೆಯ ಮೇಲೆ ಕುಳಿತಳು. ದೇವಕನ್ಯೆಯಂತೆಯೇ ಇದ್ದ ಸೀತಾದೇವಿಯು ತೊಡೆಯ ಮೇಲೆ ಕುಳಿತಿದ್ದಂತೆಯೇ ರಾಮನಿಗೆ ಅಭಿಮುಖಳಾಗಿ ಮನ್ಮಥನಿಂದ ಪೀಡಿತ ವಾಗಿದ್ದ ಶ್ರೀರಾಮನ ಮನಸ್ಸನ್ನು ತೃಪ್ತಿಗೊಳಿಸಿದಳು. ಬಳಿಕ ಶ್ರೀರಾಮನು ನೆನೆದುಹೋಗಿದ್ದ ಮಣಿಶಿಲೆಯೆಂಬ ಧಾತುವನ್ನು ಬೆರಳಿನಿಂದ ಉಜ್ಜಿ ಅದರಿಂದಲೇ ಸೀತೆಯ ಹಣೆಗೆ ತಿಲಕವನ್ನಿಟ್ಟನು. ಉದಯಿಸಿದ ಸೂರ್ಯ ನಿಗೆ ಸಮಾನವಾದ ಕೆಂಪಾದ ಛಾಯೆಯಿಂದ ಕೂಡಿದ್ದ, ಪರ್ವತದ ಧಾತು ವಿಶೇಷದಿಂದ ತೇಯ್ದು ಹಚ್ಚಿದ್ದ ಆ ತಿಲಕದಿಂದ ಸೀತೆಯು–ಸಂಜೆಗೆಂಪಿನಿಂದ ಕೂಡಿದ ಬೆಳದಿಂಗಳ ರಾತ್ರಿಯಂತೆ–ಪ್ರಕಾಶಿಸಿದಳು. ಸೀತಾದೇವಿಯನ್ನು ನೋಡಿ ಸಂತುಷ್ಟನಾದ ಶ್ರೀರಾಮನು ಕೇಸರಗಿಡದ ಪುಷ್ಪಗಳನ್ನು ತಂದು ಅದನ್ನು ಕೈಯಿಂದಲೇ ಉಜ್ಜಿ ಪ್ರೇಯಸಿಯ ಮುಂಗುರುಳನ್ನು ಅಲಂಕರಿಸಿದನು. ಸುಂದರವಾಗಿದ್ದ ಆ ಶಿಲೆಯ ಮೇಲೆಯೇ ರಾಮನು ವೈದೇಹಿಯೊಡನೆ ಸ್ವಲ್ಪಹೊತ್ತಿನವರೆಗೆ ರಮಿಸುತ್ತಿದ್ದು ಅನಂತರ ವೈದೇಹಿಯಿಂದ ಹಿಂಬಾಲಿಸಲ್ಪಟ್ಟವನಾಗಿ ಮತ್ತೊಂದು ಕಡೆಗೆ ಹೊರಟನು. ಹೀಗೆಯೇ ಸಂಚರಿಸುತ್ತಿದ್ದಾಗ ಹಲವಾರು ಮೃಗಗಳಿಂದ ವ್ಯಾಪ್ತವಾಗಿದ್ದ ಅರಣ್ಯದಲ್ಲಿ ಸೀತೆಯು ಒಂದು ದೊಡ್ಡ ಕೋತಿಯನ್ನು ಕಂಡು ಭಯದಿಂದ ರಾಮನನ್ನು ತಬ್ಬಿಕೊಂಡಳು. ಶ್ರೀರಾಮನು ತನ್ನನ್ನಾಲಿಂಗಿಸಿಕೊಂಡಿದ್ದ ಸೀತೆಯನ್ನು ತಾನೂ ತಬ್ಬಿಕೊಂಡು ಮುಂಗುರುಳನ್ನು ಸವರುತ್ತಾ ಹೆದರಿದ್ದ ಸೀತೆಯನ್ನು ಸಂತೈಸುತ್ತಾ ಕಪಿಯನ್ನು ಗದರಿಸಿ ಓಡಿಸಿದನು. ಸೀತೆಯು

ಶ್ರೀರಾಮನನ್ನು ತಬ್ಬಿಕೊಂಡ ಆ ಸಮಯದಲ್ಲಿ ಸೀತೆಯ ಹಣೆಯಲ್ಲಿ ರಾಮನಿಟ್ಟಿದ್ದ ಮಣಿಶಿಲೆಯ ತಿಲಕವು ರಾಮನ ವಕ್ಷಃಸ್ಥಳಕ್ಕೆ ಅಂಟಿಕೊಂಡಿತು. ಕಪಿಯು ಹೊರಟುಹೋದನಂತರ ಸೀತೆಯು ಶ್ರೀರಾಮನ ವಕ್ಷಃಸ್ಥಳಕ್ಕೆ ಅಂಟಿಕೊಂಡಿದ್ದ ತನ್ನ ತಿಲಕವನ್ನು ಕಂಡು ಅಟ್ಟಹಾಸದಿಂದ ನಕ್ಕಳು. ರಾಮ-ಸೀತೆಯರಿದ್ದ ಸ್ಥಳಕ್ಕೆ ಸ್ವಲ್ಪದೂರದಲ್ಲಿಯೇ ಪುಷ್ಪಗುಚ್ಛಗಳಿಂದ ಕೂಡಿದ್ದ, ನೇತ್ರಾನಂದಕರವಾಗಿದ್ದ, ಭಯಗೊಳಿಸುವ ಕಪಿಗಳಿಂದ ವ್ಯಾಪ್ತವಾಗಿದ್ದ ಅಶೋಕವೃಕ್ಷಗಳ ಅರಣ್ಯವನ್ನು ಸೀತೆಯು ಕಂಡಳು. ಅಶೋಕಕುಸುಮವನ್ನು ಪಡೆಯಬೇಕೆಂಬ ಆಶಯದಿಂದ ಸೀತಾದೇವಿಯು ರಾಮನಿಗೆ ಹೇಳಿದಳು:

ವಯಂ ತದಭಿಗಚ್ಛಾಮೋ ವನಮಿಕ್ಷ್ವಾಕುನನ್ದನ ॥೨೬॥

"ಇಕ್ಷ್ವಾಕುಕುಮಾರನೇ! ನಾವು ಅಲ್ಲಿ ಕಾಣುತ್ತಿರುವ ಆ ಅಶೋಕವನಕ್ಕೆ ಹೋಗೋಣ."

ಪ್ರೇಯಸಿಗೆ ಪ್ರಿಯವನ್ನುಂಟುಮಾಡುವುದರಲ್ಲಿಯೇ ಆಸಕ್ತನಾಗಿದ್ದ, ಶೋಕರಹಿತನಾದ ಶ್ರೀರಾಮನು ಮಹಾಲಕ್ಷ್ಮಿಯ ಸ್ವರೂಪಳಾದ ಸೀತಾದೇವಿಯೊಡನೆ ಅಶೋಕವನಕ್ಕೆ ತೆರಳಿದನು. ಗಿರಿಕನ್ಯೆಯಾದ ಪಾರ್ವತಿಯೊಡನೆ ಶಂಕರನು ಹಿಮವತ್ಪರ್ವತದ ಕಾಡುಗಳಲ್ಲಿ ಸುತ್ತಾಡುವಂತೆ–ಸೀತೆಯೊಡನೆ ಶ್ರೀರಾಮನು ಬಹುರಮ್ಯವಾಗಿದ್ದ ಅಶೋಕವನದಲ್ಲಿ ಸಂಚರಿಸಿದನು. ಕಾಮಿಗಳಾಗಿದ್ದ ಸೀತಾ-ರಾಮರಿಬ್ಬರೂ ಚಿಗುರೆಲೆಗಳಿಂದ, ಅಶೋಕಪುಷ್ಪಗಳಿಂದ ಪರಸ್ಪರವಾಗಿ ಸಿಂಗರಿಸಿಕೊಂಡು ನೀಲ-ಲೋಹಿತವರ್ಣಗಳಿಂದ ಪ್ರಕಾಶಿಸಿದರು. ಅಶೋಕಪುಷ್ಪಮಾಲಿಕೆಗಳಿಂದ ಅಲಂಕೃತರಾಗಿದ್ದ, ಶಿರೋಭೂಷಣವಾಗಿ ತಲೆಗಳಲ್ಲಿ ಪುಷ್ಪದಂಡೆಗಳನ್ನು ಧರಿಸಿದ್ದ, ಸತಿ-ಪತಿಗಳಾದ ಸೀತಾ-ರಾಮರು ತಮ್ಮ ಸಾನ್ನಿಧ್ಯದಿಂದ ಆ ಚಿತ್ರಕೂಟಪರ್ವತವನ್ನೇ ಶೋಭಾಯಮಾನವನ್ನಾಗಿಸಿದರು. ಹೀಗೆ ಸೀತಾಪ್ರಿಯನಾದ ಶ್ರೀರಾಮನು ಪ್ರೇಯಸಿಗೆ ಹಲವಾರು ಸುಂದರವಾದ ಪ್ರದೇಶಗಳನ್ನು ತೋರಿಸಿಕೊಂಡು ಅಲಂಕೃತವಾಗಿದ್ದ ಮತ್ತು ಸುವ್ಯವಸ್ಥಿತವಾಗಿದ್ದ ಆಶ್ರಮಕ್ಕೆ ಹಿಂದಿರುಗಿದನು. ಅಣ್ಣ ಮತ್ತು ಅತ್ತಿಗೆಯರು ಪರ್ಣಶಾಲೆಗೆ ಬಂದೊಡನೆಯೇ ಗುರುವತ್ಸಲನಾದ ಲಕ್ಷ್ಮಣನು ಮೇಲೆದ್ದು ಎದುರುಗೊಂಡು ಗೌರವಿಸಿ ತಾನು ಸಿದ್ಧಪಡಿಸಿದ್ದ ಸಕಲವಸ್ತುಗಳನ್ನೂ

ಅಣ್ಣನಿಗೆ ತೋರಿಸಿದನು. ವಿಷಲೇಪವಿಲ್ಲದ ಬಾಣಗಳಿಂದ ಬೇಟೆಯಾಡಿದ್ದ ಭೋಜನಯೋಗ್ಯವಾದ ಹತ್ತು ಕೃಷ್ಣಮೃಗಗಳನ್ನೂ, ರಾಶಿ-ರಾಶಿಯಾಗಿ ಸಂಗ್ರಹಿಸಿದ್ದ ಗೆಡ್ಡೆ-ಗೆಣಸು-ಹಣ್ಣುಗಳನ್ನೂ ಲಕ್ಷ್ಮಣನು ರಾಮನಿಗೆ ತೋರಿಸಿದನು. ಸೌಮಿತ್ರಿಯ ಆ ಕಾರ್ಯದಿಂದ ಶ್ರೀರಾಮನು ಸುಪ್ರೀತನಾಗಿ ದೇವತಾ ಪ್ರೀತ್ಯರ್ಥವಾಗಿ ಬಲಿಗಳನ್ನಿಡುವಂತೆ ಸೀತೆಗೆ ಹೇಳಿದನು. ಶ್ರೀರಾಮನ ಆದೇಶದಂತೆ ಸೀತಾದೇವಿಯು ಮೊದಲು ದೇವತೆಗಳ ಪ್ರೀತ್ಯರ್ಥವಾಗಿ ಬಲಿಗಳನ್ನಿಟ್ಟು, ಭೂತಪ್ರೀತ್ಯರ್ಥವಾಗಿ ಪ್ರಾಣಿಗಳಿಗೂ– ಪಕ್ಷಿಗಳಿಗೂ ಅನ್ನವನ್ನಿಟ್ಟು ಅನಂತರ ರಾಮ-ಲಕ್ಷ್ಮಣರಿಬ್ಬರಿಗೂ ಮಧು-ಮಾಂಸ-ಕಂದ- ಮೂಲ-ಫಲಗಳನ್ನು ಬಡಿಸಿದಳು. ಭೋಜನವಾದ ಬಳಿಕ ಸೋದರರಿಬ್ಬರಿಗೂ ಕೈತೊಳೆಯಲು ಮತ್ತು ಶುದ್ಧಾಚಮನಮಾಡಲು ನೀರುಕೊಟ್ಟು ಅನಂತರ ತಾನೂ ಭೋಜನಮಾಡಿದಳು. ಉಳಿದಿದ್ದ ಮಾಂಸ-ಭಕ್ಷ್ಯಗಳನ್ನೂ ಒಣಗಿ ಹೋಗಿದ್ದ ನಿಕೃಷ್ಟವಾದ ಇತರ ಪದಾರ್ಥ ಗಳನ್ನೂ ರಾಮನ ಸೂಚನೆಯಂತೆ ಸೀತೆಯು ಕಾಗೆಗಳಿಗೆ ಹಾಕಿದಳು.

ಬಳಿಕ ಆಯಾಸಗೊಂಡಿದ್ದ ಸೀತೆಯು ರಾಮನ ತೊಡೆಯಲ್ಲಿ ತಲೆ ಯನ್ನಿಟ್ಟುಕೊಂಡು ನಿದ್ರಿಸಿದಳು. ಅವಳು ಎಚ್ಚರಗೊಂಡ ನಂತರ ರಾಮನೂ ಸೀತೆಯ ತೊಡೆಯನ್ನೇ ದಿಂಬನ್ನಾಗಿ ಮಾಡಿಕೊಂಡು ಮಲಗಿದನು. ಬಲಿ ಯನ್ನು ತಿನ್ನಲು ಬಂದಿದ್ದ ಕಾಗೆಗಳಲ್ಲಿ ಒಂದು ಕಾಗೆಯು ಸೀತೆಯ ಸ್ತನ ಪ್ರದೇಶದ ಮಾಂಸವನ್ನು ತಿನ್ನಲು ಬಯಸಿ ಅವಳ ಮೇಲೆರಗಿತು. ಎಷ್ಟು ಓಡಿಸಿದರೂ ಮತ್ತೆ-ಮತ್ತೆ ಬರುತ್ತಲೇ ಇತ್ತು. ಸುಖವಾಗಿ ನಿದ್ರಿಸುತ್ತಿದ್ದ ರಾಮನನ್ನು ಎಬ್ಬಿಸಲು ಸೀತೆಗೆ ಮನಸ್ಸಾಗಲಿಲ್ಲ. ಕಾಗೆಯ ಕುಕ್ಕಾಟ ಗಳಿಂದ ಸೀತೆಯ ಎದೆಯಿಂದ ರಕ್ತವು ಹರಿಯತೊಡಗಿತು. ಅದರಿಂದ ಎಚ್ಚೆತ್ತ ರಾಮನು 'ಇದೇನಿದು?' ಎಂದು ಸುತ್ತಲೂ ನೋಡುತ್ತಿರುವಾಗ– ಹತ್ತಿರದಲ್ಲೇ ಹಾರಾಡುತ್ತಿದ್ದ ಕಾಗೆಯನ್ನೂ ಸೀತೆಯ ಸ್ತನಪ್ರದೇಶದಿಂದ ಹರಿಯುತ್ತಿರುವ ರಕ್ತವನ್ನೂ ಕಂಡನು. ಸೀತೆಯು ಭಯದಿಂದ ಅತ್ತಲಿತ್ತ ಓಡಾಡುತ್ತಿದ್ದಂತೆಲ್ಲಾ ಆ ಕಾಗೆಯು ಅವಳನ್ನೇ ಅನುಸರಿಸಿ ಬರುತ್ತಿದ್ದುದನ್ನು ಶ್ರೀರಾಮನು ನೋಡಿದನು. ಎಷ್ಟುದೂರಕ್ಕೆ ಹೋದರೂ ಬಿಡದೇ ಆ ಕಾಗೆಯು ಸೀತೆಯ ಮೇಲೆಯೇ ಕುಳಿತುಕೊಳ್ಳಲು ಯತ್ನಿಸುತ್ತಿದ್ದಿತು. ಗಂಡನು

ತನ್ನಲ್ಲಿಟ್ಟಿದ್ದ ಪ್ರೀತಿಯಿಂದಲೇ ದರ್ಪಿತಳಾಗಿದ್ದ ನಿಷ್ಕಳಂಕಳಾದ ಸೀತೆಯು ಕಾಗೆಯ ವಿಷಯದಲ್ಲಿ ಕುಪಿತಳಾದಳು. ಸೀತಾದೇವಿಯು ಕಾಗೆಯನ್ನು ಬಾರಿ-ಬಾರಿಗೂ ಕೈಯಿಂದ ದೂಡುತ್ತಾ ಅದರ ಉಪಟಳವನ್ನು ನಿವಾರಣೆಮಾಡಿಕೊಳ್ಳಲು ಪದೇ-ಪದೇ ಯತ್ನಿಸಿದರೂ ಆ ಕಾಗೆಯು ರೆಕ್ಕೆಯಿಂದಲೇ ಸೀತೆಯನ್ನು ಬಡಿಯುತ್ತಾ, ಕೊಕ್ಕಿನಿಂದ ಕುಕ್ಕುತ್ತಾ, ಉಗುರುಗಳಿಂದ ಪರಚುತ್ತಾ ಮತ್ತಷ್ಟು ಕೋಪಗೊಳ್ಳುವಂತೆ ಮಾಡಿತು. ಅತ್ಯಂತ ಕುಪಿತಳಾಗಿದ್ದ ಸೀತಾದೇವಿಯ ತುಟಿಗಳು ಅದುರುತ್ತಿದ್ದುವು. ಹುಬ್ಬುಗಳು ಗಂಟಿಕ್ಕಿದುವು. ಅಂತಹ ಸ್ಥಿತಿಯಲ್ಲಿದ್ದ ದೇವಿಯನ್ನು ನೋಡಿ ಶ್ರೀರಾಮನು ಕಾಗೆಯನ್ನೊಮ್ಮೆ ಎಚ್ಚರಿಸಿದನು. ದುಷ್ಟಸ್ವಭಾವದ ಆ ಕಾಗೆಯು ರಾಮನಿತ್ತ ಎಚ್ಚರಿಕೆಯನ್ನೂ ನಿರ್ಲಕ್ಷಿಸಿ ಪುನಃ ಸೀತೆಯ ಮೇಲೆರಗಿತು. ಅದರಿಂದ ಶ್ರೀರಾಮನೂ ಕೋಪಗೊಂಡನು. ಒಡನೆಯೇ ಪುರುಷ ಶ್ರೇಷ್ಠನಾದ ಶ್ರೀರಾಮನು ಐಷೀಕಾಸ್ತ್ರವನ್ನು* ಮಂತ್ರದಿಂದ ಅಭಿಮಂತ್ರಿಸಿ ಕಾಗೆಯ ಮೇಲೆ ಪ್ರಯೋಗಿಸಿದನು. ರಾಮನು ಬಿಟ್ಟ ದರ್ಭಾಸ್ತ್ರದಿಂದ ಹಿಂಬಾಲಿಸಲ್ಪಟ್ಟ ಆ ಕಾಗೆಯು ರಕ್ಷಣೆಗಾಗಿ ಮೂರು ಲೋಕಗಳನ್ನೂ ಸುತ್ತಾಡಿತು. ಅದಕ್ಕೆ ದೈವವರವಿದ್ದುದರಿಂದ ಎಲ್ಲ ಲೋಕಗಳಲ್ಲಿಯೂ ತಡೆಯಿಲ್ಲದೇ ಸಂಚರಿಸುವ ಸಾಮರ್ಥ್ಯವನ್ನು ಪಡೆದಿದ್ದಿತು. ಎಲ್ಲೆಲ್ಲಿ ಹೋದರೂ ಬೆನ್ನಟ್ಟಿಬರುತ್ತಿದ್ದ ಭೂತಸದೃಶವಾದ ಐಷೀಕಾಸ್ತ್ರವನ್ನು ನೋಡಿ ಮೂರು ಲೋಕಗಳಲ್ಲಿಯೂ ರಕ್ಷಕರನ್ನು ಕಾಣದೇ ಅದು ರಾಮನ ಬಳಿಗೇ ಪುನಃ ಬಂದಿತು. ಮಹಾತ್ಮನಾದ ರಾಮನ ಮತ್ತು ಸೀತೆಯ ಕಾಲುಗಳ ಮೇಲೆಬಿದ್ದು ಮನುಷ್ಯಧ್ವನಿಯಿಂದಲೇ ರಾಮನನ್ನು ಪ್ರಾರ್ಥಿಸಿತು:

ಪ್ರಸಾದಂ ಕುರು ಮೇ ರಾಮ ಪ್ರಾಣೈಃ ಸಾಮಗ್ರ್ಯಮಸ್ತು ಮೇ ।
ಅಸ್ತ್ರಸ್ಯಾಸ್ಯ ಪ್ರಭಾವೇಣ ಶರಣಂ ನ ಲಭೇ ಕ್ವಚಿತ್ ॥೪೭॥

"ರಾಮ! ಪ್ರಸನ್ನನಾಗು. ನನ್ನನ್ನು ಪ್ರಾಣದಿಂದುಳಿಸು. ಈ ಅಸ್ತ್ರದ ಪ್ರಭಾವದಿಂದಾಗಿ ನನಗೆ ಮೂರು ಲೋಕಗಳಲ್ಲಿಯೂ ಆಶ್ರಯವೇ ಇಲ್ಲದಂತಾಗಿದೆ."

---

* ಇಷೀಕಾ= ಮೌಂಜಿ ಹುಲ್ಲು. ಐಷೀಕಾ= ಮೌಂಜಿ ಹುಲ್ಲಿನಿಂದ ತಯಾರಿಸಿದ ಅಸ್ತ್ರ. (ದರ್ಭಾಸ್ತ್ರ)

ಕಾಲುಗಳ ಮೇಲೆ ತಲೆಯನ್ನಿಟ್ಟುಕೊಂಡು ದೈನ್ಯದಿಂದ ಪ್ರಾಣಭಿಕ್ಷೆಯನ್ನು ಬೇಡುತ್ತಿದ್ದ ಕಾಗೆಯನ್ನು ನೋಡಿ ದಯಾಪೂರ್ಣಹೃದಯನಾದ ಧೀಮಂತನಾದ ರಾಘವನು ಹೇಳಿದನು:

"ಕಾಗೆಯೇ! ನೀನು ಸೀತೆಯ ವಿಷಯದಲ್ಲಿ ಮಾಡಿದ ಮಹಾಪರಾಧದಿಂದ ಕುಪಿತನಾದ ನಾನು ಸೀತೆಗೆ ಪ್ರಿಯವನ್ನುಂಟುಮಾಡುವ ಇಚ್ಛೆಯಿಂದ ನಿನ್ನ ಪ್ರಾಣಹರಣವನ್ನೇ ಉದ್ದೇಶಿಸಿ ಈ ಅಸ್ತ್ರವನ್ನು ಪ್ರಯೋಗಿಸಿದೆನು. ನೀನೀಗ ನನ್ನ ಕಾಲುಗಳ ಮೇಲೆ ಬಿದ್ದು ಪ್ರಾಣಭಿಕ್ಷೆಯನ್ನು ಬೇಡುತ್ತಿರುವುದರಿಂದ ಶರಣಾಗತನಾಗಿರುವ ನಿನ್ನನ್ನು ರಕ್ಷಿಸುವುದೂ ನನ್ನ ಕರ್ತವ್ಯವಾಗಿದೆ. ಆದರೆ ನಾನು ಪ್ರಯೋಗಿಸಿರುವ ಈ ಅಸ್ತ್ರವು ಎಂದೂ ವ್ಯರ್ಥವಾಗತಕ್ಕುದಲ್ಲ. ನಿನ್ನ ಯಾವುದಾದರೊಂದು ಅವಯವವನ್ನು ಲಕ್ಷ್ಯವನ್ನಾಗಿ ಕೊಡಲೇ ಬೇಕಾಗುತ್ತದೆ. ನಿನ್ನ ಒಂದು ಅಂಗವನ್ನು ಪರಿತ್ಯಜಿಸು. ಈ ಅಸ್ತ್ರವು ನಿರರ್ಥಕವಾಗದಂತೆ ಮಾಡು. ಈ ಅಸ್ತ್ರವು ನಿನ್ನ ಯಾವ ಅಂಗವನ್ನು ವಿನಾಶಗೊಳಿಸಲೆಂಬುದನ್ನು ಶೀಘ್ರವಾಗಿ ಹೇಳು. ಇಷ್ಟು ಮಾತ್ರ ಮಾಡಲು ನನ್ನಿಂದ ಸಾಧ್ಯವಿದೆ. ಅಸ್ತ್ರಕ್ಕೆ ಒಂದು ಅಂಗವನ್ನು ಲಕ್ಷ್ಯವನ್ನಾಗಿ ಕೊಟ್ಟು ಅದನ್ನು ಮಾತ್ರವೇ ಕಳೆದುಕೊಳ್ಳುವುದು ಪ್ರಾಣವನ್ನು ಕಳೆದುಕೊಳ್ಳುವುದಕ್ಕಿಂತಲೂ ಉತ್ತಮವಲ್ಲವೇ?"

ಶ್ರೀರಾಮನು ಹೀಗೆ ಹೇಳಲು ವಿವೇಕಿಯಾದ ಆ ಕಾಗೆಯು ಸಾವಧಾನವಾಗಿ ಪರ್ಯಾಲೋಚಿಸಿ ಪ್ರಾಣಬಿಡುವುದಕ್ಕಿಂತಲೂ ಇರುವ ಎರಡು ಕಣ್ಣುಗಳಲ್ಲಿ ಒಂದನ್ನು ತ್ಯಾಗಮಾಡುವುದೇ ಉಚಿತವೆಂಬ ನಿಶ್ಚಯಕ್ಕೆ ಬಂದಿತು. ಅಂತೆಯೇ ರಾಘವನಿಗೆ ಹೇಳಿತು:

"ರಾಘವ! ಎರಡು ಕಣ್ಣುಗಳಲ್ಲಿ ಒಂದನ್ನು ಪರಿತ್ಯಜಿಸುತ್ತೇನೆ. ಇದರಿಂದ ಮುಂದೆ ನಾನು ಒಕ್ಕಣ್ಣನಾದರೂ ನಿನ್ನ ಅನುಗ್ರಹಬಲದಿಂದ ಜೀವಿಸಿರುವೆನು."

ಶ್ರೀರಾಮನ ಅನುಜ್ಞೆಯನ್ನು ಪಡೆದು ಐಷೀಕಾಸ್ತ್ರವು ಕಾಗೆಯ ಕಣ್ಣಿನಲ್ಲಿ ಬಿದ್ದಿತು. ಅದರ ಒಂದು ಕಣ್ಣು ನಷ್ಟವಾದುದನ್ನು ಕಂಡು ವೈದೇಹಿಯು ಅಚ್ಚರಿಗೊಂಡಳು.

ಏಕಾಕ್ಷಿಯಾದ ಕಾಗೆಯು ರಾಮನಿಗೆ ಪುನಃ ನಮಸ್ಕರಿಸಿ ಮನಬಂದೆಡೆಗೆ ಹೊರಟುಹೋಯಿತು. ಶ್ರೀರಾಮನೂ ಲಕ್ಷ್ಮಣನೊಡನೆ ತನ್ನ ಮುಂದಿನ ಕಾರ್ಯಗಳಲ್ಲಿ ತೊಡಗಿದನು.*

ಪ್ರಕ್ಷಿಪ್ತಸರ್ಗವು ಮುಗಿಯಿತು.

ವನ್ಯಮೃಗಗಳು ಭಯಗೊಂಡು ಓಡುತ್ತಿರುವುದನ್ನು ನೋಡಿ ಶ್ರೀರಾಮನು ಕಾರಣವನ್ನು ತಿಳಿಯಲು ಲಕ್ಷ್ಮಣನಿಗೆ ಹೇಳಿದುದು: ಲಕ್ಷ್ಮಣನು ಮರವನ್ನು ಹತ್ತಿ ಅಪಾರಸೈನ್ಯವನ್ನು ವೀಕ್ಷಿಸಿ ಭರತನು ತಮಗೆ ಕೇಡನ್ನು ಬಯಸಿಯೇ ಬಂದಿರುವನೆಂದು ಭಾವಿಸಿ ಕೋಪದಿಂದ ಉದ್ಗರಿಸಿದುದು

ತಾಂ ತಥಾ ದರ್ಶಯಿತ್ವಾ ತು ಮೈಥಿಲೀಂ ಗಿರಿನಿಮ್ನಗಾಮ್ ।
ನಿಷಸಾದ ಗಿರಿಪ್ರಸ್ಥೇ ಸೀತಾಂ ಮಾಂಸೇನ ಛನ್ದಯನ್ ॥೧॥

ಹೀಗೆ ಶ್ರೀರಾಮನು ಮೈಥಿಲಿಗೆ ಮಂದಾಕಿನೀನದಿಯನ್ನು ತೋರಿಸಿ ಚಿತ್ರಕೂಟಪರ್ವತದಲ್ಲಿದ್ದ ಪರ್ಣಶಾಲೆಗೆ ಹಿಂದಿರುಗಿದನು. ಹಸಿವಿನಿಂದ ಬಳಲಿದ್ದ ಸೀತೆಯನ್ನು ಮಾಂಸದಿಂದ ತೃಪ್ತಿಗೊಳಿಸುತ್ತಾ ಹೇಳಿದನು:

“ಸೀತೆ! ಈ ಮಾಂಸವು ತಿನ್ನಲು ಯೋಗ್ಯವಾಗಿದೆ. ಇದನ್ನು

---

*ಅಂದಿನಿಂದಲೂ ಕಾಗೆಗೆ ಒಂದೇ ಕಣ್ಣೆಂದೂ ಮತ್ತು ಏಕಕಾಲದಲ್ಲಿ ಎರಡು ಪಾರ್ಶ್ವಗಳನ್ನೂ ಕಾಗೆಯು ನೋಡಲಾರದೆಂದೂ ಹೇಳುತ್ತಾರೆ. ಸುಂದರಕಾಂಡದಲ್ಲಿ ಹನುಮಂತನೊಡನೆ ಸೀತೆಯು ಹೇಳುವ ಕಥೆಗೆ ಈ ಸರ್ಗವು ಆಧಾರವಾಗಿದೆ. ಇಲ್ಲಿ ನಡೆಯದೇ ಇರುವುದನ್ನು ಮುಂದೆ ಹೇಳಲು ಹೇಗೆ ಸಾಧ್ಯವೆಂದು ಭಾವಿಸಿ ವಿದ್ವಾಂಸರೊಬ್ಬರು ಈ ಸರ್ಗವನ್ನು ಸೇರಿಸಿರಲೂಬಹುದು. ಗುರೂಪದಿಷ್ಟವಾಗಿದ್ದರೆ ಮಾತ್ರ ಈ ಸರ್ಗವನ್ನು ಪಾರಾಯಣಕಾಲದಲ್ಲಿ ಸೇರಿಸಿಕೊಳ್ಳಬಹುದು.

ಹಿಂದಿನ ಮತ್ತು ಮುಂದಿನ ಸರ್ಗಗಳ ಕಥಾಸಂದರ್ಭವನ್ನು ನೋಡಿದರೂ ಈ ಸರ್ಗವು ಪ್ರಕ್ಷಿಪ್ತವೆಂಬುದರಲ್ಲಿ ಸಂಶಯಪಡಬೇಕಾಗಿಯೇ ಇಲ್ಲ. ಪದಪ್ರಯೋಗ–ಶೈಲಿಯ ರಚನೆಗಳಲ್ಲಿಯೂ ಈ ಸರ್ಗಕ್ಕೂ ಇತರ ಸರ್ಗಗಳಿಗೂ ಬಹಳ ವ್ಯತ್ಯಾಸವು ಕಂಡುಬರುವುದು.

ತಿನ್ನು. ಇದು ಅಗ್ನಿಯಿಂದ ಬೇಯಿಸಿದ್ದು, ಬಹಳ ರುಚಿಕರವಾಗಿದೆ–ಇದನ್ನು ಆಸ್ವಾದಿಸು"–ಇವೇ ಮುಂತಾದ ಸವಿಮಾತುಗಳೊಡನೆ ಶ್ರೀರಾಮನು ಸೀತೆಗೆ ಭೋಜನಮಾಡಿಸುತ್ತಿದ್ದನು.


ಹೀಗೆ ಧರ್ಮಾತ್ಮನಾದ ಶ್ರೀರಾಮನು ಸೀತೆಯೊಡನೆ ಅರಣ್ಯದಲ್ಲಿ ಸಂತೋಷದಿಂದ ಕಾಲಕಳೆಯುತ್ತಿದ್ದನು.

ಹೀಗೆಯೇ ಇರುತ್ತಿರುವಾಗ–ಶ್ರೀರಾಮನ ಪರ್ಣಶಾಲೆಗೆ ಅನತಿ ದೂರದಲ್ಲಿದ್ದ ಭರತನ ಸೈನ್ಯದ ಚಲನ-ವಲನಗಳಿಂದ ಹುಟ್ಟಿದ ಧೂಳಿಯೂ ಮತ್ತು ಶಬ್ದವೂ ಆಕಾಶವನ್ನೇ ವ್ಯಾಪಿಸಿತು. ಈ ಮಧ್ಯದಲ್ಲಿ ಸೈನಿಕರ ಕೋಲಾಹಲಶಬ್ದದಿಂದ ಭಯಪೀಡಿತವಾದ ಮದಿಸಿದ ಕಾಡಾನೆಗಳು ತಮ್ಮ ಗುಂಪುಗಳಿಂದ ದಿಕ್ಕಾಪಾಲಾಗಿ ಓಡಿಹೋಗುತ್ತಿದ್ದುವು. ಪರ್ಣಶಾಲೆಯಲ್ಲಿದ್ದ ರಾಘವನು ಸೈನ್ಯದ ಕೋಲಾಹಲಶಬ್ದವನ್ನು ಕೇಳಿದನು. ಹಾಗೂ ಭಯದಿಂದ ಓಡಿಹೋಗುತ್ತಿದ್ದ ಮದಿಸಿದ ಸಲಗಗಳನ್ನೂ ನೋಡಿದನು. ಕೂಡಲೇ ಮಹಾತೇಜಸ್ವಿಯಾದ ಲಕ್ಷ್ಮಣನಿಗೆ ಹೇಳಿದನು:

"ಲಕ್ಷ್ಮಣ! ನಿನ್ನಿಂದ ಸುಮಿತ್ರೆಯು ಸುಪುತ್ರವತಿಯಾಗಿದ್ದಾಳೆ. ನಿನಗೆ ಮಂಗಳವಾಗಲಿ! ಇಲ್ಲಿ ನೋಡು; ಆನೆಗಳು ಹಿಂಡು-ಹಿಂಡಾಗಿ ಓಡಿ ಹೋಗುತ್ತಿವೆ. ಬಹುಭಯಂಕರವಾದ ಮೇಘದ ಧ್ವನಿಯಂತೆ ಗಂಭೀರವಾದ ಧ್ವನಿಯು ಕೇಳಿಬರುತ್ತಿದೆ. ಕೆರಳಿದ ಸಿಂಹಗಳ ಭಯದಿಂದ ಆನೆಗಳ ಗುಂಪುಗಳೂ, ಕಾಡುಕೋಣಗಳ ಗುಂಪುಗಳೂ, ಜಿಂಕೆಗಳ ಗುಂಪುಗಳೂ ದಿಕ್ಕಾಪಾಲಾಗಿ ಓಡಿಹೋಗುತ್ತಿರಬಹುದು. ಅಥವಾ ರಾಜನೋ, ರಾಜಪುತ್ರನೋ ಈ ಅರಣ್ಯಕ್ಕೆ ಬೇಟೆಯಾಡಲು ಬಂದಿರಬಹುದು. ಅಥವಾ ಯಾವುದಾದರೂ ಸಿಂಹವೋ ಹುಲಿಯೋ ಈ ಅರಣ್ಯಕ್ಕೆ ಬಂದು ಪ್ರಾಣಿಗಳಿಗೆ ಭಯವನ್ನುಂಟುಮಾಡಿರಬಹುದು. ಚಿತ್ರಕೂಟಪರ್ವತವೀಗ ಪಕ್ಷಿಗಳ ಸಂಚಾರಕ್ಕೂ ದುಸ್ಸಾಧ್ಯವಾಗಿದೆ. ಆದುದರಿಂದ ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ತಿಳಿದುಕೊಂಡುಬಾ."

ಶ್ರೀರಾಮನು ಹೀಗೆ ಹೇಳಿದೊಡನೆಯೇ ಲಕ್ಷ್ಮಣನು ತ್ವರೆಯಿಂದ

ಹೂಗಳಿಂದ ನಿಬಿಡವಾಗಿದ್ದ ಸಾಲವೃಕ್ಷವೊಂದನ್ನು ಹತ್ತಿ ಎಲ್ಲ ದಿಕ್ಕುಗಳನ್ನೂ ನೋಡಲು ಆಸಕ್ತನಾಗಿ ಮೊದಲು ಪೂರ್ವದಿಕ್ಕನ್ನು ನೋಡಿದನು.



ಪೂರ್ವದಿಕ್ಕಿನಲ್ಲಿ ಏನನ್ನೂ ಕಾಣದೇ ದಕ್ಷಿಣದಿಕ್ಕಿಗೂ ಪಶ್ಚಿಮದಿಕ್ಕಿಗೂ ತಿರುಗಿ ನೋಡಿದನು. ಆ ದಿಕ್ಕುಗಳಲ್ಲಿಯೂ ಏನೂ ಕಾಣಿಸಲಿಲ್ಲ. ಕಡೆಯದಾಗಿ ಉತ್ತರದಿಕ್ಕಿಗೆ ತಿರುಗಿದನು. ಆ ದಿಕ್ಕಿನಲ್ಲವನು ಗಜಾಶ್ವ-ರಥ-ಪದಾತಿಗಳಿಂದ ಸಜ್ಜಾಗಿ ನಿಂತಿದ್ದ ದೊಡ್ಡ ಚತುರಂಗಬಲವನ್ನೇ ನೋಡಿದನು. ಒಡನೆಯೇ ಲಕ್ಷ್ಮಣನು ರಾಮನ ಸಮೀಪಕ್ಕೆ ಬಂದು ಆನೆಗಳಿಂದಲೂ, ಕುದುರೆಗಳಿಂದಲೂ, ಧ್ವಜಗಳಿಂದ ವಿಭೂಷಿತವಾದ ರಥ

ಗಳಿಂದಲೂ ಪರಿಪೂರ್ಣವಾಗಿರುವ ಮಹಾಸೈನ್ಯವು ಬಂದಿರುವುದನ್ನೂ,– ಮುಂದೆ ಮಾಡಿಕೊಳ್ಳಬೇಕಾದ ಸಿದ್ಧತೆಯ ವಿಷಯವನ್ನೂ ಶ್ರೀರಾಮನಿಗೆ ಹೇಳಿದನು:

ಅಗ್ನಿಂ ಸಂಶಮಯತ್ವಾರ್ಯಃ ಸೀತಾ ಚ ಭಜತಾಂ ಗುಹಾಮ್ ।
ಸಜ್ಯಂ ಕುರುಷ್ವ ಚಾಪಂ ಚ ಶರಾಂಶ್ಚ ಕವಚಂ ತಥಾ ॥೧೪॥

"ಆರ್ಯನೇ!ಯಜ್ಞೇಶ್ವರನನ್ನು ಬೇಗ ಆರಿಸಿಬಿಡು. ಸೀತೆಯು ಗುಹೆಯ ಒಳಗಡೆ ಹೊರಟುಹೋಗಲಿ. ನೀನು ಧನುರ್ಬಾಣಗಳನ್ನು ಧರಿಸಿ, ಧನುಸ್ಸಿಗೆ ಹೆದೆಯೇರಿಸಿ ಸಿದ್ಧನಾಗು. ಕವಚವನ್ನು ತೊಟ್ಟುಕೋ."

ಲಕ್ಷ್ಮಣನು ಆತುರಾತುರವಾಗಿ ಹೀಗೆ ಹೇಳಿದರೂ ಶ್ರೀರಾಮನು ಸಾವಧಾನದಿಂದಲೇ ಲಕ್ಷ್ಮಣನಿಗೆ ಹೇಳಿದನು:

"ಮಗು! ಲಕ್ಷ್ಮಣ! ಸರಿಯಾಗಿ ನೋಡು. ಧ್ವಜಾದಿ ಚಿಹ್ನೆಗಳಿಂದ ಇದು ಯಾರ ಸೈನ್ಯವಿರಬಹುದೆಂಬುದನ್ನು ತಿಳಿದುಕೊಂಡೆಯಾ?"

ಶ್ರೀರಾಮನು ಹೀಗೆ ಹೇಳಲು ಲಕ್ಷ್ಮಣನು ಯಜ್ಞೇಶ್ವರನೋಪಾದಿಯಲ್ಲಿ ತನ್ನ ಅಮಿತವಾದ ತೇಜಸ್ಸಿನಿಂದ ಅಖಂಡಸೇನೆಯನ್ನೂ ದಹಿಸಿಬಿಡುವನೋ ಎಂಬಂತೆ ಅತ್ಯಂತಕೋಪಾವಿಷ್ಟನಾಗಿ ಹೇಳಿದನು:

"ನಾನದೆಲ್ಲವನ್ನೂ ನೋಡಿಯೇ ಹೇಳುತ್ತಿರುವೆನಣ್ಣಾ! ಕೈಕೇಯಿಯ ಮಗನಾದ ಭರತನು–ತಾಯಿಯು ಕೃತ್ರಿಮದಿಂದ ಕೊಡಿಸಿಕೊಟ್ಟ ರಾಜ್ಯದ ಪಟ್ಟಾಭಿಷೇಕವನ್ನು ಮಾಡಿಕೊಂಡು ಅಷ್ಟರಿಂದಲೂ ತೃಪ್ತನಾಗದೇ ನಿಷ್ಕಂಟಕವಾದ ರಾಜ್ಯವನ್ನು ಶಾಶ್ವತವಾಗಿ ಆಳಬೇಕೆನ್ನುವ ದುರಾಸೆಯಿಂದ ನಮ್ಮಿಬ್ಬರನ್ನೂ ಸಂಹರಿಸಲು ಸೈನ್ಯಸಮೇತವಾಗಿ ಇಲ್ಲಿಗೆ ಆಗಮಿಸಿದ್ದಾನೆ. ಅದೋ ನೋಡು; ಅಲ್ಲಿ ಎತ್ತರವಾದ ಮತ್ತು ಶೋಭಾಯಮಾನವಾದ ವೃಕ್ಷವೊಂದು ಕಾಣುತ್ತಿದೆಯಲ್ಲವೇ? ಅದರ ಸಮೀಪದಲ್ಲಿಯೇ ಇರುವ ರಥದಲ್ಲಿ ಎತ್ತರವಾದ ದಂಡದಿಂದ ಕೂಡಿರುವ ಕೋವಿದಾರಧ್ವಜವು ವಿರಾಜಿಸುತ್ತಿದೆ. ಕುದುರೆಸವಾರರು ಸ್ವೇಚ್ಛೆಯಿಂದ ಶೀಘ್ರವಾಗಿ ಹೋಗುವ ಕುದುರೆಗಳ ಮೇಲೆ ಕುಳಿತು ಭರತನನ್ನು ಸೇವಿಸುತ್ತಿದ್ದಾರೆ. ಗಜಾರೋಹಿಗಳೂ ಆನೆಗಳ ಮೇಲೆ ಕುಳಿತು ಆನಂದೋತ್ಸಾಹಗಳಿಂದಿದ್ದಾರೆ.

ಈ ಸಮಯದಲ್ಲಿ ನಾವಿಬ್ಬರೂ ಧನುಸ್ಸುಗಳನ್ನು ಹಿಡಿದು ಚಿತ್ರಕೂಟ ಗಿರಿದುರ್ಗದಲ್ಲಿ ಸಿದ್ಧರಾಗಿ ನಿಲ್ಲೋಣ. ಅಥವಾ ಸನ್ನದ್ಧರಾಗಿ ಆಯುಧಗಳನ್ನೆತ್ತಿ ಇಲ್ಲಿಯಾದರೂ ಇರೋಣ. ಕೋವಿದಾರಧ್ವಜನಾದ ಭರತನು ಯುದ್ಧಕ್ಕೆ ಬರುವನೇ? ಹಾಗೆ ಬಂದ ಅವನನ್ನು ಪರಾಜಯಗೊಳಿಸಿ ನಮ್ಮ ಬಂದಿಯನ್ನಾಗಿ ಎಂದು ಮಾಡಿಕೊಳ್ಳುವೆವು?–ಇದೇ ನಿನ್ನ ನಿರಂತರವಾದ ಬಯಕೆಯಾಗಿತ್ತು. ಯಾವನ ಸಲುವಾಗಿ ನಾವಿಷ್ಟೊಂದು ಕಷ್ಟಕ್ಕೆ ಸಿಲುಕಿದೆವೋ–ಅಂತಹ ಭರತನನ್ನು ನಾನು ಯಾವಾಗ ನೋಡುವೆನು? ಅವನ ಮೇಲಿನ ಸೇಡನ್ನು ಯಾವಾಗ ತೀರಿಸಿಕೊಳ್ಳುವೆನು?–ಎಂದೇ ಯಾವಾಗಲೂ ನಾನು ಯೋಚಿಸುತ್ತಿದ್ದೆನು. ಇವನ ಕಾರಣದಿಂದಲೇ ನೀನು ಶಾಶ್ವತವಾದ ರಾಜ್ಯಸಿಂಹಾಸನದಿಂದ ಚ್ಯುತನಾದೆ. ನಿನಗೂ, ನನಗೂ ಮತ್ತು ಜಾನಕಿಗೂ ಅರಣ್ಯವಾಸವು ಪ್ರಾಪ್ತವಾಯಿತು. ಈಗ ಆ ನಮ್ಮ ಶತ್ರುವು ತಾನಾಗಿಯೇ ಇಲ್ಲಿಗೆ ಬಂದಿದ್ದಾನೆ. ಈಗ ಇವನು ವಧಾರ್ಹನೇ ಸರಿ.

ಭರತಸ್ಯ ವಧೇ ದೋಷಂ ನಾಹಂ ಪಶ್ಯಾಮಿ ರಾಘವ ॥೨೩॥

ರಾಘವ! ಭರತನನ್ನು ವಧಿಸುವುದರಲ್ಲಿ ನನಗೆ ಯಾವ ದೋಷವೂ ಕಾಣುತ್ತಿಲ್ಲ.

ಪೂರ್ವಾಪಕಾರಿಣಾಂ ತ್ಯಾಗೇ ನ ಹ್ಯಧರ್ಮೋ ವಿಧೀಯತೇ ।
ಪೂರ್ವಾಪಕಾರೀ ಭರತಸ್ತ್ಯಕ್ತಧರ್ಮಶ್ಚ ರಾಘವ ॥೨೪॥

ಮೊದಲು ಅಪಕಾರಮಾಡಿದವನನ್ನು ಕೊಲ್ಲುವುದು ಅಧರ್ಮವೆನಿಸುವುದಿಲ್ಲ. ಈ ಹಿಂದೆಯೇ ಭರತನು ನಿನ್ನ ರಾಜ್ಯಚ್ಯುತಿಗೆ ಕಾರಣನಾಗಿ ನಿನಗೆ ಅಪಕಾರವನ್ನೆಸಗಿದ್ದಾನೆ. ಮೇಲಾಗಿ ನಮ್ಮನ್ನು ಕೊಲ್ಲಲೂ ಬಂದಿರುವನಾದ ಕಾರಣ ಇವನು ಧರ್ಮವನ್ನು ಸಂಪೂರ್ಣವಾಗಿ ಪರಿತ್ಯಜಿಸಿದ್ದಾನೆ. ಆದುದರಿಂದ ಇವನನ್ನು ವಧಿಸುವುದು ಸರ್ವಥಾ ಯೋಗ್ಯವಾಗಿದೆ. ಇವನನ್ನು ಸಂಹರಿಸಿದ ನಂತರ ಸಮಗ್ರವಾದ ಭೂಮಂಡಲವನ್ನು ನೀನು ಶಾಸನಮಾಡು. ಆನೆಯಿಂದ ಬುಡಸಹಿತ ಕೀಳಲ್ಪಟ್ಟ ವೃಕ್ಷದಂತೆ–ಯುದ್ಧದಲ್ಲಿ ನನ್ನಿಂದ ಹತನಾಗಿ ಬೀಳುವ ಮಗನನ್ನು ರಾಜ್ಯಕಾಮುಕಳಾದ ಕೈಕೇಯಿಯು ಅತ್ಯಂತ ದುಃಖದಿಂದ ನೋಡಲಿರುವಳು.

ನಾನು ವಧಿಸುವುದು ಭರತನನ್ನು ಮಾತ್ರವಲ್ಲ. ನೆಂಟರಿಷ್ಟರ ಸಮೇತವಾಗಿ ಕೈಕೇಯಿಯನ್ನೂ ವಧಿಸುತ್ತೇನೆ. ಇಂದಾದರೂ ಈ ಪೃಥ್ವಿಯು ಕೈಕೇಯೀರೂಪದ ಮಹಾಪಾಪದಿಂದ ವಿಮುಕ್ತಳಾಗಲಿ. ನಾನು ಇದುವರೆಗೂ ತಡೆದುಕೊಂಡಿದ್ದ ಕ್ರೋಧವನ್ನೂ ಮತ್ತು ತಿರಸ್ಕಾರವನ್ನೂ–ಹುಲ್ಲುಮೆದೆಗೆ ಬೆಂಕಿಯನ್ನಿಡುವಂತೆ–ಶತ್ರುಸೈನ್ಯದಲ್ಲಿ ಕಕ್ಕಿಬಿಡುತ್ತೇನೆ. ಈಗಲೇ ನಾನು ನನ್ನ ನಿಶಿತವಾದ ಅಸ್ತ್ರಗಳಿಂದ ಶತ್ರುಪಕ್ಷದ ಸೈನಿಕರ ಶರೀರಗಳನ್ನು ತುಂಡರಿಸಿ ಈ ಚಿತ್ರಕೂಟದ ಕಾನನವನ್ನು ರಕ್ತಮಯವನ್ನಾಗಿ ಮಾಡಿಬಿಡುತ್ತೇನೆ. ನನ್ನ ನಿಶಿತಾಸ್ತ್ರಗಳಿಂದ ಭೇದಿಸಲ್ಪಡುವ ಹೃದಯಗಳುಳ್ಳ ಆನೆಗಳನ್ನೂ, ಕುದುರೆಗಳನ್ನೂ ಮತ್ತು ನನ್ನಿಂದ ಹತರಾಗುವ ಮನುಷ್ಯರನ್ನೂ– ಮಾಂಸವನ್ನು ತಿನ್ನುವ ದುಷ್ಟಮೃಗಗಳು ಕಚ್ಚಿಕೊಂಡು ಅತ್ತಿತ್ತ ಎಳೆದಾಡಲಿ. ಸೈನ್ಯಸಮೇತನಾದ ಭರತನನ್ನು ಈ ಮಹಾರಣ್ಯದಲ್ಲಿ ಸಂಹರಿಸಿ ಬಾಣಗಳ ಋಣವನ್ನೂ ಮತ್ತು ಧನುಸ್ಸಿನ ಋಣವನ್ನೂ ತೀರಿಸಿ ಋಣಮುಕ್ತನಾಗುತ್ತೇನೆ. ಇದರಲ್ಲಿ ಸಂಶಯವೇ ಇಲ್ಲ.”*

೯೬ನೆಯ ಸರ್ಗವು ಮುಗಿಯಿತು.

---

*ಅಧ್ಯಯನವನ್ನು ಮಾಡಿದನಂತರ ಆ ವಿದ್ಯೆಯನ್ನು ಶಿಷ್ಯರಿಗೆ ಹೇಳಿಕೊಡುವುದರಿಂದ ಋಷಿಋಣವು ಪರಿಹಾರವಾಗುವಂತೆ–ಧನುರ್ವಿದ್ಯೆಯನ್ನು ಕಲಿತನಂತರ ಅದನ್ನು ಸಮಯಗಳಲ್ಲಿ ಶತ್ರುವಿನ ಮೇಲೆ ಪ್ರಯೋಗಿಸಿ ಶತ್ರುಸಂಹಾರಮಾಡುವುದರಿಂದ ಧನುರ್ವಿದ್ಯೆಯ ಋಣವನ್ನು ತೀರಿಸಿದಂತಾಗುತ್ತದೆ.

ಶ್ರೀರಾಮನು ಲಕ್ಷ್ಮಣನ ಕೋಪವನ್ನು ಶಾಂತಗೊಳಿಸುತ್ತಾ ಭರತನ ಸಾತ್ತ್ವಿಕತೆಯನ್ನು ವಿವರಿಸಿ ಹೇಳಿದುದು: ಪರ್ವತದ ಕೆಳಭಾಗದಲ್ಲಿ ಭರತನ ಸೈನ್ಯದ ಬಿಡಾರ

ಸುಸಂರಬ್ಧಂ ತು ಸೌಮಿತ್ರಿಂ ಲಕ್ಷ್ಮಣಂ ಕ್ರೋಧಮೂರ್ಛಿತಮ್ ।
ರಾಮಸ್ತು ಪರಿಸಾನ್ತ್ವ್ಯಾಥ ವಚನಂ ಚೇದಮಬ್ರವೀತ್ ॥೧॥

ಭರತನು ಯುದ್ಧಮಾಡುವುದಕ್ಕಾಗಿಯೇ ಬಂದಿರುವನೆಂಬ ನಿಶ್ಚಯದಿಂದ ಬಹಳವಾಗಿ ಚಡಪಡಿಸುತ್ತಿದ್ದ ಅತಿಕ್ರುದ್ಧನಾಗಿದ್ದ ಲಕ್ಷ್ಮಣನನ್ನು ಶ್ರೀರಾಮನು ಸಂತೈಸುತ್ತಾ ಹೇಳಿದನು:

ಕಿಮತ್ರ ಧನುಷಾ ಕಾರ್ಯಮಸಿನಾ ವಾ ಸಚರ್ಮಣಾ ।
ಮಹೇಷ್ವಾಸೇ ಮಹಾಪ್ರಾಜ್ಞೇ ಭರತೇ ಸ್ವಯಮಾಗತೇ ॥೨॥

"ಲಕ್ಷ್ಮಣ! ಯೋಗ್ಯಸಮಯದಲ್ಲಿ ಮಾತ್ರವೇ ಧನುಸ್ಸನ್ನು ಹಿಡಿಯುವ, ಮಹಾಪ್ರಾಜ್ಞನಾದ ಭರತನು ತಾನಾಗಿಯೇ ಇಲ್ಲಿಗೆ ಬಂದಿರುವಾಗ ಧನುಸ್ಸಿಗಾಗಲೀ–ಗುರಾಣಿಯಿಂದ ಕೂಡಿದ ಕತ್ತಿಗಾಗಲೀ ಇಲ್ಲಿ ಯಾವ ಕಾರ್ಯವಿದೆ?*

ಪಿತುಃ ಸತ್ಯಂ ಪ್ರತಿಶ್ರುತ್ಯ ಹತ್ವಾ ಭರತಮಾಗತಮ್ ।
ಕಿಂ ಕರಿಷ್ಯಾಮಿ ರಾಜ್ಯೇನ ಸಾಪವಾದೇನ ಲಕ್ಷ್ಮಣ ॥೩॥

ನಮ್ಮ ತಂದೆಯು ಕೈಕೇಯಿಗಿತ್ತಿದ್ದ ಮಾತನ್ನು ಸತ್ಯವಚನವನ್ನಾಗಿ

---

*ಇಲ್ಲಿ ಎರಡು ವಿಧವಾದ ಅಭಿಪ್ರಾಯಗಳನ್ನು ಹೇಳಬಹುದಾಗಿದೆ. 1) ಯಾರೊಬ್ಬರ ಪ್ರೇರಣೆಯೂ ಇಲ್ಲದೇ ಭರತನು ತಾನಾಗಿಯೇ ಬಂದಿರುವನೆಂದರೆ:-ಅವನು ನನ್ನನ್ನು ಕಾಣುವ ಸಲುವಾಗಿ ಬಂದಿರುವನೇ ಹೊರತು ಯುದ್ಧಮಾಡುವ ಅಪೇಕ್ಷೆಯಿಂದ ಬಂದಿರುವುದಿಲ್ಲ. ಆದ್ದರಿಂದ ಶಸ್ತ್ರಗ್ರಹಣಮಾಡುವ ಅವಸರವಿಲ್ಲ. 2) ಮಹಾಪ್ರಾಜ್ಞನಾದ ಭರತನೇ ಶಸ್ತ್ರಪಾಣಿಯಾಗಿ ಯುದ್ಧಕ್ಕೆ ಬಂದಿರುವನೆಂದರೆ:-ಇದು ವೈಪರೀತ್ಯವೇ ಸರಿ. ಆಗಲೂ ನಾವು ಶಸ್ತ್ರಾಸ್ತ್ರಗಳನ್ನು ಹಿಡಿದು ಅವನನ್ನು ಸಂಹರಿಸುವ ಅವಶ್ಯಕತೆಯಿಲ್ಲ. ಅವನನ್ನು ಸಂಹರಿಸುವುದು ಸರ್ವಥಾ ಅಧರ್ಮ. ಏಕೆಂದರೆ: ಅವನು ನನ್ನ ತಮ್ಮ. ರಾಜ್ಯವು ಅವನಿಗೇ ಇರಲಿ.

ಮಾಡುವೆನೆಂದು ಪ್ರತಿಜ್ಞೆಮಾಡಿ ಅರಣ್ಯಕ್ಕೆ ಬಂದಿರುವ ನಾನು ಭರತನನ್ನು ಕೊಂದು ರಾಜ್ಯವನ್ನು ಪಡೆಯಲೇ? ರಾಜ್ಯಲೋಭದಿಂದ ರಾಮನು ಭರತನನ್ನು ಕೊಂದನು?—ಎಂಬ ಅಪವಾದದೊಡನೆ ಬರುವ ಈ ರಾಜ್ಯವನ್ನು ಕಟ್ಟಿಕೊಂಡು ನಾನೇನು ಮಾಡಲಿ?

ಯದ್ದ್ರವ್ಯಂ ಬಾನ್ಧವಾನಾಂ ವಾ ಮಿತ್ರಾಣಾಂ ವಾ ಕ್ಷಯೇ ಭವೇತ್ ।
ನಾಹಂ ತತ್ಪ್ರತಿಗೃಹ್ಣೀಯಾಂ ಭಕ್ಷ್ಯಾನ್ವಿಷಕೃತಾನಿವ ॥೪॥

ಬಂಧುಜನರ ಅಥವಾ ಮಿತ್ರರ ವಿನಾಶದಿಂದ ದೊರೆಯುವ ಐಶ್ವರ್ಯವು ವಿಷದಿಂದ ಕೂಡಿದ ಭಕ್ಷ್ಯದಂತೆ. ಅದನ್ನು ನಾನು ಪ್ರತಿಗ್ರಹಿಸುವುದಿಲ್ಲ.

ಧರ್ಮಮರ್ಥಂ ಚ ಕಾಮಂ ಚ ಪೃಥಿವೀಂ ಚಾಪಿ ಲಕ್ಷ್ಮಣ ।
ಇಚ್ಛಾಮಿ ಭವತಾಮರ್ಥೇ ಹ್ಯೇತತ್ಪ್ರತಿಶೃಣೋಮಿ ತೇ ॥೫॥

ಧರ್ಮಾರ್ಥಕಾಮಗಳನ್ನೂ-ಅಷ್ಟೇಕೆ ಈ ಪೃಥ್ವಿಯನ್ನೂ—ನಾನು ನಿಮ್ಮ ಹಿತಕ್ಕಾಗಿ ಅಪೇಕ್ಷಿಸುವೆನೇ ಹೊರತು ನನಗಾಗಿ ಅಲ್ಲ. ಈ ವಿಷಯವನ್ನು ನಾನು ಪ್ರತಿಜ್ಞೆಮಾಡಿ ಹೇಳುತ್ತೇನೆ.

ಭ್ರಾತೄಣಾಂ ಸಂಗ್ರಹಾರ್ಥಂ ಚ ಸುಖಾರ್ಥಂ ಚಾಪಿ ಲಕ್ಷ್ಮಣ ।
ರಾಜ್ಯಮಪ್ಯಹಮಿಚ್ಛಾಮಿ ಸತ್ಯೇನಾಯುಧಮಾಲಭೇ ॥೬॥

ಸೌಮಿತ್ರೇ! ಆಯುಧವನ್ನು ಮುಟ್ಟಿ ಪ್ರಮಾಣಮಾಡಿ ಹೇಳುತ್ತೇನೆ. ನನ್ನ ತಮ್ಮಂದಿರ ಐಶ್ವರ್ಯಸಂಗ್ರಹಕ್ಕಾಗಿಯೂ ಮತ್ತು ಅವರ ಸುಖಕ್ಕಾಗಿಯೂ (ನನಗೆ ಇಷ್ಟವಿಲ್ಲದಿದ್ದರೂ) ಈ ರಾಜ್ಯವನ್ನು ಅಪೇಕ್ಷಿಸುತ್ತೇನೆ. ಆದುದರಿಂದ ತಮ್ಮಂದಿರಿಗೆ ವಿರುದ್ಧವಾದ ಯಾವ ಕಾರ್ಯವನ್ನೂ ನಾನು ಮಾಡುವುದಿಲ್ಲ.

ನೇಯಂ ಮಮ ಮಹೀ ಸೌಮ್ಯ ದುರ್ಲಭಾ ಸಾಗರಾಮ್ಬರಾ ।
ನ ಹೀಚ್ಛೇಯಮಧರ್ಮೇಣ ಶಕ್ರತ್ವಮಪಿ ಲಕ್ಷ್ಮಣ ॥೭॥

ಸಮುದ್ರಾಂತವಾದ ಈ ಪೃಥ್ವಿಯು ನನಗೇನೂ ದುರ್ಲಭವಲ್ಲ. ನಾನು ಈ ಭೂಮಿಯ ಅಧೀಶನಾಗಬೇಕೆಂದು ಬಯಸಿದರೆ ಕ್ಷಣಮಾತ್ರದಲ್ಲಿ

ಸಾಧಿಸುವೆನು. ಆದರೆ ಅಧರ್ಮದಿಂದ ಲಭಿಸಬಹುದಾದ ಇಂದ್ರಪದವಿಯೂ ನನಗೆ ಬೇಕಾಗಿಲ್ಲ.

ಯದ್ವಿನಾ ಭರತಂ ತ್ವಾಂ ಚ ಶತ್ರುಘ್ನಂ ಚಾಪಿ ಮಾನದ ।
ಭವೇನ್ಮಮ ಸುಖಂ ಕಿಂಚಿದ್ಭಸ್ಮ ತತ್ಕುರುತಾಂ ಶಿಖೀ ॥೮॥

ನಿನಗೂ ಮತ್ತು ಭರತ-ಶತ್ರುಘ್ನರಿಗೂ ಇಲ್ಲದ ಯಾವುದಾದರೂ ಸುಖವು ನನಗೆ ಉಂಟಾಗುವುದಾದರೆ–ಆ ಸುಖವನ್ನು ಈ ನಿಮಿಷದಲ್ಲಿಯೇ ಅಗ್ನಿಯು ಭಸ್ಮಮಾಡಲಿ.

ಲಕ್ಷ್ಮಣ! ಭರತನು ಬಂದಿರುವುದಕ್ಕೆ ಕಾರಣವನ್ನು ನಾನು ಹೀಗೆ ಊಹಿಸುತ್ತೇನೆ. ಭ್ರಾತೃವತ್ಸಲನಾದ ಮತ್ತು ನನಗೆ ಪ್ರಾಣಪ್ರಿಯನಾದ ಭರತನು ಸೋದರಮಾವನ ಮನೆಯಿಂದ ಅಯೋಧ್ಯೆಗೆ ಬಂದಿದ್ದಾನೆ. ಅಯೋಧ್ಯೆಗೆ ಬರುತ್ತಲೇ ನಾನು ಜಟಾವಲ್ಕಲಧಾರಿಯಾಗಿ ನಿನ್ನೊಡನೆಯೂ ಮತ್ತು ಸೀತೆಯೊಡನೆಯೂ ಅರಣ್ಯಕ್ಕೆ ಕಳುಹಿಸಲ್ಪಟ್ಟೆನೆಂಬ ವಾರ್ತೆಯನ್ನೂ ಕೇಳಿದ್ದಾನೆ. ಧರ್ಮಾತ್ಮನಾದ ಭರತನು ಜ್ಯೇಷ್ಠಪುತ್ರನೇ ಸಿಂಹಾಸನಕ್ಕೆ ಯೋಗ್ಯನೆಂಬ ಕುಲಧರ್ಮವನ್ನು ಸ್ಮರಿಸಿ ಸ್ನೇಹಪರವಶವಾದ ಹೃದಯ ದಿಂದಲೂ–ಶೋಕದಿಂದ ವ್ಯಾಕುಲಿತವಾದ ಮನಸ್ಸಿನಿಂದಲೂ ನನ್ನನ್ನು ನೋಡುವ ಸಲುವಾಗಿಯೇ ಇಲ್ಲಿಗೆ ಬಂದಿದ್ದಾನೆ. ಇಷ್ಟಕ್ಕೆಲ್ಲಾ ಕಾರಣಳಾದ ತಾಯಿಯಾದ ಕೈಕೇಯಿಯ ಮೇಲೂ ಕೋಪಿಸಿಕೊಂಡು, ಅವಳನ್ನು ಅಪ್ರಿಯವಾದ ಮತ್ತು ನಿಷ್ಠುರವಾದ ಮಾತುಗಳಿಂದ ಮೂದಲಿಸಿ, ನಮ್ಮ ತಂದೆಯನ್ನೂ ಪ್ರಸನ್ನಗೊಳಿಸಿ ರಾಜ್ಯವನ್ನು ನನಗೇ ವಹಿಸಿಕೊಡಲು ಇಲ್ಲಿಗೆ ಬಂದಿದ್ದಾನೆ. ಭರತನು ನಮ್ಮನ್ನು ನೋಡಲು ಬಂದಿರುವುದು ಸರ್ವಥಾ ಸಮಯೋಚಿತವಾಗಿದೆ. ನಮ್ಮ ವಿಷಯದಲ್ಲವನು ಮನಸ್ಸಿನಿಂದಲೂ ಕೂಡ ಅಪ್ರಿಯವಾಗುವಂತಹ ಕಾರ್ಯವನ್ನು ಮಾಡತಕ್ಕವನಲ್ಲ.

ಲಕ್ಷ್ಮಣ! ನಿನಗೆ ಈ ವಿಧವಾದ ಭಯವುಂಟಾಗಲು ಮತ್ತು ನೀನು ಅವನ ವಿಷಯದಲ್ಲಿ ಇಷ್ಟು ಸಂದೇಹಪಡಲು ಕಾರಣವೇನು? ಈ ಹಿಂದೇನಾದರೂ ಭರತನು ನಿನಗೆ ಅಪ್ರಿಯವಾದ ಕಾರ್ಯವನ್ನೇನಾದರೂ ಮಾಡಿರುವನೇ?

ನ ಹಿ ತೇ ನಿಷ್ಠುರಂ ವಾಚ್ಯೋ ಭರತೋ ನಾಪ್ರಿಯಂ ವಚಃ ।
ಅಹಂ ಹ್ಯಪ್ರಿಯಮುಕ್ತಃ ಸ್ಯಾಂ ಭರತಸ್ಯಾಪ್ರಿಯೇ ಕೃತೇ ॥೧೫॥

ಆದುದರಿಂದ, ಲಕ್ಷ್ಮಣ! ನೀನು ಭರತನ ವಿಷಯದಲ್ಲಿ ಅಪ್ರಿಯವಾದ ಮತ್ತು ನಿಷ್ಠುರವಾದ ಮಾತುಗಳನ್ನಾಡಬಾರದು. ನೀನು ಅವನ ವಿಷಯದಲ್ಲೇನಾದರೂ ಅಪ್ರಿಯವಾದ ಮಾತುಗಳನ್ನಾಡಿದರೆ–ನನ್ನನ್ನೇ ನೀನು ಅಪ್ರಿಯವಾದ ಮಾತುಗಳಿಂದ ಹಳಿದಂತಾಗುತ್ತದೆ.

ಕಥಂ ನು ಪುತ್ರಾಃ ಪಿತರಂ ಹನ್ಯುಃ ಕಸ್ಯಾಂಚಿದಾಪದಿ ।
ಭ್ರಾತಾ ವಾ ಭ್ರಾತರಂ ಹನ್ಯಾತ್ಸೌಮಿತ್ರೇ ಪ್ರಾಣಮಾತ್ಮನಃ ॥೧೬॥

ಲಕ್ಷ್ಮಣ! ಎಂತಹ ಆಪತ್ಕಾಲದಲ್ಲಿಯೇ ಆದರೂ ಮಕ್ಕಳು ತಂದೆಯನ್ನು ಕೊಲ್ಲುವರೇ? ತನಗೆ ಪ್ರಾಣಸಮಾನನಾದ ಒಡಹುಟ್ಟಿದವನನ್ನು ಸಹೋದರನೇ ಕೊಲ್ಲುವನೇ?

ಯದಿ ರಾಜ್ಯಸ್ಯ ಹೇತೋಸ್ತ್ವಮಿಮಾಂ ವಾಚಂ ಪ್ರಭಾಷಸೇ ।
ವಕ್ಷ್ಯಾಮಿ ಭರತಂ ದೃಷ್ಟ್ವಾ ರಾಜ್ಯಮಸ್ಮೈ ಪ್ರದೀಯತಾಮ್ ॥೧೭॥

ಒಂದು ವೇಳೆ ನೀನೇ ರಾಜ್ಯವನ್ನು ಪಡೆದುಕೊಳ್ಳಬೇಕೆನ್ನುವ ಕಾರಣದಿಂದ ಇಂತಹ ನಿಷ್ಠುರವಾದ ಮಾತುಗಳನ್ನು ಭರತನ ವಿಷಯದಲ್ಲಿ ಆಡುತ್ತಿರುವೆಯಾದರೆ–ಭರತನನ್ನು ಕಂಡು ಲಕ್ಷ್ಮಣನಿಗೆ ರಾಜ್ಯವನ್ನು ಬಿಟ್ಟುಕೊಡುವಂತೆ-ಹೇಳುತ್ತೇನೆ. 'ರಾಜ್ಯಮಸ್ಮೈ ಪ್ರಯಚ್ಛ' 'ರಾಜ್ಯವನ್ನು ಇವನಿಗೆ ಕೊಟ್ಟುಬಿಡು' ಎಂದು ಭರತನಿಗೆ ಹೇಳಿದ ಮರುಕ್ಷಣದಲ್ಲಿಯೇ ಅವನು 'ಬಾಢಂ' 'ಆಗಲಿ' ಎಂದೇ ಉತ್ತರಿಸುವನು. ಆದುದರಿಂದ ಭರತನ ವಿಷಯದಲ್ಲಿ ನೀನು ಲೇಶಮಾತ್ರವೂ ಸಂದೇಹಗೊಳ್ಳಬೇಡ."

ಧರ್ಮಶೀಲನಾದ, ಅಣ್ಣನಾದ ಶ್ರೀರಾಮನು ಹೀಗೆ ಹೇಳಲು ಅಣ್ಣನ ಹಿತದಲ್ಲಿಯೇ ಸರ್ವದಾ ನಿರತನಾಗಿರುವ ಲಕ್ಷ್ಮಣನು ನಾಚಿಕೆಯಿಂದ ಕುಸಿದು ಹೋದನು. ಸ್ವಾನಿ ಗಾತ್ರಾಣಿ ಲಜ್ಜಯಾ ಪ್ರವಿವೇಶೇವ-ಲಜ್ಜೆಯಿಂದ ತನ್ನೊಳಗೆ ತಾನೇ ಹುದುಗಿಕೊಂಡನೋ ಎಂಬಂತಾದನು. ಶ್ರೀರಾಮನ ಮಾತುಗಳನ್ನು ಕೇಳಿ ಲಜ್ಜಿತನಾದ ಲಕ್ಷ್ಮಣನು ಅಣ್ಣನಿಗೆ ಹೇಳಿದನು:

ತ್ವಾಂ ಮನ್ಯೇ ದ್ರಷ್ಟುಮಾಯಾತಃ ಪಿತಾ ದಶರಥಃ ಸ್ವಯಮ್ ॥

“ನಿನ್ನನ್ನು ನೋಡಲು ದಶರಥನೇ ಖುದ್ದಾಗಿ ಬಂದಿರಬಹುದೆಂದೂ ನಾನು ಭಾವಿಸುತ್ತೇನೆ.”

ನಾಚಿಕೆಗೊಂಡು ಬೇರೆಯ ವಿಷಯವನ್ನೆತ್ತಿ ಮಾತನಾಡಿದ ಲಕ್ಷ್ಮಣನಿಗೆ ರಾಮನು ಹೇಳಿದನು:

“ಮಹಾಬಾಹುವಾದ ದಶರಥನೇ ನಮ್ಮನ್ನು ನೋಡಲು ಬಂದಿರಬಹುದೆಂದು ನಾನೂ ಭಾವಿಸುತ್ತೇನೆ. ಅರಣ್ಯವಾಸದಲ್ಲಿರುವ ಕಷ್ಟಗಳನ್ನು ಯೋಚಿಸಿ, ನಾವಿಬ್ಬರೂ ಸುಖಪಡಲು ಯೋಗ್ಯರಾದವರೆಂದು ಭಾವಿಸಿ ಅಯೋಧ್ಯೆಗೆ ಕರೆದೊಯ್ಯಲೂ ಬಹುದು. ದಶರಥನು ಹೆಚ್ಚು ಸುಖಪಡಲು ಯೋಗ್ಯಳಾದ ಈ ವೈದೇಹಿಯನ್ನಾದರೂ ಈ ಅರಣ್ಯದಿಂದ ಅಯೋಧ್ಯೆಗೆ ಕರೆದುಕೊಂಡು ಹೋಗಬಹುದು.

ಪ್ರಶಸ್ತವಾದ ಕುಲದಲ್ಲಿ ಹುಟ್ಟಿರುವ, ಮನೋಹರವಾಗಿರುವ, ವಾಯು ವೇಗಕ್ಕೆ ಸಮಾನವಾದ ವೇಗವುಳ್ಳ ಆ ಎರಡು ಕುದುರೆಗಳು ಚೆನ್ನಾಗಿ ಪ್ರಕಾಶಿಸುತ್ತಿವೆ. ಅಶ್ವಸೈನ್ಯದ ಮುಂಭಾಗದಲ್ಲಿ ದೊಡ್ಡದಾದ ಶರೀರವನ್ನು ಹೊಂದಿರುವ, ಮುದಿಯಾಗಿರುವ, ಧೀಮಂತನಾದ ನಮ್ಮ ತಂದೆಯ ಶತ್ರುಂಜಯವೆಂಬ ಪಟ್ಟದಾನೆಯು ತನ್ನ ಶರೀರವನ್ನು ಕುಲುಕುತ್ತಾ ಮೆಲ್ಲನೆ ಅಡಿಯಿಡುತ್ತಿದೆ. ಆದರೆ ಬಿಳುಪಾದ, ಲೋಕಪ್ರಸಿದ್ಧವಾದ, ದಿವ್ಯವಾದ, ತಂದೆಯ ಶ್ವೇತಚ್ಛತ್ರಿಯನ್ನು ಮಾತ್ರ ನಾನಲ್ಲಿ ಕಾಣುತ್ತಿಲ್ಲ. ಆದುದರಿಂದ ತಂದೆಯು ಇಲ್ಲಿಗೆ ಆಗಮಿಸಿರುವ ವಿಷಯದಲ್ಲಿ ನನಗೆ ಸಂಶಯವುಂಟಾಗಿದೆ.

ಲಕ್ಷ್ಮಣ! ನೀನು ಮರದಿಂದಿಳಿ. ನಾನು ಹೇಳುವಂತೆ ಮಾಡು”–ಹೀಗೆ ಧರ್ಮಾತ್ಮನಾದ ಶ್ರೀರಾಮನು ಲಕ್ಷ್ಮಣನಿಗೆ ಹೇಳಿದನು.

ಒಡನೆಯೇ ಶತ್ರುಂಜಯನಾದ ಲಕ್ಷ್ಮಣನು ಸಾಲವೃಕ್ಷದ ತುದಿಯಿಂದ ಕೆಳಗಿಳಿದು ಕೈಮುಗಿದುಕೊಂಡು ಶ್ರೀರಾಮನ ಪಕ್ಕದಲ್ಲಿ ನಿಂತುಕೊಂಡನು.

ಅತ್ತಲಾಗಿ ಸೇನೆಯ ಆರ್ಭಟವನ್ನು ಕೇಳಿದ ಭರತನು ಶ್ರೀರಾಮನ ಪರ್ಣಶಾಲೆಯು ಹತ್ತಿರದಲ್ಲಿಯೇ ಇದ್ದುದರಿಂದ ಯಾವ ವಿಧವಾದ ಪೀಡೆಯೂ ಉಂಟಾಗಬಾರದೆಂದು ಸೇನಾಪತಿಗೆ ಆಜ್ಞಾಪಿಸಿದನು. ಚಿತ್ರಕೂಟಪರ್ವತದ

ಸುತ್ತಲೂ ಸೈನ್ಯಕ್ಕೆ ಬಿಡಾರಮಾಡಿಕೊಡಲಾಯಿತು. ಕುದುರೆಗಳಿಂದಲೂ, ಆನೆಗಳಿಂದಲೂ, ರಥಗಳಿಂದಲೂ ಮತ್ತು ಪದಾತಿಗಳಿಂದಲೂ ಯುಕ್ತವಾಗಿದ್ದ ಆ ಮಹಾಸೈನ್ಯವು ಚಿತ್ರಕೂಟಪರ್ವತದ ಸುತ್ತಲೂ ಒಂದೂವರೆ ಯೋಜನದವರೆಗೆ ಬಿಡಾರ ಮಾಡಿತು.

ಚಿತ್ರಕೂಟಪರ್ವತದ ತಪ್ಪಲಿನಲ್ಲಿ ಬೀಡುಬಿಟ್ಟಿದ್ದ, ಭರತನಿಂದ ಶಿಕ್ಷಿತವಾಗಿದ್ದ ಆ ಮಹಾಸೈನ್ಯವು ಧರ್ಮವನ್ನು ಪುರಸ್ಕರಿಸಿ ದರ್ಪವನ್ನೂ ಬದಿಗೊತ್ತಿ ಶ್ರೀರಾಘವನನ್ನು ಪ್ರಸನ್ನಗೊಳಿಸಲು ಒಳ್ಳೆಯ ಸ್ವಭಾವದಿಂದ ನಡೆದುಕೊಳ್ಳುತ್ತಾ ವಿರಾಜಿಸಿತು.

೯೭ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೯೮ನೆಯ ಸರ್ಗ

ಭರತನು ಶ್ರೀರಾಮನ ಪರ್ಣಶಾಲೆಯನ್ನು ಹುಡುಕಿದುದು: ಶ್ರೀರಾಮನ ದರ್ಶನ

ನಿವೇಶ್ಯ ಸೇನಾಂ ತು ವಿಭುಃ ಪದ್ಭ್ಯಾಂ ಪಾದವತಾಂ ವರಃ ।
ಅಭಿಗನ್ತುಂ ಸ ಕಾಕುತ್ಸ್ಥಮಿಯೇಷ ಗುರುವರ್ತಿನಮ್ ॥೧॥

ವಿಭುವಾದ ನರಶ್ರೇಷ್ಠನಾದ ಭರತನು–ಚಿತ್ರಕೂಟಪರ್ವತದ ಸುತ್ತಲೂ ಬೀಡುಬಿಡುವಂತೆ ಸೈನ್ಯಕ್ಕೆ ತಿಳಿಸಿ ಪಿತೃವಚನಪರಿಪಾಲಕನಾದ ಶ್ರೀರಾಮನನ್ನು ನೋಡಲು ಕಾಲ್ನಡಿಗೆಯಲ್ಲಿಯೇ ಹೋಗಲು ಬಯಸಿದನು.

ಸೇನಾಪತಿಗಳು ಸೈನ್ಯವನ್ನು ನೆಲೆಗೊಳಿಸಿದ ನಂತರ ಭರತನು ಶತ್ರುಘ್ನನಿಗೆ ಹೇಳಿದನು:

"ಸೌಮ್ಯ! ನೀನು ಈ ಕ್ಷಣದಲ್ಲಿಯೇ ಇಲ್ಲಿರುವ ಮನುಷ್ಯರೊಡನೆ ಮತ್ತು ವ್ಯಾಧರೊಡನೆ ಹೋಗಿ ಈ ಅರಣ್ಯದಲ್ಲಿ ಶ್ರೀರಾಮನು ಎಲ್ಲಿ ವಾಸ ಮಾಡುತ್ತಿರುವನೆಂಬುದನ್ನು ಹುಡುಕಿಕೊಂಡು ಬಾ. ಶ್ರೀರಾಮನನ್ನು ಸಂದರ್ಶಿಸಲು ನಮ್ಮೊಡನೆ ಆಗಮಿಸಿರುವ ಈ ಗುಹನೂ ಧನುರ್ಬಾಣಗಳನ್ನೂ ಕತ್ತಿಗಳನ್ನೂ ಹಿಡಿದಿರುವ ಜ್ಞಾತಿ-ಬಾಂಧವರ ಸಮೇತನಾಗಿ ಈ ಅರಣ್ಯದ ಸುತ್ತಲೂ ಶ್ರೀರಾಮನನ್ನು ಹುಡುಕಲಿ. ನಾನೂ ಅಮಾತ್ಯರಿಂದಲೂ ಪಟ್ಟಣಿಗರಿಂದಲೂ, ಗುರುಜನರಿಂದಲೂ, ಬ್ರಾಹ್ಮಣರಿಂದಲೂ ಪರಿವೃತನಾಗಿ

ಕಾಲ್ನಡಿಗೆಯಲ್ಲಿಯೇ ಈ ಅರಣ್ಯದಲ್ಲಿ ಸುತ್ತಾಡುತ್ತಾ ಶ್ರೀರಾಮನನ್ನು ಹುಡುಕುತ್ತೇನೆ. ನಾನು ರಾಮನನ್ನೂ, ಮಹಾಬಲನಾದ ಲಕ್ಷ್ಮಣನನ್ನೂ, ಮಹಾಭಾಗ್ಯಶಾಲಿನಿಯಾದ ಸೀತೆಯನ್ನೂ ಕಾಣುವವರೆಗೂ ನನ್ನ ಮನಸ್ಸಿಗೆ ನೆಮ್ಮದಿಯೆಂಬುದೇ ಇಲ್ಲ. ಎಂದಿನವರೆಗೆ ನಾನು ಚಂದ್ರಸದೃಶವಾದ ಮುಖವುಳ್ಳ, ಪದ್ಮದಳದಂತೆ ವಿಶಾಲವಾದ ಕಣ್ಣುಗಳಿಂದ ಕೂಡಿರುವ ನಮ್ಮಣ್ಣನನ್ನು ನೋಡುವುದಿಲ್ಲವೋ–ಅಂದಿನವರೆಗೂ ನನ್ನ ಮನಸ್ಸಿಗೆ ಶಾಂತಿಯಿಲ್ಲ. ಎಂದಿನವರೆಗೆ ನಾನು ರೇಖಾ-ಧ್ವಜ-ಕುಲಿಶ-ಆತಪತ್ರ–ಇವೇ ಮೊದಲಾದ ರಾಜಚಿಹ್ನೆಗಳಿಂದ ಸಮಲಂಕೃತವಾಗಿರುವ ಶ್ರೀರಾಮನ ಎರಡು ದಿವ್ಯಪಾದಗಳನ್ನೂ ಮುಡಿಯಲ್ಲಿ ಧರಿಸುವುದಿಲ್ಲವೋ ಅಂದಿನವರೆಗೂ ನನಗೆ ಶಾಂತಿಯೆಂಬುದೇ ಇಲ್ಲ. ಎಂದಿನವರೆಗೆ ರಾಜನಾಗಲು ಯೋಗ್ಯನಾಗಿರುವ ಶ್ರೀರಾಮನು ಪಿತೃ-ಪಿತಾಮಹಾದಿಗಳ ಪರಂಪರೆಯಿಂದ ಬಂದಿರುವ ರಾಜ್ಯಸಿಂಹಾಸನದಲ್ಲಿ ಕುಳಿತು ಪ್ರಪಂಚದಲ್ಲಿರುವ ಸಕಲತೀರ್ಥಗಳಿಂದಲೂ ಅಭಿಷಿಕ್ತನಾಗಿ ತೋಯ್ದ ತಲೆಯುಳ್ಳವ ನಾಗುವುದಿಲ್ಲವೋ–ಅಂದಿನವರೆಗೂ ನನಗೆ ಶಾಂತಿಯೆಂಬುದೇ ಇಲ್ಲ.

ಯಾವಳು ತನ್ನ ಪತಿಯನ್ನು ಎಡೆಬಿಡದೇ ಸಾಗರಾಂತವಾದ ಈ ಪೃಥ್ವಿಯಲ್ಲಿ ಸುತ್ತುತ್ತಾ ಶ್ರೀರಾಮನ ಸಾನ್ನಿಧ್ಯದಲ್ಲಿಯೇ ಸರ್ವದಾ ಇರುವಳೋ ಅಂತಹ ಜನಕನ ಮಗಳಾದ ವೈದೇಹಿಯೇ ಮಹಾಭಾಗ್ಯಶಾಲಿನಿಯು ಮತ್ತು ಕೃತಕೃತ್ಯಳು. ಕಳಂಕರಹಿತನಾದ, ಚಂದ್ರನಿಗೆ ಸದೃಶವಾದ ಮುಖವನ್ನು ಹೊಂದಿರುವ, ರಾಜೀವಲೋಚನನಾದ ಶ್ರೀರಾಮನ ಮುಖಕಮಲವನ್ನು ಸರ್ವದಾ ನೋಡಿ ಆನಂದಿಸುತ್ತಿರುವ ಸುಮಿತ್ರಾ ಪುತ್ರನಾದ ಲಕ್ಷ್ಮಣನೇ ಸಿದ್ಧಾರ್ಥನು. ಕುಬೇರನು ನಂದನವನದಲ್ಲಿ ವಿಹರಿಸುವಂತೆ–ಯಾವ ಚಿತ್ರಕೂಟಪರ್ವತದಲ್ಲಿ ಶ್ರೀರಾಮನು ವಾಸಿಸುತ್ತಿರುವನೋ–ಅಂತಹ ಹಿಮವತ್ಪರ್ವತಕ್ಕೆ ಸದೃಶವಾದ ಈ ಚಿತ್ರಕೂಟಪರ್ವತವೂ ಭಾಗ್ಯಶಾಲಿಯೇ ಸರಿ. ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ, ಮಹಾತೇಜಸ್ವಿಯಾದ ಶ್ರೀರಾಮನು ಇಲ್ಲಿ ವಾಸಮಾಡುತ್ತಿರುವುದರಿಂದ ದುರ್ಗಮವಾಗಿದ್ದರೂ, ವಿಷಜಂತುಗಳಿಂದ ಕೂಡಿದ್ದರೂ ಈ ಅರಣ್ಯವು ಕೃತಾರ್ಥವೇ ಆಗಿದೆ."

ಹೀಗೆಂದು ಶತ್ರುಘ್ನನಿಗೆ ಹೇಳುತ್ತಾ ಪುರುಷಶ್ರೇಷ್ಠನಾದ, ಮಹಾ

ಬಲನಾದ, ಮಹಾತೇಜಸ್ವಿಯಾದ ಭರತನು ಕಾಲ್ನಡಿಗೆಯಲ್ಲಿಯೇ ಮಹಾವನವನ್ನು ಪ್ರವೇಶಿಸಿದನು. ಪರ್ವತದ ತಪ್ಪಲುಪ್ರದೇಶಗಳಲ್ಲಿದ್ದ ಪುಷ್ಪಿತವಾದ ಅಗ್ರಭಾಗಗಳಿಂದ ಕೂಡಿದ್ದ ವೃಕ್ಷಗಳ ಮಧ್ಯಭಾಗದಲ್ಲಿ ಭರತನು ನಡೆದುಹೋಗುತ್ತಿದ್ದನು. ಹಾಗೆ ಹೋಗುತ್ತಾ ಚಿತ್ರಕೂಟಪರ್ವತದಲ್ಲಿದ್ದ ಎತ್ತರವಾಗಿದ್ದ ಮತ್ತು ಹೂಗಳಿಂದ ಕೂಡಿದ್ದ ಸಾಲವೃಕ್ಷದ ಬಳಿಗೆ ಬಂದು ಅದನ್ನು ಹತ್ತಿ ಸುತ್ತಲೂ ನೋಡಿದನು. ಶ್ರೀರಾಮನ ಪರ್ಣಶಾಲೆಯಲ್ಲಿದ್ದ ಅಗ್ನಿಗೆ ಧ್ವಜಪ್ರಾಯವಾದ ಹೊಗೆಯು ಆಶ್ರಮದ ಮೇಲ್ಭಾಗದಲ್ಲಿ ಹೋಗುತ್ತಿದ್ದುದನ್ನು ಭರತನು ನೋಡಿದನು. ಆ ಹೊಗೆಯನ್ನು ನೋಡಿ ಅಲ್ಲಿಯೇ ಶ್ರೀರಾಮನಿರುವನೆಂಬುದನ್ನು ತಿಳಿದವನಾಗಿ–ಆಳವಾದ ಸಮುದ್ರದ ಮಧ್ಯದಲ್ಲಿ ಬಿದ್ದು ಒದ್ದಾಡುತ್ತಿದ್ದವನು ಸಮುದ್ರದ ತೀರವನ್ನು ಸೇರಿ ಆನಂದಿಸುವಂತೆ–ಬಂಧುಗಳಿಂದ ಸಮೇತನಾದ ಭರತನು ಆನಂದಪರವಶನಾದನು. ಸತ್ಪುರುಷರಿಂದ ಸಂಸೇವ್ಯಮಾನವಾದ ಆಶ್ರಮವು ಚಿತ್ರಕೂಟ ಪರ್ವತದಲ್ಲಿಯೇ ಇರುವುದೆಂಬುದನ್ನೂ ಹೊಗೆಯು ಕಾಣುತ್ತಿರುವೆಡೆ ಯಲ್ಲಿಯೇ ಶ್ರೀರಾಮನ ಆಶ್ರಮವಿರುವುದೆಂಬುದನ್ನೂ ನಿಶ್ಚಯಿಸಿದ ಭರತನು–ಅವನನ್ನು ಹುಡುಕುವ ಸಲುವಾಗಿ ಕಳುಹಿಸಿದ್ದ ಸೈನ್ಯವನ್ನು ಹಿಂದಕ್ಕೆ ಕರೆಯಿಸಿ ಹಿಂದಿದ್ದ ಸ್ಥಾನದಲ್ಲಿಯೇ ನಿಲ್ಲಿಸಿ, ಶತ್ರುಘ್ನನೊಡನೆ ತ್ವರೆಯಿಂದ ಶ್ರೀರಾಮನ ಪರ್ಣಶಾಲೆಯ ಕಡೆಗೆ ಹೋದನು.

೯೮ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೯೯ನೆಯ ಸರ್ಗ

ಭರತನು ಶತ್ರುಘ್ನನೇ ಮೊದಲಾದವರೊಡನೆ ಶ್ರೀರಾಮನ ಪರ್ಣಶಾಲೆಗೆ ಹೋದುದು: ಪರ್ಣಶಾಲೆಯನ್ನು ನೋಡಿ ಭರತನು ಬಿಕ್ಕಿ-ಬಿಕ್ಕಿ ಅಳುತ್ತಾ ಶ್ರೀರಾಮನ ಪಾದಗಳಲ್ಲಿ ಬಿದ್ದುದು: ಶ್ರೀರಾಮನು ಅವರೆಲ್ಲರನ್ನೂ ಆಲಿಂಗಿಸಿಕೊಂಡುದು

ನಿವಿಷ್ಟಾಯಾಂ ತು ಸೇನಾಯಾಮುತ್ಸುಕೋ ಭರತಸ್ತದಾ ।
ಜಗಾಮ ಭ್ರಾತರಂ ದ್ರಷ್ಟುಂ ಶತ್ರುಘ್ನಮನುದರ್ಶಯನ್ ॥೧॥

ಸೈನ್ಯಕ್ಕೆ ಸ್ವಸ್ಥಾನದಲ್ಲಿರಲು ಆಜ್ಞೆಮಾಡಿದನಂತರ ರಾಮದರ್ಶನ

ದಲ್ಲಿಯೇ ಉತ್ಸುಕನಾಗಿದ್ದ ಭರತನು ಶತ್ರುಘ್ನನನ್ನು ಜೊತೆಯಲ್ಲಿ ಕರೆದುಕೊಂಡು ಶ್ರೀರಾಮನು ಅಲ್ಲಿಯೇ ಇರುವನೆಂಬುದಕ್ಕೆ ಗುರುತುಗಳನ್ನು ತೋರಿಸುತ್ತಾ ಅಣ್ಣನನ್ನು ಕಾಣುವ ಸಲುವಾಗಿ ಹೊರಟನು.

ಮಾತೃಜನರನ್ನು ಪರ್ಣಶಾಲೆಯ ಬಳಿಗೆ ಶೀಘ್ರವಾಗಿ ಕರೆತರುವಂತೆ ವಸಿಷ್ಠಮಹರ್ಷಿಗಳಿಗೆ ಹೇಳಿ ಭ್ರಾತೃವತ್ಸಲನಾದ ಭರತನು ತ್ವರೆಯಿಂದ ಮುಂದೆ ಪ್ರಯಾಣಮಾಡಿದನು. ಭರತನಂತೆಯೇ ತಾನೂ ಸಾಧ್ಯವಾದಷ್ಟು ಬೇಗ ಶ್ರೀರಾಮನನ್ನು ಸಂದರ್ಶಿಸಬೇಕೆಂಬ ಅಭಿಲಾಷೆಯಿಂದ ಸುಮಂತ್ರನೂ ಶತ್ರುಘ್ನನನ್ನನುಸರಿಸಿ ಹೋದನು. ಭರತನು ಸ್ವಲ್ಪದೂರ ಪ್ರಯಾಣ ಮಾಡುತ್ತಲೇ ಹಲವಾರು ತಪಸ್ವಿಗಳ ಆಶ್ರಮಗಳ ಮಧ್ಯಭಾಗದಲ್ಲಿದ್ದ ಅಣ್ಣನ ಪರ್ಣಕುಟೀರವನ್ನೂ ಮತ್ತು ಗುಡಿಸಲನ್ನೂ ನೋಡಿದನು. ಪರ್ಣಶಾಲೆಯ ಮುಂಭಾಗದಲ್ಲಿ ಹೋಮಾರ್ಥವಾಗಿ ಮತ್ತು ಅಡಿಗೆಮಾಡುವುದಕ್ಕಾಗಿ ಸೀಳಿ ಹಾಕಿದ್ದ ಕಟ್ಟಿಗೆಯನ್ನೂ ಪೂಜಾರ್ಥವಾಗಿ ಕೊಯ್ದಿಟ್ಟಿದ್ದ ಹೂಗಳ ರಾಶಿಯನ್ನೂ ಭರತನು ನೋಡಿದನು. ಆಶ್ರಮದಿಂದ ಹೊರಕ್ಕೆ ಹೋಗಿ ಬರುತ್ತಿದ್ದ ರಾಮ-ಲಕ್ಷ್ಮಣರು ತಮ್ಮ ಆಶ್ರಮಕ್ಕೆ ಮಾರ್ಗವನ್ನು ಸೂಚಿಸುವ ಗುರುತುಗಳನ್ನು ಅಲ್ಲಲ್ಲೇ ಇರಿಸಿದ್ದರು. ಕೆಲವು ವೃಕ್ಷಗಳ ಮೇಲೆ ನಾರು ಮಡಿಯನ್ನು ಒಣಗಿಹಾಕಿರುತ್ತಿದ್ದರು. ಕೆಲವು ಗಿಡಗಳ ಬಳಿಯಲ್ಲಿ ದರ್ಭೆ ಯನ್ನೂ ಮತ್ತೆ ಕೆಲವು ವೃಕ್ಷಗಳ ಬಳಿಯಲ್ಲಿ ಸಮಿತ್ತನ್ನೂ ಇಟ್ಟಿದ್ದರು. ಆಶ್ರಮ ಮಾರ್ಗಸೂಚಕವಾದ ಇಂತಹ ಹಲವಾರು ಗುರುತುಗಳನ್ನು ಭರತನು ನೋಡಿದನು. ಶೀತಪರಿಹಾರಕ್ಕಾಗಿ ಪರ್ಣಕುಟೀರದ ಸಮೀಪದಲ್ಲಿಯೇ ಮೃಗಗಳ ಮತ್ತು ಎಮ್ಮೆಗಳ ಸಗಣಿಯಿಂದ ಬೆರಣಿಗಳನ್ನು ಮಾಡಿ ರಾಶಿ-ರಾಶಿಯಾಗಿ ಸಂಗ್ರಹಿಸಿಟ್ಟಿರುವುದನ್ನು ಭರತನು ನೋಡಿದನು. ಮುಂದೆ-ಮುಂದೆ ಹೋಗುತ್ತಿದ್ದಾಗ ಮಹಾಬಾಹುವಾದ ಕಾಂತಿಯಿಂದ ಬೆಳಗುತ್ತಿದ್ದ ಭರತನು ಬಹಳ ಹೃಷ್ಟನಾಗಿ ಶತ್ರುಘ್ನನಿಗೂ ತನ್ನ ಜೊತೆಯಲ್ಲಿದ್ದ ಅಮಾತ್ಯರಿಗೂ ಹೇಳಿದನು:

"ಭರದ್ವಾಜರು ಹೇಳಿದ್ದ ಸ್ಥಳಕ್ಕೇ ನಾವೀಗ ಬಂದಿರುವೆವೆಂದು ಭಾವಿಸು ತ್ತೇನೆ. ಇಲ್ಲಿಗೆ ಸ್ವಲ್ಪ ದೂರದಲ್ಲಿಯೇ ಮಂದಾಕಿನೀನದಿಯೂ ಇರುವು ದೆಂದು ತಿಳಿಯುತ್ತೇನೆ. ಇದೋ ಇಲ್ಲಿ ನೋಡಿರಿ. ಎತ್ತರದಲ್ಲಿ ನಾರುಮಡಿ

ಯನ್ನು ಕಟ್ಟಿರುತ್ತಾರೆ. ಅಕಾಲಗಳಲ್ಲಿ ಆಶ್ರಮದಿಂದ ಹೊರಗೆ ಹೋಗಿಬರುವ ಲಕ್ಷ್ಮಣನು ಆಶ್ರಮಮಾರ್ಗದ ಗುರುತಿಗಾಗಿ ನಾರುಮಡಿಯನ್ನು ಈ ಎತ್ತರವಾದ ಸ್ಥಳದಲ್ಲಿ ಕಟ್ಟಿರಬಹುದು. ಇಲ್ಲಿ ಕಾಣುತ್ತಿರುವುದು, ದೊಡ್ಡ-ದೊಡ್ಡ ಕೊಂಬುಗಳನ್ನು ಹೊಂದಿ ವೇಗವಾಗಿ ಓಡುತ್ತಿದ್ದು ಎದುರಾಗಿ ಬರುವ ಮತ್ತೊಂದು ಗುಂಪನ್ನು ನೋಡಿ ಗರ್ಜನೆಮಾಡುತ್ತಾ ಸುತ್ತಾಡಿದ ಮದಿಸಿದ



ಆನೆಗಳ ಹೆಜ್ಜೆಗಳ ಗುರುತೆಂದು ಭಾವಿಸುತ್ತೇನೆ. ಯಾವಾತನನ್ನು ತಪಸ್ವಿಗಳು ಸಂಸ್ಕಾರಪೂರ್ವಕವಾಗಿ ಪ್ರತಿಷ್ಠಾಪಿಸಲು ಬಯಸುವರೋ ಅಂತಹ ಯಜ್ಞೇಶ್ವರನ ದಟ್ಟವಾದ ಹೊಗೆಯು ಇಲ್ಲಿ ಕಾಣುತ್ತಿರುವುದು.

ಪುರುಷಶ್ರೇಷ್ಠನಾದ, ಗುರುಜನರನ್ನು ಸತ್ಕರಿಸುವ ಸ್ವಭಾವವುಳ್ಳ, ಆರ್ಯನಾದ, ಮಹರ್ಷಿಯಂತಿರುವ ರಾಘವನನ್ನು ಹರ್ಷಚಿತ್ತನಾಗಿ ಇಲ್ಲಿಯೇ ಕಾಣುತ್ತೇನೆ."

ಅನಂತರ ಭರತನು ಮುಹೂರ್ತಕಾಲ ನಡೆದು ಮಂದಾಕಿನೀನದಿಯ ತೀರದಲ್ಲಿ ವಿರಾಜಮಾನವಾಗಿದ್ದ ಚಿತ್ರಕೂಟಪರ್ವತದ ಬಳಿಗೆ ಹೋಗಿ ತನ್ನೊಡನಿದ್ದ ಜನರಿಗೆ ಹೇಳಿದನು:*

"ನಮ್ಮೆಲ್ಲರಿಗೂ ರಾಜನಾದ ಪುರುಷಶ್ರೇಷ್ಠನಾದ ಶ್ರೀರಾಮನಿಂದು ನಿರ್ಜನವಾದ ಈ ಅರಣ್ಯದಲ್ಲಿ ನೆಲದ ಮೇಲೆ ವೀರಾಸನದಲ್ಲಿ ಕುಳಿತಿದ್ದಾನೆ. ನನ್ನ ಜೀವಿತಕ್ಕೆ ಧಿಕ್ಕಾರವಿರಲಿ. ಲೋಕನಾಥನಾದ, ಮಹಾದ್ಯುತಿಯಾದ ರಾಘವನು ನನ್ನ ಸಲುವಾಗಿ ಇಂತಹ ವ್ಯಸನವನ್ನು ಹೊಂದಿ ಸರ್ವಕಾಮನೆಗಳನ್ನೂ ಪರಿತ್ಯಜಿಸಿ ಈ ಅರಣ್ಯದಲ್ಲಿ ವಾಸಮಾಡುತ್ತಿದ್ದಾನೆ. ಭರತನ ಸಲುವಾಗಿ ಶ್ರೀರಾಮನು ಎಲ್ಲವನ್ನೂ ಪರಿತ್ಯಜಿಸಿ ಕಾಡಿಗೆ ಹೋಗಬೇಕಾಯಿತೆಂದು ಲೋಕವೇ ಹೇಳುತ್ತಿದೆ. ನಾನೀಗ ಲೋಕನಿಂದನೆಗೆ ಪಾತ್ರನಾಗಿದ್ದೇನೆ. ಇಂತಹ ನನಗೆ ಧಿಕ್ಕಾರವಿರಲಿ. ಈ ಅಪವಾದವನ್ನು ಕಳೆದುಕೊಳ್ಳುವುದಕ್ಕಾಗಿ ಈಗಲೇ ನಾನು ಶ್ರೀರಾಮನನ್ನು ಪ್ರಸನ್ನಗೊಳಿಸುವ ಸಲುವಾಗಿ ಅವನ ಅಡಿದಾವರೆಗಳಲ್ಲಿ ಬಿದ್ದು ಪ್ರಾರ್ಥಿಸಿಕೊಳ್ಳುತ್ತೇನೆ. ಸೀತಾ-ಲಕ್ಷ್ಮಣರ ಪಾದಗಳಲ್ಲಿಯೂ ಬೀಳುತ್ತೇನೆ."[1] ಹೀಗೆ ಭರತನು ಆ ಅರಣ್ಯದಲ್ಲಿ ಗೋಳಾಡುತ್ತಾ ಹೋಗುತ್ತಿದ್ದನು. ಸ್ವಲ್ಪ ಮುಂದೆ ಹೋದನಂತರ ಮನೋಹರವಾಗಿಯೂ, ಪುಣ್ಯಪ್ರದವಾಗಿಯೂ, ಶ್ರೀರಾಮನ ವಾಸದಿಂದಾಗಿ ಅತಿ ಮಹತ್ತ್ವದಿಂದ ಕೂಡಿದುದಾಗಿಯೂ ಇದ್ದ ಪರ್ಣಶಾಲೆಯನ್ನು ಕಂಡನು.

---

*ಅಲ್ಲಿಂದಲೇ ಶ್ರೀರಾಮನ ಆಶ್ರಮವೂ ಕಾಣುತ್ತಿದ್ದಿತು ಮತ್ತು ಶ್ರೀರಾಮನು ಆಶ್ರಮದೊಳಗೆ ವೀರಾಸನದಲ್ಲಿ ಕುಳಿತಿರುವುದೂ ಕಾಣುತ್ತಿದ್ದಿತು.

[1] ಅಣ್ಣನಾದ ಭರತನು ಲಕ್ಷ್ಮಣನಿಗೆ ನಮಸ್ಕಾರಮಾಡುವುದು ಅನುಚಿತವೆಂದು ಭಾವಿಸಿದ ವ್ಯಾಖ್ಯಾನಕಾರರೊಬ್ಬರು "ಸೀತಾಯಾಶ್ಚ ಪುನಃ ಪುನಃ" ಎಂಬ ಪಾಠಾಂತರವನ್ನು ಕಲ್ಪಿಸಿದ್ದಾರೆ. ಆದರೆ ಕಾರ್ಯಸಾಧನೆಯಾಗಬೇಕಾದರೆ ವಯಸ್ಸನ್ನಾಗಲೀ ಅಧಿಕಾರವನ್ನಾಗಲೀ ನಿರ್ಲಕ್ಷಿಸಿ, ಕಾರ್ಯಮಾಡಿಕೊಡುವವನು ಎಷ್ಟೇ ಕೆಳಗಿನ ಅಧಿಕಾರದಲ್ಲಿದ್ದರೂ, ಎಷ್ಟೇ ಚಿಕ್ಕವನಾಗಿದ್ದರೂ ಅವನನ್ನು ಗೌರವಿಸಬೇಕೆಂಬುದು

ಕುಶಗಳಿಂದ ಆಚ್ಛಾದಿತವಾದ ಯಜ್ಞವೇದಿಕೆಯಂತಿದ್ದ ಸಾಲ ,ತಾಲ, ಅಶ್ವಕರ್ಣ–ಇವೇ ಮುಂತಾದ ವೃಕ್ಷಗಳ ಎಲೆಗಳಿಂದ ಆಚ್ಛಾದಿತವಾಗಿದ್ದ ವಿಶಾಲವಾಗಿಯೂ, ವಿಸ್ತೀರ್ಣವಾಗಿಯೂ, ಕೋಮಲವಾಗಿಯೂ ಇದ್ದ ಪರ್ಣಶಾಲೆಯನ್ನು ಭರತನು ನೋಡಿದನು. ಇಂದ್ರನ ವಜ್ರಾಯುಧಕ್ಕೆ ಸಮಾನವಾದ, ಮಹಾಭಾರವಾದ ಅವಯವಗಳಿಂದ ಕೂಡಿರುವ, ಚಿನ್ನದ ಬೆನ್ನುಳ್ಳ, ಮಹಾಸಾರಯುತವಾದ, ಶತ್ರುಗಳನ್ನು ಬಾಧೆಪಡಿಸುವ ರಾಮ-ಲಕ್ಷ್ಮಣರ ಮಹಾಧನುಸ್ಸುಗಳಿಂದ ಶೋಭಿಸುತ್ತಿದ್ದ ಪರ್ಣಶಾಲೆಯನ್ನು ಅವನು ನೋಡಿದನು. ಪ್ರಕಾಶಮಾನವಾದ ಹೆಡೆಗಳುಳ್ಳ ಸರ್ಪಗಳಿಂದ ಸುಶೋಭಿತವಾದ ಭೋಗವತೀಪಟ್ಟಣದೋಪಾದಿಯಲ್ಲಿ– ಸೂರ್ಯನ ರಶ್ಮಿಯಂತೆ ಪ್ರಕಾಶಮಾನವಾಗಿರುವ, ಬತ್ತಳಿಕೆಗಳಲ್ಲಿರುವ, ಭಯಂಕರ ವಾಗಿರುವ ಬಾಣಗಳಿಂದ ಸುಶೋಭಿತವಾದ ಪರ್ಣಶಾಲೆಯನ್ನು ಭರತನು ನೋಡಿದನು. ಸುವರ್ಣಮಯವಾದ ಒರೆಗಳಲ್ಲಿದ್ದ ಕತ್ತಿಗಳಿಂದಲೂ ಸುವರ್ಣಬಿಂದುಗಳಿಂದ ಚಿತ್ರಿತವಾಗಿ ಮಾಡಲ್ಪಟ್ಟಿದ್ದ ಗುರಾಣಿಗಳಿಂದಲೂ ಪರಿಶೋಭಿಸುತ್ತಿದ್ದ ಪರ್ಣಶಾಲೆಯನ್ನು ಭರತನು ಕಂಡನು. ಚಿತ್ರಿತ ವಾಗಿಯೂ ಸುವರ್ಣಮಯವಾಗಿಯೂ ಇದ್ದ ಗೋಧಾಂಗುಲಿತ್ರಗಳಿಂದ* ಪರಿಶೋಭಿಸುತ್ತಿದ–ಮೃಗಗಳಿಂದ ಸಿಂಹದ ಗುಹೆಯನ್ನು ಪ್ರವೇಶಿಸಲು ಸಾಧ್ಯವಾಗಲಾರದಂತೆ–ಶತ್ರುಗಳಿಂದ ಆಕ್ರಮಿಸಲು ದುಸ್ಸಾಧ್ಯವಾಗಿದ್ದ ಪರ್ಣಶಾಲೆಯನ್ನು ಭರತನು ನೋಡಿದನು. ಈಶಾನ್ಯದಿಕ್ಕಿನಲ್ಲಿ ತಗ್ಗಾಗಿದ್ದ, ಜ್ವಲಿಸುತ್ತಿರುವ ಯಜ್ಞೇಶ್ವರನಿಂದ ಕೂಡಿದ್ದ ಪುಣ್ಯತಮವಾದ ವೇದಿಕೆಯನ್ನು ಭರತನು ಶ್ರೀರಾಮನ ಪರ್ಣಕುಟೀರದಲ್ಲಿ ನೋಡಿದನು.

ಲೋಕನ್ಯಾಯವಾಗಿದೆ. ಮೇಲಾಗಿ ಲಕ್ಷ್ಮಣನು ರಾಮಭಕ್ತನಾಗಿರುವುದರಿಂದ ರಾಮ ಭಕ್ತತ್ವೇನ ಭರತನು ಲಕ್ಷ್ಮಣನಿಗೆ ನಮಸ್ಕಾರಮಾಡಿದರೆ ದೋಷವೇನೂ ಇಲ್ಲ. "ನ ಪರೀಕ್ಷ್ಯೌ ವಯೋ ವನ್ದ್ಯಾಃ" ಎಂದು ಲೋಕೋಕ್ತಿಯೂ ಇರುವುದು. ಆದುದರಿಂದ 'ಸೀತಾಯಾ ಲಕ್ಷ್ಮಣಸ್ಯ ಚ' ಎಂಬ ಪಾಠವೇ ಸಾಧುವಾಗಿದೆ.

*ಗೋಧಾ= ಧನುಸ್ಸಿನ ಹೆದೆಯ ಇದಿರೇಟು ತಗುಲದಿರಲು ತೋಳಿಗೆ ಕಟ್ಟುವ ಚರ್ಮದ ಪಟ್ಟಿ. ಅಙ್ಗುಲಿತ್ರಃ (ಬಿಲ್ಲಿನ ಹೆದೆಯನ್ನು ಸೆಳೆಯುವಾಗ ಗಾಯವಾಗದಿರಲು) ಬೆರಳಿಗೆ ಹಾಕುವ ಚರ್ಮದ ಮುಚ್ಚಳ.

ಭರತನು ಮುಹೂರ್ತಕಾಲ ಎವೆಯಿಕ್ಕದೇ ಸುತ್ತಲೂ ನೋಡುತ್ತಾ ತನ್ನ ಗುರುವಾದ ಶ್ರೀರಾಮನು ಜಟಾಮಂಡಲಧಾರಿಯಾಗಿ ಪರ್ಣಶಾಲೆಯಲ್ಲಿ ಕುಳಿತಿರುವುದನ್ನು ಕಂಡನು. ಕೃಷ್ಣಾಜಿನವನ್ನು ಉತ್ತರೀಯವನ್ನಾಗಿ ಹೊದೆದು ಕೊಂಡು, ನಾರುಮಡಿಯನ್ನು ಧೋತ್ರವನ್ನಾಗಿ ಉಟ್ಟುಕೊಂಡು, ಯಜ್ಞೇಶ್ವರ ನಂತೆ ಉಜ್ಜ್ವಲವಾದ ತೇಜಸ್ಸನ್ನು ಹೊರಚೆಲ್ಲುತ್ತಿದ್ದ, ವೀರಾಸನದಲ್ಲಿ ಕುಳಿತಿರುವ ಶ್ರೀರಾಮನನ್ನು ಭರತನು ನೋಡಿದನು. [1]ಸಿಂಹದಂತೆ ಹೆಗಲುಳ್ಳ, ಮಹಾಬಾಹುವಾದ, ಕಮಲಸದೃಶವಾದ ಕಣ್ಣುಗಳುಳ್ಳ, ಸಾಗರಾಂತವಾದ ಭೂಮಿಗೆ ಒಡೆಯನಾದ, ಧರ್ಮಚಾರಿಯಾದ, ಜರಾ-ಮೃತ್ಯುರಹಿತನಾದ ಬ್ರಹ್ಮನೋಪಾದಿಯಲ್ಲಿರುವ, ನೆಲದಲ್ಲಿ ಹರಡಿರುವ ದರ್ಭೆಯಮೇಲೆ ಸೀತಾ-ಲಕ್ಷ್ಮಣರೊಡನೆ ಕುಳಿತಿರುವ, ಆನಂದದಾಯಕನಾದ ಶ್ರೀರಾಮನನ್ನು ಭರತನು ನೋಡಿದನು. ಜಟಾಮಂಡಲಧಾರಿಯಾದ, ಚೀರವಲ್ಕಲ ಧರನಾದ, ಅಣ್ಣನನ್ನು ನೋಡಿದೊಡನೆಯೇ ದುಃಖಶೋಕ ಗಳಲ್ಲಿ ಮುಳುಗಿಹೋಗಿದ್ದ, ಶ್ರೀಮಂತನಾದ, ಧರ್ಮಾತ್ಮನಾದ ಕೈಕೇಯೀಪುತ್ರನು ರಾಮನ ಬಳಿಗೆ ಧಾವಿಸಿದನು. ಶ್ರೀರಾಮನನ್ನು ನೋಡಿದೊಡನೆಯೇ ದುಃಖಶೋಕಗಳನ್ನು ಸಹಿಸಿಕೊಳ್ಳಲು ಸಾಧ್ಯವಾಗದೇ ಗದ್ಗದಧ್ವನಿಯೊಡನೆ ಕ್ಷಣಕಾಲ ವಿಲಪಿಸಿದನು. ಬಳಿಕ ಧೈರ್ಯಹೊಂದಿ ಬಿಕ್ಕಿ-ಬಿಕ್ಕಿ ಅಳುತ್ತಲೇ ಹೇಳಿದನು:

ಯಃ ಸಂಸದಿ ಪ್ರಕೃತಿಭಿರ್ಭವೇದ್ಯುಕ್ತ ಉಪಾಸಿತುಮ್ ।
ವನ್ಯೈರ್ಮೃಗೈರುಪಾಸೀನಃ ಸೋಽಯಮಾಸ್ತೇ ಮಮಾಗ್ರಜಃ ॥

"ಯಾವಾತನು ರಾಜಸಭೆಯಲ್ಲಿ ಕುಳಿತು ಪ್ರಜೆಗಳಿಂದ ಸೇವಿಸಲ್ಪಡಲು ಯೋಗ್ಯನೋ–ಆ ನನ್ನಣ್ಣನು ಇಂದು ಕಾಡಿನಲ್ಲಿರುವ ಮೃಗ-ಪಕ್ಷಿಗಳಿಂದ

[1] 'ಅಭಿತಃ ಪಾವಕೋಪಮಂ' ಎಂಬ ವಿಶೇಷಣವು ಇಲ್ಲಿ ಗಮನಾರ್ಹವಾಗಿದೆ. ನಾವು ಸುತ್ತಲೂ ಪ್ರಭೆಯಿಂದ ಕೂಡಿರುವ ಅನೇಕಚಿತ್ರಗಳನ್ನು ನೋಡಿದ್ದೇವೆ. ಆದರೆ ಅದು ಚಿತ್ರಬರೆಯುವವನ ಕಲ್ಪನೆಯೆಂಬ ಭಾವನೆಯಿದೆ. ರಾಮನಿಗೆ ಹೇಳಿರುವ ಈ ವಿಶೇಷಣವನ್ನು ನೋಡಿದರೆ ವಸ್ತುತಃ ಮಹಾತ್ಮರು ತಮ್ಮ ಸುತ್ತಲೂ ಪ್ರಭೆಯಿಂದ ಬೆಳಗುತ್ತಿರುವರೆಂಬುದು ಸ್ಪಷ್ಟವಾಗುತ್ತದೆ. ಒಬ್ಬ ವ್ಯಾಖ್ಯಾನಕಾರರು ಇದಕ್ಕೆ ವಿಸ್ತಾರವಾಗಿ ವ್ಯಾಖ್ಯಾನಮಾಡುತ್ತಾ ಹೀಗೆ ಹೇಳಿದ್ದಾರೆ: ರಾಮನು ವೀರಾಸನ

ಸೇವಿಸಲ್ಪಡುತ್ತಾ ಈ ಪರ್ಣಕುಟೀರದಲ್ಲಿದ್ದಾನೆ. ಸಾವಿರಾರು ವರಹಗಳ ಬೆಲೆಬಾಳುವ, ರಾಜೋಚಿತವಾದ ದಿವ್ಯಾಂಬರಗಳಿಂದ ಯಾವನು ಅಲಂಕರಿಸಲ್ಪಡುತ್ತಿದ್ದನೋ–ಅವನಿಂದು ಚೀರ-ಕೃಷ್ಣಾಜಿನಗಳನ್ನು ಧರಿಸಿ ಪಿತೃವಾಕ್ಯಪರಿಪಾಲನಾರೂಪವಾದ ಧರ್ಮವನ್ನು ಆಚರಿಸುತ್ತಾ ಕುಳಿತಿದ್ದಾನೆ. ಯಾವ ನಮ್ಮಣ್ಣನು ಹಿಂದೆ ಸರ್ವಕಾಲದಲ್ಲಿಯೂ ಚಿತ್ರ-ವಿಚಿತ್ರವಾದ, ಸುಗಂಧಯುಕ್ತವಾದ ಪುಷ್ಪಗಳನ್ನು ಮುಡಿಯಲ್ಲಿ ಧರಿಸುತ್ತಿದ್ದನೋ–ಅವನಿಂದು ಜಟಾಮಂಡಲದ ಭಾರವನ್ನು ಹೇಗೆ ಹೊರುತ್ತಿದ್ದಾನೆ? ಯಾವ ರಾಮನಿಗೆ ಶಾಸ್ತ್ರೋಕ್ತವಾದ ಬಹುದಕ್ಷಿಣಾ ರೂಪವಾದ ಯಜ್ಞಕರ್ಮಗಳಿಂದ ಧರ್ಮಸಂಗ್ರಹವು ಯೋಗ್ಯ ವಾಗಿದ್ದಿತೋ–ಅವನಿಂದು ಶರೀರಕ್ಲೇಶದಿಂದ ಧರ್ಮವನ್ನು ಸಂಗ್ರಹಿಸುವ ಮಾರ್ಗವನ್ನು ಅವಲಂಬಿಸಿದ್ದಾನೆ.

ಯಾವ ನಮ್ಮಣ್ಣನ ಶರೀರವು ಅತಿಪ್ರಶಂಸನೀಯವಾದ ಚಂದನದಿಂದ ಸೇವಿಸಲ್ಪಡುತ್ತಿದ್ದಿತೋ–ಆ ಶರೀರವಿಂದು ಅರಣ್ಯದ ಧೂಳಿನಿಂದ ಹೇಗೆ ತಾನೇ ಸೇವಿಸಲ್ಪಡುತ್ತಿದೆ? (ಅರಣ್ಯದ ಈ ಧೂಳನ್ನು ಸುಕೋಮಲವಾದ ನಮ್ಮಣ್ಣನ ಶರೀರವು ಹೇಗೆ ಸಹಿಸಿಕೊಳ್ಳುತ್ತಿದೆ?) ನಿಶ್ಚಯವಾಗಿಯೂ ಸುಖೋಚಿತನಾದ ಶ್ರೀರಾಮನು ನನ್ನ ಸಲುವಾಗಿ ಈ ವಿಧವಾದ ವನವಾಸ ದುಃಖವನ್ನು ಅನುಭವಿಸಬೇಕಾಯಿತು. ಲೋಕನಿಂದೆಗೆ ಗುರಿಯಾಗಿರುವ, ನಿರ್ದಯನಾದ ನನ್ನ ಜೀವಿತಕ್ಕೆ ಧಿಕ್ಕಾರವಿರಲಿ.”

ಇವೇ ಮುಂತಾಗಿ ಹೇಳಿಕೊಂಡು ರೋದನಮಾಡುತ್ತಿದ್ದ, ಬಹುದೀನ ನಾಗಿದ್ದ, ಬೆವರಿನಿಂದ ತೋಯ್ದುಹೋದ ಮುಖಕಮಲವುಳ್ಳವನಾಗಿದ್ದ ಭರತನು ಶ್ರೀರಾಮಚಂದ್ರನ ಚರಣಕಮಲಗಳನ್ನು ಹೊಂದದೆಯೇ ರೋದನ ಮಾಡುತ್ತಾ ಕೆಳಕ್ಕೆ ಬಿದ್ದನು. ದುಃಖದಿಂದ ಪರಿತಪಿಸುತ್ತಿದ್ದ, ರಾಜಪುತ್ರ ನಾದ, ಮಹಾಬಲನಾದ ಭರತನು–ಆರ್ಯ!’–ಎಂದೊಮ್ಮೆ ದೀನಸ್ವರದಲ್ಲಿ

ದಲ್ಲಿ ಕುಳಿತು ಆತ್ಮಧ್ಯಾನಪರಾಯಣನಾಗಿದ್ದನು. ಅವನ ತೇಜಸ್ಸಿನ ಪ್ರಭೆಯು ಯಜ್ಞೇಶ್ವರನ ತೇಜಸ್ಸಿನಂತೆ ವಿರಾಜಿಸುತ್ತಾ ಸುತ್ತಲೂ ಬೆಳಗುತ್ತಿತ್ತು. ಅಥವಾ “ನೀಲತೋಯದಮಧ್ಯಸ್ಥಾ ವಿದ್ಯುಲ್ಲೇಖೇವ ಭಾಸ್ವರಾ” ಎಂಬ ಶ್ರುತಿವಚನದಂತೆ ನೀಲಮೇಘದ ಮಧ್ಯವರ್ತಿಯಾಗಿರುವ ಮಿಂಚಿನಂತೆ ನೀಲಮೇಘಶ್ಯಾಮನಾದ ರಾಮನ ಹೃತ್ಕಮಲದಲ್ಲಿದ್ದ ವಿದ್ಯುತ್ಪ್ರಭೆಯು ಅವನ ಸುತ್ತಲೂ ಪ್ರಸರಿಸಿದ್ದಿತು.

ಹೇಳಿದನೇ ಹೊರತು ಮುಂದೆ ಯಾವ ಮಾತನ್ನು ಆಡಲೂ ಅವನಿಗೆ ಸಾಧ್ಯ
ಹೇಳಿದನೇ ಹೊರತು ಮುಂದೆ ಯಾವ ಮಾತನ್ನು ಆಡಲೂ ಅವನಿಗೆ ಸಾಧ್ಯ
ವಾಗಲಿಲ್ಲ. ಧಾರಾಕಾರವಾದ ಕಣ್ಣೀರಿನಿಂದ ಕುತ್ತಿಗೆಯು ಮುಚ್ಚಿ ಹೋಗಿದ್ದಿತು. ಯಶೋವಂತನಾದ ಶ್ರೀರಾಮನನ್ನು ನೋಡಿ–‘ಆರ್ಯ!’–



ಎಂದು ಗಟ್ಟಿಯಾಗಿ ಕೂಗಿಕೊಂಡನು. ಮುಂದೆ ಮಾತನಾಡಲು ಭರತನಿಗೆ ಸಾಧ್ಯವಾಗಲಿಲ್ಲ. ಭರತನ ಹಿಂದೆ ನಿಂತಿದ್ದ ಶತ್ರುಘ್ನನೂ ಅಳುತ್ತಳುತ್ತಲೇ ಶ್ರೀರಾಮನ ಚರಣಗಳಿಗೆ ನಮಿಸಿದನು. ಭ್ರಾತೃವತ್ಸಲನಾದ ಶ್ರೀರಾಮನು ಆ ಇಬ್ಬರು ತಮ್ಮಂದಿರನ್ನೂ ಆಲಿಂಗಿಸಿಕೊಂಡು ಕಣ್ಣೀರುಸುರಿಸಿದನು. ಆಕಾಶದಲ್ಲಿ ಸೂರ್ಯ-ಚಂದ್ರರು ಶುಕ್ರ-ಬೃಹಸ್ಪತಿಗಳೊಡನೆ ಸೇರುವಂತೆ ರಾಮ-ಲಕ್ಷ್ಮಣರು ಗುಹ- ಸುಮಂತ್ರರನ್ನೂ ಸಂಧಿಸಿದರು.

ಸಲಗಗಳಂತಿದ್ದ ನಾಲ್ವರು ರಾಜಪುತ್ರರೂ ಆ ಮಹಾರಣ್ಯದಲ್ಲಿ ಒಂದೆಡೆಯಲ್ಲಿ ಸೇರಿರುವುದನ್ನು ವನವಾಸಿಗಳಾದ ಋಷಿ-ಮುನಿಗಳೆಲ್ಲರೂ ನೋಡಿ ಸಂತೋಷವನ್ನು ತೋರೆದು ಕಣ್ಣೀರುಸುರಿಸಿದರು. (ರಾಜೋಪಭೋಗಗಳನ್ನು ಅನುಭವಿಸುತ್ತಾ ಅರಮನೆಯಲ್ಲಿರಬೇಕಾದ ರಾಜಕುಮಾರರು ದುಃಖತಪ್ತರಾಗಿ ಅರಣ್ಯದಲ್ಲಿ ಸೇರಬೇಕಾಯಿತಲ್ಲಾ–ಎಂಬುದೇ ಅವರ ದುಃಖಕ್ಕೆ ಕಾರಣವಾಗಿದ್ದಿತು.)

೯೯ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೧೦೦ನೆಯ ಸರ್ಗ

ಕುಶಲಪ್ರಶ್ನೆಯ ರೂಪದಲ್ಲಿ ಶ್ರೀರಾಮನು ಭರತನಿಗೆ ರಾಜನೀತಿಯನ್ನು ಉಪದೇಶಿಸಿದುದು

ಜಟಿಲಂ ಚೀರವಸನಂ ಪ್ರಾಞ್ಜಲಿಂ ಪತಿತಂ ಭುವಿ ।
ದದರ್ಶ ರಾಮೋ ದುರ್ದರ್ಶಂ ಯುಗಾನ್ತೇ ಭಾಸ್ಕರಂ ಯಥಾ ॥೧॥

ಜಟಾಧಾರಿಯಾಗಿದ್ದ, ನಾರುಮಡಿಯನ್ನುಟ್ಟಿದ್ದ, ಯುಗಾಂತದ ಸೂರ್ಯನೋಪಾದಿಯಲ್ಲಿ ನೋಡಲು ಅಶಕ್ಯನಾಗಿದ್ದ, ಕೈಮುಗಿದುಕೊಂಡೇ ನೆಲದ ಮೇಲೆ ಬಿದ್ದಿರುವ ಭರತನನ್ನು ಶ್ರೀರಾಮನು ನೋಡಿದನು.*

ಭರತನ ಗುರುತೇ ರಾಮನಿಗೆ ಸಿಗಲಿಲ್ಲ. ಅವನು ಅಷ್ಟು ಕೃಶನಾಗಿದ್ದನು. ಕುಂದಿದ ಮುಖಭಾವದಿಂದ ಕೂಡಿದ್ದ ಅತ್ಯಂತಕೃಶನಾಗಿರುವ ಅವನು ತನ್ನ ತಮ್ಮನಾದ ಭರತನೇ ಎಂಬುದನ್ನು ಹೇಗೋ ತಿಳಿದು ಅವನನ್ನು ತನ್ನೆರಡು ತೋಳುಗಳಿಂದಲೂ ಹಿಡಿದೆತ್ತಿದನು. ಬಳಿಕ ಶ್ರೀರಾಮನು ಭರತನ ನೆತ್ತಿಯನ್ನು ಆಘ್ರಾಣಿಸಿ ಗಾಢವಾಗಿ ಆಲಿಂಗಿಸಿಕೊಂಡು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಆದರಪೂರ್ವಕವಾಗಿ ಪ್ರಶ್ನಿಸಿದನು:

---

*ಯುಗಾನ್ತೇ ಭಾಸ್ಕರಂ ಯಥಾ" ಎನ್ನುವುದಕ್ಕೆ ಸಂದರ್ಭಾನುಸಾರವಾಗಿ ಅರ್ಥ ಮಾಡುವುದು ಸ್ವಲ್ಪ ಕಷ್ಟವೇ ಸರಿ. ಯುಗಾಂತದಲ್ಲಿ ಸೂರ್ಯನು ಹೇಗಿರುತ್ತಾನೆಂಬುದೊಂದು ಪ್ರಶ್ನೆ. ಮಹತ್ತರವಾದ ತೇಜಸ್ಸಿನಿಂದ ಪ್ರಕಾಶಿಸುತ್ತಾ ಪ್ರಪಂಚವನ್ನೇ ಭಸ್ಮ ಮಾಡಿಬಿಡುವನೆಂಬುದು ಕೆಲವರ ಅಭಿಪ್ರಾಯ. 'ಯುಗಾಂತದಲ್ಲಿರುವ ಸೂರ್ಯನಂತೆ ಮಹಾತೇಜಸ್ವಿಯಾಗಿದ್ದ ಭರತನು' ಎಂದು ಹೇಳುವುದಾದರೆ ಮುಂದಿನ ಶ್ಲೋಕ

"ಮಗು! ತಂದೆಯೆಲ್ಲಿ? ಅವನನ್ನು ಬಿಟ್ಟು ನೀನೊಬ್ಬನೇ ಈ ಕಾಡಿಗೆ ಬಂದಿರುವೆಯಲ್ಲವೇ? ಅವನು ಜೀವಿಸಿರುವಾಗ ನೀನು ಅಯೋಧ್ಯೆಯನ್ನು ಬಿಟ್ಟುಬಂದುದು ಸರಿಯಲ್ಲ. ಬಹಳ ದೂರದಲ್ಲಿರುವ ಸೋದರಮಾವನ ಮನೆಯಿಂದ ಬಂದಿರುವ ಭರತನನ್ನು ನಾನು ಬಹಳಕಾಲಾನಂತರ ಈ ಕಾಡಿನಲ್ಲಿ ನೋಡುತ್ತಿದ್ದೇನೆ. ನಿನ್ನ ಶರೀರವನ್ನಂತೂ ನೋಡಲು ಸಾಧ್ಯವಾಗುತ್ತಿಲ್ಲ. ಅಷ್ಟು ಬಡವಾಗಿ ಹೋಗಿರುವೆ. ಭರತ! ನೀನು ಕಾಡಿಗೇಕೆ ಬಂದೆ? ರಾಜನು ರಾಜ್ಯವಾಳಿಕೊಂಡಿರುವನೇ? ಅವನ ಆಜ್ಞಾನುಸಾರವಾಗಿ ನೀನಿಲ್ಲಿಗೆ ಬಂದಿರುವೆಯಾ? ದೀನನಾದ ಮತ್ತು ದುಃಖಿತನಾದ ರಾಜನು ಇಷ್ಟು ಬೇಗ ಲೋಕಾಂತರವನ್ನು ಹೊಂದಿಲ್ಲ ತಾನೇ? ನೀನು ಬಾಲಕನಾಗಿರುವ ಕಾರಣ ಶಾಶ್ವತವಾದ ರಾಜ್ಯಸಿಂಹಾಸನದಿಂದ ಭ್ರಷ್ಟನಾಗಿಲ್ಲ ತಾನೇ? ಸತ್ಯವಿಕ್ರಮನಾದ ತಂದೆಯ ಶುಶ್ರೂಷೆಯನ್ನು ಮಾಡುತ್ತಿರುವೆಯಲ್ಲವೇ? ರಾಜಸೂಯಾಶ್ವಮೇಧಾದಿ ಯಾಗಗಳನ್ನು ಮಾಡಿರುವ, ಧರ್ಮದಲ್ಲಿಯೇ ಅಚಲವಾದ ನಿಷ್ಠೆಯುಳ್ಳ, ಸತ್ಯನಿಷ್ಠನಾದ ದಶರಥನು ಕುಶಲಿಯಾಗಿರುವನೇ? ವಿದ್ವಾಂಸರಾದ, ಧರ್ಮನಿಷ್ಠರಾದ, ಮಹಾತೇಜಸ್ವಿಗಳಾದ ಇಕ್ಷ್ವಾಕುಕುಲದರಸರಿಗೆ ಪುರೋಹಿತರಾದ, ಬ್ರಾಹ್ಮಣಶ್ರೇಷ್ಠರಾದ ವಸಿಷ್ಠರನ್ನು ಹಿಂದಿನಂತೆಯೇ ಗೌರವದಿಂದ ಸತ್ಕರಿಸುತ್ತಿರುವೆಯಾ? ಕೌಸಲ್ಯೆಯೂ–ಸುಪುತ್ರವತಿಯಾದ ಸುಮಿತ್ರೆಯೂ ಸುಖವಾಗಿರುವರೇ! ಕೈಕೇಯೀದೇವಿಯು ಆನಂದದಿಂದಿರುವಳೇ? ವಿನಯಸಂಪನ್ನನಾದ, ಸತ್ಕುಲಪ್ರಸೂತನಾದ, ಮಹಾವಿದ್ವಾಂಸನಾದ, ಅಸೂಯಾರಹಿತನಾದ, ಶಾಸ್ತ್ರೋಕ್ತವಾದ ಧರ್ಮಗಳಲ್ಲಿಯೇ ಯಾವಾಗಲೂ ದೃಷ್ಟಿಯುಳ್ಳ ವಸಿಷ್ಠರ ಪುತ್ರನಾದ ಸುಯಜ್ಞನನ್ನು ನೀನು ಹಿಂದಿನಂತೆ ಸತ್ಕರಿಸುತ್ತಿರುವೆಯಲ್ಲವೇ? ಅಗ್ನಿಹೋತ್ರವೇ ಮೊದಲಾದ ಎಲ್ಲ

ದಲ್ಲಿಯೇ "ವಿವರ್ಣವದನಂ" ಎಂದು ಹೇಳಿದ್ದಾರೆ. ಆದುದರಿಂದ ಹೀಗೆ ಹೇಳಿದರೂ ಸಮಂಜಸವಾಗಲಾರದು. ಯುಗಾಂತದಲ್ಲಿ ಸೂರ್ಯನು ತನ್ನ ತೇಜಸ್ಸೆಲ್ಲವನ್ನೂ ಕಳೆದುಕೊಳ್ಳುತ್ತಾನೆಂದು ಭಾವಿಸುವುದಾದರೆ–ಭರತನೂ ಈ ಸಮಯದಲ್ಲಿ ಯುಗಾಂತದ ಸೂರ್ಯನಂತೆ ಕಳೆಗುಂದಿದ್ದನೆಂದೂ ಹೇಳಬಹುದಾಗಿದೆ. ಆದರೆ ಹೀಗೆ ಭಾವಿಸುವುದೂ ಅಸ್ವಾಭಾವಿಕವಾಗುತ್ತದೆ. 'ಯುಗಾಂತದ ಸೂರ್ಯನು ಭೂಮಿಯ ಮೇಲೆ ಬೀಳುವಂತೆ ಭರತನೂ ಭೂಮಿಯ ಮೇಲೆ ಬಿದ್ದನು'–ಎಂದು ಮತ್ತೊಬ್ಬರು ಹೇಳಿದ್ದಾರೆ.

ಯಜ್ಞಗಳ ವಿಧಿ-ವಿಧಾನಗಳನ್ನು ತಿಳಿದಿರುವ ಬುದ್ಧಿವಂತನಾದ ಸರಳ ಸ್ವಭಾವದ ಪುರೋಹಿತನನ್ನು ನಿನ್ನ ಅಗ್ನಿಕಾರ್ಯಗಳಲ್ಲಿ ನಿಯೋಜಿಸಿರುವೆಯಾ? ಅವನು ನಿನಗೆ ಈಗ ಮಾಡಬೇಕಾದ ಮತ್ತು ಮುಂದೆ ಮಾಡಬೇಕಾಗಿರುವ ಹೋಮ-ಹವನಗಳ ವಿಷಯದಲ್ಲಿ ಸಕಾಲದಲ್ಲಿ ತಿಳುವಳಿಕೆ ಕೊಡುತ್ತಿರುವನೇ?

ಯಜ್ಞಗಳಿಂದ ದೇವತೆಗಳನ್ನೂ, ಶುಶ್ರೂಷೆಯಿಂದ ಮಾತಾ-ಪಿತೃಗಳನ್ನೂ, ಭರಿಸಿ-ಪೋಷಿಸುವುದರಿಂದ ಭೃತ್ಯರನ್ನೂ, ಐಶ್ವರ್ಯಪ್ರದಾನ ದಿಂದ ಪಿತೃಸಮಾನರಾದ ಜ್ಞಾತಿಬಾಂಧವರನ್ನೂ, ನಮಸ್ಕಾರಗಳಿಂದ ವೃದ್ಧ ರನ್ನೂ, ಪಾರಿತೋಷಕಪ್ರದಾನಗಳಿಂದ ವಿದ್ವಾಂಸರನ್ನೂ–ವೈದ್ಯರನ್ನೂ, ದಾನ ಕೊಡುವುದರಿಂದ ಬ್ರಾಹ್ಮಣರನ್ನೂ ತೃಪ್ತಿಗೊಳಿಸುತ್ತಿರುವೆಯಾ? ಮಂತ್ರರಹಿತವಾದ ಶ್ರೇಷ್ಠವಾದ ಬಾಣಗಳ ಪ್ರಯೋಗಗಳಲ್ಲಿಯೂ ಮಂತ್ರ ಸಹಿತವಾದ ಶ್ರೇಷ್ಠವಾದ ಅಸ್ತ್ರಗಳ ಪ್ರಯೋಗದಲ್ಲಿಯೂ ನಿಪುಣನಾದ, ಅರ್ಥಶಾಸ್ತ್ರ ವಿಶಾರದನಾದ, ಉಪಾಧ್ಯಾಯನಾದ ಸುಧನ್ವನನ್ನು ಹಿಂದಿನಂತೆಯೇ ಗೌರವಿಸುತ್ತಿರುವೆಯಲ್ಲವೇ? ನಿನಗೆ ಸಮಾನರೂ, ಶೂರರೂ, ವಿದ್ವಾಂಸರೂ, ಜಿತೇಂದ್ರಿಯರೂ, ಸತ್ಕುಲ ಪ್ರಸೂತರೂ, ಇತರರ ಇಂಗಿತವನ್ನು ಮುಖದರ್ಶನಮಾತ್ರದಿಂದಲೇ ತಿಳಿಯಲು ಸಮರ್ಥರಾದವರೂ ಆದವರನ್ನು ನೀನು ಮಂತ್ರಿಗಳನ್ನಾಗಿ ಮಾಡಿಕೊಂಡಿರುವೆಯಾ?

ಮನ್ತ್ರೋ ವಿಜಯಮೂಲಂ ಹಿ ರಾಜ್ಞಾಂ ಭವತಿ ರಾಘವ ।
ಸುಸಂವೃತೋ ಮನ್ತ್ರಧರೈರಮಾತ್ಯೈಃ ಶಾಸ್ತ್ರಕೋವಿದೈಃ ॥೧೬॥

ಭರತ! ನಿಷ್ಠಾವಂತರಾದ, ಚತುರರಾದ, ನೀತಿಶಾಸ್ತ್ರವಿಶಾರದರಾದ ಮಂತ್ರಿಗಳಿಂದ ಗುಟ್ಟಾಗಿ ಇಡಲ್ಪಡುವ ಮಂತ್ರಾಲೋಚನೆಯು (ರಾಜ್ಯದ ವ್ಯವಹಾರಗಳು) ರಾಜರ ವಿಜಯಕ್ಕೆ ಮುಖ್ಯಕಾರಣವಾಗುತ್ತದೆ.

ಸೂರ್ಯನೇ ಕೆಳಗೆ ಬಂದರೆ ಭೂಮಿಯು ಉಳಿಯುವುದೇ? ಭೂಮಿಯೇ ಇಲ್ಲದಿರುವಾಗ ಭೂಮಿಯ ಮೇಲೆ ಸೂರ್ಯನು ಬೀಳಲು ತಾನೇ ಹೇಗೆ ಸಾಧ್ಯವಾಗುತ್ತದೆ? ಈ ಕಾರಣದಿಂದ ಹೀಗೆ ಹೇಳುವುದೂ ಸಮಂಜಸವಾಗಲಾರದು. "ಯುಗಾಂತದ ಸೂರ್ಯನನ್ನು ನೋಡಲು ಸಾಧ್ಯವಾಗದಂತೆ–ಕೃಶನಾಗಿಯೂ, ದೀನನಾಗಿಯೂ ಇದ್ದ ಭರತನನ್ನು ನೋಡಲಾಗುತ್ತಿರಲಿಲ್ಲ"–ಎಂದು ಸಂದರ್ಭೋಚಿತವಾಗಿ ಅರ್ಥಮಾಡಬಹುದಾಗಿದೆ.

ಕಚ್ಚಿನ್ನಿದ್ರಾವಶಂ ನೈಷೀಃ ಕಚ್ಚಿತ್ಕಾಲೇ ಪ್ರಬುಧ್ಯಸೇ ।
ಕಚ್ಚಿಚ್ಚಾಪರರಾತ್ರೇಷು ಚಿನ್ತಯಸ್ಯರ್ಥನೈಪುಣಮ್ ॥೧೮॥

ನೀನು ಆ ಸಮಯದಲ್ಲಿ ನಿದ್ರೆಗೆ ಅಧೀನನಾಗುವುದಿಲ್ಲ ತಾನೇ? ಬ್ರಾಹ್ಮಮುಹೂರ್ತದಲ್ಲಿ ಎಚ್ಚರಗೊಳ್ಳುವೆಯಲ್ಲವೇ? ಮಧ್ಯರಾತ್ರಿಯು ಕಳೆದನಂತರ ಅರ್ಥಸಿದ್ಧಿಯ ಉಪಾಯವನ್ನು ಕುರಿತು ಯೋಚಿಸುವೆಯಲ್ಲವೇ?

ಕಚ್ಚಿನ್ಮನ್ತ್ರಯಸೇ ನೈಕಃ ಕಚ್ಚಿನ್ನ ಬಹುಭಿಃ ಸಹ ।
ಕಚ್ಚಿತ್ತೇ ಮನ್ತ್ರಿತೋ ಮನ್ತ್ರೋ ರಾಷ್ಟ್ರಂ ನ ಪರಿಧಾವತಿ ॥೧೯॥

ನೀನೊಬ್ಬನೇ ಕುಳಿತು ರಾಜ್ಯಾಂಗದ ಮುಖ್ಯವಿಷಯಗಳನ್ನು ಸಮಾಲೋಚಿಸುತ್ತಿಲ್ಲ ತಾನೇ? ಹಾಗೂ ಅನೇಕರೊಡನೆ ಸೇರಿಕೊಂಡೂ ಮಂತ್ರಾಲೋಚನೆಯನ್ನು ಮಾಡುತ್ತಿಲ್ಲ ತಾನೇ? ಮಂತ್ರಿಗಳೊಡನೆ ಕೂಡಿ ಸಮಾಲೋಚಿಸಲ್ಪಟ್ಟ ಮಂತ್ರಾಲೋಚನೆಯು ಕಾರ್ಯಗತವಾಗುವ ಮೊದಲೇ ಶತ್ರುರಾಷ್ಟ್ರಗಳಿಗೆ ತಿಳಿಯುವುದಿಲ್ಲ ತಾನೇ?* ಯಾವ ಕಾರ್ಯದ ಸಾಧನೆಯು ಬಹಳ ಸುಲಭವೋ ಮತ್ತು ಹೆಚ್ಚು ಲಾಭದಾಯಕವೋ–ಅಂತಹ ಅರ್ಥಸಾಧನೆಯ ಕಾರ್ಯವು ಯಾವುದೆಂಬುದನ್ನು ಮೊದಲೇ ನಿಶ್ಚಯಿಸಿ ಬೇಗ ಪ್ರಾರಂಭಿಸುವೆಯಾ? ಯಾವುದೇ ಕಾರಣದಿಂದಲೂ ನಿಧಾನ ಮಾಡುವುದಿಲ್ಲ ತಾನೇ?[1]

ಕಚ್ಚಿತ್ತೇ ಸುಕೃತಾನ್ಯೇವ ಕೃತರೂಪಾಣಿ ವಾ ಪುನಃ ।
ವಿದುಸ್ತೇ ಸರ್ವಕಾರ್ಯಾಣಿ ನ ಕರ್ತವ್ಯಾನಿ ಪಾರ್ಥಿವಾಃ ॥೨೦॥

---

*ಮಂತ್ರಾಲೋಚನೆಯನ್ನು ಒಬ್ಬನೇ ಕುಳಿತು ಮಾಡಬಾರದು. ದೋಷಗಳು ಅರಿವಿಗೆ ಬರುವುದಿಲ್ಲ. ಆದುದರಿಂದ ಚತುರನಾದ ಮಂತ್ರಿಯೊಡನೆ ಮಂತ್ರಾಲೋಚನೆ ಮಾಡಬೇಕು. ಮಂತ್ರಾಲೋಚನೆಗೆ ಹೆಚ್ಚು ಮಂದಿಯನ್ನೂ ಸೇರಿಸಿಕೊಳ್ಳಬಾರದು. ಹೆಚ್ಚು ಜನರಿದ್ದರೆ ಮಂತ್ರಾಲೋಚನೆಯು ರಹಸ್ಯವಾಗಿ ಉಳಿಯುವುದಿಲ್ಲ. ಯಾವುದೇ ಮಂತ್ರಾಲೋಚನೆಯಾಗಲೀ ಶತ್ರುವಿಗೆ ತಿಳಿಯಬಾರದು.

1) ಯೋಜನೆಗಳನ್ನು ಸಿದ್ಧಪಡಿಸುವ ರಾಜಕಾರಣಿಗಳು ಸ್ವಲ್ಪವೇ ವೆಚ್ಚದಲ್ಲಿ ಸಾಧ್ಯವಾಗುವ ಮತ್ತು ಹೆಚ್ಚು ಫಲದಾಯಕವಾದ ಯೋಜನೆಗಳನ್ನು ಕೈಗೊಳ್ಳಬೇಕು. ಯೋಜನೆಯನ್ನು ಸಿದ್ಧಗೊಳಿಸಿದೊಡನೆಯೇ ಕಾರ್ಯವನ್ನು ಪ್ರಾರಂಭಿಸಿ ಬೇಗ ಮುಗಿಸಿಬಿಡಬೇಕು. ಯಾವುದೇ ಕಾರಣದಿಂದಲೂ ಸಾವಕಾಶಮಾಡಬಾರದು. ಕ್ಷಿಪ್ರ

ನಿನ್ನ ಸಾಮಂತರಾಜನು ನಿನ್ನಿಂದ ಮಂತ್ರಿತವಾದ ಯೋಜನೆಗಳಲ್ಲಿ ಪೂರ್ಣವಾಗಿ ಮುಗಿದಿರುವ ಮತ್ತು ಮುಗಿಯುತ್ತಾ ಬಂದಿರುವ ಕಾರ್ಯಗಳನ್ನು ಮಾತ್ರವೇ ತಿಳಿಯುತ್ತಿರುವರಲ್ಲವೇ? ಮಂತ್ರಾಲೋಚನೆಯಿಂದ ನಿಶ್ಚಿತವಾಗಿ ಪ್ರಾರಂಭವಾಗದಿರುವ ಯೋಜನೆಗಳನ್ನು ತಿಳಿಯುತ್ತಿಲ್ಲ ತಾನೇ?[2]

ಕಚ್ಚಿನ್ನ ತರ್ಕೈರ್ಯುಕ್ತ್ಯಾ ವಾ ಯೇ ಚಾಪ್ಯಪರಿಕೀರ್ತಿತಾಃ ।
ತ್ವಯಾ ವಾ ತವ ವಾಮಾತ್ಯೈರ್ಬುಧ್ಯತೇ ತಾತ ಮನ್ತ್ರಿತಮ್ ॥೨೧॥

ನಿನ್ನಿಂದಾಗಲೀ ನಿನ್ನ ಮಂತ್ರಿಗಳಿಂದಾಗಲೀ ಸಮಾಲೋಚಿಸಲ್ಪಟ್ಟು ಬಹಿರಂಗಪಡಿಸದೇ ರಹಸ್ಯವಾಗಿರುವ ವಿಷಯಗಳು ಇತರರಿಂದ ಊಹೆಗಳಿಂದಾಗಲೀ, ಯುಕ್ತಿಗಳಿಂದಾಗಲೀ–ತಿಳಿಯಲ್ಪಡುತ್ತಿಲ್ಲ ತಾನೇ?[3]

ಕಚ್ಚಿತ್ಸಹಸ್ರಾನ್ಮೂರ್ಖಾಣಾಮೇಕಮಿಚ್ಛಸಿ ಪಣ್ಡಿತಮ್ ।
ಪಣ್ಡಿತೋ ಹ್ಯರ್ಥಕೃಚ್ಛ್ರೇಷು ಕುರ್ಯಾನ್ನಿಃಶ್ರೇಯಸಂ ಮಹತ್ ॥೨೨॥

ರಾಜಕಾರ್ಯನಿರ್ವಹಣೆಗೆ ಸಾವಿರ ಮೂರ್ಖರನ್ನು ಇಟ್ಟುಕೊಳ್ಳುವುದಕ್ಕೆ ಬದಲಾಗಿ ಒಬ್ಬ ಪಂಡಿತನನ್ನು ಬಯಸುವೆಯಲ್ಲವೇ? ಪಂಡಿತನಾದ

ಮಕ್ರಿಯಮಾಣಸ್ಯ ಕಾಲಃ ಪಿಬತಿ ತತ್ಫಲಮ್ ॥ ಕಾರ್ಯವನ್ನು ಸಕಾಲದಲ್ಲಿ ಶೀಘ್ರವಾಗಿ ಮಾಡದಿದ್ದರೆ ದೀರ್ಘಾವಧಿಯ ಆ ಕಾಲವೇ ಫಲವನ್ನು ನುಂಗಿಬಿಡುತ್ತದೆ.

2) ರಾಜನ ಅಥವಾ ಸರ್ಕಾರದ ಒಳ್ಳೆಯ ಕಾರ್ಯಗಳು ಸರ್ವತ್ರ ವಿದಿತವಾಗಬೇಕು. ಮುಗಿದ ಯೋಜನೆಗಳೂ ಮುಗಿಯಲು ಬಂದಿರುವ ಯೋಜನೆಗಳೂ ಎಲ್ಲರಿಗೂ ತಿಳಿಯುತ್ತಿರಬೇಕು. ಆದರೆ ರಾಜನ ಅಥವಾ ಸರ್ಕಾರದ ಆರಂಭವಾಗದೇ ಸಾವಕಾಶವಾಗುತ್ತಿರುವ ಯೋಜನೆಗಳು ಜನರಿಗೆ ತಿಳಿಯಬಾರದು. ಅಂತಹ ಪ್ರಚಾರದ ವ್ಯವಸ್ಥೆಯಿರಬೇಕು.

3) ರಹಸ್ಯವಿಷಯಗಳನ್ನು ರಾಜನಾಗಲೀ, ಮಂತ್ರಿಗಳಾಗಲೀ ಬಹಿರಂಗಪಡಿಸದೇ ಇರಬಹುದು. ಆದರೆ ದೇಶದ ಅಥವಾ ವಿದೇಶಗಳ ಚತುರರಾದ ಬೇಹುಗಾರರು ಯುಕ್ತಿಯಿಂದ ಪ್ರಶ್ನೆಗಳನ್ನು ಕೇಳುವುದರ ಮೂಲಕ ರಾಜಕಾರಣಿಗಳ ಚಲನ-ವಲನಗಳನ್ನು ಗಮನಿಸಿ ರಹಸ್ಯವಿಷಯಗಳನ್ನು ಸ್ಫೋಟಿಸುತ್ತಾರೆ. ಅದಕ್ಕೂ ಅವಕಾಶವಾಗದಂತೆ ಎಚ್ಚರಿಕೆಯಿಂದಿರಬೇಕು.

ವನು ಒಬ್ಬನೇ ಇದ್ದರೂ ಆರ್ಥಿಕವಾಗಿ ಮುಗ್ಗಟ್ಟು ಒದಗಿಬಂದಾಗ ದೇಶಕ್ಕೆ ಹೆಚ್ಚು ಶ್ರೇಯಸ್ಕರವಾದ ಕಾರ್ಯವನ್ನು ಮಾಡಬಲ್ಲನು.[4]

ಸಹಸ್ರಾಣ್ಯಪಿ ಮೂರ್ಖಾಣಾಂ ಯದ್ಯುಪಾಸ್ತೇ ಮಹೀಪತಿಃ ।
ಅಥ ವಾಪ್ಯಯುತಾನ್ಯೇವ ನಾಸ್ತಿ ತೇಷು ಸಹಾಯತಾ ॥೨೩॥

ಮಹೀಪತಿಯು ಸಾವಿರ ಏಕೆ, ಹತ್ತು ಸಾವಿರ ಮೂರ್ಖರನ್ನು ತನ್ನ ಬಳಿಯಲ್ಲಿಟ್ಟುಕೊಂಡಿದ್ದರೂ ಅವರಿಂದ ಯಾವ ವಿಧವಾದ ಸಹಾಯವೂ ಆಗುವುದಿಲ್ಲ.

ಏಕೋಽಪ್ಯಮಾತ್ಯೋ ಮೇಧಾವೀ ಶೂರೋ ದಕ್ಷೋ ವಿಚಕ್ಷಣಃ ।
ರಾಜಾನಂ ರಾಜಪುತ್ರಂ ವಾ ಪ್ರಾಪಯೇನ್ಮಹತೀಂ ಶ್ರಿಯಮ್ ॥೨೪॥

ಮೇಧಾವಿಯೂ, ಶೂರನೂ, ದಕ್ಷನೂ, ವಿಚಕ್ಷಣನೂ ಆಗಿರುವ ಒಬ್ಬನೇ ಮಂತ್ರಿಯಾದರೂ ರಾಜನನ್ನಾಗಲೀ ರಾಜಪುತ್ರನನ್ನಾಗಲೀ ಮಹತ್ತರವಾದ ಐಶ್ವರ್ಯದಿಂದ ಸಂಪನ್ನನನ್ನಾಗಿ ಮಾಡಬಲ್ಲನು.

ಕಚ್ಚಿನ್ಮುಖ್ಯಾ ಮಹತ್ಸ್ವೇವ ಮಧ್ಯಮೇಷು ಚ ಮಧ್ಯಮಾಃ ।
ಜಘನ್ಯಾಸ್ತು ಜಘನ್ಯೇಷು ಭೃತ್ಯಾಃ ಕರ್ಮಸು ಯೋಜಿತಾಃ ॥೨೫॥

ಪ್ರಥಮಶ್ರೇಣಿಯ ಭೃತ್ಯರನ್ನು ಉತ್ತಮಕಾರ್ಯಗಳಲ್ಲಿಯೂ ಮಧ್ಯಮ ಶ್ರೇಣಿಯ ಸೇವಕರನ್ನು ಸಾಮಾನ್ಯವಾದ ಕೆಲಸಗಳಲ್ಲಿಯೂ ಕೆಳದರ್ಜೆಯ ಸೇವಕರನ್ನು ಕನಿಷ್ಠಶ್ರೇಣಿಯ ಕಾರ್ಯಗಳಲ್ಲಿಯೂ ನಿಯೋಜಿಸಿರುವೆಯಾ ?*

---

[4]ರಾಜ್ಯಭಾರದ ನಿರ್ವಹಣೆಗೆ ಯಾವಾಗಲೂ ವಿದ್ವಾಂಸರಾದವರನ್ನೇ ಇಟ್ಟುಕೊಳ್ಳಬೇಕು. ತಾರತಮ್ಯವಿಲ್ಲದೇ ಎಲ್ಲರೂ ಕೆಲಸಮಾಡಬೇಕೆಂಬ ನೀತಿಯನ್ನು ಅನುಸರಿಸಿ ಮೂರ್ಖರನ್ನು ರಾಜ್ಯಭಾರನಡೆಸಲು ಇಟ್ಟುಕೊಳ್ಳಬಾರದು. ದೈನಂದಿನಕಾರ್ಯಗಳನ್ನು ಮೂರ್ಖನಾದವನು ಮಾಡಬಹುದಾದರೂ ಆರ್ಥಿಕವಾಗಿ ಬಿಕ್ಕಟ್ಟು ಒದಗಿಬಂದಾಗ, ರಾಷ್ಟ್ರಕ್ಕೆ ಶತ್ರುಗಳಿಂದ ಅಪಾಯವು ಸನ್ನಿಹಿತವಾದಾಗ–ವಿದ್ವಾಂಸನು ಬುದ್ಧಿಮತ್ತೆಯಿಂದಲೂ ಅನುಭವದಿಂದಲೂ ರಾಜ್ಯವನ್ನು ಕಷ್ಟದಿಂದ ಪಾರುಮಾಡಬಲ್ಲನು. ಮೂರ್ಖರಾದ ಸಾವಿರ ಅಧಿಕಾರಿಗಳಿದ್ದರೂ ಇದು ಸಾಧ್ಯವಾಗುವುದಿಲ್ಲ.

*ಸೇವಾಕಾರ್ಯಗಳನ್ನೂ ಉತ್ತಮ-ಮಧ್ಯಮ-ಕನಿಷ್ಠಗಳೆಂಬ ಮೂರು ಪ್ರಕಾರವಾಗಿ ವಿಂಗಡಿಸಿ ಅದಕ್ಕೆ ಉತ್ತಮ, ಮಧ್ಯಮ ಮತ್ತು ಕನಿಷ್ಠದರ್ಜೆಯ ಸೇವಕರನ್ನೇ

ಅಮಾತ್ಯಾನುಪಧಾತೀತಾನ್ಪಿತೃಪೈತಾಮಹಾನ್ ಶುಚೀನ್ ।
ಶ್ರೇಷ್ಠಾನ್ ಶ್ರೇಷ್ಠೇಷು ಕಚ್ಚಿತ್ತ್ವಂ ನಿಯೋಜಯಸಿ ಕರ್ಮಸು ॥೨೬॥

ಚೆನ್ನಾಗಿ ಪರೀಕ್ಷಿಸಲ್ಪಟ್ಟ, ತಾತ-ಮುತ್ತಾತಂದಿರ ಕಾಲದಿಂದಲೂ ಅಮಾತ್ಯರ ಪೀಳಿಗೆಯಲ್ಲಿಯೇ ಹುಟ್ಟಿರುವ, ತ್ರಿಕರಣಶುದ್ಧಿಯಿರುವ, ಶ್ರೇಷ್ಠರಾದ ಅಮಾತ್ಯರನ್ನೂ ಬಹುಮುಖ್ಯವಾದ ಕಾರ್ಯಗಳಲ್ಲಿ ನಿಯೋಜಿಸುತ್ತಿರುವೆಯಲ್ಲವೇ?[1]

ಕಚ್ಚಿನ್ನೋಗ್ರೇಣ ದಣ್ಡೇನ ಭೃಶಮುದ್ವೇಜಿತಪ್ರಜಮ್ ।
ರಾಷ್ಟ್ರಂ ತವಾನುಜಾನನ್ತಿ ಮನ್ತ್ರಿಣಃ ಕೇಕಯೀಸುತ ॥೨೭॥

ನಿನ್ನ ರಾಷ್ಟ್ರದಲ್ಲಿ ನಿನ್ನಿಂದ ಕೊಡಲ್ಪಡುವ ಉಗ್ರವಾದ ಶಿಕ್ಷೆಯಿಂದ ಉದ್ವಿಗ್ನರಾದ ಪ್ರಜೆಗಳು ಮತ್ತು ಮಂತ್ರಿಗಳು ನಿನ್ನನ್ನು ಅವಮಾನಗೊಳಿಸುತ್ತಿಲ್ಲ ತಾನೇ?*

ಅನುಕ್ರಮವಾಗಿ ನಿಯೋಜಿಸಬೇಕು. ಸೇವಕಸಮಭಾವನೆಯಿಂದ ಕನಿಷ್ಠ ದರ್ಜೆಯ ಕೆಲಸಕ್ಕೆ ಉತ್ತಮವರ್ಗದ ಸೇವಕನನ್ನು ನಿಯೋಜಿಸಿದರೆ ಅವನ ವಿಶಿಷ್ಟ ಕೌಶಲವನ್ನು ಸರಿಯಾಗಿ ಉಪಯೋಗಿಸಿಕೊಳ್ಳದೇ ಇರುವುದರಿಂದ ಆಗುವ ನಷ್ಟದಿಂದ ರಾಜ್ಯಕ್ಕೆ ಹಾನಿಯೂ ಉಂಟಾಗುತ್ತದೆ. ಇದೇ ರೀತಿಯಲ್ಲಿ ಉತ್ತಮದರ್ಜೆಯ ಕೆಲಸಕ್ಕೆ ಕನಿಷ್ಠವರ್ಗದ ಸೇವಕನನ್ನು ನಿಯೋಜಿಸಿದರೂ ದುಷ್ಫಲವೇ ಉಂಟಾಗುತ್ತದೆ.

[1]ಉಪಧಾತೀತಾನ್: ಉಪಧಾ= ರಾಜನು ಮಂತ್ರಿಗಳ ಗುಣಗಳನ್ನು ಪರೀಕ್ಷಿಸುವುದು ಅತೀತಾಃ= ಆ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರು ಅಥವಾ ಪರೀಕ್ಷೆಗೆ ಅತೀತರಾದವರು. ಪರೀಕ್ಷೆಯೇ ಬೇಕಿಲ್ಲದವರು. ಉಪಧಾ ಎಂಬುದಕ್ಕೆ ವಂಚನೆ ಮೋಸ ಎಂಬ ಅರ್ಥಗಳೂ ಇವೆ. ವಂಚನೆ-ಮೋಸಗಳಿಲ್ಲದವರು. ಪಿತೃಪೈತಾಮಹಾನ್ ಅಮಾತ್ಯಾನ್ ಅಮಾತ್ಯವಂಶದಲ್ಲಿ ಹುಟ್ಟಿದವರು: ಇತ್ತೀಚಿನವರೆಗೆ ವಂಶಪಾರಂಪರ್ಯಕ್ಕೆ ವಿಶೇಷ ಮನ್ನಣೆಯಿತ್ತು. ಈಚೆಗೆ ವಂಶಪಾರಂಪರ್ಯವೆಂಬುದನ್ನೇ ನಿರ್ಮೂಲಮಾಡಲಾಗುತ್ತಿದೆ. ಆದರೆ ಪಾರಂಪರ್ಯವನ್ನು ತಪ್ಪಿಸಲು ಸಾಧ್ಯವಾಗುವುದಿಲ್ಲ. ಈಗ ಪ್ರಜಾಪ್ರಭುತ್ವದಲ್ಲೂ ಅದು ಪ್ರಾರಂಭವಾಗಿದೆ.

*ಪ್ರಜೆಗಳಿಗೆ ಅಥವಾ ಅಪರಾಧಿಗಳಿಗೆ ಉಗ್ರವಾದ ಶಿಕ್ಷೆಗಳನ್ನು ವಿಧಿಸಬಾರದು. ಶಿಕ್ಷೆಗಳನ್ನು ವಿಧಿಸುವಾಗಲೂ ಅಪರಾಧಿಯ ಅಪರಾಧವನ್ನು ಬಹುಸೂಕ್ಷ್ಮವಾಗಿ ಪರಿ ಶೀಲಿಸಿ ಸ್ಥಿರಪಡಿಸಿದ ನಂತರವೇ ಅಪರಾಧಕ್ಕೆ ಅನುಗುಣವಾದ ಶಿಕ್ಷೆಯನ್ನು ವಿಧಿಸಬೇಕು. ರಾಜನು ಕೋಪೋದ್ರಿಕ್ತನಾಗಿ ಸ್ವಾರ್ಥಪರತೆಯಿಂದ ಪ್ರಜೆಗಳನ್ನೂ, ಅಧಿಕಾರಿ

ಕಚ್ಚಿತ್ತ್ವಾಂ ನಾವಜಾನನ್ತಿ ಯಾಜಕಾಃ ಪತಿತಂ ಯಥಾ ।
ಉಗ್ರಪ್ರತಿಗ್ರಹೀತಾರಂ ಕಾಮಯಾನಮಿವ ಸ್ತ್ರಿಯಃ ॥೨೮॥

ಯಾಜಕರು ಪತಿತನಾದ ಯಜಮಾನನನ್ನೂ, ಸ್ತ್ರೀಯರು ಕಾಮುಕನಾದ ಪುರುಷನನ್ನೂ ತಿರಸ್ಕರಿಸುವಂತೆ–ಕ್ರೌರ್ಯದಿಂದ ತೆರಿಗೆಗಳನ್ನು ಸಂಗ್ರಹಿಸುವನೆಂದು ತಿಳಿದು ಪ್ರಜೆಗಳು ನಿನ್ನನ್ನು ಅವಮಾನಿಸುತ್ತಿಲ್ಲ ತಾನೇ? ನೀನು ಕ್ರೌರ್ಯದಿಂದ ತೆರಿಗೆಗಳನ್ನು ಸಂಗ್ರಹಿಸುತ್ತಿಲ್ಲವಷ್ಟೆ?[1]

ಉಪಾಯಕುಶಲಂ ವೈದ್ಯಂ ಭೃತ್ಯಂ ಸಂದೂಷಣೇ ರತಮ್ ।
ಶೂರಮೈಶ್ವರ್ಯಕಾಮಂ ಚ ಯೋ ನ ಹನ್ತಿ ಸ ವಧ್ಯತೇ ॥೨೯॥

ಉಪಾಯಕುಶಲನಾದ ವೈದ್ಯನನ್ನೂ, [2] ರಾಜನ ದೂಷಣೆಯಲ್ಲಿಯೇ ನಿರತನಾದ ಸೇವಕನನ್ನೂ, ಐಶ್ವರ್ಯ (ರಾಜ್ಯ) ಕಾಮನಾದ ಶೂರನನ್ನೂ ಯಾವ ರಾಜನು ಸಂಹರಿಸುವುದಿಲ್ಲವೋ–ಅವನು ವೈದ್ಯರೇ ಮೊದಲಾದವರಿಂದಲೇ ವಧಿಸಲ್ಪಡುತ್ತಾನೆ.

ಕಚ್ಚಿದ್ಧೃಷ್ಟಶ್ಚ ಶೂರಶ್ಚ ಧೃತಿಮಾನ್ಮತಿಮಾನ್ ಶುಚಿಃ ।
ಕುಲೀನಶ್ಚಾನುರಕ್ತಶ್ಚ ದಕ್ಷಃ ಸೇನಾಪತಿಃ ಕೃತಃ ॥೩೦॥

ಸದಾ ಸಂತುಷ್ಟನಾಗಿರುವವನನ್ನೂ, ಶೂರನನ್ನೂ, ಧೈರ್ಯಶಾಲಿಯನ್ನೂ, ಬುದ್ಧಿವಂತನನ್ನೂ, ಅಂತಃಶುದ್ಧಿ-ಬಹಿಃಶುದ್ಧಿಗಳಿಂದ ಕೂಡಿರುವ

ಗಳನ್ನೂ ಉಗ್ರವಾಗಿ ದಂಡಿಸಿದ್ದೇ ಆದರೆ–ಪ್ರಜೆಗಳೂ, ಮಂತ್ರಿಗಳೂ ಉದ್ವಿಗ್ನರಾಗಿ ರಾಜನಿಗೆ ಅವಮಾನಮಾಡುತ್ತಾರೆ ಅಥವಾ ಪರರಾಜರೊಡನೆ ಒಳಸಂಚು ನಡೆಸಿ ರಾಜನನ್ನು ಕಿತ್ತುಹಾಕಲು ಯತ್ನಿಸುತ್ತಾರೆ.

[1] ದುಂಬಿಗಳು ಪುಷ್ಪರಸವನ್ನು ಹೀರಿಕೊಳ್ಳುವ ರೀತಿಯಲ್ಲಿ ಪ್ರಜೆಗಳಿಗೆ ಅರಿವಾಗದಂತೆ ತೆರಿಗೆಗಳನ್ನು ಸಂಗ್ರಹಿಸಬೇಕು. ದಂಡೋಪಾಯದ ಮೂಲಕ ತೆರಿಗೆಗಳನ್ನು ಸಂಗ್ರಹಿಸಲು ಯತ್ನಿಸಬಾರದು. ಜನರು ದಂಗೆಯೇಳುತ್ತಾರೆ ಅಥವಾ ರಾಜನನ್ನೇ ತಿರಸ್ಕರಿಸುತ್ತಾರೆ.

[2] ಇಲ್ಲಿ ಉಪಾಯವೆಂದರೆ ಕಣಿಕೋಕ್ತ ಕುಟಿಲನೀತಿ. ಚಾಣಕ್ಯಾದ್ಯುಕ್ತಕುಟಿಲನೀತಿಜ್ಞಃ–ಅರ್ಥಾತ್ ರಾಜಶಾಸ್ತ್ರಜ್ಞಃ ಎಂದರೆ ರಾಜನ ಸಮೀಪದಲ್ಲಿರುವ ವೈದ್ಯನು ರಾಜನೀತಿಚತುರನಾಗಬಾರದು. ಏಕೆಂದರೆ: ಇಂತಹ ವೈದ್ಯನಿದ್ದರೆ ಇವನು ಧನಲೋಭದಿಂದಾಗಿ ಶತ್ರುಪಕ್ಷಕ್ಕೆ ಸೇರಿ ರಾಜನ ರೋಗವು ಉಲ್ಬಣಿಸುವಂತೆ ಮಾಡಲೂ ಸಾಧ್ಯವಾಗುವುದು.

ವನನ್ನೂ, ಸತ್ಕುಲಪ್ರಸೂತನನ್ನೂ, ನಿನ್ನಲ್ಲಿಯೇ ಅನುರಕ್ತನಾಗಿರುವವನನ್ನೂ, ಕಾರ್ಯದಲ್ಲಿ ದಕ್ಷತೆಯಿರುವವನನ್ನೂ–ಸೇನಾಪತಿಯನ್ನಾಗಿ ಮಾಡಿಕೊಂಡಿರುವೆಯಾ?

ಬಲವನ್ತಶ್ಚ ಕಚ್ಚಿತ್ತೇ ಮುಖ್ಯಾ ಯುದ್ಧವಿಶಾರದಾಃ ।
ದೃಷ್ಟಾಪದಾನಾ ವಿಕ್ರಾನ್ತಾಸ್ತ್ವಯಾ ಸತ್ಕೃತ್ಯ ಮಾನಿತಾಃ ॥೩೧॥

ಅತ್ಯಂತಬಲಿಷ್ಠರಾದ, ಹಿಂದೆ ಹಲವಾರು ಯುದ್ಧಗಳಲ್ಲಿ ಸಾಹಸ ಕಾರ್ಯಗಳನ್ನು ಮಾಡಿ ಪ್ರಸಿದ್ಧಿಹೊಂದಿರುವ, ಯುದ್ಧವಿಶಾರದರಾದ, ಶೂರರಾದ ಸೇನಾನಾಯಕರನ್ನು ನೀನು ವಿಶೇಷಸಮಾರಂಭಗಳಲ್ಲಿ ಆಹ್ವಾನಿಸಿ ಸತ್ಕರಿಸಿ ಗೌರವಿಸುತ್ತಿರುವೆಯಾ?

ಕಚ್ಚಿದ್ಬಲಸ್ಯ ಭಕ್ತಂ ಚ ವೇತನಂ ಚ ಯಥೋಚಿತಮ್ ।
ಸಂಪ್ರಾಪ್ತಕಾಲಂ ದಾತವ್ಯಂ ದದಾಸಿ ನ ವಿಲಮ್ಬಸೇ ॥೩೨॥

ಸೈನಿಕರಿಗೆ ಯಥೋಚಿತವಾಗಿ ಆಯಾ ಕಾಲಕ್ಕೆ ಕೊಡಬೇಕಾದ ಊಟದ ಭತ್ಯವನ್ನೂ, ಮಾಸಾಶನವನ್ನೂ ವಿಳಂಬಮಾಡದೇ ಕೊಡುತ್ತಿರುವೆಯಲ್ಲವೇ?

ಕಾಲಾತಿಕ್ರಮಣಾಚ್ಚೈವ ಭಕ್ತವೇತನಯೋರ್ಭೃತಾಃ ।
ಭರ್ತುಃ ಕುಪ್ಯನ್ತಿ ದುಷ್ಯನ್ತಿ ಸೋಽನರ್ಥಃ ಸುಮಹಾನ್ ಸ್ಮೃತಃ ॥೩೩॥

ಭರತ! ದಿನಭತ್ಯ ಮತ್ತು ಮಾಸಾಶನಗಳಿಂದ ಜೀವಿಸುವ ಸೇವಕರು ಅಥವಾ ಸೈನಿಕರು ದಿನಗೂಲಿಯಾಗಲೀ ತಿಂಗಳ ಸಂಬಳವಾಗಲೀ ಸಕಾಲಕ್ಕೆ ಸಿಕ್ಕದಿದ್ದರೆ ತಮ್ಮ ಒಡೆಯನ ವಿಷಯದಲ್ಲಿ ಕೋಪಗೊಳ್ಳುತ್ತಾರೆ ಮತ್ತು ಒಡೆಯನನ್ನು ನಿಂದಿಸುತ್ತಾರೆ. ಅವರು ಅಸಮಾಧಾನಹೊಂದಿದರೆ ಅದರಿಂದ ದೇಶಕ್ಕೆ ಬಹಳ ಅನರ್ಥವುಂಟಾಗುತ್ತದೆ. ಆದುದರಿಂದ ವೇತನ-ಭತ್ಯಗಳನ್ನು ನಿಯತವಾದ ಕಾಲದಲ್ಲಿ ಕೊಡಬೇಕು. ಯಾವ ಕಾರಣದಿಂದಲೂ ನಿಧಾನಿಸಬಾರದು.

ಕಚ್ಚಿತ್ಸರ್ವೇಽನುರಕ್ತಾಸ್ತ್ವಾಂ ಕುಲಪುತ್ರಾಃ ಪ್ರಧಾನತಃ ।
ಕಚ್ಚಿತ್ಪ್ರಾಣಾಂಸ್ತವಾರ್ಥೇಷು ಸಂತ್ಯಜನ್ತಿ ಸಮಾಹಿತಾಃ ॥೩೪॥

ಭರತ! ನಿನ್ನ ವಿಷಯದಲ್ಲಿ ಎಲ್ಲ ಪ್ರಜೆಗಳೂ, ಎಲ್ಲ ಮಂತ್ರಿಗಳೂ, ಎಲ್ಲ

ಸೈನಿಕರೂ, ಋತ್ವಿಜರೂ ಅನುರಕ್ತರಾಗಿರುವರೇ? ಅದರಲ್ಲಿಯೂ ಮುಖ್ಯವಾಗಿ ಸತ್ಕುಲದಲ್ಲಿ ಹುಟ್ಟಿರುವ ಕ್ಷತ್ರಿಯರಾಜಕುಮಾರರು ಅನುರಕ್ತರಾಗಿರುವರೇ? ನಿನ್ನ ದೇಶದ ಸಲುವಾಗಿ ಮತ್ತು ನಿನ್ನ ಸಲುವಾಗಿ ಒಟ್ಟಾಗಿ ಸೇರಿ ಪ್ರಾಣಗಳನ್ನಾದರೂ ತೊರೆಯಲು ಸಿದ್ಧರಾಗಿರುವರೇ?

ಕಚ್ಚಿಜ್ಜಾನಪದೋ ವಿದ್ವಾನ್ದಕ್ಷಿಣಃ ಪ್ರತಿಭಾನವಾನ್ ।
ಯಥೋಕ್ತವಾದೀ ದೂತಸ್ತೇ ಕೃತೋ ಭರತ ಪಣ್ಡಿತಃ ॥೩೫॥

ಸ್ವದೇಶದವನಾಗಿಯೂ, ವಿದ್ವಾಂಸನಾಗಿಯೂ, ಕೇಳಿದ ಪ್ರಶ್ನೆಗಳಿಗೆ ಒಡನೆಯೇ ಉತ್ತರಕೊಡುವ ಸಾಮರ್ಥ್ಯವಿರುವವನಾಗಿಯೂ, ಸಂದರ್ಭಕ್ಕೆ ತಕ್ಕಂತೆ ಎಷ್ಟು ಮಾತನಾಡಬೇಕೋ ಅಷ್ಟು ಮಾತ್ರ ಮಾತನಾಡುವವನಾಗಿಯೂ, ಪಂಡಿತನಾಗಿಯೂ ಇರುವವನನ್ನು ರಾಯಭಾರಿಯನ್ನಾಗಿ ಮಾಡಿಕೊಂಡಿರುವೆಯಲ್ಲವೇ?*

ಕಚ್ಚಿದಷ್ಟಾದಶಾನ್ಯೇಷು ಸ್ವಪಕ್ಷೇ ದಶ ಪಞ್ಚ ಚ ।
ತ್ರಿಭಿಸ್ತ್ರಿಭಿರವಿಜ್ಞಾತೈರ್ವೇತ್ಸಿ ತೀರ್ಥಾನಿ ಚಾರಕೈಃ ॥೩೬॥

ಶತ್ರುಪಕ್ಷದ ಹದಿನೆಂಟು ಅಧಿಕಾರಿಗಳ ಮೇಲೂ, ಸ್ವಪಕ್ಷದ ಹದಿನೈದು ಅಧಿಕಾರಿಗಳ ಮೇಲೂ–ಮೂರು ಮೂರು ಮಂದಿ ಗುಪ್ತಚಾರರನ್ನಿಟ್ಟು ಅವರ ಇಂಗಿತಗಳನ್ನು ಅನುದಿನವೂ ಗ್ರಹಿಸುತ್ತಿರುವೆಯಾ?[1]

ಕಚ್ಚಿದ್ವ್ಯಪಾಸ್ತಾನಹಿತಾನ್ಪ್ರತಿಯಾತಾಂಶ್ಚ ಸರ್ವದಾ ।
ದುರ್ಬಲಾನನವಜ್ಞಾಯ ವರ್ತಸೇ ರಿಪುಸೂದನ ॥೩೭॥

ಶತ್ರುಸೂದನನೇ! ಅಹಿತರಾದ ಜನರನ್ನು ಅಥವಾ ರಾಜದ್ರೋಹಿಗಳನ್ನು ಗಡೀಪಾರು ಮಾಡಿದಾಗ ಕೆಲವು ವರ್ಷಗಳನಂತರ ಅವರು ದೇಶ

---

*ದೂತಂ ಚೈವ ಪ್ರಕುರ್ವೀತ ಸರ್ವಶಾಸ್ತ್ರವಿಶಾರದಮ್ ॥ ಇಙ್ಗಿತಾಕಾರಚೇಷ್ಟಜ್ಞಂ ಶುಚಿಂ ದಕ್ಷಂ ಕುಲೋದ್ಭವಮ್ ॥ [ಮನುಃ] ಸರ್ವಶಾಸ್ತ್ರವಿಶಾರದನಾಗಿರುವ, ಚೇಷ್ಟೆಗಳಿಂದಲೂ-ಮುಖಲಕ್ಷಣಗಳಿಂದಲೂ, ಹೃದಯದ ಅಭಿಪ್ರಾಯವೇನಿರಬಹುದೆಂದು ತಿಳಿಯಲು ಸಮರ್ಥನಾಗಿರುವ, ಅಂತಃಶುದ್ಧಿ-ಬಹಿಃಶುದ್ಧಿಗಳಿಂದ ಕೂಡಿರುವ, ದಕ್ಷನಾದ, ಸತ್ಕುಲಪ್ರಸೂತನಾದವನನ್ನು ಮಾತ್ರವೇ ರಾಜದೂತನನ್ನಾಗಿ ನಿಯಮಿಸಿಕೊಳ್ಳಬೇಕು.

[1]ವಿವರಣೆಯನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ.

ದೊಳಗೆ ನುಸುಳಿಬಂದಲ್ಲಿ ಅಂತಹವರನ್ನು ದುರ್ಬಲರೆಂದು ತಾತ್ಸಾರಮಾಡುವುದಿಲ್ಲ ತಾನೇ?[1]

ಕಚ್ಚಿನ್ನ ಲೌಕಾಯತಿಕಾನ್ಬ್ರಾಹ್ಮಣಾಂಸ್ತಾತ ಸೇವಸೇ ।
ಅನರ್ಥಕುಶಲಾ ಹ್ಯೇತೇ ಬಾಲಾಃ ಪಣ್ಡಿತಮಾನಿನಃ ॥೩೮॥

ಚಾರ್ವಾಕಮತಾನುಯಾಯಿಗಳಾದ ಬ್ರಾಹ್ಮಣರನ್ನು ನೀನು ಸೇವಿಸುತ್ತಿಲ್ಲ ತಾನೇ? ಅನರ್ಥವನ್ನುಂಟುಮಾಡುವ ಮಾತುಗಳನ್ನಾಡುವುದರಲ್ಲಿ ಇವರು ಕುಶಲರು. ಮೂರ್ಖರು ಮೇಲಾಗಿ ತಾವೇ ಮಹಾಪಂಡಿತರೆಂದು ಭಾವಿಸಿಕೊಂಡಿರುವವರು.[2]

ಧರ್ಮಶಾಸ್ತ್ರೇಷು ಮುಖ್ಯೇಷು ವಿದ್ಯಮಾನೇಷು ದುರ್ಬುಧಾಃ ।
ಬುದ್ಧಿಮಾನ್ವೀಕ್ಷಿಕೀಂ ಪ್ರಾಪ್ಯ ನಿರರ್ಥಂ ಪ್ರವದನ್ತಿ ತೇ ॥೩೯॥

ದುಷ್ಟವಿಚಾರಗಳಲ್ಲಿಯೇ ಮತ್ತು ಶ್ರುತಿ-ಸ್ಮೃತಿಗಳಿಗೆ ಅಪಾರ್ಥವನ್ನು ಕಲ್ಪಿಸುವುದರಲ್ಲಿಯೇ ಮನಃಪ್ರವೃತ್ತಿಯುಳ್ಳ ಇಂತಹ ಹೀನಪಂಡಿತರು ಆಸ್ತಿಕ್ಯವನ್ನು ಪ್ರತಿಪಾದಿಸುವ ಮುಖ್ಯ-ಮುಖ್ಯವಾದ ಧರ್ಮಶಾಸ್ತ್ರಗಳು ಅನೇಕವಿದ್ದರೂ ಅವೆಲ್ಲವನ್ನೂ ಬದಿಗೊತ್ತಿ ಕೇವಲ ಕುತರ್ಕದಿಂದ

---

[1]ಅಹಿತರಾದ ರಾಷ್ಟ್ರದ್ರೋಹಿಗಳಾದ ಜನರು ದುರ್ಬಲರೇ ಆಗಿದ್ದರೂ–ಅವರ ಮೇಲೆ ಎಚ್ಚರಿಕೆಯಿಂದ ಗಮನವಿಟ್ಟಿರಬೇಕು. ಅವರು ದೇಶದಲ್ಲಿಯೇ ಇರಲಿ; ದೇಶಾಂತರಗಳಲ್ಲಿಯೇ ಇರಲಿ–ಅವರ ಚಲನ-ವಲನಗಳ ವಿಷಯವಾಗಿ ಜಾಗರೂಕತೆಯನ್ನು ವಹಿಸಿರಬೇಕು.

[2]ಕೇವಲ ಪ್ರಾಪಂಚಿಕಸುಖೋಪಭೋಗಗಳಲ್ಲಿಯೇ ಮನಸ್ಸುಳ್ಳ, ಪರಲೋಕ-ಪರಮಾತ್ಮ-ಪರವಸ್ತುಗಳೇ ಇಲ್ಲವೆಂದು ತರ್ಕಮಾಡುವ ಚಾರ್ವಾಕಮತಾವಲಂಬಿಗಳಾದ, ನಾಸ್ತಿಕರಾದ ಬ್ರಾಹ್ಮಣರನ್ನೂ ಗೌರವಿಸಬಾರದು. ಇವರು ಕೇವಲ ಪ್ರತ್ಯಕ್ಷಪ್ರಮಾಣಗಳನ್ನೇ ಮುಂದುಮಾಡಿಕೊಂಡು ವಾದಮಾಡುತ್ತಿರುತ್ತಾರೆ. ಇವರು ಚಾರುವಾಕರು. ಇವರ ಮಾತು ಬಲು ಚೆನ್ನ. ಯಾವ ವಿಧವಾದ ತತ್ತ್ವಾರ್ಥಗಳೂ ಇವರಿಗೆ ತಿಳಿದಿರುವುದಿಲ್ಲ. ಪರತತ್ತ್ವದ ವಿಷಯಗಳಲ್ಲಿ ಇವರು ಕೇವಲ ಬಾಲಕರಾಗಿರುತ್ತಾರೆ. ಆದರೂ ತಾವೇ ಮಹಾಪಂಡಿತರೆಂಬ ದುರಭಿಮಾನವನ್ನು ಹೊಂದಿರುತ್ತಾರೆ. ಇಂತಹವರನ್ನು ಗೌರವಿಸದಿರುವುದು ಮಾತ್ರವಲ್ಲದೆ ಅವರನ್ನು ಹತ್ತಿರಕ್ಕೂ ಸೇರಿಸಬಾರದು.

ಪರಿಭ್ರಾಂತವಾದ ಮನಸ್ಸುಳ್ಳವರಾಗಿ ನಿರರ್ಥಕವಾಗಿ ನಿಷ್ಪ್ರಯೋಜಕವಾಗಿ ವಾದಮಾಡುತ್ತಿರುತ್ತಾರೆ.*

ಭರತ! ಮಹಾವೀರರಾದ ನಮ್ಮ ಪೂರ್ವಜರಿಂದ ವಾಸಿಸಲ್ಪಡುತ್ತಿದ್ದ 'ಈ ಪಟ್ಟಣವನ್ನು ಆಕ್ರಮಣಮಾಡುವುದು ಸಾಧ್ಯವಿಲ್ಲ'–ಎಂದು ಶತ್ರುಗಳು ಭಾವಿಸುವಂತೆ ಅಯೋಧ್ಯಾ ಎಂಬ ಹೆಸರನ್ನು ಸತ್ಯವಾದ ಹೆಸರನ್ನಾಗಿಯೇ ಮಾಡಿಕೊಂಡಿರುವ, ದೃಢವಾದ ಮಹಾದ್ವಾರಗಳಿಂದ ಕೂಡಿರುವ, ಆನೆ-ಕುದುರೆ-ರಥ-ಪದಾತಿಗಳಿಂದ ಪರಿಪೂರ್ಣವಾಗಿರುವ, ಸ್ವಕರ್ಮನಿರತರಾದ, ಜಿತೇಂದ್ರಿಯರಾದ, ಉತ್ಸಾಹಭರಿತರಾದ ಸಾವಿರಾರು ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರಿಂದ ಸಂಪನ್ನವಾಗಿರುವ, ನಾನಾವಿಧವಾದ ಆಕಾರಗಳುಳ್ಳ ದೇವಸ್ಥಾನಗಳಿಂದಲೂ–ರಾಜಗೃಹಗಳಿಂದಲೂ ಕಂಗೊಳಿಸುತ್ತಿರುವ, ವಿದ್ವಾಂಸರಿಂದ ಸಮಾಕುಲವಾಗಿರುವ, ಧನ-ಧಾನ್ಯಗಳಿಂದ ಸಮೃದ್ಧವಾಗಿರುವ ಅಯೋಧ್ಯಾ ನಗರಿಯನ್ನು ಜಾಗರೂಕತೆಯಿಂದ ಚೆನ್ನಾಗಿ ರಕ್ಷಿಸುತ್ತಿರುವೆಯಲ್ಲವೇ?

ಲೌಕಾಯತಿಕಾಃ= ನಾಸ್ತಿಕರು; ಪ್ರತ್ಯಕ್ಷಪ್ರಮಾಣವನ್ನು ಮಾತ್ರ ನಂಬುವವರು; ಶುಷ್ಕತರ್ಕವಾದಿಗಳು.

*ಅನ್ವೀಕ್ಷಿಕೀ= ತರ್ಕಶಾಸ್ತ್ರ, ಅನು= ಶ್ರವಣಾನನ್ತರಂ, ಈಕ್ಷಣಂ= ಪರೀಕ್ಷಣಂ=ಅನ್ವೀಕ್ಷಾ ಸಾ ಪ್ರಯೋಜನಮಸ್ಯಾಃ ಆನ್ವೀಕ್ಷಿಕೀ; ಕಿವಿಯಲ್ಲಿ ಕೇಳಿದನಂತರ ಕಣ್ಣಿನಿಂದ ನೋಡುವುದೇ ಮುಖ್ಯಪ್ರಯೋಜನವಾಗಿ ಉಳ್ಳದ್ದು. ಆನ್ವೀಕ್ಷಿಕೀ= ತರ್ಕವಿದ್ಯೆ. ಇದಕ್ಕೆ ಸ್ಥಲಾಂತರದಲ್ಲಿ ಅಧ್ಯಾತ್ಮವಿದ್ಯೆಯೆಂಬ ಅರ್ಥವೂ ಇದೆ. ಅನ್ವೀಕ್ಷಿಕ್ಯಾತ್ಮವಿದ್ಯಾ ಸ್ಯಾದೀಕ್ಷಣಾತ್ಸುಖದುಃಖಯೋಃ। ಈಕ್ಷಮಾಣಸ್ತಯಾ ತತ್ತ್ವಂ ಹರ್ಷಶೋಕಾವುದಸ್ಯತಿ ॥ (ಕಾಮಂದಕೀಯ ನೀತಿಸಾರ) ಆತ್ಮವಿದ್ಯೆಯು ಸುಖ-ದುಃಖಗಳ ಸ್ವರೂಪವನ್ನು ನೋಡುವ (ತಿಳಿಯುವ) ಶಕ್ತಿಯನ್ನು ಕೊಡಬಲ್ಲದಾದುದರಿಂದ ಅನ್ವೀಕ್ಷಿಕೀ–ಎನಿಸಿಕೊಳ್ಳುತ್ತದೆ. ಈ ವಿದ್ಯೆಯಿಂದ ತತ್ತ್ವವನ್ನು ತಿಳಿದವನು ಸಂತೋಷ-ದುಃಖಗಳನ್ನು ಬಿಡುತ್ತಾನೆ. (ಸಮನಾಗಿ ಎಣಿಸುತ್ತಾನೆ). ಧರ್ಮರಹಸ್ಯವನ್ನು ತಿಳಿಯಲು ಯಾರು ಸಮರ್ಥನೆಂಬುದಕ್ಕೆ ಸ್ಮೃತಿವಚನವು ಹೀಗಿರುವುದು. ಆರ್ಷಂ ಧರ್ಮೋಪದೇಶಂ ಚ ವೇದಶಾಸ್ತ್ರಾವಿರೋಧಿನಾ । ಯಸ್ತರ್ಕೇಣಾನುಸಂಧತ್ತೇ ಸ ಧರ್ಮಂ ವೇದ ನೇತರಃ ॥ ವೇದ-ಶಾಸ್ತ್ರಗಳಿಗೆ ವಿರುದ್ಧವಲ್ಲದ ತರ್ಕದಿಂದ ಯಾವನು ಋಷಿಗಳ ಮತವನ್ನೂ ಧರ್ಮದ ಉಪದೇಶವನ್ನೂ ವಿಮರ್ಶಿಸುತ್ತಾನೆಯೋ–ಅವನೇ ನಿಜವಾದ ಧರ್ಮಜ್ಞನು; ಮತ್ತೊಬ್ಬನಲ್ಲ.

ಕೋಸಲದೇಶವು ಅಶ್ವಮೇಧಾದಿ ಮಹಾಯಜ್ಞಗಳು ನಡೆಯುವ ಪುಣ್ಯಭೂಮಿಗಳಿಂದ ಸಮಾವೃತವಾಗಿರುವುದೇ? ಯಾವ ವಿಧವಾದ ಆತಂಕವೂ ಇಲ್ಲದೇ ಜನರು ಸ್ವಸ್ಥಮನಸ್ಸಿನಿಂದ ನಿನ್ನ ದೇಶದಲ್ಲಿ ನೆಲೆಸಿರುವರಲ್ಲವೇ? ಕೋಸಲದೇಶವು ದೇವಸ್ಥಾನಗಳಿಂದಲೂ, ಅರವಟ್ಟಿಗೆಗಳಿಂದಲೂ, ಸರೋವರಗಳಿಂದಲೂ ಪರಿಶೋಭಿಸುತ್ತಿರುವು ದಲ್ಲವೇ? ಸ್ತ್ರೀ-ಪುರುಷರೆಲ್ಲರೂ ಸುಖದಿಂದಲೂ ಸಂತೋಷದಿಂದಲೂ ಇರುವರಲ್ಲವೇ? ಆಯಾ ಸಮಾಜದವರು ಆಗಿಂದಾಗ್ಗೆ ಆಚರಿಸುವ ಉತ್ಸವಾದಿಗಳಿಂದ ದೇಶವು ಶೋಭಿಸುತ್ತಿದೆಯಲ್ಲವೇ? ದೇಶದ ಎಲ್ಲೆಯು ಸರಿಯಾಗಿ ಗುರುತಿಸಲ್ಪಟ್ಟಿದೆಯಲ್ಲವೇ? ಗೋವುಗಳೇ ಮೊದಲಾದ ಸಾಧುಪ್ರಾಣಿಗಳಿಂದ ದೇಶವು ಸಮೃದ್ಧವಾಗಿರುವುದಲ್ಲವೇ? ದೇಶದಲ್ಲಿ ಯಾವ ವಿಧವಾದ ಹಿಂಸಾಚಾರಗಳೂ ನಡೆಯುತ್ತಿಲ್ಲವಲ್ಲವೇ? ವ್ಯವಸಾಯದ ಭೂಮಿಗಳು ದೇವಮಾತೃಕೆಗಳೇ ಆಗಿರದೇ ನದೀಮಾತೃಕಗಳಾಗಿಯೂ* ರಮ್ಯವಾಗಿಯೂ ಕಾಣುತ್ತಿವೆಯಲ್ಲವೇ? ಸಿಂಹ-ವ್ಯಾಘ್ರ-ವರಾಹಾದಿ ದುಷ್ಟಮೃಗಗಳಿಂದ ರಹಿತವಾಗಿದ್ದು ಯಾವ ವಿಧವಾದ ಭಯವೂ ಇಲ್ಲದೇ ಪ್ರಜೆಗಳು ನಿರಾತಂಕರಾಗಿರುವರಲ್ಲವೇ? ದೇಶದ ಹಲವಾರು ಕಡೆಗಳಲ್ಲಿ ನಾನಾಲೋಹಗಳ ಖನಿಜಗಳಿದ್ದು ಅವುಗಳಿಂದ ನಮ್ಮ ದೇಶವು ಶೋಭಿಸುತ್ತಿರುವುದಲ್ಲವೇ? ನಮ್ಮ ಪೂರ್ವಜರಿಂದ ರಕ್ಷಿಸಲ್ಪಟ್ಟಿರುವ ಕೋಸಲದೇಶವು ಪಾಪಾತ್ಮರಿಂದ ವರ್ಜಿಸಲ್ಪಟ್ಟಿದೆಯಲ್ಲವೇ? ಜನರೆಲ್ಲರೂ ಧನ-ಧಾನ್ಯಗಳಿಂದ ಸಮೃದ್ಧರಾಗಿ ಸುಖವಾಗಿ ವಾಸ ಮಾಡುತ್ತಿರುವರಲ್ಲವೇ?

ಕಚ್ಚಿತ್ತೇ ದಯಿತಾಃ ಸರ್ವೇ ಕೃಷಿಗೋರಕ್ಷಜೀವಿನಃ ।
ವಾರ್ತಾಯಾಂ ಸಂಶ್ರಿತಸ್ತಾತ ಲೋಕೋ ಹಿ ಸುಖಮೇಧತೇ ॥೪೭॥

ಕೃಷಿ-ಗೋರಕ್ಷಣೆ ಮತ್ತು ವಾಣಿಜ್ಯಗಳಿಂದ ಜೀವಿಸುವ ವೈಶ್ಯರು

---

*ದೇವಮಾತೃಕಃ= ಮಳೆಯಿಂದಲೇ ವ್ಯವಸಾಯವಾಗುವ ಭೂಪ್ರದೇಶ. (ಖುಷ್ಕಿ) ನದೀಮಾತೃಕಃ= ನದಿಗಳ ನೀರಿನಿಂದ ವ್ಯವಸಾಯವಾಗುವ ಭೂಪ್ರದೇಶ. (ತರಿ) ನದ್ಯಮ್ಬುಜೀವನೋ ದೇಶೋ ನದೀಮಾತೃಕ ಉಚ್ಯತೇ । ವೃಷ್ಟಿನಿಷ್ಪಾದ್ಯಸಸ್ಯಸ್ತು ವಿಜ್ಞೇಯೋ ದೇವಮಾತೃಕಃ ॥ [ಹಲಾಯುಧಃ]

ನಿನ್ನಲ್ಲಿ ಪ್ರೀತಿಯುಳ್ಳವರಾಗಿರುವರೇ? ಕೃಷಿ-ಗೋರಕ್ಷಣೆ-ವಾಣಿಜ್ಯಗಳನ್ನು ಆಶ್ರಯಿಸಿರುವ ಲೋಕವು ಸುಖವನ್ನು ಹೊಂದುತ್ತದೆ.*

ತೇಷಾಂ ಗುಪ್ತಿಪರೀಹಾರೈಃ ಕಚ್ಚಿತ್ತೇ ಭರಣಂ ಕೃತಮ್ ।
ರಕ್ಷ್ಯಾ ಹಿ ರಾಜ್ಞಾ ಧರ್ಮೇಣ ಸರ್ವೇ ವಿಷಯವಾಸಿನಃ ॥೪೮॥

ವೈಶ್ಯರ ರಕ್ಷಣೆ ಮತ್ತು ಅವರಿಗೆ ಒದಗುವ ಕಷ್ಟಗಳ ಪರಿಹಾರ–ಇವುಗಳಿಂದ ಅವರನ್ನು ಭರಿಸಿ ಪೋಷಿಸುತ್ತಿರುವೆಯಾ? ರಾಜನಾದವನು ತನ್ನ ದೇಶದಲ್ಲಿರುವ ಎಲ್ಲ ಪ್ರಜೆಗಳನ್ನೂ ಧರ್ಮದಿಂದ ಪರಿಪಾಲಿಸಬೇಕು.

ಕಚ್ಚಿತ್ಸ್ತ್ರಿಯಃ ಸಾನ್ತ್ವಯಸಿ ಕಚ್ಚಿತ್ತಾಶ್ಚ ಸುರಕ್ಷಿತಾಃ ।
ಕಚ್ಚಿನ್ನ ಶ್ರದ್ದಧಾಸ್ಯಾಸಾಂ ಕಚ್ಚಿದ್ಗುಹ್ಯಂ ನ ಭಾಷಸೇ ॥೪೯॥

ಕಷ್ಟದಲ್ಲಿರುವ ಸ್ತ್ರೀಯರನ್ನು ಸಂತೈಸುತ್ತಿರುವೆಯಾ? ಸ್ತ್ರೀಯರಿಗೆ ನಿನ್ನ ದೇಶದಲ್ಲಿ ಸಂಪೂರ್ಣವಾದ ರಕ್ಷಣೆಯಿರುವುದೇ? ಅವರಲ್ಲಿ ನೀನು ಹೆಚ್ಚಿನ ನಂಬಿಕೆಯನ್ನಿಡುತ್ತಿಲ್ಲ ತಾನೇ? ರಹಸ್ಯವಿಷಯಗಳನ್ನು ಅವರಿಗೆ ಹೇಳುತ್ತಿಲ್ಲ ತಾನೇ?

ಕಚ್ಚಿನ್ನಾಗವನಂ ಗುಪ್ತಂ ಕಚ್ಚಿತ್ತೇ ಸನ್ತಿ ಧೇನುಕಾಃ ।
ಕಚ್ಚಿನ್ನ ಗಣಿಕಾಶ್ವಾನಾಂ ಕುಞ್ಜರಾಣಾಂ ಚ ತೃಪ್ಯಸಿ ॥೫೦॥

ಆನೆಗಳಿರುವ ಕಾಡುಗಳನ್ನು (ಲಾಯಗಳನ್ನು) ರಕ್ಷಿಸುತ್ತಿರುವೆಯಾ? ಹಾಲುಕರೆಯುವ ಹಸುಗಳು ಯಥೇಚ್ಛವಾಗಿವೆಯೇ? ನಿನ್ನಲ್ಲಿರುವ ಹೆಣ್ಣಾನೆಗಳಿಂದಲೂ, ಗಂಡಾನೆಗಳಿಂದಲೂ, ಕುದುರೆಗಳಿಂದಲೂ ನೀನು ತೃಪ್ತನಾಗಿಲ್ಲ ತಾನೇ?[1]

---

*ವಾರ್ತಾ= ಕೃಷಿ, ಗೋರಕ್ಷಣೆ ಮತ್ತು ವಾಣಿಜ್ಯ ಈ ಮೂರಕ್ಕೂ ಸೇರಿ ಇರುವ ಹೆಸರು. ಕೃಷಿಗೋರಕ್ಷ್ಯವಾಣಿಜ್ಯತ್ರಯಂ ವಾರ್ತೇತ್ಯುದಾಹೃತಮ್ ॥

[1]ಚತುರಂಗಬಲವನ್ನು ಕೂಡಿಸಲು ಆನೆ-ಕುದುರೆಗಳು ಎಷ್ಟಾದರೂ ರಾಜ್ಯಕ್ಕೆ ಬೇಕಾಗುವುವು. ಸೈನ್ಯಗಳ ವಿಷಯದಲ್ಲಿ, ಇರುವುದೇ ಸಾಕೆಂದು ರಾಜನೆಂದಿಗೂ ತೃಪ್ತನಾಗಕೂಡದು. ಗಜಾಶ್ವಸಂಗ್ರಹದಲ್ಲಿಯೇ ನಿರತನಾಗಿರಬೇಕು. 'ಧೇನುಕಾ' ಎಂಬುದಕ್ಕೆ ಸ್ವಾಭಾವಿಕವಾಗಿ ಹಾಲು ಕೊಡುವ ಹಸುವೆಂದು ಅರ್ಥವಾದರೂ ಸಂದರ್ಭಾನುಸಾರವಾಗಿ ಒಬ್ಬ ವ್ಯಾಖ್ಯಾನಕಾರರು ಕಾಡಾನೆಯನ್ನು ಹಿಡಿಯುವ ಪಳಗಿದ ಹೆಣ್ಣಾನೆಯೆಂದು

ಕಚ್ಚಿದ್ದರ್ಶಯಸೇ ನಿತ್ಯಂ ಮನುಷ್ಯಾಣಾಂ ವಿಭೂಷಿತಮ್ ।
ಉತ್ಥಾಯೋತ್ಥಾಯ ಪೂರ್ವಾಹ್ಣೇ ರಾಜಪುತ್ರ ಮಹಾಪಥೇ ॥೫೧॥

ಬ್ರಾಹ್ಮೀಮುಹೂರ್ತದಲ್ಲಿ ಎದ್ದು ಸ್ನಾನ-ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ಮುಗಿಸಿಕೊಂಡು ರಾಜಯೋಗ್ಯವಾದ ಉಡುಪುಗಳಿಂದ ಶರೀರವನ್ನು ಸಿಂಗರಿಸಿಕೊಂಡು ರಾಜಮಾರ್ಗದಲ್ಲಿ (ರಾಜಸಭೆಯಲ್ಲಿ) ಪ್ರಜೆಗಳಿಗೆ ದರ್ಶನವೀಯುವಿಯಲ್ಲವೇ?[1]

ಕಚ್ಚಿನ್ನ ಸರ್ವೇ ಕರ್ಮಾನ್ತಾಃ ಪ್ರತ್ಯಕ್ಷಾಸ್ತೇಽವಿಶಙ್ಕಯಾ ।
ಸರ್ವೇ ವಾ ಪುನರುತ್ಸೃಷ್ಟಾ ಮಧ್ಯಮೇವಾತ್ರಕಾರಣಮ್ ॥೫೨॥

ನಾನಾವಿಧವಾದ ಕಾರ್ಯಗಳಲ್ಲಿ ನಿಯುಕ್ತರಾದ ನಿನ್ನ ಸೇವಕರು ನಿನ್ನೆದುರಿನಲ್ಲಿಯೇ ಯಾವ ವಿಧವಾದ ಶಂಕೆಯೂ ಇಲ್ಲದೇ (ರಾಜನೆಂಬ ಭಯವೇ ಇಲ್ಲದೇ) ನಡೆದುಕೊಳ್ಳುತ್ತಿಲ್ಲ ತಾನೇ? ಅಥವಾ ನಿನಗೆ ಹೆದರಿಕೊಂಡು ದೂರವಿರುತ್ತಿಲ್ಲ ತಾನೇ? ಸೇವಕರ ವಿಷಯದಲ್ಲಿ ಮಧ್ಯಮಮಾರ್ಗವನ್ನು ಅವಲಂಬಿಸುವುದು ಕಾರ್ಯದ ಸಾಧನೆಗೆ ಕಾರಣವಾಗುವುದು.[2]

ಕಚ್ಚಿದ್ದುರ್ಗಾಣಿ ಸರ್ವಾಣಿ ಧನಧಾನ್ಯಾಯುಧೋದಕೈಃ ।
ಯನ್ತ್ರೈಶ್ಚ ಪರಿಪೂರ್ಣಾನಿ ತಥಾ ಶಿಲ್ಪಿಧನುರ್ಧರೈಃ ॥೫೩॥

ನಿನ್ನ ರಾಷ್ಟ್ರದಲ್ಲಿರುವ ಎಲ್ಲ ದುರ್ಗಗಳೂ ಧನ-ಧಾನ್ಯಗಳಿಂದ ಸಮೃದ್ಧ

ಅರ್ಥಮಾಡಿರುತ್ತಾರೆ. "ಕರಿಣೀ ಧೇನುಕಾ ವಶಾ" [ಅಮರಃ] ಗಣಿಕಾ= ಹೆಣ್ಣಾನೆ. "ವೇಶ್ಯಾಕರಿಣ್ಯೋರ್ಗಣಿಕಾ" [ವೈಜಯನ್ತೀ]

[1] ರಾಜನಾದವನು ತನ್ನನ್ನು ನೋಡಲಪೇಕ್ಷಿಸುವ ಪೌರರನ್ನು ಅನುದಿನವೂ ನಿಯತವಾದ ಕಾಲದಲ್ಲಿ ಸಂದರ್ಶಿಸಿ ಅವರ ಕಷ್ಟ-ಸುಖಗಳನ್ನು ಕೂಲಂಕುಷವಾಗಿ ವಿಚಾರಿಸುತ್ತಿರಬೇಕು. ಮಹಾಪಥಃ= ರಾಜಬೀದಿ, ಹೆದ್ದಾರಿ. ಒಬ್ಬ ವ್ಯಾಖ್ಯಾನಕಾರರು "ರಾಜಸಭೆ?' ಎಂದು ಅರ್ಥಮಾಡಿರುತ್ತಾರೆ.

[2] ಕಾರ್ಯಕರ್ತರಿಗೆ ನಿರ್ಲಕ್ಷ್ಯದಿಂದ ತಿರುಗುವಂತೆ ಹೆಚ್ಚಿನ ಸಲಿಗೆಯನ್ನು ಕೊಡಬಾರದು. ಅನಾದರಿಸಿ ಹತ್ತಿರಕ್ಕೇ ಬರದಿರುವ ರೀತಿಯಲ್ಲಿ ಅವರ ಮನಸ್ಸಿನಲ್ಲಿ ಹೆಚ್ಚಿನ ಔದಾಸೀನ್ಯವನ್ನೂ ಹುಟ್ಟಿಸಬಾರದು. ಇದೇ ಮಧ್ಯಮ ಮಾರ್ಗ.

ವಾಗಿವೆಯೇ? ಆಯುಧಗಳಿಂದ ಪರಿಪೂರ್ಣಗಳಾಗಿವೆಯೇ? ಜಲಸಮೃದ್ಧ ವಾಗಿವೆಯೇ? ಶತಘ್ನಿಯೇ ಮೊದಲಾದ ಯಂತ್ರಗಳಿಂದ ಕೂಡಿವೆಯೇ?*

ಆಯಸ್ತೇ ವಿಪುಲಃ ಕಚ್ಚಿತ್ಕಚ್ಚಿದಲ್ಪತರೋ ವ್ಯಯಃ ।
ಅಪಾತ್ರೇಷು ನ ತೇ ಕಚ್ಚಿತ್ಕೋಶೋ ಗಚ್ಛತಿ ರಾಘವ ॥೫೪॥

ನಿನಗೆ ಬರುತ್ತಿರುವ ರಾಜಾದಾಯವು ವಿಪುಲವಾಗಿರುವುದಲ್ಲವೇ? ನೀನು ರಾಜ್ಯವ್ಯವಹಾರಗಳಿಗಾಗಿ ಮಾಡುತ್ತಿರುವ ವ್ಯಯವು ಆದಾಯ ಕ್ಕಿಂತಲೂ ಕಡಿಮೆಯಾಗಿರುವುದಲ್ಲವೇ? ಬೊಕ್ಕಸದ ಮೇಲ್ವಿಚಾರಣೆಯ ಅಧಿಕಾರವು ಅಯೋಗ್ಯರಿಗೆ ಸೇರಿಲ್ಲ ತಾನೇ?[1]

ದೇವತಾರ್ಥೇ ಚ ಪಿತ್ರರ್ಥೇ ಬ್ರಾಹ್ಮಣಾಭ್ಯಾಗತೇಷು ಚ ।
ಯೋಧೇಷು ಮಿತ್ರವರ್ಗೇಷು ಕಚ್ಚಿದ್ಗಚ್ಛತಿ ತೇ ವ್ಯಯಃ ॥೫೫॥

ನಿನ್ನ ಐಶ್ವರ್ಯವು ದೇವತೆಗಳ ಒಲುಮೆಗಾಗಿ ಮಾಡುವ ಯಜ್ಞ ಗಳಿಗೂ, ಪಿತೃಗಳ ಪ್ರೀತ್ಯರ್ಥವಾಗಿ ಮಾಡುವ ಕರ್ಮಗಳಿಗೂ, ಅತಿಥಿ-ಅಭ್ಯಾಗತರ ಸತ್ಕಾರಗಳಿಗೂ, ಬ್ರಾಹ್ಮಣರ, ಯೋಧರ, ಮಿತ್ರವರ್ಗದವರ ಭರಣ-ಪೋಷಣೆಗಳಿಗೂ ವ್ಯಯವಾಗುತ್ತಿರುವುದಲ್ಲವೇ?

---

*ದುರ್ಗವೆಂದು ಹೇಳಿಸಿಕೊಳ್ಳಬೇಕಾದರೆ ಇವಿಷ್ಟು ಲಕ್ಷಣಗಳಿಂದಲೂ ಕೂಡಿರಬೇಕು. ಕಾಮನ್ದಕನೀತಿಶಾಸ್ತ್ರದಲ್ಲಿ ದುರ್ಗದ ಲಕ್ಷಣವನ್ನು ಈ ರೀತಿಯಾಗಿ ಹೇಳಿದೆ: ಔದಕಂ ಪಾರ್ವತಂ ವಾರ್ಕ್ಷಮೈರಿಣಂ ಧಾನ್ವನಂ ತಥಾ। ಜಲಾನ್ನಾಯುಧಯನ್ತ್ರಾಢ್ಯಂ ವೀರಯೋಧೈರಧಿಷ್ಠಿತಮ್ ।ಗುಪ್ತಿಪ್ರಧಾನಮಾಚಾರ್ಯಾ ದುರ್ಗಂ ಸಮನುಮೇನಿರೇ॥

ನದಿಯೇ ಮೊದಲಾದ ನೀರಿನ ಪ್ರದೇಶಗಳು, ಬೆಟ್ಟ-ಗುಡ್ಡಗಳು, ಮರಗಳುಳ್ಳ ಕಾಡುಗಳು, ಉಪ್ಪುನೀರಿನ ಜೌಗುಪ್ರದೇಶ ಮತ್ತು ಮರುಭೂಮಿ, ನೀರು, ಆಹಾರವಸ್ತುಗಳು, ಆಯುಧಗಳು ಮತ್ತು ಯಂತ್ರಗಳಿಂದ ಕೂಡಿದ್ದು ವೀರಯೋಧರಿಂದ ರಕ್ಷಿಸಲ್ಪಡುತ್ತಾ, ದೇಶದ ರಕ್ಷಣೆಗಾಗಿ ಅನುಕೂಲವಾಗಿ ಮಾಡಲ್ಪಟ್ಟ ಪ್ರದೇಶಗಳು ದುರ್ಗಗಳೆನಿಸಿಕೊಳ್ಳುತ್ತವೆ.

[1] ದೇಶದ ಆಯ-ವ್ಯಯಗಳ ಪಟ್ಟಿಯನ್ನು (ಬಜೆಟ್) ತಯಾರಿಸುವುದು ರಾಜ್ಯಾಂಗದ ಮುಖ್ಯವಾದ ಒಂದು ಭಾಗ; ಆದಾಯಕ್ಕಿಂತಲೂ ಕಡಿಮೆಯಾಗಿ ವ್ಯಯಮಾಡಬೇಕೆಂಬುದು ನಮ್ಮ ಹಿಂದಿನ ರಾಜನೀತಿಯಾಗಿದ್ದಿತು.

ಕಚ್ಚಿದಾರ್ಯೋಽ ವಿಶುದ್ಧಾತ್ಮಾ ಕ್ಷಾರಿತಶ್ಚೋರಕರ್ಮಣಾ ।
ಅಪೃಷ್ಟಃ ಶಾಸ್ತ್ರಕುಶಲೈರ್ನ ಲೋಭಾದ್ವಧ್ಯತೇ ಶುಚಿಃ ॥೫೬॥

ನಿನ್ನ ರಾಜ್ಯದಲ್ಲಿ ಆರ್ಯನಾದವನೂ, ಶುದ್ಧಾತ್ಮನಾದವನೂ ಕಳ್ಳತನವೇ ಮೊದಲಾದ ಮಿಥ್ಯಾಪವಾದಕ್ಕೆ ಗುರಿಯಾದಾಗ–'ಅವನು ನಿಶ್ಚಯವಾಗಿಯೂ ತಪ್ಪುಮಾಡಿರುವನೇ–ಇಲ್ಲವೇ?'––ಎಂಬುದನ್ನು ನೀತಿಶಾಸ್ತ್ರಕುಶಲರಾದ ನ್ಯಾಯವಾದಿಗಳ ಮೂಲಕವಾಗಿ ನಿರ್ಣಯಿಸುವೆಯಲ್ಲವೇ? ಲೋಭದ ಕಾರಣದಿಂದಾಗಿ ಅಂತಹ ಪರಿಶುದ್ಧಾತ್ಮರನ್ನು ಪೂರ್ವಾಪರ ವಿವೇಚನೆಯಿಲ್ಲದೇ ಬಂಧಿಸುವುದಿಲ್ಲ ತಾನೇ?

ಗೃಹೀತಶ್ಚೈವ ಪೃಷ್ಟಶ್ಚ ಕಾಲೇ ದೃಷ್ಟಃ ಸಕಾರಣಃ ।
ಕಚ್ಚಿನ್ನ ಮುಚ್ಯತೇ ಚೋರೋ ಧನಲೋಭಾನ್ನರರ್ಷಭ ॥೫೭॥

ಕಳ್ಳನೊಬ್ಬನು ಕಳ್ಳತನಮಾಡುತ್ತಿರುವಾಗಲೇ ಕಳವು ಮಾಡಿದ ಪದಾರ್ಥಗಳೊಡನೆ ಸಿಕ್ಕಿಬಿದ್ದು ಬಂಧಿತನಾಗಿ, ನ್ಯಾಯಾಧೀಶನಿಂದಲೂ ಪ್ರಶ್ನಿಸಲ್ಪಟ್ಟು, ಕಳ್ಳನೆಂದೇ ನಿರ್ಧಾರವಾದನಂತರ ಶಿಕ್ಷೆಕೊಡುವ ಸಮಯದಲ್ಲಿ ಅಧಿಕಾರಿಗಳು ಧನದ ಆಸೆಯಿಂದ ಅಂತಹವನನ್ನು ಶಿಕ್ಷಿಸದೇ ಇರುವುದಿಲ್ಲ ತಾನೇ?

ವ್ಯಸನೇ ಕಚ್ಚಿದಾಢ್ಯಸ್ಯ ದುರ್ಗತಸ್ಯ ಚ ರಾಘವ ।
ಅರ್ಥಂ ವಿರಾಗಾಃ ಪಶ್ಯನ್ತಿ ತವಾಮಾತ್ಯಾ ಬಹುಶ್ರುತಾಃ ॥೫೮॥

ಒಬ್ಬ ಐಶ್ವರ್ಯವಂತನಿಗೂ–ಒಬ್ಬ ದರಿದ್ರನಿಗೂ ಧನಸಂಬಂಧವಾದ ಅಥವಾ ಭೂಮಿಯ ಸಂಬಂಧವಾದ ವ್ಯವಹಾರವುಂಟಾದಾಗ ಅವರಿಬ್ಬರೂ ನ್ಯಾಯಕೇಳಲು ನಿನ್ನ ಅಮಾತ್ಯರನ್ನು ಸಂಧಿಸಿದಾಗ–ನ್ಯಾಯಪರರಾದ, ವಿದ್ಯಾವಂತರಾದ ಮಂತ್ರಿಗಳು ಧನದಾಸೆಯಿಲ್ಲದೇ ಯಥಾರ್ಥವಾದ ನ್ಯಾಯದೃಷ್ಟಿಯುಳ್ಳವರಾಗಿಯೇ ಇರುವರಲ್ಲವೇ? (ಧನದಾಸೆಯಿಂದ ಐಶ್ವರ್ಯವಂತನಾದವನಿಗೆ ಅನುಕೂಲವಾಗುವಂತೆ ತೀರ್ಪುಕೊಡದೇ ನ್ಯಾಯಾನ್ಯಾಯಗಳನ್ನು ಸಂಪೂರ್ಣವಾಗಿ ವಿಮರ್ಶಿಸಿ ತೀರ್ಪು ಕೊಡುವರಲವೇ?)

ಯಾನಿ ಮಿಥ್ಯಾಭಿಶಸ್ತಾನಾಂ ಪತನ್ತ್ಯಸ್ರಾಣಿ ರಾಘವ ।
ತಾನಿ ಪುತ್ರಪಶೂನ್ ಘ್ನನ್ತಿ ಪ್ರೀತ್ಯರ್ಥಮನುಶಾಸತಃ ॥೫೯॥

ಸುಳ್ಳು ಅಪರಾಧವನ್ನು ಹೊತ್ತು ಶಿಕ್ಷೆಗೊಳಗಾದವರು ಸುರಿಸುವ ಕಣ್ಣೀರಿನ ಹನಿಗಳು—ಧನಿಕನೊಬ್ಬನಿಗೆ ಪ್ರೀತಿಯನ್ನುಂಟುಮಾಡುವ ಸಲುವಾಗಿ ನಿರಪರಾಧಿಯನ್ನು ಅಪರಾಧಿಯೆಂದು ಶಿಕ್ಷಿಸುವ ನ್ಯಾಯಾಧೀಶನ ಅಥವಾ ರಾಜನ ಪುತ್ರರನ್ನೂ ಪಶುಸಂಪತ್ತನ್ನೂ ವಿನಾಶಗೊಳಿಸುತ್ತವೆ.

ಕಚ್ಚಿದ್ವೃದ್ಧಾಂಶ್ಚ ಬಾಲಾಂಶ್ಚ ವೈದ್ಯಮುಖ್ಯಾಂಶ್ಚ ರಾಘವ ।
ದಾನೇನ ಮನಸಾ ವಾಚಾ ತ್ರಿಭಿರೇತೈರ್ಬುಭೂಷಸೇ ॥೬೦॥

ಜ್ಞಾನವೃದ್ಧರನ್ನೂ, ವಯೋವೃದ್ಧರನ್ನೂ, ಚಿಕ್ಕಮಕ್ಕಳನ್ನೂ, ವಿದ್ವಾಂಸರನ್ನೂ, ವೈದ್ಯಪ್ರಮುಖರನೂ—ದಾನದಿಂದಲೂ, ಸೌಮನಸ್ಯದಿಂದಲೂ, ಅಕ್ಕರೆಯ ಮಾತುಗಳಿಂದಲೂ ನಿನ್ನವರನ್ನಾಗಿ ಮಾಡಿಕೊಳ್ಳಲು ಯತ್ನಿಸುವೆಯಲ್ಲವೇ?

ಕಚ್ಚಿದ್ಗುರೂಂಶ್ಚ ವೃದ್ಧಾಂಶ್ಚ ತಾಪಸಾನ್ದೇವತಾತಿಥೀನ್ ।
ಚೈತ್ಯಾಂಶ್ಚ ಸರ್ವಾನ್ಸಿದ್ಧಾರ್ಥಾನ್ಬ್ರಾಹ್ಮಣಾಂಶ್ಚ ನಮಸ್ಯಸಿ ॥೬೧॥

ಗುರುಗಳನ್ನೂ, ವೃದ್ಧರನ್ನೂ, ತಪಸ್ವಿಗಳನ್ನೂ, ದೇವತೆಗಳನ್ನೂ, ಅತಿಥಿಗಳನ್ನೂ, ಅಶ್ವತ್ಥವೇ ಮೊದಲಾದ ಮಹಾವೃಕ್ಷಗಳನ್ನೂ, ವಿದ್ಯೆ-ವಿನಯ-ಶೀಲ ಮತ್ತು ಸದಾಚಾರಗಳಿಂದ ಸಂಪನ್ನರಾದ ಬ್ರಾಹ್ಮಣರನ್ನೂ ನೋಡಿದೊಡನೆಯೇ ನಮಸ್ಕರಿಸುವೆಯಲ್ಲವೇ?

ಕಚ್ಚಿದರ್ಥೇನ ವಾ ಧರ್ಮಮರ್ಥಂ ಧರ್ಮೇಣ ವಾ ಪುನಃ ।
ಉಭೌ ವಾ ಪ್ರೀತಿಲೋಭೇನ ಕಾಮೇನ ಚ ನ ಬಾಧಸೇ ॥೬೨॥

ನೀನು ಅರ್ಥದ ಮೂಲಕವಾಗಿ ಧರ್ಮಕ್ಕಾಗಲೀ—ಧರ್ಮದ ಮೂಲಕವಾಗಿ ಅರ್ಥಕ್ಕಾಗಲೀ ಹಾನಿಯನ್ನುಂಟುಮಾಡುತ್ತಿಲ್ಲ ತಾನೇ? ಅಥವಾ ಆಸಕ್ತಿ ಮತ್ತು ಲೋಭಗಳ ರೂಪವಾದ ಕಾಮದ ಮೂಲಕವಾಗಿ ಧರ್ಮಾರ್ಥಗಳೆರಡನ್ನೂ ಬಾಧೆಪಡಿಸುತ್ತಿಲ್ಲ ತಾನೇ?*

ಕಚ್ಚಿದರ್ಥಂ ಚ ಧರ್ಮಂ ಚ ಕಾಮಂ ಚ ಜಯತಾಂ ವರ ।
ವಿಭಜ್ಯ ಕಾಲೇ ಕಾಲಜ್ಞ ಸರ್ವಾನ್ಭರತ ಸೇವಸೇ ॥೬೩॥

ಧರ್ಮ, ಅರ್ಥ, ಕಾಮ—ಈ ಪುರುಷಾರ್ಥಗಳ ಸಾಧನೆಯನ್ನು ಮನುಷ್ಯನು ಅನುದಿನವೂ ಮಾಡುತ್ತಲೇ ಇರಬೇಕು. ಈ ಪುರುಷಾರ್ಥಗಳ ಸಾಧನೆಗೆ ಕಾಲವೂ ಸಹ

ಕಾಲದ ರಹಸ್ಯವನ್ನು ತಿಳಿದಿರುವವನೇ! ದಿನದಲ್ಲಿ ಅರ್ಥಸಾಧನೆಗೆ ನಿಯೋಜಿಸಬೇಕಾದ ಕಾಲ, ಧರ್ಮಸಂಗ್ರಹಕ್ಕೆ ನಿಯೋಜಿಸಬೇಕಾದ ಕಾಲ, ಕಾಮೋಪಭೋಗಗಳಿಗೆ ನಿಯೋಜಿಸಬೇಕಾದ ಕಾಲ–ಈ ಮೂರು ಕಾಲಗಳನ್ನೂ ವಿಭಜಿಸಿ ನಿಯತವಾಗಿರುವ ಆಯಾ ಕಾಲಗಳಲ್ಲಿಯೇ ಧರ್ಮಾರ್ಥ-ಕಾಮಗಳನ್ನು ಸಾಧಿಸುತ್ತಿರುವೆಯಲ್ಲವೇ?

ಕಚ್ಚಿತ್ತೇ ಬ್ರಾಹ್ಮಣಾಃ ಶರ್ಮ ಸರ್ವಶಾಸ್ತ್ರಾರ್ಥಕೋವಿದಾಃ ।
ಆಶಂಸನ್ತೇ ಮಹಾಪ್ರಾಜ್ಞ ಪೌರಜಾನಪದೈಃ ಸಹ ॥೬೪॥

ಮಹಾಪ್ರಾಜ್ಞನೇ! ಸಕಲಶಾಸ್ತ್ರಾರ್ಥಕೋವಿದರಾದ ಬ್ರಾಹ್ಮಣರು ಪುರಮುಖ್ಯರಿಂದಲೂ ಪ್ರಜೆಗಳಿಂದಲೂ ಕೂಡಿ ನಿನಗೆ ಸುಖವನ್ನು ಕೋರುತ್ತಿರುವರೇ?

ನಾಸ್ತಿಕ್ಯಮನೃತಂ ಕ್ರೋಧಂ ಪ್ರಮಾದಂ ದೀರ್ಘಸೂತ್ರತಾಮ್ ।
ಅದರ್ಶನಂ ಜ್ಞಾನವತಾಮಾಲಸ್ಯಂ ಪಞ್ಚವೃತ್ತಿತಾಮ್ ॥೬೫॥

ಏಕಚಿನ್ತನಮರ್ಥಾನಮನರ್ಥಜ್ಞೈಶ್ಚ ಮನ್ತ್ರಣಮ್ ।
ನಿಶ್ಚಿತಾನಾಮನಾರಮ್ಭಂ ಮನ್ತ್ರಸ್ಯಾಪರಿರಕ್ಷಣಮ್ ॥೬೬॥

ಮಙ್ಗಲಸ್ಯಾಪ್ರಯೋಗಂ ಚ ಪ್ರತ್ಯುತ್ಥಾನಂ ಚ ಸರ್ವತಃ ।
ಕಚ್ಚಿತ್ತ್ವಂ ವರ್ಜಯಸ್ಯೇತಾನ್ರಾಜದೋಷಾಂಶ್ಚತುರ್ದಶ ॥೬೭॥

ನಿಯತವಾಗಿದೆ. ಬ್ರಾಹ್ಮಮುಹೂರ್ತದಲ್ಲೆದ್ದು ಧ್ಯಾನವೇ ಮೊದಲಾದ ತತ್ತದ್ವರ್ಣೋಕ್ತವಾದ ಅನುಷ್ಠಾನಗಳನ್ನು ಮಾಡಿ ಧರ್ಮದ ಸಾಧನೆಯನ್ನು ಮಾಡಬೇಕು. ಮಧ್ಯಾಹ್ನದ ಸಮಯದಲ್ಲಿ ತತ್ತದ್ವರ್ಣೋಕ್ತವಾದ ವೃತ್ತಿಗಳಿಂದ ಅರ್ಥಸಾಧನೆ ಮಾಡಬೇಕು. ರಾತ್ರಿಯಲ್ಲಿ ಪತ್ನಿಯೊಡಗೂಡಿ ರತಿಸುಖವನ್ನನುಭವಿಸಬೇಕು. ಇದು ನಿಯಮ. ಇದಕ್ಕೆ ವಿರುದ್ಧವಾಗಿ ಎಂದರೆ ಕರ್ಮಾನುಷ್ಠಾನಗಳ ಮೂಲಕ ಧರ್ಮಸಾಧನೆ ಮಾಡಬೇಕಾದ ಪ್ರಾತಃಕಾಲದಲ್ಲಿ ಧನಾರ್ಜನೆಗೆ ಪ್ರಯತ್ನಿಸುವುದು; ಅರ್ಥಸಾಧನೆಗೆ ಉಕ್ತವಾಗಿರುವ ಮಧ್ಯಾಹ್ನ ಕಾಲದಲ್ಲಿ ಕುಟುಂಬರಕ್ಷಣಾಭಾರವನ್ನೂ ಬದಿಗೊತ್ತಿ ಧರ್ಮಸಾಧನೆಗೆ ಯತ್ನಿಸುವುದು; ಮೂರನೆಯದಾಗಿ ಧರ್ಮಾರ್ಥಗಳೆರಡನ್ನೂ ಬದಿಗಿಟ್ಟು ಧರ್ಮಾರ್ಥಗಳ ಸಾಧನೆಯನ್ನು ಮಾಡಬೇಕಾಗಿರುವ ಪ್ರಾತಃಕಾಲ ಮತ್ತು ಮಧ್ಯಾಹ್ನಗಳಲ್ಲಿ ರಾತ್ರಿಗೆ ಸೀಮಿತವಾಗಿರುವ ಕಾಮೋಪಭೋಗಗಳಲ್ಲಿ ಆಸಕ್ತನಾಗಿರುವುದು–ಹೀಗೆ ಮಾಡುವುದರಿಂದ ಕೇಡುಂಟಾಗುವುದು. 'ಹೀಗೆ ಮಾಡುತ್ತಿಲ್ಲ ತಾನೇ?' ಎಂದು ರಾಮನು ಭರತನನ್ನು ಪ್ರಶ್ನಿಸುತ್ತಾನೆ.

ಪರಲೋಕವೇ ಇಲ್ಲವೆಂಬ ನಾಸ್ತಿಕವಾದ, ಸುಳ್ಳುಹೇಳುವುದು, ಕೋಪಗೊಳ್ಳುವುದು, ಕರ್ತವ್ಯದಲ್ಲಿ ಅಲಕ್ಷ್ಯ ಮತ್ತು ಅಕರ್ತವ್ಯದಲ್ಲಿ ಪ್ರವೃತ್ತಿ ವಿಳಂಬಿಸಿ ಕಾರ್ಯಮಾಡುವುದು , ಜ್ಞಾನಿಗಳನ್ನು ಸಂದರ್ಶಿಸದೇ ಇರುವುದು, ಆಲಸ್ಯ, ಪಂಚೇಂದ್ರಿಯಗಳನ್ನೂ ಹತೋಟಿಯಲ್ಲಿ ಇಟ್ಟುಕೊಳ್ಳದಿರುವುದು, ಅರ್ಥಸಾಧನೆಯ ಚಿಂತೆಯನ್ನು ಒಬ್ಬನೇ ಮಾಡುವುದು, ಅವಿವೇಕಿಗಳೊಡನೆ ಮಂತ್ರಾಲೋಚನೆ ಮಾಡುವುದು, ನಿಶ್ಚಯಿಸಿದ ಯೋಜನೆಗಳನ್ನು ಕಾಲಮೀರಿದರೂ ಪ್ರಾರಂಭಿಸದೆಯೇ ಇರುವುದು, ರಹಸ್ಯವಿಷಯಗಳನ್ನು ರಕ್ಷಿಸಿಕೊಳ್ಳದೇ ಇರುವುದು, ಮಂಗಳಾಚರಣೆಗಳಿಲ್ಲದೇ ಕಾರ್ಯಗಳನ್ನಾ ರಂಭಿಸುವುದು, ಯೋಗ್ಯರೇ ಬರಲಿ; ಅಯೋಗ್ಯರೇ ಬರಲಿ–ಯಾವ ವಿಧವಾದ ವ್ಯತ್ಯಾಸವನ್ನೂ ಎಣಿಸದೇ ಬಂದವರೆಲ್ಲರಿಗೂ ಎದ್ದುನಿಂತು ಸ್ವಾಗತ ನೀಡುವುದು–ಈ ಹದಿನಾಲ್ಕು ರಾಜದೋಷಗಳನ್ನು ವರ್ಜಿಸಿರುವೆಯಾ?

ದಶ ಪಞ್ಚ ಚತುರ್ವರ್ಗಾನ್ಸಪ್ತವರ್ಗಂ ಚ ತತ್ತ್ವತಃ ।
ಅಷ್ಟವರ್ಗಂ ತ್ರಿವರ್ಗಂ ಚ ವಿದ್ಯಾಸ್ತಿಸ್ರಶ್ಚ ರಾಘವ ॥೬೮॥

ಇನ್ದ್ರಿಯಾಣಾಂ ಜಯಂ ಬುದ್ಧ್ವಾ ಷಾಡ್ಗುಣ್ಯಂ ದೈವಮಾನುಷಮ್ ।
ಕೃತ್ಯಂ ವಿಂಶತಿವರ್ಗಂ ಚ ತಥಾ ಪ್ರಕೃತಿಮಣ್ಡಲಮ್ ॥೬೯॥

ಯಾತ್ರಾದಣ್ಡವಿಧಾನಂ ಚ ದ್ವಿಯೋನೀ ಸನ್ಧಿವಿಗ್ರಹೌ ।
ಕಚ್ಚಿದೇತಾನ್ಮಹಾಪ್ರಾಜ್ಞ ಯಥಾವದನುಮನ್ಯಸೇ ॥೭೦॥

ಭರತ! ಹತ್ತು, ಐದು, ನಾಲ್ಕು, ಏಳು–ಈ ವರ್ಗಗಳನ್ನು ನೀತಿ ಶಾಸ್ತ್ರಾನುಸಾರವಾಗಿ ತಿಳಿದುಕೊಂಡಿರುವೆಯಾ? ಮತ್ತು ಅದರಂತೆ ನಡೆ ಯುತ್ತಿರುವೆಯಾ? ಅಷ್ಟವರ್ಗ, ತ್ರಿವರ್ಗ, ಮೂರು ವಿದ್ಯೆಗಳು–ಇವುಗಳು ಯಾವುವೆಂಬುದು ನಿನಗೆ ತಿಳಿದಿರುವುದೇ? ಇಂದ್ರಿಯಗಳನ್ನು ಜಯಿಸುವ ಉಪಾಯವು ತಿಳಿದಿರುವುದೇ? ದೈವ ಮತ್ತು ಮಾನುಷಸಂಬಂಧವಾದ ಆರು ವ್ಯಸನಗಳನ್ನು ತಿಳಿದುಕೊಂಡಿರುವೆಯಾ? ಇಪ್ಪತ್ತು ವಿಧವಾದ ರಾಜರ ಕೃತ್ಯ ಗಳನ್ನು ತಿಳಿದಿರುವೆಯಾ? ಪಂಚಪ್ರಕೃತಿಗಳೂ, ದ್ವಾದಶಮಂಡಲಗಳೂ ನಿನಗೆ ತಿಳಿದಿರುವುವೇ? ಪಂಚವಿಧವಾದ ಯಾತ್ರೆಗಳೂ–ದಂಡವಿಧಾನವೂ ತಿಳಿದಿರು

ವುದೇ? ಮುಖ್ಯವಾದ ಸಂಧಿ-ವಿಗ್ರಹಗಳೆರಡನ್ನೂ ತಿಳಿದುಕೊಂಡಿರುವೆಯಾ? ರಾಜನಾದವನು ಅತ್ಯವಶ್ಯಕವಾಗಿ ತಿಳಿಯಬೇಕಾಗಿರುವ ಈ ವಿಷಯಗಳನ್ನು ತತ್ತ್ವತಃ ತಿಳಿದುಕೊಂಡು ಅದರಂತೆ ರಾಜ್ಯದ ವ್ಯವಹಾರಗಳನ್ನು ನಡೆಸುತ್ತಿರುವೆಯಲ್ಲವೇ?*

ಮನ್ತ್ರಿಭಿಸ್ತ್ವಂ ಯಥೋದ್ದಿಷ್ಟೈಶ್ಚತುರ್ಭಿಸ್ತ್ರಿಭಿರೇವ ವಾ ।
ಕಚ್ಚಿತ್ಸಮಸ್ತೈರ್ವ್ಯಸ್ತೈಶ್ಚ ಮನ್ತ್ರಂ ಮನ್ತ್ರಯಸೇ ಮಿಥಃ ॥೭೧॥

ಭರತ! ನೀತಿಶಾಸ್ತ್ರದಲ್ಲಿ ಹೇಳಿರುವಂತೆ ರಾಜ್ಯದ ಮುಖ್ಯವಿಚಾರಗಳನ್ನು ಮೂವರು ಮಂತ್ರಿಗಳೊಡನೆ ಅಥವಾ ನಾಲ್ವರು ಮಂತ್ರಿಗಳೊಡನೆ ಬೇರೆ-ಬೇರೆಯಾಗಿಯೂ ಹಾಗೂ ಒಟ್ಟಿಗೆ ಕಲೆತೂ ರಹಸ್ಯದಲ್ಲಿ ಸಮಾಲೋಚನೆಯನ್ನು ನಡೆಸುತ್ತಿರುವೆಯಲ್ಲವೇ?

ಕಚ್ಚಿತೇ ಸಫಲಾ ವೇದಾಃ ಕಚ್ಚಿತ್ತೇ ಸಫಲಾಃ ಕ್ರಿಯಾಃ ।
ಕಚ್ಚಿತ್ತೇ ಸಫಲಾ ದಾರಾಃ ಕಚ್ಚಿತ್ತೇ ಸಫಲಂ ಶ್ರುತಮ್ ॥೭೨॥

ಕುಮಾರ! ನೀನು ಮಾಡಿರುವ ವೇದಾಧ್ಯಯನವು ಅಗ್ನಿಹೋತ್ರಾದಿ ವೇದವಿಹಿತವಾದ ಕರ್ಮಾನುಷ್ಠಾನಗಳನ್ನು ಮಾಡುವುದರಿಂದ ಸಫಲ ವಾಗಿರುವುದೇ? ನೀನು ಮಾಡಿರುವ ಅಥವಾ ಮಾಡಿಸಿರುವ ಕಾರ್ಯಗಳು (ಯೋಜನೆಗಳು) ರಾಷ್ಟ್ರಾಭಿವೃದ್ಧಿದಾಯಕಗಳಾದ ಪ್ರತಿಫಲಗಳನ್ನು ಕೊಟ್ಟವೆಯೇ? ನಿನ್ನ ವೈವಾಹಿಕಜೀವನವು ರತಿಸುಖವನ್ನೂ, ಸತ್ಸಂತಾನವನ್ನೂ ಕೊಡುವುದರ ಮೂಲಕ ಸಫಲವಾಗಿರುವುದೇ? ಶಾಸ್ತ್ರಾಭ್ಯಾಸವು ನಿನ್ನ ಮನಸ್ಸನ್ನು ಸನ್ಮಾರ್ಗದಲ್ಲಿ ಒಯ್ಯುವುದರ ಮೂಲಕ ಸಫಲವಾಗಿರುವುದೇ?[1]

---

*ವಿವರಣೆಯನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ.

[1]ವೇದಾಧ್ಯಯನಕ್ಕೆ ಪ್ರಯೋಜನವು ಅಗ್ನಿಹೋತ್ರಾದಿಗಳನ್ನು ಮಾಡುವುದೆಂಬುದು ಮಹಾಭಾರತದಲ್ಲಿ ಸ್ಪಷ್ಟವಾಗಿದೆ. ಅಗ್ನಿಹೋತ್ರಾಫಲಾ ವೇದಾಃ ದತ್ತಭುಕ್ತಫಲಂ ಧನಮ್। ರತಿಪುತ್ರಫಲಾ ದಾರಾಃ ಶೀಲವೃತ್ತಫಲಂ ಶ್ರುತಮ್ ॥ ವೇದಗಳಿಗೆ ಅಗ್ನಿಹೋತ್ರಾದಿ ಕರ್ಮಾನುಷ್ಠಾನಗಳೇ ಫಲ; ಹಣಕ್ಕೆ ದಾನ-ಭೋಗಗಳೇ ಫಲ; ಹೆಂಡತಿಗೆ ರತಿಸುಖ ಮತ್ತು ಸಂತಾನಗಳೇ ಫಲ; ಶಾಸ್ತ್ರಾಭ್ಯಾಸಕ್ಕೆ ಒಳ್ಳೆಯ ಸ್ವಭಾವ ಮತ್ತು ನಡತೆಗಳೇ ಫಲ.

ಕಚ್ಚಿದೇಷೈವ ತೇ ಬುದ್ಧಿರ್ಯಥೋಕ್ತಾ ಮಮ ರಾಘವ ।
ಆಯುಷ್ಯಾ ಚ ಯಶಸ್ಯಾ ಚ ಧರ್ಮಕಾಮಾರ್ಥಸಂಹಿತಾ ॥೭೩॥

ರಾಘವ! ನಾನು ಹೇಳಿದಂತೆಯೇ ನಿನ್ನ ಬುದ್ಧಿಯೂ ಇರುವುದಲ್ಲವೇ? ಧರ್ಮ-ಕಾಮಾರ್ಥಗಳಿಂದ ಕೂಡಿರುವ ನನ್ನ ಈ ಉಪದೇಶವು ಆಯುಷ್ಯವನ್ನೂ ಯಶಸ್ಸನ್ನೂ ಹೆಚ್ಚಿಸುತ್ತದೆ.

ಯಾಂ ವೃತ್ತಿಂ ವರ್ತತೇ ತಾತೋ ಯಾಂ ಚ ನಃಪ್ರಪಿತಾಮಹಾಃ ।
ತಾಂ ವೃತ್ತಿಂ ವರ್ತಸೇ ಕಚ್ಚಿದ್ಯಾ ಚ ಸತ್ಪಥಗಾ ಶುಭಾ ॥೭೪॥

ನಮ್ಮ ತಂದೆಯಾದ ದಶರಥಮಹಾರಾಜನು ಯಾವ ಧರ್ಮವೃತ್ತಿಯನ್ನು ಅವಲಂಬಿಸಿ ರಾಜ್ಯಭಾರಮಾಡುತ್ತಿದ್ದನೋ ಮತ್ತು ನಮ್ಮ ಪ್ರಪಿತಾಮಹರು ಯಾವ ಧರ್ಮಮಾರ್ಗವನ್ನು ಅನುಸರಿಸಿ ರಾಜ್ಯ ವಾಳುತ್ತಿದ್ದರೋ–ಅಂತಹ ಧರ್ಮವೃತ್ತಿಯನ್ನೇ ನೀನೂ ಅವಲಂಬಿಸಿ ರುವೆಯಲ್ಲವೇ? ನಿಶ್ಚಯವಾಗಿಯೂ ಅವರು ಅನುಸರಿಸಿರುವ ಮಾರ್ಗವು ಶುಭದಾಯಕವಾದ ಸನ್ಮಾರ್ಗವು.*

ಕಚ್ಚಿತ್ಸ್ವಾದುಕೃತಂ ಭೋಜ್ಯಮೇಕೋ ನಾಶ್ನಾಸಿ ರಾಘವ ।
ಕಚ್ಚಿದಾಶಂಸಮಾನೇಭ್ಯೋ ಮಿತ್ರೇಭ್ಯಃ ಸಂಪ್ರಯಚ್ಛಸಿ ॥೭೫॥

ಬಹಳ ರುಚಿಕರವಾಗಿ ಮಾಡಿದ ಭಕ್ಷ್ಯ-ಭೋಜ್ಯಗಳನ್ನು ನೀನೊಬ್ಬನೇ ಕುಳಿತು ತಿನ್ನುವುದಿಲ್ಲವಲ್ಲವೇ? ನಿನ್ನನ್ನು ಸ್ತುತಿಮಾಡುವವರಿಗೆ (ಸ್ತುತಿಮಾಡಿ ಬೇಡುವವರಿಗೆ) ಮಿತ್ರರಿಗೆ ಯಥೋಚಿತವಾಗಿ ಹಣವನ್ನು ಕೊಡುವೆಯಲ್ಲವೇ? (ಭಕ್ಷ್ಯ-ಭೋಜ್ಯಾದಿಗಳನ್ನು ಕೊಡುವೆಯಲ್ಲವೇ?)

---

*ಇಲ್ಲಿ "ಯಾಂ ವೃತ್ತಿಂ ತಾತೋ ವರ್ತತೇ" ಎಂಬುದಕ್ಕೆ "ಯಾವ ಧರ್ಮಮಾರ್ಗವನ್ನು ತಂದೆಯು ಅನುಸರಿಸುತ್ತಿರುವನೋ" ಎಂದು ವರ್ತಮಾನಕಾಲದ ಅರ್ಥವನ್ನು ಹೇಳಿದರೆ ದಶರಥನಿನ್ನೂ ರಾಜ್ಯಭಾರವನ್ನು ಮುಂದುವರಿಸುತ್ತಲೇ ಇರುವನೆಂಬ ಅರ್ಥವನ್ನು ಕೊಡುತ್ತದೆ. ದಶರಥನು ಭರತನಿಗೆ ರಾಜ್ಯಾಭಿಷೇಕವನ್ನು ಮಾಡಿರುವನೆಂದೇ ಭಾವಿಸಿ ರಾಮನಲ್ಲಿ ಮಾತನಾಡುತ್ತಿದ್ದಾನೆ. ದಶರಥನು ಮೃತನಾಗಿರುವ ವಿಷಯವು ರಾಮನಿಗಿನ್ನೂ ತಿಳಿಯದು. ಆದುದರಿಂದ ಭೂತಕಾಲದ ಅರ್ಥವನ್ನೇ "ವರ್ತತೇ" ಎಂಬುದಕ್ಕೆ ಹೇಳಿದರೆ ಪ್ರಪಿತಾಮಹಾಃ, ತಾತಃ ಎಂಬ ಎರಡೂ ಪದಗಳಿಗೂ ಸಮನ್ವಯವಾಗುತ್ತದೆ. ಪಿತಾಮಹನನ್ನು ಬಿಟ್ಟು ಪ್ರಪಿತಾಮಹನೆಂದು ಹೇಳಿರು

ರಾಜಾ ತು ಧರ್ಮೇಣ ಹಿ ಪಾಲಯಿತ್ವಾ
ಮಹಾಮತಿರ್ದಣ್ಡಧರಃ ಪ್ರಜಾನಾಮ್ ।
ಅವಾಪ್ಯ ಕೃತ್ಸ್ನಾಂ ವಸುಧಾಂ ಯಥಾವ-
ದಿತಶ್ಚ್ಯುತಃ ಸ್ವರ್ಗಮುಪೈತಿ ವಿದ್ವಾನ್ ॥೭೬॥

ಭರತ! ನೀತಿಶಾಸ್ತ್ರಜ್ಞನಾದ, ಮಹಾಬುದ್ಧಿಶಾಲಿಯಾದ, ಸಾಮ-ದಾನ-ಭೇದ-ದಂಡೋಪಾಯಗಳನ್ನು ಚೆನ್ನಾಗಿ ತಿಳಿದಿರುವ ರಾಜನು ಪ್ರಜೆಗಳನ್ನು ಧರ್ಮದಿಂದ ಪರಿಪಾಲನೆಮಾಡುತ್ತಾ ಸಕಲ ಸಂಪತ್ಸಮೃದ್ಧವಾದ ಭೂಮಿಯನ್ನು ಹೊಂದಿ (ಭೂಮಿಯಲ್ಲಿರುವ ಸುಖೋಪಭೋಗ ಗಳನ್ನನುಭವಿಸಿ) ಅವಸಾನಾನಂತರದಲ್ಲಿ ಸ್ವರ್ಗವನ್ನು ಸೇರುತ್ತಾನೆ. (ಸ್ವರ್ಗಕ್ಕೆ ಹೋಗಿ ಅಲ್ಲಿಯ ಸುಖೋಪಭೋಗಗಳನ್ನೂ ಅನುಭವಿಸುತ್ತಾನೆ. ನೀತಿಪರನಾದ, ಧರ್ಮಿಷ್ಠನಾದ ರಾಜನಿಗೆ ಇಹ-ಪರಗಳೆರಡರಲ್ಲಿಯೂ ಸೌಖ್ಯವುಂಟು)"

೧೦೦ನೆಯ ಸರ್ಗವು ಮುಗಿಯಿತು.*

ವುದಕ್ಕೆ ಒಬ್ಬ ವ್ಯಾಖ್ಯಾನಕಾರರು–ಪಿತಾಮಹನಾದ ಅಜನು ಹೆಚ್ಚುಕಾಲ ರಾಜ್ಯಭಾರ ಮಾಡದೇ ಇದ್ದುದರಿಂದ ಪ್ರಪಿತಾಮಹ ಎಂದು ಹೇಳಲಾಗಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ.

*ನೂರನೆಯ ಸರ್ಗವಾದನಂತರ "ತಂ ತು ರಾಮಃ ಸಮಾಜ್ಞಾಯ" ಎಂಬ ಶ್ಲೋಕದಿಂದ ಪ್ರಾರಂಭವಾಗುವುದು ೧೦೧ನೇ ಸರ್ಗವೆಂದೂ–ರಾಮಸ್ಯ ವಚನಂ ಶ್ರುತ್ವಾ–ಎಂಬುದು ೧೦೨ನೆಯ ಸರ್ಗವೆಂದೂ ತಿಲಕವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ. ಇದು ೧೦೪ನೆಯ ಸರ್ಗವೆಂತಲೂ "ರಾಮಸ್ಯ ವಚನಂ ಶ್ರುತ್ವಾ" ಎಂಬ ಶ್ಲೋಕದಿಂದ ಆರಂಭಗೊಳ್ಳುವ ಸರ್ಗವೇ ೧೦೧ನೆಯ ಸರ್ಗವೆಂತಲೂ ಶಿರೋಮಣಿ ಮತ್ತು ಗೋವಿಂದರಾಜೀಯ ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ. ರಾಮಸ್ಯ ವಚನಂ ಶ್ರುತ್ವಾ ಎಂಬುದನ್ನು ೧೦೧ನೆಯ ಸರ್ಗವನ್ನಾಗಿ ತೆಗೆದುಕೊಂಡರೆ ಕಥಾನುವರ್ತನೆಯೂ– ಸರಿಯಾಗಿ ಹೊಂದುತ್ತದೆ. ಇದೇ ರೀತಿಯ ಪಾಠಕ್ರಮವು ಇನ್ನೂ ಹಲವಾರು ರಾಮಾಯಣಪುಸ್ತಕಗಳಲ್ಲಿಯೂ ಕಂಡುಬಂದಿದೆ. ಆದುದರಿಂದ ನಾವೂ ಸಹ ಗೋವಿಂದರಾಜೀಯಪಾಠದ ಪ್ರಕಾರ "ರಾಮಸ್ಯ ವಚನಂ ಶ್ರುತ್ವಾ" ಎಂಬ ಶ್ಲೋಕದಿಂದ ಪ್ರಾರಂಭವಾಗುವ ಸರ್ಗವನ್ನೇ ೧೦೧ನೆಯ ಸರ್ಗವೆಂದು ನಿಶ್ಚಯಿಸಿ ಪ್ರಕಟಿಸಿದ್ದೇವೆ.

ಭರತನು ರಾಜ್ಯವನ್ನು ಸ್ವೀಕರಿಸುವಂತೆ ಶ್ರೀರಾಮನನ್ನು ಪ್ರಾರ್ಥಿಸುತ್ತಾ ತಂದೆಯು ಸ್ವರ್ಗಸ್ಥನಾದ ಸಮಾಚಾರವನ್ನು ತಿಳಿಸಿದುದು

ರಾಮಸ್ಯ ವಚನಂ ಶ್ರುತ್ವಾ ಭರತಃ ಪ್ರತ್ಯುವಾಚ ಹ ।
ಕಿಂ ಮೇ ಧರ್ಮಾದ್ವಿಹೀನಸ್ಯ ರಾಜಧರ್ಮಃ ಕರಿಷ್ಯತಿ ॥೧॥

ಶ್ರೀರಾಮನ ಉಪದೇಶವನ್ನು ಕೇಳಿ ಭರತನು ಹೇಳಿದನು:

"ಅಣ್ಣ! ಧರ್ಮವಿಹೀನನಾಗಿರುವ ನನಗೆ ರಾಜಧರ್ಮವೇನು ಮಾಡುತ್ತದೆ?

ಜ್ಯೇಷ್ಠಪುತ್ರನಿರುವಾಗ ಕನಿಷ್ಠನು ರಾಜನಾಗಕೂಡದೆಂಬ ಶಾಶ್ವತವಾದ, ಶ್ರೇಯಸ್ಕರವಾದ ಈ ಧರ್ಮವು ನಮ್ಮ ವಂಶದಲ್ಲಿ ಬಹಳ ಕಾಲದಿಂದಲೂ ನಡೆದುಕೊಂಡು ಬಂದಿದೆ. ಇದನ್ನು ಮೀರಿದರೆ ನಾನು ಧರ್ಮಹೀನ ನಾದಂತಾಗುವುದಿಲ್ಲವೇ? ಸಕಲವಾದ ಸಂಪತ್ತಿನಿಂದಲೂ ಸಮೃದ್ಧವಾಗಿರುವ ಅಯೋಧ್ಯೆಗೆ ನೀನೀಗಲೇ ಪ್ರಯಾಣಮಾಡು. ನಮ್ಮ ವಂಶದ ಶುಭೋದಯಕ್ಕಾಗಿ ಪಟ್ಟಾಭಿಷಿಕ್ತನಾಗು.

ರಾಜಾನಂ ಮಾನುಷಂ ಪ್ರಾಹುರ್ದೇವತ್ವೇ ಸಂಮತೋ ಮಮ ।
ಯಸ್ಯ ಧರ್ಮಾರ್ಥಸಹಿತಂ ವೃತ್ತಮಾಹುರಮಾನುಷಮ್ ॥೪॥

ರಾಜನೂ ಒಬ್ಬ ಮನುಷ್ಯಮಾತ್ರದವನೆಂದು ಪ್ರಾಕೃತಜನರು ಹೇಳುತ್ತಾರೆ. ಆದರೆ ರಾಜನನ್ನು ದೇವತ್ವದಿಂದ ಕಾಣುವುದೇ ನನಗೆ ಸಮ್ಮತ. ಏಕೆಂದರೆ: ಧರ್ಮಾರ್ಥಸಹಿತವಾದ ಕರ್ತವ್ಯದ ಪಾಲನೆಯು ನಿಶ್ಚಯವಾಗಿಯೂ ಅಮಾನುಷವಾದುದು. ಸಾಮಾನ್ಯಮನುಷ್ಯರಿಂದ ಆಚರಿಸಲು ಸಾಧ್ಯವಾಗುವಂತಹುದಲ್ಲ.

ಅಣ್ಣ! ನಾನು ಕೇಕಯದೇಶದಲ್ಲಿದ್ದಾಗ–ನೀನೂ ಅರಣ್ಯವಾಸಕ್ಕೆ ಬಂದುಬಿಟ್ಟಾಗ–ಯಜ್ಞಶೀಲನಾದ ಮತ್ತು ಸತ್ಪುರುಷರಿಗೆ ಇಷ್ಟನಾಗಿದ್ದ ನಮ್ಮ ರಾಜನು ಸ್ವರ್ಗಸ್ಥನಾದನು. ನೀನು ಲಕ್ಷ್ಮಣ-ಸೀತೆಯರೊಡನೆ

ಅರಣ್ಯಕ್ಕೆ ಹೊರಟೊಡನೆಯೇ ದುಃಖ-ಶೋಕಗಳಿಂದ ಪೀಡಿತನಾಗಿ ರಾಜನು ದಿವಂಗತನಾದನು.

ಪುರುಷಶ್ರೇಷ್ಠನೇ! ಏಳು. ತಂದೆಗೆ ಉದಕಕ್ರಿಯೆಗಳನ್ನು ಮಾಡು. ನಾನೂ ಮತ್ತು ಶತ್ರುಘ್ನನೂ ಈ ಮೊದಲೇ ಔರ್ಧ್ವದೈಹಿಕಕರ್ಮಗಳನ್ನು ಮಾಡಿದ್ದೇವೆ.

ಪ್ರಿಯೇಣ ಖಲು ದತ್ತಂ ಹಿ ಪಿತೃಲೋಕೇಷು ರಾಘವ ।
ಅಕ್ಷಯ್ಯಂ ಭವತೀತ್ಯಾಹುರ್ಭವಾಂಶ್ಚೈವ ಪಿತುಃ ಪ್ರಿಯಃ ॥೮॥

ಅಕ್ಕರೆಯ ಮಗನಿಂದ ಕೊಡಲ್ಪಡುವ ತರ್ಪಣವು ಪಿತೃಲೋಕಗಳಲ್ಲಿ ಅಕ್ಷಯವಾದ ಫಲವನ್ನು ನೀಡುವುದೆಂದು ತಿಳಿದವರು ಹೇಳುತ್ತಾರೆ. ನೀನಾದರೋ ತಂದೆಗೆ ಪರಮಪ್ರಿಯನಾದ ಮಗನಾಗಿರುವೆ.

ತ್ವಾಮೇವ ಶೋಚಂಸ್ತವ ದರ್ಶನೇಪ್ಸು-
ಸ್ತ್ವಯ್ಯೇವ ಸಕ್ತಾಮನಿವರ್ತ್ಯ ಬುದ್ಧಿಮ್ ।
ತ್ವಯಾ ವಿಹೀನಸ್ತವ ಶೋಕರುಗ್ಣ-
ಸ್ತ್ವಾಂ ಸಂಸ್ಮರನ್ಸ್ವರ್ಗಮವಾಪ ರಾಜಾ ॥೯॥

ಅಣ್ಣ! ನಿನ್ನ ವಿಯೋಗದುಃಖವನ್ನು ತಾಳಲಾರದೇ ನಿನಗಾಗಿ ನಮ್ಮ ತಂದೆಯು ಶೋಕಪಡುತ್ತಿದ್ದನು. ನಿನ್ನನ್ನು ಪುನಃ ನೋಡಬೇಕೆಂದು ಹಂಬಲಿಸುತ್ತಿದ್ದನು. ನಿನ್ನಲ್ಲಿಯೇ ಅವನ ಬುದ್ಧಿಯು ಲೀನವಾಗಿ ಹೋಗಿದ್ದಿತು. ನಿನ್ನಿಂದವನು ತನ್ನ ಮನಸ್ಸನ್ನು ಹಿಂತೆಗೆದುಕೊಳ್ಳಲೇ ಇಲ್ಲ. ನಿನ್ನಿಂದ ವಿಹೀನನಾಗಿ ಪುತ್ರವಿಯೋಗವೆಂಬ ಮನೋರೋಗಕ್ಕೆ ತುತ್ತಾಗಿ ನಿನ್ನನ್ನೇ ಸ್ಮರಿಸುತ್ತಾ ಸ್ವರ್ಗಕ್ಕೆ ಹೊರಟುಹೋದನು.”

ಹಿನೆಯ ಸರ್ಗವು ಮುಗಿಯಿತು.

ತಂದೆಯ ಮರಣವಾರ್ತೆಯನ್ನು ಕೇಳಿ ರಾಮನೇ ಮೊದಲಾದವರ ದುಃಖಃ ತಂದೆಗಾಗಿ ಜಲಾಂಜಲಿಯನ್ನಿತ್ತು ಪಿಂಡಪ್ರದಾನ ಮಾಡಿದುದು

ತಾಂ ಶ್ರುತ್ವಾ ಕರುಣಾಂ ವಾಚಂ ಪಿತುರ್ಮರಣಸಂಹಿತಾಮ್ ।
ರಾಘವೋ ಭರತೇನೋಕ್ತಾಂ ಬಭೂವ ಗತಚೇತನಃ ॥೧॥

ಭರತನು ಹೇಳಿದ ಅತ್ಯಂತಶೋಕದಾಯಕವಾದ ತಂದೆಯ ಮರಣಕ್ಕೆ ಸಂಬಂಧಿಸಿದ ಆ ಮಾತನ್ನು ಕೇಳಿದೊಡನೆಯೇ ಶ್ರೀರಾಮನು ಮೂರ್ಛಿತನಾದನು.

ಯುದ್ಧದಲ್ಲಿ ದಾನವರ ಶತ್ರುವಾದ ದೇವೇಂದ್ರನಿಂದ ಪ್ರಯೋಗಿಸಲ್ಪಟ್ಟ ವಜ್ರಾಯುಧದಂತೆ–ಬಹುಕಠೋರವಾಗಿದ್ದ, ಮನಸ್ಸಿಗೆ ಬೇಡವಾದ, ವಾಗ್ವಜ್ರರೂಪವಾದ ಭರತನು ಹೇಳಿದ ತಂದೆಯ ಮರಣವಾರ್ತೆಯನ್ನು ಕೇಳಿ ರಾಮನು ತೋಳುಗಳನ್ನು ಮೇಲಕ್ಕೆ ಎತ್ತಿ–ಪುಷ್ಪಭರಿತವಾಗಿರುವ ಮರವೊಂದು ಕೊಡಲಿಯಿಂದ ಕತ್ತರಿಸಲ್ಪಟ್ಟು ಕೆಳಗೆ ಬೀಳುವಂತೆ–ಬಿದ್ದನು. ನದಿಯ ದಂಡೆಯನ್ನು ಸೊಂಡಿಲಿನಿಂದಲೂ, ಕೊಂಬುಗಳಿಂದಲೂ ಸತತವಾಗಿ ಉಜ್ಜಿ, ಬಳಲಿ ಮಲಗಿರುವ ಆನೆಯೋಪಾದಿಯಲ್ಲಿ ಮೂರ್ಛಿತನಾಗಿ ನೆಲದ ಮೇಲೆ ಬಿದ್ದಿದ್ದ, ಜಗತೀಪತಿಯಾದ, ಮಹಾಧನುಸ್ಸನ್ನು ಧರಿಸಿದ್ದ, ಶೋಕಾಭಿಭೂತನಾಗಿದ್ದ ಶ್ರೀರಾಮನನ್ನು ಮೂವರು ಅನುಜರೂ ಸುತ್ತುವರಿದು ವೈದೇಹಿಯೊಡಗೂಡಿ ಅಳುತ್ತಾ ನೀರುತಟ್ಟಿ ಉಪಚರಿಸಿದರು. ಶೀತೋದಕದಿಂದ ಉಪಚರಿಸಲ್ಪಟ್ಟ ಶ್ರೀರಾಮನು ಮೂರ್ಛೆಯಿಂದ ಎಚ್ಚೆತ್ತು ಕಣ್ಣುಗಳೆರಡರಿಂದಲೂ ದುಃಖಾಶ್ರುವನ್ನು ಸುರಿಸುತ್ತಾ ಕರುಣಾಪೂರ್ಣವಾದ ಮಾತುಗಳನ್ನಾಡಲು ಉಪಕ್ರಮಿಸಿದನು. ಧರ್ಮಾತ್ಮನಾದ ಶ್ರೀರಾಮನು–ಪೃಥಿವೀಪತಿಯಾದ ತಂದೆಯು ಸ್ವರ್ಗಸ್ಥನಾದನೆಂಬ ಮಾತನ್ನು ಭರತನಿಂದ ಕೇಳಿ ಧರ್ಮಸಮ್ಮತವಾದ ಈ ಮಾತುಗಳನ್ನು ಹೇಳಿದನು:

“ಅಯ್ಯೋ! ತಂದೆಯು ಕಾಲವಾದ ಬಳಿಕ ಅಯೋಧ್ಯೆಗೆ ಬಂದು ನಾನೇನು ಮಾಡಲಿ? ರಾಜಶ್ರೇಷ್ಠನಾದ ದಶರಥಮಹಾರಾಜನಿಂದ ವಿಹೀನ

ವಾದ ಅಯೋಧ್ಯಾಪಟ್ಟಣವನ್ನು ಮತ್ತಾರು ರಕ್ಷಿಸುತ್ತಾರೆ? ಆ ಮಹಾನುಭಾವನಿಗೆ ನಾನು ಮಗನಾಗಿ ಹುಟ್ಟಿಯೂ ಪ್ರಯೋಜನವಾಗಲಿಲ್ಲ. ನನ್ನ ಜನ್ಮವೇ ನಿಶ್ಚಯವಾಗಿಯೂ ವ್ಯರ್ಥವಾಗಿ ಹೋಯಿತು. ಯಾವ ಮಹಾನುಭಾವನು ನನ್ನ ವಿಯೋಗಶೋಕದಿಂದಲೇ ಮರಣಹೊಂದಿದನೋ– ಅಂತಹವನಿಗೆ ನಾನು ಉತ್ತರಕ್ರಿಯೆಯನ್ನೂ ಮಾಡಲಾಗಲಿಲ್ಲ. ನಿಷ್ಪಾಪನೇ! ಭರತ! ನೀನೇ ಸಿದ್ಧಾರ್ಥನು. ಮಹಾಪುಣ್ಯಶಾಲಿಯು. ಶತ್ರುಘ್ನನೊಡನೆ ರಾಜನನ್ನು ಸಮಸ್ತವಾದ ಪ್ರೇತಕಾರ್ಯಗಳ ಮೂಲಕವಾಗಿ ಸಂಸ್ಕರಿಸಿದೆ. ನರೇಂದ್ರನಾದ ದಶರಥನಿಂದ ಹೀನವಾದ ಅದರಿಂದಲೇ ಪ್ರಧಾನನಾಯಕ ನಿಲ್ಲದ, ವ್ಯಾಕುಲಗೊಂಡಿರುವ ಅಯೋಧ್ಯಾನಗರಿಯನ್ನು ವನವಾಸವು ಮುಗಿದ ನಂತರವೂ ಪ್ರವೇಶಿಸಲು ನಾನು ಇಚ್ಛೆಯುಳ್ಳವನಾಗಿಲ್ಲ. ಪರಂತಪನೇ! ನಮ್ಮ ತಂದೆಯು ಲೋಕಾಂತರ ಹೊಂದಿರುವಾಗ ಹದಿನಾಲ್ಕು ವರ್ಷಗಳ ವನವಾಸವನ್ನು ಮುಗಿಸಿ ಅಯೋಧ್ಯೆಗೆ ಮತ್ತೆ ಬರುವ ನನಗೆ ಧರ್ಮಾಧರ್ಮಗಳ ವಿಷಯದಲ್ಲಿ ತಿಳಿವಳಿಕೆಯನ್ನು ಕೊಡುವವರು ಯಾರಿದ್ದಾರೆ? ಅವನ ನಿರ್ದೇಶಾನುಸಾರವಾಗಿ ನಡೆದುಕೊಳ್ಳುತ್ತಿದ್ದ ನನ್ನ ಸದ್ವೃತ್ತಿಯನ್ನೂ, ವಿಧೇಯತೆಯನ್ನೂ ನೋಡಿ ನನ್ನನ್ನು ಸಂತೈಸಿ ಕರ್ಣಾನಂದಕರವಾದ ಮಧುರವಾಕ್ಯಗಳನ್ನು ಹೇಳುತ್ತಿದ್ದನು. ಇನ್ನು ಮೇಲೆ ಅಂತಹ ಸುಮಧುರವಾಕ್ಯಗಳನ್ನು ನಾನು ಯಾರಿಂದ ಕೇಳಲಿ?"

ರಾಘವನು ಭರತನಿಗೆ ಹೀಗೆ ಹೇಳಿ, ಪೂರ್ಣಚಂದ್ರನಿಗೆ ಸದೃಶವಾದ ಮುಖಕಾಂತಿಯಿಂದ ಕೂಡಿದ್ದ, ಭಾರ್ಯೆಯಾದ ಸೀತಾದೇವಿಗೆ ಅಭಿಮುಖವಾಗಿ ನಿಂತು ಶೋಕಸಂತಪ್ತನಾಗಿ ಹೇಳಿದನು:

"ಸೀತೆ! ನಿನ್ನ ಮಾವನು ಸತ್ತುಹೋದನು" ಲಕ್ಷ್ಮಣನ ಕಡೆಗೆ ತಿರುಗಿ "ಲಕ್ಷ್ಮಣ! ನೀನೂ ಪಿತೃಹೀನನಾದೆಯಪ್ಪಾ! ದಶರಥರಾಜನು ಸ್ವರ್ಗಸ್ಥನಾದ ದುಃಖವಾರ್ತೆಯನ್ನು ಭರತನು ಹೇಳುತ್ತಿದ್ದಾನೆ" ಎಂದು ಹೇಳುತ್ತಾ ಕಣ್ಣೀರಿಟ್ಟನು.

ಶ್ರೀರಾಮನು ಹೀಗೆ ಹೇಳುತ್ತಿರಲಾಗಿ ಯಶಸ್ವಿಗಳಾದ ಆ ರಾಜ

ಕುಮಾರರ ಕಣ್ಣುಗಳಿಂದ ಕಂಬನಿಯು ಅಪಾರವಾಗಿ ಸುರಿಯುತ್ತಿದ್ದಿತು. ಭರತ-ಶತ್ರುಘ್ನ-ಲಕ್ಷ್ಮಣರು ಬಹುದುಃಖಿತನಾದ ಜಗತ್ತಿಗೇ ಪತಿಯಾದ ರಾಮನನ್ನು ಬಹಳ ಕಷ್ಟದಿಂದ ಸಮಾಧಾನಮಾಡುತ್ತಾ ತಂದೆಗೆ ಸಲಿಲ ಕ್ರಿಯೆಯನ್ನು ಮಾಡುವಂತೆ ಪ್ರಾರ್ಥಿಸಿದರು. ಸೀತೆಯಾದರೋ ಮಾವನಾದ ದಶರಥರಾಜನು ಸ್ವರ್ಗಸ್ಥನಾದನೆಂಬ ಮಾತನ್ನು ಕೇಳಿದೊಡನೆಯೇ ಕಂಬನಿಗಳನ್ನು ಸುರಿಸುತ್ತಾ, ಹತ್ತಿರದಲ್ಲಿಯೇ ನಿಂತಿದ್ದ ಪ್ರಿಯನನ್ನು ನೋಡಲೂ ಅಸಮರ್ಥಳಾದಳು. ಮಾವನು ಸ್ವರ್ಗಸ್ಥನಾದ ದಾರುಣ ವಾರ್ತೆಯನ್ನು ಕೇಳಿ ರೋದನಮಾಡುತ್ತಿದ್ದ ಬಹುದುಃಖಿತನಾದ ರಾಮನು ಜನಕನ ಮಗಳಾದ ಸೀತೆಯನ್ನು ಸಂತೈಸುತ್ತಾ ದುಃಖಾರ್ತನಾದ ಲಕ್ಷ್ಮಣನಿಗೆ ಹೇಳಿದನು :

"ಲಕ್ಷ್ಮಣ! ಹಿಪ್ಪೆಯ ಕಾಯಿಯಿಂದ ಸಿದ್ಧಮಾಡಿದ ಹಿಂಡಿಯನ್ನೂ, ನೂತನವಾದ ನಾರುಮಡಿಯನ್ನೂ ತೆಗೆದುಕೊಂಡುಬಾ. ಮಹಾತ್ಮನಾದ ನಮ್ಮ ತಂದೆಯ ಸಲಿಲಕ್ರಿಯೆಗಾಗಿ ನದಿಗೆ ಹೋಗುತ್ತೇನೆ. ಸೀತೆಯು ಮುಂದೆ ನಡೆಯಲಿ. ಅವಳ ಹಿಂದೆ ನೀನು ಹೊರಡು. ನಿಮ್ಮ ಹಿಂದೆ ನಾನು ಬರುತ್ತೇನೆ. ಶೋಕಸಂತಪ್ತರಾದವರು ಇದೇ ವಿಧಾನವನ್ನನುಸರಿಸಿ ಹೋಗಬೇಕು."

ಇಕ್ಷ್ವಾಕುವಂಶೀಯರ ನಿಕಟವರ್ತಿಯೂ, ಪ್ರಖ್ಯಾತನೂ (ಆತ್ಮ ಜ್ಞಾನಿಯೂ), ಮಹಾಬುದ್ಧಿಶಾಲಿಯೂ, ಸರಳಸ್ವಭಾವವುಳ್ಳವನೂ, ಜಿತೇಂದ್ರಿಯನೂ, ಶಾಂತಸ್ವಭಾವವುಳ್ಳವನೂ, ರಾಮನಲ್ಲಿ ದೃಢವಾದ ಭಕ್ತಿ ಯುಳ್ಳವನೂ ಆದ ಸುಮಂತ್ರನು ಆ ರಾಜಕುಮಾರರೊಡನೆ ರಾಮನನ್ನು ನಯ-ವಿನಯದ ಮಾತುಗಳಿಂದ ಸಂತೈಸುತ್ತಾ ಕೈಹಿಡಿದು ಮಂಗಳಕರ ವಾದ ಮಂದಾಕಿನೀನದಿಗೆ ಕರೆದೊಯ್ದು ನದಿಗೆ ಇಳಿಸಿದನು. ಸೀತಾ ಪ್ರಮುಖರಾದ ಯಶಸ್ವಿಗಳಾದ ಆ ರಾಜಕುಮಾರರು ಪುಣ್ಯತೀರ್ಥದಿಂದ ಕೂಡಿದ್ದ, ಬಹುರಮ್ಯವಾಗಿದ್ದ, ಸದಾ ಪುಷ್ಪಭರಿತವಾದ ವೃಕ್ಷಗಳುಳ್ಳ ಕಾನನದಿಂದ ಆವೃತವಾಗಿದ್ದ, ರಭಸವಾದ ಪ್ರವಾಹದಿಂದ ಕೂಡಿದ್ದ ಮಂದಾಕಿನೀನದಿಯನ್ನು ಸೇರಿ ಕೆಸರಿಲ್ಲದ ಬಹುಪರಿಶುದ್ಧವಾದ ತೀರ್ಥದಲ್ಲಿ ಇಳಿದು "**ಹೇ ತಾತ! ತುಭ್ಯಮೇತದ್ಭವತು**" "ತಂದೆಯೇ! ಈ

ತೀರ್ಥವು ನಿನಗೆ ಅರ್ಪಿತವಾಗಲಿ” ಎಂದು ಹೇಳಿ ದಶರಥರಾಜನ ಸಲುವಾಗಿ ಜಲತರ್ಪಣವನ್ನು ಬಿಟ್ಟರು. ಮಹೀಪಾಲನಾದ ಶ್ರೀರಾಮನು ಬೊಗಸೆಯಲ್ಲಿ ನೀರುತುಂಬಿಕೊಂಡು ದಕ್ಷಿಣಾಭಿಮುಖವಾಗಿ ನದಿಯಲ್ಲಿ ನಿಂತುಕೊಂಡು ಕಣ್ಣೀರಿಡುತ್ತಾ ಹೇಳಿದನು:

ಏತತ್ತೇ ರಾಜಶಾರ್ದೂಲ ವಿಮಲಂ ತೋಯಮಕ್ಷಯಮ್ ।
ಪಿತೃಲೋಕಗತಸ್ಯಾದ್ಯ ಮದ್ದತ್ತಮುಪತಿಷ್ಠತು ॥೨೭॥

“ರಾಜಶ್ರೇಷ್ಠನೇ! ನಾನು ಸಮರ್ಪಿಸುವ ನಿರ್ಮಲವೂ ಕ್ಷಯ ರಹಿತವೂ ಆದ ಈ ಜಲತರ್ಪಣವು ಪಿತೃಲೋಕದಲ್ಲಿ ನಿನಗೆ ದೊರೆಯಲಿ.”

ಜಲಪ್ರದಾನಾನಂತರದಲ್ಲಿ ತೇಜಸ್ವಿಯಾದ ರಾಘವನು ತಮ್ಮಂದಿರಿಂದೊಡಗೂಡಿ ಮಂದಾಕಿನೀನದಿಯ ತೀರಕ್ಕೆ ಬಂದು ತಂದೆಗೆ ಪಿಂಡಪ್ರದಾನವನ್ನು ಮಾಡಿದನು. ಹಿಪ್ಪೆಯಕಾಯಿನ ಹಿಂಡಿಗೆ ಯಲಚೀಕಾಯನ್ನು ಬೆರೆಸಿ ಪಿಂಡವನ್ನು ಕಟ್ಟಿ ಹರಡಿದ ದರ್ಭೆಯ ಮೇಲಿಟ್ಟು, ಬಹುದುಃಖಾರ್ತನಾಗಿ ಬಿಕ್ಕಿ-ಬಿಕ್ಕಿ ಅಳುತ್ತಾ ಹೇಳಿದನು :

ಇದಂ ಭುಂಕ್ಷ್ವ ಮಹಾರಾಜ ಪ್ರೀತೋ ಯದಶನಾ ವಯಮ್ ।
ಯದನ್ನಃ ಪುರುಷೋ ಭವತಿ ತದನ್ನಾಸ್ತಸ್ಯ ದೇವತಾಃ ॥೩೦॥

“ಮಹಾರಾಜ! ಇದನ್ನು ಉಪಭುಂಜಿಸಿ ಸುಪ್ರೀತನಾಗು. ನಾವು ಯಾವುದನ್ನು ಭುಂಜಿಸುತ್ತೇವೆಯೋ ಅದನ್ನೇ ನಿನಗೂ ಅರ್ಪಿಸಿದ್ದೇವೆ. ಪ್ರಪಂಚದಲ್ಲಿ ಮಾನವನು ಯಾವುದನ್ನು ಊಟಮಾಡುತ್ತಾನೆಯೋ–ಅವನು ಉಪಾಸನೆಮಾಡುವ ದೇವತೆಗಳಿಗೂ ಅದೇ ಭೋಜ್ಯವಸ್ತುವಾಗುತ್ತದೆ.

ಪಿಂಡಪ್ರದಾನಮಾಡಿದ ಬಳಿಕ ಮಂದಾಕಿನೀನದಿಗೆ ಹೋಗಿದ್ದ ದಾರಿಯಿಂದಲೇ ಹಿಂದಿರುಗಿ ರಮ್ಯವಾದ ತಪ್ಪಲುಪ್ರದೇಶದಿಂದ ಕೂಡಿದ್ದ ಚಿತ್ರಕೂಟಪರ್ವತವನ್ನು ಹತ್ತಿದನು. ಅನಂತರ ಜಗತೀಪತಿಯಾದ ರಾಮನು ಪರ್ಣಕುಟೀರದ ಬಾಗಿಲಿಗೆ ಬಂದು ತೋಳುಗಳಿಂದ ಭರತ-ಶತ್ರುಘ್ನರನ್ನು ಆಲಿಂಗಿಸಿಕೊಂಡನು. ಸಿಂಹಗಳ ಗರ್ಜನೆಯಂತೆ ಆಕ್ರಂದಿಸುತ್ತಿದ್ದ ಸೀತಾ-ರಾಮ-ಲಕ್ಷ್ಮಣ-ಭರತ-ಶತ್ರುಘ್ನರ ಅಳುವಿನ ಶಬ್ದವು ಚಿತ್ರಕೂಟಪರ್ವತದ ಸುತ್ತಲೂ ಪ್ರತಿಧ್ವನಿಸಿತು. ತಂದೆಗೆ ತರ್ಪಣಕೊಡುತ್ತಿರುವ ಸಮಯದಲ್ಲಿ

ಮಹಾಬಲರಾದ ಅವರೆಲ್ಲರ ಕೋಲಾಹಲಧ್ವನಿಯನ್ನು ಕೇಳಿ ಭರತನ ಸೈನಿಕರು ಭೀತರಾದರು.

"ಈ ಕೋಲಾಹಲಶಬ್ದದಿಂದಾಗಿ ರಾಮ-ಭರತರ ಸಮಾಗಮವಾಗಿರುವುದೆಂಬುದನ್ನು ನಾವು ನಿಶ್ಚಯಿಸಬಹುದಾಗಿದೆ. ಭರತನಿಂದ ರಾಜನ ಮರಣವಾರ್ತೆಯನ್ನು ಕೇಳಿ ಅವರು ಮಾಡುತ್ತಿರುವ ಗೋಳಾಟದ ಮಹಾ ಶಬ್ದವೇ ಇದು"–ಎಂದು ಅವರು ತಮ್ಮ-ತಮ್ಮಲ್ಲಿಯೇ ಮಾತನಾಡಿಕೊಂಡರು.

ಅನಂತರ ಭರತನ ಸೈನಿಕರು ತಮ್ಮ-ತಮ್ಮ ವಾಹನಗಳೆಲ್ಲವನ್ನೂ ಅಲ್ಲಿಯೇ ಬಿಟ್ಟು ಏಕಾಗ್ರಚಿತ್ತರಾಗಿ ರೋದನಶಬ್ದವು ಬರುತ್ತಿದ್ದ ದಿಕ್ಕಿಗೆ ಶೀಘ್ರವಾಗಿ ಧಾವಿಸಿದರು. ಸುಕುಮಾರರಾದ ಕೆಲವು ಸೈನಿಕರು ಕುದುರೆಗಳ ಮೇಲೂ, ಕೆಲವರು ಆನೆಗಳ ಮೇಲೂ, ಕೆಲವರು ರಥಗಳಲ್ಲಿಯೂ ಕುಳಿತು ರೋದನಶಬ್ದವು ಬರುತ್ತಿದ್ದ ಸ್ಥಳಕ್ಕೆ ಧಾವಿಸಿದರು. ಉಳಿದವರು ಕಾಲ್ನಡಿಗೆಯಲ್ಲಿಯೇ ಹೋದರು. ರಾಮನನ್ನು ಅರಣ್ಯಕ್ಕೆ ಕಳುಹಿಸಿ ಬಹಳ ದಿವಸಗಳಾಗದಿದ್ದರೂ ಬಹಳ ಕಾಲವಾಯಿತೋ ಎಂಬಂತೆ–ನಯನಾಭಿರಾಮನಾದ ಶ್ರೀರಾಮನನ್ನು ನೋಡುವ ಸಲುವಾಗಿ ಸಕಲಪ್ರಜೆಗಳೂ ಆಶ್ರಮಕ್ಕೆ ಬಹು ವೇಗವಾಗಿ ಧಾವಿಸಿದರು. ರಾಮ-ಲಕ್ಷ್ಮಣ-ಭರತ-ಶತ್ರುಘ್ನರ ಸಮಾಗಮವನ್ನು ನೋಡುವ ಉತ್ಕಟೇಚ್ಛೆಯಿಂದ ಕೂಡಿದ ಅನೇಕ ಸೈನಿಕರು ಅಶ್ವ-ರಥ-ಗಜ-ಗಾಡಿಗಳೇ ಮೊದಲಾದ ನಾನಾವಿಧವಾದ ವಾಹನಗಳಲ್ಲಿ ಕುಳಿತು ಆತುರಾತುರವಾಗಿ ಆಶ್ರಮದ ಸಮೀಪಕ್ಕೆ ತೆರಳಿದರು. ರಥಗಳ ಗತಿಯಿಂದಲೂ, ಎತ್ತಿನಗಾಡಿಗಳ ಗಡ-ಗಡಾಶಬ್ದದಿಂದಲೂ, ಆನೆ-ಕುದುರೆಗಳ ನಡಿಗೆಯ ಸಪ್ಪಳದಿಂದಲೂ ಆ ಭೂಮಿಯ ಪ್ರದೇಶವು–ಕಾರ್ಮುಗಿಲುಗಳ ತಿಕ್ಕಾಟದಿಂದ ಆಕಾಶವು ಶಬ್ದಮಾಡುವಂತೆ–ಘೋರವಾದ ಶಬ್ದವನ್ನುಂಟು ಮಾಡಿತು. ಆ ಮಹಾಶಬ್ದದಿಂದ ಭಯಗೊಂಡ, ಚಿತ್ರಕೂಟಪರ್ವತದ ಸಮೀಪದಲ್ಲಿ ನೆಲೆಸಿದ್ದ ಕಾಡಾನೆಗಳು ಹೆಣ್ಣಾನೆಗಳೊಡಗೂಡಿ ಕಪೋಲಗಳಿಂದ ಉಕ್ಕಿಬರುತ್ತಿದ್ದ ಮದೋದಕಗಂಧದಿಂದ ನಾಲ್ಕು ದಿಕ್ಕುಗಳನ್ನೂ ಸುಗಂಧಿತವನ್ನಾಗಿ ಮಾಡುತ್ತಾ ಮತ್ತೊಂದು ಅರಣ್ಯಕ್ಕೆ ಧಾವಿಸಿದುವು. ಕಾಡುಹಂದಿಗಳೂ, ತೋಳಗಳ ಸಮೂಹಗಳೂ, ಕಾಡೆಮ್ಮೆಗಳೂ, ಸಿಂಹಗಳೂ, ಸರ್ಪ

ಗಳೂ, ಗೋಕರ್ಣಮೃಗಗಳೂ, ನರಿಗಳೂ, ಗವಯಗಳೆಂಬ ಮೃಗಗಳೂ, ಚಿರತೆಗಳೂ ಭಯದಿಂದ ಬೇರೆಯ ಕಾಡಿಗೆ ಧಾವಿಸಿದುವು. ಚಕ್ರವಾಕಪಕ್ಷಿಗಳೂ, ನೀರುಕೋಳಿಗಳೂ, ಬಕಪಕ್ಷಿಗಳೂ, ಕಾರಂಡವಗಳೂ, ಕೋಗಿಲೆಗಳೂ, ಕ್ರೌಂಚಪಕ್ಷಿಗಳೂ ಆ ಮಹಾಧ್ವನಿಯನ್ನು ಕೇಳಿ ಭಯಗೊಂಡು ದಿಕ್ಕಾಪಾಲಾಗಿ ಹಾರಿದುವು. ಆ ಮಹಾಶಬ್ದದಿಂದ ಭಯಗೊಂಡ ಪಕ್ಷಿಗಳಿಂದ ಆಕಾಶವು ಆವರಿಸಲ್ಪಟ್ಟಿತು. ರಾಮನನ್ನು ನೋಡುವ ಅಭಿಲಾಷೆಯಿಂದ ನಾನಾವಿಧವಾದ ವಾಹನಗಳಲ್ಲಿ ಕುಳಿತು ಹೊರಟ ಸೈನಿಕರಿಂದ ಭೂಮಿಯು ಆವರಿಸಲ್ಪಟ್ಟಿತು. ಈ ರೀತಿಯಲ್ಲಿ ಮನುಷ್ಯರಿಂದ ಭೂಮಿಯೂ–ಪಕ್ಷಿಗಳಿಂದ ಆಕಾಶವೂ ಆವೃತವಾಗಿ ಆಕಾಶ-ಭೂಮಿಗಳೆರಡೂ ವಿಲಕ್ಷಣವಾಗಿ ಪ್ರಕಾಶಿಸಿದುವು. ಅನಂತರ ಆ ಸೈನಿಕರೆಲ್ಲರೂ ಆಶ್ರಮದ ಬಳಿಗೆ ಹೋಗಿ ಪುರುಷವ್ಯಾಘ್ರನಾದ, ಯಶಸ್ವಿಯಾದ, ಶತ್ರುಧ್ವಂಸಕನಾದ, ಕಲ್ಮಷರಹಿತನಾದ, ವೇದಿಕೆಯ ಮೇಲೆ ಕುಳಿತಿದ್ದ, ನಯನಾಭಿರಾಮನಾದ ಶ್ರೀರಾಮನನ್ನು ಸಂದರ್ಶಿಸಿದರು. ರಾಮಾಶ್ರಮದ ಸಮೀಪದಲ್ಲಿದ್ದ ಜನಸ್ತೋಮವು ಜಟೆ-ನಾರುಮಡಿಗಳನ್ನು ಧರಿಸಿದ್ದ ಶ್ರೀರಾಮನನ್ನು ಸಂದರ್ಶಿಸಿ ಕೈಕೇಯಿಯನ್ನೂ ಮಂಥರೆಯನ್ನೂ ದೂಷಿಸುತ್ತಾ ಕಣ್ಣೀರು ಸುರಿಸಿತು. ಬಹುದುಃಖಿತರಾಗಿ, ಗಳ-ಗಳನೆ ಕಣ್ಣೀರು ಸುರಿಸುತ್ತಿದ್ದ ಅವರನ್ನು ಕಂಡು ಧರ್ಮಜ್ಞನಾದ ಶ್ರೀರಾಮನು, ತಂದೆಯಾದವನು ಅಥವಾ ತಾಯಿಯಾದವಳು ಮಕ್ಕಳು ಅಳುತ್ತಿರುವಾಗ ಅವರನ್ನು ಆಲಿಂಗಿಸಿಕೊಂಡು ಮುದ್ದಾಡಿ ಸಮಾಧಾನಗೊಳಿಸುವಂತೆ ಸಂತೈಸಿದನು. ಶ್ರೀರಾಮನು ಕೆಲವರನ್ನು ಆಲಿಂಗಿಸಿ ಸಂತೈಸಿದನು. ಕೆಲವರು ರಾಮನ ಪಾದಕಮಲಗಳನ್ನು ಮುಟ್ಟಿ ನಮಸ್ಕರಿಸಿದರು. ಕೆಲವರಿಗೆ ಶ್ರೀರಾಮನೇ ನಮಸ್ಕರಿಸಿ ಆಶೀರ್ವಾದಗಳನ್ನು ಪಡೆಯುತ್ತಿದ್ದನು. ಹೀಗೆ ಬಾಲಕರನ್ನೂ, ವಯಸ್ಕರನ್ನೂ, ವೃದ್ಧರನ್ನೂ ಯಥೋಚಿತವಾಗಿ ಯಥಾರ್ಹವಾಗಿ ಸಂತೈಸಿದನು. ಮಹಾತ್ಮರಾದ ಪಟ್ಟಣಿಗರು ಮಾಡುತ್ತಿದ್ದ ರೋದನ ಶಬ್ದವು ಭೂಮ್ಯಾಕಾಶಗಳಲ್ಲಿಯೂ, ಗಿರಿಗಳ ಗುಹೆಗಳಲ್ಲಿಯೂ ಮತ್ತು ಹತ್ತು ದಿಕ್ಕುಗಳಲ್ಲಿಯೂ ಪ್ರತಿಧ್ವನಿಯನ್ನುಂಟುಮಾಡುತ್ತಾ ಮೃದಂಗದ ಧ್ವನಿಯಂತೆಯೇ ಕೇಳಿಸುತ್ತಿದ್ದಿತು.

೧೦೨ನೆಯ ಸರ್ಗವು ಮುಗಿಯಿತು.

ವಸಿಷ್ಠರ ಜೊತೆಯಲ್ಲಿ ಹೊರಟ ಕೌಸಲ್ಯೆಯು ಮಂದಾಕಿನೀನದಿಯ ತೀರದಲ್ಲಿ ಬಹಳವಾಗಿ ದುಃಖಿಸಿದುದು : ರಾಮ-ಲಕ್ಷ್ಮಣ-ಸೀತೆಯರು ಕೌಸಲ್ಯೆಯೇ ಮೊದಲಾದ ತಾಯಂದಿರಿಗೂ ವಸಿಷ್ಠರಿಗೂ ಅಭಿವಂದಿಸಿದುದು

ವಸಿಷ್ಠಃ ಪುರತಃ ಕೃತ್ವಾ ದಾರಾನ್ದಶರಥಸ್ಯ ಚ ।
ಅಭಿಚಕ್ರಾಮ ತಂ ದೇಶಂ ರಾಮದರ್ಶನತರ್ಷಿತಃ ॥೧॥

ವಸಿಷ್ಠಮಹರ್ಷಿಗಳು ರಾಮನ ದರ್ಶನವನ್ನು ಮಾಡಬೇಕೆಂಬ ಅಭಿಲಾಷೆಯಿಂದ ದಶರಥನ ಪತ್ನಿಯರಾದ ಕೌಸಲ್ಯಾ-ಕೈಕೇಯೀ-ಸುಮಿತ್ರೆಯರನ್ನು ಮುಂದೆ ಮಾಡಿಕೊಂಡು ರಾಮನಿದ್ದ ಆಶ್ರಮಕ್ಕೆ ತೆರಳಿದರು. ರಾಮಾಶ್ರಮಕ್ಕೆ ವಸಿಷ್ಠರೊಡನೆ ಮೆಲ್ಲ-ಮೆಲ್ಲನೆ ಮಂದಾಕಿನೀನದಿಯ ಸಮೀಪದಲ್ಲಿ ಹೋಗುತ್ತಿದ್ದಾಗ ರಾಜಪತ್ನಿಯರಾದ ಕೌಸಲ್ಯಾ-ಕೈಕೇಯೀ-ಸುಮಿತ್ರೆಯರು ರಾಮ-ಲಕ್ಷ್ಮಣರಿಂದ ಸೇವಿಸಲ್ಪಡುತ್ತಿದ್ದ ಮಂದಾಕಿನೀ ನದಿಯ ಸ್ನಾನಘಟ್ಟವನ್ನು ಸಂದರ್ಶಿಸಿದರು. ಬಾಷ್ಪಪೂರ್ಣವಾದ ಮತ್ತು ಬಾಡಿಹೋಗಿದ್ದ ಮುಖದಿಂದ ಕೂಡಿದ್ದ, ಪುತ್ರವಿಯೋಗದುಃಖದಿಂದ ಬಹುಕೃಶಳಾಗಿದ್ದ ಕೌಸಲ್ಯಾದೇವಿಯು ಸುಮಿತ್ರಾದೇವಿಗೂ ಮತ್ತು ಇತರ ರಾಜಮಹಿಷಿಯರಿಗೂ ಹೇಳಿದಳು :

"ನನ್ನ ಮಕ್ಕಳಿಗೆ ಕ್ಲೇಶಕರವಾದ ಕೆಲಸವನ್ನು ಮಾಡಿ ಅಭ್ಯಾಸವಿಲ್ಲ. ಆದರೆ ಅವರೀಗ ದೇಶಭ್ರಷ್ಟರಾಗಿ ಕ್ಲೇಶಪಡುತ್ತಿದ್ದಾರೆ. ಅವರು ಸೇವಿಸುತ್ತಿರುವ, ಕಡಿದಾದ ಸೋಪಾನದಿಂದ ಕೂಡಿರುವ ತೀರ್ಥವು ಇದೇ ಆಗಿದೆ. ಇಲ್ಲಿಂದಲೇ ನಿನ್ನ ಮಗನಾದ ಲಕ್ಷ್ಮಣನು ನನ್ನ ಮಗನ ಸಲುವಾಗಿ ಸ್ವಲ್ಪವೂ ಆಲಸ್ಯವಿಲ್ಲದೇ ಅನುದಿನವೂ ನೀರನ್ನು ಒಯ್ಯುತ್ತಾನೆ. ಆದರೆ ನಿನ್ನ ಮಗನು ನೀರು ಹೊತ್ತುತರುವುದೆಂಬ ಕೀಳಾದ ಕಾರ್ಯಮಾಡುತ್ತಿದ್ದರೂ ಅವನು ನಿಂದ್ಯನಾಗುವುದಿಲ್ಲ. ಏಕೆಂದರೆ : ಹಿರಿಯಣ್ಣನು ಯಾವಾಗಲೂ ತಂದೆಗೆ ಸಮಾನನು. ಅಣ್ಣನ ಪ್ರಯೋಜನಾರ್ಥವಾಗಿ ಮಾಡಿದ ಕಾರ್ಯಗಳೆಲ್ಲವೂ ವಿಹಿತವಾದ ಕಾರ್ಯಗಳೇ ಆಗುತ್ತವೆ. ಗುಣವಂತರು ಅಣ್ಣನ ಸೇವಾರ್ಥ

ವಾಗಿ ಮಾಡುವ ಈ ಕಾರ್ಯವನ್ನು ಶ್ಲಾಘಿಸುತ್ತಾರೆ. ಕಾಯಕ್ಲೇಶಗಳನ್ನು ಅನುಭವಿಸಲು ಅರ್ಹನಲ್ಲದ ಈ ನಿನ್ನ ಮಗನು ಇನ್ನು ಮುಂದೆ ಈ ರೀತಿಯ ಕ್ಲೇಶಕರವಾದ ಕಾರ್ಯವನ್ನು ಬಿಟ್ಟುಬಿಡಲಿ.”

ಕೌಸಲ್ಯಾದೇವಿಯು ಹೀಗೆ ಹಲುಬುತ್ತಾ ಕೈಕೇಯೀ-ಸುಮಿತ್ರೆಯ ರೊಡನೆ ಮುಂದೆ ಹೋಗುತ್ತಿದ್ದಾಗ ನೆಲದ ಮೇಲೆ ದಕ್ಷಿಣಾಗ್ರವಾದ ದರ್ಭೆಯ ಆಸ್ತರಣದಲ್ಲಿ* ರಾಮನಿಂದ ಇಡಲ್ಪಟ್ಟ ಹಿಪ್ಪೆಯಕಾಯಿಯ ಹಿಂಡಿಯಿಂದ ಮಾಡಿದ್ದ ಪಿಂಡವನ್ನು ವಿಶಾಲಾಕ್ಷಿಯಾದ ಕೌಸಲ್ಯಾದೇವಿಯು ನೋಡಿದಳು. ದಶರಥನ ಮರಣವಾರ್ತೆಯನ್ನು ಕೇಳಿ ಬಹುದುಃಖಿತನಾದ ರಾಮನು ತಂದೆಯ ಸಲುವಾಗಿ ಇಟ್ಟಿದ್ದ ಪಿಂಡವನ್ನು ನೋಡಿ ಕೌಸಲ್ಯಾದೇವಿಯು ದಶರಥನ ಇತರ ಮಹಿಷಿಯರಿಗೆ ಹೇಳಿದಳು :

“ರಘುವಂಶೋತ್ಪನ್ನನಾದ, ಇಕ್ಷ್ವಾಕುಕುಲನಾಥನಾದ, ಮಹಾತ್ಮ ನಾದ, ತಂದೆಯಾದ ದಶರಥನಿಗೆ ರಾಮನಿಂದ ಯಥಾವಿಧಿಯಾಗಿ ಇಡಲ್ಪಟ್ಟಿ ರುವ ಪಿಂಡವನ್ನು ನೋಡಿರಿ. ದೇವಸಮಾನನಾದ, ರಾಜಾಧಿರಾಜನಾದ, ಮಹಾತ್ಮನಾದ, ಸಕಲವಿಧವಾದ ಸುಖೋಪಭೋಗಗಳನ್ನೂ ಅನುಭವಿಸಿದ ನಮ್ಮ ರಾಜನಿಗೆ ಹಿಪ್ಪೆಯಕಾಯಿಯ ಹಿಂಡಿಯಿಂದ ಮಾಡಲ್ಪಟ್ಟಿರುವ ಈ ಪಿಂಡವು ಭೋಜನಯೋಗ್ಯವಲ್ಲವೆಂದು ನಾನು ಭಾವಿಸುತ್ತೇನೆ. ಚತುಸ್ಸಾಗರಪರ್ಯಂತವಾದ ಈ ಭೂಮಿಯನ್ನಾಳಿ, ಸಾಕ್ಷಾತ್ ಪುರಂದರ ನಂತೆಯೇ ಈ ಭೂಮಿಯಲ್ಲಿದ್ದಷ್ಟು ಕಾಲವೂ ವೈಭವಪೂರ್ಣನಾಗಿದ್ದು ಪರ ಲೋಕವನ್ನೈದಿರುವ ಚಕ್ರವರ್ತಿಯು ಈ ಹಿಪ್ಪೆಯಕಾಯಿಯ ಹಿಂಡಿಯಿಂದ ಮಾಡಿರುವ ಪಿಂಡವನ್ನು ಹೇಗೆ ತಾನೇ ಉಪಭುಂಜಿಸುವನು? ಇದಕ್ಕಿಂತಲೂ ದುಃಖಕರವಾದುದು ಮತ್ತೊಂದಿಲ್ಲವೆಂದು ನನಗೆ ಭಾಸವಾಗುತ್ತಿದೆ. ಏಕೆಂದರೆ : ಸಕಲಸಂಪತ್ತಿನಿಂದ ವಿಶಿಷ್ಟನಾದ ರಾಮನು, ದೇವೇಂದ್ರಸದೃಶನಾಗಿದ್ದ ರಾಜ ನಿಗೆ ಹಿಪ್ಪೆಯಕಾಯಿಯ ಹಿಟ್ಟಿನಿಂದ ಮಾಡಿದ ಪಿಂಡವನ್ನಿಟ್ಟನಲ್ಲವೇ? ರಾಮ ನಿಂದ ಅವನ ತಂದೆಗೆ ಇಡಲ್ಪಟ್ಟ ಹಿಪ್ಪೆಯ ಹಿಟ್ಟಿನ ಪಿಂಡವನ್ನು ನೋಡಿದ ನಂತರವೂ ನನ್ನ ಹೃದಯವು ದುಃಖದಿಂದ ಸಾವಿರ ಹೋಳಾಗದೇ ಹೇಗೆ

---

*ಆಸ್ತರಣ = (ವೈದಿಕಕರ್ಮಗಳಲ್ಲಿ) ದರ್ಭೆಯನ್ನು ಸಾಲಾಗಿ ಹರಡುವುದು.

ಉಳಿದಿದೆ? "ಯದನ್ನಃ ಪುರುಷೋ ಭವತಿ ತದನ್ನಾಸ್ತಸ್ಯ ದೇವತಾಃ– ಪುರುಷನು ಯಾವ ವಸ್ತುವನ್ನು ಅನ್ನವನ್ನಾಗಿ ತಿನ್ನುತ್ತಾನೆಯೋ ಅದೇ ವಸ್ತುವು ಅವನು ಆರಾಧಿಸುವ ದೇವತೆಗಳಿಗೂ ಅನ್ನವಾಗುತ್ತದೆ" ಎಂಬ ಈ ನಾಣ್ನುಡಿಯು ಸತ್ಯವಾದುದೆಂದು ಈಗ ನನಗೆ ಭಾಸವಾಗಿದೆ."

ಇವೇ ಮುಂತಾಗಿ ಹೇಳಿಕೊಂಡು ದುಃಖಿಸುತ್ತಿದ್ದ ಕೌಸಲ್ಯಾದೇವಿ ಯನ್ನು ಅವಳ ಸವತಿಯರು ಸಮಾಧಾನಗೊಳಿಸುತ್ತಾ ಹೋಗುತ್ತಿದ್ದರು. ಅವರೆಲ್ಲರೂ ಆಶ್ರಮದ ಸಮೀಪಕ್ಕೆ ಹೋಗಲು ಅಲ್ಲಿ ಸ್ವರ್ಗದಿಂದ ಚ್ಯುತನಾದ ದೇವತೆಯೋಪಾದಿಯಲ್ಲಿದ್ದ ಶ್ರೀರಾಮನು ಕಾಣಿಸಿದನು. ಸಕಲವಿಧವಾದ ಭೋಗಗಳನ್ನೂ ಪರಿತ್ಯಜಿಸಿದ್ದ ಶ್ರೀರಾಮನನ್ನು ನೋಡಿ ಆರ್ತರಾದ ತಾಯಂದಿರು ಶೋಕಾಭಿಭೂತರಾಗಿ ರಾಗ-ರಾಗವಾಗಿ ಅಳುತ್ತಾ ಕಣ್ಣೀರು ಸುರಿಸಿದರು. ತಾಯಂದಿರು ಸಮೀಪಕ್ಕೆ ಬಂದುದನ್ನು ಕಂಡೊಡನೆಯೇ ಸತ್ಯಪ್ರತಿಜ್ಞನಾದ, ನರಶ್ರೇಷ್ಠನಾದ ರಾಮನು ಮೇಲೆದ್ದು ಅವರೆಲ್ಲರ ಮಂಗಳದಾಯಕವಾದ ಚರಣಕಮಲಗಳನ್ನೂ ಹಿಡಿದು ಕೊಂಡನು. ವಿಶಾಲನೇತ್ರೆಯರಾದ ರಾಮನ ತಾಯಂದಿರು–ಸ್ಪರ್ಶಮಾತ್ರದಿಂದಲೇ ಸುಖವನ್ನುಂಟುಮಾಡುವ, ಮೃದುವಾದ ಮತ್ತು ಶುಭಪ್ರದವಾದ ತಮ್ಮ ಕೈಗಳಿಂದ ಮೈದಡವುತ್ತಾ ರಾಮನ ಬೆನ್ನಿನ ಮೇಲಿನ ಧೂಳಿಯನ್ನು ಕೊಡವಿದರು. ಲಕ್ಷ್ಮಣನೂ ಎಲ್ಲ ತಾಯಂದಿರನ್ನೂ ನೋಡಿ ಬಹುದುಃಖಿತನಾಗಿ ರಾಮನು ಅಭಿವಾದನಮಾಡಿದನಂತರ ತಾನೂ ನಿಧಾನವಾಗಿ ಪ್ರತಿಯೊಬ್ಬರಿಗೂ ಶ್ರದ್ಧಾಪೂರ್ವಕವಾಗಿ ನಮಸ್ಕರಿಸಿದನು. ರಾಮನನ್ನು ಮೈದಡವಿದಂತೆಯೇ ರಾಜಮಹಿಷಿಯರು ದಶರಥನ ಮಗನಾದ ಶುಭಲಕ್ಷಣನಾದ ಲಕ್ಷ್ಮಣನನ್ನೂ ಮೈದಡವಿ ಬೆನ್ನಿನ ಮೇಲಿದ್ದ ಧೂಳಿಯನ್ನು ಕೊಡವಿದರು. ಸೀತಾದೇವಿಯೂ ಅತ್ತೆಯರನ್ನು ಕಂಡು ಬಹುದುಃಖಿತಳಾಗಿ ಅವರ ಕಾಲುಗಳನ್ನು ಮುಟ್ಟಿ ನಮಸ್ಕರಿಸಿ ಅನಂತರ ಅವರ ಮುಂಭಾಗದಲ್ಲಿ ನಿಂತುಕೊಂಡಳು. ವನವಾಸದಿಂದ ಕೃಶಳಾಗಿಯೂ, ಕುಂದಿದ ಮುಖವುಳ್ಳವಳಾಗಿಯೂ ಇದ್ದ ಸೀತಾದೇವಿಯನ್ನು ನೋಡಿ ಬಹುದುಃಖಿತಳಾದ ಕೌಸಲ್ಯಾದೇವಿಯು–ಮಗಳನ್ನು ತಾಯಿಯಾದವಳು ತಬ್ಬಿಕೊಳ್ಳುವಂತೆಯೇ ಗಾಢವಾಗಿ ಆಲಿಂಗನಮಾಡಿಕೊಂಡು ಹೇಳಿದಳು :

"ಮಗಳೇ! ವಿದೇಹರಾಜನ ಮಗಳಾಗಿಯೂ, ದಶರಥಚಕ್ರವರ್ತಿಯ ಸೊಸೆಯಾಗಿಯೂ, ಲೋಕಾಭಿರಾಮನಾದ ಶ್ರೀರಾಮನ ಪತ್ನಿಯಾಗಿಯೂ ಇರುವ ನಿನಗೆ ನಿರ್ಜನವಾದ ವನದಲ್ಲಿ ವಾಸಮಾಡಬೇಕಾದ ಈ ದುಃಖವು ಹೇಗೆ, ಯಾವ ಕಾರಣದಿಂದ ಪ್ರಾಪ್ತವಾಯಿತು? ಬಿಸಿಲಿನಿಂದ ಬಾಡಿಹೋದ ಕಮಲಪುಷ್ಪದಂತೆಯೂ, ಮದಗಜಗಳು ತುಳಿದುಹಾಕಿದ ಕನ್ನೈದಿಲೆ ಯಂತೆಯೂ, ಧೂಳು ಮುಸುಕಿದ ಚಿನ್ನದಂತೆಯೂ, ಮೋಡ ಕವಿದ ಚಂದ್ರಬಿಂಬದಂತೆಯೂ ಇರುವ ನಿನ್ನ ಮುಖವನ್ನು ನೋಡಿ, ವ್ಯಸನವೆಂಬ ಅರಣಿಯ ಮಥನದಿಂದ ನನ್ನ ಮನಸ್ಸಿನಲ್ಲಿ ಹುಟ್ಟಿರುವ ದುಃಖಾಗ್ನಿಯು–ಬೆಂಕಿಯು ತನಗೆ ಆಶ್ರಯವನ್ನಿತ್ತ ವಸ್ತುವನ್ನು ಸುಡುವಂತೆಯೇ–ಸುಡುತ್ತಿದೆ."

ದುಃಖಪೀಡಿತಳಾದ ತಾಯಿಯಾದ ಕೌಸಲ್ಯಾದೇವಿಯು ಸೊಸೆಗೆ ಹೀಗೆ ಹೇಳುತ್ತಿರುವಾಗ–ಭರತಾಗ್ರಜನು ಪುರೋಹಿತರಾದ ವಸಿಷ್ಠರ ಸಮೀಪಕ್ಕೆ ಹೋಗಿ ಅವರ ಎರಡು ಪಾದಗಳನ್ನೂ ಹಿಡಿದುಕೊಂಡನು. ದೇವತೆ ಗಳೊಡೆಯನಾದ ಇಂದ್ರನು ದೇವಗುರುವಾದ ಬೃಹಸ್ಪತಿಯ ಚರಣಾರವಿಂದ ಗಳನ್ನು ಮುಟ್ಟಿ ನಮಸ್ಕರಿಸುವಂತೆ–ಯಜ್ಞೇಶ್ವರಸದೃಶರಾದ ಮತ್ತು ಸಮೃದ್ಧವಾದ ತೇಜಸ್ಸಿನಿಂದ ಕೂಡಿದ್ದ ಪುರೋಹಿತರ ಪಾದಗಳಿಗೆರಗಿ ಅವರ ಅನುಮತಿಯನ್ನು ಪಡೆದು ಕುಳಿತುಕೊಂಡನು. ರಾಮ-ವಸಿಷ್ಠರು ಕುಳಿತು ಕೊಂಡನಂತರ ಮಂತ್ರಿಗಳಿಂದಲೂ, ಸೇನಾಪತಿಗಳಿಂದಲೂ, ಪುರಪ್ರಧಾನ ರಿಂದಲೂ, ಧಾರ್ಮಿಕರಾದ ಜನಸ್ತೋಮದಿಂದಲೂ ಕೂಡಿದ ಧರ್ಮಾತ್ಮ ನಾದ ಭರತನು ರಾಮನ ಹಿಂಬದಿಯಲ್ಲಿ ಕುಳಿತುಕೊಂಡನು. ಹಾಗೆ ರಾಮನ ಸಮೀಪದಲ್ಲಿ ಕುಳಿತಿದ್ದ ಮಹಾವೀರ್ಯವಂತನಾದ ಭರತನು ತಪಸ್ವಿಗಳ ವೇಷದಲ್ಲಿದ್ದ, ಕಾಂತಿಯಿಂದ ಬೆಳಗುತ್ತಿದ್ದ ರಾಘವನಿಗೆ ಬ್ರಹ್ಮನ ಬಳಿಯಲ್ಲಿ ಮಹೇಂದ್ರನು ವಿನೀತನಾಗಿ ಕೈಮುಗಿಯುವಂತೆ ಕೈಮುಗಿದನು. ಭರತನು ಕೈಜೋಡಿಸಿದೊಡನೆಯೇ ಅಲ್ಲಿದ್ದ ಜನರ ದೃಷ್ಟಿಗಳೆಲ್ಲವೂ ಭರತನ ಮೇಲೆ ಬಿದ್ದುವು. 'ಭರತನು ಅಣ್ಣನಾದ ರಾಮನನ್ನು ಸತ್ಕರಿಸಿ, ನಮಸ್ಕರಿಸಿದ ನಂತರ ಅವನೊಡನೆ ಏನೆಂದು ಮಾತನಾಡುವನು?'–ಎಂಬ ನಿಜವಾದ ಮತ್ತು ಉತ್ತಮವಾದ ಕುತೂಹಲವು ಅಲ್ಲಿ ನೆರೆದಿದ್ದ ಸಭ್ಯರಿಗೆ ಉಂಟಾಯಿತು. ಸತ್ಯ

ನಿಷ್ಠನಾದ ರಾಮನೂ, ಮಹಾನುಭಾವನಾದ ಲಕ್ಷ್ಮಣನೂ ಮತ್ತು ಪರಮಧಾರ್ಮಿಕನಾದ ಭರತನೂ–ಸುಹೃದರಾದ ಅಯೋಧ್ಯೆಯ ಪ್ರಜೆಗಳ ಮಧ್ಯದಲ್ಲಿ–ಯಜ್ಞದಲ್ಲಿ ಋತ್ವಿಜರಿಂದ ಆವೃತವಾಗಿರುವ ದಕ್ಷಿಣಾಗ್ನಿ-ಗಾರ್ಹಪತ್ಯ-ಆಹವನೀಯಗಳೆಂಬ ಮೂರು ಅಗ್ನಿಗಳಂತೆ ಪ್ರಕಾಶಿಸಿದರು.

೧೦೩ನೆಯ ಸರ್ಗವು ಮುಗಿಯಿತು.

ಶ್ರೀರಾಮನು ಭರತನನ್ನು ಅರಣ್ಯಕ್ಕೆ ಬಂದುದರ ಕಾರಣವನ್ನು ಕೇಳಿದುದು : ರಾಜ್ಯವನ್ನು ಸ್ವೀಕರಿಸುವಂತೆ ಭರತನ ಪ್ರಾರ್ಥನೆ : ಶ್ರೀರಾಮನ ಅಸಮ್ಮತಿ

ತಂ ತು ರಾಮಃ ಸಮಾಜ್ಞಾಯ ಭ್ರಾತರಂ ಗುರುವತ್ಸಲಮ್ ।
ಲಕ್ಷ್ಮಣೇನ ಸಹ ಭ್ರಾತ್ರಾ ಪ್ರಷ್ಟುಂ ಸಮುಪಚಕ್ರಮೇ ॥೧॥

ಭರತನು ಗುರುಜನರಲ್ಲಿ ವಾತ್ಸಲ್ಯಯುಕ್ತನಾಗಿರುವನೆಂಬುದನ್ನು (ತನ್ನಲ್ಲಿ ಭಕ್ತಿಭಾವದಿಂದಿರುವುದನ್ನು) ತಿಳಿದ ಶ್ರೀರಾಮನು ಅನುಜನಾದ ಲಕ್ಷ್ಮಣನೊಡನೆ ಭರತನನ್ನು ಪ್ರಶ್ನಿಸಲು ಪ್ರಾರಂಭಿಸಿದನು :

"ಭರತ! ನೀನು ರಾಜ್ಯವನ್ನು ಬಿಟ್ಟು ನಾರುಮಡಿ-ಕೃಷ್ಣಾಜಿನಗಳನ್ನುಟ್ಟು ಜಟೆಯನ್ನು ಧರಿಸಿ ಈ ಕಾಡಿಗೆ ಬಂದಿರುವ ಕಾರಣವೇನು? ಈ ವಿಷಯವನ್ನು ನಾನು ನಿನ್ನಿಂದಲೇ ಕೇಳಿ ತಿಳಿಯಬಯಸುತ್ತೇನೆ. ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ಹೇಳು."

ಮಹಾತ್ಮನಾದ ಶ್ರೀರಾಮನು ಹೀಗೆ ಪ್ರಶ್ನಿಸಲು ಭರತನು ಉಕ್ಕಿ ಬರುತ್ತಿದ್ದ ದುಃಖವನ್ನು ಬಲಪೂರ್ವಕವಾಗಿ ತಡೆಹಿಡಿದು ಕೈಮುಗಿದು ಕೊಂಡೇ ಹೇಳಿದನು :

"ಅಣ್ಣ! ಮಹಾಬಾಹುವಾದ ನಮ್ಮ ತಂದೆಯು ಆರ್ಯನಾದ ನಿನ್ನನ್ನು ಪರಿತ್ಯಜಿಸುವುದರ ಮೂಲಕ ಅತ್ಯಂತದುಷ್ಕರವಾದ ಕಾರ್ಯವನ್ನು ಮಾಡಿ ಪುತ್ರವಿರಹಶೋಕದಿಂದಲೇ ಪೀಡಿತನಾಗಿ ದಿವಂಗತನಾದನು. ನನ್ನ ತಾಯಿಯ ರೂಪದಲ್ಲಿರುವ ಕೈಕೇಯಿಯೆಂಬ ಈ ಹೆಂಗಸಿನ ನಿರ್ದೇಶದಂತೆ ನಮ್ಮ ತಂದೆಯು ಆತ್ಮಘಾತವೂ, ಯಶೋಹರವೂ ಆದ ಈ ಮಹಾಪಾಪ

ಕಾರ್ಯವನ್ನು ಮಾಡಿಬಿಟ್ಟನು. ಇಂದು ವಿಧವೆಯಾಗಿರುವ ಈ ನನ್ನ ತಾಯಿಯಾದರೋ ತಾನಾಶಿಸಿದ್ದ ರಾಜ್ಯಫಲವನ್ನು ಹೊಂದಲಾಗದೇ ಜೀವಪರ್ಯಂತವಾಗಿ ದುಃಖಪಡುತ್ತಿದ್ದು ಅವಸಾನಾನಂತರದಲ್ಲಿಯೂ ಮಹಾಘೋರವಾದ ನರಕದಲ್ಲಿ ಬೀಳುತ್ತಾಳೆ. ಅಂತಹವಳ ಮಗನಾಗಿ ಹುಟ್ಟಿಯೂ ನಿನ್ನ ದಾಸ್ಯವನ್ನು ಅಪೇಕ್ಷಿಸಿ ಬಂದಿರುವ ನನ್ನನ್ನು ಅನುಗ್ರಹಿಸುವುದು ನಿನಗೆ ಯೋಗ್ಯವಾಗಿದೆ. ಇಂದ್ರನೋಪಾದಿಯಲ್ಲಿ ಕೋಸಲರಾಜ್ಯಕ್ಕೆ ರಾಜನಾಗಿ ಪಟ್ಟಾಭಿಷೇಕಮಾಡಿಕೊಳ್ಳುವುದೇ ನೀನು ನನಗೆ ಮಾಡಬೇಕಾಗಿರುವ ಪರಮಾನುಗ್ರಹವಾಗಿದೆ. ಆದುದರಿಂದ ಈಗಲೇ ರಾಜ್ಯಾಭಿಷಿಕ್ತನಾಗು. ಸಕಲ ಪ್ರಜೆಗಳೂ, ವಿಧವೆಯರಾಗಿರುವ ಈ ನಮ್ಮ ಮಾತೆಯರೂ ಈ ಕಾರಣದಿಂದಲೇ ನಿನ್ನ ಬಳಿಗೆ ಬಂದಿರುತ್ತಾರೆ. ಇವರೆಲ್ಲರ ಮೇಲೂ ಕೃಪೆದೋರುವುದು ನಿನಗೆ ಉಚಿತವಾಗಿದೆ.

ಮಾನಪ್ರದನೇ! ನೀನು ಜ್ಯೇಷ್ಠನಾಗಿರುವುದರಿಂದ ಹಿಂದಿನಿಂದಲೂ ನಡೆದುಬಂದಿರುವ ನಮ್ಮ ವಂಶದ ಪದ್ಧತಿಯಂತೆ ಈ ರಾಜ್ಯವನ್ನು ಪಡೆಯುವ ಅಧಿಕಾರವು ನಿನಗೇ ಇರುವುದು. ನಿನಗೆ ಈ ರಾಜ್ಯವು ಸೇರಬೇಕಾದುದು ಉಚಿತವಾಗಿಯೂ ಇದೆ. ಧರ್ಮಾನುಸಾರವಾಗಿಯೇ ಈ ರಾಜ್ಯವನ್ನು ನೀನು ಪಡೆದುಕೊ. ನಿನ್ನ ಸುಹೃದರ ಇಷ್ಟಾರ್ಥಗಳನ್ನು ಈಡೇರಿಸು.

ಸಮಗ್ರವಾದ ಅಖಂಡವಾದ ಈ ಭೂಮಿಯು ನಿನ್ನ ಒಡೆತನದಿಂದಾಗಿ ಸುಮಂಗಲಿಯಾಗಿ ಸನಾಥಳಾಗಲಿ. ಕಳಂಕರಹಿತನಾದ ಚಂದ್ರನಿಂದ ಯುಕ್ತ ವಾದ, ಶರತ್ಕಾಲದ ರಾತ್ರಿಯೋಪಾದಿಯಲ್ಲಿ–ನಿನ್ನನ್ನು ಒಡೆಯನನ್ನಾಗಿ ಪಡೆದು ಈ ಭೂಮಿಯು ವಿರಾಜಿಸಲಿ. ದಕ್ಷರಾದ ಈ ಸಚಿವರೊಡನೆ ಕೈಮುಗಿದು ತಲೆಬಾಗಿ ಬೇಡಿಕೊಳ್ಳುತ್ತೇನೆ. ನಿನ್ನ ತಮ್ಮನೂ, ಶಿಷ್ಯನೂ ಮತ್ತು ಸೇವಕನೂ ಆಗಿರುವ ನನ್ನ ಈ ಪ್ರಾರ್ಥನೆಯನ್ನು ನಡೆಸಿಕೊಟ್ಟು ಅನುಗ್ರಹಿಸು. ಪುರುಷವ್ಯಾಘ್ರನೇ! ಈ ಸಚಿವಮಂಡಲವು ವಂಶಪರಂಪರೆ ಯಿಂದ ಬಂದಿರುವುದಲ್ಲದೇ ನಮ್ಮ ತಂದೆಯಿಂದಲೂ ಬಹಳವಾಗಿ ಗೌರವಿ ಸಲ್ಪಟ್ಟಿದೆ. ಇದು ಶಾಶ್ವತವೂ ಸುಭದ್ರವೂ ಆದ ಮಂತ್ರಿಮಂಡಲವಾಗಿದೆ. ಇಂತಹ ಮಂತ್ರಿಮಂಡಲದ ಅಭಿಪ್ರಾಯವನ್ನು ನೀನು ಅತಿಕ್ರಮಿಸುವುದು ಖಂಡಿತವಾಗಿಯೂ ಸರಿಯಲ್ಲ."

ಮಹಾಬಾಹುವಾದ ಕೈಕೇಯೀಪುತ್ರನು ಬಹುದುಃಖದಿಂದ ಕಣ್ಣೀರು ಸುರಿಸುತ್ತಾ ಹೀಗೆ ಹೇಳಿ ಪುನಃ ರಾಮನ ಪಾದಕಮಲಗಳನ್ನು ಹಿಡಿದು ತಲೆಯನ್ನೂ ಮುಟ್ಟಿಸಿ ನಮಸ್ಕರಿಸಿದನು. ಮದಿಸಿದ ಆನೆಯೋಪಾದಿಯಲ್ಲಿ ಕ್ಷಣ-ಕ್ಷಣಕ್ಕೂ ದೀರ್ಘವಾಗಿ ನಿಟ್ಟುಸಿರುಬಿಡುತ್ತಿದ್ದ ತಮ್ಮನ ಎರಡು ತೋಳುಗಳನ್ನೂ ಹಿಡಿದು ಮೇಲೆತ್ತಿ ಗಾಢಾಲಿಂಗನಮಾಡಿಕೊಂಡು ರಾಮನು ಈ ಮಾತುಗಳನ್ನು ಹೇಳಿದನು :

"ಅನುಜನೇ! ಸತ್ಕುಲಪ್ರಸೂತನೂ, ಸತ್ತ್ವಗುಣಸಂಪನ್ನನೂ, ತೇಜಸ್ವಿಯೂ, ಅನೇಕಾನೇಕ ವ್ರತಾನುಷ್ಠಾನಗಳನ್ನು ಮಾಡಿರುವವನೂ ಆಗಿರುವ ನಿನ್ನಂತಹವನು ರಾಜ್ಯದ ಕಾರಣಕ್ಕಾಗಿ ಪಾಪಕಾರ್ಯವನ್ನು ಮಾಡಿಯಾನೇ? ಶತ್ರುವಿಧ್ವಂಸಕನೇ! ನಿನ್ನಲ್ಲಿ ಲೇಶಮಾತ್ರದೋಷವೂ ನನಗೆ ಕಾಣಿಸುತ್ತಿಲ್ಲ. ನಿನ್ನ ತಾಯಿಯಾದ ಕೈಕೇಯಿಯೇನೋ ಮಹಾಪಾಪವನ್ನು ಮಾಡಿರುವಳೆಂಬ ಅಜ್ಞಾನದಿಂದ ನೀನವಳನ್ನು ನಿಂದಿಸುವುದೂ ಯೋಗ್ಯವಲ್ಲ.

ಮಹಾಪ್ರಾಜ್ಞನೇ! ನಿಷ್ಪಾಪನೇ! ಹಿರಿಯರು ತಮಗೆ ಪ್ರಿಯರಾದ ಪತ್ನೀ-ಪುತ್ರರ ವಿಷಯದಲ್ಲಿ ಹೆಚ್ಚು ಒಲುಮೆಯನ್ನು ತೋರಿಸಬಹುದು. ಅವರಿಗೆ ಇಷ್ಟಬಂದಂತೆ ಮಾಡಲು ಶಾಸ್ತ್ರದ ಸಮ್ಮತಿಯೂ ಇದೆ. ಭಾರ್ಯಾ-ಪುತ್ರ-ಶಿಷ್ಯವರ್ಗದಲ್ಲಿ ಸೇರಿರುವ ನಾವೆಲ್ಲರೂ ತಂದೆಯ ಆಜ್ಞೆಗೆ ಒಳಪಡ ತಕ್ಕವರೆಂಬುದು ಸತ್ಪುರುಷರ ಅಭಿಪ್ರಾಯವೂ ಆಗಿದೆ. ನೀನು ಈ ವಿಷಯ ವನ್ನು ಗಮನಿಸಬೇಕು. ತಂದೆಯೇ ನಮ್ಮೆಲ್ಲರಿಗೂ ಈಶ್ವರನಾದುದರಿಂದ ಮತ್ತು ಶಾಸಕನಾದುದರಿಂದ ಅವನು ನನ್ನನ್ನು ಕೃಷ್ಣಾಜಿನ-ನಾರುಮಡಿಗಳ ನ್ನುಡಿಸಿ ಅರಣ್ಯಕ್ಕಾದರೂ ಕಳುಹಿಸಬಹುದು. ರಾಜ್ಯದ ಸಿಂಹಾಸನ ದಲ್ಲಾದರೂ ಕೂರಿಸಬಹುದು. ಧರ್ಮಜ್ಞನಾದ ತಂದೆಯ ವಿಷಯದಲ್ಲಿ ಜನರಿಂದ ಶ್ಲಾಘಿಸಲ್ಪಟ್ಟ ಗೌರವವು ಎಷ್ಟಿರುವುದೋ–ಅಷ್ಟೇ ಗೌರವವು ತಾಯಿಯ ವಿಷಯದಲ್ಲಿಯೂ ಇರಬೇಕು. ಧರ್ಮಶೀಲರಾದ ನಮ್ಮ ತಾಯಿ-ತಂದೆಗಳಿಬ್ಬರೂ ನನಗೆ 'ವನಂ ಗಚ್ಛ ರಾಘವ–ರಾಘವನೇ! ಅರಣ್ಯಕ್ಕೆ ಹೋಗು'–ಎಂದು ಆಜ್ಞೆಮಾಡಿದರು. ಪೂಜ್ಯರಾದ ತಂದೆ-ತಾಯಿಗಳ ಮಾತಿಗೆ ವಿರುದ್ಧವಾಗಿ ನಾನು ಹೇಗೆ ತಾನೇ ನಡೆದುಕೊಳ್ಳಲಿ? ಅಯೋಧ್ಯೆ

ಯಲ್ಲಿ ನೀನು ಲೋಕಸತ್ಕೃತವಾದ ರಾಜ್ಯಭಾರವನ್ನು ವಹಿಸಿಕೊಳ್ಳಬೇಕು. ನಾನು ನಾರುಮಡಿಯನ್ನುಟ್ಟು ದಂಡಕಾರಣ್ಯದಲ್ಲಿ ವಾಸಮಾಡಬೇಕು. ಎಲ್ಲ ಪ್ರಜೆಗಳ ಸಮ್ಮುಖದಲ್ಲಿ ಮಹಾರಾಜನು ಅಣ್ಣ-ತಮ್ಮಂದಿರಿಗೆ ಹೀಗೆ ವಿಭಾಗ ಮಾಡಿಕೊಟ್ಟು, ಆಜ್ಞೆಯನ್ನು ಪರಿಪಾಲಿಸುವಂತೆ ಹೇಳಿ ಸ್ವರ್ಗವನ್ನೈದಿದನು. ಲೋಕಗುರುವಾದ, ಧರ್ಮಾತ್ಮನಾದ, ತಂದೆಯಾದ ದಶರಥನೇ ನಿನಗೆ ಪ್ರಮಾಣಭೂತನು. ತಂದೆಯು ನಿನ್ನ ಭಾಗಕ್ಕೆ ಕೊಟ್ಟಿರುವ ರಾಜ್ಯವನ್ನು ಉಪಭೋಗಿಸಲು ನೀನು ಯೋಗ್ಯನಾಗಿರುವೆ. ಹದಿನಾಲ್ಕು ವರ್ಷಗಳ ಕಾಲ ದಂಡಕಾರಣ್ಯದಲ್ಲಿದ್ದುಕೊಂಡು ಮಹಾತ್ಮನಾದ ತಂದೆಯು ನನಗೆ ಕೊಟ್ಟಿರುವ ಭಾಗದ ಫಲವನ್ನು ನಾನು ಉಪಭೋಗಿಸುತ್ತೇನೆ. ಮನುಷ್ಯ ಲೋಕದ ಪ್ರಜೆಗಳಿಂದ ಸತ್ಕರಿಸಲ್ಪಡುತ್ತಿದ್ದ, ಇಂದ್ರನಿಗೆ ಸಮಾನನಾದ, ಮಹಾತ್ಮನಾದ ತಂದೆಯು ನನಗೆ ಏನೆಂದು ಹೇಳಿರುವನೋ ಮತ್ತು ನನ್ನ ಭಾಗಕ್ಕೆ ಯಾವುದನ್ನು ಕೊಟ್ಟಿರುವನೋ ಅದೇ ನನಗೆ ಪರಮಹಿತಕರವಾದುದೆಂದು ಭಾವಿಸುತ್ತೇನೆ. ಅವನ ಆಜ್ಞೆಗೆ ವಿರುದ್ಧವಾಗಿ ಲಭಿಸುವ ಸಮಸ್ತಲೋಕಗಳ ಶಾಶ್ವತವಾದ ಒಡೆತನವೂ ನನಗೆ ಶ್ರೇಯಸ್ಕರವೆಂದೆನಿಸುವುದಿಲ್ಲ.*

೧೦೪ನೆಯ ಸರ್ಗವು ಮುಗಿಯಿತು.

---

*ಶ್ರೀರಾಮನು ಸ್ವರ್ಗದಲ್ಲಿರುವ ತಂದೆಯು ಮಾಡಿದ ಕಾರ್ಯದ ವಿಷಯವಾಗಿ ಪ್ರಸ್ತಾಪವನ್ನು ಮಾಡಬಾರದೆಂಬ ವಾದವನ್ನು ಹಿಡಿಯುತ್ತಾನೆ. ಧರ್ಮಶಾಸ್ತ್ರದ ಪ್ರಕಾರ ಕುಲಕ್ರಮಾಗತವಾದ ಪದ್ಧತಿಯ ಪ್ರಕಾರ ತಂದೆಯು ಮಾಡಿದ್ದು ಸರಿಯೇ ಎಂಬ ಪ್ರಶ್ನೆಗೆ ಅವಕಾಶಕೊಡುವುದಿಲ್ಲ. ತಾಯಿಯ ವರದ ವಿಷಯವಾಗಿಯೂ ಮಾತ ನಾಡಲು ಹೋಗುವುದಿಲ್ಲ. ಅವನ ನಿರ್ಧಾರವಿಷ್ಟೆ :- 'ತಂದೆಗೆ ಪತ್ನೀ-ಪುತ್ರ-ದಾಸರೆಲ್ಲರೂ ಅಧೀನರು. ಅವನು ಯಾರಿಗೆ ಯಾವುದನ್ನಾದರೂ ಕೊಡಬಹುದು. ಅದರ ಸಂಪೂರ್ಣಾಧಿಕಾರ ಅವನಿಗಿರುವುದು. ಅವನ ಅಧಿಕಾರವನ್ನು ಮೊಟಕು ಮಾಡಲು ಯಾರೂ ಸಮರ್ಥರಲ್ಲ. ಯಾರಿಗೆ ಯಾವುದನ್ನು ಅನುಗ್ರಹಿಸಿ ಕೊಡುವನೋ ಅವನದನ್ನು ಪ್ರಸಾದವೆಂದೇ ಸ್ವೀಕರಿಸಿ ಅದರ ಫಲವನ್ನು ಅನುಭವಿಸಬೇಕು. ಮೇಲಾಗಿ ತಂದೆಯು ಮಹಾಧಾರ್ಮಿಕನೆಂದೂ, ಸತ್ಯಸಂಧನೆಂದೂ ಪ್ರಸಿದ್ಧಿ

ರಾಜ್ಯವನ್ನು ಸ್ವೀಕರಿಸುವಂತೆ ಪುನಃ ಭರತನ ಒತ್ತಾಯ: ಶ್ರೀರಾಮನು ಜೀವನದ ಅನಿತ್ಯತೆಯನ್ನು ಪ್ರತಿಪಾದಿಸುತ್ತಾ ತಂದೆಯ ಅವಸಾನಕ್ಕಾಗಿ ದುಃಖಪಡದಂತೆ ಸಮಾಧಾನವನ್ನು ಹೇಳಿ ತಂದೆಯ ಆಜ್ಞೆಯನ್ನು ಪರಿಪಾಲಿಸುವ ಸಲುವಾಗಿಯೇ ರಾಜ್ಯಾಧಿಕಾರವನ್ನು ವಹಿಸುವುದಿಲ್ಲವೆಂದೂ ಅರಣ್ಯದಲ್ಲಿಯೇ ಇರುವುದಾಗಿಯೂ ಭರತನಿಗೆ ದೃಢಪಡಿಸಿದುದು

ತತಃ ಪುರುಷಸಿಂಹಾನಾಂ ವೃತಾನಾಂ ತೈಃ ಸುಹೃದ್ಗಣೈಃ ।
ಶೋಚತಾಮೇವ ರಜನೀ ದುಃಖೇನ ವ್ಯತ್ಯವರ್ತತ ॥೧॥

ಅನಂತರ ಸುಹೃದರ ಸಮೂಹದಿಂದ ಪರಿವೃತರಾಗಿದ್ದ ಆ ಪುರುಷ ಶ್ರೇಷ್ಠರು ಶೋಕಿಸುತ್ತಿದ್ದಂತೆಯೇ ರಾತ್ರಿಯು ಕಳೆದುಹೋಯಿತು. ರಾತ್ರಿಯು ಕಳೆದು ಸುಪ್ರಭಾತವಾಗಲಾಗಿ ರಾಮನ ಸಹೋದರರು ಮಂದಾಕಿನೀನದಿಯಲ್ಲಿ ಮಿಂದು ಪ್ರಾತಃಸಂಧ್ಯೋಪಾಸನೆ-ಜಪಾದಿಗಳನ್ನು ಮಾಡಿ ಸುಹೃದರಿಂದ ಕೂಡಿ ಶ್ರೀರಾಮನ ಬಳಿಗೆ ಬಂದು ಅವನ ಸುತ್ತಲೂ ಮೌನಿಗಳಾಗಿಯೇ ಕುಳಿತರು. ಯಾರೂ ಯಾವ ವಿಷಯವನ್ನೂ ಮಾತನಾಡಲಿಲ್ಲ. ಆಗ ಸುಹೃದರ ಮಧ್ಯದಲ್ಲಿದ್ದ ಭರತನೇ ಮೊದಲು ಮಾತನ್ನು ಪ್ರಾರಂಭಿಸಿ ರಾಮನಿಗೆ ಹೇಳಿದನು :

"ಅಣ್ಣ! ತಂದೆಯು ನನ್ನ ತಾಯಿಗೆ ಅವಳು ಕೇಳಿದ ವರಗಳನ್ನಿತ್ತು

ಹೊಂದಿದ್ದನು. ಈ ಕಾರಣದಿಂದಲೂ ಅವನು ಮಾಡಿದ್ದು ಸರಿಯೇ ತಪ್ಪೇ? ಎಂದು ವಿವೇಚಿಸುವ ಆವಶ್ಯಕತೆಯು ನಮಗಿರುವುದಿಲ್ಲ. ಆದುದರಿಂದ ನೀನು (ಭರತನು) ಅನುಭವಿಸಬೇಕಾದುದನ್ನು ನೀನು ಅನುಭವಿಸು. ನಾನು (ರಾಮನು) ಅನುಭವಿಸಬೇಕಾದುದನ್ನು ನಾನು ಅನುಭವಿಸುತ್ತೇನೆ.'

ಈ ವಾದವನ್ನು ಭರತನೇ ರಾಮನ ಮುಂದೆ ಇಟ್ಟಿದ್ದಿದ್ದರೆ ಅರ್ಥಾತ್ ತಾನೇ ರಾಜ್ಯ ಪ್ರಾಪ್ತಿಗೆ ಅರ್ಹನೆಂದೂ ಹೇಳಿಕೊಂಡಿದ್ದರೆ–ಇದನ್ನು ಧರ್ಮಬಾಹಿರವಾದುದೆಂದು ಪರಿಗಣಿಸಬೇಕಾಗಿದ್ದಿತು. ರಾಮನು ಈ ವಾದವನ್ನು ಮುಂದುಮಾಡಿ ತನ್ನ ಅರಣ್ಯವಾಸದ ನಿರ್ಧಾರವನ್ನು ತೋರಿರುವುದರಿಂದ ಇವನ ವಾದವು ಬಹು ಸಮಂಜಸವಾಗಿ ಕಾಣುತ್ತದೆ.

ಸಂತುಷ್ಟಿಗೊಳಿಸಿದನು. ಅದರ ಪರಿಣಾಮವಾಗಿಯೇ ರಾಜ್ಯವು ನನಗೆ ಲಭಿಸಿತು. ಈಗ ನಿಷ್ಕಂಟಕವಾಗಿರುವ ಆ ರಾಜ್ಯವನ್ನು ನಾನು ನಿನಗೇ ಕೊಡುತ್ತಿದ್ದೇನೆ. ಇದನ್ನು ನೀನು ಉಪಭೋಗಿಸು.

ಮಳೆಗಾಲದಲ್ಲಿ ಎಡೆಬಿಡದೆ ಸುರಿಯುವ ಮಳೆಯ ವೇಗದಿಂದ ಭಗ್ನವಾಗಿ ಹೋದ ಸೇತುವೆಯನ್ನು ದಾಟುವುದು ಅಸಾಧ್ಯವಲ್ಲವೇ? ಹಾಗೆಯೇ ಸಮರ್ಥನಾದ ರಾಜನಿಂದ ವಿಹೀನವಾಗಿರುವ ಈ ಭರತಖಂಡವನ್ನಾಳಲು ನಿನ್ನನ್ನು ಬಿಟ್ಟು ಬೇರೆಯವರಿಂದ ದುಸ್ಸಾಧ್ಯವೇ ಸರಿ. ಕುದುರೆಯಷ್ಟು ವೇಗವಾಗಿ ಕತ್ತೆಯು ಹೋಗಲಾರದು. ಗರುಡನಷ್ಟು ವೇಗವಾಗಿ ಇತರ ಪಕ್ಷಿಗಳು ಹಾರಲಾರವು. ಹಾಗೆಯೇ ಪ್ರಜೆಗಳ ಭರಣ-ಪೋಷಣೆಗಳಲ್ಲಿ ನಿನ್ನನ್ನನುಸರಿಸುವ ಸಾಮರ್ಥ್ಯವು ನನಗಿಲ್ಲ.

ಸುಜೀವಂ ನಿತ್ಯಶಸ್ತಸ್ಯ ಯಃ ಪರೈರುಪಜೀವ್ಯತೇ ।
ರಾಮ ತೇನ ತು ದುರ್ಜೀವಂ ಯಃ ಪರಾನುಪಜೀವತಿ ॥೭॥

ಯಾವನ ಅವಲಂಬನೆಯಿಂದ ಇತರರು ಜೀವಿಸಿರುವರೋ ಮತ್ತು ಇತರರಿಂದ ಯಾವನು ಸೇವಿಸಲ್ಪಡುವನೋ–ಅಂತಹವನದು ಸುಖಜೀವನ. ಯಾವನು ಇತರರ ಅವಲಂಬನೆಯಿಂದ ಜೀವಿಸುವನೋ–ಅವನ ಜೀವನವು ಬಹಳ ದುಃಖಕರವಾದುದು. ಆದುದರಿಂದ ನೀನೀಗಲೇ ಪರಾವಲಂಬನೆಯಿಂದ ಜೀವಿಸಬೇಕಾಗಿರುವ ಈ ಅರಣ್ಯವಾಸವನ್ನು ತೊರೆದು ರಾಜ್ಯಾಧಿಕಾರವನ್ನು ವಹಿಸಿ ಸಕಲರಿಗೂ ಆಶ್ರಯನಾಗು.

ಯಥಾ ತು ರೋಪಿತೋ ವೃಕ್ಷಃ ಪುರುಷೇಣ ವಿವರ್ಧಿತಃ ।
ಹ್ರಸ್ವಕೇನ ದುರಾರೋಹೋ ರೂಢಸ್ಕನ್ಧೋ ಮಹಾದ್ರುಮಃ ॥೮॥

ಸ ಯದಾ ಪುಷ್ಪಿತೋ ಭೂತ್ವಾ ಫಲಾನಿ ನ ನಿದರ್ಶಯೇತ್ ।
ಸ ತಾಂ ನಾನುಭವೇತ್ಪ್ರೀತಿಂ ಯಸ್ಯ ಹೇತೋಃ ಪ್ರರೋಹಿತಃ ॥೯॥

ಏಷೋಪಮಾ ಮಹಾಬಾಹೋ ತಮರ್ಥಂ ವೇತ್ತುಮರ್ಹಸಿ ।
ಯದಿ ತ್ವಮಸ್ಮಾನ್ವೃಷಭೋ ಭರ್ತಾ ಭೃತ್ಯಾನ್ನ ಶಾಧಿ ಹಿ ॥೧೦॥

ಅಣ್ಣ! ಒಬ್ಬನು ಒಂದು ವೃಕ್ಷವನ್ನು ಹುಟ್ಟುಹಾಕುತ್ತಾನೆ. ಅದು ಮೊಳೆಯುತ್ತಲೇ ಸುತ್ತಲೂ ಚೊಕ್ಕಟಗೊಳಿಸಿ ಪಶು-ಪ್ರಾಣಿಗಳು ತಿಂದು

ಹೋಗದ ರೀತಿಯಲ್ಲಿ ಸುತ್ತಲೂ ಬೇಲಿ ಹಾಕುತ್ತಾನೆ. ವರ್ಷಾನುಗತವಾಗಿ ಆ ಗಿಡವು ಹುಲುಸಾಗಿ ಬೆಳೆದು ಮರವಾದಂತೆಲ್ಲಾ ಹುಟ್ಟುಹಾಕಿದವನ ಹೃದಯವು ಆನಂದಿಸುತ್ತಿರುತ್ತದೆ. ಆ ವೃಕ್ಷದ ಮೇಲೆ ಅನಿರ್ವಾಚ್ಯವಾದ ವಾತ್ಸಲ್ಯವು ಹುಟ್ಟುತ್ತದೆ. ಕಾಲಾನುಕ್ರಮದಲ್ಲಿ ಹೆಮ್ಮರವಾಗುತ್ತದೆ. ಕುಳ್ಳನಾಗಿರುವ ಮನುಷ್ಯನಿಗೆ ಅದನ್ನು ಹತ್ತಲೂ ಸಾಧ್ಯವಾಗುವುದಿಲ್ಲ. ಅಷ್ಟು ಎತ್ತರಕ್ಕೆ ಹೋಗುವವರೆಗೂ ಅದನ್ನು ಹುಟ್ಟಿಹಾಕಿದವನ ಆಸೆ-ಆಕಾಂಕ್ಷೆಗಳೆಲ್ಲವೂ ಅದರಲ್ಲಿ ಬಿಡುವ ಪುಷ್ಪ-ಫಲಗಳಲ್ಲಿಯೇ ಕೇಂದ್ರೀಕೃತ ವಾಗಿರುತ್ತದೆ. ಹಲವಾರು ವರ್ಷಗಳಿಂದ ಬಹಳ ಕಷ್ಟಪಟ್ಟು ಆ ವೃಕ್ಷವನ್ನು ಬೆಳೆಸುವುದರ ಕಾರಣವೂ ಇದೇ ಆಗಿರುತ್ತದೆ. ಅಷ್ಟು ಹುಲುಸಾಗಿ, ಚೆನ್ನಾಗಿ ಎತ್ತರವಾಗಿ ಬೆಳೆದ ವೃಕ್ಷವು ಸಕಾಲದಲ್ಲಿ ಪುಷ್ಪಿತವಾಗಿ ಫಲವನ್ನೇ ಕೊಡದೇ ಹೋದರೆ ಅದನ್ನು ಹುಟ್ಟುಹಾಕಿದವನಿಗೆ ಸಂತೋಷವು ಉಂಟಾಗುವುದೇ? ಮಹಾಬಾಹುವೇ! ಇದೊಂದು ನಿದರ್ಶನ. ಇದರ ಅರ್ಥವನ್ನು ನೀನು ತಿಳಿದುಕೊಳ್ಳಬೇಕು. ದಶರಥನು ಮಕ್ಕಳಿಲ್ಲದೇ ಪುತ್ರ ಕಾಮೇಷ್ಟಿಯಾಗವನ್ನು ಮಾಡಿ, ಬಹುಕಷ್ಟದಿಂದ ನಿನ್ನನ್ನು ಪಡೆದು, ನಿನಗೆ ವಿದ್ಯಾಭ್ಯಾಸಗಳೆಲ್ಲವನ್ನೂ ಮಾಡಿಸಿ ತನ್ನಂತೆಯೇ ರಾಜ್ಯಪರಿಪಾಲನೆಮಾಡಲು ಅರ್ಹನಾಗಿರುವೆಯೆಂದು ಮನಗಂಡಿದ್ದಾಗ–ಪ್ರಜೆಗಳೆಲ್ಲರೂ ಅದೇ ಆಕಾಂಕ್ಷೆಯಲ್ಲಿಯೇ ಇದ್ದಾಗ–ಪುರುಷಶ್ರೇಷ್ಠನಾದ, ನಮ್ಮೆಲ್ಲರ ಸ್ವಾಮಿಯಾದ ನೀನು ಸೇವಕರಾದ ನಮ್ಮನ್ನು ಕಾಪಾಡದಿದ್ದರೆ, ನಾನು ಹೇಳಿದ ನಿದರ್ಶನಕ್ಕೆ ಪಾತ್ರನಾಗುವೆ. ನಾನಾಜಾತಿಗಳ ಪ್ರಜೆಗಳೂ, ಶ್ರೇಷ್ಠನಾಯಕರೂ ಅನುದಿನವೂ ಪ್ರಜ್ವಲಿಸುವ ಸೂರ್ಯದೇವನನ್ನು ಸಂದರ್ಶಿಸುವಂತೆ–ರಾಜ್ಯ ಸಿಂಹಾಸನದಲ್ಲಿ ಮಂಡಿಸಿದ ಶತ್ರುಹಂತಕನಾದ ನಿನ್ನನ್ನು ಸಂದರ್ಶಿಸಲಿ. ಅದೇ ರೀತಿಯಲ್ಲಿ ನಿನ್ನನ್ನು ಅಯೋಧ್ಯಾಭಿಮುಖವಾಗಿ ಕರೆದೊಯ್ಯುತ್ತಿರುವಾಗ ಈ ನಮ್ಮ ಮದಿಸಿದ ಆನೆಗಳು ಸಂತೋಷದಿಂದ ಘೀಳಿಡುತ್ತಿರಲಿ. ನಿನ್ನನ್ನೇ ಸದಾ ಏಕಾಗ್ರಚಿತ್ತರಾಗಿ ಧ್ಯಾನಿಸುತ್ತಿರುವ ಸ್ತ್ರೀಯರು ನಿನ್ನ ಪುನರಾಗಮನ ದಿಂದ ಹರ್ಷಿತರಾಗಲಿ."

ಅಯೋಧ್ಯೆಗೆ ಪುನರಾಗಮಿಸಬೇಕೆಂದು ರಾಮನನ್ನು ಪ್ರಾರ್ಥಿಸಿ ಕೊಳ್ಳುತ್ತಿದ್ದ ಭರತನ ದೈನ್ಯಪೂರ್ಣವಾದ ಮಾತುಗಳನ್ನು ಕೇಳಿ ಅಲ್ಲಿ

ನೆರೆದಿದ್ದ ನಾನಾಜಾತಿಗಳ ಪುರಪ್ರಮುಖರು ಭರತನ ಪ್ರಾರ್ಥನೆಯು ಸಾಧುವಾಗಿದೆಯೆಂದು ಭಾವಿಸಿದರು. ರಾಮನನ್ನು ಹೇಗಾದರೂ ಮಾಡಿ ಅಯೋಧ್ಯೆಗೆ ಕರೆದೊಯ್ಯಬೇಕೆಂದು ನಿಶ್ಚಯಿಸಿದ್ದ ಭರತನು–ತನ್ನ ಮಾತಿಗೆ ಅಣ್ಣನು ಸ್ವಲ್ಪವಾದರೂ ಸಮ್ಮತಿಸದೇ ಇದ್ದುದನ್ನು ಕಂಡು ಬಹುದುಃಖಿತ ನಾಗಿ ಗೋಳಾಡುತ್ತಿದ್ದನು. ಹೀಗೆ ದುಃಖಿತನಾಗಿ ವಿಲಪಿಸುತ್ತಿದ್ದ ಯಶಸ್ವಿ ಯಾದ ಭರತನನ್ನು ದೃಢಮನಸ್ಕನಾದ, ಧೀರನಾದ ಶ್ರೀರಾಮನು ನಾನಾ ವಿಧವಾದ ಸಾಂತ್ವವಚನಗಳಿಂದ ಸಮಾಧಾನಗೊಳಿಸಲು ಯತ್ನಿಸಿದನು.

ನಾತ್ಮನಃ ಕಾಮಕಾರೋಽಸ್ತಿ ಪುರುಷೋಽಯಮನೀಶ್ವರಃ ।
ಇತಶ್ಚೇತರತಶ್ಚೈನಂ ಕೃತಾನ್ತಃ ಪರಿಕರ್ಷತಿ ॥೧೫॥

"ಮಗು ಭರತ! ನನ್ನ ವನವಾಸಕ್ಕೆ ನಿನ್ನ ತಾಯಿಯು ಕಾರಣಳಾದಳೆಂದು ತಿಳಿದು ನೀನು ದುಃಖಿಸುತ್ತಿರುವೆಯಾ? ಯಾರ ಕಷ್ಟಕ್ಕೂ ಯಾರೂ ಕಾರಣ ರಲ್ಲ. ಅವರವರ ಕರ್ಮಾನುಸಾರವಾಗಿ ಅವರವರಿಗೆ ಸುಖ-ದುಃಖಗಳು ಒದಗಿಬರುತ್ತವೆ. ಪ್ರಪಂಚದಲ್ಲಿ ಹುಟ್ಟಿದ ಮಾನವನೆಂದಿಗೂ ಸ್ವತಂತ್ರನಲ್ಲ. ಕಾಲಪುರುಷನು ಅವನ ಸುಕರ್ಮ ಅಥವಾ ದುಷ್ಕರ್ಮಗಳಿಗೆ ಅನುಸಾರವಾಗಿ ಮನುಷ್ಯನನ್ನು ಈ ದೇಹದಿಂದ ಆ ದೇಹಕ್ಕೂ, ಈ ಲೋಕದಿಂದ ಆ ಲೋಕಕ್ಕೂ ಸೆಳೆದಾಡುತ್ತಿರುತ್ತಾನೆ.

ಸರ್ವೇ ಕ್ಷಯಾನ್ತಾ ನಿಚಯಾಃ ಪತನಾನ್ತಾಃ ಸಮುಚ್ಛ್ರಯಾಃ ।
ಸಂಯೋಗಾ ವಿಪ್ರಯೋಗಾನ್ತಾ ಮರಣಾನ್ತಂ ಚ ಜೀವಿತಮ್ ॥೧೬॥

ಎಷ್ಟೇ ಐಶ್ವರ್ಯವನ್ನು ಸಂಪಾದಿಸಿದರೂ ಅದು ಕಡೆಗೆ ವಿನಾಶದಲ್ಲಿಯೇ ಕೊನೆಗೊಳ್ಳುತ್ತದೆ. ಲೌಕಿಕವಾದ ಉಚ್ಛ್ರಾಯಸ್ಥಿತಿಯು ಪತನದಲ್ಲಿಯೇ ಕೊನೆಗೊಳ್ಳುತ್ತದೆ. ಪರಸ್ಪರವಾಗಿ ಸೇರುವಿಕೆಯು ವಿಯೋಗದಲ್ಲಿಯೇ ಪರ್ಯವಸಾನ ಹೊಂದುತ್ತದೆ. ಹಾಗೆಯೇ ಈ ಜೀವಿತಕ್ಕೆ ಸಾವೇ ಪರ್ಯವಸಾನ.*

---

*ಅತುಲೈಶ್ವರ್ಯವನ್ನೇ ಸಂಪಾದಿಸಿದರೂ ಆ ಐಶ್ವರ್ಯವು ಕ್ಷಯದಲ್ಲಿಯೇ ಕೊನೆ ಗೊಳ್ಳುತ್ತದೆ. ಇದು ಖಂಡಿತವಾಗಿಯೂ ಶಾಶ್ವತವಾಗಿ ಉಳಿಯುವುದಿಲ್ಲ. ರಾಜನೋ, ಚೋರನೋ, ಅಗ್ನಿಯೋ ಆ ಐಶ್ವರ್ಯವನ್ನು ಅಪಹರಿಸಿಬಿಡುತ್ತಾರೆ ಅಥವಾ

ಯಥಾ ಫಲಾನಾಂ ಪಕ್ವಾನಾಂ ನಾನ್ಯತ್ರ ಪತನಾದ್ಭಯಮ್ ।
ಏವಂ ನರಸ್ಯ ಜಾತಸ್ಯ ನಾನ್ಯತ್ರ ಮರಣಾದ್ಭಯಮ್ ॥೧೭॥

ಯಾವ ರೀತಿಯಲ್ಲಿ ಮಾಗಿದ ಹಣ್ಣುಗಳಿಗೆ ಬಿದ್ದುಹೋಗುವ ಭಯವು ಹೊರತಾಗಿ ಬೇರೆ ಯಾವ ಭಯವೂ ಇಲ್ಲವೋ–ಹಾಗೆಯೇ ಹುಟ್ಟಿದ ಮನುಷ್ಯನಿಗೆ ಮರಣದ ಹೊರತಾಗಿ ಬೇರೆ ಯಾವ ಭಯವೂ ಇಲ್ಲ.

ಯಥಾಗಾರಂ ದೃಢಸ್ಥೂಣಂ ಜೀರ್ಣಂ ಭೂತ್ವಾವಸೀದತಿ ।
ತಥೈವ ಸೀದನ್ತಿ ನರಾ ಜರಾಮೃತ್ಯುವಶಂ ಗತಾಃ ॥೧೮॥

ದೃಢವಾದ ಕಂಬಗಳಿಂದ ಕೂಡಿರುವ ವಿಶಾಲವಾದ ಮಹಾಸೌಧವು ಕಾಲಾನುಕ್ರಮದಲ್ಲಿ ಹೇಗೆ ಜೀರ್ಣವಾಗಿ ವಿನಾಶಹೊಂದುವುದೋ–ಹಾಗೆಯೇ ಮನುಷ್ಯರು ಕೂಡ ಮುಪ್ಪು-ಸಾವುಗಳಿಗೆ ಅಧೀನರಾಗಿ ಕಾಲಾನುಕ್ರಮವಾಗಿ ವಿನಾಶಹೊಂದುತ್ತಾರೆ.

ಅತ್ಯೇತಿ ರಜನೀ ಯಾ ತು ಸಾ ನ ಪ್ರತಿನಿವರ್ತತೇ ।
ಯಾತ್ಯೇವ ಯಮುನಾ ಪೂರ್ಣಾ ಸಮುದ್ರಮುದಕಾರ್ಣವಮ್ ॥

ಕಳೆದುಹೋದ ರಾತ್ರಿಯು ಹಿಂದಿರುಗಿ ಬರುವುದಿಲ್ಲ. ಜಲಪೂರ್ಣವಾದ ಯಮುನಾನದಿಯು ಜಲರಾಶಿಯಿಂದ ಕೂಡಿರುವ ಸಮುದ್ರದ ಕಡೆಗೆ

ದುಂದುಗಾರನೊಬ್ಬನು ವಂಶದಲ್ಲಿ ಹುಟ್ಟಿ ಅತುಲೈಶ್ವರ್ಯವನ್ನೂ ದುರ್ಮಾರ್ಗದಲ್ಲಿ ಕಳೆದುಬಿಡುತ್ತಾನೆ. ಆದುದರಿಂದ ಐಶ್ವರ್ಯವು ಕ್ಷಯದಲ್ಲಿಯೇ ಪರ್ಯವಸಾನ ಹೊಂದುವುದೆಂದು ನಿಶ್ಚಯಿಸಬಹುದಾಗಿದೆ. ಈ ಕಾರಣದಿಂದ ಐಶ್ವರ್ಯವು ಕಳೆದು ಹೋದುದಕ್ಕಾಗಿ ಧೀಮಂತನಾದವನೆಂದಿಗೂ ದುಃಖಿಸುವುದಿಲ್ಲ. ಉಚ್ಛ್ರಾಯ ಸ್ಥಿತಿಯು ಪತನದಲ್ಲಿಯೇ ಪರ್ಯವಸಾನಹೊಂದುತ್ತದೆ. ಉಚ್ಛ್ರಾಯಸ್ಥಿತಿಯು ಶಾಶ್ವತವಲ್ಲ. ಇಂದೊಬ್ಬನು ದೊಡ್ಡ ಅಧಿಕಾರಿಯಾಗಿರುತ್ತಾನೆ. ಆದರೆ ಅವನು ಅದೇ ಅಧಿಕಾರದಲ್ಲಿ ಜೀವಪರ್ಯಂತವಾಗಿ ಇರಲು ಸಾಧ್ಯವಿಲ್ಲ. ಕೆಲವು ವರ್ಷಗಳಾದ ನಂತರ ಅವನನ್ನು ಆ ಅಧಿಕಾರದಿಂದ ಕೆಳಗಿಳಿಸುತ್ತಾರೆ. ಅಥವಾ ಅವನೇ ಅಧಿಕಾರದಿಂದ ನಿವೃತ್ತನಾಗುತ್ತಾನೆ. ಆದುದರಿಂದ ಅಧಿಕಾರವು ಕೈಬಿಟ್ಟುಹೋಯಿತೆಂದು ಯಾರೂ ದುಃಖಿಸಬಾರದು. ಏಕೆಂದರೆ ಉಚ್ಛ್ರಾಯಸ್ಥಿತಿಯು ಪತನದಲ್ಲಿಯೇ ಪರ್ಯವಸಾನ ಹೊಂದುವುದು ಪ್ರಕೃತಿಯ ನಿಯಮವಾಗಿರುತ್ತದೆ. ಮೂರನೆಯದಾಗಿ ಇಂದು ನಾವು ಅಣ್ಣ-ತಮ್ಮ-ಮಗ-ತಂದೆ-ತಾಯಿ-ಪತ್ನೀ ಈ ಸಂಬಂಧವಿಟ್ಟುಕೊಂಡು

ಹರಿಯುತ್ತಲೇ ಇರುತ್ತದೆ. ಅದು ಹಿಂದಿರುಗಿ ಬರಲಾರದು. ಹೀಗೆಯೇ ಹುಟ್ಟಿದ ಮನುಷ್ಯನು ಮರಣದ ಕಡೆಗೆ ಧಾವಿಸುತ್ತಲೇ ಇರುತ್ತಾನೆ.

ಅಹೋರಾತ್ರಾಣಿ ಗಚ್ಛನ್ತಿ ಸರ್ವೇಷಾಂ ಪ್ರಾಣಿನಾಮಿಹ ।
ಆಯೂಂಷಿ ಕ್ಷಪಯನ್ತ್ಯಾಶು ಗ್ರೀಷ್ಮೇ ಜಲಮಿವಾಂಶವಃ ॥೨೦॥

ಹಗಲು-ರಾತ್ರಿಗಳು ಕಳೆದುಹೋಗುತ್ತಲೇ ಇರುತ್ತವೆ. ಗ್ರೀಷ್ಮರ್ತುವಿನಲ್ಲಿ (ಬೇಸಿಗೆಯ ಕಾಲದಲ್ಲಿ) ಸೂರ್ಯನ ಕಿರಣಗಳು ಭೂಮಿಯ ಮೇಲಿರುವ ನೀರನ್ನು ಹೀರಿಕೊಳ್ಳುವಂತೆ–ಕಾಲಪುರುಷನು ಸರ್ವಪ್ರಾಣಿಗಳ ಆಯುಷ್ಯ ವನ್ನೂ ಬೇಗ-ಬೇಗ ಹೀರಿಕೊಳ್ಳುತ್ತಿರುತ್ತಾನೆ.

ಆತ್ಮಾನಮನುಶೋಚ ತ್ವಂ ಕಿಮನ್ಯಮನುಶೋಚಸಿ ।
ಆಯುಸ್ತೇ ಹೀಯತೇ ಯಸ್ಯ ಸ್ಥಿತಸ್ಯ ಚ ಗತಸ್ಯ ಚ ॥೨೧॥

ಭರತ! ಹುಟ್ಟು-ಸಾವುಗಳು ಪ್ರತಿಯೊಂದು ಪ್ರಾಣಿಗೂ ಅನಿವಾರ್ಯ ವೆಂದಾದ ಮೇಲೆ ನೀನು ನಿನ್ನ ಬಗ್ಗೆಯೇ ಚಿಂತಿಸಬೇಕು. ಉಳಿದವರ ವಿಷಯವಾಗಿ ಏಕೆ ಚಿಂತಿಸುವೆ? ಒಬ್ಬನು ಒಂದೆಡೆ ನಿಂತಿದ್ದರೂ ಸರಿಯೇ : ಸಂಚರಿಸುತ್ತಿದ್ದರೂ ಸರಿಯೇ–ಅವನ ಆಯುಷ್ಯವು ಮಾತ್ರ ಕ್ಷಣ-ಕ್ಷಣಕ್ಕೂ ಕಡಿಮೆಯಾಗುತ್ತಲೇ ಇರುತ್ತದೆ.

ಸಹೈವ ಮೃತ್ಯುರ್ವ್ರಜತಿ ಸಹ ಮೃತ್ಯುರ್ನಿಷೀದತಿ ।
ಗತ್ವಾ ಸುದೀರ್ಘಮಧ್ವಾನಂ ಸಹ ಮೃತ್ಯುರ್ನಿವರ್ತತೇ ॥೨೨॥

ಒಂದೆಡೆಯಲ್ಲಿ ಹುಟ್ಟಿದ್ದೇವೆ. "ಸೇರುವಿಕೆ" ಎಂಬುದರ ಜೊತೆಯಲ್ಲಿಯೇ "ಅಗಲು ವಿಕೆ" ಎಂಬುದಿದ್ದೇ ಇರುತ್ತದೆ. ಸೇರುವಿಕೆಯು ಅಗಲುವಿಕೆಯಲ್ಲಿಯೇ ಪರ್ಯವಸಾನ ಹೊಂದುತ್ತದೆ. ಈ ಸಂಬಂಧವು ಕಾಲಾನುಕ್ರಮದಲ್ಲಿ ಕಡಿದಹೋಗಿಯೇ ತೀರಬೇಕು. ಇದು ಶಾಶ್ವತವಾಗಿ ಇರತಕ್ಕುದ್ದಲ್ಲ. (ಒಂದು ಗಾಡಿಯಲ್ಲಿ ಪ್ರಯಾಣಮಾಡುವಾಗ ಯಾರೋ ನಾಲ್ಕಾರು ಮಂದಿ ಸೇರಿ, ಗಾಡಿಯಿಂದಿಳಿದೊಡನೆಯೇ ಪುನಃ ಪ್ರತ್ಯೇಕ ವಾಗುವಂತೆ) ಈ ಸಂಸಾರದಲ್ಲಿ ನಾವಿಂದು ಪಿತೃ-ಪತಿ--ಪುತ್ರ-ಮಿತ್ರ-ಕಳತ್ರರಾಗಿ ಹುಟ್ಟಿ ದ್ದೇವೆ. ಕಾಲವು ಮುಗಿದೊಡನೆಯೇ ಪುನಃ ಕೃತಾಂತನು ಸೆಳೆದೆಡೆಗೆ ಹೊರಟುಹೋಗು ತ್ತೇವೆ. ಆದುದರಿಂದ ಸೇರುವಿಕೆಯು ಅಗಲುವಿಕೆಯಲ್ಲಿಯೇ ಪರ್ಯವಸಾನವಾಗುವು ದೆಂಬ ಸಿದ್ಧಾಂತವನ್ನು ಮಾಡಿಕೊಂಡು ಅದಕ್ಕಾಗಿ ಖಂಡಿತವಾಗಿಯೂ ದುಃಖಿಸ ಕೂಡದು. ಈ ಜೀವಿತವು ಮರಣಾಂತವಾದುದು. ಹುಟ್ಟಿದೊಡನೆಯೇ ಸಾವೆಂಬುದೂ

ಹುಟ್ಟಿದೊಡನೆಯೇ ಮೃತ್ಯುವು ನಮ್ಮ ಜೊತೆಗೂಡುತ್ತದೆ. ನಮ್ಮೊಡನೆಯೇ ಸಂಚರಿಸುತ್ತದೆ. ನಾವು ಕುಳಿತಲ್ಲಿಯೇ ಕುಳಿತುಕೊಳ್ಳುತ್ತದೆ. ಹೀಗೆ ಯಾವಾಗಲೂ ಜೊತೆಯಲ್ಲಿಯೇ ಇರುವ ಮೃತ್ಯುವು ಸುದೀರ್ಘವಾದ ನಮ್ಮ ಜೀವನದ ಹಾದಿಯಲ್ಲಿ ನಮ್ಮೊಡನೆಯೇ ನಡೆದಾಡುತ್ತಾ ಕಡೆಗೆ ನಮ್ಮನ್ನು ಕರೆದುಕೊಂಡೇ ಹಿಂದಿರುಗುತ್ತದೆ.

ಗಾತ್ರೇಷು ವಲಯಃ ಪ್ರಾಪ್ತಾಃ ಶ್ವೇತಾಶ್ಚೈವ ಶಿರೋರುಹಾಃ ।
ಜರಯಾ ಪುರುಷೋ ಜೀರ್ಣಃ ಕಿಂ ಹಿ ಕೃತ್ವಾ ಪ್ರಭಾವಯೇತ್ ॥

ಮುದಿತನವು ಬಂದಿತೆಂದರೆ ಶರೀರಾದ್ಯಂತವಾಗಿ ಚರ್ಮವು ಸುಕ್ಕಾಗುತ್ತದೆ. (ಬಳೆಗಳಂತೆ ಉರುಟಾಗಿ ಉಬ್ಬುತ್ತದೆ.) ತಲೆಗೂದಲುಗಳು ಬಿಳುಪಾಗುತ್ತವೆ. ಮುಪ್ಪಿನಿಂದ ಮಾನವನು ಜೀರ್ಣವಾಗಿ ಹೋಗುತ್ತಾನೆ. ಯಾವ ಉಪಾಯವನ್ನು ಮಾಡಿ ಮೃತ್ಯುವಿನ ಇಂತಹ ಪ್ರಭಾವದಿಂದ ಮುಕ್ತನಾಗಲು ಸಾಧ್ಯವಿದೆ? – ಎಂಬುದನ್ನು ಮನುಷ್ಯನು ಯೋಚಿಸಬೇಕು.

ನನ್ದನ್ತ್ಯುದಿತ ಆದಿತ್ಯೇ ನನ್ದನ್ತ್ಯಸ್ತಮಿತೇ ರವೌ ।
ಆತ್ಮನೋ ನಾವಬುಧ್ಯನ್ತೇ ಮನುಷ್ಯಾ ಜೀವಿತಕ್ಷಯಮ್ ॥೨೪॥

ಸೂರ್ಯನು ಹುಟ್ಟಿದೊಡನೆಯೇ ಮಾನವರು ಧನಾರ್ಜನೆಯ ಕಾಲವು ಪ್ರಾಪ್ತವಾಯಿತೆಂದು ಸಂತೋಷಪಡುತ್ತಾರೆ. ಸೂರ್ಯನು ಅಸ್ತಮಿಸುತ್ತಲೇ ಅದೇ ಮಾನವರು ಕಾಮೋಪಭೋಗದ ಕಾಲವು ಪ್ರಾಪ್ತವಾಯಿತೆಂದು ಸಂತೋಷಪಡುತ್ತಾರೆ. ಅರ್ಥ-ಕಾಮಗಳೆರಡರ ಹೊರತಾಗಿ ಮನುಷ್ಯ

ಸಹ ಬೆನ್ನಿಗೆ ಕಟ್ಟಿದ ಬುತ್ತಿಯಂತೆ ನಮ್ಮ ಹಿಂದೆಯೇ ಇರುತ್ತದೆ. ಇದನ್ನು ನಾವು ಪ್ರತ್ಯಕ್ಷವಾಗಿ ಅನುದಿನವೂ ನೋಡುತ್ತಿದ್ದರೂ ನಮ್ಮ ಸಾವಿನ ಕಡೆಗೆ ನಮ್ಮ ದೃಷ್ಟಿ ಯಿರುವುದಿಲ್ಲ. ಸಾವಿಗೆ ನಾವು ಹೆದರುತ್ತೇವೆ. ಹುಟ್ಟಿರುವ ನಮಗೂ ಒಂದು ದಿನ ಸಾವುಂಟೆಂಬುದು ಒಂದು ಕ್ಷಣವಾದರೂ ನಮ್ಮ ಮನಸ್ಸಿನಲ್ಲಿಯೂ ಸುಳಿಯುವುದಿಲ್ಲ. ಜೀವನವು ಮರಣದಲ್ಲಿಯೇ ಪರ್ಯವಸಾನವಾಗುತ್ತದೆಂಬುದು ಸಿದ್ಧಾಂತವಾದ ಮಾತು. ಅದನ್ನು ಯಾರಿಂದಲೂ ತಪ್ಪಿಸಿಕೊಳ್ಳುವ ಸಾಧ್ಯತೆಯಿಲ್ಲ. ಆದುದರಿಂದ ಐಶ್ವರ್ಯ, ಉಚ್ಚ್ರಾಯಸ್ಥಿತಿ, (ಪದವಿ) ಸಂಬಂಧ ಮತ್ತು ಜೀವನ–ಇವುಗಳೆಲ್ಲವೂ ಕಾಲಾನುಕ್ರಮದಲ್ಲಿ ವಿನಾಶಹೊಂದತಕ್ಕುವುಗಳು. ಕಾಲಾನುಕ್ರಮವಾಗಿ ನಡೆಯುವ ಈ ನಾಲ್ಕು ಪ್ರಕೃತಿನಿಯಮಕ್ಕೆ ಯಾರೂ ದುಃಖಿಸಬಾರದು.

ನಿಗೆ ಬೇರೆ ಯಾವ ಯೋಚನೆಯೂ ಇರುವುದಿಲ್ಲ. ಸೂರ್ಯನ ಉದಯಾಸ್ತ ಗಳಿಂದ ತನ್ನ ಜೀವಿತವು ಕ್ಷಯವಾಗುತ್ತಿರುವುದೆಂಬುದನ್ನು ಮನುಷ್ಯರು ತಿಳಿಯುವುದಿಲ್ಲ.*

ಹೃಷ್ಯನ್ತ್ಯೃತುಮುಖಂ ದೃಷ್ಟ್ವಾ ನವಂ ನವಮಿಹಾಗತಮ್ ।
ಋತೂನಾಂ ಪರಿವರ್ತೇನ ಪ್ರಾಣಿನಾಂ ಪ್ರಾಣಸಂಕ್ಷಯಃ ॥೨೫॥

ಋತುಗಳು ಬಂದಂತೆಲ್ಲಾ ಹೊಸ-ಹೊಸದಾಗಿ ಬಂದಂತೆ ಭಾವಿಸಿ ಋತು ಧರ್ಮಾನುಸಾರವಾಗಿ ಪ್ರಾಪ್ತವಾಗುವ ಫಲ-ಪುಷ್ಪಾದಿಗಳನ್ನು ನೋಡಿ ಮಾನವರು ಹಿಗ್ಗುತ್ತಾರೆ. ಆದರೆ ಋತುಗಳ ಪರಿವರ್ತನೆಯ ಜೊತೆ ಯಲ್ಲಿಯೇ ಪ್ರಾಣಿಗಳ ಆಯುಷ್ಯದ ಕ್ಷಯವೂ ಆಗುವುದೆಂಬುದನ್ನು ಯಾವನೂ ಪರಿಗಣಿಸುವುದಿಲ್ಲ.

ಯಥಾ ಕಾಷ್ಠಂ ಚ ಕಾಷ್ಠಂ ಚ ಸಮೇಯಾತಾಂ ಮಹಾರ್ಣವೇ ।
ಸಮೇತ್ಯ ಚ ವ್ಯಪೇಯಾತಾಂ ಕಾಲಮಾಸಾದ್ಯ ಕಂಚನ ॥೨೬॥

ಏವಂ ಭಾರ್ಯಾಶ್ಚ ಪುತ್ರಾಶ್ಚ ಜ್ಞಾತಯಶ್ಚ ಧನಾನಿ ಚ ।
ಸಮೇತ್ಯ ವ್ಯವಧಾವನ್ತಿ ಧ್ರುವೋ ಹ್ಯೇಷಾಂ ವಿನಾಭವಃ ॥೨೭॥

ಮಹಾಸಮುದ್ರದಲ್ಲಿ ಅಲೆಗಳ ಹೊಡೆತಗಳಿಂದ ಹತ್ತಾರು ಮರದ ದಿಮ್ಮಿಗಳು ಒಟ್ಟಾಗಿ ಸೇರುತ್ತವೆ. ಸ್ವಲ್ಪ ಕಾಲದವರೆಗೂ ಹಾಗೆ ಒಟ್ಟಾ ಗಿದ್ದು ಅನಂತರ ಅದೇ ಅಲೆಗಳ ಬಡಿತದಿಂದಲೇ ಬೇರ್ಪಟ್ಟು ಹೋಗು ತ್ತವೆ. ಹೀಗೆಯೇ ಭಾರ್ಯೆ, ಪುತ್ರ, ಜ್ಞಾತಿಗಳು, ಐಶ್ವರ್ಯ–ಇವೆಲ್ಲವೂ

---

*ಬಾಳಾಟವನ್ನು ಒಂದು ದಿನ ಆಡಿದೆನಲ್ಲಾ! ಎಂತಹ ಧನ್ಯ ನಾನು – ಎಂದು ಸಂತೋಷಪಡುತ್ತಾರೆ. ವಿವೇಕಿಗಳಾದವರು ಒಂದು ದಿವಸ ವ್ಯರ್ಥವಾಯಿತಲ್ಲಾ! ಎಂದು ಚಿಂತೆಪಟ್ಟು ಮುಂದಿನ ದಿವಸಗಳನ್ನು ಸದುಪಯೋಗಪಡಿಸಿಕೊಳ್ಳಲು ಯತ್ನಿಸುತ್ತಾರೆ. ತ್ರಸ್ತನಿರ್ವಿಣ್ಣಹೃದಯೋ ವ್ಯರ್ಥಂ ವೀಕ್ಷ್ಯ ಗತಂ ವಯಃ । ಇತಿ ನಿರ್ವಿದ್ಯ ತದನು ಧೃತಿಮಾಲಂಬ್ಯ ಸಾತ್ತ್ವಿಕೀಮ್ ॥ ವಿಧೂಯ ಚೇಮಂ ನಿರ್ವೇದಂ ಸರ್ವ ಕಾರ್ಯಾವಸಾದಕಮ್ ।ಅತ ಊರ್ಧ್ವಮಹಂ ತಾವತ್ ಯಾವಜ್ಜೀವಂ ಶ್ರಿಯಃ ಪತೇ ॥ ಪದಯೋರರ್ಚನಂ ಕರ್ತುಂ ಯತಮಾನಃ ಸಮಾಹಿತಃ ॥ ಪೂರ್ಣಬ್ರಹ್ಮಜ್ಞಾನಿಗಳಾದವರಿಗಾದರೋ ಸೂರ್ಯನ ಉದಯಾಸ್ತಮಾನಗಳಿಂದ ಯಾವ ಚಿಂತೆಯೂ ಇಲ್ಲ.

ಒಂದೆಡೆಯಲ್ಲಿ ಕಾಲಕರ್ಮಸಂಯೋಗದಿಂದ ಸೇರುತ್ತವೆ. ಆದರೆ ಅವರೆಲ್ಲರೂ ಕಾಲಾನುಕ್ರಮವಾಗಿ ಅಗಲುವುದಂತೂ ನಿಶ್ಚಯ.

ನಾತ್ರ ಕಶ್ಚಿದ್ಯಥಾಭಾವಂ ಪ್ರಾಣೀ ಸಮಭಿವರ್ತತೇ ।
ತೇನ ತಸ್ಮಿನ್ನ ಸಾಮರ್ಥ್ಯಂ ಪ್ರೇತಸ್ಯಾಸ್ತ್ಯನುಶೋಚತಃ ॥೨೮॥

ಈ ಪ್ರಪಂಚದಲ್ಲಿ ಯಾವ ಪ್ರಾಣಿಯೂ ಕಾಲಾನುಗುಣವಾಗಿ ಉಂಟಾಗುವ ಹುಟ್ಟು-ಮುಪ್ಪು-ಸಾವುಗಳನ್ನು ಅತಿಕ್ರಮಿಸಲು ಸಾಧ್ಯವಾಗುವುದಿಲ್ಲ. (ತನ್ನ ಅಭಿಲಾಷೆಯಂತೆ ಬಂಧುಗಳೊಡನೆ ದೀರ್ಘಕಾಲ ಇರಲು ಸಾಧ್ಯವಿಲ್ಲ.) ಸತ್ತುಹೋದ ವ್ಯಕ್ತಿಗಾಗಿ ನಿರಂತರವೂ ಶೋಕಿಸುವವನಿಗೂ ಸಾವನ್ನು ಮೀರಲು ಸಾಧ್ಯವಾಗುವುದಿಲ್ಲ.

ಯಥಾ ಹಿ ಸಾರ್ಥಂ ಗಚ್ಛನ್ತಂ ಬ್ರೂಯಾತ್ಕಶ್ಚಿತ್ಪಥಿ ಸ್ಥಿತಃ ।
ಅಹಮಪ್ಯಾಗಮಿಷ್ಯಾಮಿ ಪೃಷ್ಠತೋ ಭವತಾಮಿತಿ ॥೨೯॥

ಏವಂ ಪೂರ್ವೈರ್ಗತೋ ಮಾರ್ಗಃ ಪಿತೃಪೈತಾಮಹೋ ಧ್ರುವಃ ।
ತಮಾಪನ್ನಃ ಕಥಂ ಶೋಚೇದ್ಯಸ್ಯ ನಾಸ್ತಿ ವ್ಯತಿಕ್ರಮಃ ॥೩೦॥

ವ್ಯಾಪಾರಿಗಳ ಅಥವಾ ಯಾತ್ರಿಕರ ಗುಂಪೊಂದು ಪ್ರಯಾಣಮಾಡುತ್ತಿರುವಾಗ ದಾರಿಯಲ್ಲಿ ನಿಂತಿರುವವನೊಬ್ಬನು– 'ನಾನೂ ನಿಮ್ಮ ಹಿಂದೆಯೇ ಬರುವೆ' – ಎಂದು ಯಾತ್ರಿಕರಿಗೆ ಹೇಳಿ ಅವರ ಹಿಂದೆಯೇ ಹೋಗುತ್ತಾನೆ. ಹೀಗೆ ನಮ್ಮ ಹಿಂದಿನ ಪಿತೃ-ಪಿತಾಮಹರು ಹೋದ ಮಾರ್ಗವು ನಿಶ್ಚಿತವಾದ ಮಾರ್ಗವೇ ಆಗಿದೆ. ಅದೇ ಹಾದಿಯನ್ನು ಹಿಡಿದು ನಮ್ಮ ತಂದೆಯೂ ಹೋಗಿದ್ದಾನೆ. ಇದನ್ನು ಅತಿಕ್ರಮಿಸಲು ಯಾರಿಂದಲೂ ಸಾಧ್ಯವಿಲ್ಲ. ಹೀಗಿರುವಾಗ ತಂದೆಯು ಸ್ವರ್ಗಸ್ಥನಾದುದಕ್ಕಾಗಿ ಶೋಕಪಡುವ ಕಾರಣವಿಲ್ಲ.

ಅವರ ಹೃದಯಾಕಾಶದಲ್ಲಿ ಜ್ಞಾನಸೂರ್ಯನು ಸದಾ ಬೆಳಗುತ್ತಿರುತ್ತಾನೆ. ಕಾಲದ ಉಪಾಧಿಗೆ ಒಳಪಡದೇ ಇರುವ ಅಮರವಾದ ಆತ್ಮಜ್ಯೋತಿಯ ಆನಂದದಲ್ಲಿಯೇ ಅವರು ಸದಾ ಮಗ್ನರಾಗಿರುತ್ತಾರೆ. ಹೃದಾಕಾಶೇ ಚಿದಾದಿತ್ಯಃ ಸದಾ ಭಾತಿ ನಿರನ್ತರಮ್ । ಉದಯಾಸ್ತಮಯೌ ನ ಸ್ತಃ ಕಥಂ ಸನ್ಧ್ಯಾ ವಿಧೀಯತೇ ॥ ಧನ್ಯೋಽಹಂ ಧನ್ಯೋಽಹಂ ಕರ್ತವ್ಯಂ ಮೇ ನ ವಿದ್ಯತೇ ಕಿಂಚಿತ್ । ಧನ್ಯೋಽಹಂ ಧನ್ಯೋಽಹಂ ತೃಪ್ತಿರ್ಮೇ ಕೋ ರಮಾ ಭವೇಲ್ಲೋಕೇ ॥

ವಯಸಃ ಪತಮಾನಸ್ಯ ಸ್ರೋತಸೋ ವಾನಿವರ್ತಿನಃ ।
ಆತ್ಮಾ ಸುಖೇ ನಿಯೋಕ್ತವ್ಯಃ ಸುಖಭಾಜಃ ಪ್ರಜಾಃ ಸ್ಮೃತಾಃ ॥೩೧॥

ನದಿಯಲ್ಲಿ ಹರಿದುಹೋದ ನೀರು ಹಿಂದಕ್ಕೆ ಬರಲಾರದು. ಅಂತೆಯೇ ಕಳೆದುಹೋದ ಆಯುಷ್ಯವನ್ನು ಹಿಂದಿರುಗಿ ಪಡೆಯಲೂ ಸಾಧ್ಯವಿಲ್ಲ. ಆದುದರಿಂದ ಆತ್ಮವನ್ನು ಕಲ್ಯಾಣಕ್ಕೆ ಸಾಧನಭೂತವಾದ ಧರ್ಮಮಾರ್ಗದಲ್ಲಿ ತೊಡಗಿಸಬೇಕು. ಅಂತಹ ಮನುಷ್ಯರೇ ನಿಜವಾದ ಸುಖವನ್ನು ಅನುಭವಿಸತಕ್ಕವರೆಂದು ಹೇಳಲ್ಪಟ್ಟಿದ್ದಾರೆ.*

ಧರ್ಮಾತ್ಮನಾದ ಪೃಥಿವೀಪತಿಯಾದ ನಮ್ಮ ತಂದೆಯು ಸಮಸ್ತವಾದ ಶುಭಕಾರಕಗಳಾದ ಯಜ್ಞಗಳನ್ನು ಮಾಡಿ ಯಥೇಚ್ಛವಾಗಿ ದಕ್ಷಿಣೆಗಳನ್ನು ಕೊಟ್ಟು ಪಾಪಗಳೆಲ್ಲವನ್ನೂ ಕಳೆದುಕೊಂಡು ಸ್ವರ್ಗಕ್ಕೆ ಹೋಗಿರುವನು. ಸೇವಕವರ್ಗದವರನ್ನೂ ಚೆನ್ನಾಗಿ ಭರಿಸಿ-ಪೋಷಿಸುತ್ತಿದ್ದುದರಿಂದಲೂ, ಪ್ರಜೆಗಳನ್ನು ಧರ್ಮದಿಂದ ಪರಿಪಾಲನೆಮಾಡುತ್ತಿದ್ದುದರಿಂದಲೂ, ಧರ್ಮದಿಂದ ಅರ್ಥವನ್ನು ಸಂಗ್ರಹಿಸುತ್ತಿದ್ದುದರಿಂದಲೂ ನಮ್ಮ ತಂದೆಯು ಪಾಪರಹಿತನಾಗಿ ಸ್ವರ್ಗಕ್ಕೆ ಹೋದನು. ಶುಭವಾದ ಮತ್ತು ಇಷ್ಟವಾದ ಕರ್ಮಗಳಿಂದಲೂ ಬಹುದಕ್ಷಿಣೆಗಳುಳ್ಳ ಯಜ್ಞಗಳಿಂದಲೂ ಪಾಪವನ್ನು ಕಳೆದುಕೊಂಡು ಪಾಪರಹಿತನಾಗಿ ಸ್ವರ್ಗಕ್ಕೆ ಹೋದನು. ಅನೇಕವಿಧವಾದ ಕಾಮ್ಯಯಜ್ಞಗಳನ್ನು ಮಾಡಿ ಸಕಲವಿಧವಾದ ಸುಖೋಪಭೋಗಗಳನ್ನು ಅನುಭವಿಸಿ ದೀರ್ಘಕಾಲ ಜೀವಿಸಿದ್ದು ಸ್ವರ್ಗಕ್ಕೆ ಹೋದನು. ಆ ನಮ್ಮ ತಂದೆಯು ಸ್ವರ್ಗಕ್ಕೆ ಹೋದುದಕ್ಕಾಗಿ ದುಃಖಪಡಬೇಕಾದ ಕಾರಣವಿಲ್ಲ. ನಮ್ಮ ತಂದೆಯು ಅತಿಜೀರ್ಣವಾಗಿ ಹೋಗಿದ್ದ ಮನುಷ್ಯದೇಹವನ್ನು ಪರಿತ್ಯಜಿಸಿ ಬ್ರಹ್ಮಲೋಕದಲ್ಲಿ ವಿಹರಿಸಲು ಯೋಗ್ಯವಾದ ದೈವೀ ಸಂಪತ್ತಿನಿಂದ ಕೂಡಿದ ದಿವ್ಯಶರೀರವನ್ನು ಪಡೆದುಕೊಂಡಿರುವನು.

---

*ಆತ್ಮನಿಗೆ ಸುಖವೆಂದರೆ–ದೇಹಾತ್ಮಭಾವವನ್ನು ತೊರೆದು ಸರ್ವತಂತ್ರಸ್ವತಂತ್ರನಾದ, ಚಿನ್ಮಯನಾದ, ಹೃದಯಾಂತರಾಳದಲ್ಲಿರುವ ಪರಮಾತ್ಮನನ್ನು ಒಳಗಿನ ಕಣ್ಣಿಂದ ಕಾಣಬೇಕು. ಆಗ ಅನುಭವಕ್ಕೆ ಬರುವುದೇ ಆತ್ಮಾನಂದ. ಈ ರೀತಿಯಲ್ಲಿ ದೇಹಾತ್ಮಭಾವವನ್ನು ತೊರೆದು ಆತ್ಮಜ್ಞಾನದಲ್ಲಿ ನಿರತರಾಗಿರುವ ಪ್ರಜೆಗಳೇ ಸುಖಿಗಳಾದ ಪ್ರಜೆಗಳೆಂದು ಕರೆಯಲ್ಪಡುತ್ತಾರೆ. ಇವರೇ ನಿಜವಾದ ಸುಖಾನುಭವಿಗಳು. ಆತ್ಮದರ್ಶನ ಸುಖವೊಂದನ್ನುಳಿದು ಉಳಿದ ಸುಖಗಳೆಲ್ಲವೂ ನಶ್ವರವಾದುವುಗಳು.

ಸಕಲಶಾಸ್ತ್ರಗಳನ್ನೂ ತಿಳಿದಿರುವ ಬುದ್ಧಿಶಾಲಿಯಾದ, ಪ್ರಾಜ್ಞನಾದ, ನಿನ್ನಂತಹ ಅಥವಾ ನನ್ನಂತಹ ವಿದ್ವಾಂಸನು ತಂದೆಯು ಸ್ವರ್ಗವನ್ನೈದಿದುದಕ್ಕಾಗಿ ಶೋಕಪಡಬಾರದು. ಎಂತಹುದೇ ಸಂದರ್ಭದಲ್ಲಿಯೂ ಬುದ್ಧಿಶಾಲಿಯಾದವನು ಮತ್ತು ಧೀರನು ಇಂತಹುದೇ ಬಹುವಿಧವಾದ ಶೋಕಗಳನ್ನು ತಡೆದುಕೊಳ್ಳಬೇಕು. ಶೋಕದ ಪರಿಣಾಮವಾಗಿ ಉಂಟಾಗುವ ಗೋಳಾಟವನ್ನೂ ರೋದನವನ್ನೂ ನಿಲ್ಲಿಸಬೇಕು.

ಭರತ! ಸ್ವಸ್ಥನಾಗು. ವೃಥಾ ದುಃಖಪಡಬೇಡ. ವಾಗ್ಮಿಗಳಲ್ಲಿ ಶ್ರೇಷ್ಠನಾದವನೇ! ಜಿತೇಂದ್ರಿಯನಾದ ತಂದೆಯು ನಿರ್ದೇಶಿಸಿರುವಂತೆ ಅಯೋಧ್ಯೆಗೆ ಹಿಂದಿರುಗಿ ಅಲ್ಲಿಯೇ ರಾಜ್ಯಭಾರಮಾಡುತ್ತಿರು. ಪುಣ್ಯಕರ್ಮನಾದ ಅವನಿಂದಲೇ ನಿರ್ದೇಶಿತನಾಗಿರುವ ನಾನು ಇದೇ ಅರಣ್ಯದಲ್ಲಿಯೇ ಇದ್ದುಕೊಂಡು ತಂದೆಯ ಆಜ್ಞೆಯನ್ನು ಪಾಲಿಸುತ್ತೇನೆ. ತಂದೆಯ ಆಜ್ಞೆಯನ್ನು ಉಲ್ಲಂಘಿಸಿ ನಡೆಯುವುದು ನ್ಯಾಯಸಮ್ಮತವಾಗುವುದಿಲ್ಲ. ನೀನೂ ಕೂಡ ಅವನ ಆಜ್ಞೆಯನ್ನು ಮಾನ್ಯಮಾಡಲೇಬೇಕು. ಏಕೆಂದರೆ : ಅವನೇ ನಮ್ಮ ಬಂಧುವೂ ಜನ್ಮದಾತನಾದ ತಂದೆಯೂ ಆಗಿರುತ್ತಾನೆ. ಧರ್ಮಮಾರ್ಗಾವಲಂಬಿಗಳಿಗೆ ಸಮ್ಮತವಾಗಿರುವ ತಂದೆಯ ಆ ಮಾತನ್ನೇ ನಾನು ಈಗ ಕೈಗೊಂಡಿರುವ ವನವಾಸವೆಂಬ ಕ್ರಿಯೆಯಿಂದ ಪರಿಪಾಲಿಸುತ್ತೇನೆ. ಧಾರ್ಮಿಕನಾದ, ಕರುಣಾಶಾಲಿಯಾದ, ತಂದೆ-ತಾಯಿ-ಗುರುಗಳಿಗೆ ವಿಧೇಯನಾಗಿ ಉತ್ತಮಲೋಕವನ್ನು ಬಯಸುವ ಮನುಷ್ಯನು ಗುರುಜನರ ಆಜ್ಞೆಯನ್ನು ಪಾಲಿಸಲೇಬೇಕು. ನರಶ್ರೇಷ್ಠನೇ! ನಮ್ಮ ತಂದೆಯಾದ ದಶರಥನ ಶುಭಚಾರಿತ್ರ್ಯವನ್ನು ಗಮನದಲ್ಲಿಟ್ಟು ನಿನ್ನ ಸ್ವಭಾವಕ್ಕೆ ಅನುಗುಣವಾಗಿ ಆತ್ಮೋನ್ನತಿಗಾಗಿ ಪ್ರಯತ್ನಿಸು."

ಮಹಾತ್ಮನಾದ ಪ್ರಭುವಾದ ಶ್ರೀರಾಮನು ತಂದೆಯ ಆಜ್ಞೆಯನ್ನು ಪರಿಪಾಲಿಸುವ ಸಲುವಾಗಿ ಭರತನಿಗೆ ಅರ್ಥಪೂರ್ಣವಾಗಿ ಇಷ್ಟು ಮಾತುಗಳನ್ನು ಹೇಳಿ ವಿರಮಿಸಿದನು.

೧೦೫ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೧೦೬ನೆಯ ಸರ್ಗ

ಭರತನು ಶ್ರೀರಾಮನನ್ನು ಅಯೋಧ್ಯೆಗೆ ಹಿಂದಿರುಗಲು ಮತ್ತು ರಾಜ್ಯವನ್ನು ಸ್ವೀಕರಿಸಲು ಪುನಃ ಪ್ರಾರ್ಥಿಸಿದುದು

ಏವಮುಕ್ತ್ವಾ ತು ವಿರತೇ ರಾಮೇ ವಚನಮರ್ಥವತ್ ।
ತತೋ ಮನ್ದಾಕಿನೀತೀರೇ ರಾಮಂ ಪ್ರಕೃತಿವತ್ಸಲಮ್ ॥೧॥

ಉವಾಚ ಭರತಶ್ಚಿತ್ರಂ ಧಾರ್ಮಿಕೋ ಧಾರ್ಮಿಕಂ ವಚಃ ।
ಕೋ ಹಿ ಸ್ಯಾದೀದೃಶೋ ಲೋಕೇ ಯಾದೃಶಸ್ತ್ವಮರಿಂದಮ ॥೨॥

ಹೀಗೆ ಮಂದಾಕಿನೀನದಿಯ ತೀರದಲ್ಲಿ ಶ್ರೀರಾಮನು ಅರ್ಥಪೂರ್ಣವಾದ ಮಾತುಗಳನ್ನು ಭರತನಿಗೆ ಹೇಳಿ ಸುಮ್ಮನಾಗಲು–ಪ್ರಜಾವತ್ಸಲನಾದ, ಧಾರ್ಮಿಕನಾದ ಶ್ರೀರಾಮನಿಗೆ ಧಾರ್ಮಿಕನಾದ ಭರತನು ಸ್ವಾರಸ್ಯವಾಗಿಯೂ ಧರ್ಮಸಮ್ಮತ್ರವಾಗಿಯೂ ಇದ್ದ ಈ ಮಾತುಗಳನ್ನು ಹೇಳಿದನು :

"ಅರಿಂದಮನೇ! ಪ್ರಪಂಚದಲ್ಲಿ ನಿನ್ನಂತಿರಲು ಬೇರಾರಿಂದ ತಾನೇ ಸಾಧ್ಯವಾಗುವುದು ?

ನ ತ್ವಾಂ ಪ್ರವ್ಯಥಯೇದ್ದುಃಖಂ ಪ್ರೀತಿರ್ವಾ ನ ಪ್ರಹರ್ಷಯೇತ್ ।
ಸಂಮತಶ್ಚಾಸಿ ವೃದ್ಧಾನಾಂ ತಾಂಶ್ಚ ಪೃಚ್ಛಸಿ ಸಂಶಯಾನ್ ॥೩॥

ದುಃಖಪ್ರಸಂಗವು ನಿನ್ನನ್ನು ದುಃಖಿತನನ್ನಾಗಿ ಮಾಡುವುದಿಲ್ಲ. ಸಂತೋಷವಾರ್ತೆಯೂ ನಿನಗೆ ಹೆಚ್ಚಿನ ಸಂತೋಷವನ್ನು ಉಂಟುಮಾಡುವುದಿಲ್ಲ. ವೃದ್ಧರಿಗೂ ನೀನು ಸಮ್ಮಾನನೀಯನಾಗಿರುವೆ. ಆದರೂ ಅವರಲ್ಲಿಗೆ ಹೋಗಿ ಧರ್ಮಸಂಶಯಗಳ ಬಗೆಗೆ ಪ್ರಶ್ನೆಮಾಡುವೆ.

ಯಥಾ ಮೃತಸ್ತಥಾ ಜೀವನ್ಯಥಾಸತಿ ತಥಾ ಸತಿ ।
ಯಸ್ಯೈಷ ಬುದ್ಧಿಲಾಭಃ ಸ್ಯಾತ್ಪರಿತಪ್ಯೇತ ಕೇನ ಸಃ ॥೪॥

ಮೃತನಾದವನಿಗೆ ಪತ್ನೀ-ಪುತ್ರರ ಸಂಬಂಧವಿರುವುದಿಲ್ಲ. ಹಾಗೆಯೇ ಜೀವಿಸಿದ್ದಾಗಲೂ ಪತ್ನೀ-ಪುತ್ರ-ಜ್ಞಾತಿಗಳ ಸಂಬಂಧವು ನಶ್ವರವೆಂದು ಭಾವಿಸುವ, ಇಲ್ಲದಿರುವ ವಸ್ತುವಿನಲ್ಲಿ ಆಕಾಂಕ್ಷೆಯಾಗಲೀ ಇರುವ ವಸ್ತುವಿನಲ್ಲಿ

ಸ್ನೇಹವಾಗಲೀ ಇಲ್ಲದ ಬುದ್ಧಿಯು ಯಾವನಿಗಿರುವುದೋ–ಅಂತಹವನು ಏತಕ್ಕಾಗಿ ಪರಿತಪಿಸಬೇಕು?*

ಪರಾವರಜ್ಞೋ ಯಶ್ಚ ಸ್ಯಾತ್ತಥಾ ತ್ವಂ ಮನುಜಾಧಿಪ।
ಸ ಏವಂ ವ್ಯಸನಂ ಪ್ರಾಪ್ಯ ನ ವಿಷೀದಿತುಮರ್ಹತಿ ॥೫॥

ನಿನ್ನಂತೆ ಆತ್ಮಾನಾತ್ಮವಿವೇಕವುಳ್ಳವನು ಇಂತಹ ವ್ಯಸನಗಳು ಒದಗಿಬಂದರೂ ವಿಷಾದಿಸುವುದಿಲ್ಲ.

ಮನುಜಾಧಿಪನೇ! ನೀನು ದೇವತೆಗಳ ಪರಾಕ್ರಮಕ್ಕೆ ಅನುಗುಣವಾದ ಪರಾಕ್ರಮವನ್ನು ಹೊಂದಿರುವವನು. ಮಹಾತ್ಮನು. ಸತ್ಯಪ್ರತಿಜ್ಞನು. ಸರ್ವಜ್ಞನು. ಮುಂದಿನ ಆಗುಹೋಗುಗಳನ್ನು ತಿಳಿದಿರುವವನು ಮತ್ತು ಬುದ್ಧಿವಂತನು. ಹೀಗೆ ಸಕಲಗುಣಪರಿಪೂರ್ಣನಾದ, ಪ್ರಾಣಿಗಳ ಉತ್ಪತ್ತಿ-ಲಯಗಳ ರಹಸ್ಯವನ್ನು ಸಂಪೂರ್ಣವಾಗಿ ತಿಳಿದಿರುವ ನಿನ್ನನ್ನು ನಮ್ಮಂತಹವರಿಂದ ಸಹಿಸಲು ಅಶಕ್ಯವಾದ ಮಹಾದುಃಖವು ಕೂಡ ಪೀಡಿಸಲಾರದು.

ನಾನು ನನ್ನ ಸೋದರಮಾವನ ಮನೆಗೆ ಹೋಗಿದ್ದಾಗ ನನ್ನ ಸಲುವಾಗಿ ಕ್ಷುದ್ರೆಯಾದ ನನ್ನ ತಾಯಿಯು ಪಾಪಕಾರ್ಯವನ್ನು ಮಾಡಿಬಿಟ್ಟಳು. ಅದು ನನಗೆ ಇಷ್ಟವಾದ ಕಾರ್ಯವಲ್ಲ. ಆದುದರಿಂದ ನನ್ನ ವಿಷಯದಲ್ಲಿ ಪ್ರಸನ್ನನಾಗು.

---

*ಸತ್ತಮೇಲೆ ಹೇಗಿರುತ್ತಾನೆಯೋ ಬದುಕಿದ್ದಾಗಲೂ ಹಾಗೆಯೇ ಇರುವವನು (ಎಂದರೆ ಸತ್ತಮೇಲೆ ಪಶು-ಪತ್ನೀ-ಸುತಾಲಯಗಳ ಸಂಬಂಧವಿರುವುದಿಲ್ಲ. ಬದುಕಿದ್ದಾಗಲೂ ಸಮುದ್ರದಲ್ಲಿ ಸೇರಿಕೊಳ್ಳುವ ಕಟ್ಟಿಗೆಯಂತೆ ಇವರು ತನ್ನ ಪತ್ನೀ-ಪುತ್ರರಾಗಿದ್ದಾರೆಂದೂ, ಇವರು ಸ್ವಲ್ಪ ಕಾಲವಿದ್ದು ಅನಂತರ ಬೇರ್ಪಡತಕ್ಕವರೆಂದೂ, ಇವರಿಗೂ ತನಗೂ ಯಾವ ವಿಧವಾದ ಸಂಬಂಧವೂ ಇಲ್ಲವೆಂದೂ, ತನ್ನ ಸಂಬಂಧವು ತನ್ನ ಆತ್ಮದೊಡನೆ ಮಾತ್ರವೇ ಇರುವುದೆಂದೂ, ಆತ್ಮೋದ್ಧಾರವೇ ತನ್ನ ಮುಖ್ಯ ಕರ್ತವ್ಯವೆಂದೂ ತಿಳಿಯುವವನೂ.: ತಾವರೆಯ ಎಲೆಯ ಮೇಲಿನ ನೀರಿನಂತೆ ತನಗೂ ಋಣಾನುಸಂಬಂಧದಿಂದ ಬಂದಿರುವ ಪತ್ನೀ-ಪುತ್ರರಿಗೂ ಸ್ವಲ್ಪವಾದರೂ ಸಂಬಂಧವೇ ಇಲ್ಲವೆಂದು ತಿಳಿಯುವವನೂ–ಜೀವಿಸಿದ್ದಾಗಲೂ ಸತ್ತನಂತರವೂ ಯಾವ ವಿಧವಾದ ವ್ಯತ್ಯಾಸವನ್ನೂ ಹೊಂದುವುದಿಲ್ಲ. ಎರಡೂ ಸ್ಥಿತಿಗಳೂ ಒಂದೇ ಎಂದು ಭಾವಿಸುತ್ತಾನೆ. ದೇಹವನ್ನು ಬಿಡುವಾಗ ಹಳೆಯ ಅಂಗಿಯನ್ನು ತೆಗೆದೊಗೆಯುವ ರೀತಿಯಲ್ಲಿ

ನಾನೇನು ಮಾಡಲಿ ರಾಮ! ಧರ್ಮಪಾಶದಿಂದ ಬಂಧಿತನಾಗಿದ್ದೇನೆ. ಧರ್ಮಶಾಸ್ತ್ರಗಳು ಸ್ತ್ರೀವಧೆಯನ್ನು ನಿಷೇಧಿಸಿವೆ. ಹಾಗಿಲ್ಲದಿದ್ದರೆ ಶಿಕ್ಷಾರ್ಹಳಾದ ಮಹಾಪಾಪಕರ್ಮವನ್ನೆಸಗಿರುವ ನನ್ನ ಈ ತಾಯಿಯನ್ನು ಈ ವೇಳೆಗಾಗಲೇ ಉಗ್ರವಾದ ಶಿಕ್ಷೆಗೆ ಗುರಿಪಡಿಸಿ ವಧಿಸುತ್ತಿದ್ದೆನು. ಆದರೆ ಸತ್ಕುಲಪ್ರಸೂತನಾದ ಧರ್ಮಾತ್ಮನಾದ ದಶರಥನಿಂದ ಜನ್ಮವನ್ನು ಪಡೆದಿರುವ, ಧರ್ಮಾಧರ್ಮಗಳ ವಿವೇಚನೆಯಿರುವ ನಾನು ಅಧರ್ಮಭೂಯಿಷ್ಠವಾದ ಲೋಕಗರ್ಹಿತವಾದ ಕಾರ್ಯವನ್ನು ಹೇಗೆ ತಾನೇ ಮಾಡಲಿ? ವಿದ್ಯೆಗಳನ್ನು ಉಪದೇಶಿಸಿದ ಗುರುವಾದುದರಿಂದಲೂ, ಅನೇಕ ಯಜ್ಞಗಳನ್ನು ಮಾಡಿದವನಾದುದರಿಂದಲೂ, ವೃದ್ಧನಾಗಿದ್ದುದರಿಂದಲೂ, ನಮ್ಮೆಲ್ಲರಿಗೂ ಜನ್ಮವನ್ನಿತ್ತ ತಂದೆಯಾದುದರಿಂದಲೂ ಪಿತೃಸ್ವರೂಪನಾದ ದೇವತೆಯೇ ಆಗಿರುವುದರಿಂದಲೂ, ಅವನೀಗ ಸತ್ತುಹೋಗಿರುವುದರಿಂದಲೂ ನಮ್ಮ ತಂದೆಯನ್ನು ನಾನು ಸಂಸತ್ತಿನಲ್ಲಿ ನಿಂದಿಸಲಿಲ್ಲ.

ಕೋ ಹಿ ಧರ್ಮಾರ್ಥಯೋರ್ಹೀನಮೀದೃಶಂ ಕರ್ಮ ಕಿಲ್ಬಿಷಮ್ ।
ಸ್ತ್ರಿಯಾಃ ಪ್ರಿಯಂ ಚಿಕೀರ್ಷುಃ ಸನ್ಕುರ್ಯಾದ್ಧರ್ಮಜ್ಞ
ಧರ್ಮವಿತ್ ॥೧೨॥

ಜೀರ್ಣವಾದ ದೇಹವನ್ನು ತ್ಯಾಗಮಾಡಿ ಹೊರಟುಹೋಗುತ್ತಾನೆ. ಇಂತಹವನಿಗೆ ಸಾವು-ಬದುಕುಗಳಲ್ಲಿ ವ್ಯತ್ಯಾಸವಿಲ್ಲ. ಇಂತಹವನು ಸಾವಿಗೆಂದಿಗೂ ಹೆದರುವುದಿಲ್ಲ. ಇವನು ತನ್ನ ವಿಷಯದಲ್ಲಿ ಸಾವು-ಹುಟ್ಟುಗಳೆರಡೂ ಸಮಾನವೆಂದು ಭಾವಿಸುವನೇ ಹೊರತು ಇತರರಿಗೆ ಇವನ ವಿಷಯದಲ್ಲಿ 'ಸತ್ತರೇನು-ಇದ್ದರೇನು' ಎಂಬ ಭಾವನೆಯಿರುವುದಿಲ್ಲ. ಜ್ಞಾನಿಯಾದವನು ಯೋಗರತನಾಗಿದ್ದರೂ, ಭೋಗರತ ನಾಗಿದ್ದರೂ ತನ್ನಷ್ಟಕ್ಕೆ ತಾನೇ ಆತ್ಮನಲ್ಲಿ ಮನಸ್ಸನ್ನು ವಿಲೀನಗೊಳಿಸಿ ಆನಂದಿಸುತ್ತಿರುತ್ತಾನೆ. ತನ್ನ ಹೆಂಡತಿ-ಮಕ್ಕಳ ವಿಷಯದಲ್ಲಿ ಮಾಡಬೇಕಾದ ಕರ್ತವ್ಯವನ್ನೂ ಮಾಡುತ್ತಲೇ ಇರುತ್ತಾನೆ. ಒಂದು ವೇಳೆ ಸಂಸಾರಿಯಾಗದಿದ್ದರೂ ಇವನು ಕೃಪಾಕಟಾಕ್ಷದಿಂದ ಅನೇಕರನ್ನು ಉದ್ಧರಿಸಬೇಕಾಗುತ್ತದೆ ಮತ್ತು ಉದ್ಧರಿಸುತ್ತಾನೆ. ಆದುದರಿಂದ ವಿಜ್ಞಾನಿಯಾದವನೆಂದಿಗೂ ಇತರರಿಗೆ 'ಸತ್ತರೇನು-ಇದ್ದರೇನು' ಎಂಬ ಮನೋಭಾವನೆಗೆ ಪಾತ್ರನಾಗುವುದಿಲ್ಲ. ತಾನು ಮಾತ್ರ ಜೀವಿಸಿರುವುದಕ್ಕಾಗಲೀ ಸಾಯುವುದಕ್ಕಾಗಲೀ ವ್ಯತ್ಯಾಸವನ್ನು ಕಾಣುವುದಿಲ್ಲ. ಇದಿಷ್ಟೂ ಅರ್ಥವನ್ನೂ "ಯಥಾ ಮೃತಃ ತಥಾಜೀವನ್" ಎಂಬುದಕ್ಕೆ ಮಾಡಬಹುದಾಗಿದೆ.

ಧರ್ಮಜ್ಞನೇ! ಧರ್ಮಾರ್ಥಗಳೆರಡರಿಂದಲೂ ಹೀನವಾದ ಪಾಪರೂಪವಾದ ಕರ್ಮವನ್ನು ಹೆಂಗಸೊಬ್ಬಳಿಗೆ ಪ್ರಿಯವನ್ನುಂಟುಮಾಡುವ ಸಲುವಾಗಿ ಧರ್ಮದ ರಹಸ್ಯವನ್ನು ತಿಳಿದಿರುವ ಯಾವ ಮನುಷ್ಯನು ತಾನೇ ಮಾಡುವನು?

ಅನ್ತಕಾಲೇ ಹಿ ಭೂತಾನಿ ಮುಹ್ಯನ್ತೀತಿ ಪುರಾಶ್ರುತಿಃ ।
ರಾಜ್ಞೈವಂ ಕುರ್ವತಾ ಲೋಕೇ ಪ್ರತ್ಯಕ್ಷಾ ಸಾ ಶ್ರುತಿಃ ಕೃತಾ ॥೧೩॥

ಅವಸಾನಕಾಲದಲ್ಲಿ ಪ್ರಾಣಿಗಳ ಬುದ್ಧಿಯು ವೈಪರೀತ್ಯವನ್ನು ಹೊಂದುವುದೆಂದೂ, ಮೋಹಗೊಳ್ಳುತ್ತದೆಂದೂ–ನಾವು ಗಾದೆಯನ್ನು ಕೇಳಿದ್ದೆವು. ನಮ್ಮ ರಾಜನೇ ಅವಸಾನಕಾಲದಲ್ಲಿ ಇಂತಹ ಕಾರ್ಯವನ್ನು ಮಾಡಿದನಾದ ಕಾರಣ ಲೋಕದಲ್ಲಿನ ಈ ಗಾದೆಯು ಈಗ ಪ್ರತ್ಯಕ್ಷಾನುಭವಕ್ಕೆ ಬಂದಂತಾಯಿತು.

ಸಾಧ್ವರ್ಥಮಭಿಸಂಧಾಯ ಕ್ರೋಧಾನ್ಮೋಹಾಚ್ಚ ಸಾಹಸಾತ್ ।
ತಾತಸ್ಯ ಯದತಿಕ್ರಾನ್ತಂ ಪ್ರತ್ಯಾಹರತು ತದ್ಭವಾನ್ ॥೧೪॥

ಅಣ್ಣ! ಕ್ರೋಧ, ಮೋಹ ಮತ್ತು ಸಾಹಸಗಳು ಈ ಕೆಟ್ಟಪರಿಣಾಮ

"ಯಥಾಸತಿ ತಥಾ ಸತಿ" ಜ್ಞಾನಿಯಾದವನು ಸತ್ಪುರುಷರನ್ನು ಎಷ್ಟು ಪ್ರೇಮದಿಂದ ಕಾಣುತ್ತಾನೆಯೋ–ಅಷ್ಟೇ ಪ್ರೇಮದಿಂದ ಅಸತ್ಪುರುಷರನ್ನೂ ಕಾಣುತ್ತಾನೆ. "ಶುನಿ ಚೈವ ಶ್ವಪಾಕೇ ಚ ಪಣ್ಡಿತಾಃ ಸಮದರ್ಶಿನಃ" ಎಲ್ಲರ ವಿಷಯದಲ್ಲಿಯೂ ಒಂದೇ ವಿಧವಾದ ಸಮಭಾವವನ್ನಿಟ್ಟಿರುತ್ತಾನೆ. ಯಾರನ್ನು ನೋಡಿದರೂ ಅವರ ಹೃದಯಾಂತರಾಳದಲ್ಲಿರುವ ಬ್ರಹ್ಮವಸ್ತುವನ್ನೇ ಜ್ಞಾನಿಯು ನೋಡುತ್ತಾನಾದ್ದರಿಂದ ಈ ವಿಧವಾದ ಸಮಭಾವವು ಅವನಿಗೆ ಸ್ವಾಭಾವಿಕವಾಗಿಯೇ ಇರುತ್ತದೆ. ಇರುವ ವಸ್ತುವಿನಲ್ಲಿ ಹೆಚ್ಚು ಅಭಿಮಾನವಾಗಲೀ, ಇಲ್ಲದ ವಸ್ತುವಿನ ಮೇಲೆ ಹೆಚ್ಚು ಆಸೆಯಾಗಲೀ ಅವನಿಗೆ ಇರುವುದಿಲ್ಲ. ಪರಬ್ರಹ್ಮನ ವಿಷಯದಲ್ಲಿ ಎಷ್ಟು ನಿಷ್ಠೆಯಿಂದಿರುತ್ತಾನೆಯೋ-ಅಸತ್ತೆನಿಸಿದ ಪ್ರಪಂಚದ ವಿಷಯ ದಲ್ಲಿಯೂ ಅಷ್ಟೇ ನಿಷ್ಠೆಯಿಂದಿರುತ್ತಾನೆ. ತನಗೆ ಮಾಡುವ ಕರ್ತವ್ಯವೇನೂ ಇಲ್ಲದಿದ್ದರೂ ಪ್ರಪಂಚಕ್ಕೆ ಆದರ್ಶವನ್ನು ತೋರುವ ಸಲುವಾಗಿ ತಾನು ಮಾಡಬೇಕಾದ ಕರ್ತವ್ಯವನ್ನು ಚಾಚೂ ತಪ್ಪದೆ ಮಾಡುತ್ತಾನೆ. ಇಂತಹ ಬುದ್ಧಿಭಾವವು ಯಾವನಿಗಿರುವುದೋ–ಅವನು ರಾಜಯೋಗಿಯೇ ಸರಿ. ಅಂತಹವನು ಯಾವ ಕಾರಣದಿಂದಲೂ ಯಾವ ವಿಷಯಕ್ಕಾದರೂ ಪರಿತಪಿಸ ಬೇಕಾಗಿಲ್ಲ. (ರಾಮನ ಪ್ರವಚನವನ್ನು ಕೇಳಿದನಂತರ ಭರತನಿದನ್ನು ರಾಮನನ್ನೇ

ವನ್ನುಂಟುಮಾಡಿದುವು. ನನ್ನ ತಾಯಿಯು ಗಂಡನ ಮೇಲೆ ಕೋಪ ಗೊಂಡುದು ; ನಮ್ಮ ತಂದೆಯು ತಾಯಿಯ ಮೇಲಿಟ್ಟಿದ್ದ ವ್ಯಾಮೋಹ ಮತ್ತು ದುಡುಕಿನ ಕೆಲಸ–ಇವು ನಮ್ಮ ತಂದೆಯು ಸತ್ಸಂಪ್ರದಾಯವನ್ನು ಮೀರಿ ನಡೆಯಲು ಕಾರಣಗಳಾದುವು. ಈ ಸಮಯದಲ್ಲಿ ನೀನು ಯುಕ್ತಾ ಯುಕ್ತತೆಯನ್ನು ಕೂಲಂಕಷವಾಗಿ ಪರ್ಯಾಲೋಚಿಸಿ ಧರ್ಮಕ್ಕೆ ವಿರುದ್ಧವಾಗಿ ನಡೆದಿರುವ ಈ ಕಾರ್ಯವನ್ನು ಸರಿಪಡಿಸು.

ಪಿತುರ್ಹಿ ಸಮತಿಕ್ರಾನ್ತಂ ಪುತ್ರೋ ಯಃ ಸಾಧು ಮನ್ಯತೇ ।
ತದಪತ್ಯಂ ಮತಂ ಲೋಕೇ ವಿಪರೀತಮತೋಽನ್ಯಥಾ ॥೧೫॥

ತಂದೆಯು ಮೀರಿನಡೆದ ಸದಾಚಾರವನ್ನೂ ಶ್ರೇಷ್ಠವಾದ ಧರ್ಮವನ್ನೂ ಸರಿಪಡಿಸಲು ಯಾವನು ಯತ್ನಿಸುವನೋ–ಅಂತಹ ಸುಪುತ್ರನನ್ನೇ ಲೋಕ ದಲ್ಲಿ 'ಅಪತ್ಯ'–ಸತ್ಪುತ್ರ–ಎಂದು ಹೇಳುತ್ತಾರೆ. ಹಾಗಲ್ಲದೇ ಇದಕ್ಕೆ ವ್ಯತಿರಿಕ್ತವಾಗಿ ತಂದೆಯು ಮಾಡಿದ ಅಧರ್ಮವನ್ನು ಸರಿಪಡಿಸಲು ಯತ್ನಿಸದ ಪುತ್ರನು ಖಂಡಿತವಾಗಿಯೂ ಅಪತ್ಯ (ಸತ್ಪುತ್ರ)ನಾಗಲಾರನು.*

ತದಪತ್ಯಂ ಭವಾನಸ್ತು ಮಾ ಭವಾನ್ದುಷ್ಕೃತಂ ಪಿತುಃ ।
ಅಭಿಪತ್ತಾ ಕೃತಂ ಕರ್ಮ ಲೋಕೇ ಧೀರವಿಗರ್ಹಿತಮ್ ॥೧೬॥

ಕುರಿತು ಹೇಳಿದ್ದೆಂದು ಸ್ವಾಭಾವಿಕವಾಗಿ ಅರ್ಥಮಾಡಬಹುದಾಗಿದೆ. ಆದರೆ ಒಬ್ಬ ವ್ಯಾಖ್ಯಾನಕಾರರು : ಭರತನು ಸ್ವಗುಣವನ್ನಿಲ್ಲಿ ಪ್ರತಿಪಾದಿಸಿದ್ದಾನೆಂದು ಹೇಳಿದ್ದಾರೆ. ಅವರ ವ್ಯಾಖ್ಯಾನವು ಈ ರೀತಿಯಾಗಿದೆ :- ರಾಮ! ನಾನು ಹೇಳಿದುದನ್ನು ಅಥವಾ ನಾನು ಹೊರಪಡಿಸಿದ ಶೋಕವನ್ನು ನೀನು ಪಿತೃವಿಯೋಗದಿಂದ ಉಂಟಾಗಿರುವ ಶೋಕವೆಂದು ಭಾವಿಸಿ ಹೀಗೆಲ್ಲಾ ಹೇಳಿದೆಯಲ್ಲವೇ? ನನಗೆ ಈ ವಿಧವಾದ ಶೋಕವು ಖಂಡಿತವಾಗಿಯೂ ಉಂಟಾಗಿರುವುದಿಲ್ಲ. ಸತ್ತುಹೋದವನು ಯಾವ ರೀತಿಯಲ್ಲಿ ದ್ವೇಷಕ್ಕೆ ವಿಷಯನಲ್ಲವೋ, ಜೀವಿಸಿರುವ ಮನುಷ್ಯನೂ ಸಹ ಹಾಗೆಯೇ ದ್ವೇಷಕ್ಕೆ ವಿಷಯನಾಗುವುದಿಲ್ಲ. ಇಲ್ಲದಿರುವ ವಸ್ತುವಿನಲ್ಲಿ ಆಕಾಂಕ್ಷೆಯಿಲ್ಲ. ಇರುವ ವಸ್ತುವಿನಲ್ಲಿ ಸ್ನೇಹವಿಲ್ಲ. ಇಂತಹ ಬುದ್ಧಿಯಿರುವ ಯಾವನು ಯಾವ ಕಾರಣದಿಂದ ತಾನೇ ಪರಿತಪಿಸುತ್ತಾನೆ? (ನನಗೂ ಇಂತಹ ಬುದ್ಧಿಯಿರುವುದರಿಂದ ನೀನು ಭಾವಿಸಿರುವಂತೆ ತಂದೆಯ ಮರಣಕ್ಕಾಗಿ ನಾನು ಪರಿತಪಿಸುತ್ತಿಲ್ಲ.)

*ಶ್ರೀರಾಮನ ದೃಷ್ಟಿಯಿಂದ ಈ ಶ್ಲೋಕದ ಸ್ವಾಭಾವಿಕವಾದ ಅರ್ಥವು ಸಮುಚಿತ ವಾಗಿಯೇ ಇದೆ. ತಂದೆಯಿಂದ ಮೀರಲ್ಪಟ್ಟ ಧರ್ಮವನ್ನು ಯಾವನು,

ಅಣ್ಣ! ನೀನು ಅಂತಹ ಅನ್ವರ್ಥವಾದ ಅಪತ್ಯನಾಗು. ತಂದೆಯು ಮಾಡಿರುವ ಧರ್ಮಾತಿಕ್ರಮಣವನ್ನು ನೀನು ಸಮರ್ಥಿಸಬೇಡ. ರಾಜನು ಮಾಡಿರುವ ಕಾರ್ಯವು ಧರ್ಮಬಾಹಿರವಾಗಿದೆ. ಲೋಕದಲ್ಲಿ ಈ ಕಾರ್ಯವು ಧೀರರ ನಿಂದೆಗೆ ಪಾತ್ರವಾಗಿದೆ.

ಕೈಕೇಯಿಯನ್ನೂ, ನನ್ನನ್ನೂ, ತಂದೆಯನ್ನೂ ಅಪವಾದದಿಂದಲೂ– ಸುಹೃದರನ್ನೂ, ಬಂಧುಗಳನ್ನೂ, ಪೌರರನ್ನೂ, ಹಳ್ಳಿಗರನ್ನೂ, ಸಮಸ್ತ ಪ್ರಾಣಿಗಳನ್ನೂ ಆಪತ್ತಿನಿಂದಲೂ ರಕ್ಷಿಸುವ ಸಲುವಾಗಿ ನೀನು ನನ್ನ ಪ್ರಾರ್ಥನೆಯನ್ನು ಅಂಗೀಕರಿಸು.

ಕ್ವ ಚಾರಣ್ಯಂ ಕ್ವ ಚ ಕ್ಷಾತ್ರಂ ಕ್ವ ಜಟಾಃ ಕ್ವ ಚ ಪಾಲನಮ್ ।
ಈದೃಶಂ ವ್ಯಾಹೃತಂ ಕರ್ಮ ನ ಭವಾನ್ಕರ್ತುಮರ್ಹತಿ ॥೧೮॥

ಋಷಿಗಳಿಗೆ ಉಚಿತವಾದ ಅರಣ್ಯವಾಸವೆಲ್ಲಿ? ರಾಜರಿಗೆ ಉಚಿತವಾದ ಕ್ಷತ್ರಿಯಧರ್ಮವೆಲ್ಲಿ? ತಾಪಸಿಗಳಿಗೆ ಉಚಿತವಾದ ಜಟೆಯೆಲ್ಲಿ? ರಾಜ್ಯಪರಿ ಪಾಲನೆಯೆಲ್ಲಿ? ಒಂದಕ್ಕೊಂದಕ್ಕೂ ಸ್ವಲ್ಪವಾದರೂ ಸಂಬಂಧವೇ ಇಲ್ಲ. ಆದುದರಿಂದ ಇಂತಹ ಅಸಂಗತವಾದ, ಕ್ಷತ್ರಿಯರಿಗೆ ಅತಿವಿರುದ್ಧವಾದ ಈ ವೃತ್ತಿಯು ಖಂಡಿತವಾಗಿಯೂ ನಿನಗೆ ಸರ್ವಥಾ ಉಚಿತವಲ್ಲ. ರಾಜ್ಯದಲ್ಲಿ

'ಒಳ್ಳೆಯದು' - ಎಂದು ಭಾವಿಸುವನೋ (ತಂದೆಯು ಮಾಡಿದ ಕಾರ್ಯದಲ್ಲಿ ದೋಷವನ್ನೆಣಿಸುವುದಿಲ್ಲವೋ) ಅಂತಹವನೇ ಸಾಧು ಮನ್ಯತೇ ಅಪತ್ಯ, ಸತ್ಪುತ್ರನು – ಆದರೆ ಭರತನ ಅಭಿಪ್ರಾಯವು ಇದಲ್ಲ. ಆದುದರಿಂದ ಸಾಧು ಮನ್ಯತೇ – ಎಂಬುದಕ್ಕೆ ವಿಶೇಷಾರ್ಥವನ್ನು ವ್ಯಾಖ್ಯಾನಕಾರರು ಕೊಟ್ಟಿರುತ್ತಾರೆ. ೧) ವೈಪರೀತ್ಯಾಚರಣೇನ ಸಾಧು ಯಥಾ ತಥಾ ಸಂಪಾದಯತಿ. ಅತಿಕ್ರಾನ್ತವಾದುದನ್ನು ಯಾವ ರೀತಿಯಿಂದ ಸರಿಮಾಡಬೇಕೋ ಆ ರೀತಿಯಲ್ಲಿ ವ್ಯವಸ್ಥೆಗೊಳಿಸಿ. ೨) ಯಃ ಸಾಧು ಮನ್ಯತೇ = ಬೋಧಯತಿ = ತತ್ಪ್ರಚ್ಯುತಿಂ ನಿವರ್ತಯತಿ ಅತಿಕ್ರಾಂತವಾದುದನ್ನು ಪುನರ್ನಿವರ್ತನ ಮಾಡುವುದು : ಕೆಟ್ಟಹಾದಿಯಿಂದ ಪುನಃ ಹಿಂದಿರುಗಿಸುವುದು. ೩) ಸಾಧು ಮನ್ಯತೇ = ಸಾಧು ಕರ್ತುಂ ಮನ್ಯತೇ ಸರಿಪಡಿಸಲು ಇಚ್ಛಿಸುವವನು. ಈ ರೀತಿಯಲ್ಲಿ ಮನ್ಯತೇ ಶಬ್ದಕ್ಕೆ ಅಸ್ವಾಭಾವಿಕವಾದ ಅರ್ಥವನ್ನೇ ಹೇಳಬೇಕಾಗಿದೆ. ಮನ್ಯತೇ ಎಂಬುದಕ್ಕೆ ಮನು-ಜ್ಞಾನೇ ಎಂಬ ಧಾತ್ವರ್ಥದ ಪ್ರಕಾರ 'ತಿಳಿಯುತ್ತಾನೆ' ಎಂಬ ಅರ್ಥವು ಸ್ವಾಭಾವಿಕವಾದುದು. ನ ಪತನ್ತಿ ಪಿತರಃ ನರಕೇ ಇತಿ ಅಪತ್ಯಂ = ಇವನಿಂದ ಪಿತೃಗಳು ನರಕದಲ್ಲಿ ಬೀಳುವುದಿಲ್ಲ. ಇಂತಹವನೇ ಅಪತ್ಯ.

ಪಟ್ಟಾಭಿಷಿಕ್ತನಾಗುವುದೇ ರಾಜನ ಮೊದಲನೆಯ ಧರ್ಮ. ಅದರಿಂದಲೇ ಪ್ರಜಾಪಾಲನವೆಂಬ ಕ್ಷತ್ರಿಯೋಚಿತವಾದ ಧರ್ಮವನ್ನಾಚರಿಸಲು ಶಕ್ಯವಾಗುವುದು. ಪ್ರತ್ಯಕ್ಷಸುಖಕ್ಕೆ ಸಾಧನಭೂತವಾದ, ಪ್ರಜಾಪಾಲನರೂಪವಾದ ಕ್ಷಾತ್ರಧರ್ಮವನ್ನು ತ್ಯಜಿಸಿ ಸಂಶಯಗ್ರಸ್ತವಾದ, ಕ್ಷತ್ರಿಯರಾದವರಿಗೆ ವಿಲಕ್ಷಣವಾದ, ವೃದ್ಧಾಪ್ಯದಲ್ಲಿ ಮಾತ್ರ ಅನುಸರಿಸಲು ಯೋಗ್ಯವಾದ, ಅನಿಶ್ಚಿತಫಲವುಳ್ಳ ಈ ವಾನಪ್ರಸ್ಥಧರ್ಮವನ್ನು ಯಾವ ಕ್ಷತ್ರಿಯಾಧಮನು ತಾನೇ ಆಚರಿಸುವನು? ನೀನು ಕ್ಲೇಶಕರವಾದ ಧರ್ಮವನ್ನೇ ಆಚರಿಸಲು ಬಯಸುವೆಯಾದರೆ–ಧರ್ಮದಿಂದ ನಾಲ್ಕು ವರ್ಣದವರನ್ನೂ ಪರಿಪಾಲಿಸುತ್ತಾ ಆ ಸಂಬಂಧವಾದ ಕ್ಲೇಶಗಳನ್ನೇ ಅನುಭವಿಸು. ರಾಜನಾದವನಿಗೆ ಅಂತಹ ಕ್ಲೇಶವು ಸಹ್ಯವಾದುದು. ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸಂನ್ಯಾಸ–ಈ ನಾಲ್ಕು ಆಶ್ರಮಗಳಲ್ಲಿ ಗೃಹಸ್ಥಾಶ್ರಮವು ಶ್ರೇಷ್ಠವಾದ ಆಶ್ರಮವೆಂದು ಧರ್ಮಜ್ಞರಾದವರು ಹೇಳುತ್ತಾರೆ. ಅಂತಹ ಗೃಹಸ್ಥಾಶ್ರಮವನ್ನು ನೀನು ಹೇಗೆ ತ್ಯಜಿಸುವೆ? ನನ್ನ ವಿಷಯವಾಗಿ ಹೇಳುವುದಾದರೆ : ವಿದ್ಯೆ, ಸ್ಥಾನ ಮತ್ತು ಹುಟ್ಟು–ಈ ಮೂರರಲ್ಲಿಯೂ ನಾನು ನಿನಗಿಂತಲೂ ಚಿಕ್ಕವನು. ಹೀಗಿರುವ ನಾನು ಧರ್ಮಾತ್ಮನಾದ ನೀನಿರುವಾಗ ಹೇಗೆ ರಾಜ್ಯಭಾರಮಾಡಲಿ? ನಾನು ಹೀನಬುದ್ಧಿಯವನೂ, ಹೀನಗುಣವುಳ್ಳವನೂ ಆಗಿರುವೆನು. ನನ್ನ ಜನ್ಮಸ್ಥಾನವೂ ಹೀನವಾದುದು. (ಪಾಪಿಷ್ಠೆಯಾದ ಕೈಕೇಯಿಯ ಹೊಟ್ಟೆಯಲ್ಲಿ ಹುಟ್ಟಿದ್ದೇನೆ.) ಹೀಗಿರುವ ನಾನು ನಿನ್ನನ್ನು ಬಿಟ್ಟು ಬದುಕಿರಲು ಕೂಡ ಉತ್ಸಾಹಿಯಾಗಿಲ್ಲ. ಧರ್ಮಜ್ಞನೇ! ಅಖಂಡವಾದ, ಆನುವಂಶಿಕವಾಗಿ ಬಂದಿರುವ, ನಿಷ್ಕಂಟಕವಾಗಿರುವ ಈ ಕೋಸಲದೇಶವನ್ನು ಬಂಧು-ಮಿತ್ರರಿಂದ ಕೂಡಿದವನಾಗಿ ಕ್ಷತ್ರಿಯಧರ್ಮೋಚಿತವಾಗಿ ಪರಿಪಾಲಿಸು. ಮಂತ್ರಜ್ಞರಾದ ಋತ್ವಿಜರು ವಸಿಷ್ಠರಿಂದಲೂ ಮತ್ತು ಸಮಸ್ತಪ್ರಜೆಗಳಿಂದಲೂ ಕೂಡಿ ಇಲ್ಲಿಯೇ ನಿನಗೆ ಪಟ್ಟಾಭಿಷೇಕ ಮಾಡಲಿ. ಲೋಕಗಳೆಲ್ಲವನ್ನೂ ಜಯಿಸಿ ದೇವತೆಗಳೊಡನೆ ಇಂದ್ರನು ಅಮರಾವತಿಗೆ ಹೋದಂತೆ–ಅಭಿಷಿಕ್ತನಾದ ನೀನು ನಮ್ಮೊಡನೆ ಪ್ರಜೆಗಳನ್ನು ಪರಿಪಾಲಿಸುವ ಸಲುವಾಗಿ ತ್ವರೆಯಿಂದ ಅಯೋಧ್ಯೆಗೆ ಪ್ರಯಾಣಮಾಡು. ದ್ವಿಜರಾದವರು ತೀರಿಸಬೇಕಾದ ಋಷಿಋಣ-ದೇವಋಣ ಮತ್ತು ಪಿತೃಋಣ

ಗಳನ್ನೂ ತೀರಿಸಿ, ದುಷ್ಟರನ್ನು ಚೆನ್ನಾಗಿ ಶಿಕ್ಷಿಸುತ್ತಾ–ಸುಹೃದರು ಅಪೇಕ್ಷಿಸುವ ಕಾಮನೆಗಳನ್ನು ಪೂರ್ಣಗೊಳಿಸುತ್ತಾ–ನನಗೂ ತಿಳಿವಳಿಕೆಯನ್ನು ಕೊಡುತ್ತಿರು. ನಿನ್ನ ಅಭಿಷೇಚನದಿಂದ ಸುಹೃದರು ಸಂತೋಷಭರಿತರಾಗಲಿ. ನಿನಗೆ ದುಃಖವನ್ನುಂಟುಮಾಡುವ ಇಚ್ಛೆಯುಳ್ಳ ದುರ್ಜನರು ಭಯಗೊಂಡು ಹತ್ತು ದಿಕ್ಕುಗಳಿಗೂ ಪಲಾಯನಮಾಡಲಿ. ನೀನು ಪಟ್ಟಾಭಿಷಿಕ್ತನಾಗಿ ನನ್ನ ತಾಯಿಯ ವಿಷಯದಲ್ಲಿ ಪ್ರಜೆಗಳಿಗುಂಟಾಗಿರುವ ಆಕ್ರೋಶವನ್ನು ಹೋಗಲಾಡಿಸು. ಪರಲೋಕದಲ್ಲಿರುವ ಪೂಜ್ಯನಾದ ನಮ್ಮ ತಂದೆಯನ್ನೂ–ಶಿಷ್ಟಾಚಾರವನ್ನು ಅತಿಕ್ರಮಿಸಿದ ಪಾಪದಿಂದ ಮುಕ್ತಿಗೊಳಿಸು.

ಅಣ್ಣ! ತಲೆಬಾಗಿ ನಮಸ್ಕರಿಸಿ ನಿನ್ನನ್ನು ಬೇಡಿಕೊಳ್ಳುತ್ತೇನೆ. ನನ್ನ ವಿಷಯದಲ್ಲಿ ದಯೆತೋರು. ಪ್ರಾಣಿಗಳ ವಿಷಯದಲ್ಲಿ ಮಹೇಶ್ವರನು ದಯೆತೋರುವಂತೆ–ಎಲ್ಲ ಬಾಂಧವರ ವಿಷಯದಲ್ಲಿಯೂ ನೀನು ಕರುಣೆಯನ್ನು ತೋರು. ಒಂದು ವೇಳೆ ನೀನು ನನ್ನ ಪ್ರಾರ್ಥನೆಯನ್ನು ತಿರಸ್ಕರಿಸಿ ಇಲ್ಲಿಂದ ಮುಂದಕ್ಕೆ ಅರಣ್ಯಕ್ಕೇ ಹೋಗುವೆಯಾದರೆ–ನಾನೂ ನಿನ್ನ ಜೊತೆಯಲ್ಲಿಯೇ ಬಂದುಬಿಡುತ್ತೇನೆ."

ಹೀಗೆ ಕುಂದಿದ ಮುಖಭಾವದಿಂದ ಕೂಡಿದ ಭರತನು–ಅಯೋಧ್ಯೆಗೆ ಹಿಂದಿರುಗುವಂತೆ ರಾಮನನ್ನು ಅಂಗಲಾಚಿ ಬೇಡಿಕೊಳ್ಳುತ್ತಿದ್ದನು. ಕ್ಷಣ-ಕ್ಷಣಕ್ಕೂ ಕಾಲುಮುಟ್ಟಿ ನಮಸ್ಕರಿಸಿ ಕೈಮುಗಿದು ಪ್ರಾರ್ಥಿಸುತ್ತಿದ್ದನು. ಆದರೂ ಮಹಾಸತ್ತ್ವಶಾಲಿಯಾದ ರಾಮನು ತಂದೆಯ ಆಜ್ಞೆಯನ್ನೇ ಸ್ಥಿರವಾಗಿ ಅವಲಂಬಿಸಿ ಅಯೋಧ್ಯೆಗೆ ಹಿಂದಿರುಗಲು ಮನಸ್ಸುಮಾಡಲಿಲ್ಲ.

ಶ್ರೀರಾಮನಲ್ಲಿದ್ದ ಸ್ಥೈರ್ಯವನ್ನು ಕಂಡ ಅಲ್ಲಿದ್ದ ಪ್ರಜೆಗಳೆಲ್ಲರೂ ಸುಖ-ದುಃಖಗಳೆರಡನ್ನೂ ಒಟ್ಟಿಗೇ ಅನುಭವಿಸಿದರು. 'ಭರತನಿಷ್ಟು ಪ್ರಾರ್ಥಿಸಿದರೂ ಶ್ರೀರಾಮನು ಅಯೋಧ್ಯೆಗೆ ಬರುವುದಿಲ್ಲವಲ್ಲಾ!' - ಎಂದು ದುಃಖಿಸಿದರು. ಅದೇ ಸಮಯದಲ್ಲಿಯೇ ತಾನು ಮಾಡಿರುವ ಪ್ರತಿಜ್ಞೆಯಲ್ಲಿ ಶ್ರೀರಾಮನ ಸ್ಥಿರತೆಯನ್ನು ಕಂಡು ಹರ್ಷಿತರೂ ಆದರು.

ಅಲ್ಲಿ ನೆರೆದಿದ್ದ ಋತ್ವಿಜರೂ, ಪಟ್ಟಣಿಗರೂ, ಸೇನಾನಾಯಕರೂ, ಸ್ತಬ್ಧರಾಗಿ ಕಣ್ಣೀರುಸುರಿಸುತ್ತಿದ್ದ ತಾಯಂದಿರೂ–ಭರತನು ರಾಮನನ್ನು

ಅಯೋಧ್ಯೆಗೆ ಹಿಂದಿರುಗುವಂತೆ ಮಾಡಿಕೊಳ್ಳುತ್ತಿದ್ದ ಪ್ರಾರ್ಥನೆಯನ್ನು ಕೇಳಿ ಸಂತುಷ್ಟರಾಗಿ ಶ್ಲಾಘಿಸುತ್ತಾ ಭರತನೊಡನೆ ತಾವೂ ಸೇರಿಕೊಂಡು ಶ್ರೀರಾಮನನ್ನು ಅಯೋಧ್ಯೆಗೆ ಹಿಂದಿರುಗುವಂತೆ ಯಾಚಿಸಿದರು.

೧೦೬ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೧೦೭ನೆಯ ಸರ್ಗ

ಶ್ರೀರಾಮನು ಭರತನನ್ನು ಸಮಾಧಾನಗೊಳಿಸಿ ಅಯೋಧ್ಯೆಗೆ ಹಿಂದಿರುಗುವಂತೆ ಆಜ್ಞಾಪಿಸಿದುದು

ಪುನರೇವಂ ಬ್ರುವಾಣಂ ತಂ ಭರತಂ ಲಕ್ಷ್ಮಣಾಗ್ರಜಃ ।
ಪ್ರತ್ಯುವಾಚ ತತಃ ಶ್ರೀಮಾನ್ ಜ್ಞಾತಿಮಧ್ಯೇ ಸುಸತ್ಕೃತಃ ॥೧॥

ಜ್ಞಾತಿ-ಬಾಂಧವರ ಮಧ್ಯದಲ್ಲಿ ಭರತನ ಸ್ತೋತ್ರ-ಪ್ರಾರ್ಥನಾದಿ ಗಳಿಂದ ಸತ್ಕೃತನಾದ, ಲಕ್ಷ್ಮಣಾಗ್ರಜನಾದ, ಶ್ರೀಮಂತನಾದ ಶ್ರೀರಾಮನು ಪುನಃ ಪುನಃ ಅಯೋಧ್ಯೆಗೆ ಬರಬೇಕೆಂದು ಒತ್ತಾಯಪೂರ್ವಕವಾಗಿ ಹೇಳು ತ್ತಿದ್ದ ಭರತನಿಗೆ ಹೀಗೆಂದನು :

"ಭರತ! ಇದುವರೆಗೂ ನೀನು ಹೇಳಿರುವ ಮಾತುಗಳು ರಾಜಶ್ರೇಷ್ಠ ನಾದ ದಶರಥನಿಂದ ಕೈಕೇಯಿಯಲ್ಲಿ ಹುಟ್ಟಿರುವ ನಿನಗೆ ಅನುರೂಪವಾಗಿಯೇ ಇವೆ. ನಮ್ಮ ತಂದೆಯು ನಿನಗೆ ರಾಜ್ಯವನ್ನು ವಹಿಸಿಕೊಡಲು ಮತ್ತೊಂದು ಕಾರಣವೂ ಇದೆ. ಹಿಂದೆ ನಮ್ಮ ತಂದೆಯು ನಿನ್ನ ತಾಯಿಯನ್ನು ಮದುವೆಯಾದಾಗ ನಿನ್ನ ಮಾತಾಮಹನಿಗೆ ಉತ್ತಮೋತ್ತಮವಾದ ಕೋಸಲರಾಜ್ಯವನ್ನು ಕನ್ಯಾಶುಲ್ಕವನ್ನಾಗಿ ಕೊಡಲು ಮಾತುಕೊಟ್ಟಿದ್ದನು.*

---

*ವರದಕ್ಷಿಣೆಯಂತೆ ಕನ್ಯಾಶುಲ್ಕವೂ ಈಗಲೂ ಹಲವಾರು ಜಾತಿಗಳಲ್ಲಿ ನಡೆದುಕೊಂಡುಬರುತ್ತಿದೆ. ಕನ್ಯೆಗೆ ಒಡವೆ-ವಸ್ತುಗಳನ್ನಿಡುವುದು, ಕನ್ಯೆಯ ತಂದೆಗೆ ಹಣಕೊಡುವುದು ಮುಂತಾದುವು ಈಗಲೂ ಬಳಕೆಯಲ್ಲಿವೆ. ಕೈಕೇಯಿಯೊಡನೆ ಮದುವೆಯಾದಾಗ ದಶರಥನು ಕೋಸಲರಾಜ್ಯವನ್ನೇ ಕನ್ಯಾಶುಲ್ಕದ ರೂಪದಲ್ಲಿ ಕೊಡುವುದಾಗಿ ಕೈಕೇಯಿಯ ತಂದೆಗೆ ವಚನವಿತ್ತಿದ್ದನು. ಅಂದರೆ ರಾಜ್ಯವನ್ನು ಕೈಕೇಯಿಯ ತಂದೆಗೆ ಕೊಡುವುದೆಂಬ ಅಥವಾ ಕೈಕೇಯಿಗೆ ಕೊಡುವುದೆಂಬ ಅರ್ಥವಲ್ಲ. ಕೈಕೇಯಿಯಲ್ಲಿ

ಅದೂ ಅಲ್ಲದೇ–ದೇವತೆಗಳಿಗೂ ಅಸುರರಿಗೂ ಯುದ್ಧವು ನಡೆದಾಗ ದೇವತೆಗಳ ಪರವಾಗಿ ಯುದ್ಧಮಾಡಲು ಹೋಗಿದ್ದ ನಮ್ಮ ತಂದೆಯು ಯುದ್ಧದ ಸಮಯದಲ್ಲಿ ನಿನ್ನ ತಾಯಿಯಿತ್ತ ಸಹಕಾರಕ್ಕಾಗಿ ಸಂತೋಷಗೊಂಡು ಎರಡು ವರಗಳನ್ನು ಕೊಟ್ಟನು. ಬೇಕಾದಾಗ ಕೊಡುವೆನೆಂದು ದಶರಥನಿಂದ ಪ್ರತಿಜ್ಞೆಮಾಡಿಸಿಕೊಂಡಿದ್ದ, ಯಶಸ್ವಿನಿಯಾದ, ವರವರ್ಣಿನಿಯಾದ ನಿನ್ನ ತಾಯಿಯು ಆ ಎರಡು ವರಗಳನ್ನೇ ಈಗ ಕೇಳಿದಳು. ವರಗಳನ್ನು ಕೊಡುವುದು ರಾಜನಿಗೆ ಅನಿವಾರ್ಯವಾಗಿದ್ದುದರಿಂದ ಕೈಕೇಯಿಯ ಆಶಯದಂತೆ ಆ ಎರಡು ವರಗಳ ರೂಪದಲ್ಲಿ ನಿನಗೆ ರಾಜ್ಯವನ್ನು ಕೊಟ್ಟು ನನ್ನನ್ನು ಅರಣ್ಯಕ್ಕೆ ಹೋಗಲು ನಿರ್ದೇಶಿಸಿದನು.

ನಾನು ದಂಡಕಾರಣ್ಯದಲ್ಲಿ ವಾಸಮಾಡಲು ತಂದೆಯಿಂದ ಆಜ್ಞಪ್ತನಾಗಿದ್ದೇನೆ. ಅದರಂತೆ ನಾನು ಹದಿನಾಲ್ಕು ವರ್ಷಗಳ ಕಾಲ ಅರಣ್ಯವಾಸವನ್ನು ಮಾಡಬೇಕಾಗಿದೆ. ತಂದೆಯು ಕೊಟ್ಟ ವರವನ್ನು ಸತ್ಯವನ್ನಾಗಿ ಮಾಡಲು ನಿಶ್ಚಯಿಸಿದ–ನಾನು ಸೀತೆಯೊಡನೆಯೂ, ಲಕ್ಷ್ಮಣನೊಡನೆಯೂ ನಿರ್ಜನವಾದ ಈ ಅರಣ್ಯಕ್ಕೆ ಶೀತೋಷ್ಣಾದಿ ದ್ವಂದ್ವರಹಿತನಾಗಿ ಬಂದೆನು. ನೀನು ಕೂಡ ಸಾಧ್ಯವಾದಷ್ಟು ಬೇಗ ಪಟ್ಟಾಭಿಷೇಕಮಾಡಿಕೊಳ್ಳುವುದರ ಮೂಲಕವಾಗಿ ತಂದೆಯನ್ನು ಸತ್ಯವಾದಿಯನ್ನಾಗಿ ಮಾಡುವುದು ನಿನಗೆ ಉಚಿತವಾಗಿದೆ. ರಾಜೇಂದ್ರನೇ! ಪ್ರಭುವಾದ, ಧರ್ಮಜ್ಞನಾದ, ರಾಜನಾದ ನಮ್ಮ ತಂದೆಯನ್ನು ನನ್ನ ಸಲುವಾಗಿ ಸ್ತ್ರೀಋಣದಿಂದ ಮುಕ್ತನನ್ನಾಗಿ ಮಾಡು. ನಿನ್ನ ತಾಯಿಯನ್ನು ಸಂತೋಷಗೊಳಿಸು.

ಗಯೆಯೆಂಬ ಪುಣ್ಯಕ್ಷೇತ್ರದಲ್ಲಿ ಯಾಗಮಾಡಲು ಉದ್ಯುಕ್ತನಾದ ಯಜಮಾನನಾದ ಗಯನು ಪಿತೃದೇವತೆಗಳನ್ನು ಉದ್ದೇಶಿಸಿ ಯಶಸ್ಕರವಾದ ಈ ದಿವ್ಯಗೀತೆಯನ್ನು ಹೇಳಿರುವನೆಂದು ನಾವು ಕೇಳಿದ್ದೇವೆ.

ಹುಟ್ಟಿದ ಮಗನಿಗೆ ರಾಜ್ಯದ ಪಟ್ಟಗಟ್ಟುವುದೆಂದರ್ಥ. ಈ ಪ್ರತಿಜ್ಞಾವಚನದ ಕಾರಣವೇನೆಂದರೆ : ಕೈಕೇಯಿಯನ್ನು ಮದುವೆಯಾಗುವ ವೇಳೆಗೆ ದಶರಥನಿಗೆ ಕೌಸಲ್ಯೆಯೊಡನೆ ವಿವಾಹವಾಗಿತ್ತು. ದಶರಥನು ಹೀಗೆ ಮಾತು ಕೊಡದಿದ್ದರೆ ಕೈಕೇಯಿಯ ಮಗನಿಗೆ ರಾಜ್ಯಾಧಿಕಾರವು ಸಿಕ್ಕುವ ಅವಕಾಶವೇ ಇರುತ್ತಿರಲಿಲ್ಲ.

ಪುನ್ನಾಮ್ನೋ ನರಕಾದ್ಯಸ್ಮಾತ್ಪಿತರಂ ತ್ರಾಯತೇ ಸುತಃ ।
ತಸ್ಮಾತ್ಪುತ್ರ ಇತಿ ಪ್ರೋಕ್ತಃ ಪಿತೄನ್ಯತ್ಪಾತಿ ವಾ ಸುತಃ ॥೧೨॥

ತಂದೆಯನ್ನು 'ಪುತ್' ಎಂಬ ನರಕದಿಂದ ರಕ್ಷಿಸುವುದರಿಂದ ಪುತ್ರ ಎಂಬ ಅನ್ವರ್ಥನಾಮವು ಮಗನಿಗೆ ಪ್ರಾಪ್ತವಾಗಿದೆ. ಇಹ-ಪರಗಳೆರಡರಲ್ಲಿಯೂ ಪುತ್ರನು ತಂದೆಯನ್ನು ರಕ್ಷಿಸುತ್ತಾನೆ.

ಏಷ್ಟವ್ಯಾ ಬಹವಃ ಪುತ್ರಾ ಗುಣವನ್ತೋ ಬಹುಶ್ರುತಾಃ ।
ತೇಷಾಂ ವೈ ಸಮವೇತಾನಾಮಪಿ ಕಶ್ಚಿದ್ಗಯಾಂ ವ್ರಜೇತ್ ॥೧೩॥

ಗುಣವಂತರಾದ, ವಿದ್ಯಾವಂತರಾದ ಹೆಚ್ಚು ಮಂದಿ ಪುತ್ರರನ್ನು ಪಡೆಯಲು ಅಪೇಕ್ಷಿಸಬೇಕು. ಅವರಲ್ಲಿ ಒಬ್ಬನಾದರೂ ಗಯೆಗೆ ಹೋಗಿ ಪಿಂಡಪ್ರದಾನವನ್ನು ಮಾಡಬಹುದು.'*

ಹೀಗೆ ನಮ್ಮ ಹಿಂದಿನ ರಾಜರ್ಷಿಗಳೆಲ್ಲರೂ ಮಗನು ತಮ್ಮನ್ನು ಉದ್ಧರಿಸುವನೆಂಬ ವಿಶ್ವಾಸವುಳ್ಳವರಾಗಿದ್ದರು. ನರಶ್ರೇಷ್ಠನೇ! ನೀನು ನಮ್ಮ ತಂದೆಗೆ ಪುತ್ರನಾಗಿ ಹುಟ್ಟಿರುವುದರಿಂದ ಅವನು ಮಾಡಿರುವ ಸತ್ಯಪ್ರತಿಜ್ಞೆಯನ್ನು ನಡೆಸಿಕೊಟ್ಟು ನರಕದಲ್ಲಿ ಬೀಳುವ ಭಯದಿಂದ ರಕ್ಷಿಸು. ಶತ್ರುಘ್ನನ ಸಮೇತನಾಗಿ ಈ ಎಲ್ಲ ದ್ವಿಜರೊಡನೆ ಅಯೋಧ್ಯೆಗೆ ಹೋಗು. ಪ್ರಜೆಗಳನ್ನು ಸಂತೋಷಪಡಿಸು. ನಾನೂ ಕೂಡ ಸ್ವಲ್ಪವೂ ತಡಮಾಡದೇ ಸೀತಾ-ಲಕ್ಷ್ಮಣರೊಡನೆ ದಂಡಕಾರಣ್ಯವನ್ನು ಪ್ರವೇಶಿಸುತ್ತೇನೆ.

ತ್ವಂ ರಾಜಾ ಭರತ ಭವ ಸ್ವಯಂ ನರಾಣಾಂ
ವನ್ಯಾನಾಮಹಮಪಿ ರಾಜರಾಣ್ಮೃಗಾಣಾಮ್ ।
ಗಚ್ಛ ತ್ವಂ ಪುರವರಮದ್ಯ ಸಂಪ್ರಹೃಷ್ಟಃ
ಸಂಹೃಷ್ಟಸ್ತ್ವಹಮಪಿ ದಣ್ಡಕಾನ್ಪ್ರವೇಕ್ಷ್ಯೇ ॥೧೮॥

*ಗಯನೆಂಬ ರಾಜನು ಅನೇಕಾನೇಕ ಯಜ್ಞಗಳನ್ನು ಮಾಡಿ ತನ್ನ ಹೆಸರನ್ನೇ ಆ ಪ್ರದೇಶಕ್ಕಿಟ್ಟು ತನ್ನ ತಪಃಪ್ರಭಾವದಿಂದ ಆ ಕ್ಷೇತ್ರವನ್ನು ಪವಿತ್ರಗೊಳಿಸಿದನು. ಆ ಕ್ಷೇತ್ರದಲ್ಲಿ ಪಿತೃಗಳಿಗೆ ಪಿಂಡಪ್ರದಾನ-ತರ್ಪಣಾದಿಗಳನ್ನು ಮಾಡಿದರೆ ಅವರಿಗೆ ಅಕ್ಷಯಪುಣ್ಯಲೋಕಗಳು ಪ್ರಾಪ್ತವಾಗುವುವೆಂದು ಶಿಷ್ಟರು ಹೇಳುತ್ತಾರೆ. ನಾವು ಭರತಖಂಡದ ಯಾವ ಪ್ರದೇಶದಲ್ಲಿಯೇ ಶ್ರಾದ್ಧಮಾಡಿದರೂ–"ಗಯಾಯಾಂ ವಿಷ್ಣು

ಭರತ! ನೀನು ಮನುಷ್ಯರೆಲ್ಲರಿಗೂ ರಾಜನಾಗು. ಅರಣ್ಯದಲ್ಲಿರುವ ಪಶು-ಪಕ್ಷಿ-ಮೃಗಗಳಿಗೆ ನಾನು ರಾಜನಾಗಿರುತ್ತೇನೆ. ಈ ನನ್ನ ಮಾತಿನಿಂದ ಪ್ರಹೃಷ್ಟನಾಗಿ ನೀನು ಪಟ್ಟಣಗಳಲ್ಲಿಯೇ ಶ್ರೇಷ್ಠವಾದ ಅಯೋಧ್ಯೆಗೆ ಹೋಗು. ನಾನೂ ಕೂಡ ಪರಮಹೃಷ್ಟನಾಗಿ ದಂಡಕಾರಣ್ಯವನ್ನು ಪ್ರವೇಶಿಸುತ್ತೇನೆ. ಸೂರ್ಯನ ತೀಕ್ಷ್ಣವಾದ ಕಿರಣಗಳನ್ನೂ ಪರಾಭವಗೊಳಿಸಲು ಸಮರ್ಥವಾದ ಶ್ವೇತಚ್ಛತ್ರಿಯು ನಿನ್ನ ತಲೆಯ ಮೇಲೆ ಶೀತಲವಾದ ನೆಳಲನ್ನು ಉಂಟುಮಾಡಲಿ. ನಾನು ಈ ಅರಣ್ಯದಲ್ಲಿರುವ ವೃಕ್ಷಗಳ ಅತಿಶಯ ಸುಖಾವಹವಾದ ಛಾಯೆಯನ್ನು ಶ್ವೇತಚ್ಛತ್ರದ ನೆಳಲಿನಂತೆ ಆಶ್ರಯಿಸುತ್ತೇನೆ.

ಶತ್ರುಘ್ನಃ ಕುಶಲಮತಿಸ್ತು ತೇ ಸಹಾಯಃ
ಸೌಮಿತ್ರಿರ್ಮಮ ವಿದಿತಃ ಪ್ರಧಾನಮಿತ್ರಮ್ ।
ಚತ್ವಾರಸ್ತನಯವರಾ ವಯಂ ನರೇನ್ದ್ರಂ
ಸತ್ಯಸ್ಥಂ ಭರತ ಚರಾಮ ಮಾ ವಿಷಾದಮ್ ॥೧೯॥

ಚತುರಮತಿಯಾದ ಶತ್ರುಘ್ನನು ನಿನಗೆ ಸಹಾಯಕನಾಗಿರಲಿ. ಸುಪ್ರಸಿದ್ಧನಾದ ಲಕ್ಷ್ಮಣನು ನನ್ನ ಪ್ರಧಾನಮಿತ್ರನಾಗಿಯೇ ಇರುವನು. ಶ್ರೇಷ್ಠರಾದ ನಾವು ನಾಲ್ವರು ಮಕ್ಕಳೂ ನರೇಂದ್ರನಾದ ದಶರಥನನ್ನು ಸತ್ಯದಲ್ಲಿಯೇ ಸ್ಥಿರವಾಗಿ ಉಳಿಯುವಂತೆ ಮಾಡೋಣ. ನೀನಿನ್ನು ವಿಷಾದಿಸಬೇಡ."

೧೦೭ನೆಯ ಸರ್ಗವು ಮುಗಿಯಿತು.

ಪಾದೇ ದತ್ತಮಸ್ತು : ಗದಾಧರಃ ಪ್ರೀಯತಾಂ : ಗಯೆಯಲ್ಲಿರುವ ವಿಷ್ಣುಪಾದದಲ್ಲಿ ಸಮರ್ಪಿಸಿದಂತಾಗಲಿ. ಇದರಿಂದ ಗದಾಧರನು (ಮಹಾವಿಷ್ಣುವು) ಸುಪ್ರೀತನಾಗಲಿ"ಎಂದೇ ಹೇಳುತ್ತೇವೆ. ಅಷ್ಟು ಮಹತ್ತ್ವವು ಗಯಾಕ್ಷೇತ್ರಕ್ಕಿರುವುದು. ಹುಟ್ಟಿದ ಅನೇಕ ಮಕ್ಕಳಲ್ಲಿ ಒಬ್ಬನಾದರೂ ದೊಡ್ಡ ಪದವೀಧರನಾಗಬೇಕೆಂದು ಈಗ ನಾವು ಅಪೇಕ್ಷಿಸುವಂತೆ ಆಮುಷ್ಮಿಕಫಲೇಚ್ಛುಗಳಾದ ನಮ್ಮ ಹಿಂದಿನವರು ತಮಗೆ ಹುಟ್ಟಿದ ಬಹುಪುತ್ರರಲ್ಲಿ ಒಬ್ಬನಾದರೂ ಗಯೆಗೆ ಹೋಗಿಬರಲಿ. ಅಲ್ಲಿ ಪಿತೃಗಳ ತೃಪ್ತ್ಯರ್ಥವಾಗಿ ಗಯಾಶ್ರಾದ್ಧವನ್ನು ಮಾಡಲಿ ಎಂದು ಆಶಿಸುತ್ತಿದ್ದರು. ಬಹುಪುತ್ರರನ್ನು ಈ ಕಾರಣದಿಂದಲೇ ಅವರು ಅಪೇಕ್ಷಿಸುತ್ತಿದ್ದರು.

ಅಯೋಧ್ಯಾಕಾಂಡ ೧೦೮ನೆಯ ಸರ್ಗ

ಜಾಬಾಲಿಯು ನಾಸ್ತಿಕಮತವನ್ನಾಶ್ರಯಿಸಿ ಶ್ರೀರಾಮನನ್ನು ಸಮಾಧಾನಗೊಳಿಸಲು ಯತ್ನಿಸಿದುದು

ಆಶ್ವಾಸಯನ್ತಂ ಭರತಂ ಜಾಬಾಲಿರ್ಬ್ರಾಹ್ಮಣೋತ್ತಮಃ ।
ಉವಾಚ ರಾಮಂ ಧರ್ಮಜ್ಞಂ ಧರ್ಮಾಪೇತಮಿದಂ ವಚಃ ॥೧॥

ಈ ಪ್ರಕಾರವಾಗಿ ಭರತನನ್ನು ಸಂತೈಸುತ್ತಿದ್ದ ಧರ್ಮಜ್ಞನಾದ ಶ್ರೀರಾಮನನ್ನು ಕುರಿತು ಬ್ರಾಹ್ಮಣಶ್ರೇಷ್ಠರಾದ ಜಾಬಾಲಿಗಳು ವೈದಿಕ ಧರ್ಮಕ್ಕೆ ವಿರುದ್ಧವಾದ ಮಾತುಗಳನ್ನು ಹೇಳತೊಡಗಿದರು :

"ರಾಘವ! ಶ್ರೇಷ್ಠವಾದ ಬುದ್ಧಿಯನ್ನು ಹೊಂದಿರುವ ಮನನಶೀಲನಾದ ನೀನು ಸಾಧಾರಣನಾದೊಬ್ಬ ಮನುಷ್ಯನಂತೆ ನಿಷ್ಪ್ರಯೋಜಕವಾದ ಬುದ್ಧಿಯನ್ನು ಆಶ್ರಯಿಸಬೇಡ."

ಕಃ ಕಸ್ಯ ಪುರುಷೋ ಬನ್ಧುಃ ಕಿಮಾಪ್ಯಂ ಕಸ್ಯ ಕೇನಚಿತ್ ।
ಯದೇಕೋ ಜಾಯತೇ ಜನ್ತುರೇಕ ಏವ ವಿನಶ್ಯತಿ ॥೩॥

ಯಾರು ಯಾರಿಗೆ ಬಂಧು? ಯಾರಿಂದ ಯಾರಿಗೆ ಏನಾಗಬೇಕಾಗಿದೆ? ಪ್ರಪಂಚದಲ್ಲಿ ಒಬ್ಬೊಬ್ಬರಿಗೂ ಪರಸ್ಪರವಾಗಿ ಯಾವ ಸಂಬಂಧವೂ ಇಲ್ಲ. ಹುಟ್ಟುವಾಗ ಒಬ್ಬನೇ ಹುಟ್ಟುತ್ತಾನೆ. ಸಾಯುವಾಗಲೂ ಒಬ್ಬನೇ ಸಾಯುತ್ತಾನೆ.

ತಸ್ಮಾನ್ಮಾತಾ ಪಿತಾ ಚೇತಿ ರಾಮ ಸಜ್ಜೇತ ಯೋ ನರಃ ।
ಉನ್ಮತ್ತ ಇವ ಸ ಜ್ಞೇಯೋ ನಾಸ್ತಿ ಕಶ್ಚಿದ್ಧಿ ಕಸ್ಯಚಿತ್ ॥೪॥

ಆದುದರಿಂದ– 'ಇವನು ತಂದೆ', 'ಇವಳು ತಾಯಿ', 'ಇವನು ಮಗ', 'ಇವಳು ಮಗಳು' – ಮುಂತಾಗಿ ಯಾವನು ಇಂತಹವರಲ್ಲಿ ಆಸಕ್ತನಾಗುವನೋ–ಅವನೊಬ್ಬ ಹುಚ್ಚನೇ ಸರಿ. ಏಕೆಂದರೆ : ಯಾರು ಯಾರವನೂ ಅಲ್ಲ. ಒಬ್ಬನಿಗೂ ಮತ್ತೊಬ್ಬನಿಗೂ ಯಾವ ಸಂಬಂಧವೂ ಇಲ್ಲ.

ಯಥಾ ಗ್ರಾಮಾನ್ತರಂ ಗಚ್ಛನ್ನರಃ ಕಶ್ಚಿತ್ಕ್ವಚಿದ್ವಸೇತ್ ।
ಉತ್ಸೃಜ್ಯ ಚ ತಮಾವಾಸಂ ಪ್ರತಿಷ್ಠೇತಾಪರೇಽಹನಿ ॥೫॥

ಏವಮೇವ ಮನುಷ್ಯಾಣಾಂ ಪಿತಾ ಮಾತಾ ಗೃಹಂ ವಸು ।
ಆವಾಸಮಾತ್ರಂ ಕಾಕುತ್ಸ್ಥ ಸಜ್ಜನ್ತೇ ನಾತ್ರ ಸಜ್ಜನಾಃ ॥೯॥

ಬೇರೆ ಊರುಗಳಿಗೆ ಪ್ರಯಾಣಮಾಡುವ ಯಾತ್ರಿಕನು ರಾತ್ರಿಯಾಗುತ್ತಲೇ ಯಾವುದೋ ಒಂದು ಛತ್ರದಲ್ಲಿ ತಂಗುತ್ತಾನೆ. ಮರುದಿನವೇ ಆ ಛತ್ರವನ್ನು ಬಿಟ್ಟು ಮುಂದಕ್ಕೆ ಪ್ರಯಾಣಮಾಡುತ್ತಾನೆ. ತಂದೆ, ತಾಯಿ, ಮನೆ, ಐಶ್ವರ್ಯ–ಇವೆಲ್ಲವೂ ಹಾಗೆಯೇ. ಒಂದೆಡೆಯಲ್ಲಿ ಇರುವವರೆಗೆ ಇವರೆಲ್ಲರೂ ಈ ವಿಧವಾದ ಸಂಬಂಧದಿಂದ ಇರುತ್ತಾರೆ. ದೇಹಾಂತರವನ್ನು ಹೊಂದಿದನಂತರ ಯಾವ ಸಂಬಂಧವೂ ಇಲ್ಲ ವಾಗುತ್ತದೆ. ಆದುದರಿಂದ ಇಂತಹ ವಿಷಯಗಳಲ್ಲಿ ಸಜ್ಜನರಾದವರು ಆಸಕ್ತರಾಗುವುದಿಲ್ಲ.

ಆದುದರಿಂದ ತಂದೆಯ ಸಂಬಂಧವಾದ ಈ ರಾಜ್ಯವನ್ನು ಪರಿತ್ಯಜಿಸಿ ಕುತ್ಸಿತವಾದ ಹಾದಿಯುಳ್ಳ, ಹಳ್ಳ-ತಿಟ್ಟುಗಳಿಂದ ಕೂಡಿರುವ, ಮುಳ್ಳುಗಿಡಗಳಿಂದ ವ್ಯಾಪ್ತವಾಗಿರುವ, ಬಹುದುಃಖಕರವಾದ ಅರಣ್ಯದಲ್ಲಿ ವಾಸಮಾಡುವುದು ನಿನಗೆ ಉಚಿತವಲ್ಲ. ಸಂಪತ್ಸಮೃದ್ಧವಾದ ಅಯೋಧ್ಯೆಗೆ ಹೋಗಿ ಪಟ್ಟಾಭಿಷಿಕ್ತನಾಗು. ಜಡೆಯನ್ನು ಹೆಣೆದುಕೊಳ್ಳದೇ ಏಕವೇಣಿಯಾಗಿ ವ್ರತನಿಷ್ಠೆಯಾಗಿ ವಿರಹಿಣಿಯಾಗಿರುವ ಅಯೋಧ್ಯಾನಗರದ ಅಧಿದೇವತೆಯು ನಿನ್ನ ಆಗಮನವನ್ನೇ ಪ್ರತೀಕ್ಷಿಸುತ್ತಿದ್ದಾಳೆ.

ರಾಜಪುತ್ರ! ಸಕಲವಿಧವಾದ, ಅನರ್ಘವಾದ ರಾಜಭೋಗಗಳನ್ನು ಅನುಭವಿಸುತ್ತಾ ಇಂದ್ರನು ಸ್ವರ್ಗದಲ್ಲಿ ವಿಹರಿಸುವಂತೆ–ನೀನು ಅಯೋಧ್ಯೆಯಲ್ಲಿ ವಿಹರಿಸು.

ನ ತೇ ಕಶ್ಚಿದ್ದಶರಥಸ್ತ್ವಂ ಚ ತಸ್ಯ ನ ಕಶ್ಚನ ।
ಅನ್ಯೋ ರಾಜಾ ತ್ವಮಪ್ಯನ್ಯಸ್ತಸ್ಮಾತ್ಕುರು ಯದುಚ್ಯತೇ ॥೧೦॥

ದಶರಥನು ನಿನಗೆ ಏನೂ ಆಗಿರಲಿಲ್ಲ. ನೀನೂ ಅವನಿಗೆ ಏನೂ ಆಗಬೇಕಾಗಿಲ್ಲ. (ಒಬ್ಬರೊಬ್ಬರಿಗೂ ಯಾವ ಸಂಬಂಧವೂ ಇಲ್ಲ.) ರಾಜನೇ ಬೇರೆ. ನೀನೇ ಬೇರೆ. ಆದುದರಿಂದ ನಾನು ಹೇಳಿದಂತೆ ಮಾಡು.

ಬೀಜಮಾತ್ರಂ ಪಿತಾ ಜನ್ತೋಃ ಶುಕ್ಲಂ ಶೋಣಿತಮೇವ ಚ ।
ಸಂಯುಕ್ತಮೃತುಮನ್ಮಾತ್ರಾ ಪುರುಷಸ್ಯೇಹ ಜನ್ಮ ತತ್ ॥೧೧॥

ಮಗುವು ಹುಟ್ಟಲು ತಂದೆ ಎನಿಸಿಕೊಂಡವನು ಕೇವಲ ಬೀಜಪ್ರಾಯನಾಗುತ್ತಾನೆ. ಋತುಮತಿಯಾದ ಹೆಂಗಸಿನ ಗರ್ಭದಲ್ಲಿ ಬೀಜರೂಪವಾದ ಶುಕ್ರ ಮತ್ತು ಶೋಣಿತಗಳು ಬೆರೆತು ಸೇರುವುದರಿಂದ ಗರ್ಭವು ಉತ್ಪತ್ತಿಯಾಗಿ ಮನುಷ್ಯನ ಹುಟ್ಟಿಗೆ ಕಾರಣವಾಗುತ್ತದೆ.

ಗತ�ః ಸ ನೃಪತಿಸ್ತತ್ರ ಗನ್ತವ್ಯಂ ಯತ್ರ ತೇನ ವೈ ।
ಪ್ರವೃತ್ತಿರೇಷಾ ಮರ್ತ್ಯಾನಾಂ ತ್ವಂ ತು ಮಿಥ್ಯಾ ವಿಹನ್ಯಸೇ ॥೧೨॥

ನಿನ್ನ ತಂದೆಯು ಎಲ್ಲಿಗೆ ಹೋಗಬೇಕಾಗಿತ್ತೋ ಅಲ್ಲಿಗೇ ಹೋಗಿದ್ದಾನೆ. ಸರ್ವಪ್ರಾಣಿಗಳಿಗೂ ಈ ಪ್ರವೃತ್ತಿ-ನಿವೃತ್ತಿಗಳು ಸಮಾನವಾಗಿವೆ. ವಿಷಯವು ಹೀಗಿದ್ದರೂ ನೀನು ಮಿಥ್ಯಾಸಂಬಂಧವನ್ನು ಕಲ್ಪಿಸಿಕೊಂಡು ಸಂಕಟಪಡುತ್ತಿರುವೆ.*

ಅರ್ಥಧರ್ಮಪರಾ ಯೇ ಯೇ ತಾಂಸ್ತಾನ್ ಶೋಚಾಮಿ ನೇತರಾನ್ ।
ತೇ ಹಿ ದುಃಖಮಿಹ ಪ್ರಾಪ್ಯ ವಿನಾಶಂ ಪ್ರೇತ್ಯ ಭೇಜಿರೇ ॥೧೩॥

ಅರ್ಥ ಮತ್ತು ಧರ್ಮ ಇವುಗಳ ಸಂಪಾದನೆಗಾಗಿ ಯಾರು ಶ್ರಮಿಸುವರೋ—ಅಂತಹವರ ವಿಷಯವಾಗಿ ನಾನು ಪರಿತಾಪಪಡುತ್ತೇನೆ. ಧರ್ಮಕ್ಕಾಗಿ ಅರ್ಥವನ್ನು ಸಂಪಾದಿಸುವ ಅವರಿಗೆ ಕಾಮೋಪಭೋಗಗಳ ಪರಿವೆಯೇ ಇರುವುದಿಲ್ಲ. ಅರ್ಥ-ಧರ್ಮಗಳ ಸಿದ್ಧಿಗಾಗಿ ಅವರು ಈ ಲೋಕದಲ್ಲಿ ದುಃಖವನ್ನನುಭವಿಸುತ್ತಿದ್ದು ಅವಸಾನಾನಂತರದಲ್ಲಿ ವಿನಾಶಹೊಂದುತ್ತಾರೆ.

ಅಷ್ಟಕಾ ಪಿತೃದೈವತ್ಯಮಿತ್ಯಯಂ ಪ್ರಸೃತೋ ಜನಃ ।
ಅನ್ನಸ್ಯೋಪದ್ರವಂ ಪಶ್ಯ ಮೃತೋ ಹಿ ಕಿಮಶಿಷ್ಯತಿ ॥೧೪॥

ಅಷ್ಟಕಾದಿ ಶ್ರಾದ್ಧಗಳು ಪಿತೃದೇವತಾಕವಾದ ಶ್ರಾದ್ಧಗಳು. ಶ್ರಾದ್ಧ

---

*ಶುಕ್ಲ-ಶೋಣಿತಗಳು ಪಂಚಭೂತಗಳನ್ನಾಕರ್ಷಿಸುವುದರಿಂದ ಮನುಷ್ಯನ ಅಥವಾ ಪ್ರಾಣಿಯ ದೇಹರಚನೆಯಾಗುತ್ತದೆ. ಪಂಚಭೂತಗಳಲ್ಲೊಂದಾದ ವಾಯುವು ಒಡನೆಯೇ ಅಲ್ಲಿ ಸೇರಿಕೊಳ್ಳುತ್ತದೆ. ದೇಹದಲ್ಲಿರುವ ಪಂಚಭೂತಗಳ ಏರು-ಪೇರಾದಾಗ ವಾಯುವು ತಾನಾಗಿಯೇ ಹೊರಟುಹೋಗುತ್ತದೆ. ಪಾರ್ಥಿವಶರೀರವು ಪುನಃ ಪಂಚಭೂತಗಳಲ್ಲಿ ಲೀನವಾಗಿ ಹೋಗುತ್ತದೆ. ಪ್ರಕೃತಿಯ ಕ್ರಮವೇ ಹೀಗಿರುವುದು. ಯಾವ ಮನುಷ್ಯನಿಗೂ ಯಾವ ಮನುಷ್ಯನ ಸಂಬಂಧವೂ ಯಾವಾಗಲೂ ಇರುವುದಿಲ್ಲ.

ಗಳಲ್ಲಿ ಕೊಡುವ ದಾನವು ಮತ್ತು ಬ್ರಾಹ್ಮಣರಿಗೆ ಮಾಡಿಸುವ ಅನ್ನಭೋಜನವು ಪಿತೃಗಳಿಗೆ ತೃಪ್ತಿಯನ್ನುಂಟುಮಾಡುತ್ತದೆಂಬ ನಂಬಿಕೆ ಯಿಂದ ಜನರು ಶ್ರಾದ್ಧಕ್ರಿಯೆಗಳಲ್ಲಿ ತೊಡಗುತ್ತಾರೆ. ವಿಚಾರಮಾಡಿ ನೋಡಿದರೆ ಇದರಿಂದ ಅನ್ನದ ನಾಶವಾಗುವುದೇ ಹೊರತು ಮತ್ತಾವ ಪ್ರಯೋಜನವೂ ಇಲ್ಲ. ಸತ್ತವನೇನಾದರೂ ಊಟಮಾಡಲು ಬರುವನೇ?

ಯದಿ ಭುಕ್ತಮಿಹಾನ್ಯೇನ ದೇಹಮನ್ಯಸ್ಯ ಗಚ್ಛತಿ ।
ದದ್ಯಾತ್ಪ್ರವಸತಃ ಶ್ರಾದ್ಧಂ ನ ತತ್ಪಥ್ಯಶನಂ ಭವೇತ್ ॥೧೫॥

ಒಬ್ಬನು ಊಟಮಾಡಿದುದು ಮತ್ತೊಬ್ಬನ ದೇಹಕ್ಕೆ ಸೇರುವುದೆಂದು ಹೇಳುವುದಾದರೆ–ಯಾತ್ರೆಹೋಗಿರುವವರಿಗೂ ಶ್ರಾದ್ಧಮಾಡಬಹುದಲ್ಲವೇ? ಅದು ಅವರ ಪಾಥೇಯ (ಬುತ್ತಿ) ವಾದೀತು. ಆದರೆ ನಾವು ಹಾಗೆ ಮಾಡುತ್ತಿಲ್ಲ.

ದಾನಸಂವನನಾ ಹ್ಯೇತೇ ಗ್ರನ್ಥಾ ಮೇಧಾವಿಭಿಃ ಕೃತಾಃ ।
ಯಜಸ್ವ ದೇಹಿ ದೀಕ್ಷಸ್ವ ತಪಸ್ತಪ್ಯಸ್ವ ಸಂತ್ಯಜ ॥೧೬॥

"ಯಾಗ ಮಾಡು. ಇಂತಹ ಲೋಕವು ಪ್ರಾಪ್ತವಾಗುತ್ತದೆ. ಇಂತಹ ದಾನವನ್ನು ಕೊಡು. ಇಷ್ಟು ಪುಣ್ಯವು ಲಭಿಸುತ್ತದೆ. ಇಂತಹ ವ್ರತವನ್ನು ಮಾಡಲು ದೀಕ್ಷಿತನಾಗು. ಇಂತಹ ತಪಸ್ಸನ್ನು ಮಾಡು. ಗೃಹವನ್ನು ತ್ಯಾಗಮಾಡು" – ಇವೆಲ್ಲವೂ ದಾನಗಳ ಸ್ವೀಕಾರಕ್ಕೆ ವಶೀಕರಣಮಂತ್ರಗಳು. ಈ ಕರ್ಮಗಳ ಸಂಬಂಧವಾದ ಗ್ರಂಥಗಳನ್ನು ಮೇಧಾವಿಗಳು ಧನಾರ್ಜನೆ ಗಾಗಿಯೇ ರಚಿಸಿದ್ದಾರೆ.

ಸ ನಾಸ್ತಿ ಪರಮಿತ್ಯೇವ ಕುರು ಬುದ್ಧಿಂ ಮಹಾಮತೇ ।
ಪ್ರತ್ಯಕ್ಷಂ ಯತ್ತದಾತಿಷ್ಠ ಪರೋಕ್ಷಂ ಪೃಷ್ಠತಃ ಕುರು ॥೧೭॥

ಮಹಾಮತಿಯೇ! ಪರಲೋಕವಿಲ್ಲವೆಂಬ ವಿಷಯದಲ್ಲಿ ನಿನ್ನ ಬುದ್ಧಿಯನ್ನು ದೃಢಪಡಿಸು. ಪ್ರತ್ಯಕ್ಷಸುಖವು ಎಲ್ಲಿ ಕಾಣುವುದೋ ಅದನ್ನೇ ಆಶ್ರಯಿಸು. ಪರೋಕ್ಷವೆಂಬುದನ್ನು ಹಿಂದಕ್ಕೆ ತಳ್ಳು. ಅದನ್ನು ನಂಬಬೇಡ.

ಸಕಲರಿಗೂ ಸಮ್ಮತವಾಗಿರುವ, ಪ್ರತ್ಯಕ್ಷವೊಂದೇ ಪ್ರಮಾಣವಾ

ಗಿರುವ, ಸತ್ಪುರುಷರ ಬುದ್ಧಿಯನ್ನು ಪುರಸ್ಕರಿಸಿ ಭರತನಿಂದ ಪೂಜಿಸಲ್ಪಟ್ಟವನಾಗಿ ಕೋಸಲರಾಜ್ಯವನ್ನು ಪ್ರತಿಗ್ರಹಿಸು."*

೧೦೮ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೧೦೯ನೆಯ ಸರ್ಗ

ಶ್ರೀರಾಮನು ಜಾಬಾಲಿಯ ನಾಸ್ತಿಕವಾದವನ್ನು ಖಂಡಿಸಿದುದು

ಜಾಬಾಲೇಸ್ತು ವಚಃ ಶ್ರುತ್ವಾ ರಾಮಃ ಸತ್ಯಾತ್ಮನಾಂ ವರಃ ।
ಉವಾಚ ಪರಯಾ ಸೂಕ್ತ್ಯಾ ಬುದ್ಧ್ಯಾ ವಿಪ್ರತಿಪನ್ನಯಾ ॥೧॥

ಸತ್ಯವಂತರಲ್ಲಿ ಶ್ರೇಷ್ಠನಾದ ಶ್ರೀರಾಮನು ಜಾಬಾಲಿಯ ಮಾತುಗಳನ್ನು ಕೇಳಿದನು. ಆದರೆ ಅವನ ಬುದ್ಧಿಯು ಸ್ವಲ್ಪವೂ ವಿಚಲಿತವಾಗಲಿಲ್ಲ. ಶ್ರುತಿಸಮ್ಮತವಾದ ಸದುಕ್ತಿಗಳನ್ನು ಆಶ್ರಯಿಸಿ ಜಾಬಾಲಿಗಳೊಡನೆ ಮಾತನಾಡಿದನು :

ಭವಾನ್ಮೇ ಪ್ರಿಯಕಾಮಾರ್ಥಂ ವಚನಂ ಯದಿಹೋಕ್ತವಾನ್ ।
ಅಕಾರ್ಯಂ ಕಾರ್ಯಸಂಕಾಶಮಪಥ್ಯಂ ಪಥ್ಯಸಂಮಿತಮ್ ॥೨॥

"ಮಹರ್ಷಿಗಳೇ! ನನಗೆ ಪ್ರಿಯವನ್ನುಂಟುಮಾಡಲು ಬಯಸಿ ನೀವು ಯಾವುದನ್ನು ಉಪದೇಶಿಸಿರುವಿರೋ ಅದು ತೋರಿಕೆಗೆ ಆಚರಿಸಲು ಯೋಗ್ಯವೆಂದೇ ಕಾಣುತ್ತದೆ. ಆದರೆ ಹಾಗೆ ಮಾಡುವುದು ಅಕಾರ್ಯವಾಗುತ್ತದೆ.

---

*ಈ ಸರ್ಗದಲ್ಲಿ ಜಾಬಾಲಿಗಳು ಪರಲೋಕವೇ ಇಲ್ಲವೆಂಬ, ತಂದೆ-ಮಕ್ಕಳಿಗೆ ಯಾವ ಸಂಬಂಧವೂ ಇಲ್ಲವೆಂಬ ತತ್ತ್ವವನ್ನು ಚೆನ್ನಾಗಿ ಪ್ರತಿಪಾದಿಸಿದ್ದಾರೆ. ಪರಲೋಕವೇ ಇಲ್ಲವೆಂದು ಹೇಳಿ–ಯಥಾ ಶಕ್ರಸ್ತ್ರಿವಿಷ್ಟಪೇ–ಎಂಬ ಉಪಮಾನ ಕೊಟ್ಟಿರುವುದು ವಿರೋಧಾಭಾಸ. ತಂದೆಗೂ ಮಗನಿಗೂ ಸಂಬಂಧವೇ ಇಲ್ಲವೆಂದು ಹೇಳಿ– 'ಪಿತ್ರ್ಯಂ ರಾಜ್ಯಂ ಸಮುತ್ಸೃಜ್ಯ' - ಎಂದು ಹೇಳಿರುವುದು ಮತ್ತೊಂದು ವಿರೋಧಾಭಾಸ. ಶ್ರೀರಾಮನಿಗೆ ಪಿತೃಸಂಬಂಧವಾದ ರಾಜ್ಯವು ಮಾತ್ರ ಸಿಕ್ಕಬೇಕು. ದಶರಥನಿಗೂ ತನಗೂ ಸಂಬಂಧವೇ ಇಲ್ಲವೆಂದು ಬಗೆದರೆ ಶ್ರೀರಾಮನಿಗೆ ರಾಜ್ಯವೇ ಇಲ್ಲ. ಭರತನು ಅಣ್ಣನೆಂದು ಭಾವಿಸಿ ರಾಜ್ಯವನ್ನು ಒಪ್ಪಿಸುವ ಕಾರಣವೂ ಇಲ್ಲ. ಶ್ರೀರಾಮನು ಸರ್ವಾಧಿಕಾರಿಯಾಗಿ ರಾಜ್ಯವನ್ನು ಸಾಮರ್ಥ್ಯದಿಂದ ಪಡೆದುಕೊಳ್ಳಬೇಕಾಗುತ್ತದೆ.

ಪಥ್ಯವಾಗಿರುವಂತೆ ಕಾಣುತ್ತದೆ. ಆದರೆ ಪರಿಶೀಲಿಸಿದಲ್ಲಿ ಅದು ಅಹಿತವಾದ ಉಪದೇಶವಾಗಿದೆ.

ನಿರ್ಮರ್ಯಾದಸ್ತು ಪುರುಷಃ ಪಾಪಾಚಾರಸಮನ್ವಿತಃ ।
ಮಾನಂ ನ ಲಭತೇ ಸತ್ಸು ಭಿನ್ನಚಾರಿತ್ರದರ್ಶನಃ ॥೩॥

ವೇದಮಾರ್ಗವನ್ನು ಬಿಟ್ಟವನೂ, ಪಾಪಭೂಯಿಷ್ಠವಾದ ಆಚಾರ-ವ್ಯವಹಾರಗಳಿರುವವನೂ, ವೇದಮತದಿಂದ ಭಿನ್ನವಾದ ಮತಪ್ರವರ್ತಕನೂ ಸತ್ಪುರುಷರಲ್ಲಿ ಮಾನ್ಯನಾಗುವುದಿಲ್ಲ.

ಕುಲೀನಮಕುಲೀನಂ ವಾ ವೀರಂ ಪುರುಷಮಾನಿನಮ್ ।
ಚಾರಿತ್ರಮೇವ ವ್ಯಾಖ್ಯಾತಿ ಶುಚಿಂ ವಾ ಯದಿ ವಾಶುಚಿಮ್ ॥೪॥

ಒಬ್ಬ ಮನುಷ್ಯನ ಆಚಾರ-ವ್ಯವಹಾರಗಳೇ–ಅವನು ಕುಲೀನನೇ ಅಥವಾ ದುಷ್ಕುಲದಲ್ಲಿ ಹುಟ್ಟಿದವನೇ? ವೀರನೇ ಅಥವಾ ವೀರನೆಂದು ಭಾವಿಸಿಕೊಂಡಿರುವವನೇ? ಪರಿಶುದ್ಧನೇ–ಅಪರಿಶುದ್ಧನೇ?–ಎಂಬುದನ್ನು ವಿವರಿಸಿ ಹೇಳುತ್ತವೆ.

ಅನಾರ್ಯಸ್ತ್ವಾರ್ಯಸಂಕಾಶಃ ಶೌಚಾದ್ಧೀನಸ್ತಥಾ ಶುಚಿಃ ।
ಲಕ್ಷಣ್ಯವದಲಕ್ಷಣ್ಯೋ ದುಃಶೀಲಃ ಶೀಲವಾನಿವ ॥೫॥

ನಾವು ವೇದವಿಹಿತವಾದ ಆಚಾರ-ವ್ಯವಹಾರಗಳನ್ನೇ ಮನುಷ್ಯನ ನಡವಳಿಕೆಗಳಿಗೆ ನಿದರ್ಶನವನ್ನಾಗಿಟ್ಟುಕೊಳ್ಳದಿದ್ದರೆ–ಅನಾರ್ಯನೂ ಆರ್ಯನಂತೆ ಕಾಣುತ್ತಾನೆ. ಅಶುಚಿಯೂ ಶುಚಿಯಾಗಿರುವಂತೆ ಕಾಣುತ್ತಾನೆ. ಲಕ್ಷಣಹೀನನಾದವನು ಲಕ್ಷಣವಾಗಿರುವಂತೆಯೇ ಕಾಣುತ್ತಾನೆ. ದುಃಶೀಲನಾದವನು ಸುಶೀಲನಂತೆಯೇ ಕಾಣುತ್ತಾನೆ.

ಅಧರ್ಮಂ ಧರ್ಮವೇಷೇಣ ಯದೀಮಂ ಲೋಕಸಂಕರಮ್ ।
ಅಭಿಪತ್ಸ್ಯೇ ಶುಭಂ ಹಿತ್ವಾ ಕ್ರಿಯಾವಿಧಿವಿವರ್ಜಿತಮ್ ॥೬॥

ಕಶ್ಚೇತಯಾನಃ ಪುರುಷಃ ಕಾರ್ಯಾಕಾರ್ಯವಿಚಕ್ಷಣಃ ।
ಬಹುಮಂಸ್ಯತಿ ಮಾಂ ಲೋಕೇ ದುರ್ವೃತ್ತಂ ಲೋಕದೂಷಣಮ್ ॥

ಶುಭಾವಹವಾದ ವೇದವಿಹಿತವಾದ ಮಾರ್ಗವನ್ನು ಬಿಟ್ಟು ಲೋಕದಲ್ಲಿ

ಸಾಂಕರ್ಯವನ್ನುಂಟುಮಾಡುವ, ವೇದವಿಧಿ ಮತ್ತು ಕ್ರಿಯೆಗಳಿಂದ ವಿವರ್ಜಿತವಾದ, ಅಧರ್ಮವೇ ಆಗಿದ್ದರೂ ಧರ್ಮದ ಸೋಗಿನಲ್ಲಿರುವ ನಿಮ್ಮ ಉಪ ದೇಶವನ್ನು ನಾನು ಅಂಗೀಕರಿಸಿದ್ದೇ ಆದರೆ–ನನ್ನನ್ನು ಕಾರ್ಯಾಕಾರ್ಯ ವಿಚಕ್ಷಣನಾದ ಯಾವ ಜ್ಞಾನಿಯು ತಾನೇ ಪುರಸ್ಕರಿಸುವನು? ಅವರ ದೃಷ್ಟಿಯಲ್ಲಿ ನಾನು ದುರ್ವೃತ್ತನೂ–ಲೋಕದೂಷಕನೂ ಆಗುವೆನು.

ಕಸ್ಯ ಧಾಸ್ಯಾಮ್ಯಹಂ ವೃತ್ತಂ ಕೇನ ವಾ ಸ್ವರ್ಗಮಾಪ್ನುಯಾಮ್ ।
ಅನಯಾ ವರ್ತಮಾನೋಽಹಂ ವೃತ್ತ್ಯಾ ಹೀನಪ್ರತಿಜ್ಞಯಾ ॥೮॥

ನಿಮ್ಮ ಉಪದೇಶದಂತೆ ಪ್ರತಿಜ್ಞಾಭಂಗವನ್ನು ಮಾಡಿ ವೇದಧರ್ಮದ ದೃಷ್ಟಿಯಿಂದ ಕುತ್ಸಿತವೃತ್ತಿಯುಳ್ಳವನಾಗುವ ನಾನು ಮುಂದೆ ಯಾವ ವೃತ್ತಿಯನ್ನು ಅನುಸರಿಸಲಿ? ಯಾವ ವೃತ್ತಿಯನ್ನಾಶ್ರಯಿಸಿ ಸ್ವರ್ಗಕ್ಕೆ ಹೋಗಲಿ? (ಧರ್ಮವನ್ನು ಬಿಟ್ಟರೆ ನನಗೆ ಬೇರೆ ಯಾವ ನೆಲೆಯೇ ಇಲ್ಲದಂತಾಗುವುದಲ್ಲವೇ?)

ಕಾಮವೃತ್ತಸ್ತ್ವಯಂ ಲೋಕಃ ಕೃತ್ಸ್ನಃ ಸಮುಪವರ್ತತೇ ।
ಯದ್ವೃತ್ತಾಃ ಸನ್ತಿ ರಾಜಾನಸ್ತದ್ವೃತ್ತಾಃ ಸನ್ತಿ ಹಿ ಪ್ರಜಾಃ ॥೯॥

ಸ್ವಾಭಾವಿಕವಾಗಿ ರಾಜರು ಯಾವ ವೃತ್ತಿಯಲ್ಲಿರುವರೋ ಪ್ರಜೆಗಳೂ ಅದೇ ವೃತ್ತಿಯಲ್ಲೇ ಇರುತ್ತಾರೆ. (ರಾಜರು ಸದ್ವೃತ್ತಿಯುಳ್ಳವರಾಗಿದ್ದರೆ ಪ್ರಜೆಗಳೂ ಸದ್ವೃತ್ತಿಯುಳ್ಳವರಾಗಿರುತ್ತಾರೆ. ರಾಜನು ಸ್ವೇಚ್ಛಾಚಾರಿಯಾದರೆ–ಪ್ರಜೆಗಳೂ ಸ್ವೇಚ್ಛಾಚಾರಿಗಳೇ ಆಗುತ್ತಾರೆ.) ನಿಮ್ಮ ಉಪದೇಶದಂತೆ ನಾನೇನಾದರೂ ಕಾಮೈಕಪ್ರಧಾನವಾದ ಮಾರ್ಗವನ್ನು ಆಶ್ರಯಿಸಿದರೆ ಸಮಗ್ರವಾದ ಈ ಲೋಕವೇ ಸ್ವಚ್ಛಂದಪ್ರವೃತ್ತವಾಗುತ್ತದೆ.*

ಸತ್ಯಮೇವಾನೃಶಂಸಂ ಚ ರಾಜವೃತ್ತಂ ಸನಾತನಮ್ ।
ತಸ್ಮಾತ್ಸತ್ಯಾತ್ಮಕಂ ರಾಜ್ಯಂ ಸತ್ಯೇ ಲೋಕಃ ಪ್ರತಿಷ್ಠಿತಃ ॥೧೦॥

---

*ರಾಜನಾದವನು ಸತ್ಯವೂ ಇಲ್ಲ: ಧರ್ಮವೂ ಇಲ್ಲ: ಪರೋಕ್ಷವೂ ಇಲ್ಲ: ಪರಲೋಕವೂ ಇಲ್ಲ–ಎಂಬ ಧರ್ಮವನ್ನನುಸರಿಸಿದರೆ ಪ್ರಜೆಗಳೂ ಸ್ವಾಭಾವಿಕವಾಗಿ ಅದೇ ಮಾರ್ಗವನ್ನನುಸರಿಸುತ್ತಾರೆ. ಕಾಮಾಚಾರ, ವಸ್ತುಗಳ ಉಪಭೋಗ, ಇವೆರಡೇ ಮನುಷ್ಯನ ಸಾಧನೆಗಳಾಗುತ್ತವೆ. ಇವೆರಡರ ಸಾಧನೆಗಾಗಿ ಮನುಷ್ಯನು ಏನು ಬೇಕಾದರೂ ಮಾಡಬಹುದೆಂಬ ಭಾವನೆಯು ಮೂಡಿದರೆ ದೇಶವೇ ಅನಾಯಕವಾಗುತ್ತದೆ.

ಸತ್ಯ ಮತ್ತು ಭೂತದಯೆಗಳು ಸನಾತನವಾದ ರಾಜಧರ್ಮಗಳು. ಈ ಕಾರಣದಿಂದಲೇ ರಾಜ್ಯವೂ ಸತ್ಯಸ್ವರೂಪವಾದುದು. ಲೋಕವೂ ಸತ್ಯದಲ್ಲಿಯೇ ಪ್ರತಿಷ್ಠಿತವಾಗಿದೆ.

ಋಷಯಶ್ಚೈವ ದೇವಾಶ್ಚ ಸತ್ಯಮೇವ ಹಿ ಮೇನಿರೇ ।
ಸತ್ಯವಾದೀ ಹಿ ಲೋಕೇಽಸ್ಮಿನ್ಪರಂ ಗಚ್ಛತಿ ಚಾಕ್ಷಯಮ್ ॥೧೧॥

ಈ ಕಾರಣದಿಂದಲೇ ಋಷಿಗಳೂ ಮತ್ತು ದೇವತೆಗಳೂ ಸತ್ಯವನ್ನೇ ಸಕಲಶ್ರೇಯಸ್ಸನ್ನೂ ಹೊಂದುವ ಸಾಧನವನ್ನಾಗಿ ಮಾನ್ಯಮಾಡಿರುವರು. ಈ ಲೋಕದಲ್ಲಿ ಸತ್ಯನಿಷ್ಠನಾಗಿರುವ ಮನುಷ್ಯನು ಅಕ್ಷಯವಾದ ಮತ್ತು ಶ್ರೇಷ್ಠವಾದ ಲೋಕಗಳನ್ನೂ ಅವಸಾನಾನಂತರದಲ್ಲಿ ಪಡೆದುಕೊಳ್ಳುತ್ತಾನೆ.

ಉದ್ವಿಜನ್ತೇ ಯಥಾ ಸರ್ಪಾನ್ನರಾದನೃತವಾದಿನಃ ।
ಧರ್ಮಃ ಸತ್ಯಂ ಪರೋ ಲೋಕೇ ಮೂಲಂ ಸ್ವರ್ಗಸ್ಯ ಚೋಚ್ಯತೇ॥

ಮನುಷ್ಯನು ಸರ್ಪವನ್ನು ನೋಡಿ ಭಯಪಡುವಂತೆಯೇ ಸುಳ್ಳು ಹೇಳುವವನನ್ನು ಕಂಡರೂ ಭಯಪಡುತ್ತಾನೆ. ಪ್ರಪಂಚದಲ್ಲಿ ಸತ್ಯವೇ ಉತ್ಕೃಷ್ಟವಾದ ಧರ್ಮವಾಗಿದೆ. ಇದೇ ಸ್ವರ್ಗಪ್ರಾಪ್ತಿಗೂ ಮೂಲ ಕಾರಣವೆಂದು ನಿಶ್ಚಿತವಾಗಿದೆ.

ಸತ್ಯಮೇವೇಶ್ವರೋ ಲೋಕೇ ಸತ್ಯೇ ಧರ್ಮಃ ಸದಾಶ್ರಿತಃ ।
ಸತ್ಯಮೂಲಾನಿ ಸರ್ವಾಣಿ ಸತ್ಯಾನ್ನಾಸ್ತಿ ಪರಂ ಪದಮ್ ॥೧೩॥

ಲೋಕದಲ್ಲಿ ಸತ್ಯವೇ ಈಶ್ವರಸ್ವರೂಪವು. ಧರ್ಮವು ಸದಾ ಸತ್ಯದಲ್ಲಿಯೇ ಆಶ್ರಯವನ್ನು ಪಡೆದಿದೆ. ಎಲ್ಲ ಕರ್ಮಗಳಿಗೂ ಸತ್ಯವೇ ಮೂಲಾಧಾರವಾಗಿದೆ. ಸತ್ಯಕ್ಕಿಂತಲೂ ಹಿರಿಯದಾದ ಸ್ಥಾನವೇ ಮತ್ತೊಂದಿಲ್ಲ.*

---

*ಸತ್ಯದ ವಿಷಯದಲ್ಲಿ ಉಪನಿಷದ್ವಾಕ್ಯಗಳು :- ೧) ಸತ್ಯಂ ವದ : ಸತ್ಯವನ್ನು ಹೇಳು. ೨) ಸತ್ಯಂ ಪರಂ ಪರಗ್ಂ ಸತ್ಯಗ್ಂ ಸತ್ಯೇನ ನ ಸುವರ್ಗಾಲ್ಲೋಕಾಚ್ಚ್ಯವನ್ತೇ ಕದಾಚನ ಸತಾಗ್ಂ ಹಿ ಸತ್ಯಂ ತಸ್ಮಾತ್ಸತ್ಯೇ ರಮನ್ತೇ.

ಸತ್ಯವೇ ಶ್ರೇಷ್ಠ : ಸತ್ಯದಿಂದ ನಡೆಯುವವನು ಸ್ವರ್ಗಲೋಕದಿಂದ ಚ್ಯುತ ನಾಗುವುದೇ ಇಲ್ಲ. ಆದುದರಿಂದ ಸತ್ಪುರುಷರು ಸತ್ಯವನ್ನೇ ನುಡಿಯುತ್ತಾರೆ.

೩) ಪ್ರಾಜಾಪತ್ಯೋ ಹಾರುಣಿಃ ಸುಪರ್ಣೇಯಃ ಪ್ರಜಾಪತಿಂ ಪಿತರಮುಪಸಸಾರ

ದಾನ, ಇಷ್ಟಿಗಳು, ಹೋಮ-ಹವನಗಳು, ತಪಸ್ಸುಗಳು, ಸಕಲವೇದಗಳು–ಎಲ್ಲವೂ ಸತ್ಯದಲ್ಲಿಯೇ ಪ್ರತಿಷ್ಠಿತವಾಗಿರುವುದರಿಂದ ರಾಜನಾದವನು ಸರ್ವದಾ ಸತ್ಯಪರನಾಗಿಯೇ ಇರಬೇಕು.

ಪರಲೋಕವೂ ಇಲ್ಲ: ಕರ್ಮಫಲವೂ ಇಲ್ಲ: ಪ್ರತ್ಯಕ್ಷವೊಂದೇ ಪ್ರಮಾಣ–ಎನ್ನುವುದಾದರೆ :

ಏಕಃ ಪಾಲಯತೇ ಲೋಕಮೇಕಃ ಪಾಲಯತೇ ಕುಲಮ್ ।
ಮಜ್ಜತ್ಯೇಕೋ ಹಿ ನಿರಯ ಏಕಃ ಸ್ವರ್ಗೇ ಮಹೀಯತೇ ॥೧೫॥

ಒಬ್ಬನು ಚಕ್ರವರ್ತಿಯಾಗುತ್ತಾನೆ: ಒಬ್ಬನು ಒಂದು ಗುಂಪಿಗೆ ನಾಯಕನಾಗಿರುತ್ತಾನೆ. ಒಬ್ಬನು ನರಕಯಾತನೆಯನ್ನು ಅನುಭವಿಸುತ್ತಿರುತ್ತಾನೆ: ಮತ್ತೊಬ್ಬನು ಸ್ವರ್ಗಸುಖವನ್ನು ಅನುಭವಿಸುತ್ತಿರುತ್ತಾನೆ–ಈ ವಿಧವಾದ ವಿಪರ್ಯಾಸಗಳಿಗೆ ಕಾರಣವೇನು?*

ಸೋಽಹಂ ಪಿತುರ್ನಿಯೋಗಂ ತು ಕಿಮರ್ಥಂ ನಾನುಪಾಲಯೇ ।
ಸತ್ಯಪ್ರತಿಶ್ರವಃ ಸತ್ಯಂ ಸತ್ಯೇನ ಸಮಯೀಕೃತಃ ॥೧೬॥

ನಾನು ಸತ್ಯಪ್ರತಿಜ್ಞನಾಗಿದ್ದೇನೆ. ಸತ್ಯದ ಮೇಲೆ ಆಣೆಯಿಟ್ಟು

ಕಿಂ ಭಗವನ್ತಃ ಪರಮಂ ವದನ್ತೀತಿ ತಸ್ಮೈ ಪ್ರೋವಾಚ ಸತ್ಯೇನ ವಾಯುರಾವಾತಿ ಸತ್ಯೇನಾದಿತ್ಯೋ ರೋಚತೇ ದಿವಿ ಸತ್ಯಂ ವಾಚಃ ಪ್ರತಿಷ್ಠಾ ಸತ್ಯೇ ಸರ್ವಂ ಪ್ರತಿಷ್ಠಿತಂ ತಸ್ಮಾತ್ಸತ್ಯಂ ಪರಮಂ ವದನ್ತಿ.

"ಪ್ರಜಾಪತಿಯ ಪುತ್ರನಾದ ಸುಪರ್ಣೆಯ ಮಗನಾದ ಆರುಣಿಯು ತಂದೆಯಾದ ಪ್ರಜಾಪತಿಯ ಸಮೀಪಕ್ಕೆ ಹೋಗಿ– "ಭಗವಾನರು ಯಾವುದನ್ನು ಶ್ರೇಷ್ಠವೆನ್ನುವರು?" ಎಂದು ಕೇಳಿದನು.

ಪ್ರಜಾಪತಿಯು ಅವನಿಗೆ ಹೀಗೆ ಉತ್ತರಿಸಿದನು : "ಸತ್ಯದಿಂದಲೇ ವಾಯುದೇವನು ಬೀಸುತ್ತಾನೆ : ಸೂರ್ಯನು ಅಂತರಿಕ್ಷದಲ್ಲಿ ಬೆಳಗುತ್ತಾನೆ : ಸತ್ಯವು ಮಾತಿನ ನೆಲೆಮನೆ : ಸತ್ಯದಲ್ಲಿಯೇ ಎಲ್ಲವೂ ನೆಲೆಸಿದೆ. ಆದುದರಿಂದ ಸತ್ಯವನ್ನು ಪರಮಶ್ರೇಷ್ಠವೆನ್ನುತ್ತಾರೆ."

[1] ಒಬ್ಬ ತಂದೆಯ ಹೊಟ್ಟೆಯಲ್ಲಿಯೇ ಹುಟ್ಟಿದ ನಾಲ್ಕಾರು ಮಕ್ಕಳಲ್ಲಿ ಒಬ್ಬನು ಬುದ್ಧಿವಂತನಾಗಿರುತ್ತಾನೆ. ಮತ್ತೊಬ್ಬನು ದಡ್ಡನಾಗಿರುತ್ತಾನೆ. ಒಬ್ಬನಿಗೆ ವೇದ ಮಾರ್ಗವು ಹಿತವೆನಿಸಿದರೆ ಮತ್ತೊಬ್ಬನಿಗೆ ದುರ್ಮಾರ್ಗಾನುಸರಣೆಯು ಹಿತವೆನಿಸುತ್ತದೆ.

ತಂದೆಗೆ ಕೊಟ್ಟಿರುವ ಮಾತನ್ನು ಸತ್ಯವನ್ನಾಗಿ ಮಾಡಲು ನಾನು ನಿಶ್ಚಯಿಸಿದ್ದೇನೆ. ಹೀಗಿರುವಾಗ ತಂದೆಯ ಆದೇಶವನ್ನು ನಾನು ಯಾವ ಕಾರಣಕ್ಕಾಗಿ ಪರಿಪಾಲಿಸದೇ ಇರಲಿ?*

ನೈವ ಲೋಭಾನ್ನ ಮೋಹಾದ್ವಾ ನ ಚಾಜ್ಞಾನಾತ್ತಮೋನ್ವಿತಃ ।
ಸೇತುಂ ಸತ್ಯಸ್ಯ ಭೇತ್ಸ್ಯಾಮಿ ಗುರೋಃ ಸತ್ಯಪ್ರತಿಶ್ರವಃ ॥೧೭॥

ಸತ್ಯಪ್ರತಿಜ್ಞನಾದ ನಾನು ರಾಜ್ಯಲೋಭದಿಂದಾಗಲೀ, ವ್ಯಾಮೋಹದಿಂದಾಗಲೀ, ಅಜ್ಞಾನದಿಂದಾಗಲೀ–ನಿಮ್ಮ ಅಧರ್ಮೋಪದೇಶವೆಂಬ ತಮಸ್ಸಿನಿಂದ ಆವೃತನಾಗಿ ನಮ್ಮ ಗುರುವಾದ ದಶರಥನಿಗೆ ಸದ್ಗತಿಪ್ರಾಪಕವಾದ ಸತ್ಯದ ಸೇತುವೆಯನ್ನು ಮಾತ್ರ ಮುರಿದುಹಾಕುವುದಿಲ್ಲ.

ಅಸತ್ಯಸಂಧಸ್ಯ ಸತಶ್ಚಲಸ್ಯಾಸ್ಥಿರಚೇತಸಃ ।
ನೈವ ದೇವಾ ನ ಪಿತರಃ ಪ್ರತೀಚ್ಛನ್ತೀತಿ ನಃ ಶ್ರುತಮ್ ॥೧೮॥

ಸತ್ಯಸಂಧನಲ್ಲದ, ಚಂಚಲಸ್ವಭಾವವಿರುವ, ಧರ್ಮದಿಂದ ಚ್ಯುತನಾಗಿರುವ ಮನುಷ್ಯನಿಂದ ದೇವತೆಗಳಾಗಲೀ ಪಿತೃಗಳಾಗಲೀ ಹವ್ಯ-ಕವ್ಯಾದಿಗಳನ್ನು ಸ್ವೀಕರಿಸುವುದಿಲ್ಲವೆಂಬುದನ್ನು ಹಿರಿಯರಿಂದ ನಾವು ಕೇಳಿದ್ದೇವೆ.

ಪ್ರತ್ಯಗಾತ್ಮಮಿಮಂ ಧರ್ಮಂ ಸತ್ಯಂ ಪಶ್ಯಾಮ್ಯಹಂ ಸ್ವಯಮ್ ।
ಭಾರಃ ಸತ್ಪುರುಷಾಚೀರ್ಣಸ್ತದರ್ಥಮಭಿಮನ್ಯತೇ ॥೧೯॥

ಇದಕ್ಕೆ ಕಾರಣವನ್ನು ನಾಸ್ತಿಕರು ಹೇಳಲಾರರು. ಇವರು ಕೇವಲ ಅನ್ನ-ಬಟ್ಟೆಗಳಲ್ಲಿ ಸರ್ವಸಮಾನತೆಯನ್ನು ಹೇರಲು ಯತ್ನಿಸಿದರೂ ಬುದ್ಧಿಯಲ್ಲಿ ಸರ್ವಸಮಾನತೆಯನ್ನು ಸ್ಥಾಪಿಸುವ ಸಾಧ್ಯತೆಯಿಲ್ಲ. ಅಸಮಾನತೆಯನ್ನು ನಾವು ಕರ್ಮಫಲವೆನ್ನುತ್ತೇವೆ. ಸಮಾಜವಾದಿಗಳಿದನ್ನು ಕಾಲ್ಪನಿಕವೆಂದು ಹೇಳುತ್ತಾರೆ.

*ರಾಮನು ಜಾಬಾಲಿಗಳ ಮಾತಿನಂತೆ ಅಯೋಧ್ಯೆಗೆ ಹಿಂದಿರುಗಿದರೆ ದಶರಥನು ದೇವಾಸುರಯುದ್ಧಸಮಯದಲ್ಲಿ ಕೈಕೇಯಿಗಿತ್ತ ಸತ್ಯವಚನದ ಭಂಗವಾಗುವುದು ಮತ್ತು ಪಟ್ಟಾಭಿಷೇಕದ ಸಮಯದಲ್ಲಿ 'ಕರಿಷ್ಯಾಮಿ ತವ ಪ್ರೀತಿಂ ಸುಕೃತೇನಾಪಿ ತೇ ಶಪೇ' ಯಾವ ವರವನ್ನಾದರೂ ಕೊಡುತ್ತೇನೆಂದು ತನ್ನ ಸುಕೃತವನ್ನೇ ಪಣವಾಗಿಟ್ಟು ಪ್ರತಿಜ್ಞೆಮಾಡಿದ್ದೂ ಭಂಗವಾಗಿ ಹೋಗುವುದು. ಆದುದರಿಂದ ರಾಜನ ಈ ಮಾತುಗಳನ್ನೂ ಸತ್ಯಭಾಷಣವನ್ನಾಗಿ ಮಾಡಬೇಕಾದರೆ ರಾಮನು ಹದಿನಾಲ್ಕು ವರ್ಷಗಳ ಕಾಲ ವನವಾಸವನ್ನು ಮಾಡಲೇಬೇಕು.

ನಾನು ಸತ್ಯರೂಪವಾದ ಈ ಧರ್ಮವನ್ನು ಸಮಸ್ತಪ್ರಾಣಿಗಳಿಗೂ ಹಿತಕರವಾದುದೆಂದೂ ಮತ್ತು ಎಲ್ಲ ಧರ್ಮಗಳಿಗೂ ಶ್ರೇಷ್ಠವಾದ ಧರ್ಮ ವೆಂದೂ ಭಾವಿಸುತ್ತೇನೆ. ಸತ್ಪುರುಷರಾದ ಮಹರ್ಷಿಗಳು ಜಟೆಯನ್ನೂ ನಾರುಮಡಿಗಳನ್ನೂ ಧರಿಸುವುದರಿಂದ ನಾನೂ ಅದನ್ನು ಮಾನ್ಯ ಮಾಡುತ್ತೇನೆ.

ಕ್ಷಾತ್ರಂ ಧರ್ಮಮಹಂ ತ್ಯಕ್ಷ್ಯೇ ಹ್ಯಧರ್ಮಂ ಧರ್ಮಸಂಹಿತಮ್ ।
ಕ್ಷುದ್ರೈರ್ನೃಶಂಸೈರ್ಲುಬ್ಧೈಶ್ಚ ಸೇವಿತಂ ಪಾಪಕರ್ಮಭಿಃ ॥೨೦॥

ಕ್ಷತ್ರಿಯಧರ್ಮವನ್ನೇ ಬೇಕಾದರೂ ತ್ಯಜಿಸಲು ನಾನು ಸಿದ್ಧನಿದ್ದೇನೆ. ಕಾಮೋಪಭೋಗವೇ ಪ್ರಧಾನವಾಗಿರುವ ಅಂತಹ ಧರ್ಮವು ತೋರಿಕೆಗೆ ಮಾತ್ರವೇ ಧರ್ಮವಾಗಿರುವುದೇ ಹೊರತು ನಿಶ್ಚಯವಾಗಿಯೂ ಅಧರ್ಮವೇ ಸರಿ. ಅಂತಹ ಧರ್ಮವನ್ನು ಕ್ಷುದ್ರರೂ, ದಯಾಹೀನರೂ, ಲೋಭಿಗಳೂ ಆದ ಪಾಪಿಷ್ಠರು ಮಾತ್ರ ಅವಲಂಬಿಸುತ್ತಾರೆ.

ಕಾಯೇನ ಕುರುತೇ ಪಾಪಂ ಮನಸಾ ಸಂಪ್ರಧಾರ್ಯ ಚ ।
ಅನೃತಂ ಜಿಹ್ವಯಾ ಚಾಹ ತ್ರಿವಿಧಂ ಕರ್ಮ ಪಾತಕಮ್ ॥೨೧॥

ಮನುಷ್ಯನು ಶರೀರದ ಮೂಲಕವಾಗಿ ಮಾಡುವ ಪಾಪವನ್ನು ಮೊದಲು ಮನಸ್ಸಿನಲ್ಲಿ ನಿಶ್ಚಯಿಸುತ್ತಾನೆ. ಬಳಿಕ ತಾನು ನಿಶ್ಚಯಿಸಿರುವ ಪಾಪಕಾರ್ಯವನ್ನು ತನ್ನ ಮಿತ್ರರಿಗೆ ಬಾಯಿಂದ ಹೇಳಿ ಅವರ ಸಹಾಯವನ್ನು ಪಡೆದು ಶರೀರದ ಮೂಲಕವಾಗಿ ಕಾರ್ಯರೂಪಕ್ಕೆ ತರುತ್ತಾನೆ. ಹೀಗೆ ಪಾಪಕರ್ಮವು ಕಾಯಿಕ, ಮಾನಸಿಕ ಮತ್ತು ವಾಚಿಕ–ಎಂದು ಮೂರು ಪ್ರಕಾರಗಳಾಗಿರುತ್ತದೆ.

ಭೂಮಿಃ ಕೀರ್ತಿರ್ಯಶೋ ಲಕ್ಷ್ಮೀಃ ಪುರುಷಂ ಪ್ರಾರ್ಥಯನ್ತಿ ಹಿ ।
ಸ್ವರ್ಗಸ್ಥಂ ಚಾನುಪಶ್ಯನ್ತಿ ಸತ್ಯಮೇವ ಭಜೇತ ತತ್ ॥೨೨॥

ಭೂಮಿ, ಕೀರ್ತಿ, ಯಶಸ್ಸು ಮತ್ತು ಸಂಪತ್ತು–ಈ ನಾಲ್ಕೂ ಸತ್ಯ ನಿಷ್ಠನಾದ ಪುರುಷನನ್ನು ಸೇವಿಸುತ್ತವೆ. ಸ್ವರ್ಗಕ್ಕೆ ಹೋಗುವಾಗಲೂ ಅನುಸರಿಸಿಯೇ ಹೋಗುತ್ತವೆ. ಆದುದರಿಂದ ಸತ್ಯವನ್ನೇ ಸರ್ವಪ್ರಕಾರ ದಿಂದಲೂ ಆಶ್ರಯಿಸಬೇಕು.

ಶ್ರೇಷ್ಠಂ ಹ್ಯನಾರ್ಯಮೇವ ಸ್ಯಾದ್ಯದ್ಭವಾನವಧಾರ್ಯ ಮಾಮ್ ।
ಆಹ ಯುಕ್ತಿಕರೈರ್ವಾಕ್ಯೈರಿದಂ ಭದ್ರಂ ಕುರುಷ್ವ ಹ ॥೨೩॥

ಮಹರ್ಷಿಗಳೇ! ಈಗ ನಾನು ಮಾಡಬೇಕಾದ ಶ್ರೇಷ್ಠಕರ್ತವ್ಯದ ವಿಷಯವಾಗಿ ನಿಶ್ಚಯಿಸಿ ಯುಕ್ತಿಯುಕ್ತವಾದ ಮಾತುಗಳಿಂದ–'ಇದಂ ಭದ್ರಂ **ಕುರುಷ್ವ**' ಶ್ರೇಷ್ಠವೂ ಮಂಗಳಕರವೂ ಆದ ಈ ಕಾರ್ಯವನ್ನು ಮಾಡು–ಎಂಬುದಾಗಿ ಉಪದೇಶಿಸಿದಿರಿ. ನಿಮ್ಮ ಮಾತಿನಂತೆ ನಾನು ನಡೆದುಕೊಂಡರೆ ಅದು ಅನಾರ್ಯರು ಮಾಡುವ ಕಾರ್ಯವಾಗುವುದೇ ಹೊರತು ಆರ್ಯರು ಮಾಡಲು ಯೋಗ್ಯವಾದ ಕಾರ್ಯವಾಗುವುದಿಲ್ಲ.

ಕಥಂ ಹ್ಯಹಂ ಪ್ರತಿಜ್ಞಾಯ ವನವಾಸಮಿಮಂ ಗುರೌ ।
ಭರತಸ್ಯ ಕರಿಷ್ಯಾಮಿ ವಚೋ ಹಿತ್ವಾ ಗುರೋರ್ವಚ ॥೨೪॥

ಅರಣ್ಯವಾಸಮಾಡುವೆನೆಂದು ತಂದೆಗೆ ಪ್ರತಿಜ್ಞೆಮಾಡಿಕೊಟ್ಟು ಕಾಡಿಗೆ ಬಂದಿರುವ ನಾನು ತಂದೆಯ ಮಾತನ್ನು ಮೀರಿ ಭರತನ ಮಾತನ್ನು ಹೇಗೆ ನಡೆಸಿಕೊಡಲಿ?

ಸ್ಥಿರಾ ಮಯಾ ಪ್ರತಿಜ್ಞಾತಾ ಪ್ರತಿಜ್ಞಾ ಗುರುಸಂನಿಧೌ ।
ಪ್ರಹೃಷ್ಯಮಾಣಾ ಸಾ ದೇವೀ ಕೈಕೇಯೀ ಚಾಭವತ್ತದಾ ॥೨೫॥

ನನ್ನ ತಂದೆಯ ಸನ್ನಿಧಿಯಲ್ಲಿ ನಾನು ಸ್ಥಿರಪ್ರತಿಜ್ಞೆಯನ್ನು ಮಾಡಿರು ವೆನು. ನಾನು ಪ್ರತಿಜ್ಞೆಮಾಡಿದ ಸಮಯದಲ್ಲಿ ಕೈಕೇಯಿದೇವಿಗೆ ಬಹಳ ಸಂತೋಷವಾಯಿತು. ತಂದೆಯ ಋಣಮೋಚಕವೂ ತಾಯಿಗೆ ಆನಂದ ದಾಯಕವೂ ಆದ ಆ ಪ್ರತಿಜ್ಞೆಯನ್ನು ನಾನೀಗ ಮುರಿಯಲೇ? ಮುಂದೆಯೂ ನಾನು ಹೀಗೆಯೇ ಅರಣ್ಯದಲ್ಲಿ ವಾಸಮಾಡುತ್ತಾ ಶುಚಿಯಾಗಿದ್ದು ನಿಯತ ವಾದ ಆಹಾರವನ್ನು ಸೇವಿಸುತ್ತಿರುತ್ತೇನೆ. ಮಂಗಳಕರವಾದ ಮೂಲ-ಫಲ ಗಳಿಂದಲೂ ಪುಷ್ಪಗಳಿಂದಲೂ ದೇವತೆಗಳನ್ನೂ ಪಿತೃಗಳನ್ನೂ ಆರಾಧಿಸು ತ್ತೇನೆ. ಸಂತುಷ್ಟವಾದ ಪಂಚೇಂದ್ರಿಯಗಳಿಂದ ಕೂಡಿದವನಾಗಿ ಯಾವ ಕಾರ್ಯವನ್ನು ಮಾಡಬೇಕು ; ಯಾವ ಕಾರ್ಯವನ್ನು ಮಾಡಬಾರದು?–ಎಂಬುದನ್ನು ವಿವೇಚಿಸಿ ಕಾರ್ಯಮಾಡುತ್ತಾ ಶ್ರದ್ಧೆಯಿಂದಲೂ, ನಿಷ್ಕಾಪಟ್ಯ

ದಿಂದಲೂ ತಂದೆಯ ಆಜ್ಞೆಯನ್ನು ಪರಿಪಾಲಿಸುತ್ತಾ ಜೀವನವನ್ನು ನಿರ್ವಹಿಸುತ್ತೇನೆ.

ಕರ್ಮಭೂಮಿಯಾದ ಈ ಭರತಖಂಡದಲ್ಲಿ ಅವತರಿಸಿದ ಮೇಲೆ ಯಾವ ಕರ್ಮವು ಶುಭಾವಹವೋ–ಅಂತಹ ಕರ್ಮವನ್ನೇ ಮಾಡಬೇಕು. ಅಗ್ನಿ, ವಾಯು ಮತ್ತು ಚಂದ್ರರು ಅವರವರು ಮಾಡಿದ ಕರ್ಮಫಲ ಗಳಿಂದಲೇ ಇಂದು ಉಚ್ಚಸ್ಥಾನಗಳಲ್ಲಿ ಉಪಸ್ಥಿತರಾಗಿದ್ದಾರೆ. ತಾವು ಹೇಳಿದಂತೆ ಕರ್ಮಗಳಿಗೆ ಫಲವಿಲ್ಲದೇ ಇಲ್ಲ. ನೂರು ಯಾಗಗಳನ್ನು ಮಾಡಿದ ನಂತರವೇ ಇಂದ್ರನು ದೇವತೆಗಳ ರಾಜನಾಗಿ ಸ್ವರ್ಗಕ್ಕೆ ತೆರಳಿದನು. ಉಗ್ರವಾದ ತಪಸ್ಸುಗಳನ್ನು ಮಾಡಿ ಮಹರ್ಷಿಗಳೂ ಸ್ವರ್ಗವನ್ನೈದಿರುವರು.”

ಮಹಾತೇಜಸ್ವಿಯಾದ ರಾಜಕುಮಾರನಾದ ಶ್ರೀರಾಮನು ಜಾಬಾಲಿ ಗಳು ಹೇಳಿದ, ನಾಸ್ತಿಕರು ಹೇಳಲು ಯೋಗ್ಯವಾದ ತರ್ಕವಾದವನ್ನು ಕೇಳಿ–ಮಹರ್ಷಿಗಳೊಬ್ಬರು ಇಂತಹ ಮಾತುಗಳನ್ನು ಹೇಳುತ್ತಿರುವರಲ್ಲಾ! – ಎಂಬ ಅಸಹನೆಯಿಂದ ಅವರ ಮಾತನ್ನು ಖಂಡಿಸುತ್ತಾ ಹೇಳಿದನು :

ಸತ್ಯಂ ಚ ಧರ್ಮಂ ಚ ಪರಾಕ್ರಮಂ ಚ
ಭೂತಾನುಕಮ್ಪಾಂ ಪ್ರಿಯವಾದಿತಾಂ ಚ ।
ದ್ವಿಜಾತಿದೇವಾತಿಥಿಪೂಜನಂ ಚ
ಪನ್ಥಾನಮಾಹುಸ್ತ್ರಿದಿವಸ್ಯ ಸನ್ತಃ ॥೩೧॥

“ಮಹರ್ಷಿಗಳೇ! ಸತ್ಯನಿಷ್ಠೆ, ಧರ್ಮಾಚರಣೆ, ಪರಾಕ್ರಮದಿಂದ ಯುದ್ಧಮಾಡುವುದು, ಪ್ರಾಣಿದಯೆ, ಪ್ರಿಯವಾದ ಮಾತುಗಳನ್ನಾಡುವುದು, ದೇವತೆಗಳಿಗೆ ಯಜ್ಞಗಳ ಮೂಲಕ ಪೂಜೆಯನ್ನು ಸಲ್ಲಿಸುವುದು, ಬ್ರಾಹ್ಮಣ ರನ್ನೂ ಅತಿಥಿಗಳನ್ನೂ ಸತ್ಕರಿಸುವುದು–ಇವು ಸ್ವರ್ಗಕ್ಕೆ ಹಾದಿಯೆಂದು ಸತ್ಪುರುಷರು ಹೇಳುತ್ತಾರೆ.

ಈ ಕಾರಣದಿಂದಲೇ ವಿಪ್ರರು ಧರ್ಮದ ಈ ರಹಸ್ಯವನ್ನು ತಿಳಿದು ವೇದಗಳ ಅರ್ಥವನ್ನೇ ಯಥಾವತ್ತಾಗಿ ನಿರೂಪಿಸುವ ಶ್ರುತಿಗಳ ಸಿದ್ಧಾಂತ ವನ್ನು ತಿಳಿದು ಶ್ರುತಿ-ಸ್ಮೃತಿವಿಹಿತವಾದ ಸಕಲಕರ್ಮಗಳನ್ನೂ ಯಥಾ

ವತ್ತಾಗಿಯೇ ಮಾಡುತ್ತಾ ಯಾವ ವಿಧವಾದ ಸಂದೇಹವಾಗಲೀ ಭ್ರಮೆಯಾಗಲೀ ಇಲ್ಲದೇ ಅಪ್ರಮತ್ತರಾಗಿದ್ದು ಉತ್ತಮಲೋಕಗಳನ್ನು ಪಡೆಯಲು ಬಯಸುತ್ತಾರೆ.

ನಿನ್ದಾಮ್ಯಹಂ ಕರ್ಮ ಪಿತುಃ ಕೃತಂ ತ-
ದ್ಯಸ್ತ್ವಾಮಗೃಹ್ಣಾದ್ವಿಷಮಸ್ಥಬುದ್ಧಿಮ್ ।
ಬುದ್ಧ್ಯಾನಯೈವಂವಿಧಯಾ ಚರನ್ತಂ
ಸುನಾಸ್ತಿಕಂ ಧರ್ಮಪಥಾದಪೇತಮ್ ॥೩೩॥

ಧರ್ಮಕ್ಕೆ ಪ್ರತಿಕೂಲವಾದ ಬುದ್ಧಿಯುಳ್ಳ ಚಾರ್ವಾಕಮತಾನುಸಾರಿಯಾದ ಇಂತಹ ಬುದ್ಧಿಯನ್ನಿಟ್ಟುಕೊಂಡು ಇದನ್ನೇ ಉಪದೇಶಿಸುತ್ತಾ ತಿರುಗುತ್ತಿರುವ, ಪರಮನಾಸ್ತಿಕರಾದ, ಧರ್ಮಮಾರ್ಗವನ್ನು ಸಂಪೂರ್ಣವಾಗಿ ತೊರೆದಿರುವ ನಿಮ್ಮನ್ನು ಋತ್ವಿಜರನ್ನಾಗಿ ನಮ್ಮ ತಂದೆಯು ಪರಿಗ್ರಹಿಸಿದ್ದನಲ್ಲವೇ? ಅವನು ಮಾಡಿರುವ ಈ ಒಂದು ಕಾರ್ಯವನ್ನು ನಿಂದಿಸಬೇಕಾಗಿದೆ. (ವೈದಿಕಕರ್ಮಗಳಿಂದ ನಿಮ್ಮನ್ನು ಬಹಿಷ್ಕರಿಸಬೇಕಾಗಿದ್ದಿತು.)

ಯಥಾ ಹಿ ಚೋರಃ ಸ ತಥಾ ಹಿ ಬುದ್ಧ-
ಸ್ತಥಾಗತಂ ನಾಸ್ತಿಕಮತ್ರ ವಿದ್ಧಿ ।
ತಸ್ಮಾದ್ಧಿ ಯಃ ಶಙ್ಕ್ಯತಮಃ ಪ್ರಜಾನಾಂ
ನ ನಾಸ್ತಿಕೇನಾಭಿಮುಖೋ ಬುಧಃ ಸ್ಯಾತ್ ॥೩೪॥

ಚೋರನು ಹೇಗೋ ಬುದ್ಧನೂ ಹಾಗೆಯೇ ಎಂದು ತಿಳಿ. ತಥಾಗತನು (ಬುದ್ಧನು) ನಾಸ್ತಿಕನೇ ಆಗಿದ್ದಾನೆ. ಪ್ರಜೆಗಳ ಮಧ್ಯದಲ್ಲಿ ನಾಸ್ತಿಕನೆಂಬ ಸಂದೇಹಕ್ಕೆ ಕಾರಣನಾಗುವವನನ್ನು ವಿದ್ವಾಂಸನಾದವನು ನೋಡಲೂಬಾರದು.*

---

*ಶ್ರೀರಾಮನು ಬೌದ್ಧಮತವನ್ನೂ ಜಾಬಾಲಿಗಳನ್ನೂ ನಿಂದಿಸುವ ಕಡೆಯ ೮ ಶ್ಲೋಕಗಳು ಓರಿಯಂಟಲ್ ಇನ್‌ಸ್ಟಿಟ್ಯೂಟ್, ಬರೋಡ-ಇವರು ಪ್ರಕಟಿಸಿರುವ ಪುಸ್ತಕದಲ್ಲಿಲ್ಲ. ಅವರು ಈ ಶ್ಲೋಕಗಳನ್ನು ಪ್ರಸ್ತಾಪಿಸಿ ಹೇಳಿರುವ ಅಭಿಪ್ರಾಯವು ಹೀಗಿದೆ : ಈ ಪಾಠವು ಎಲ್ಲ ಹಸ್ತಪ್ರತಿಗಳಲ್ಲಿಯೂ ಒಂದೇ ಸಮನಾಗಿರುವುದಿಲ್ಲ. ಕ್ರಿ.ಶ. ೧,೨೫೦ಕ್ಕೂ ಹಿಂದೆ ಈ ಪಾಠವು ಇದ್ದಿತೆಂಬುದಕ್ಕೆ ಆಧಾರವು ಸಿಕ್ಕುತ್ತದೆ. ಆದರೆ ಈ ಶ್ಲೋಕಗಳನ್ನು ಬೌದ್ಧಮತದ ದ್ವೇಷಿಗಳು ಸೇರಿಸಿರುವರೆಂಬುದರಲ್ಲಿ ನಾವು

ಮಹರ್ಷಿಗಳೇ! ನಿಮ್ಮ ಪೂರ್ವಜರಾದ ಬ್ರಾಹ್ಮಣರು ವೇದೋಕ್ತವಾದ ಅನೇಕ ಶುಭಕರ್ಮಗಳನ್ನು ಮಾಡುತ್ತಿದ್ದರು. ಇಹ-ಪರಗಳೆರಡರ ಸುಖವನ್ನೂ ತ್ಯಜಿಸಿ (ಫಲಾಪೇಕ್ಷೆಯನ್ನು ಬಿಟ್ಟು) ವ್ರತನಿಷ್ಠರಾಗಿರುತ್ತಾ ಯಜ್ಞ-ಯಾಗಾದಿಗಳನ್ನು ಮಾಡುತ್ತಾ ಅಕ್ಷಯವಾದ ಪುಣ್ಯಲೋಕಗಳನ್ನು ಪಡೆದಿರುವರು.

ಧರ್ಮೇ ರತಾಃ ಸತ್ಪುರುಷೈಃ ಸಮೇತಾ-
ಸ್ತೇಜಸ್ವಿನೋ ದಾನಗುಣಪ್ರಧಾನಾಃ ।
ಅಹಿಂಸಕಾ ವೀತಮಲಾಶ್ಚ ಲೋಕೇ
ಭವನ್ತಿ ಪೂಜ್ಯಾ ಮುನಯಃ ಪ್ರಧಾನಾಃ ॥೩೬॥

ಧರ್ಮದಲ್ಲಿಯೇ ನಿರತರಾದ, ಸತ್ಪುರುಷರ ಸಹವಾಸದಲ್ಲಿಯೇ ಇರುವ, ತೇಜಸ್ವಿಗಳಾದ, ದಾನಶೀಲರಾಗಿರುವ, ಯಾವ ಪ್ರಾಣಿಯನ್ನೂ ಹಿಂಸೆ ಮಾಡದಿರುವ, ಪಾಪರಹಿತರಾಗಿರುವ ಮುನಿಗಳು ಎಲ್ಲರಿಗೂ ಪ್ರಧಾನರೂ (ಆದರ್ಶರೂ) ಮತ್ತು ಪೂಜ್ಯರೂ ಆಗುತ್ತಾರೆ."

ಹೀಗೆ ಕೋಪಾವಿಷ್ಟನಾಗಿ ನಿಷ್ಠುರದ ಮಾತುಗಳನ್ನಾಡುತ್ತಿದ್ದ, ಮಹಾಸತ್ತ್ವನಾದ, ಮಹಾತ್ಮನಾದ ಶ್ರೀರಾಮನನ್ನು ಕುರಿತು ಜಾಬಾಲಿಗಳು ನಯ-ವಿನಯಯುಕ್ತವಾದ ಸತ್ಯವಾದ, ವೇದಮಾರ್ಗಾನುಸಾರಿಯಾದ ಮತ್ತು ಶ್ರೀರಾಮನಿಗೆ ಹಿತಕರವಾದ ಈ ಮಾತನ್ನು ಹೇಳಿದರು :

ಸಂಶಯಪಡಬೇಕಾಗಿಲ್ಲ. ಹೀಗೆ ಸೇರಿಸಿದವರಿಗೆ ಬೌದ್ಧಮತಕ್ಕೂ ಚಾರ್ವಾಕಮತಕ್ಕೂ ವ್ಯತ್ಯಾಸವೇ ತಿಳಿಯದು. ಬುದ್ಧನು ಲೌಕಾಯತಿಕನೂ ಅಲ್ಲ. ನಾಸ್ತಿಕನೂ ಅಲ್ಲ. ಒಂದೊಂದಕ್ಕೂ ಯಾವ ಸಂಬಂಧವೂ ಇಲ್ಲ. ಮೇಲಾಗಿ ನಾಸ್ತಿಕಮತವೂ ಆಸ್ತಿಕ ಮತದಂತೆಯೇ ಅನಾದಿ. ಆದರೆ ಬುದ್ಧನ ಕಾಲವು ಸುಮಾರು ೨,೫೦೦ ವರ್ಷಗಳೆಂದು ನಿರ್ಣೀತವಾಗಿದೆ. ಜಾಬಾಲಿಗಳಾಗಲೀ ವಾಲ್ಮೀಕಿಗಳಾಗಲೀ ಬುದ್ಧನಿಗಿಂತಲೂ ಹಿಂದಿನವರೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದುದರಿಂದ ಬುದ್ಧನ ಹೆಸರನ್ನಾಗಲೀ ಬೌದ್ಧಮತದ ವಿಚಾರವನ್ನಾಗಲೀ ವಾಲ್ಮೀಕಿಗಳು ಹೇಳಿರಲು ಸರ್ವಥಾ ಸಾಧ್ಯವಿಲ್ಲ. ನಾಸ್ತಿಕಮತವನ್ನು ಪ್ರಸ್ತಾಪಿಸಲು ಅವಕಾಶವಿದೆ. ನಮ್ಮಲ್ಲಿರುವ N E ಹಸ್ತಪ್ರತಿಯಲ್ಲಿ ಈ ಶ್ಲೋಕಗಳ ಸುಳಿವೂ ಇಲ್ಲ.

ನ ನಾಸ್ತಿಕಾನಾಂ ವಚನಂ ಬ್ರವೀಮ್ಯಹಂ
ನ ನಾಸ್ತಿಕೋಽಹಂ ನ ಚ ನಾಸ್ತಿ ಕಿಂಚನ ।
ಸಮೀಕ್ಷ್ಯ ಕಾಲಂ ಪುನರಾಸ್ತಿಕೋಽಭವಂ
ಭವೇಯ ಕಾಲೇ ಪುನರೇವ ನಾಸ್ತಿಕಃ ॥೩೮॥

"ರಾಮ! ನಾನು ಸ್ವಾಭಾವಿಕವಾಗಿ ಯಾವಾಗಲೂ ನಾಸ್ತಿಕರಾಡುವ ಮಾತುಗಳನ್ನು ಆಡುವುದಿಲ್ಲ. ನಾನು ನಾಸ್ತಿಕನೂ ಅಲ್ಲ. ಪರಲೋಕ ವಿಲ್ಲವೆಂದು ಹೇಳತಕ್ಕವನೂ ಅಲ್ಲ. ನಿನ್ನಿಂದ ಈ ಮಾತನ್ನು ಕೇಳಿದ ನಾನು ಈಗಲೇ ಆಸ್ತಿಕನಾಗಿಬಿಟ್ಟಿದ್ದೇನೆ. ಸಮಯವು ಬಂದಾಗ ಪುನಃ ನಾಸ್ತಿಕನೂ ಆಗುವೆನು.

ಸ ಚಾಪಿ ಕಾಲೋಽಯಮುಪಾಗತಃ ಶನೈ-
ರ್ಯಥಾ ಮಯಾ ನಾಸ್ತಿಕವಾಗುದೀರಿತಾ ।
ನಿವರ್ತನಾರ್ಥಂ ತವ ರಾಮ ಕಾರಣಾ-
ತ್ಪ್ರಸಾದನಾರ್ಥಂ ಚ ಮಯೈತದೀರಿತಮ್ ॥೩೯॥

ನಾಸ್ತಿಕವಾದವನ್ನು ನಿನ್ನ ಮುಂದೆ ಮಂಡಿಸುವ ಕಾಲವು ಪ್ರಾಪ್ತವಾಗಿದ್ದುದರಿಂದ ನಾನು ಹಾಗೆ ಮಾಡಬೇಕಾಯಿತು. ನನಗೂ ಭರತನಂತೆ ನೀನು ಅಯೋಧ್ಯೆಗೆ ಹಿಂದಿರುಗಬೇಕಾದ ಅವಶ್ಯಕತೆಯು ಕಂಡು ಬಂದುದರಿಂದಲೂ–ಭರತನನ್ನು ಪ್ರಸನ್ನಗೊಳಿಸುವ ಸಲುವಾಗಿಯೂ ನಾನು ಈ ನಾಸ್ತಿಕವಾದವನ್ನು ನಿನ್ನ ಮುಂದಿಟ್ಟೆನು."

೧೦೯ನೆಯ ಸರ್ಗವು ಮುಗಿಯಿತು.

ವಸಿಷ್ಠರು ಸೃಷ್ಟಿಯ ಕ್ರಮವನ್ನೂ ಇಕ್ಷ್ವಾಕುವಂಶದ ಪರಂಪರೆಯನ್ನೂ ತಿಳಿಸಿ ಜ್ಯೇಷ್ಠನೇ ರಾಜನಾಗಬೇಕೆಂಬುದರ ಔಚಿತ್ಯವನ್ನೂ ಹೇಳಿ ರಾಜ್ಯವನ್ನು ಸ್ವೀಕರಿಸುವಂತೆ ಶ್ರೀರಾಮನಿಗೆ ಸಲಹೆ ನೀಡಿದುದು

ಕ್ರುದ್ಧಮಾಜ್ಞಾಯ ರಾಮಂ ತು ವಸಿಷ್ಠಃ ಪ್ರತ್ಯುವಾಚ ಹ ।
ಜಾಬಾಲಿರಪಿ ಜಾನೀತೇ ಲೋಕಸ್ಯಾಸ್ಯ ಗತಾಗತಿಮ್ ॥೧॥

ಜಾಬಾಲಿಗಳ ನಾಸ್ತಿಕವಾದವನ್ನು ಕೇಳಿ ರಾಮನು ಕೋಪಗೊಂಡಿರುವ ನೆಂಬುದನ್ನು ತಿಳಿದ ವಸಿಷ್ಠರು ಶ್ರೀರಾಮನಿಗೆ ಹೇಳಿದರು :

"ರಾಮ! ಜಾಬಾಲಿಗಳು ಕೂಡ ಜನರ ಹುಟ್ಟು-ಸಾವುಗಳ ರಹಸ್ಯವನ್ನು ಚೆನ್ನಾಗಿ ತಿಳಿದಿರುವರು. ನಿನ್ನನ್ನು ಅಯೋಧ್ಯೆಗೆ ಹಿಂದಿರುಗಿಸಬೇಕೆನ್ನುವ ಆಶಯದಿಂದ ನಾಸ್ತಿಕವಾದವನ್ನು ಆಶ್ರಯಿಸಿ ಹೀಗೆ ಮಾತನಾಡಿದರು. ಲೋಕನಾಥನೇ! ಈ ಲೋಕದ ಉತ್ಪತ್ತಿಯು ಹೇಗಾಯಿತೆಂಬುದನ್ನು ಹೇಳುವೆನು; ಕೇಳು :

ಸೃಷ್ಟಿಗೆ ಮೊದಲು ಎಲ್ಲೆಲ್ಲೂ ನೀರೇ ವ್ಯಾಪಿಸಿದ್ದಿತು. ಕೆಲಕಾಲಾನಂತರ ನೀರಿನಲ್ಲಿಯೇ ಭೂಮಿಯು ಪ್ರಾದುರ್ಭವಿಸಿತು. ಅನಂತರ ದೇವತೆ ಗಳೊಡನೆ ಬ್ರಹ್ಮನು ಆವಿರ್ಭವಿಸಿದನು.

ಅನಂತರ ಅವನೇ ವರಾಹರೂಪವನ್ನು ಧರಿಸಿ ನೀರಿನಲ್ಲಿ ಮುಳುಗಿದ್ದ ಭೂಮಿಯನ್ನು ಮೇಲಕ್ಕೆತ್ತಿದನು. ಬಳಿಕ ಚತುರ್ಮುಖನು ಪ್ರಯತ್ನಶೀಲರಾದ ದಕ್ಷನೇ ಮೊದಲಾದ ತನ್ನ ಮಕ್ಕಳೊಡನೆ ಈ ಜಗತ್ತನ್ನು ಸೃಷ್ಟಿಸಿದನು. ಆಕಾಶಸ್ವರೂಪನಾದ ಪರಬ್ರಹ್ಮಪರಮಾತ್ಮನಿಂದ ಶಾಶ್ವತನೂ, ನಿತ್ಯನೂ, ಅವ್ಯಯನೂ ಆದ ಬ್ರಹ್ಮನು ಹುಟ್ಟಿದನು.* ಬ್ರಹ್ಮನಿಂದ ಮರೀಚಿಯು ಹುಟ್ಟಿದನು. ಮರೀಚಿಯ ಮಗನು ಕಾಶ್ಯಪನು. ಕಾಶ್ಯಪನಿಂದ ವಿವಸ್ವಂತನು (ಸೂರ್ಯನು) ಹುಟ್ಟಿದನು. ಅವನ ಮಗನೇ ವೈವಸ್ವತಮನುವು. ಅವನೇ ಮೊದಲನೆಯ ಪ್ರಜಾಪತಿಯು. ಮನುವಿನ ಮಗ ಇಕ್ಷ್ವಾಕು ಎಂಬುವನು. ಸಂಪತ್ಸಮೃದ್ಧವಾದ ಈ ಸಾಮ್ರಾಜ್ಯವನ್ನು ಮನುವು ಇಕ್ಷ್ವಾಕುವಿಗೆ ಕೊಟ್ಟನು. ಇಕ್ಷ್ವಾಕುವೇ ಅಯೋಧ್ಯೆಗೆ ಮೊದಲನೆಯ ರಾಜನು. ಶ್ರೀಮಂತ ನಾದ, ಸುಪ್ರಸಿದ್ಧನಾದ ಕುಕ್ಷಿಯು ಇಕ್ಷ್ವಾಕುವಿನ ಮಗ. ಕುಕ್ಷಿಗೆ ವೀರನಾದ

---

[1]ಆಕಾಶವೇ ಬ್ರಹ್ಮ ಅಥವಾ ಆಕಾಶದಲ್ಲಿ ಹುಟ್ಟಿದವನು ಚತುರ್ಮುಖಬ್ರಹ್ಮನೆಂಬುದಕ್ಕೆ ಶ್ರುತಿವಚನವು ಹೀಗಿರುವುದು. 'ಆಕಾಶೋ ಹ ವೈ ನಾಮರೂಪಯೋರ್ನಿರ್ವಹಿತಾ ತೇ ಯದನ್ತರಾ ತದ್ಬ್ರಹ್ಮ' ನಾಮರೂಪಾತ್ಮಕವಾದ ಈ ಪ್ರಪಂಚವನ್ನು ಆಕಾಶವೇ ನಿರ್ವಹಿಸುತ್ತದೆ (ಧರಿಸುತ್ತದೆ.) ಹೀಗೆ ಎಲ್ಲದರಲ್ಲಿಯೂ ಅಂತರ್ಗತವಾಗಿ ವ್ಯಾಪಿಸಿರುವ ವಸ್ತುವೇ ಪರಬ್ರಹ್ಮವಾಗಿದೆ. 'ಆಕಾಶಶರೀರಂ ಬ್ರಹ್ಮ' ಬ್ರಹ್ಮನಿಗೆ ಆಕಾಶವೇ ಶರೀರವಾಗಿದೆ.

ವಿಕುಕ್ಷಿ ಎಂಬ ಮಗನು ಹುಟ್ಟಿದನು. ಮಹಾತೇಜಸ್ವಿಯಾದ, ಪ್ರತಾಪಶಾಲಿಯಾದ ಬಾಣನು ವಿಕುಕ್ಷಿಯ ಮಗ. ಬಾಣನಿಗೆ ಅನರಣ್ಯನೆಂಬ ಮಗನು ಹುಟ್ಟಿದನು. ಮಹಾತಪಸ್ವಿಯಾದ ಮತ್ತು ಮಹಾಬಾಹುವಾದ ಅನರಣ್ಯನು ರಾಜನಾಗಿದ್ದಾಗ ದೇಶದಲ್ಲಿ ಅನಾವೃಷ್ಟಿಯಾಗಲೀ, ದುರ್ಭಿಕ್ಷವಾಗಲೀ, ಕಳ್ಳಕಾಕರ ಭಯವಾಗಲೀ ಇರಲಿಲ್ಲ. ಅನರಣ್ಯನಿಗೆ ಪೃಥುವೆಂಬ ಮಗನು ಹುಟ್ಟಿದನು. ಮಹಾತೇಜಸ್ವಿಯಾದ, ಸುಪ್ರಸಿದ್ಧನಾದ ತ್ರಿಶಂಕುವು ಪೃಥುವಿನ ಮಗ. ಸತ್ಯಪ್ರತಿಜ್ಞನಾದ ತ್ರಿಶಂಕುವು ವಿಶ್ವಾಮಿತ್ರರ ತಪಃಪ್ರಭಾವದಿಂದ ಸಶರೀರನಾಗಿಯೇ ಸ್ವರ್ಗಕ್ಕೆ ಹೋದನು. ಯಶೋವಂತನಾದ ಧುಂಧುಮಾರನು ತ್ರಿಶಂಕುವಿನ ಮಗನು. ಧುಂಧುಮಾರನಿಗೆ ಮಹಾತೇಜಸ್ವಿಯಾದ ಯುವನಾಶ್ವಮ ಮಗನಾಗಿ ಹುಟ್ಟಿದನು. ಶ್ರೀಮಂತನಾದ ಮಾಂಧಾತನು ಯುವನಾಶ್ವನ ಮಗನು. ಮಾಂಧಾತನಿಗೆ ಮಹಾತೇಜಸ್ವಿಯಾದ ಸುಸಂಧಿಯೆಂಬ ಮಗನು ಹುಟ್ಟಿದನು. ಸುಸಂಧಿಗೆ ಧ್ರುವಸಂಧಿ ಮತ್ತು ಪ್ರಸೇನಜಿತ್ – ಎಂಬ ಇಬ್ಬರು ಮಕ್ಕಳು ಹುಟ್ಟಿದರು. ಧ್ರುವಸಂಧಿಗೆ ಶತ್ರುಧ್ವಂಸಕನಾದ ಭರತನೆಂಬ ಮಗನು ಹುಟ್ಟಿದನು. ಅಸಿತನು ಮಹಾಬಾಹುವಾದ ಭರತನು ಮಗನು. ಹೈಹಯರು, ತಾಲಜಂಘರು, ಶೂರರು ಮತ್ತು ಶಶಿಬಿಂದುಗಳೆಂಬ ನಾಲ್ಕು ಗುಂಪುಗಳು ಅಸಿತನ ಶತ್ರುಗಳಾದರು. ಅಸಿತನು ಅವರೆಲ್ಲರನ್ನೂ ಯುದ್ಧದಲ್ಲಿ ಪ್ರತಿಭಟಿಸಿದರೂ ಶತ್ರುಪಕ್ಷದಲ್ಲಿ ಸೈನ್ಯಬಾಹುಳ್ಯವಿದ್ದುದರಿಂದ ಯುದ್ಧದಲ್ಲಿ ಸೋತು ರಾಜ್ಯಭ್ರಷ್ಟನಾಗಿ ಸುಂದರವಾದ ಪರ್ವತದ ತಪ್ಪಲಿನಲ್ಲಿ ತಪಸ್ಸನ್ನು ಮಾಡಲು ಉಪಕ್ರಮಿಸಿದನು. ಆ ಸಮಯದಲ್ಲಿ ಅಸಿತನ ಇಬ್ಬರು ಹೆಂಡತಿಯರು ಗರ್ಭವತಿಯರಾಗಿದ್ದರು. ಅವರಲ್ಲೊಬ್ಬಳಾದ ಕಾಲಿಂದಿಯು ಉತ್ತಮಪುತ್ರನೊಬ್ಬನ ಪ್ರಾಪ್ತಿಯ ಸಲುವಾಗಿ ದೇವತೆಗಳಿಗೆ ಸಮಾನವಾದ ವರ್ಚಸ್ಸಿನಿಂದ ಕೂಡಿದ್ದ ಭಾರ್ಗವಮಹರ್ಷಿಗೆ ನಮಸ್ಕರಿಸಿದಳು. ಮತ್ತೊಬ್ಬಳು ಸವತಿಯ ಗರ್ಭವು ನಾಶವಾಗಿ ಹೋಗಲೆಂಬ ಆಶೆಯಿಂದ ವಿಷವಿಟ್ಟಳು. ಈ ವಿಷಯವನ್ನು ನಾವು ಕರ್ಣಾಕರ್ಣಿಕೆಯಿಂದ ಕೇಳಿದ್ದೇವೆ. ರಾಮ! ಭೃಗುವಂಶೋತ್ಪನ್ನನಾದ ಚ್ಯವನನೆಂಬ ಮಹರ್ಷಿಯು ಹಿಮವತ್ಪರ್ವತದ ತಪ್ಪಲಿನಲ್ಲಿ ತಪಸ್ಸುಮಾಡುತ್ತಿದ್ದನು. ದಿವ್ಯವಾದ ತೇಜಸ್ಸಿನಿಂದ ಕೂಡಿದ್ದ ಆ ಮಹರ್ಷಿಯ ಸಮೀಪಕ್ಕೆ

ಕಾಲಿಂದಿಯು ಹೋಗಿ, ಭಕ್ತಿಪೂರ್ವಕವಾಗಿ ನಮಸ್ಕರಿಸಿದಳು. ಸುಪುತ್ರನು ಹುಟ್ಟಬೇಕೆನ್ನುವ ವರವನ್ನು ಪ್ರಾರ್ಥಿಸಲು ಬಂದಿದ್ದ ಅವಳಿಗೆ ಅವಳ ನಯ-ವಿನಯಗಳಿಂದ ಸುಪ್ರೀತನಾಗಿದ್ದ ಚ್ಯವನನು ಹೇಳಿದನು :

"ದೇವಿ! ನಿನಗೆ ಮಹಾತ್ಮನಾದ, ಲೋಕಪ್ರಸಿದ್ಧನಾದ, ಧಾರ್ಮಿಕನಾದ, ಮಹಾಬಲಶಾಲಿಯಾದ, ಸುಶೀಲನಾದ, ವಂಶವರ್ಧಕನಾದ, ಶತ್ರುವಿಧ್ವಂಸಕನಾದ ಮಗನು ಹುಟ್ಟುವನು."

ಮಹರ್ಷಿಯ ಆ ದಿವ್ಯವಾಣಿಯನ್ನು ಕೇಳಿ ಕಾಲಿಂದಿಯು ಪುನಃ ಮಹರ್ಷಿಗೆ ನಮಿಸಿ ಅವನನ್ನು ಯಥಾಯೋಗ್ಯವಾಗಿ ಸತ್ಕರಿಸಿ, ಮನೆಗೆ ಬಂದಳು. ಯಥಾಕಾಲದಲ್ಲಿ ಪದ್ಮಪತ್ರದಂತೆ ವಿಶಾಲವಾದ ಕಣ್ಣುಗಳಿಂದ ಕೂಡಿದ್ದ, ಸಾಕ್ಷಾತ್ ಬ್ರಹ್ಮನಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಪುತ್ರನನ್ನು ಪ್ರಸವಿಸಿದಳು. ಕಾಲಿಂದಿಯ ಸವತಿಯಿಂದ ಗರ್ಭವಿನಾಶಕ್ಕಾಗಿ ಕೊಟ್ಟ ವಿಷದೊಡನೆಯೇ ಆ ಮಗುವೂ ಹುಟ್ಟಿತಾದ್ದರಿಂದ ಆ ಮಗುವಿಗೆ 'ಸಗರ'* ಎಂದೇ ನಾಮಕರಣಮಾಡಿದರು. ಅವನು ಪರ್ವಸಮಯದಲ್ಲಿ ಯಜ್ಞದೀಕ್ಷಿತನಾಗಿ ಕುಳಿತಿದ್ದಾಗ (ಅಶ್ವಮೇಧಾಶ್ವವು ಸಕಾಲಕ್ಕೆ ಹಿಂದಿರುಗದಿರಲು) ತನ್ನ ಅರುವತ್ತು ಸಾವಿರ ಮಕ್ಕಳನ್ನೂ ಕಳುಹಿಸಿ ಪ್ರಜೆಗಳೆಲ್ಲರಿಗೂ ಭೀತಿಯುಂಟಾಗುವ ರೀತಿಯಲ್ಲಿ ಭೂಮಿಯನ್ನೇ ಅಗೆಸಿಬಿಟ್ಟನು. (ಭೂಮಿಯನ್ನು ತೋಡಿಕೊಂಡು ಸಗರನ ಮಕ್ಕಳು ಕಪಿಲಮಹರ್ಷಿಗಳು ತಪಸ್ಸುಮಾಡುತ್ತಿದ್ದ ಸ್ಥಳಕ್ಕೆ ಹೋದರು. ಅಲ್ಲಿಯೇ ಕುದುರೆಯೂ ಇದ್ದಿತು. ಇವನೇ ಕುದುರೆಯ ಕಳ್ಳನೆಂದು ಭಾವಿಸಿದ ಸಗರನ ಮಕ್ಕಳೆಲ್ಲರೂ ಕಪಿಲಮಹರ್ಷಿಯ ಕೋಪಾಗ್ನಿಗೆ ಸಿಕ್ಕಿ ದಗ್ಧರಾಗಿ ಹೋದರು.) ಸಗರಚಕ್ರವರ್ತಿಗೆ ಅಸಮಂಜಸನೆಂಬ ಮತ್ತೊಬ್ಬ ಮಗನಿದ್ದನೆಂದೂ, ಅವನು ಪಾಪಕಾರ್ಯವನ್ನು ಮಾಡುತ್ತಿದ್ದುದರಿಂದ ರಾಜನು ಜೀವಿಸಿದ್ದಾಗಲೇ ಅವನನ್ನು ಅರಣ್ಯಕ್ಕೆ ಕಳುಹಿಸಿಬಿಟ್ಟನೆಂದೂ ಕೇಳಿದ್ದೇವೆ. ಆದರೆ ಅಸಮಂಜಸನು ಕಾಡಿಗೆ ಹೋಗುವ ವೇಳೆಗೆ ಅವನಿಗೆ ಅಂಶುಮಂತನೆಂಬ ಮಗನು ಹುಟ್ಟಿದ್ದನು. ಅವನೇ ಮುಂದೆ ರಾಜ್ಯದ ಚಕ್ರವರ್ತಿಯಾದನು. ಅಂಶುಮಂತನಿಗೆ ದಿಲೀಪನೆಂಬ ಮಗನು ಜನಿಸಿದನು. ಸುಪ್ರಸಿದ್ಧನಾದ ಭಗೀರಥನು ದಿಲೀಪನ

*ಗರೇಣ ಸಹ ವರ್ತತೇ ಇತಿ ಸಗರಃ =ವಿಷದಿಂದ ಕೂಡಿರುವವನು.

ಮಗನು. ಭಗೀರಥನಿಗೆ ಕಕುತ್ಸ್ಥನೆಂಬ ಮಗನು ಹುಟ್ಟಿದನು. ಅವನಿಂದಲೇ ನಿಮ್ಮ ವಂಶಕ್ಕೆ ಕಾಕುತ್ಸ್ಥವಂಶವೆಂದು ಹೆಸರು ಬಂದಿದೆ. ಕಕುತ್ಸ್ಥನಿಗೆ ಸುಪ್ರಸಿದ್ಧನಾದ ರಘುವು ಹುಟ್ಟಿದನು. ನಿಮ್ಮೆಲ್ಲರನ್ನೂ 'ರಾಘವರು' ಎಂದು ಕರೆಯುವುದೂ ನೀವು ರಘುವಿನ ವಂಶದಲ್ಲಿ ಹುಟ್ಟಿದ ಕಾರಣದಿಂದಲೇ. ರಘುವಿನ ಪುತ್ರನು ಪ್ರವೃದ್ಧ, ಪುರುಷಾದಕ, ಕಲ್ಮಾಷಪಾದ ಮತ್ತು ಸೌದಾಸ – ಈ ನಾಲ್ಕು ಹೆಸರುಗಳಿಂದಲೂ ಪ್ರಸಿದ್ಧಿಹೊಂದಿದ್ದನು. (ಪ್ರತಿಯೊಂದು ಹೆಸರಿಗೂ ಒಂದೊಂದು ಚರಿತ್ರೆಯೇ ಇರುವುದು.) ಅವನು ಮಹಾತೇಜಸ್ವಿಯಾಗಿಯೂ ಇದ್ದನು. ಕಲ್ಮಾಷಪಾದನಿಗೆ ಶಂಖಣನೆಂಬ ಮಗನಿದ್ದನಂತೆ. ಅವನು ಮಹಾಪರಾಕ್ರಮಶಾಲಿಯಾಗಿದ್ದರೂ ಸೈನ್ಯಸಮೇತನಾಗಿ ಯುದ್ಧದಲ್ಲಿ ವಿನಾಶಹೊಂದಿದನು. ಶಂಖಣನಿಗೆ ಶ್ರೀಮಂತನಾದ, ಶೂರನಾದ ಸುದರ್ಶನನೆಂಬ ಮಗನು ಹುಟ್ಟಿದನು. ಸುದರ್ಶನನ ಮಗ ಅಗ್ನಿವರ್ಣ. ಅಗ್ನಿವರ್ಣನ ಮಗ ಶೀಘ್ರಗ. ಶೀಘ್ರಗನ ಮಗ ಮರು. ಮರುವಿನ ಮಗ ಪ್ರಶುಶ್ರುಕ. ಪ್ರಶುಶ್ರುಕನ ಮಗನೇ ಮಹಾಮತಿಯಾದ ಅಂಬರೀಷನು. ಸತ್ಯವಿಕ್ರಮನಾದ ನಹುಷನು ಅಂಬರೀಷನ ಮಗ. ನಹುಷನ ಮಗ ಪರಮಧಾರ್ಮಿಕನಾದ ನಾಭಾಗ. ಅಜ ಮತ್ತು ಸುವ್ರತರಿಬ್ಬರೂ ನಾಭಾಗನ ಮಕ್ಕಳು. ಮೊದಲನೆಯವನಾದ ಅಜನ ಮಗನೇ ದಶರಥ. ಅವನು ದೀರ್ಘ ಕಾಲ ಈ ಭೂಮಂಡಲವನ್ನು ಪರಿಪಾಲಿಸಿ ಈಗ ಸ್ವರ್ಗಸ್ಥನಾಗಿರುವನು. ದಶರಥರಾಜನಿಗೆ 'ರಾಮ'ನೆಂದು ಪ್ರಸಿದ್ಧನಾಗಿರುವ ನೀನು ಹಿರಿಯ ಮಗನಾಗಿರುವೆ. ಪರಂಪರೆಯಿಂದ ಬಂದಿರುವ ನಿನ್ನ ವಂಶದ ಧರ್ಮವೇನೆಂಬುದನ್ನು ಅವಲೋಕಿಸು. (ನಿನ್ನ ವಂಶದಲ್ಲಿ ಪಟ್ಟಾಭಿಷೇಕವು ಹಿರಿಯ ಮಗನಿಗೆ ವಿಹಿತವಾಗಿಯೇ ಹೊರತು ಕಿರಿಯರಿಗೆ ಪಟ್ಟಾಭಿಷೇಕವು ಯಾವಾಗಲೂ ನಡೆದಿಲ್ಲ.) ಇಕ್ಷ್ವಾಕುವಂಶದ ಅರಸರಲ್ಲಿ ಹಿರಿಯ ಮಕ್ಕಳೇ ರಾಜರಾಗಿರುತ್ತಾರೆ. (ಇದು ಇಕ್ಷ್ವಾಕುವಂಶದವರ ಕುಲಧರ್ಮವಾಗಿರುತ್ತದೆ.) ಜ್ಯೇಷ್ಠ ಪುತ್ರರಿರುವಾಗ ಕನಿಷ್ಠರಿಗೆ ರಾಜ್ಯಾಭಿಷೇಕವನ್ನು ಮಾಡುವುದಿಲ್ಲ. ರಘು ವಂಶೋತ್ಪನ್ನರಿಗೆ ಸಂಬಂಧಿಸಿದ ಸನಾತನವಾದ ನಿನ್ನ ಕುಲಧರ್ಮ ವನ್ನು ನೀನೀಗ ಪ್ರಪ್ರಥಮವಾಗಿ ಬಿಟ್ಟುಬಿಡುವುದು ಯೋಗ್ಯವಲ್ಲ. ಅತುಲವಾದ ರತ್ನಗಳಿಂದಲೂ (ಉತ್ತಮವಸ್ತುಗಳಿಂದಲೂ) ಅನೇಕಾನೇಕ ರಾಷ್ಟ್ರ

ಗಳಿಂದಲೂ ಕೂಡಿರುವ ಈ ಭೂಮಂಡಲವನ್ನು ನಿನ್ನ ತಂದೆಯಾದ ದಶರಥರಾಜನಂತೆಯೇ ನೀನೂ ಅನುಶಾಸನಮಾಡುವವನಾಗು."

೧೧೦ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೧೧೧ನೆಯ ಸರ್ಗ

ವಸಿಷ್ಠರು ಸಮಾಧಾನಗೊಳಿಸಿದರೂ ಶ್ರೀರಾಮನು ಅಯೋಧ್ಯೆಗೆ ಬರಲು ಒಪ್ಪದಿರಲು ಭರತನು ರಾಮನ ಮುಂದೆ ನಿರಾಹಾರನಾಗಿ ಮಲಗಿದುದು : ಶ್ರೀರಾಮನು ಭರತನನ್ನು ಸಮಾಧಾನಗೊಳಿಸಿ ಅಯೋಧ್ಯೆಗೆ ಹೋಗಲು ಆಜ್ಞಾಪಿಸಿದುದು

ವಸಿಷ್ಠಸ್ತು ತದಾ ರಾಮಮುಕ್ತ್ವಾ ರಾಜಪುರೋಹಿತಃ ।
ಅಬ್ರವೀದ್ಧರ್ಮಸಂಯುಕ್ತಂ ಪುನರೇವಾಪರಂ ವಚಃ ॥೧॥

ಈ ರೀತಿಯಲ್ಲಿ ವಸಿಷ್ಠರು ಕುಲಧರ್ಮವನ್ನು ಹೇಳಿ, ಅದರಂತೆ ನಡೆಯಬೇಕೆಂದು ಹೇಳಿದರೂ ರಾಮನು ಒಪ್ಪುವ ಸೂಚನೆಯು ಕಾಣದಿದ್ದುದರಿಂದ ರಾಜಪುರೋಹಿತರಾದ ವಸಿಷ್ಠರು ಧರ್ಮಯುಕ್ತವಾದ ಮತ್ತೊಂದು ಮಾತನ್ನು ರಾಮನಿಗೆ ಹೇಳಿದರು :

"ಕಾಕುತ್ಸ್ಥ! ಭೂಮಿಯಲ್ಲಿ ಹುಟ್ಟಿದ ಮನುಷ್ಯನಿಗೆ ತಂದೆ-ತಾಯಿ-ಆಚಾರ್ಯರೆಂಬ ಮೂವರು ಗುರುಗಳಿರುತ್ತಾರೆ. ಪುರುಷಶ್ರೇಷ್ಠನೇ! ತಾಯಿ-ತಂದೆಗಳು ಮನುಷ್ಯನಿಗೆ ಜನ್ಮದಾತರು. ಆದರೆ ಆಚಾರ್ಯನು ಜ್ಞಾನವನ್ನು ಉಪದೇಶಿಸುತ್ತಾನೆ. ಆದುದರಿಂದಲೇ 'ಗುರು' ಎಂದು ಕರೆಯಲ್ಪಡುತ್ತಾನೆ.* ರಾಮ! ನಿನಗೆ ತಿಳಿದಿರುವಂತೆ ನಾನು ನಿಮ್ಮ ತಂದೆಗೆ

---

*ಗುರುವೆಂಬ ಶಬ್ದಕ್ಕೆ ಮಹತ್ತರ ಅಥವಾ ಭಾರ – ಎಂಬ ಅರ್ಥವಾಗುತ್ತದೆ. ಆಚಾರ್ಯನೇ ಮಾತಾ-ಪಿತೃ-ಗುರುಗಳಲ್ಲಿ ಶ್ರೇಷ್ಠನೆಂಬುದಕ್ಕೆ ಆಪಸ್ತಂಬಧರ್ಮಸೂತ್ರದಲ್ಲಿ ಹೀಗೆಂದು ಹೇಳಿದೆ : ಆಚಾರ್ಯಃ ಶ್ರೇಷ್ಠೋ ಗುರೂಣಾಂ । ಸ ಹಿ ವಿದ್ಯಾತಸ್ತಂ ಜನಯತಿ । ತಚ್ಛ್ರೇಷ್ಠಂ ಜನ್ಮ । ಶರೀರಮೇವ ಮಾತಾಪಿತರೌ ಜನಯತಃ । ಶೀರ್ಯತ್ಸ್ವಭಾವಂ ಸರ್ವಯೋನಿಸುಲಭಂ ಪ್ರಾಕೃತಂ ಮಲಜಂ ಶರೀರಂ ॥ ಗುರುಗಳಲ್ಲಿ ಆಚಾರ್ಯನು ಶ್ರೇಷ್ಠನು. ಏಕೆಂದರೆ : ಅವನು ವಿದ್ಯೆಯಿಂದ ಹೊಸದಾದ ಜನ್ಮವನ್ನು ಕೊಡುತ್ತಾನೆ. ಆ ಜ್ಞಾನಪ್ರಾಪ್ತಿಯಿಂದಲೇ ಇದು ಶ್ರೇಷ್ಠವಾದ ಜನ್ಮವಾಗುತ್ತದೆ. ಶರೀರವನ್ನು ಮಾತ್ರವೇ ತಾಯಿ-ತಂದೆಗಳು ಉತ್ಪತ್ತಿಮಾಡುತ್ತಾರೆ. ಆ ಶರೀರ

ಆಚಾರ್ಯನಾಗಿದ್ದೆನು. ಈಗ ನಿನಗೂ ಆಚಾರ್ಯನಾಗಿದ್ದೇನೆ. ನನ್ನ ಮಾತನ್ನು ಕೇಳಿ ಅದರಂತೆ ನಡೆದೆಯಾದರೆ ಸತ್ಪುರುಷರು ಅನುಸರಿಸಿದ ಮಾರ್ಗವನ್ನು ಖಂಡಿತವಾಗಿಯೂ ಉಲ್ಲಂಘಿಸಿದಂತಾಗುವುದಿಲ್ಲ. ಈ ಬ್ರಾಹ್ಮಣಸಮೂಹ, ಈ ನಿನ್ನ ಜ್ಞಾತಿ-ಬಾಂಧವರು, ಈ ಮಂಡಲೇಶ್ವರರು ಮತ್ತು ಈ ನಿನ್ನ ಸಮಸ್ತಪ್ರಜೆಗಳು–ಇವರೆಲ್ಲರನ್ನೂ ನೀನು ಧರ್ಮದಿಂದ ಪರಿಪಾಲನೆ ಮಾಡುತ್ತಿದ್ದರೆ ಸತ್ಪುರುಷರು ಅನುಸರಿಸಿದ ಧರ್ಮಮಾರ್ಗವನ್ನು ಉಲ್ಲಂಘಿಸಿ ದಂತಾಗುವುದಿಲ್ಲ. ವೃದ್ಧೆಯಾದ, ಧರ್ಮಶೀಲೆಯಾದ ನಿನ್ನ ತಾಯಿಯ ಮಾತನ್ನು ಉಲ್ಲಂಘಿಸುವುದೂ ನಿನಗೆ ತಕ್ಕುದಲ್ಲ. ಇವಳ ಮಾತಿನಂತೆ ನಡೆದರೂ–ಇವಳ ಮಾತಿನಂತೆ ನೀನಿಂದು ಅಯೋಧ್ಯೆಗೆ ಹಿಂದಿರುಗಿದರೂ– ಸತ್ಪುರುಷರು ಅನುಸರಿಸಿದ ಧರ್ಮಮಾರ್ಗವನ್ನು ಉಲ್ಲಂಘಿಸಿದಂತಾಗುವು ದಿಲ್ಲ.[1] ಸತ್ಯ-ಧರ್ಮಗಳ ಅನುಷ್ಠಾನದಲ್ಲಿ ಶೂರನಾದ ರಾಘವನೇ! ಅಂಗಲಾಚಿ ಬೇಡುತ್ತಿರುವ, ನಿನ್ನ ಆತ್ಮಭೂತನೇ ಆಗಿರುವ, ಭರತನ ಮಾತನ್ನು ಪರಿಪಾಲಿಸು. ಹೀಗೆ ಮಾಡುವುದರಿಂದ ಖಂಡಿತವಾಗಿಯೂ ಸತ್ಪುರುಷರ ಮಾರ್ಗವನ್ನು ಉಲ್ಲಂಘಿಸಿದಂತಾಗುವುದಿಲ್ಲ."*

ಹೀಗೆ ಕಿವಿಗಳಿಗಿಂಪಾಗುವ ರೀತಿಯಲ್ಲಿ ವಸಿಷ್ಠರು ಹೇಳಿ ಸುಖಾಸೀನ ರಾಗಲು ಪುರುಷರ್ಷಭನಾದ ರಾಮನು ಹೇಳಿದನು :

ವಾದರೋ ನಶಿಸಿಹೋಗುವ ಸ್ವಭಾವವುಳ್ಳದ್ದು : ಎಲ್ಲ ಪ್ರಾಣಿಗಳಿಗೂ ಸಾಧಾರಣವಾದುದು : ಪ್ರಕೃತಿಸಿದ್ಧವಾದುದು ಮತ್ತು ಕಲ್ಮಷದಿಂದ ಹುಟ್ಟಿದುದು. ಆದುದರಿಂದ ಇಂತಹ ಶರೀರಕ್ಕಿಂತಲೂ ಜ್ಯೋತಿಯಂತಹ ಜ್ಞಾನವೆಂಬ ಶರೀರವನ್ನು ಕೊಡುವ ಆಚಾರ್ಯನು ತಂದೆ-ತಾಯಿಗಳಿಗಿಂತಲೂ ಶ್ರೇಷ್ಠನು.

[1] ಮಾತೃದೇವೋ ಭವ–ಎಂದು ಉಪನಿಷತ್ತಿನಲ್ಲಿ ತಾಯಿಗೆ ಮೊದಲ ಸ್ಥಾನವು ಕೊಡಲ್ಪಟ್ಟಿದೆ. ಸ್ಮೃತಿಗಳಲ್ಲಿಯೂ–**ಪಿತುಃ ಶತಗುಣಂ ಮಾತಾ ಗೌರವೇಣಾತಿರಿಚ್ಯತೇ** । ತಂದೆಗಿಂತಲೂ ತಾಯಿಯು ಗುರುತ್ವದಿಂದ ನೂರರಷ್ಟು ಅಧಿಕಳಾಗುತ್ತಾಳೆ ಎಂದು ಹೇಳಿದೆ.

*ಇದನ್ನು ಹೀಗೂ ವಿವರಿಸಬಹುದಾಗಿದೆ. 'ರಾಮ! ನಿನಗೆ ಪಿತೃವಚನಪರಿಪಾಲನವೆಂಬ ಸಾಧಾರಣಧರ್ಮವಿದ್ದಿರಬಹುದು. ಲೋಕೇಶ್ವರನಾದ ನಿನಗೆ ಇದಕ್ಕಿಂತಲೂ ಮಿಗಿಲಾದ ಧರ್ಮವೆಂದರೆ ಆಶ್ರಿತಜನರ ರಕ್ಷಣೆ. ನೀನು ಯಾವಾಗಲೂ ಆಶ್ರಿತರನ್ನು ಕೈಬಿಡತಕ್ಕವನಲ್ಲ. ನಿನ್ನನ್ನು ಆಶ್ರಯಿಸಿ ಬಂದ ಭಕ್ತರಿಗೆ ನಿನ್ನನ್ನೇ ನೀನು ಕೊಟ್ಟು

(ತಾಯಿ-ತಂದೆಗಳು ಆಚಾರ್ಯನಿಗಿಂತಲೂ ಹೆಚ್ಚು ಪೂಜಾರ್ಹರು. ಉಪನಿಷತ್ತಿನಲ್ಲಿಯೂ ಸಹ ಮಾತೃದೇವೋ ಭವ। ಪಿತೃದೇವೋ ಭವ। ಎಂದು ಹೇಳಿದ ನಂತರವೇ ಆಚಾರ್ಯದೇವೋ ಭವ। ಎಂದು ಹೇಳಿ ತಾಯಿ ಮತ್ತು ತಂದೆಗಳಿಗೆ ಹೆಚ್ಚು ಪುರಸ್ಕಾರವನ್ನು ಕೊಟ್ಟಿರುತ್ತಾರೆ. ಇದಕ್ಕೆ ಕಾರಣ ವಿಲ್ಲದೇ ಇಲ್ಲ. ಸರ್ವಧರ್ಮಗಳನ್ನೂ ಸಂಪಾದಿಸಲು ಅರ್ಹವಾಗಿರುವ, ಸರ್ವವಿದ್ಯೆಗಳನ್ನೂ ಕಲಿಯಲು ಸಮರ್ಥವಾಗಿರುವ ಈ ಶರೀರಕ್ಕೆ ಬೀಜರೂಪರಾದವರು ತಾಯಿ-ತಂದೆಗಳು. ಮಗುವು ಹುಟ್ಟಿದ ನಂತರ ತಮಗೆ ಆ ಮಗುವಿನಿಂದ ಪ್ರಯೋಜನವಿರುವುದೋ ಇಲ್ಲವೋ ಎಂಬ ಯಾವುದನ್ನೂ ವಿವೇಚಿಸದೇ ಅದರ ಪಾಲನೆ-ಪೋಷಣೆಗಳಲ್ಲಿಯೇ ತಾಯಿ-ತಂದೆಗಳು ಸದಾ ನಿರತರಾಗಿರುತ್ತಾರೆ. ಈ ವಿಷಯವನ್ನೇ ರಾಮನಿಲ್ಲಿ ಸ್ಪಷ್ಟವಾಗಿ ಹೇಳುತ್ತಾನೆ.)

"ಪೂಜ್ಯರೇ! ತಾಯಿ-ತಂದೆಗಳು ಮೊಟ್ಟಮೊದಲು ಸೀಮಂತ ಪುತ್ರನನ್ನು ಪಡೆಯುವ ಸಲುವಾಗಿಯೇ ಅನೇಕಾನೇಕ ಪೂಜೆ, ಮಂತ್ರ, ಜಪ, ವ್ರತ, ಉಪವಾಸಾದಿಗಳನ್ನು ಮಾಡುತ್ತಾರೆ. ಪುತ್ರಪ್ರಾಪ್ತಿಗಾಗಿಯೇ ಇಷ್ಟು ಕಷ್ಟಪಡುವ ತಾಯಿ-ತಂದೆಗಳ ಋಣವನ್ನು ಎಷ್ಟು ಸೇವೆಮಾಡಿ ಯಾದರೂ ತೀರಿಸಲು ಸಾಧ್ಯವಿರುವುದೇ? ಖಂಡಿತವಾಗಿಯೂ ಸಾಧ್ಯವಿಲ್ಲ. ಹುಟ್ಟಿದ ಮಗುವಿಗೆ ತಾಯಿಯಾದವಳು ತನ್ನ ಪ್ರಸವವೇದನೆ ಗಳೆಲ್ಲವನ್ನೂ ಕ್ಷಣಮಾತ್ರದಲ್ಲಿ ಮರೆತು ಸ್ತನ್ಯವನ್ನು ಕೊಡುತ್ತಾಳೆ. ತನ್ನ ಸುಖ, ನಿದ್ರೆ, ಆಹಾರಗಳೆಲ್ಲವನ್ನೂ ಬದಿಗೊತ್ತಿ ಆಹಾರಕೊಡುವುದು, ಬೆಚ್ಚಗೆ ಮಲಗಿಸು ವುದು, ಸ್ನಾನಮಾಡಿಸುವುದು, ಮೈ ತಿಕ್ಕುವುದು–ಮುಂತಾದ ಮಗುವಿನ ಲಾಲನೆ-ಪೋಷಣೆಗಳಲ್ಲಿಯೇ ಸರ್ವದಾ ನಿರತಳಾಗಿರುತ್ತಾಳೆ. ತಂದೆಯೂ ಅನುದಿನವೂ ಮಗನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ತೊದಲುನುಡಿ ಗಳನ್ನಾಡುವ ಮಗುವಿ ನೊಡನೆ ತಾನೂ ತೊದಲುಮಾತುಗಳನ್ನಾಡುತ್ತಾ, ಮಗುವನ್ನು ಕ್ಷಣ-ಕ್ಷಣಕ್ಕೂ ಮುದ್ದಾಡುತ್ತಾ, ಅದಕ್ಕೆ ಬೇಕಾದ ಆಟಗಳ ವಸ್ತುಗಳನ್ನು ತಂದುಕೊಟ್ಟು ಬೆಳೆಸುತ್ತಾನೆ. ಇಂತಹ ತಾಯಿ-ತಂದೆಗಳ ಋಣ ವನ್ನು ತೀರಿಸಲು ಖಂಡಿತವಾಗಿಯೂ ಯಾರಿಂದಲೂ ಸಾಧ್ಯವಿಲ್ಲ. ನನ್ನ

ಕೊಂಡುಬಿಡುವೆ. ಅಂತಹ ದಯಾಳುವು ನೀನು. ಈ ಕಾರಣದಿಂದ ಭರತನ ಪ್ರಾರ್ಥನೆಯನ್ನು ಮನ್ನಿಸುವುದು ನಿನಗೆ ವಿಹಿತವಾಗಿದೆ.'

ಹುಟ್ಟಿಗೆ ಕಾರಣನಾದ ನಮ್ಮ ತಂದೆ ದಶರಥನು ನನಗೆ ಮೊದಲೇ ಆಜ್ಞೆಮಾಡಿರುವನು. ಅವನ ಪ್ರತಿಜ್ಞೆಯಾಗಲೀ, ಆಜ್ಞೆಯಾಗಲೀ ಈಗ ಸುಳ್ಳಾಗುವುದಿಲ್ಲ. (ಸುಳ್ಳಾಗಬಾರದು)"

ರಾಮನು ಹೀಗೆಂದು ಹೇಳಿದನಂತರ ವಿಶಾಲವಕ್ಷನಾದ ಮತ್ತು ಬಹುದುಃಖಿತವಾದ ಮನಸ್ಸಿನಿಂದ ಕೂಡಿದ್ದ ಭರತನು ತನ್ನ ಸಮೀಪದಲ್ಲಿಯೇ ಇದ್ದ ಸುಮಂತ್ರನಿಗೆ ಹೇಳಿದನು :

"ಸುಮಂತ್ರ! ನೀನೀಗಲೇ ಹೋಗಿ ದರ್ಭೆಯ ಕಟ್ಟನ್ನು ತಂದು ನೆಲದ ಮೇಲೆ ಹರಡು. ನನ್ನ ಆರ್ಯನು ಎಂದಿನವರೆಗೆ ನನ್ನ ವಿಷಯದಲ್ಲಿ ಪ್ರಸನ್ನನಾಗುವುದಿಲ್ಲವೋ, ನನ್ನ ಪ್ರಾರ್ಥನೆಯನ್ನು ನಡೆಸಿಕೊಡು ವುದಿಲ್ಲವೋ ಅಂದಿನವರೆಗೂ ಇವನ ಮುಂದೆಯೇ ಪ್ರತ್ಯುಪವೇಶ ಮಾಡುತ್ತೇನೆ.* ಬಡ್ಡಿಯ ಆಸೆಗಾಗಿ ಹಣವನ್ನು ಕೊಟ್ಟು ಅಸಲನ್ನೇ ಕಳೆದುಕೊಂಡ ಬ್ರಾಹ್ಮಣನೊಬ್ಬನು ಯಾವ ರೀತಿಯಲ್ಲಿ ನಿರಾಹಾರನಾಗಿ, ಮುಖಕ್ಕೆ ಮುಸುಕು ಹಾಕಿಕೊಂಡು ಸಾಲಗಾರನ ಮನೆಯ ಬಾಗಿಲಿನಲ್ಲಿ ಮಲಗಿಬಿಡುವನೋ–ಅದೇ ರೀತಿಯಲ್ಲಿ ನಾನೂ ರಾಮನು ನನ್ನ ಜೊತೆಯಲ್ಲಿ ಅಯೋಧ್ಯೆಗೆ ಬರುವವರೆಗೂ (ಬರಲೊಪ್ಪುವವರೆಗೂ) ಈ ಪರ್ಣಕುಟೀರದ ಬಾಗಿಲಿನಲ್ಲಿ ದರ್ಭೆಯ ಮೇಲೆ ನಿರಾಹಾರನಾಗಿ ಮಲಗಿಬಿಡುತ್ತೇನೆ."

ರಾಮನಿಂದಲೂ ಆಜ್ಞೆಯನ್ನು ನಿರೀಕ್ಷಿಸಿ ರಾಮನ ಮುಖವನ್ನೇ ನೋಡುತ್ತಾ ನಿಂತಿದ್ದ ಸುಮಂತ್ರನನ್ನು ನೋಡಿ ಭರತನು ಮನಸ್ಸಿಗೆ ಮತ್ತಷ್ಟು ಖೇದವನ್ನು ತಂದುಕೊಂಡು ತಾನೇ ಹೋಗಿ ದರ್ಭೆಯ ಕಟ್ಟನ್ನು ತೆಗೆದುಕೊಂಡು ಬಂದು, ಪರ್ಣಕುಟೀರದ ಬಾಗಿಲಿನಲ್ಲಿ ಹಾಸಿ, ಅದರ ಮೇಲೆ ಮಲಗಿಬಿಟ್ಟನು. ಕಾರ್ಯಸಾಧನೆಯಾಗುವವರೆಗೂ ಮೇಲೇಳುವುದಿಲ್ಲವೆಂದು

---

* ಪ್ರತ್ಯುಪವೇಶದ ಲಕ್ಷಣವನ್ನು ಒಬ್ಬರು ಹೀಗೆ ಹೇಳುತ್ತಾರೆ : ಮನೆಯ ಬಾಗಿಲ ಮುಂದೆ ದರ್ಭೆಯನ್ನು ಹಾಸಿ, ಮುಖಕ್ಕೆ ಮುಸುಕು ಹಾಕಿಕೊಂಡು ಯಾವುದಾದರೂ ಒಂದು ಪಾರ್ಶ್ವಕ್ಕೆ ಮಲಗಬೇಕು. ಕಾರ್ಯವು ಸಿದ್ಧಿಯಾಗುವವರೆಗೂ ಒಂದೇ ಪಾರ್ಶ್ವದಲ್ಲಿಯೇ ಮಲಗಿರಬೇಕು ಮತ್ತು ನಿರಾಹಾರನಾಗಿರಬೇಕು. ಒಂದು ವೇಳೆ ಕಾರ್ಯವು ಸಿದ್ಧಿಸದಿದ್ದರೆ ಪ್ರಾಣಬಿಡಲೂ ಸಿದ್ಧನಾಗಿರಬೇಕು. ಈ ವ್ರತಕ್ಕೆ ಪ್ರತ್ಯುಪವೇಶವ್ರತವೆಂದು ಹೆಸರು.

ಪ್ರತಿಜ್ಞೆಮಾಡಿ ದರ್ಭೆಯ ಆಸ್ತರಣದ ಮೇಲೆ ಮಲಗಿದ್ದ ಭರತನಿಗೆ ಮಹಾತೇಜಸ್ವಿಯಾದ, ರಾಜರ್ಷಿಸತ್ತಮನಾದ ರಾಮನು ಹೇಳಿದನು :

"ಮಗು, ಭರತ! ನಾನು ನಿನ್ನ ವಿಷಯದಲ್ಲಿ ಯಾವ ಅಪರಾಧವನ್ನು ಮಾಡಿರುವುದಕ್ಕೆ ನೀನಿಂದು ಈ ವ್ರತವನ್ನು ಕೈಗೊಂಡಿರುವೆ? ಬ್ರಾಹ್ಮಣನಾದವನು ತನಗೆ ಅಪಕಾರ ಮಾಡಿದವರ ಮನೆಯ ಬಾಗಿಲ ಮುಂದೆ ದರ್ಭಾಸ್ತರಣದಲ್ಲಿ ಒಂದೇ ಮಗ್ಗುಲಾಗಿ ಮಲಗಿ ತನ್ನ ಕಾರ್ಯ ಸಾಧನೆಯನ್ನು ಮಾಡಿಕೊಳ್ಳಬೇಕಾದುದು ವಿಹಿತವಾಗಿದೆ. (ಅಪಕಾರಿಗೆ ಅಪಕಾರವನ್ನೂ, ಮೋಸಕ್ಕೆ ಮೋಸವನ್ನೂ ಮಾಡುವುದು ಬ್ರಾಹ್ಮಣನ ಧರ್ಮವಲ್ಲವಾದ್ದರಿಂದ ತನಗೆ ಮಾಡಿದ ಅನ್ಯಾಯವನ್ನು ಸರಿಪಡಿಸಿಕೊಳ್ಳಲು ಯೋಗ್ಯಸಮಯದಲ್ಲಿ ಬ್ರಾಹ್ಮಣನಾದವನು ಪ್ರತ್ಯುಪವೇಶವನ್ನು ಕೈಗೊಳ್ಳಬಹುದೆಂಬುದು ವಿಧಿಸಮ್ಮತವಾಗಿದೆ.) ಆದರೆ ಪಟ್ಟಾಭಿಷಿಕ್ತರಾದ ರಾಜರಿಗೆ ಈ ವಿಧಿಯು ಯುಕ್ತವಾಗಿಲ್ಲ. ಪಟ್ಟಾಭಿಷಿಕ್ತರಾದ ರಾಜರು ಪ್ರತ್ಯುಪವೇಶವನ್ನು ಕೈಗೊಳ್ಳಬಾರದು. ಪುರುಷಸಿಂಹನೇ! ಎದ್ದೇಳು. ದಾರುಣವಾದ, ಕಠಿಣವಾದ, ವಿಧಿಹೀನವಾದ ಮತ್ತು ನಿಷಿದ್ಧವಾದ ಈ ಪ್ರತ್ಯುಪವೇಶವ್ರತವನ್ನು ಬಿಟ್ಟು ಈ ಕ್ಷಣದಲ್ಲಿಯೇ ನೀನು ಅಯೋಧ್ಯಾಪಟ್ಟಣಕ್ಕೆ ಪ್ರಯಾಣಮಾಡು."

ರಾಮನು ಹೀಗೆ ಹೇಳಿದರೂ ಭರತನು ಅವನ ಮಾತನ್ನು ಕೇಳಿಯೂ ಕೇಳದವನಂತೆ, ಕುಳಿತಿದ್ದ ಜಾಗದಿಂದಲೇ ಸುತ್ತಲೂ ನೋಡಿ ಪಟ್ಟಣಿಗರನ್ನು ಸಂಬೋಧಿಸಿ ಹೇಳಿದನು : "ನೀವೇಕೆ ಸುಮ್ಮನೆ ಪ್ರೇಕ್ಷಕರಾಗಿ ನಿಂತಿರುವಿರಿ? ಅಯೋಧ್ಯೆಗೆ ಬಂದೇ ತೀರಬೇಕೆಂದು ಒಕ್ಕೊರಲಿನಿಂದ ಆರ್ಯನಿಗೆ ಶಾಸನವನ್ನು ಮಾಡುವುದಿಲ್ಲವೇಕೆ?"

---

* ರಾಮಾಯಣದಲ್ಲಿ ಹೇಳಿರುವ ಈ ಶ್ಲೋಕದಿಂದ ಅಂದಿನ ಪ್ರಜೆಗಳು ನಿಶ್ಚಯವಾಗಿಯೂ ಎಷ್ಟು ಸತ್ಯವಂತರಾಗಿಯೂ, ಧರ್ಮನಿಷ್ಠರಾಗಿಯೂ ಇದ್ದರೆಂಬುದನ್ನು ತಿಳಿಯಬಹುದಾಗಿದೆ. ತಮ್ಮ ನಾಯಕನಾದ ಭರತನು "ರಾಮನನ್ನು ಅಯೋಧ್ಯೆಗೆ ಬರುವಂತೆ ಅನುಶಾಸನಮಾಡಿರಿ" ಎಂದು ಹೇಳಿದೊಡನೆಯೇ ರಾಮನಿಗೆ ಅವರು ಅನುಶಾಸನಮಾಡಲು ಹೋಗಲಿಲ್ಲ. ಇದರಿಂದ ರಾಮನು ಪ್ರಜೆಗಳಿಗೆ ಬೇಡವೆಂದಲ್ಲ. ಅವನಿಗಾಗಿ ಕಾಡು-ಮೇಡುಗಳಲ್ಲಿ ಅಲೆದಲೆದು ಬಂದಿರುವರು. ರಾಮನ ವಿಷಯದಲ್ಲಿ ಅವರಿಗಿರುವ ಪ್ರೇಮವು ಅನಿರ್ವಾಚ್ಯವಾದುದು. ಹೀಗಿದ್ದರೂ ಅವರು ಭರತನಿಗೆ ಹೀಗೆ ಹೇಳುತ್ತಾರೆ.

ಭರತನು ಹೀಗೆ ಪ್ರಶ್ನಿಸಲಾಗಿ ಅಯೋಧ್ಯಾಪುರವಾಸಿಗಳು ಏಕಕಂಠ ದಿಂದ ಹೇಳಿದರು : "ಭರತ! ರಾಮನಾರು? ಅವನ ಸಹಜಗುಣಗಳೇನು? ಎಂಬುದೆಲ್ಲವನ್ನೂ ನಾವು ಬಹಳ ಚೆನ್ನಾಗಿ ಅರ್ಥಮಾಡಿಕೊಂಡಿರುತ್ತೇವೆ. ರಾಘವನು ಯಾವ ಮಾತನ್ನೇ ಹೇಳಿದರೂ ಸ್ಪಷ್ಟವಾಗಿ, ಸಮೀಚೀನವಾಗಿ ಹೇಳುತ್ತಾನೆ. ಮಹಾಭಾಗನಾದ ರಾಮನಾದರೋ ತಂದೆಯ ಆಜ್ಞೆಯನ್ನು ಪರಿಪಾಲನೆಮಾಡುವುದರಲ್ಲಿಯೇ ಬದ್ಧಕಂಕಣನಾಗಿ ನಿಂತಿದ್ದಾನೆ. (ಇದು ಸಾಧುವಾಗಿಯೇ ಇದೆ.) ಈ ಕಾರಣದಿಂದಲೇ ನಾವು ಅವನನ್ನು ಅಯೋಧ್ಯೆಗೆ ಒಡನೆಯೇ ಹಿಂದಿರುಗುವಂತೆ ಹೇಳಲು ಅಸಮರ್ಥರಾಗಿದ್ದೇವೆ."*

ಪ್ರಜೆಗಳು ಹೇಳಿದ ಆ ಮಾತುಗಳನ್ನು ಕೇಳಿ ಶ್ರೀರಾಮನು ಭರತನಿಗೆ ಹೇಳಿದನು :

"ಭರತ! ಧರ್ಮೈಕದೃಷ್ಟಿಯುಳ್ಳ ಸುಹೃದರ ಈ ಮಾತುಗಳನ್ನು ಮನಸ್ಸಿಗೆ ತಂದುಕೋ. ಪುರಜನರು ಹೇಳಿದ ಮಾತುಗಳು ಮತ್ತು ನಾನು ಹೇಳಿದ ಮಾತುಗಳು–ಇವೆರಡನ್ನೂ ಮನಸ್ಸಿನಲ್ಲಿ ಸ್ಮರಿಸಿಕೊಂಡು ಸೂಕ್ತಾಸೂಕ್ತತೆ ಗಳನ್ನು ನೀನೇ ನಿಶ್ಚಯಿಸು. (ನಾನು ಹೇಳಿರುವುದು ಸೂಕ್ತವಾಗಿದೆಯೆಂಬ ಜ್ಞಾನವು ನಿನಗೆ ಖಂಡಿತವಾಗಿಯೂ ಉಂಟಾಗುವುದು.) ದರ್ಭೆಯ ಆಸ್ತರಣದಿಂದ ಮೇಲೆದ್ದು, ಕ್ಷತ್ರಿಯನಿಗೆ ಅನುಚಿತವಾದ ಪ್ರತ್ಯುಪವೇಶನ ಕಾರ್ಯಕ್ಕೆ ಉದ್ಯುಕ್ತನಾದುದಕ್ಕೆ ಪ್ರಾಯಶ್ಚಿತ್ತಾರ್ಥವಾಗಿ ಜಲಸ್ಪರ್ಶ ಮಾಡು. (ಆಚಮನಮಾಡು.) ಮತ್ತು ನನ್ನನ್ನೂ ಸ್ಪರ್ಶಿಸು. (ನನಗೂ ನಮಸ್ಕರಿಸು.)"[1]

ರಾಮನು ಹೀಗೆಂದು ಹೇಳಲು ಭರತನು ದರ್ಭಾಸ್ತರಣದಿಂದ

---

[1]ರಾಮನು ಯಾವ ವಿಧವಾದ ಅಪಕಾರವನ್ನು ಮಾಡದಿದ್ದರೂ ಅವನನ್ನು ಅಪಕಾರಿಯ ಸ್ಥಾನದಲ್ಲಿ ನಿಲ್ಲಿಸಿದಂತಾಯಿತಲ್ಲವೇ? ಭರತನು ಈ ಭಾವನೆಯಿಂದ ಪ್ರತ್ಯುಪವೇಶವನ್ನು ಮಾಡದಿದ್ದರೂ ಅವನು ಕೈಗೊಂಡ ಕಾರ್ಯವು ಅದೇ ಅರ್ಥವನ್ನು ಕೊಡುತ್ತದೆಯಾದ್ದರಿಂದ ರಾಮನು ಭರತನಿಗೆ ತನ್ನನ್ನೂ ಸ್ಪರ್ಶಮಾಡುವಂತೆ ಅರ್ಥಾತ್ ನಮಸ್ಕರಿಸುವಂತೆ ಹೇಳಿದನು. ಮತ್ತೊಬ್ಬ ವ್ಯಾಖ್ಯಾನಕಾರರು ಆಚಮನಮಾಡಿ ನನ್ನನ್ನು ಮುಟ್ಟು ಎಂದರೆ 'ಇನ್ನು ಮುಂದೆ ಹೀಗೆ ಮಾಡುವುದಿಲ್ಲವೆಂದು ನನ್ನನ್ನು ಮುಟ್ಟಿ ಪ್ರಮಾಣಮಾಡು' ಎಂಬ ಅರ್ಥದಲ್ಲಿ ರಾಮನು ಹೇಳಿದನೆಂದು ಅರ್ಥಮಾಡಿರುತ್ತಾರೆ.

ಮೇಲೆದ್ದು ಶುದ್ಧಾಚಮನಮಾಡಿ ರಾಮನನ್ನು ಸ್ಪರ್ಶಿಸಿ (ರಾಮನಿಗೆ ನಮಸ್ಕರಿಸಿ) ಹೇಳಿದನು : "ವಿದ್ವದ್ವರೇಣ್ಯರೇ! ಮಂತ್ರಿಸತ್ತಮರೇ! ಮತ್ತು ಪ್ರಜೆಗಳೇ! ನಾನೀಗ ಹೇಳಲಿರುವ ಮಾತುಗಳನ್ನು ಆಲಿಸಿ ಕೇಳಿರಿ. ನಾನೆಂದೂ ರಾಜ್ಯಕ್ಕಾಗಿ ನಮ್ಮ ತಂದೆಯನ್ನು ಯಾಚಿಸಿದವನಲ್ಲ. ನನಗೆ ಹೇಗಾದರೂ ಮಾಡಿ ರಾಜ್ಯವನ್ನು ಕೊಡಿಸುವಂತೆ ನಮ್ಮ ತಾಯಿಗೆ ಆಜ್ಞೆಯನ್ನೂ ಮಾಡಿದವನಲ್ಲ. ಇದೇ ರೀತಿಯಲ್ಲಿ ಪರಮಧಾರ್ಮಿಕನಾದ ರಾಮನನ್ನು ಅರಣ್ಯಕ್ಕೆ ಹೋಗಲು ಅನುಮತಿಸಿದವನೂ ನಾನಲ್ಲ. (ನಾನು ನಿರಪರಾಧಿಯು : ನನಗೆ ಈ ವಿಷಯಗಳೊಂದೂ ತಿಳಿಯದು.) ಒಂದು ವೇಳೆ ತಂದೆಯ ಆಜ್ಞೆಯನ್ನು ನಡೆಸಲೇಬೇಕೆನ್ನುವುದಾದರೆ–ಆ ಆಜ್ಞೆಯನ್ನು ನೆರವೇರಿಸುವುದು ಅತ್ಯವಶ್ಯವೆಂದು ಭಾವಿಸುವುದಾದರೆ–ನಾನೇ ದಂಡಕಾರಣ್ಯದಲ್ಲಿ ಹದಿನಾಲ್ಕು ವರ್ಷಗಳ ಕಾಲ ವಾಸಮಾಡಿ ಕೊಂಡಿರುತ್ತೇನೆ. (ನನ್ನ ಪ್ರತಿನಿಧಿಯಾಗಿ ರಾಮನು ಅಯೋಧ್ಯೆಯನ್ನು ಪರಿಪಾಲನೆಮಾಡಲಿ.)"

(ಭರತನು ಪುನಃ ಹಿಂದಿನಂತೆಯೇ ಹಠ ಹಿಡಿಯುವನೆಂದು ರಾಮನು ಭಾವಿಸಿರಲಿಲ್ಲ. ಭರತನ ಮಾತುಗಳನ್ನು ಕೇಳಿ ರಾಮನಿಗೆ ವಿಸ್ಮಯವೇ ಉಂಟಾಯಿತು.) ಧರ್ಮಾತ್ಮನಾದ ಶ್ರೀರಾಮನು ಭರತನ ಮಾತನ್ನು ಕೇಳಿ ವಿಸ್ಮಿತನಾಗಿ ಪುರಜನರನ್ನು ದಿಟ್ಟಿಸಿನೋಡುತ್ತಾ ಶಪಥರೂಪವಾದ (ಕಟ್ಟು ನಿಟ್ಟಾದ) ಈ ಮಾತನ್ನು ಹೇಳಿದನು :

ವಿಕ್ರೀತಮಾಹಿತಂ ಕ್ರೀತಂ ಯತ್ಪಿತ್ರಾ ಜೀವತಾ ಮಮ ।
ನ ತಲ್ಲೋಪಯಿತುಂ ಶಕ್ಯಂ ಮಯಾ ವಾ ಭರತೇನ ವಾ ॥೨೮॥

"ನಮ್ಮ ತಂದೆಯು ಜೀವಿಸಿದ್ದಾಗ ಮಾಡಿದ್ದ ಕ್ರಯವನ್ನಾಗಲೀ, ಮಾರಾಟವನ್ನಾಗಲೀ, ನಿಕ್ಷೇಪವನ್ನಾಗಲೀ ಲೋಪಗೊಳಿಸಲು ನನ್ನಿಂದಾ ಗಲೀ, ಭರತನಿಂದಾಗಲೀ ಸಾಧ್ಯವೇ ಇಲ್ಲ.*

*ತಂದೆಯು ಕಾಲದಲ್ಲಿ ಮಾಡಿದ ಕ್ರಯ-ವಿಕ್ರಯಗಳನ್ನೂ ಮತ್ತು ತಂದೆಯಲ್ಲಿ ನಿಕ್ಷೇಪವಾಗಿ ಇಟ್ಟಿದ್ದನ್ನೂ ಯಾರಿಂದಲೂ ಲೋಪಗೊಳಿಸುವ ಸಾಧ್ಯತೆಯಿಲ್ಲ. ಇದು ಸಾರ್ವಕಾಲಿಕವಾದ ನೀತಿ. ಆದರೆ ಈ ಪ್ರಕರಣದಲ್ಲಿ ದಶರಥನು ಮಾಡಿದ ಕ್ರಯ-ವಿಕ್ರಯ ಮತ್ತು ಅವನಲ್ಲಿ ನಿಕ್ಷೇಪವಾಗಿ ಇಟ್ಟಿರುವುದು ಯಾವುವೆಂದು ನಿರೂಪಿಸುವ ವಿಷಯದಲ್ಲಿ ವ್ಯಾಖ್ಯಾನಕಾರರು ಒಮ್ಮತವಾದ ಅಭಿಪ್ರಾಯವನ್ನು ಹೊಂದಿರುವುದಿಲ್ಲ.

ಉಪಾಧಿರ್ನ ಮಯಾ ಕಾರ್ಯೋ ವನವಾಸೇ ಜುಗುಪ್ಸಿತಃ ।
ಯುಕ್ತಮುಕ್ತಂ ಚ ಕೈಕೇಯ್ಯಾ ಪಿತ್ರಾ ಮೇ ಸುಕೃತಂ ಕೃತಮ್ ॥

ತಂದೆಯ ಮಾತನ್ನು ಹೇಗಾದರೂ ಮಾಡಿ ಸತ್ಯವನ್ನಾಗಿ ಮಾಡಲು ನನ್ನ ಬದಲು ನೀನು ವನವಾಸಮಾಡಬೇಕಾದರೆ–ನಾನು ಅಶಕ್ತನಾಗಿರ ಬೇಕು. ನಾನೇನೂ ಅಶಕ್ತನಲ್ಲ. ಹೀನಕಲ್ಪವೆಂದು ಪರಿಗಣಿಸಲ್ಪಟ್ಟಿರುವುದನ್ನು ನಾನೆಂದಿಗೂ ಮಾಡಲಾರೆನು. (ನಾನು ಮಾಡಬೇಕಾದುದನ್ನು ಪ್ರತಿನಿಧಿಯ ಮೂಲಕವಾಗಿ ಮಾಡಿಸಲಾರೆನು). ಕೈಕೇಯಿಯು ಹೇಳಿರುವುದು ಸಾಧುವಾಗಿಯೇ ಇದೆ. ತಂದೆಯ ಆಚರಣೆಯೂ ಧರ್ಮಸಮ್ಮತವಾಗಿಯೇ ಇದೆ. ಅದರಂತೆ ನಡೆಯದಿದ್ದರೆ ನಾವಿಬ್ಬರೂ ತಂದೆಯನ್ನು ಸುಳ್ಳುಗಾರ ನನ್ನಾಗಿ ಮಾಡಿದಂತಾಗುತ್ತದೆ.* ಭರತನ ವಿಷಯವು ನನಗೆ ಸಂಪೂರ್ಣವಾಗಿ ತಿಳಿದಿರುವುದು. ಇವನು ಕ್ಷಮಾಶೀಲನು. ಗುರುಜನರನ್ನು ಆದರದಿಂದ ಸ್ವಾಗ

ರಾಮನು ಈ ಪ್ರಕರಣದಲ್ಲಿ ಹೇಳಿರುವುದನ್ನೇ ಆಧಾರವನ್ನಾಗಿಟ್ಟುಕೊಂಡು ಕ್ರಯ-ವಿಕ್ರಯಗಳನ್ನು ಹೀಗೆ ನಿರೂಪಿಸಬಹುದಾಗಿದೆ. ೧) ದಶರಥನು ಕೈಕೇಯಿಯನ್ನು ಮದುವೆಯಾದಾಗ ಕೈಕೇಯಿಯೆಂಬ ಮೌಲ್ಯವನ್ನು ಪಡೆದು ರಾಜ್ಯವನ್ನು ಕೈಕೇಯಿಯ ತಂದೆಗೆ ವಿಕ್ರಯಮಾಡಿರುವನು. ೨) ಕೈಕೇಯಿಯು ತನ್ನೆರೆಡು ವರಗಳನ್ನು ರಾಜನಲ್ಲಿಯೇ ನಿಕ್ಷೇಪರೂಪದಲ್ಲಿ ಬಹುಕಾಲದವರೆವಿಗೆ ಇಟ್ಟಿದ್ದಳು. ಅದೇ ವರಗಳೆಂಬ ಮೌಲ್ಯದಿಂದ ಪುನಃ ಈ ರಾಜ್ಯವನ್ನು ರಾಜನಿಂದ ಪಡೆದಳು. ಅರ್ಥಾತ್ ಕೋಸಲರಾಜ್ಯದ ಕ್ರಯ-ವಿಕ್ರಯಗಳೆರಡೂ ಆಗಿಹೋಗಿವೆ. ನನ್ನ ವನವಾಸವೂ ಈ ವರದ ಮೌಲ್ಯದಿಂದಲೇ ಸಿದ್ಧವಾಯಿತು. ಈಗ ನಾನೊಬ್ಬನು ನಿಮ್ಮ ಮಾತಿನಂತೆ ಅಯೋಧ್ಯೆಗೆ ಬಂದೆನಾದರೆ ನಮ್ಮ ತಂದೆಯು ಮಾಡಿದ ಕ್ರಯ-ವಿಕ್ರಯ ಮತ್ತು ಅವನಲ್ಲಿಟ್ಟಿದ್ದ ನಿಕ್ಷೇಪ ಇವುಗಳೆಲ್ಲವೂ ವ್ಯರ್ಥವಾಗಿ ಹೋಗುತ್ತವೆ. ತಂದೆಯು ಮಾಡಿದ್ದ ವ್ಯವಹಾರವನ್ನು ಮಾನ್ಯಮಾಡುವುದು ಮಕ್ಕಳಾದ ನಮ್ಮ ಮುಖ್ಯಕರ್ತವ್ಯ. ಆದುದರಿಂದ ನಾನಾಗಲೀ ಭರತನಾಗಲೀ ತಂದೆಯು ಜೀವಿತಕಾಲದಲ್ಲಿ ಮಾಡಿರುವ ಈ ವ್ಯವಹಾರವನ್ನು ತಿರಸ್ಕರಿಸುವ ಸಾಧ್ಯತೆಯೇ ಇಲ್ಲ" ಹೀಗೆಂಬುದಾಗಿ ರಾಮನ ಅಭಿಪ್ರಾಯವಿರಬಹುದು.

*"ಜುಗುಪ್ಸಿತಃ ಹೀನಕಲ್ಪತ್ವೇನ ನಿಂದಿತಃ" –ಹೀನನಂತೆ ಅಶಕ್ತನಂತೆ ವರ್ತಿಸುವಿಕೆಯಿಂದ ನಿಂದಿತವಾದ ಎಂದರೆ ಶಕ್ತಿಯಿದ್ದರೂ ಅಶಕ್ತನಂತೆ ವರ್ತಿಸುವಿಕೆ. ಮುಖ್ಯಕಲ್ಪವನ್ನು ಅನುಸರಿಸಲು ಶಕ್ತಿಯಿದ್ದರೂ ಹೀನಕಲ್ಪವನ್ನು ಅನುಸರಿಸುವಿಕೆ. ಹೀನಕಲ್ಪಂ ನ ಸೇವೇತ ಪುರುಷೋ ವಿಭವೇ ಸತಿ । ಎಂಬ ಧರ್ಮಶಾಸ್ತ್ರವೂ ಇದನ್ನೇ ಹೇಳುತ್ತದೆ.

ತಿಸಿ ಸತ್ಕರಿಸುವ ಸೌಶೀಲ್ಯವುಳ್ಳವನು. ಸತ್ಯಸಂಧನಾದ, ಮಹಾತ್ಮನಾದ ಭರತನಲ್ಲಿ (ರಾಜ್ಯವಾಳಲು ಬೇಕಾಗಿರುವ) ಸಕಲಕಲ್ಯಾಣಗುಣಗಳೂ ಇರುವುವು. ಮೇಲಾಗಿ ನಾನು ಈ ರಾಜ್ಯದ ಭಾರವನ್ನು ಎಂದೆಂದಿಗೂ ಇವನ ಮೇಲೆಯೇ ಬಿಟ್ಟಿರುವುದೂ ಇಲ್ಲ. ಪ್ರತಿಜ್ಞಾತವಾದ ಅರಣ್ಯವಾಸವು ಮುಗಿದನಂತರ ಅಯೋಧ್ಯೆಗೆ ಪುನರಾಗಮಿಸಿ ಧರ್ಮಶೀಲನಾದ ತಮ್ಮನೊಡನೆ ಸೇರಿಕೊಂಡು ಈ ಭೂಮಿಗೆ ಉತ್ತಮನಾದ ಒಡೆಯನು ನಾನೇ ಆಗುತ್ತೇನೆ" ಬಳಿಕ ಶ್ರೀರಾಮನು ಭರತನಿಗೆ ಹೇಳುತ್ತಾನೆ :

"ಕೈಕೇಯಿಯು ರಾಜನನ್ನು ಎರಡು ವರಗಳನ್ನು ಕೊಡುವಂತೆ ಕೇಳಿದಳು. ಅವನು ಕೈಕೇಯಿಗಿತ್ತ ವರಗಳಲ್ಲಿ ನನ್ನ ಸಂಬಂಧವಾದ ವರದ ನಿಬಂಧನೆಯನ್ನು ನಾನು ಪರಿಪಾಲಿಸುತ್ತಲೇ ಇದ್ದೇನೆ. ನಿನ್ನ ಸಂಬಂಧ ವಾಗಿ ಕೈಕೇಯಿಗಿತ್ತಿರುವ ರಾಜನ ಮಾತುಗಳನ್ನು ನೀನೂ ಪರಿಪಾಲಿಸಿ (ರಾಜ್ಯದ ಆಡಳಿತಭಾರವನ್ನು ವಹಿಸಿ) ನಮ್ಮ ತಂದೆಯನ್ನು, ಸುಳ್ಳು ಹೇಳುವುದರಿಂದುಂಟಾಗಬಹುದಾದ ಪಾಪದಿಂದ ಪಾರುಮಾಡು."

೧೧೧ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೧೧೨ನೆಯ ಸರ್ಗ

ಶ್ರೀರಾಮನ ಆಜ್ಞೆಯಂತೆ ಅಯೋಧ್ಯೆಗೆ ಹಿಂದಿರುಗಲು ಋಷಿಗಳೂ ಭರತನಿಗೆ ಸಲಹೆನೀಡಿದುದು: ಪುನಃ ಭರತನು ಶ್ರೀರಾಮನ ಪಾದಗಳಲ್ಲಿ ಬಿದ್ದು ಅಯೋಧ್ಯೆಗೆ ಹಿಂದಿರುಗುವಂತೆ ಬೇಡಿಕೊಂಡುದು: ಶ್ರೀರಾಮನು ತನ್ನ ಪಾದುಕೆಗಳನ್ನು ಕೊಟ್ಟು ಸಮಾಧಾನಗೊಳಿಸಿ ಎಲ್ಲರನ್ನೂ ಕಳುಹಿಸಿಕೊಟ್ಟುದು

ತಮಪ್ರತಿಮತೇಜೋಭ್ಯಾಂ ಭ್ರಾತೃಭ್ಯಾಂ ರೋಮಹರ್ಷಣಮ್ ।
ವಿಸ್ಮಿತಾಃ ಸಂಗಮಂ ಪ್ರೇಕ್ಷ್ಯ ಸಮವೇತಾ ಮಹರ್ಷಯಃ ॥೧॥

ಅಪ್ರತಿಮವಾದ ತೇಜಸ್ಸಿನಿಂದ ವಿರಾಜಿಸುತ್ತಿದ್ದ ಆ ಇಬ್ಬರು ಸಹೋ ದರರ ರೋಮಾಂಚಕಾರಕವಾದ ಸಮಾಗಮವನ್ನು ಕಂಡು–ಅಪೂರ್ವವಾದ

ಈ ದೃಶ್ಯವನ್ನು ನೋಡುವ ಸಲುವಾಗಿಯೇ ಅಲ್ಲಿಗೆ ಆಗಮಿಸಿದ–ಋಷಿ-ಮಹರ್ಷಿಗಳೆಲ್ಲರೂ ವಿಸ್ಮಯಗೊಂಡರು.

ಅದೃಶ್ಯರಾಗಿ ಆಕಾಶದಲ್ಲಿ ಉಪಸ್ಥಿತರಾಗಿದ್ದ ರಾಜರ್ಷಿಗಳೂ, ಪ್ರತ್ಯಕ್ಷ ವಾಗಿಯೇ ಉಪಸ್ಥಿರಾಗಿದ್ದ ಶ್ರೇಷ್ಠರಾದ ಮಹರ್ಷಿಗಳೂ ಮಹಾಭಾಗರಾದ ರಾಮ-ಭರತರನ್ನು ನಾನಾವಿಧವಾಗಿ ಪ್ರಶಂಸೆಮಾಡತೊಡಗಿದರು:

ಸದಾರ್ಯೌ ರಾಜಪುತ್ರೌ ದ್ವೌ ಧರ್ಮಜ್ಞೌ ಧರ್ಮವಿಕ್ರಮೌ ।
ಶ್ರುತ್ವಾ ವಯಂ ಹಿ ಸಂಭಾಷಾಮುಭಯೋಃ ಸ್ಪೃಹಯಾಮಹೇ॥

ಧರ್ಮಮಾರ್ಗದಲ್ಲಿಯೇ ನಡೆಯುತ್ತಿರುವ ಈ ಇಬ್ಬರು ರಾಜಪುತ್ರರೂ ಶ್ರೇಷ್ಠರೂ, ಸದಾ ಧರ್ಮಮಾರ್ಗದಲ್ಲಿಯೇ ನಡೆಯತಕ್ಕವರೂ ಮತ್ತು ಧರ್ಮವನ್ನು ತಿಳಿದವರೂ ಆಗಿರುವರು. ಇವರಿಬ್ಬರ ಸಂಭಾಷಣೆಗಳನ್ನು ಇದುವರೆಗೂ ಕೇಳಿದ ನಾವು ಮತ್ತೂ ಕೇಳಬೇಕೆಂಬ ಆಶಯ ವುಳ್ಳವರಾಗಿದ್ದೇವೆ."

ಹೀಗೆ ಪ್ರಶಂಸೆಮಾಡುತ್ತಾ ಲೋಕಕಂಟಕನಾದ ರಾವಣನ ವಧೆಯಲ್ಲಿಯೇ ಆಸಕ್ತರಾಗಿದ್ದ ಆ ಮಹರ್ಷಿಗಳೆಲ್ಲರೂ ಒಕ್ಕೊರಲಿನಿಂದ ರಾಜಶಾರ್ದೂಲನಾದ ಭರತನಿಗೆ ಹೇಳಿದರು:

"ಸತ್ಕುಲಪ್ರಸೂತನಾದ, ಮಹಾಪ್ರಾಜ್ಞನಾದ, ಮಹಾಯಶಸ್ವಿಯಾದ, ಮಹಾಸದ್ವೃತ್ತಿಯುಳ್ಳ ಭರತನೇ! ನಿಮ್ಮ ತಂದೆಗೆ ಸುಖವುಂಟಾಗಬೇಕಾಗಿದ್ದರೆ ರಾಮನ ಮಾತನ್ನು ಅಂಗೀಕರಿಸು. ರಾಮನು ಸದಾ ಋಣ ವಿಲ್ಲದವನಾಗಿರಬೇಕೆಂದು ನಾವು ಇಚ್ಛಿಸುತ್ತೇವೆ. ಪಿತೃವಾಕ್ಯಪರಿಪಾಲನೆ ಯೆಂಬುದೇ ರಾಮನ ಋಣವಾಗಿರುತ್ತದೆ. ಹದಿನಾಲ್ಕು ವರ್ಷಗಳ ಕಾಲ ವನ ವಾಸ ಮಾಡಿ ರಾಮನು ತಂದೆಯ ಈ ಋಣವನ್ನು ತೀರಿಸಬೇಕಾಗಿದೆ. ಅದರಂತೆ ರಾಮನು ವನವಾಸಕ್ಕೆ ಬಂದಿರುವುದರಿಂದಲೇ ದಶರಥನೂ ಕೈಕೇಯಿಯ ಋಣದಿಂದ ವಿಮುಕ್ತನಾಗಿ ಸ್ವರ್ಗಕ್ಕೆ ಹೋಗಿರುವನು."

ಇಷ್ಟು ಮಾತ್ರ ಹೇಳಿ ಗಂಧರ್ವರೂ, ರಾಜರ್ಷಿಗಳೂ, ಮಹರ್ಷಿಗಳೂ ತಮ್ಮ-ತಮ್ಮ ನಿವಾಸಗಳಿಗೆ ತೆರಳಿದರು. ಋಷಿ-ಮಹರ್ಷಿಗಳ ಕರ್ಣಾನಂದ ಕರವಾದ ಆ ಶುಭವಾಕ್ಯವನ್ನು ಕೇಳಿ, ಮಂಗಳಸ್ವರೂಪನಾದ ರಾಮನು ಆನಂದದಿಂದರಳಿದ ಮುಖಾರವಿಂದವುಳ್ಳವನಾಗಿ ಆ ಮಹರ್ಷಿಗಳನ್ನು ಅಭಿ ನಂದಿಸಿದನು. ಮಹರ್ಷಿಗಳ ಮಾತನ್ನು ಕೇಳಿ ನಡುಗುತ್ತಿದ್ದ ಶರೀರದಿಂದಲೂ,

ತೊದಲುತ್ತಿದ್ದ ನುಡಿಯಿಂದಲೂ ಕೂಡಿದ್ದ ಭರತನು ಕೈಮುಗಿದುಕೊಂಡು ರಾಮನಿಗೆ ಪುನಃ ಹೇಳಿದನು:

"ಅಗ್ರಜ! ಅನೂಚಾನವಾಗಿ ನಡೆದುಕೊಂಡು ಬರುತ್ತಿರುವ ಜ್ಯೇಷ್ಠಾಭಿಷೇಕರೂಪವಾದ ನಮ್ಮ ಕುಲಧರ್ಮವನ್ನೂ–ರಾಜಧರ್ಮವನ್ನೂ ಸಂಪೂರ್ಣರಾಗಿ ಸಮಾಲೋಚಿಸಿ, ನಮ್ಮ ತಾಯಿಯ ಯಾಚನೆಯನ್ನೂ ನೆರವೇರಿಸಿ ಕೊಡುವುದು ಉಚಿತವಾಗಿದೆ.* ದೊಡ್ಡದಾಗಿಯೂ–ವಿಸ್ತಾರವಾಗಿಯೂ ಇರುವ ಕೋಸಲರಾಜ್ಯವನ್ನು (ನಿನ್ನ ನೆರವಿಲ್ಲದೇ) ನಾನೊಬ್ಬನೇ ರಕ್ಷಿಸಲು ಉತ್ಸಾಹವುಳ್ಳವನಾಗಿಲ್ಲ ಮತ್ತು ನಿನ್ನಲ್ಲಿಯೇ ಹೆಚ್ಚು ಅನುರಕ್ತರಾಗಿರುವ ಪ್ರಜೆಗಳನ್ನು ತೃಪ್ತಿಪಡಿಸಲೂ ಸಮರ್ಥನಾಗಿಲ್ಲ. ರೈತರು ತಮ್ಮ ಇಚ್ಛಾಪೂರ್ತಿಗಾಗಿ ಪರ್ಜನ್ಯನನ್ನೇ ಪ್ರಾರ್ಥಿಸುವಂತೆ–ನಮ್ಮ ಜ್ಞಾತಿ-ಬಾಂಧವರೂ, ಯೋಧರೂ, ಮಿತ್ರರೂ, ಸುಹೃದರೂ ನಿನ್ನನ್ನೇ ರಾಜನನ್ನಾಗಿ ಪಡೆಯುವ ಆಕಾಂಕ್ಷೆಯುಳ್ಳವರಾಗಿದ್ದಾರೆ. ಮಹಾಪ್ರಾಜ್ಞನೇ! ದಯಮಾಡಿ ಈ ರಾಜ್ಯವನ್ನು ಸ್ವೀಕರಿಸಿ ರಾಜ್ಯದ ಆಡಳಿತವನ್ನು ಸುವ್ಯವಸ್ಥೆಗೊಳಿಸು. ಈ ವಿಶ್ವದ ಪರಿಪಾಲನೆಯಲ್ಲಿ ನಿಶ್ಚಯವಾಗಿಯೂ ನೀನು ಅತ್ಯಂತಸಮರ್ಥನಾಗಿರುವೆ."

ಹೀಗೆಂದು ಹೇಳಿ ಭರತನು ರಾಮನ ಕಾಲುಗಳಿಗೆ ಬಿದ್ದು ಅಂಗಲಾಚಿ ಬೇಡಿಕೊಂಡನು. "ರಾಘವ! ಕೃಪೆಮಾಡು. ನನ್ನ ಪ್ರಾರ್ಥನೆಯನ್ನು ತಿರಸ್ಕರಿಸಬೇಡ! ಅಯೋಧ್ಯೆಗೆ ಬಾ! ನೀನು ಅರಣ್ಯದಲ್ಲಿರುವುದನ್ನು ನಾನು ಸಹಿಸಲಾರೆನು. ರಾಘವ! ರಾಮ! ಮಹಾನುಭಾವ! ಪ್ರಭೋ! ಕರುಣೆ ತೋರು!" ಇವೇ ಮುಂತಾದ ಕರುಣಾಜನಕವಾದ ಮಾತುಗಳನ್ನಾಡುತ್ತಾ ಕಣ್ಣೀರಿನಿಂದ ರಾಮನ ಕಾಲುಗಳೆರಡನ್ನೂ ಅಭಿಷೇಚಿಸುತ್ತಾ ಬೇಡಿ ಕೊಂಡನು. ಹೀಗೆ ಕಾಲುಗಳನ್ನು ಭದ್ರವಾಗಿ ಹಿಡಿದುಕೊಂಡು ಗೋಳಿಡು ತ್ತಿದ್ದ ಭರತನನ್ನು ರಾಮನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು (ನೆತ್ತಿ ಯನ್ನು ಆಘ್ರಾಣಿಸಿ ಮೈದಡವಿ ಸಂತಯಿಸುತ್ತಾ) ಶ್ಯಾಮಲವರ್ಣದ ಕಮಲ

*ಇಲ್ಲಿನ ಮಾತೃ ಶಬ್ದಕ್ಕೆ ವ್ಯಾಖ್ಯಾನಕಾರರು ಕೌಸಲ್ಯೆ ಎಂದು ಅರ್ಥಮಾಡಿರುತ್ತಾರೆ. ಆದರೆ ಕೈಕೇಯೀ ಎಂದೇ ಅರ್ಥಮಾಡಿದರೂ ತಪ್ಪಾಗುವುದಿಲ್ಲ. ಆ ಸಮಯದಲ್ಲಿ ಕೈಕೇಯಿಗೂ ರಾಮನು ಅಯೋಧ್ಯೆಗೆ ಬರಬೇಕೆಂಬ ಆಶಯವಿತ್ತೆಂಬುದರಲ್ಲಿ ಸಂಶಯ ಪಡಬೇಕಾಗಿಲ್ಲ.

ದಳದಂತೆ ವಿಶಾಲವಾದ ಕಣ್ಣುಗಳಿಂದ ಕೂಡಿದ್ದ ಭರತನನ್ನು ಕುರಿತು ಮದಿಸಿದ ಹಂಸದ ಧ್ವನಿಯಂತೆ ಬಹುಗಂಭೀರವಾದ, ಕರ್ಣಾನಂದಕರವಾದ, ಮಾಧುರ್ಯದಿಂದ ಕೂಡಿದ್ದ ಈ ಮಾತನ್ನು ಹೇಳಿದನು:

"ಮಗು! ನಿನಗೆ ಉಂಟಾಗಿರುವ ಸ್ವಾಭಾವಿಕವಾದ ಮತ್ತು ವಿನಯಶೀಲವಾದ ಈ ಬುದ್ಧಿಯಿಂದಲೇ ನೀನು ಪೃಥ್ವಿಯನ್ನೇ ಬೇಕಾದರೂ ರಕ್ಷಿಸಲು ಸಮರ್ಥನಾಗಿರುವೆ. ಪ್ರಧಾನಾಮಾತ್ಯರೊಡನೆಯೂ, ಸುಹೃದರೊಡನೆಯೂ ಮತ್ತು ಬುದ್ಧಿವಂತರಾದ ಮಂತ್ರಿಗಳೊಡನೆಯೂ ಕೂಡಿ ರಾಜ್ಯಾಡಳಿತದಲ್ಲಿ ಮಾಡಬೇಕಾದ ದೊಡ್ಡ-ದೊಡ್ಡ ಕಾರ್ಯಗಳನ್ನೂ ಸಮಾಲೋಚಿಸಿ ನಿರ್ವಹಿಸು.

ಲಕ್ಷ್ಮೀಶ್ಚನ್ದ್ರಾದಪೇಯಾದ್ವಾ ಹಿಮವಾನ್ವಾ ಹಿಮಂ ತ್ಯಜೇತ್ ।
ಅತೀಯಾತ್ಸಾಗರೋ ವೇಲಾಂ ನ ಪ್ರತಿಜ್ಞಾಮಹಂ ಪಿತುಃ ॥೧೮॥

(ನನ್ನ ನಿರ್ಧಾರವನ್ನು ಕೇಳು.) ಪೂರ್ಣಚಂದ್ರನಿಂದ ನಯನ ಮನೋಹರವಾದ ಕಾಂತಿಯಾದರೂ (ಬೆಳದಿಂಗಳು) ಬೇರ್ಪಡಬಹುದು; ಹಿಮವಂತನು ಹಿಮವನ್ನಾದರೂ ತ್ಯಜಿಸಬಹುದು; ಸಮುದ್ರವು ಎಲ್ಲೆಯನ್ನೂ ಮೀರಿಹೋಗಬಹುದು–ಆದರೆ ನಾನು ಮಾತ್ರ ತಂದೆಯ ಪ್ರತಿಜ್ಞಾವಚನವನ್ನು ಮೀರಿ ನಡೆಯಲಾರೆನು. ಕಾಮದಿಂದಲೋ, ಲೋಭದಿಂದಲೋ ನಿನ್ನ ತಾಯಿಯು ನಿನಗಾಗಿ ಈ ಕಾರ್ಯವನ್ನು ಮಾಡಿರುವಳು. ಅವಳೇಕೆ ಹಾಗೆ ಮಾಡಿದಳೆಂದು ನೀನು ಮನಸ್ಸಿನಲ್ಲಿಯೂ ಚಿಂತಿಸಬಾರದು. ತಾಯಿಯ ವಿಷಯದಲ್ಲಿ ಹಿಂದಿನಂತೆಯೇ ಸೌಜನ್ಯದಿಂದಿರುತ್ತಾ ಅವಳ ಶುಶ್ರೂಷೆಯನ್ನೂ ಮಾಡುತ್ತಿರಬೇಕು."

ಈ ರೀತಿಯಾಗಿ ಹೇಳುತ್ತಿದ್ದ, ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ, ಪ್ರಥಮೆಯ ಚಂದ್ರನಂತೆ ಸರ್ವರಿಂದಲೂ ಸಂದರ್ಶಿಸಲು ಯೋಗ್ಯನಾಗಿದ್ದ* ಕೌಸಲ್ಯೆಯ ಮಗನಿಗೆ ಭರತನು ಹೇಳಿದನು:

ಅಧಿರೋಹಾರ್ಯ ಪಾದಾಭ್ಯಾಂ ಪಾದುಕೇ ಹೇಮಭೂಷಿತೇ ।
ಏತೇ ಹಿ ಸರ್ವಲೋಕಸ್ಯ ಯೋಗಕ್ಷೇಮಂ ವಿಧಾಸ್ಯತಃ ॥೨೦॥

---

*ಶುಕ್ಲಪಕ್ಷದ ಪ್ರಥಮೆಯಂದು ಚಂದ್ರನನ್ನು ನೋಡಬೇಕೆಂದು ದೊಡ್ಡವರು ಹೇಳುತ್ತಾರೆ. ಅನೇಕರು ಆ ಚಂದ್ರದರ್ಶನಕ್ಕಾಗಿಯೇ ಕಾತುರರಾಗಿರುತ್ತಾರೆ.

(ಭರತನು ವಸಿಷ್ಠರ ನಿರ್ದೇಶನದಂತೆ ಸ್ವರ್ಣಮಯವಾದ ಪಾದುಕೆಗಳನ್ನು ರಾಮನ ಮುಂದಿಟ್ಟು ಹೇಳಿದನು.) "ಆರ್ಯನೇ! ಚಿನ್ನದ ತಗಡಿನಿಂದ ಅಲಂಕರಿಸಲ್ಪಟ್ಟಿರುವ ಈ ಎರಡು ದಿವ್ಯಪಾದುಕೆಗಳ ಮೇಲೆ ನಿನ್ನ ಅಡಿದಾವರೆಗಳನ್ನಿಡು. ಈ ದಿವ್ಯಪಾದುಕೆಗಳೇ ಅಖಿಲಲೋಕದ ಯೋಗ-ಕ್ಷೇಮಗಳನ್ನೂ ನಿರ್ವಹಿಸಲು ಸಮರ್ಥವಾಗಿವೆ."

ಭರತನ ಪ್ರಾರ್ಥನೆಯಂತೆ ಮಹಾತೇಜಸ್ವಿಯಾದ, ನರವ್ಯಾಘ್ರನಾದ, ದಯಾಮಯನಾದ ಶ್ರೀರಾಮನ ದಿವ್ಯವಾದ ಆ ಪಾದುಕೆಗಳ ಮೇಲೆ ಕಾಲುಗಳನ್ನಿಟ್ಟು (ಪಾದುಕೆಗಳನ್ನು ತನ್ನ ಪಾದಾರವಿಂದಗಳಿಂದ ಅಲಂಕರಿಸಿ) ಅನಂತರ ಮಹಾತ್ಮನಾದ ಭರತನಿಗೆ ಅವನ್ನು ದಯಪಾಲಿಸಿದನು.* ಭರತನಾದರೋ ಆ ದಿವ್ಯಪಾದುಕೆಗಳಿಗೆ ದೀರ್ಘದಂಡನಮಸ್ಕಾರಮಾಡಿ ರಾಮನಿಗೆ ಹೇಳಿದನು:

"ರಾಮ! ಈ ಹದಿನಾಲ್ಕು ವರ್ಷಗಳು ನಾನೂ ಜಟೆ-ನಾರುಮಡಿಗಳನ್ನೇ ಧರಿಸಿ, ಹಣ್ಣು-ಹಂಪಲುಗಳನ್ನು ಮಾತ್ರವೇ ತಿನ್ನುತ್ತಾ ಜೀವಿಸಿರುವೆನು. ನಿನ್ನ ಆಗಮನವನ್ನೇ ನಿರೀಕ್ಷಿಸುತ್ತಾ ಅಯೋಧ್ಯಾಪಟ್ಟಣದ ಹೊರಭಾಗದಲ್ಲಿ ನಿವಾಸಮಾಡಿಕೊಂಡಿರುವೆನು. ನಿನ್ನ ಪಾದುಕೆಗಳನ್ನೇ ರಾಜ್ಯಸಿಂಹಾಸನದಲ್ಲಿಟ್ಟು ನಾನು ಪ್ರತಿನಿಧಿಯಾಗಿ ರಾಜ್ಯಭಾರ ಮಾಡುತ್ತಿರುವೆನು. ಹದಿನಾಲ್ಕನೆಯ ವರ್ಷವು ಮುಗಿದ ಮರುದಿನವೇ ನಾನೇನಾದರೂ ನಿನ್ನನ್ನು ಕಾಣದಿದ್ದರೆ ಅಗ್ನಿಪ್ರವೇಶಮಾಡುವೆನು."

ಭರತನ ಆ ಮಾತಿಗೆ ರಾಮನು ಹಾಗೆಯೇ ಆಗಲೆಂದು ಪ್ರತಿವಚನ

---

* ಪಾದುಕೆಗಳ ಮಹಿಮೆಯು ಅಪರಿಮಿತವಾದುದು. ಭಗವಂತನಾದ ಶ್ರೀರಾಮನ ಪಾದಧೂಳಿಯಿಂದ ಪವಿತ್ರೀಕೃತವಾಗಿದ್ದ ದಿವ್ಯಪಾದುಕೆಗಳ ಪ್ರಭಾವವು ಅನಿರ್ವಾಚ್ಯವಾದುದು. ರಾಮನ ಶಕ್ತಿಯೆಲ್ಲವೂ ಆ ಪಾದುಕೆಗಳಲ್ಲಿ ಕೇಂದ್ರೀಕೃತವಾಗಿದ್ದಿತು. ಪಾದುಕೆಗಳು ಮಾತನಾಡದಿದ್ದರೂ ಆ ದಿವ್ಯಪಾದುಕೆಗಳ ಸಾಮೀಪ್ಯ-ಸಂಸ್ಪರ್ಶಗಳಿಂದ ಭರತನಿಗೆ ರಾಜ್ಯಾಡಳಿತವನ್ನು ಹೇಗೆ ಮಾಡಬೇಕೆಂಬುದು ಸ್ಫುರಣೆಯಾಗುತ್ತಿತ್ತು. ಇದೇ ವಿಷಯವನ್ನು ಪದ್ಮಪುರಾಣದಲ್ಲಿ ಹೀಗೆ ಹೇಳಿದ್ದಾರೆ: ಜ್ಞಾತ್ವಾ ತದಾಜ್ಞಾಂ ತಾಭ್ಯಾಂ ಚ ಭರತಃ ಕ್ಷಿತಿಮನ್ವಶಾತ್ । ಆ ಪಾದುಕೆಗಳ ಮೂಲಕವಾಗಿ ರಾಮನ ಅಪ್ಪಣೆಯನ್ನು ತಿಳಿದು ಭರತನು ಭೂಮಿಯನ್ನು ಆಳಿದನು. ಅಂತಹ ದಿವ್ಯಪಾದುಕೆಗಳನ್ನು ಪಡೆದ ಭರತನು ನಿಶ್ಚಯವಾಗಿಯೂ ಧನ್ಯನೇ ಸರಿ.

ವಿತ್ತು, ಭರತನನ್ನೂ, ಮತ್ತು ಶತ್ರುಘ್ನನನ್ನೂ ಗಾಢವಾಗಿ ಆಲಿಂಗನೆಮಾಡಿಕೊಂಡು ಭರತನಿಗೆ ಹೇಳಿದನು:

ಮಾತರಂ ರಕ್ಷ ಕೈಕೇಯೀಂ ಮಾ ರೋಷಂ ಕುರು ತಾಂ ಪ್ರತಿ ।
ಮಯಾ ಚ ಸೀತಯಾ ಚೈವ ಶಪ್ತೋಽಸಿ ರಘುಸತ್ತಮ ।
ಇತ್ಯುಕ್ತ್ವಾಶ್ರುಪರೀತಾಕ್ಷೋ ಭ್ರಾತರಂ ವಿಸಸರ್ಜ ಹ ॥೨೮॥

"ಮಗು, ಭರತ! ನಿನ್ನ ತಾಯಿಯಾದ ಕೈಕೇಯಿಯನ್ನು ರಕ್ಷಣೆ ಮಾಡು. (ಅವಳ ಶುಶ್ರೂಷೆಮಾಡು.) ಅವಳ ಮೇಲೆ ಕೋಪಗೊಳ್ಳಬೇಡ. ಈ ವಿಷಯದಲ್ಲಿ ನನ್ನ ಮೇಲೆ ಮತ್ತು ಸೀತೆಯ ಮೇಲೆ ಆಣೆಯಿಟ್ಟು ಹೇಳುತ್ತಿದ್ದೇನೆ." ಹೀಗೆ ಹೇಳಿ ಕಂಬನಿದುಂಬಿದ ಕಣ್ಣುಗಳಿಂದ ಕೂಡಿದ್ದ ಶ್ರೀರಾಮನು ತಮ್ಮನನ್ನು ಬೀಳ್ಕೊಟ್ಟನು. ಧರ್ಮವಿದನಾದ ಭರತನು ಸಾಲಂಕೃತವಾದ, ಉಜ್ಜ್ವಲವಾದ ಕಾಂತಿಯಿಂದ ಕೂಡಿದ್ದ ಆ ದಿವ್ಯಪಾದುಕೆ ಗಳನ್ನು ಶಿರಸ್ಸಿನಲ್ಲಿ ಧಾರಣೆಮಾಡಿಕೊಂಡು ಶ್ರೀರಾಮನನ್ನು ಪ್ರದಕ್ಷಿಣೆ ಮಾಡಿ, ರಾಜರಾದವರು ಮಾತ್ರವೇ ಕುಳಿತುಕೊಳ್ಳಲು ಯೋಗ್ಯವಾಗಿದ್ದ ಪಟ್ಟದಾನೆಯ ಮೇಲೆ ಆ ಪಾದುಕೆಗಳನ್ನಿಟ್ಟನು. ರಘುವಂಶವರ್ಧಕನಾದ, ಸ್ವಧರ್ಮದ ಅನುಷ್ಠಾನದಲ್ಲಿ ಹಿಮವತ್ಪರ್ವತದಂತೆ ಅಚಲನಾದ ಶ್ರೀರಾಮನು ಯಥಾಕ್ರಮವಾಗಿ ತಾಯಂದಿರನ್ನೂ, ಗುರುಜನರನ್ನೂ, ಅಮಾತ್ಯರನ್ನೂ, ಮಂತ್ರಿಗಳನ್ನೂ ಮತ್ತು ಭರತ-ಶತ್ರುಘ್ನರನ್ನೂ ಯಥಾಯೋಗ್ಯವಾಗಿ ಪುರಸ್ಕರಿಸಿ ಬೀಳ್ಕೊಟ್ಟನು. ರಾಮನನ್ನು ಅಗಲಿ ಹೋಗಬೇಕೆನ್ನುವ ದುಃಖಾತಿಶಯದಿಂದ ಕೌಸಲ್ಯಾ-ಸುಮಿತ್ರಾ-ಕೈಕೇಯಿಯರು ಗದ್ಗದಕಂಠವುಳ್ಳವರಾದರು. ಅವರ ಕಣ್ಣುಗಳಿಂದ ಅಶ್ರುಬಿಂದುಗಳು ತೊಟ್ಟಿಕ್ಕುತ್ತಿದ್ದುವು. ರಾಮನಿಗೆ ಒಂದು ಮಾತು ಹೇಳಲು ಕೂಡ ಅವರಿಗೆ ಸಾಧ್ಯವಾಗದೇ ಹೋಯಿತು. ಹೀಗಿದ್ದ ತಾಯಂದಿರಿಗೆ ರಾಮನೇ ನಮಸ್ಕರಿಸಿ ತಾನೂ ರೋದನಮಾಡುತ್ತಾ ಪರ್ಣಶಾಲೆಯೊಳಕ್ಕೆ ಹೊರಟುಹೋದನು.

೧೧೨ನೆಯ ಸರ್ಗವು ಮುಗಿಯಿತು.

ಮೂರನೆಯ ಸಂಪುಟವು ಮುಗಿಯಿತು.

ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು
ಓಂ ತತ್ಸತ್

ಪರಿಶಿಷ್ಟ

ಶ್ರೀರಾಮನ ಜಾತಕ

ಜಗತ್ತಿನ ಇಂದಿನ ವಿಜ್ಞಾನದ ಶೋಧನೆಗಳು ಮತ್ತು ಭಾರತೀಯ ತತ್ತ್ವಜ್ಞಾನ, ಧರ್ಮಶಾಸ್ತ್ರ, ಜ್ಯೋತಿಃಶಾಸ್ತ್ರಗಳ ಬಗೆಗೆ ನಮ್ಮ ಗುರುಗಳಾದ ಜ್ಯೋತಿಃಶಾಸ್ತ್ರ ಪಾರಂಗತ ದಿ|| ಮೊಗೇರಿ ಭಾಸ್ಕರ ಅಡಿಗರು ಮತ್ತು ಅವರ ಸಹೋದರರಾದ ಜ್ಯೋತಿಃಶಾಸ್ತ್ರಪಾರಂಗತ ದಿ|| ಮೊಗೇರಿ ಪದ್ಮನಾಭ ಅಡಿಗರು ಆಗಾಗ ಹೇಳುತ್ತಿದ್ದ ಮಾತೆಂದರೆ: "ಇಂದಿನ ವಿಜ್ಞಾನದ ಶೋಧನೆಗಳು ನಿನ್ನಿನ ಶೋಧನೆಗಳನ್ನು ಕೊಂದಿವೆ. ನಾಳಿನ ಶೋಧನೆಗಳು ಇಂದಿನ ಶೋಧನೆಗಳನ್ನು ಕೊಲ್ಲುತ್ತವೆ. ನಾಡಿದ್ದಿನ ಶೋಧನೆಗಳು ನಾಳೆಯ ಶೋಧನೆಗಳನ್ನು ಕೊಲ್ಲಲಿವೆ. ಅರ್ಥಾತ್ ಈ ಶೋಧನೆಗಳು ತ್ರಿಕಾಲಾ ಬಾಧಿತತತ್ತ್ವಗಳ ಮೇಲೆ ಸ್ಥಿರವಾಗಿ ನಿಂತವಲ್ಲವಾದ್ದರಿಂದ ನಂಬಿಕೆಗೆ ಅರ್ಹ ವಾದುವುಗಳಲ್ಲ. ಅಂತು ಇಂದಿನ ಶೋಧನೆಗಳು ಪ್ರಗತಿಯೆಂಬ ಮೇಲ್ಮುಸು ಕನ್ನು ಹಾಕಿಕೊಂಡು ಮಾನವಜನಾಂಗವನ್ನು ಹೃದಯಶೂನ್ಯವನ್ನಾಗಿ ಮಾಡಿ ವಿನಾಶದ ಅಂಚಿಗೆ ತಂದು ನಿಲ್ಲಿಸಿವೆ. ಇಂದಿನ ವಿಜ್ಞಾನಿಗಳು **ಏತಾಂ ದೃಷ್ಟಿಮವಷ್ಟಭ್ಯ ನಷ್ಟಾತ್ಮಾನೋಽಲ್ಪಬುದ್ಧಯಃ |ಪ್ರಭವಂತ್ಯುಗ್ರಕರ್ಮಾಣಃ ಕ್ಷಯಾಯ ಜಗತೋಽಹಿತಾಃ ||** ಎಂಬ ಗೀತಾವಾಕ್ಯಕ್ಕೆಉದಾಹರಣೆಯೋ ಎಂಬಂತೆ ಕೇವಲ ಭೌತಿಕದೃಷ್ಟಿ ಯುಳ್ಳವರಾಗಿರುತ್ತಾರೆ. ಆದರೆ ವೇದಮೂಲಕವಾದ ಭಾರತೀಯ ತತ್ತ್ವಶಾಸ್ತ್ರ, ಧರ್ಮಶಾಸ್ತ್ರ ಹಾಗೂ ಜ್ಯೋತಿಃಶಾಸ್ತ್ರಗಳು ಹಾಗಲ್ಲ; ಅವು ಪಾರ ಮಾರ್ಥಿಕವಾದ ಸತ್ಯದ ಆಧಾರದ ಮೇಲೆ ಸ್ಥಿರವಾಗಿ ನಿಂತಿದ್ದು–ಸರ್ವೇ ಜನಾಃ ಸುಖಿನೋ ಭವಂತು- ಎಂಬ ಉದಾರವಾದ ತತ್ತ್ವವನ್ನಿಟ್ಟು ಕೊಂಡು ಸಕಲಮಾನವಜನಾಂಗದ; ಹೆಚ್ಚೇಕೆ, ಸಮಸ್ತಚರಾಚರಪ್ರಾಣಿ ವರ್ಗದ ಕ್ಷೇಮವನ್ನೇ ಹಗಲಿರುಳೂ ಚಿಂತಿಸುತ್ತವೆ"– ಎಂದು ಹೇಳುತ್ತಿದ್ದರು. ಶಾಸ್ತ್ರೀಯವಾದ ಈ ಭಾವನೆಗಳನ್ನು ಮೂಲಬಂಡವಾಳ ವನ್ನಾಗಿಟ್ಟುಕೊಂಡು ಶಾಸ್ತ್ರೀಯವಾದ ದಾರಿಯಿಂದಲೇ ನಾವು ಪ್ರಕೃತವಾದ ಶ್ರೀರಾಮನ ಜಾತಕದ ವಿಷಯವಾಗಿ ಚಿಂತನೆ ಮಾಡೋಣ.

ನಮ್ಮ ಸನಾತನಧರ್ಮಾನುಯಾಯಿಗಳ ಶಾಸ್ತ್ರೀಯವಾದ ನಿಲುಮೆ

ಯೇನೆಂದರೆ: ವೇದವೆಂದರೆ–"ಅಪೌರುಷೇಯವಾಗಿ ಪರಮಾತ್ಮನ ನಿಃಶ್ವಾಸ ರೂಪದಿಂದ ಪ್ರಕಟಗೊಂಡ ಉತ್ಪತ್ತಿವಿನಾಶರಹಿತವಾದ ಜ್ಞಾನರಾಶಿಯೇ ವೇದ." ಚತುರ್ಮುಖಬ್ರಹ್ಮನು ಪರಮಾತ್ಮನಿಂದ ಪಡೆದುಕೊಂಡ ಈ ವೇದರಾಶಿಯನ್ನೇ ಆಧಾರವನ್ನಾಗಿಟ್ಟುಕೊಂಡು ಪರಮಾತ್ಮನ ಇಚ್ಛೆಯಂತೆ ಪ್ರಾಣಿಗಳ ಪೂರ್ವಕರ್ಮವನ್ನು ಗಣನೆಗೆ ತೆಗೆದುಕೊಂಡು ಚರಾಚರ ಪ್ರಾಣಿವರ್ಗವನ್ನೂ, ಅವುಗಳಿಗೆ ಆಧಾರಭೂತವಾದ ಬ್ರಹ್ಮಾಂಡವನ್ನೂ ಸೃಷ್ಟಿಸಿದನು. ಈಗಿನ ಪರಿಭಾಷೆಯಂತೆ ಹೇಳುವುದಾದರೆ ವೇದವು ಬ್ರಹ್ಮಾಂಡರಚನೆಯ ನೀಲನಕ್ಷೆ (ಬ್ಲೂಪ್ರಿಂಟ್). ಈ ಎಲ್ಲ ವಿಷಯಗಳೂ–"ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ಯದೃಗ್ವೇದೋ ಯಜುರ್ವೇದಃ ಸಾಮವೇದೋಽಥರ್ವಾಂಗಿರಸ ಇತಿಹಾಸಃ ಪುರಾಣಂ ವಿದ್ಯಾ ಉಪನಿಷದಃ ಶ್ಲೋಕಾಃ ಸೂತ್ರಾಣ್ಯನುವ್ಯಾಖ್ಯಾನಾನಿ ವ್ಯಾಖ್ಯಾನಾನ್ಯಸ್ಯೈ ವೈ ತಾನಿ ನಿಃಶ್ವಸಿತಾನಿ" "ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ" "ಧಾತಾ ಯಥಾ ಪೂರ್ವಮಕಲ್ಪಯಾತ್" "ಪಶ್ಯ ದೇವಸ್ಯ ಕಾವ್ಯಂ ನ ಮಮಾರ ನ ಜೀರ್ಯತಿ" ಇತ್ಯಾದಿ ವೇದವಚನಗಳಲ್ಲೂ "ಶಾಸ್ತ್ರಯೋನಿತ್ವಾತ್" ಎಂಬ ಬಾದರಾಯಣಸೂತ್ರದಲ್ಲೂ, ಅದರ ಶಾಂಕರಭಾಷ್ಯದಲ್ಲೂ ಹಾಗೂ ಮನುಸ್ಮೃತಿಯ ಮೊದಲನೆಯ ಅಧ್ಯಾಯದಲ್ಲೂ ವಿಸ್ತಾರವಾಗಿ ಪ್ರತಿಪಾದಿಸಲ್ಪಟ್ಟಿವೆ.

ಈ ಸೃಷ್ಟಿಯ ಆಯುಃಪರಿಮಿತಿಯು ೪೩೨ ಕೋಟಿ ವರ್ಷಗಳು ಎಂಬ ವಿಷಯವು ವೇದದಲ್ಲೂ ವೇದಾಂಗವಾದ ಸೂರ್ಯಸಿದ್ಧಾಂತಾದಿ ಸಿದ್ಧಾಂತ ಶಾಸ್ತ್ರ ಗಳಲ್ಲೂ, ಮನುಸ್ಮೃತಿಯಲ್ಲೂ, ಪುರಾಣಾದಿಗಳಲ್ಲೂ ಒಂದೇ ರೀತಿ ಯಾಗಿ ವರ್ಣಿತವಾಗಿದೆಯಲ್ಲದೇ ಶ್ರೀಮದ್ಭಗವದ್ಗೀತೆಯಲ್ಲೂ– ಸಹಸ್ರಯುಗ ಪರ್ಯಂತಮಹರ್ಯದ್ ಬ್ರಹ್ಮಣೋ ವಿದುಃ । ರಾತ್ರಿಂ ಯುಗ ಸಹಸ್ರಾಂತಾಂ ತೇಽಹೋರಾತ್ರವಿದೋ ಜನಾಃ ॥–ಎಂಬ ಶ್ಲೋಕ ದಲ್ಲೂ ಹೇಳಲ್ಪಟ್ಟಿದೆ. ಪ್ರತಿದಿನ ಸಂಧ್ಯಾವಂದನಾದಿ ಶಾಸ್ತ್ರೀಯವಾದ ಕರ್ಮಗಳ ಪ್ರಾರಂಭದಲ್ಲಿ ಹೇಳುವ ಶ್ರೀಮದ್ಭಗವತೋ ಮಹಾ ಪುರುಷಸ್ಯ ವಿಷ್ಣೋರಾಜ್ಞಯಾ–ವೈವಸ್ವತಮನ್ವಂತರೇ ಕಲಿ

ಯುಗೇ ಇತ್ಯಾದಿ ಸಂಕಲ್ಪಮಾಡುವ, ಶ್ರುತಿ-ಸ್ಮೃತಿ-ಪುರಾಣಾದಿಗಳಲ್ಲಿ ಶ್ರದ್ಧೆಯುಳ್ಳ ಆಸ್ತಿಕನಾದ ಯಾವ ಭಾರತೀಯನೂ ಈ ವಿಷಯದಲ್ಲಿ ಆಕ್ಷೇಪವೆತ್ತಲಾರನು. ಆಕ್ಷೇಪವೆತ್ತಬಾರದು.

ಬ್ರಹ್ಮಾಂಡರೂಪವಾದ ಈ ಸೃಷ್ಟಿಯ ರಚನೆಗೆ ಬ್ರಹ್ಮನಿಗೆ–**ಗ್ರಹರ್ಕ್ಷ ದೇವದೈತ್ಯಾದಿ ಸೃಜತೋಽಸ್ಯ ಚರಾಚರಮ್ । ಕೃತಾದ್ರಿವೇದಾ ದಿವ್ಯಬ್ದಾಃ ಶತಘ್ನಾವೇಧಸೋ ಗತಾಃ ||**–ಎಂದು ಸಿದ್ಧಾಂತದಲ್ಲಿ ಹೇಳಿ ರುವಂತೆ ೪೭,೪೦೦ ದಿವ್ಯವರ್ಷಗಳು ಅಂದರೆ ೧,೭೦.೬೪೦೦೦ ಮಾನವ ವರ್ಷಗಳು ತಗಲಿವೆ. ಹೀಗೆ ಬ್ರಹ್ಮಾಂಡರಚನೆಯ ಕೆಲಸ ಮುಗಿದನಂತರ **ಚೈತ್ರೇ ಮಾಸಿ ಜಗದ್ಬ್ರಹ್ಮಾ ಸಸರ್ಜ ಪ್ರಥಮೇಽಹನಿ । ಶುಕ್ಲ ಪಕ್ಷೇ ಸಮಗ್ರಂ ತತ್ತದಾ ಸೂರ್ಯೋದಯೇ ಸತಿ || ಪ್ರವರ್ತಯಾ ಮಾಸ ತದಾ ಕಾಲಸ್ಯ ಗಣನಾಮಪಿ || ಗ್ರಹಾನ್ರಾಶೀನೃತೂನ್ ಮಾಸಾನ್ ವತ್ಸರಾನ್ ವತ್ಸರಾಧಿಪಾನ್ || ಲಂಕಾನಗರ್ಯಾ ಮುದಯಾಚ್ಚ ಭಾನೋಸ್ತಸ್ಯೈವ ವಾರೇ ಪ್ರಥಮಂ ಬಭೂವ । ಮಧೋಃ ಸಿತಾದೇರ್ದಿನಮಾಸವರ್ಷಯುಗಾದಿಕಾನಾಂ ಯುಗ ಪತ್ ಪ್ರವೃತ್ತಿಃ ||** ಎಂದು ಸಿದ್ಧಾಂತಗಳಲ್ಲಿ ಹೇಳಿರುವಂತೆ ಚೈತ್ರಮಾಸದ ಶುಕ್ಲ ಪ್ರತಿಪದೆ ರವಿವಾರ ಸೂರ್ಯೋದಯಕ್ಕೆ ಸರಿಯಾಗಿ ರವ್ಯಾದಿ ಗ್ರಹಗಳನ್ನು ಚಾಲನೆಗೆ ಬಿಟ್ಟನು. ಅಂದಿನಿಂದಲೇ ವರ್ಷ-ಮಾಸ-ಋತು ಮೊದಲಾದುವುಗಳ ಗಣನೆಯನ್ನೂ ಆರಂಭಿಸಿದನು. ಹೀಗೆ ಚಾಲನೆಗೆ ಬಿಟ್ಟ ನಂತರ ರವ್ಯಾದಿಗಳು ಚೈತ್ರಶುಕ್ಲಪ್ರತಿಪದೆ ರವಿವಾರ ದಿನ ಮೇಷಾರಂಭದ ಆದಿಬಿಂದುನಿಂದ ಚಲನೆಯನ್ನು (ಗತಿಯನ್ನು) ಆರಂಭಿಸಿ ಇಂದಿನವರೆಗೂ ನಿಯತವಾಗಿ ಸಂಚರಿಸುತ್ತಿರುವಂತೆ ಮುಂದೆಯೂ ಹೀಗೆಯೇ ಸಂಚರಿಸಿ ಸೃಷ್ಟ್ಯಂತ್ಯದಲ್ಲಿ ಶನಿವಾರ ದಿವಸ ಮೀನಾಂತ್ಯಬಿಂದುವಿನಲ್ಲಿ ಕೊನೆಗೊಳ್ಳುತ್ತವೆ. ಹೀಗೆ ಸಂಚರಿಸುವಾಗ ನಿಮೇಷಾದಿಪರಾರ್ಧಪರ್ಯಂತವಾಗಿ ಕಾಲವನ್ನು ಹೇಗೆ ಗಣನೆಮಾಡಿ ಸ್ವೀಕರಿಸಬೇಕೆಂಬುದನ್ನು ಜ್ಯೋತಿಷ್ಯ ಸಿದ್ಧಾಂತಗ್ರಂಥ ಗಳಲ್ಲಿ ವಿವರವಾಗಿ ಹೇಳಿದೆ. ಈ ಸೂರ್ಯಾದಿ ಗ್ರಹಗಳ ಚಲನೆ ಯಿಂದ ಜಗತ್ತಿಗಾಗುವ ಇಷ್ಟಾನಿಷ್ಟಪರಿಣಾಮಗಳ ವಿವರಣೆಯು ಜ್ಯೋತಿಷ್ಯದ ಸಂಹಿತಾಸ್ಕಂಧದಲ್ಲಿದೆ. ಪ್ರತಿವ್ಯಕ್ತಿಯ ಮೇಲಾಗುವ ಪರಿ

ಣಾಮಗಳು ಹೋರಾಶಾಸ್ತ್ರದಲ್ಲಿ ವರ್ಣಿತವಾಗಿವೆ. ಕರ್ಮಾಧಿಕಾರಿಯಾದ ಮನುಷ್ಯನು–"ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ"–ಎಂಬಂತೆ ತನಗೆ ವಿಹಿತವಾದ ಯಜ್ಞಾದಿಕರ್ಮ ಗಳನ್ನಾಚರಿಸಲು ಯುಕ್ತವಾದ ಕಾಲವನ್ನು ಮುಹೂರ್ತಶಾಸ್ತ್ರದಲ್ಲಿ ಹೇಳಿದೆ. ಹೀಗೆ ಶಾಖೋಪಶಾಖೆಗಳಿಂದ ಬಹುವಿಸ್ತೃತವಾದ ಜ್ಯೋತಿಃಶಾಸ್ತ್ರವು ನಾಲ್ಕು ಲಕ್ಷಶ್ಲೋಕಗಳ ಪರಿಮಿತಿಯುಳ್ಳದ್ದಾಗಿದೆಯೆಂದು ಚರಣವ್ಯೂಹದ 'ಚತುರ್ಲಕ್ಷಂ ತು ಜ್ಯೌತಿಷಂ'–ಎಂಬ ವಚನವು ನಮಗೆ ತಿಳಿಸುತ್ತದೆ. ಇಷ್ಟು ವಿಸ್ತಾರವಾದ ಶಾಸ್ತ್ರದಲ್ಲಿ ಈಗ ಉಪಲಬ್ಧವಾದ ಅಂಶಗಳು ಬಹುಸ್ವಲ್ಪ–ಈಗ ಉಪಲಬ್ಧವಿದ್ದ ಭಾಗಗಳೂ ಸಹ ಸರಿಯಾದ ಅಧ್ಯಯನಾದಿಗಳಿಲ್ಲದೇ ಲುಪ್ತವೇ ಆಗುವ ಪರಿಸ್ಥಿತಿಯುಂಟಾಗಿದೆ.

ಇನ್ನು ವೇದದಲ್ಲಿ ಜ್ಯೋತಿಃಶಾಸ್ತ್ರಕ್ಕೆ ಸಂಬಂಧಪಟ್ಟ ಅನೇಕಮಂತ್ರ ಗಳಿದ್ದು ಅದರಲ್ಲಿ "ವೇದ ಮಾಸೋ ಧೃತವ್ರತೋ ದ್ವಾದಶ ಪ್ರಜಾವತಃ। ವೇದಾಯ ಉಪಜಾಯತೇ । ಅಸ್ತಿ ತ್ರಯೋದಶೋ ಮಾಸ ಇತ್ಯಾಹುಃ॥"-ಎಂಬಲ್ಲಿ ಅಧಿಕಮಾಸದ ವರ್ಣನೆಯೂ-"ಯಂ ಸೂರ್ಯಂ ಸ್ವರ್ಭಾನುಸ್ತಮಸಾ ವಿಧ್ಯದಾಸುರಃ । ಅತ್ರ ಯಸ್ತಮ ನ್ವವಿಂದನ್ ನ ಹ್ಯನ್ಯೇ ಅಶಕ್ನುವನ್ ॥–ಎಂಬಲ್ಲಿ ಗ್ರಹಣವಿಷಯವೂ ಹಾಗೆಯೇ–"ಸಂವತ್ಸರಾಯ ದೀಕ್ಷಿಷ್ಯಮಾಣಾ ಏಕಾಷ್ಟಕಾಯಾಂ ದೀಕ್ಷೇರನ್ । ಫಾಲ್ಗುಣೀ ಪೌರ್ಣಮಾಸೇ ದೀಕ್ಷೇರನ್ । ಚೈತ್ರೀ ಪೌರ್ಣಮಾಸೇ ದೀಕ್ಷೇರನ್– ಇತ್ಯಾದಿಗಳಲ್ಲಿ ಚೈತ್ರಮಾಸಾದಿ ವಿಷಯಗಳೂ ಉಲ್ಲೇಖವಾಗಿರುವುದರಿಂದ ಸಂವತ್ಸರಕ್ಕೆ ೧೨ ಮಾಸಗಳು, ಮಾಸಗಳಿಗೆ ೩೦ ದಿನಗಳು (ತಿಥಿಗಳು) ಇತ್ಯಾದಿಗಳನ್ನೆಲ್ಲ ಹೇಳಿರುವುದರಿಂದ ಜ್ಯೋತಿಃ ಶಾಸ್ತ್ರಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳ ಸಂಕ್ಷೇಪವಾದ ವರ್ಣನೆಯಿದ್ದು ವಿಸ್ತಾರವಾದ ವರ್ಣನೆಯು ವೇದಾಂಗವಾದ ಸಿದ್ಧಾಂತಗ್ರಂಥಗಳಲ್ಲಿ ಹೇಳ ಲ್ಪಟ್ಟಿದೆ. ಇವೆಲ್ಲವೂ ಸೃಷ್ಟ್ಯಾದಿಯಲ್ಲೇ ಹೇಳಲ್ಪಟ್ಟಿರುವುದರಿಂದ ಇವುಗಳು ಬದಲಾವಣೆ ಹೊಂದುವಂಥವುಗಳಲ್ಲ. "ವೇದೈಃ ಸಹ ಸಮುದ್ಭೂತಂ ವೇದಚಕ್ಷುಃ ಸನಾತನಮ್ "–ಎಂಬ ಆರ್ಷವಚನದಂತೆ ವೇದದೊಡನೆಯೇ ವೇದಾಂಗವು ಅಸ್ತಿತ್ವಕ್ಕೆ ಬಂದಿದೆ. ಹೀಗಿರುವಾಗ ವಿಜ್ಞಾನಿಗಳು ಹಿಂದೆ

ಒಂದು ಕಾಲದಲ್ಲಿ ದಿನಕ್ಕೆ ೧೦ ತಾಸು ಮಾತ್ರ ಇತ್ತು. ವರ್ಷಕ್ಕೆ ೪೮೦ ಅಥವಾ ಎಷ್ಟೋ ದಿನಗಳಿದ್ದುವು–ಎಂದೆಲ್ಲಾ ಹೇಳುವುದೂ, ರವಿವಾರಾದಿ ಕ್ರಮಗಳನ್ನು ಬದಲಿಸಿ ಹೇಳುವುದೂ, ತಿಥಿಯ ಮಾನವು ೧೦ ಡಿಗ್ರಿಗಳಷ್ಟು ಮಾತ್ರ ಇತ್ತು ಎಂದು ಹೇಳುವುದೂ–ಅವಿಚಾರಿತರಮಣೀಯವಾದ ಸುಳ್ಳಿನ ಸರ ಮಾಲೆಯೇ ಆಗಿದೆ. ಇನ್ನು 'ಸೂರ್ಯನು ಒಂದು ನಕ್ಷತ್ರ. ಪೃಥಿವಿಯು ಗ್ರಹ' ಇತ್ಯಾದಿ ಶೋಧನೆಯಂತೂ ಕೇವಲ ಕಾಲ್ಪನಿಕವಾದದ್ದು. ರವ್ಯಾದಿ ಗ್ರಹಗಳಿಗೆ ವೇದದ ಆಧಾರದ ಮೇಲೆಯೇ ಗ್ರಹತ್ವವನ್ನು ಹೇಳಿದ್ದು ಈಗಿನ ವಿಜ್ಞಾನಿಗಳು ಹೇಳಿದ ಮಾತ್ರದಿಂದ ಸೂರ್ಯನಿಗೆ ನಕ್ಷತ್ರತ್ವವೂ, ಪೃಥ್ವಿಗೆ ಗ್ರಹತ್ವವೂ ಸಿದ್ಧಿಸಲಾರದು. ಇವು ಆಸ್ತಿಕರ ನಂಬಿಕೆಗೆ ಅರ್ಹವಾದುವುಗಳಲ್ಲ. ವೇದದಲ್ಲಿ–ಭೀಷಾಸ್ಮಾದ್ವಾತಃ ಪವತೇ । ಭೀಷೋದೇತಿ ಸೂರ್ಯಃ । ಎಂದು ಹೇಳಿರುವಂತೆ ಪೃಥಿವ್ಯಾದಿ ಪಂಚಮಹಾಭೂತಗಳಾಗಲೀ ರವ್ಯಾದಿ ಗ್ರಹಗಳಾಗಲೀ ಸೃಷ್ಟ್ಯಾದಿಯಲ್ಲಿ ತಮಗೆ ಕಲ್ಪಿಸಿಕೊಟ್ಟ–"ಮಂದಾ ಮರೇಡ್ಯಭೂಪುತ್ರಸೂರ್ಯಶುಕ್ರಬುಧೇಂದವಃ"–ಈ ಕಕ್ಷಾಕ್ರಮ ವನ್ನು ಬಿಟ್ಟು ಬುಧನಾಗಲೀ ಇನ್ನಾವ ಗ್ರಹವಾಗಲೀ ಅನ್ಯಕಕ್ಷೆಯನ್ನು ಆಶ್ರಯಿಸಿದ್ದರೆಂದು ಕಲ್ಪಿಸುವುದಂತೂ ಗಗನಕುಸುಮಾಯಮಾನವಾದದ್ದು. ಏಕೆಂದರೆ–ಇಡೀ ಬ್ರಹ್ಮಾಂಡವೇ ಪರಮಾತ್ಮನ ನಿಯಂತ್ರಣಕ್ಕೊಳಪಟ್ಟಿ ದೆಯೇ ಹೊರತು ಈಗಿನ ವಿಜ್ಞಾನಿಗಳ ನಿಯಂತ್ರಣಕ್ಕೊಳಪಟ್ಟಿಲ್ಲವೆಂಬ ವಿಷಯವನ್ನು ನಾವು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. ಇವೆಲ್ಲ ವಿಷಯ ಗಳನ್ನೂ ನಾವು ಪೂರ್ವಭಾವಿಯಾಗಿ ಲಕ್ಷ್ಯದಲ್ಲಿಟ್ಟುಕೊಂಡು ರಾಮನ ಜಾತಕದ ವಿಷಯವನ್ನು ವಿಚಾರಿಸೋಣ.

ಮರ್ಯಾದಾಪುರುಷೋತ್ತಮನಾದ ಶ್ರೀರಾಮಚಂದ್ರನು ಚೈತ್ರ ಶುದ್ಧ ನವಮಿಯ ದಿನ ಸೂರ್ಯಾದಿ ಪಂಚಗ್ರಹರು ಉಚ್ಚರಾಗಿದ್ದಾಗ ಪುನರ್ವಸು ನಕ್ಷತ್ರ–ಕಟಕಲಗ್ನದಲ್ಲಿ (ಅಭಿಜಿನ್ಮುಹೂರ್ತದಲ್ಲಿ) ಜನಿಸಿದ್ದನೆಂದು ರಾಮನ ಜೀವಿತಕಾಲದಲ್ಲೇ ರಚಿತವಾದ, ವೇದದಂತೆ ಮಾನ್ಯವಾದ ಶ್ರೀಮದ್ವಾಲ್ಮೀಕಿ ರಾಮಾಯಣದಲ್ಲೂ ಇತರ ಪುರಾಣಾದಿಗಳಲ್ಲೂ ಪ್ರಸಿದ್ಧವಾಗಿದೆ. ಈ ವಿಷಯ ದಲ್ಲಿ ಗಣಿತಜ್ಞರು ಸೂರ್ಯನು ಮೇಷದಲ್ಲಿದ್ದಾಗ ನವಮಿಯ ದಿನ ಪುನ ರ್ವಸುನಕ್ಷತ್ರವು ಬರಲಾರದು ಅಥವಾ ಪುನರ್ವಸುನಕ್ಷತ್ರವಿರುವ ದಿನ ನವಮಿ

ಯಿರಲಾರದು ಎಂದು ಹೇಳಿ ಲೆಕ್ಕಾಚಾರ ಹಾಕಿ ಬಹುದೊಡ್ಡ ಗೊಂದಲವೆಬ್ಬಿಸಿದ್ದಾರೆ. ರಾಮಾಯಣದ ಪ್ರಾಮಾಣ್ಯವನ್ನು ತಿರಸ್ಕರಿಸಲಾರದೇ ಗಣಿತವನ್ನೂ ಬಿಡಲಾರದೇ ಇವೆರಡನ್ನೂ ಹೊಂದಿಸುವ ಸಲುವಾಗಿ ಆ ಕಾಲದಲ್ಲಿ ಒಂದು ತಿಥಿಯ ಯೋಗವು ೧೦ ಅಂಶ ಮಾತ್ರವಿತ್ತು ಎಂದೋ–ಇನ್ನಾವ ರೀತಿಯಿಂದಲೋ ಅದನ್ನು ಸಮರ್ಥಿಸಲು ಹೆಣಗಾಡುತ್ತಿದ್ದಾರೆ. ಶ್ರೀರಾಮನ ಜನನಕಾಲದಲ್ಲಿ ಸೂರ್ಯಾದಿ ಪಂಚಗ್ರಹರು ಉಚ್ಚರಾಗಿದ್ದರೆಂಬುದೂ, ನವಮಿಯ ತಿಥಿಯಿತ್ತೆಂಬುದೂ, ಪುನರ್ವಸು ನಕ್ಷತ್ರವಿತ್ತೆಂಬುದೂ ತ್ರಿವಾರ ಸತ್ಯವಾದ ವಿಷಯವಾಗಿದೆ. ಇದರಂತೆ ತಿಥಿಯ ಭೋಗವು ೧೨ ಅಂಶವಿದ್ದು ಒಂದು ತಿಂಗಳಿಗೆ ೩೦ ತಿಥಿ (ದಿನ) ಯೆಂಬುದೂ, ವರ್ಷಕ್ಕೆ ೧೨ ತಿಂಗಳೆಂಬುದೂ ವೇದ-ಸ್ಮೃತಿ-ಸಿದ್ಧಾಂತಗಳಲ್ಲೆಲ್ಲಾ ಪ್ರತಿಪಾದಿತವಾಗಿರುವ ವಿಷಯವಾಗಿದ್ದು ಇದನ್ನು ತಿರಸ್ಕರಿಸುವಂತೆಯೂ ಇಲ್ಲ. ಇನ್ನು ರಾಮನ ಜಾತಕದ ಫಲವನ್ನು ವಿಚಾರಿಸಿದರೂ–"**ಊರ್ಜಸ್ವೀ ಜನವಲ್ಲಭೋ ದಶಮಗೇ ಸೂರ್ಯೇ ಕುಜೇ ವಾ ಮಹತ್ಕಾರ್ಯಂ ಸಾಧಯತಿ । ಪ್ರತಾಪ ಬಹುಲಂ ಖೇಶಶ್ಚ ಸುಸ್ಥೋ ಯದಿ**"–ಎಂಬ ಫಲನಿರ್ದೇಶದಂತೆ ಸೂರ್ಯನು ದಶಮದಲ್ಲಿದ್ದಾಗ ಘಟಿಸತಕ್ಕ, ಮಹತ್ಕಾರ್ಯಾದಿಗಳು ಸೂರ್ಯನು ನವಮದಲ್ಲಿದಾಗ ಆಗಲಾರವು. ಅದರಂತೆ ಕುಜನು ಸಪ್ತಮದಲ್ಲಿದ್ದಾಗ-"**ಮಾಹೇಯೇ ಮದಗೇ ಸದೈವ ವಿರಹೋ ನಾರ್ಯಾ ಮೃತಿರ್ವಾ ಭವೇತ್**"–ಎಂದು ಹೇಳಿದಂತೆ ರಾಮನಿಗೆ ಭಾರ್ಯಾವಿಯೋಗವೂ, ನಾಶವೂ ಘಟಿಸಿದೆ. ಇನ್ನು ಕುಜ, ಗುರು, ಶುಕ್ರ, ಶನಿಗಳು ಉಚ್ಚರಾಗಿದ್ದಾಗ ರುಚಕ, ಹಂಸಕ, ಮಾಲವ, ಶಶಕಯೋಗಗಳು ಕ್ರಮವಾಗಿ ಘಟಿಸುತ್ತಿದ್ದು ಇಂಥ ಮಹಾಪುರುಷಯೋಗಗಳು ರಾಮನ ಜಾತಕದಲ್ಲಿವೆ. ದೀರ್ಘಾಯುಷ್ಯವನ್ನು ಸೂಚಿಸುವ ಗಜಕೇಸರೀಯೋಗವೂ ಇದೆ. ಹೀಗೆ ಫಲಭಾಗವನ್ನು ವಿಚಾರಿಸಿದರೂ ಸೂರ್ಯಾದಿಗಳು ಉಚ್ಚರಾಗಿದ್ದರೆಂದೇ ಸಿದ್ಧವಾಗುವುದು. ಹೀಗಿರುವಾಗ ಮೇಲೆ ಕಾಣಿಸಿದ ರಾಮನ ಜಾತಕದ ವಿಷಯವನ್ನು ಶಾಸ್ತ್ರೀಯರೀತಿಯಿಂದಲೇ ಹೊಂದಿಸಬೇಕೇ ಹೊರತು ಯೇನ ಕೇನ ಪ್ರಕಾರೇಣ ಕೇವಲ ಊಹೆಯಿಂದ ಹೊಂದಿಸುವುದು ಸರಿಯಲ್ಲ.

ಈಗ ಈ ವಿಷಯವನ್ನು ಶಾಸ್ತ್ರೀಯವಾದ ರೀತಿಯಿಂದ ಹೊಂದಿಸು

ವುದು ಹೇಗೆಂದರೆ: ಆಕಾಶದಲ್ಲಿ ಅಶ್ವಿನ್ಯಾದಿ ನಕ್ಷತ್ರಗಳು ಮೈಲಿಗಲ್ಲುಗಳಂತೆ ಸಮಾನಾಂತರದಲ್ಲಿಲ್ಲ. ಆದ್ದರಿಂದ ಪ್ರತಿಯೊಂದು ನಕ್ಷತ್ರದ ಭೋಗವು ೮೦೦ ಕಲೆಗಳೆಂದು ಹೇಳಿದ್ದು ಸ್ಥೂಲಮಾನದ್ದು. ಸೂಕ್ಷ್ಮಮಾನದ್ದು ಬೇರೆಯೇ ಆಗಿದೆ. ಆ ಮಾನವನ್ನು ನಾವು ತೆಗೆದುಕೊಂಡರೆ ಇದನ್ನು ಹೊಂದಿಸಲು ಸಾಧ್ಯ. ಇದನ್ನು ಗಣಕಸಾರ್ವಭೌಮರಾದ ಭಾಸ್ಕರಾಚಾರ್ಯರು ತಮ್ಮ-ಸಿದ್ಧಾಂತಶಿರೋಮಣಿಯ ಗಣಿತಾಧ್ಯಾಯದ ಸ್ಪಷ್ಟಾಧಿಕಾರದಲ್ಲಿ ಈ ರೀತಿ ಹೇಳಿದ್ದಾರೆ:

ಸ್ಥೂಲಂ ಕೃತಂ ಭಾನಯನಂ ಯದೇತದ್
ಜ್ಯೋತಿರ್ವಿದಾಂ ಸಂವ್ಯವಹಾರಹೇತೋಃ।
ಸೂಕ್ಷ್ಮಂ ಪ್ರವಕ್ಷ್ಯೇऽಥ ಮುನಿಪ್ರಣೀತಂ
ವಿವಾಹಯಾತ್ರಾದಿ ಫಲಪ್ರಸಿದ್ಧ್ಯೈ ॥

ಅಧ್ಯರ್ಧಭೋಗಾನಿ ಷಡತ್ರ ತಜ್ಞಾಃ
ಪ್ರೋಚುರ್ವಿಶಾಖಾದಿತಿ ಕೋತ್ತರಾಣಿ ।
ಷಡರ್ಧಭೋಗಾನಿ ಚ ಭೋಗಿರುದ್ರ-
ವಾತಾಂತಕೇಂದ್ರಾಧಿಪವಾರುಣಾನಿ ॥

ಶೇಷಾಣ್ಯತಃ ಪಂಚದಶೈಕಭೋಗಾ-
ನ್ಯುಕ್ತೋಭಭೋಗಃ ಶಶಿಮಧ್ಯಭುಕ್ತಿಃ ।
ಸರ್ವರ್ಕ್ಷಭೋಗೋನಿತಚಕ್ರಲಿಪ್ತಾಃ
ವೈಶ್ವಾಗ್ರತಃ ಸ್ಯಾದಭಿಜಿದ್ಭಭೋಗಃ ॥

ಎಂದು ಹೇಳಿ ಒಂದು ನಕ್ಷತ್ರಕ್ಕೆ ೮೦೦ ಕಲೆಯೆಂಬುದು ಸ್ಥೂಲಮಾನವೆಂದೂ ಅದರಂತೆ ಈವರೆಗೆ ಹೇಳಿದ್ದು ಜ್ಯೋತಿಷಜ್ಞರ ಗಣಿತಸೌಕರ್ಯಕ್ಕಾಗಿ ಹೇಳಿದ್ದಾಗಿದೆಯೇ ಹೊರತು ಸೂಕ್ಷ್ಮಮಾನವು ಬೇರೆಯೇ ಇದೆಯೆಂದೂ ಹೇಳಿ ೨೮ ನಕ್ಷತ್ರಗಳಲ್ಲಿ ರೋಹಿಣಿ, ಪುನರ್ವಸು, ಉತ್ತರಾತ್ರಯ, ವಿಶಾಖಾ ನಕ್ಷತ್ರಗಳು ೧॥ ನಕ್ಷತ್ರದಷ್ಟು ಭೋಗವುಳ್ಳವುಗಳೆಂದೂ–ಭರಣಿ, ಆರ್ದ್ರಾ, ಆಶ್ಲೇಷಾ, ಸ್ವಾತಿ, ಜ್ಯೇಷ್ಠ, ಶತಭಿಷಕ್–ಈ ಆರು ನಕ್ಷತ್ರಗಳು ಅರ್ಧ ಭೋಗವುಳ್ಳವುಗಳೆಂದೂ–ಉಳಿದ ೧೫ ನಕ್ಷತ್ರಗಳು ಚಂದ್ರನ ಮಧ್ಯಮದಿನ

ಗತಿಯಷ್ಟು ಭೋಗವುಳ್ಳವುಗಳೆಂದೂ—ಈ ೨೭ ನಕ್ಷತ್ರಗಳ ಭೋಗಗಳನ್ನು ೩೬೦ ಅಂಶದಲ್ಲಿ ಕಳೆದರೆ ಉಳಿಯುವ ಶೇಷವು ಅಭಿಜಿನ್ನಕ್ಷತ್ರಭೋಗವೆಂದೂ ಹೇಳಿದ್ದಾರೆ. ಇವೆಲ್ಲವೂ ತನ್ನ ಸ್ವಂತಕಲ್ಪನೆಯಲ್ಲವೆಂದೂ ಮಹಾಮುನಿಗಳಾದ ಪುಲಿಶ, ವಸಿಷ್ಠ, ಗರ್ಗಾದಿಗಳ ಗ್ರಂಥಗಳಿಂದ ಈ ಅಭಿಪ್ರಾಯವನ್ನು ತಾನು ಸಂಗ್ರಹಿಸಿದ್ದೇನೆಂದೂ ತಮ್ಮ ವಾಸನಾಭಾಷ್ಯದಲ್ಲಿ ಸ್ಪಷ್ಟಪಡಿಸಿದ್ದಾರೆ. ಈ ರೀತಿ ನಕ್ಷತ್ರಭೋಗಗಳನ್ನು ಗಣಿಸುವಾಗ ಒಂದು ರಹಸ್ಯವನ್ನು ನೆನಪಿ ನಲ್ಲಿಟ್ಟುಕೊಳ್ಳಬೇಕು. ಅಂದರೆ ಕೃತ್ತಿಕಾದಿ ಭರಣ್ಯಂತವಾಗಿ ಕೂಡಿಸ ಬೇಕು. ಈ ರೀತಿ ಕೃತ್ತಿಕಾದಿಯಿಂದ ಎಣಿಸುವುದು ವೇದಮೂಲಕವಾದದ್ದೇ ಆಗಿದೆ. "ಅಗ್ನಿರ್ನಃ ಪಾತು ಕೃತ್ತಿಕಾಃ" "ಕೃತ್ತಿಕಾನಕ್ಷತ್ರಮಗ್ನಿರ್ದೇವತಾ" ಇತ್ಯಾದಿ ಮಂತ್ರಗಳಲ್ಲಿ ಕೃತ್ತಿಕಾದಿಯಾಗಿಯೇ ನಕ್ಷತ್ರಗಳ ಎಣಿಕೆಮಾಡಿದೆ. ಜ್ಯೋತಿಃಶಾಸ್ತ್ರದಲ್ಲೂ ದಶಾಫಲವನ್ನು ಹೇಳುವಾಗ ಕೃತ್ತಿಕಾದಿಯಾಗಿಯೇ ಹೇಳಿದ್ದಾರೆ. ನಾಮಾಕ್ಷರಗಳನ್ನೆಣಿಸುವುದೂ ಕೃತ್ತಿಕಾದಿಯಿಂದ. ಅಂತರಂಗ-ಬಹಿರಂಗನಕ್ಷತ್ರಗಳು ಕೃತ್ತಿಕಾದಿಯಾಗಿಯೇ ಇವೆ. ಬಾರ್ಹಸ್ಪತ್ಯಮಾನದ ಗಣನೆಯಲ್ಲಿ—"ಕಾರ್ತಿಕ್ಯಾದೀನಿ ವರ್ಷಾಣಿ ಕೃತ್ತಿಕಾದಿ ದ್ವಯಂ ದ್ವಯಂ"—ಎಂದು ಕೃತ್ತಿಕಾದಿಯಾಗಿಯೇ ವ್ಯವಹಾರವಿದೆ. ಹೀಗೆ ಜ್ಯೋತಿಃಶಾಸ್ತ್ರದಲ್ಲಿ ವಿಷಯಭೇದದಿಂದ ದೇಶಭೇದದಿಂದ ಅಶ್ವಿನ್ಯಾದಿ ಯಾಗಿಯೂ ಕೃತ್ತಿಕಾದಿಯಾಗಿಯೂ ವ್ಯವಹಾರವಿದೆ. (ಉತ್ತರಪ್ರದೇಶದಲ್ಲಿ ಈಗಲೂ ಬಾರ್ಹಸ್ಪತ್ಯಮಾನದ ಗಣನೆಯೇ ಇದೆ.) ಆದ್ದರಿಂದ ಇಲ್ಲಿ ಕೃತ್ತಿಕಾದಿಯಿಂದ ಭರಣ್ಯಂತಮಾನದಿಂದ ನಕ್ಷತ್ರಭೋಗವನ್ನೆಣಿಸಬೇಕು.

ಭರಣ್ಯಂತಭೋಗ	೨೬-೪೦-೦೦
ಕೃತ್ತಿಕಾ	೧೩-೧೦-೩೫
ರೋಹಿಣೀ	೧೯-೪೫-೫೨
ಮೃಗಶಿರಾ	೧೩-೧೦-೩೫
ಆರ್ದ್ರಾ	೬-೩೫-೧೭॥
ಪುನರ್ವಸು	೧೯-೪೫-೫೨

ಹೀಗೆ ಪುನರ್ವಸುನಕ್ಷತ್ರದ ಅಂತ್ಯವು ಭಾಗಾದಿ ೯೯-೮-೧೧॥ ಯಷ್ಟಾಗುವುದು. ಚೈತ್ರಶುದ್ಧ ಅಷ್ಟಮಿಯ ದಿನ ಸೂರ್ಯನು ಮೇಷರಾಶಿಯನ್ನು ಪ್ರವೇಶಿಸಿದ್ದಾನೆಂದು ಇಟ್ಟುಕೊಂಡರೆ ಪುನರ್ವಸುನಕ್ಷತ್ರಾಂತ್ಯ ೯೯-೮-೧೧॥ಯಲ್ಲಿ ಸೂರ್ಯನ ೧ ದಿನದ ಗತಿ೧ ಅಂಶವೆಂದು ಗಣಿಸಿ ಅದನ್ನು ಕಳೆದರೆ ೯೮-೮-೧೧॥ಯಷ್ಟು ತಿಥಿಯ ಭೋಗವಾಗುವುದು. ಇದರಲ್ಲಿ ಅಷ್ಟಮಿಯವರೆಗಿನ ಭೋಗ ೯೬ ಅಂಶ ಕಳೆದರೆ ೨-೮-೧೧॥ ಯಷ್ಟು ನವಮಿಯ ದಿನದ ಭೋಗವಾಗಿ ಆ ದಿನ ಮಧ್ಯರಾತ್ರಿಗೂ ಮಿಕ್ಕಿ ನವಮೀ ತಿಥಿಯಿರುವುದೆಂದೂ, ಮಧ್ಯಾಹ್ನಕ್ಕೆ ಮಿಕ್ಕಿ ಪುನರ್ವಸೂನಕ್ಷತ್ರವಿರುವುದೆಂದೂ ಸಿದ್ಧವಾಗುತ್ತದೆ. ಹೀಗೆ ಮೇಲೆ ಕಾಣಿಸಿದ ವಿವರದಂತೆ ರಾಮನ ಜನ್ಮವು ಚೈತ್ರಮಾಸದ ನವಮಿಯ ದಿನ ಪುನರ್ವಸುನಕ್ಷತ್ರವು ಕರ್ಕಟ ಲಗ್ನದಲ್ಲಿ ಆಗಿದ್ದಿತೆಂಬುದು ರಾಮಾಯಣಾದಿಗಳಲ್ಲಿ ಹೇಳಿದಂತೆ ಸತ್ಯವೇ ಆಗಿದ್ದಿತೆಂಬುದು ಶಾಸ್ತ್ರೀಯರೀತಿಯಿಂದ ಸಿದ್ಧವಾಗಿ–ಸ್ವೋಚ್ಚಸಂಸ್ಥೇಷು ಪಞ್ಚಸು ಎಂಬಲ್ಲಿಯ ಸ್ವೋಚ್ಚ ಎಂಬ ಪದದಲ್ಲಿ ಸ್ವ-ಉಚ್ಚ ಎಂದು ಪದವನ್ನು ಬೇರ್ಪಡಿಸಿ ಅರ್ಥಹೇಳುವುದು ಶಾಸ್ತ್ರಮರ್ಯಾದೆಗೆ ಸರಿಯಾದದ್ದಲ್ಲವೆಂದೂ ಸಿದ್ಧವಾಗುವುದು. “ಭಾಸ್ಕರಾಚಾರ್ಯರು ತಮ್ಮ ಸೂಕ್ಷ್ಮ ನಕ್ಷತ್ರಾನಯನಕ್ಕೆ ಹೆಸರಿಸಿದ ಬ್ರಹ್ಮಮಾನಸಪುತ್ರರೂ ತ್ರಿಕಾಲಜ್ಞಾನಿಗಳೂ ಆದ ವಸಿಷ್ಠ ಮಹರ್ಷಿಗಳೇ ಶ್ರೀರಾಮನ ಜಾತಕರ್ಮಾದಿಸಂಸ್ಕಾರಗಳನ್ನು ಮಾಡಿಸಿದವರಾದ್ದರಿಂದ ಆಗ ಈ ಗಣಿತಪದ್ಧತಿಯಂತೆಯೇ ಅವರು ಜಾತಕವನ್ನು ತಯಾರಿಸಿದ್ದರೆಂದೂ ಅದನ್ನೇ ವಾಲ್ಮೀಕಿಮಹರ್ಷಿಗಳು ತಮ್ಮ ರಾಮಾಯಣದಲ್ಲಿ ಕಾಣಿಸಿದ್ದರೆಂದೂ ನಾವು ಭಾವಿಸಲು ಏನೂ ಪ್ರತ್ಯವಾಯವಿಲ್ಲ.” ರಾಮಾಯಣದಲ್ಲಿ ಉಕ್ತವಾದ ರಾಮನ ಜನನದ ಬಗೆಗೆ ಈ ರೀತಿ ವಿವರಣೆ ನೀಡುವ ತಿಳುವಳಿಕೆಯನ್ನಿತ್ತ ಗುರುದ್ವಯರನ್ನು ಸ್ಮರಿಸಿ ಮರ್ಯಾದಾ ಪುರುಷೋತ್ತಮನಾದ ಶ್ರೀರಾಮಚಂದ್ರನ ಪಾದಾರವಿಂದಗಳಲ್ಲಿ ಈ ಲೇಖವನ್ನು ನಮ್ರತೆಯಿಂದ ಕಾಣಿಕೆಯಾಗಿ ಸಮರ್ಪಿಸಿ ಕೃತಕೃತ್ಯನಾಗುವೆನು. ಈ ಲೇಖನವನ್ನು ಬರೆಯಲು ಪ್ರೇರಿಸಿದ ಭಾರತದರ್ಶನದ ಸಂಪಾದಕರಿಗೆ ನನ್ನ ಕೃತಜ್ಞತೆಗಳನ್ನು ಸಮರ್ಪಿಸುವೆನು.

ಕೃತ್ತಿಕಾದಿ ನಕ್ಷತ್ರಗಳ ಸೂಕ್ಷ್ಮಭೋಗಗಳು (ಭಾಸ್ಕರಾಚಾರ್ಯರ ಮತದಂತೆ)

೧	ಕೃತ್ತಿಕಾ	೧೩-೧೦-೩೫
೨	ರೋಹಿಣಿ	19-45-52
೩	ಮೃಗಶಿರಾ	೧೩-೧೦-೩೫
೪	ಆರ್ದ್ರಾ	೬-೩೫-೧೭॥
೫	ಪುನರ್ವಸು	೧೯-೪೫-೫೨
೬	ಪುಷ್ಯ	೧೩-೧೦-೩೫
೭	ಆಶ್ಲೇಷ	6-35-17॥
೮	ಮಘೆ	1೩-೧೦-೩೫
೯	ಹುಬ್ಬೆ	೧೩-೧೦-೩೫
೧೦	ಉತ್ತರೆ	19-45-52
೧೧	ಹಸ್ತ	೧೩-೧೦-೩೫
೧೨	ಚಿತ್ತೆ	೧೩-೧೦-೩೫
೧೩	ಸ್ವಾತಿ	೬-೩೫-೧೭॥
೧೪	ವಿಶಾಖೆ	೧೯-೪೫-೫೨
೧೫	ಅನುರಾಧೆ	೧೩-೧೦-೩೫
೧೬	ಜ್ಯೇಷ್ಠ	೬-೩೫-೧೭॥
೧೭	ಮೂಲ	೧೩-೧೦-೩೫
೧೮	ಪೂರ್ವಾಷಾಢ	೧೩-೧೦-೩೫
೧೯	ಉತ್ತರಾಷಾಢ	೧೯-೪೫-೫೨
೨೦	ಅಭಿಜಿತ್	೪-೧೪-೧೮
೨೧	ಶ್ರವಣ	೧೩-೧೦-೩೫
೨೨	ಧನಿಷ್ಠಾ	೧೩-೧೦-೩೫
೨೩	ಶತಭಿಷಕ್	೬-೩೫-೧೭॥
೨೪	ಪೂರ್ವಾಭಾದ್ರ	೧೩-೧೦-೩೫
೨೫	ಉತ್ತರಾಭಾದ್ರ	೧೯-೪೫-೫೨
೨೬	ರೇವತಿ	೧೩-೧೦-೩೫
೨೭	ಅಶ್ವಿನಿ	೧೩-೧೦-೩೫
೨೮	ಭರಣಿ	೬-೩೫-೧೭॥
		೩೬೦-೦೦-೦೦

ಬಲ್ಲವರ ಅಡಿಯಾಳು

ಗಣಪತಿ ಕುಪ್ಪಯ್ಯ ಹೆಗಡೆ,

ದೈವಜ್ಞಶಿರೋಮಣಿ, ಧರ್ಮಶಾಸ್ತ್ರಾಲಂಕಾರ

ಕಾರ್ಯದರ್ಶಿ, ಧಾರ್ಮಿಕ ಪಂಚಾಂಗ ಸಮಿತಿ

C/O ಶ್ರೀಕೃಷ್ಣ ಮುದ್ರಣಾಲಯ ಹೆಗಡೆ

ಅಂಚೆ ಹೆಗಡೆ, ತಾ॥ ಕುಮಟಾ, ಉ.ಕನ್ನಡ

ಕ್ಷಯ ಸಂ॥ದ ಪುಷ್ಯ ಶುಕ್ಲ
೧೫ ಬುಧವಾರ ಮಕರ
ಸಂಕ್ರಮಣಂ, ೧೫-೧-೮೩

ಜಗರ್ಹೇ ಚ ಪುರೋಹಿತಮ್-ಒಂದು ವಿಶ್ಲೇಷಣೆ

ಸ ಬಾಷ್ಪಕಲಯಾ ವಾಚಾ ಕಲಹಂಸಸ್ವರೋ ಯುವಾ ।
ವಿಲಲಾಪ ಸಭಾಮಧ್ಯೇ ಜಗರ್ಹೇ ಚ ಪುರೋಹಿತಮ್ ॥೧೦॥

ಅಯೋಧ್ಯಾಕಾಂಡ-ಸರ್ಗ-೮೨

"ಜಗರ್ಹೇ ಚ ಪುರೋಹಿತಮ್' ಭರತನು ಪುರೋಹಿತರಾದ ವಸಿಷ್ಠರನ್ನೂ ಸಭಾಮಧ್ಯದಲ್ಲಿ ನಿಂದಿಸಿದನು. ಮಹಾತ್ಮರಾದ ವಸಿಷ್ಠರು ನಿಂದೆಗೆ ಯೋಗ್ಯರೇ? ಅಥವಾ ಮಹಾಜ್ಞಾನಿಗಳಾದ ವಸಿಷ್ಠರು ಅಧರ್ಮ ಬೋಧನೆ ಮಾಡಿದರೇ?

ಈ ಶ್ಲೋಕದಲ್ಲಿ ಭರತನು ಹೇಳಿದಂತೆ ಅವನಿಗೆ **'ಅಹಂ ಚ ರಾಜ್ಯಂ ಚ ರಾಮಸ್ಯ'** ನಾನೂ ಮತ್ತು ರಾಜ್ಯವೂ ರಾಮನಿಗೆ ಸೇರಿದವರೆಂಬುದು ಹೇಗೆ ಎಂಬುದನ್ನು ಸ್ವಲ್ಪ ವಿಮರ್ಶಿಸಬೇಕಾಗಿದೆ. ಒಬ್ಬೊಬ್ಬ ರಿಗೂ ಸಂಬಂಧಿಸಿದಂತೆ ಒಂದೊಂದು ಧರ್ಮವಿದೆ. ಸಾಧಾರಣಧರ್ಮವು ಎಲ್ಲರಿಗೂ ಅನ್ವಯಿಸುವುದಾಗಿದ್ದರೂ, ಕೆಲವು ಸಮಯಗಳಲ್ಲಿ ವೈಯ್ಯಕ್ತಿಕವಾದ ಧರ್ಮಗಳಿರುತ್ತವೆ. ಪ್ರಕೃತಸಂದರ್ಭದಲ್ಲಿ ರಾಜಪುರೋಹಿತರಾದ ವಸಿಷ್ಠರಿಗೆ ಒಂದು ಧರ್ಮವಿದೆ. ರಾಜನಿಲ್ಲದ ಸಮಯದಲ್ಲಿ ಅವರು ರಾಜ್ಯದ ಹಿತವನ್ನೇ ಮುಖ್ಯವನ್ನಾಗಿಟ್ಟುಕೊಂಡು, ಇತ್ತ ಪ್ರಜೆಗಳನ್ನೂ ಮಂತ್ರಿಗಳನ್ನೂ ಅತ್ತ ರಾಜಮನೆತನದವರನ್ನೂ ನಿರ್ದೇಶಿಸಬೇಕಾಗಿದೆ. ರಾಮನು ಕಾಡಿಗೆ ಹೋದುದು ಧರ್ಮವೇ ಅಥವಾ ರಾಮನನ್ನು ಕಾಡಿಗೆ ಕಳುಹಿಸಿದ್ದು ಧರ್ಮವೇ ಎಂದು ವಿಮರ್ಶಿಸಿ, ರಾಮನನ್ನು ಕಾಡಿಗೆ ಕಳುಹಿಸಿದ್ದು ಅಧರ್ಮ ವೆನಿಸಿದರೆ ರಾಮನನ್ನು ರಾಜ್ಯಕ್ಕೆ ಕರೆತರುವ ಅಥವಾ ಕರೆತರಲು ನಿರ್ದೇಶಿಸುವ ಕಾರ್ಯವು ಅವರದಲ್ಲ. ವಸ್ತುಪರಿಸ್ಥಿತಿಯನ್ನು ಯಥಾವತ್ತಾಗಿ ಅವಲೋಕಿಸಿ ಯಾರೊಬ್ಬರಿಗೂ (ಕೈಕೇಯಿಗೂ ಸಹ) ಮತ್ತು ಧರ್ಮಕ್ಕೂ ನ್ಯೂನತೆಯುಂಟಾಗದ ರೀತಿಯಲ್ಲಿ ವರ್ತಿಸುವುದು ಪುರೋಹಿತನ ಕಾರ್ಯ. ಕೈಕೇಯಿಯು ವರಕೇಳಿದುದರ ಪರಿಣಾಮವಾಗಿ ರಾಮನು ಕಾಡಿಗೆ ಹೊರಟು ಹೋದನು. ರಾಮನು ಕಾಡಿಗೆ ಹೋಗುವ ಮೊದಲು ದಶರಥರಾಜನು ಕೈಕೇಯಿಯು ಬೇಡಿದ ಎರಡು ವರಗಳನ್ನು ಕೊಡುವುದಿಲ್ಲವೆಂದಾಗಲೀ,

ರಾಮನನ್ನು ಕಾಡಿಗೆ ಕಳುಹಿಸುವುದಿಲ್ಲವೆಂದಾಗಲೀ ಹೇಳಲಿಲ್ಲ. ಅಂದರೆ ಮನಸ್ಸಿರಲಿ; ಇಲ್ಲದಿರಲಿ–ಧರ್ಮಕ್ಕೆ ಕಟ್ಟುಬಿದ್ದು ಎರಡು ವರಗಳನ್ನೂ ಕೊಟ್ಟನೆಂದೇ ಭಾವಿಸಬೇಕಾಗಿದೆ. ಭರತನಿಗೆ ಪಟ್ಟಾಭಿಷೇಕ ಮಾಡಕೂಡದೆಂದೂ ಅವನು ಹೇಳಲಿಲ್ಲ. ಹೀಗೆ ಮಾಡಿದ್ದು ದಶರಥನ ಧರ್ಮ. ಈ ಧರ್ಮಾನುಸಾರವಾಗಿಯೇ ದಶರಥನು ನಡೆದಿದ್ದಾನೆ. ರಾಮನೂ ಸಹ ತಂದೆಯು ಕೊಟ್ಟ ಭಾಷೆಯನ್ನು ಅಥವಾ ವರವನ್ನು ಸತ್ಯವನ್ನಾಗಿ ಮಾಡಲು ಕಾಡಿಗೆ ಹೊರಟುಹೋದನು. ಇದರಲ್ಲಿ ರಾಮನಿಗೆ ಸಂಬಂಧಿಸಿದ್ದು ಒಂದು ವರದ ವಿಷಯ. ಮತ್ತೊಂದು ವರದ ವಿಷಯ ಅವನಿಗೆ ಸಂಬಂಧಿಸಿದ್ದಲ್ಲ. ಆ ವರದ ವಿಷಯವೂ ಅವನಿಗೆ ಸಂಬಂಧಿಸಿದ್ದಿದ್ದಾದರೆ ಭರತನನ್ನು ಕರೆಯಿಸಿ ಪಟ್ಟಗಟ್ಟಿ ಕಾಡಿಗೆ ಹೋಗುತ್ತಿದ್ದನು. ರಾಮನು ಕಾಡಿಗೆ ಹೋಗಿ ಹದಿನಾಲ್ಕು ವರ್ಷಗಳ ಕಾಲ ಕಾಡಿನಲ್ಲಿರಬೇಕು . ಈ ವರವನ್ನು ನಿಜಗೊಳಿಸುವುದು ರಾಮನ ಧರ್ಮ ಮತ್ತು ರಾಮನ ಕರ್ತವ್ಯವಾಗಿದ್ದಿತು. ಅದರಂತೆಯೇ ಪಟ್ಟಾಭಿಷಿಕ್ತನಾಗಲಿದ್ದ ರಾಮನು ರಾಜ್ಯವನ್ನು ಪರಿತ್ಯಜಿಸಿ ಹೊರಟು ಹೋದನು. ಎರಡನೆಯ ವರವನ್ನು ಪೂರ್ಣಮಾಡಲು ದಶರಥನು ಭರತನನ್ನು ಒಡನೆಯೇ ಕರೆಯಿಸಿ ಅವನಿಗೆ ರಾಜ್ಯದ ಪಟ್ಟಗಟ್ಟಬೇಕಾಗಿತ್ತು. ಮುಂದೆ ಕೆಲವು ದಿನಗಳು ದಶರಥನು ಬದುಕಿದ್ದಿದ್ದರೆ ಏನಾಗುತ್ತಿತ್ತೋ ಏನೋ ತಿಳಿಯದು. ರಾಮನ ವಿಯೋಗಸಂಕಟದಲ್ಲಿಯೇ ರಾಜನು ಅಸುವನ್ನು ನೀಗಿದನು. ಆ ಸಮಯದಲ್ಲಿ ರಾಜಕುಮಾರರು ಯಾರೂ ಅಯೋಧ್ಯೆಯಲ್ಲಿರಲಿಲ್ಲ. ರಾಜ್ಯಾಡಳಿತದ ಜವಾಬ್ದಾರಿಯು ಸಂಪೂರ್ಣವಾಗಿ ಪುರೋಹಿತರಾದ ವಸಿಷ್ಠರ ಮೇಲೆ ಬಿತ್ತು. ಆಗವರು ತಮ್ಮ ಧರ್ಮವೇನೆಂಬುದನ್ನು ಯೋಚಿಸಬೇಕಾಯಿತು. ಧರ್ಮಶಾಸ್ತ್ರಾನುಸಾರವಾಗಿ ಹಿರಿಯ ಮಗನು ತಂದೆಯ ಅಪರಕರ್ಮಗಳನ್ನು ಮಾಡಬೇಕು. ಆದರೆ ಆ ಸಮಯದಲ್ಲಿ ಹಿರಿಯ ಮಗನನ್ನು ಕರೆಯಿಸುವ ಸಾಧ್ಯತೆಯಿಲ್ಲ. ಹಿರಿಯ ಮಗನು ಹದಿನಾಲ್ಕು ವರ್ಷ ಗಳ ವನವಾಸಕ್ಕೆ ಹೊರಟುಹೋಗಿದ್ದಾನೆ. ಆಗ ರಾಮನಿಗೆ ಪಿತೃವಾಕ್ಯ ಪರಿಪಾಲನೆಯೇ ಮುಖ್ಯವಾಗುತ್ತದೆ. ಉಳಿದ ಧರ್ಮಗಳು ಗೌಣ. ಇದನ್ನರಿತ ವಸಿಷ್ಠರು ರಾಮನನ್ನು ಕರೆಯಿಸುವ ಹವ್ಯಾಸಕ್ಕೂ ಹೋಗಲಿಲ್ಲ– ಭರತನನ್ನು ಕರೆಯಿಸಬೇಕಾದುದು ಅವರ ಮುಖ್ಯಕರ್ತವ್ಯವಾಗಿತ್ತು.

ಅಂತೆಯೇ ಭರತನನ್ನು ಕರೆಯಿಸಿದರು. ಅಪರಕ್ರಿಯೆಗಳೂ ನಡೆದುವು. ಮುಂದಿನ ಕರ್ತವ್ಯವೇನು? ರಾಜ್ಯಕ್ಕೆ ಒಬ್ಬ ರಾಜನನ್ನು ನೇಮಕಗೊಳಿಸ ಬೇಕು. ರಾಜನಾಗಲು ಸಂಪೂರ್ಣವಾದ ಹಕ್ಕುಗಳಿರುವುದು ರಾಮನಿಗೆ ಮಾತ್ರ. ಜ್ಯೇಷ್ಠಪುತ್ರನೇ ರಾಜ್ಯಕ್ಕೆ ಅಧಿಪತಿಯಾಗಬೇಕೆಂದು ಧರ್ಮ ಶಾಸ್ತ್ರಗಳು ಹೇಳುತ್ತವೆ. ಇಕ್ಷ್ವಾಕುಕುಲದ ಸಂಪ್ರದಾಯವೂ ಹೀಗೆಯೇ ಇದೆ. ಆದರೆ ಪ್ರಸಕ್ತಸಂದರ್ಭದಲ್ಲಿ ರಾಮನು ಬರುವಂತಿಲ್ಲ. ಅವನನ್ನು ಕರೆಯಿಸಲು ವಸಿಷ್ಠರಿಗೆ ಅಧಿಕಾರವೇ ಇಲ್ಲ. ಕೈಕೇಯಿಯು ವರಕೇಳಿದ್ದು, ರಾಜನ ಮೌನ, ರಾಮನ ಪ್ರವಾಸ—ಮುಂತಾದ ಸಕಲವಿಷಯಗಳೂ ವಸಿಷ್ಠ ರಿಗೆ ತಿಳಿದಿದ್ದುವು. ಹೀಗಿರುವಾಗ ಧರ್ಮಸಮ್ಮತವಾದ ಮಾರ್ಗದಲ್ಲಿ ತಾವು ಎಷ್ಟು ಅಧಿಕಾರವನ್ನು ಚಲಾಯಿಸಬಹುದೋ ಅಷ್ಟು ಮಾತ್ರ ಅಧಿಕಾರವನ್ನು ವಸಿಷ್ಠರು ಚಲಾಯಿಸಿದ್ದರು.

ಎರಡನೆಯದಾಗಿ:-ವರಕೊಟ್ಟವನು ಸತ್ತುಹೋದರೂ ವರಪಡೆದವಳು ಬದುಕಿದ್ದಾಳೆ. 'ಧರ್ಮಾತ್ಮರೆನಿಸಿದ ವಸಿಷ್ಠರು ರಾಜನಿತ್ತ ವರವನ್ನು ಪೊಳ್ಳುಮಾಡಿದರು'—ಎಂಬ ಲೇಶಾಂಶಭಾವನೆಯೂ ಕೈಕೇಯಿಗೆ ಉಂಟಾಗ ಕೂಡದು. ಹಾಗೆ ಮಾಡುವುದರಿಂದ ಸತ್ತುಹೋದ ರಾಜನಿಗೂ ಕಳಂಕ ತಪ್ಪದು. ಆದುದರಿಂದಲೇ ವಸಿಷ್ಠರು ಸಭಾಮಂಟಪಕ್ಕೆ ಭರತನನ್ನು ಕರೆ ಯಿಸಿ ಸರ್ವರ ಸಮ್ಮುಖದಲ್ಲಿ ರಾಜನಾಗುವಂತೆ ಅವನಿಗೆ ಹೇಳುತ್ತಾರೆ. ವಸಿಷ್ಠರು ತಮ್ಮ ಕರ್ತವ್ಯದಂತೆ ಮತ್ತು ಧರ್ಮಾನುಸಾರವಾಗಿ ಯಾವ ವಿಧವಾದ ಸಂಶಯಕ್ಕೂ ಆಸ್ಪದವಿಲ್ಲದ ರೀತಿಯಲ್ಲಿ ಮಾತನಾಡುತ್ತಾರೆ. ಭರತನಿಗೆ ತಾನು ರಾಜ್ಯಭಾರವನ್ನು ವಹಿಸುವುದು ಅಪರಾಧ—ಎಂಬ ಸಂದೇಹವು ಲೇಶಾಂಶವಾದರೂ ಉಂಟಾಗಕೂಡದು. ಈ ಭಾವನೆಯಿಟ್ಟು ವಸಿಷ್ಠರು ಎರಡು ವಾಕ್ಯಗಳನ್ನು ತಮ್ಮ ಮಾತಿನಲ್ಲಿ ಪ್ರಯೋಗಿಸಿದ್ದಾರೆ. **ನಾಜಹಾ-ತ್ಪಿತುರಾದೇಶಂ, ಪಿತ್ರಾ ಭ್ರಾತ್ರಾ ಚ ತೇ ದತ್ತಂ,** 'ರಾಮನು ತನ್ನ ತಂದೆಯಾದ ದಶರಥನ ಆದೇಶವನ್ನು ಪಾಲಿಸಿದನು. ಅದರಂತೆಯೇ ನೀನೂ ಪಾಲಿಸಬೇಕಾದುದು ಕರ್ತವ್ಯವಾಗಿದೆ. ತಂದೆಯಿಂದಲೂ ಅಣ್ಣನಿಂದಲೂ ಕೊಡಲ್ಪಟ್ಟ ರಾಜ್ಯವನ್ನು ಸ್ವೀಕಾರ ಮಾಡು'—ಈ ಎರಡು ಮಾತುಗಳನ್ನು ವಸಿಷ್ಠರಾಡದಿದ್ದರೆ-ಅಣ್ಣನಿಂದಲೂ ತಂದೆಯಿಂದಲೂ ಪರಿತ್ಯಕ್ತವಾದ

ರಾಜ್ಯವೆಂದೂ, ಕೈಕೇಯಿಯ ಮೋಹಕ್ಕೊಳಗಾದ ರಾಜನ ಆದೇಶದಂತೆ ರಾಮನು ಕಾಡಿಗೆ ಹೋದನೆಂದೂ ವಸಿಷ್ಠರು ಯಥಾವತ್ತಾಗಿ ಹೇಳಿದ್ದರೆ-ಭರತನನ್ನು ರಾಜನಾಗೆಂದು ಹೇಳುವ ಅವಕಾಶವೇ ಇರಲಿಲ್ಲ. ಪರ್ಯಾಯಾಂತರವಾಗಿ "ನೀನು ಸಿಂಹಾಸನಕ್ಕೆ ಯೋಗ್ಯನಲ್ಲ"ವೆಂದೇ ಹೇಳಿದಂತಾಗುತ್ತಿತ್ತು. ಹಾಗೆ ಹೇಳಿದ್ದಿದ್ದರೆ ವಸಿಷ್ಠರು ಎಲ್ಲ ಪಾಪಗಳನ್ನೂ ತಮ್ಮ ಮೇಲೆಯೇ ಹಾಕಿಕೊಳ್ಳಬೇಕಾಗಿತ್ತು. ಆದುದರಿಂದ ಅವರು ರಾಜನು ಕೈಕೇಯಿಗಿತ್ತ ಎರಡು ವರಗಳಲ್ಲಿ ಯಾವ ನ್ಯೂನತೆಯೂ ಸ್ವಲ್ಪವಾದರೂ ಉಂಟಾಗದ ರೀತಿಯಲ್ಲಿ ನಡೆದುಕೊಂಡಿರುತ್ತಾರೆ. ಭರತನು ಸಭಾಮಂಟಪದಲ್ಲಿ ಮಹಾತ್ಮರಾದ ವಸಿಷ್ಠರನ್ನು ನಿಂದಿಸಿದ್ದೇ ಇದಕ್ಕೆ ಸಾಕ್ಷಿಯಾಗಿದೆ. ಇಲ್ಲಿಗೆ ವಸಿಷ್ಠರ ಕರ್ತವ್ಯವು ಮುಗಿಯುತ್ತದೆ.

ಇಲ್ಲಿ ಭರತನು ವಸಿಷ್ಠರನ್ನು ನಿಂದಿಸಿದ್ದರಿಂದ ರಾಜ್ಯಭಾರವನ್ನು ವಹಿಸದಿದ್ದರೂ, ಮುಂದಿನ ಪೂರ್ಣಜವಾಬ್ದಾರಿಯನ್ನೂ ತನ್ನ ಮೇಲೆ ಹಾಕಿಕೊಂಡಂತಾಯಿತು.

ಇನ್ನು ಭರತನ ಕರ್ತವ್ಯ: ತನ್ನ ಧರ್ಮವೇನು? ತಾನು ಯಾವ ರೀತಿ ನಡೆಯಬೇಕೆಂಬುದನ್ನು ವಿವೇಚಿಸಿ ಮಾಡಬೇಕಾಗಿದೆ. ಅವನ ಧರ್ಮವೇನೆಂಬುದನ್ನು ಅವನ ದೃಷ್ಟಿಯಿಂದ ವಿವೇಚಿಸೋಣ. ಹಿಂದೆಯೇ ಹೇಳಿದಂತೆ ರಾಮನು ಅರಣ್ಯಕ್ಕೆ ಹೋಗುವ ಮೊದಲು ಭರತನನ್ನು ಕರೆಯಿಸಿ ರಾಜ್ಯದ ಪಟ್ಟಗಟ್ಟಿ ಅರಣ್ಯಕ್ಕೆ ಹೋಗಿದ್ದರೂ, ರಾಜನು ಸಾಯುವ ಮೊದಲು ಭರತನನ್ನು ಕರೆಯಿಸಿ ಪಟ್ಟಗಟ್ಟಿದ್ದರೂ–ಭರತನಿಗೆ ಯಾವ ಸಮಸ್ಯೆಯೂ ಉದ್ಭವಿಸುತ್ತಿರಲಿಲ್ಲ. ಆ ಸಮಯದಲ್ಲಾದರೂ ಭರತನು ರಾಜ್ಯಾಭಿಷೇಕಕ್ಕೆ ಒಪ್ಪಿಕೊಳ್ಳುತ್ತಿದ್ದನೇ? ಎಂಬುದು ಎರಡನೆಯ ವಿಷಯ. ಹಾಗೆ ಮಾಡಲು ಯಾರೂ ಯತ್ನಿಸಲಿಲ್ಲ. ರಾಮನು ಕಾಡಿಗೆ ಹೊರಟುಹೋದನು. ರಾಜನು ಸತ್ತುಹೋದನು. ಈಗ ಭರತನ ಕರ್ತವ್ಯವೇನು? ರಾಜನಿದ್ದಿದ್ದರೆ ವರದ ವಿಷಯವು ಭರತನಿಗೆ ಸಂಬಂಧಿಸುತ್ತಿತ್ತೋ ಏನೋ ತಿಳಿಯದು. ರಾಜನಿಲ್ಲದೇ ಇರುವುದರಿಂದ ವರದ ವಿಷಯವು ಭರತನಿಗೆ ಸಂಬಂಧಿಸುವುದು ಹೇಗೆ? ರಾಜನಿದ್ದಾಗ ಅವನು ಹೇಳದಿದ್ದರೂ ಅವನ ಮಾತನ್ನು ಸತ್ಯಮಾಡಲು ರಾಮನು ಕಾಡಿಗೆ ಹೊರಟುಹೋದನು. ಆದರೆ ರಾಜನು ಸಾಯುವವರೆಗೂ

ಭರತನನ್ನೂ ಕರೆಯಿಸಲಿಲ್ಲ; ರಾಜ್ಯಾಭಿಷಿಕ್ತನಾಗೆಂದೂ ಹೇಳಲಿಲ್ಲ. ಅಥವಾ ಪುರೋಹಿತ-ಮಂತ್ರಿ-ಅಮಾತ್ಯರೊಡನೆಯೂ ಸಹ ಭರತನಿಗೆ ಪಟ್ಟಗಟ್ಟ ಬೇಕೆಂದು ಹೇಳಿ ಸಾಯಲಿಲ್ಲ. ಆದುದರಿಂದ ಭರತನೀಗ ಆ ವರಗಳ ಸಂಬಂಧ ವನ್ನೇ ಬಿಟ್ಟು ತನ್ನ ಕರ್ತವ್ಯವೇನೆಂದು ಯೋಚಿಸಬೇಕಾದುದು ಧರ್ಮ ವಾಗಿದೆ. (ಸತ್ಪುರುಷರಾದ ನಮ್ಮ ಪೂರ್ವಜರು ತಮ್ಮ ಆಸೆ-ಆಕಾಂಕ್ಷೆಗಳೆಲ್ಲ ವನ್ನೂ ಬದಿಗೊತ್ತಿ ಕೇವಲ ಧರ್ಮದ ಹಿನ್ನೆಲೆಯಲ್ಲಿಯೇ ವರ್ತಿಸುತ್ತಿದ್ದರೆಂಬು ದನ್ನು ಮರೆಯಬಾರದು.) ಆದುದರಿಂದಲೇ ಭರತನಿಗೆ ರಾಜ್ಯಲಾಭದ ಲೋಭ ವುಂಟಾಗಲಿಲ್ಲ. ರಾಮನಂತೆಯೇ ಭರತನೂ ಸಹ ರಾಜ್ಯವನ್ನು ತೃಣೀಕರಿಸಿ ದನು. ಇದು ಅವನ ಧರ್ಮವಾಗಿತ್ತು. ಭರತನ ಧರ್ಮವಿವೇಚನೆ ಹೀಗಿದೆ: ತಂದೆಯ ನಂತರ ಅವನ ಜ್ಯೇಷ್ಠಪುತ್ರನು ರಾಜ್ಯದ ಅಧಿಕಾರವನ್ನು ವಹಿಸ ಬೇಕು. ಅವನ ಅನುಚರನಾಗಿ ತಾನೂ ಮತ್ತು ಅನುಜರೂ ಇರಬೇಕು. ಇದು ಧರ್ಮ. ವಸಿಷ್ಠರು ಹೇಳಿದ್ದಕ್ಕೆ ಕೋಪವೇಕೆ ಬಂತೆಂದರೆ ವಸಿಷ್ಠರು **ಪಿತ್ರಾ ಭ್ರಾತ್ರಾ ಚ ತೇ ದತ್ತಂ** ಎಂದು ಹೇಳಿದುದು ವರದಾನದ ಹಿನ್ನೆಲೆಯಲ್ಲಿ ನಿಜದಾಗಿದ್ದರೂ ಭರತನಿಗೆ ಆ ಇಬ್ಬರಲ್ಲಿ ಯಾರೊಬ್ಬರೂ ರಾಜ್ಯವನ್ನು ಪ್ರತ್ಯಕ್ಷವಾಗಿ ವಹಿಸಿಕೊಡಲಿಲ್ಲ. ಪ್ರಸಕ್ತಸಂದರ್ಭದಲ್ಲಿ ರಾಮನಿಂದ ಪರಿತ್ಯಕ್ತವಾದ ರಾಜ್ಯವಿದಾಗಿರುತ್ತದೆ. ರಾಮನು ಪರಿತ್ಯಜಿಸಿದುದನ್ನು ಭರತನು ಪಡೆಯಬಹುದೆಂಬ ನ್ಯಾಯವು ಎಲ್ಲಿಯೂ ಇಲ್ಲ. ಭರತನ ಸಿದ್ಧಾಂತವಿದು. ರಾಮನು ಕಾಡಿನಲ್ಲಿದ್ದರೂ ಸಂಪ್ರದಾಯಾನುಸಾರವಾಗಿ, ಧರ್ಮಶಾಸ್ತ್ರಗಳ ಅನುಸಾರವಾಗಿ ರಾಮನೇ ರಾಜ್ಯದ ರಾಜನು. ಅವನೇ ರಾಜ್ಯದ ವ್ಯವಸ್ಥಾಪ ಕನು. ಅವನ ನಿರ್ದೇಶದಂತೆ ನಾವು ನಡೆಯಬೇಕೇ ಹೊರತು ನಾನೆಂದಿಗೂ ರಾಜನಾಗಲು ಅರ್ಹನಲ್ಲ. ಇದು ಭರತನ ಧರ್ಮ. ಹೀಗೆ ಮಾಡದಿದ್ದರೆ ಭರತನು ಅಧರ್ಮಿಯಾಗುತ್ತಿದ್ದನು. ಆದುದರಿಂದಲೇ ಈ ಹಿಂದಿನ ಶ್ಲೋಕ ದಲ್ಲಿ "ನಾನೂ ಮತ್ತು ರಾಜ್ಯವೂ ರಾಮನದು" ಎನ್ನುತ್ತಾನೆ. ವಸಿಷ್ಠರು ನಿಂದೆಗೆ ಯೋಗ್ಯರೆಂಬ ಅಭಿಪ್ರಾಯ ವಾಲ್ಮೀಕಿಗಳಿಗಿಲ್ಲ. ವಿವೇಕದಿಂದ ವಿಚಾರಮಾಡಿದಾಗ ಭರತನೂ ವಸಿಷ್ಠರನ್ನು ನಿಂದಿಸುವ ಕಾರಣವಿಲ್ಲ. ಆದರೆ ಶ್ರೀರಾಮನ ಮೇಲಿನ ಪ್ರೀತಿಯಿಂದುಂಟಾದ ಕೋಪದಿಂದ ಅವನು ಹಾಗೆ ಹೇಳುತ್ತಾನೆ. ಅವನ ದೃಷ್ಟಿಯಿಂದ ಅವನ ತೀರ್ಮಾನ ಸರಿಯಾಗಿಯೇ

ಇದೆ. ಇಂತಹ ಧರ್ಮರಹಸ್ಯಗಳನ್ನು ಬಹುಸೂಕ್ಷ್ಮರೀತಿಯಲ್ಲಿ ಅಳವಡಿಸಿರುವ ವಾಲ್ಮೀಕಿಗಳು ಸರ್ವಕಾಲದಲ್ಲಿಯೂ ಪೂಜಾರ್ಹರೇ ಸರಿ.

ಏವಂ ಸಮಾಧಿನಾ ಯುಕ್ತಸ್ತೇಜಸಾಪ್ರತಿಮೇನ ಚ ।
ಶಿಕ್ಷಾಸ್ವರಸಮಾಯುಕ್ತಂ ಸುವ್ರತಶ್ಚಾಬ್ರವೀನ್ಮುನಿಃ ॥೨೨॥

-ಅಯೋಧ್ಯಾಕಾಂಡ, ೯೧ನೆಯ ಸರ್ಗ

ಭರದ್ವಾಜರು ಇಂದ್ರನನ್ನು ಲೋಕದ ಮನುಷ್ಯರನ್ನು ಕರೆಯುವಂತೆ 'ಇನ್ದ್ರ ಆಗಚ್ಛ' ಎಂದು ಕರೆದುಬಿಡಲಿಲ್ಲ. ಹಾಗೆ ಭರದ್ವಾಜರು ಕೂಗಿದರೆಂದೂ, ಅವರ ಕೂಗಿಗೆ ಇಂದ್ರನು ಬಂದುಬಿಟ್ಟನೆಂದೂ ಹೇಳಿದರೆ ನಗೆಪಾಟಲಾದೀತು. ಇದೊಂದು ಮಂತ್ರವಿಜ್ಞಾನವೆಂಬುದನ್ನು ಆಧುನಿಕವಿಜ್ಞಾನಿಗಳು ಮನಗೊಳ್ಳಬೇಕು. ಈಗಾಗಲೇ ಶಬ್ದಬ್ರಹ್ಮವೆಂಬುದೊಂದಿದೆಯೆಂಬ ನಿಶ್ಚಯಕ್ಕೆ ಕೆಲವು ವಿಜ್ಞಾನಿಗಳು ಬಂದಿದ್ದಾರೆ. ಆದರೆ ಈ ಶಬ್ದದಿಂದಲೇ ಮತ್ತು ಇದರ ಉಚ್ಚಾರಣೆಯಿಂದಲೇ ಅಘಟಿತಘಟನಾಸಾಮರ್ಥ್ಯವನ್ನು ಪಡೆಯಬಹುದೆಂಬುದನ್ನು ತಿಳಿಯಬೇಕಾದರೆ ಆಧುನಿಕ ವೈಜ್ಞಾನಿಕರು ಆರ್ಯವಿಜ್ಞಾನದ ಕಡೆಗೆ ಮನಸ್ಸನ್ನು ತಿರುಗಿಸಬೇಕು. ಭರದ್ವಾಜರು ದೇವತೆಗಳನ್ನು ಹೇಗೆ ಆಹ್ವಾನಿಸಿದರು? "ಸಮಾಧಿನಾ" ಮಂತ್ರೋಚ್ಚಾರಣೆಗೆ ಸಮಾಧಿಸ್ಥಿತಿಯಿರಬೇಕು. ಎಂದರೆ ಏಕಾಗ್ರತೆಯಿರಬೇಕು. ಮನಸ್ಸನ್ನು ಏಕಾಗ್ರಗೊಳಿಸುವ ಅಭ್ಯಾಸವೇ ನಮ್ಮಲ್ಲಿ ಲುಪ್ತವಾಗಿ ಹೋಗಿದೆ. ಜ್ಞಾನಿಗಳಲ್ಲಿ ಮಾತ್ರವೇ ಅದು ಉಳಿದುಕೊಂಡಿದೆ. ಆರ್ಯರ ವಿಜ್ಞಾನದಲ್ಲಿ ಯಾವುದನ್ನಾದರೂ ಸಾಧಿಸಬೇಕಾದರೆ–ಮುಖ್ಯವಾಗಿ ಚಿತ್ತೈಕಾಗ್ರತೆಯು ಅತ್ಯಾವಶ್ಯಕ. ಏಕೆಂದರೆ: ಇಲ್ಲಿ ಕೆಲಸ ಮಾಡುವುದು ರಾಸಾಯನಿಕ ಪದಾರ್ಥಗಳಲ್ಲ. ಮನಸ್ಸಿನ ಸ್ಥಿರತೆಯೇ ಇಲ್ಲಿ ಎಲ್ಲ ಕಾರ್ಯವನ್ನೂ ಮಾಡುವುದು. ಆದುದರಿಂದ ಚಿತ್ತೈಕಾಗ್ರತೆಯು ಅತಿಮುಖ್ಯವಾದುದು. ಎರಡನೆಯದಾಗಿ–"ಅಪ್ರತಿಮೇನ ತೇಜಸಾ" ಅಪ್ರತಿಮೇನ ಎಂಬುದಕ್ಕೆ ಎಣೆಯಿಲ್ಲದ, ಮಹತ್ತರವಾದ ಎಂದು ಅರ್ಥಹೇಳಬಹುದಾದರೂ ತೇಜಸಾ ಎಂಬುದಕ್ಕೆ ಅಪಾರ ಅರ್ಥವಿದೆ. ತೇಜಸ್ಸನ್ನು ಪಡೆಯಬೇಕಾದರೆ ಬ್ರಹ್ಮಚರ್ಯ-ತಪಸ್ಸು-ಸತ್ಯನಿಷ್ಠೆ-ಶಮ-

ದಮಾದಿಗಳು ಇತ್ಯಾದ್ಯನೇಕ ಉಪಕರಣಗಳಿವೆ. ಈ ತೇಜಸ್ಸು ದೈನ್ಯಕ್ಕೆ ಸೇರಿದ್ದಲ್ಲ; ಉಜ್ವಲತೆಗೆ ಸೇರಿದುದು. ಉಜ್ವಲ ತೇಜಸ್ಸು, ಇಂತಹ ತೇಜಸ್ಸಿದ್ದವರು ದೇವತೆಗಳನ್ನು ಕರೆದರೆ ಅವರು ಬಂದೇ ತೀರಬೇಕು. ಅವರು ಅಡಿಗೆ ಮಾಡಲು ಬರಬೇಕೆಂದರೆ ಅಡಿಗೆಮಾಡಲಿಕ್ಕೆ ಬರಬೇಕು. ಅಂತಹ ದಿವ್ಯವಾದ ಅದ್ಭುತವಾದ ತೇಜಸ್ಸದು. ಅಂತಹ ತೇಜಸ್ಸನ್ನೂ ಸಹ ಆರ್ಯನು, ಆರ್ಯರ ಧರ್ಮವನ್ನನುಸರಿಸುವವನು, ಆರ್ಯರ ಉಕ್ತಿಗಳಂತೆ ಅನುಷ್ಠಾನವುಳ್ಳವನು–ಪಡೆಯಬಹುದು. ಮೂರನೆಯದಾಗಿ: **"ಶಿಕ್ಷಾಸ್ವರಸಮಾಯುಕ್ತಂ"** ಇದು ಅತ್ಯಂತಮುಖ್ಯವಾದ ವಿಷಯ. ಭರದ್ವಾಜರು ದೇವತೆಗಳನ್ನು ಹಿಂದೆ ಹೇಳಿದಂತೆ **'ಇಂದ್ರ ಆಗಚ್ಛ' 'ಸೋಮ ಆಗಚ್ಛ'** ಎಂದು ಮಾತ್ರವೇ ಕರೆಯಲಿಲ್ಲ. ಅವರು ಹಾಗೆ ಕರೆದಿದ್ದರೆ ನಾವು ಕರೆದಷ್ಟೇ ಪ್ರಯೋಜನವಾಗುತ್ತಿತ್ತು. ಮಂತ್ರಪೂರ್ವಕವಾಗಿ ಆಹ್ವಾನಿಸಿದರು. ಆ ಮಂತ್ರಗಳ ಉಚ್ಚಾರಣೆಯು ಹೇಗಿತ್ತೆಂದರೆ ಶಿಕ್ಷಾ-ಸ್ವರಸಮಾಯುಕ್ತವಾಗಿದ್ದಿತು. **'ಶಿಕ್ಷ್ಯನ್ತೇ ಉಪದಿಶ್ಯನ್ತೇ ವರ್ಣಸ್ವರಾದಯಃ ಅನಯೇತಿ ಶಿಕ್ಷಾ ॥' 'ಶಿಕ್ಷಾ ವ್ಯಾಕರಣಂ ಛನ್ದೋ ನಿರುಕ್ತಂ ಜ್ಯೌತಿಷಂ ತಥಾ । ಕಲ್ಪಶ್ಚೇತಿ ಷಡಂಗಾನಿ ವೇದಸ್ಯಾಹುರ್ಮನೀಷಿಣಃ ॥** ವೇದಗಳ ವರ್ಣ-ಸ್ವರಗಳನ್ನು ಹೇಗೆ ಉಚ್ಚರಿಸಬೇಕೆಂಬುದನ್ನು ತಿಳಿಸುವುದೇ ವೇದಾಂಗಗಳಲ್ಲಿ ಮೊದಲನೆಯ ಅಂಗವಾದ ಶಿಕ್ಷಾ ಎಂಬ ಅಂಗದ ಉದ್ದೇಶ. ಅಕ್ಷರಗಳು ಹೇಗೆ ಹುಟ್ಟುವುವು? ಅವುಗಳ ಮೂಲಸ್ಥಾನಗಳು ಯಾವುವು? ಅವುಗಳ ಜಾತಿಯೇನು? ಎಂಬುದನ್ನು ತಿಳಿಸುವ ಸಲುವಾಗಿಯೇ ಶಿಕ್ಷಾ ಎಂಬ ಗ್ರಂಥವಿದೆ. ಸಂಸ್ಕೃತದಲ್ಲಿರುವ ಐವತ್ತು ಅಕ್ಷರಗಳೂ ಬೀಜಾಕ್ಷರಗಳು. ಅವುಗಳಿಗೆ ನಮ್ಮ ಶರೀರದಲ್ಲಿಯೇ ಪ್ರತ್ಯೇಕ-ಪ್ರತ್ಯೇಕ ಸ್ಥಾನಗಳಿವೆ. ಬ್ರಹ್ಮನಿಷ್ಠನಾದವನಿಗೆ ಅವುಗಳ ಸ್ಥಾನ ಮತ್ತು ಶಕ್ತಿಕ್ರಿಯೆಗಳು ತಿಳಿದಿರುತ್ತವೆ. ಈ ಬೀಜಾಕ್ಷರಗಳ ಜೋಡಾವಣೆಯೇ ಮಂತ್ರಗಳ ವಿನ್ಯಾಸ. ಈ ವಿನ್ಯಾಸವು ಅನಾದಿಯಾದುದು. ಈ ವಿನ್ಯಾಸವನ್ನು ಯಾರೊಬ್ಬರೂ ರಚಿಸುವ ಸಾಧ್ಯತೆಯೂ ಇಲ್ಲ. ರಚಿಸುವ ಅವಶ್ಯಕತೆಯೂ ಇಲ್ಲ. ಒಂದೇ ಒಂದು ಮಂತ್ರದಿಂದ

ಬ್ರಹ್ಮಾಂಡವನ್ನೂ ಭೇದಿಸಬಹುದು. ಆದರೆ ಆ ಮಹಾಮಂತ್ರದ ಪುನಶ್ಚರಣೆಗೆ ಈ ಶ್ಲೋಕದಲ್ಲಿ ಹೇಳಿರುವ ಹಿನ್ನೆಲೆಯಿರಬೇಕು. ಇನ್ನು ಸ್ವರಗಳ ವಿಷಯ. ಈಚೀಚೆಗೆ ಮಂತ್ರಗಳ ಪುಸ್ತಕಗಳು ಪ್ರಕಟವಾಗಿ ಯಾವನಾದರೂ ಓದಿ ಆ ಮಂತ್ರಗಳನ್ನು ಉಚ್ಚರಿಸಬಹುದಾಗಿದೆ. ಹಾಗೆ ಉಚ್ಚರಿಸಿದರೆ ಅಥವಾ ಓದಿದರೆ ಅವುಗಳು ಮಂತ್ರಗಳೆನಿಸುವುದಿಲ್ಲ. ವಿಜ್ಞಾನದ ಪರೀಕ್ಷೆಗೆ ಪ್ರಯೋಗ ಶಾಲೆಗಳಿರುವಂತೆ–ಆರ್ಯರು ನಿರ್ದೇಶಿಸಿರುವ ಒಂದು ಪ್ರಯೋಗಶಾಲೆ ಈ ಮಂತ್ರಗಳ ಅಧ್ಯಯನ-ಅಧ್ಯಾಪನಗಳಿಗೂ ಅವಶ್ಯಕವಾಗಿರಬೇಕು. ಸಾಧಾರಣವಾಗಿ ನಾವು ಮಾತನಾಡುವಾಗಲೇ 'ದಯಮಾಡಿಸಿ' ಎಂಬುದಕ್ಕೆ ನಮ್ಮ ಧ್ವನಿಯನ್ನು ಬದಲಾಯಿಸಿ ವಿರೋಧವಾದ ಮತ್ತು ಪರವಾದ ಎರಡು ಅರ್ಥಗಳನ್ನೂ ಹೇಗೆ ಮಾಡಬಹುದೋ–ಅದೇ ರೀತಿಯಲ್ಲಿ ಮಂತ್ರಗಳ ಉಚ್ಚಾರಣೆ ಮಾಡುವಾಗ ಸ್ವರಗಳು ವ್ಯತ್ಯಾಸವಾದರೆ ದೇವತೆಗಳು ಸಮೀಪಕ್ಕೆ ಬರುವ ಬದಲಾಗಿ ನಮ್ಮನ್ನೇ ಧ್ವಂಸಮಾಡಿಬಿಡುವರು.

ದುಷ್ಟಃ ಶಬ್ದಃ ಸ್ವರತೋ ವರ್ಣತೋ ವಾ ಮಿಥ್ಯಾಪ್ರಯುಕ್ತೋ
ನ ತಮರ್ಥಮಾಹ ।
ಸ ವಾಗ್ವಜ್ರೋ ಯಜಮಾನಂ ಹಿನಸ್ತಿ ಯಥೇನ್ದ್ರಶತ್ರುಃ
ಸ್ವರತೋಽಪರಾಧಾತ್ ॥

ಉದಾತ್ತಾದಿಸ್ವರಗಳು, ಅಕಾರಾದಿವರ್ಣಗಳು–ಇವುಗಳಲ್ಲಿ ದೋಷವುಳ್ಳ (ದೋಷಯುಕ್ತವಾದ ಸ್ವರ-ವರ್ಣಗಳುಳ್ಳ) ಮಂತ್ರರೂಪವಾದ ಶಬ್ದವು ತನ್ನ ಸರಿಯಾದ ಅರ್ಥವನ್ನು ಹೇಳದೇ ಸುಳ್ಳಾಗಿ ಪರಿಣಮಿಸುತ್ತದೆ. ಮಾತಿನ ವಜ್ರದಂತಿರುವ ಆ ಮಂತ್ರವು ಯಜಮಾನನಿಗೆ ಹಿಂಸೆಯನ್ನು ಉಂಟು ಮಾಡುತ್ತದೆ. ತ್ವಷ್ಟೃವು ಇಂದ್ರನಿಗೆ ಶತ್ರುವಾಗುವಂತಹ (ಇಂದ್ರನನ್ನು ಕೊಲ್ಲುವಂತಹ) ಮಗನನ್ನು ಪಡೆಯಲು ಮಾಡಿದ ಯಾಗದಲ್ಲಿ ಇಂದ್ರನಿಗೆ ಶತ್ರುವೆಂಬ ಸ್ವರದಲ್ಲಿ ಆದ ಸ್ವರವ್ಯತ್ಯಾಸದಿಂದ ಇಂದ್ರನಿಂದ ಕೊಲ್ಲಲ್ಪಡುವ ವೃತ್ರನು ಹುಟ್ಟುವಂತಾಯಿತು. ಆದುದರಿಂದ ಈ ಮಂತ್ರಗಳ ವಿಷಯವಾಗಿ ಯಾರೂ ಸಂಶಯಪಡಬೇಕಾಗಿಲ್ಲ. ಭರದ್ವಾಜಾಶ್ರಮದಲ್ಲಿ ನಡೆದಿದ್ದು ಕಟ್ಟು ಕತೆಯಿರಬಹುದೆಂದು ಸಂದೇಹಿಸಬೇಕಾಗಿಯೂ ಇಲ್ಲ. ಮಂತ್ರಗಳಿಗೆ ಶಕ್ತಿಯು ಹಿಂದೆಯೂ ಇತ್ತು; ಇಂದೂ ಇದೆ; ನಾಳೆಯೂ ಇರುತ್ತದೆ.

ಆದರೆ ಅದನ್ನು ಪುನಶ್ಚರಣೆಮಾಡುವವರ ಏಕಾಗ್ರತೆ, ತೇಜಸ್ಸು, ಶಿಕ್ಷಾ-ಸ್ವರಯುಕ್ತವಾದ ಉಚ್ಚಾರಣೆ–ಇವುಗಳಿಗೆ ಅನುಸಾರವಾಗಿ ಅದು ಫಲಕೊಡುತ್ತದೆ.

—o—

ಕಚ್ಚಿದಷ್ಟಾದಶಾನ್ಯೇಷು ಸ್ವಪಕ್ಷೇ ದಶ ಪಞ್ಚ ಚ ।
ತ್ರಿಭಿಸ್ತ್ರಿಭಿರವಿಜ್ಞಾತೈರ್ವೇತ್ಸಿ ತೀರ್ಥಾನಿ ಚಾರಕೈಃ ॥೩೬॥

ಅಯೋಧ್ಯಾಕಾಂಡ-೧೦೦ನೆಯ ಸರ್ಗ

ಇಲ್ಲಿ ರಾಮನು ರಾಜ್ಯಾಡಳಿತಕ್ಕೆ ಬೇಕಾಗುವ ಅಧಿಕಾರವರ್ಗದವರನ್ನು ಕುರಿತು ಹೇಳುತ್ತಾನೆ. ರಾಜ್ಯಾಡಳಿತದಲ್ಲಿ ಅತಿಮುಖ್ಯರಾದವರು ಹದಿನೆಂಟು ಮಂದಿ. ಆದರೆ ತನ್ನ ಕಡೆಯಿರುವ ಹದಿನೆಂಟು ಮಂದಿಯಲ್ಲಿ ಮೂವರ ಮೇಲೆ ಗುಪ್ತಚಾರರನ್ನಿಡಬಾರದೆಂಬುದು ರಾಮನ ಅಭಿಪ್ರಾಯವಾಗಿದೆ. ಮಂತ್ರಿ, ಪುರೋಹಿತ, ಯುವರಾಜ-ಇವರ ಮೇಲೆ ಗೂಢಚಾರ ರನ್ನಿಡಬಾರದು. ಇದು ರಾಜನೀತಿ. ಮಂತ್ರಿ, ಪುರೋಹಿತ, ಯುವರಾಜರು ಅನುದಿನವೂ ರಾಜನ ಸಮೀಪದಲ್ಲಿಯೇ ಇರುವುದರಿಂದ ಇವರ ಇಂಗಿತವೇನೆಂಬುದನ್ನು ರಾಜನಿಗೇ ತಿಳಿಯಲು ಶಕ್ಯವಿದೆ. ಎರಡನೆಯದಾಗಿ ಮಂತ್ರಿ-ಪುರೋಹಿತರು ಕುಲಕ್ರಮಾಗತವಾಗಿ ಬಂದವರು. ಸಾಮಾನ್ಯವಾಗಿ ರಾಜನ ತಮ್ಮ ಅಥವಾ ರಾಜನ ಹಿರಿಯ ಮಗ ಯುವರಾಜನಾಗುತ್ತಾನೆ. ಇವನ ವಿಷಯದಲ್ಲಿ ಗೂಢಚಾರರನ್ನಿಡುವ ಅವಶ್ಯಕತೆಯಿಲ್ಲ. ಈ ಮೂವರನ್ನು ಬಿಟ್ಟು ಉಳಿದವರ ವಿಷಯದಲ್ಲಿ ರಾಜನು ಜಾಗರೂಕ ನಾಗಿರಬೇಕೆಂಬುದಕ್ಕೆ ನೀತಿಶಾಸ್ತ್ರವು ಹೀಗೆ ಹೇಳುತ್ತದೆ.

ಚಾರಾನ್ವಿಚಾರಯೇತ್ತೀರ್ಥೇಷ್ವಾತ್ಮನಶ್ಚ ಪರಸ್ಯ ಚ ।
ಪಾಷಣ್ಡಾದೀನವಿಜ್ಞಾತಾನನ್ಯೋನ್ಯಮಿತರೈರಪಿ ।
ಮನ್ತ್ರಿಣಂ ಯುವರಾಜಂ ಚ ಹಿತ್ವಾ ಸ್ವೇಷು ಪುರೋಹಿತಮ್ ॥

ಪಾಷಣ್ಡ (ನಾಸ್ತಿಕ) ಮೊದಲಾದ ವೇಷಧಾರಿಗಳಾದ ಗೂಢಚಾರರನ್ನು ಬೇರೆಯವರಿಗೆ ತಿಳಿಯದಂತೆಯೂ, ಅನ್ಯೋನ್ಯವಾಗಿ ತಿಳಿಯದಂತೆಯೂ ಶತ್ರುಪಕ್ಷದ ಮಂತ್ರಿ ಮೊದಲಾದ ಹದಿನೆಂಟು ಜನರ–ತನ್ನ ಪಕ್ಷದ ಮಂತ್ರಿ,

ಯುವರಾಜ ಮತ್ತು ಪುರೋಹಿತ ಇವರನ್ನು ಬಿಟ್ಟು ಉಳಿದ ಹದಿನೈದು ಜನರ ವಿಷಯಗಳನ್ನು ತಿಳಿಯಲು ನೇಮಿಸಬೇಕು. ಮಂತ್ರಿಯೇ ಮೊದಲಾದ ಹದಿನೆಂಟು ಮಂದಿ ಅಧಿಕಾರಿಗಳ ಸಮೂಹಕ್ಕೆ ತೀರ್ಥವೆಂದು ಹೆಸರು.

ಯೋನೌ ಜಲಾವತಾರೇ ಚ ಮನ್ತ್ರ್ಯಾದ್ಯಷ್ಟಾದಶಸ್ವಪಿ ।
ಪುಣ್ಯಕ್ಷೇತ್ರೇ ತಥಾ ಪಾತ್ರೇ ತೀರ್ಥಂ ಸ್ಯಾದ್ದರ್ಶನೇಷ್ವಪಿ ॥

[ಹಲಾಯುಧಃ]

ಯೋನಿ, ನೀರಿಗೆ ಇಳಿಯುವ ಪ್ರದೇಶ (ಸ್ನಾನಘಟ್ಟ), ಮನ್ತ್ರಿ ಮೊದಲಾದ ಹದಿನೆಂಟು ಜನರು, ಪುಣ್ಯಕ್ಷೇತ್ರ, ಪಾತ್ರೆ ಮತ್ತು ಶಾಸ್ತ್ರಗಳು ಈ ಅರ್ಥಗಳಲ್ಲಿ ತೀರ್ಥಶಬ್ದವಿದೆ.

ಹದಿನೆಂಟು ಅಧಿಕಾರಿಗಳು ಯಾರೆಂಬುದನ್ನು ರಾಮನು ಹೇಳದಿದ್ದರೂ– ನೀತಿಶಾಸ್ತ್ರದಿಂದ ನಾವಿದನ್ನು ತಿಳಿಯಬಹುದಾಗಿದೆ.

ಮಂತ್ರಿ, ಪುರೋಹಿತ, ಯುವರಾಜ, ಸೇನಾಪತಿ, ದೌವಾರಿಕ, ಅಂತರ್ವಂಶಿಕ, ಕಾರಾಗಾರಾಧಿಕೃತ, ಅರ್ಥಸಂಚಯಕೃತ್, ಕಾರ್ಯನಿಯೋಜಕ, ಪ್ರಾಡ್ವಿವಾಕ, ಸೇನಾನಾಯಕ, ನಗರಾಧ್ಯಕ್ಷ, ಕರ್ಮಾಂತಿಕ, ಸಭ್ಯ, ಧರ್ಮಾಧ್ಯಕ್ಷ, ದಣ್ಡಪಾಲ, ದುರ್ಗಪಾಲ, ರಾಷ್ಟ್ರಾಂತಪಾಲ.

೧) ಮಂತ್ರಿ, ೨) ಪುರೋಹಿತ, ೩) ಯುವರಾಜ, ೪) ಸೇನಾಪತಿ– ಇವರ ವಿಷಯವಾಗಿ ವಿವರಣೆ ಬೇಕಾಗಿಲ್ಲ. ಈಗಲೂ ಸಹ ನಾವು ಈ ಹೆಸರುಗಳನ್ನೇ ಉಪಯೋಗಿಸುತ್ತಿದ್ದೇವೆ. ಯದ್ಯಪಿ ಪುರೋಹಿತನು ಇಂದಿನ ರಾಜ್ಯಾಂಗದಲ್ಲಿಲ್ಲದಿದ್ದರೂ ಪುರೋಹಿತಶಬ್ದವು ಸುಲಭವಾಗಿ ಅರ್ಥವಾಗುತ್ತದೆ. ೫) **ದೌವಾರಿಕ**:-ಅಂತಃಪುರ, ಹೆಬ್ಬಾಗಿಲು, ಸಭಾಮಂದಿರ ಮುಂತಾದೆಡೆಗಳಲ್ಲಿ ಬಾಗಿಲು ಕಾಯುವ ರಾಜಭಟರುಗಳ ನಾಯಕ ಅರ್ಥಾತ್ ಪಹರೆಯುವರ ನಾಯುಕ (Chief Warder) **೬) ಅನ್ತರ್ವಂಶಿಕ** ಅಂತಃಪುರಕಾರ್ಯನಿರ್ವಾಹಕ, ಮನವಾರ್ತೆಗಾರ (Chamberlain) ೭) **ಕಾರಾಗಾರಾಧಿಕೃತ**:-ಬಂದಿಖಾನೆಗಳ ಮುಖ್ಯಾಧಿಕಾರಿ. (Superintendent of Jails) **೮) ಅರ್ಥಸಂಚಯಕೃತ್:-** **ಕೋಶಾಧಿಕಾರಿ ಅಥವಾ ಧನಾಧ್ಯಕ್ಷ.** (The Chancellor of the Exchequer). **೯) ಕಾರ್ಯನಿಯೋಜಕ:–ರಾಜಾಜ್ಞೆಯನ್ನು**

ಪ್ರಚುರಪಡಿಸುವವನು ಅಥವಾ ರಾಜಾಜ್ಞೆಯನ್ನು ಕಾರ್ಯರೂಪಕ್ಕೆ ತರುವವನು. ಪ್ರಭುತ್ವದ ನಿರ್ಣಯವನ್ನು ಘೋಷಣೆ ಮಾಡುವವನು. (The Herald) ೧೦) ಪ್ರಾಡ್ವಿವಾಕಃ-ವ್ಯವಹಾರಪ್ರತಿಪಾದಕನು.

ವಿವಾದೇ ಪೃಚ್ಛತಿ ಪ್ರಶ್ನಂ ಪ್ರತಿಪ್ರಶ್ನಂ ತಥೈವ ಚ।
ಪ್ರಿಯಪೂರ್ವಂ ಪ್ರಾಗ್ವದತಿ ಪ್ರಾಡ್ವಿವಾಕಸ್ತತಃ ಸ್ಮೃತಃ ॥

ಇಬ್ಬರ ವಿವಾದದಲ್ಲಿ ಪ್ರಶ್ನೆ-ಪ್ರತಿಪ್ರಶ್ನೆಗಳನ್ನು ಹಾಕಿ ನಿಶ್ಚಯಾಂಶವನ್ನು ಹೊರಗೆಡಹಲು ಯತ್ನಿಸುತ್ತಾನೆ. ಕಕ್ಷಿ-ಪ್ರತಿಕಕ್ಷಿಗಳಿಬ್ಬರನ್ನೂ ಪ್ರೀತಿಯಿಂದಲೇ ಮಾತನಾಡಿಸುತ್ತಾನೆ. ಇವನಿಗೆ ಪ್ರಾಡ್ವಿವಾಕನೆಂದು ಹೆಸರು. (The Government Advocate) ೧೧) **ಸೇನಾ ನಾಯಕ ಅಥವಾ ಸೇನೆಗಳಿಗೆ ಜೀವಿತಭೃತಿದಾನಾಧ್ಯಕ್ಷ:** ಸೈನ್ಯಗಳಿಗೆ ಮಾಸಾಶನ-ದೈನಂದಿನಭತ್ಯಾದಿಗಳ ವ್ಯವಸ್ಥಾಪಕನು. (The Officer disbursing the salaries of army men) ೧೨) **ನಗರಾಧ್ಯಕ್ಷ:**-ಕೊತ್ವಾಲನು (Mayor or the Chairman of the Town or Village) ೧೩) **ಕರ್ಮಾನ್ತಿಕ:**- ಸೈನಿಕಶಾಖೆಯನ್ನು ಬಿಟ್ಟು ರಾಜ್ಯದ ಉಳಿದ ಅಧಿಕಾರಿಗಳಿಗೆ ಮಾಸಾಶನವನ್ನು ಹಂಚುವ ಸಲುವಾಗಿ ರಾಜ್ಯದ ಕೋಶಾಧಿಕಾರಿಯಿಂದ ಹಣಪಡೆಯುವವನು. (The officer drawing the money from the state exchequer to disburse the workmen's Wages) ೧೪) ಸಭ್ಯ:- ರಾಜಸಭಾಧ್ಯಕ್ಷ. (ದರ್ಬಾರ್ ಭಕ್ಷಿ). ಸಭೆಯನ್ನು ವ್ಯವಸ್ಥಿತವಾಗಿ ನಡೆಸುವವನು. ಮಂತ್ರಿ-ಅಮಾತ್ಯ-ಪುರೋಹಿತರಿಗೆ ಯಥೋಚಿತವಾದ ಆಸನಗಳನ್ನು ಸಿದ್ಧಗೊಳಿಸುವವನು. ಸಭೆಗೆ ಯಾರು ಬರಬಹುದು ಮತು ಯಾರು ಬರಬಾರದೆಂಬುದನ್ನು ನಿರ್ದೇಶಿಸುವವನು. ೧೫) **ಧರ್ಮಾಧ್ಯಕ್ಷ:** ಎರಡು ಪಕ್ಷಗಳ ಅಹವಾಲನ್ನು ಕೇಳಿ ಪ್ರತಿಯೊಂದು ಪಕ್ಷದ ಹೇಳಿಕೆಗಳನ್ನೂ ಧರ್ಮಮೂಲವಾಗಿ ಪರಿಷ್ಕರಿಸಿ ತೀರ್ಪು ಹೇಳುವವನು. (The Judge) ೧೬) **ದಣ್ಡಪಾಲ:** ಅಪರಾಧಮಾಡಿದ ಜನರಿಗೆ ರಾಜಾಜ್ಞಾನುಸಾರವಾಗಿ ಶಿಕ್ಷೆಗಳನ್ನು ಕೊಡಲು ವ್ಯವಸ್ಥೆ ಮಾಡುವವನು. (The executor of punihsments) ೧೭) **ದುರ್ಗಪಾಲ:**-ಗಿರಿ, ಜಲ, ವನ ಮೊದಲಾದ

ದುರ್ಗಗಳ ರಕ್ಷಣಾವ್ಯವಸ್ಥಾಪಕನು. (The officer entrusted with the construction and maintainance of forfications) ೧೮) ರಾಷ್ಟ್ರಾನ್ತಪಾಲ:-ರಾಜ್ಯದ ನಾಲ್ಕು ದಿಕ್ಕುಗಳಲ್ಲಿರುವ ಎಲ್ಲೆಗಳ ರಕ್ಷಣೆಯ ವ್ಯವಸ್ಥಾಪಕನು. (The protector of the borders of a Kingdom)

—o—

ದಶ ಪಞ್ಚ ಚತುರ್ವರ್ಗಾನ್ಸಪ್ತವರ್ಗಂ ಚ ತತ್ತ್ವತಃ ।
ಅಷ್ಟವರ್ಗಂ ತ್ರಿವರ್ಗಂ ಚ ವಿದ್ಯಾಸ್ತಿಸ್ರಶ್ಚ ರಾಘವ ॥೬೮॥

ಇನ್ದ್ರಿಯಾಣಾಂ ಜಯಂ ಬುದ್ಧ್ವಾ ಷಾಡ್ಗುಣ್ಯಂ ದೈವಮಾನುಷಮ್ ।
ಕೃತ್ಯಂ ವಿಂಶತಿವರ್ಗಂ ಚ ತಥಾ ಪ್ರಕೃತಿಮಣ್ಡಲಮ್ ॥೬೯॥

ಯಾತ್ರಾದಣ್ಡವಿಧಾನಂ ಚ ದ್ವಿಯೋನೀ ಸನ್ಧಿವಿಗ್ರಹೌ ।
ಕಚ್ಚಿದೇತಾನ್ಮಹಾಪ್ರಾಜ್ಞ ಯಥಾವದನುಮನ್ಯಸೇ ॥೭೦॥

-ಅಯೋಧ್ಯಾಕಾಂಡ ಸರ್ಗ-೧೦೦

ರಾಮನೂ ನೀತಿಶಾಸ್ತ್ರಜ್ಞನು; ಭರತನೂ ನೀತಿಶಾಸ್ತ್ರಜ್ಞನು. ಆದುದರಿಂದ ಕೇವಲ ಸಂಖ್ಯಾಸಂಜ್ಞೆಗಳನ್ನು ರಾಮನು ಹೇಳಿದ್ದರಿಂದಲೇ ಭರತನದನ್ನು ಅರ್ಥಮಾಡಿಕೊಂಡನು. ನೀತಿಶಾಸ್ತ್ರಗಳನ್ನು ತಿಳಿದಿರುವವರೆಲ್ಲರೂ ಈ ಸಂಖ್ಯೆಗಳನ್ನು ಬಹುಸುಲಭವಾಗಿ ಅರ್ಥಮಾಡಿಕೊಳ್ಳುತ್ತಾರೆ. ಈ ವಿಧ ವಾದ ಸಂಜ್ಞೆಗಳು ಪ್ರತಿಯೊಂದು ಶಾಸ್ತ್ರಗಳಲ್ಲಿಯೂ ಇವೆ. ಆದರೆ ಇತ್ತೀಚೆಗೆ ಅನೇಕನೀತಿಶಾಸ್ತ್ರಗಳು ಹುಟ್ಟಿರುವುದರಿಂದ ರಾಮನು ಹೇಳಿದ ಸಂಖ್ಯೆಗಳಿಗೆ ಇದೇ ಅರ್ಥವೆಂದು ನಿರ್ಧರಿಸಲು ಸ್ವಲ್ಪ ಕಷ್ಟವಾಗುತ್ತದೆ. ಆದರೂ ಮನುಸ್ಮೃತಿಯನ್ನನುಸರಿಸಿ ರಾಮನು ಈ ಸಂಖ್ಯೆಗಳನ್ನು ಹೇಳಿರಬಹುದೆಂದು ಊಹಿಸಬಹುದಾಗಿದೆ. ಮನುಧರ್ಮಶಾಸ್ತ್ರವೇ ಧರ್ಮಸ್ಮೃತಿಗಳಲ್ಲಿ ಮುಖ್ಯವಾದುದು. ವ್ಯಾಖ್ಯಾನಕಾರರ ಅಭಿಪ್ರಾಯವನ್ನೂ ಅನುಸರಿಸಿ ಈ ಕೆಳಗೆ ಕಂಡಂತೆ ವಿವರಣೆಯನ್ನು ಕೊಡಲಾಗಿದೆ.

ದಶ: ಹತ್ತು (ರಾಜವ್ಯಸನಗಳು)

ಮೃಗಯಾಕ್ಷೋ ದಿವಾಸ್ವಾಪಃ ಪರಿವಾದಃ ಸ್ತ್ರಿಯೋ ಮದಃ ।
ತೌರ್ಯತ್ರಿಕಂ ವೃಥಾಟ್ಯಾ ಚ ಕಾಮಜೋ ದಶಕೋ ಗುಣಃ ॥

ಬೇಟೆ, ಜೂಜು, ಹಗಲಿನಲ್ಲಿ ನಿದ್ದೆಮಾಡುವುದು, ಪರನಿಂದೆ, ಸ್ತ್ರೀಯರಲ್ಲಿ ಆಸಕ್ತಿ, ಮದ, (ಮದ್ಯದಿಂದ) ನೃತ್ಯ-ಗೀತ-ವಾದ್ಯಗಳು, ಸುಮ್ಮನೆ ಅಲೆಯುವಿಕೆ–ಈ ಹತ್ತು ಕಾಮದಿಂದ ಸಂಭವಿಸುವ ವ್ಯಸನಗಳು.

ಕಾಮನ್ದಕೀಯ ನೀತಿಶಾಸ್ತ್ರದ ಪ್ರಕಾರ ಹತ್ತು ಶತ್ರುಗಳು.

ಲುಬ್ಧಃ ಕ್ರೂರೋಽಲಸೋಽಸತ್ಯಃ ಪ್ರಮಾದೀ ಭೀರುರಸ್ಥಿರಃ ।
ಮೂಢೋಽನಯೋಽವಮನ್ತಾ ಚ ಸುಖಚ್ಛೇದ್ಯೋ ರಿಪುರ್ಮತಃ ॥

(ಮನುಸ್ಮೃತಿಃ)

ಲೋಭ (ಅತ್ಯಾಸೆ), ಕ್ರೌರ್ಯ, ಸೋಮಾರಿತನ, ಸುಳ್ಳುಹೇಳುವುದು, ತಪ್ಪಿ ನಡೆಯುವುದು, ಬೆದರಿಕೆ, ಚಾಂಚಲ್ಯ, ದಡ್ಡತನ, ಅನೀತಿ, ಅವಮಾನಗೊಳಿಸುವುದು–ಈ ಹತ್ತು ದೋಷಗಳುಳ್ಳ ಶತ್ರುಗಳನ್ನು ಸುಖವಾಗಿ ನಾಶಪಡಿಸಬಹುದು.

ಪಞ್ಚ: ಐದು (ದುರ್ಗಗಳು)

ಔದಕಂ ಪಾರ್ವತಂ ವಾರ್ಕ್ಷಮೈರಿಣಂ ಧಾನ್ವನಂ ತಥಾ ।
ಶಸ್ತಂ ಪ್ರಶಸ್ತಮತಿಭಿರ್ದುರ್ಗಂ ದುರ್ಗೋಪಚಿನ್ತಕೈಃ ॥

(ಮನುಸ್ಮೃತಿಃ)

ಜಲದುರ್ಗ (ಅಗಳು, ನದಿ ಮೊದಲಾದುವು), ಪರ್ವತದುರ್ಗ–ಬೆಟ್ಟಗಳ ಸಾಲು, (ಬೆಟ್ಟಗಳ ಮೇಲಿರುವ ಕೋಟೆ ಮೊದಲಾದುವು) ವೃಕ್ಷದುರ್ಗ–ಕಾಡು, ಐರಿಣದುರ್ಗ (ಜೌಗುಭೂಮಿ), ಧಾನ್ವನದುರ್ಗ (ಮರುಭೂಮಿ)– ಈ ಐದು ದುರ್ಗಗಳು.

ಪಞ್ಚ: (ಐದು ವಿಧ ವೈರಗಳು)

ಸಾಪತ್ನಂ ವಸ್ತುಜಂ ಸ್ತ್ರೀಜಂ ವಾಗ್ಜಾತಮಪರಾಧಜಮ್ ।
ವೈರಪ್ರಭೇದನಿಪುಣೈರ್ವೈರಂ ಪಞ್ಚವಿಧಂ ಸ್ಮೃತಮ್ ॥

(ಕಾಮನ್ದಕಃ)

ವೈರವು ಸಾಪತ್ನಂ (ರಾಜ್ಯದ ಒಡೆತನದ ಸಂಬಂಧದಲ್ಲಿ ಉಂಟಾದುದು), ವಸ್ತುಜಂ (ಯಾವುದಾದರೂ ವಸ್ತುವಿಗೆ ಸಂಬಂಧಿಸಿದುದು), ಸ್ತ್ರೀಜಂ (ಹೆಣ್ಣಿನ ನಿಮಿತ್ತದಿಂದಾದುದು), ವಾಗ್ಜಾತಂ (ಮಾತಿನಿಂದ

ಉಂಟಾದುದು), ಅಪರಾಧಜಂ (ತಪ್ಪಿನಿಂದ ಸಂಭವಿಸಿದುದು)–ಹೀಗೆ ಐದು ಬಗೆಯಾಗಿವೆ.

ಚತುರ್ವರ್ಗ (ನಾಲ್ಕು ವರ್ಗ).

ಸಾಮ ದಾನಂ ಚ ಭೇದಶ್ಚ ದಣ್ಡಶ್ಚೇತಿ ಚತುರ್ವಿಧಮ್

(ಕಾಮನ್ದಕಃ)

ಸಾಮ-ದಾನ-ಭೇದ-ದಂಡಗಳೆಂಬ ನಾಲ್ಕು ಉಪಾಯಗಳು. ಅಥವಾ ನಾಲ್ಕು ಬಗೆಯ ಮಿತ್ರರು:-

ಔರಸಂ ತಂತುಸಮ್ಬನ್ಧಂ ತಥಾ ವಂಶಕ್ರಮಾಗತಮ್ ।
ರಕ್ಷಿತಂ ವ್ಯಸನೇಭ್ಯಶ್ಚ ಮಿತ್ರಂ ಜ್ಞೇಯಂ ಚತುರ್ವಿಧಮ್ ॥

(ಕಾಮನ್ದಕಃ)

ಔರಸ (ಮನಸ್ಸಿನ ಪ್ರೀತಿಯುಳ್ಳವನು), ತಂತುಸಮ್ಬನ್ಧ (ತನ್ನ ವಂಶದವನು), ವಂಶಕ್ರಮಾಗತ (ಇವನ ತಂದೆಗೆ ಅವನ ತಂದೆ ಸ್ನೇಹಿತನೆಂಬಂತೆ ವಂಶದ ಪರಂಪರೆಯಿಂದ ಮಿತ್ರನಾದವನು), ರಕ್ಷಿತ (ಕಷ್ಟಗಳಿಂದ ರಕ್ಷಿಸಲ್ಪಟ್ಟು ಮಿತ್ರನಾದವನು–ಹೀಗೆ ಮಿತ್ರರು ನಾಲ್ಕು ಬಗೆಯವರಾಗಿರುತ್ತಾರೆ.

ಹಣಕ್ಕೆ ಸಂಬಂಧಿಸಿದ ರಾಜಧರ್ಮದ ನಾಲ್ಕು ಬಗೆಗಳು ಮತ್ತು ಅದರ ವಿನಿಯೋಗ.

ನ್ಯಾಯೇನಾರ್ಜನಮರ್ಥಸ್ಯ ರಕ್ಷಣಂ ವರ್ಧನಂ ತಥಾ ।
ಸತ್ಪಾತ್ರೇ ಪ್ರತಿಪತ್ತಿಶ್ಚ ರಾಜ್ಯವೃತ್ತಂ ಚತುರ್ವಿಧಮ್ ॥

(ಕಾಮನ್ದಕಃ)

ನ್ಯಾಯದಿಂದ ಹಣವನ್ನು ಗಳಿಸುವುದು, ರಕ್ಷಿಸುವುದು, ವೃದ್ಧಿಗೊಳಿಸುವುದು ಮತ್ತು ಒಳ್ಳೆಯ ಪಾತ್ರದಲ್ಲಿ (ಒಳ್ಳೆಯ ವ್ಯಕ್ತಿಯಲ್ಲಿ ಅಥವಾ ಒಳ್ಳೆಯ ಕೆಲಸದಲ್ಲಿ) ವಿನಿಯೋಗಿಸುವುದು–ಹೀಗೆ ಹಣಕ್ಕೆ ಸಂಬಂಧಿಸಿದ ರಾಜ್ಯವೃತ್ತವು ನಾಲ್ಕು ಬಗೆಯಾಗಿದೆ.

ಸಪ್ತವರ್ಗ (ಏಳು ರಾಜ್ಯಾಂಗಗಳು)

ಸ್ವಾಮ್ಯಮಾತ್ಯಾಶ್ಚ ರಾಷ್ಟ್ರಂ ಚ ದುರ್ಗಂ ಕೋಶೋ ಬಲಂ ಸುಹೃತ್ ।
ಪರಸ್ಪರೋಪಕಾರೀದಂ ರಾಜ್ಯಂ ಸಪ್ತಾಙ್ಗಮುಚ್ಯತೇ ॥

(ಮನುಸ್ಮೃತಿಃ)

ಸ್ವಾಮಿ (ರಾಜ), ಅಮಾತ್ಯರು (ಮಂತ್ರಿಗಳು), ರಾಷ್ಟ್ರ, ದುರ್ಗ, ಕೋಶ (ಖಜಾನೆ), ಸೈನ್ಯ ಮತ್ತು ಮಿತ್ರ–ಈ ಏಳು ಪರಸ್ಪರವಾಗಿ ಉಪಕಾರ ಮಾಡುವ ರಾಜ್ಯದ ಏಳು ಅಂಗಗಳು.

ಅಥವಾ ಸ್ವಪಕ್ಷದಲ್ಲಿ ನಂಬಿಕೆಗೆ ಅರ್ಹವಾದ ಅಧಿಕಾರವರ್ಗ.

ನಿಜೋಽಥ ಮೈತ್ರಶ್ಚ ಸಮಾಶ್ರಿತಶ್ಚ
ಸುಬನ್ಧುಜಃ ಕಾರ್ಯಸಮುದ್ಭವಶ್ಚ ।
ಭೃತ್ಯೋ ಗೃಹಿತೋ ವಿವಿಧೋಪಚಾರೈಃ
ಪಕ್ಷಂ ಬುಧಾಃ ಸಪ್ತವಿಧಂ ವದನ್ತಿ ॥

(ಮನುಸ್ಮೃತಿಃ)

ನಿಜ (ತನ್ನವನು), ಮೈತ್ರ (ಸ್ನೇಹಿತನು), ಸಮಾಶ್ರಿತ (ಆಶ್ರಯಿಸಿದವನು), ಸಬನ್ಧುಜ (ನೆಂಟರ ಮಗನು), ಕಾರ್ಯಸಮುದ್ಭವ (ಕೆಲಸಕ್ಕಾಗಿ ಬಂದಿರುವವನು), ಭೃತ್ಯ (ಸೇವಕ) ಮತ್ತು ಗೃಹೀತ (ಬಗೆ ಬಗೆಯ ಉಪಕಾರಗಳಿಂದ ವಶನಾಗಿರುವವನು)–ಹೀಗೆ ತನ್ನ ಪಕ್ಷದವರು ಏಳು ಬಗೆಯವರಾಗಿದ್ದಾರೆ.

ಅಥವಾ ಸಪ್ತವ್ಯೂಹಗಳು.

ಶ್ಯೇನಃ ಸೂಚೀ ಚ ವಜ್ರಶ್ಚ ಶಕಟೋ ಮಕರಸ್ತಥಾ ।
ದಣ್ಡಾಖ್ಯಃ ಪದ್ಮನಾಮಾ ಚ ವ್ಯೂಹಾಃ ಸಪ್ತ ಪ್ರಧಾನತಃ ॥

[ಮನುಸ್ಮೃತಿಃ]

ಯುದ್ಧಕಾಲದಲ್ಲಿ ಬಳಸುವ ಸೇನಾವ್ಯೂಹಗಳು (ಸೈನ್ಯವನ್ನು ನಿಲ್ಲಿಸುವ ರೀತಿ). ಶ್ಯೇನ, ಸೂಚೀ, ವಜ್ರ, ಶಕಟ, ಮಕರ, ದಂಡ ಮತ್ತು ಪದ್ಮ ಎಂದು ಮುಖ್ಯವಾಗಿ ಏಳು ತೆರನಾಗಿವೆ.

ಅಷ್ಟವರ್ಗಃ:

ಕೃಷಿವಾಣಿಜ್ಯದುರ್ಗಾಣಿ ಸೇತುಃ ಕುಞ್ಜರಬನ್ಧನಮ್ ।
ಖನ್ಯಾಕರಃ ಕರಾದಾನಂ ಶೂನ್ಯಾನಾಂ ಚ ನಿವೇಶನಮ್ ।
ಅಷ್ಟವರ್ಗಮಿಮಂ ಸಾಧು ಸ್ವಸ್ಥವೃತ್ತೋ ನ ಲೋಪಯೇತ್ ॥

[ಕಾಮನ್ದಕಃ]

ವ್ಯವಸಾಯ, ವ್ಯಾಪಾರ, ಕೋಟೆ, ಸೇತುವೆಗಳು, ಆನೆಗಳನ್ನು ಹಿಡಿಯುವುದು, ಗಣಿಗಳು, ಸುಂಕ ಮತ್ತು ಜನಶೂನ್ಯವಾದ ಸ್ಥಳಗಳಲ್ಲಿ ಸೇನಾ-ನಿವೇಶ—ಇವುಗಳು ಅಷ್ಟವರ್ಗವೆನಿಸುತ್ತವೆ. ಇವುಗಳನ್ನು ಒಳ್ಳೆಯ ಅರಸನು ಹಾಳುಮಾಡಬಾರದು.

ಅಥವಾ ಪೈಶುನ್ಯಾದ್ಯಷ್ಟವರ್ಗ:

ಪೈಶುನ್ಯಂ ಸಾಹಸಂ ದ್ರೋಹಮೀರ್ಷ್ಯಾಸೂಯಾರ್ಥದೂಷಣಮ್ ।
ವಾಗ್ದಣ್ಡಯೋಶ್ಚ ಪಾರುಷ್ಯಂ ಕ್ರೋಧಜೋಽಪಿ ಗುಣೋಽಷ್ಟಕಃ ॥

[ಮನುಸ್ಮೃತಿಃ]

ಚಾಡಿ ಹೇಳುವುದು, ದುಡುಕಿ ಕೆಲಸಮಾಡುವುದು, ದ್ರೋಹ, ತಾಳ್ಮೆ ಇಲ್ಲದಿರುವುದು (ಹೊಟ್ಟೆಕಿಚ್ಚು), ಅಸೂಯೆ (ಗುಣದಲ್ಲಿಯೂ ದೋಷಾರೋಪ), ಹಣದ ದುರ್ವಿನಿಯೋಗ, ಮಾತಿನಲ್ಲಿ ಕಾಠಿಣ್ಯ ಮತ್ತು ಶಿಕ್ಷಿಸುವುದರಲ್ಲಿ ಉಗ್ರತೆ—ಈ ಎಂಟು ಗುಣಗಳು ಕೋಪದಿಂದ ಸಂಭವಿಸುವ ಅಷ್ಟವರ್ಗವೆನಿಸುತ್ತದೆ.

ತ್ರಿವರ್ಗಃ: ಧರ್ಮ-ಅರ್ಥ-ಕಾಮಗಳು ಅಥವಾ ಉತ್ಸಾಹಶಕ್ತಿ-ಪ್ರಭುಶಕ್ತಿ-ಮಂತ್ರಶಕ್ತಿತ್ರಯಗಳು ಅಥವಾ

ಕ್ಷಯಃ ಸ್ಥಾನಂ ಚ ವೃದ್ಧಿಶ್ಚ ತ್ರಿವರ್ಗೋ ನೀತಿವೇದಿನಾಮ್ ॥

ಕ್ಷಯ (ಹೀನವಾಗುತ್ತಿರುವುದು), ಸ್ಥಾನ (ಇದ್ದಂತೆ ಇರುವುದು), ಮತ್ತು ವೃದ್ಧಿ (ಏಳಿಗೆ ಹೊಂದುವುದು)—ಈ ಮೂರಕ್ಕೆ ತ್ರಿವರ್ಗವೆನ್ನುತ್ತಾರೆ.

ಅಥವಾ ಅಶಕ್ಯಸಮುದ್ಯಮವೇ ಮೊದಲಾದ ತ್ರಿವರ್ಗ.

ವಸ್ತುಷ್ವಶಕ್ಯೇಷು ಸಮುದ್ಯಮಶ್ಚ
ಶಕ್ಯೇಷು ಮೋಹಾದಸಮುದ್ಯಮಶ್ಚ ।
ಶಕ್ಯೇಷ್ವಕಾಲೇಷು ಸಮುದ್ಯಮಶ್ಚ
ತ್ರಿಧೈವ ಕಾರ್ಯಂ ವ್ಯಸನಂ ವದನ್ತಿ ॥ [ಕಾಮನ್ದಕಃ]

ಸಾಧಿಸಲಾಗದ ವಸ್ತುಗಳನ್ನು ಪಡೆಯಲು ಪ್ರಯತ್ನಿಸುವುದು, ಸಾಧಿಸಬಹುದಾದ ವಸ್ತುಗಳನ್ನು ಪಡೆಯಲು ಪ್ರಯತ್ನಿಸದಿರುವುದು ಮತ್ತು ಸಾಧ್ಯವಾಗಬಹುದಾದುದನ್ನು ಪಡೆಯಲು ಅಕಾಲದಲ್ಲಿ ಪ್ರಯತ್ನಿಸುವುದು–ಈ ಮೂರು ಕಾರ್ಯಗಳು ವ್ಯಸನವೆನಿಸಿಕೊಳ್ಳುತ್ತವೆ.

ವಿದ್ಯಾಸ್ತಿಸ್ರಃ (ಮೂರು ವಿದ್ಯೆಗಳು.)

ತ್ರಯೀ ವಾರ್ತಾ ದಣ್ಡನೀತಿರಿತಿ ವಿದ್ಯಾ ಹಿ ಮಾನವಾಃ ।
ತ್ರಯ್ಯಾ ಏವ ವಿಶೇಷೋಽಯಮಿಯಮಾನ್ವೀಕ್ಷಿಕೀ ಮತಾ ॥

[ಕಾಮನ್ದಕಃ]

ತ್ರಯೀ (ಮೂರು ವೇದಗಳು), ವಾರ್ತೆ (ವ್ಯವಸಾಯ, ಗೋರಕ್ಷಣೆ, ವ್ಯಾಪಾರ), ದಂಡನೀತಿ (ನೀತಿಶಾಸ್ತ್ರ)–ಇವುಗಳು ಮೂರು ವಿದ್ಯೆಗಳು. ಇವು ವೇದದಲ್ಲಿಯೇ ಅಡಕವಾಗುತ್ತವೆ. ಇದಕ್ಕೆ ಅನ್ವೀಕ್ಷಂ ಎಂದು ಹೆಸರು.

ಇಂದ್ರಿಯಾಣಾಂ ಜಯಂ-ಎಂದರೆ ಇಂದ್ರಿಯಗಳನ್ನು ಜಯಿಸುವ ಉಪಾಯವು ಎಂದರ್ಥ. (ಇಂದ್ರಿಯಗಳನ್ನು ಜಯಿಸುವ ಉಪಾಯವನ್ನೂ ರಾಜನಾದವನು ತಿಳಿದಿರಬೇಕು.)

ಷಾಡ್ಗುಣ್ಯವೆಂದರೆ:-

ಸನ್ಧಿರ್ನಾ ವಿಗ್ರಹೋ ಯಾನಮಾಸನಂ ದ್ವೈಧಮಾಶ್ರಯಃ ॥

ಸನ್ಧಿ (ಶತ್ರುವಿನೊಡನೆ ಒಪ್ಪಂದ), ವಿಗ್ರಹ (ಯುದ್ಧ), ಯಾನ (ಯುದ್ಧಪ್ರಯಾಣ), ಆಸನ (ಕಾಲವನ್ನು ನಿರೀಕ್ಷಿಸುತ್ತಾ ಸುಮ್ಮನಿರುವುದು), ದ್ವೈಧ (ಪ್ರಬಲರಾದ ಇಬ್ಬರಿಗೂ ಆಶ್ರಿತನಂತಿರುವುದು), ಸಮಾಶ್ರಯ (ಪ್ರಬಲನಾದವನನ್ನು ಆಶ್ರಯಿಸುವುದು.) ಇವುಗಳು ಷಡ್ಗುಣಗಳು.

ದೈವಮಾನುಷಂ=ದೈವ-ಮಾನುಷವ್ಯಸನಗಳು. ದೈವವ್ಯಸನಗಳು. ಐದು. ಮಾನುಷ ವ್ಯಸನಗಳು ಐದು.

ಹುತಾಶನೋ ಜಲಂ ವ್ಯಾಧಿರ್ದುರ್ಭಿಕ್ಷಂ ಮರಣಂ ತಥಾ ।
ಇತಿ ಪಞ್ಚವಿಧಂ ದೈವಂ ಮಾನುಷಂ ವ್ಯಸನಂ ಪರಮ್॥
ಆಯುಕ್ತಕೇಭ್ಯಶ್ಚೋರೇಭ್ಯಃ ಪರೇಭ್ಯೋ ರಾಜವಲ್ಲಭಾತ್ ।
ಪೃಥಿವೀಪತಿಲೋಭಾಚ್ಚ ವ್ಯಸನಂ ಪಞ್ಚಧಾ ಭವೇತ್ ॥

[ಕಾಮಂದಕಃ]

ಬೆಂಕಿ, ನೀರು, ರೋಗ, ಬರಗಾಲ ಮತ್ತು ಸಾವು–ವುಗಳು ದೈವ ವ್ಯಸನಗಳು. ಅಧಿಕಾರಿಗಳು, ಕಳ್ಳರು, ಶತ್ರುಗಳು, ರಾಜರಿಗೆ ಇಷ್ಟರಾದವರು ಮತ್ತು ರಾಜನ ದುರಾಸೆ–ಇವುಗಳಿಂದ ಉಂಟಾಗುವ ಐದು ವ್ಯಸನಗಳು ಮಾನುಷವ್ಯಸನಗಳು.

ಕೃತ್ಯಂ: (ಭೇದವನ್ನು ಉಂಟುಮಾಡುವ) ಚತುರ್ವಿಧಕೃತ್ಯಗಳು

ಅಲಬ್ಧವೇತನೋ ಲುಬ್ಧೋ ಮಾನೀ ಚಾಪ್ಯಕಮಾನಿತಃ ।
ಕ್ರುದ್ಧಶ್ಚ ಕೋಪಿತೋಽಸ್ಮಾತ್ತಥಾ ಭೀತಶ್ಚ ಭೀಷಿತಃ ।
ಭೇದ್ಯಾಃ ಶತ್ರೌ ತು ಚತ್ವಾರೋ ನೃಪಕೃತ್ಯಮಿದಂ ಸ್ಮೃತಮ್ ॥

[ಕಾಮನ್ದಕಃ]

ಶತ್ರುಗಳ ಪಕ್ಷದಲ್ಲಿ ಸಂಬಳವು ಸಿಕ್ಕದುದರಿಂದ ಅಸಮಾಧಾನಗೊಂಡವನು, ಅವಮಾನಪಡಿಸಲ್ಪಟ್ಟ ಅಭಿಮಾನಿಯು, ಕಾರಣವಿಲ್ಲದೇ ಕೋಪಗೊಳಿಸಲ್ಪಟ್ಟವನು, ಹಾಗೆಯೇ ಹೆದರಿಸಲ್ಪಟ್ಟವನು. ಇವರಿಗೆ ಬೇಕಾದುದನ್ನು ಕೊಟ್ಟು ತಮ್ಮಂತೆ ಮಾಡಿಕೊಳ್ಳುವುದು ರಾಜರ ಭೇದಕೃತ್ಯವಾಗುತ್ತದೆ.

ವಿಂಶತಿವರ್ಗಃ: ಸ್ನೇಹಮಾಡಲು ಯೋಗ್ಯರಲ್ಲದ ಇಪ್ಪತ್ತು ಬಗೆಯ ಪುರುಷರು.

ಬಾಲೋ ವೃದ್ಧೋ ದೀರ್ಘರೋಗೀ ತಥಾ ಜ್ಞಾತಿಬಹಿಷ್ಕೃತಃ ।
ಭೀರುಕೋ ಭೀರುಜನಕೋ ಲುಬ್ಧೋ ಲುಬ್ಧಜನಸ್ತಥಾ॥
ವಿರಕ್ತಪ್ರಕೃತಿಶ್ಚೈವ ವಿಷಯೇಷ್ವತಿಸಕ್ತಿಮಾನ್ ।
ಅನೇಕಚಿತ್ತಮನ್ತ್ರಶ್ಚ ದೇವಬ್ರಾಹ್ಮಣನಿನ್ದಕಃ ॥

ದೈವೋಪಹತಕಶ್ಚೈವ ದೈವಚಿನ್ತಕ ಏವ ಚ ।
ದುರ್ಭಿಕ್ಷವ್ಯಸನೋಪೇತೋ ಬಲವ್ಯಸನಸಂಕುಲಃ ॥

ಅದೇಶಸ್ಥೋ ಬಹುರಿಪುರ್ಯುಕ್ತಃ ಕಾಲೇನ ಯಶ್ಚ ಸಃ ।
ಸತ್ಯಧರ್ಮವ್ಯಪೇತಶ್ಚ ವಿಂಶತಿಃ ಪುರುಷಾ ಅಮೀ ।
ಏತೈಃ ಸಂಧಿಂ ನ ಕುರ್ವೀತ ನಿಗೃಹ್ಣೀಯಾತ್ತು ಕೇವಲಮ್ ॥

[ಕಾಮನ್ದಕಃ]

ಹುಡುಗ, ಮುದುಕ, ದೀರ್ಘಕಾಲದಿಂದಲೂ ರೋಗಗ್ರಸ್ತನಾದವನು, ಜ್ಞಾತಿಗಳಿಂದ ಬಹಿಷ್ಕರಿಸಲ್ಪಟ್ಟವನು, ಹೆದರುವವನು,ಅಂಜುಬುರುಕನಾದ ಮಂತ್ರಿ-ಸೈನ್ಯಾಧಿಕಾರಿ ಮೊದಲಾದ ಪರಿವಾರವುಳ್ಳವನು, ಅತ್ಯಾಸೆಯುಳ್ಳ ವನು, ಅತ್ಯಾಶಾಪರರಾದ ಪರಿವಾರವುಳ್ಳವನು, ಉದಾಸೀನಪ್ರಕೃತಿ ಯುಳ್ಳವನು (ಪ್ರಜೆಗಳಿಂದ ಪ್ರೀತಿಸಲ್ಪಡದವನು), ವಿಷಯಸುಖಗಳಲ್ಲಿ ಅತ್ಯಾಸಕ್ತನಾದವನು, ಒಂದೇ ಮನಸ್ಸಾಗಲೀ, ಒಂದೇ ವಿಧವಾದ ಮಂತ್ರಾ ಲೋಚನೆಯಾಗಲೀ ಇಲ್ಲದವನು, ದೇವತೆಗಳನ್ನೂ ಮತ್ತು ಬ್ರಾಹ್ಮಣ ರನ್ನೂ ನಿಂದಿಸುವವನು, ಶಾಪಾದಿಗ್ರಸ್ತನಾದವನು, ದೈವಪ್ರಯತ್ನವನ್ನೇ ನಂಬಿ ಮನುಷ್ಯಪ್ರಯತ್ನವನ್ನು ಮಾಡದವನು, ದುರ್ಭಿಕ್ಷವೇ ಮೊದಲಾದ ರಾಜ್ಯವ್ಯಸನಗಳಿಂದ ಕೂಡಿದವನು, ಸೈನ್ಯದ ವ್ಯಸನಗಳಿಂದ (ಒಳಜಗಳ, ನಷ್ಟ ಮೊದಲಾದುವುಗಳಿಂದ) ಕೂಡಿದವನು, ಸ್ವದೇಶದಲ್ಲಿ ಇಲ್ಲದವನು, ಅನೇಕ ಶತ್ರುಗಳುಳ್ಳವನು, ದುರ್ದೆಸೆಯಲ್ಲಿರುವವನು, ಸತ್ಯ-ಧರ್ಮಗಳಿಂದ ದೂರನಾದವನು, ಇಂತಹ ಇಪ್ಪತ್ತು ಬಗೆಯ ರಾಜರು ಸಂಧಿಗೆ ಯೋಗ್ಯರಲ್ಲ; ಯುದ್ಧಮಾಡಿ ಸೋಲಿಸಲ್ಪಡತಕ್ಕವರು.

ಅಥವಾ

ರಾಜ್ಯಸ್ತ್ರೀಸ್ಥಾನದೇಶಾನಾಂ ಜ್ಞಾತೀನಾಂ ಚ ಧನಸ್ಯ ಚ ।
ಅಪಹಾರೋ ಮದೋ ಮಾನಃ ಪೀಡಾ ವೈಷಯಿಕೀ ತಥಾ ॥

ಜ್ಞಾನಾರ್ಥಶಕ್ತಿಧರ್ಮಾಣಾಂ ವಿಘಾತೋ ದೈವಮೇವ ಚ ।
ಮಿತ್ರಾರ್ಥಯೋಶ್ಚಾವಮಾನಸ್ತಥಾ ಬನ್ಧುವಿನಾಶನಮ್ ॥
ಭೂತಾನುಗ್ರಹವಿಚ್ಛೇದಸ್ತಥಾ ಮಣ್ಡಲದೂಷಣಮ್ ।
ಏಕಾರ್ಥಾಭಿನಿವೇಶಿತ್ವಮಿತಿ ವಿಗ್ರಹಯೋನಯಃ ॥ [ಕಾಮನ್ದಕಃ]

ರಾಜ್ಯದ ಸ್ತ್ರೀಯರು, ಸ್ಥಾನ, ದೇಶ, ಜ್ಞಾತಿಗಳು ಮತ್ತು ಧನ–ಇವುಗಳನ್ನು ಅಪಹರಿಸುವುದು, ಗರ್ವ, ಅಭಿಮಾನ ಮತ್ತು ವಿಷಯಪರಾಧೀನತೆ, ಜ್ಞಾನ, ಅರ್ಥ, ಶಕ್ತಿ ಮತ್ತು ಧರ್ಮ–ಇವುಗಳನ್ನು ನಾಶಗೊಳಿಸುವುದು, ದೇವವಿರೋಧ, ಮಿತ್ರನನ್ನು ಅವಮಾನಪಡಿಸುವುದು ಮತ್ತು ಅವನ ಹಣವನ್ನು ಅಪಹರಿಸುವುದು, ಬಂಧುಗಳನ್ನು ನಾಶಪಡಿಸುವುದು, ಜನರಲ್ಲಿ ಅನುಗ್ರಹವಿಲ್ಲದಿರುವುದು ಮತ್ತು ರಾಜ, ಮಂತ್ರಿ, ಸೇನಾಪತಿ ಮೊದಲಾದವರಲ್ಲಿ ಭೇದವನ್ನು ಉಂಟುಮಾಡುವುದು, ಏಕಾರ್ಥಾಭಿನಿವೇಶ–ಇವುಗಳು ಯುದ್ಧಕ್ಕೆ ಕಾರಣವಾಗುವ ವಿಂಶತಿವರ್ಗವೆನಿಸಿಕೊಳ್ಳುತ್ತವೆ.

ಪಞ್ಚಪ್ರಕೃತಿಗಳು:

ಅಮಾತ್ಯರಾಷ್ಟ್ರದುರ್ಗಾಣಿ ಕೋಶೋ ದಣ್ಡಶ್ಚ ಪಞ್ಚಮಃ ।
ಏತಾಃ ಪ್ರಕೃತಯಸ್ತಜ್ಜ್ಞೈರ್ವಿಜಿಗೀಷೋರುದಾಹೃತಾಃ ॥

ಮಂತ್ರಿಗಳು, ರಾಜ, ದುರ್ಗಗಳು, ಕೋಶ (ಖಜಾನೆ), ದಣ್ಡ (ದಂಡಕ್ಕೆ ಸಹಾಯವಾಗುವ ಸೇನೆ)–ಇವುಗಳು ಜಯಾಪೇಕ್ಷಿಯ ಪ್ರಕೃತಿಗಳೆನಿಸಿಕೊಳ್ಳುತ್ತವೆ.

ದ್ವಾದಶರಾಜಮಣ್ಡಲಗಳು.

ಸಂಪನ್ನಸ್ತು ಪ್ರಕೃತಿಭಿರ್ಮಹೋತ್ಸಾಹಃ ಕೃತಶ್ರಮಃ ।
ಜೇತುಮೇಷಣಶೀಲಶ್ಚ ವಿಜಿಗೀಷುರಿತಿ ಸ್ಮೃತಃ ।

ಅರಿರ್ಮಿತ್ರಮರೇರ್ಮಿತ್ರಂ ಮಿತ್ರಮಿತ್ರಮತಃ ಪರಮ್ ।
ತಥಾರಿಮಿತ್ರಮಿತ್ರಂ ಚ ವಿಜಿಗೀಷೋಃ ಪುರಃಸರಾಃ ।
ಪಾರ್ಷ್ಣಿಗ್ರಾಹಸ್ತತಃ ಪಶ್ಚಾದಾಕ್ರನ್ದಸ್ತದನನ್ತರ ।
ಆಸಾರಾವನಯೋಶ್ಚೈವ ವಿಜಿಗೀಷೋಽಸ್ತು ಪೃಷ್ಠತಃ ।

ಅರೇಶ್ಚ ವಿಜಿಗೀಷೋಶ್ಚ ಮಧ್ಯಮೋ ಭೂಮ್ಯನನ್ತರಃ ।
ಅನುಗ್ರಹೇ ಸಂಹತಯೋರ್ವ್ಯಸ್ತಯೋರ್ನಿಗ್ರಹೇ ಪ್ರಭುಃ ।

ಮಣ್ಡಲಾದ್ಬಹಿರೇತೇಷಾಮುದಾಸೀನೋ ಬಲಾಧಿಕಃ ।
ಅನುಗ್ರಹೇ ಸಂಹತಾನಾಂ ವ್ಯಸ್ತಾನಾಂ ಚ ವಧೇ ಪ್ರಭುಃ॥

[ಕಾಮನ್ದಕಃ]

ಪ್ರಕೃತಿಬಲಯುಕ್ತನೂ, ಉತ್ಸಾಹಶೀಲನೂ, ಯುದ್ಧವಿನ್ಯಾಸಾದಿಗಳನ್ನು ಶ್ರಮಪಟ್ಟು ಅಭ್ಯಾಸಮಾಡಿದವನೂ, ಗೆಲ್ಲುವ ಇಚ್ಛೆಯುಳ್ಳವನೂ ಆಗಿರುವ ರಾಜನು ವಿಜಿಗೀಷುವೆನಿಸಿಕೊಳ್ಳುತ್ತಾನೆ. ಆತನ ರಾಜ್ಯದ ಮುಂಬದಿಯಲ್ಲಿರುವ ರಾಜ್ಯದ ದೊರೆಯು ಅರಿಯೆನಿಸಿಕೊಳ್ಳುತ್ತಾನೆ. ಆ ರಾಜ್ಯದ ಪಕ್ಕದ ರಾಜ್ಯದ ಅರಸನು ಮಿತ್ರನು. ಪಕ್ಕದ ರಾಜ್ಯದ ದೊರೆಯು ಅರಿಮಿತ್ರನು. ಆ ರಾಜ್ಯದ ಪಕ್ಕದ ರಾಜ್ಯದ ದೊರೆಯು ಮಿತ್ರಮಿತ್ರನು ಅದರ ಪಕ್ಕದ ರಾಜ್ಯದ ದೊರೆಯು ಶತ್ರುಮಿತ್ರನು. ಹೀಗೆಯೇ ವಿಜಿಗೀಷುರಾಜ್ಯದ ಹಿಂಭಾಗದಲ್ಲಿರುವ ದೊರೆಗಳು ಪಾರ್ಷ್ಣಿಗ್ರಾಹ, ಆಕ್ರಂದ, ಪಾರ್ಷ್ಣಿಗ್ರಾಹಾಸಾರ, ಆಕ್ರಂದಾಸಾರರೆನಿಸಿಕೊಳ್ಳುತ್ತಾರೆ. ವಿಜಿಗೀಷು ಮತ್ತು ಅವನ ಶತ್ರು ಇಬ್ಬರನ್ನೂ ಸೋಲಿಸಬಲ್ಲ ಪಕ್ಕದ ದೇಶದ ದೊರೆಯು ಉದಾಸೀನನೆನಿಸಿಕೊಳ್ಳುತ್ತಾನೆ. ಇದು ದ್ವಾದಶರಾಜ ಮಂಡಲವಾಗಿದೆ.

ಯಾತ್ರಾ: ಐದು ವಿಧ ಯಾತ್ರೆಗಳು:

ವಿಗೃಹ್ಯ ಸಂಧಾಯ ತಥಾ ಸಂಭೂಯಾಥ ಪ್ರಸಙ್ಗತಃ ।
ಉಪೇಕ್ಷ್ಯ ಚೇತಿ ನಿಪುಣೈರ್ಯಾನಂ ಪಞ್ಚವಿಧಂ ಸ್ಮೃತಮ್ ॥

[ಕಾಮನ್ದಕಃ]

ಯಾತ್ರೆ ಅಥವಾ ಯಾನವು (ಯುದ್ಧಕ್ಕೆ ಹೋಗುವುದು) ಐದು ಬಗೆಯಾಗಿದೆ. ವಿಗೃಹ್ಯ ಯಾನವೆಂದರೆ ಪಾರ್ಷ್ಣಿಗ್ರಾಹ ಮೊದಲಾದವರನ್ನ ಸೋಲಿಸಿ ಶತ್ರುವಿನ ಮೇಲೆ ಯುದ್ಧಕ್ಕೆ ಹೊರಡುವುದು. ಪಾರ್ಷ್ಣಿಗ್ರಾಹ ಮೊದಲಾದವರೊಡನೆ ಸಂಧಿಮಾಡಿಕೊಂಡು ಶತ್ರುವಿನ ಮೇಲೆ ಯುದ್ಧಕ್ಕೆ ಹೊರಡುವುದು ಸಂಧಾಯಯಾನ. ಸಾಮಂತರೊಡನೆ ಸೇರಿಹೊರಡುವುದು ಸಂಭೂಯ ಯಾನ. ಬೇರೆಯವರ ಮೇಲೆ ಯುದ್ಧಕ್ಕೆ ಹೊರಡುವಂತೆ ನಟಿಸಿ ಮತ್ತೊಬ್ಬರ ಮೇಲೆ ಹೊರಡುವುದು ಪ್ರಸಙ್ಗತೋ ಯಾನ. ಬೇರೆಯವನನ್ನು ಉಪೇಕ್ಷಿಸಿ ಇನ್ನೊಬ್ಬನ ಮೇಲೆ ಯುದ್ಧಕ್ಕೆ ಹೊರಡುವುದು ಉಪೇಕ್ಷ್ಯಯಾನ.

ದ್ವಿಯೋನೀ - ಸಂಧಿವಿಗ್ರಹಯಾನಾಸನದ್ವೈಧೀಭಾವಸಮಾಶ್ರಯ ಗಳೆಂಬ ಆರು ಬಗೆಗಳಲ್ಲಿ ಸಂಧಿ-ವಿಗ್ರಹಗಳು ಅತಿಮುಖ್ಯವಾದುವುಗಳು.

ಸಂಧಿಯೋನಿಕವು ದ್ವೈಧೀಭಾವ-ಸಮಾಶ್ರಯಗಳನ್ನಾಶ್ರಯಿಸಿರುತ್ತದೆ. ವಿಗ್ರಹಯೋನಿಕವು ಯಾನಾಸನಗಳನ್ನು ಆಶ್ರಯಿಸಿರುತ್ತದೆ.

ಬಲಿನೋರ್ದ್ವಿಷತೋರ್ಮಧ್ಯೇ ವಾಚಾತ್ಮಾನಂ ಸಮರ್ಪಯನ್ ।
ದ್ವೈಧೀಭಾವೇನ ವರ್ತೇತ ಕಾಕಾಕ್ಷಿವದಲಕ್ಷಿತಃ ॥

ಬಲಿಷ್ಠರಾದ ಶತ್ರುಗಳಿಬ್ಬರ ಮಧ್ಯದಲ್ಲಿ ಇಬ್ಬರಿಗೂ ಅನುಕೂಲನಾಗಿರುವಂತೆ ಮಾತಾಡುತ್ತಾ (ಕಾಗೆಯ ಕಣ್ಣಿನಂತೆ) ತೊಂದರೆಗೆ ಸಿಕ್ಕದಂತೆ ನಡೆದುಕೊಳ್ಳುವುದು ದ್ವೈಧೀಭಾವ. ದುರ್ಬಲತೆಯಿದ್ದರೆ ಬಲಿಷ್ಠರಾದವರನ್ನು ಆಶ್ರಯಿಸಬೇಕು. ಇದಕ್ಕೆ ಸಮಾಶ್ರಯವೆಂದು ಹೆಸರು.

ಯಾನಾಸನೇ ವಿಗ್ರಹಸ್ಯ ರೂಪಂ ಸದ್ಭಿರಿತಿ ಸ್ಮೃತಮ್ ।
ಸಂಧೇಶ್ಚ ಸಂಧಿಮಾರ್ಗಜ್ಞೈರ್ದ್ವೈಧೀಭಾವಸಮಾಶ್ರಯೌ ॥

ಯಾನ, ಆಸನಗಳು ವಿಗ್ರಹದ (ಯುದ್ಧದ) ರೂಪವಾಗಿರುತ್ತವೆ. ದ್ವೈಧೀಭಾವ-ಸಮಾಶ್ರಯಗಳು ಸಂಧಿಯ ರೂಪರಾಗಿರುತ್ತವೆ. ಕಾಲ ನಿರೀಕ್ಷಣೆಮಾಡುತ್ತಾ ಕುಳಿತುಕೊಳ್ಳುವುದಕ್ಕೆ ಆಸನವೆಂದು ಹೆಸರು ಯಾನವು ಐದು ವಿಧವೆಂದು ಹಿಂದೆಯೇ ಹೇಳಿದೆ.

——

ದಶರಥನ ವರಪ್ರದಾನ-ಸಂಶಯನಿವಾರಣೆ

ಈ ಸಂದರ್ಭದಲ್ಲಿ ಕೆಲವು ಪ್ರಶ್ನೆಗಳು ವಿಮರ್ಶಕರ ಮನಸ್ಸಿನಲ್ಲಿ ಉದ್ಭವಿಸುವುದು ಸಹಜವಾಗಿದೆ. ೧) ಕೈಕೇಯಿಯ ಮದುವೆಯ ಕಾಲದಲ್ಲಿಯೇ ಅವಳ ಮಗನಿಗೇ ರಾಜ್ಯಪ್ರಾಪ್ತಿಯು ನಿಶ್ಚಿತವಾಗಿದ್ದರೆ ಅದರ ಪ್ರಸ್ತಾಪವನ್ನೇ ಎತ್ತದೇ ಕೈಕೇಯಿಯು ತನಗೆ ಕೊಟ್ಟಿದ್ದ ಎರಡು ವರಗಳನ್ನೇಕೆ ರಾಜನ ಮುಂದಿಟ್ಟಳು? ಅದಕ್ಕೆ ಹೀಗೆ ಸಮಾಧಾನ ಹೇಳಬಹುದಾಗಿದೆ : ಬಹಳ ಕಾಲದ ಹಿಂದೆ ನಡೆದ ವಿಷಯವು ಮರೆತುಹೋಗಲು ಅವಕಾಶವಿದೆ. ಮಧ್ಯ ಕಾಲದಲ್ಲಿ ಕೈಕೇಯಿಗೆ ಪ್ರಾಪ್ತವಾದ ವರದ ವಿಷಯವಾಗಿಯೂ ಸಹ ಮಂಥರೆಯು ಜ್ಞಾಪಿಸಬೇಕಾಯಿತು. ಆ ಎರಡು ವರಗಳ ವಿಷಯವೇ ಕೈಕೇಯಿಗೆ ಸ್ಮರಣೆಯಿಲ್ಲದಿದ್ದಾಗ ವಿವಾಹಕಾಲದಲ್ಲಿ ತನ್ನ ತಂದೆಗೆ ದಶರಥನು

ಮಾಡಿಕೊಟ್ಟ ಪ್ರತಿಜ್ಞಾವಚನದ ಸ್ಮರಣೆಯಿಲ್ಲದಿರುವುದು ಸ್ವಾಭಾವಿಕವಾದುದೆಂದು ಹೇಳಬಹುದಾಗಿದೆ. ಒಂದು ವೇಳೆ ರಾಜ್ಯಶುಲ್ಕದ ಪ್ರಸ್ತಾಪವನ್ನೆತ್ತಿ ಭರತನಿಗೆ ಪಟ್ಟಗಟ್ಟಬೇಕೆಂದು ಹೇಳಿದ್ದರೂ ರಾಮನನ್ನು ಅರಣ್ಯಕ್ಕೆ ಕಳುಹಿಸಲು ಸಾಧ್ಯವಾಗುತ್ತಿರಲಿಲ್ಲ. ಈ ಕಾರಣದಿಂದಲೂ ಅವಳು ರಾಜ್ಯಶುಲ್ಕದ ವಿಷಯವನ್ನು ಪ್ರಸ್ತಾಪಿಸದೇ ಇರಬಹುದು. 2) ಸತ್ಯಪ್ರತಿಜ್ಞನಾದ ದಶರಥನು ಕೈಕೇಯಿಯ ವಿವಾಹಕಾಲದಲ್ಲಿ ಕನ್ಯಾಶುಲ್ಕಕ್ಕಾಗಿ ರಾಜ್ಯವನ್ನು ಅವಳ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೇ ವಹಿಸಿಕೊಡುವೆನೆಂದು ಪ್ರತಿಜ್ಞೆ ಮಾಡಿಯೂ ರಾಮನಿಗೆ ಪಟ್ಟಾಭಿಷೇಕಮಾಡಲು ಪ್ರಯತ್ನಿಸಿದನೇ? ಇದಕ್ಕೆ ಸಮಾಧಾನವನ್ನು ಹೀಗೆ ಹೇಳುತ್ತಾರೆ: ವಿವಾಹಸಮಯದಲ್ಲಿ ಆಪತ್ಕಾಲದಲ್ಲಿ ಸುಳ್ಳುಹೇಳಿದರೂ ದೋಷವಿಲ್ಲವೆಂದು ಸ್ಮೃತಿಗಳು ಹೇಳುತ್ತವೆ.

ಸ್ತ್ರೀಷು ನರ್ಮವಿವಾಹೇ ಚ ವೃತ್ತ್ಯರ್ಥೇ ಪ್ರಾಣಸಂಕಟೇ ।
ಗೋಬ್ರಾಹ್ಮಣಾರ್ಥೇ ಹಿಂಸಾಯಾಂ ನಾನೃತಂ ಸ್ಯಾಜ್ಜುಗುಪ್ಸಿತಮ್ ॥

"ಸ್ತ್ರೀಯರಲ್ಲಿಯೂ, ಪ್ರೇಮವಿವಾಹದಲ್ಲಿಯೂ, ಜೀವನಾಧಾರವಾದ ಉದ್ಯೋಗದ ವಿಷಯದಲ್ಲಿಯೂ, ಪ್ರಾಣಾಪಾಯದ ವೇಳೆಯಲ್ಲಿಯೂ, ಗೋ-ಬ್ರಾಹ್ಮಣರಿಗಾಗಿಯೂ, ಹಿಂಸೆಯ ಸಂದರ್ಭವೊದಗಿದಾಗಲೂ ಸುಳ್ಳುಹೇಳುವುದು ಪಾಪವಲ್ಲ."

ಉದ್ವಾಹಕಾಲೇ ರತಿಸಂಪ್ರಯೋಗೇ
ಪ್ರಾಣಾತ್ಯಯೇ ಸರ್ವಧನಾಪಹಾರೇ ।
ವಿಪ್ರಸ್ಯ ಚಾರ್ಥೇಽಪ್ಯನೃತಂ ವದೇಯುಃ
ಪಞ್ಚಾನೃತಾನ್ಯಾಹುರಪಾತಕಾನಿ ॥

"ವಿವಾಹಕಾಲದಲ್ಲಿಯೂ, ರತಿಯೇ ಮೊದಲಾದ ವಿನೋದಸಮಯಗಳಲ್ಲಿಯೂ, ಪ್ರಾಣಾಪಾಯವೊದಗಿದಾಗಲೂ, ಹಣವೆಲ್ಲವೂ ನಷ್ಟವಾಗುವ ಸಮಯದಲ್ಲಿಯೂ ಮತ್ತು ಬ್ರಾಹ್ಮಣನಿಗಾಗಿಯೂ ಸುಳ್ಳುಹೇಳುವುದು ಪಾಪವಾಗುವುದಿಲ್ಲ."

ಪ್ರಾಣಾನ್ತಿಕೇ ವಿವಾಹೇ ಚ ವಕ್ತವ್ಯಮನೃತಂ ಭವೇತ್ ।
ಅನೃತೇನ ಭವೇತ್ಸತ್ಯಂ ಸತ್ಯೇನೈವಾನೃತಂ ಭವೇತ್ ॥

(ಮಹಾಭಾರತ-ಅರಣ್ಯಪರ್ವ)

"ಪ್ರಾಣಕ್ಕೆ ಅಪಾಯವೊದಗಿದ ಸಮಯದಲ್ಲಿಯೂ, ಮದುವೆಯ ಸಮಯದಲ್ಲಿಯೂ ಸುಳ್ಳನ್ನು ಹೇಳಬಹುದು. ಅಂತಹ ಸಮಯಗಳಲ್ಲಿ ಸುಳ್ಳನ್ನು ಹೇಳಿದರೆ ಸತ್ಯವನ್ನು ಹೇಳಿದಂತೆಯೇ ಆಗುತ್ತದೆ; ಸತ್ಯವನ್ನು ಹೇಳುವುದರಿಂದ ಸುಳ್ಳಾಡಿದ ದೋಷವುಂಟಾಗುತ್ತದೆ."

ರಾಜನು ತಾನು ವಿವಾಹಕಾಲದಲ್ಲಿ ಕೊಟ್ಟ ವಚನಕ್ಕೆ ಅಷ್ಟು ಮಹತ್ತ್ವವನ್ನು ಕೊಡದಿರಲು ಕಾರಣ; ಜ್ಯೇಷ್ಠಪುತ್ರನಿಗೆ ರಾಜ್ಯವನ್ನು ಕೊಡಬೇಕೆಂಬುದು ಮನೆತನದ ಸಂಪ್ರದಾಯಕ್ಕೆ ಅನುಗುಣ; ಶಾಸ್ತ್ರ ಸಮ್ಮತ; ಪ್ರಜೆಗಳಿಗೆ ಸಮ್ಮತ; ಕೇಕಯರಾಜನಿಗೂ ಮತ್ತು ಭರತನಿಗೂ ಸಮ್ಮತ ಎಂಬುದು ಅವನಿಗೆ ಚೆನ್ನಾಗಿ ತಿಳಿದಿದ್ದಿತು. ಶ್ರೀರಾಮನು ಗುಣಶ್ರೇಷ್ಠನೂ ಆಗಿದ್ದುದರಿಂದ ಶ್ರೀರಾಮನ ಪಟ್ಟಾಭಿಷೇಕವು ಮಂಥರೆಯನ್ನು ಬಿಟ್ಟು ಉಳಿದ ಸರ್ವರಿಗೂ ಸಮ್ಮತವಾಗಿದ್ದಿತು.

--

೬೩ನೆಯ ಸರ್ಗದ ವಿಶ್ಲೇಷಣೆ

೬೨ನೆಯ ಸರ್ಗದ ಕಡೆಯ ಶ್ಲೋಕವು ಹೀಗಿದೆ:

ಅಥ ಪ್ರಹ್ಲಾದಿತೋ ವಾಕ್ಯೈರ್ದೇವ್ಯಾ ಕೌಸಲ್ಯಯಾ ನೃಪಃ ।
ಶೋಕೇನ ಚ ಸಮಾಕ್ರಾನ್ತೋ ನಿದ್ರಾಯಾ ವಶಮೇಯಿವಾನ್ ॥

ಕೌಸಲ್ಯಾದೇವಿಯ ಸಾಂತ್ವನದ ಮಾತುಗಳಿಂದ ರಾಜನು ಪ್ರಸನ್ನನಾದನು. ಜೊತೆಯಲ್ಲಿಯೇ ಶ್ರೀರಾಮನನ್ನು ಅಗಲಿದ ಶೋಕವು ಅವನಿಗಿದ್ದಿತು. ಇಂತಹ ಹರ್ಷ-ಶೋಕಾವಸ್ಥೆಗಳ ನಡುವೆ ರಾಜನು ನಿದ್ರಾವಶನಾದನು.

ಅವನ ಜೊತೆಯಲ್ಲಿಯೇ ಕೌಸಲ್ಯಾ-ಸುಮಿತ್ರೆಯರೂ ನಿದ್ರೆಹೋದರೆಂಬ ವಾಕ್ಯವು ಇಲ್ಲಿಲ್ಲ. ೬೩ನೆಯ ಸರ್ಗದ ಮೊದಲನೆಯ ಶ್ಲೋಕವು ಹೀಗಿದೆ:

ಪ್ರತಿಬುದ್ಧೋ ಮುಹೂರ್ತೇನ ಶೋಕೋಪಹತಚೇತನಃ ।
ಅಥ ರಾಜಾ ದಶರಥಃ ಚಿನ್ತಾಮಭ್ಯವಪದ್ಯತ ॥೧॥

ಮುಹೂರ್ತಕಾಲವು ಕಳೆಯುತ್ತಲೇ ರಾಜನಿಗೆ ಎಚ್ಚರವಾಯಿತು. ಆ ಸಮಯದಲ್ಲಿ ಅವನ ಹೃದಯವು ವ್ಯಾಕುಲಗೊಂಡಿದ್ದಿತು. ಆಗ ರಾಜನು ಮನಸ್ಸಿನಲ್ಲಿಯೇ ಚಿಂತಿಸತೊಡಗಿದನು. ಪುನಃ ಐದನೆಯ ಶ್ಲೋಕದಲ್ಲಿ '**ಕೌಸಲ್ಯಾಂ ಪುತ್ರಶೋಕಾರ್ತಾಮಿದಂ ವಚನಮಬ್ರವೀತ್ ।** ಪುತ್ರ ಶೋಕದಿಂದ ಪೀಡಿತಳಾಗಿದ್ದ ಕೌಸಲ್ಯೆಗೆ ಹೇಳತೊಡಗಿದನು'–ಎಂದಿದೆ. ಎಂದರೆ ಪತಿಯೊಡನೆಯೇ ಮಲಗಿದ್ದು ಎಚ್ಚರಗೊಂಡಳೆಂದಾದರೂ ಅರ್ಥ ಮಾಡಬಹುದು. ಪತಿಯು ನಿದ್ರಿಸಿದರೂ ಕೌಸಲ್ಯೆಯು ಜಾಗ್ರತಳಾಗಿಯೇ ಇದ್ದಳೆಂದಾದರೂ ಅರ್ಥಮಾಡಬಹುದು. ಕೌಸಲ್ಯೆಯೊಡನೆ ರಾಜನು ಮಾತನಾಡುತ್ತಿದ್ದನೆಂಬುದು ಈ ಶ್ಲೋಕದಿಂದ ಸ್ಪಷ್ಟವಾಗಿದೆ. ಮುಂದಿನ ಹಲವಾರು ಶ್ಲೋಕಗಳಲ್ಲಿ–'ಕೌಸಲ್ಯೇ!ದೇವಿ!'–ಎಂದು ಸಂಬೋಧಿಸುತ್ತಾ ಮಾತನಾಡುತ್ತಾನೆ. ಹೀಗೆಯೇ ರಾಜನು ತನ್ನ ಪೂರ್ವಕಥೆಯನ್ನು ವಿಸ್ತಾರವಾಗಿ ಈ ಸರ್ಗದಲ್ಲಿ ಮತ್ತು ಮುಂದಿನ ಸರ್ಗದಲ್ಲಿ ಹೇಳುತ್ತಾನೆ. ೬೪ನೆಯ ಸರ್ಗದ ಕಡೆಯಲ್ಲಿ ಕಥೆಯನ್ನು ಪೂರೈಸಿ–'ಹಾ ಕೌಸಲ್ಯೇ ವಿನಶ್ಯಾಮಿ'–ಎಂದು ಕೂಗಿಕೊಳ್ಳುತ್ತಾ–

ಇತಿ ರಾಮಸ್ಯ ಮಾತುಶ್ಚ ಸುಮಿತ್ರಾಯಾಶ್ಚ ಸಂನಿಧೌ ।
ರಾಜಾ ದಶರಥಃ ಶೋಚನ್ ಜೀವಿತಾನ್ತಮುಪಾಗಮತ್ ॥

ಹೀಗೆ ಗೋಳಾಡುತ್ತಾ ರಾಮನ ತಾಯಿಯಾದ ಕೌಸಲ್ಯೆಯ ಮತ್ತು ಸುಮಿತ್ರೆಯ ಸನ್ನಿಧಿಯಲ್ಲಿ ರಾಜನು ಮರಣ ಹೊಂದಿದನು (೭೭) ಎಂದಿದೆ. ರಾಜನು ಮರಣಹೊಂದುತ್ತಲೇ ಸ್ವಾಭಾವಿಕವಾಗಿ ಕೌಸಲ್ಯಾ-ಸುಮಿತ್ರೆಯರು ಆರ್ತನಾದಮಾಡಬೇಕಾಗಿದ್ದಿತು. ಆ ಪ್ರತಿಕ್ರಿಯೆಯನ್ನು ನಾವಿಲ್ಲಿ ಕಾಣುವುದಿಲ್ಲ. ರಾಜನು ಸತ್ತುಹೋದರೂ ಅವರು ಸುಮ್ಮನಿದ್ದರೆ? ಏಕೆ ಸುಮ್ಮನಿದ್ದರು?–ಈ ಪ್ರಶ್ನೆಯು ಸ್ವಾಭಾವಿಕವಾಗಿಯೇ ಉದ್ಭವಿಸುತ್ತದೆ. ಮತ್ತೂ ಅಚ್ಚರಿಯೆಂದರೆ ೬೫ನೆಯ ಸರ್ಗದ ೧೬ನೆಯ ಶ್ಲೋಕದಲ್ಲಿ

ಕೌಸಲ್ಯಾ ಚ ಸುಮಿತ್ರಾ ಚ ಪುತ್ರಶೋಕಪರಾಜಿತೇ ।
ಪ್ರಸುಪ್ತೇ ನ ಪ್ರಬುಧ್ಯೇತೇ ಯಥಾ ಕಾಲಸಮನ್ವಿತೇ ॥

ಪುತ್ರಶೋಕದಿಂದ ಆಕ್ರಾಂತರಾದ ಕೌಸಲ್ಯಾ-ಸುಮಿತ್ರೆಯರು ಸತ್ತುಹೋದವರಂತೆಯೇ ಮಲಗಿದ್ದರು. ಅವರು ನಿದ್ರೆಯಿಂದ ಎಚ್ಚರಗೊಳ್ಳಲೇ ಇಲ್ಲ–ಎಂಬುದಾಗಿದೆ.

ರಾಜನು ಪ್ರಾಣಹೋಗುವವರೆಗೂ ಕೌಸಲ್ಯಾ-ಸುಮಿತ್ರೆಯರೊಡನೆ ಮಾತನಾಡುತ್ತಿದ್ದನಲ್ಲವೇ? ಕೌಸಲ್ಯಾ-ಸುಮಿತ್ರೆಯರಿಗೆ ನಿದ್ರೆಯಾದರೂ ಯಾವಾಗ ಬಂದಿತು? ರಾಜನು ಪ್ರಾಣತೊರೆದಮೇಲೆ ನಿದ್ರೆಬರಲು ಸಾಧ್ಯವೇ?–ಮುಂತಾದ ಸಂಶಯಗಳು ಸಹಜವಾಗಿ ಮೂಡುತ್ತವೆ. ವ್ಯಾಖ್ಯಾನಕಾರರೂ ಈ ವಿಷಯದಲ್ಲಿ ಮಾರ್ಗದರ್ಶನ ಮಾಡಿಲ್ಲ.

ಶೋಕೇನ ಚ ಸಮಾಕ್ರಾನ್ತೋ ನಿದ್ರಾಯಾ ವಶಮೇಯಿವಾನ್ ॥

ಈ ೬೪ನೆಯ ಸರ್ಗವು ಮುಗಿದನಂತರ ೬೫ನೇ ಸರ್ಗವನ್ನು ಓದಿಕೊಂಡರೆ ಈ ವಿಧವಾದ ಸಂಶಯಕ್ಕೆ ಎಡೆಯಿರುವುದಿಲ್ಲ. **ಅಥ ರಾತ್ರ್ಯಾಂ ವ್ಯತೀತಾಯಾಂ** ಎಂದು ಪ್ರಾರಂಭವಾಗುವುದರಿಂದ ಕಥಾನುಸರಣೆಯು ಹೊಂದಿಕೊಳ್ಳುತ್ತದೆ. ರಾಜನೊಡನೆ ಕೌಸಲ್ಯಾ-ಸುಮಿತ್ರೆಯರೂ ಮಲಗಿ ನಿದ್ರಿಸುತ್ತಿದ್ದರೆಂದು ಊಹೆಮಾಡಬಹುದಾಗಿದೆ. ೬೫ನೆಯ ಸರ್ಗದ ೧೯ನೇ ಶ್ಲೋಕದಲ್ಲಿ ಹೇಳಿರುವಂತೆ–**ಸುಪ್ತಮೇವೋದ್ಗತಪ್ರಾಣಂ ಅನ್ತಃಪುರ ಮದೃಶ್ಯತ** ॥ ನಿದ್ರಿಸುತ್ತಿರುವಾಗಲೇ ರಾಜನು ಪ್ರಾಣಬಿಟ್ಟಿರಬಹುದೆಂದು ಅಂತಃಪುರದ ಸ್ತ್ರೀಯರು ಭಾವಿಸಿದರು–ಎಂಬ ವಾಕ್ಯವೂ ಹೊಂದಿ ಕೊಳ್ಳುತ್ತದೆ. ಹೀಗೆ ಹೊಂದಿಸಿದರೆ ಜಗತ್ಪ್ರಸಿದ್ಧವಾದ ಋಷಿಕುಮಾರನ ಕಥೆಯು ಇಲ್ಲದಂತಾಗುತ್ತದೆ. ಇದನ್ನು ಪ್ರಕ್ಷಿಪ್ತವೆಂದೂ ಹೇಳುವಂತಿಲ್ಲ. ಓರಿಯಂಟಲ್ ಇನ್‌ಸ್ಟಿಟ್ಯೂಟ್, ಬರೋಡ–ಇವರೂ ಈ ಕಥೆಯನ್ನು ಪ್ರಕ್ಷಿಪ್ತವೆಂದು ಪರಿಗಣಿಸಿಲ್ಲ. ಕೌಸಲ್ಯಾ-ಸುಮಿತ್ರೆಯರು ಗಾಢ ನಿದ್ರೆಯಲ್ಲಿದ್ದರೆಂಬ ಶ್ಲೋಕವೂ ಆ ಪಾಠದಲ್ಲಿದೆ. ಇದು ಹೇಗೆ ಸಾಧ್ಯ?–ಎಂಬ ಬಗೆಗೆ ಹೀಗೆ ಸಮಾಧಾನ ಹೇಳಬಹುದಾಗಿದೆ.

೬೪ನೆಯ ಸರ್ಗದ ಕಡೆಯಲ್ಲಿ ಹೇಳಿರುವಂತೆ ದಶರಥನೂ ನಿದ್ರೆ ಹೋದನು. ಅವನ ಜೊತೆಯಲ್ಲಿಯೇ ಕೌಸಲ್ಯಾ-ಸುಮಿತ್ರೆಯರೂ ನಿದ್ರಿಸಿದರು. ೬೩ನೆಯ ಸರ್ಗದಲ್ಲಿ ಹೇಳಿರುವಂತೆ ದಶರಥನು ಎಚ್ಚೆತ್ತನು.

ದಶರಥನು ಕೌಸಲ್ಯೆಯನ್ನು ಸಂಬೋಧಿಸಿದರೂ ಅವಳು ಎಚ್ಚೆತ್ತಿರಲಿಲ್ಲ. ಈ ಕಾರಣದಿಂದಲೇ ಅವಳು ಮಧ್ಯದಲ್ಲಿ ಯಾವ ಮಾತನ್ನೂ ಆಡುವುದಿಲ್ಲ. ಕೊನೆಯಲ್ಲಿ ಅವನು ಕಡೆಯ ಉಸಿರೆಳೆದಾಗಲೂ ಯಾವ ಪ್ರತಿಕ್ರಿಯೆಯೂ ಅವಳಿಂದಾಗಲೀ ಸುಮಿತ್ರೆಯಿಂದಾಗಲೀ ಬರಲಿಲ್ಲ. ಅವರು ಆಗಲೂ ಗಾಢವಾದ ನಿದ್ರೆಯಲ್ಲೇ ಇದ್ದರು.

ದಶರಥನೂ ಸ್ವಗತವಾಗಿ ಎಲ್ಲವನ್ನೂ ಹೇಳಿಕೊಳ್ಳುತ್ತಿದ್ದನೇ ಹೊರತು ಕೌಸಲ್ಯೆಯು ತಾನು ಹೇಳಿದುದೆಲ್ಲವನ್ನೂ ಕೇಳಿಸಿ ಕೊಳ್ಳುತ್ತಿರುವಳೇ?–ಎಂದು ಯೋಚಿಸುವಷ್ಟು ಪರಿಜ್ಞಾನವೂ ಅವನಿಗೆ ಇರಲಿಲ್ಲ. ಕನವರಿಸುವಂತೆ ತನ್ನಲ್ಲಿಯೇ ಎಲ್ಲವನ್ನೂ ಹೇಳಿಕೊಳ್ಳುತ್ತಿದ್ದನು. ಮೇಲಾಗಿ ಮುಂದೆ ಯಾವಾಗಲೂ ಕೌಸಲ್ಯೆಯಾಗಲೀ, ಸುಮಿತ್ರೆಯಾಗಲೀ ಈ ವಿಷಯವನ್ನು ಎಲ್ಲಿಯೂ ಪ್ರಸ್ತಾಪಿಸುವುದೂ ಇಲ್ಲ. ಆದುದರಿಂದ ದಶರಥನು ಆ ರಾತ್ರಿಯಲ್ಲಿ ಹೇಳಿದ ಮಾತುಗಳೆಲ್ಲವೂ ಸ್ವಗತವೆಂದೇ ಭಾವಿಸಬೇಕು.

ಅಧ್ಯಾತ್ಮರಾಮಾಯಣದಲ್ಲಿ ಈ ವಿಧವಾದ ಸಂಶಯಕ್ಕೆ ಎಡೆಯಿಲ್ಲ. ಅಲ್ಲಿಯೂ ಋಷಿಕುಮಾರನ ಕಥೆಯು ಬರುತ್ತದೆ.

ಸುಮಂತ್ರನು ರಾಜನ ಬಳಿಗೆ ಬಂದು ಸೀತಾ-ರಾಮ-ಲಕ್ಷ್ಮಣರು ಏನು ಹೇಳಿದರೆಂಬುದನ್ನು ರಾಜನಿಗೆ ಹೇಳಿ, ತಾನು ಬಹಳ ದುಃಖಿತನಾಗಿ ಹಿಂದಿರುಗಿ ಬಂದೆನೆಂದು ಹೇಳುತ್ತಾನೆ. ಸುಮಂತ್ರನ ಮಾತನ್ನು ಕೇಳಿಯೇ ಕೌಸಲ್ಯೆಯು ಬಹಳ ದುಃಖಿತಳಾಗಿ ರಾಜನನ್ನು ಪ್ರಶ್ನಿಸುತ್ತಾಳೆ.

ಕೈಕೇಯ್ಯೈ ಪ್ರಿಯಭಾರ್ಯಾಯೈ ಪ್ರಸನ್ನೋ ದತ್ತವಾನ್ ವರಮ್ ।
ತ್ವಂ ರಾಜ್ಯಂ ದೇಹಿ ತಸ್ಯೈವ ಮತ್ಪುತ್ರಃ ಕಿಂ ವಿವಾಸಿತಃ ॥೧೬॥

'ಪ್ರಿಯಭಾರ್ಯೆಯಾದ ಕೈಕೇಯಿಗೆ ಪ್ರಸನ್ನನಾದ ನೀನು ವರವನ್ನು ಕೊಟ್ಟೆ. ಆ ವರದಂತೆ ನೀನು ರಾಜ್ಯವನ್ನು ಅವಳಿಗೇ ಕೊಡು. ಆದರೆ ನನ್ನ ಮಗನನ್ನು ಕಾಡಿಗೇಕೆ ಕಳುಹಿಸಿದೆ? ಈ ಎಲ್ಲವನ್ನೂ ನೀನೇ ಮಾಡಿ ಈಗೇಕೆ ವಿಲಪಿಸುವೆ?'

ಈ ಪ್ರಶ್ನೆಗೆ ಉತ್ತರವಾಗಿ ದಶರಥನು ಋಷಿಕುಮಾರನ ಕಥೆಯನ್ನು

ಹೇಳುತ್ತಾನೆ. ಕಡೆಯಲ್ಲಿ ಋಷಿಕುಮಾರನ ತಂದೆಯು ಕೊಟ್ಟ ಶಾಪವನ್ನು ಹೇಳುತ್ತಾನೆ.

ತತ್ರ ವೃದ್ಧಃ ಪಿತಾ ಪ್ರಾಹ ತ್ವಮಪ್ಯೇವಂ ಭವಿಷ್ಯಸಿ ।
ಪುತ್ರಶೋಕೇನ ಮರಣಂ ಪ್ರಾಪ್ಸ್ಯಸೇ ವಚನಾನ್ಮಮ ॥

'ಪುತ್ರಶೋಕದಿಂದ ನೀನೂ ನನ್ನಂತೆಯೇ ಮರಣಹೊಂದುವೆ.'

'ಕೌಸಲ್ಯೇ! ಆ ಕಾಲವೇ ಈಗ ನನಗೆ ಪ್ರಾಪ್ತವಾಗಿದೆ.' ಹೀಗೆ ಹೇಳಿ ರಾಜನು ವಿಲಪಿಸಿದನು.

ಹಾ ರಾಮ ಪುತ್ರ ಹಾ ಸೀತೇ ಹಾ ಲಕ್ಷ್ಮಣ ಗುಣಾಕರ ।
ತ್ವದ್ವಿಯೋಗಾದಹಂ ಪ್ರಾಪ್ತೋ ಮೃತ್ಯುಂ ಕೈಕಯಿಸಮ್ಭವಮ್ ॥

ವದನ್ನೇವಂ ದಶರಥಃ ಪ್ರಾಣಾಂಸ್ತ್ಯಕ್ತ್ವಾ ದಿವಂ ಗತಃ ।

'ಓ ರಾಮ! ಓ ಸೀತೇ! ಓ ಲಕ್ಷ್ಮಣ! ನಿಮ್ಮ ವಿಯೋಗದಿಂದಾಗಿ ಈಗ ನಾನು ಮೃತ್ಯುವನ್ನಪ್ಪುತ್ತಿದ್ದೇನೆ. ಈ ನನ್ನ ಸಾವು ಕೈಕೇಯಿಯ ಕಾರಣದಿಂದ ಉಂಟಾದುದು'–ಎಂದು ಹೇಳುತ್ತಾ ಪ್ರಾಣಗಳನ್ನು ತೊರೆದನು. ಒಡನೆಯೇ **ಕೌಸಲ್ಯಾ ಚ ಸುಮಿತ್ರಾ ಚ ಅನ್ಯೇ ಚ ರಾಜಯೋಷಿತಃ । ಚುಕುಶುಃ....**ಕೌಸಲ್ಯಾ-ಸುಮಿತ್ರೆಯರೂ ಇತರ ರಾಜ ಮಹಿಷಿಯರೂ ಗಟ್ಟಿಯಾಗಿ ಕೂಗಿಕೊಂಡರು–ಹೀಗೆ ಅಧ್ಯಾತ್ಮರಾಮಾಯಣದಲ್ಲಿ ದಶರಥನು ಮಾತನಾಡುತ್ತಿದ್ದಂತೆಯೇ ಪ್ರಾಣ ತೊರೆಯುತ್ತಾನೆ. ಅಲ್ಲಿ ನಿದ್ರೆಯ ಪ್ರಕರಣವಿಲ್ಲ.

--

ಗಾಯತ್ರೀರಾಮಾಯಣಮ್

ಶ್ರೀಮದ್ವಾಲ್ಮೀಕಿರಾಮಾಯಣವು ಇಪ್ಪತ್ನಾಲ್ಕು ಸಹಸ್ರ ಶ್ಲೋಕಗಳುಳ್ಳ ಸಂಹಿತೆ. ಗ್ರಂಥದ ಮೊದಲಿನ ಮತ್ತು ಒಂದೊಂದು ಸಹಸ್ರ ಶ್ಲೋಕವು ಮುಗಿದನಂತರ ಬರುವ ಶ್ಲೋಕದ ಪ್ರಥಮಾಕ್ಷರವನ್ನು ಸೇರಿಸುತ್ತಾ ಹೋದರೆ ಗಾಯತ್ರೀಮಹಾಮಂತ್ರದ ರೂಪವನ್ನು ಹೊಂದುವುದು. ಗಾಯತ್ರೀ ಮಂತ್ರದಲ್ಲಿರುವ ಅಕ್ಷರಗಳಂತೆಯೇ ಹ್ರಸ್ವ-ದೀರ್ಘಗಳೊಡನೆ ಈ ಶ್ಲೋಕಗಳ ಆದಿಯಲ್ಲಿರುವ ಅಕ್ಷರಗಳು ಇರುವುದಿಲ್ಲವಾದರೂ ಗಾಯತ್ರೀ

ಮಂತ್ರದ ಅನುಕ್ರಮದಲ್ಲಿ ಅಕ್ಷರಸಾಮ್ಯವಿರುವುದರಿಂದ ಈ ಶ್ಲೋಕಗಳೆಲ್ಲ ವನ್ನೂ ಒಟ್ಟುಗೂಡಿಸಿ ಗಾಯತ್ರೀ ರಾಮಾಯಣವೆಂದು ಕರೆಯಲಾಗಿದೆ.

ಪ್ರತಿಯೊಬ್ಬರೂ ಈ ಗಾಯತ್ರೀರಾಮಾಯಣವನ್ನು ಪ್ರತಿದಿನವೂ ಸಂಧ್ಯಾಕಾಲಗಳಲ್ಲಿ ಪಾರಾಯಣಮಾಡಿದ ಪಕ್ಷದಲ್ಲಿ ಗಾಯತ್ರೀದೇವಿಯ ಅನುಗ್ರಹಕ್ಕೆ ಪಾತ್ರರಾಗಿ ಸರ್ವಪಾಪಗಳಿಂದಲೂ ವಿಮುಕ್ತರಾಗುತ್ತಾರೆ.

ಅಥ ಗಾಯತ್ರೀರಾಮಾಯಣಪ್ರಾರಂಭಃ

ಓಂ (ತ) ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್ ॥೧॥

(ತ್ಸ) ಸ ಹತ್ವಾ ರಾಕ್ಷಸಾನ್ ಸರ್ವಾನ್ಯಜ್ಞಘ್ನಾನ್ರಘುನನ್ದನಃ ।
ಋಷಿಭಿಃ ಪೂಜಿತಸ್ತತ್ರ ಯಥೇನ್ದ್ರೋ ವಿಜಯೇ ಪುರಾ ॥೨॥

(ವಿ) ವಿಶ್ವಾಮಿತ್ರಸ್ತು ಧರ್ಮಾತ್ಮಾ ಶ್ರುತ್ವಾ ಜನಕಭಾಷಿತಮ್ ।
ವತ್ಸ ರಾಮ ಧನುಃ ಪಶ್ಯ ಇತಿ ರಾಘವಮಬ್ರವೀತ್ ॥೩॥

(ತು) ತುಷ್ಟಾವಾಸ್ಯ ತದಾ ವಂಶಂ ಪ್ರವಿಶ್ಯ ಸ ವಿಶಾಂಪತೇಃ ।
ಶಯನೀಯಂ ನರೇನ್ದ್ರಸ್ಯ ತದಾಸಾದ್ಯ ವ್ಯತಿಷ್ಠತ ॥೪॥

(ರ್ವ) ವನವಾಸಂ ಹಿ ಸಂಖ್ಯಾಯ ವಾಸಾಂಸ್ಯಾಭರಣಾನಿ ಚ ।
ಭರ್ತಾರಮನುಗಚ್ಛಂತ್ಯೈ ಸೀತಾಯೈ ಶ್ವಶುರೋ ದದೌ ॥೫॥

(ರೇ) ರಾಜಾ ಸತ್ಯಂ ಚ ಧರ್ಮಶ್ಚ ರಾಜಾ ಕುಲವತಾಂ ಕುಲಮ್ ।
ರಾಜಾ ಮಾತಾ ಪಿತಾ ಚೈವ ರಾಜಾ ಹಿತಕರೋ ನೃಣಾಮ್॥೬॥

(ಣಿ-ನಿ) ನಿರೀಕ್ಷ್ಯ ಸ ಮುಹೂರ್ತಂ ತು ದದರ್ಶ ಭರತೋ ಗುರುಮ್ ।
ಉಟಜೇ ರಾಮಮಾಸೀನಂ ಜಟಾಮಣ್ಡಲಧಾರಿಣಮ್ ॥೭॥

(ಯಂ) ಯದಿ ಬುದ್ಧಿಃ ಕೃತಾ ದ್ರಷ್ಟುಂ ಅಗಸ್ತ್ಯಂ ತಂ ಮಹಾಮುನಿಂ ।
ಅದ್ಯೈವ ಗಮನೇ ಬುದ್ಧಿಂ ರೋಚಯಸ್ವ ಮಹಾಯಶಃ ॥೮॥

ಭರತಸ್ಯಾರ್ಯಪುತ್ರಸ್ಯ ಶ್ವಶ್ರೂಣಾಂ ಮಮ ಚ ಪ್ರಭೋ ।
ಮೃಗರೂಪಮಿದಂ ವ್ಯಕ್ತಂ ವಿಸ್ಮಯಂ ಜನಯಿಷ್ಯತಿ ॥೯॥

(ರ್ಗೋ) ಗಚ್ಛ ಶೀಘ್ರಮಿತೋ ರಾಮ ಸುಗ್ರೀವಂ ತಂ
ಮಹಾಬಲಮ್ ।
ವಯಸ್ಯಂ ತಂ ಕುರು ಕ್ಷಿಪ್ರಮಿತೋ ಗತ್ವಾದ್ಯ ರಾಘವ ॥೧೦॥

(ದೇ) ದೇಶಕಾಲೌ ಭಜಸ್ವಾದ್ಯ ಕ್ಷಮಮಾಣಃ ಪ್ರಿಯಾಪ್ರಿಯೇ ।
ಸುಖದುಃಖಸಹಃ ಕಾಲೇ ಸುಗ್ರೀವವಶಗೋ ಭವ ॥೧೧॥

(ವ) ವನ್ದ್ಯಾಸ್ತೇ ತು ತಪಸ್ಸಿದ್ಧಾಸ್ತಪಸಾ ವೀತಕಲ್ಮಷಾಃ ।
ಪ್ರಷ್ಟವ್ಯಾ ಚಾಪಿ ಸೀತಾಯಾಃ ಪ್ರವೃತ್ತಿರ್ವಿನಯಾನ್ವಿತೈಃ ॥೧೨॥

(ಸ್ಯ) ಸ ನಿರ್ಜಿತ್ಯ ಪುರೀಂ ಲಙ್ಕಾಂ ಶ್ರೇಷ್ಠಾಂ ತಾಂ
ಕಾಮರೂಪಿಣೀಮ್ ।
ವಿಕ್ರಮೇಣ ಮಹಾತೇಜಾ ಹನುಮಾನ್ ಕಪಿಸತ್ತಮಃ ॥೧೩॥

(ಧೀ) ಧನ್ಯಾ ದೇವಾಃ ಸಗನ್ಧರ್ವಾಃ ಸಿದ್ಧಾಶ್ಚ ಪರಮರ್ಷಯಃ ।
ಮಮ ಪಶ್ಯನ್ತಿ ಯೇ ನಾಥಂ ರಾಮಂ ರಾಜೀವಲೋಚನಮ್
॥೧೪॥

(ಮ) ಮಙ್ಗಲಾಭಿಮುಖೀ ತಸ್ಯ ಸಾ ತದಾಸೀನ್ಮಹಾಮತೇಃ ।
ಉಪತಸ್ಥೇ ವಿಶಾಲಾಕ್ಷೀ ಪ್ರಯತಾ ಹವ್ಯವಾಹನಮ್ ॥೧೫॥

(ಹಿ) ತಂ ಮಹಾರ್ಥಂ ಮೃದುಹೇತುಸಂಹಿತಂ
ವ್ಯತೀತಕಲಾಯತಿಸಂಪ್ರತಿಕ್ಷಮಮ್ ।
ನಿಶಮ್ಯ ತದ್ವಾಕ್ಯಮುಪಸ್ಥಿತಜ್ವರಃ
ಪ್ರಸಂಗವಾನುತ್ತರಮೇತದಬ್ರವೀತ್ ॥೧೬॥

(ಧಿ) ಧರ್ಮಾತ್ಮಾ ರಕ್ಷಸಾಂ ಶ್ರೇಷ್ಠಃ ಸಂಪ್ರಾಪ್ತೋಽಯಂ ವಿಭೀಷಣಃ।
ಲಙ್ಕೈಶ್ವರ್ಯಂ ಧ್ರುವಂ ಶ್ರೀಮಾನಯಂ
ಪ್ರಾಪ್ನೋತ್ಯಕಣ್ಟಕಮ್॥೧೭॥

(ಯೋ) ಯೋ ವಜ್ರಪಾತಾಶನಿಸನ್ನಿಪಾತಾ-
ನ್ನ ಚುಕ್ಷುಭೇ ನಾಪಿ ಚಚಾಲ ರಾಜಾ ।
ಸ ರಾಮಬಾಣಾಭಿಹತೋ ಭೃಶಾರ್ತಃ
ಚಚಾಲ ಚಾಪಂ ಚ ಮುಮೋಚ ವೀರ ॥೧೮॥

(ಯೋ) ಯಸ್ಯ ವಿಕ್ರಮಮಾಸಾದ್ಯ ರಾಕ್ಷಸಾ ನಿಧನಂ ಗತಾಃ ।
ತಂ ಮನ್ಯೇ ರಾಘವಂ ವೀರಂ ನಾರಾಯಣಮನಾ
ಮಯಮ್॥೧೯॥

(ನಃ) ನ ತೇ ದದೃಶಿರೇ ರಾಮಂ ದಹನ್ತಮರಿವಾಹಿನೀಮ್ ।
ಮೋಹಿತಾಃ ಪರಮಾಸ್ತ್ರೇಣ ರಾಘವೇಣ ಮಹಾತ್ಮನಾ ॥೨೦॥

(ಪ್ರ) ಪ್ರಣಮ್ಯ ದೇವತಾಭ್ಯಶ್ಚ ಬ್ರಾಹ್ಮಣೇಭ್ಯಶ್ಚ ಮೈಥಿಲೀ ।
ಬದ್ಧಾಞ್ಜಲಿಪುಟಾ ಚೇದಮುವಾಚಾಗ್ನಿಸಮೀಪತಃ ॥೨೧॥

(ಚೋ) ಚಾಲನಾತ್ಪರ್ವತಸ್ಯೈವ ಗಣಾ ದೇವಸ್ಯ ಕಂಪಿತಾಃ ।
ಚಚಾಲ ಪಾರ್ವತೀ ಚಾಪಿ ತದಾಶ್ಲಿಷ್ಟಾ ಮಹೇಶ್ವರಮ್ ॥೨೨॥

(ದ) ದಾರಾಃ ಪುತ್ರಾಃ ಪುರಂ ರಾಷ್ಟ್ರಂ ಭೋಗಾಚ್ಛಾದನ ಭೋಜನಮ್ ।
ಸರ್ವಮೇವಾವಿಭಕ್ತಂ ನೌ ಭವಿಷ್ಯತಿ ಹರೀಶ್ವರ ॥೨೩॥

(ಯಾತ್) ಯಾಮೇವ ರಾತ್ರಿಂ ಶತ್ರುಘ್ನಃ ಪರ್ಣಶಾಲಾಮುಪಾವಿಶತ್।
ತಾಮೇವ ರಾತ್ರಿಂ ಸೀತಾಪಿ ಪ್ರಸೂತಾ ದಾರಕದ್ವಯಮ್ ॥೨೪॥

ಗಾಯತ್ರೀರಾಮಾಯಣಂ ಸಮಾಪ್ತಂ

ಫಲಶ್ರುತಿಃ:-

ಇದಂ ರಾಮಾಯಣಂ ಕೃತ್ಸ್ನಂ ಗಾಯತ್ರೀಬೀಜಸಂಯುತಮ್ ।
ತ್ರಿಸಂಧ್ಯಂ ಯಃ ಪಠೇನ್ನಿತ್ಯಂ ಸರ್ವಪಾಪೈಃ ಪ್ರಮುಚ್ಯತೇ ॥

ಶ್ರೀರಾಮವಜ್ರಕವಚಮ್

ಸೀತಾ-ಲಕ್ಷ್ಮಣ-ಭರತ-ಶತ್ರುಘ್ನ-ಹನುಮತ್ಸಮೇತನಾದ ಶ್ರೀರಾಮನನ್ನು ಪೂರ್ವಾಭಿಮುಖವಾಗಿ ಕುಳಿತು ಮನಸ್ಸಿನಲ್ಲಿ ಧ್ಯಾನಮಾಡಿ ಈ ಶ್ರೀರಾಮವಜ್ರಕವಚವನ್ನು ಅನುದಿನವೂ ಪಾರಾಯಣ ಮಾಡಿದರೆ ಸಕಲ ತೊಂದರೆಗಳೂ ನಿವಾರಣೆಯಾಗಿ ಸುಖ-ಶಾಂತಿಗಳು ಲಭಿಸುವುವು.

ನಮಃ ಕೋದಣ್ಡಹಸ್ತಾಯ ಸನ್ಧೀಕೃತಶರಾಯ ಚ ।
ದಣ್ಡಿತಾಖಿಲದೈತ್ಯಾಯ ಭಕ್ತದುಃಖಾರ್ತಿಹಾರಿಣೇ ॥೧॥

ಶ್ರೀರಾಮಃ ಪಾತು ಮೇ ಮೂರ್ಧ್ನಿ ತತ್ಪೂರ್ವಂ ರಘುವಂಶಜಃ ।
ದಕ್ಷಿಣೇ ಮೇ ರಘುಪತಿಃ ಪಶ್ಚಿಮೇ ಪಾತು ರಾಘವಃ ॥೨॥

ಉತ್ತರೇ ಮೇ ಹೃಷೀಕೇಶಃ ಫಾಲಂ ದಶರಥಾತ್ಮಜಃ ।
ಭ್ರುವೌ ತೂರ್ಧ್ವಧರೋ ಶ್ಯಾಮಃ ತಯೋರ್ಮಧ್ಯಂ ಜನಾರ್ದನಃ ॥೩॥

ಶ್ರೋತ್ರಂ ಮೇ ಪಾತು ರಾಜೇನ್ದ್ರಃ ದೃಶೌ ರಾಜೀವಲೋಚನಃ ।
ಘ್ರಾಣಂ ಮೇ ಪಾತು ರಾಜರ್ಷಿಃ ಕಣ್ಠಂ ಮೇ ಜಾನಕೀಪತಿಃ ॥೪॥

ಕರ್ಣಮೂಲಂ ಖರಧ್ವಂಸೀ ತಾಲೂ ಮೇ ರಘುವಲ್ಲಭಃ ।
ಜಿಹ್ವಾಂ ಮೇ ವಾಕ್ಪತಿಃ ಪಾತು ದನ್ತಾವಲ್ಯೌ ರಘೂತ್ತಮಃ ॥೫॥

ಓಷ್ಠೌ ಶ್ರೀರಾಮಚನ್ದ್ರೋ ಮೇ ಮುಖಂ ಮೇ ತು ಪರಾತ್ಪರಃ ।
ಜ್ಞಾನೇನ್ದ್ರಿಯಾಣಿ ಮೇ ಪಾತು ರಾಮಚನ್ದ್ರಸ್ತು ಸರ್ವದಾ ॥೬॥

ಕಣ್ಠಂ ಪಾತು ಜಗದ್ವನ್ದ್ಯಃ ಸ್ಕನ್ಧೌ ಮೇ ರಾವಣಾನ್ತಕಃ ।
ಹನೂ ಬಾಣಧರಃ ಪಾತು ಭುಜೌ ಮತ್ತಾರಿಮರ್ದನಃ ॥೭॥

ಗುಹ್ಯಂ ಪಾತು ಹೃಷೀಕೇಶಃ ಸಕ್ಥಿನೀ ಸತ್ಯವಿಕ್ರಮಃ ।
ಊರೂ ಶಾರ್ಙ್ಗಧರಃ ಪಾತು ಜಾನುನೀ ಹನುಮತ್ಪ್ರಿಯಃ ॥೮॥

ಜಙ್ಘೇ ಪಾತು ಜಗದ್ವನ್ದ್ಯಃ ಪಾದೌ ಮೇ ಪಾತು ವಾಸವಃ ।
ಸರ್ವಾಙ್ಗಂ ಪಾತು ಮೇ ವಿಷ್ಣುಃ ಸರ್ವಸನ್ಧಿಮನಾಮಯಃ ॥೯॥

ಜಾನಕೀವಲ್ಲಭಃ ಪಾತು ಶಬ್ದಾದಿವಿಷಯಾನಪಿ ।
ಪೃಥಿವ್ಯಾದೀನಿ ಭೂತಾನಿ ಮತ್ಸಮ್ಬನ್ಧೀನಿ ಯಾನಿ ಚ ॥೧೦॥


ರೋಮಕೂಪಾನ್ಯಶೇಷಾಣಿ ಪಾತು ಸುಗ್ರೀವರಾಜ್ಯದಃ ।
ವಾಙ್ಮನೋಬುಧ್ಯಹಂಕಾರಜ್ಞಾನಾಜ್ಞಾನಕೃತಾನಿ ಚ ॥೧೧॥

ಜನ್ಮಾನ್ತರಕೃತಾನೀಹ ಪಾಪಾನಿ ವಿವಿಧಾನಿ ಚ ।
ತಾನಿ ಸರ್ವಾಣಿ ದಗ್ಧ್ವಾದ್ಯ ಅತ್ರ ಕೋದಣ್ಡಖಣ್ಡನಃ ।
ಪಾತು ಮಾಂ ಸರ್ವತೋ ರಾಮಃ ಶಾರ್ಙ್ಗಬಾಣಧರಃ ಸದಾ ॥೧೨॥

—o—

License No. WPP-13 Licensed to Post without pre-payment of postage
Posted at Thayagaraja Nagar Post Office

Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.